೧೪ ಸಮಗ್ರ ವಚನ ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನ ಸಂಪುಟ ೯

ಸಂಪಾದಕ

ಡಾ. ವೀರಣ್ಣ ರಾಜೂರ


ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ : ಸಂಪುಟ - ೧೪

# ಸಂಕೀರ್ಣ ವಚನಸಂಪುಟ : ಒಂಬತ್ತು

(ಬಸವೋತ್ತರ ಯುಗ)

೧. ಬಸವಣ್ಣನವರ ವಚನಸಂಪುಟ - ಸಂ : ಡಾ. ಎಂ. ಎಂ. ಕಲಬುರ್ಗಿ

೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ

೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ

೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ

೫. ಶಿವಶರಣೆಯರ ವಚನಸಂಪುಟ - ಸಂ : ಡಾ. ವೀರಣ್ಣ ರಾಜೂರ

೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ

೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ

೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮ

೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ

೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ

೧೧. ಸಂಕೀರ್ಣ ವಚನಸಂಪುಟ : ಆರು - ಸಂ : ಎಸ್. ಶಿವಣ್ಣ

೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ

೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ

೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ : ಡಾ. ವೀರಣ್ಣ ರಾಜೂರ

೧೫. ವಚನ ಪರಿಭಾಷಾಕೋಶ - ಸಂ ಡಾ. ಎಸ್. ಜಿ. ಮಹಾದೇವಪ್ಪ

# ಸಂಕೀರ್ಣ ವಚನಸಂಪುಟ : ಒಂಬತ್ತು

(ಬಸವೋತ್ತರ ಯುಗ)


ಸಂಪಾದಕ

**ಡಾ. ವೀರಣ್ಣ ರಾಜೂರ**

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ



ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

**SANKEERNA VACHANASAMPUTA : OMBATTU :** Complete Vachanas of 9 Vachanakaras of Post Basaveshvara Period, Ed. by Dr. Veeranna Rajur, Professor, Institute of Kannada Studies, Karnataka University, Dharwad - 580 003 and Published by The Administrative Officer, Kannada Pusthaka Pradhikara (Kannada Book Authority), Pampa Mahakavi Road, Chamarajpet, Bangalore - 560 018

ISBN : 81-7713-098-6

Pp. Liv + 628

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : **ರೂ. ೮೫೦/-**
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ :
ತ್ವರಿತ ಮುದ್ರಣಾಲಯ
ಆಫ್‌ಸೆಟ್ ಪ್ರಿಂಟರ್ಸ್, ಗದಗ

ಮುದ್ರಣ :
**ಇಳಾ ಮುದ್ರಣ**
೩೬, ೪೦ ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್ ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
ದೂರವಾಣಿ : ೬೭೫೫೭೪೬

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ


## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

※

# ಮುನ್ನುಡಿ

**ಎಸ್. ಎಂ. ಕೃಷ್ಣ**
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

☼

# ಬಿನ್ನಹ

**ರಾಣಿ ಸತೀಶ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ಪ್ರಕಾಶಕರ ಮಾತು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಆನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ನನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

■■

☼

# ಸಂಪಾದಕೀಯ

---

## ಡಾ. ಎಂ. ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[೧]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[೨]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರ ಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

## ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎನ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

■■

*

# ಪ್ರಸ್ತಾವನೆ

ಇದು ''ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ''ಯ ಅಡಿಯಲ್ಲಿ ಸಿದ್ಧಪಡಿಸಿದ ಒಂಬತ್ತನೆಯ ''ಸಂಕೀರ್ಣ ವಚನ ಸಂಪುಟ'' ; ಬಸವೋತ್ತರ ಯುಗದ ಐದನೆಯ ಸಂಪುಟ. ಇದರಲ್ಲಿ ಒಂಬತ್ತು ಜನ ವಚನಕಾರರ ಒಟ್ಟು ೧೨೭೩ ವಚನಗಳು ಸಂಗ್ರಹವಾಗಿವೆ.[೧]

| | | |
|---|---|---|
| ೧. | ಮೂರುಸಾವಿರ ಮುಕ್ತಿಮುನಿ | –ವಚನ ೧೦೧ |
| ೨. | ಮೆಡ್ಲೇರಿ ಶಿವಲಿಂಗ | –೨೩ |
| ೩. | ವೀರಣ್ಣದೇವರು (ಕರಸ್ಥಲದ ವೀರಣ್ಣೊಡೆಯ) | –೭ |
| ೪. | ವೀರಸಂಗಯ್ಯ | –೧೧೨ |
| ೫. | ಷಣ್ಮುಖಸ್ವಾಮಿಗಳು | –೭೧೭ |
| ೬. | ಸಂಗನಬಸವೇಶ್ವರದೇವರು | –೧ |
| ೭. | ಸಿದ್ಧಮಲ್ಲಪ್ಪ | –೯ |
| ೮. | ಸಿದ್ಧವೀರದೇಶಿಕೇಂದ್ರ | –೧ |
| ೯. | ಹೇಮಗಲ್ಲ ಹಂಪ | –೩೦೨ |

ಬಸವೋತ್ತರ ಯುಗದ ವಚನ ಸಾಹಿತ್ಯದ ವ್ಯಾಪ್ತಿ–ವೈಶಿಷ್ಟ್ಯಗಳನ್ನು ಕುರಿತು ''ಸಂಕೀರ್ಣ ವಚನಸಂಪುಟ : ಐದು'' ಈ ಗ್ರಂಥದಲ್ಲಿ ವಿವರವಾಗಿ ಹೇಳಿರುವುದರಿಂದ ಇಲ್ಲಿ ಮತ್ತೆ ಅದರ ಪ್ರಸ್ತಾಪ ಮಾಡದೆ, ಈ ಸಂಪುಟದಲ್ಲಿ ಎಡೆಪಡೆದ ವಚನಕಾರರ ಹಾಗೂ ವಚನಗಳ ಸ್ಥೂಲಪರಿಚಯವನ್ನು ಮಾತ್ರ ಮಾಡಿಕೊಡಲಾಗಿದೆ.

ಇಲ್ಲಿ ಸೇರಿದ ಒಂಬತ್ತು ಜನ ವಚನಕಾರರಲ್ಲಿ ವೀರಣ್ಣದೇವರು ಮಾತ್ರ ನೂರೊಂದು ವಿರಕ್ತರ ಕಾಲ ಅಂದರೆ ೧೫ನೆಯ ಶತಮಾನದ ಆದಿಯಲ್ಲಿದ್ದವನಾದರೆ, ಉಳಿದವರು ಏಳುನೂರೊಂದು ವಿರಕ್ತರ ಕಾಲಾನಂತರ ಅಂದರೆ ೧೬–೧೮ನೆಯ ಶತಮಾನದಲ್ಲಿ ಬಾಳಿದವರಾಗಿದ್ದಾರೆ.

**ಮೂರುಸಾವಿರ ಮುಕ್ತಿಮುನಿ :**

ಹೆಸರೊಂದನ್ನು ಬಿಟ್ಟರೆ ಈತನ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಮತ್ತಾವ ಸಂಗತಿಗಳೂ ದೊರಕುವುದಿಲ್ಲ, ಚೆನ್ನಬಸವಪುರಾಣ (೧೫೮೪)ದಲ್ಲಿ ಒಬ್ಬ ಮುಕ್ತಿಮುನಿ ಸ್ವಾಮಿಯ ಉಲ್ಲೇಖ ಬರುತ್ತದೆ.[೨] ಹಾಗೆಯೇ ಕೆಳದಿ ಪ್ರದೇಶದ ಭುವನಗಿರಿದುರ್ಗದ ಮಹಂತಿನಮಠದ ಗುರುಪರಂಪರೆಯಲ್ಲಿಯೂ ಒಬ್ಬ 'ಮುಕ್ತಿಮುನಿಸ್ವಾಮಿ' ಆಗಿ

---

೧. ಇವುಗಳಲ್ಲಿ ೨೧ ಸ್ವರವಚನ ಮತ್ತು ೧ ರಗಳೆಯೂ ಸೇರಿವೆ.

೨. ಚೆನ್ನಬಸವಪುರಾಣ : ಸಂ. ೬೨ ಪದ್ಯ ೩೭ ರಿಂದ ೪೨.

ಹೋದಂತೆ ತಿಳಿದುಬರುತ್ತದೆ.[೩] ಆದರೆ ಈತನಿಗೂ ಅವರಿಗೂ ಇರುವ ಸಂಬಂಧ ಸ್ಪಷ್ಟವಿಲ್ಲ.

'ಸರ್ವಾಚಾರ ಸಾರಾಮೃತಸುಧೆ' ಮೂರುಸಾವಿರ ಮುಕ್ತಿಮುನಿಗಳ ವಚನ ಗ್ರಂಥ. ಇದನ್ನು 'ರೇವಣಸಿದ್ಧಲಿಂಗದೇಶಿಕ' ಎಂಬ ಶಿಷ್ಯನಿಗೆ ಬೋಧಿಸಿರುವುದಾಗಿ ಕೃತಿಯ ಆದಿ ಮತ್ತು ಅಂತ್ಯದ ಗದ್ಯದಿಂದ ತಿಳಿದುಬರುತ್ತದೆ. ಇಲ್ಲಿಯ ಒಂದು ವಚನದಲ್ಲಿ (೬೨) ಘನಲಿಂಗದೇವ(೧೪೮೦)ರ ಉಲ್ಲೇಖವಿದೆ. ಇದರಿಂದ ಈ ವಚನಕಾರ ಘನಲಿಂಗ ದೇವರಿಗಿಂತ ಈಚಿನವನೆಂಬುದು ಸ್ಪಷ್ಟ. ಘನಲಿಂಗದೇವ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ ಒಬ್ಬ ವಚನಕಾರ. ಮುಕ್ತಿಮುನಿಯ ಶಿಷ್ಯನ ಹೆಸರಿನಲ್ಲಿ ಸೇರಿದ 'ದೇಶಿಕ' ಎಂಬುದು ತೋಂಟದ ಸಿದ್ಧಲಿಂಗರ ನಂತರ ಹೆಚ್ಚು ಪ್ರಚಲಿತವಾದ ಪದವಾಗಿದೆ. ಅವರ ಶಿಷ್ಯ–ಪ್ರಶಿಷ್ಯರಲ್ಲಿ ಅನೇಕರು ತಮ್ಮ ಹೆಸರಿನೊಂದಿಗೆ ಈ ಪದ ಸೇರಿಸಿಕೊಂಡು ಪ್ರಸಿದ್ಧರಾಗಿದ್ದಾರೆ. ಹೀಗಾಗಿ 'ರೇವಣ ಸಿದ್ಧಲಿಂಗದೇಶಿಕ' ಹಾಗೂ ಅವನ ಗುರು–ಪ್ರಸ್ತುತ ಮೂರುಸಾವಿರ ಮುಕ್ತಿಮುನಿ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವರಾಗಿರಬೇಕೆಂದು ಊಹಿಸಲವಕಾಶವಿದೆ. ಆದರೆ ಖಚಿತ ನಿರ್ಧಾರಕ್ಕೆ ಇನ್ನಷ್ಟು ಆಧಾರಗಳ ಆವಶ್ಯಕತೆಯಿದೆ. ಮುಕ್ತಿಮುನಿಯ ಕೆಲವು ವಚನಗಳಲ್ಲಿ ಪೀರ, ಗೋರಿ, ಭಂಗಿ, ಗಾಂಜಿ, ಗುಡಾಕು, ತಂಬಾಕದ ಚಿಲುಮೆ, ನಾಸಿಬುಕಣಿ, ಜರೂರು, ಬಾಜಾರ, ಜಾಮೀನು, ರೊಕ್ಕ ಮೊದಲಾದ ಪದಗಳ ಬಳಕೆ ಮತ್ತು ವಚನಗಳ ಶಿಥಿಲಬಂಧವನ್ನು ಗಮನಿಸಿ, ಈತ ೧೮ನೆಯ ಶತಮಾನದ ಸುಮಾರಿನಲ್ಲಿ ಇದ್ದಿರಬೇಕೆಂದು ಈ ಕೃತಿಯ ಸಂಪಾದಕರು ಸರಿಯಾಗಿಯೇ ಊಹಿಸಿದ್ದಾರೆ.[೪]

ಸರ್ವಾಚಾರ ಸಾರಾಮೃತಸುಧೆಯಲ್ಲಿ ೧೦೧ ವಚನಗಳಿವೆ. 'ನಿರವಯ ಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ' ಎಂಬುದು ಇವುಗಳ ಅಂಕಿತ. ನೂರೊಂದರ ಈ ಸಂಖ್ಯೆ ನೂರೊಂದು ವಿರಕ್ತರನ್ನು ಇಲ್ಲವೆ ನೂರೊಂದು ಸ್ಥಲವನ್ನು ದೃಷ್ಟಿಯಲ್ಲಿಟ್ಟು ಕೊಂಡು ಬಳಸಿದುದಾಗಿರಬೇಕು.

ಹೆಸರೇ ಸೂಚಿಸುವಂತೆ ಇದು ವೀರಶೈವ ಆಚರಣೆಗಳನ್ನು ಸಂಗ್ರಹರೂಪವಾಗಿ ಹೇಳುವ ಕೃತಿ. ಇದರ ವಿಷಯವನ್ನು ಅಂತ್ಯದ ಗದ್ಯದಲ್ಲಿ ಹೀಗೆ ಹೇಳಲಾಗಿದೆ : ''ಹರ ಗುರುವಾಕ್ಯ ಪ್ರಮಾಣವಾಗಿ ನಿಜಾನುಭಾವಸೂತ್ರಗಳಿಂದ ಹಾಲುಕ್ಕಿ ಮೇಲುವರಿ ದೋಪಾದಿಯಲ್ಲಿ, ಅನಾದಿ ಪ್ರಮಥಗಣ ನಿರಾಭಾರಿ ವೀರಶೈವ ಸನ್ಮಾರ್ಗೋದ್ಧಾರಕ ಸದ್ಭಕ್ತಲಿಂಗ ಜಂಗಮದ ಸತ್ಯ ಶುದ್ಧ ನಡೆ ನುಡಿಯುಳ್ಳ ಪರಮ ಪಾತಕ ಸೂತಕ ವಿರಹಿತರಪ್ಪ ಶರಣರಾಚರಣೆ ಸಂಬಂಧದ ನಿಲುಕಡೆ ವಚನಸಾರಾಮೃತೋಪ ದೇಶದೊಳಗಣ ಆಚರಣೆಯ ಸಂಬಂಧವನ್ನು ಉಪದೇಶಾರ್ಥವಾಗಿ ಬಸವರಾಜ ಮೊದಲಾದ ಅಸಂಖ್ಯಾತ ಪ್ರಮಥಗಣ ವಚನ ಸಾರಾಮೃತೋಪದೇಶದೊಳಗಣ

---

೩. ಸರ್ವಾಚಾರಸಾರಾಮೃತಸುಧೆ : ಸಂ. ಡಾ. ಬಿ.ವಿ. ಶಿರೂರ ಪ್ರ. ಶ್ರೀ ಜಗದ್ಗುರು ತೋಂಟದಾರ್ಯಮಠ ಗದಗ (೧೯೮೯) ಪ್ರಸ್ತಾವನೆ ಪು. xi

೪. ಅದೇ, ಪ್ರಸ್ತಾವನೆ ಪು. xi

ಆಚರಣೆಯ ಸಂಬಂಧ ಸ್ವರೂಪ ನಿಲುಕಡೆಯ, ನಿರವಯ ಪರಿಪೂರ್ಣ ಜ್ಞಾನಾನುಭಾವ ಷಟ್‌ಸ್ಥಲಸಮ್ಮತವಾದ ೧೧೧ ವಚನಗಳಿಂದ ಸೇರಿಸಿ, ಪರಿಪೂರ್ಣಾನಂದವೆನಿಸಿದಂಥ ಸರ್ವಾಚಾರಸಾರಾಮೃತಸುಧೆ''.

ವೀರಶೈವದಲ್ಲಿ ಆಚರಣೆಗೆ ಪ್ರಮುಖ ಸ್ಥಾನ. ಕ್ರಿಯೆ ಮತ್ತು ಜ್ಞಾನ ಇಲ್ಲಿ ಅವಿನಾಭಾವ ಸಂಬಂಧವನ್ನು ಹೊಂದಿವೆ. ಅದನ್ನೇ ಚೆನ್ನಬಸವಣ್ಣ ತನ್ನೊಂದು ವಚನದಲ್ಲಿ 'ಕ್ರಿಯೆಯೇ ಜ್ಞಾನ, ಆ ಜ್ಞಾನವೇ ಕ್ರಿಯೆ, ಜ್ಞಾನವೆಂದಡೆ ತಿಳಿಯುವುದು; ಕ್ರಿಯೆಯೆಂದರೆ ತಿಳಿದಂತೆ ಮಾಡುವುದು' ಎಂದು ಅರ್ಥಪೂರ್ಣವಾಗಿ ಹೇಳಿದ್ದಾನೆ. ವೀರಶೈವದ ಪ್ರಾಣವಾಗಿರುವ ಪಂಚಾಚಾರಗಳ ಸ್ವರೂಪ–ಲಕ್ಷಣ–ಆಚರಣೆ–ವೈಶಿಷ್ಟ್ಯಗಳನ್ನು ಕುರಿತು ಸಾಮಾನ್ಯವಾಗಿ ಎಲ್ಲ ವಚನಕಾರರೂ ಹೇಳಿದ್ದಾರೆ. ಬಿಡಿ ಬಿಡಿಯಾಗಿ–ಒಟ್ಟಾಗಿ ಹೇಳಿದ, ಈ ವಿಚಾರಗಳನ್ನೊಳಗೊಂಡ ವಚನಗಳನ್ನು ಒಂದೆಡೆ ಕ್ರೋಡೀಕರಿಸುವ ಕಾರ್ಯ ಮುಂದೆ ಬಂದ ಸಂಕಲನಕಾರರಿಂದ ವ್ಯಾಪಕವಾಗಿ ನಡೆಯಿತು. ಈ ಕಾರಣದಿಂದ ಆಚರಣೆ ಸಂಬಂಧದ ವಚನ ಕೃತಿಗಳ ಒಂದು ಪರಂಪರೆಯೇ ನಿರ್ಮಾಣವಾಯಿತು. ಇದಕ್ಕೆ ಅಸ್ತಿವಾರ ಹಾಕಿದವನು ಗುಬ್ಬಿ ಮಲ್ಲಣ್ಣ. ಅವನು ತನ್ನ 'ಗಣಭಾಷಿಕರತ್ನಮಾಲೆ' ಎಂಬ ಕೃತಿಯಲ್ಲಿ ವಿವಿಧ ಶರಣರ ವಚನಗಳನ್ನು ನೂರೊಂದು ಸ್ಥಲಗಳಡಿಯಲ್ಲಿ ಜೋಡಿಸಿ ವೀರಶೈವ ಆಚರಣೆಗಳಿಗೆ ಒಂದು ವ್ಯವಸ್ಥಿತ ರೂಪಕೊಡಲು ಪ್ರಯತ್ನಿಸಿದ. ಇವನ ಜಾಡುಹಿಡಿದು ಮುಂದೆ ಆಚರಣೆಯ ಸಂಬಂಧದ ವಚನಗಳು [ಚೆನ್ನಂಜಯದೇವರು, ಸಿದ್ಧವೀರೇಶ್ವರದೇವರು], ವಿರತಾಚರಣೆ ಶರಣ ಸಂಬಂಧದ ವಚನಗಳು [ಶಂಕರದೇವ], ನಿಜಾಚರಣೆಯ ಸಂಬಂಧದ ವಚನಗಳು [ಗುರುಸಿದ್ಧದೇವ], ಆಚರಣೆಯ ವಚನಗಳು [ಕುಂತೂರು ಮಹತ್ತದೇವರು], ಸಂಬಂಧಾಚರಣೆಯ ವಚನಗಳು (?), ಸದ್ಭಕ್ತ ಸದ್ವೀರಮಾಹೇಶ್ವರನ ಸತ್ಕ್ರಿಯಾ ಸಮ್ಯಜ್ಞಾನ ಸಮರಸಭಕ್ತಿ ನಿಜಾಚರಣೆಯ ವಚನಗಳು (?), ಷಟ್ಪ್ರಕಾರ ಸಂಗ್ರಹ [ಶಾಂತಾರ್ಯ], ಶೀಲಸಂಪಾದನೆ (ಸಪ್ತಶರಣರ ಆಚರಣೆಯ ವಚನಗಳು)–ಇವೇ ಮೊದಲಾದ ಸಂಕಲನಗಳು, ಸ್ಥಲಕಟ್ಟಿನ ಕೃತಿಗಳು ಹುಟ್ಟಿಕೊಂಡವು. ಇವು ಅನೇಕ ವ್ಯಕ್ತಿ ವಚನಗಳಿಂದ ಸಂಯೋಜಿಸಿದ ಕೃತಿಗಳಾದರೆ, ಮೂರುಸಾವಿರ ಮುಕ್ತಿಮುನಿಯ 'ಸರ್ವಾಚಾರ ಸಾರಾಮೃತಸುಧೆ' ಏಕವ್ಯಕ್ತಿಯ ಸ್ವಕೃತ ವಚನಗಳಿಂದ ಕೂಡಿದ ಕೃತಿ; ಬಸವಾದಿ ಶರಣರ ವಚನಗಳನ್ನು ಓದಿ, ಅನುಭವಿಸಿ, ಪ್ರಭಾವಿತನಾಗಿ ಬರೆದ ವಿಶಿಷ್ಟ ಕೃತಿ.

'ಆಚಾರಂ ಸರ್ವಕಾರಣಂ' ಎಂದು ನಂಬಿ, 'ಸರ್ವಾಚಾರದ ಘನತೆಯನ್ನು ಉಸುರಲು' ಮುಂದಾದ ಮುಕ್ತಿಮುನಿ ಈ ಕೃತಿಯಲ್ಲಿ ಕ್ರಮವಾಗಿ ಕೇವಲ ಸುಜ್ಞಾನವೇ ಚಿತ್ಪಿಂಡಾಕೃತಿ ಧರಿಸುವುದು, ಆ ಪಿಂಡಮಧ್ಯದಲ್ಲಿ ಮಹಾಜ್ಞಾನ ಚಿತ್ಪ್ರಾಣವಾಗಿ ಶೋಭಿಸುವುದು, ಅವೆರಡರ ಮಧ್ಯ ಪರಿಪೂರ್ಣ ಸ್ವಾನುಭಾವ ಮೂಡುವುದು, ಅದರಿಂದ ಗುರುಚರಮಾರ್ಗವಿಡಿದು ಅಷ್ಟವಿಧಭಕ್ತಿಯನ್ನು ಆಚರಿಸುತ್ತ ಬೆಳಗುವ ಮಹಾಲಿಂಗ ಶರಣನ ವಿವರ; ನಿಜವೀರಶೈವೋದ್ಧಾರಕ ಭಕ್ತಮಹೇಶ್ವರರು ಮಹಾಲಿಂಗ ಆದಿಯಾಗಿ ನಿರವಯಲಿಂಗ ಅಂತ್ಯ ಪರಿಯಂತರ, ಸಚ್ಚಿದಾನಂದ ರೂಪದಿಂದ ಸತ್ಕ್ರಿಯಾ ಸಮ್ಯಜ್ಞಾನ ಸಂಪೂರ್ಣಾನಂದಭರಿತ ಆಚಾರಂಗಳಲ್ಲಿ ಸ್ವಾನುಭಾವ

ಸದ್ಧರ್ಮದಿಂದ ಪರತತ್ವಶಿವಯೋಗಾನುಸಂಧಾನದ ನಿಜಾವಧಾನದಲ್ಲಿ ತೃಪ್ತರಾಗಿ, ಮುಕ್ತಿಸ್ವರೂಪ ಪಡೆಯುವುದು; ಇದಕ್ಕೆ ಪೂರಕವಾದ ಶೌಚಲಕ್ಷಣ, ಧೂಳ ಪಾದೋದಕ, ಗುರುಪಾದೋದಕ ವಿವರ, ವಿಭೂತಿ ಶುದ್ಧಮಾಡುವುದು, ಪಾದ ಪೂಜೆಯ ಕ್ರಮ, ಜಂಗಮತೀರ್ಥ ಸಲಿಸುವ ಕ್ರಮ, ಭಕ್ತಿ ಸಲಿಸುವ ಕ್ರಮ, ವಿಸರ್ಜನೆಯ ಪ್ರಕಾರಗಳು, ದುರಾಚಾರ ನೆನಹು, ಅಂಗವಿಕಾರ ನಿರಸನ, ಲಹರಿ ನಿರಸನ, ಪಂಚಾಚಾರ ಹೇಳುವನ ಬಾಳುವೆ ನಿರಸನ, ಸ್ವಪ್ನ ನಿರಸನ, ಷಡ್ವಿಧಭವಿ ಲಕ್ಷಣ, ಪಂಚಸೂತಕ ನಿರಸನ, ಪ್ರಸಾದ ಮಹತ್ವ, ತನು–ಮನ–ಪ್ರಾಣ–ಜೀವ–ಭಾವಸೂತಕ, ಗುಪ್ತಪಾತಕಸೂತಕ ನಿರಸನ, ಶೈವ ಆಚರಣೆ ಖಂಡನೆ, ಲಿಂಗ ಭಿನ್ನ–ಭಿನ್ನವಾದ ಲಕ್ಷಣ, ಗುರುನಿರೂಪಣ, ಜಲವಿಸರ್ಜನ, ಶುದ್ಧಸಿದ್ಧಪ್ರಸಾದ ವಿವರ, ತೀರ್ಥವ ಸಲಿಸುವ ಕ್ರಮ, ಷಡ್ಭೂತ ನಿವೃತ್ತಿ ಚಿತ್ಕಲಾ ಪ್ರಸಾದಸ್ಥಲ, ಸಂಸಾರ ನಿರ್ಮೋಹ, ಪಿಂಡಾದಿ ಜ್ಞಾನಶೂನ್ಯದ ವರೆಗಿನ ಸ್ಥಲಗಳು, ೨೧೬ ಸಕೀಲಗಳು ಇತ್ಯಾದಿ ವಿಷಯಗಳನ್ನು ವಿವರಿಸಿದ್ದಾನೆ.

ಆಚರಣೆಗಳ ವಿವರದ ಜೊತೆಗೆ ಇಲ್ಲಿ ಅವುಗಳನ್ನು ಅನುಸರಿಸದವರ ಟೀಕೆಯೂ ಏಕಕಾಲಕ್ಕೆ ನಡೆದಿದೆ. ತಾನು ಹೇಳುವ ವಿಷಯಗಳಿಗೆ ಪ್ರಮಾಣವಾಗಿ ಈ ವಚನಕಾರ ಅಲ್ಲಲ್ಲಿ ಸಂಸ್ಕೃತ ಉದ್ಧರಣೆಗಳನ್ನು ಬಳಸಿಕೊಂಡಿದ್ದಾನೆ. ತತ್ವ ನಿರೂಪಣೆಯೇ ಈ ಕೃತಿಯ ಮುಖ್ಯ ಉದ್ದೇಶವಾಗಿರುವುದರಿಂದ ಇಲ್ಲಿ ಭಾವಕ್ಕಾಗಲಿ, ಕಾವ್ಯಾಂಶಕ್ಕಾಗಲಿ, ವಿಶೇಷ ಕಲ್ಪನೆಗಾಗಲಿ ಸ್ಥಾನವಿಲ್ಲ. ಆದರೂ 'ಸುಟ್ಟವೆಯಂತೆ ಜೀವನ ವರ್ತನಗಳಿಲ್ಲದೆ' [೨೨], 'ಎಲೆಗಳೆದ ವೃಕ್ಷದಂತೆ ಕರಣಂಗಳುಲುಮಿಲ್ಲದೆ' [೨೧], 'ಕೆಡಪಿದ ದಂಡದಂತೆ ಸರ್ವಾಂಗಪ್ರಣುತನಾಗಿ' [೨೦], 'ಘನಮನೋಲ್ಲಾಸ ಚಿದ್ಬೆಳಗುಗಳ ಚಿತ್ಪಾದತೀರ್ಥ ಪ್ರಸಾದ' [೨೯] ಎಂಬಂಥ ಮಾತುಗಳು ಅಲ್ಲೊಂದು ಇಲ್ಲೊಂದು ಕ್ವಚಿತ್ತಾಗಿ ಮಿಂಚಿ ಮಾಯವಾಗುತ್ತವೆ.

ವಚನಗಳ ಬಂಧ ತುಂಬ ಶಿಥಿಲ; ಸೂತ್ರಬದ್ಧ, ಭಾವಗರ್ಭಿತ ಸಂಕ್ಷಿಪ್ತ ವಚನಗಳಿಗಿಂತ ವಿವರಣಾತ್ಮಕವಾದ–ವಾಚ್ಯವಾದ ದೀರ್ಘವಚನಗಳೇ ಅಧಿಕ. ವಾಕ್ಯ ಸಂಯೋಜನೆಯಲ್ಲಿ ಸ್ಪಷ್ಟತೆಯಿಲ್ಲ. ವಚನಗಳನ್ನು ಓದುತ್ತ ಹೋದಂತೆ ಶಾಸ್ತ್ರದ ಗೊಂಡಾರಣ್ಯವನ್ನು ಪ್ರವೇಶಿಸಿದ ಅನುಭವವಾಗುತ್ತದೆ. ಶೈಲಿಯ ಸೊಬಗು ಸೌಂದರ್ಯಗಳಿಗೆ ಇಲ್ಲಿ ಎಳ್ಳನಿತೂ ಎಡೆಯಿಲ್ಲ ; ಗದ್ಯದ ಹೃದ್ಯತೆಯೂ ತೋರದು. ಹೀಗಿದ್ದೂ 'ಪರಮಾಮೃತ ಸುಧೆಯಿದು' ಎಂದು ವಚನಕಾರ ತನ್ನ ಕೃತಿಯನ್ನು ಕುರಿತು ಅಭಿಮಾನದಿಂದ ಹೇಳಿದ ಮಾತನ್ನು ತತ್ವನಿರೂಪಣೆಯ ಹಿನ್ನೆಲೆಯಲ್ಲಿ ಪರಿಗಣಿಸಬೇಕೇ ವಿನಃ ಸಾಹಿತ್ಯದ ದೃಷ್ಟಿಯಿಂದ ಅಲ್ಲ ಎಂದು ಹೇಳಬೇಕಾಗುತ್ತದೆ.

ಮೆಡ್ಲೇರಿ ಶಿವಲಿಂಗ :

೧೬ನೆಯ ಶತಮಾನದ (೧೫೫೦)ದಲ್ಲಿ ಆಗಿ ಹೋದ ಈತನ ಜೀವನಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳು ಈತನೇ ರಚಿಸಿದ 'ಶಿವಾಮೃತಲೀಲೆ' ಮತ್ತು 'ವೀರಭದ್ರ ತಾರಾವಳಿ' ಎಂಬ ಕೃತಿಗಳಿಂದ ತಿಳಿದುಬರುತ್ತವೆ.

ಮೆಡ್ಲೇರಿ ಈತನ ಸ್ಥಳ. ಈ ಊರಿನ ಹಿರೇಮಠದ ದೊಡ್ಡ ಚೆನ್ನವೀರಸ್ವಾಮಿ ಈತನ ತಂದೆ. ಈತ ಕಬ್ಬಿನ ಕಂಥೆಯ ಬಗೆಗೆ ಸೇರಿದವನು. ಬಾಳೆಹಳ್ಳಿ ಸಿಂಹಾಸನದ ಕುಮಾರ ಚೆನ್ನಬಸವ ಈತನ ಗುರು. ಮೇಲೆ ಉಲ್ಲೇಖಿಸಿದ ಎರಡು ಕೃತಿಗಳಲ್ಲದೆ 'ಸಿದ್ಧಲಿಂಗೇಶ್ವರ ಶತಕ' ಎಂಬ ಕೃತಿಯನ್ನೂ, ಸ್ವರವಚನಗಳನ್ನೂ ಈತ ರಚಿಸಿದ್ದಾನೆ.

'ಶಿವಾಮೃತಲೀಲೆ' ೨೫ ಸಂಧಿ ೧೧೪೩ ಭಾಮಿನಿ ಷಟ್ಪದಿಯಲ್ಲಿ ವಿಸ್ತೃತಗೊಂಡು ಶಿವನಲೀಲೆಗಳನ್ನು ನಿರೂಪಿಸುತ್ತದೆ. ಇದನ್ನು ಗುರುಶಾಂತಲಿಂಗನ ಪ್ರೇರಣೆಯಿಂದ ಬರೆದುದಾಗಿ ಕವಿ ತಿಳಿಸುತ್ತಾನೆ. 'ಸಿದ್ಧಲಿಂಗಶತಕ' ತೋಂಟದ ಸಿದ್ಧಲಿಂಗರ ಮಹಿಮೆಯನ್ನು ಹೇಳುವ ೯೮ ವೃತ್ತಗಳಿಂದ ಕೂಡಿದ ಕೃತಿಯಾದರೆ, ವೀರಭದ್ರನ ತಾರಾವಳಿ ವೀರಭದ್ರನ ವೀರಜೀವನವನ್ನು ವರ್ಣಿಸುವ ೨೭ ನುಡಿಗಳುಳ್ಳ ಲಘುಕೃತಿ.

ಮೆಡ್ಲೇರಿ ಶಿವಲಿಂಗ ಈ ಕೃತಿಗಳನ್ನಲ್ಲದೆ ವಚನಗಳನ್ನು ಬರೆದಿದ್ದಾನೆಂದು ತಿಳಿಯಲಾಗಿತ್ತು. ಆದರೆ ಅವು ದೊರೆತಿರಲಿಲ್ಲ. ಈಗ ಅವು ಶಿವಾಮೃತಲೀಲೆ ಎಂಬ ಅವನ ಕಾವ್ಯದಲ್ಲಿ ಅಡಕವಾಗಿರುವುದು ಬೆಳಕಿಗೆ ಬಂದಿದೆ. ಆ ಕಾವ್ಯದ ೧ ಮತ್ತು ೩ ನೆಯ ಗತಿಯನ್ನು ಬಿಟ್ಟು, ಉಳಿದ ೨೩ ಗತಿಗಳ ಆದಿಯಲ್ಲಿ 'ಸೂಚಿ ವಚನ' ಎಂದು ಒಂದೊಂದು ವಚನಗಳನ್ನು ಜೋಡಿಸಲಾಗಿದೆ. ಇದರಿಂದಾಗಿ ಸದ್ಯ ಈತನ ೨೩ ವಚನಗಳು ದೊರೆತಂತಾಗಿದೆ. ಅವು ಇಷ್ಟಲಿಂಗೇಶ್ವರ, ಕರಸ್ಥಳದ ಇಷ್ಟಲಿಂಗೇಶ್ವರ, ಚನ್ನಬಸವೇಶ್ವರ, ಕುವರ ಚೆನ್ನಬಸವೇಶ್ವರ, ಚೆನ್ನಸಂಗಮದೇವ ಎಂಬ ಅಂಕಿತವನ್ನು ಹೊಂದಿವೆ. 'ಇಷ್ಟಲಿಂಗೇಶ್ವರ' ಎಂಬುದು ಈತನ ಅಂಕಿತವಾಗಿದೆ ಎಂಬುದು 'ಸಿದ್ಧಲಿಂಗಶತಕ'ದಿಂದ ಖಚಿತವಾಗಿದೆ. ಅದರ ಜೊತೆಗೆ ಕೆಲವು ವಚನಗಳಲ್ಲಿ ಬಳಸಿದ ಚೆನ್ನಬಸವೇಶ್ವರ, ಕುವರ ಚೆನ್ನಬಸವೇಶ್ವರ ಎಂಬ ಅಂಕಿತಗಳೂ ಈತನವೇ ಆಗಿರಬೇಕು ಎಂಬುದಕ್ಕೆ ಈತನ ಗುರುವಿನ ಹೆಸರು 'ಕುಮಾರ ಚೆನ್ನಬಸವ' ಎಂದಿರುವುದು ಪುಷ್ಟಿನೀಡುತ್ತದೆ. ಅಂದರೆ ಮೆಡ್ಲೇರಿ ಶಿವಲಿಂಗದೇವ ವಚನಗಳಿಗೆ ಇಷ್ಟಲಿಂಗ ಮತ್ತು ಗುರುವಿನ ಹೆಸರು–ಎರಡನ್ನೂ ಅಂಕಿತಗಳನ್ನಾಗಿ ಬಳಸಿಕೊಂಡಿದ್ದಾನೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಎಲ್ಲ ವಚನಗಳು ಶಿವಸ್ತುತಿ ಪರವಾಗಿವೆ. ಶಿವನ ಮಹಿಮಾತಿಶಯಗಳನ್ನು ಸರಳ, ಸುಂದರವಾಗಿ ಹೇಳುವುದೇ ಅವುಗಳ ಮುಖ್ಯ ಆಶಯವಾಗಿದೆ. ಆಯಾ ಸ್ಥಲಕ್ಕೆ ಹೊಂದಿಕೆಯಾಗುವ ವಿಷಯವನ್ನು ಅವು ಅಳವಡಿಸಿಕೊಂಡಿವೆ.

### ವೀರಣ್ಣ ದೇವರು :

ಕರಸ್ಥಲದ ವೀರಣ್ಣೊಡೆಯನೆಂದು ಪ್ರಸಿದ್ಧನಾದ ಈತನಿಗೆ ವೀರಯ್ಯ, ವೀರಣಯ್ಯ ವೀರಣ್ಣೊಡೆಯ, ಗುರುವೀರಣಯ್ಯ, ಕರಸ್ಥಲದ ವೀರಣ್ಣ, ಕರಸ್ಥಲದ ಗುರುಶಾಂತ ವೀರಯ್ಯ ಎಂಬ ನಾಮಾಂತರಗಳಿವೆ. ವಿಜಯನಗರದ ವೀರಶೈವ ದೊರೆ ಪ್ರೌಢ ದೇವರಾಯ[೧೪೨೪–೧೪೪೬]ನ ಕಾಲದಲ್ಲಿ ಇದ್ದ ಈತ ನೂರೊಂದು ವಿರಕ್ತರಿಗೆ ಆದ್ಯನಾಗಿ, ವಿರಕ್ತ ಸಮೂಹದ ನಾಯಕನಾಗಿ, ಅರಸನ ಆಪ್ತಮಂತ್ರಿಯಾಗಿ, ಅಳಿಯನಾಗಿ, ಗುರುವಾಗಿ, ರಾಜಯೋಗಿಯಾಗಿ ವೀರಶೈವ ಧರ್ಮ–ತತ್ವ–ಸಿದ್ಧಾಂತ–

ಸಾಹಿತ್ಯ ಸಂಸ್ಕೃತಿಗಳನ್ನು ಉಜ್ವಲಗೊಳಿಸುವಲ್ಲಿ ಮಹತ್ವದ ಪಾತ್ರವಾಡಿದ ಮಹಾನುಭಾವ, ಕಾರಣಪುರುಷ ಎಂದು ವೀರಶೈವ ಕಾವ್ಯ–ಪುರಾಣಗಳಿಂದ ತಿಳಿದುಬರುತ್ತದೆ. ಕರಸ್ಥಲನಾಗಿದೇವ ಈತನ ಶಿಷ್ಯ.

ಲೌಕಿಕವಾಗಿ ಬಾಳಿ ಅಲೌಕಿಕ ಸಿದ್ಧಿಯನ್ನು ಸಂಪಾದಿಸಿದ ವೀರಣ್ಣದೇವರು, ಲೋಕಾನುಭವ ಶಿವಾನುಭವಗಳೆರಡನ್ನೂ ಗಳಿಸಿಕೊಂಡು, ಧರ್ಮತತ್ವಬೋಧೆಯ ಜೊತೆಗೆ ವೀರಶೈವ ತತ್ವಬೋಧಕ ಕೃತಿಗಳನ್ನೂ ರಚಿಸಿ, ವೀರಶೈವ ಸಾಹಿತ್ಯಕ್ಷೇತ್ರಕ್ಕೆ ತನ್ನದೇ ಆದ ಕಾಣಿಕೆಯನ್ನು ಸಲ್ಲಿಸಿದ್ದಾನೆ. ಇವು ಈಗ ಉಪಲಬ್ಧವಾದ ಈತನ ಕೃತಿಗಳು :

| | | |
|---|---|---|
| ೧. | ಕರಸ್ಥಲದ ವೀರಣ್ಣೊಡೆಯರ ಕಂದ | –೨೫ ಕಂದ |
| ೨. | ನಿಷ್ಕಲ ಶತಕ | –೧೦೧ ವೃತ್ತ |
| ೩. | ಕರಸ್ಥಲ ವೀರಣ್ಣೊಡೆಯರ ವಚನ | – ೭೦ ಕಂದ |
| ೪. | ಪರಮವಿರಕ್ತನ ಐಕ್ಯಸ್ಥಲ | – ೬೧ ತ್ರಿಪದಿ |
| ೫. | ಅಷ್ಟವಿಧಾರ್ಚನೆ | – ವೃತ್ತ |
| ೬. | ಮಂತ್ರೋತ್ಪತ್ತಿರಗಳೆ | – ರಗಳೆ |
| ೭. | ಲಿಂಗಸೂತ್ರದ ವಚನ | – ಪ್ರಭುದೇವರ ವಚನಗಳ ಸಂಗ್ರಹ |
| ೮. | ಸ್ವರವಚನ | – ೧೧ ಸ್ವರವಚನ |
| ೯. | ವಚನ | – ೭ ವಚನ |

ವಿವಿಧ ಬಂಧಗಳಲ್ಲಿ ರಚಿತವಾದ ಕೃತಿಗಳ ವಸ್ತು ಪ್ರಧಾನವಾಗಿ ಶಿವಸ್ತುತಿ ಮತ್ತು ವೀರಶೈವ ತತ್ವನಿರೂಪಣೆ. ಪ್ರತಿಯೊಂದು ಕೃತಿ ಇಷ್ಟದೈವದ ಅಂಕಿತವನ್ನು ಹೊಂದಿದೆ. ಈ ಅಂಕಿತಗಳಲ್ಲಿ ವೈವಿಧ್ಯತೆಯಿದೆ. ಹೀಗಾಗಿ ವೀರಣ್ಣದೇವರ ನಿಜವಾದ ಅಂಕಿತ ಯಾವುದು ಎಂಬ ವಿಷಯದಲ್ಲಿ ಗೊಂದಲ ಉಂಟಾಗಿದೆ. ಅದರ ಚರ್ಚೆಗೆ ಕೈಹಾಕದೇ[೫], ಈಗ ಈತನವೆಂದು ಭಾವಿಸಿದ ಅಂಕಿತಗಳನ್ನು ಹೀಗೆ ಸಂಗ್ರಹಿಸಬಹುದು :

ಗುರುಶಾಂತ [ಕಂದ], ನಿಜಶಾಂತ ನಿಷ್ಕಳಾ [ಶತಕ], ನಿಜಗುರುಶಾಂತ [ಕಂದ, ತ್ರಿಪದಿ, ವಚನ], ಶಂಭುಶಾಂತ, ಶಾಂತಮಲ್ಲೇಶಾ [ಅಷ್ಟವಿಧಾರ್ಚನೆ], ಶಾಂತ, ಶಾಂತ ಮಲ್ಲಿಕಾರ್ಜುನಾ [ರಗಳೆ], ಶಾಂತಮಲ್ಲ, ಗುರುಶಾಂತಮಲ್ಲೇಶ, ಸದ್ಗುರು ಶಾಂತಮಲ್ಲೇಶ, ಶಾಂತಮಲ್ಲೇಶಲಿಂಗ, ನಿಜಗುರು ಮುಗ್ಧಶಾಂತಮಲ್ಲ, ಮದ್ಗುರು ಶಾಂತಮಲ್ಲೇಶಲಿಂಗ [ಸ್ವರವಚನ], ಮಹಾಘನ ಶಾಂತಮಲ್ಲಿಕಾರ್ಜುನ, ನಿಜಗುರು ಶಾಂತಮಲ್ಲಿಕಾರ್ಜುನ, ಶಾಂತಮಲ್ಲಿಕಾರ್ಜುನ, ಪರಮಪಂಚಾಕ್ಷರಮೂರ್ತಿ ಶಾಂತ ಮಲ್ಲಿಕಾರ್ಜುನ, ಪರಮ ಪ್ರಭು ಶಾಂತಮಲ್ಲಿಕಾರ್ಜುನ, ನಿಜಗುರು ಶಾಂತ ಮಲ್ಲೇಶ್ವರಾ [ವಚನ].

---

೫. ವಿವರವಾದ ಚರ್ಚೆಗೆ ನೋಡಿ : ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ; ಡಾ. ವಿ. ಶಿವಾನಂದ, ಕ. ವಿ. ವಿ. ಧಾರವಾಡ (೧೯೭೮) ಪುಟ ೧೨೮ ; ಶಿವಯೋಗ ಪ್ರದೀಪಿಕೆ : ಡಾ ವೀರಣ್ಣ ರಾಜೂರ, ಕ. ವಿ. ವಿ. ಧಾರವಾಡ (೧೯೮೧) ಪ್ರಸ್ತಾವನೆ ಪು. iv

ಕೊನೆಯಲ್ಲಿ ಸೂಚಿಸಿದ ಆರು ವಿಧದ ಅಂಕಿತಗಳಲ್ಲಿ ಸದ್ಯ ಈತನ ಏಳು ವಚನಗಳು ದೊರೆತಿವೆ. ಅವು ಅದ್ವೈತಾನಂದದ ವಚನಗಳು, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಭಕ್ತ್ಯಾನಂದ ಸುಧಾರ್ಣವ, ಶರಣಚಾರಿತ್ರದ ವಚನಗಳು, ಶಿವ ಯೋಗ ಚಿಂತಾಮಣಿ, ಷಟ್ಪ್ರಕಾರಸಂಗ್ರಹ ಮತ್ತು ಎಳಮಲೆಯ ಗುರುಶಾಂತ ದೇವನ ಮಿಶ್ರಸ್ತೋತ್ರದ ವಚನಗಳು ಎಂಬ ಸ್ಥಲಕಟ್ಟಿನ ಕೃತಿಗಳಲ್ಲಿ ಎಡೆಪಡೆದಿವೆ.

ಏಳರಲ್ಲಿ ಮೂರು ವಚನಗಳು ಬಸವ, ಚನ್ನಬಸವ, ಪ್ರಭು, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಜಗಣ್ಣ, ಮುಕ್ತಾಯಕ್ಕಗಳ ಸ್ತುತಿ, ವ್ಯಕ್ತಿತ್ವ ವಿಶೇಷತೆಗಳನ್ನು ಹೇಳಲು ಮೀಸಲಾಗಿದ್ದರೆ, ಉಳಿದ ನಾಲ್ಕರಲ್ಲಿ ಒಂದು ಸಮರಸೈಕ್ಯದ ಸ್ವರೂಪ ದರ್ಶನವನ್ನು ಮತ್ತೊಂದು ಜಂಗಮನ ಸ್ವರೂಪವನ್ನು, ಮತ್ತೆರಡು ಶರಣನ ನಿಲವನ್ನು ಸರಳ ಸುಂದರವಾಗಿ ತಿಳಿಸುತ್ತವೆ.

ವೀರಸಂಗಯ್ಯ :

'ನಮ್ಮ ಕೂಡಲಚೆನ್ನಸಂಗಮದೇವ' ಅಂಕಿತದಲ್ಲಿ ವಚನಗಳನ್ನು ಬರೆದ ಈತ ಈಚೆಗೆ ಬೆಳಕಿಗೆ ಬಂದ ನೂತನ ವಚನಕಾರ. ಬಸವಪೂರ್ವ ಯುಗದವನೆಂದು ತಿಳಿದುಬರುವ ಬಿದರಿಕೋಟೆಯ (ಬೀದರ್) ಶರಣ ವೀರಸಂಗಯ್ಯನಿಂದ ಭಿನ್ನನಾದ ಈತನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿ ಸದ್ಯ ಯಾವುದೇ ಸಂಗತಿ ತಿಳಿದುಬಂದಿಲ್ಲ. ಎಸ್. ಶಿವಣ್ಣ ಅವರು ಈತನ ಕಾಲವನ್ನು ಸು. ೧೫೮೭ ಎಂದು ನಿರ್ಧರಿಸಿದ್ದಾರೆ.

ಈಗ ವೀರಸಂಗಯ್ಯನ ೧೧೨ ವಚನಗಳು ದೊರೆತಿವೆ.[೧] ವೀರಶೈವ ತತ್ವ ನಿರೂಪಣೆ, ಸಮಾಜ ವಿಮರ್ಶೆ ಅವುಗಳ ಮುಖ್ಯ ಗುರಿ. ಸದ್ಭಕ್ತನ ಲಕ್ಷಣ, ಜಾತಿಭೇದ ನಿರಸನ, ಅಹಂಕಾರಿಗಳ, ಡಾಂಭಿಕ ಭಕ್ತರ, ಮೂಢ ಆಚರಣೆ ಗಳ, ವ್ರತಹೀನರ ಟೀಕೆ; ಮಾಯೆ, ವಿರಕ್ತ, ಭವಿ–ಭಕ್ತ, ಮಂತ್ರಮಹತ್ವ, ಕಾಯಕ, ನೀತಿ–ಇತ್ಯಾದಿ ವಿಷಯಗಳು ಅವುಗಳಲ್ಲಿ ಪ್ರತಿಪಾದಿತವಾಗಿವೆ.

ವರ್ಣಾಶ್ರಮಗಳ ಬಗೆಗೆ, ಜಾತಿಭೇದ ಎಣಿಸುವವರ ಬಗೆಗೆ ವೀರ ಸಂಗಯ್ಯನಿಗೆ ಎಲ್ಲಿಲ್ಲದ ರೋಷ. ಅವರನ್ನು ನಿಷ್ಠುರ ಮಾತುಗಳಿಂದ ನಿಂದಿಸು ತ್ತಾನೆ.

''ಕುಲಕೆ ಮೊದಲ್ಯಾವುದು ಕಡೆಯಾವುದು; ವರ್ಣಾಶ್ರಮಕ್ಕೆ ಫಲವದ ರಿಂದ ನಿಃಫಲವಾಯ್ತು'' ''ಸೂತಕವೆಂದಲ್ಲಿ ಪಾತಕ ಹೊದ್ದುವುದೇನಯ್ಯ'' 'ಕುಲ ಅಕ್ಕುಲವೆಂಬ ಕುಮಂತ್ರಿಗಳೇ ಕೇಳಿರೈ. ಕುಲಜನ ಮೈಯಲ್ಲಿ ಹಾಲು, ಅಕ್ಕುಲಜನ ಮೈಯಲ್ಲಿ ರಕ್ತವಿಪ್ಪುದೆ ?' 'ವೇಶಿಯ ಕುಲವ್ಯಾವುದು? ದಾಸಿಯ ಕುಲವ್ಯಾವುದು? ಹಾಸುವಳು ಸೆರಗ ಹದಿನೆಂಟು ಜಾತಿಗೆ. ಹೇಸದೆ ಎಂಜಲ ತಿಂದು ಹಿರಿದುಕುಲ ನನ್ನದೆಂದು ಮೆರವ ಕಾಸುಗಳ್ಳರಿಗೆ ಕಾತುರ್ಯವೇ ದೇವಾ?' 'ಮಲಿನವುಂಟೆ ಮಹಾಸಮುದ್ರಕ್ಕೆ? ಕುಲ ಅಕ್ಕುಲವುಂಟೆ ಋಷಿ ವರ್ಗದೊಳು' 'ಸೂತಕದೊಳು ಪುಟ್ಟಿತು ಸುಜ್ಞಾನ, ಶೀತಲದೊಳು

೧. ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಭಾಂಡಾರದ ತಾ. ಪ್ರ. ೫೧೫.

ಅಪವಿತ್ರವೇ ಪವಿತ್ರ. ಜ್ಯೋತಿ ಹೊಲೆಯರ ಮನೆಯಲ್ಲಿರೆ ಕುಲಹೀನನೆನ ಬಹುದೆ ? ಕಾತುರವೆ ಅಕ್ಕುಲ, ಹುಸಿಯೆಂಬುದೆ ಹೊಲೆಯ, ಹಸುವೆಂಬುದೆ ಹಾರುವ, ವಿಷಯವೆಂಬುದೇ ಮಾದಿಗ, ಜಾತಿಯ ಜನಿತದ ಮೂತ್ರದ ಕುಕ್ಷಿಯೊಳಗಣ ಮೋಹವಲ್ಲವೇನಯ್ಯ ? ನೂತನ ನೂರೊಂದು ಕುಲ, ಹದಿನೆಂಟು ಸಮಯ, ಆರು ದರುಶನ, ಜ್ಯೋತಿರ್ಮಯ ಲಿಂಗದ ಗೂಡು' 'ಆರು ದರುಶನ, ಹದಿನೆಂಟು ಸಮಯ, ನೂರೊಂದು ಕುಲಕೆ ಬೇರೆ ಒಬ್ಬ ದೈವವೆ ?' 'ಅಜಾತ ಕೂಡಲ ಚೆನ್ನಸಂಗನ ಶರಣರು ಇಕ್ಕಿದ ಮುಂಡಿಗೆಯ ಕುಲ ಜಾತಿ ಭೇದವ ಮಾಡುವ ಜಗದನ್ಯಾಯಿಗಳು ಎತ್ತಿಕೊಳ್ಳಿ'–ಇದು ವೀರಸಂಗಯ್ಯನ ಕುಲ ಜಾತಿ ಕುರಿತ ಮೀಮಾಂಸೆ.

ನಡೆ–ನುಡಿ ಸಾಮರಸ್ಯ ಶರಣರ ಬದುಕಿನ ಬಹುಮುಖ್ಯ ಲಕ್ಷಣ. 'ಮಾತೆಂಬುದು ಜ್ಯೋತಿರ್ಲಿಂಗ'. ಅದರ ಮಹತಿಯನ್ನು ತಮ್ಮ ವಚನಗಳಲ್ಲಿ ಸಾಕಷ್ಟು ಹೇಳಿದ್ದಾರೆ. ವೀರಸಂಗಯ್ಯನೂ ಇದಕ್ಕೆ ಹೊರತಾಗಿಲ್ಲ. ತನ್ನ ಹತ್ತಾರು ವಚನಗಳಲ್ಲಿ ಮಾತಿನ ಮಹತಿಯನ್ನು, ಬರಿಮಾತಿನ ಮಲ್ಲರ ಟೀಕೆಯನ್ನು ಮಾಡಿದ್ದಾನೆ.

'ನುಡಿ ನಡೆಯಿಂದ ಪಡೆದರು ಮೃಡನ ಸದ್ಭಕ್ತರು' 'ಅಲ್ಲದ ಮಾತು ಅಲಗಿನ ಘಾಯ, ಬೆಲ್ಲದ ಮಾತು ಭಲ್ಲೆದ ಘಾಯ' 'ಮಾತಿನ ಮಾಲೆಯೊಳು ಘಾತಕವಿಪ್ಪುದು' 'ಎಲ್ಲರೂ ಮಾತಿನಿಂದ ಮರಣವಾದರು' 'ಕಲಿಕೆಯ ಮಾತಿನ ಮಾಲೆಯ ನೀತಿ ನೆಲೆಗೆ ನಿಲುಕದು ಸಂಗನ ಶರಣಸ್ಥಲ' 'ಮಾತು ತಪ್ಪಿ ಆಡುವಂಗೆ ಆತ್ಮಲಿಂಗವೆಲ್ಲಿಯದು'.

ಹೀಗೆಯೇ ದಾನ ಧರ್ಮ ಪರೋಪಕಾರವ ಮಾಡುವೆನೆಂಬವರನ್ನು 'ಹೀನಮೂಳರು' ಎಂದು ನಿಂದಿಸುತ್ತ– 'ಮೇಘ ಸುರಿಯುತಿದೆ, ಬೆಳೆ ಬೆಳೆಯುತಿದೆ, ನಾ ನೀಡಿದೆ ನೀ ಮಾಡಿದೆ ನಾ ಬೇಡಿದೆನೆಂಬ ಜನ್ಮಕ್ಕೆ ನರಕತಪ್ಪದು' ಎಂದು ಹೇಳುತ್ತಾನೆ. 'ನನ್ನದು ನಿನ್ನದು ಎಂದು ಹೋರಾಡುವ ಅನ್ಯಾಯಿಗಳ ಮಾತ ಕೇಳಲಾಗದು' ಎನ್ನುತ್ತಾನೆ. ನಾವು ಷಟ್‌ಸ್ಥಲಬ್ರಹ್ಮಿ ಗಳಾದೆವೆಂದು ಹೇಳುತ್ತ ತಿರುಗುವವರನ್ನು 'ಬರಿದೆ ಅಂದುಕೊಂಡರೆ ಷಟ್‌ಸ್ಥಲಬ್ರಹ್ಮಿಗಳಾಗರು' 'ವಾನರ ವನದೊಳಗಿದ್ದರೆ ಹನುಮನೆನ ಬಹುದೆ ? ಶ್ವಾನ ಬೂದಿಯೊಳು ಹೊರಳಿದರೆ ಭಸ್ಮಾಂಗಿಯಹುದೆ ? ಮಾನವರೆಲ್ಲ ಭಕ್ತರಾಪರೆ ?' ಎಂದು ಪ್ರಶ್ನಿಸುತ್ತಾನೆ. ಲಗ್ನ ಮುಹೂರ್ತ ನಕ್ಷತ್ರ ನೋಡುವವರನ್ನು 'ಅವಿವೇಕಯುಕ್ತಿಹೋಕರು' ಎಂದು ಟೀಕಿಸು ತ್ತಾನೆ. 'ತನ್ನ ಸತಿಯ ಬಿಟ್ಟು ಅನ್ಯಸತಿಗೆರಗುವ ಕುನ್ನಿನಾಯಿ ಮುಖವ ನೋಡಲಾಗದು' 'ತನ್ನ ಸತಿ ತನ್ನ ಕಾಯಕ ಕೃಷಿಯಲ್ಲದೆ ಅನ್ಯಾರ್ಥವ ನೋಡಿ ಗ್ರಹಿಸದಾತನ ನೋಟವೇ ನೋಟ' 'ದುರ್ಜನರ ಸಂಗಬೇಡ' 'ಭಕ್ತ ರಂಗಣವ ಬಳಿವ ಕಸಬರಿಗೆಯಾಗಬಹುದಲ್ಲದೆ ವ್ಯರ್ಥರ ಕೂಟ ಸಲ್ಲದು' 'ಒಬ್ಬರಿಗೆ ಹೇಳಿ ನಡೆಯದವರ ಸಂಗ ಗೊಬ್ಬರದೊಳಗಣ ಚೇಳಿನಂತೆ' 'ನಂಬುಗೆಯೆಂಬುದು ಪಾಶದಾಸೆಯ ಬಿಟ್ಟವರಿಗೆ ಸಾಧ್ಯ' ಎಂದು ನೀತಿವಾದ ಹೇಳುತ್ತಾನೆ.

ಕೆಲವು ಮಾತುಗಳು ಸೂತ್ರಬದ್ಧ ಉಕ್ತಿಗಳಾಗಿದ್ದು ಅವುಗಳಲ್ಲಿ ವಚನ ಕಾರನ ಪ್ರತಿಭೆ–ಲೋಕಾನುಭವ–ಶಿವಾನುಭವಗಳು ಸುಪ್ರಕಟವಾಗಿವೆ. 'ಸುಜ್ಞಾನಕ್ಕೆ

ಸುಖದುಃಖವು ಏಕವು' 'ಶಿವಲಿಂಗಕ್ಕೆ ಸಿಕ್ಕು, ವಕ್ರಗಳುಂಟೇನಯ್ಯ ?' 'ಶರೀರ ಭಿನ್ನ ಪರಮಾತ್ಮ ಏಕವೆಂಬುದೇ ವೇದವಾಕ್ಯ; ಶರೀರ ಗೊಹೇಶ್ವರ ಈಶ್ವರ ಪರಮಾರ್ಥ ಪರಿಪೂರ್ಣನೆಂಬುದೇ ಭಕ್ತಿವಾಕ್ಯ' 'ಬಾನದ ಕುರು ಳೊಳಗೆ ಚೇಳ ಹಾಕಿ ಮಡಗುವರೆ ?' 'ಬಾನದ ಕುರುಳ ಸುಟ್ಟ ಬೂದಿಯಲ್ಲಿ ಭಸಿತವಾಪುದೆ ?' 'ಒಬ್ಬರೊಬ್ಬರ ಕಂಡು ಗೊಬ್ಬರದ ಬಂಡಿಯ ಹೂಡಿ ದಂತೆ ?' 'ಭೃಂಗ ಪುಷ್ಪದ ಕುಸುಮಕ್ಕೆರಗುವುದಲ್ಲದೆ ಕೆಸರಿಗೆರಗುವುದೆ ?' 'ಗಬ್ಬತನದಿಂದ ಗರತಿ ಜಾರೆಯಾದಂತೆ' 'ಆತ್ಮನೆಂಬ ರಟ್ಟವಾತಕ್ಕೆ ಪರಿಪ್ರತಿ ಯಿಲ್ಲ' 'ಎಮ್ಮೆಮಡುವಿನೊಳು ಬಿದ್ದಂತೆ' 'ಹೇಡಿಯ ಕೈಯಲ್ಲಿ ಚಂದ್ರಾಯುಧ ವಿದ್ದರೇನಯ್ಯ ಪಾಡಿಗೆ ಪಂಥ ಪರಾಕ್ರಮಿ ಪರದಳ ವಿಭಾಡನಾಪನೆ ?' 'ದರಿದ್ರವನು ಅನುಭವಿಸಿದಲ್ಲದೆ ವೀರಧೀರತ್ವಗಳು ಅಳವಡವು' 'ಕಾರಿದ ಕೂಳಿಗೆ ಕೈಯಾಂತಲ್ಲದೆ ಕರುಣಪ್ರಸಾದ ಸಿಕ್ಕದು' 'ಮೇದರ ಕತ್ತಿಯಲ್ಲಿ ಕೆತ್ತಿದ ಸಿಬಿರಿನಂತೆ' 'ಧರ್ಮಕೆ ಅಧರ್ಮವೆ ಬುಡ' 'ಗ್ರಂಥವಾಕ್ಯ ಗರ್ವದ ಮಾತು' 'ಬೆಂಡ ಗುಂಡಿಗೆ ಕಟ್ಟಿದಂತೆ ಇರಬೇಕು' 'ತೆಂಗು ತಿಳಿದಂತೆ ಅಂತರಂಗವ ತಿಳಿವರು ಕಣ್ಣುಮೂರುಳ್ಳವರು'.

ವಚನಗಳ ಭಾಷೆ, ಶೈಲಿ, ನಿರೂಪಣೆ, ಆಶಯಗಳ ಮೇಲೆ ೧೨ನೆಯ ಶತಮಾನದ ಶರಣರ ದಟ್ಟವಾದ ಪ್ರಭಾವ ಕಂಡುಬರುತ್ತದೆ. ಈತ ಬಳಸುವ ಅನೇಕ ಉಪಮೆ, ದೃಷ್ಟಾಂತಗಳು ಪ್ರಾದೇಶಿಕ ವಸ್ತುಸಂಗತಿಗಳನ್ನು ಸಹಜ ವಾಗಿ ಬಳಸಿಕೊಂಡಿವೆ. ಭಾಷೆ ಗ್ರಾಮೀಣ ವ್ಯಕ್ತಿಯೊಬ್ಬ ಮಾತನಾಡಿದಂತಿದೆ. ಬಾನದ ಕುರುಳು, ಗೊಬ್ಬರದ ಬಂಡಿ, ಉಂಡಮನೆಗೆರಡು ಬಗೆ, ಗಬ್ಬತನ ದಿಂದ ಗರತಿ ಜಾರೆಯಾದಂತೆ, ಎಮ್ಮೆಮಡುವಿನೊಳು ಬಿದ್ದಂತೆ, ಮೇದಾರನ ಕತ್ತಿ ಕಾರಿದಕೂಳು, ತೊತ್ತಿನ ತಲೆಯ ಸಿದಿಯರುವೆ, ತಿರಬೋಡಿ, ಕಸಬರಿಗೆ, ಗೊಬ್ಬರದೊಳಗಣ ಚೇಳು– ಮೊದಲಾದ ಪದ, ವಾಕ್ಯ, ನುಡಿಗಟ್ಟುಗಳು ಹೊಚ್ಚಹೊಸವೆನಿಸಿವೆ. ದೇಶೀ ಸೊಗಡಿನಿಂದ ಕೂಡಿವೆ. ಈ ವಚನಕಾರ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದ್ದ ಅನುಭಾವಿ ಎಂಬುದನ್ನು ಪ್ರಕಟಿಸುತ್ತವೆ.

**ಷಣ್ಮುಖಸ್ವಾಮಿಗಳು :**

ಹನ್ನೆರಡನೆಯ ಶತಮಾನದ ಶರಣರ ಎಲ್ಲ ಲಕ್ಷಣಗಳನ್ನು ಅಳವಡಿಸಿಕೊಂಡು, ಆ ಯುಗದ ವಚನಸಾಹಿತ್ಯದ ಸಮಗ್ರ ಸ್ವರೂಪವನ್ನು ಪ್ರತಿನಿಧಿಸುವ ವಚನಗಳನ್ನು ರಚಿಸಿದ ಷಣ್ಮುಖಸ್ವಾಮಿಗಳು ಬಸವೋತ್ತರಯುಗದ ಅತ್ಯಂತ ಮಹತ್ವದ ವಚನಕಾರರು. ಬಹುದಿನಗಳ ವರೆಗೆ ಕರ್ತೃನಾಮ ವಿದ್ವಾಂಸರ ದೃಷ್ಟಿಯಿಂದ ದೂರ ಉಳಿದಿದ್ದ ಕಾರಣ ಇವರ ವಚನಗಳನ್ನು 'ನಿರಾಲಂಬದೇವರ ವಚನ' 'ಅಖಂಡೇಶ್ವರ ವಚನ' ಎಂದು ಗುರುತಿಸುತ್ತ ಬರಲಾಗಿತ್ತು. ಇದಕ್ಕೆ ಕೆಲವರು ಹಸ್ತಪ್ರತಿಗಳ ಆದಿಯಲ್ಲಿಯ 'ತೂರ್ಯನಿರಾಲಂಬ ಶರಣನ ಅರುಹಿನ ಷಟ್‌ಸ್ಥಲ ವಚನ' ಎಂಬ ಹೇಳಿಕೆಯಲ್ಲಿನ 'ನಿರಾಲಂಬಶರಣ' ಎಂಬುದನ್ನು, ಮತ್ತೆ ಕೆಲವರು ಅಂತ್ಯದಲ್ಲಿಯ 'ತೂರ್ಯ ನಿರಾಲಂಬಸ್ಥಲದಲ್ಲಿ ನಿಂದು ನಿರುಪಮ ನಿರಾಳ ಷಣ್ಮುಖಶಿವಯೋಗಿಗಳು ನಿರೂಪಿಸಿದ ಅಖಂಡೇಶ್ವರನ ಅರುಹಿನ ಕುರುಹಿನ ಷಟ್‌ಸ್ಥಲ ವಚನ' ಎಂಬ ಹೇಳಿಕೆಯಲ್ಲಿಯ 'ಅಖಂಡೇಶ್ವರ' ಎಂಬುದನ್ನು ಕರ್ತೃವಿನ ಹೆಸರೆಂದು ಭಾವಿಸಿದುದೇ ಕಾರಣವಾಗಿದೆ.

ಆದರೆ ಈಗ ಈ ಸಮಸ್ಯೆಗೆ ಪರಿಹಾರ ದೊರೆತು, 'ತೂರ್ಯನಿರಾಲಂಬ' ಎಂಬುದು ವಚನಕಾರ ನಿಂದ ನಿಲವು, 'ಅಖಂಡೇಶ್ವರ' ಎಂಬುದು ವಚನಾಂಕಿತ, 'ಷಣ್ಮುಖಸ್ವಾಮಿ' ಅಥವಾ 'ಷಣ್ಮುಖಶಿವಯೋಗಿ' ಎಂಬುದು ವಚನಕರ್ತೃವಿನ ಹೆಸರು–ಎಂದು ಸ್ಪಷ್ಟವಾಗಿದೆ.

ಷಣ್ಮುಖಸ್ವಾಮಿಗಳ ಜೀವನಕ್ಕೆ ಸಂಬಂಧಿಸಿದ ಹಲವು ಸಂಗತಿಗಳು ದೊರೆತಿವೆ. ತಂದೆ ಮಲ್ಲಶೆಟ್ಟೆಪ್ಪ, ತಾಯಿ ದೊಡ್ಡಮಾಂಬೆ ; ಸ್ಥಳ ಗುಲಬರ್ಗಾ ಜಿಲ್ಲೆಯ ಜೇವರಗಿ. ಗುರು ಅಖಂಡೇಶ್ವರ; ಜೀವಿತಕಾಲಾವಧಿ ೧೬೩೯ ರಿಂದ ೧೭೧೧. ಮೂಲತಃ ಭಕ್ತರಾಗಿದ್ದ ಇವರು ಜೇವರಗಿ ವಿರಕ್ತಮಠದ ಸ್ವಾಮಿಗಳಾಗಿದ್ದರು. ಆರಂಭದಲ್ಲಿ ಚರಜಂಗಮರಾಗಿ ಲೋಕಸಂಚಾರ ಕೈಕೊಂಡು, ತತ್ಕಾಲೀನ ಜಡಸಮಾಜದಲ್ಲಿ ಜಾಗೃತಿಯನ್ನು ಮೂಡಿಸುತ್ತ ನಡೆದು ಕೊನೆಗೆ ಜೇವರಗಿ ಸಮೀಪದ ಕೋಳಕೂರ ಗ್ರಾಮದ ಭೀಮಾನದಿ ತಟಾಕದ ಭೀಮನಕೊಳ್ಳದಲ್ಲಿ ನೆಲಸಿ, ದೀರ್ಘ ತಪಸ್ಸುಮಾಡಿ, ಯೋಗಸಿದ್ಧಿ ಪಡೆದುಕೊಂಡು ವಚನರಚನೆ ಮಾಡಿದರು. ಅಂತ್ಯಕಾಲದಲ್ಲಿ ಜೇವರಗಿಗೆ ಬಂದು, ಗುರು ಅಖಂಡೇಶ್ವರರು ಸ್ಥಾಪಿಸಿದ ವಿರಕ್ತಮಠದ ಅಧಿಪತಿಗಳಾಗಿ ಧರ್ಮತತ್ವಬೋಧೆ ಮಾಡುತ್ತ, ತಮ್ಮ ಪ್ರಗತಿಪರ ವಿಚಾರಗಳಿಂದ ಮೂಢ ಸಂಪ್ರದಾಯಗಳನ್ನು ಮುರಿದುಹಾಕುತ್ತಾ ನಡೆದು, ಅಲ್ಲಿಯೇ ಐಕ್ಯವಾದರು. ಜೇವರಗಿ ಯಲ್ಲಿ ಇವರ ಗದ್ದುಗೆ ಇಂದಿಗೂ ಇದ್ದು, ಜಾಗ್ರತ ಸ್ಥಾನವಾಗಿ ಪೂಜೆಗೊಳ್ಳುತ್ತಲಿದೆ.

ಅಖಂಡೇಶ್ವರರಿಂದ ಸ್ಥಾಪಿತವಾಗಿ, ಷಣ್ಮುಖಸ್ವಾಮಿಗಳಿಂದ ಪ್ರವರ್ಧಮಾನ ವಾಗಿ ಬೆಳೆದ ಜೇವರಗಿ ವಿರಕ್ತಮಠ ಪರಂಪರೆ ಇಂದಿಗೂ ತನ್ನ ಉಜ್ವಲತೆಯನ್ನು ಕಾಪಾಡಿಕೊಂಡು ಮುಂದೆಸಾಗಿದೆ. ಈ ಮಠದ ಪರಂಪರೆಯಲ್ಲಿ ಈಗ ೧೨ ಜನ ಸ್ವಾಮಿಗಳು ಆಗಿ ಹೋಗಿದ್ದಾರೆ. ಅವರ ಹೆಸರುಗಳು ಹೀಗಿವೆ : ಅಖಂಡೇಶ್ವರ ಸ್ವಾಮಿಗಳು[೧೬೦೦೦], ಷಣ್ಮುಖ ಶಿವಯೋಗಿಗಳು [೧೬೩೦–೧೭೧೧], ಮರಿ ಷಣ್ಮುಖ ಸ್ವಾಮಿಗಳು[೧೭೫೦], ಅಪ್ಪಯ್ಯಸ್ವಾಮಿಗಳು [೧೭೭೫], ಸಿದ್ಧರಾಮಸ್ವಾಮಿ ಗಳು[೧೮೦೦], ರುದ್ರಮುನಿಸ್ವಾಮಿಗಳು [೧೮೨೫], ಷಣ್ಮುಖಸ್ವಾಮಿಗಳು [೧೮೫೦], ಚೆನ್ನಮಲ್ಲಿಕಾರ್ಜುನಸ್ವಾಮಿಗಳು [೧೮೭೫], ಅಖಂಡೇಶ್ವರಸ್ವಾಮಿಗಳು [೧೯೦೦], ನೀಲಕಂಠಸ್ವಾಮಿಗಳು[೧೯೪೫], ಸಿದ್ಧವೀರದೇವರು[೧೯೫೦] ಶಾಂತಲಿಂಗಸ್ವಾಮಿಗಳು [೧೯೫೫ ರಿಂದ– ಸದ್ಯ ಇರುವವರು].

ಅಪೂರ್ವ ವಿದ್ವತ್ತು, ಉಭಯಭಾಷಾಪಾಂಡಿತ್ಯ, ವ್ಯುತ್ಪನ್ನಮತಿ, ನಿಶಿತಶಾಸ್ತ್ರ ಜ್ಞಾನ, ಯೋಗಸಿದ್ಧಿ, ಅನುಭಾವದ ದಿವ್ಯತೇಜಸ್ಸನ್ನು ಹೊಂದಿದ ಷಣ್ಮುಖಸ್ವಾಮಿಗಳು ತಮ್ಮ ಜ್ಞಾನಾನುಭವಗಳನ್ನು ವಚನ ಮತ್ತು ಕೆಲವು ಲಘುಕೃತಿಗಳ ಮೂಲಕ ಲೋಕಕ್ಕೆ ಹಂಚಿದ್ದಾರೆ. ೭೧೨ ವಚನಗಳು, ೪೧ ಚೌಪದಿಗಳುಳ್ಳ ಅಖಂಡೇಶ್ವರ ಜೋಗುಳಪದ, ೭ ಪರಿವರ್ಧಿನಿ ಷಟ್ಪದಿಯುಳ್ಳ ಪಂಚಸಂಜ್ಞೆಗಳಪದ ಮತ್ತು ಭಾಮಿನಿ ಷಟ್ಪದಿಯಲ್ಲಿ ರಚಿತವಾದ ನಿರಾಳ ಸದ್ಗುರುಸ್ತೋತ್ರ ಇವು ಈಗ ದೊರೆತ ಕೃತಿಗಳು.

ಷಣ್ಮುಖಸ್ವಾಮಿಗಳು ತಮ್ಮ ವಚನ ಗ್ರಂಥಕ್ಕೆ 'ತೂರ್ಯನಿರಾಲಂಬ ಶರಣನ ಅರುಹಿನ ಷಟ್‌ಸ್ಥಲ ವಚನ' ಎಂದು ಹೆಸರಿಟ್ಟಿದ್ದಾರೆ 'ತೂರ್ಯನಿರಾಲಂಬ ಶರಣ' ಎಂಬ ಪದ ಅನುಭಾವದ ಉನ್ನತ ಸ್ಥಿತಿಯ ನೆಲೆಯನ್ನು ಸೂಚಿಸುತ್ತದೆ. ಷಣ್ಮುಖಸ್ವಾಮಿಗಳು ಈ ಸ್ಥಿತಿಗೇರಿ ನಿಂತು ಈ ವಚನಗಳನ್ನು ರಚಿಸಿದ್ದಾರೆ. ಇವು ಅವರ 'ಅರುಹಿನ ಕುರುಹಿನ' ಅಭಿವ್ಯಕ್ತಿಗಳಾಗಿವೆ.

ಈ ವಚನಗಳನ್ನು ಸ್ವತಃ ಕರ್ತೃವೇ ಸ್ಥಲಾನುಗುಣವಾಗಿ ಜೋಡಿಸಿದಂತೆ ಕಾಣುತ್ತದೆ. ಇದು ಮುಖ್ಯವಾಗಿ ಷಟ್‌ಸ್ಥಲ ತತ್ವವನ್ನು ನಿರೂಪಿಸುವ ಗ್ರಂಥ. ಈಗಾಗಲೇ ರೂಢಿಗತವಾಗಿ ನಡೆದು ಬಂದ ಈ ತತ್ವಗಳನ್ನು ಪರಂಪರೆಯ ಜಾಡಿನಲ್ಲಿಯೇ ಹೆಚ್ಚು ವ್ಯವಸ್ಥಿತವಾಗಿ, ಅಷ್ಟೇ ಖಚಿತವಾಗಿ ಹೇಳುತ್ತ ಸಾಗಿದ್ದಾರೆ. ಇಲ್ಲಿ ಬಳಸಿದ ಪರಿಭಾಷೆ, ವಸ್ತು–ಧೋರಣೆ, ರೀತಿ–ನೀತಿ ಎಲ್ಲವೂ ಪೂರ್ವ ಪ್ರಭಾವಿತವೇ ಆಗಿವೆ. ಒಟ್ಟು ೧೪ ಸ್ಥಲಗಳಲ್ಲಿ ಕೃತಿ ವಿಭಜನೆಗೊಂಡಿದೆ : ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲ.

ಷಣ್ಮುಖಸ್ವಾಮಿಗಳ ವಚನಗಳಲ್ಲಿ ಅನುಭಾವ–ತತ್ವ–ಸಾಹಿತ್ಯ ಮೂರೂ ಮುಪ್ಪುರಿಗೊಂಡಿವೆ. ಅನುಭಾವ ಮಾರ್ಗಕ್ಕೆ ಅಂತರಂಗ ನಿರೀಕ್ಷಣೆ ಪ್ರಥಮ ಸೋಪಾನ. ಇದನ್ನರಿತ ಸಾಧಕ ಮೊದಲು ತನ್ನ ಅಂತರಂಗವನ್ನು ಬಗಿದು ನೋಡುತ್ತಾನೆ. ಪಂಚೇಂದ್ರಿಯ, ಅರಿಷಡ್ವರ್ಗ, ಕರಣಚತುಷ್ಟಯ, ತಾಪತ್ರಯ ಮೊದಲಾದವುಗಳಿಂದ ತನ್ನ ತನು–ಮನದಲ್ಲುಂಟಾದ ವಿಕಾರ, ದೌರ್ಬಲ್ಯಗಳನ್ನು ಗುರುತಿಸಿ, ಎತ್ತಿ ಹೇಳಿ ಅವುಗಳನ್ನು ನಿರಸನ ಮಾಡಲು ಮುಂದಾಗುತ್ತಾನೆ. ಅದು ಸ್ವಯಂ ಸಾಧ್ಯವಾಗದಾಗ ಗುರುವಿನ ಮೊರೆ ಹೋಗುತ್ತಾನೆ ; ಶರಣರಲ್ಲಿ ಕಿಂಕರತ್ವವನ್ನು ತೋರುತ್ತಾನೆ. ಇದು ಎಲ್ಲ ಪ್ರಮುಖ ಶರಣರ ವಚನಗಳಲ್ಲಿ ಕಂಡುಬರುವ ಒಂದು ಕ್ರಮ. ಅಂತರಂಗ ನಿರೀಕ್ಷಣೆ ಬಸವಾದಿಗಳ ವಚನಗಳಲ್ಲಿ ಅನಿವಾರ್ಯವಾದ ಭಾವತೀವ್ರತೆಯಿಂದ ತುಂಬ ಶಕ್ತಿಯುತವಾಗಿ ಮೂಡಿ ಬಂದಿದ್ದರೆ, ಮುಂದೆ ಬಂದ ವಚನಕಾರರಲ್ಲಿ ಅದು ಷಟ್‌ಸ್ಥಲ ಸಿದ್ಧಾಂತದ ಒಂದು ಪಾರಂಪರಿಕ ಭಾಗವಾಗಿ ಮಾತ್ರ ಬಂದಿದೆ. ಷಣ್ಮುಖಸ್ವಾಮಿಗಳ ವಚನಗಳಲ್ಲಿ ಈ ಎರಡೂ ಲಕ್ಷಣಗಳು ತೋರುತ್ತವೆ.

''ಕೆಟ್ಟೆ ಕೆಟ್ಟೆನಯ್ಯ ಒಡಲುಪಾಧಿವಿಡಿದು,
ಕೆಟ್ಟೆ ಕೆಟ್ಟೆನಯ್ಯ ಒಡಲದುರ್ಗುಣದೊಡನಾಡಿ,
ಕೆಟ್ಟೆ ಕೆಟ್ಟೆನಯ್ಯ ನಿಮ್ಮಡಿಯ ಶಕ್ತಿಯುಮರೆದು ಅಖಂಡೇಶ್ವರಾ''. ೨೨

''ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ,
ಇಂದ್ರಿಯಗಳೆಂಬ ಶಾಖೆಗೆ ಹಾರಿ, ವಿಷಯಗಳೆಂಬ ಹಣ್ಣುಫಲಗಳ ಗ್ರಹಿಸಿ,
ಭವದತ್ತ ಮುಖವಾಗಿ ಹೋಗುತ್ತಿದೆ ನೋಡಾ.

ಈ ಮನವೆಂಬ ಮರ್ಕಟನ ನಿಮ್ಮ ನೆನಹೆಂಬ ಪಾಶದಲ್ಲಿ ಕಟ್ಟಿ
ಎನ್ನನುಳುಹಿಕೊಳ್ಳಯ್ಯ ಅಖಂಡೇಶ್ವರಾ''. ೨೬

''ಸಾಕು ಮಾಡದು ಭವಬಂಧನಂಗಳ, ನೂಕಿ ಬಿಡದು ಸಕಲ ಸಂಸಾರವ,
ಬೇಕೆಂದೆಳಸುವುದು ವಿಷಯ ಭೋಗಕ್ಕೆ,
ಶಿವಶಿವಾ ! ಈ ಕಾಕುಮನಕ್ಕೇನು ಮಾಡಲಿ ?
ಹರಹರ ! ಈ ಕಳ್ಳಮನಕ್ಕೆಂತು ಮಾಡಲಿ ?
ಅಖಂಡೇಶ್ವರಾ, ನಿಮ್ಮ ಕೃಪಾವಲೋಕನದಿಂದೆ ನೋಡಿ ಪಾಲಿಸುವುದಯ್ಯ
ನಿಮ್ಮ ಧರ್ಮ, ನಿಮ್ಮ ಧರ್ಮ''. ೩೦

ಈ ವಚನಗಳಲ್ಲಿ ಭಾವತೀವ್ರತೆಯ ಸ್ಪರ್ಶದ ಜೊತೆಗೆ ಉದ್ದೇಶಪೂರ್ವಕವಾದ ರಚನಾ ಕೌಶಲ್ಯವೂ ಮೇಳೈಸಿದೆ.

''ಶಿವಶಿವಾ, ಎನ್ನ ಮನದಾಳಾಪವ ಅವಧರಿಸಯ್ಯ.
ಸ್ವಾಮಿ ಎನಗೆ ಭಕ್ತಿಬೇಡ, ಜ್ಞಾನಬೇಡ, ವೈರಾಗ್ಯಬೇಡ, ವಿರಕ್ತಿಯು ಬೇಡ.
ನಿಮ್ಮ ಶರಣರು ಉಟ್ಟ ಮೈಲಿಗೆ, ಉಗುಳಿದ ತಾಂಬೂಲ,
ಒಕ್ಕುಮಿಕ್ಕ ಪ್ರಸಾದವನೆ ಕರುಣಿಸಿ,
ಅವರ ಪಡುಗ ಪಾದರಕ್ಷೆಯನಿಡುವುದಕ್ಕೆ ಯೋಗ್ಯನ ಮಾಡಿ
ಅವರ ಕಡೆಯ ಬಾಗಿಲನೆ ಕಾಯ್ವಂತೆ ಮಾಡಯ್ಯ ಅಖಂಡೇಶ್ವರಾ''. ೧೭೬

''ಮಾದಾರ ಚೆನ್ನಯ್ಯನ ಬಾಯ ತಾಂಬೂಲವ ಮೆಲುವೆ.
ಡೋಹರ ಕಕ್ಕಯ್ಯನ ಒಕ್ಕುಮಿಕ್ಕುದನುಂಬೆ,
ಚೋಳಿಯಕ್ಕನ ಊಳಿಗದವನಾಗುವೆ, ಶ್ವಪಚಯ್ಯನ ಆಳಾಗಿರುವೆ.
ಇನ್ನುಳಿದ ಸಕಲ ಗಣಂಗಳ ತೊತ್ತು ಬಂಟ ಲೆಂಕನಾಗಿ
ರಾಜಾಂಗಣ ಬಳಿಯುವೆನಯ್ಯ ಅಖಂಡೇಶ್ವರಾ''. ೪೦೦

ಇಲ್ಲಿ ಭೃತ್ಯಭಾವ ನಿರಾಡಂಬರ ನುಡಿಗಳಲ್ಲಿ ಪ್ರಕಟವಾಗಿದೆ.

ಷಟ್‌ಸ್ಥಲ, ಷಣ್ಮುಖಸ್ವಾಮಿಗಳಲ್ಲಿ ಕೇವಲ ಸಾಧನೆಯ ಮಾರ್ಗವಾಗಿರದೆ ಒಂದು ಸಿದ್ಧಾಂತವೂ ಆಗಿದೆ. ಅದರ ಸಶಾಸ್ತ್ರೀಯ ನಿರೂಪಣೆ ಇವರ ಎಲ್ಲ ವಚನಗಳಲ್ಲಿ ಒಡೆದು ಕಾಣುತ್ತದೆ. ಒಂದೊಂದು ಸ್ಥಲದ ಸ್ವರೂಪ–ಲಕ್ಷಣ, ವೈಶಿಷ್ಟ್ಯಗಳು– ಅದರೊಳಗೆ ಸೇರುವ ಭಕ್ತಿ ಜ್ಞಾನ ವೈರಾಗ್ಯ ಅನುಭಾವ ದಾಸೋಹ ಕಾಯಕ ಶಿವಯೋಗ ಶೀಲ ಚಾರಿತ್ರ್ಯ ಎಲ್ಲವೂ ಇಲ್ಲಿ ಒಂದು ನಿಶ್ಚಿತ ರೂಪದಲ್ಲಿ ವಿವರಿಸಲ್ಪಟ್ಟಿವೆ. ''ಸದಾಚಾರದಲ್ಲಿ ನಡೆವುದು, ಶಿವನಲ್ಲಿ ಭಕ್ತಿಯಾಗಿರುವುದು, ಲಿಂಗಜಂಗಮ ಒಂದೆಯಾಗಿ ಕಾಂಬುದು, ವಿಭೂತಿ ರುದ್ರಾಕ್ಷಿ ಲಿಂಗಧಾರಣ ಮುಂತಾದ ಶಿವಲಾಂಛನವುಳ್ಳಂಥ ಶಿವಶರಣರಲ್ಲಿ ಅತಿಭಕ್ತಿಯಾಗಿರುವುದು'' ಸದ್ಭಕ್ತನ ಲಕ್ಷಣವಾದರೆ, ''ಪರಸ್ತ್ರೀಯರನ್ನು ಮುಟ್ಟದೆ, ಪರಧನ ಅಪಹರಿಸದೆ, ಪರದೈವ ಪೂಜಿಸದೆ, ಪರಹಿಂಸೆ ಮಾಡದೆ, ಪರಲೋಕದ ಫಲಪದವ ಬಯಸದೆ, ಮನವು ನಿರ್ಮಲವಾಗಿ ಇಷ್ಟಲಿಂಗದಲ್ಲಿ ನಿಷ್ಠೆ ಬಲಿದು, ಕಷ್ಟ

ಜನ್ಮಂಗಳ ಕಡೆಗೊಡ್ಡಿರುವುದು'' ವೀರ ಮಾಹೇಶ್ವರನ ಲಕ್ಷಣ. ಇನ್ನು ಶರಣನಾದವನು ಹೇಗಿರಬೇಕು ? ''ಶರಣನಾದಡೆ ಮುರಿದ ಬಂಗಾರವ ಬೆಳಗಾರದಲ್ಲಿ ಬೆಚ್ಚಂತಿರಬೇಕು ಲಿಂಗದಲ್ಲಿ, ಶರಣನಾದಡೆ ಶುಭ್ರವಸ್ತ್ರಕ್ಕೆ ಅಚ್ಚೊತ್ತಿದಂತಿರಬೇಕು ಲಿಂಗದಲ್ಲಿ, ಶರಣ ನಾದಡೆ ಕರಕುಕಟ್ಟಿರದ ಲೋಹದ ಪುತ್ಥಳಿಯಂತಿರಬೇಕು ಲಿಂಗದಲ್ಲಿ''. ಹಾಗೆಯೇ ಅನುಭಾವಿಯ ಇರವು ಹೇಗೆ ? ''ಅನುಭಾವಿಯಾದೊಡೆ ತಿರುಳು ಕರಗಿದ ಹುರಿದ ಬೀಜದಂತಿರಬೇಕು. ಅನುಭಾವಿಯಾದೊಡೆ ಸುಟ್ಟ ಸರವಿಯಂತಿರಬೇಕು. ಅನುಭಾವಿ ಯಾದೊಡೆ ದಗ್ಧಪಟದಂತಿರಬೇಕು. ಅನುಭಾವಿಯಾದೊಡೆ ದರ್ಪಣದೊಳಗಣ ಪ್ರತಿಬಿಂಬ ದಂತಿರಬೇಕು''. ಕೊನೆಯದಾಗಿ ಸಮರಸೈಕ್ಯದ ಸ್ವರೂಪು ಎಂತಹದು ? ''ಕಾಲಿಲ್ಲದ ನಡೆ, ಒಡಲಿಲ್ಲದ ರೂಪು, ಕಂಗಳಿಲ್ಲದ ನೋಟ, ಮನವಿಲ್ಲದ ಬೇಟ, ಭಾವವಿಲ್ಲದ ತೃಪ್ತಿ ಜೀವವಿಲ್ಲದ ಸುಳುಹು''. ಅದು ''ನದಿ ನದಿಯ ಕೂಡಿದಂತೆ, ಬಯಲು ಬಯಲ ಬೆರೆತಂತೆ, ಮಾತು ಮಾತ ಕಲೆತಂತೆ, ಜ್ಯೋತಿ ಜ್ಯೋತಿ ಒಂದಾದಂತೆ ಘನಗಂಭೀರ ಮಹಾಬೆಳಗಿನೊಳಗೆ ನಾನು ನೀನೆಂಬುದೇನುವನೂ ಅರಿಯದೆ ಮೌನದಿಂದಿರುವುದು''.

ಷಣ್ಮುಖಸ್ವಾಮಿಗಳು ಭಕ್ತಿ–ಜ್ಞಾನ–ವೈರಾಗ್ಯ, ಜಪ–ತಪ–ಅನುಷ್ಠಾನಗಳಿಂದ ಯೋಗದ ಸಿದ್ಧಿಯನ್ನು ಪಡೆದ ಶಿವಯೋಗಿಗಳು. ಹೀಗಾಗಿ ಅವರ ವಚನಗಳಲ್ಲಿ ಯೋಗ–ಶಿವಯೋಗಗಳ ವಿಚಾರ ತುಂಬ ವ್ಯಾಪಕವಾಗಿ ಬರುತ್ತದೆ. ಪ್ರಾಣಲಿಂಗಿಸ್ಥಲದ ಬಹುಸಂಖ್ಯೆಯ ವಚನಗಳು ಇವುಗಳ ವಿವರಣೆಗಾಗಿಯೇ ಮೀಸಲಾಗಿವೆ. ಮಂತ್ರ, ಲಯ, ಹಠ, ರಾಜಯೋಗ, ಅಷ್ಟಾಂಗಯೋಗ, ತಾರಕಯೋಗ, ಶಾಂಭವೀಚಕ್ರ ಮೊದಲಾದವುಗಳ ಲಕ್ಷಣಗಳನ್ನು ಕ್ರಮವತ್ತಾಗಿ ಹೇಳುತ್ತ ಸಾಗಿ, ಇವೆಲ್ಲವುಗಳನ್ನು ಮೀರಿದ ಶಿವಯೋಗದಿಂದಲೇ ವ್ಯಕ್ತಿಯ ಪರಿಪೂರ್ಣ ಸಿದ್ಧಿ ಸಾಧ್ಯ ಎಂಬುದನ್ನು ಇಲ್ಲಿ ಎತ್ತಿ ತೋರಲಾಗಿದೆ. ಇಲ್ಲಿಯ ನಿರೂಪಣೆ ಹೆಚ್ಚು ಶಾಸ್ತ್ರೀಯವೂ, ತಾತ್ವಿಕವೂ, ವಿವರ ಣಾತ್ಮಕವೂ ಆಗಿದೆ. ಇದು ನಿಯಮಯೋಗದ ಲಕ್ಷಣ : ''ಸಕಲ ವಿಷಯಂಗಳಲ್ಲಿ ಉದಾಸೀನತ್ವವು, ಶಿವಾಗಮೋಕ್ತಂಗಳಲ್ಲಿ ವಿಶ್ವಾಸವು, ಸತ್ಕೃತ್ಯದಲ್ಲಿ ಎರಕತೆಯು. ದೇಹಶೋಷಣರೂಪವಾದ ತಪವು, ನಾನಾರು ಮೋಕ್ಷವೆಂತಪ್ಪುದೆಂಬಾಲೋಚನೆಯು, ಭಸ್ಮನಿಷ್ಠಾದಿ ವ್ರತವು, ಶಿವಲಿಂಗಾರ್ಚನೆಯು, ಪ್ರಣವಪಂಚಾಕ್ಷರಾದಿ ಮಂತ್ರ ಜಪವು, ಲೋಕವಿರುದ್ಧ ವೇದ ವಿರುದ್ಧವಾದ ಮಾರ್ಗಂಗಳಲ್ಲಿ ಮನವೆರಗದಿಹುದು, ಯೋಗ ಶಾಸ್ತ್ರಂಗಳ ಕೇಳುವುದು, ಸತ್ಪಾತ್ರಯುಕ್ತವಾಗಿಹುದು ನಿಯಮಯೋಗ ನೋಡಾ ಅಖಂಡೇಶ್ವರಾ.'' ಇದು ಶಿವಯೋಗಿಯ ಸ್ವರೂಪ : ''ಕಾಲಿಲ್ಲದೆ ನಡೆಯಬಲ್ಲಡೆ ಶಿವಯೋಗಿಯೆಂಬೆನಯ್ಯ, ಕೈಯಿಲ್ಲದೆ ಮುಟ್ಟಬಲ್ಲಡೆ ಶಿವಯೋಗಿಯೆಂಬೆನಯ್ಯ, ಕಣ್ಣಿಲ್ಲದೆ ನೋಡಬಲ್ಲಡೆ ಶಿವಯೋಗಿಯೆಂಬೆನಯ್ಯ, ಕಿವಿಯಿಲ್ಲದೆ ಕೇಳಬಲ್ಲಡೆ ಶಿವಯೋಗಿಯೆಂಬೆನಯ್ಯ, ನಾಲಿಗೆಯಿಲ್ಲದೆ ಸವಿಯಬಲ್ಲಡೆ ಶಿವಯೋಗಿಯೆಂಬೆನಯ್ಯ, ನಾಸಿಕವಿಲ್ಲದೆ ವಾಸಿಸಬಲ್ಲಡೆ ಶಿವಯೋಗಿಯೆಂಬೆನಯ್ಯ. ಮನವಿಲ್ಲದೆ ನೆನೆಯಬಲ್ಲಡೆ ಶಿವಯೋಗಿಯೆಂಬೆನಯ್ಯ, ತಾನಿಲ್ಲದೆ ಕೂಡಬಲ್ಲಡೆ ಶಿವಯೋಗಿಯೆಂಬೆನಯ್ಯ. ಇಂತೀ

ಭೇದವನರಿಯದೇ ವೇಷವ ಧರಿಸಿ ತಿರುಗುವರೆಲ್ಲರು ಭವರೋಗಿಗಳೆಂಬೆನಯ್ಯ ಅಖಂಡೇಶ್ವರಾ''.

ಷಣ್ಮುಖಸ್ವಾಮಿಗಳು ತುಂಬ ಸೊಗಸಾದ ಸತಿಪತಿಭಾವದ ವಚನಗಳನ್ನು ರಚಿಸಿದ್ದಾರೆ. ಶರಣಸತಿ ಲಿಂಗಪತಿ ಭಾವ ಶರಣಸ್ಥಲದಲ್ಲಿ ನಿಂತ ಸಾಧಕನಲ್ಲಿ ತೋರುವ ಒಂದು ವಿಶಿಷ್ಟ ಲಿಂಗವಿಕಳಾವಸ್ಥೆ. ಆಗ ಶರಣ ತಾನು ಸತಿಯಾಗಿ, ಲಿಂಗವನ್ನೇ ಪತಿಯೆಂದು ಭಾವಿಸಿ, ಲೌಕಿಕ ಸತಿಯರು ಅಗಲಿದ ಪತಿಯನ್ನು ಸೇರಲು ಹಲುಬಿ ಹಂಬಲಿಸುವ ರೀತಿಯಲ್ಲಿ, ಅವನು ವಿರಹ–ಹುಸಿಕೋಪ ತಾಪ; ಮುನಿಸು–ಮೂದಲಿಕೆಗಳನ್ನು ಪ್ರಕಟಿಸುತ್ತಾನೆ. ಪತಿ ಬಂದು ಬೆರೆತಾಗ ಆಗುವ ಆನಂದ, ಪುಳಕ, ಸುಖಾತಿಶಯಗಳನ್ನೆಲ್ಲ ಲೌಕಿಕಸತಿ ಅನುಭವಿಸಿ ಅನುರಕ್ತಿಪಡುವಂತೆ, ಶರಣಸತಿಯೂ ಆನಂದಪಡುತ್ತಾನೆ. ಆದರೆ ಇಷ್ಟು ಮಾತ್ರ ವ್ಯತ್ಯಾಸ : ಲೌಕಿಕಪತಿ ಸಾಕಾರನಾದರೆ, ಲಿಂಗಪತಿ ನಿರಾಕಾರ. ಒಂದರ ಸುಖವನ್ನು ವರ್ಣಿಸಬಹುದು, ನೆನೆಯಬಹುದು. ಇನ್ನೊಂದರ ಸುಖವನ್ನು ವರ್ಣಿಸಲೂಬಾರದು, ನೆನೆಯಲೂಬಾರದು. ಅದು ಅವ್ಯಕ್ತ, ಅನುಭವಗಮ್ಯ. ಇಂಥ ಲಿಂಗಪತಿಯನ್ನು ಬೆರೆತು ಸಮರಸಾನಂದಸುಖವನ್ನು ಅನುಭವಿಸಿದ ಶರಣರು ಅದನ್ನು ತಮ್ಮ ವಚನಗಳಲ್ಲಿ ಭಾವಗರ್ಭಿತ ಸುಕೋಮಲ ಮಧುರೋಕ್ತಿಗಳಿಂದ ಅಭಿವ್ಯಕ್ತಪಡಿಸಿದ್ದಾರೆ. ಮಹಾದೇವಿಯಕ್ಕ, ಉರಿಲಿಂಗದೇವ, ಗಜೇಶ ಮಸಣಯ್ಯ, ಬಸವಣ್ಣನವರ ಈ ಭಾವದ ವಚನಗಳು ತುಂಬ ಪ್ರಸಿದ್ಧವಾಗಿವೆ. ಅವುಗಳಿಂದ ಪ್ರಭಾವಿತರಾದ ಷಣ್ಮುಖಸ್ವಾಮಿಗಳು ಅಷ್ಟೇ ಸತ್ವಪೂರ್ಣವಾದ ವಚನಗಳನ್ನು ರಚಿಸಿ, ಅವರ ಸಾಲಿನಲ್ಲಿ ತಾವೂ ಒಬ್ಬರಾಗಿ ನಿಲ್ಲುವ ಯೋಗ್ಯತೆ ಪಡೆದಿದ್ದಾರೆ. ಇಲ್ಲಿ ಕೆಲವು ಉದಾಹರಣೆಗಳನ್ನು ನೋಡಬಹುದು.

ವಿರಹದ ವ್ಯಥೆ :

''ಚಿತ್ತದೊಲ್ಲಭನ ಕಾಣದೆ ಚಿಂತೆಗೊಂಡಿತು ನೋಡಾ ಎನ್ನ ಮನವು.
ಹೊತ್ತಿನ ಗೊತ್ತಿಗೆ ಬಾರದಿರ್ದಡೆ ಹೊತ್ತು ಹೋಗದು ಕೇಳಿರೇ.
ಕರ್ತೃ ಅಖಂಡೇಶ್ವರನು ಬಾರದಿರ್ದಡೆ ಕತ್ತಲೆಯ ಕಳೆಯಲಾರೆನವ್ವಾ''. ೫೭೬

''ಬುದ್ಧಿಗೂಡದು ನಿದ್ರೆ ಬಾರದು ಎನಗೆ, ಸುದ್ದಿಯ ಹೇಳಿರೆ ಆತಗೆ.
ಸದ್ದಿಲ್ಲದೆ ಎದ್ದು ಹೋದನು ನೋಡಿರೆ, ಮುದ್ದಿಸಿ ಮುನಿಸು ತಿಳುಪಿ
ಇದ್ದಲ್ಲಿಗೆ ಕರೆದು ತನ್ನಿರೆ ಅಖಂಡೇಶ್ವರನೆಂಬ ಶಿವನ''. ೫೭೭

''ನಾನೇನೆಂದೆನೇ ತಾನೇತಕೆ ಮುನಿದನೆ ? ಮಾನಿನಿ ಹೋಗಿ ಕರೆದುತಾರೆ,
ಅಖಂಡೇಶ್ವರನೆಂಬ ಇನಿಯನ''. ೫೮೦

''ಜೀವದೊಡೆಯನನಗಲಿ ಜೀವಿಸಲಾರೆನವ್ವಾ,
ನಿಮಿಷ ನಿಮಿಷಾರ್ಧವಾದಡು ಬಾಳಲಾರೆನವ್ವಾ.
ಹೇಳಲಿನ್ನೇನು ಸಾವು ಬಂದಿತ್ತವ್ವಾ, ಕಂಡರೆ ಹೇಳಿರೆ ? ಹೇಳಿರವ್ವಾ.
ನಮ್ಮ ತಂಗಿಯ ಭಾವನ ಕರೆದು ತೋರಿರವ್ವಾ,
ನಮ್ಮ ಅಖಂಡೇಶ್ವರನೆಂಬ ನಲ್ಲನ''. ೫೮೩

ಮಿಲನದ ಕಥೆ :

''ನಲ್ಲನ ಕೂಡಿದ ಸುಖವ ಮೆಲ್ಲನೆ ಉಸುರುವೆ ಕೇಳಿರವ್ವಾ,
ಏಳುನೆಲೆ ಮಣಿಮಾಡದ ಮಾಣಿಕ್ಯದುಪ್ಪರಿಗೆಯ ಮೇಲೆ ಚಪ್ಪರಮಂಚವ ಹಾಸಿ,
ಒಪ್ಪದೂಟವ ನೀಡಿ, ಕರ್ಪುರ ವೀಳ್ಯವ ಕೊಟ್ಟು
ಲಜ್ಜೆಗೆಟ್ಟು, ನಾಚಿಕೆಯ ತೊರೆದು,
ತನು ಜರ್ಜರಿತವಾಗಿ, ತೆಕ್ಕೆ ಚುಂಬನಾದಿಗಳಿಂದೆ
ಅಮರ್ದಪ್ಪಿ ಅಸ್ತಿಗಳು ನುಗ್ಗುನುರಿಯಾಗಿ
ಮನದ ಪರಿಣಾಮ ಹೊರಹೊಮ್ಮಿ
ಪರಮಾನಂದದ ಮಹಾ ಪರಿಣಾಮದ ಸುಗ್ಗಿಯೊಳಗೆ
ಪರವಶಗೊಂಡಿರ್ದೆನು ಅಖಂಡೇಶ್ವರನೆಂಬ ನಲ್ಲನ ಕೂಡಿ'' ೫೯೫

''ಕೇಳಿ ಕೇಳಿರವ್ವಾ, ನಮ್ಮ ಮನೆಯಾತನ ಒಂದು ಬೆಡಗು ಬಿನ್ನಾಣವ.
ಎನ್ನ ಕಟ್ಟಿದ ಮುಡಿಯ ಸಡಿಲಿಸಿದ, ಎನ್ನ ಉಟ್ಟುದ ಸೆಳೆದುಕೊಂಡ,
ಎನ್ನ ತೊಟ್ಟುದ ಬಿಡಿಸಿದ, ಎನ್ನ ಲಜ್ಜೆ ನಾಚಿಕೆಯ ತೊರೆಸಿದ.
ಎನ್ನ ಮೌನದಲ್ಲಿರಿಸಿ, ಎನ್ನ ಕರವಿಡಿದು ಕರೆದುಕೊಂಡು,
ತಾನುಂಬ ಪರಿಯಾಣದಲ್ಲಿ ಎನ್ನ ಕೂಡಿಕೊಂಡು ಉಂಡನು,
ಕೇಳಿರವ್ವಾ ನಮ್ಮ ಅಖಂಡೇಶ್ವರನು''. ೬೬೭

ಶೀಲ ಚಾರಿತ್ರ್ಯ ವ್ರತ ನೇಮಗಳು ವ್ಯಕ್ತಿತ್ವದ ಉನ್ನತ ಮೌಲ್ಯಗಳು. ನೆಮ್ಮದಿಯ ಬದುಕಿಗೆ ತಾರಕವೆನಿಸಿದ ಇವುಗಳನ್ನು ಕುರಿತು ಎಲ್ಲ ಶರಣರು ಬೋಧಿಸುತ್ತ ಬಂದಿದ್ದಾರೆ. ಷಣ್ಮುಖಸ್ವಾಮಿಗಳ ವಚನಗಳಲ್ಲಿಯೂ ಇವುಗಳ ನಿರೂಪಣೆ ತುಂಬ ಪರಿಣಾಮಕಾರಿಯಾಗಿ ಮೂಡಿನಿಂತಿದೆ.

'ಇದಿರಿನಲ್ಲಿ ಜಂಗಮವು ಬರುವುದ ಕಂಡು ಸದರನಿಳಿದು ನಡೆದು ಹೋಗಿ ಚರಣಕ್ಕೆರಗುವುದೇ ಉತ್ತಮ ಭಕ್ತಿ' 'ಸಟೆಯನಾಡದೆ ಸತ್ಯವಚನವ ನುಡಿವಾತ, ಕುಟಿಲ ಕುಹಕವ ಮರೆತು ಸದಾಚಾರದಲ್ಲಿ ನಡೆವಾತನೆ ಸದ್ಭಕ್ತ' 'ಸತ್ಕಾಯಕದಿಂದ ತಂದ ದ್ರವ್ಯಂಗಳ ಅಂದಂದಿಂಗೆ ಗುರುಲಿಂಗಜಂಗಮಕ್ಕೆ ವಂಚನೆಯಿಲ್ಲದೆ ಸವೆಸಿ ಹಿಂದುಮುಂದನೆಣಿಸದೆ ಇಂದಿಂಗೆ ನೂರು ತುಂಬಿತೆಂಬವನೆ ಆನಂದಭಕ್ತ' 'ಹುಸಿ ಕಳವು ಪರದಾರ ಹಿಂಸೆಯ ಬಿಟ್ಟು ಲೋಕದ ಮಚ್ಚು ಸುಟ್ಟು, ಸಚ್ಚಿದಾನಂದ ಲಿಂಗದಲ್ಲಿ ಮನ ಬೆಚ್ಚಂತಿರ್ಪಡೆ ಅಚ್ಚ ಮಹೇಶ್ವರ' 'ಸುರಚಾಪದಂತೆ ತೋರಿ ಅಡಗುವ ಮನವ ನಚ್ಚಬೇಡ' 'ಸಿರಿ ಬಂದೊದಗಿತ್ತೆಂದು ಹಿರಿದಾಗಿ ಹಿಗ್ಗಬೇಡ, ಸಿರಿ ಎಂಬುದು ಕನಸಿನ ಪರಿ' 'ಕಾಮವುಳ್ಳವಂಗೆ ಲಿಂಗದ ಪ್ರೇಮವಿನ್ನೆಲ್ಲಿಯದು' 'ತಾ ಒಳ್ಳೆಯವನಾದಡೆ ಸರ್ವರೂ ತನಗೆ ಒಳ್ಳೆಯವರಾಗಿರ್ಪರು' 'ನುಡಿಯಬೇಕು ಸತ್ಯಸದಾಚಾರವುಳ್ಳವರೊಡನೆ ಅನುಭಾವವ' 'ಮಾಡಲಾಗದು ಭವಿ ಸಂಗವ, ನೆರೆ ಹೊಲ್ಲ ದುರಾಚಾರಿಗಳ, ಮಾಡಬಾರದು ಮನಹೀನ ಮತಿಭ್ರಷ್ಟರ ಸಂಗವ' 'ಸಂಗ ಲೇಸು ಸಾಧುಮಹಾಪುರುಷರ, ಸಂಗ ಲೇಸು ಸದ್ಭಕ್ತ ಶರಣಜನಂಗಳ' 'ದಯವಿರಬೇಕು ಸಕಲ ಪ್ರಾಣಿ

ಗಳಲ್ಲಿ, ಭಯವಿರಬೇಕು ಗುರುಲಿಂಗ ಜಂಗಮದಲ್ಲಿ, ನಯವಿರಬೇಕು ಸಕಲ ಗುಣಂಗಳಲ್ಲಿ, ಸ್ನೇಹವಿರಬೇಕು ನುಡಿಗಡಣದಲ್ಲಿ' 'ಅಂಗಕ್ಕೆ ಆಚಾರವೇ ಚೆಲುವು, ಮನಕ್ಕೆ ಮಹಾನುಭಾವವೆ ಚೆಲುವು, ಆತ್ಮಂಗೆ ಅರುಹೆ ಚೆಲುವು, ಪರಧನ ಪರಸ್ತ್ರೀಯರ ಮುಟ್ಟೆನೆಂಬುದೆ ಶೀಲ, ಒಡಲುಪಾಧಿಕೆಯವಿಡಿದು ಅನ್ಯರ ಅನ್ನ ವಸ್ತ್ರಂಗಳ ಬಾಯಿದೆರೆದು ಬೇಡೆನೆಂಬುದೆ ವ್ರತ, ಸಕಲ ಪದಾರ್ಥಂಗಳ ಲಿಂಗಕ್ಕೆ ಕೊಡದೆ ಅಂಗದಿಚ್ಛೆಗೆ ಕೊಳ್ಳೆನೆಂಬುದೆ ನೇಮ'–ಹೀಗೆ ಆತ್ಮೀಯವಾದ ನುಡಿಗಳಲ್ಲಿ ನಯವಾಗಿ ನೀತಿಬೋಧೆ ಮಾಡಿ, ವ್ಯಕ್ತಿ ಚಾರಿತ್ರ್ಯ ಸಂಪನ್ನನಾಗಿ ಸಾರ್ಥಕ ಜೀವನ ಸಾಗಿಸಲು ಪ್ರೇರಣೆ ನೀಡಿದ್ದಾರೆ.

ಸಮಾಜದಲ್ಲಿ ಎಲ್ಲರಿಗೂ ನಯವಾದ ನೀತಿಬೋಧೆ ನಾಟುವುದಿಲ್ಲ. ಕೆಲವರ ನಡೆ ನುಡಿ–ನಂಬಿಕೆಗಳನ್ನು ತಿದ್ದಲು ಕಟುನುಡಿಗಳ ಚಾಟಿಯೇಟನ್ನು ಕೊಡಬೇಕಾಗುತ್ತದೆ. ಷಣ್ಮುಖಸ್ವಾಮಿಗಳು ತತ್ಕಾಲೀನ ಸಮಾಜದಲ್ಲಿ ಕಂಡುಬಂದ ವೈಪರೀತ್ಯಗಳನ್ನು ಕಠೋರವಾಗಿ ವಿಮರ್ಶಿಸಿ, ಅವರನ್ನು ಋಜುಮಾರ್ಗಕ್ಕೆ ತರಲು ಪ್ರಯತ್ನಿಸಿದ್ದಾರೆ.

ಅನ್ಯರಲ್ಲಿ ಅವಗುಣ ಅರಸುವವರನ್ನು 'ತನ್ನ ಎಡೆಯಲ್ಲಿ ಕಪ್ಪೆ ಸತ್ತು ಬಿದ್ದುದನರಿಯದೆ ಪರರ ಎಡೆಯಲ್ಲಿ ನೊಣವ ಅರಸುವ ಮರುಳುಗಳೆಂ'ದು ಕರೆದರೆ, ವೇಷಧಾರಿ ಮಹಾಂತರನ್ನು 'ಹೊರಗೆ ಆಡಂಬರದ ವೇಷವ ತಾಳಿ ಜಡೆಯ ಬಿಟ್ಟರೇನು ಆಲದ ಮರಕ್ಕೆ ಬೇರಿಳಿದಂತೆ' ಎಂದು ನಿಂದಿಸುತ್ತಾರೆ. ಏಕಭಾಜನಿಗಳೆಂಬುವರನ್ನು 'ಮನ ಬಂದ ಪರಿಯಲ್ಲಿ ಹಾಯ್ಕಿ ಹಾಯ್ಕಿ ಒಟ್ಟಿಸಿಕೊಂಡು ಬಾಯಿಗೆ ಬಂದಂತೆ ತಿಂಬುವ ಜೀವಗಳ್ಳರು' ಎಂದು ನುಡಿಯುತ್ತಾರೆ. ವೇಷ–ಭಾಷೆ–ಗುಣಗಳಲ್ಲಿ ಮೋಸಗಾರಿಕೆಯನ್ನು ತುಂಬಿಕೊಂಡು, ನಾವು ಸಹಭೋಜನ ಮಾಡುವವರೆನ್ನುವರಿಗೆ 'ಭಾಷೆಗಳ್ಳರಿಗೇಕೋ ಸಹಭೋಜನ, ದ್ವೇಷಗುಣಿಗಳಿಗೇಕೋ ಸಹಭೋಜನ, ವೇಷಧಾರಿಗೇಕೋ ಸಹಭೋಜನ, ಹುಸಿ ಹುಂಡಗೇಕೋ ಸಹಭೋಜನ' ಎಂದು ಕೇಳುತ್ತಾರೆ. ಅಲ್ಲದೆ 'ಮೋಸ ಮರವೆಯಿಂದ ಈಶನೊಡನೆ ಸಹಭೋಜನ ಮಾಡಿದಡೆ ಭವದಲ್ಲಿ ಘಾಸಿಗೊಳ್ಳುವಿರಿ' ಎಂದು ಎಚ್ಚರಿಸುತ್ತಾರೆ. ಕೇವಲ ಮಾತಿನಲ್ಲಿ ತಾವು ಶಿವಾನುಭಾವಿಗಳೆಂದು ಗಳಹುತ್ತಿರುವವರನ್ನು 'ಮಾತು ಕಲಿತ ಭೂತನಂತೆ ಆ ಮಾತು ಈ ಮಾತು ಹೋ ಮಾತುಗಳ ಕಂಡಕಂಡಲ್ಲಿ ನಿಂದನಿಂದಲ್ಲಿ ಮುಂದುವರಿದು ಹರಟೆಗುಟ್ಟುವ ಒಣಹರಟೆಗಾರರು' ಎಂದು, ತಾವು ವಿರಕ್ತರೆಂದು ಹೇಳುತ್ತ ಹಲವು ವೇಷ ಧರಿಸಿ ಹಲವು ಭಾಷೆ ಕಲಿತು, ಹಲವು ದೇಶ ಹರಿದಾಡುವವರನ್ನು 'ಕಾಲಾರಿಗಳೆಂ'ದು 'ಹೊರವೇಷದ ಡಂಬಕ' ಜೊಳ್ಳು ಮಾನವ'ರೆಂದು, ಅಂತರಂಗದಲ್ಲಿಯ ಅರಿಷಡ್ವರ್ಗ, ಅಷ್ಟಮದ, ಕರಣಚತುಷ್ಟಯಗಳನ್ನು ನಿಗ್ರಹಿಸದೆ, ಬಹಿರಂಗದಲ್ಲಿ ಹಲವು ವ್ರತಗಳನ್ನು ಪಾಲಿಸುತ್ತ ತಾವು ಶೀಲವಂತರೆಂದು ಹೇಳಿಕೊಳ್ಳುವವರನ್ನು 'ಹುತ್ತದೊಳಗಣ ಹಾವ ಕೊಲುವೆನೆಂದು ಮೇಲೆ ಹುತ್ತವ ಬಡಿವ ಅರೆಮರುಳರು' ಎಂದು ಟೀಕಿಸುತ್ತಾರೆ. ಹಾಗೆಯೇ ಕೊಡಕ್ಕೆ ಪಾವುಡಹಾಕಿ ಚಿಲುಮೆಯ ನೀರು ತರುವ ಶೀತಳ ಚಿಲುಮೆಯ ಶೀಲವಂತರನ್ನು, ಮೊಟ್ಟೆ ಮೊಟ್ಟೆ ಪತ್ರೆ ಪುಷ್ಪವ ತಂದು ಒಟ್ಟಿ ಒಟ್ಟಿ ಲಿಂಗವ

ಪೂಜಿಸುವ, ತನುಮನದ ಕೆಟ್ಟತನ ಹಿಂಗದವರ ಆಡಂಬರದ ಭಕ್ತಿಯನ್ನು, ಅಷ್ಟಮೂರ್ತಿಗಳ ದೇವರೆಂಬ ಭ್ರಷ್ಟಭವಿಗಳನ್ನು, ಶೈವಸಿದ್ಧಾಂತಿಗಳೆಂಬ ಅಬದ್ಧರನ್ನು, ಸ್ಥಾವರ ಜಂಗಮ ಒಂದೆಂಬ ಮಂದಮತಿಗಳನ್ನು, ಪರದೈವಪೂಜೆ, ಪರಸಮಯ ಬಳಕೆಯ ಭವಿಗಳನ್ನು, ಮಲತ್ರಯದಲ್ಲಿ ಸಿಲುಕಿದ ಗುರು–ಜಂಗಮರನ್ನು, ವೇದಾಗಮ ಶಾಸ್ತ್ರದ ಶುದ್ಧಪಂಡಿತರನ್ನು, ನಡೆನುಡಿ ಶುದ್ಧವಿಲ್ಲದ ಗುರುಶಿಷ್ಯರನ್ನು ಹೀಗಳೆಯುತ್ತಾರೆ.

ತತ್ವ, ನೀತಿ, ಸಮಾಜ ವಿಮರ್ಶೆಗಳಂತೆ ಷಣ್ಮುಖಸ್ವಾಮಿಗಳ ವಚನಗಳು ಸಾಹಿತ್ಯ ಸೊಗಸಿನಿಂದಲೂ ಗಮನ ಸೆಳೆಯುತ್ತವೆ. ಅನೇಕ ವಚನಗಳಲ್ಲಿ ಕವಿತ್ವ ಕಣ್ದೆರೆದು ನಿಂತಿದೆ. ಬಳಸುವ ಭಾವ–ಭಾಷೆ, ಅಲಂಕಾರ–ಪ್ರತಿಮೆ, ಛಂದ–ಬಂಧ, ಶೈಲಿ–ಶಿಲ್ಪಗಳೆಲ್ಲ ಪೂರ್ವ ಪ್ರಭಾವಿತವಾಗಿದ್ದರೂ ಕೆಲವು ನೂತನ ಕಲ್ಪನೆಗಳ ಕವಚ ಧರಿಸಿ ಸ್ವಂತಿಕೆಯನ್ನು ಮೆರೆಯುತ್ತವೆ.

ಇವರು ಬಳಸುವ ಅಲಂಕಾರಗಳಲ್ಲಿ ಉಪಮೆ, ರೂಪಕ, ದೃಷ್ಟಾಂತಗಳಿಗೆ ಹೆಚ್ಚಿನ ಪ್ರಾಶಸ್ತ್ಯ. ಪಿಂಡದಲ್ಲಿ ಜ್ಞಾನಮೂಡಿದ ರೀತಿಯನ್ನು ಹೇಳುವಲ್ಲಿ 'ಬೀಜದ ಮರೆಯಲ್ಲಿ ಅಡಗಿರ್ದ ಅಂಕುರವು ಬಹಿರ್ಗತವಾದಂತೆ, ಮುಗಿಲಮರೆಯಲಡಗಿರ್ದ ಕ್ಷಣಿಕವು ಸ್ಫುರಿಸಿದಂತೆ' ಎಂದೂ, ಮಾಯೆಯ ಬಲೆಯಲ್ಲಿ ಸಿಲುಕಿದ ಜೀವಿಯ ಸ್ಥಿತಿಯನ್ನು ತಿಳಿಸುವಲ್ಲಿ 'ಹುಲಿಯ ಬಾಯಲ್ಲಿ ಸಿಕ್ಕಿದ ಹುಲ್ಲೆಯಂತೆ, ಸರ್ಪನ ಬಾಯಲ್ಲಿ ಸಿಕ್ಕಿದ ಕಪ್ಪೆಯಂತೆ' ಎಂದು, ಗುರುಕರಣೆಯಿಂದ ಲಿಂಗಧಾರಣವಾದಾಗ ಭಕ್ತನಲ್ಲಿ ಉಂಟಾದ ಭಾವನೆಯನ್ನು ಪ್ರಕಟಿಸುವಲ್ಲಿ 'ಅಂಧಕಂಗೆ ಕಣ್ಣುಬಂದಂತೆ, ಹೆಳವಂಗೆ ಕಾಲುಬಂದಂತೆ, ಬಂಜೆಗೆ ಫಲವಾದಂತೆ, ನಿರ್ಧನಿಕಂಗೆ ನಿಧಾನತೋರಿದಂತೆ, ಮರಣ ವುಳ್ಳವಂಗೆ ಮರುಜೀವಣಿ ದೊರೆಕೊಂಡಂತೆ' ಎಂದು ಹಳೆಯ ಉಪಮೆಗಳನ್ನೇ ಬಳಸಿದರೆ, ಆಡಂಬರದ ಕಪಟ ವೇಷಧಾರಿಗಳು ಬಿಟ್ಟ ಜಡೆ, ಹಚ್ಚಿದ ಭಸ್ಮ, ಧರಿಸಿದ ರುದ್ರಾಕ್ಷಿ ಗಳನ್ನು ವರ್ಣಿಸುವಲ್ಲಿ 'ಆಲದ ಮರಕ್ಕೆ ಬೇರಿಳಿದಂತೆ, ಚಪ್ಪರದ ಮೇಲೆ ಕಗ್ಗುಂಬಳಕಾಯಿ ಬಿದ್ದಂತೆ, ಹೇರಿಂಡಿಲಗಿಡ ಗೊನೆ ಬಿಟ್ಟಂತೆ' ಎಂಬಂಥ ಹೊಸ ಉಪಮೆಗಳನ್ನು ಬಳಸಿ ತಮ್ಮ ಸ್ವಂತಿಕೆಯನ್ನು ತೋರಿದ್ದಾರೆ.

ಮನಸ್ಸನ್ನು ಮರ್ಕಟಕ್ಕೆ ಹೋಲಿಸಿದ ರೀತಿ ಹಳೆಯದಾದರೂ ಅದು ರೂಪಕವಾಗಿ ಬರುವಲ್ಲಿ ಹೊಸರೂಪತಾಳಿ ನಿಂತಿದೆ :

> ''ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ,
> ಇಂದ್ರಿಯಗಳೆಂಬ ಶಾಖೆಗೆ ಹಾರಿ, ವಿಷಯಗಳೆಂಬ ಹಣ್ಣುಫಲಂಗಳ ಗ್ರಹಿಸಿ,
> ಭವದತ್ತಮುಖವಾಗಿ ಹೋಗುತ್ತಿದೆ ನೋಡಾ.
> ಈ ಮನವೆಂಬ ಮರ್ಕಟನ ನಿಮ್ಮ ನೆನಹೆಂಬ ಪಾಶದಲ್ಲಿ ಕಟ್ಟಿ,
> ಎನ್ನನುಳುಹಿಕೊಳ್ಳಯ್ಯ ಅಖಂಡೇಶ್ವರ''. ೨೬

ಓಂಕಾರವೃಕ್ಷದ ಇನ್ನೊಂದು ರೂಪಕ ಹೀಗಿದೆ :

> ''ಓಂಕಾರವೆಂಬ ಮರಕ್ಕೆ ಷಟ್‌ಕೃತಿಯೆಂಬ ಶಾಖೆ ಪಸರಿಸಿ,
> ಷಡಕ್ಷರಗಳೆಂಬ ತಳಿರು ಕೊನರಿ, ಷಟ್‌ಸ್ಥಲಂಗಳೆಂಬ ಕುಸುಮಂಗಳಾಗಿ,

ಷಡುಲಿಂಗಗಳೆಂಬ ಮೋಕ್ಷದ ಮಧುರ ಫಲಂಗಳು ತಳೆದಿರ್ಪುದು
ನೋಡಾ''. ೧೦೪

ಅಡುಗೆಯ ವಿಧಾನವನ್ನು ಇಂದ್ರಿಯಗಳಿಗೆ ರೂಪಕವಾಗಿ ಬಳಸಿದ ಇನ್ನೊಂದು ಚಿತ್ರ ಅರ್ಥಪೂರ್ಣವೆನಿಸಿದೆ :

''ಮನವೆಂಬ ಒರಳಿಗೆ ಸಕಲ ಕರಣಂಗಳೆಂಬ ತಂಡುಲವ ಹಾಕಿ,
ಸುಜ್ಞಾನವೆಂಬ ಒನಕೆಯ ಪಿಡಿದು,
ಪರಮಪರಿಣಾಮದೊಳಗೋಲಾಡುತ್ತ ಕುಟ್ಟಿ,
ಅಜ್ಞಾನವೆಂಬ ತೌಡ ತೂರಿ, ಚಿತ್ಕರಣಂಗಳೆಂಬ ಅಕ್ಕಿಯ ತೆಗೆದುಕೊಂಡು,
ಸದ್ಭಾವವೆಂಬ ಭಾಂಡದಲ್ಲಿ ತುಂಬಿ, ಪರಮಾನಂದ ಜಲವೆಂಬ ಎಸರನಿಟ್ಟು,
ತ್ರಿಪುಟಿಯೆಂಬ ಒಲೆಯ ಹೂಡಿ, ಚಿದಗ್ನಿಯೆಂಬ ಬೆಂಕಿಯ ಪುಟವನಿಕ್ಕಿ,
ಅರಿಷಡ್ವರ್ಗಗಳೆಂಬ ಸೌದೆಯ ಹೊತ್ತಿಸಿ, ಮಹಾಜ್ಞಾನವೆಂಬ ಪಾಕವಮಾಡಿ,
ಪರಿಪೂರ್ಣವೆಂಬ ಪರಿಯಾಣದಲ್ಲಿ ಗಡಣಿಸಿಕೊಂಡು,
ಅಖಂಡಪರಿಪೂರ್ಣ ಮಹಾಘನಲಿಂಗಕ್ಕೆ ಸಲಿಸಬಲ್ಲಾತನೆ ಶರಣನು''. ೬೬೫

ಹೀಗೆಯೇ 'ಸಿಂಹದ ಮೊಲೆಯ ಹಾಲು ಸಿಂಹದ ಮರಿಗಲ್ಲದೆ ಸೀಳನಾಯಿಗೆ ಯೋಗ್ಯವೆ?' 'ಹಾಲಹರವಿಯ ಮೇಲೆ ಮಜ್ಜಿಗೆ ತುಂಬಿದಡೇನು ಹೆಪ್ಪಾಗಬಲ್ಲದೆ ?' 'ಕಪಿಯ ಕೈಯಲ್ಲಿ ರತ್ನವ ಕೊಟ್ಟಡೆ ಅದು ಕಡಿದುನೋಡಿ ಕಲ್ಲೆಂದು ಬೀಸಾಡುವುದಲ್ಲದೆ ಅದರ ಬೆಳಗನರಿವುದೆ?' 'ಸುಟ್ಟಮಡಕೆಯಲ್ಲಿ ನೀರುತುಂಬಿದಡೆ ನಿಲುವುದಲ್ಲದೆ, ಹಸಿಯ ಮಡಕೆಯಲ್ಲಿ ನೀರ ತುಂಬಿದಡೆ ದಿಟವಾಗಿ ನಿಲ್ಲುವುದೆ ?' ಎಂಬಂಥ ದೃಷ್ಟರೂಪಗಳು 'ಬೆಂದನುಲಿ ಮರಳಿ ಕಟ್ಟುವಡೆವುದೆ?' 'ಬಾಳೆಯ ಎಲೆಯ ಮೇಲೆ ತುಪ್ಪವ ತೊಡೆವಂತೆ' 'ಅಡ್ಡದಾಸೆಗೆ ದುಡ್ಡಿನ ಲಾಭವ ಕಳೆವರೆ ?' 'ಅಸಲು ಕಳೆದ ಬಳಿಕ ಲಾಭವುಂಟೆ ?' 'ಒಡಲಲ್ಲಿ ಕಲ್ಲ ಕಟ್ಟಿಕೊಂಡು ಮಡುವ ಬಿದ್ದಂತಾಯಿತ್ತು' 'ಕಟ್ಟಿದ ಬುತ್ತಿ ಎಷ್ಟುದಿನ ಈಡೇರಲಾಪುದು?' 'ತಾ ಕುಣಿಯಲಾರದೆ ಅಂಗಳ ಡೊಂಕೆಂಬಂತೆ' 'ಹಗಲು ಕಂಡ ಕಮರಿಯ ಇರುಳು ಬೀಳುವರೆ ?' ಎಂಬಂಥ ಗಾದೆ, ನಾಣ್ನುಡಿಗಳು ಹೇರಳವಾಗಿ ಬಳಕೆಯಾಗಿ ಅಭಿವ್ಯಕ್ತಿಗೆ ಸಾಹಿತ್ಯಶಕ್ತಿಯನ್ನು ತುಂಬಿವೆ.

ಷಣ್ಮುಖಸ್ವಾಮಿಗಳು ಪರಂಪರೆಯಿಂದ ಬಂದ ವಚನ ಪರಿಭಾಷೆ, ಭಾಷೆಗಳ ಜೊತೆಗೆ ಸಮಕಾಲೀನ ಪ್ರಾದೇಶಿಕ ಭಾಷೆಯನ್ನೂ ಬಳಸಿಕೊಂಡು ತಮ್ಮ ರಚನೆಗೆ ಜೀವಂತಿಕೆಯನ್ನು ತಂದುಕೊಟ್ಟಿದ್ದಾರೆ. ಎಸರು, ತಾಡ, ಕೋಣ, ಕಂಬಚ್ಚು, ಹರವಿ, ವಂತಿಗೆ, ಟೊಣೆ, ಸಣ್ಣಿಸು, ಮುರಿ ಮೊದಲಾದ ದೇಶೀ ಪದಗಳು, ಬತ್ತೀಸ, ಛತ್ತೀಸ, ಪುರಸೊತ್ತು, ಸದರ, ಘಟಿಂಗ, ಬಾಜಾರು, ಸೊನಾಯಿ ಮೊದಲಾದ ಅನ್ಯದೇಶೀಯ ಪದಗಳು, ತಿಪ್ಪೆಯ ಕೆದರು, ಬಣವೆ ಸುಡು, ಭೋಜಿಯಗಟ್ಟು, ಬಾಯಟೊಣೆ, ಶಿವಾರ್ಪಣ ಮಾಡು–ಮುಂತಾದ ನುಡಿಗಟ್ಟುಗಳು ಇದಕ್ಕೆ ಉದಾಹರಣೆಯಾಗಿವೆ.

ಇವರ ಅನೇಕ ವಚನಗಳು ಪ್ರಾಸ–ಅನುಪ್ರಾಸ–ಲಯಾತ್ಮಕತೆಯನ್ನು ಅಳವಡಿಸಿ ಕೊಂಡು ಛಂದೋಗುಣವನ್ನು ಪ್ರಕಟಿಸುತ್ತವೆ. ಅಲ್ಲಲ್ಲಿ ವಚನಕಾರನ ಪ್ರಯತ್ನ ಪೂರ್ವಕ

ಕಲಾಕೌಶಲ ಒಡೆದುಕಾಣುತ್ತದೆ. ಇವರ ಕೆಲವು ವಚನಗಳಲ್ಲಿ ಬೆಡಗಿನ ಪರಿಭಾಷೆಯಿದೆ. ಅದರಲ್ಲಿ ಪರಂಪರೆಯ ಪ್ರಭಾವವೇ ಅಧಿಕವಾಗಿದೆ. ಬಸವಾದಿ ಶರಣರ ಬಗೆಗೆ ಇವರಿಗೆ ಅಪಾರ ಗೌರವ. ಬಸವಣ್ಣ ಅಕ್ಕಮಹಾದೇವಿಯವರ ವಚನಗಳಿಂದ ಇವರು ತುಂಬ ಪ್ರಭಾವಿತರಾಗಿದ್ದಾರೆ. ಅವರ ವಸ್ತು–ರೂಪ–ಧಾಟಿ–ಧೋರಣೆ–ಭಾವ–ಭಾಷೆಗಳನ್ನು ಧಾರಾಳವಾಗಿ ಸ್ವೀಕರಿಸಿದ್ದಾರೆ.[೬] ಆದರೆ ಅಲ್ಲಿರುವ ಸಂಕ್ಷಿಪ್ತತೆ, ಸೂತ್ರಬದ್ಧತೆ, ಉತ್ಕಟತೆ, ಕಲಾತ್ಮಕತೆ ಇಲ್ಲಿ ಅಷ್ಟಾಗಿ ಕಾಣಿಸದೆ, ವಾಚ್ಯತೆ, ವಿವರಣಾತ್ಮಕತೆ ಹೆಚ್ಚಾಗಿ ತೋರುತ್ತದೆ. ಭಾವಪ್ರಧಾನವಾದ ವಚನಗಳು ಸಂಕ್ಷಿಪ್ತತೆಯನ್ನು ಮೈಗೂಡಿಸಿಕೊಂಡಿದ್ದರೆ, ತಾತ್ವಿಕ ವಚನಗಳು ಹೆಚ್ಚು ದೀರ್ಘವಾಗಿದ್ದು ಗದ್ಯದ ಲಕ್ಷಣವನ್ನು ಪಡೆದುಕೊಂಡಿವೆ. ಆ ಕಾಲದಲ್ಲಿ ವೀರಶೈವ ಸಿದ್ಧಾಂತದ ತರ್ಕಬದ್ಧ ನಿರೂಪಣೆಗೆ ಅನಿವಾರ್ಯವಾಗಿದ್ದಂತೆ ತೋರುವ ಸಂಸ್ಕೃತ ಪ್ರಮಾಣಗಳ ಬಳಕೆ ಇವರ ವಚನಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ಪದ್ಮ, ಸ್ಕಂದ, ಬ್ರಹ್ಮಾಂಡ, ಮತ್ಸ್ಯ, ಗಾರುಡ ಮೊದಲಾದ ಪುರಾಣಗಳು, ವಾತುಲ, ಸೂಕ್ಷ್ಮ, ಭೀಮ ಮುಂತಾದ ಆಗಮಗಳು, ಬೋಧಾಯನ ಸ್ಮೃತಿ, ಜಾಬಾಲೋಪನಿಷತ್ತು, ಸಿದ್ಧಾಂತ ಶಿಖಾಮಣಿ, ಮಹಾಭಾಗವತ, ಶಿವವಾಕ್ಯ, ವೀರಮಾಹೇಶ್ವರ ಗ್ರಂಥ, ಶಿವಧರ್ಮ, ಪರಮ ರಹಸ್ಯ, ವೀರಶೈವ ಸಂಗ್ರಹ ಮೊದಲಾದವುಗಳು ಇವರಿಗೆ ಆಕರವಾಗಿವೆ.

ಹೀಗೆ ಶಾಸ್ತ್ರೀಯ ಪರಿಭಾಷೆ, ಗ್ರಂಥಪ್ರಾಮಾಣ್ಯ, ಸರಳ ನಿರೂಪಣೆ, ಸಾಹಿತ್ಯದ ಸೊಗಸು, ಸೈದ್ಧಾಂತಿಕ ಶಿಸ್ತುಗಳನ್ನು ಅಳವಡಿಸಿಕೊಂಡ ಇವರ ವಚನಗಳು ತುಂಬ ಪ್ರಸಿದ್ಧಿ–ಜನಪ್ರಿಯತೆಯನ್ನು ಪಡೆದಿವೆ. ಬಸವಣ್ಣನವರ ವಚನವಿನ್ನೂ ಪ್ರಕಟವಾಗುವ ಪೂರ್ವದಲ್ಲಿಯೇ ಈ ವಚನಗಳು ಪ್ರಕಟವಾಗಿ (೧೮೮೪), ಮುಂದೆ ಬೇರೆ ಬೇರೆ ವಿದ್ವಾಂಸರಿಂದ ಪರಿಷ್ಕರಣಗೊಂಡು, ಹತ್ತಾರು ಆವೃತ್ತಿಗಳನ್ನು ಕಂಡಿವೆ. ಪುರವಂತರು ಇವನ್ನು ತಮ್ಮ 'ವಡಬು'ಗಳಲ್ಲಿ ಉದ್ಧರಣೆಗಳಂತೆ ಬಳಸಿಕೊಂಡು ಪ್ರಚಾರಗೊಳಿಸಿದರೆ, ಅನ್ಯಮತೀಯ ಅದ್ವೈತತತ್ವಾವಲಂಬಿಗಳು ಇಲ್ಲಿನ ಯೋಗ, ಆಧ್ಯಾತ್ಮಕ್ಕೆ ಸಂಬಂಧಿಸಿದ ವಚನಗಳನ್ನು ಪ್ರತಿಗೊಳಿಸಿಕೊಳ್ಳುತ್ತ, ಪ್ರಮಾಣಗ್ರಂಥವಾಗಿ ಬಳಸುತ್ತ ಬಂದಿದ್ದಾರೆ. ಆಧುನಿಕ ವಿದ್ವಾಂಸರು ''ಧರ್ಮವನ್ನು ಬೋಧಿಸುವುದರಿಂದ ಇದು ಧರ್ಮಗ್ರಂಥವಾಗಿದೆ. ತತ್ವಗಳನ್ನು ಬೋಧಿಸುವುದರಿಂದ ಸಿದ್ಧಾಂತಗ್ರಂಥವಾಗಿದೆ. ಕಾವ್ಯದ ಲಕ್ಷಣಗಳನ್ನು ಒಳಗೊಂಡಿರುವುದರಿಂದ ಉತ್ತಮ ಸಾಹಿತ್ಯಗ್ರಂಥವೂ ಆಗಿದೆ'' (ಎಂ. ಆರ್. ಶ್ರೀ) ಎಂದು, ''ವೀರಶೈವತತ್ವಗಳನ್ನು ತಿಳಿಯಾದ ಭಾಷೆಯಲ್ಲಿ ತಿಳಿಸುವುದರಿಂದ ಇದು ಒಂದು ಉಪದೇಶಗ್ರಂಥವೆಂದೂ, ಶಿವಾನುಭವಶಾಸ್ತ್ರಸಾರವೆಂದೂ, ಶಿವಾನುಭವ ಶಬ್ದಕೋಶವೆಂದೂ ಹೇಳಲು ಅಭ್ಯಂತರವಿಲ್ಲ'' (ಪ್ರಭುಸ್ವಾಮಿಗಳು ಬೂದಿಹಾಳ ಮಠ) ಎಂದು ಮೌಲ್ಯಮಾಪನ ಮಾಡಿದ್ದಾರೆ.

---

೬ ಉದಾಹರಣೆಗಳಿಗೆ ಹ. ನಂ. ವಿಜಯಕುಮಾರ ಅವರು ಸಂಪಾದಿಸಿದ 'ಷಣ್ಮುಖಸ್ವಾಮಿ ವಚನಗಳು' ಕೃತಿಯ ಪ್ರಸ್ತಾವನೆ ನೋಡಿ

## ಸಂಗನಬಸವೇಶ್ವರದೇವರು :

ಸಂಗನಬಸವೇಶ್ವರದೇವರು ಗುರುಸಿದ್ಧದೇವರ ಶಿಷ್ಯ, ಈತನನ್ನು ಕುರಿತು ಚಿದೈಶ್ವರ್ಯ ಚಿದಾಭರಣದ ೬೩೩ನೆಯ ವಚನದಲ್ಲಿ ಹೀಗೆ ಹೇಳಲಾಗಿದೆ :

ಗುರುಪುರದ ಮೇಲುಮಠದ ಮಹಾಮಂದಿರದ ರಂಗಮಂಟಪ ಸಿಂಹಾಸನದ ಮೂಲಮೂರ್ತಿ ಮರಿಮಹಂತೇಶ್ವರ, ಅವರ ಕರಪುತ್ರ ಶಿವಪುರದ ಬಸವಪ್ರಭು ಶೆಟ್ಟಿ, ಈತ ಸಮಸ್ತ ಭೋಗಂಗಳನ್ನು ತ್ಯಜಿಸಿ ವಿರಕ್ತನಾಗಿ ಸಂಗನಬಸವೇಶ್ವರನೆಂಬ ಹೆಸರಿನಿಂದ ಗುರೂಪಾಸ್ತೆ ಮಾಡುತ್ತಿದ್ದ. ಆ ಸಮಯದಲ್ಲಿ ಹರದನಹಳ್ಳಿ ಸ್ಥಾಪನಾಚಾರ್ಯ ಶಿವಲಿಂಗಭಕ್ತಿವಲ್ಲಭನಾದ ಬಸವಲಿಂಗದೇಶಿಕೋತ್ತಮನು ಬಂದು, ಈತನನ್ನು ಶ್ರೀಶೈಲಪರ್ವತಕ್ಕೆ ನೈಋತ್ಯ ಭಾಗದಲ್ಲಿನ ಕುಮಾರಪರ್ವತದ ಉತ್ತರದಿಕ್ಕಿನಲ್ಲಿರುವ ನಾಗರಗವಿಯ ನಾಗರಸಿಂಹಾಸನಕ್ಕೆ ಒಡೆಯರಾಗಿದ್ದ ಗುರುಸಿದ್ಧಸ್ವಾಮಿಗಳಲ್ಲಿಗೆ ಕರೆದೊಯ್ದು, ಅವರಲ್ಲಿ ಆಗಮಜ್ಞಾನವನ್ನು ಬೇಡಿಸುತ್ತಾನೆ. ಗುರುಸಿದ್ಧಸ್ವಾಮಿಗಳು ದಯಾಂತಃಕರಣದಿಂದ ಹರಗುರುವಾಕ್ಯ ಪ್ರಮಾಣವಾಗಿ, ಸ್ಥಲಮೆಟ್ಟಿಗೆಯಿಂದ ಮಣಿಗಣಸೂತ್ರದಂತೆ ಸೇರಿಸಿ ಆಗಮಜ್ಞಾನವನ್ನು ಸಂಗನಬಸವೇಶ್ವರರಿಗೆ ಬೋಧಿಸುತ್ತಾರೆ. ಬಸವಲಿಂಗೇಶ್ವರರು ಅದನ್ನು ಲಿಖಿತ ಮಾಡಿ ಗುರುವರ ಗುರುಸಿದ್ಧೇಶ್ವರರಿಗೆ ಕೊಡುತ್ತಾರೆ. ಆಗ ಗುರುಸಿದ್ಧೇಶ್ವರರು ಸಂಗನಬಸವೇಶ್ವರ ಮತ್ತು ಬಸವಲಿಂಗೇಶ್ವರರೊಡಗೂಡಿ, ಅದನ್ನೊಯ್ದು ತಮ್ಮ ಗುರುಗಳಾದ ಶಾಂತಮಲ್ಲಸ್ವಾಮಿಗಳ ಮುಂದಿರಿಸುತ್ತಾರೆ. ಅವರು ಅದನ್ನು ಸಮಸ್ತ ಜಂಗಮಮೂರ್ತಿಗಳೊಡಗೂಡಿ ಅನುಭಾವವ ಮಾಡಿ, ಅದಕ್ಕೆ ''ಅನಾದಿ ಷಟ್‌ಸ್ಥಲ ನಿರಾಭಾರಿ ವೀರಶೈವ ಶರಣನ ನಿಜಾಚರಣೆ ಸಂಬಂಧ ಬೋಧಾಮೃತ ನಿಲುಕಡೆ ಚಿದೈಶ್ವರ್ಯ ಚಿದಾಭರಣ'' ಎಂದು ಹೆಸರಿಟ್ಟು, ಬಸವಲಿಂಗ ಸಾಕ್ಷಿಯಾಗಿ ಸಂಗನಬಸವೇಶ್ವರರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಆಗಮವನ್ನು ಆಶೀರ್ವದಿಸಿ ಸನ್ಮಾನಗೈಯ್ಯುತ್ತಾರೆ. ಆಗ ಸಂಗನಬಸವೇಶ್ವರರು ಅದನ್ನು ಸ್ವೀಕರಿಸಿ, ಆ ಕೃತಿಯ ಹೆಸರಿಗೆ ಅರ್ಥವಿವರಣೆಯನ್ನು ನೀಡುತ್ತಾರೆ.[೭]

ಮೇಲಿನ ವಿವರಣೆಯಿಂದ ಸಂಗನಬಸವೇಶ್ವರದೇವರು ಮೊದಲು ಲೌಕಿಕರಾಗಿದ್ದು, ನಂತರ ವಿರಕ್ತಿಹೊಂದಿ, ಬಸವಲಿಂಗದೇಶಿಕೋತ್ತಮರ ಸಹಾಯದಿಂದ ಗುರುಸಿದ್ಧದೇವರೆಂಬ ಗುರುಗಳ ಕೃಪೆಗೆ ಪಾತ್ರರಾಗಿ, ಅವರಿಂದ ಆಗಮಜ್ಞಾನವನ್ನು ಸಂಪಾದಿಸಿ, ಸಾಧನೆಮಾಡಿ, ಸಿದ್ಧಿಪದದತ್ತ ಸಾಗಿದರೆಂಬ ಸಂಗತಿ ವ್ಯಕ್ತವಾಗುತ್ತದೆ. ಗುರುಸಿದ್ಧದೇವರು ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವರೆಂಬ ವಿಷಯ ಅವರೇ ಹೇಳುವ ಗುರುಶಿಷ್ಯ ಪರಂಪರೆಯಿಂದ ತಿಳಿದುಬರುತ್ತದೆ.[೮] ಇವರು ೧೬ನೆಯ ಶತಮಾನದ ಸುಮಾರಿನಲ್ಲಿದ್ದವರಾದುದರಿಂದ ಇವರ ಶಿಷ್ಯರೆನಿಸಿದ ಸಂಗನಬಸವೇಶ್ವರದೇವರೂ ಇದೇ ಅವಧಿಯಲ್ಲಿದ್ದು, ವೀರಶೈವ ತತ್ತ್ವ–ಸಿದ್ಧಾಂತಗಳನ್ನು ಬೋಧಿಸಿದರೆಂದು ಹೇಳಬೇಕಾಗುತ್ತದೆ.

---

೭ ಚಿದೈಶ್ವರ್ಯ ಚಿದಾಭರಣ : ಸಂ. ಪಿ. ಎಂ. ಗಿರಿರಾಜು, ಆರಿಕೆ ಪು. viii

೮ ಅದೇ, ವಚನ ೬೯೨

ಸಂಗನಬಸವೇಶ್ವರದೇವರ ಕೇವಲ ಒಂದು ವಚನ ಮಾತ್ರ ಚಿದೈಶ್ವರ್ಯ ಚಿದಾಭರಣದಲ್ಲಿ ದೊರಕುತ್ತಿದ್ದು, ಮತ್ತೆ ಬೇರಾವ ವಚನಗಳನ್ನು ರಚಿಸಿದ ಬಗೆಗೆ ಉಲ್ಲೇಖಗಳಿಲ್ಲ. 'ಬಸವಲಿಂಗೇಶ್ವರ' ಎಂಬ ಅಂಕಿತವನ್ನು ಹೊಂದಿದ ಇದರಲ್ಲಿ ತನ್ನ ಪೂರ್ವ ವೃತ್ತಾಂತ, ಬಸವಲಿಂಗೇಶ್ವರರ ಕೃಪೆಯಿಂದ ತಾನು ಗುರುದರ್ಶನ ಪಡೆದುದು, ಅವರಿಂದ ಚಿದೈಶ್ವರ್ಯ ಚಿದಾಭರಣ ಕೃತಿಯ ಬೋಧೆ, ಅದರ ಹೆಸರಿಗೆ ತಾನು ಅರ್ಥವಿವರಣೆ ನೀಡಿದುದು–ಇವೇ ಮೊದಲಾದ ಸಂಗತಿಗಳನ್ನು ತಿಳಿಸಲಾಗಿದೆ. ಆದಿಯ ಅರ್ಧ ವಚನ, ಸ್ವಸಂಗತಿಯಿಂದ ಕೂಡಿದ್ದರೆ, ಇನ್ನರ್ಧ ಟೀಕೆಯನ್ನೊಳಗೊಂಡಿದೆ. ಹೀಗೆ ದೀರ್ಘ ನಿರೂಪಣೆ ಅರ್ಥವಿವರಣೆಯಿಂದ ಕೂಡಿದ ಇದು ಕಲಾತ್ಮಕ ವಚನವಾಗದೆ ವಿವರಣಾತ್ಮಕ ಗದ್ಯವೆನಿಸಿದೆ.

ಸಿದ್ಧಮಲ್ಲಪ್ಪ :[೯]

ಒಂಬತ್ತು ವಚನಗಳನ್ನು ಬಿಟ್ಟರೆ ಈತನ ವಿಷಯವಾಗಿ ಮತ್ತಾವ ಸಂಗತಿಗಳೂ ದೊರಕುವುದಿಲ್ಲ. 'ಸಿದ್ಧಮಲ್ಲನ ದಾತ ಮೇಗಣಗವಿಯ ಗುರುಸಿದ್ಧೇಶ್ವರ ಪ್ರಭುವೆ'' ಎಂಬುದು ಈತನ ವಚನಾಂಕಿತ. ಒಂದು ವಚನ (೭)ದಲ್ಲಿ ಪ್ರಭುಲಿಂಗಲೀಲೆಯ (೧೪೩೦) ಉಲ್ಲೇಖ ಬರುವುದರಿಂದ ಈತ ಚಾಮರಸನಿಗಿಂತ ಈಚಿನವನೆನಿಸುತ್ತಾನೆ. ವಚನಗಳ ವಸ್ತು–ನಿರೂಪಣೆ–ಶೈಲಿಯ ಹಿನ್ನೆಲೆಯಲ್ಲಿ ೧೭ನೆಯ ಶತಮಾನದ ಕೊನೆಯಲ್ಲಿದ್ದವನೆಂದು ಊಹಿಸಬಹುದು.

ಈತನ ವಚನಗಳು ಹೆಚ್ಚಾಗಿ ವಿಡಂಬನಾತ್ಮಕವಾಗಿವೆ. ವಿರಕ್ತ–ಶಿವಯೋಗಿ–ಪುನರ್ಜಾತ–ಲಿಂಗಪೂಜಕ–ಕವಿ–ಎಂದು ಹೇಳಿಕೊಳ್ಳುವವರ ಡಾಂಭಿಕ ವರ್ತನೆಯನ್ನು ಇಲ್ಲಿ ಕಟುವಾಗಿ ಟೀಕಿಸಲಾಗಿದೆ. ಸ್ಥಾವರಲಿಂಗಪೂಜೆಯನ್ನು ತೊರೆದು ಇಷ್ಟಲಿಂಗ ಪೂಜಕರೆಂದು ಮೆರೆಯುವ ಬರಿಮಾತಿನ ತರ್ಕಿಗಳನ್ನು 'ಎಡೆಯ ಲಿಂಗವನು ಬಿಟ್ಟು ಗುಡಿಯ ಲಿಂಗಕ್ಕೆ ಶರಣೆನ್ನಲಾಗದು ಎಂದು ಹೇಳುವ ಕುದಿಗಿಳಿಗಳು' ಎಂದು ಕರೆದು, 'ನಿಮ್ಮ ಅಂತರಂಗದೊಳಿರ್ಪ ಲಿಂಗವ ಬಿಟ್ಟು ಅನ್ಯದೈವಕ್ಕೆ ಶರಣೆನ್ನದಿರಿ' ಎಂದು ಹೇಳುತ್ತಾನೆ. ನಾ ಹೆಚ್ಚು ತಾ ಹೆಚ್ಚು ಎಂದು ಕಾದಾಡುವ ಕುಕವಿಗಳನ್ನು ಶ್ವಾನಗಳೆಂದು ನಿಂದಿಸಿ, 'ಕಾಯದ ಕೀಲನರಿಯದೆ ಮಾಡಿದ ಕವಿಗಳು ಕಾಲನ ಬಾಧೆಗಳೆಂಬ ಮರಣಕ್ಕೆ' ಒಳಗಾಗಿ ಹೋಗುತ್ತಾರೆ ಎಂದು ಬೆದರಿಕೆ ಹಾಕುತ್ತಾನೆ. ಹೀಗೆಯೇ ವೈರಾಗ್ಯದ ಭೇದವರಿಯದೆ ತಾವು 'ವೈರಾಗ್ಯದ ದೇವರೆಂ'ದು ತಿರುಗುವ ವಿರಕ್ತರನ್ನು; ಯೋಗಿ, ಶ್ರವಣ, ಸನ್ಯಾಸಿ, ಕಾಳಾಮುಖಿ, ಪಾಶುಪತಿಗಳೆಂಬ ಹೆಸರಿಟ್ಟುಕೊಂಡು, ಶಿವಯೋಗಿಗಳೆಂದು ದೇಶವ ತಿರುಗುವ ಕುಟಿಲ ಸನ್ಯಾಸಿಗಳನ್ನು, 'ಬೋನದಾಸೆಗೆ ಜ್ಞಾನಬೋಧೆಯನ್ನು ಹೇಳುವ' ಕಪಟ ಗುರುಗಳನ್ನು, ಟೀಕಿಸುತ್ತ, 'ಉರಿಯ ಸೋಂಕಿದ ಕರ್ಪುರದ ಧೂಪದಂತಿ'ರುವವನು ನಿಜವಾದ ಗುರುವೆಂದು, 'ಅರ್ತು ಗುರ್ತುವಿಟ್ಟು ಆಳಬಲ್ಲರೆ ಆತನಿಗೆ ಮಹಾಶಿವಜ್ಞಾನಿ ಎಂದೆನ್ನಬಹುದು' ಎಂದು ತಿಳಿಸುತ್ತಾನೆ. ಒಟ್ಟಿನಲ್ಲಿ ಸಮಕಾಲೀನ ಧರ್ಮ–ಸಮಾಜಗಳಲ್ಲಿ ಕಂಡುಬರುವ

೯. ಸಿದ್ಧಮಲ್ಲಪ್ಪನ ವಚನಗಳು : ಸಂ. ಪುಟ್ಟಸ್ವಾಮಿ ಬಿಳಿದಾಳೆ, ಬಸವಪಥ ೧–೬ ಫೆ. ೧೯೮೦

ಮೋಸ–ವಂಚನೆ– ಕಪಟಗಳನ್ನು ಕಂಡು, ಖಾರವಾದ ಮಾತುಗಳಿಂದ ಟೀಕಿಸಿ, ಸಮಾಜಸ್ವಾಸ್ಥ್ಯಕ್ಕಾಗಿ ಪ್ರಯತ್ನಿಸಿದ್ದಾನೆ. ವಚನಬಂಧ ಸಡಿಲವಾಗಿದೆ; ಅಲ್ಲಲ್ಲಿ ವಾಕ್ಯ ದೋಷಗಳು ಇಣೆಕಿಕ್ಕಿವೆ. ಮುಕ್ತಕಗಳಿಗಿಂತ ಗದ್ಯ ಲಕ್ಷಣವನ್ನು ಹೊಂದಿದ ರಚನೆಗಳೇ ಹೆಚ್ಚಾಗಿವೆ.

**ಸಿದ್ಧವೀರದೇಶಿಕೇಂದ್ರ :**

ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಈತ 'ಮುಕ್ತಿಕಂಠಾಭರಣ' ಎಂಬ ವಚನ ಸಂಕಲನದ ಸಂಯೋಜಕ. ಈತನಿಗೆ 'ಸಿದ್ಧವೀರಸ್ವಾಮಿ' ಎಂದೂ ಕರೆಯಲಾಗುತ್ತದೆ ಎಂದು ಈ ಕೃತಿಯ ೪೬೨ನೆಯ ವಚನದ ಟೀಕೆಯಿಂದ ತಿಳಿದು ಬರುತ್ತದೆ. ಈತನೇ ರಚಿಸಿದ ಒಂದು ವಚನದಲ್ಲಿ 'ಗುರುಶಾಂತದೇವರು' ಎಂಬ ಹೆಸರು ಉಲ್ಲೇಖವಾಗಿದೆ. ಈ ಗುರುಶಾಂತದೇವ ಎಳಮಲೆಯ ಗುರುಶಾಂತ ದೇವನಾಗಿದ್ದರೆ, ಆತನ ಶಿಷ್ಯ ಸಂಪಾದನೆಯ ಸಿದ್ಧವೀರದೇವರೇ ಪ್ರಸ್ತುತ ಸಿದ್ಧವೀರ ದೇಶಿಕೇಂದ್ರನೆನಿಸುತ್ತಾನೆ. ಇದು ಸತ್ಯವಾದಲ್ಲಿ ಈತನ ಕಾಲ ೧೭ನೆಯ ಶತಮಾನವಾಗುತ್ತದೆ. ಅನಾದಿ ವೀರಶೈವ ಸಂಗ್ರಹ (ಸಂ), ಆಚರಣೆ ಸಂಬಂಧದ ವಚನಗಳು, ಲಿಂಗಸ್ತೋತ್ರದ ವಚನಗಳು, ಶಿವನ ಬಿರುದಾವಳಿ ಸ್ತೋತ್ರದ ವಚನಗಳು, ಚೆನ್ನ ಬಸವೇಶ್ವರ ಸ್ತೋತ್ರದ ವಚನಗಳು, ಪ್ರಭುದೇವರ ಸ್ತೋತ್ರದ ವಚನಗಳು, ಮಿಶ್ರಸ್ತೋತ್ರ, ಪಾದಸ್ತೋತ್ರ– ಮೊದಲಾದ ಸಂಕಲನಗಳ ಕರ್ತೃ ಈತನೇ ಆಗುತ್ತಾನೆ.

ಸಿದ್ಧವೀರ ದೇಶಿಕೇಂದ್ರನ ಒಂದೇ ಒಂದು ವಚನ ಮುಕ್ತಿಕಂಠಾಭರಣದಲ್ಲಿ ಸಂಗ್ರಹವಾಗಿದೆ. 'ಶ್ರೀಗುರು ತೋಂಟದ ಸಿದ್ಧಲಿಂಗೇಶ್ವರ' ಎಂಬ ಅಂಕಿತದಲ್ಲಿರುವ ಅದರಲ್ಲಿ ಯೋಗದ ಮಹತಿಯನ್ನು ತಿಳಿಸಲಾಗಿದೆ. ಗೋರಕ್ಷ, ಮತ್ಸ್ಯೇಂದ್ರನಾಥ, ಗುರು ಶಾಂತದೇವರು ಯೋಗಸಾಧನೆಯಲ್ಲಿ ಸಿದ್ಧಿಪಡೆದವರೆಂದು ಹೇಳುತ್ತ, 'ಯೋಗದ ಭೇದ ಯೋಗಿಗಳಂತರಂಗದಿಂದರಿತಡೆ ಯೋಗಸಿದ್ಧಿ ಸತ್ಯ ಸತ್ಯ' ಎಂದು ಸಾರುತ್ತಾನೆ.

**ಹೇಮಗಲ್ಲ ಹಂಪ :**

ಹೇಮುಗಲ್ಲ ಹಂಪ ಇಲ್ಲಿಯ ವರೆಗೆ ಅಜ್ಞಾತನಾಗಿದ್ದು,[೧೦] ಈ ಸಂಪುಟದ ಮೂಲಕ ಕಾಣಿಸಿಕೊಳ್ಳುತ್ತಿರುವ ಬಸವೋತ್ತರಯುಗದ ಮತ್ತೊಬ್ಬ ಮಹತ್ವದ ವಚನಕಾರ. ಈತನ ಜೀವನಚರಿತ್ರೆಗೆ ಸಂಬಂಧಿಸಿದಂತೆ ಈತನ ವಚನಗಳಲ್ಲಿಯೇ ಕೆಲವು ಸಂಗತಿಗಳು ದೊರಕುತ್ತಿದ್ದು, ಅವುಗಳನ್ನು ಕೆಳಗಿನಂತೆ ಸಂಗ್ರಹಿಸಬಹುದು :

ಇವನು ತನ್ನನ್ನು 'ಹಂಪ' 'ಹೇಮುಗಲ್ಲ ಹಂಪ' 'ಹೇಮುಗಲ್ಲ' ಎಂದು ಕರೆದುಕೊಂಡಿದ್ದಾನೆ. ಇಲ್ಲಿ 'ಹಂಪ' ಎಂಬುದು ಅವನ ಹೆಸರಾದರೆ, 'ಹೇಮುಗಲ್ಲು'

---

೧೦. ಡಾ. ಎಂ. ಜಿ. ಬಿರಾದಾರ (ಬಸವಜರ್ನಲ್ ೨–೨) ಮತ್ತು ಡಾ. ಪಿ. ವಿ. ನಾರಾಯಣ (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ– ೫. ಬೆಂಗಳೂರು) ಅವರು ಈತನನ್ನು ಕುರಿತು ಕೆಲವೇ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದರೆ ವಚನಗಳು ಮತ್ತು ಆತನ ವಿವರವಾದ ಪರಿಚಯ ಬೆಳಕಿಗೆ ಬರುತ್ತಿರುವುದು ಇದೇ ಮೊದಲು.

ಎಂಬುದು ಅವನ ಸ್ಥಳವನ್ನು ಸೂಚಿಸುವ ವಿಶೇಷಣವಾಗಿದೆ.[೧೧] ಒಂದು ಕಡೆ (ಸ್ಥಲ ೧೬ ಅಂತ್ಯಕಂದ) 'ಹೇಮಗಲ್ಲ' ಎಂಬ ಈ ವಿಶೇಷಣವನ್ನೇ ಅಂಕಿತನಾಮದ ರೀತಿಯಲ್ಲಿ ಬಳಸಿದುದೂ ಉಂಟು.[೧೨] ಸದ್ಯ ಕರ್ನಾಟಕದಲ್ಲಿ 'ಹೇಮಗಲ್ಲು' ಎಂಬ ಹೆಸರಿನ ಊರು ಯಾವುದೂ ಇಲ್ಲ. ಧಾರವಾಡ ಜಿಲ್ಲೆಯ 'ಯಾವಗಲ್ಲ' ಗ್ರಾಮದ ಪ್ರಾಚೀನ ಹೆಸರು 'ಏವಗಲ್ಲು'. ಇದಕ್ಕೆ ಹೇಮಗಲ್ಲು ಎಂದು ಗೌರವವಾಚಿಯಾಗಿ ಕರೆದಿರಬಹುದು. ಅಥವಾ ಹಂಪೆಯ ಪರಿಸರದಲ್ಲಿ ಹೇಮಕೂಟ ಇರುವುದನ್ನು ಗಮನಿಸಿದರೆ, ಇದು ಆ ಪ್ರದೇಶದಲ್ಲಿ ಇದ್ದಿರಬಹುದಾದ ಒಂದು ಊರು ಆಗಿರಬೇಕು. ಇಂದು ಅದು ಹಾಳಾಗಿರಬಹುದು, ಇಲ್ಲವೆ ಬೇರೆ ಹೆಸರಿನಿಂದ ಕರೆಯಿಸಿಕೊಳ್ಳುತ್ತಿರಬಹುದು. ಅಂತೂ 'ಹೇಮಗಲ್ಲು' ಸ್ಥಳನಾಮವೆಂಬುದು ಮಾತ್ರ ಸತ್ಯ. ಪಂಪಾ ವಿರೂಪಾಕ್ಷನ ಪ್ರಭಾವದಿಂದ ಆ ಪ್ರದೇಶದಲ್ಲಿ ಹಂಪಣ್ಣ, ಹಂಪಮ್ಮ, ಪಂಪಾಪತಿ, ಪಂಪಾಂಬಿಕೆ ಎಂಬ ಹೆಸರು ಗಳು ವ್ಯಕ್ತಿಗಳ ಅಂಕಿತನಾಮಗಳಾಗಿ ಅಧಿಕ ಪ್ರಮಾಣದಲ್ಲಿ ಬಳಕೆಯಾಗುತ್ತಿರುವುದನ್ನು ಇಂದಿಗೂ ಕಾಣುತ್ತೇವೆ. ಪ್ರಸ್ತುತ ವಚನಕಾರನಿಗೂ ಆ ಪ್ರಭಾವದಿಂದಲೇ 'ಹಂಪ' ಎಂಬ ಹೆಸರು ಬಂದಿರಬೇಕು. ಹೀಗೆ ಅಂಕಿತನಾಮ ಮತ್ತು ಸ್ಥಳನಾಮ ಎರಡೂ ಹಂಪೆಯ ಪರಿಸರಕ್ಕೆ ಸಂಬಂಧಪಡುವುದರಿಂದ ಈತ ಅದೇ ಪ್ರದೇಶದವನಾಗಿರ ಬೇಕೆಂದು ಹೇಳುವುದು ಹೆಚ್ಚು ಸಮರ್ಥನೀಯವಾದ ಅಭಿಪ್ರಾಯವೆನಿಸುತ್ತದೆ.

ಹಂಪ ತನ್ನ ಎರಡು ವಚನಗಳಲ್ಲಿ (೧೨೮,೧೩೦) ಶಂಕರದೇವರ (೧೫೮೦) ನಾಲ್ಕು ಕಂದಗಳನ್ನು ಉದ್ಧರಣೆ ವಾಕ್ಯಗಳಂತೆ, ಬಳಸಿಕೊಂಡಿದ್ದಾನೆ. ಇದರಿಂದ ಈತ ಅವನ ತರುವಾಯದಲ್ಲಿದ್ದವನೆನಿಸುತ್ತಾನೆ. ಭಂಗಿಯಸೊಪ್ಪು, ಸೀಸ, ರೇವಣಿ ಮುಂತಾದ ಪದಗಳ ಬಳಕೆ, ಹೆಚ್ಚು ದೇಶೀಯವಾದ ಭಾಷಾ ಶೈಲಿಗಳು ಈತನನ್ನು ೧೭–೧೮ನೆಯ ಶತಮಾನಕ್ಕೆ ತಂದು ನಿಲ್ಲಿಸುತ್ತವೆ.

ಈತ ವೀರಶೈವ ಸಂಪ್ರದಾಯದಲ್ಲಿ ಪ್ರಮುಖವಾದ 'ಪಡುವಿಡಿ ಬಗೆ'ಗೆ ಸೇರಿದವನು. ತನ್ನ ಒಂದು ವಚನದಲ್ಲಿ (೪೨) ಈ ಸಂಪ್ರದಾಯಕ್ಕೆ ಸೇರಿದ ಗುರುಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ :

> ''ಅನಾದಿ ಪರಶಿವನ ಶಿಷ್ಯ ಆದಿಶಂಭುವೆಂಬ ಗಣೇಶ್ವರ.
> ಆದಿ [ಶಂಭುವೆಂಬ] ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ.
> ನಿರಂಜನನೆಂಬ ಗಣೇಶ್ವರನ ಶಿಷ್ಯರು ಆದಿಪಡುವಿಡಿ, ಅನಾದಿಪಡುವಿಡಿ,
> ಶಿವಸಿದ್ಧಪಡುವಿಡಿಯ ಪ್ರಭುವೆಂಬ ಗಣೇಶ್ವರ.

---

೧೧. ಮುದನೂರ ದಾಸಯ್ಯ, ಹಾವಿನಾಳ ಕಲ್ಲಯ್ಯ, ಅಮರಗುಂಡದ ಮಲ್ಲಿಕಾರ್ಜುನ, ಏಲೇಶ್ವರದ ಕೇತಯ್ಯ, ಸಂಗಮೇಶ್ವರದ ಅಪ್ಪಣ್ಣ, ಮಳುಬಾವಿಯ ಸೋಮಣ್ಣ, ಬಾಹೂರ ಬೊಮ್ಮಣ್ಣ, ಪುರದ ನಾಗಣ್ಣ, ಉಳಿಯುಮೇಶ್ವರ ಚಿಕ್ಕಣ್ಣ–ಮುಂತಾದ ಹೆಸರುಗಳೂ ಹೀಗೆಯೇ ತಮ್ಮ ತಮ್ಮ ಊರಿನ ಹೆಸರುಗಳನ್ನು ಹಚ್ಚಿಕೊಂಡು ಪ್ರಸಿದ್ಧವಾಗಿವೆ.

೧೨. ''ಷಡುಸ್ಥಲ ಪಂಚಾಕ್ಷರಿಯನು । ಬಿಡದೆ ಜಪಿಸಲು ಮುಕ್ತಿಯೆಂದು ಪೊಗಳ್ದ 'ಹೇಮಗಲ್ಲಂ' ತನ್ನ । ದೃಢಮೂರ್ತಿ ಶುಭಗುರುರಾಯ । ಪಡುವಿಡಿ ಸಿದ್ಧಮಲ್ಲಿನಾಥ ಕೃಪೆಯಿಂ ॥''

ಪ್ರಭುವೆಂಬ ಗಣೇಶ್ವರನ ಶಿಷ್ಯರು ಮಹಾಂತಮಲ್ಲಿಕಾರ್ಜುನನೆಂಬ ಗಣೇಶ್ವರ.
ಮಹಾಂತಮಲ್ಲಿಕಾರ್ಜುನನ ಶಿಷ್ಯರು ಜಾಲಹಳ್ಳಿಯ ಶಾಂತದೇವರು.
ಜಾಲಹಳ್ಳಿಯ ಶಾಂತದೇವರ ಶಿಷ್ಯರು ಸಿದ್ಧಮಲ್ಲಿನಾಥೇಶ್ವರ.
ಸಿದ್ಧಮಲ್ಲಿನಾಥೇಶ್ವರರ ಶಿಷ್ಯರು ಪಡುವಿಡಿಯ ರಾಚೇಶ್ವರ.
ಪಡುವಿಡಿಯ ರಾಚೇಶ್ವರನ ಕರಕಮಲದಲ್ಲಿ ಉತ್ಪತ್ಯವಾದ ಶಿಶುವು
ಹೇಮಗಲ್ಲ ಹಂಪ ನಾನಯ್ಯ.........''

ಈ ಗುರುಪರಂಪರೆಯಲ್ಲಿ ಬರುವ ವ್ಯಕ್ತಿಗಳ ಬಗೆಗೆ ವಿಶೇಷವೇನೂ ತಿಳಿದು ಬರುವುದಿಲ್ಲ. ಶಾಂತದೇವರ ಹೆಸರಿನೊಂದಿಗೆ ಸೇರಿದ 'ಜಾಲಹಳ್ಳಿ' ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿಗೆ ಸೇರಿದ ಊರಾಗಿರಬೇಕು.

ಈ ಗುರುಪರಂಪರೆಯನ್ವಯ ಹೇಮಗಲ್ಲ ಹಂಪ ಪಡುವಿಡಿ ರಾಚೇಶ್ವರನ ಶಿಷ್ಯನಾದರೂ ಆತ ತನ್ನ ವಚನಗಳಿಗೆ ಗುರುವಿನ ಗುರುವಾದ 'ಸಿದ್ಧಮಲ್ಲಿನಾಥ'ನನ್ನು ಅಂಕಿತವಾಗಿ ಬಳಸಿಕೊಂಡಿದ್ದಾನೆ. ಅಷ್ಟೇ ಅಲ್ಲದೆ ಕೃತಿಯ ಆದಿ, ವಚನಗಳ ಮಧ್ಯ, ಸ್ವರ ವಚನಗಳ ಅಂತ್ಯದಲ್ಲಿ ಆತನನ್ನು ತುಂಬ ಭಕ್ತಿಯಿಂದ ಸ್ತುತಿಸಿದ್ದಾನೆ.

'ಹೇಮಗಲ್ಲ ಷಟ್‌ಸ್ಥಲ' ಹೇಮಗಲ್ಲ ಹಂಪನ–ಸದ್ಯ ದೊರೆತ–ಏಕೈಕ ಕೃತಿ. ಇದು ಕರ್ತೃವೇ ಸ್ಥಲಾನುಗುಣವಾಗಿ ಸಂಯೋಜಿಸಿದ ವಚನಗ್ರಂಥ. ಹೆಸರೇ ಸೂಚಿಸುವಂತೆ ಇದರಲ್ಲಿ ವೀರಶೈವ ಷಟ್‌ಸ್ಥಲಗಳು ಅಳವಟ್ಟಿರಬಹುದೆನಿಸಿದರೂ ಈಗ ದೊರೆತ ಹಸ್ತಪ್ರತಿಗಳು ಭಕ್ತಸ್ಥಲಕ್ಕೇ ನಿಲ್ಲುತ್ತವೆ. ಕೃತಿಕಾರನೇ ಹೀಗೆ ಅರ್ಧಕ್ಕೆ ನಿಲ್ಲಿಸಿದನೋ, ಇಲ್ಲವೆ ಪ್ರತಿಕಾರನು ಇಷ್ಟನ್ನೇ ಬರೆದುಕೊಂಡನೋ ತಿಳಿಯದು. ಅಂತ್ಯದಲ್ಲಿ ಮಾತ್ರ 'ಸೂತ್ರ ಇಂತು ಸಂಪೂರ್ಣ ಮಂಗಳಮಹಾ ಶ್ರೀ ಶ್ರೀ' ಎಂದಿದೆ. ಇದು ಸ್ಥಲಾಂತ್ಯ ಸೂಚನೆಯೂ ಆಗಬಹುದು ; ಕೃತಿ ಸಮಾಪ್ತಿ ಹೇಳಿಕೆಯೂ ಅನಿಸ ಬಹುದು. ಭಕ್ತಸ್ಥಲದ ಅಂತ್ಯದಲ್ಲಿ ಉಳಿದ ಸ್ಥಲಗಳಲ್ಲಿ ಇರುವಂತೆ ಸ್ವರವಚನ ಇಲ್ಲದೆ ಇರುವುದು, ಈ ಸ್ಥಲದಲ್ಲಿ ಕಡಿಮೆ ಸಂಖ್ಯೆಯ ವಚನಗಳಿರುವುದು, ಇದು ಅರ್ಧಕ್ಕೆ ನಿಂತಿದೆ ಎಂದು ಹೇಳಲು ಪುಷ್ಟಿ ನೀಡುತ್ತವೆ.

ಈಗ ದೊರೆತ ಕೃತಿಯ ಸ್ವರೂಪ ಹೀಗಿದೆ : ೨೩ ಸ್ಥಲಗಳು, ಪ್ರತಿಸ್ಥಲದ ಆದಿಯಲ್ಲಿ ಸೂತ್ರ, ಅದರಲ್ಲಿ ಆ ಸ್ಥಲದ ವಿಷಯದ ಸಾರಸಂಗ್ರಹ, ಮಧ್ಯ ಹಲವು ವಚನಗಳು, ಕೊನೆಯಲ್ಲಿ ಈ ವಚನಗಳ ಭಾವವನ್ನೇ ಒಳಗೊಂಡ ಒಂದೊಂದು ಸ್ವರವಚನ, ಪಂಚಾಕ್ಷರಿಯ ಸ್ಥಲದ ಅಂತ್ಯದಲ್ಲಿ ಮಾತ್ರ ಸ್ವರವಚನಕ್ಕೆ ಬದಲು ೫೮ ನುಡಿಗಳ ರಗಳೆ, ಅದರ ಆದಿಯಲ್ಲಿ ಒಂದು, ಅಂತ್ಯದಲ್ಲಿ ಎರಡು ಕಂದ–ಹೀಗೆ ಒಟ್ಟು ೨೮೨ ವಚನ, ೨೧ ಸ್ವರವಚನ, ೧ ರಗಳೆ, ೪ ಶಂಕರಲಿಂಗಾಂಕಿತ ಕಂದ, ಮೂರು ಹಂಪ ವಿರಚಿತ ಕಂದಗಳು ಇವೆ.

ಈ ಕೃತಿಯಲ್ಲಿ ೨೩ ಸ್ಥಲಗಳಿವೆ : ಶಿವಸ್ತೋತ್ರಸ್ಥಲ, ೨. ಪಿಂಡಸ್ಥಲ, ೩. ಪಿಂಡ ಜ್ಞಾನಸ್ಥಲ, ೪. ಮಾಯಾವಿಡಂಬನಸ್ಥಲ, ೫. ಮಾಯಾತಮಂಧ ನಿರಸನಸ್ಥಲ, ೬. ದಶವಾಯು ನಿರಸನಸ್ಥಲ, ೭. ಅಂತರಂಗದ ಅಷ್ಟಮದ ನಿರಸನಸ್ಥಲ, ೮. ಬಹಿ

ರಂಗದ ಅಷ್ಟಮದ ನಿರಸನಸ್ಥಲ, ೯. ಅರಿಷಡ್ವರ್ಗ ನಿರಸನಸ್ಥಲ, ೧೦. ಸಪ್ತವ್ಯಸನ ನಿರಸನಸ್ಥಲ, ೧೧. ಪಂಚೇಂದ್ರಿಯ ನಿರಸನಸ್ಥಲ, ೧೨. ಮನೋವಿಕಾರ ನಿರಸನಸ್ಥಲ, ೧೩. ಆಶಾಬದ್ಧ ನಿರಸನಸ್ಥಲ, ೧೪. ಶಿವನಧಿ[ಕಾ]ಕಾಂಕ್ಷೆ ನಿರಸನಸ್ಥಲ, ೧೫. ಸಂಸಾರಹೇಯ ಸ್ಥಲ, ೧೬. ಗುರುಕರುಣಸ್ಥಲ, ೧೭. ಲಿಂಗಧಾರಣಸ್ಥಲ, ೧೮. ಅನ್ಯದೈವನಿರಸನಸ್ಥಲ, ೧೯. ವಿಭೂತಿಸ್ಥಲ, ೨೦. ರುದ್ರಾಕ್ಷಿಸ್ಥಲ, ೨೧. ಪಂಚಾಕ್ಷರಿ ಸ್ಥಲ, ೨೨. ಅಷ್ಟಾವರಣ ಮಹಾತ್ಮೆಯ ಸ್ಥಲ, ೨೩. ಭಕ್ತಸ್ಥಲ.

ಷಟ್‌ಸ್ಥಲತತ್ತ್ವ ನಿರೂಪಣೆಯೇ ಈ ಕೃತಿಯ ಮುಖ್ಯ ಗುರಿ. ಅದನ್ನು ಈಗಾಗಲೇ ರೂಢಿಗತವಾದ ತತ್ತ್ವಗಳ ಹಿನ್ನೆಲೆಯಲ್ಲಿ ಹೆಚ್ಚು ವ್ಯವಸ್ಥಿತವಾಗಿ, ಅಷ್ಟೇ ನೇರ ಹಾಗೂ ಸರಳವಾಗಿ ವಿವರಿಸಲಾಗಿದೆ.

ಪಿಂಡ–ಬ್ರಹ್ಮಾಂಡವನ್ನು ಒಂದುಮಾಡಿ ನಿರ್ಮಿಸಿದವನು ಪರಬ್ರಹ್ಮ. ಅವನ ನಿಲವು 'ಶಿಲೆಯೊಳಗಣ ಪಾವಕನಂತೆ, ತಿಲದೊಳಗಣ ತೈಲದಂತೆ, ಬೀಜದೊಳಗಣ ವೃಕ್ಷದಂತೆ, ಹಸುವಿನೊಳಗಣ ಘೃತದಂತೆ, ಉದಕದೊಳಗಣ ಪ್ರತಿಬಿಂಬದಂತೆ' ಅಗೋಚರವಾಗಿದೆ. ಅದನ್ನು ಹಾಗೆಯೇ ಕಾಣಲು ಸಾಧ್ಯವಿಲ್ಲ. 'ಶಿಲೆಯೊಳಗಣ ಅಗ್ನಿ ಚಕಮಕಿ ದೂದಿಪಿಡಿದು ಕ್ರೀಯಿಟ್ಟು ಮಾಡಿದಲ್ಲದೆ ಪ್ರಜ್ವಲಿಸದು. ತಿಲದೊಳಗಣ ತೈಲ ಯಂತ್ರದಲ್ಲಿ ಕ್ರೀಡಿಸಿದಲ್ಲದೆ ತೋರದು. ಬೀಜದೊಳಗಣ ವೃಕ್ಷ ಮೇಘದ ದೆಸೆಯಲ್ಲಿ [ಉದಕ ಬಂದು] ಪಸಿಯ ಕ್ಷೇತ್ರಕ್ಕೆ ಬಿದ್ದಲ್ಲದೆ ಮೊಳೆದೋರದು. ಪಶುವಿನೊಳಗಣ ಘೃತ ಪಶುವಬೋಧಿಸಿ ಕ್ರೀಯಿಟ್ಟು ಅಮೃತವ ಕಡೆದರೆ ಕೊಡುವುದು. ಮೇಘದ ದೆಸೆಯಲಿ ಉದಕ ಬಂದು ಎಲೆಯ ತುಂಬಿದರೆ ಸೂರ್ಯನ ಪ್ರತಿಬಿಂಬವದರೊಳು ತೋರುವಂತೆ' ನಾದ–ಬಿಂದು–ಕಳೆಯ ದೆಸೆಯಲಿ ಪಿಂಡವಾಯಿತ್ತು. ಆ ಪಿಂಡದೊಳಗಣ ಜೀವ ಶಿವಚೈತನ್ಯ. ಆ ಚೈತನ್ಯವು 'ಜಲದ ಮರೆಯಲ್ಲಿಪ್ಪ ಸೂರ್ಯನಂತೆ, ಸ್ಫಟಿಕದ ಘಟದೊಳಗೆತ್ತಿದ ಜ್ಯೋತಿಯಂತೆ ಮುಗಿಲ ಮರೆಯಲ್ಲಿ ಹೊಳೆಯುತ್ತಿಹ ಮಿಂಚಿನಂತೆ ಸಕಲರಾತ್ಮ ಜ್ಞಾನಜ್ಯೋತಿಯಾಗಿ ಬೆಳಗುತ್ತದೆ. ಆದರಿಂದ ಜೀವಿಗೆ ಅಜ್ಞಾನವಶದಿಂದ ತನಗೆ ಸುತ್ತಿದ ಮಾಯೆಯು ಅರಿವಾಗುತ್ತದೆ. ಆಗ ಅದು 'ಹುಲಿಯ ಬಾಯೊಳು ಸಿಲ್ಕಿದೆರಳೆಯ ಮರಿಯಂತೆ, ಮಾರ್ಜಾಲನ ಬಾಯೊಳು ಸಿಲ್ಕಿದ ಮೂಷಕನಂತೆ, ಮಧುರದೊಳು ಬಿದ್ದ ಮಕ್ಷಕನಂತೆ, ದೀಪದ ಮುಂದಣ ಪತಂಗದಂತೆ' ಪರಿತಪಿಸುತ್ತದೆ; 'ಒರಲೊಣಕಿಯ ನಡುವಿನ ಸಿಹಿಧಾನ್ಯದಂತೆ, ಅಗ್ನಿ ಕುಂಭದ ನಡುವಿನ ಜೀವಪಾಕದಂತೆ' ಕುದಿಯುತ್ತದೆ. ಅಷ್ಟು ಸಾಲದೆಂಬಂತೆ ಮೇಲೆ ದಶವಾಯುಗಳು 'ಅರೆಗಾಯವಡೆದ ಉರಗಗೆ ಇರುವೆ ಮುಕುರುವಂತೆ' ಮುತ್ತುತ್ತವೆ. ಅಂತರಂಗದ ಅಷ್ಟಮದಗಳು ಹೆಚ್ಚಿ 'ಕರಿಯ ಕಾಲೊಳಗೆ ಸಿಕ್ಕಿದ ಮರಿ ನಾಯಿಯಂತೆ' ಒದ್ದಾಡುತ್ತದೆ ; 'ಭಂಗಿಯ ಸೊಪ್ಪು ತಿಂದ ಬಳ್ಳು ಊಳಿಟ್ಟು ಒದರುವಂತೆ' ಒದರುತ್ತದೆ. ಅಷ್ಟಲ್ಲದೆ ಈ ದೇಹದಲ್ಲಿ ಅರಿಷಡ್ವರ್ಗಗಳು 'ಗೂರಲೆಯ ಹುತ್ತಕ್ಕೆ ಉರಗ ನಡೆಕೊಂಡಂತೆ, ಅರಸಿಲ್ಲದ ರಾಜ್ಯಕ್ಕೆ ಚೋರರ ಹಾವಳಿಯಂತೆ' ಬಂದು ಸೇರಿವೆ. 'ಹಾಳೂರ ಹೊಕ್ಕರೆ ನಾಯ ಜಗಳವ ಕಂಡಂತೆ' ಪಂಚೇಂದ್ರಿಯಗಳು ಕಾದಾಡುತ್ತವೆ. ಸಪ್ತವ್ಯಸನಗಳು ಸುತ್ತಿಕೊಂಡಿವೆ. 'ಮನದ ಗಂದೆಯ ತುರಿಸಿದರೆ ಸುಖವಾಗುವಂತೆ'

ಮನೋವಿಕಾರ ಹೆಚ್ಚುತ್ತದೆ. ಆಶಾಪಾಶ ಬಿಗಿಯುತ್ತದೆ. ಸಂಸಾರ ತಾಪತ್ರಯದಲ್ಲಿ, 'ಭಾನುವಿನ ಕಿರಣದಲ್ಲಿ ಬಾಡಿದ ಕಮಲದಂತೆ' ಬಾಡುತ್ತದೆ. 'ಪಂಕದೊಳು ಬಿದ್ದ ಪಶುವಿನಂತೆ' ಒದ್ದಾಡುತ್ತದೆ. ಈ ಕಷ್ಟಕೋಟಲೆಯಿಂದ ಬಿಡುಗಡೆ ಹೊಂದಲು ಅದಕ್ಕೆ ತನ್ನಿಂದಲೇ ಸಾಧ್ಯವಾಗುವುದಿಲ್ಲ, ಆಗ ಗುರುವಿನ ಮೊರೆ ಹೊಗುತ್ತದೆ. ಗುರು ಕರುಣಿಸಿ ಲಿಂಗಧಾರಣ ಮಾಡುತ್ತಾನೆ. 'ರೋಗಿಯಲ್ಲಿಗೆ ಅಮೃತವೇ ಮೈಯಾಗಿ ಬಂದಂತೆ, ಹೆಳವನಿದ್ದೆಡೆಗೆ ಜಲನಿಧಿ ನಡೆತಂದಂತೆ'ನಿಸುತ್ತದೆ. ಇಷ್ಟಲಿಂಗದಲ್ಲಿ ನಿಷ್ಠೆ ನೆಲೆಗೊಂಡು, ಅನ್ಯದೈವ ನಿರಸನಗೈದು, 'ಹಲವು ಗುರುರೂಪಾದ ಪರಮಾತ್ಮ ಒಬ್ಬನೇ' ಎಂದು ನಂಬಿ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿಗಳ ಧರಿಸಿ, ಅಷ್ಟಾವರಣ ಮಹಾತ್ಮೆಯ ಕೊಂಡಾಡುತ್ತ ಸಾಗಿ ಭಕ್ತಸ್ಥಲಕ್ಕೆ ಬಂದು ತಲುಪುತ್ತಾನೆ. ''ವೃಕ್ಷಕ್ಕೂ ವೃಕ್ಷದಿಂದಾದ ಫಲಕ್ಕೂ, ಅಗ್ನಿಗೂ ಅಗ್ನಿಯಿಂದಾದ ಕಳೆಗೂ ಭಿನ್ನವಿಲ್ಲದಂತೆ, ಶಿವಂಗೂ ಭಕ್ತಂಗೂ ಭಿನ್ನವಿಲ್ಲ'ವೆಂದು ಅರಿತು, ಭಕ್ತಸ್ಥಲ ಸೂರೆಗೊಂಡ 'ಬಸವಣ್ಣನ ಸೆರಗ ಸೋಂಕಿದ ಮನುಜರೆಲ್ಲ ಶಿವಗಣಂಗಳಾಗದಿಹರೆ ? ಬಸವಣ್ಣನ ವಚನಾಮೃತವ ದಣಿಯಲುಂಡು ತೇಗಿದರೆ ಪಾತಕಕೋಟಿ ಪರಿಹಾರ'ವೆಂದು ಭಕ್ತಸ್ಥಲವನ್ನು ಪ್ರವೇಶಿಸುತ್ತಾನೆ. 'ಮಾಡುವ ನಡೆ-ನುಡಿಯು ಒಂದೇ ಆದರೆ, ಮೃಡ [ಬೇರೊಂದು] ಕಡೆ ಇರದೆ ಇವರೊಡಲೊಳಿಪ್ಪನು' ಎಂದು ನಡೆ-ನುಡಿ ಸಾಮರಸ್ಯ ಸಾಧಿಸಲು ಮುಂದಾಗುತ್ತಾನೆ. ಹೀಗೆ ಇಲ್ಲಿಯ ತತ್ವ ನಿರೂಪಣೆ ಸಕ್ರಮವಾಗಿ ಸಾಗಿಬಂದಿದೆ.

ಬಸವಾದಿ ಶರಣರ ವಿಷಯವಾಗಿ ಹಂಪನಿಗೆ ವಿಶೇಷ ಭಕ್ತಿ, ಗೌರವ. ಅವರ ಉಜ್ವಲ ವ್ಯಕ್ತಿತ್ವ, ದೃಷ್ಟಿ-ಧೋರಣೆಗಳು ಈತನಿಗೆ ಆದರ್ಶ ; ಮಾರ್ಗದರ್ಶಿ. ಅಂತೆಯೇ ಬಸವ, ಚನ್ನಬಸವ, ಪ್ರಭು, ಸಿದ್ಧರಾಮ, ಅಜಗಣ್ಣ, ಅಂಬಿಗರ ಚೌಡಯ್ಯ, ನಿಜಗುಣದೇವ, ಬ್ರಹ್ಮಯ್ಯ, ಕಲಕೇತಯ್ಯ, ನಿರ್ಲಜ್ಜಶಾಂತಯ್ಯ, ಮರುಳಶಂಕರದೇವ, ಕಿನ್ನರಿ ಬ್ರಹ್ಮಯ್ಯ, ವೀರಘಂಟೆ ಮಡಿವಳ, ಮೇದರ ಕೇತಯ್ಯ, ಅಕ್ಕಮಹಾದೇವಿ, ಅಕ್ಕ ನಾಗಮ್ಮ, ನೀಲಮ್ಮ, ಮುಕ್ತಾಯಕ್ಕ, ನಿಂಬವ್ವೆ- ಮೊದಲಾದ ಶರಣ ಶರಣೆಯರನ್ನು ಪುರಾತನರು, ತೇರಸರು, ಷೋಡಶರು, ದಶಗಣರು ಮುಖ್ಯವಾದ ಅಮರಗಣಾಧೀಶ್ವರರನ್ನು ಭಕ್ತಿಯಿಂದ ನೆನೆದು, ತಾನು ಅವರ ಆಳಿನಾಳೆಂದು ವಿನೀತ ಭಾವವನ್ನು ತೋರಿದ್ದಾನೆ.

ತತ್ವವಿವೇಚನೆಯೇ ಮುಖ್ಯವಾದರೂ ಇಲ್ಲಿನ ಅನೇಕ ವಚನಗಳು ಸಾಹಿತ್ಯ ಸೊಬಗಿನಿಂದಲೂ ಕೂಡಿವೆ. ಕೆಲವಂತೂ ಬಸವಾದಿಗಳ ವಚನಗಳನ್ನು ನೆನಪಿಗೆ ತರುತ್ತವೆ. ಇಲ್ಲಿ ಬಳಸುವ ಉಪಮೆ, ದೃಷ್ಟಾಂತ, ರೂಪಕಗಳು ಹಳೆಯವೆನಿಸಿದರೂ ಮತ್ತೆ ಹೊಸ ರೂಪ ತೊಟ್ಟು ವಚನದ ಭಾವವನ್ನು ಹೆಚ್ಚು ಸ್ಫುಟಗೊಳಿಸಲು ಕಾರಣವಾಗಿವೆ.

'ಅರೆಗಾಯವಡೆದ ಉರಗಗೆ ಇರುವೆ ಮುಕುರುವಂತೆ' 'ಗುಡಿಯ ಮುಖದಿ ದೇವರ ಕಾಣ್ಬಂದದಿ' 'ಭಂಗಿಯಸೊಪ್ಪು ತಿಂದ ಬಳ್ಳು ಊಳಿಟ್ಟು ಒದರುವಂತೆ' 'ಕರಿಯ ಕಾಲೊಳಗೆ ಸಿಕ್ಕಿದ ಮರಿಯ ನಾಯಿಯಂತೆ' 'ಗೊರಲೆಯ ಹುತ್ತಕ್ಕೆ ಉರಗ ನಡೆಗೊಂಡಂತೆ' 'ಅರಸಿಲ್ಲದ ರಾಜ್ಯಕ್ಕೆ ಚೋರರ ಹಾವಳಿಯಂತೆ' 'ಉಮ್ಮತ್ತದ ಕಾಯ ಸವಿದ ಕಪಿಯಂತೆ' 'ಹಾಳೂರ ಹೊಕ್ಕರೆ ನಾಯ ಜಗಳವ ಕಂಡಂತೆ' 'ಮೇಷನ ದನಿಗೇಳಿ ಹುಲಿ

ಬಲಿಯ ಬೀಳ್ವಂತೆ' 'ಹೆಗ್ಗಣವನೊಳಹೊಗಿಸಿ ನೆಲಗಟ್ಟ, ಹೊರೆದಂತೆ' 'ಕುನ್ನಿ ಬೂದಿಯೊಳು ಹೊರಳಿದಂತೆ'–ಇಂಥ ಅನೇಕ ಉಪಮೆಗಳು ಹೆಜ್ಜೆ ಹೆಜ್ಜೆಗೂ ಕಣ್ಣುಕುಕ್ಕಿಸುತ್ತವೆ.

ರೂಪಕ ಬಳಕೆಯಲ್ಲಿಯೂ ಈ ವಚನಕಾರ ಮೇಲ್ಮೆಯನ್ನು ಮೆರೆದಿದ್ದಾನೆ. ಒಕ್ಕಲುತನದ ಎಲ್ಲ ಕ್ರಿಯೆಗಳನ್ನು ಕಾಯದೊಳಗಿನ ವಿಕಾರಗಳಿಗೆ ಹೊಂದಿಸಿ ಹೇಳಿದ ರೀತಿ ಸಾರ್ಥಕವೆನಿಸಿದೆ :

''ತನುವೆಂಬ ಹೊಲದೊಳು ಜೀವವೆಂಬ ಒಕ್ಕಲಿಗ,
ಅಜ್ಞಾನವೆಂಬ ಕೂರಿಗೆ, ಪಂಚೇಂದ್ರಿಯವೆಂಬ ತಾಳುಗಳಿಗೆ
ಪಂಚವಿಷಯವೆಂಬ ಸೆಡ್ಡಿಯಕೋಲನಿಕ್ಕಿ,
ಚಿತ್ತವೆಂಬ ಸೆಡ್ಡಿಯ ಬಟ್ಟಲಿಗೆ ಬುದ್ಧಿಯೆಂಬ ಹಸ್ತದಿಂದ
ದಶವಾಯುಗಳೆಂಬ ಬೀಜವ ಬಿತ್ತಿ, ಕರಣಾದಿಗುಣವೆಂಬ ಬೆಳೆಯ ಬೆಳೆವುತ್ತಿರೆ,
ಮನವಿಕಾರಭ್ರಮೆಯೆಂಬ ಮೂಷಕನ ಹಿಂಡು ಕವಿಯೆ,
ಅದಕ್ಕೆ ರೋಷವೆಂಬ ಬಡಿಗಲ್ಲನೊಡ್ಡಿ, ಆಸೆಯೆಂಬ ಜಂಪವಿಟ್ಟು,
ರೋಷವೆಂಬ ಬಡಿಗಲ್ಲು ಮೇಲೆ ಬೀಳೆ ಒದ್ದಾಡಿ ಒರಲೊರಲಿ ಸಾಯುತಿರೆ,
ತನುವೆಂಬ ಹೊಲನ ಕೆಡಿಸಿ, ಜೀವವೆಂಬ ಒಕ್ಕಲಿಗನ ಕೊಂದು,
ಅಜ್ಞಾನವೆಂಬ ಕೂರಿಗೆಯನುರುಹಿ, ಪಂಚೇಂದ್ರಿಯವೆಂಬ ತಾಳ ಮುರಿದು,
ಪಂಚವಿಷಯವೆಂಬ ಸೆಡ್ಡಿಯಕೋಲ ಸೀಳಿಬಿಟ್ಟು,
ಚಿತ್ತವೆಂಬ ಸೆಡ್ಡಿಯಬಟ್ಟಲನೊಡದು, ಬುದ್ಧಿಯೆಂಬ ಹಸ್ತದ ಸಂದ ತಪ್ಪಿಸಿ,
ದಶವಾಯುಗಳೆಂಬ ಬೀಜವ ಹುರಿದು,
ಕರಣೇಂದ್ರಿಯವೆಂಬ ಬೆಳೆಯ ಕೊಯಿದು ಕೆಡಿಸಿ,
ನಿಃಕರಣವಾಗಿ ನಿಜಲಿಂಗಪದವ ಸಾರಿಪ್ಪ ಶರಣಂಗೆ
ನಮೋ ನಮೋ ಎಂಬೆನಯ್ಯಾ ಪರಮಗುರು ಪಡುವಿಡಿ
ಸಿದ್ಧಮಲ್ಲಿನಾಥಪ್ರಭುವೆ''. ೧೫೨

ಇದೇ ಕಾಯವನ್ನು ಪುರಕ್ಕೆ ಹೋಲಿಸಿ ಹೇಳುವ ಇನ್ನೊಂದು ವಚನ ಹೀಗಿದೆ :

''ನಗನೂರ ಠಾಣ್ಯದ ತೆಳಗಿಪ್ಪ ಇಪ್ಪತ್ತೈದು ಹಳ್ಳಿಯ ಸಾಗಿಸಿ
ಕೋರನಡೆಸುವ ಕಾರಕೂನರೈವರು, ಕಾಡ ಹೊಲನ ಕಂಡಣೆಯ ಮಾಡುತಿರೆ,
ಹಾರುವರು ಹರಿಕಾರರು, ಗೌಡರಿಬ್ಬರು ಗೊಮಗುಸುಕರು.
ಊರೊಳಹೊರಗೆ ಬಾರದ ಸೇನಬೋವರು
ಕಿಂಚಿತು ಉಳಿಯಗೊಡದ ಠೇವಣೆಯನಿಕ್ಕುವರು.
ಹೃದಯಧರರು ಹುಸಿಕಾರರು, ರಾಶಿಯನೊಕ್ಕುವ ಒಕ್ಕಲಿಗರು ವಂಚಕರು.
ಊರಪಂಚಾಳರು ಪ್ರಪಂಚಿಗಳು, ಅಗಸ ಮೈಲಿಗೆಗಳ್ಳ,
ನಾಯಿಂದ ಕೇಶಭುಂಜಕ, ಕುರುಬ ಭುಸಗೊಂಡ, ಕುಂಬಾರ ತಿಗುರಿಸುತ್ತಳ,
ತಳವಾರರು ಮರೆದೊರಗುವರು, ಬಾರಿಕ ಬಲು ಬೆದಕ,
ಹೊಲೆಯ ಹುಸಿಕಾರ, ಮಾದಿಗ ಮಾಂಸಭುಂಜಕ.

ರಾಜ್ಯದ ತಪ್ಪ ವಿಚಾರಿಸುವ ರಾಜ ಮಹಾಕ್ರೋಧಿ ; ಪರಿವಾರ ಬಾಧಕರು.
ಇಂತಿವರೊಳೊಬ್ಬನೂ ಮೋಹಿಯಲ್ಲ ! ನಾನೆಂತು ಜೀವಿಪೆನಯ್ಯಾ ?
ಕಾಯಪುರದ ಸಂಭ್ರಮದ ಮಾಯಾಪಾಶಕೆನ್ನನಿಕ್ಕಿ ನೀನಗಲಿದೆಯಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ''. ೬೪

ಈ ಕಾಯವನ್ನು ಕೈಲಾಸದೊಡನೆ ಸಮೀಕರಿಸಿ ಹೇಳುವ ಮತ್ತೊಂದು ವಚನವೂ ಉಂಟು :

''ಕೈಲಾಸವೆಂಬುದು ಬೇರಿಲ್ಲ ಕಾಣಿರೋ.
ಲಿಂಗಾಂಗಸಂಗ ಸಮರಸದಲ್ಲಿಪ್ಪ ಶರಣನ ಅಂತರಂಗದಲ್ಲಿ ಕೈಲಾಸವಿಪ್ಪುದು.
ಎಂತಿಪ್ಪುದೆಂದರೆ ಹೇಳುವೆ ಕೇಳಿರಣ್ಣಾ :
ಆಚಾರ–ಕ್ರಿಯೆಗಳೆಂಬ ಕೋಟೆ–ಕೊತ್ತಳಂಗಳು,
ಶುಚಿ–ಶೀಲಗಳೆಂಬ ಅಗಳಂಗಳು.
ಪುಣ್ಯಪಾಪಗಳೆಂಬೆರಡ ನೋಡಿ ನಡೆದುದೆ ಕೈಲಾಸದ ಹೆಬ್ಬಾಗಿಲು ಕಾಣಿರೋ.
ಧರ್ಮಸಂಜೆಗಳೆಂಬ ದಾರುವಂದಲಗಳು,
ಕರ್ಮವಮೆಟ್ಟಿ ನಡೆದುದೆ ಹೊಸ್ತಿಲ ಸ್ತರ.
ಶಿವಭಕ್ತಿಕೀರ್ತಿವಡೆದ ವಾರ್ತೆಯೆಂಬ ಹುಲಿಮುಖ,
ಡೆಂಕಣಿ ಮೇರುವೆ ಕಾಣಿರೋ.
ಜ್ಞಾನಸುಜ್ಞಾನದೊಳು ಬೆರಸುತಿಪ್ಪುದೆ ಸೋಮಬೀದಿ ಸೂರ್ಯಬೀದಿ ಕಾಣಿರೋ.
ಅರುವೆಂಬುದನಾಚರಿಸುವುದೇ
ಶಿವ ಮೂರ್ತವ ಮಾಡುವ ಸಿಂಹಾಸನ ಕಾಣಿರೋ.
ಮರವೆಂಬ ಮಾಯವ ಮೆಟ್ಟಿ ನಡೆದುದೆ
ಸಿಂಹಾಸನವನೇರುವುದಕ್ಕೆ ಪಾವಟಿಗೆ ಕಾಣಿರಣ್ಣಾ.
ಇಂತಪ್ಪ ಶೃಂಗಾರವೆಲ್ಲ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭು
ಒಲಿದ ಶಿವಶರಣನಂತರಂಗದಲ್ಲೆ ಇದ್ದಿತ್ತು''.

ಸರಳ ವಚನಗಳಂತೆ ಬೆಡಗಿನ ವಚನಗಳನ್ನೂ ಈತ ತುಂಬ ಸೊಗಸಾಗಿ ಬರೆದಿದ್ದಾನೆ :

''ವನದೊಳಿಪ್ಪ ಕಪಿ ವನವ ನುಂಗಿ, ವನದ ತಿಳಿಗೊಳನ ನುಂಗಿ,
ತಿಳಿಗೊಳದೊಳಗಿಪ್ಪ ಕಮಲವ ನುಂಗಿ, ಕಮಲದ ಪರಿಮಳವ ನುಂಗಿ,
ವಾಯುವಿನೇಣಿಯಿಂದ ಆಕಾಶಕ್ಕೆ ಹಾರಿದುದಿದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥ ಪ್ರಭುವೆ''. ೧೪೨

ಮನೋವಿಕಾರದ ಸುಂದರ ಚಿತ್ರವಿದು.

ಸಮಕಾಲೀನ ಸಮಾಜದಲ್ಲಿ ಕಂಡುಬರುವ ಮೂಢನಂಬಿಕೆಗಳನ್ನು ವಿಡಂಬಿಸುವುದು ಈ ವಚನಕಾರನ ಇನ್ನೊಂದು ವೈಶಿಷ್ಟ್ಯ. ಗುರುಕೊಟ್ಟ ಇಷ್ಟಲಿಂಗ ಬಿಟ್ಟು ಅನ್ಯದೈವಕ್ಕೆ ಹರಿವವರನ್ನು 'ಸೂಳೆಗೆ ಹುಟ್ಟಿದ ಮಗು ಕಂಡಕಂಡವರಿಗೆ ಅಪ್ಪಾ ಎಂದು

ಕರೆವಂತೆ ಕರೆಯುವ ಸಂತೆ ಸೂಳೆಮಕ್ಕಳೆಂದು' ನಿಂದಿಸಿದರೆ, ಕ್ಷೇತ್ರ, ಜಾತ್ರೆ, ಲಿಂಗಗಳಿಗೆ ಎರಗುವವರನ್ನು 'ಹಸಿಹಂದರದಿ ಪಡೆದ ಗಂಡನ ವಂಚಿಸಿ ವಿಷಯಾತುರದಿ ಪಿಸುಣಮಾನವರನಪ್ಪುವ ಹಾದರಗಿತ್ತಿಯಂತೆ' ಎಂದು ಟೀಕಿಸಿ, 'ಇಷ್ಟಲಿಂಗವ ಮರೆದು ಬರಿಯ ಕಲ್ಲಿಗೆರಗುವ ಇಂಥ ಭ್ರಷ್ಟರಿಗೆ ಶಿವಾಚಾರವಿಲ್ಲ' ಎಂದು ಹೇಳುತ್ತಾನೆ. ಹೀಗೆಯೇ ಜಗುಲಿಯ ಮೇಲೆ ಕಲ್ಲು, ಕಂಚು, ತಾಮ್ರ, ಬೆಳ್ಳಿ ಮೊದಲಾದ ಹಲವು ಮೂರ್ತಿಗಳನ್ನಿಟ್ಟು ಪೂಜಿಸಿ, ತಮ್ಮ ತನುವಿನ ವ್ಯಾಧಿ ಹೋಗಲೆಂದು ಹರಕೆ ಹೊರುವವರನ್ನು 'ಕುನ್ನಿ ಮಾನವ'ರೆಂದು, ಮಾರಿ, ಮಸಣಿ, ಮೈಲಾರ, ಮಲ್ಲಾರಿ, ಕೇತು ಭೂತವೆಂಬ ಕೀಳುದೈವಕ್ಕೆ ಮೊರೆಹೋಗಿ, ಹರಕೆಹೊತ್ತು, ಕೊರಳಲ್ಲಿ ಕವಡಿ ಕಟ್ಟಿ, ಡೋಣಿಯಲ್ಲಿ ಉಂಡು ನಾಯಂತೆ ಬೊಗಳುವುದು, ಬೇವಿನುಡುಗೆ ಸುತ್ತಿಕೊಳ್ಳುವುದು, ಬೆತ್ತಲೆಸೇವೆ ಸಲ್ಲಿಸುವುದು, ಸಿಡಿಯಾಡುವುದು, ಶಸ್ತ್ರಹಾಕಿಕೊಳ್ಳುವುದು, ಬೆಂಕಿ ಹೊರುವುದು, ಕೆಂಡ ಹಾಯುವುದು– ಇವೇ ಮೊದಲಾದ ವಿಕೃತ ಕಾರ್ಯ ಮಾಡುವವರನ್ನು ಅಜ್ಞಾನಿ ಹೊಲೆಯರೆಂದು ಕಟುವಾಗಿ ಬಯ್ಯುತ್ತಾನೆ. 'ಕಿರುಕುಳ ದೈವಕ್ಕೆ ಹರಕೆ ಹೊರುವವ ಭಕ್ತನೂ ಅಲ್ಲ, ಭವಿಯೂ ಅಲ್ಲ' ಎಂದು ನುಡಿಯುತ್ತಾನೆ. ಕೊನೆಗೆ 'ದೇಹದೇವಾಲಯದ ಮಧ್ಯದಲ್ಲಿ ಭಾವಿಸುತ್ತಿಪ್ಪ ಶಿವಲಿಂಗದ ಗೊತ್ತಿನ ಸುಖದ ಪರಿಣಾಮದ ಭಕ್ತಿಯ ನಿರಾಲಂಬವನೆನಗೆ ಕೃಪೆಮಾಡೆ'ಂದು ಇಷ್ಟದೈವದಲ್ಲಿ ಬೇಡಿಕೊಳ್ಳುತ್ತಾನೆ.

ಹೇಮಗಲ್ಲ ಹಂಪ ಒಬ್ಬ ಅನುಭಾವಿಯಾಗಿರುವುದರಿಂದ ಆತ ಆಡಿದ ಅನೇಕ ಮಾತುಗಳು ಅನುಭಾವದ ಅಮೃತಬಿಂದುಗಳಾಗಿ ಪರಿಣಮಿಸಿವೆ. ಅವುಗಳಲ್ಲಿ ಆತನ ಪ್ರತಿಭೆ, ಲೋಕಾನುಭವ, ಶಿವಾನುಭವ ಕೆನೆಗಟ್ಟಿ ನಿಂತಿದೆ :

''ನಾಯಬಾಲವ ನಂಬಿ ಹೊಳೆ ದಾಟಿದವರುಂಟೆ ?
ವೃಷಭನ ಬಾಲವ ಪಿಡಿದರೆ ತಡಿಯ ಸೇರುವರಲ್ಲದೆ''
''ಆಡಿನ ಕೊರಳಲ್ಲಿ ಮೊಲೆಯಿದ್ದರೇನು ಅಮೃತವ ಕರೆಯಬಲ್ಲುದೆ ?''
''ಅನ್ನದ ಗೊಡವಿಲ್ಲದಾತಂಗೆ ಆರಂಬದ ಗೊಡವಿಯುಂಟೆ ?''
''ಉಳಿ ಬಾಚಿಂಗೆ ಹರಿಯದ ಕೊರಡು ಕೊಡಲಿ ಕುಡುಗೋಲಿಗೆ ಹರಿವುದೆ ?''
''ಕಾಳಿ ಹೊಲೆಯನದಾದಡೇನು ಬಿರಿದು ಒಡೆಯನದು ?''
''ಕಡಿಯಲರಿಯದವ ಹಿಡಿದರೇನಾಯುಧವ ?''
''ಓಡಿನಲ್ಲುಂಟೆ ಕನ್ನಡಿಯ ನೋಟವು ?''
''ನಡೆಯಲಾರದ ಹೆಳವಂಗೆ ಅಂಧಹೆಂಡತಿದೊರೆತರೆ ನಡೆವುದೇನಯ್ಯಾ
ಅವರ ಜೀವಿತರೂಪ ?''
''ಉರಿಯುತಿಹ ಅಗ್ನಿಗೆ ಸೀತದ ಭಯವುಂಟೇನಯ್ಯ ?''
''ಪಟ್ಟವ ಕಟ್ಟಿದ ಮೇಲೆ ಲಕ್ಷಣವನರಸಲುಂಟೆನಯ್ಯ ?''
''ವಾರಿಯಿಲ್ಲದ ಕೆರೆಗೆ ಹಾರೈಸಿಬಂದ ತು[ರುವಿನ]ಂತೆ,
ಬೂರದ ಮರಕ್ಕೆ ಹಾರೈಸಿಬಂದ ಗಿಳಿಹಿಂಡಿನಂತೆ,
ನಳಿನವಿಲ್ಲದ ಕೊಳಕೆರಗಿದಳಿವಿಂಡಿನಂತೆ''.

''ಹುಟ್ಟದ ಮುನ್ನ ಬೆಳೆವ ಶಿಶುವ ಹೆಸರಿಟ್ಟು ಕರೆವವರಾರೂ ಇಲ್ಲ.''

ಹಂಪ ಹನ್ನೆರಡನೆಯ ಶತಮಾನದ ಶರಣರ, ಅದರಲ್ಲಿಯೂ ಬಸವಣ್ಣನವರ ವಚನಗಳಿಂದ ಬಹಳಷ್ಟು ಪ್ರಭಾವಿತನಾಗಿದ್ದಾನೆ. ಅವರ ವಚನಗಳ ವಸ್ತು-ಭಾವ-ಧಾಟಿ-ಧೋರಣೆಗಳನ್ನು ಧಾರಾಳವಾಗಿ ತನ್ನವಾಗಿಸಿಕೊಂಡಿದ್ದಾನೆ. ಕೆಲವು ವಾಕ್ಯಗಳನ್ನು ಯಥಾವತ್ತಾಗಿ ಎತ್ತಿಕೊಂಡಿದ್ದಾನೆ. ಇಲ್ಲಿ ಕೆಲವನ್ನು ಉದಾಹರಿಸಬಹುದು :

''ತೆರಣಿಯ ಹುಳು ತನ್ನ ಮನೆಯೊಳಗೆ ತಾನೆ ಸುತ್ತಿಕೊಂಡು ಸಾವಂತೆ''

''ಪಂಕದೊಳು ಬಿದ್ದ ಪಶುವಿನಂತೆ''

''ಸಾಸುವೆಯ ಮೇಲೆ ಸಾಗರ ಹರಿವುದ ಕಂಡೆ''

''ಊರ ಸೀರೆಗೆ ಅಗಸ ಬಡದು ಸಾವಂತೆ''

''ಬಡವನೆಡವಿ ಧನವ ಕಂಡಂತೆ, ಬಿಡದೆ ಅರಸುವ ಬಳ್ಳಿ
ಕಾಲತೊಡರಿ ಬಂದಂತೆ''

''ಆನೆಯ ಮೇಲೆ ಹೋಗುವವಂಗೆ ಶ್ವಾನನ ಭಯವುಂಟೇನಯ್ಯಾ ?''

''ಮನದ ಗಂದೆಯ ತುರುಸಿದರೆ ಸುಖವಾಗುತ್ತಿದೆ''

ಮಾಯಾವಿಡಂಬನಸ್ಥಲ, ಮಾಯಾತಮಂಧನಿರಸನಸ್ಥಲ, ಸಂಸಾರಹೇಯಸ್ಥಲದ ಅನೇಕ ವಚನಗಳು ಬಸವಣ್ಣನವರ ವಚನಗಳ ಪಡಿಯಚ್ಚಾಗಿವೆ. ಆದರೆ ಅಲ್ಲಿರುವ ಸಂಕ್ಷಿಪ್ತತೆ, ಭಾವತೀವ್ರತೆ, ಅನನ್ಯತೆ ಇಲ್ಲಿಲ್ಲ. ಅನೇಕ ವಚನಗಳು ದೀರ್ಘವಾಗಿವೆ. ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳನ್ನು ಪ್ರಮಾಣವಾಕ್ಯವಾಗಿ ಬಳಸಿಕೊಳ್ಳಲಾಗಿದೆ.

ಹೇಮಗಲ್ಲ ಹಂಪ ಸಂಗೀತಜ್ಞನೂ ಆಗಿದ್ದಂತೆ ತೋರುತ್ತದೆ. ಸ್ವರವಚನಗಳನ್ನು ರಚಿಸಿರುವುದು, ಅವುಗಳಿಗೆ ರಾಗ ಸೂಚನೆ ಮಾಡಿರುವುದು ಇದಕ್ಕೆ ನಿದರ್ಶನ. ಇವು ಆತ ಹೆಸರಿಸುವ ರಾಗಗಳು : ದೇಶಿ, ಮಧುಮಾಧವಿ, ಶಂಕರಾಭರಣ, ಶಾಂತ ಭೈರವಿ, ಸಾರಂಗ, ಭೂಪಾಳಿ, ಕನ್ನಡಕಾಂಬೋಧಿ, ವರಾಳಿ, ಆಹೇರಿ, ಧನಶ್ರೀ, ಮಲಹರಿ, ಭೈರವಿ, ದೇಶವರಾಳಿ, ಪಹಾಡಿ, ನಾದರಾಮಕ್ರೀ.

ಸ್ವತಃ ಕರ್ತೃವೇ ಈ ಕೃತಿಯನ್ನು ಸ್ಥಲ, ಸೂತ್ರವಿಟ್ಟು, ವಚನ, ಸ್ವರವಚನ, ರಗಳೆ, ಕಂದಗಳನ್ನು ಬೆರೆಸಿ ಸಂಯೋಜಿಸಿರುವುದರಿಂದ, ಇದನ್ನು ಮೂಲಸ್ವರೂಪದಲ್ಲಿಯೇ ಉಳಿಸಿಕೊಂಡು ಬರಲಾಗಿದೆ. ಹೀಗಾಗಿ ಇಲ್ಲಿ ಸ್ವರವಚನ-ರಗಳೆ-ಕಂದಗಳು ಅನಿವಾರ್ಯವಾಗಿ ಉಳಿದುಬಂದಿವೆ. ಪ್ರತಿಸ್ಥಲಕ್ಕೆ ಒಂದರಂತೆ ಸ್ವರವಚನವನ್ನು ಜೋಡಿಸುವಲ್ಲಿ ಆತನಿಗೆ ಏಕೋತ್ತರಸ್ಥಲ, ವೀರಶೈವ ಚಿಂತಾಮಣಿ, ಸೂಕ್ಷ್ಮಮಿಶ್ರ ಷಟ್‌ಸ್ಥಲದಂಥ ಕೃತಿಗಳು ಪ್ರೇರಣೆ ನೀಡಿರಬೇಕು.

ಪರಂಪರೆಯ ಪ್ರಭಾವಕ್ಕೊಳಗಾಗಿಯೂ ತನ್ನತನವನ್ನು ಉಳಿಸಿಕೊಂಡುದು, ಶಂಕರದೇವರ ಕಂದಗಳನ್ನು ಪ್ರಥಮ ಬಾರಿಗೆ ವಚನಗಳ ಮಧ್ಯ ಸಂಸ್ಕೃತ ಸಾಕ್ಷಿ ಶ್ಲೋಕಗಳಂತೆ ಬಳಸಿದುದು, ರಗಳೆ, ಕಂದಗಳನ್ನು ಕರ್ತೃವೇ ಬರೆದು ಒಂದು ಸ್ಥಲಾಂತ್ಯದಲ್ಲಿ ಅಳವಡಿಸಿದುದು-ಇವೆ ಮೊದಲಾದ ವೈಶಿಷ್ಟ್ಯಗಳನ್ನು ಹೊಂದಿದ 'ಹೇಮಗಲ್ಲ ಷಟ್‌ಸ್ಥಲ' ಸಂಪೂರ್ಣ ಲಭ್ಯವಾಗದಿದ್ದರೂ ಬಸವೋತ್ತರಯುಗದ ಒಂದು ಗಮನಾರ್ಹ ಕೃತಿಯೆನಿಸಿದೆ.

**ಪರಿಷ್ಕರಣ :**

ಈ ಸಂಪುಟದಲ್ಲಿ ಸೇರಿದ ಏಳು ಜನ ವಚನಕಾರರಲ್ಲಿ ಹೇಮಗಲ್ಲ ಹಂಪನೊಬ್ಬನ ವಚನಗಳನ್ನು ಬಿಟ್ಟು ಉಳಿದವರ ವಚನಗಳೆಲ್ಲ ಈಗಾಗಲೇ ಪ್ರಕಟವಾಗಿವೆ. ಅವುಗಳನ್ನು ಆಯಾ ಪ್ರಕಟಿತ ಕೃತಿಗಳಿಂದ ತೆಗೆದುಕೊಂಡು, ಲೋಪದೋಷಗಳನ್ನು ಸರಿಪಡಿಸಿ ಸ್ವೀಕರಿಸಿದರೆ, ಹಂಪನ ವಚನಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಾಂಡಾರದ ಎರಡು ಕಾಗದ ಪ್ರತಿ (೯೦, ೩೫೨)ಗಳಿಂದ ಪರಿಷ್ಕರಿಸಿ ಅಳವಡಿಸಿಕೊಳ್ಳಲಾಗಿದೆ. ಒಂದು ಪ್ರತಿ (೯೦) ಪಿಂಡಸ್ಥಲದ ೧೯ನೆಯ ವಚನಕ್ಕೆ ನಿಂತಿದ್ದರೆ, ಇನ್ನೊಂದು (೩೫೨) ಭಕ್ತಸ್ಥಲದ ೯ನೆಯ ವಚನದ ವರೆಗೆ ಸಾಗಿಬಂದಿದೆ. ಇದೂ ತುಂಬ ಅಶುದ್ಧವಾಗಿದೆ. ಹಲವು ವಚನಗಳ ಕೆಲವು ಪದ–ಸಾಲುಗಳು ಬಿಟ್ಟುಹೋಗಿವೆ. ಸಾಧ್ಯವಿದ್ದಲ್ಲಿ ಮಾತ್ರ ಹಾಗೆ ಬಿಟ್ಟು ಹೋದ ಪದ–ಪದ ಪುಂಜಗಳನ್ನು ಊಹಿಸಿ ಚೌಕಕಂಸಿನಲ್ಲಿ ಕೊಡಲಾಗಿದೆ. ಪ್ರಾದೇಶಿಕ ಭಾಷೆಯ ವೈಶಿಷ್ಟ್ಯಗಳೆನಿಸಿದ ಗ್ರಾಮೀಣ ಪದಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ವಚನ ಮಧ್ಯದಲ್ಲಿ ಬಳಸಿದ ಸಂಸ್ಕೃತ ಶ್ಲೋಕಗಳು ತುಂಬ ವಿಕೃತಗೊಂಡಿವೆ. ಅವುಗಳನ್ನು ಸಂಸ್ಕೃತ ಪಂಡಿತರಿಂದ ತಿದ್ದಿಸಲಾಗಿದೆ. ತಿದ್ದಲು ಸಾಧ್ಯವಿಲ್ಲದಂಥವುಗಳನ್ನು ಪ್ರಶ್ನೆಚಿಹ್ನೆ ಹಾಕಿ ಹಾಗೇ ಇಡಲಾಗಿದೆ.

ಸಿದ್ಧಮಲ್ಲಪ್ಪನ ವಚನಗಳು– ವಾಕ್ಯದೋಷ, ಅರ್ಥ ಅಸ್ಪಷ್ಟತೆಯಿಂದ ಕೂಡಿವೆ. ಏಕಮಾತ್ರ ಹಸ್ತಪ್ರತಿ ದೊರೆತುದರಿಂದ–ಅದೂ ತುಂಬ ಅಶುದ್ಧವಾಗಿರುವುದರಿಂದ– ಈ ವಚನಗಳನ್ನು ಪೂರ್ಣ ಶುದ್ಧರೂಪದಲ್ಲಿ ಕೊಡಲು ಸಾಧ್ಯವಾಗಿಲ್ಲ.

**ಕೃತಜ್ಞತೆಗಳು :**

'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯನ್ನು ಅಂಗೀಕರಿಸಿ, ಧನಸಹಾಯ ನೀಡಿದ ಕರ್ನಾಟಕ ಸರಕಾರಕ್ಕೆ, ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೆ, ಈ ಸಂಪುಟ ಸಿದ್ಧಪಡಿಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಸಲಹಾ ಸಮಿತಿಯ ಎಲ್ಲ ಸದಸ್ಯರಿಗೆ, ಈ ಸಂಪುಟಗಳ ಪ್ರಧಾನ ಸಂಪಾದಕರಾಗಿ ನಮಗಿಂತಲೂ ಹೆಚ್ಚು ಕಾರ್ಯವನ್ನು ಮಾಡುತ್ತ, ನಮ್ಮನ್ನೂ ಕಾರ್ಯಪ್ರವೃತ್ತಗೊಳಿಸಿ, ಪರಿಷ್ಕರಣ ಸಮಯದಲ್ಲಿ ಎದುರಾದ ಎಲ್ಲ ಸಮಸ್ಯೆಗಳಿಗೆ ಪರಿಹಾರನೀಡಿ ಮುನ್ನಡೆಸಿದ–ಕ್ರಿಯಾಶೀಲತೆಗೆ ಮತ್ತೊಂದು ಹೆಸರೆನಿಸಿದ–ಗುರುಗಳಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಅನಂತ ನಮಸ್ಕಾರಗಳು.

ಈ ಸಂಪುಟ ಸಿದ್ಧಪಡಿಸುವಲ್ಲಿ ನೆರವಾಗಿ ನಿಂತ ಕೈಗಳು ಅನೇಕ. ತುಂಬ ಪರಿಶ್ರಮ ವಹಿಸಿ, ಹಸ್ತಪ್ರತಿಯಿಂದ ವಚನಗಳನ್ನು ಎತ್ತಿತೆಗೆದು, ಕಣ್ಣಲ್ಲಿ ಕಣ್ಣಿಟ್ಟು ಪರಿಷ್ಕರಿಸಿ, ಮುದ್ರಣದ ಮನೆಸೇರುವ ಹಂತಕ್ಕೆ ಬಂದಿದ್ದ ಹೇಮಗಲ್ಲ ಷಟ್‌ಸ್ಥಲದ ಶುದ್ಧಪ್ರತಿ ಯನ್ನು ಸಂತೋಷದಿಂದ ಕೊಟ್ಟು ಉಪಕರಿಸಿದ ಸ್ನೇಹಿತರಾದ ಡಾ. ಬಿ. ವಿ. ಶಿರೂರ ಅವರಿಗೆ ಚಿರಋಣಿಯಾಗಿದ್ದೇನೆ. ನಾನು ಹೋದಾಗಲೆಲ್ಲ ಪ್ರೀತಿಯಿಂದ ಬರಮಾಡಿ

ಕೊಂಡು, ಕೈಯಲ್ಲಿನ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ, ಸಂಸ್ಕೃತ ಶ್ಲೋಕಗಳನ್ನು ಸಂತೋಷ ದಿಂದ ಸರಿಪಡಿಸಿಕೊಟ್ಟ ಡಾ. ಮಲ್ಲಿಕಾರ್ಜುನ ಪರಡ್ಡಿ, ಪಂ. ಜಯತೀರ್ಥಾಚಾರ ಮಳಗಿ ಅವರಿಗೆ ಅನಂತ ವಂದನೆಗಳು.

ವಚನಗಳನ್ನು ಆಯ್ದು ತೆಗೆಯುವಲ್ಲಿ, ಜೋಡಿಸುವಲ್ಲಿ, ಪರಿಷ್ಕರಿಸಿ ಶುದ್ಧಪ್ರತಿ ಸಿದ್ಧಗೊಳಿಸುವಲ್ಲಿ, ಅನುಬಂಧ ಅನುಗೊಳಿಸುವಲ್ಲಿ–ಹೀಗೆ ಹಲವು ಹಂತಗಳಲ್ಲಿ ಸಹಾಯ ಹಸ್ತನೀಡಿ ಸಹಕರಿಸಿದವರು ಮಿತ್ರರಾದ ಬಸವರಾಜ ಹೂಗಾರ, ಬಿ. ಬಿ. ಬಿರಾದಾರ, ಸಂಶೋಧನ ವಿದ್ಯಾರ್ಥಿಮಿತ್ರ ಎಫ್. ಟಿ. ಹಳ್ಳಿಕೇರಿ, ಈ ಯೋಜನೆಯ ಸಹಾಯಕ ಸಂಶೋಧಕರಾದ ಕು. ವಿಜಯಶ್ರೀ ಹಿರೇಮಠ, ವಾಯ್. ಎಂ. ಯಾಕೊಳ್ಳಿ, ಬಿ. ವಿ. ಕೋರಿ ಮತ್ತು ನನ್ನ ಶ್ರೀಮತಿ ಮಂಗಳಾ ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

## ಮರುಪರಿಷ್ಕರಣ

ಈ ಸಂಪುಟವನ್ನು ಹೊಸದಾಗಿ ದೊರೆತ ಹೆಚ್ಚಿನ ಆಕರಗಳ ಹಾಗೂ ವಿದ್ವಾಂಸರು ಸೂಚಿಸಿದ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಮರುಪರಿಷ್ಕರಣಗೊಳಿಸಲಾಗಿದೆ. ಅದರಿಂದಾಗಿ ಈ ಕೆಳಗಿನಂತೆ ಬದಲಾವಣೆಗಳು ಉಂಟಾಗಿವೆ :

* ಇಬ್ಬರು ವಚನಕಾರರ (ಮೆಡ್ಲೇರಿ ಶಿವಲಿಂಗ ಮತ್ತು ವೀರಸಂಗಯ್ಯ) ೧೩೫ ವಚನಗಳು ಹೆಚ್ಚಿಗೆ ಸೇರಿವೆ. ಹೀಗಾಗಿ ಒಟ್ಟು ವಚನಸಂಖ್ಯೆ ೧೧೩೮ ಇದ್ದುದು ೧೨೭೩ಕ್ಕೆ ಏರಿದೆ. ವಚನಕಾರರ ಸಂಖ್ಯೆ ೭ ಇದ್ದುದು, ೯ ಆಗಿದೆ.
* ಮುದ್ರಣದೋಷ–ಪಾಠದೋಷಗಳನ್ನು ಸರಿಪಡಿಸಲಾಗಿದೆ.
* ಹೊಸದಾಗಿ ಸೇರಿದ ವಚನಕಾರರ ಪರಿಚಯವನ್ನು ಪ್ರಸ್ತಾವನೆಯಲ್ಲಿ ಜೋಡಿಸ ಲಾಗಿದೆ.
* ಅನುಬಂಧದಲ್ಲಿ ಹೊಸದಾಗಿ ಸೇರಿದ ವಚನಗಳ ಅಕಾರಾದಿ ಅಳವಡಿಸಲಾಗಿದೆ.
* ವಚನಕ್ರಮಾಂಕವನ್ನು ಒಂದರಿಂದ ಆರಂಭಿಸಲಾಗಿದೆ.
* ಹೊಸದಾಗಿ ದೊರೆತ ಮೆಡ್ಲೇರಿ ಶಿವಲಿಂಗನ ವಚನಗಳನ್ನು ಒದಗಿಸಿದ ಡಾ. ವೈ. ಸಿ. ಭಾನುಮತಿ ಅವರಿಗೆ, ವೀರಸಂಗಯ್ಯನ ವಚನಗಳನ್ನು ದೊರಕಿಸಿಕೊಟ್ಟ ಎಸ್. ಶಿವಣ್ಣ ಅವರಿಗೆ ಕೃತಜ್ಞತೆಗಳು.
* ಈ ಸಂಪುಟ ಮರುಪರಿಷ್ಕರಣ ಕಾರ್ಯದಲ್ಲಿ ಅಮೂಲ್ಯ ಸಲಹೆ ಸೂಚನೆ ನೀಡಿದ ಪ್ರಧಾನ ಸಂಪಾದಕರೂ ಪೂಜ್ಯಗುರುಗಳೂ ಆದ ಡಾ. ಎಂ. ಎಂ. ಕಲಬುರ್ಗಿ ಅವರು ಹಾಗೂ ಸಲಹಾ ಸಮಿತಿಯ ಎಲ್ಲ ಸದಸ್ಯರಿಗೆ, ತಿದ್ದುಪಡಿ ಸೂಚಿಸಿದ ತುಮಕೂರಿನ ಎಂ. ಚಂದ್ರಪ್ಪ ಅವರಿಗೆ, ಕರಡು ತಿದ್ದುವಲ್ಲಿ ಸಹಕರಿಸಿದ ನನ್ನ ಶ್ರೀಮತಿ ಮಂಗಳಾ ಅವರಿಗೆ ವಂದನೆಗಳು.

–ವೀರಣ್ಣ ರಾಜೂರ

■■

## ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

೧. ಮೂರುಸಾವಿರ ಮುಕ್ತಿಮುನಿ ವಿರಚಿತ ಸರ್ವಾಚಾರ ಸಾರಾಮೃತಸುಧೆ ೧

೨. ಮೆಡ್ಲೇರಿ ಶಿವಲಿಂಗನ ವಚನ ೧೧೮

೩. ವೀರಣ್ಣದೇವರ ವಚನ ೧೨೦

೪. ವೀರಸಂಗಯ್ಯನ ವಚನ ೧೨೯

೫. ಷಣ್ಮುಖಸ್ವಾಮಿಗಳ ಷಟ್‌ಸ್ಥಲ ವಚನ ೧೬೭

೬. ಸಂಗನಬಸವೇಶ್ವರದೇವರ ವಚನ ೪೩೩

೭. ಸಿದ್ಧಮಲ್ಲಪ್ಪನ ವಚನ ೪೩೯

೮. ಸಿದ್ಧವೀರದೇಶಿಕೇಂದ್ರನ ವಚನ ೪೫೧

೯. ಹೇಮಗಲ್ಲ ಹಂಪನ ಹೇಮಗಲ್ಲ ಷಟ್‌ಸ್ಥಲ ೪೫೨

ಅನುಬಂಧ

ವಚನಗಳ ಅಕಾರಾದಿ ೫೯೭

ಕಠಿಣ ಪದಕೋಶ ೬೧೬

ಆಕರ ಗ್ರಂಥಗಳು ೬೫೫

# ಮೂರುಸಾವಿರ ಮುಕ್ತಿಮುನಿ ವಿರಚಿತ
# ಸರ್ವಾಚಾರ ಸಾರಾಮೃತಸುಧೆ

೧

ಪ್ರಥಮದಲ್ಲಿ ಪೀಠಿಕಾಸೂತ್ರವದೆಂತೆಂದ್ಥೊಡೆ :
ಶೈವಪಾಷಂಡಿಗಳು ಆಚರಿಸಿದ
ಪಿಪೀಲಿಕಜ್ಞಾನ, ವಿಹಂಗಜ್ಞಾನ, ಮರ್ಕಟಜ್ಞಾನ, ಗಜಜ್ಞಾನ,
ಕುಕ್ಕುಟಜ್ಞಾನ, ಶ್ವಾನಜ್ಞಾನ, ವೇದಾಂತಜ್ಞಾನ, ಸಿದ್ಧಾಂತಜ್ಞಾನ,
ಭಿನ್ನಯೋಗ, ಚರ್ಯಾ-ಕ್ರಿಯಾ-ಕರ್ಮಜ್ಞಾನಂಗಳನ್ನು ತೊರೆದು
ಕೇವಲ ಸುಜ್ಞಾನವೆ ಚಿತ್ಪಿಂಡಾಕೃತಿಯ ಧರಿಸಿ,
ಆ ಪಿಂಡಮಧ್ಯದಲ್ಲಿ ಮಹಾಜ್ಞಾನವೆ ಚಿತ್ಪ್ರಾಣವಾಗಿ ಶೋಭಿಸಿ,
ಅವೆರಡರ ಮಧ್ಯವೆ ಪರಿಪೂರ್ಣ ಸ್ವಾನುಭಾವ,
ಉನ್ಮನಜ್ಞಾನವೇ ಸಾಕಾರಲೀಲೆಯ ಧರಿಸಿ,
ಪರಮಜ್ಞಾನಾಂಜನ ಸದ್ವಾಸನಪರಿಮಳವೆ
ಕ್ರಿಯಾಭಕ್ತಿ, ಜ್ಞಾನಭಕ್ತಿ, ಮಹಾಜ್ಞಾನಭಕ್ತಿ, ನಿರವಯಭಕ್ತಿ,
ಸಚ್ಚಿದಾನಂದಭಕ್ತಿ, ಪರಿಪೂರ್ಣಭಕ್ತಿ ಮೊದಲಾದ ಷಡ್ವಿಧಭಕ್ತಿಯೆ
ಅಂತರಂಗದ ಸುಚಿತ್ತಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಸದ್ಭಾವಂಗಳಲ್ಲಿ,
ಕ್ಷೀರದೊಳು ಘೃತ, ಬೀಜದೊಳು ವೃಕ್ಷ, ಪಾಷಾಣದೊಳಗ್ನಿ ಅಡಗಿಪ್ಪಂತೆ,
ಅಂಗಾಪ್ತಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯೆ ಸಾಕಲ್ಯವಾಗಿ,

ಪುಷ್ಪದೊಳು ಪರಿಮಳ, ಫಲಾದಿಗಳಲ್ಲಿ ಫಳರಸವೆಸೆದಂತೆ,
ಫಟಸರ್ಪ ತನ್ನ ಮಾಣಿಕ್ಯದ ಬೆಳಕಿನಲ್ಲಿ ಆಹಾರವ ಕೊಂಡಂತೆ,
ಸಾಕಾರವಾಗಿ ಪರಿಶೋಭಿಸಿ, ಗುರುಚರಮಾರ್ಗದಿಂದ ಅಷ್ಟವಿಧಭಕ್ತಿವಿಡಿದು
ಬೆಳಗುವ ಮಹಾಲಿಂಗಶರಣನ ವಿವರವೆಂತೆಂದಡೆ :
ಮಹದರುವೆಂಬ ಗುರುವಿನಲ್ಲಿ ಶ್ರದ್ಧೆ,
ಮಹಾಜ್ಞಾನವೆಂಬ ಲಿಂಗದಲ್ಲಿ ನೈಷ್ಠೆ,
ಪೂರ್ಣಾನುಭಾವವೆಂಬ ಜಂಗಮದಲ್ಲಿ ಸಾವಧಾನ,
ಕರುಣಾಮೃತವೆಂಬ ಪಾದೋದಕದಲ್ಲಿ ಅನುಭಾವ,
ಕೃಪಾನಂದರಸವೆಂಬ ಪ್ರಸಾದದಲ್ಲಿ ಆನಂದ.
ಚಿದ್ಬೆಳಗಿನ ಪ್ರಕಾಶವೆಂಬ ಭಸಿತದಲ್ಲಿ ಸಮರಸ,
ದೃಗ್ವೃಷ್ಟಿ ಪುಂಜರಂಜನೆಯೆಂಬ ಮಣಿಮಾಲೆ ಕುಕ್ಷಿಗಳಲ್ಲಿ,
ನಿಃಕಳಂಕ ಆನಂದಮಯವೆಂಬ ಚಿದ್ಘೋಷ ಮಂತ್ರದಲ್ಲಿ,
ನಿರವಯಭಕ್ತಿ ಕಡೆಯಾದ ಅಷ್ಟವಿಧಭಕ್ತಿಯೆ ನಿಧಿನಿಧಾನವಾಗಿ,
ಜಗಜಗಿಸಿ ಬೆಳಗುವ ಮಹಾಲಿಂಗಶರಣಚರಗುರುಗಳ
ತನ್ನ ಸ್ವಾನುಭಾವಜ್ಞಾನದಿಂದರಿದು,
ಅಂಗ ಮನ ಪ್ರಾಣ ಭಾವ ನಿಷ್ಠಾಚಾರದಲ್ಲಿ ಸಾಕಾರಲೀಲೆಗೆ ಪಾವನಾರ್ಥವಾಗಿ,
ಷೋಡಶಭಕ್ತಿ ಜ್ಞಾನ ವೈರಾಗ್ಯ ಸ್ಥಳ ಕುಳ ಸಕೀಲ ಸಂಬಂಧಾಚರಣೆಯ
ವೀರಶೈವ ಪರಿವರ್ತನೆ ಅರ್ಪಿತಾವಧಾನ ಕೊಟ್ಟುಕೊಂಬ ನಿಲುಕಡೆ,
ಸಗುಣ ನಿರ್ಗುಣ ಸತ್ಯಶುದ್ಧಕಾಯಕ, ಸದ್ಧರ್ಮ ನಡೆನುಡಿ,
ಘನಗಂಭೀರ ಪರುಷಸೋಂಕುಗಳೆ
ಸಾರಿ ತೋರಿ ಬೀರಿ ಊರಿ ಜಾರಿ ಹಾರಿ ಸ್ವೈರೆಮೀರಿ
ಮಹಾಬಯಲೊಳಗೆ ಬಯಲಾಗಿ ತೋರುವ
ನಿಃಕಳಂಕ ನಿರಾಲಂಬ ನಿಃಪ್ರಪಂಚ ನಿರಾತಂಕ ನಿರುಪಾಧಿಕ
ನಿರ್ಭೇದ್ಯ ನಿಶ್ಚಿಂತ ನಿಃಕಾಮ ನಿಃಫಲದಾಯಕ ನಿಃಕ್ರೋಧ
ನಿರಾಸಿಕ ನಿರ್ವಾಣಿ ನಿರ್ಮರಣ ನಿರ್ಜಾತ ನಿಜಾನಂದಭರಿತಚರಿತ
ನಿರಹಂಕಾರ ನಿರ್ದೇಹ ನಿರ್ಲಂಪಟ ನಿರ್ವ್ಯಸನಿ ನಿರ್ಭಾಗ್ಯ
ನಿಃಸಂಸಾರಿ ನಿರ್ವ್ಯಾಪಾರಿ ನಿರ್ಮಲ ನಿಸ್ಸಂಗ ನಿಃಶೂನ್ಯ ನಿರಂಜನ ನಿರವಯ
ಘನಗಂಭೀರ ಪರಾತ್ಪರ ಅಗಮ್ಯ ಅಪ್ರಮಾಣ ಅಗೋಚರ ಅನಾಮಯ
ಅಗಣಿತ ಅಚಲಾನಂದ ಅಸಾಧ್ಯಸಾಧಕ ಅಭೇದ್ಯಭೇದಕ
ಅನಾದಿಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯ
ನಿರವಯಪ್ರಭು ಮಹಾಂತ ತಾನೇ ನೋಡಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧ ॥

೨

ಅಯ್ಯಾ, ನಿಜವೀರಶೈವೋದ್ಧಾರಕ ವಿಶೇಷ ಭಕ್ತ ಮಹೇಶ್ವರರು
ಮಹಾಲಿಂಗೋದಯವಾದಿಯಾಗಿ ನಿರವಯಲಿಂಗವಂತ್ಯವಾದ ಪರಿಯಂತರವು
ಸತ್ತುಚಿತ್ತಾನಂದರೂಪ ಧರಿಸಿ,
ನಿತ್ಯ ಗುರುಲಿಂಗಜಂಗಮ ಕಲ್ಯಾಣೋತ್ಸಹರಾಗಿ,
ಮಾರ್ಗಾಚಾರಂಗಳಲ್ಲಿ ಸತ್ಕ್ರಿಯಾವಧಾನ,
ಮೀರಿದಾಚಾರಂಗಳಲ್ಲಿ ಸಮ್ಯಜ್ಞಾನಾವಧಾನ,
ಸಂಪೂರ್ಣಾನಂದಭರಿತಾಚಾರಂಗಳಲ್ಲಿ ಸ್ವಾನುಭಾವದ ಸದ್ಧರ್ಮ,
ನಡೆ–ನುಡಿಯೊಳಕೊಂಡು ಬೆಳಗುವ ಪರತತ್ವ
ಶಿವಯೋಗಾನುಸಂಧಾನದ ನಿಜಾವಧಾನದಲ್ಲಿ ಸಂತೃಪ್ತರಾಗಿ,
ಬೆಳಗಿಂಗೆ ಮಹಾಬೆಳಗಾಗಿ, ತನ್ನ ತಾನೇ ಮುಕ್ತಿಸ್ವರೂಪ
ನಿರವಯಪ್ರಭು ಮಹಾಂತ ತಾನೇ ನೋಡಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೨ ||

೩

ಮುಕ್ತಿಗೆ ನಿಜಮಂದಿರವಾಗಿ ಸಾಕಾರದ ಲೀಲೆಯಿಂದ
ಚರಿಸುವ ನಿಲುಕಡೆಯೆಂತೆಂದೊಡೆ :
ಪೃಥ್ವೀಠ ಏಕಾಂತವಾಸವಾದ ಭಾವಾಪುರದ ನಿಜಾಲಯದಿಂದ
ಗಣಸಮ್ಮೇಳದ ನೆನಹುದೋರಿ, ಚಿನ್ಮಯಲೀಲೆಯಿಂ ಒರ್ವನೆ ಹೊರಟು,
ಕರಣಾಪುರದ ಚಿದ್ರೂಪಮೂರ್ತಿ ವಿಶ್ವಕುಟುಂಬ ಚಿದಾದಿತ್ಯನೊಡಗೂಡಿ,
ಆತನ ಕರಕೊಂಡು, ಅಲ್ಲಿಂದ ಕಾಯಪುರಕ್ಕೆ ಬಂದು,
ಚಿತ್ಸೂರ್ಯ ಚಂದ್ರಬೀದಿಗಳೆಂಬ ಪೂರ್ವ ಪಶ್ಚಿಮ ಉತ್ತರ ದಕ್ಷಿಣ
ನಾಲ್ಕು ಕವಾಟವ ತೆಗೆದವರ ಚೌಕಮಧ್ಯದಲ್ಲಿ ನಿಂದಾಕ್ಷಣವೆ
ಪರನಾದ ಬಿಂದು ಕಳೆಗಳೆಂಬ ಮೂಲಮಂತ್ರಧ್ಯಾನಾರೂಢನಾಗಿ,
ಪರದೆಯ ತೆಗೆದು ಸದ್ರೂಪಮೂರ್ತಿ ಚಿದ್ಘನಮಹಾನಿಜೇಷ್ಟಲಿಂಗದಲ್ಲಿ
ಕ್ರಿಯಾದೃಷ್ಟಿನಷ್ಟ.
ಅನಾದಿ ಗುರುಲಿಂಗಜಂಗಮ ಪ್ರಮಥಗಣಸಮ್ಮೇಳವ ಸ್ತೋತ್ರಂಗೈದು,
ಮಹದರುವೆಂಬ ಸದ್ಭಕ್ತಿರಸದೋರಿ ಹರುಷಾನಂದಶರಧಿ ಮೇರೆದಪ್ಪಿದಂತೆ,
ಹರಶರಣಗಣಾರಾಧ್ಯರಿಗೆ ಕರ ಶಿರ ಮನ ಬಾಗಿ ಶರಣು ಹೊಕ್ಕು,
ಭೃತ್ಯಾಚಾರಿಯಾಗಿ ಘನಮನವೇದ್ಯತ್ವದಿಂದ
ಸ್ಥೂಲ–ಸೂಕ್ಷ್ಮ–ಕಾರಣಾಚಮನಗಳೊದಗಿದಂತೆ ವಿಸರ್ಜನಂಗೈದು,
ಉದಕವ ಬಳಸಿ,
ನಿರ್ಮಲಚಿತ್ತದಿಂದ ಪಾದೋದಕ ಲಿಂಗೋದಕಂಗಳಲ್ಲಿ
ಮುಖಮಜ್ಜನವ ಮಾಡಿ,

ಶುದ್ಧಾಸನದೊಳ್ ಮೂರ್ತಿಗೊಂಡು,
ಕ್ರಿಯಾಭಸಿತ ಪತ್ರಿ ಪುಷ್ಪ ಧೂಪ ದೀಪಾರತಿ ಮೊದಲಾದ
ಪರಿಪೂರ್ಣ ದ್ರವ್ಯಗಳೊದಗಿದಂತೆ ಲಿಂಗಾರ್ಚನೆ
ಜಪಕ್ರಿಯೆಗಳ ಸಮರ್ಪಣವಮಾಡಿ,
ತನ್ನ ತಾನೆ ಬೆಳಗುವಾತ ನಿರವಯಪ್ರಭು ಮಹಾಂತ ತಾನೇ ನೋಡಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩ ॥

೪

ಸತ್ಯಶುದ್ಧ ನಡೆ ನುಡಿ ಧೃಢಚಿತ್ತ ಉಳ್ಳಾತನಾಗಿ,
ಅಲ್ಲಿಂದ ಬಹಿರ್ದೇಶಕ್ಕೆ ಹೋಗಿ,
ಶುಚಿಯಾದ ಸ್ಥಳದಲ್ಲಿ ವಾಯುಬೀಸುವ ಕಡೆಗೆ ಮುಖವಮಾಡಿ,
ಸ್ಥೂಲ ಸೂಕ್ಷ್ಮವ ವಿಸರ್ಜಿಸಿ, ಮತ್ತೊಂದು ಸ್ಥಲದಲ್ಲಿ ಕುಳಿತು,
ಮೃತ್ತಿಕೆಯಾದರೂ ಸರಿಯೆ,
ಬೂದಿಯಾದರೂ ಒದಗಿದಂತಾದ್ದು ತೆಗೆದುಕೊಂಡು,
ಶ್ಲೋಕ :
''ಲಿಂಗೇಕ ಗುಧಃಪಂಚಾನಾಂ ವಾಮಹಸ್ತಾದಶಃ ಶುಚಿಃ ।
ಉಭಯ ಕರಸಪ್ತಂ ಚ ಪಾದಂ ಚ ಪಂಚಪಂಚಕಂ ।
ಓಷ್ಟ್ರಕಂ ತ್ರಿವಿಧಶ್ಚೈವಾ ಮೃತ್ತಿಕಾ ಶೌಚಲಕ್ಷಣಂ ॥ (?)''
ಈ ಹೀಂಗೆಂದುದಾಗಿ ಹರವಾಕ್ಯಪ್ರಮಾಣಿನಿಂದ,
ಪ್ರಥಮದಲ್ಲಿ ಗುಹ್ಯಕ್ಕೆ ಒಂದು ವೇಳೆ
ಮೃತ್ತಿಕೆಯಿಂದ ಸ್ಪರಿಶನವಮಾಡಿ ತೊಳೆವುದು.
ಮತ್ತಂ, ಗುದಕ್ಕೆ ಐದು ವೇಳೆ ಸ್ಪರಿಶನವ ಮಾಡಿ ತೊಳೆವುದು.
ತೃತೀಯದಲ್ಲಿ ವಾಮಹಸ್ತಕ್ಕೆ ಹತ್ತು ವೇಳೆ ಸ್ಪರಿಶಿಸಿ ತೊಳೆವುದು.
ತಾನೊಬ್ಬನೆ ಗೋಪ್ಯವಾಗಿ ಆಚರಿಸುವುದು.
ಮತ್ತಾ, ಶಕ್ತಿಸಂಬಂಧವಾದ ಮಾರ್ಗಕ್ರಿಯೆ ಮೂರೆನಿಸುವದು.
ಅಲ್ಲಿಂದ ಬಂದು ಉಭಯ ಹಸ್ತವ ಏಳುವೇಳೆ ಸ್ಪರಿಶನವ ಮಾಡಿ
ತೊಳೆವುದೆ ಚತುರ್ಥವೆನಿಸುವುದು.
ಎರಡುಪಾದಗಳ ಐದುವೇಳೆ ಸ್ಪರಿಶನವ ಮಾಡಿ
ತೊಳೆವುದೆ ಪಂಚಮವೆನಿಸುವುದು.
ಆ ತಂಬಿಗೆಯ ಪೂರ್ವದ್ರವವನಾರಿಸಿ,
ಮೂರುವೇಳೆ ಬೆಳಗುವುದೆ ಷಡ್ವಿಧವೆನಿಸುವುದು.
ಇದು ರಹಸ್ಯಮುಖದಲ್ಲಿ ಆಚರಿಸುವುದು.
ಶಿವಸಂಬಂಧವಾದ ಮೀರಿದ ಕ್ರಿಯೆ ಮೂರೆನಿಸುವವು.
ಹೀಂಗೆ ತೊಳೆವಲ್ಲಿ ಷಟಸ್ಥಲಸಂಬಂಧವೆನಿಸುವುದು.

ಇದೆ ಪ್ರಮಥಗಣಮಾರ್ಗದ ವಿಸರ್ಜನೆಯ
ಪರಿಣಾಮದ ಗೊತ್ತು ನೋಡಿರಯ್ಯಾ
ನಿರವಯಪ್ರಭು ಮಹಾಂತನ ಒಡಗೂಡುವ ಸನ್ಮಾರ್ಗ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೪ ||

೫

ಇಂತೆಸೆವ ಸ್ಥೂಲಾಚಮನಕ್ರಿಯೆಗಳಾದಲ್ಲಿ
ಆ ತಂಬಿಗೆಯ ಪಾವುಡದಿಂದ ಒರೆಸಿ,
ಶುಚಿಯಾದ ವಸ್ತ್ರವ ಎರಡು ಪದರಿನಿಂದ ಶೋಧಿಸಿ,
ಲಿಂಗಬಾಹ್ಯರಿಗೆ ಗೋಪ್ಯವೆನಿಸಿ, ಭಕ್ತ ಜಂಗಮ ಕೂಡಿದಲ್ಲಿ,
ತಾನು ಪಾದವ ಪ್ರಕ್ಷಾಲಿಸಿ, ತನ್ನ ಮನದಲ್ಲಿ ಮೂಲಪಂಚಾಕ್ಷರದ ನೆನಹಿನಿಂದ,
ತನ್ನ ಹಸ್ತದ ಪಂಚಾಂಗುಲ, ಪಾದದ ಪಂಚಾಂಗುಲಗಳು ಸಹ ಸಮರಸವಾಗಿ,
ಅಡಿಪಾದ ಮೂರುವೇಳೆ, ಪಂಚಾಂಗುಲ ಒಂದುವೇಳೆ,
ಉಭಯಪಾದಗಳು ಎಂಟುವೇಳೆ ಸ್ಪರಿಶನವ ಮಾಡಿ,
ಮಂತ್ರಧ್ಯಾನ ಅನಿಮಿಷದೃಷ್ಟಿಯಿಂ ನಿರೀಕ್ಷಿಸಿ ನಮಸ್ಕರಿಸಿದ ಮೇಲೆ,
ತಮ್ಮಿಬ್ಬರ ಮಧ್ಯದಲ್ಲುದಯವಾದ
ಪರಮಾನಂದ ಗುರುಪಾದೋದಕವ ತಾವು ಕುಕ್ಕುಟಾಸನದಲ್ಲಿ
ತೊಡೆಯಮೇಲೆ ಪಾವುಡವ ಹಾಕಿ, ಸೆಜ್ಜೆಯ ಬಿಚ್ಚಿ,
ಲಿಂಗದೇವನ ಮೂಲಮಂತ್ರದೃಷ್ಟಿಯಿಂದ ನಿರೀಕ್ಷಿಸುವುದೆ
ನಿರವಯಪ್ರಭು ಮಹಾಂತನ ನಡೆ ನುಡಿ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೫ ||

೬

ಮತ್ತಂ, ಅಲ್ಲಿಂದ ಲಿಂಗಮೂರ್ತಿಯ ಕರಸ್ಥಲಕ್ಕೆ ಬಿಜಯಂಗೈಸುವ ವಿವರ :
ಲಿಂಗಮಸ್ತಕದಲ್ಲಿ ಅಂಗುಷ್ಠವನ್ನಿಟ್ಟು,
ಆಧಾರದಲ್ಲಿ ಅನಾಮಿಕ ಮಧ್ಯಾಂಗುಲವ ಮಡುಗಿ,
ಕನಿಷ್ಠತರ್ಜನಿಗಳ ಎಡಬಲಕೆ ನಿಲ್ಲಿಸಿ,
ಲಿಂಗಮೂರ್ತಿಯ ಸಾವಧಾನಭಕ್ತಿಗಳಿಂದ
ವಾಮಕರಸ್ಥಲ ಪಾಣಿತಾಣಕ್ಕೆ ಬಿಜಯಂಗೈಸಿ,
ಆ ಲಿಂಗದೇವನ ಸಮರಸಾನಂದ ನಿಜಾನುಭಾವದಿಂದ
ಹನ್ನೆರಡುವೇಳೆ ಜಿಹ್ವೆಪ್ರಕ್ಷಾಲನಂಗೆಯ್ದು,
ದ್ವಾದಶಾಂಗುಲ ಅಷ್ಟಾಂಗುಲ ಷಡಂಗುಲದೊಳಗೆ
ಮಧುರ ಒಗರು ಖಾರ ಆಮ್ಲ ಕಹಿ ಮೊದಲಾದ
ಕಾಷ್ಠದೊಳಗೆ ಅಯೋಗ್ಯವಾದ ಶುಷ್ಕಕಾಷ್ಠವಂ ಬಿಟ್ಟು,
ಯೋಗ್ಯವಾದಂಥಾದ್ದರೊಳಗೆ ದೊರೆದಂಥಾದ್ದೊಂದು ಕಾಷ್ಠವನು

ಆ ಪಾದೋದಕಸ್ಪರಿಶನದಿಂದೆ ಪವಿತ್ರವೆನಿಸಿ,
ಜಂಗಮಕ್ಕೆ ಕೊಟ್ಟು ತಾ ಕೊಂಡಂಥಾದ್ದ ಪ್ರಸಾದವೆನಿಸುವುದು.
ಆ ಪ್ರಸಾದವನ್ನು ಲಿಂಗಸ್ಪರಿಶನದಿಂದೆ ದಂತಪಂಕ್ತಿಗಳ ತೀಡಿ,
ಹಸ್ತಾಂಗುಲಿ ಪಾದಾಂಗುಲಿಗಳಂ ತೀಡಿದ ಮೇಲೆ
ಒಡೆದು ಎರಡು ಭಾಗವ ಮಾಡಿ ಜಿಹ್ವೆಯ ಪವಿತ್ರವಾಗಿ ಹೆರೆದು,
ಆ ನಿರ್ಮಾಲ್ಯವ ನಿಕ್ಷೇಪಸ್ಥಲದಲ್ಲಿ ಹಾಕಿ,
ಮುಖಮಜ್ಜನವ ಮಾಡಿ,
ಬಚ್ಚಬರಿಯಾನಂದಲೋಲಾಬ್ಧಿಯಲ್ಲಿರ್ಪುದೆ
ನಿರವಯಪ್ರಭು ಮಹಾಂತ ತಾನೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೬ ॥

೭.

ಅಲ್ಲಿಂದ ಲಿಂಗಾಂಗಸಂಬಂಧದ ಆಚರಣೆಗಳರಿವಿಂ
ಕಟಿಸ್ನಾನ, ಮಂಡೆಯ ಸ್ನಾನಗಳಲ್ಲಿ ತೀವಿದ ಲಿಂಗಧ್ಯಾನದಿಂದ
ಸರ್ವಾಂಗಸ್ನಾನಂಗೆಯ್ದು, ಪ್ರಕ್ಷಾಲನಂ ಮಾಡಿ,
ಪರಿಣಾಮೋದಕದಲ್ಲಿ ತೊಳೆದಂಥ ಕೌಪ ಮೊದಲಾದ ಮಡಿಗಳನ್ನು
ಪಾದೋದಕ ಲಿಂಗಸ್ಪರಿಶನಗಳಿಂದ ಧಾರಣಂಗೈದು,
ಪರಿಣಾಮವಾದ ದಿಕ್ಕುಗಳಲ್ಲಿ
ನಾರು ರೋಮ ಹುಲ್ಲು ಅರಳೆ ಮೊದಲಾದ್ದರಲ್ಲಿ
ಹುಟ್ಟಿದಂಥಾದ್ದಾವುದಾದರೂ ಪರಿಣಾಮವಾದ ಶಾಟಿಯ ಆಸನವ ರಚಿಸಿ,
ಜಂಗಮವು ತಾವು ಸಮರಸಭಾವದಿಂದೆ
ಉಪಚಾರಗಳೊದಗಿದಂತೆ ನೆರವಿಕೊಂಡು,
ಕರಸ್ಥಲದಲ್ಲಿ ಮೂಲಪ್ರಣಮವನರ್ಚಿಸಿ,
ಕ್ರಿಯಾಭಸಿತವನ್ನು ಕರಸ್ಥಲದಲ್ಲಿ ಇಟ್ಟುಕೊಂಡು,
ಅನಾದಿ ಚಿದ್ಭಸಿತವ ಧ್ಯಾನಿಸಿ,
ಮೂಲಷಡಕ್ಷರವ ಲಿಖಿತಂಗೈದು, ಅರ್ಚಿಸಿ, ಪೂಜೆಯನಿಳುಹಿ,
ಸಮಸ್ತಕಾರಣಕ್ಕೆ ಇದ ಚೈತನ್ಯವೆಂದು ಭಾವಭರಿತವಾಗಿ,
ಗುರುಪಾದೋದಕದಿಂದ ತೊಳೆದು,
ಲಿಂಗಪಾದೋದಕಪ್ರಣಮಸಂಬಂಧ ಭಸ್ಮದಿಂದ
ಪವಿತ್ರವಾದ ದ್ರವ್ಯಗಳೆ ಶುದ್ಧಪ್ರಸಾದವೆಂದು ಭಾವಿಸಿ,
ಲಿಂಗಜಂಗಮವಾರಾಧನೆಯ ಮಾಡುವುದೊಳಗೆ
ಕ್ರಿಯಾಶಕ್ತಿಯರು ಶುದ್ಧೋದಕದಿಂದ ಪವಿತ್ರಕಾಯರಾಗಿ,
ಲಿಂಗಬಾಹ್ಯರ ಸ್ಪರಿಶನವನುಳಿದು, ಸುಯಿಧಾನದಿಂದ,
ಉದಕವ ಮೊದಲು ಧಾನ್ಯ ಕಾಯಿಪಲ್ಯ ಕ್ಷೀರವ ಕಡೆಯಾದ

ಸಮಸ್ತದ್ರವ್ಯಂಗಳು ಶುಚಿಯಾಗಿ
ಲಿಂಗಜಂಗಮಾರಾಧಕರೆ ನಿರವಯಪ್ರಭು ಮಹಾಂತಗಣಂಗಳೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭ ॥

ೞ

ಪರಮಪವಿತ್ರನಿರ್ಮಲವೆನಿಸಿ,
ಕ್ರಿಮಿಕೀಟಕ ಮೃತ್ ಕಾಷ್ಠ ಪಾಷಾಣ ಮಸ್ತಕ ದೃಢಬೀಜಗಳು
ಮೊದಲಾದ ಶೋಧಕತ್ವದಿಂದ ಮುಚ್ಚಿ, ಬೈಚಿಟ್ಟು,
ಶುಚಿ–ರುಚಿ ಪಾಕವ, ಸತಿ–ಪತಿ, ಪಿತ–ಮಾತೆ, ಗುರು–ಶಿಷ್ಯ,
ಪುತ್ರ–ಮಿತ್ರ, ಬಂಧು,–ಬಳಗ ಸಹೋದರರೊಂದೊಡಲಾಗಿ,
ಲಿಂಗಜಂಗಮವೆ ತನ್ನ ಮನೆ, ತನ್ನ ಕಾಯಕಂಗಳು,
ತನ್ನ ಕರ ವಾಚಂಗಳಿಗೆ ತತ್ಪ್ರಾಣವಾಗಿ,
ಜಂಗಮಲಿಂಗದ ಪಾದಪೂಜೆಯಾದರೂ ಸರಿಯೆ,
ಲಿಂಗಪೂಜೆಯಾದರೂ ಸರಿಯೆ,
ವಿಭೂತಿ ರುದ್ರಾಕ್ಷಿಗಳ ತನ್ನ ಕರದಲ್ಲಾಗಲಿ,
ತೊಡೆಯಮೇಲಾಗಲಿ ಇಟ್ಟುಕೊಂಡು,
ಲಿಂಗನಿರೀಕ್ಷಣದಿಂದರ್ಚಿಸಿ, ಸ್ನಾನ ಧೂಳನ ಧಾರಣ
ಗುರುಮುಖದಿಂದರಿದು ಮಾಡಿದ ಬಳಿಕ,
ರುದ್ರಾಕ್ಷಿಗಳ ಭಿನ್ನಭಿನ್ನಗಳ ತೆಗೆದು, ನೂನುಕೂನುಗಳ ನೋಡಿ,
ವಿಚಾರತ್ವದಿಂದ ಸಾವಧಾನದೊಳ್ ಸ್ಥಾನಸ್ಥಾನಂಗಳಲ್ಲಿ
ಧಾರಣಂಗೈದು ಚರಿಸುವರೆ
ನಿರವಯಪ್ರಭು ಮಹಾಂತನ ಚಿತ್ಕಳಾಮೂರ್ತಿಯೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೮ ॥

೯

ಪರಾತ್ಪರ ಚಿದ್ಬ್ರಹ್ಮಪರಶಿವಮೂರ್ತಿಯು
ಮನು–ಮುನಿ, ಸಿದ್ಧ–ಸಾಧಕ, ಯಕ್ಷ–ರಾಕ್ಷಸ,
ಯತಿ–ವ್ರತಿ, ಶೀಲ–ನೇಮಗಳ ಭಾವಾಭಾವಕ್ಕೆ ಮೆಚ್ಚಿ,
ಅವರವರ ಕಾಂಕ್ಷೆಗಳಂತೆ ಫಲಪದದಾಯುಷ್ಯಕ್ಕೆ ಯೋಗ್ಯರಾಗಿ,
ಅಷ್ಟಮಹದೈಶ್ವರ್ಯದಿಂದ ಬ್ರಹ್ಮನ ಉತ್ಪತ್ತಿ, ವಿಷ್ಣುವಿನ ಸ್ಥಿತಿ,
ರುದ್ರನ ಲಯ, ಈಶ್ವರನ ತಿರೋಧಾನ, ಸದಾಶಿವನ ಅನುಗ್ರಹಕ್ಕೆ ಕಾರಣರಾಗಿ,
ಶೈವಮಾರ್ಗದಿಂದೆ ನಿಜಮೋಕ್ಷವ ಕಾಣದೆ,
ಅಷ್ಟಾವರಣದ ಚಿದ್ಬೆಳಗ ಸೇರಿದ
ಸದ್ಭಕ್ತಿ–ಜ್ಞಾನ–ವೈರಾಗ್ಯ, ಸತ್ಯ–ಸದಾಚಾರವನರಿಯದೆ,
ಇಹಲೋಕದ ಭೋಗವ ಪರಲೋಕದ ಮೋಕ್ಷಾಪೇಕ್ಷೆಯಿಂದ ಎಡೆಯಾಡುತ್ತ

ಪುಣ್ಯ–ಪಾಪ, ಸುಖ–ದುಃಖ, ಸ್ತುತಿ–ನಿಂದೆ, ಸಿರಿ–ದರಿದ್ರ,
ಆಶೆ–ಆಮಿಷ, ರೋಗ–ರುಜಿನಗಳಿಂದ,
ಶಿವನೆ ಹರನೆ ಭವನೆಯೆಂದು ಗೋಳಿಡುವವರಿಗೆ,
ನಿರಾಕಾರಪರಿಪೂರ್ಣ ಪರಶಿವನು ಆಗಳು ಹಿಂದಾಗಿ,
ಶಿವಗಣವ ಸೇರುವಂತೆ ಯೋಗಾಭ್ಯಾಸವ ತೋರಿ,
ಅನಂತಮಣಿಮಾಲೆ ಜಪಕ್ರಿಯಾನುಷ್ಠಾನ
ಮಂತ್ರ–ತಂತ್ರ–ಯಂತ್ರ–ಯಜ್ಞಾದಿಗಳ ಹೇಳಿ,
ಪರಮಾರಾಧ್ಯ ನಿರವಯಪ್ರಭು ಮಹಾಂತನ
ಗಣಾಚಾರಕ್ಕೆ ಅಯೋಗ್ಯರೆನಿಸಿರ್ಪರು ಕಾಣಾ
ಸಿದ್ಧಮಲ್ಲಿಕಾರ್ಜುಲಿಂಗೇಶ್ವರ. ॥ ೯ ॥

೧೦

ಇತ್ತಲಾಗಿ, ಅದೇ ನಿರಾಕಾರಪರಿಪೂರ್ಣ ಪರಶಿವಮೂರ್ತಿಯೆ
ನಿಜಗುರುಲಿಂಗಜಂಗಮಲೀಲೆಯ ಧರಿಸಿ,
ಪಾವನಾರ್ಥವಾಗಿ ಪಂಚಮಹಾಪಾತಕಸೂತಕಂಗಳ
ಬಾಹ್ಯಾಂತರಂಗಳಲ್ಲಿ ಮಹಾಜ್ಞಾನ ಕ್ರಿಯಾಚರಣದಿಂದ ಕಡಿದು ಕಂಡರಿಸಿ,
ಬಿಡುಗಡೆಯನುಳ್ಳ ಹರಗಣಂಗಳಿಗೆ
ನಿಜೇಷ್ಟಲಿಂಗ ಭಸಿತ ರುದ್ರಾಕ್ಷಿಗಳ ಕಾಯವೆನಿಸಿ,
ಸತ್ಕ್ರಿಯಾಚಾರ ಭಕ್ತಿ ಸಾಧನೆಯ ನಿರ್ವಾಣಪದವಿತ್ತರು ನೋಡಾ.
ಅಲ್ಲಿಂದ ಚಿತ್ಪಾದೋದಕ ಪ್ರಸಾದ ಮಂತ್ರವೆ ಪ್ರಾಣವೆನಿಸಿ,
ಶಿವಯೋಗಾನುಸಂಧಾನದಿಂದ ಮಹಾಜ್ಞಾನದ ಚಿದ್ಬೆಳಗನಿತ್ತರು ನೋಡಾ.
ಆ ಬೆಳಗೆ ತಾವಾದ ಶರಣಗಣಾರಾಧ್ಯ ಭಕ್ತಮಹೇಶ್ವರರು,
ಅನ್ಯಮಣಿಮಾಲೆಗಳ ಧರಿಸಿ, ಅನ್ಯಜಪಕ್ರಿಯೆಗಳ ಮಾಡಲಾಗದು.
ಅದೇನು ಕಾರಣವೆಂದಡೆ :
ಹಿಂದೆ ಕಲ್ಯಾಣಪಟ್ಟಣದಲ್ಲಿ ಚೆನ್ನಮಲ್ಲಿಕಾರ್ಜುನಾರಾಧ್ಯರು,
ಉಡುತಡಿ ಮಹಾದೇವಿಗಳು ಪುರುಷನ ಬಿಡುಗಡೆಯ ಮಾಡಿ,
ವೈರಾಗ್ಯದೊಳ್ ಅಲ್ಲಮಪ್ರಭುವಿದ್ದೆಡೆಗೆ ಬಂದು ಶರಣಾಗತರಾಗಲು,
ಆ ಪ್ರಭುಸ್ವಾಮಿಗಳು ಅವರೀರ್ವರ
ಭಕ್ತಿಜ್ಞಾನವೈರಾಗ್ಯ ಸದಾಚಾರಕ್ರಿಯಾವರ್ತನೆಯ ನೋಡಿ ಸಂತೋಷಗೊಂಡು,
ಇಂತಪ್ಪ ಸದ್ಧರ್ಮಿಗಳಂ ದಂಡನಾಥ ಮೊದಲಾಗಿ
ಅಕ್ಕನಾಗಾಂಬಿಕೆಯು ಮೊದಲಾದ ಪ್ರಮಥಗಣಾದ್ಯರಿಗೆ
ದರುಶನ ಸ್ಪರುಶನ ಸಂಭಾಷಣೆ ಪಾದೋದಕ ಪ್ರಸಾದಾನುಭಾವವೆಂಬ
ಷಡ್ರಸಾಮೃತವ ಕೊಡಿಸಬೇಕೆಂದು,
ತಮ್ಮ ಭಾವದ ಕೊನೆಯಲ್ಲಿ ಅಚ್ಚೊತ್ತಿ, ಹರುಷಾನಂದ ಹೊರಚೆಲ್ಲಿ,

ಆಗವರೀರ್ವರಂ ಕೈವಿಡಿದು ಕಲ್ಯಾಣಪಟ್ಟಣಕ್ಕೆ ಹೋಗಿ,
ಅನಾದಿ ಪ್ರಮಥಗಣಾಧೀಶ್ವರರ ಸಂದರ್ಶನವಾಗಬೇಕೆಂದು ಕರೆದಲ್ಲಿ,
ಆಗ ಮಹಾದೇವಿಯಮ್ಮನು ಸಂತೋಷಂಗೊಂಡು,
ಹರಹರಾ ಸ್ವಾಮಿ ಅವರಲ್ಲಿ ಸನ್ಮಾರ್ಗ ನಡೆನುಡಿಗಳೇನೆಂದು ಬೆಸಗೊಳಲು,
ಅವರು ಕೇವಲ ಪರಿಪೂರ್ಣಜ್ಯೋತಿರ್ಮಯ
ಲಿಂಗಜಂಗಮದಲ್ಲಿ ಕೂಟಸ್ಥರಾಗಿ,
ಬಾಹ್ಯಾಂತರಂಗದೊಳ್ ಪರಮಪಾತಕ ಸೂತಕ
ಅನಾಚಾರ ಅಜ್ಞಾನ ಅಪಶೈವ ಅಸತ್ಯವಿರಹಿತರಾಗಿ,
ನಿರ್ವಂಚಕ ನಿಃಪ್ರಪಂಚ ನಿರ್ವಾಣ ನಿಃಕಾಮ ಸತ್ಯಶುದ್ಧಕಾಯಕ
ಸದಾಚಾರ ಕ್ರಿಯಾಜ್ಞಾನಾನಂದ ನಡೆನುಡಿಯುಳ್ಳ
ಸದ್ಧರ್ಮ ಅಪಾತ್ರ ಸತ್ಪಾತ್ರವರಿದ ಶಿವಸನ್ಮಾನಿತರು,
ನಿಜಾನಂದಯೋಗತೂರ್ಯರು,
ಕೇವಲ ಪರಶಿವನಪ್ಪಣೆವಿಡಿದು ಚಿಚ್ಛಕ್ತಿಗಳೊಡಗೂಡಿ
ಪಾವನಾರ್ಥ ಅಷ್ಟಾವರಣ ನಿಜವೀರಶೈವಮತೋದ್ಧಾರಕ ಮಹಿಮರ ಚರಣದ
ದರುಶನಪಾತ್ರದಿಂದಿವೆ ಜ್ಯೋತಿರ್ಮಯ
ಕೈವಲ್ಯಪದವಪ್ಪುದು ತಪ್ಪದುಯೆಂದು
ಅಲ್ಲಮನುಸುರಲು, ಆಗ ಸಮ್ಯಕ್‌ಜ್ಞಾನಿ ಮಹಾದೇವಿಯರು
ಸತ್ಕ್ರಿಯಾಮೂರ್ತಿ ಚೆನ್ನಮಲ್ಲಿಕಾರ್ಜುನಗುರುವರನು ಸಂತೋಷಗೊಂಡು,
ತ್ರಿವಿಧರು ಕಲ್ಯಾಣಕ್ಕೆ ಅಭಿಮುಖವಾಗಲು,
ಆ ಪ್ರಶ್ನೆಯು ಹಿರಿಯ ದಂಡನಾಥಂಗೆ ಲಿಂಗದಲ್ಲಿ ಪ್ರಸನ್ನವಾಗಲು,
ಆಗ ಸಮಸ್ತಪ್ರಮಥರೊಡಗೂಡಿ,
ಆ ಅಲ್ಲಮರು ಸಹಿತ ತ್ರಿವಿಧರು ಬರುವ
ಮಾರ್ಗಪಥದಲ್ಲಿ ಅಡಿಯಿಡುವುದರೊಳಗೆ,
ಇಳೆಯಾಳ ಬ್ರಹ್ಮಯ್ಯನೆಂಬ ಶಿವಶರಣನು
ಈ ತ್ರಿವಿಧರಿಗೆ ಲಿಂಗಾರ್ಚನಾರ್ಪಣಕ್ಕೆ ಶರಣಾಗತನಾಗಿರಲು,
ಅವರು ಅರ್ಚನಾರ್ಪಣಕ್ಕೆ ಬಪ್ಪದೆ ಇರ್ಪಷ್ಟರೊಳಗೆ
ಹಿರಿದಂಡನಾಥ ಪ್ರಮಥರೊಡಗೂಡಿ,
ಅಲ್ಲಮ ಮೊದಲಾದ ತ್ರಿವಿಧರಿಗೆ ವಂದಿಸಿ,
ಲಿಂಗಾರ್ಚನಾರ್ಪಣಕ್ಕೆ ಶರಣುಶರಣಾರ್ಥಿಯೆನಲು,
ಆಗ ಮಹಾದೇವಿಯಮ್ಮನವರು ಒಂದು ಕಡೆಗೆ ಕೇಶಾಂಬರವ ಹೊದೆದು,
ಶರಣುಶರಣಾರ್ಥಿ ನಿಜವೀರಶೈವ ಸದ್ಧರ್ಮ ದಂಡನಾಥ ಮೊದಲಾದ
ಸಮಸ್ತಗಣಾರಾಧ್ಯರುಗಳ ಶ್ರೀಪಾದಪದ್ಮಂಗಳಿಗೆಯೆಂದು
ಸ್ತುತಿಸುವ ದನಿಯ ಕೇಳಿ,
ಸಮಸ್ತಗಣಸಮ್ಮೇಳವೆಲ್ಲ ಒಪ್ಪಿ ಸಂತೋಷಗೊಂಡು,

ಶರಣೆಗೆ ಶರಣೆಂದು ಬಿನ್ನಹವೆನಲು,
ನಿಮಗಿಂದ ಮೊದಲೆ ಶರಣುಹೊಕ್ಕ ಶಿವಶರಣೆಗೆ ಏನಪ್ಪಣೆ ಸ್ವಾಮಿಯೆನಲು,
ಆಗ ಆ ಬ್ರಹ್ಮಯ್ಯನು ಅಲ್ಲಮಪ್ರಭು
ಚನ್ನಮಲ್ಲಿಕಾರ್ಜುನ ದಂಡನಾಥ ಮೊದಲಾದ
ಸಮಸ್ತಪ್ರಮಥಗಣ ಸಮ್ಮೇಳಕ್ಕೆ ಶರಣುಶರಣಾರ್ಥಿ,
ಈ ತನು-ಮನ-ಧನವು ನಿಮಗೆ ಸಮರ್ಪಣೆಯಾಗಬೇಕೆಂದು ಅಭಿವಂದಿಸಲು,
ಆಗ ಕಲಿಗಣನಾಥ ಕಲಕೇತಯ್ಯಗಳು
ನೀವು ನಿಮ್ಮ ಪ್ರಮಥರು ಅರಭಕ್ತಿಯಲ್ಲಾಚರಿಸುತ್ತಿಪ್ಪಿರಿ,
ನಿಮ್ಮ ಗೃಹಕ್ಕೆ ನಿರಾಭಾರಿವೀರಶೈವಸಂಪನ್ನೆ
ಮಹಾದೇವಿಯಮ್ಮನವರು ಬರೋದುಯಂಥಾದ್ದೊ ನೀವ ಬಲ್ಲಿರಿ.
ಆ ಮಾತ ನೀವ ವಿಚಾರಿಸಬೇಕೆಂದು ನುಡಿಯಲು,
ಆಗ ಬ್ರಹ್ಮಯ್ಯಗಳು ತಮ್ಮ ಕರ್ತನಾದ
ಕಿನ್ನರಿಯ ಬ್ರಹ್ಮಯ್ಯನ ಕಡೆಗೆ ದೃಷ್ಟಿಯಿಟ್ಟು ನೋಡಲು,
ಆ ಕಿನ್ನರಿಯ ಬ್ರಹ್ಮಯ್ಯನು
ಹರಹರಾ, ಶರಣುಶರಣಾರ್ಥಿ, ನಮಗೆ ತಿಳಿಯದು,
ನಿಮ್ಮ ಕೃಪೆಯಾದಲ್ಲಿ ನಮ್ಮ ಅರಭಕ್ತಿಸ್ಥಲವನಳಿದುಳಿದು,
ನಿಮ್ಮ ಸದ್ಧರ್ಮ ನಿಜಭಕ್ತಿಮಾರ್ಗವ ಕರುಣಿಸಿ,
ದಯವಿಟ್ಟು ಪ್ರತಿಪಾಲರ ಮಾಡಿ
ರಕ್ಷಿಸಬೇಕಯ್ಯಸ್ವಾಮಿಯೆಂದು ಅಭಿವಂದಿಸಲು,
ಅಯ್ಯಾ, ನಿಮ್ಮಿಬ್ಬರಿಂದಲೇನಾಯ್ತು ?
ಇನ್ನೂ ಅನೇಕರುಂಟುಯೆಂದು ಕಲಿಗಣ ಕಲಕೇತರು ನುಡಿಯಲು,
ಹರಹರಾ, ಪ್ರಭುಸ್ವಾಮಿಗಳೆ ನಿಮ್ಮಲ್ಲಿ ನುಡಿ ಎರಡಾಯಿತ್ತು,
ಅದೇನು ಕಾರಣವೆಂದು ಮಹಾದೇವಿಯಮ್ಮನವರು
ಪ್ರಭುವಿನೊಡನೆ ನುಡಿಯಲು,
ಆಗ ಆ ಪ್ರಭುಸ್ವಾಮಿಗಳು ಅಹುದಹುದು ತಾಯಿ
ನಾವು ನುಡಿದ ನುಡಿ ದಿಟ ದಿಟವು.
ನಿಮ್ಮಂತವಲ್ಲವಾದಡೆ ನಿಮಗಡಿಯಿಡಲಂಜೆಯೆಂದು ನುಡಿಯಲು,
ಹರಹರಾ, ಹಾಗಾದೊಡೆ ಅವರ ಬಿನ್ನಹಂಗಳ ಕೈಕೊಂಡು
ಅವರಲ್ಲಿರುವ ಅಸತ್ಯಾಚಾರದವಗುಣಗಳ ನಡೆನುಡಿಗಳ ಪರಿಹರಿಸಬೇಕು.
ಮುಸುಂಕೇತಕ ಸ್ವಾಮಿಯೆಂದು ಮಹಾದೇವಮ್ಮನವರು ನುಡಿಯಲು,
ಆಗ ಹಿರಿದಂಡನಾಥನು ಹರಹರಾ ನಮೋ ನಮೋಯೆಂದು
ಕಲಿಗಣನಾಥ ಕಲಕೇತರ ನಮ್ಮವಗುಣಂಗಳ ಪರಿಹರಿಸಿ,
ನಿಮ್ಮ ಕವಳಿಗೆಗೆ ಯೋಗ್ಯರಾಗುವಂತೆ ಪ್ರತಿಜ್ಞೆಯ ಮಾಡಿ.
ನಮ್ಮ ಬಿನ್ನಪವನವಧರಿಸಿ ಲಿಂಗಾರ್ಚನಾರ್ಪಣಗಳ

ಮಾಡಬೇಕು ಗುರುಗಳಿರಾಯೆಂದು ಅಭಿವಂದಿಸಲು,
ಆ ನುಡಿಗೆ ಸಮಸ್ತಗಣ ಪ್ರಮಥಗಣಾರಾಧ್ಯರೆಲ್ಲ ಅಭಿವಂದಿಸಿ,
ನಮ್ಮರೆಭಕ್ತಿ ನಿಲುಕಡೆಯೇನೆಂದು ಹಸ್ತಾಂಜುಲಿತರಾಗಿ ಇದಿರಿಗೆ ನಿಲಲು,
ಆಗ ಆ ಕಲಿಗಣನಾಥ ಕಲಕೇತಯ್ಯಗಳು ನುಡಿದ ಪ್ರತ್ಯುತ್ತರವು ಅದೆಂತೆಂದೊಡೆ:
ಅಯ್ಯಾ, ಕೈಲಾಸದಿಂದ ಪರಶಿವಮೂರ್ತಿ ನಿಮಗ
ಅಷ್ಟಾವರಣ ಪಂಚಾಚಾರ ಸತ್ಯಶುದ್ಧ ನಡೆನುಡಿ
ವೀರಶೈವಮತ ಸದ್ಭಕ್ತಿ ಮಾರ್ಗವ
ಮರ್ತ್ಯಲೋಕದ ಮಹಾಗಣಗಳಿಗೆ ತೋರಿ,
ಎಚ್ಚರವೆಚ್ಚರವೆಂದು ಬೆನ್ನಮೇಲೆ ಚಪ್ಪರಿಸಿ,
ನಿಮ್ಮ ತನುಮನಧನವ ಶ್ರೀಗುರುಲಿಂಗಜಂಗಮಕ್ಕೆ ಸಮರ್ಪಿಸಿ,
ಪರಗುರುಲಿಂಗಜಂಗಮದ ಮಹಾಬೆಳಗಿನೊಳಗೆ
ಬನ್ನಿರೆಂದು ಪ್ರತಿಜ್ಞೆಯ ಮಾಡಿ, ಪಂಚಪರುಷವ ಕೊಟ್ಟು,
ಆ ಜಪತಕ್ತಸಮ್ಮೇಳನೆನಿಸಿ ಕಳುಹಿಕೊಟ್ಟಲ್ಲಿ,
ನೀವು ಬಂದು, ಎರಡುತೆರದಭಕ್ತಿಗೆ ನಿಂದುದ
ಅರೆಭಕ್ತಿಸ್ಥಲವೆಂದು ನುಡಿಯಲು,
ಆ ಎರಡುತೆರದ ಭಕ್ತಿ ವಿಚಾರವೆಂತೆಂದಡೆ :
ಒಮ್ಮೆ ನಿಮ್ಮ ತನು–ಮನ–ಧನ,
ನಿಮ್ಮ ಸತಿಸುತರ ತನುಮನಧನಂಗಳು
ಶೈವಮತದವರ ಭೂಪ್ರತಿಷ್ಠಾದಿಗಳಿಗೆ ನೈವೇದ್ಯವಾಗಿರ್ಪವು.
ಆ ನೈವೇದ್ಯವ ತಂದು ಶ್ರೀಗುರುಲಿಂಗಜಂಗಮಕ್ಕೆ
ನಮ್ಮ ತನುಮನಧನವರ್ಪಿತವೆಂದು ಹುಸಿ ನುಡಿಯ ನುಡಿದು,
ಎರಡು ಕಡೆಗೆ ತನುಮನಧನಂಗಳ ಚೆಲ್ಲಾಡಿ,
ಅಶುದ್ಧವೆನಿಸಿ ಶುದ್ಧಸಿದ್ಧಪ್ರಸಿದ್ಧಪ್ರಸಾದ ನಮ್ಮ ತನುಮನಧನಂಗಳೆಂದು,
ಕಾಯಾರ್ಪಣ ಕರಣಾರ್ಪಣ ಭಾವಾರ್ಪಣವೆಂದು ಒಪ್ಪವಿಟ್ಟು, ನುಡಿವಲ್ಲಿ,
ನೀವು ವೀರಶೈವಸಂಪನ್ನರೆಂತಾದಿರಿ ?
ನಿಮ್ಮಲ್ಲಿ ಲಿಂಗಾರ್ಚನಾರ್ಪಣವೆಂತಾಗಬೇಕು ?
ಹೇಳಿರಯ್ಯ ಪ್ರಮಥರೆಯೆಂದು ನುಡಿಯಲು,
ಆಗ್ಯ ಏಳುನೂರಾಯೆಪ್ಪತ್ತು ಅಮರಗಣಂಗಳೆಲ್ಲ ಬೆರಗಾಗಿ,
ಆ ಹರಹರಾ ಅಹುದಹುದೆಂದು
ಬಂದ ನುಡಿ ತಪ್ಪಿ ನಡೆದೆವೆಂದು ಒಪ್ಪಿ ಒಡಂಬಟ್ಟು,
ಅರೆಭಕ್ತಿ ಮಾಡುವವರ ವಿಚಾರಿಸಿ,
ಕಡೆಗ ತೆಗೆದು ಗಣಿತವ ಮಾಡಿದಲ್ಲಿ,
ಮುನ್ನೂರರವತ್ತು ಗಣಂಗಳಿರ್ಪರು.
ಆ ಗಣಂಗಳ ಸಮ್ಮೇಳವ ಕೂಡಿಸಿ ಒಂದೊಡಲಮಾಡಿ,

ನಿಮ್ಮೊಳಗಣ ಪ್ರೀತಿಯೇನೆಂದು ಮಹಾದೇವಮ್ಮನವರು ನುಡಿದು
ಹಸ್ತಾಂಜುಲಿತರಾಗಿ ಬೆಸಗೊಳಲು,
ಆಗ ಮುನ್ನೂರರವತ್ತು ಗಣಂಗಳು ನುಡಿವ ಪ್ರತ್ಯುತ್ತರ ಅದೆಂತೆಂದಡೆ :
ಹರಹರಾ, ನಾವು ಬಂದ ಬಟ್ಟೆ ಅಹುದಹುದು,
ಇಲ್ಲಿ ನಿಂದ ನಡೆ ಅಹುದಹುದು.
ನಾವು ಕ್ರಿಯಾಮಾರ್ಗವ ಬಿಟ್ಟು
ಮಹಾಜ್ಞಾನಮಾರ್ಗವ ಭಾವಿಸಿದೆವು, ಎಡಮಿಡಿದ್ದವು,
ತಪ್ಪನೋಡದೆ, ಒಪ್ಪವಿಟ್ಟು ಉಳುಹಿಕೊಳ್ಳಿರಯ್ಯ.
ನಡೆಪರುಷ, ನುಡಿಪರುಷ, ನೋಟಪರುಷ, ಹಸ್ತಪರುಷ, ಭಾವಪರುಷರೆ
ತ್ರಾಹಿ ತ್ರಾಹಿ, ನಮೋ ನಮೋಯೆಂದು ಅಭಿವಂದಿಸಲು,
ಆಗ ಚೆನ್ನಮಲ್ಲಾರಾಧ್ಯರು,
ನೀವು ತಪ್ಪಿದ ತಪ್ಪಿಗೆ ಆಜ್ಞೆಯೇನೆಂದು ನುಡಿಯಲು,
ಆಗ್ಯ ಮುನ್ನೂರರವತ್ತು ಗಣಂಗಳು ನುಡಿದ ಪ್ರತ್ಯುತ್ತರವದೆಂತೆಂದೊಡೆ :
ಅಯ್ಯಾ, ನಾವು ತಪ್ಪಿದ ತಪ್ಪಿಂಗೆ ಕ್ರಿಯಾಲೀಲೆಸಮಾಪ್ತಪರ್ಯಂತರವು
ನಾವು ಮುನ್ನೂರರವತ್ತು ಕೂಡಿ,
ನಿತ್ಯದಲ್ಲಿ ನಿಮಗೆ ಗುರುಲಿಂಗಜಂಗಮಕ್ಕೆ ಆರಾಧನೆಯ ಮಾಡಿ,
ಕೌಪ ಕಟಿಸೂತ್ರ ಹುದುಗು ಶಿವದಾರ ವಿಭೂತಿ ವಸ್ತ್ರ ಪಾವುಡ ರಕ್ಷೆ ಪಾವುಗೆಗಳ
ಪರುಷಕೊಂದು ಬಿನ್ನಹಗಳ ಸತ್ಯಶುದ್ಧ ಕಾಯಕವ ಮಾಡಿ,
ಋಣಪಾತಕರಾಗದೆ,
ನಿಮ್ಮ ತೊತ್ತಿನ ಪಡಿದೊತ್ತೆನಿಸಿರಯ್ಯಯೆಂದು ಅಭಿವಂದಿಸಲು,
ಆಗ ಅಲ್ಲಮಪ್ರಭು ಮೊದಲಾದ ಘನಗಂಭೀರರೆಲ್ಲ ಒಪ್ಪಿ,
ಶೈವಾರಾಧನೆಗಳಂ ಖಂಡಿಸಿ,
ವೀರಶೈವ ಗುರುಲಿಂಗಜಂಗಮ ಭಕ್ತರೆ ಘನಕ್ಕೆ ಮಹಾಘನವೆಂದು
ನುಡಿ ನಡೆ ಒಂದಾಗಿ, ಚೆನ್ನಮಲ್ಲಾರಾಧ್ಯರ ನಿರೂಪದಿಂದ
ದಂಡನಾಥನ ಭಕ್ತಿಪ್ರಿಯರಾದ ಲಕ್ಷದಮೇಲೆ ತೊಂಬತ್ತಾರುಸಾವಿರ
ಘನದೊಳಗೆ ಮಾರ್ಗಕ್ರಿಯೆ ಮೀರಿದ
ಕ್ರಿಯಾಚರಣೆಸಂಬಂಧ ಸ್ವಸ್ವರೂಪ ಜ್ಞಾನಾಚಾರ
ನಡೆನುಡಿ ಅಚ್ಚಪ್ರಸಾದ ನಿಚ್ಚಪ್ರಸಾದ ಸಮಯಪ್ರಸಾದವೆ
ತಮಗೆ ಅಂಗ ಮನ ಪ್ರಾಣವಾಗಿ,
ಮೊದಲಾದ ಚಿತ್ಕಲಾಪ್ರಸಾದ ಸಲ್ಲದ ಗಣಂಗಳ
ಕಲಿಗಣನಾಥ ಕಲಕೇತರು ಖಂಡಿಸಿ
ಆ ಹನ್ನೆರಡುಸಾವಿರಮಂ ತೆಗೆದು ಚೆನ್ನಮಲ್ಲಾರಾಧ್ಯರಿಗೆ ತೋರಲು,
ಅವರು ಗಣಸಮೂಹಂಗಳೆಲ್ಲ
ಸಂತೋಷದಿಂದ ಸನ್ನತಂಬಟ್ಟು ಒಪ್ಪಿದ ತದನಂತರದೊಳು,

ಪ್ರಭುಸ್ವಾಮಿಗಳು ಅಯ್ಯಾ, ದಂಡನಾಥ ಮೊದಲಾದ
ಅಸಂಖ್ಯಾತ ಪ್ರಮಥಗಣಂಗಳೆ
ಇನ್ನು ಹಿಂದಣ ಅರೆಭಕ್ತಿಸ್ಥಲವ ಮೆಟ್ಟಿದ
ಪುತ್ರ ಮಿತ್ರ ಕಳತ್ರರ ಒಡಗೂಡಿ ಬಳಸಿದೊಡೆ,
ಅಷ್ಟಾವರಣ ಪಂಚಾಚಾರಕ್ಕೆ ಹೊರಗೆಂದು ನಿಮ್ಮ ಗಣ ಮೆಟ್ಟಿಗೆಯಲಿ
ಪಾಪುಡವ ಕೊರಳಿಗೆ ಸುತ್ತಿ ಭವದತ್ತ ನೂಂಕಿ,
ಕಾಮುಕಾಲರ ಪಾಶಕ್ಕೆ ಕೊಟ್ಟೆವೆಂದು ನುಡಿಯಲು,
ಆ ಮಾತಿಗೆ ದಂಡನಾಥ ಮೊದಲಾದ
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿ
ಚಿತ್ಕಲಾಪ್ರಸಾದಿಗಣಂಗಳೆಲ್ಲ ಎದ್ದು,
ಹಸ್ತಾಂಜುಲಿತರಾಗಿ, ಹಸಾದ ಹಸಾದವೆಂದು ಕೈಕೊಂಡು,
ಪರಮಪಾತಕಸೂತಕನಾಚರಂಗಳಂ ವಿಡಂಬಿಸಿ,
ಶಿವಲಿಂಗಲಾಂಛನಯುಕ್ತರಾದ ಶಿವಜಂಗಮದ ಭಿಕ್ಷಾನ್ನದ ಶಬ್ದಮಂ ಕೇಳಿ,
ಕ್ಷುಧೆಗೆ ಭಿಕ್ಷೆ, ಸೀತಕ್ಕೆ ವಸನಮಂ ಸಮರ್ಪಿಸಿ
ಹಿರಿಕಿರಿದಿನ ನೂನಕೂನಂಗಳಂ ನೋಡದೆ ಶಿವರೂಪವೆಂದು ಭಾವಿಸಿ,
ಅಲ್ಲಿ ಚೆನ್ನಮಲ್ಲಿಕಾರ್ಜುನಾರಾಧ್ಯ ಕಲಿಗಣನಾಥ ಕಲಕೇತರು ಖಂಡಿಸಿದ
ಹನ್ನೆರಡುಸಾವಿರ ಪರಶಿವಜಂಗಮದೊಡನೆ
ತೀರ್ಥಪ್ರಸಾದಾನುಭಾವ ಸಮರಸದಾಚರಣೆಯಂ ಬಳಸಿ ಬ್ರಹ್ಮಾನಂದರಾಗಿ,
ಚಿತ್ಕಲಾಪ್ರಸಾದಿ ಜಂಗಮದೊಡವೆರೆದು,
ಅಚ್ಚಪ್ರಸಾದಿಗಳು ಅಚ್ಚಪ್ರಸಾದಿಗಳೊಡವೆರೆದು,
ನಿಚ್ಚಪ್ರಸಾದಿ ನಿಚ್ಚಪ್ರಸಾದಿಗಳೊಡವೆರೆದು,
ಸಮಯಪ್ರಸಾದಿ ಸಮಯಪ್ರಸಾದಿಗಳೊಡವೆರೆದು ಒಂದೊಡಲಾಗಿ,
ಚಿತ್ಕಲಾಪ್ರಸಾದಿಗಳು ತಮ್ಮಾನಂದದಿಂದ
ಅಚ್ಚಪ್ರಸಾದಿಸ್ಥಲವನಾಚರಿಸಿದೊಡೆ ಬಹುಲೇಸು,
ನಿಚ್ಚಪ್ರಸಾದಿ ಸಮಯಪ್ರಸಾದಿಗಳು
ಅಚ್ಚಪ್ರಸಾದಿಸ್ಥಲವನಾಚರಿಸಿದೊಡೆ ಉತ್ತಮಕ್ಕುತ್ತಮ,
ಅಚ್ಚಪ್ರಸಾದಿ ನಿಚ್ಚಪ್ರಸಾದಿಸ್ಥಲಕೆ ನಿಂದಡೆ ಅಯೋಗ್ಯವೆನಿಸುವುದು.
ನಿಚ್ಚಪ್ರಸಾದಿ ಸಮಯಪ್ರಸಾದಿಸ್ಥಲಕೆ ನಿಂದೊಡೆ ಅಯೋಗ್ಯರೆನಿಸುವರು.
ಈ ವರ್ಮಾದಿವರ್ಮಮಂ ತ್ರಿಕರಣದಲ್ಲಿ ಅರಿದು ಮರೆಯದೆ
ಸಾವಧಾನದೆಚ್ಚರದೊಡನೆ ಲಿಂಗಾಂಗಸಮರಸೈಕ್ಯದೊಡನೆ ಕೂಟ
ಎರಡಳಿದಿರಬಲ್ಲಾತ ನಿರವಯಪ್ರಭು ಮಹಾಂತ ತಾನೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೦ ॥

೧೧

ಸಾಕಾರವಾದ ಇಷ್ಟಲಿಂಗಸಂಧಾನದ
ಕ್ರಿಯಾರ್ಚನೆ ಜ್ಞಾನಾರ್ಚನೆ ಮಹಾಜ್ಞಾನಾರ್ಚನೆಯ
ಜಪತಪಾನುಸಂಧಾನದ ಸದ್ಗುರುಮಾರ್ಗಮಂ ಎಚ್ಚರದಳಿದು,
ಅಂತರಂಗ ಬಹಿರಂಗ ಒಂದಾಗಿ,
ಭಿನ್ನಕ್ರಿಯಾರ್ಚನಾದಿಗಳನತಿಗಳೆದು ಹೊಟ್ಟೆಗೆಯ ಹೊದ್ದದೆ,
ಕೇವಲ ಅಭಿನ್ನಕ್ರಿಯಾರ್ಚನೆಗಳಲ್ಲಿ ಸನ್ಮೋಹಿಯಾದ ಸದ್ಭಕ್ತಮಹೇಶ್ವರರು
ನಿರವಯಪ್ರಭುಮಹಾಂತ ನಿಃಕಳಂಕ ಜಂಗಮಲಿಂಗದಲ್ಲಿ
ನೃಪ್ತ ನಿಷ್ಪರಗಾಗಿ ಸಚ್ಚಿ ಮಚ್ಚಿರ್ಪುದ ಘನಕ್ಕೆ ಘನ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೧ ॥

೧೨

ವೀರಶೈವಾಚಾರಗುರುಮಾರ್ಗವಿಡಿದು ಬಂದ ಭಕ್ತಗಣಾಧೀಶ್ವರರು
ಕ್ರಿಯಾಜಂಗಮಲಿಂಗದ ಪಾದಪೂಜೆಯ ಮಾಡುವ ವಿವರವದೆಂತೆಂದೊಡೆ :
ಜಂಗಮಲಿಂಗಮೂರ್ತಿಗಳು ತಮ್ಮ ಗೃಹಕ್ಕೆ ಬಂದು,
ಶಿವಲಿಂಗಾರ್ಪಣಕ್ಕೆ ಭಿಕ್ಷಾಯೆಂದಾಕ್ಷಣವೆ,
ಶರಣುಶರಣಾರ್ಥಿ, ಮಹಾಲಿಂಗಾರ್ಪಣಕ್ಕೆ ನಮಸ್ಕಾರವೆಂದು ಅಭಿವಂದಿಸಿ,
ಆಸನವ ರಚಿಸಿದ ಮೇಲೆ ಮೂರ್ತಿಗೊಂಡ ತದನಂತರದೊಳು
ಅವರ ಜಂಘೆಯಾಗೊಪ್ಪುವ ವೃತ್ತಸ್ಥಾನಪರಿಯಂತರವು,
ಬಹುಗುಣದಲ್ಲಿ ತೊಳೆದಂಥ ನಿರ್ಮಾಲ್ಯವ ಧೂಳೋದಕದಿಂದ
ಹೊಸದಾಗಿ ಕಟ್ಟಿದ ಆಲಯ ಬಾವಿ ಧನ ಧಾನ್ಯ ಕಾಯಿಪಲ್ಲೆ ಕಾಷ್ಠ ಮೊದಲಾದ
ಜನನಿಜಠರದಿಂದುದಯವಾದ ಶಿಶುವಿಗೆ,
ಲಿಂಗಾಂಗ ಮುಂತಾದ ಹೊಸ ಅರುವೆ ಆಭರಣ,
ದಗ್ಧದ್ರವ್ಯ ಕಡೆಯಾದವಕ್ಕೆ ಸಂಪ್ರೋಕ್ಷಿಸಿ, ಪವಿತ್ರವೆನಿಸಿ,
ಆಸೆ ಆಮಿಷ ರೋಷಾದಿಗಳಿಲ್ಲದಾಚರಿಸುವುದೆ
ನಿರವಯಪ್ರಭು ಮಹಾಂತನಾಚಾರ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೨ ॥

೧೩

ಪರಮಪವಿತ್ರಪರಿಣಾಮೋದಕವನ್ನು
ಕ್ರಿಯಾಜ್ಞಾನಯುಕ್ತವಾದ ಜಂಗಮಮೂರ್ತಿಯು
ಎರಡುಪದರಿನ ಪಾವುಡದಿಂದ ಶೋಧಿಸಿದುದಕವನ್ನು
ಆ ಜಂಗಮದ ಅಡಿಪಾದ ಮೂರುಮೂರುವೇಳೆ,
ಪಂಚಪಂಚಾಂಗುಲಗಳೊಂದೊಂದುವೇಳೆ,
ಮೂಲಪಂಚಾಕ್ಷರಧ್ಯಾನದಲ್ಲಿ ಮನಘನವಾಗಿ ಸ್ಪರಿಶನಂಗೈದು,

ದೀಕ್ಷಾಪಾದೋದಕವನ್ನು
ಚರಲಿಂಗಕ್ಕೆ ಮುಖಮಜ್ಜನವ ಮಾಡಬೇಕು ಸ್ವಾಮಿಯೆಂದಲ್ಲಿ,
ಹರಹರಾಯೆಂದು ಕೈಕೊಂಡು,
ಲಿಂಗಾಭಿಷೇಕ ಮುಖಮಜ್ಜನವ ಮಾಡಿದ ಚರಲಿಂಗದ ಪಾದಕ್ಕೆ
ಪಾವಗೊರಡ ಮೆಟ್ಟಿಸಿ, ಹಸ್ತವ ಹಿಡಿದು,
ಬಹುಪರಾಕು ಎಚ್ಚರವೆಚ್ಚರ ಮಹಾಲಿಂಗದಲ್ಲಿ ಸ್ವಾಮಿಯೆಂದು ಸ್ತುತಿಸುತ್ತ
ಗದ್ದುಗೆಯ ಮೇಲೆ ಮೂರ್ತವಮಾಡಿದ ಬಳಿಕ
ಉಭಯಪಾದಾಭಿಷೇಕಂಗೈದುದಕವ
ಲಿಂಗಾಂಗಕ್ಕೆ ಸಂಪ್ರೋಕ್ಷಿಸಿದ ತದನಂತರದಲ್ಲಿ,
ಮುಖಮಜ್ಜನಕ್ಕೆ ಮಾಡಿದಂಥ ಗುರುಪಾದೋದಕ ತಂಬಿಗೆಯನ್ನು
ಭಾಂಡಕ್ಕೆ ಹಸ್ತಸ್ಪರಿಶನ ಧಾರಣವಿದ್ದರೆ
ಆ ಉದಕವ ಶೋಧಿಸಿದ ಭಾಂಡಂಗಳಿಗೆ ಸಮ್ಮಿಶ್ರವ ಮಾಡುವುದು.
ಇಲ್ಲವಾದಡ ತಮ್ಮ ಅರ್ಚನ ಅರ್ಪಣಗಳಿಗೆ ಮಡುಗಿಕೊಂಬುದು.
ದಿವರಾತ್ರಿಗಳೆನ್ನದೆ ಚರಲಿಂಗಪಾದೋದಕಪ್ರಾಣಿಗಳ
ನಿರವಯಪ್ರಭು ಮಹಾಂತನ ಪ್ರತಿಬಿಂಬ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೩ ॥

೧೪

ಚರಲಿಂಗಪ್ರಸನ್ನ ಪ್ರಸಾದಿ ಭಕ್ತ ಮಹೇಶ್ವರರು,
ಶ್ರೀ ವಿಭೂತಿಯ ಕ್ರಿಯಾಧಾರಣ ಮಾಡಬೇಕಾದರೆ,
ಸಾಜವಾದಂಥ ಗಟ್ಟಿಗೆ,
ಆ ಮಡಿಗಿಕೊಂಡಿರ್ದಂಥ ಗುರುಪಾದೋದಕದಿಂದ ಅಭಿಷೇಕಂಗೈದು,
ಅದೇ ಉದಕವನ್ನು ಒಂದು ಬಟ್ಟಲಲ್ಲಿ ಸ್ವಲ್ಪ ಮಾತ್ರ ತೆಗೆದುಕೊಂಡು,
ಮೂಲಮಂತ್ರಧ್ಯಾನದಿಂದ ಆ ಜಂಗಮಮೂರ್ತಿಗಳ
ಉಭಯಾಂಗುಷ್ಠದಡಿಯಲ್ಲಿ ಮಡುಗಿ
ತನ್ನ ನಿಜದೃಷ್ಟಿಯ ಅರ್ಚನೆಯಾಗಿ ನಮಸ್ಕರಿಸಿ,
ಇಷ್ಟಲಿಂಗಸಂಬಂಧವಾದ ಅಂಗುಷ್ಠವ ತನ್ನ ತರ್ಜನಿಬೆರಳಿಂದ
ನಾದಬಿಂದುಕಳೆಗಳೆಂಬ ತ್ರಿವಿಧಪ್ರಣವಂಗಳ
ಬಿಂದುದೀರ್ಘಯುಕ್ತವಾಗಿ ಮೂರುವೇಳೆ
ಘನಮನವೇದ್ಯದಿಂದ ಸ್ಪರಿಶನವಮಾಡಿ,
ಪ್ರಾಣಲಿಂಗಸಂಬಂಧವಾದ ಅಂಗುಷ್ಠವ ಅದರಂತೆ
ಚಿನ್ನಾದ ಬಿಂದು ಕಳೆಗಳೆಂಬ ತ್ರಿವಿಧಪ್ರಣವಂಗಳ
ಬಿಂದುದೀರ್ಘಯುಕ್ತವಾಗಿ ಮೂರುವೇಳೆ
ಪರಿಪೂರ್ಣಾನುಭಾವದಿಂದ ಸ್ಪರಿಶನವ ಮಾಡಿ,

ಅಲ್ಲಿಂದ ಭಾವಲಿಂಗಸ್ವರೂಪ ಅಷ್ಟಾವರಣಸಂಬಂಧವಾದ
ಎಂಟು ಅಂಗುಲಿಗಳ ಅಂಗುಷ್ಠಗಳೊಡಗೂಡಿ,
ಪರನಾದ ಬಿಂದು ಕಳೆಗಳೆಂಬ ತ್ರಿವಿಧಪ್ರಣವಮಗಳ ಬಿಂದು ದೀರ್ಘಯುಕ್ತವಾಗಿ,
ಒಂದು ವೇಳೆ ಸತ್ತುಚಿತ್ತಾನಂದ ನಿತ್ಯಪರಿಪೂರ್ಣತ್ವದಿಂದ
ಸ್ಪರಿಶನವ ಮಾಡಿದಂಥ ಲಿಂಗಪಾದೋದಕವನ್ನು
ಗುರುಪಾದೋದಕದಿಂದಭಿಷೇಕಂಗೈದಿಷ್ಟವಿಭೂತಿಗಟ್ಟಿ ಸುಯಿಧಾನದಿಂದ
ಸಮ್ಮಿಶ್ರಂಗೈದುಳಿದಂಥ ಲಿಂಗಪಾದೋದಕವನ್ನು
ಪ್ರಸಾದಿಸ್ಥಲವಿಲ್ಲದವರು ಒಂದು ಗಿಂಡಿಯಲ್ಲಿ ಮಡುಗಿಕೊಂಡು
ನೆಲದಮೇಲಿಡದೆ ಒಂದಾಸನದಲ್ಲಿಟ್ಟು,
ಸುಯ್ಯಾನದಿಂದ ಘನಪಾದತೀರ್ಥ ತನ್ನರ್ಪಿತ
ಸಮಯೋಚಿತಕ್ಕೆ ದೊರೆಯದಿದ್ದರೆ
ಇಷ್ಟಲಿಂಗಾರ್ಪಿತಕ್ಕೆ ಮೂರುವೇಳೆ
ಶಿವಶಿವ ಹರಹರ ಜಯಜಯ ಬಸವಲಿಂಗಯ್ಯೆಯೆಂದು
ತಾನು ಸ್ವೀಕರಿಸಿ, ಕಂಡಿತಂಗೈದು, ಲಿಂಗಾರ್ಪಿತವ ಮಾಡುವುದು.
ಗುರುದೀಕ್ಷೆಯುಳ್ಳವರು ಆ ಗಿಂಡಿಯೊಳಗಿರುವ ಉದಕವ
ಜಂಗಮಮೂರ್ತಿಗಳು ದೊರೆತ ಸಮಯದಲ್ಲಿ ಕಂಡಿತಂಗೈದು,
ಲಿಂಗದ ಉದುಗದಲ್ಲಿ ದ್ರವವನಾರಿಸಿ, ಆ ಗಿಂಡಿಯಂ ಬೆಳಗಿ,
ಶಿವಪ್ರಸಾದಿಗಳಿಂದ ಶರಣುಹೊಕ್ಕು ಮೊದಲಂತೆ ಪಾದೋದಕವ ಮಾಡಿಟ್ಟು,
ಗಿಂಡಿಯಲ್ಲಿ ತುಂಬಿಟ್ಟುಕೊಂಡು,
ಪ್ರಾಣಾಂತ್ಯಲೀಲೆಸಮಾಪ್ತಪರಿಯಂತರವು ಆಚರಿಸುವುದು.
ಲಿಂಗಪ್ರಸಾದಿಗಳಾದವರು,
ಅಲ್ಲಿಂದ ಗಿಂಡಿ ಒಂದು ತಾವು ಉಳಿದು, ತಾನೊಂದು ಬಳಿಯವಾದಲ್ಲಿ
ಜಂಗಮದ ತೀರ್ಥವ ಪಡೆದು ಸಲಿಸಿ,
ಲಿಂಗಾರ್ಪಿತ ಭೋಗೋಪಭೋಗದಲ್ಲಿರ್ಪವರ ಲಿಂಗಾಂಗಿಗಳೆನಿಸುವರು.
ಈ ಎರಡೂ ಇಲ್ಲವಾದೊಡೆ,
ಪ್ರಸಾದಿಸ್ಥಲವುಳ್ಳವರು ಧರಿಸುವ ಕ್ರಿಯಾಭಸಿತದಿಂದ,
ಪರಿಣಾಮೋದಕವನೊಂದು ಬಟ್ಟಲಲ್ಲಿ ಸ್ವಲ್ಪಮಡಗಿಕೊಂಡು,
ಭಸ್ಮಮಿಶ್ರಂಗೆಯ್ದು ಒಂದೆ ಹೇಳಿದ ಸ್ಮರಣೆಯಿಂದೆ ಸಲಿಸಿ,
ಕಂಡಿತಂಗೈದು. ಷಡ್ರಸಾಮೃತಲಿಂಗಭೋಗದಲ್ಲಿರ್ಪುದೆ
ನಿರವಯಪ್ರಭು ಮಹಾಂತನ ಸೂತ್ರಧಾರಿಗಳೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೪ ॥

೧೫

ಪರಮಾನಂದಲಿಂಗಪಾದೋದಕವ ಭಸ್ಮಮಿಶ್ರಂಗೈದು.
ಕಂಡಿತವ ಮಾಡಿ, ಇಪ್ಪತ್ತೊಂದುಪ್ರಣವವ ಸಂಬಂಧಿಸಿ,

ತನ್ನ ಚಿದ್ಬೆಳಗಿನ ಚಿತ್ಪ್ರಭೆಯಿಂದರ್ಚಿಸಿ,
ಜಂಗಮಲಿಂಗವು ಇಷ್ಟಲಿಂಗಮಂತ್ರಸ್ನಾನಂಗೆಯ್ದು,
ಪ್ರಾಣಲಿಂಗಮಂತ್ರಧೂಳನಮಂ ಮಾಡಿ,
ಭಾವಲಿಂಗಮಂತ್ರದೊಡನೆ ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧಾರಣಂಗೈದು,
ಮೇಲೆ ತಾನು ಶರಣುಹೊಕ್ಕು,
ಆ ಜಂಗಮಲಿಂಗ ದೇವನೊಕ್ಕುಮಿಕ್ಕ ಮಹಾಶೇಷಭಸಿತಮಂ ಬೆಸಗೊಂಡು ;
ಆ ಹಿಂದೆ ಹೇಳಿದ ನಾದಬಿಂದುಕಳಾಪ್ರಣಮದೊಳ್
ಜಂಗಮಲಿಂಗದಂತೆ ಸ್ನಾನಂಗೈದು,
ಚಿನ್ನಾದ ಚಿದ್ಬಿಂದು ಚಿತ್ಕಳಾಪ್ರಣಮದೊಳ್ ಧೂಳನಂ ಮಾಡಿ,
ಪರನಾದಬಿಂದುಕಳಾಪ್ರಣಮದೊಳ್ ಧ್ಯಾನಾರೂಢನಾಗಿ,
ತಾನನಾದಿಯಲ್ಲಿ ಧರಿಸಿಬಂದ ಮೂಲಪ್ರಣಮಲಿಂಗಾಂಗದ ಷಡುಸ್ಥಾನಗಳ
ಘನಗುರುಮುಖದಿಂದರಿದು,
ಅಷ್ಟವಿಧಸಕೀಲಂಗಳಿಂದ ಜಂಗಮಲಿಂಗದೇವನಂತೆ ಧಾರಣಂಗೈದು,
ಚಿದ್ಬೆಳಗಿನೊಳಗೆ ಮಹಾಬೆಳಗಾಗಿರ್ಪವರ,
ನಿರವಯಪ್ರಭು ಮಹಾಂತನ ಪ್ರತಿಬಿಂಬ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೫ ॥

೧೬

ಆ ಹಿಂದೆ ಭಸಿತಕ್ಕೆಂದು ಮಾಡಿ,
ಗಿಂಡಿಯಲ್ಲಿಟ್ಟಂಥ ಲಿಂಗಪಾದೋದಕಪ್ರಸನ್ನ ಪ್ರಸಾದಿಗಳು,
ಲಿಂಗಾರ್ಪಿತವ ಮಾಡಲಾಗದೆಂದುದು ಗುರುವಚನ.
ಅಲ್ಲಿಂದ ಜಂಗಮಲಿಂಗ ಭಕ್ತಗಣಗಳು
ಪರಗುರುವಚನೋಕ್ತಿಯಿಂದ ರುದ್ರಾಕ್ಷಿಗಳ
ಆದಿ ಅಂತ್ಯಮಂ ಸದ್ಗುರುವಿಂದರಿದು,
ಸ್ಥಾನಸ್ಥಾನಂಗಳೊಳು ಮಂತ್ರಸ್ಮರಣೆಯಿಂದ ಧಾರಣಂಗೈದು,
ತನ್ನ ಮೂಲ ಚಿತ್ತುವಿನ ಚಿದ್ಬೆಳಗೆ ತನಗಾಭರಣವಾಗಿರ್ಪುದೆಂದರಿದ ಶರಣನೆ
ನಿರವಯಪ್ರಭು ಮಹಾಂತ ತಾನೇ ನೋಡಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೬ ॥

೧೭

ಪರಮಬೆಳಗಿನಿಂದೆಸೆವ
ನಿಜವೀರಶೈವ ಭಕ್ತಜಂಗಮಲಿಂಗ ಘನಗಂಭೀರರು
ಪಂಚಾಭಿಷೇಕ ಮೊದಲಾದ ಅನಂತ ಅಭಿಷೇಕ
ಪತ್ರಿ ಪುಷ್ಪ ಫಲಹಾರ ಪಂಚಕಜ್ಜಾಯ ಪರಮಾನ್ನ ಪಾಯಸ
ಮೊದಲಾದ ಕಟ್ಟಳೆಗಳ ಮಾಡದೆ,

ವಾರ ತಿಥಿ ನಕ್ಷತ್ರ ವ್ಯತಿಪಾತ ವೈಧೃತಿ,
ಚಂದ್ರಸೂರ್ಯಗ್ರಹಣ ಹುಣ್ಣಿಮೆ ಅಮಾವಾಸ್ಯೆ
ಸತ್ತ ಹೆತ್ತ ಕರ್ಮದ ತಿಥಿಗಳು,
ಕಾರ್ತೀಕ ಮಾಘ ಶ್ರಾವಣ ಶಿವರಾತ್ರಿ ನವರಾತ್ರಿ
ಸಂಕ್ರಾಂತಿ ಕತ್ತಲರಾತ್ರಿ ದಿನರಾತ್ರಿಗಳೆಂಬ
ದಿವಾರ್ಚನೆ ಸಾಮಾನ್ಯದಾರ್ಚನೆ ಮೊದಲಾದ
ಶೈವಜಡಕರ್ಮಗಳ ಹೊದ್ದಲೀಯದೆ,
ಸತ್ಯಶುದ್ಧ ನಡೆನುಡಿಯಿಂದ
ಕೇವಲ ನಿಜಗುರುಲಿಂಗಜಂಗಮಮೂರ್ತಿಗಳ
ಬಂದ ಬರವ ನಿಂದ ನಿಲುಗಡೆಯನರಿದು,
ಅಷ್ಟವಿಧಾರ್ಚನೆ ಷೋಡಶೋಪಚಾರಗಳೊದಗಿದಂತೆ
ನಿಜಾನಂದಭರಿತದಿಂದರ್ಚಿಸಂಗೈದು,
ಪರಶಿವಯೋಗಾನುಸಂಧಾನದಿಂದಾಚರಿಸುವುದೇ
ನಿರವಯಪ್ರಭು ಮಹಾಂತನ ಪ್ರತಿಬಿಂಬರೆಂಬೆ ಕಾಣಾ
ನಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೭ ॥

೧೮

ನಿಃಕಳಂಕ ಶ್ರೀಗುರುವಿನ ಚಿದ್ಗರ್ಭೋದಯ
ವೇಧಾಮಂತ್ರಕ್ರಿಯಾದೀಕ್ಷಾನ್ವಿತ ವೀರಶೈವ ಭಕ್ತಮಾಹೇಶ್ವರರು
ಪ್ರಮಾದವಶದಿಂದ ವಿಘ್ನಾದಿಗಳ ಅಚೇತನದ ವೇಳೆ ಬಂದೊದಗಿ
ಕ್ರಿಯಾಲಿಂಗಾರ್ಪಣ ತಡೆದುನಿಂದಲ್ಲಿ
ಮತ್ತೊಮ್ಮೆ ಒದಗಿದಾಗ್ಗೆ, ನಿನ್ನೆ ನಿಂತ ಕ್ರಿಯೆಗಳೆಂದು
ಎರಡು ಮೂರು ಜಪಗಳ ಮಾಡಿ,
ಎರಡು ಮೂರು ವೇಳೆ ತೀರ್ಥಪ್ರಸಾದಗಳೆಂದು,
ಭಿನ್ನಕ್ರಿಯಾರ್ಪಣಗಳ ಮಾಡಲಾಗದು ಶಿವಪ್ರಸಾದಿಗಳು.
ಸಾಕ್ಷಿ :
''ದಿವಾ ನ ಪೂಜಯೇಲ್ಲಿಂಗಂ ರಾತ್ರೌ ಚೈವ ನ ಪೂಜಯೇತ್ ।
ಸದಾ ಸಂಪೂಜಯೇಲ್ಲಿಂಗಂ ದಿವಾರಾತ್ರಿ ನಿರೋಧತಃ ॥''
ಎಂಬ ಹರನಿರೂಪಪ್ರಮಾಣವಾಗಿ
ಮಾರ್ಗಕ್ರಿಯಾಚರಣೆ ಇಷ್ಟಲಿಂಗಾರೋಪಿತವಾಗಿ,
ಮೀರಿದಕ್ರಿಯಾಚರಣೆಯೇ ಪ್ರಾಣಲಿಂಗಾರೋಪಿತವಾಗಿ,
ಸದಾಸನ್ನಹಿತ ಪರಿಪೂರ್ಣಕ್ರಿಯಾಚರಣೆಯ ಭಾವಲಿಂಗಾರೋಪಿತವಾಗಿ,
ತ್ರಿವಿಧ ತನುಮನದ ವಸ್ತುಗಳೆಲ್ಲ
ಲಿಂಗಾಂಗಸಂಗಸಂಯೋಗವಾದ ನಿಜಲಿಂಗೈಕ್ಯಂಗ

ದಿವರಾತ್ರಿಗಳ ತೊಡಕೇತಕೆಂದಾತ ನಿರವಯಪ್ರಭು ಮಹಾಂತ ತಾನೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೧೮ ||

೧೯

ಅಯ್ಯಾ, ತನತನಗೆ ಚೈತನ್ಯವಿರ್ದು,
ಉಪಚಾರಗಳನುಗುಣದಿಂದೊದಗಿದಲ್ಲಿ,
ದಿನದಾರ್ಚನೆ ಇಷ್ಟಲಿಂಗಾರೋಪಿತವೆಂದು,
ಭಿನ್ನಭಾವಗಳಿಲ್ಲದ ಕ್ರಿಯಾರ್ಚನೆ ನಿಂತಲ್ಲಿ
ತನ್ನ ನಿಜನೈಷ್ಠೆಯೆ ಲಿಂಗಮಂತ್ರದಲ್ಲಚ್ಚೊತ್ತಿ,
ರೂಪಾದ ಭೋಗವೆಲ್ಲ ತೃಣವೆಂದು ತಿರಸ್ಕರಿಸಿರುವುಳ್ಳಂಥವರಾಗಿ,
ತನ್ನ ಸುಚಿತ್ತವೆ ಸ್ನಾನಾಭಿಷೇಕವಾಗಿ,
ಸುಬುದ್ಧಿಯ ಸುಗಂಧಪರಿಮಳವೆನಿಸಿ,
ನಿರಹಂಕಾರವೆ ಅಕ್ಷತವಾಗಿ, ಸುಮನಾದಿ ಪದ್ಮಗಳೆ ಪುಷ್ಪಪತ್ರವೆನಿಸಿ,
ಸುಜ್ಞಾನವೆ ಧೂಪವಾಗಿ, ಸದ್ಭಾವವೆ ದೀಪಾರತಿಯೆನಿಸಿ,
ಸನ್ಮಾನವೆ ನೈವೇದ್ಯವಾಗಿ, ಸಂಪೂರ್ಣವೆ ತಾಂಬೂಲಗೈದು,
ನಿಶ್ಚಿಂತನಿರವಯನಿರಾಲಂಬನಿರ್ಗುಣಾನಂದವೆ ಷೋಡಶೋಪಚಾರವಾಗಿ
ಪರಾತ್ಪರ ಜ್ಯೋತಿರ್ಮಯಪ್ರಮಾಣಲಿಂಗದಲ್ಲಿ ಎರಡಳಿದುಳಿದು
ಲಿಂಗವೆ ಪೂಜ್ಯಪೂಜಕನೆಂದರಿದು,
ಬಚ್ಚಬರಿಯಾನಂದದ ಪರಿಪೂರ್ಣಬ್ರಹ್ಮವಾಗಿ ನಿಂದ ನಿರ್ಧಕರ
ನಿರವಯಪ್ರಭು ಮಹಾಂತರು ಮತ್ತಾರುಂಟು ಹೇಳಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ ? || ೧೯ ||

೨೦

ಇಂತೆಸೆವ ಅಂತರಂಗ ಬಹಿರಂಗ ಪರಿಪೂರ್ಣ ಭಕ್ತಗಣಾರಾಧ್ಯರು,
ಲಿಂಗಜಂಗಮದ ಪಾದಪೂಜೆಯ ಮಾಡುವ ವಿವರವೆಂತೆಂದೊಡೆ :
ಜಂಗಮಮೂರ್ತಿಗಳ ಸಮ್ಮುಖದಲ್ಲಿ ಗದ್ದುಗೆಯ ಹಾಕಿ,
ಗಣಸಮೂಹ ಕೂಡಿದ ಹಾಂಗೆ ಅವರಿಗೆ ಅರ್ಘ್ಯಪಾದ್ಯಾಚಮನವ ಮಾಡಿಸಿ,
ಮೂರ್ತವಮಾಡಿದ ಮೇಲೆ,
ದೀಕ್ಷಾಪಾದೋದಕದಲ್ಲಿ ಚಿದ್ಭಸಿತದಿಂದ ಪಂಚಾಂಗುಲಿಯ ಸ್ಪರ್ಶಿಸಿ
ಚಿನ್ನಾದಪ್ರಣಮವ ಲಿಖಿಸಿದಲ್ಲಿ,
ಪಾದೋದಕ ಭಸ್ಮೋದಕ ಮಂತ್ರೋದಕವೆನಿಸುವದು.
ಇಂತೆಸೆವ ಪರಮಾನಂದ ಜಲದಿಂ ಲಿಂಗಾಭಿಷೇಕವ ಮಾಡಿಸಿ,
ಆ ಶ್ರೀವಿಭೂತಿ ಪುಷ್ಪ ಪತ್ರಿಗಳ ಶೃಂಗರಿಸಿ, ಉಪಚಾರಗಳ ಕೊಟ್ಟು,
ಅವರು ತಾನು ಅಷ್ಟಾವರಣಸ್ತೋತ್ರಗಳಿಂದ,
ಆ ನಿರಂಜನಜಂಗಮಲಿಂಗಕ್ಕೆ ಹಿಂದೆ ಮುಂದೆ

ಲಿಂಗಮೂರ್ತಿಗಳಿಲ್ಲದಂತೆ ಎಡಬಲ ವಿಚಾರಿಸಿ,
ಕೆಡಪಿದ ದಂಡದಂತೆ ಸರ್ವಾಂಗಪ್ರಣುತನಾಗಿ ಪೊಡಮಟ್ಟು,
ಲಿಂಗಜಂಗಮನಿರೀಕ್ಷಣೆಭರಿತವಾಗಿ ನಿಂದ ನಿತ್ಯಮುಕ್ತರೆ
ನಿರವಯಪ್ರಭು ಮಹಾಂತಂಗೆ ಒಪ್ಪಿದ ಶರಣಗಣವೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೨೦ ॥

೨೧

ಹರಹರ ಶಿವಶಿವ ಜಯಜಯ
ನಮೋ ನಮೋ ತ್ರಾಹಿ ತ್ರಾಹಿ ಕರುಣಾಕರ
ಅಭಯಕರ ಸುಧಾಕರ ಚಿದಾಕರ ಮತ್ಪ್ರಾಣನಾಥ
ಸರ್ವಾಧಾರ ಸರ್ವಚೈತನ್ಯಮೂರ್ತಿ ಶ್ರೀಗುರುಲಿಂಗಜಂಗಮವೆ,
ನಿಮ್ಮ ಘನಪಾದಪೂಜೆಯ ಮಾಡುವುದಕ್ಕೆ
ನಿರೂಪವ ಪಾಲಿಸಬೇಕು ಸ್ವಾಮಿಯೆಂದು ಕೃಪಾನಂದವ ಬೆಸಗೊಂಡು,
ಸಮ್ಮುಖದ ಗದ್ದುಗೆಯಲ್ಲಿ ಮೂರ್ತವಮಾಡಿ,
ನಿಜಾನಂದದಿಂದ ಕ್ರಿಯಾಜಂಗಮಮೂರ್ತಿಯ ಕರಕಮಲದಲ್ಲಿ ನೆಲಸಿರುವ
ಪರಾತ್ಪರ ಜ್ಞಾನಜಂಗಮಲಿಂಗಮೂರ್ತಿಯ ಷಟ್ಕೃತಿ ನವಕೃತಿಗಳಲ್ಲಿ
ಅನಾದಿಜ್ಯೋತಿರ್ಮಯ ಮಹಾಪ್ರಣಮಲಿಂಗಂಗಳ
ಅನಿಮಿಷದೃಷ್ಟಿಯಿಂ ನಿರೀಕ್ಷಿಸಿ ಧ್ಯಾನವಿಟ್ಟು,
ಸಾಕಾರ ನಿರಾಕಾರ ಅಷ್ಟವಿಧಾರ್ಚನೆ ಷೋಡಶೋಪಚಾರಗಳ
ಗಣಸಮೂಹವನೊಡಗೂಡಿ,
ಘನಮನೋಲ್ಲಾಸದಿಂದ ಸಮಾಪ್ತವ ಮಾಡಿ ನಮಸ್ಕರಿಸಿ,
ಇದೆ ನಿಃಕಳಂಕ ಸದ್ರೂಪ ಘನಗುರುಮೂರ್ತಿ
ಇಷ್ಟಲಿಂಗಾರ್ಚನ ಎಂದು ಭಾವಭರಿತವಾಗಿ,
ಎಲೆಗಳೆದ ವೃಕ್ಷದಂತೆ ಕರಣಂಗಳುಲುವಿಲ್ಲದೆ ನಿಂದ ನಿಜೋತ್ತಮರೆ
ನಿರವಯಪ್ರಭು ಮಹಾಂತರೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೨೧ ॥

೨೨

ತನ್ನ ವಾಮಕರದಂಗುಲಮಧ್ಯದಲ್ಲಿ ಷಡಕ್ಷರಂಗಳ ಲಿಖಿತಂಗೈದು,
ಸೂಕ್ಷ್ಮದಿಂದರ್ಚಿಸಿ,
ತನ್ನ ಹೃನ್ಮಂದಿರಾಲಯದಲ್ಲಿ ನೆಲೆಸಿರುವ
ಜ್ಯೋತಿರ್ಮಯ ಇಷ್ಟಮಹಾಲಿಂಗಮಂ ನಿರೀಕ್ಷಿಸಿ,
ಆ ಪರಮಜಂಗಮಲಿಂಗದೇವನ ಚರಣಾಂಗುಷ್ಠಗಳ
ತನ್ನ ವಾಮಕರಸ್ಥಲದಲ್ಲಿ ಸತ್ತುಚಿತ್ತಾನಂದನಿತ್ಯಪರಿಪೂರ್ಣ
ಅವಿರಳಪರಂಜ್ಯೋತಿಸ್ವರೂಪವಾದ ಪ್ರಾಣಲಿಂಗವೆಂದು ಭಾವಿಸಿ,

ಪರಮಾನಂದಾಬ್ಧಿಕರಣಜಲದಿಂ ಗಂಧಾಕ್ಷತೆ ಪುಷ್ಪ ಪತ್ರಿ ಮೊದಲಾದ
ಉಪಚಾರ ಮಾಡಬೇಕಾದರೆ ಲಿಂಗಕ್ಕೆ ತೋರಿ ತೋರಿ
ಪಾದಕ್ಕೆ ಅರ್ಪಿಸಲಾಗದು,
ಅದೇನುಕಾರಣವೆಂದರೆ :
ಆ ಪಾದವೆ ನಿರಂಜನಜಂಗಮವಾದ ಕಾರಣ,
ಆ ಭಕ್ತನು ಜಂಗಮಪ್ರಸಾದವ
ಶೂನ್ಯಲಿಂಗದ ಇಷ್ಟಬ್ರಹ್ಮಮೂರ್ತಿಗೆ ಸಮರ್ಪಿಸಿ,
ಆ ಇಷ್ಟಬ್ರಹ್ಮದಿಂದುಳುಮೆಯಾದ ಲಿಂಗಪ್ರಸಾದವನ್ನು
ನಿಃಕಳಂಕಗುರುದೇವನಾದ ಪ್ರಾಣಕಳಾಚೈತನ್ಯ ಅನಿಮಿಷಾರಾಧ್ಯ
ಶ್ರೀಗುರುಮೂರ್ತಿಗೆ ಸಮರ್ಪಿಸಿ,
ಆ ನಿರಂಜನ ಜಂಗಮಲಿಂಗ ಆ ನಿಶ್ಶೂನ್ಯ
ಜಂಗಮಲಿಂಗದಿಂದಾದುಳುಮೆಯಾದ
ಪರಮಾನಂದಪ್ರಸಾದವ, ಆ ಶೂನ್ಯಲಿಂಗವ ಕರಸ್ಥಲದಲ್ಲಿ,
ಆ ನಿರಂಜನಜಂಗಮವ ಕಂಗಳಾಲಯದಲ್ಲಿ,
ಮಿಶ್ರಮಿಶ್ರಂಗಳೊಡನ ಸಂಬಂಧಾಚರಣೆಗಳಿಂದ,
ಚಿದ್ರೂಪ ಚಿದ್ರುಚಿಗಳ ಸಂತೃಪ್ತಿಗಳೊಳ್ ಲೋಲುಪ್ತನಾದ
ನಿಃಕಲಬ್ರಹ್ಮ ಪರಮಗುರುಲಿಂಗಸ್ವಾಮಿಗೆ ಸಮರ್ಪಿಸಿ,
ಆ ನಿರಂಜನ ನಿಶ್ಶೂನ್ಯ ನಿಃಕಳಂಕ ಗುರುಲಿಂಗಜಂಗಮದ
ನಿಜಚಿನ್ಮಯ ಚಿತ್ಕಲಾಪ್ರಸಾದವೆ ಒಬ್ಬುಳಿಯಾಗಿ
ಶರಣಸತಿ ಲಿಂಗಪತಿಯೆಂಬ ಉಭಯವೇಕಸಮರಸದಿಂದ
ಪರಿಣಾಮಕ್ಕೆ ಪರಿಪೂರ್ಣಪ್ರಸಾದಕ್ಕೆ ಪರಿಪೂರ್ಣಪ್ರಸಾದವ
ಜಂಗಮಲಿಂಗ ಲಿಂಗಶರಣನೆಂಬ ಸ್ವಾನುಭಾವಸೂತ್ರವಿಡಿದು,
ತನ್ನ ತಾನರ್ಚಿಸಿ, ತ್ರಿವಿಧಲಿಂಗದೊಳಗೆ ನವಲಿಂಗವ ಹುದುಗಿಸಿ,
ಇದೆ ನಿಶ್ಶೂನ್ಯ ಚಿದ್ರೂಪ ಘನಲಿಂಗಮೂರ್ತಿ ಪ್ರಾಣಲಿಂಗಾರ್ಚನೆಯೆಂದು
ಪರಿಪೂರ್ಣಾನುಭಾವಭರಿತವಾಗಿ,
ಸುಟ್ಟಿ, ಸರವೆಯಂತೆ ಜೀವನವರ್ತನೆಗಳಿಲ್ಲದೆ
ಮಂಗಳಾರತಿಗಳೆತ್ತಿ, ಘನಸಮ್ಮೇಳವೆಲ್ಲ
ಸ್ತೋತ್ರಗಳಿಂದ ನಾದ ಘೋಷಂಗೈದು ತ್ರಿವಿಧಜಪಮಂ ಮಾಡಿ,
ಪುಷ್ಪಾಂಜಳಿಗಳಿಂದ ಪ್ರದಕ್ಷಣದೊಳ್ ನಮಸ್ಕಾರವಂ ಮಾಡಿ
ಚಿದ್ವಳಗಿನೊಳ್ ಮಹಾಬೆಳಗಗೂಡಿ ಎರಡಳಿದೊಂದಾಗಿರಬಲ್ಲರೆ
ನಿರವಯಪ್ರಭು ಮಹಾಂತರು ತಾವೇ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೨೨ ॥

೨೩

ಪರಮಾರಾಧ್ಯಜಂಗಮಾರಾಧನೆಯಂ ಮಾಡಿ, ನಮಸ್ಕಾರವಾದ ಮೇಲೆ,
ಆ ಪ್ರಸಾದ ಗಂಧಾಕ್ಷತೆ ಪುಷ್ಪ ಪತ್ರಿಗಳ
ಲಿಂಗಜಂಗಮ ಜಂಗಮಲಿಂಗಶರಣರು
ಪರಿಣಾಮತೃಪ್ತರಾಗಿ ನಿರ್ಮಾಲ್ಯವ ಮಾಡಿ,
ನಿಕ್ಷೇಪದಿಂದ ಸಮಾಪ್ತವ ಮಾಡಬೇಕಲ್ಲದೆ,
ಉಳಿವಿ ಕಡೆಗಿಟ್ಟು, ತೀರ್ಥವ ಸಲಿಸಿ,
ಪ್ರಸಾದ ಮುಗಿವ ಮಧ್ಯದಲ್ಲಿ ಲಿಂಗಾರ್ಚನೆಗಳ ಮಾಡಲಾಗದು,
ಅಥವಾ ತನಗೆ ಅಷ್ಟವಿಧಾರ್ಚನೆ ಷೋಡಶೋಪಚಾರದ ಭ್ರಾಂತುವಿದ್ದರೆ,
ತೀರ್ಥವ ಪಡೆದುಕೊಂಡ ಸ್ಥಳವ ಬಿಟ್ಟು,
ಏಕಾಂತಸ್ಥಳದಲ್ಲಿ ತಮ್ಮ ಸ್ಥಳವಿದ್ದಂತೆ ಆಚರಿಸುವುದು.
ಆ ಭ್ರಾಂತಿಗಳೆಲ್ಲ ಲಿಂಗಜಂಗಮ ಜಂಗಮಲಿಂಗಶರಣರು
ಪ್ರಸಾದ ಪಾದೋದಕದಲ್ಲಿ ಉಪಚಾರಗಳನಳಿದುಳಿದು,
ನಿಭ್ರಾಂತಗಳಾದೀಶ್ವರರು ಚಮತ್ಕಾರವಾಗಿ,
ಜಂಗಮಪಾದಸ್ಪರಿಶನದಿಂದುದಯವಾದ
ದೀಕ್ಷಾಪಾದೋದಕದಿಂದ ಲಿಂಗಾಂಗಸ್ನಾನಂಗೈದು,
ಚುಳುಕುಮಾತ್ರವಾಗಿ,
ಪಾದೋದಕ ಭಸ್ಮೋದಕ ಶುದ್ಧೋದಕದಿಂದ ಲಿಂಗಮಜ್ಜನವ ಮಾಡಿ,
ಆ ಪ್ರಸಾದಪುಷ್ಪವ ಸ್ವಲ್ಪಮಾತ್ರವ ಧರಿಸಿ,
ಒಂದು ವೇಳೆ ಹಸ್ತಜಪಮಂ ಮಣಿಗಳ ದ್ವಾದಶವನ್ನು ಪ್ರದಕ್ಷಿಸಿ,
ನವಲಿಂಗಮೂರ್ತಿಗಳ ಧ್ಯಾನದಿಂದ ಘನಪಾದತೀರ್ಥಪ್ರಸಾದವ ಮುಗಿದು,
ಪ್ರಸನ್ನಪ್ರಸಾದದಲ್ಲಿ ನಿಜಲೋಲುಪ್ತರಾದವರೆ
ನಿರವಯಪ್ರಭು ಮಹಾಂತಗಣವೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೨೩ ||

೨೪

ಅನಾದಿಶರಣ ಜಂಗಮಲಿಂಗದ ಪಾದಪೂಜೆಯನಿಳುಹಿದ ಶರಣನು,
ಪಾದೋದಕ ಸ್ಪರಿಶನೋದಕ ಭಸ್ಮೋದಕ ಸಂಬಂಧವಾದ
ಪಾತ್ರೆಯ ಉದಕದೊಳಗೆ ಮೂಲಪ್ರಣವವ ಲಿಖಿಸಿ,
ಚಿಟ್ಟಿಂದುವನಿಟ್ಟು, ಪಡಕೊಂಬುವ ತಟ್ಟೆ ಬಟ್ಟಲೊಳಗೆ
ಷಡಕ್ಷರಪ್ರಣವವ ಸಪ್ತಕೋಟಿಮಹಾಮಂತ್ರಗಳಿಗೆ ಜನನಸ್ಥಾನವಾದ
ಷಡುಪ್ರಣವಂಗಳ ಪ್ರಥಮ ತತ್ವಯಲ್ಲಿ,
ಪೂರ್ವಪಶ್ಚಿಮ ಉತ್ತರದಕ್ಷಿಣಕ್ಕ ಷಡ್ವಿಧ ರೇಖೆಗಳ ರಚಿಸಿ,
ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನಮುಖಸ್ಥಾನವರಿದು,

ಪಂಚದಿಕ್ಕುಗಳಲ್ಲಿ ಪಂಚಪ್ರಣಮವ ಲಿಖಿಸಿ,
ದ್ವಿತೀಯ ಬಟ್ಟಲೊಳಗೆ ಮೂಲಪ್ರಣಮವ ಲಿಖಿಸಿ,
ಪಾದಾಂಗುಷ್ಠದಡಿಯಲ್ಲಿಟ್ಟು, ತನ್ನ ವಾಮಕರದಂಗುಲಿಗಳೊಳಗೆ
ಲಿಂಗಜಂಗಮ ಜಂಗಮಲಿಂಗ ಲಿಂಗಶರಣ ಬಸವಲಿಂಗ ಲಿಂಗಪ್ರಸಾದವೆಂಬ
ಇಪ್ಪತ್ತೈದು ಪ್ರಣಮಗಳ ಪ್ರಭುಲಿಂಗಲೀಲೆಯಿಂದು
ಆ ಕರಸ್ಥಲದಿರವ ಗುರುಮುಖದಿಂದರಿದು
ತನ್ನ ತಾ ಮರೆದಿಪ್ಪವರೆ ನಿರವಯಮಹಾಂತರೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೨೪ ॥

೨೫

ಪರಮಗುರು ಲಿಂಗಜಂಗಮವ
ನಿಜವಿಶ್ವಾಸ ನೈಷ್ಠೆಯೊಳ್ ಮೂರ್ತಿಗೊಳಿಸಿ ಅರ್ಚಿಸುವ
ಸುಚಿತ್ತಕಮಲದಳಂಗಳೆಲ್ಲ ಒಂದೂಡಲಾಗಿ,
ಭಕ್ತನ ಕರಕಮಲ, ಜಂಗಮದ ಚರಣಕಮಲ,
ಈ ನಾಲ್ಕರಲ್ಲಿ ಸಂಬಂಧವಾದ ಪ್ರಣಮಮೂಳ್ ಕೂಟದ
ನೇತ್ರಕಮಲ ಒಂದಾದ,
ಸಮರಸಕ್ಯವಾಗಿ ಕೂಡಿದ ತ್ರಿಕೂಟಸಂಗಮಸ್ಥಾನವಿದೆ.
ಅಷ್ಟಾಷಷ್ಟಿವರಕೋಟಿ ತೀರ್ಥಸ್ಥಾನವಿದೆ.
ದೇವಗಂಗೆ ನೀಲಗಂಗೆ ಶಿವಗಂಗಾ ಸರಸ್ವತಿ ಯಮುನಾಸ್ಥಾನವಿದೆ.
ಚಿತ್ಸೂರ್ಯ ಚಂದ್ರಾಗ್ನಿಮಂಡಲವಿದೆ.
ಜ್ಯೋತಿರ್ಮಂಡಲ ಅಖಂಡಜ್ಯೋತಿರ್ಮಂಡಲ
ಅಖಂಡಮಹಾಪರಿಪೂರ್ಣಜ್ಯೋತಿರ್ಮಂಡಲ ಸ್ಥಾನವಿದೆ.
ರೋಷವೆಂಬ ಕಾಲರತಿಕ್ರೀಡಾಭ್ರಾಂತೆಂಬ ಕಾಮ
ಆಸೆ ಆಮಿಷ ಲೋಭ ಮೋಹ ಮದ ಮತ್ಸರವೆಂಬ
ಮಾಯಾ ಸಂಸಾರಸಂಕಲ್ಪ ವಿಕಲ್ಪಂಗಳ ಹಿಂದುಳಿದು,
ಆದ್ಯರು ಭೇದ್ಯರು ವೇದ್ಯರು ಸಾಧ್ಯರುಯೆಂದವತರಿಸಿ,
ಜಿಹ್ವಾತುರ ಗುಹ್ಯಾತುರ ಅರ್ಥಾತುರ
ತ್ಯಾಗಾತುರ ಭೋಗಾತುರ ಯೋಗಾತುರ ಕಡೆಯಾದ
ಅನಂತ ಆತುರಗಳೆಂಬ ಷಡಿಂದ್ರೀಕರಣ ವಿಷಯವ್ಯಾಪಾರಂಗಳ
ಜೊಳ್ಳುಮಾಡಿ ತೂರಿ, ಜಗದಾದಿ ಗಟ್ಟಿಬೀಜವಾಗಿ,
ನಿಂದ ನಿಲುಕಡೆಯ ಉಳಿದ ಉಳುಮೆಯ ಮಹಾಘನದುನ್ಮನಿಸ್ಥಾನವಿದೆ.
ಎನ್ನ ಭಕ್ತಿ–ಜ್ಞಾನ–ವೈರಾಗ್ಯ–ಕ್ರಿಯಾಚಾರ
ಸತ್ಯಶುದ್ಧ ನಿಜನಡೆನುಡಿಗಳ ಕರುಣಿಸಿ,
ಅಂಗ–ಮನ–ಪ್ರಾಣ–ಭಾವ–ಕರಣೇಂದ್ರಿಗಳ ಪಾವನವೆನಿಸಿ ಸಲಹಿದ
ಪರಮಾಮೃತಸುಧೆಯಿದೆ.

ಭಕ್ತಸ್ಥಲ ವಿರಕ್ತಸ್ಥಲ ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಲ
ಶರಣಸ್ಥಲ ಐಕ್ಯಸ್ಥಲ ನಿಃಕಳಂಕಸ್ಥಲ ನಿರ್ಮಾಯಸ್ಥಲ ನಿರಾಲಂಬಸ್ಥಲ
ನಿಃಪ್ರಪಂಚಸ್ಥಲ ನಿಜಾನಂದಸ್ಥಲ ನಿರೂಪಾಧಿಕಸ್ಥಲ ನಿರ್ನಾಮಕಸ್ಥಲ
ನಿರ್ಗುಣಸ್ಥಲ ಸಗುಣಸ್ಥಲ ನಿತ್ಯತೃಪ್ತಸ್ಥಲ
ಕಾಯಾರ್ಪಣಸ್ಥಲ ಕರಣಾರ್ಪಣಸ್ಥಲ ಭಾವಾರ್ಪಣಸ್ಥಲ
ಪರಿಪೂರ್ಣಾರ್ಪಣಸ್ಥಲ ನಿರವಯಸ್ಥಲವೆ ಕಡೆಯಾದ
ಏಕವಿಂಶತಿ ದೀಕ್ಷಾನುಭಾವ ಏಕವಿಂಶತಿ ಯುಗಂಗಳನೊಳಗೊಂಡು
ಅಣುವಿಂಗೆ ಪರಮಾಣುವಾಗಿ, ಮಹತ್ತಿಂಗೆ ಘನಮಹತ್ತಾಗಿ,
ಸೃಷ್ಟಿ, ಸ್ಥಿತಿಲಯಂಗಳಿಗೆ ಕಾರಣಾರ್ಥ
ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಪರಮಾನಂದ
ಪಂಚಪರುಷದ ಖಣಿಯಿದೆಯೆಂದು
ಪೂರ್ಣಾನುಭಾವಭರಿತವಾದ ನಿರ್ದೇಹಿಗಳೆ
ನಿರವಯಪ್ರಭು ಮಹಾಂತಘನವೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೨೫ ॥

೨೬

ನಿರಾವಲಂಬಜಂಗಮಲಿಂಗಮೂರ್ತಿಯ
ಚರಣಕಮಲದಡಿಯಲ್ಲಿ ಸ್ಥಾಪ್ಯವಾದ ಹಸ್ತಕಮಲದಲ್ಲಿ
ಶಕ್ತಿಸಂಬಂಧವಾದ ಕಿರಿಬೆರಳು ಶಿವಸಂಬಂಧವಾಗಿ ರಾಜಿಸುವಲ್ಲಿ
ಅಂಗುಷ್ಠವ ಕೂಡಿಸಿ, ತರ್ಜನಿ ಮಧ್ಯ ಅನಾಮಿಕಾಂಗುಲಿಗಳಲ್ಲಿ
ಅನಾದಿವಿಡಿದುಬಂದ ಜ್ಞಾನಗುರುಲಿಂಗಜಂಗಮಸಂಬಂಧವಾಗಿರ್ಪುದು.
ಆ ಜಂಗಮಮೂರ್ತಿಯ ಅಂಗುಷ್ಠವೆರಡು ಮಧ್ಯದಲ್ಲಿ ಕೂಡಿ
ಆದಿವಿಡಿದುಬಂದ ಕ್ರಿಯಾಗುರುಲಿಂಗಜಂಗಮಸಂಬಂಧವಾಗಿರ್ಪುದು.
ಇಂತೆಸೆವ ಸಾಕಾರ ನಿರಾಕಾರದ ನಿಲುಕಡೆಯ
ಗುರುಸ್ವಾನುಭಾವದಿಂದರಿದು ಆನಂದಿಸುವ ನಿಲುಕಡೆಯೆಂತೆಂದೊಡೆ :
ಆ ಜಂಗಮಮೂರ್ತಿಗಳಿಗೆ ಲಿಂಗಜಂಗಮದ ಕ್ರಿಯಾಪಾದೋದಕ
ಪ್ರಸಾದಸೇವನೆ ಮಾಡಿದುದರಿಂದ
ಆ ಜಂಗಮಮೂರ್ತಿಗಳಲ್ಲಿ ಆದಿವಿಡಿದು ಬಂದ
ಕ್ರಿಯಾಗುರುಲಿಂಗಜಂಗಮಸ್ಥಲಸಂಬಂಧವಾಗಿರ್ಪುದು.
ಆ ಸದ್ಭಕ್ತಗಣಂಗಳಲ್ಲಿ ಜಂಗಮಲಿಂಗದ
ಜ್ಞಾನಪ್ರಸಾದ ಪಾದೋದಕಸೇವನೆ ಮಾಡಿದುದರಿಂದ
ಆ ಸದ್ಭಕ್ತಗಣಂಗಳಿಗೆ ಅನಾದಿವಿಡಿದುಬಂದ
ಜ್ಞಾನಗುರುಲಿಂಗಜಂಗಮಸ್ಥಲ ಸಂಬಂಧವಾಗಿರ್ಪುದು.
ಈ ನಿಲುಕಡೆಯನರಿದ ಸಂಗಸಮರಸೈಕ್ಯರ

ನಿರವಯಪ್ರಭು ಮಹಾಂತರೆಂಬ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೨೭ ||

೨೮

ಇಂತೆಂಬ ಭಕ್ತ ಜಂಗಮಸ್ಥಲದ ಆದಿ ಅನಾದಿಯನರಿದು,
ಮಾಯಾಭೋಗ ಮರೆದು, ಜಂಗಮಾರಾಧನೆಯಂ ಮಾಡಿ,
ಘನಪಾದತೀರ್ಥವ ಪಡಕೊಂಬುವ ಶಿವಶರಣನು
ಅನಿಮಿಷಾವಲೋಕನ ಪೂರ್ಣದೃಷ್ಟಿಯಿಂದ
ಚಿತ್ಸೂರ್ಯ ಜ್ಯೋತಿರ್ಮಂಡಲಸಂಬಂಧವಾದ
ಬಲದಂಗುಷ್ಠದ ಮೇಲೆ ಚತುರಂಗುಲಿಪ್ರಮಾಣದಿಂದ
ಬಿಂದು ಬಿಂದುಗಳದುರಿದಂತೆ ನೀಡುವಾಗ,
ಆ ಸ್ಥಾನದಲ್ಲಿ ತನ್ನ ದೀಕ್ಷಾಗುರು ಇಷ್ಟಲಿಂಗಮೂರ್ತಿಯ ಧ್ಯಾನಿಸುವುದು.
ಅಲ್ಲಿ ನಾದಬಿಂದುಕಳೆ ಚಿನ್ನಾದಬಿಂದುಕಳೆಗಳ
ದೀರ್ಘಬಿಂದುಗಳು ಕೂಡಿದಲ್ಲಿ ಮೂಲಷಡಕ್ಷರವೆನಿಸುವುದು.
ಆ ಷಡಕ್ಷರಂಗಳ ಆರುವೇಳೆ ಘನಮನಮಂತ್ರವಾಗಿ
ಅಲ್ಲಿಂದ ಚಿಚ್ಚಂದ್ರ ಅಖಂಡ ಜ್ಯೋತಿರ್ಮಂಡಲಸಂಬಂಧವಾದ
ಎಡದಂಗುಷ್ಠದಮೇಲೆ ಮೊದಲಂತೆ ನೀಡುವಾಗ,
ಆ ಸ್ಥಾನದಲ್ಲಿ ತನ್ನ ಶಿಕ್ಷಾಗುರು ಪ್ರಾಣಲಿಂಗಮೂರ್ತಿಯ ಧ್ಯಾನಿಸುವುದು.
ಅಲ್ಲಿ ಸತ್ತುಚಿತ್ತಾನಂದನಿತ್ಯಪರಿಪೂರ್ಣವೆಂಬ ಪಂಚಾಕ್ಷರದೊಳು
ದೀರ್ಘಬಿಂದು ಕೂಡಲಾಗಿ ಪರಮಪಂಚಾಕ್ಷರವೆನಿಸುವುದು.
ಆ ಪರಮಪಂಚಾಕ್ಷರವು ಐದು ವೇಳೆ ಮನಮಂತ್ರಧ್ಯಾನವಾಗಿ
ಅಲ್ಲಿಂದ ಚಿದಗ್ನಿ ಅಖಂಡಮಹಾಪರಿಪೂರ್ಣಜ್ಯೋತಿರ್ಮಂಡಲಸಂಬಂಧವಾದ
ಉಭಯಾಂಗುಷ್ಠಮಧ್ಯದಲ್ಲಿ ನೀಡುವಂತೆ ನೀಡುವಾಗ್ಗೆ,
ಆ ಸ್ಥಾನದಲ್ಲಿ ತನ್ನ ಮೋಕ್ಷಗುರು
ಅನಾದಿಭಾವಲಿಂಗಮೂರ್ತಿಯ ಧ್ಯಾನಿಸುವುದು.
ಅವಿರಳಮೂರ್ತಿ ಪರಾತ್ಪರ ಜ್ಯೋತಿರ್ಮಯ
ಅಖಂಡಜ್ಯೋತಿರ್ಮಯ ಅಖಂಡ ಮಹಾಜ್ಯೋತಿರ್ಮಯ
ನಿತ್ಯತೃಪ್ತ ನಿಃಕಳಂಕ ನಿಶ್ಶೂನ್ಯ ನಿರಾತಂಕವೆಂಬ
ನವಮಾಕ್ಷರದೊಳಗೆ ದೀರ್ಘಬಿಂದು ಕೂಡಲಾಗಿ.
ಅನಾದಿಮೂಲದೊಡೆಯ ನವಪ್ರಣಮಮಂತ್ರವೆನಿಸುವುದು.
ಆ ಪ್ರಣಮಂಗಳಂ ಒಂದೆವೇಳೆ
ಪರಿಪೂರ್ಣ ನಿಜದೃಷ್ಟಿಯಿಂದ ಉನ್ಮನಘನಮಂತ್ರವ ಧ್ಯಾನವಾಗಿ
ಅಲ್ಲಿಂದ ಮಿಳ್ಳಿಯ ಮುಚ್ಚಿಟ್ಟು ದ್ರವವನಾರಿಸಿ,
ನಿರವಯತೀರ್ಥವ ನಿರವಯಲಿಂಗಜಂಗಮಕ್ಕೆ

ಸ್ಪರಿಶನತೃಪ್ತಿಯ ಸಮರ್ಪಿಸಿದ ಪರಿಣಾಮತೃಪ್ತರ
ನಿರವಯಪ್ರಭು ಮಹಾಂತರೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೨೭ ||

**೨೮**

ನಿರವಯರ್ಪಿತವಾದ ತದನಂತರದೊಳು
ಚಿದ್ಘಸ್ಮಧಾರಣಂಗೈದು, ಸರ್ವೋಪಚಾರವನುಳಿದು,
ಪತ್ರಿ ಪುಷ್ಪಗಳ್ಯಾವುದಾದರೂ ಒಂದೇ ಧರಿಸಿ,
ತನ್ನ ಹೃನ್ಮಂದಿರದಲ್ಲಿ ನೆಲೆಸಿರುವ ವಸ್ತುವು ಬೇರೆ, ನಾ ಬೇರೆಂಬ
ಉಭಯಭಾವಮಂ ಭಾವಸ್ಥಲ ಮನಸ್ಥಲ ಕರಸ್ಥಲ ಪರಿಪೂರ್ಣಸ್ಥಲವ ಕಾಣದೆ
ಇದ್ದಾಗೆ ಸರಿಮಾಡಿ, ಈ ತತ್ಸಮಯವೆಂತಾಯಿತೆಂದೊಡೆ :
ಕ್ಷೀರ ಕ್ಷೀರ ಕೂಡಿದಂತೆ, ಘೃತ ಘೃತ ಕೂಡಿದಂತೆ,
ಜ್ಯೋತಿ ಜ್ಯೋತಿ ಒಂದಾದಂತೆ, ಉದಕ ಉದಕವ ಕೂಟದಂತೆ,
ಕೇವಲ ಅಂಗ ಲಿಂಗದಲ್ಲಿ ಲಿಂಗಗುರುಚರಪಾದೋದಕ
ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರವೆಂಬ
ಚಿದಾಬ್ಧಿಸಂಗ ಚಿದ್ಬೆಳಗಿನ ಸಮರಸದಲ್ಲಿ
ಆ ಸಮರಸಪರಮಾಣುಮಹಾಂತದೈಕ್ಯದಲ್ಲಿ
ಆ ಐಕ್ಯ ನಿರವಯಬ್ರಹ್ಮವೆಂಬ ಕುರುಹು ನಷ್ಟವಾಗಿ,
ತಾನೆ ತಾನಾದಂತೆಯೆಂದು, ಒಳಹೊರಗೆನ್ನದೆ,
ಈ ಕೂಟವೆ ನಿರಂಜನ ಚಿನ್ಮಯರೂಪ ಘನಗಂಭೀರ ಜಂಗಮಮೂರ್ತಿ
ಭಾವಲಿಂಗಾರ್ಚನೆ ಇದೆಯೆಂದು,
ಮಹಾಜ್ಞಾನ ಪರಿಪೂರ್ಣಾನುಭಾವದಿಂದ ಪರಮಕಾಷ್ಠಿಯನ್ನೈದು,
ಹಿಂದುಮುಂದಣ ಭವಮಂ ನೀಗಿ, ತನ್ನ ಘನಮನೋಲ್ಲಾಸ ನಿಜನೈಷ್ಠೆ ಬೆಳಗೆ,
ಅಷ್ಟವಿಧಾರ್ಚನೆ ಷೋಡಶೋಪಚಾರವಾಗಿ,
ಭಕ್ತಜಂಗಮವೆಂಬುಭಯವಳಿದುಳಿದು ನಿಂದ ನಿರ್ವಾಣಪದಸ್ಥಾನಿಗಳೆ
ನಿರವಯಪ್ರಭು ಮಹಾಂತರೆಂದವರಲ್ಲಿ ಅಚ್ಯುತ್ತಿದ್ದಂತಿರ್ಪರು ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೨೮ ||

**೨೯**

ಪರಮಾನುಭಾವಜಂಗಮಾರಾಧನೆಗೆಂದು
ಒಂದ ಪತ್ರಿಮಾಡ್ರಿ ಏಕದಳಪದ್ಮವ ಸಮರ್ಪಿಸಿ,
ಬಚ್ಚಬರಿಯಾನಂದಾಬ್ಧಿಯಲ್ಲಿ ಲೋಲುಪ್ತರಾಗಿರ್ಪರು
ಸದ್‌ಭಕ್ತಶರಣಗಣಾರಾಧ್ಯರು.
ಈ ಪೂಜಾಸ್ಥಾನದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಲ್ಲವು.
ಅದೇನು ಕಾರಣವೆಂದಡೆ :

ಸಗುಣ–ನಿರ್ಗುಣ, ಸಾಕಾರ–ನಿರಾಕಾರ,
ಆದಿಲಿಂಗ ಅನಾದಿಶರಣಸಂಬಂಧವಿಡಿದು,
ಸರ್ವೋಪಚಾರಪೂಜೆಗಳೆರಡು ನಿತ್ಯವಾದ
ಅಂತರಂಗದ ಪರಿಪೂರ್ಣದ್ರವ್ಯ ನಿರಂಜನಪೂಜೆಯೆಂದು
ಇಲ್ಲಿಗೆ ಸದ್ರೂಪವಾದ ಗುರು, ಚಿದ್ರೂಪವಾದ ಲಿಂಗ,
ಚಿನ್ಮಯರೂಪವಾದ ಜಂಗಮಾರ್ಚನೆ.
ಈ ಮೂರು ಸಂಬಂಧಾಚರಣೆಯಾಗಿರ್ಪುವು.
ಈ ನಿಲುಕಡೆಯ ಮೀರಿ ಶೈವಭಿನ್ನಕರ್ಮಿಗಳಂತೆ
ತೀರ್ಥದಲ್ಲಿ ಪೂಜೆಯೊಂದ ಮಾಡಲಾಗದು.
ಅದೇನುಕಾರಣವೆಂದಡೆ :
ಶರಣನ ಸದ್ರೂಪವಾದ ಚಿತ್ಕಾಯದಲ್ಲಿ ಸಂಬಂಧವಾದ
ನಿಜೇಷ್ಟಲಿಂಗ ವೃತ್ತಗೋಳಕಮುಖಂಗಳಲ್ಲಿ
ದೀಕ್ಷಾಗುರು ಮೋಕ್ಷಾಗುರು ಶಿಕ್ಷಾಗುರುಸ್ಥಲವಾದ
ಸಾಕಾರಗುರುಲಿಂಗಜಂಗಮವಾಗಿ ನೆಲಸಿರ್ಪುದುದರಿಂದ
ಆ ಇಷ್ಟಲಿಂಗಸೂತ್ರವಿಡಿದು,
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದೆ
ಸಗುಣಾರ್ಚನೆಯೊಳಗಿನ ಕ್ರಿಯಾರ್ಚನೆಯು.
ಇದೀಗ ಅನಾದಿಪ್ರಮಥಗಣ ಸುಕರಾರ್ಚನೆ ಸೂತ್ರವು.
ಶರಣನ ಚಿದ್ರೂಪವಾದ ಚಿತ್‌ಪ್ರಾಣದಲ್ಲಿ ಸಂಬಂಧವಾದ ಚಿತ್ಪ್ರಾಣಲಿಂಗ
ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ,
ಅರ್ಧಚಂದ್ರಾಕೃತಿ, ದರ್ಪಣಾಕೃತಿ, ಜ್ಯೋತಿರಾಕೃತಿಗಳಲ್ಲಿ
ಕಾಯಾನುಗ್ರಹ ಪ್ರಾಣಾನುಗ್ರಹ ಇಂದ್ರಿಯಾನುಗ್ರಹಸ್ಥಲವಾದ
ನಿರಾಕಾರ ಚಿದ್ವಿಭೂತಿ ರುದ್ರಾಕ್ಷಿ ಮಂತ್ರವಾಗಿ ನೆಲಸಿರ್ಪುದುದರಿಂದ
ಆ ಪ್ರಾಣಲಿಂಗಸೂತ್ರವಿಡಿದು, ಮಂತ್ರ ಧ್ಯಾನ ಜಪಸ್ತೋತ್ರಂಗಳಿಂದ
ಸೂಕ್ಷ್ಮಾರ್ಚನೆಯ ಮಾಡುವುದೆ ಸಗುಣಾರ್ಚನೆಯೊಳಗಿನ ಜ್ಞಾನಾರ್ಚನೆಯು.
ಇದೀಗ ಅನಾದಿಪ್ರಮಥಗಣ ನಿರಾರ್ಚನ ಸೂತ್ರವು.
ಶರಣಚಿನ್ಮಯರೂಪವಾದ ಚಿತ್ಸೂರ್ಯಚಂದ್ರಾಗ್ನಿಮಂಡಲತ್ರಯಂಗಳಲ್ಲಿ
ಪರಮಾಣುಮೂರ್ತಿ ಭಾವಲಿಂಗ ಅಖಂಡಜ್ಯೋತಿರಾಕೃತಿ
ಅಖಂಡಮಹಾಜ್ಯೋತಿರಾಕೃತಿಗಳಲ್ಲಿ ಅಖಂಡಮಹಾಚಿಜ್ಜ್ಯೋತಿರಾಕೃತಿಗಳಲ್ಲಿ
ಕಾಯಾರ್ಪಣ ಕರಣಾರ್ಪಣ ಭಾವಾರ್ಪಣ ಪರಿಣಾಮಾರ್ಪಣಸ್ಥಲವಾದ
ನಿರವಯಚಿತ್ಪಾದೋದಕ ಚಿತ್ಪ್ರಸಾದವಾಗಿ ನೆಲಸಿರ್ಪುವುದರಿಂದ
ಆ ಭಾವಲಿಂಗಸೂತ್ರವಿಡಿದು ಮನೋಲಯ ನಿರಂಜನವಾದ ಘನಮನದಿಂದ
ಕರಣಾರ್ಚನೆಯ ಮಾಡುವುದೆ ಸಗುಣಾರ್ಚನೆಯೊಳಗಿನ ಮಹಾಜ್ಞಾನಿಯು.
ಇದೀಗ ಅನಾದಿಪ್ರಮಥಗಣ ನಿರವಯಾರ್ಚನೆಯ ಸೂತ್ರವು.

ಈ ನಿಲುಕಡೆಗಳಿಂದ ಪ್ರಮಥಗಣ ಹೋದ ಮಾರ್ಗವ ತಿಳಿದು,
ಸಾಕಾರವಾದ ಕಾಯವಿಡಿದು ಬಂದ
ರೂಪಾದ ಅಷ್ಟವಿಧಾರ್ಚನೆ ಷೋಡಶೋಪಚಾರವ
ಗುರುಲಿಂಗಜಂಗಮಕ್ಕೆ ಮಾಡುವುದೇ ಕಾಯಾರ್ಚನೆಯೆನಿಸುವುದು.
ನಿರಾಕಾರವಾದ ಕರಣವಿಡಿದು ಬಂದ ಚಿದ್ರೂಪವಾದ
ಮಂತ್ರ ಧ್ಯಾನ ಜಪಸ್ತೋತ್ರಂಗಳ
ಚಿದ್ವಿಭೂತಿ ರುದ್ರಾಕ್ಷಿ ಮಂತ್ರಕ್ಕೆ ಮಾಡುವುದೆ ಕರಣಾರ್ಚನೆಯೆನಿಸುವುದು.
ನಿರವಯವಾದ ಭಾವವಿಡಿದು ಬಂದ ಚಿನ್ಮಯರೂಪಾದ
ಮನೋಲಯ ನಿರಂಜನ ಘನಮನೋಲ್ಲಾಸ ಚಿದ್ಬೆಳಗುಗಳ
ಚಿತ್ಪಾದತೀರ್ಥ ಪ್ರಸಾದಕ್ಕೆ ಮಾಡುವುದೆ ಭಾವಾರ್ಚನೆಯೆನಿಸುವುದು.
ಓಂಗೆ ಪೂರ್ವಪುರಾತನೋಕ್ತಿಯಿಂದ ಸಾಕಾರವಾದ ಕಾಯಾರ್ಚನೆಯ
ಕರಸ್ಥಲದ ಇಷ್ಟಲಿಂಗಕ್ಕೆ, ಆ ಇಷ್ಟಲಿಂಗಕ್ಕೆ ಚೈತನ್ಯವಾದ
ಚರಲಿಂಗಪಾದಕ್ಕೆ ಮಾಡುವುದು ಸಾಧ್ಯ.
ಗಣಂಗಳು ನಿರಾಕಾರವಾದ ಕರಣಾರ್ಚನೆಯ
ಚರಜಂಗಮಲಿಂಗದ ಚರಣಾಬ್ಜದ ಕೊನೆಮೊನೆಯೊಳಗೆ
ಮೂಲಮಂತ್ರಮೂರ್ತಿ ಚಿನ್ಮಂಡಲಾಧಿಪತಿ ಪ್ರಾಣಲಿಂಗಸೂತ್ರಂಗಳೊಳ್
ಚಿತ್ಕರಣಂಗಳೊಂದುಗೂಡಿ ಪಕ್ಷಿಮಾಡ್ರಿ ಏಕಕುಸಮದೊಳು ಹುದುಗಿ
ನಿಜದೃಷ್ಟಿ ಕಡೆ ಸೂಸಲೀಯದೆ,
ನಿರಂಜನಜಂಗಮಾರ್ಚನೆಯು ಮೊದಲಾದ
ಚಿದ್ವಿಭೂತಿರುದ್ರಾಕ್ಷಿ ಮಂತ್ರಬ್ರಹ್ಮಕ್ಕೆ ಮಾಡುವುದು ಸಾಧ್ಯ.
ಗಣಂಗಳು ನಿರವಯವಾದ ಭಾವಾರ್ಚನೆಯ
ಚರಜಂಗಮ ಜಂಗಮಲಿಂಗ ಲಿಂಗಶರಣ ಶರಣ ವಿಭೂತಿ ರುದ್ರಾಕ್ಷಿ ಮಂತ್ರ,
ಆ ಚಿದ್ವಿಭೂತಿ ರುದ್ರಾಕ್ಷಿ ಮಂತ್ರವೆ
ಪರಮಪರುಷಾಂಬುಧಿ ಪರಮಪರುಷಾನಂದದ ಖಣಿ
ಚಿತ್ಪಾದೋದಕ ಪ್ರಸಾದ.
ಆ ಚಿತ್ಪಾದೋದಕಪ್ರಸಾದ ಮಂತ್ರಮಣಿ ವಿಭೂತಿ
ಶರಣಲಿಂಗಜಂಗಮಚರವೆ ಘನಕ್ಕೆ ಮಹಾಘನವೆಂದಾರಾಧಿಸಿ,
ಕೂಡಿ ಎರಡಳಿದು ಭಕ್ತನೆಂಬೆರಡಕ್ಷರವೆ ಪಾವನಾರ್ಥಚಿದಂಗ,
ಆ ಚಿದ್ಘನಲಿಂಗವೆಂದಷ್ಟಾವರಣಸ್ವರೂಪ.
ಚಿದ್ಘನಗುರು ತಾನೆ ತಾನಾದ ಬಯಲಪೂಜೆಗಳರಿದಾನಂದಿಸುವವರ
ನಿರವಯಪ್ರಭು ಮಹಾಂತನ ಘನಕ್ಕೆ ಘನವೆಂದವರ ಆಳಿನಾಳಾಗಿರ್ಪೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೨೯ ||

೩೦

ಅನಾದಿ ಶರಣಲಿಂಗ ಗುರುಭಕ್ತ ಜಂಗಮದ
ಏಕಸಮರಸೈಕ್ಯ ಅಭಿನ್ನರ್ಚನೆಗಳಲ್ಲಿ ತೀರ್ಥಪ್ರಸಾದ ಪೂಜೆಯ ಸಂಬಂಧವೆನಿಸಿ,
ಪೂರ್ವಪುರಾತನರೋಕ್ತಿಯಿಂದ ಚಿದ್ಘನಪಾದತೀರ್ಥವ ಪಡಕೊಂಡ
ಶಿವಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣನು
ಕಾಯ–ಕರಣ–ಭಾವಗಳ ಸಂಚಲಗಳನಳಿದುಳಿದು ನಿಃಸಂಚಲನಾಗಿ,
ಕೇವಲ ಕಿಂಕುರ್ವಾಣ ಪರಿಪೂರ್ಣಸಾವಧಾನ ಭಯಭಕ್ತಿಯಿಂದ
ಆ ತೀರ್ಥದ ಬಟ್ಟಲೆತ್ತಿ, ಆ ಜಂಗಮಲಿಂಗಮೂರ್ತಿಗೆ
ಶರಣಾರ್ಥಿಸ್ವಾಮಿ, ಮಹಾಲಿಂಗಾರ್ಪಣವ ಮಾಡಬೇಕೆಂದು
ಅಭಿವಂದಿಸಿದಲ್ಲಿ,
ಆ ಜಂಗಮಲಿಂಗಶರಣನು ಘನಮಹಾಮಂತ್ರಸೂತ್ರವಿಡಿದು,
ಪರಿಪೂರ್ಣಾನಂದ ಸಾವಧಾನಭಕ್ತಿ ಮುಖದಲ್ಲಿ ಸಲಿಸಿದಮೇಲೆ,
ಪೂರ್ವದಂತೆ ಆ ಪ್ರಸನ್ನಪ್ರಸಾದತೀರ್ಥದ ಬಟ್ಟಲ ಗರ್ಡುಗೆಯಲ್ಲಿ
ಮೂರ್ತಗೊಳಿಸಿ ಆ ಮೇಲೆ ತಾನು ಗರ್ಡುಗೆಯ ಬಿಟ್ಟೆದ್ದು,
ಪರಾತ್ಪರ ಬ್ರಹ್ಮಜ್ಯೋತಿರ್ಮಯಸ್ವರೂಪ ಜಂಗಮಲಿಂಗ ಲಿಂಗಜಂಗಮದ
ಶೇಷೋದಕ ಪರಿಪೂರ್ಣಾನಂದ ತೀರ್ಥ ಸ್ತೋತ್ರವಂ ಮಾಡಿ,
ಸರ್ವಾಂಗಪ್ರಣುತನಾಗಿ ಪೊಡಮಟ್ಟು,
ಹರಹರಾ ಶಿವಶಿವಾ ಜಯಜಯಾ ಕರುಣಾಕರ
ಭಕ್ತವತ್ಸಲ ಭವರೋಗವೈದ್ಯ ಮತ್ಪ್ರಾಣನಾಥ ಮಹಾಲಿಂಗಜಂಗಮವೆಯೆಂದು,
ಅಂತರಂಗದ ಪರಿಪೂರ್ಣರೆ ನಿರವಯಪ್ರಭು ಮಹಾಂತರ
ಘನಶರಣ ಲಿಂಗ ತಾನೆಯೆಂಬೆ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩೦ ॥

೩೧

ಅಂತೊಪ್ಪುವ ಸಚ್ಚಿದಾನಂದ ಧ್ಯಾನದಿಂದ,
ನಿಮ್ಮ ಪರಿಪೂರ್ಣ ಪ್ರಸಾದೋದಕಕ್ಕೆ ನಿರೂಪವ ಪಾಲಿಸಬೇಕು ಸ್ವಾಮಿ
ಎಂದು ಬೇಡಿಕೊಂಡು ಅಭಯವಾದ ಮೇಲೆ ಬಂದು
ಮೊದಲಹಾಗೆ ಅಲ್ಲಿ ಮೂರ್ತವ ಮಾಡಿ,
ಆ ಜಂಗಮಮೂರ್ತಿಗಳು ಸಲಿಸಿದೋಪಾದಿಯಲ್ಲಿ
ಅನಾದಿಮೂಲಮಂತ್ರಸೂತ್ರವಿಡಿದು ತಾನು ಸಲಿಸುವುದು.
ಆ ಮೇಲೆ, ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿ ಚಿತ್ಕಲಾಪ್ರಸಾದಿ
ಮೊದಲಾದ ಷಟ್ಸ್ಥಲ ಭಕ್ತಮಹೇಶ್ವರರು,
ಅದೇ ರೀತಿಯಲ್ಲಿ ಸಲಿಸುವುದು ಪೂರ್ವಪುರಾತನರೋಕ್ತವು.
ಉಳಿದ ತ್ರಿವಿಧ ದೀಕ್ಷೆಗಳರಿಯದ,

ಕ್ರಿಯಾಪ್ರಸಾದದ ಕುರುಹ ಕಾಣದೆ, ಷಟ್ಸ್ಥಲಮಾರ್ಗವರಿಯದ,
ಇಷ್ಟಲಿಂಗಧಾರಕ ಉಪಾಧಿಗಳು ಆ ಗದ್ದುಗೆಯ ತೆಗೆದು,
ಲಿಂಗಕ್ಕರ್ಪಿಸಿಕೊಳ್ಳಬೇಕಲ್ಲದೆ ಬಟ್ಟಲೆತ್ತಲಾಗದು.
ಅದೇನು ಕಾರಣವೆಂದಡೆ :
ಅವರಿಗೆ ತ್ರಿವಿಧದೀಕ್ಷಾನುಗ್ರಹ ಪ್ರಸನ್ನಪ್ರಸಾದ ಷಟ್ಸ್ಥಲಮಾರ್ಗ
ಸರ್ವಾಚಾರಸಂಪತ್ತಿನ ಆಚರಣೆ ಮುಂದುಹುದರಿಂದ
ಅವರು ಬಟ್ಟಲ ಎತ್ತಲಾಗದು.
ಹೀಂಗೆ ಸರ್ವರು ಸಲಿಸಿದ ಮೇಲೆ
ಕೊಟ್ಟ ಕೊಂಡ ಭಕ್ತ ಜಂಗಮವು ಇರ್ವರೂ ಕೂಡಿ,
ಅನಾದಿ ಮೂಲಮಂತ್ರಸೂತ್ರವಿಡಿದು,
ಮುಕ್ತಾಯವ ಮಾಡಿವಲ್ಲಿಗ ದಶವಿಧಲಿಂಗಸಂಬಂಧದಿಂದ
ದಶವಿಧಪಾದೋದಕ ಲಿಂಗೋದಕ ಪ್ರಸಾದೋದಕಂಗಳಲ್ಲಿ
ಪರಿಪೂರ್ಣತೃಪ್ತರೆ ನಿಮ್ಮ ಪ್ರತಿಬಿಂಬರಯ್ಯ
ನಿರವಯಪ್ರಭು ಮಹಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩೧ ॥

೩೨

ಶಿವಶರಣಗಣಾರಾಧ್ಯರು
ನಿರಾಕಾರ ಚಿತ್ಪಾದೋದಕದಾಚರಣೆಯ ಮಾರ್ಗಕ್ರಿಯೆ ಮುಗಿದ ಮೇಲೆ,
ಸಾಕಾರಚಿತ್ಪ್ರಸಾದವ ಆ ಪಾದತೀರ್ಥದಾಚರಣೆಯಂತ ತಟ್ಟೆ,
ಬಟ್ಟಲಗಳೊಳ್ ಪರಿಪೂರ್ಣತೃಪ್ತಿಯನೈದುವುದು.
ಆ ನಿಲುಕಡೆಯೆಂತೆಂದೊಡೆ :
ನಿರಾಭಾರಿವೀರಶೈವಸಂಪನ್ನ ಸದ್ಭಕ್ತ ಜಂಗಮಮೂರ್ತಿಗಳು
ಪಾದೋದಕದಿಂದ ಅವರ ಭಾಂಡಕ್ಕೆ ಹಸ್ತಸ್ಪರಿಶನವ ಮಾಡುವುದು.
ಉಳಿದ ವಿಶೇಷ ವೀರಶೈವಸನ್ಮಾರ್ಗಿ ಭಕ್ತಜಂಗಮವು
ತಮ್ಮ ತಮ್ಮ ತಂಬಿಗೆ ತಟ್ಟೆ, ಬಟ್ಟಲಿಗೆ ಪಾದೋದಕ ಹಸ್ತಸ್ಪರಿಶನವ ಮಾಡಿ,
ಕೇವಲಪರಮಾನಂದದ ಚಿದ್ಗರ್ಭೋದಯ ಶುದ್ಧಪ್ರಸಾದವೆಂದು ಭಾವಿಸಿ,
ಅತಿವಿಶೇಷ ಮಹಾಸುಯಾನದಿಂದ
ಸಮಸ್ತ ಜಂಗಮ ಭಕ್ತ ಮಹೇಶ್ವರ ಶರಣಗಣಾರಾಧ್ಯರಿಗೆ ಎಡೆಮಾಡಿ,
ಅಷ್ಟಾಂಗ ಹೊಂದಿ, ಎಡಬಲ ಗಣತಿಂತಿಣಿಯ
ಪೂರ್ಣಾನಂದದ ನಿಜದೃಷ್ಟಿಯಿಂ ನೋಡಿ, ನಿರೀಕ್ಷಿಸಿ,
ಶರಣಾರ್ಥಿ ಸ್ವಾಮಿ, ನಿಮ್ಮ ದಯದಿಂದುದಯವಾದ
ಪರಿಪೂರ್ಣರಸಾಮೃತವ ಮಹಾಲಿಂಗಾರ್ಪಣವ ಮಾಡಬೇಕೆಂದು
ಅಭಿವಂದಿಸಿ,
ಪರಮಪಶಿವ್ರತತ್ವದಿಂದ ಗುರುಚರಪರಸ್ಥಲಕ್ಕೆ

ತನುಮನಧನಂಗಳ ಸಮರ್ಪಿಸುವಲ್ಲಿ ನಿರ್ವಂಚಕವಾಗಿ,
ಭಕ್ತಲಿಂಗಜಂಗಮವೆಂದು ಉಭಯ ನಾಮರೂಪ ಕ್ರಿಯಾಕಾಯವಳಿದು,
ಕ್ಷೀರ ಕ್ಷೀರವ ಕೂಡಿದಂತೆ ಪರುಷ ಮುಟ್ಟೆ ಪರುಷವಾದಂತೆ,
ಪರಮಾನಂದಾಬ್ಧಿ ಚಿದ್ರಸಾಮೃತ ಅಷ್ಟಾವರಣದ
ಸತ್ಕ್ರಿಯಾಜ್ಞಾನಾಚಾರಂಗಳ ಅನುಭಾವದೊಳ್ ಕೂಟಸ್ಥದಿಂದೊಡಲಾಗಿ,
ನಿರಾಕಾರ ನಿಃಶಬ್ದಲೀಲೆಪರ್ಯಂತರವು
ಆ ಗುರುಲಿಂಗಜಂಗಮ ಚಿತ್ಪ್ರಭಾಂಗ ಭಸ್ಮಮಂತ್ರಾದಿಗಳೆ ಮುಂದಾಗಿ,
ಸತ್ಯಶುದ್ಧ ನಡೆನುಡಿ ಕ್ರಿಯಾಜ್ಞಾನಾನುಭಾವ
ಪಾದೋದಕ ಪ್ರಸಾದಸೇವನೆಯ ಹಿಂದಾಗಿ,
ಸಮಸ್ತ ಕಾರಣಕ್ಕೂ ಸಾವಧಾನ ಸಪ್ತವಿಧ ಸದ್ಭಕ್ತಿಗಳಿಂದ
ಮಾರ್ಗಾಚಾರವುಳ್ಳ ಕ್ರಿಯಾರ್ಪಣ,
ದೃಷ್ಯಮೀರಿದಾಚಾರವುಳ್ಳ ಜ್ಞಾನಾರ್ಪಣದ್ರವ್ಯಂಗಳಂ
ಪರಿಪೂರ್ಣಾನುಭಾವದಿಂದ ನಿಜನೈಷ್ಠಾನುಭಾವಸಂಬಂಧಿಗಳ
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿ ಚಿತ್ಕಲಾಪ್ರಸಾದಿ
ಸೇವಿತಕ್ಕೆ ಯೋಗ್ಯರಾದ ಘನಕ್ಕೆ ಘನವೆಂದವರಾಳಿನಾಳಾಗಿರ್ಪ ಕಾಣಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩೨ ॥

೩೩

ಘನಕ್ಕೆ ಮಹಾಘನಗಂಭೀರ
ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಸನ್ಮಾನಿತರು,
ನಿರವಯವಸ್ತುವಿನ ಪ್ರತಿಬಿಂಬರಾಗಿ, ತಮ್ಮ ತಾವರಿದು.
ಚತುರ್ವಿಧ ವಿಸರ್ಜನೆಯನರಿದಾಚರಿಸುವುದು.
ಆ ವಿಸರ್ಜನೆಗಳಾವಾವೆಂದಡೆ :
ಮಲಮೂತ್ರವೆರಡನು ವಿಸರ್ಜನೆಯಿಂದ ಬಿಡುವಂಥದೆ
ಸ್ಥೂಲಾಚಮನವೆನಿಸುವುದು.
ಕ್ರೀಡಾವಿಲಾಸದಿಂದ ತಮ್ಮರ್ಧಾಂಗವೆಂದು
ಭಕ್ತಗಣಸಾಕ್ಷಿಯಾಗಿ ವಿರಾಜಿಸುವಂಥ ಕ್ರಿಯಾಂಗನೆಯಲ್ಲಿ
ವೀರ್ಯವ ಬಿಡುವಂಥಾದ್ದೊಂದು ಸ್ಥೂಲಾಚಮನವೆನಿಸುವುದು.
ಈ ಸ್ಥೂಲಾಚಮನಗಳ ಮಾಡಿದ ವೇಳೆಯಲ್ಲಿ
ದಂತಗಳ್ಮೂವತ್ತೆರಡನು ತೀಡಿ, ಲಿಂಗಾಂಗ ಮಜ್ಜನಂಗೈದು,
ಸರ್ವೋಪಚಾರಂಗಳಿಂ ಕ್ರಿಯಾಜಪ ಜ್ಞಾನಜಪ ಮಹಾಜ್ಞಾನಜಪ
ಪರಿಪೂರ್ಣಾನುಭಾವಜಪಂಗಳೊಳ್
ಲಿಂಗಜಂಗಮ ಜಂಗಮಲಿಂಗಾರ್ಪಣವ ಮಾಡುವುದು.
ಶಿವಶರಣಗಣಾರಾಧ್ಯರು ಲಿಂಗಾಭಿಷೇಕ ಅರ್ಚನಾದಿಗಳ ಮಾಡಿ,

ಅರ್ಪಣ ಸಂಧಿನಲ್ಲಿ ಜಲತೋರಿಕೆಯಾಗಿ ವಿಸರ್ಜಿಸಿ,
ಉದಕವ ಬಳಸಿದ ವೇಳೆಯೊಳು,
ಲಿಂಗಬಾಹ್ಯರಸಂಗಡ ಪ್ರಸಂಗಿಸಿದರೂ ದೀಕ್ಷಾಜಲದಿಂದ
ಆರುವೇಳೆ ಲಿಂಗಸ್ಪರಿಶನದಿಂದ ಜಿಹ್ವೆಯ ಪ್ರಕ್ಷಾಲಿಸಿ,
ಮುಖ ಮಜ್ಜನವಮಾಡಿ,
ಲಿಂಗಾರ್ಚನಾರ್ಪಣವನುಭಾವಗಳ ಮಾಡುವುದು,
ಇದು ಸೂಕ್ಷ್ಮಾಚಮನವೆನಿಸುವುದು.
ಪ್ರಮಾಣಗಳಾದರೂ ಅನುವಲ್ಲದೆ ವಿಪತ್ತಿನ ವೇಳೆಯಾಗಲಿ,
ಜಲ ಪರಿಹರಿಸಿದಲ್ಲಿ ಪರಿಣಾಮಜಲದಿಂದ ಆ ಸ್ಥಾನವ ಪ್ರಕ್ಷಾಲಿಸಿ,
ಹಸ್ತಪಾದವ ತೊಳೆದು ಉಧಕವ ಶೋಧಿಸಿ,
ಲಿಂಗಸ್ಪರಿಶನವಗೈದು, ಆರುವೇಳೆ ಜಿಹ್ವೆಯ ಪ್ರಕ್ಷಾಲಿಸಿ,
ಸತ್ಶೋದಕದ ಪರಮಾನಂದಜಲ ಮಹಾಜ್ಞಾನಪ್ರಣಮಪ್ರಸಾದಂಗಳ ಗುಟುಕ
ಲಿಂಗಮಂತ್ರ ನೆನಹಿನೊಡನೆ ಸೇವಿಸುವುದು.
ಲಿಂಗಬಾಹ್ಯರ ಸಂಗಡಪ್ರಸಂಗಿಸಿದೊಡೆ
ಇದೇ ರೀತಿಯಲ್ಲಿ ಮುಖಪ್ರಕ್ಷಾಲನಂಗೈದು ಆಚರಿಸುವುದು.
ಇದಕೂ ಮೀರಿದರ ಜಲಬಿಟ್ಟು, ಭವಿಗಳಸಂಗಡ ಪ್ರಸಂಗವ ಮಾಡಿದರೆ
ಆ ಸಮಯದಲ್ಲಿ ಪ್ರಮಾದವಶದಿಂದ ಉದಕವು ದೊರೆಯದಿದ್ದರೆ
ಅಲ್ಲಿ ವಿಸರ್ಜನಸ್ಥಾನವ ದ್ರವವಾರುವಂತೆ
ಶುಚಿಯುಳ್ಳ ಮೃತ್ತಿಕೆ ಪಾಷಾಣ ಕಾಷ್ಠ
ಕಾಡುಕುರುಳು ಪರ್ಣಗಳಿಂದ ಪ್ರಕ್ಷಾಲನಂಗೈದು,
ಜಿಹ್ವಾಗ್ರದಲ್ಲಿ ಸಂಬಂಧವಾದ ಗುರುಲಿಂಗೋದಕದಿಂದ
ಮತ್ತಾ ಜಿಹ್ವೆಯ ಪ್ರಕ್ಷಾಲಿಸಿ, ಆರುವೇಳೆ ತೂವರಂಗೈದು,
ಹರಹರ ಶಿವಶಿವ ಜಯಜಯ ಕರುಣಾಕರ ಮತ್ಪ್ರಾಣನಾಥ
ಶ್ರೀಗುರುಬಸವಲಿಂಗಾಯೆಂದು
ಘನಮನವ ಚಿದ್ಘನಲಿಂಗಪ್ರಸನ್ನಧ್ಯಾನದಿಂದ
ನವನಾಳವೆಂಬ ಕವಾಟಬಂಧನಂಗೈದು,
ಪ್ರದಕ್ಷಣವಮಾಡಿ, ಪರಿಪೂರ್ಣ ಚಿದ್ಬೆಳಗಿನೊಳು ಮತ್ತೆಂದಿನಂತೆ
ಅತಿಜಾಗ್ರವೆಂಬ ಮಹಾದರುವಿನೊಳ್ ಸತ್ಕೃತ್ಯ ಸದ್ಧರ್ಮರಾಗಿರ್ಪುದು.
ಮುಂದೆ ಲಿಂಗಾರ್ಚನಾರ್ಪಣಗಳ ಮಾಡಬೇಕಾದರೆ,
ಶುದ್ಧೋದಕದಿಂದ ಲಿಂಗಾಭಿಷೇಕಸ್ನಾನಂಗೈದು,
ಪಾಪುದಗಳ ಮಡಿಮಾಡಿ ಪರಿಣಾಮಾರ್ಪಣ ತೃಪ್ತರಾಗಿರ್ಪುದು.
ಇದಕೂ ಮೀರಿದರ, ಜಲವ ಬಿಡುವುದು.
ಭವಿಗಳಸಂಗಡ ಪ್ರಸಂಗಿಸಿದರೆ ಸ್ನಾನಮಾಡುವ ಪರಿಯಂತರ
ಜಿಹ್ವಾಗ್ರದಲ್ಲಿ ಸ್ಥಾಪ್ಯವಾದ ಸತ್ಯಶುದ್ಧ ಗುರುಲಿಂಗೋದಕ

ಮಹಾಪ್ರಣಮಪ್ರಸಾದವೆ ಮೊದಲು
ಕ್ರಿಯಾಘನ ಗುರುಲಿಂಗಜಂಗಮಾರ್ಚನೆ
ತೀರ್ಥಪ್ರಸಾದಸೇವನೆಗಳಂ ಮಾಡಲಾಗದು.
ಇದಕೂ ಮೀರಿದರೆ,
ತನ್ನ ದೀಕ್ಷಾಗುರು ಶಿಕ್ಷಾಗುರು ಮೋಕ್ಷಾಗುರು
ಪರಿಪೂರ್ಣಗುರುಸ್ಮರಣೆ ಧ್ಯಾನದಿಂದ
ಸರ್ವಾವಸ್ಥೆಗಳ ನೀಗಿ, ಮಹಾಬಯಲ ಬೆರೆವುದು.
ಇದಕೂ ಮೀರಿದರೆ,
ತನುವಿಗೆ ಆಯಸದೋರಿ, ಆಪ್ತರಾರೂ ಇಲ್ಲದಂತೆ,
ಪರಿಣಾಮಜಲ ದೊರೆಯದ ವೇಳೆಯೊಳು
ಮಲಮೂತ್ರಗಳೆರಡೂ ತೋರಿಕೆಯಾದರೆ,
ಎಲ್ಲಿ ಪರಿಯಂತರ ಸಂಶಯಗಳುಂಟೊ ಅಲ್ಲಿ ಪರಿಯಂತರವು
ಎರಡನೂ ವಿಸರ್ಜಿಸುವುದು.
ಆ ಸಂಶಯ ತೀರಿದಲ್ಲಿ ಉದಕವಿದ್ದಲ್ಲಿಗೆ ಹೋಗಿ,
ಪೂರ್ವದಂತೆ ಮೃತ್ತಿಕಾಶೌಚಗಳ ಬಳಸಿ,
ನಿರ್ಮಲವಾಗಿ ತೊಳೆದು, ಹಸ್ತಪಾದಗಳ ಪ್ರಕ್ಷಾಲಿಸಿ,
ಆ ಸಮಯದಲ್ಲಿ ಕ್ರಿಯಾಭಸಿತವಿದ್ದರೂ
ರಸಯುಕ್ತವಾದ ಪದಾರ್ಥವಾದರೂ ಪುಷ್ಪಪತ್ರಿಗಳಾದರೂ ಇದ್ದರ
ಸತ್ಕ್ರಿಯಾಲಿಂಗಾರ್ಚನಾರ್ಪಣಗಳಿಗೆ ಬಾರವು.
ಆದ್ದರಿಂದ ಅವು ಇದ್ದವು ನಿಕ್ಷೇಪವ ಮಾಡುವುದು.
ಕ್ರಿಯಾಗುರು ಲಿಂಗಜಂಗಮಮುಖದಿಂದ ಶುದ್ಧೋದಕವ ಮಾಡಿ,
ತ್ರಿವಿಧ ಸ್ನಾನಂಗೈದು,
ಪುರಾತನೋಕ್ತಿಯಿಂದ ಜಂಗಮಲಿಂಗದಲ್ಲಿ ಚಿದ್ಭಸಿತವ ಬೆಸಗೊಂಡು,
ಸತ್ಕ್ರಿಯಾರ್ಪಣಗಳನಾಚರಿಸಿ, ನಿತ್ಯಮುಕ್ತರಾಗಿರ್ಪವರ
ಪೂರ್ವಾಚಾರ್ಯಸಗುಣಾನಂದಮೂರ್ತಿಗಳೆಂಬೆ ಕಾಣಾ
ನಿರವಯಪ್ರಭು ಮಹಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೩೩ ||

೩೪

ಪಾವನಾರ್ಥವಾಗಿ ಮಹದರುವೆಂಬ
ಶ್ರೀಗುರುಕರಕಮಲೋದಯದಿಂದ ಚಿದ್ಘನಲಿಂಗಮಂ ಧರಿಸಿ,
ಲಿಂಗಭಕ್ತ ಭಕ್ತಲಿಂಗ ಲಿಂಗಜಂಗಮ ಜಂಗಮಲಿಂಗವೆಂಬುಭಯಲೀಲೆಗಳಿಂದ
ಸರ್ವಾಚಾರಸಂಪದವೆಂಬ ಷಟ್‌ಸ್ಥಲಮಾರ್ಗವನೊಡಗೂಡಿ,
ನಿರಾಭಾರಿವೀರಶೈವ ಸತ್ಕ್ರಿಯ ಸಮ್ಯಜ್ಞಾನಾನುಭಾವ
ಸದಾಚಾರ ನಡೆನುಡಿ ಭಿನ್ನವಾಗದಂತೆ,

ತಮ್ಮ ತನುಮನಪ್ರಾಣಾನುಭಾವಂಗಳಿಗೆ ಗಣಾಚಾರ ಶರಣ ಸಾಕ್ಷಿಯಾಗಿ,
ಘನಮಾರ್ಗವ ಬಿಟ್ಟಾಚರಿಸಿದೊಡೆ ಭವಬಂಧನ ಬಿಡದು,
ತದನಂತರ ನರಕ ತಪ್ಪದು.
ಅದು ಕಾರಣದಿಂದ ಮಹದರುಪೆಂಬ ಪಾವುಡವ ಕೈಕೊಂಡು,
ಪ್ರಸನ್ನಪ್ರಸಾದ ಷಟ್‌ಸ್ಥಲವರ್ಮಾದಿ ಮರ್ಮವ ಮೆರೆದು,
ದುಷ್ಕೃತ್ಯದಲ್ಲಿ ಹೋಗುವುದ ಕಂಡು
ಆಪ್ತರಾದ ಗಣಾರಾಧ್ಯರ ಹರಗುರೋಕ್ತಿಯಿಂ,
ನಡೆಯಲ್ಲದ ನಡೆ, ನುಡಿಯಲ್ಲದ ನುಡಿಗಳ ಬಳಸಿ,
ಜನ್ಮ ಜರೆ ಮರಣಗಳೊಳ್ ತೊಳಲಿ ತೊಳಲಿ
ಭವಕ್ಕೆ ಬೀಳುವಂಥ ಅಜ್ಞಾನಮರವೆಯ ವಿಡಂಬಿಸಿ,
ತನುಮನಪ್ರಾಣಭಾವಂಗಳ ಹೊಡೆಹೊಡೆದು,
ಪ್ರತಿಜ್ಞೆ ಪ್ರಮಾಣಗಳೊಳ್ ಬಾಹ್ಯಾಂತರಂಗದಲ್ಲಿ
ಪರಿಪಕ್ವವ ಮಾಡಬಲ್ಲ ಮಹಾಜ್ಞಾನಿಗಳೆ ಪರಮಪವಿತ್ರರೆಂಬ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೪ ॥

೭೫

ಸಚ್ಚಿದಾನಂದ ಬ್ರಹ್ಮೋಪದೇಶ ಭಕ್ತಮಹೇಶ್ವರರು
ಪರಮಪಾತಕಸೂತಕಂಗಳ ಬಾಹ್ಯಾಂತರಂಗದಲ್ಲಿ ಹೊದ್ದದ,
ಸತ್ಯಶರಣರು ಮಾಡುಂಡುದೊಂದು ಕಾಯಕ,
ಬೇಡುಂಡುದೊಂದು ಕಾಯಕದಿಂದ ಗಳಿಸಿದಂಥ ಪದಾರ್ಥಗಳ,
ಗುರುಚರಪರಸ್ಥಿರಕ್ಕೆ ಷಟ್‌ಸ್ಥಲಸಂಬಂಧಗಳಿಂದ,
ಷಡ್ವಿಧಮಂತ್ರಗಳ ಸೊಮ್ಮಿನಿಂ ಸಂತೃಪ್ತರಾಗಿರ್ಪುದು.
ಆ ನಿಲುಕಡೆಯೆಂತೆಂದಡೆ :
ಶ್ರುತಿಗುರುಸ್ವಾನುಭವ ಸಾಕ್ಷಿಯಾಗಿ,
ಶ್ರೀಗುರುಲಿಂಗಜಂಗಮವೆ ಪರಾತ್ಪರವೆಂದು ಕಂಡು,
ಷಡುಸ್ಥಲಮಾರ್ಗವಿಡಿದು, ತನ್ನ ನಿಜವ ತಾನರಿಯದೆ,
ಭವಿಶೈವ ಭಿನ್ನ ಕರ್ಮಿಗಳಂತೆ ಭಾವಭ್ರಮೆಗೆಟ್ಟು,
ಹೊಲಬುದಪ್ಪಿ, ಭೋಗಾಪೇಕ್ಷಿತರಾಗಿ,
ಹಲವು ಶಾಸ್ತ್ರೋಪದೇಶವಿಡಿದು,
ಕಾಶಿ ರಾಮೇಶ್ವರ ಕಂಚಿ ಕಾಳಹಸ್ತಿ ಪಂಪಾಕ್ಷೇತ್ರ
ಗೋಕರ್ಣ ಶ್ರೀಶೈಲಾದಿಯಾದ ತೀರ್ಥಯಾತ್ರೆ,
ವೀರಣ್ಣ ಬಸವಣ್ಣ ಮಲ್ಲಣ್ಣ ಹಾವಿಗೆ ದಂಡಾಗ್ರ ಗಿಳಿಲು ರಂಭ
ಭಸ್ಮಗುಂಟಿಕೆ ತೀರ್ಥದಗುಂಬ ಹಾದಿಬೀದಿಯ ಹಳ್ಳದ ಬೆನವ ಪಾಸರದಯ್ಯ
ವಿನಾಯಕ ಶಕ್ತಿ ಗಣೇಶ ಚಂಡಿ ಚಾಮುಂಡಿಯಲ್ಲಿ

ಏಕನಾತಿ ಹಿರಿಹೊಳೆ ಜಟ್ಟಿಂಗ ತೆಪ್ಪದಾರತಿ ಪಂಚಪಾಂಡವರು
ಬನ್ನಿಮಹಾಂಕಾಳಿ ತುಳಸಿ ಬಿಲ್ವವೃಕ್ಷ
ಸಮಾಧಿ ಗದ್ದುಗೆ ಪುರಾಣ ವಚನಾರ್ಥಪುಸ್ತಕ
ಲೆಕ್ಕದ ಓಹಿ ಕತ್ತಿ ಕಂಡೇಪೂಜೆ, ಊರಬೀರ ಪೀರ ಗೋರಿ ಸತ್ತವರ ತಿಥಿ
ಚಿತ್ರಹೊಲೆ ಕರ್ಮದ ಗಂಗೆ ಗುಗ್ಗುಳ ಗೌರೀನೋಂಪಿ ದೀಪಹರಕೆ ಪೂಜೆ
ಕರಿಯಸೀರೆ ಊರ ಮಾರಿದೇವತೆ ಅಂಬಲಿ ಮಜ್ಜಿಗೆ ಕುಂಭ ಹೊಸ್ತಿಲ
ಮದುವೆಯಕಂಭ ಕುಂಭ ಸರಕಿನಗಂಟು
ಮಹತ್ವ ಮೆರೆದವರ ಪಾದಮುದ್ರೆ ಕಡೆಯಾದವಕ್ಕೆ,
ತನ್ನ ಕಾಯ ವಾಚ ಮನದಲ್ಲಿ ಹೊಳೆದು,
ಪಿತ–ಮಾತೆ ಸತಿ–ಸುತ ಒಡಹುಟ್ಟಿದವರು ಸೇವಕ ಕಡೆಯಾದವರಿಂದೆ
ತನ್ನ ಮನೆಯಲ್ಲಿ ಮಾಡಿದ ಎಡೆ
ಮಾರಪೃತ್ಯೋದಕ, ಪಾದೋದಕಸಂಬಂಧವಾದ,
ವಿಭೂತಿ–ಗಂಧಾಕ್ಷತೆ–ಪುಷ್ಪ–ಪತ್ರಿ ಧೂಪ–ದೀಪ ಹಣ್ಣು–ಕಾಯಿ
ವಸ್ತ್ರಾಭರಣ–ಪಂಚಕಳಸ ಕಾಣಿಕೆ ಮೊದಲಾದ ಭಿನ್ನವ
ಕರ್ಮಕ್ರಿಯಾಚಾರಲಿಂಗಬಾಹ್ಯರಾದ
ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ಪಾಶುಪತ ಕಾಳಾಮುಖಿ
ಯೋಗಿ–ಜೋಗಿ ಶ್ರಮಣ–ಸನ್ಯಾಸಿ ಯತಿ–ವ್ರತಿ ಮನು–ಮುನಿ
ಗರುಡ–ಗಂಧರ್ವ ಯಕ್ಷ–ರಾಕ್ಷಸ ಸಿದ್ಧ–ಸಾಧ್ಯರುಪದೇಶವಿಡಿದು
ಚರಲಿಂಗೋದಯಘನಪಾದತೀರ್ಥವರ್ಪಿಸಿ,
ನೈವೇದ್ಯ ಮಾಡಿಸುವಂಥಾದ್ದೆ ಅನಾಚಾರ.
ಇದೇ ಭವಿಮಾಟಕೂಟ ಅಸತ್ಯದ ನಡೆನುಡಿಯ ವಿಚಾರದ ಪ್ರಥಮಪಾತಕ.
ಇದಕ್ಕೆ ಹರನಿರೂಪ ಸಾಕ್ಷಿ :
"ಶಿವಾಚಾರಸುಸಂಪನ್ನಃ ಕೃತ್ವಾನ್ಯದೈವಸ್ಯ ಪೂಜನಂ ।
ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್ ॥

ಅನಾಚಾರಿಕೃತಂ ಪಾಕಂ ಲಿಂಗನೈವೇದ್ಯಕಿಲ್ಬಿಷಂ ।
ಲಿಂಗಾಚಾರಿಕೃತಂ ಪಾಕಂ ಲಿಂಗನೈವೇದ್ಯಮುತ್ತಮಂ ॥

ತದ್ದಿನಂ ದಿನದೋಷೇಣ ಶೋಣಿತಂ ಸುರಾಮಾಂಸಯೋಃ ।
ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಂ ॥

ಸೌಮೇ ಭೌಮೇ ವ್ಯತಿಪಾತೇ ಸಂಕ್ರಾಂತಿಶಿವರಾತ್ರಿಯೋಃ ।
ವ್ರತಕರ್ಮೋಪವಾಸಿನಾಂ ನರಕೇ ಕಾಲಮಕ್ಷಯಂ ॥

ಕಾರ್ತೀಕಮಾಘಶ್ರಾವಣ ವ್ರತಪೂಜಾವಿಶೇಷತಃ ।
ವೀರವ್ರತಸ್ತಥಾ ಕೃತ್ವಾ ಸನ್ತ್ಯ ಪ್ರಾಕೃತ್ಯಃ ಸಮಾಃ ॥

ಸ್ಥಾವರಾರ್ಪಿತನೈವೇದ್ಯಾತ್ ನ ತೃಪ್ತಿರ್ಮಮ ಪಾರ್ವತಿ ।
ಜಂಗಮಾರ್ಪಿತನೈವೇದ್ಯಾತ್ ಮಮ ತೃಪ್ತಿಶ್ಚ ಸರ್ವದಾ ॥

ಸತ್ಪಾತ್ರದತ್ತವಿತ್ತಸ್ಯ ತದ್ಧನಂ ಸ್ವಧನಂ ಸುಖಂ ।
ಅಪಾತ್ರದತ್ತ ವಿತ್ತಸ್ಯ ತದ್ಧನಂ ಸ್ವಸುಖಂ ಭವೇತ್ ॥

ಚರಸ್ಯ ಗಮನೋ ನಾಸ್ತಿ ಭಕ್ತಸ್ಯ ಗೃಹಮಾಚರೇತ್ ।
ಅನ್ಯಗೃಹಂ ಗಮಿಷ್ಯಂತಿ ಸದ್ಯೋ ಗೋಮಾಂಸಭಕ್ಷಣಮ್ ॥

ಇಷ್ಟಲಿಂಗಮವಿಶ್ವಸ್ಯ ಅನ್ಯದೈವಮುಪಾಸತೇ ।
ಶ್ವಾನಯೋನಿ ಶತಂ ಗತ್ವಾ ಚಾಂಡಾಲಗೃಹಮಾಚರೇತ್ ॥

ಬಹುಲಿಂಗಪೂಜಕಸ್ಯ ಬಹುಭಾವಗುರುಸ್ತಥಾ ।
ಬಹುಪ್ರಸಾದಂ ಭುಂಜಂತಿ ವೇಶ್ಯಾಪುತ್ರಸ್ತಥೈವ ಚ ॥

ಅಭಕ್ತಜನಸಂಗಶ್ಚ ಮಂತ್ರಸ್ಯ ಚ ಆಗಮಃ ।
ಅನ್ಯದೈವಪರಿತ್ಯಾಗಃ ಲಿಂಗಭಕ್ತಸ್ಯ ಲಕ್ಷಣಂ ॥

ಲಿಂಗಧಾರಕಭಕ್ತಾನಾಂ ಲಿಂಗಬಾಹ್ಯಸತೀಸುತಾಃ ।
ಆಲಿಂಗಿತಾ ಚುಂಬಿತಾಶ್ಚ ರೌರವಂ ನರಕಂ ವ್ರಜೇತ್ ॥''

ಇಂತೆಂಬ ಹರಗುರುವಾಕ್ಯಪ್ರಮಾಣವದಾಗಿ,
ಸದ್ಭಕ್ತಶರಣಗಣಾರಾಧ್ಯರು ಭೂಪ್ರತಿಷ್ಠಾದಿಗಳ ಹೊದ್ದಿದಡೆ,
ಭವಬಂಧನವಪ್ಪದು ತಪ್ಪದು.
ಅದು ಕಾರಣವಾಗಿ ಗುರುಮಾರ್ಗಿಕರು ಹೊದ್ದದೆ,
ಭವಸಾಗರವ ದಾಂಟಿ, ನಿರ್ಭಾರದಿಂದಿಪ್ಪುದೊಂದು
ನರಗುರಿಗಳ ಪ್ರಥಮಪಾತಕನಿರಸನ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩೫ ॥

೩೬

ಪರಮಪವಿತ್ರ ಹರಗಣಸಾಕ್ಷಿಯಾಗಿ,
ಸೂತ್ರ ಗೋತ್ರ ಪರಿಪೂಜ್ಯತ್ವವುಳ್ಳಂಥ ಕ್ರಿಯಾಶಕ್ತಿಯ
ಸರ್ವೇಂದ್ರಿಯಮುಖದವಯವಂಗಳನು ಕೂನಗಳ ವಿಚಾರಕತ್ವದಿಂ
ಘನಲಿಂಗಮೂರ್ತಿ ಶ್ರೀಗುರುವಿನ
ಕರುಣಕಟಾಕ್ಷ ಶಿವದೀಕ್ಷೆಗಳಿಂದ ಪವಿತ್ರಕಾಯವನಿಸಿ,
ಶಿವಧರ್ಮಾಂತರಾಳವೆಂಬ ದಂಪಕಮಂಡಲಗಳೆ
ಕಂಭ ಕುಂಭ ಹಂದರ ಮುತ್ತೈದ ಬಾಸಿಂಗದ ಸಾಕ್ಷಿಯಾಗಿ,
ಪಂಚಕಳಸ ಆರಾಧ್ಯಗಣಸಮೂಹವೆಲ್ಲ ಸಂತೋಷಂಗೈದು,
ಇಷ್ಟಲಿಂಗವೆಂಬ ರಮಣಂಗ ಪ್ರಾಣಲಿಂಗವೆಂಬ ರಮಣಿಗ

ಸುಹಸ್ತಗಳ ಕೂಡಿಸಿ, ಅರ್ಚಿಸಿ, ನವಸೂತ್ರವೆಂಬ ಕಂಕಣವ ಕಟ್ಟಿ,
ಸ್ಥಿರಸೇಸೆಯನೆರೆದು, ಭಾವಭರಿತವಾಗಿ,
ಸಮರಸಾಚರಣೆಗಳಿಂದ ಪರತತ್ವಲಿಂಗಲೋಲುಪ್ತರಾಗಿ,
ಜಂಗಮಾರಾಧನೆ ದಾಸೋಹಂಭಾವದಿಂದ
ಶಿವಯೋಗಸಂಪನ್ನರಾಗಿರಿಯೆಂದು ಅಭಯಕರವಿತ್ತು
ಶರಣಮುಹಾರುದ್ರ ಗಂಟೆಹೊಡೆದಂಥ ಕ್ರಿಯಾಶಕ್ತಿಗಳೆಷ್ಟಾದರೂ
ರತಿವಿರತಿಗಳೊಳ್ ಬಳಸಿಬ್ರಹ್ಮವಾಗಿರ್ಪುದೆ ಸತ್ಯಸದ್ಧರ್ಮಿಗಳ ಸನ್ಮಾರ್ಗವು.
ಈ ಸನ್ಮಾರ್ಗವನುಳಿದು, ವಿಷಯಾತುರ ಹೆಚ್ಚಿ,
ಒಬ್ಬರು ಭೋಗಿಸಿದ ಎಂಜಲಸ್ತ್ರೀಯರ ಆಲಿಂಗಿಸಿ,
ತನ್ನ ರಾಣಿಯೆಂದು ನುಡಿಗಣದಿಂದ ಭಾವಿಸುವುದೊಂದು ದುರಾಚಾರ.
ಜಿಹ್ವೆಯಿಂದ ಮಾತುಮಾತಿಗೆ ಹೆಂಡತಿ ಅಕ್ಕ ಅವ್ವ ತಂಗಿಯೆಂದು
ಬೊಗಳುವುದೊಂದು ದುರಾಚಾರ.
ಪರಪುರುಷಂಗೆ ರಾಣಿಯಾದ ಸ್ತ್ರೀಯಳ ಹಾವಭಾವ ವಿಲಾಸಗಳ ನೋಡಿ,
ವಿಭ್ರಮಣೆಗೊಂಡು, ಅಂತರಂಗದಲ್ಲಿ ಕಳವಳಿಸಿ,
ಹಾಸ್ಯರಹಸ್ಯವ ಮಾಡಬೇಕೆಂಬುದೊಂದು ದುರಾಚಾರ.
ಇಂತು ತ್ರಿವಿಧರತಿಗಳಿಂದ ವರ್ತಿಸುವುದೆ ದ್ವಿತೀಯಪಾತಕ.
ಇದಕ್ಕೆ ಹರನಿರೂಪ ಸಾಕ್ಷಿ :
''ಪರಸ್ತ್ರೀಣಾಂ ಚ ಸಂಸರ್ಗಾತ್ ಮೋಕ್ಷೋ ನಾಸ್ತಿ ವರಾನನೇ ।
ಜಪಹಾನಿಃ ತಪೋಹಾನಿಃ ರೌರವಂ ನರಕಂ ವ್ರಜೇತ್ ॥''

''ಹರಿಣಪಾದಮಾತ್ರೇಣ ಬಂಧಿತಂ ಚ ಜಗತ್ರಯಂ ।
ತತ್ಸುಖಂ ಬಿಂದುಮಾತ್ರೇಣ ದುಃಖಂ ಪರ್ವತಮೇವ ಚ ॥''

ಇಂತೆಂಬ ಹರಗುರುವಾಕ್ಯ ಪ್ರಮಾಣವಾಗಿ,
ಸದ್ಭಕ್ತ ಮಹೇಶ್ವರರು ಪರರೆಂಜಲಸ್ತ್ರೀಯಳ ಭೋಗಿಸಿದಡೆ
ಹಿಂದಣ ಭವಪಾಶ ಬೆನ್ನಬಿಡದುಯೆಂದು
ದ್ವಿತೀಯ ಪಾತಕಂಗಳ ನಿರಸನಂಗೈದು, ತ್ರಿಕರಣಶುದ್ಧವಾಗಿ,
ನಡೆದಂತೆ ನುಡಿದು, ನುಡಿದಂತೆ ನಡೆದು, ದೃಢಚಿತ್ತರಾಗಿ,
ಜಾಗ್ರ ಜಾಗ್ರ ಇನ್ನು ತಿರುಗಿ ಭವಕ್ಕೆ ಬಂದಡೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆಯೆಂದು ತ್ರಿವಿಧಬಿಂದುಗಳ ತಡೆದು,
ಸಾಕ್ಷಿ :
''ಕಾಮಃ ಕ್ರೋಧಶ್ಚ ಲೋಭಶ್ಚ ದೇಹೇ ತಿಷ್ಠಂತಿ ತಸ್ಕರಾಃ ।
ಜ್ಞಾನರತ್ನಾಪಹಾರಾಯ ತಸ್ಮಾತ್ತ್ವಂ ಜಾಗೃತೋ ಭವ ॥''

ಎಂದರಿದು, ಅರುವಿನ ಮಹಾಜ್ಞಾನರತ್ನವ ಕಳೆದು,
ಮತಿಭ್ರಷ್ಟ ಕ್ರಿಮಿಕೀಟ ಜನ್ಮಕ್ಕೆ ಬೀಳದಂತೆ

ನಿಜೇಷ್ಟಲಿಂಗಾಂಗಸಮರತಿಯುಳ್ಳ ನಿಷ್ಠನಾಗಿ,
ಪರರ ಸಂಗವ ಭವಸಂಗವೆಂದರಿದಾನಂದದಿಂದ ಸತ್ಯಶುದ್ಧನಾಗಿ,
ಗುರುಹಿರಿಯರಿಗೆ ಖೊಟ್ಟಿಯಾಗದ,
ಕಾಲಕಾಮರಟ್ಟುಳಿಯ ಕಾಡಾರಣ್ಯಕ್ಕೆ ಮಹಾಜ್ಞಾನವೆಂಬ ಕಿಚ್ಚನಿಕ್ಕಿ,
ಚಿತ್ತುಭಾಬೆಳಗಿಂಗೆ ಮಹಾಬೆಳಗಾಗಿರ್ಪುದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೩೬ ||

೩೭

ಶ್ರೀಗುರು ಪರಮಾರಾಧ್ಯ ಪ್ರಮಥಗಣ ಸಾಕ್ಷಿಯಾಗಿ,
ಮನ ಕೊರಗಿ, ಹಸ್ತ ಪಾದ ಬಳಲಿ,
ತೃಣಕಾಷ್ಠವೆ ಮೊದಲು ನವರತ್ನಂಗಳೆ ಕಡೆಯಾದ ಸಮಸ್ತ ವ್ಯವಹಾರದಿಂದ,
ಸತ್ಯಶುದ್ಧದಿಂದ ಗುರುಹಿರಿಯರಿಗ ಖೊಟ್ಟಿಯಾಗದ,
ಲಿಂಗನಡೆ ಲಿಂಗನುಡಿ ಲಿಂಗನೋಟ ಲಿಂಗಕೂಟ ಲಿಂಗಬೇಟ
ಲಿಂಗರತಿ ಲಿಂಗಭೋಗ ಲಿಂಗಾಭಿಮಾನ ಲಿಂಗಾರಾಧನ
ಲಿಂಗಾರ್ಪಣ ಲಿಂಗಾನುಭಾವ ಲಿಂಗಾಸನ ಲಿಂಗಸೋಂಕು ಲಿಂಗನಂಟು
ಲಿಂಗಗತಿಮತಿ ಲಿಂಗಸತಿಪತಿ ಲಿಂಗಮಾತೆ ಲಿಂಗಪಿತ ಲಿಂಗಬಂಧು
ಲಿಂಗಪದಾರ್ಥ ಲಿಂಗದ್ರವ್ಯ ಲಿಂಗಧನಧಾನ್ಯ ಲಿಂಗಾಭರಣ
ಲಿಂಗಶಿಶುವು ಲಿಂಗಮೋಹ ಲಿಂಗಾಚಾರ ಲಿಂಗಲಯ
ಲಿಂಗಪರೋಪಕಾರಿ ಲಿಂಗದಾಸೋಹ ಲಿಂಗಾಂಗಸಂಗಸಮರತಿಯಿಂದ
ಪರಶಿವಯೋಗಸಂಪನ್ನರಾಗಿ,
ಗುರುಕೃಪಾನಂದದಲ್ಲಿ ಚಿತ್ತವಚ್ಚೊತ್ತಿದಂತೆ ಕಾಯಕವ ಮಾಡಿ,
ಕುಟಿಲ ಕುಹಕಂಗಳಳಿದುಳಿದು,
ಅನಾಚಾರಿಗಳನ್ನೋದಕವ ಕೊಳ್ಳದೆ,
ಉಪಾಧಿ ನಿರುಪಾಧಿ ಸಹಜಜಂಗಮಸ್ಥಲದ ಮರ್ಮಾದಿಮರ್ಮವನರಿದು,
ಮಾಡಿ ಮಾಟವ ಮರೆದು, ಕೂಡಿ ಕೂಟವ ಕಳೆದುಳಿದು,
ಸತ್ಪಾತ್ರ ಅಪಾತ್ರವ ಎಚ್ಚರದಿಂ ನೋಡಿ,
ತನುಮನಧನ ವಂಚನೆಯಿಲ್ಲದೆ,
ಋಣಾತುರವೆಂಬ ಹಿಂದಣಮಾರ್ಗವ ಮುಟ್ಟದೆ,
ಸೋಹಂ ಕೋಹಂ ನಾಹಂಭಾವವಳಿದುಳಿದು.
ಶಿವಾಚಾರಸಮರತಿ ದಾಸೋಹಂಭಾವದಿಂದಾಚರಿಸುವಾತನ
ಭವಿಮಾಟಕೂಟವಳಿದುಳಿದು ನಿಜಸದ್ಭಕ್ತ ಆಚಾರಲಿಂಗಪ್ರಸನ್ನಪ್ರಸಾದಿ.
ಇಂತಪ್ಪ ಸದ್ಭಕ್ತಸಂಗಳವೆ ಕೈಲಾಸವೆಂದು
ಹರಗುರುವಾಕ್ಯವರಿದು, ಭಾವಭರಿತವಾಗಿ, ಸತ್ವಗುಣವಳಿದುಳಿದು,
ಮಹಾಜ್ಞಾನದಂಡಾಗ್ರಮಂ ಪಿಡಿದು,

ಸತ್ಯಶುದ್ಧ ನುಡಿಯೆಂಬ ಪ್ರಣಮನಾದಗಂಟೆಯಂ ಕಟ್ಟಿ,
ರಜೋಗುಣವ ಹೊದ್ದದೆ, ಮಹದರುವೆಂಬ ಕಮಂಡಲವ ಧರಿಸಿ,
ತಮೋಗುಣ ನಷ್ಟವಾದ ಪರಮಪುರುಷರಸದ ಜೋಳಿಗೆಯಂ ಪಿಡಿದು,
ಕರಣೇಂದ್ರಿಗಳ ಹಸಿವು ತೃಷೆ ವಿಷಯ ವ್ಯಸನಗಳ
ಛೇದಿಸಿದ ಜಂಗಿನ ಗೆಜ್ಜೆಗಳಂ ಧರಿಸಿ,
ಪರಮಪಾವನ ನಿಜಮೋಕ್ಷಮಂದಿರವೆಂಬ ಮಂತ್ರಸ್ಮರಣೆಯೊಳ್
'ಶ್ರೀಗುರುಧರ್ಮ ಕೋರಧನಧಾನ್ಯದ
ಭೀಕ್ಷಾ'ಯೆಂದು ಭಕ್ತಗಣಂಗಳಿಂಗಿತವರಿತು,
ಘನಮನ ಕಲಕದಂತ ಸುಯಿಧಾನದಿಂದ ಸುಳಿಗಾಳಿಯಂತೆ ಸುಳಿದು,
ಅತಿರತಿಮೋಹದಿಂದ ಪರಮಪುರುಷಾನಂದದೊಳ್ ಜೀಟಿತಂದು,
ನಿರ್ವಂಚಕನಾಗಿ, ಸತ್ಯಶುದ್ಧ ದೃಢಚಿತ್ತದಿಂದ,
ಘನಲಿಂಗಸಂಗಸಮಪತಿಗಳೊಳ್ ಕೂಡೆರಡಳಿದುಳಿದು,
ಹಿಗ್ಗು–ಹೆಮ್ಮೆ, ಸಿರಿ–ದರಿದ್ರ, ಸುಖ–ದುಃಖ, ಸ್ತುತಿ–ನಿಂದೆ,
ಪುಣ್ಯ–ಪಾಪ, ಭೋಗ–ಯೋಗ, ಕಾಮ–ಕ್ರೋಧ, ಲೋಭ–ಮೋಹ,
ಮದ–ಮತ್ಸರ, ಆಸೆ–ಆಮಿಷಗಳ, ಹಸಿವು–ತೃಷೆಗಳ ನೀಗಿ,
ಸದ್ಭಕ್ತಗಣಸಮ್ಮೇಳದಿಂದ ಗುರುಚರಪರಕ್ಕೆ ತ್ರಿವಿಧಾರ್ಚನೆಗಳರಿದು,
ಒಂದೂಡಲಾಗಿ, ಪರಿಣಾಮವ ಭಕ್ತಿ ವಿರಕ್ತಿ ಜ್ಞಾನಾನುಭಾವ,
ಪರಿಣಾಮವ ಚಿದಂಗಲಿಂಗಮುಖ ಶಕ್ತಿ ಶುಚಿರುಚಿ ಹಸ್ತಪದಾರ್ಥಪ್ರಸಾದ,
ಘನಸಮ್ಮತ ವಿಚಾರಮಂ ಅರಿದಾನಂದದಿಂದ
ಪರಿಪೂರ್ಣ ನಡೆನುಡಿ ಕೊಟ್ಟುಕೊಂಬುವ ದಾನಿಯೆ ಸದ್ವೀರಮಹೇಶ್ವರನು.
ಇಂತೆಸೆವ ಪ್ರಮಥಗಣ ಭಕ್ತಮಹೇಶ್ವರರಾಚರಣೆಯ ಘನಮಾರ್ಗವನರಿಯದೆ,
ಆಡಂಬರವೇಷಮಂ ಧರಿಸಿ,
ಕುಟಿಲ ಕುಹಕತನದಿಂದ ಅನಾಚಾರ ರಾಜರನೋಲೈಸಿ,
ಚಾಡಿಚಿತಾರಿಕೆ ಸಾಕ್ಷಿ ವಾದ ಸಹಜವ ಹುಸಿಮಾಡಿ,
ಹುಸಿಯನೆ ಸಹಜವ ಮಾಡಿ,
ಕುಂಟಣಿತನದಿಂದ ಧನಧಾನ್ಯಾಭರಣವ ಗಳಿಸಿ,
ಈಷಣತ್ರಯಮೋಹದಿಂದ ಒಡಲುಪಾಧಿವಿಡಿದು,
ಭಕ್ತಮಹೇಶ್ವರರೆಂದು ಬೊಗಳುವದೊಂದು ದುರಾಚಾರ.
ತಳ್ಳಿ ತಗಾದಿ ಜಾರತನ ಪಂಚಪಕ್ಷ ಮೊದಲಾದ ಗಾರುಡವಿದ್ಯೆಗಳಿಂದ
ಧನ ಧಾನ್ಯ ವಸ್ತ್ರಾಭರಣವ ಗಳಿಸಿ
ಅಕ್ರಿಯ ಅನಾಚಾರದಿಂದ ದೇಹವಿಡಿದಿಪ್ಪುದೊಂದು ದುರಾಚಾರ.
ಹಲಾಯುಧನ ಹೊಲಮನೆ ಮೊದಲಾದ ಸಮಸ್ತ ವ್ಯವಹಾರಗಳಲ್ಲಿ
ಆರೂ ಕಾಣದಂತ ಅಣುರೇಣುತೃಣಕಾಷ್ಠವಾಗಲಿ,
ಮೋಸಗಾರಿಕೆಯಿಂದ ಒಡಲುಪಾಧಿವಿಡಿದಾಚರಿಸುವದೊಂದು ದುರಾಚಾರ.

ಆಯುಧವ ಕಟ್ಟಿ, ರಣಾಗ್ರಕ್ಕೆ ಹೋಗಿ,
ಜೀವಹಿಂಸೆಗಳಿಂದ ಧನಧಾನ್ಯವಸ್ತ್ರಾಭರಣವ ಗಳಿಸಿ,
ರೂಪಲಾವಣ್ಯದಿಂದ ಒಡಲುಪಾಧಿಹೊರೆವುದೊಂದು
ಅತಿ ಕಠಿಣವಾದೊಂದು ದುರಾಚಾರ.
ಸತ್ಯಶುದ್ಧ ವ್ಯವಹಾರಗಳಲ್ಲಿ ಪತ್ರವ ಬರೆದುಕೊಟ್ಟು,
ಮೃದುನುಡಿಯಿಂದ ಧನಧಾನ್ಯವ ತಂದು, ಪುತ್ರಮಿತ್ರ ಕಳತ್ರಯಕೆ ಮಾಡಿ,
ಮತ್ತವರು ಬೇಡಿದರ ತಿರುಗಿ ಹುಸಿನುಡಿಯ ನುಡಿದು,
ಅವರ ಪದಾರ್ಥವ ಚಾಗೆಯ ಮಾಡಿ,
ನಿಂದೆ ಕುಂದು ಕೊರತೆಗಳಿಂದ ದೂಷಿಸುವುದೊಂದು ದುರಾಚಾರ.
ಇಂತು ಪಂಚವಿಧಪಾಶಬದ್ಧರಾಗಿ,
ಅವಿಚಾರದಿಂದ ಭಕ್ತಮಹೇಶ್ವರರೆಂದು ನುಡಿದು,
ಅನಾಚಾರ ನಡೆಯ ನಡೆವುದು ತೃತೀಯ ಪಾತಕವು.
ಇದಕ್ಕೆ ಹರವಾಕ್ಯ ಸಾಕ್ಷಿ :
''ಪರದ್ರವ್ಯಂ ಪರಾರ್ಥಂ ಚ ವರ್ಜಯೇತ್ ಭಾವಶುದ್ಧಿವಾನ್ ।
ಪ್ರಮಾದಾತ್ ಸ್ಪರ್ಶನಾಚ್ಚೈವ ರೌರವಂ ನರಕಂ ವ್ರಜೇತ್ ॥

ಅನ್ಯಸ್ಯ ಧನಧಾನ್ಯಸ್ಯ ಲಿಂಗಭಕ್ತಿವಿವರ್ಜಿತಃ ।
ತಸ್ಕರಃ ಅಪಹಾರಾತ್ ಶ್ವಾನಜನ್ಮನಿ ಜಾಯತೇ ॥

ಸತ್ಯಂ ಧರ್ಮೋ ಯಥಾರ್ಥಂ ಚ ಶಿವಧರ್ಮೇಣ ಸುಖಂ ಭವೇತ್ ।
ಅನ್ಯತ್ರ ಚಿಂತಿತಾತ್ ಕಾರ್ಯಾತ್ ಮೋಕ್ಷೋ ನಾಸ್ತಿ ವರಾನನೇ ॥

ಉತ್ತಮಾರಣ್ಯಪುಷ್ಪಂ ಚ ಮಧ್ಯಮಂ ವನಪುಷ್ಪಯೋಃ ।
ಕನಿಷ್ಠಂ ಯಾಚಿತಂ ಪುಷ್ಪಂ ಚೋರಪುಷ್ಪಂತು ನಿಷ್ಫಲಂ ॥''

ಇಂತೆಂದುದಾಗಿ, ಶ್ರೀಗುರುಕಟಾಕ್ಷೆಯಿಂದ ತನ್ನ ತಾನರಿದು
ಸ್ವಾತ್ಮಾನುಭಾವದೊಳ್ ಸತ್ಯಶುದ್ಧನಾಗಿ,
ಪರರೊಡವೆಯೆಂಬುದೆ ಕೇಡು,
ಕಾಯಾರ್ಜಿತವೆಂಬುದೆ ನಿಜಮೋಕ್ಷವೆಂದರಿದಾನಂದದಿಂದ
ಆ ತೃತೀಯಪಾತಕಮಂ ನಿರಸನಂಗೈದು
ದುರಿತಕರ್ಮವಂ ಒರೆದೊರೆದು ಕಂಡ್ರಿಸಿ.
ಕಳೆದುಳಿದ ನಿಜಮುಕ್ತನೆ ಶಿವಯೋಗ ಸನ್ಮಾರ್ಗಿ ಸದ್ಭಕ್ತ ಮಹೇಶ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩೭ ॥

೩೮

ಶ್ರೀಗುರುಕರಜಾತರೆನಿಸಿ, ನಿಜಮೋಕ್ಷಾಪೇಕ್ಷನೆನಿಸಿ,
ಸ್ವಯಚರಪರ ಭಕ್ತಗಣಾರಾಧ್ಯರ ಅರ್ಚನೆ ಪೂಜನೆ ಮಾಡಿ,

ದಾಸೋಹಂಭಾವದಿಂದ ಪರತರಬ್ರಹ್ಮಪರಿಪೂರ್ಣಾನಂದವಸ್ತುವೆಂದು
ಸಮರಸಾಚರಣೆಯಿಂದ ಹತ್ತುಹನ್ನೊಂದು ಕೊಟ್ಟು ಕೊಂಡ ಮೇಲೆ,
ಸಂಕಲ್ಪಭಾವ ತಥ್ಯಮಿಥ್ಯಗಳಿಂದ
ಆಸೆ ಆಮಿಷದ ಪಾಶಬದ್ಧ ಜಡಜೀವಿಗಳ ಹುಸಿಮಾತನಾಲಿಸಿ,
ವಿವೇಕತಪ್ಪಿ, ನಸುಗುನ್ನಿಕಾಯಂತೆ ಮೋರೆಯಾಗಿ,
ತುಮುರೆಕಾಷ್ಠದಂತೆ ನುಡಿಯಾಗಿ, ವಾರೆನೋಟಗಳಿಂದ ಸಮರಸವನುಳಿದು,
ಭಿನ್ನಭಾವದಿಂದ ಕುಂದುನಿಂದ್ಯವ ನುಡಿವುದೊಂದು ದುರಾಚಾರ.
ನುಡಿಸೂಸಿದ ಮೇಲೆ ಒಬ್ಬರೊಬ್ಬರು ಅವಿಚಾರಿಗಳಾಗಿ,
ಬಾಜಾರಕ್ಕೆ ನಿಂತು, ತನಗಿಂದ ಸ್ವಲ್ಪ ಮನುಷ್ಯರನಾಶ್ರಯಿಸಿ,
ಪಂಥಪರಾಕ್ರಮಿಗಳಿಂದ ತಥ್ಯಮಿಥ್ಯವ ನುಡಿದು.
ಅರ್ಚನಾರ್ಪಣಗಳ ತೊರೆದು,
ದೋಷಾರ್ಥಿಯಾಗಿ ವರ್ತಿಸುವುದೊಂದು ದುರಾಚಾರ.
ಭಕ್ತಗಣಂಗಳು ವಾರಬಟ್ಟಗಳ ಕೊಟ್ಟು ಕೊಂಡು ವ್ಯವಹರಿಸಿ,
ಈಷಣತ್ರಯದ ಅಂಗವಿಷಯದಿಂದ ದ್ರವ್ಯವ್ಯಾಪಾರಿಯಾಗಿ,
ದುರಾತ್ಮರಂತೆ ಬಾಜಾರಕ್ಕೆ ಬಿದ್ದು
ಕಠಿಣನುಡಿಗಳ ಬಳಸುವುದೊಂದು ದುರಾಚಾರ.
ಹೊನ್ನು ಹೆಣ್ಣು ಮಣ್ಣು ಧಾನ್ಯ ವಸ್ತ್ರಗಳಿಗ ಹೊಣೆ ಜಾಮೀನುಗಳಾಗಿ
ಅಸನ ವಸನದಿಚ್ಛೆಗೆ ಮಿತಿದಪ್ಪಿದಲ್ಲಿ,
ಸಾಕ್ಷಿ ವಾದಕ್ಕೆ ನಿಂತು, ಆಡಬಾರದ ಮಾತನಾಡುವುದೊಂದು ದುರಾಚಾರ.
ಗುರುಹಿರಿಯ ಪಿತ–ಮಾತಗಳಿಗೆ ತಾ ಗಳಿಸಿದ ದ್ರವ್ಯವ ವಂಚಿಸಿ,
ಇದ್ದೂ ಇಲ್ಲಯೆಂದು ಹುಸಿನುಡಿಯ ನುಡಿವುದೊಂದು ದುರಾಚಾರ.
ಗುರುಚರಲಿಂಗಮೂರ್ತಿಗಳು ಹಸಿವಿಗನ್ನ, ಶೀತಕ್ಕೆ ವಸ್ತ್ರ,
ಪಾದಕ್ಕೆ ವಾಹನವಾದುದ ಬೇಡಿದಲ್ಲಿ
ತನಗ ತ್ರಾಣಿದ್ದು ಅವರಿಗೆ ಈಗ ದೊರೆಯದೆಂದು
ಪ್ರಪಂಚನುಡಿಯ ನುಡಿವುದೊಂದು ದುರಾಚಾರ.
ಈ ದುರಾಚಾರ ಹುಸಿನುಡಿಗಳನಳಿದುಳಿದು, ಭ್ರಾಂತುಭ್ರಮೆಗಳ ನೀಗಿ,
ತನ್ನ ನಡೆನುಡಿಗಳು ತನಗೆ ಪ್ರಮಾಣವಾಗಿ,
ನಿರ್ವಂಚಕತನದಿಂದ ಶ್ರುತಿಗುರುಸ್ವಾನುಭಾವವಿಡಿದು,
ತಥ್ಯಮಿಥ್ಯವನಡಿಮೆಟ್ಟಿ, ಕಿಂಕರಭಾವದೊಳು
ಗುರುಹಿರಿಯರಪ್ರಮಾದವಶದಿಂದಪ್ರಮಥಗಣಮಾರ್ಗವಬಿಟ್ಟಾಚರಿಸುವದ
ಪರಶಿವಲಿಂಗಮೂರ್ತಿ ಹರಗಣಸಾಕ್ಷಿಯಾಗಿ ತಾನು ಕಂಡಲ್ಲಿ.
ಅವರನಾಚರಿಸದಾಚಾರದ ಸ್ಥೂಲಸೂಕ್ಷ್ಮವಾದೊಡೆ
ಹರಗಣಂಗಳೊಡನೆ ಅವರಿಗೆ ಶರಣುಹೊಕ್ಕು,
ಹರಗುರುವಾಕ್ಯಪ್ರಮಾಣವಾಗಿ ಪ್ರಮಥರ ನುಡಿಗಳಿಂದ

ತಾವು ಅವರೂಪನೆ ಏಕಭಾವದಿಂದ ಕ್ರಿಯಾಲೀಲೆಯ ಸಮಾಪ್ತವ ಮಾಡುವುದು.
ಇದಕ್ಕೆ ಮೀರಿ ಸ್ಥೂಲವಾದೊಡೆ ಮೌನಧ್ಯಾನದಿಂದ ಪರಶಿವಲಿಂಗಸಾಕ್ಷಿಯಾಗಿ,
ಪರಗಣಕ್ಕೊಪ್ಪಿಸಿ, ಹತ್ತು ಹನ್ನೊಂದರ ಸಮರಸಾನುಭಾವವ ತ್ಯಜಿಸಿ,
ಆಪ್ಯಾಯನಕ್ಕನ್ನ, ಸೀತಕ್ಕೆ ವಸ್ತ್ರ, ಲಾಂಛನಕ್ಕೆ ಶರಣೆಂದು
ಬಯಲಿಗ ಬೀಳದೆ ಸುಮ್ಮನಿರ್ಪುದೆ ಪ್ರಮಥಗಣಮಾರ್ಗವು.
ಈ ಸನ್ಮಾರ್ಗವನುಳಿದು ಕಿರಾತರಂತೆ
ಮುಸಿತಬ್ಬಿ, ಹೊಲೆತಬ್ಬಿ , ಹೇಸಿಕತಬ್ಬಿ, ವಾಕರಿಕೆತಬ್ಬಿ, ಬಾಂಟಿಕತಬ್ಬಿ,
ನೀಚರನುಡಿ, ಷಂಡರಮಾತು, ಕಳ್ಳರನುಡಿ, ಜಾರರನುಡಿ,
ಜೂಜುಗಾರರನುಡಿ, ಆಟಕಾರರನುಡಿ, ಬೇಟೆಗಾರರನುಡಿ,
ಕುಲಛಲಗಾರರನುಡಿ, ಲಾಹರಿಗಾರರನುಡಿ, ಅತನಘಾತಕರನುಡಿ,
ಲಂಚಗಾರರನುಡಿ, ರಿಣಘಾತಕರನುಡಿ, ಮೋಸಗಾರರನುಡಿ,
ಭ್ರಾಂತರನುಡಿ, ಕೋಪಿಗರನುಡಿ, ಆಚಾರಹೀನ ನಡೆಗೆಟ್ಟರನುಡಿ,
ಬಿಳ್ಳದತುಡಿಹೀನ ಶಬ್ದದಂತೆ ತುಂಟ ತುಡುಗುಣಿ
ಹಲವು ಮಾತುಗಳ ಬಳಕೆಯುಳ್ಳುದೆ ಚತುರ್ಥಪಾತಕವು.
ಇದಕ್ಕ ಹರವಾಕ್ಯ ಸಾಕ್ಷಿ :
''ಕುಶಬ್ದಂ ಹೀನಶಬ್ದಂ ಚ ಚಾಂಡಾಲಃ ಶ್ವಪಚೋಽಪಿ ವಾ ।
ಹೀನಶಬ್ದಸ್ಯ ಪಾಪಾಚ್ಚ ನರಕೇ ಕಾಲಮಕ್ಷಯಂ ॥

ಅನೃತಂ ಚಾಪಶಬ್ದಂ ಚ ನಿಂದಕೋ ಗುರುತಲ್ಪಗಃ ।
ಗಣಾದಿವಾದಮೂಷ್ಯಶ್ಚ ವೇಶ್ಯಾಪುತ್ರಸ್ತಥೈವ ಚ ॥

ಪರನಿಂದಾಪಂದನಾಶ್ಚ ಲಿಂಗಸಂಗಿವಿವರ್ಜಿತಂ ।
ಪ್ರಮಾದಂ ಕುರುತೇ ಮಾಣ್ಯಾ ಮೋಕ್ಷೋ ನಾಸ್ತಿ ಮಹೇಶ್ವರಿ ॥

ಅನ್ಯದೋಷೇಣ ನಿಂದ್ಯಮಾಸ್ತುಸ್ವದೋಷಗುಪ್ತಪಾತಕಃ ।
ಗುರುಭ್ರಷ್ಟಸ್ಯ ಚಾಂಡಾಲೋ ರೌರವಂ ನರಕಂ ವ್ರಜೇತ್ ॥''

ಇಂತೆಂದುದಾಗಿ, ಪರಮಾರಾಧ್ಯ ಶ್ರೀಗುರುಕಟಾಕ್ಷೆಯಿಂದ ತನ್ನ ತಾನರಿದು,
ಈ ಲಿಂಗಾಂಗಸಂಗಸಂಬಂಧದಾಚರಣೆಯ ಸುಖವು
ಏನು ತಪಸ್ಸಿನ ಫಲವೋಯೆಂದರಿದು ಮರೆದರೆ
ಇನ್ನೀ ನಿಜಮೋಕ್ಷವು ದೊರೆಯದೆಂದು ಗುರುಹಿಯರ ನಡೆನುಡಿಗಳಾಲಿಸಿ.
ನಡೆನುಡಿಭಿನ್ನವಾಗದಂತೆ ಚತುರ್ಥಪರಮದ್ರೋಹದ ಪಾತಕಮಂ
ನಿರಸನಂಗೈದು
ನಿಜಪರಶಿವಘನಕ್ಕೆ ಘನವೆನಿಸಿರ್ಪುದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩೮ ॥

೨೯

ಶ್ರೀಗುರುಕರುಣಕಟಾಕ್ಷದೊಳ್
ಚಿದ್ಘನಲಿಂಗ ಅಂಗಸಂಬಂಧದಾಚರಣೆಯ ಸರ್ವಾಚಾರಸಂಪದವೆಂಬ
ಪರಮಾಮೃತಮಂ ಸವಿದುಂಡುಪವಾಸಿ ಬಳಸಿಬ್ರಹ್ಮವಾಗಿ,
ಪರಮಪಾತಕವೆಂಬ ಕಾಲ ಕಾಯ ಮಾಯಾಪಾಶ ಭವಸಾಗರವ ದಾಂಟಿ,
ದೃಢಚಿತ್ತಿನೊಳ್ ನಿಂದ ನಿತ್ಯಸುಖಿಗಳು,
ತಮ್ಮ ನಡೆ ನುಡಿ ತಮಗೆ ಸ್ವಾಯವಾಗಿ, ಸತ್ಯಶುದ್ಧದಿಂದ ಹಸ್ತಪಾದವ ಮುಡಿಸಿ,
ಮಾಡುಂಬ ಭಕ್ತನಾಗಲೀ, ಬೇಡುಂಬ ಮಹೇಶನಾಗಲೀ,
ಅಂಗವಿಕಾರದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ
ಅವಲಕ್ಷಣಮಂ ಜರಿದು ಮರೆದು ನಿರಾಸತ್ವದಿಂದ,
ದೇಹಮೋಹಮನ್ನಳಿದುಳಿದು,
ಅಪರಾಧ ಪ್ರಾಣಿಗಳಾಗಲಿ, ನಿರಪರಾಧ ಪ್ರಾಣಿಗಳಾಗಲಿ,
ಕೊಲ್ಲದಿರ್ಪುದ ಧರ್ಮ, ಗಂಧ ರಸ ಮೊದಲಾದ ಪರದ್ರವ್ಯ ಒಲ್ಲದಿಪ್ಪುದ ಶೀಲ,
ಗುರುಹಿರಿಯರುಗಳಿಗೆ ಪ್ರತಿ ಉತ್ತರವ ಕೊಡದಿಪ್ಪುದ ವ್ರತ,
ಕ್ಷುತ್ತು ಪಿಪಾಸಾದಿಗಳಿಗೆ ಅಳುಕದಿಪ್ಪುದ ನೇಮ,
ಕುಲಾದಿ ಅಷ್ಟಮದಗಳಿಗೆಳಸದಿಪ್ಪುದೆ ನಿತ್ಯ.
ಇಂತೆಸೆವ ಪಂಚಪರುಷವ ಬಾಹ್ಯಾಂತರಂಗದಲ್ಲಿ
ಪರಿಪೂರ್ಣಭಾವದಿಂದ ತುಂಬಿತುಳುಕಾಡುತ,
ಶ್ರೀಗುರುಲಿಂಗಜಂಗಮದ ಷಟ್ಸ್ಥಾನದಲ್ಲಿ
ಷಡ್ವಿಧಲಿಂಗ ಮಂತ್ರಪ್ರಣಮಂಗಳು ಸಂಬಂಧವಾಗಿಪ್ಪುದ
ಶ್ರುತಿಗುರುಸ್ವಾನುಭಾವದಿಂದರಿದು,
ತನ್ನ ಬಳಿವಿಡಿದು ಬಂದ ಸುಪದಾರ್ಥವ ಆ ಗುರುಚರವರಕ್ಕೆ
ಪುಷ್ಪ ಮೊದಲಾದ ಸುಗಂಧವ ಪವಿತ್ರಮುಖದಿಂದ ನಿವೇದಿಸಿದಲ್ಲಿ
ಆಚಾರಲಿಂಗಕ್ಕೆ ಸಮರ್ಪಣೆಯಾಗಿಪ್ಪುದು.
ಹಣ್ಣು ಮೊದಲಾದ ಸುರಸದ್ರವ್ಯವ
ಸುಪವಿತ್ರಗಳಿಂದ ಸುಪವಿತ್ರಮುಖದೊಳ್ ಸಮರ್ಪಿಸಿದಲ್ಲಿ
ಗುರುಲಿಂಗಕ್ಕೆ ಸಮರ್ಪಣೆಯಾಗಿಪ್ಪುದು.
ಪೀತ ಶ್ವೇತ ಮೊದಲಾದ ಸಮಸ್ತ ಚಿತ್ರವಿಚಿತ್ರಂಗಳ ಸ್ವರೂಪವನು
ಮಹಾಜ್ಞಾನಸೂತ್ರವಿಡಿದು ಯೋಗ್ಯವೆನಿಸಿ ನಿವೇದಿಸಿದಲ್ಲಿ
ಶಿವಲಿಂಗಕ್ಕೆ ಸಮರ್ಪಣೆಯಾಗಿರ್ಪುದು.
ಕೌಪ ಕಟಿಸೂತ್ರ ಮೊದಲಾದ ವಸ್ತ್ರಾಭರಣಗಳ ಯೋಗ್ಯವೆನಿಸಿ
ತಟ್ಟುವ ಮುಟ್ಟುವ ಶೀತೋಷ್ಣಾದಿ ಸತ್ಕ್ರಿಯೆವಿಡಿದು ಸಮರ್ಪಿಸಿದಲ್ಲಿ
ಚರಲಿಂಗಕ್ಕೆ ಸಮರ್ಪಣೆಯಾಗಿರ್ಪುದು.
ಶಿವಾನುಭಾವಪ್ರಸಂಗ ಘಂಟೆ ತಂತಿ ಚರ್ಮ ಮೊದಲಾದ

ಸುಶಬ್ದಂಗಳ ಸತ್ಯಶುದ್ಧ ತ್ರಿಕರಣವಿಡಿದು ಪವಿತ್ರತೆಯಿಂದ ನಿವೇದಿಸಿದಲ್ಲಿ
ಪ್ರಸಾದಲಿಂಗಕ್ಕೆ ಸಮರ್ಪಣೆಯಾಗಿರ್ಪುದು.
ಈ ಸಕಲ ಸಂತೋಷವಾದ ಮತ್ತೆ ಹೊನ್ನು ಹೆಣ್ಣುಗಳ ಗಣಸಾಕ್ಷಿಯಾಗಿ,
ಸತ್ಯಸಾವಧಾನದಿಂದ ಧಾರೆಯನೆರೆದು,
ಶಿವದೀಕ್ಷೋಪದೇಶಗಳಿಂದ ಸುಪವಿತ್ರವೆಂದೆನಿಸಿ ನಿವೇದಿಸಿದಲ್ಲಿ
ಮಹಾಲಿಂಗಕ್ಕೆ ಸಮರ್ಪಣೆಯಾಗಿರ್ಪುದು.
ಈ ಪ್ರಕಾರದಿಂದ ಸತ್ಯಶುದ್ಧಕಾಯಕದೊಳು ತನಗುಳ್ಳ ಸುಪದಾರ್ಥದ್ರವ್ಯವ
ನಿಜೇಷ್ಟಾರ್ಪಣ ಪರದಿಂದೆ ಲಿಂಗಾರ್ಪಣವ ಸಮರ್ಪಿಸಬಲ್ಲಾತನೆ
ಷಟ್‌ಸ್ಥಲಭಕ್ತಮಹೇಶ್ವರರೆಂಜೆನು.
ಈ ಷಡ್ವಿಧ ದ್ರವ್ಯಪದಾರ್ಥಂಗಳು ದೊರೆಯದಿದ್ದರೆ
ಮೂಲಚಿತ್ತ ಮೊದಲಾದ ಅಂಗ ಮನ ಪ್ರಾಣ ಇಂದ್ರಿಯ ಕರಣ ವಿಷಯಂಗಳ
ಆ ಶ್ರೀಗುರುಲಿಂಗ ಜಂಗಮದ ಸೊಮ್ಮುಸಂಬಂಧವಲ್ಲಿ ನಿಲಿಸುವುದ
ಸರ್ವಾಂಗಲಿಂಗಾರ್ಪಣವಾಗಿರ್ಪುದು.
ಇದರೊಳಗೆ ತನು ನೋಯದೆ. ಮನ ಕರಗದೆ, ಭಾವ ಬಳಲಿಸದೆ,
ಅತಿ ಸುಯಿಧಾನದಿಂದ ನಿಃಕಳಂಕ ಪರಶಿವ
ಪಾದೋದಕ ಪ್ರಸಾದ ಮಂತ್ರದ ಪರಶಿವತತ್ವದಲ್ಲಿ ಪರಿಪೂರ್ಣರಾಗಿರ್ಪುದೆ
ಅನಾದಿಪ್ರಮಥಗಣಮಾರ್ಗವು.
ಇಂತೆಸೆವ ಸಚ್ಚಿದಾನಂದದ ಪರಮಾನುಭಾವ ಸನ್ಮಾರ್ಗವನುಳಿದು
ಸರ್ವಾಚಾರಸಂಪನ್ನ ಬಾಹ್ಯರಾದ ಕಿರಾತರಂತೆ,
ಭಂಗಿ ಗಾಂಜಿ ಗುಡಾಕು ತಂಬಾಕದ ಚಿಲುಮ
ಕಡ್ಡಿ ಹುಡಿ ನಾಸಿಬುಕುಣಿಯೆಂದು ಭುಂಜಿಸಿ,
ಹುಚ್ಚನಾಯಿ ಎಲುವ ಕಚ್ಚಿದಂತೆ,
ದಿವರಾತ್ರಿಗಳಲ್ಲಿ ಪಾದೋದಕಪ್ರಸಾದದ್ವಾರವಾಗಿ ಪರಿಶೋಭಿಸುವಂತೆ
ಪರಶಿವ ಪ್ರಾಣಲಿಂಗದ ಭೋಗಾಂಗದಲ್ಲಿಟ್ಟುಕೊಂಡು,
ಭ್ರಾಂತು ಭೋಗಿಗಳಾಗಿ, ನಿಜಗೆಟ್ಟು, ತಮ್ಮ ತಾವರಿಯದೆ,
ಪಿಶಾಚಿಮಾನವರಂತೆ ಇಂದ್ರಾದಿ ಹರಿಸುರಬ್ರಹ್ಮಾದಿಗಳು ಹೊಡೆದಾಡಿದ
ಕರ್ಮದೊಕುಳಿಯಲ್ಲಿ ಬಿದ್ದೊದ್ದಾಡಿ ತೊಳಲುವ.
ವನಿತಾದಿ ಆಸೆ, ಭೋಗದ ಆಸೆ ಪಾತದೊಕುಳಿಯಿಂದರಿದು
ಮರೆದು ನರಗುರಿಗಳಾಗಿ. ಬಾಯಿಗೆ ಬಾಯಿ ಹಚ್ಚಿ
ಬೊಗಳಾಡುವುದೊಂದು ದುರಾಚಾರ.
ರಾಜರಿಗೆ ರೊಕ್ಕವ ಕೊಟ್ಟು, ಯಂತ್ರ ಮಂತ್ರ ತಂತ್ರಗಳಿಂದೊಲಿಸಿ,
ಮಲತ್ರಯವಿದೂರರೆಂದು ಪತ್ರ ಉತ್ರಗಳಲ್ಲಿ ಹಮ್ಮು ಬಿರಿತನಕ್ಕೆ ಬಿದ್ದು,
ಅಂದಿನವರ ಇಂದಿನವರೆಂದು ಒಪ್ಪವಿಟ್ಟು,
ನುಡಿನಡೆಹೀನರಾಗಿ, ಬಿಟ್ಟಮಲವನುಸರಿಸಿ,

ತಥ್ಯ ಮಿಥ್ಯ ತಾಗುದ್ವೇಷಗಳಿಂದೆ ದಿವರಾತ್ರಿಗಳಲ್ಲಿ ತ್ರಿವಿಧವಸ್ಥೆಗಳ ಕಳೆದು,
ಒಬ್ಬರೊಬ್ಬರು ಹೊಡೆದಾಡುವುದೊಂದು ದುರಾಚಾರ.
ಇಂತಲ್ಲದೆ, ಮಿಲಂಚರಾಕ್ಷಸರ ಅರವತ್ತುನಾಲ್ಕು ವಿದ್ಯೆ ಬತ್ತೀಸಾಯುಧಗಳ ಕಟ್ಟಿ,
ತಳ್ಳಿತಗಾದಿಗಳಿಂದ ಹೊಲ ಗದ್ದೆ ಬಣವೆಗಳ ಸುಟ್ಟು, ಅನಂತ ಹಿಂಸೆಗಳ ಮಾಡಿ,
ಊರು ಕೇರಿ ಪೇಟೆ ಪಟ್ಟಣಗಳ ಸುಲಿದು, ಹಾದಿ ಬೀದಿಯ ಬಡಿದು,
ಮತ್ತೆ ನಾಚಿಕೆಯಿಲ್ಲದೆ ನಾವು ವೀರಶೈವಘನದ ಭಕ್ತಮಹೇಶ್ವರರೆಂದು,
ನಡೆಗೆಟ್ಟು ನುಡಿಯ ನುಡಿವುದೊಂದು ಅತಿಕಠಿಣವಾದ ದುರಾಚಾರವು.
ವಿಭೂತಿ ರುದ್ರಾಕ್ಷಿ ಗುಣತ್ರಯಗಳಳಿದುಳಿದ
ಶಿವಲಾಂಛನ ಮುದ್ರಾಧರ್ಮಗಳ ಹೊದೆದು,
ಜಡೆ ಮಕುಟಗಳ ಬಿಟ್ಟು, ಕೌಪ ಕಟಿಸೂತ್ರವ ಧರಿಸಿ,
ನಿಜಮೋಕ್ಷಪದವನರಿಯದೆ,
ಅರ್ಥೇಷಣ ಪುತ್ರೇಷಣ ಧಾರೇಷಣ ಈಷಣತ್ರಯದ ಮೋಹಾಭಿರತಿಯಿಂದ,
ಅಂತರ್ಜ್ಞಾನ ಬಹಿಕ್ರಿಯಾಚಾರವ ಮರೆದು,
ಕಾಲತ್ರಯ ಕಾಮತ್ರಯ ಕರ್ಮತ್ರಯ ದೋಷತ್ರಯ
ಪಾಪತ್ರಯ ರೋಗತ್ರಯ ಅಜ್ಞಾನತ್ರಯ ಅನಾಚಾರತ್ರಯ ಮೊದಲಾದ
ಭವಪಾಶದಲ್ಲಿ ಮುಳುಗುಪ್ಪಿಯಾಗಿ ಭರಿಸುವಂಥಾದ್ದೆ ಐದನೆಯ ಪಾತಕವು.
ಇದಕ್ಕೆ ಹರನಿರೂಪ ಸಾಕ್ಷಿ :
''ತಸ್ಕರಂ ಪರದಾರಂಚ ಅನ್ಯದೈವಮುಪಾಸನಂ ।
ಅನೃತಂ ಇಂದಕಶ್ಚೈವ ತಸ್ಯ ಚಾಂಡಾಲವಂಶಜಃ ॥

ಪರಾರ್ಥಹಿಂಸಕಶ್ಚೈವ ಭಕ್ತದ್ರೋಹೀ ಚ ನಿಂದಕಃ ।
ಪ್ರಾಣಘಾತಕದೇಹಾನಾಂ ತಸ್ಮಾತ್ ಚಾಂಡಾಲವಂಶಜಃ ॥

ಅಲ್ಪಜೀವೀ ಭವಪ್ರಾಣೀ ಅಲ್ಪಭೋಗನಿರರ್ಥಕಃ ।
ಅಲ್ಪಾಶ್ರಯಂ ನ ಕರ್ತವ್ಯಂ ಮಹದಾಶ್ರಯಃ ॥

ಅಜ್ಞಾನಾಚ್ಚ ಕೃತಂ ಪಾಪಂ ಸುಜ್ಞಾನಾಚ್ಚ ವಿನಶ್ಯತಿ ।
ಸುಜ್ಞಾನಾಚ್ಚ ಕೃತಾತ್ ಪಾಪಾತ್ ರೌರವಂ ನರಕಂ ವ್ರಜೇತ್ ॥''

ಎಂದುದಾಗಿ, ಪರಿಪೂರ್ಣ ಶ್ರೀಗುರುಮಾರ್ಗಾಚಾರ ನಡೆನುಡಿಯಿಂದಾಚರಿಸಿ,
ನಿಜಮುಕ್ತಿಮಂದಿರವ ಸೇರಬೇಕೆಂಬ ಸದ್ಭಕ್ತಮಹೇಶ್ವರರು
ಸತ್ತುಚಿತ್ತಾನಂದ ನಿತ್ಯಪರಿಪೂರ್ಣತ್ವವನೈದಿ,
ಪರಮಪಾತಕಂಗಳಿಗೆ ಮಹಾಜ್ಞಾನಾಯುಧವ ಹಿಡಿದು,
ನಿತ್ಯ ನಿತ್ಯ ಇತರೇತರ ದುಶ್ಶಾಷ್ಟಿ ಬಿಟ್ಟು
ಘನಲಿಂಗಾಂಗಸಮರಸಮನೋಲ್ಲಾಸ ಸದ್ಭಕ್ತಿ ಜ್ಞಾನವೈರಾಗ್ಯ
ನಿಜನಿಷ್ಠಾಪರತ್ವಮಂ ಸಾಧಿಸಿ,

ತಮ್ಮ ತಾವರಿತವರೆ ಪರಶಿವಯೋಗಾನಂದಭರಿತರೆಂಬೆ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೩೯ ||

೪೦

ಶ್ರೀಗುರುಕರುಣಕಟಾಕ್ಷೆಯಿಂದ ತಮ್ಮ ತಾವರಿದ
ನಿತ್ಯಮುಕ್ತ ನಿಜೋತ್ತಮ ಸದ್ಭಕ್ತ ಮಹೇಶ್ವರರು,
ಹಿಂದೆ ಹೇಳಿದ ಬಹಿರಂಗ ಪಂಚಪಾತಕಮಂ ನಿರಸನಂಗೈದು
ಮಾರ್ಗಕ್ರಿಯ ಶುದ್ಧರೆನಿಸಿ,
ಅಂತರಂಗದ ಗುಪ್ತಪಾತಕಮಂ ನಿರಸನಗೈವ ವಚನಸೂತ್ರವದೆಂತೆಂದೊಡೆ :
ತನಗುಳ್ಳ ಗಂಧ ರಸ ಮೊದಲಾದ ಸುಪದಾರ್ಥದ್ರವ್ಯಗಳ
ಗುರು ಚರ ಪರ ಸ್ಥಿರ ತಂದೆ ತಾಯಿ ಘನಲಿಂಗ ಸಮ್ಮೇಳಕ್ಕೆ ಮಾಡದೆ
ನಿರವಯಪರಿಪೂರ್ಣ ನಿರಂಜನ ಗುರುಲಿಂಗಜಂಗಮ
ಪ್ರಸನ್ನೋದಯವಾದ ಚಿತ್ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ
ಮಹಾಮಂತ್ರ ಕೊನೆಮೊನೆಯಲ್ಲುದಯವಾದ ಮಹದರಿವು
ಮಹಾಜ್ಞಾನ ಮಹಾನುಭಾವಾಚಾರ ಸಂಬಂಧದಾಚರಣೆಗಳ
ಕೇವಲ ಎನ್ನ ಜನನಾಂಕುರದ ಮುಕ್ತಿದ್ವಾರವಾಗಿರುವ ಸ್ಥಿತಿಯ ಗೊತ್ತಿನ ಹಕ್ಕೆ,
ನಾ ನಿರವಯಲಾಗುವ ಲಯಸ್ಥಾನದ ಉಳುಮೆಯ ಮಹಾಮನೆಯೆಂದು
ಭಾವಭರಿತವಾಗಿ ಹಿಂದುಮುಂದಣ ಫಲಪದದ
ಭೋಗಮೋಕ್ಷದಾಪೇಕ್ಷೆಗಳಂ ನೆರೆನೀಗಿ,
ಬಯಲಬ್ರಹ್ಮದಿರವ ಹೊದ್ದಲೊಲ್ಲದೆ
ಪಾಪದಪುಂಜ, ಕರ್ಮದೋಕುಳಿ, ಮಲದಾಗರ,
ಅನಾಚಾರದಕ್ರಿಯ, ಅಜ್ಞಾನ ವಿಷಯಾತುರದ ಭವಜೀವಿಗಳಾಗಿರುವ
ಪರಮಪಾತಕರ ಮೋಹವಿಟ್ಟು, ನನ್ನ ಪೂರ್ವಾಶ್ರಯವೆಂದು,
ಅತಿ ಪ್ರೇಮದಿಂದ ತನುಮನಧನವ ಸವೆದು,
ಅವರೊಡಗೂಡಿ ತೀರ್ಥಯಾತ್ರೆಗಳಂ ಮಾಡಿ,
ತಾ ಸ್ವೀಕರಿಸಿದ ಪ್ರಸಿದ್ಧಪ್ರಸಾದ ಪಾದೋದಕಪ್ರಸಾದಮಂ
ಆ ತ್ರಿವಿಧ ದೀಕ್ಷಾಚಾರಹೀನವಾದ ಭೂಪ್ರತಿಷ್ಠಾದಿಗಳಿಗೆ
ಕೊಟ್ಟು, ಕೊಂಬುವ ಭ್ರಷ್ಟ ನಡಾವಳಿಯ ಅಂತರಂಗದ ಪ್ರಥಮಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೪೦ ||

೪೧

ಗುರುಮಾರ್ಗಾಚಾರ ಲಿಂಗಾಂಗಸಂಗಯೋಗಸಂಪನ್ನರೆಂದು
ಉತ್ರಪತ್ರಂಗಳ ಲಿಖಿತಂಗೈದು,
ತನ್ನ ಗೃಹದಲ್ಲಿ ತನ್ನ ಪಿತ–ಮಾತೆಯಾದ ಗುರುಚರಕ್ಕೆ
ಒಂದು ಪಾಕ, ತನಗೊಂದು ಪಾಕ ಮಾಡಿಸಿಕೊಂಡು,

ಉದರವಂ ಹೊರೆದು, ಪ್ರಸಾದಿಗಳೆನಿಸಿ,
ಗುರುಚರ ಬಂದಾಗ್ಗೆ ತಂಗಳ ನೀಡಿ, ಅವರಿಲ್ಲದಾಗ ಬಿಸಿಯನುಂಡು,
ಮತ್ತೊಬ್ಬರಿಗೆ ಆಚಾರವ ಹೇಳಿ, ತಾನನಾಚಾರಿಯಾಗಿ
ಸತ್ಕ್ರಿಯಾಸಮ್ಯಜ್ಞಾನವ ಮರೆದು, ಮಹಾಜ್ಞಾನಪರಿಪೂರ್ಣರೆನಿಸಿ,
ತ್ರಿವಿಧಪ್ರಸಾದಪಾದೋದಕವರಿಯದವರಲ್ಲಿ ಸಮರಸಕ್ರಿಯೆಗಳಂ ಬಳಸಿ,
ಡಂಬಕತನದಿಂದೊಡಲುಪಾಧಿವಿಡಿದು,
ತಥ್ಯ ಮಿಥ್ಯ ರಾಗ ದ್ವೇಷ ಕಠಿಣ ನುಡಿಗಳ ಬಳಕೆಯಲ್ಲಿರ್ಪುದ
ಅಂತರಂಗದ ದ್ವಿತೀಯಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೦ ॥

೪೧

ವೀರಶೈವ ಸನ್ಮಾರ್ಗ ಗುರೂಪದೇಶರೆನಿಸಿ
ತಮ್ಮಯ ನವಸ್ಥಾನದಲ್ಲಿರ್ದ ಮೂರ್ತಿಗೊಂಡಿರ್ಪ
ನವಲಿಂಗಮಂತ್ರಗಳಿಗ ಸುಗಂಧ ಸುರಸ ಸುರೂಪು
ಸುಸ್ಪರ್ಶನ ಸುಶಬ್ದ ಸುತೃಪ್ತಿ ಅಖಂಡತೃಪ್ತಿ ಮಹಾತೃಪ್ತಿ
ಮಹಾಪರಿಪೂರ್ಣತೃಪ್ತಿ ಕಡೆಯಾದ ನವರಸಾಮೃತಗಳ
ಆ ಲಿಂಗಮಂತ್ರನಿರೀಕ್ಷಣೆಗಳನುಳಿದು,
ಕ್ರಿಯಾರ್ಪಣ ಜ್ಞಾನಾರ್ಪಣ ಮಹಾಜ್ಞಾನಾರ್ಪಣ
ತ್ರಿವಿಧಸಂಬಂಧದಾಚರಣೆಯ ಸಾವಧಾನ ಸಪ್ತವಿಧಭಕ್ತಿಯಿಂ ಮರೆದು,
ಪಂಚಪರುಷಮಂ ಮಾಡದೆ,
ಜಡಜೀವರಂತೆ ಭೌತಿಕಲಿಂಗೋದಕಂಗಳ ಭುಂಜಿಸಿ,
ಅಂಗಭೋಗವಿಷಯಾತುರನಾಗಿರ್ಪುದೆ ಅಂತರಂಗದ
ತೃತೀಯ ಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೧ ॥

೪೨

ಅನಂತ ತಪಸ್ಸಿನ ಫಲ ಒದಗಿ,
ಗುರುಕರುಣದಿಂದ ಚಿದ್ಘನಲಿಂಗಾಂಗಸಂಬಂಧ
ವೀರಶೈವೋದ್ಧಾರಕರಾದ ಮಹಾಗಣ ಪ್ರಸನ್ನಪ್ರಸಾದವೆನಿಸುವ
ವಚನಸಾರಾಮೃತನುಭಾವಸುಖಮಂ
ಸವಿಸವಿದುಂಡುಪವಾಸಿ ಬಳಸಿಬ್ರಹ್ಮವಾಗಲರಿಯದೆ
ಒಬ್ಬರಿಗೆ ಹುಟ್ಟಿ, ಒಬ್ಬರಿಗೆ ಹೆಸರಹೇಳಿ, ಶಿವಾಚಾರಮಾರ್ಗಸಂಪನ್ನರನಿಸಿ,
ತಮ್ಮ ತಾವರಿಯದೆ, ಹಲವು ಮತದವರ ಎಂಜಲಶಾಸ್ತ್ರವಿಡಿದು,
ಶೈವಕರ್ಮೋಪವಾಸ ಕ್ರಿಯಾಚಾರವಿಡಿದು,
ಜ್ಞಾನವ ಬಳಕೆಯಾಗಿರ್ಪುದ ಅಂತರಂಗದ ಚತುರ್ಥಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೨ ॥

೪೪

ಗುರುಮಾರ್ಗಾಚಾರ ಸನ್ಮಾನಿತರೆನಿಸಿ
ಅನಾದಿ ಶರಣಗಣ ಸಮರಸೈಕ್ಯವನುಳ್ಳ
ಶ್ರೀ ರುದ್ರಾಕ್ಷಿಯಾಚರಣೆ ಹಸ್ತಮಣಿಗಳ ಸಂಬಂಧ ಸಗುಣಾನಂದ
ಏಕಾಕ್ಷರ ತ್ರಿಯಾಕ್ಷರ ಪಂಚಾಕ್ಷರ ಷಡಕ್ಷರ ಮೊದಲಾದ
ಮಿಶ್ರಾಮಿಶ್ರಗಳ ಸಂಪದೈಕ್ಯಾನುಭಾವದ ನಿಜೋಪದೇಶವನರಿಯದ,
ಶೈವಪಾಷಂಡಿಗಳ ಹಟಕರ್ಮ ಕ್ರಿಯಾಯೋಗಾಭ್ಯಾಸವ ಬಳಸಿ,
ಅನಂತ ಮಣಿಮಾಲೆಗಳಂ ಪಿಡಿದು,
ಕುಟಿಲ–ಕುಹಕ,ಯಂತ್ರ–ತಂತ್ರ, ಜಪ–ತಪ,
ಹೋಮ–ನೇಮ ಅನುಷ್ಠಾನವೆಂಬ
ಕಾಂಕ್ಷೆವಿಡಿದು, ಫಲಪದಂಗಳಂ ಬಯಸಿ, ಮಹಿಮಾಪುರುಷರೆನಿಸಿ,
ಉಂಡುಟ್ಟು, ಕಂಡಕನಸ ಹೇಳಿ, ಭೋಗದಲ್ಲಿಸಂಪನ್ನನೆನಿಸಿ,
ಬಯಲಭ್ರಾಂತರಾಗಿ, ಒಂದರಲ್ಲಿ ನೈಷ್ಠೆಗಾಣದೆ, ಗುಪ್ತದ್ರೋಹಿಗಳಾಗಿ,
ಸತ್ಯಶುದ್ಧ ಪುರಾತರ ನಡೆನುಡಿಯ ಸಾಧಿಸದೆ,
ಮಲತ್ರಯಮೋಹದಲ್ಲಿ ಅಭಿರತಿಯಿಟ್ಟು
ನಾವು ಸ್ಥಲದ ಭಕ್ತಜಂಗಮವೆಂದು
ನಡೆಗೆಟ್ಟನುಡಿ ನುಡಿವುದೆ ಅಂತರಂಗದ ಪಂಚಮಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೪೪ ||

೪೫

ಶ್ರೀಗುರುಕರಜಾತರು ಆ ಹಿಂದೆ ಹೇಳಿದ ಪಾತಕಗುಣನಿರಸನಂಗೈದು,
ಅಂತರಂಗದ ಪಾತಕಕ್ಕೆ, ಶಂಕರಿಗೆ ಮೋಹದ ಕಂದನಾದ
ರೇಣುಕಾರ್ಯರಿಗೆ ಉಪದೇಶಿಸಿದರೇನು ?
ಇದಕ್ಕೆ ಹರನಿರೂಪ ಸಾಕ್ಷಿ :
''ಅನೃತಂ ಅಸ್ಥಿರಂ ವಾಕ್ಯಂ ವಚನಂ ಪಂಕ್ತಿಭೇದನಂ ।
ಔದಾಸೀನ್ಯಂ ನಿರ್ದಯತ್ವಂ ಷಡ್ವಿಧಂ ಭವಿಮಿಶ್ರಿತಂ ॥
ಷಡೂರ್ಮಿಷಡ್ವರ್ಗಂ ಚೈವ ಷಡ್ಭಾವ ಷಡ್ಭ್ರಹ್ಮಸ್ತಥಾ ।
ಷಡ್ವಿಷಯಾನ್ನರಕಂ ಯಾತಿ ಗುಪ್ತಪಾತಕವಂಶಜಃ ॥
ಮಾತೃದ್ರೋಹೀ ಪಿತೃದ್ರೋಹೀ ಲಿಂಗಬಾಹ್ಯಪರಾರ್ಥಕಃ ।
ಅನ್ಯದೋಷೇಣನಿಂದ್ಯಸ್ತು ತಸ್ಯ ಚಾಂಡಾಲವಂಶಜಃ ॥''
ಇಂತೆಂದುದಾಗಿ,
ಗುರುಮಾರ್ಗಾಚಾರ ಪುತ್ರ ನಿಜಮುಕ್ತಿಸ್ವರೂಪರು
ಅಂತರ್ಬಾಹ್ಯಂಗಳಲ್ಲಿ ಕರ್ಮದಾಗರವೆಂಬ
ಪಂಚಮಹಾಪಾತಕವಾಗೊಪ್ಪುವ ಶಿವನ ಮಾಯಾಂಶಪಾಶವ

ಗುರುಮಾರ್ಗಾಚಾರವೆಂಬ ಹಡಗವನೇರಿ
ಅಸತ್ಯದ ಕಡಲದಾಂಟಿ, ಪರಮಾನಂದಪುರವ ಹೊಕ್ಕು,
ನಿರಂಜನಪ್ರಭುರಾಜನೊಡವೆರೆದು
ಹಿಂದಣಾಸೆ ಮುಂದಣ ಬಯಕೆಯಂ ಮರೆದು,
ನಿಜಾನುಭಾವಪರಶಿವಯೋಗಾನಂದದಲ್ಲಿ ನಿರ್ದೇಹಿಗಳಾಗಿ,
ಸತ್ಯಶುದ್ಧ ನಡೆನುಡಿಯುಳ್ಳವರೆ
ಕಾರಣಾರ್ಥ ಬಂದ ಪರಶಿವಗಣಂಗಳು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೫ ॥

೪೬

ಪರಶಿವತತ್ವಶರೀರಮಂ ಧರಿಸಿ,
ಪರಿಪೂರ್ಣಜ್ಯೋತಿರ್ಮಯ ನಿಃಕಳಂಕ ಶ್ರೀಗುರುಲಿಂಗಜಂಗಮದ
ನಿಜಪ್ರಸನ್ನಪ್ರಸಾದಪಾದೋದಕಪ್ರಣಮಪ್ರಸನ್ನತೆ
ಪ್ರಸಾದ ಚಿದ್ಬೆಳಗಿನಿಂದ ಮನೆಗಟ್ಟಿ,
ಅಂಗ ಪ್ರಾಣ ಮನ ಭಾವ ಕರಣಂಗಳ ವಿಷಯಾತುರವೆಂಬ
ಪ್ರವೃತ್ತಿಜ್ಞಾನಮಂ ಮರೆದು ನಿವೃತ್ತಿಸುಜ್ಞಾನೋದಯರಾಗಿ.
ಅಭಿರತಿಕ್ರೀಡಾವಿಲಾಸದೊಳ್ ಕೂಡೆರಡಳಿದ ಆದಿಲಿಂಗ ಅನಾದಿಶರಣನ
ಪೂರ್ಣಾನಂದದ ಚಿದಾಬ್ಧಿಯಲ್ಲಿ ಲೋಲುಪ್ತರಾಗಿ,
ಮಹಾಘನಕ್ಕೆ ಘನವೆನಿಸಿ ನಿಂದ ನಿತ್ಯಮುಕ್ತ ಭಕ್ತಗಣಾರಾಧ್ಯರು,
ಬಾಹ್ಯಾಂತರಂಗದಲ್ಲಿ ಬಿಡುಗಡೆಯುಳ್ಳ ಪಂಚಸೂತಕಂಗಳ
ನಿರಶನವಾವಾವೆಂದೊಡೆ :
ಜನನಸೂತಕ ಜಾತಿಸೂತಕ ರಜಃಸೂತಕ ಉಚ್ಚಿಷ್ಟಸೂತಕ
ಪ್ರೇತಸೂತಕವೆಂಬಿವಾದಿಯಾದ ಸರ್ವಸೂತಕಂಗಳು.
ಅಂಗಲಿಂಗವೆ ಸದಾಚಾರವಾಗಿ,
ಚಿದಂಗ ಚಿದ್ಘನಲಿಂಗವೆ ಪರಿಪೂರ್ಣ ಆಚರಣೆಯಾಗಿ,
ಪರಿಪೂರ್ಣಾಂಗ ಪರಿಪೂರ್ಣಲಿಂಗವೆ ಸಚ್ಚಿದಾನಂದಸಂಬಂಧವಾಗಿ
ಪರಿಶೋಭಿಸುವ ನಿಜೇಷ್ಟಲಿಂಗಶರಣರಿಗಿಲ್ಲ ನೋಡಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೬ ॥

೪೭

ಪರಮಕೈಲಾಸದ ವಡಬಾಗ್ನಿಮಂಟಪದಲ್ಲಿ
ಅನಾದಿಪ್ರಮಥಗಣಾರಾಧ್ಯರು ಶಿರಸ್ಕರಿಸಿ
ಮಹಾಜ್ಞಾನಾಗ್ನಿಯಿಂದ ದಹಿಸಿದ ಪಂಚಸೂತಕವಮಂ,
ಪರಮೇಶ್ವರನು ಚಿತ್ಕಾಂತೆಯಾದ ಶಾಂಭವಿಗೆ ಉಪದೇಶಿಸಿದನು.
ಆಗಮೋಕ್ತ ಸಾಕ್ಷಿ :

"ಆದಿಬಿಂದೋದ್ಭವ ಬೀಜಂ ಬೀಜಮಧ್ಯಂ ಸ್ಥಿತಂ ಕುಲಃ ।
ಬೀಜಃ ನಾಸ್ತಿ ಕುಲೋ ನಾಸ್ತಿ ತಸ್ಮೈ ಗಣಕುಲೋ ಭವೇತ್ ॥"
ಎಂದುದಾಗಿ,
ಮಹಾಜ್ಞಾನೋದಯದಿಂದ ಪೂರ್ವಜನ್ಮವಳಿದು
ಪುನರ್ಜಾತನಾದನಾಗಿ,
ಸರ್ವಾಂಗದಲ್ಲಿ ಚಿದ್ರೂಪವಾದ,
ಚಿನ್ಮಯ ಲಿಂಗಾಯತ ಸ್ವಾಯತ ಸನ್ನಹಿತವಾದವಧಾನ
ಸದ್ಧರ್ಮ ಸದ್ಭಕ್ತ ಮಹೇಶ್ವರರಿಗ
ಜನನಸೂತಕವೆಂಬುದೆ ಪರಮಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೭ ॥

೪೮

ಸದಾಚಾರಲಿಂಗನಡೆಯುಳ್ಳ ಸದ್ಭಕ್ತಮಹೇಶ್ವರರಾದ ಬಳಿಕ,
ಅಪತ್ಯಪ ಜಪಕರ್ಮ ಭವಿನೇಮಸ್ತರ ಕಳೆದುಳಿದು,
ಸರ್ವಾಚಾರಸಂಪತ್ತಿನ ಷಟ್‌ಸ್ಥಲಬ್ರಹ್ಮೋಪದೇಶದಿಂದ
ನಿಃಸಂಸಾರ ನಿರಾವಲಂಬ ನಿಃಪ್ರಪಂಚ ನಿತ್ಯಾನಂದ ಮುಕ್ತಿಸ್ವರೂಪ
ಅನಾದಿಪ್ರಮಥಗಣಕುಲವ ಸೇರಿದ ಶಿವಯೋಗಿಗಳಿಗೆ,
ಕುಲಸೂತಕವೆಂಬುದೆ ಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೮ ॥

೪೯

ನಿಜವೀರಶೈವ ಸರ್ವಾಚಾರಂಶೋದ್ಧಾರಕ ಪರಿಪೂರ್ಣ
ಗುರುಪಾದತೀರ್ಥ ಲಿಂಗಪಾದತೀರ್ಥ ಜರಪಾದತೀರ್ಥ
ಗಣಶೇಷೋದಕ ಪರಿಪೂರ್ಣೋದಕಾದಿಯಾದ
ಪಾದೋದಕ, ಲಿಂಗೋದಕ, ಜ್ಞಾನೋದಕ,
ಶೇಷೋದಕ, ಸತ್ಯೋದಕವೆಂಬ
ಪರಮಾನಂದಾಬ್ಧಿಯಲ್ಲಿ ಸರ್ವಾಚಾರಕ್ರಿಯಾ ರುಚಿರುಚಿ ಪಾಕಪ್ರಯತ್ನ
ನಾನಾ ಕ್ರಿಯಾವಿಧಾನ ಪಾಸ್ಕಂಗಳಿಂದ
ಬಾಹ್ಯಾಭ್ಯಾಂತರ ಪರಿಪೂರ್ಣ ಶುದ್ಧಸಿದ್ಧಪ್ರಸಿದ್ಧಪ್ರಸನ್ನಪರಾತ್ಪರ
ನಿರ್ಮಲ ನಿರ್ದೇಹ ನಿಃಕಳಂಕ ನಿರ್ಮಾಯಸ್ವರೂಪರಾದ
ಘನಗಂಭೀರ ಶಿವಯೋಗಸನ್ಮಾರ್ಗಿಗಳಿಗೆ
ರಜಸೂತಕವೆಂಬುದ ಪಂಚಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೪೯ ॥

೫೦

ನಿಃಕಳಂಕ ಶ್ರೀಗುರುವಿನ ಕರುಣಕಟಾಕ್ಷದಿಂದ,
ತನು ಶುದ್ಧಪ್ರಸಾದವಾದ ಕ್ರಿಯಾಚಾರ ನಡೆ,
ಮನ ಸಿದ್ಧಪ್ರಸಾದವಾದ ಜ್ಞಾನಾಚಾರ ನುಡಿ,
ಭಾವ ಪ್ರಸಿದ್ಧಪ್ರಸಾದವಾದ ಭಾವಾಚಾರ ದೃಢ,
ಆತ್ಮ ಪರಿಪೂರ್ಣಪ್ರಸಾದವಾದ ಸರ್ವಾಚಾರಸಂಪತ್ತಿನ
ಸುಚಿತ್ತ ಸುಬುದ್ಧಿ ನಿರಂಹಕಾರ ಸುಮನ ಸುಜ್ಞಾನ ಸದ್ಭಾವವೆಂಬ
ಪರಮಪದವಿಯಲ್ಲಿ ಲಿಂಗಭೋಗೋಪಭೋಗ ಸಚ್ಚಿದಾನಂದ ಸನ್ನಿಹಿತ
ಸದ್ಭಕ್ತ ಮಹೇಶ್ವರರಿಗೆ ಎಂಜಲಸೂತಕವೆಂಬುದೆ ಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೫೦ ॥

೫೧

ಪರಮಾರಾಧ್ಯ ದೀಕ್ಷಾಗುರುದೇವನ
ಮಹದರುವಿನ ಕೊನೆಯ ಮೊನೆಯಲ್ಲಿರುವ
ಪರಂಜ್ಯೋತಿಯೆ ಎನಗೆ ಜನನಸ್ಥಲ.
ಶಿಕ್ಷಾಗುರುದೇವನ ಮಹಾಜ್ಞಾನದ ಬೆಳಗಿನ ತಿಳುಹಿನ ನಿಳಯದ
ಪರಮ ಸುಧಾಬ್ಧಿಯೊಳ್ ಎನಗೆ ಸ್ಥಿತಿಯ ಭೋಗಸ್ಥಲ.
ಮೋಕ್ಷಾಗುರುದೇವನ ಪರಮಾನುಭಾವದ
ಚಿದಾನಂದಮಹಾಪ್ರಕಾಶದ ಮೂಲಪ್ರಣವಾಲಯವೆ
ಎನಗೆ ಲಯಸ್ಥಾನದ ಮಹಾಮನೆಯ ಐಕ್ಯಸ್ಥಲವೆಂದು
ಭಾವಭರಿತವಾಗಿ ಇಹಪರಂಗಳೆಡೆಯಾಟವ ನೆರೆ ನೀಗಿ,
ಬಚ್ಚಬರಿಯಾನಂದ ನಿತ್ಯಮುಕ್ತಿಸ್ವರೂಪವದೆಂತೆಂದೊಡೆ :
ಹರನಿರೂಪ ಸಾಕ್ಷಿ :
''ತಥೈವ ಶಿವಸಂಗಿನಾಂ ಜನನಂ ಗುರುಲಿಂಗಕಂ ।
ಚರಲಿಂಗವಿಹಾರಾಚ್ಚ ವಿನಾಶೋ ಲಿಂಗಜಂಗಮಂ ॥
ಸದ್ಗುರೋಃಪಾಣಿಜಾತಸ್ಯ ಸ್ಥಿತಿಂ ಸದ್ಭಕ್ತಸಂಗಿನಾಂ ।
ಲೀಯತೇ ಚ ಮಹಾಲಿಂಗೇ ವೀರಶೈವೋತ್ತಮಸ್ಮೃತಃ ॥''
ಎಂದುದಾಗಿ,
ನಿಜವೀರಶೈವೋತ್ತಮ ಷಟ್‌ಸ್ಥಲಬ್ರಹ್ಮಿಗಳಿಗೆ
ಮರಣಸೂತಕವೆಂಬುದೆ ಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೫೧ ॥

೫೨

ಪರತತ್ವಮೂರ್ತಿ ಅಷ್ಟಾವರಣಸ್ವರೂಪ
ಶ್ರೀಗುರುಮಾರ್ಗಾಚಾರ್ಯ ಸದ್ಧರ್ಮೋದ್ಧಾರಕ ಭಕ್ತಗಣಾರಾಧ್ಯರು,

ಹಿಂದೆ ಹೇಳಿದ ಪಂಚಸೂತಕಂಗಳ ಭವಮಾಟಕೂಟದ ಶೈವಶಾಸ್ತ್ರವಿಡಿದು,
ಜ್ಯೋತಿಷ್ಯಕರ್ಮವ ಮಾಡಿ, ತನಗಾ ಪಂಚಾಂಗವೆ ತತ್ಪ್ರಾಣವಾಗಿ,
ಸದಾಚಾರ ಸದ್ಭಕ್ತಮಹೇಶ್ವರರಿಗೆ ಹೇಳುವ
ಕುಂಡಗೋಳಕರೆ ಪರಮಪಾತಕರು ನೋಡಾ.
ಆ ಪರಮಪಾತಕರು ವರ್ತಿಸಿ ನಿಜಗೆಟ್ಟು,
ಸೂತಕವೆಂಬ ಪಾತಕಾಬ್ಧಿಯಲ್ಲಿ ಮುಳುಮುಳುಗೇಳುವ
ಸೂತಕಗಳಾವಾವೆಂದಡೆ :
ಪ್ರಥಮದಲ್ಲಿ ಜನನಸೂತಕನಿರಸನಮಂ ಪೇಳ್ವೆನು.
ನಿರಂಜನ ನಿಃಶೂನ್ಯ ನಿಃಕಳಂಕ ಹರಗುರು ಲಿಂಗಜಂಗಮಭಕ್ತಮಹೇಶ್ವರರ
ಕ್ರಿಯಾಶಕ್ತಿಯ ಹೃತ್ಕಮಲದಲ್ಲಿ ಉದಯವಾದ ಶಿಶುವು
ಧರಣಿಯ ಮೇಲೆ ಪತನವಾದಾಗಳೆ
ಶ್ರೀಗುರುವಿನ ಆಜ್ಞೋಪದೇಶದಿಂದ ಶಿವಮಂತ್ರವನ್ನುಚ್ಚರಿಸುತ್ತ,
ಲಿಂಗಷಟ್‍ಸ್ಥಲವನು, ಲಿಂಗ ಭಿನ್ನಭಿನ್ನವನು,
ಲಿಂಗಲಕ್ಷಣವನು ನೋಡಿ, ವಿಚಾರತ್ವದಿಂದ,
ಪ್ರಥಮದಲ್ಲಿ ಆ ಲಿಂಗಾಂಗಕ್ಕೆ ಗೋಮೂತ್ರವ ತಳಿದು,
ಆ ಲಿಂಗಾಂಗಸಂಬಂಧಸೂತ್ರದಿಂದಮಳಪಾದೋದಕದೊಳ್ ಸ್ನಾನಂಗೈದು
ಶ್ರೀಗುರುಹಸ್ತದಿಂದ ವಿಭೂತಿಪಟ್ಟವಂ ಕಟ್ಟಿ,
ಶಿವಪಂಚಾಕ್ಷರಮಂ ಲಿಖಿಸಿ,
ಆ ಶಿಶುವಿನ ನಾಭಿನಾಳಂ ಕೊಯಿವುದೆ ಗಣಮಾರ್ಗವು.
ಸಾಕ್ಷಿ :
''ಲಿಂಗಾಂಕಿತಂ ತನುಪ್ರಾಣಂ ಲಿಂಗರೂಪೇಣ ರೂಪಿಣ ಃ।
ಲಿಂಗಭಕ್ತಿಪರಜ್ಞಾನಂ ಪ್ರಾಣಲಿಂಗೀತಿ ಕಥ್ಯತೇ ॥''
ಎಂದುದಾಗಿ,
ಇಂತು ಗುರುಮುಟ್ಟಿ ಪೂರ್ವಲಿಖಿತವ ತೊಡೆದು,
ವಿಭೂತಿಪಟ್ಟವಂ ಕಟ್ಟಿ, ಪಂಚಾಕ್ಷರ ಶಿವಲಿಖಿತಮಂ ಮಾಡಿ,
ಆ ಭಕ್ತಶಿಶುವಿನ ಲಿಂಗಾಂಕಿತವ ಮಾಡದೆ
ಶಿವಸೂತ್ರನಾಭಿನಾಳವ ಕೊಯ್ದರಾದಡೆ
ಶಿವದ್ರೋಹಿಗಳೆನಿಸಿಕೊಂಡು ಶಿಕ್ಷೆಗೊಳಗಾಹರು.
ಈ ಮಾರ್ಗವರಿದು ಲಿಂಗಾಂಕಿತವಾದ ಮೇಲೆ,
ಆ ಲಿಂಗಶಿಶುವನೆತ್ತಿಕೊಂಬುದು.
ಇಂತಲ್ಲದೆ, ಲಿಂಗಬಾಹ್ಯರಸಂಗಡ ಜನನಕೃತ್ಯವ ಮಾಡಿಸಿ,
ಹುರಿಯ ಕೊಯಿಸಿ, ಎಣ್ಣೆ ಬೆಣ್ಣೆಗಳ ಹಚ್ಚಿ, ನೀರನೆರೆದುಕೊಂಡು,
ಆ ಭವಿಸಂಸರ್ಗಲಿಂಗಾಂಕಿತಹೀನವಾದ ಶಿಶುವ,
ಭಕ್ತಮಹೇಶ್ವರರ ಕ್ರಿಯಾಂಗನೆಯರೆತ್ತಿ, ಅಮೃತಗುಟುಕಕೊಟ್ಟರೆ

ರೌರವನರಕ ಪಿತ-ಮಾತ-ಸುತರಿಗೆಂಬುದು ಹರವಾಕ್ಯವು.
ಅದೆಂತೆಂದೊಡೆ :
ಸಾಕ್ಷಿ :
"ಲಿಂಗಾಂಗಸಂಗಸಂಗಿನಾಂ ಲಿಂಗಬಾಹ್ಯಸತೀಸುತಾಃ ।
ಆಲಿಂಗಚುಂಬನಾಚ್ಚೈವ ರೌರವಂ ನರಕಂ ವ್ರಜೇತ್ ॥"
ಎಂದುದಾಗಿ,
ಲಿಂಗಬಾಹ್ಯರ ಲಿಂಗಸಮರಸವನುಳಿದು
ಭವಿ ಮಾಟಕೂಟವ ತಿರಸ್ಕರಿಸಿ,
ಶ್ರೀಗುರುಕಾರುಣ್ಯದಿಂದ ಲಿಂಗ ಆಯತ ಸ್ವಾಯತ ಸನ್ನಿಹಿತವೆಂಬ ಭಾವವ
ಸತಿ-ಪತಿ-ಭಕ್ತ-ಮಹೇಶ-ಗಣಾರಾಧ್ಯರಿಗೆ ಸನ್ಮತವಾಗಿ,
ನಿರ್ಧಾರವಾದ ಬಳಿಕ ಲಿಂಗಾಂಗಸಂಬಂಧಿಗಳಿಂದ
ನಿಮಿಷಾರ್ಧವಗಲದಂಥಾ ಲಿಂಗಧಾರಣ ಲಿಂಗಾರ್ಚನಾರ್ಪಣಸ್ಥಲವನರಿದು.
ಲಿಂಗಸ್ಪರಿಶನದಿಂದ ಚರಪಾದೋದಕ
ಲಿಂಗೋದಕಗಳಲ್ಲಿ ಜಳಕವ ಮಾಡಿಸಿ,
ಚರಲಿಂಗಸ್ಪರಿಶನಭೂತಿಯಂ ಮಂತ್ರಸ್ಮರಣೆಯಿಂದ ಧಾರಣಾಂಗ್ಯದು
ಸಕಲಕ್ರಿಯೆಗಳಿಗೆ ಲಿಂಗಭಸಿತಮಂತ್ರವ ಮುಂತಾಗಿ
ಚರಮೂರ್ತಿ ಚರಣಧೂಳನದಿಂದ ಪವಿತ್ರವಾದ
ಲಿಂಗಪ್ರಸಾದದೆಣ್ಣೆ ಬೆಣ್ಣೆ ಮಧುರಸಾಮೃತವನೆರೆದು,
ಘನಲಿಂಗಮೋಹದೊಳ್ ಅತಿ ಪ್ರೇಮದಿಂ ಸಾಕುವುದೆ
ಭಕ್ತಮಹೇಶ್ವರರಿಗೆ ಹೊದ್ದಿತ್ತಿದ್ದಿತ್ತೆಂಬ
ಭ್ರಾಂತುಭ್ರಮೆಗಳಿಲ್ಲದೆ ವಿರಾಜಿಸುವ
ಭವಿಮಾಟಕೂಟವಿರಹಿತವಾದ ಲಿಂಗಾಚಾರಮಾರ್ಗವು.
ಇಂತಪ್ಪ ಘನಲಿಂಗಾಚಾರದ ಹರಗುರುಮಾರ್ಗದ ಕ್ರಮಕಟ್ಟಳೆಯನರಿಯದೆ,
ಭವಜೀವಿ ಭವಿಮಾನವರಂತೆ ಪುತ್ರೇಷಣದ ಭ್ರಾಂತಿನೊಳ್
ಲಿಂಗಶಿಶುವಿಂಗೆ ಈರಲು, ಗಾಳಿಸೋಂಕು, ಮೂವಟ್ಟಿಲು,
ದೃಷ್ಟಿಪತನ ಬಾಲಗ್ರಹ ಮೊದಲಾದ
ನಾನಾ ಸಂಕಲ್ಪ ಸೂತಕ ಹೊಲೆಕರ್ಮವ ಮಾಡಬೇಕೆಂದು
ಶಕುನಕಾಣಿಕೆಯರಂ ಕೇಳಿ, ಪಂಚಾಂಗವ ಜೋಯಿಸರಂ ಬೆಸಗೊಂಡು,
ಅನಾಚಾರಕೃತ್ಯಗಳಿಂದ ಜನನಸೂತಕ ಭವಕರ್ಮಗಳ ಕಲ್ಪಿಸಿ, ಮಾಡುವ ಭಕ್ತ
ಮಹೇಶಂಗೆ ಆಚಾರವಿಲ್ಲ, ಗುರುವಿಲ್ಲ, ಲಿಂಗವಿಲ್ಲ,
ಜಂಗಮವಿಲ್ಲ, ಪಾದೋದಕಪ್ರಸಾದವಿಲ್ಲ.
ಅವರು ಭಕ್ತಮಹೇಶ್ವರರಲ್ಲ ; ಅವರಿಗೆ ರೌರವನರಕ ತಪ್ಪದು.
ಅದು ಎಂತೆಂದೊಡೆ – ಶಿವಾಗಮ ಸಾಕ್ಷಿ :
"ಯದ್ಯಪಿ ಲಿಂಗದೇಹಿನಾಂ ಜಾತಕಾಲೇ ನ ಸೂತಕಃ ।

ಪ್ರಮಾದಾತ್ಕುರುತೇ ಯಸ್ತು ನರಕೇ ಕಾಲಮಕ್ಷಯಂ ||
ತಿಥಿ ವಾರಂ ಚ ನ ಭೃತ್ಯಂ ನಕ್ಷತ್ರಾಣಿ ಗಣಯೇತ್ |
ಶ್ರಾವಯಂ ತಿಥಿವಾರಂ ಚ ತದ್ಭಕ್ತಃ ನರಕಂ ವ್ರಜೇತ್ ||''
ಎಂದುದಾಗಿ,
ನಿಜವೀರಶೈವಸಂಪನ್ನರೆನಿಸಿ,
ಈ ಹತ್ತು ಹೊಲೆಕರ್ಮವ ಮಾಡುವರು ಭಕ್ತಮಾಹೇಶ್ವರರಲ್ಲ.
ಆ ಭವಿಕರ್ಮಿಗಳ ಗೃಹದಲ್ಲಿ ಹೊಕ್ಕು
ಲಿಂಗಾರ್ಚನಾರ್ಪಣಗಳ ಮಾಡುವಾತ ಜಂಗಮಸ್ಥಲಕ್ಕೆ ಸಲ್ಲ.
ಈ ಮೂವರಿಗೆ ಸಾಕಾರಸೃಷ್ಟಿಯುಳ್ಳನ್ನಕ್ಕರ
ಗುರುಮಾರ್ಗಾಚಾರದ ಪ್ರಮಥಗಣ ಪರಶಿವತತ್ವಪದ
ದೊರಕೊಳ್ಳದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೫೧ ||

೫೨

ಕರ್ಮಭೂಭಾರಿಗಳಾದಂಥ ಭವಿಶೈವರು ವರ್ತಿಸುವಂಥ
ಜಾತಿಸೂತಕನಿರಸನದ ವಚನಸೂತ್ರವದೆಂತೆಂದೊಡೆ ;
ಜಡಶೈವಕರ್ಮಜಾತವ ಕಳೆದು ಪರಾತ್ಪರ ಪರಮಾಣು
ಪರನಾದಬಿಂದುಕಳಾಚರಿತ್ರಮೂರ್ತಿ ಶ್ರೀಗುರುಲಿಂಗದೇವರು
ಜಡಜೀವಭಾವವನಳಿದು ಶಿವಭಾವ ಮಾಡಿದ
ಕಾರಣಿಕರಾದ ಪುಣ್ಯಸ್ವರೂಪರೊಳ್ ನಿಃಕಳಂಕ ಪರಶಿವಕುಲವಲ್ಲದೆ
ಅನ್ಯಥಾ ಕುಲವುಂಟೆ ಸದ್ಭಕ್ತಶರಣರಿಗೆ ?
ಆವಾಶ್ರಮದಲ್ಲಿ ಅವತರಿಸಿದರೇನು ?
ಪರಿಪೂರ್ಣಮಹಾಜ್ಞಾನವೆಂಬ ಜ್ಯೋತಿರ್ಮಯ
ಮಹಾಘನ ಪ್ರಸನ್ನತಿಪ್ರಸನ್ನದಿಂದ
ಅಂಗ ಮನ ಪ್ರಾಣ ಭಾವೇಂದ್ರಿಕರಣಗಳೊಳು
ಚಿದ್ಘನ ಲಿಂಗಾಯತ ಸ್ವಾಯತ ಸನ್ನಿಹಿತ
ಪರಮಾರಾಧ್ಯ ಚರಪಾದತೀರ್ಥಪ್ರಸಾದ ಮಂತ್ರವಾದ ಶರಣರಲ್ಲಿ
ಜಾತ್ಯಾಶ್ರಮಕುಲವನರಸುವರೆ ?
ಅಯೋನಿಜ ಅಜಸ್ವರೂಪಗಣಸಭೆಯಲ್ಲಿ
ಸದಾಚಾರಸಂಪತ್ತಿನ ಸತ್ಕ್ರಿಯಾಜ್ಞಾನಾನುಭಾವದ
ಸತ್ಪುರುಷ ನಡೆನುಡಿಯನರಸಬೇಕಲ್ಲದೆ.
ಮಾನವರಂತೆ ಮನುಷ್ಯರೆಂದು ಭಾವಿಸಲಾಗದು
ಸದ್ಭಕ್ತಮಹೇಶ ಪ್ರಮಥಗಣಾರಾಧ್ಯರು.
ಇದಕ್ಕೆ ಹರವಾಕ್ಯ ಪ್ರಮಾಣು ಅದೆಂತೆಂದೊಡೆ—ಸಾಕ್ಷಿ :

"ಗ್ರಾಮೀಣಮಲಿನಂ ತೋಯಂ ಯಥಾ ಗಚ್ಛತಿ ಸಾಗರಂ ।
ಶಿವಸಂಸ್ಕಾರಸಂಪನ್ನೇ ಜಾತಿಭೇದಂ ನ ಕಾರಯೇತ್ ॥
ಯಥಾ ಪಂಕೇ ಸರೋಜಸ್ಯ ಯಥಾ ಕಾಷ್ಠೇ ಹುತಾಶನಃ ।
ಯಥಾ ಪಾಷಾಣೇ ಸುವರ್ಣಂ ಭಕ್ತಶ್ಚಾಂಡಾಲವಂಶಜಾಃ ॥
ಯಥಾ ಕ್ಷೀರಂ ತಥಾ ಘೃತಂ ಯಥಾ ತಿಲಂ ತಥಾ ತೈಲಂ ।
ಯಥಾ ಪುಷ್ಪಮ್ ತಥಾ ಗಂಧಃ ಯಥಾ ಜಾತಸ್ತಥಾ ಗುಣಃ ॥"
ಎಂದುದಾಗಿ,
ಘನಲಿಂಗಾಂಗಸಂಗಸಮರತಿಯೋಗಾನುಸಂಧಾನ ನಡನುಡಿಯುಳ್ಳ
ಸದ್ಭಕ್ತಗಣಾರಾಧ್ಯರಲ್ಲಿ ಜಾತ್ಯಾಶ್ರಮ ಕುಲಗೋತ್ರವನರಸಲಾಗದು.
ಜ್ಯೋತಿರ್ಮಯ ಪರಶಿವಸ್ವರೂಪ ಗುರುಲಿಂಗಜಂಗಮಸಂಬಂಧವನುಳ್ಳ
ಸದ್ಭಕ್ತಗಣಂಗಳ ಕೇವಲ ನಿಃಕಲಪರಶಿವಜಾತರು.
ಚಿದ್ಘನಲಿಂಗಪ್ರತಿಬಿಂಬರು, ಅಯೋನಿಸಂಭವರು, ಅಜಾತಚರಿತ್ರರು.
ನಿತ್ಯನಿರ್ಮಲರು ನಿರ್ದೋಷಿಗಳು ನಿಃಕಾಮಿಗಳು ನಿಃಕ್ರೋಧಿಗಳು
ನಿರ್ಲೋಭಿಗಳು ನಿರ್ಮೋಹಿಗಳು ನಿರ್ಮದರು ನಿರ್ಮತ್ಸರರು
ನಿರುಪಾಧಿಕರು ನಿಃಕಳಂಕರು ನಿರೋಗಿಗಳು
ನಿತ್ಯಶಿವಾನಂದ ಕಲ್ಯಾಣರು ನಿತ್ಯಶಿವಯೋಗಸಂಪನ್ನರು
ನಿತ್ಯ ದಾಸೋಹ ಪರಮಾನಂದತೃಪ್ತರು,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅವಿರಳಪರಂಜ್ಯೋತಿಸ್ವರೂಪ
ಸಗುಣ ನಿರ್ಗುಣ ನಿಜಾನಂದಲೋಲುಪ್ತರು,
ಅಂಗದಾಚಾರಕ್ಕೆ ಆಯತವ ಮಾಡಿದವರು,
ಪ್ರಾಣಷಟ್‌ಸ್ಥಲಕ್ಕೆ ಸ್ವಾಯತವೆಂದೆನಿಸಿದವರು,
ಭಾವದಷ್ಟಾವರಣಕ್ಕೆ ದಾಸನೆಂದೆನಿಸಿದವರು.
ಕರಣೇಂದ್ರಿಯಗಳ ಸತ್ಕ್ರಿಯ ಸಮ್ಯಜ್ಞಾನ
ಜಪತಪೋಪದೇಶದಲ್ಲಿ ಪರಮಾನಂದಭರಿತರು,
ಚಿದ್ಬೆಳಗಿನ ಚಿದ್ಬ್ರಹ್ಮದ ಬೆಳಗಿನಲ್ಲಿ ಘನಮನವೇದ್ಯರು.
ವಾಣಿನಾಲ್ಕರಡಿಮುಟ್ಟಿನಿಂದ ನಿರ್ವಾಣಪದಪ್ರದಾಯಕರು.
ನಿಜಮುಕ್ತಿಸ್ವರೂಪ ನಿರವಯ ಸಮಾಧ್ಯಸ್ತರುವಪ್ಪ
ಶಿವವಂಶೋದ್ಧಾರಕ ಸದ್ಭಕ್ತಗಣಂಗಳಿಗೆ
ಪೂರ್ವಜಾತವ ಕಲ್ಪಿಸಿ ಅವರ ಗೃಹಂಗಳ ವಿಡಂಬಿಸಿ,
ಭೌತಿಕಜಡಾನ್ನ ನೀರಿನ ಶೀಲವ ಹಿಡಿದು,
ಪರದೈವದ ಪೂಜೆ, ಪರಸ್ತ್ರೀಯರ ಗಮನ, ಪರದ್ರವ್ಯಾಪಹಾರ,
ನಿಂದೆ ವಂದನೆ ಪರಜೀವಹಿಂಸೆಯನೆಸಗಿ,
ಗುರುಲಿಂಗಜಂಗಮದ ದೀಕ್ಷೋಪದೇಶವನರಿಯದ
ಸತ್ಕ್ರಿಯಾಜ್ಞಾನ ಬಾಹ್ಯರಾಗಿ,

ವಿಷಯಾತುರದಿಂದ ವರ್ತಿಸುವಂಥ ಭವಭಾರಿಗಳ
ಪಿತ–ಮಾತೆ ಗುರು–ಹಿರಿಯರು ಸತಿ–ಸುತರು
ಬಂಧು–ಬಳಗ ಹೆಣ್ಣು–ಗಂಡಿನ ನೆಂಟರೆಂದು ಒಡಗೂಡಿ
ಶಿವಾಚಾರಸಂಪನ್ನರೆಂದು ನುಡಿಗಡಣದಿಂದ
ಕುಲಜಾತಿ ಆಶ್ರಮಕ್ಕೆ ಚಲಗತರಾಗಿರ್ಪುದೆ ದ್ವಿತೀಯ ಸೂತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೫೩ ||

೫೪

ಕರ್ಮಜಡಜೀವ ಭವಿಶೈವ ಪಾಷಂಡಿಗಳು ವರ್ತಿಸುವಂಥ
ರಜಸೂತಕನಿರಸನದ ವಚನಸೂತ್ರವೆಂತೆಂದೊಡೆ :
ಶಿವಾಚಾರಸಂಪನ್ನರಲ್ಲಿ ಜನಿತರಾಗಿ,
ಕ್ರಿಯಾಶಕ್ತಿಯರೆನಿಸಿ, ಪೂರ್ವಜಾತವ ಕಳೆದುಳಿದು,
ಶ್ರೀಗುರುವಿನ ಕಾರುಣ್ಯದಿಂದ ಕರಸ್ಥಲಕ್ಕೆ ಮನಸ್ಥಲಕ್ಕೆ ಭಾವಸ್ಥಲಕ್ಕೆ
ಪ್ರಸನ್ನೋಪದೇಶದಿಂದ ಪ್ರತ್ಯಕ್ಷವಾಗಿ,
ನಿಜೇಷ್ಟಪ್ರಾಣಭಾವಲಿಂಗವ ಬಿಜಯಂಗೈಸಿ,
ಸರ್ವಾಂಗವೆಲ್ಲವನು ಚಿದ್ಘನಲಿಂಗಸ್ಪರಿಶನದಿಂದಾಯತ
ಸ್ವಾಯತ ಸನ್ನಿಹಿತ ಮಾಡಿ
ಲಿಂಗಶರೀರರೆನಿಸಿದ ಬಳಿಕ ಕ್ರಿಯಾಲಿಂಗಾಂಗನೆಯರು
ಕ್ಷೀರದ ಭಾಂಡವು ಅಗ್ನಿಜ್ವಾಲೆಯಿಂದ ಹೊರಸೂಸಿದೋಪಾದಿಯಲ್ಲಿ
ರಜಸ್ವಾದರೆ ಸಂಕಲ್ಪಕರ್ಮಕ್ರಿಯೆಗಳಿಂದ
ಅಮಲಲಿಂಗಸಂಗಸಂಯೋಗದಿಂದ ನಿರ್ಮಲಕಾಯರಾಗಿ,
ಭವಘೋರಸಂಸಾರಕ್ಕೆ ವಿದೂರರಾದ
ಪರಮಪ್ರಸಾದಪ್ರಸನ್ನಕಾಯರಾದೆವೆಂದು,
ನಿಜವೀರಶೈವ ಸದ್ಗುರುಪಾದೋದಕದಿಂದ ಪವಿತ್ರಮಾರ್ಗವನರಿಯದೆ
ಅಪವಿತ್ರ ಅನಾಚಾರಿಗಳ ಸಂಗದಿಂದ ಭಂಗರಾಗಿ,
ತಾ ಬಂದ ಬಟ್ಟೆ, ತಾನಿರುವ ಮುಕ್ತಿಮಂದಿರ,
ತಾ ಬಯಲಾದ ನಿಜನಿವಾಸಸ್ಥಾನವೆ ಲಿಂಗಸಂಗಸಮರಸವೆಂದರಿಯದೆ
ಬರುಕಾಯರಾಗಿ, ಹೊಲೆಗಂಡಿಹೆನೆಂದು
ನಿಜನಿವಾಸ ಕ್ರಿಯೆಯ ಬಿಟ್ಟು, ತೊಲಗಲಾಗದು.
ಹೊಲತಿಯಾದರೆ ಲಿಂಗಜಂಗಮಾರಾಧನೆಯ ಮಾಡಲಾಗದು.
ಆ ಲಿಂಗಜಂಗಮವು ಆ ಹೊಲೆಪೂಜೋಪಚಾರ
ಕ್ರಿಯಾರ್ಪಣಗಳ ಕೊಳ್ಳಲಾಗದು.
ಅದೆಂತೆಂದೊಡೆ :
ಪಾರ್ವತಿಗೆ ಬೋಧಿಸಿದ ಹರವಾಕ್ಯವು ಸಾಕ್ಷಿ :
"ಲಿಂಗಾರ್ಚನರತಾ ನಾರೀ ಸೂತಕಾ ಚ ರಜಸ್ವಲಾ |

ರವಿರಗ್ನಿರ್ಯಥಾ ವಾಯುಸ್ತಥಾ ಕೋಟಿಗುಣಃ ಶುಚಿಃ ॥
ಪೂಜಾಲೋಪೋ ನ ಕರ್ತವ್ಯಃ ಸೂತಕೇ ಮೃತಕೇಽಪಿ ವಾ ।
ಜಲಬುದ್ಬುಧವದ್ದೇಹಂ ತಸ್ಮಾತ್ ಲಿಂಗಂ ಸದಾರ್ಚಯೇತ್ ॥''
ಎಂದುದಾಗಿ,
ಇದು ಕಾರಣ ಶ್ರೀ ಗುರುಕೃಪೆಯಿಂದ ತೆರಹುಗುಡದೆ
ದಿವರಾತ್ರಿಗಳೆನ್ನದೆ ನಿಮಿಷಾರ್ಧವಗಲದೆ,
ಸರ್ವಾಂಗವೆಲ್ಲ ಪ್ರಸನ್ನತೆ ಪ್ರಸಾದ
ನಿಜೇಷ್ಟಲಿಂಗಸಂಬಂಧದಾಚರಣೆಯಿಂದ
ಕೂಟಸ್ಥವಾದ ಕ್ರಿಯಾಂಗನೆಯರು,
ರಜಸ್ಸ್ವಾದಾಕ್ಷಣವೆ, ಉಕ್ಕೇರಿದ ಭಾಂಡವ ಹೆಗಲತೊಳದೋಪಾದಿಯಲ್ಲಿ
ದೀಕ್ಷಾಪಾದೋದಕದಿಂದ ಸ್ನಾನಂಗೈದು, ಲಿಂಗಸಂಗಸುಖಿಗಳಾಗಿ,
ಶ್ರೀಗುರುಕಾರುಣ್ಯದಿಂದ ಲಿಂಗಾಂಗಸಂಗವುಳ್ಳ ಸಂಬಂಧ
ಪರದರುಶನ ಸ್ಪರಿಶನ ಸಂಭಾಷಣೆಗಳಿಂದ
ಸತ್ಯಶುದ್ಧ ನಡೆ ನುಡಿಯುಳ್ಳವರಾಗಿರ್ಪುದೆ ಪ್ರಮಥಗಣಮಾರ್ಗವು.
ಇಂತು, ಹರಗಣ ಸಮಾವಳಿಯನಳಿದುಳಿದ ಜಪಶೈವಾಯತ ವಾದಿಗಳಂತೆ
ಗುರುವಿತ್ತ ಲಿಂಗವರಿಯದೆ, ಲಿಂಗಾಚಾರ ನಡೆನುಡಿಗಳನರಿಯದೆ,
ಗುರುಹಿರಿಯರ ಮಾನಮನ್ನಣೆಯಿಲ್ಲದೆ,
ಊರ ಮಾರಿಯಂತೆ ಮನಬಂದಲ್ಲಿ ಚರಿಸಿ,
ಸೂತಕ–ಪಾತಕಗಳಿಂದ ಹೊಲೆಕರ್ಮವ ಬಳಸುವ
ದಿಂಡೆ ರಂಡೆಯರ ಸತಿ–ಸುತ–ಮಾತೆಯೊಡಹುಟ್ಟಿದವಳೆಂದು
ಒಡಗೂಡಿ ಸಮರತಿಕ್ರಿಯೆಗಳ ಬಳಸಿ,
ನಾಚಿಕೆಯಿಲ್ಲದೆ ವೀರಶೈವಾಚಾರ ಭಕ್ತಮಹೇಶ್ವರರೆಂದು ನಡೆಗೆಟ್ಟು,
ಷಟುಸ್ಥಲಾನುಭಾವವ ಬಳಸಿ, ಕುಂದುನುಡಿಯ ನುಡಿವುದೇ
ತೃತೀಯ ಸೂತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೫೪ ॥

೫೫

ಕರ್ಮಕಾಂಡಿಲಿಂಗಬಾಹ್ಯರು ವರ್ತಿಸುವಂಥ
ಎಂಜಲಸೂತಕನಿರಸನದ ವಚನವದೆಂತೆಂದೊಡೆ :
ಶ್ರೀಗುರುವಿನ ಕರುಣಕಟಾಕ್ಷಕೃಪಾನಂದದಿಂದ
ತನುಮನ ಶುದ್ಧ ಸಿದ್ಧವಿಲ್ಲದ,
ಬಾಹ್ಯಾಂತರಂಗಳಲ್ಲಿ ಮಾಯೋಚ್ಛಿಷ್ಟವಾದ
ಅನಾರ್ಪಿತ ಭುಂಜಕರಿಗೆ ಎಂಜಲುಂಟಲ್ಲದೆ,
ಪರಮಾರಾಧ್ಯ ನಿಜವೀರಶೈವೋದ್ಧಾರಕ ಶ್ರೀಗುರುವಿನ

ಕರುಣಕಟಾಕ್ಷೆಯಿಂದ
ನಿಜೇಷ್ಟಲಿಂಗಸಂಬಂಧದಿಂದ ತನುಮನಶುದ್ಧವಾದ
ಲಿಂಗಜಂಗಮಪ್ರಸಾದಭೋಗೋಪಭೋಗಿಗಳಿಗೆ
ಎಂಜಲಸೂತಕವೆಲ್ಲಿಹದೋ ?
ಲಿಂಗಾಂಗಸಂಬಂಧಿಗಳಿಗೆ ಎಂಜಲಕಾಯವೆಂದು
ನುಡಿವ ನುಡಿಯೇ ಎಂಜಲವಲ್ಲದೆ,
ಚಿದಂಗ ಚಿದ್ಘನಲಿಂಗಸಂಗಸಮರಸೈಕ್ಯರಿಗೆ,
ಐಕ್ಯಸೂತ್ರರಿಗೆ ಎಂಜಲಸೂತಕ ನಾಸ್ತಿ
ಈ ನುಡಿಗೆ ಶ್ರೀ ಸಾಂಭವೀಶಕ್ತಿಯರು ಬೆಸಗೊಂಡ ಹರನಿರೂಪಣಮುಂಟು
ಇದ ತಿಳಿದು ಹರಗಣಂಶೋದ್ಧಾರಕ ಶಿವಪ್ರಸಾದಿಗಳು ಆಚರಿಸುವುದು.
ಸಾಕ್ಷಿ :
''ಭಾಂಡಸ್ಯ ಭಾಜನಂ ಚೈವ ಭೋಜನೇಽಪಿ ನಿರಂತರಂ ।
ಪ್ರಸಾದೋಽಯಂ ಅತಸ್ಸೂತ ಮಿಥ್ಯಸ್ಯ ಮಹಿಮಾ ಖಲು ॥
ನೇವೇದ್ಯಂ ಪುರತೋ ನ್ಯಸ್ತಂ ಪರಾನ್ನಾದೀಕೃತಂ ಮಯಾ ।
ವಸನ್ ಭಕ್ತಸ್ಯ ಜಿಹ್ವಾಗ್ರೇ ಸುರುಚಿಃ ವಸಾಮಿ ಕಮಲೋದ್ಭವ ॥
ಭಕ್ತಜಿಹ್ವಾಗ್ರತೋ ಲಿಂಗಂ ಲಿಂಗಜಿಹ್ವಾಗ್ರತೋ ರುಚಿಃ ।
ರುಚಿ ಜಿಹ್ವಾ ಪ್ರಸಾದಂ ಚ ಪ್ರಸಾದಂ ಪರಮಂ ಪದಂ ॥
ಪ್ರಸಾದಂ ಚ ಪರಂ ಬ್ರಹ್ಮ ಬ್ರಹ್ಮ ಪ್ರಸಾದಮೇವ ಚ ।
ಕೇವಲಂ ಶಿವಮಯಂ ಚ ಮನಶ್ಚ ಶಿವಲಿಂಗಕಂ ॥
ಪ್ರಸಾದಂ ಗಿರಿಜಾದೇವಿ ಸಿದ್ಧಿದಂ ನರಗುಹ್ಯಕಂ ।
ವಿಷ್ಣು ಪ್ರಮುಖದೇವಾನಾಮಗ್ರಗಣ್ಯಮಗೋಚರಂ ॥''
ಎಂದುದಾಗಿ,
ಶ್ರೀಗುರುಕರುಣದಿಂದ ಚಿದಂಗಲಿಂಗಸಂಗಸಂಬಂಧಿಯಾದ
ಸದ್ಧರ್ಮ ಸದ್ಭಕ್ತಮಹೇಶ್ವರರ ಕಾಯವೆ
ಪರಂಜ್ಯೋತಿರ್ಮಯ ಪರಶಿವಂಗೆ ದೇವಂಗೆ ರೂಪಾದ ಶುದ್ಧಪ್ರಸಾದ,
ಮನವೆ ರುಚಿಯಾದ ಸಿದ್ಧಪ್ರಸಾದ, ಪ್ರಾಣವೆ ಪ್ರಸಿದ್ಧಪ್ರಸಾದ.
ಸತಿಸುತರ ಬಾಹ್ಯಾಂತರಂಗವೆ ಲಿಂಗಜಂಗಮದಾಪ್ಯಾಯನಪ್ರಸಾದ.
ಸಂಬಂಧದಾಚರಣೆಯ ಪರಶಿವಗಣಂಗಳ
ನಿಜೋಪದೇಶವಿದ್ದುದರಿಂದ ಅಂತಪ್ಪ ಮಹಿಮರಿಗೆ
ಒಬ್ಬರು ಪೂಜಿಸಿದ ಎಂಜಲದ್ರವ್ಯವ ಪೂಜಿಸಿ.
ಅಂಧಕರಂಧಕರು ಕೂಡಿದಂತೆ
ನಿಜಸಂಗಮನಾಥನರುಹಿನ ಅರ್ಪಿತ ಮುಖವನರಿಯದೆ
ಪರಮಾಮೃತಶೇಷಾನ್ನವ ಹಾದಿ ಬೀದಿ ಕಲ್ಲು ಮಣ್ಣು ಕಾಷ್ಠಗಳಿಗೆ ಅರ್ಪಿಸಿ.
ಇತ್ತಲಾಗಿ ಶ್ರೀಗುರುವಿತ್ತಲಿಂಗಕ ತೋರಿ ತೋರಿ ಭುಂಜಿಸಿ.

ನಾಚಿಕಿಲ್ಲದೆ ಶಿವಲಿಂಗಸಂಗಿಗಳೆಂದು ಬೊಗಳುವವರ ಕೈಬಾಯಂಜಲು.
ಭಕ್ತಗಣಸಾಕ್ಷಿಯಿಂದ, ಕಂಭ ಕುಂಭಮಧ್ಯದೊಳ್ ಕಂಕಣವ ಕಟ್ಟಿದ
ತನ್ನ ಸ್ತ್ರೀಯಲ್ಲದೆ, ಒಬ್ಬರು ಭೋಗಿಸಿದ ಉಚ್ಚಿಷ್ಟದ ಪರಸ್ತ್ರೀಯಳ
ಅಯೋಗ್ಯಭವಿಜನಾತ್ಮರು ಭೋಗಿಸಿದಂತೆ,
ಆ ಸ್ತ್ರೀಯಳ ಉಡಿಕೆ ಪಟ್ಟಿ ಸೂಸಿ ವೇಸಿ ದಾಸಿ
ಮೊದಲಾದ ಮೆಚ್ಚಿನ ರಾಣಿಯರೆಂದು
ಲಜ್ಜೆಗೆಟ್ಟು, ಬಾಳುವೆಯಿಂದ ಮುಕ್ತಿಯೆಂಬ
ಮುತ್ತೈದೆತನಕ್ಕೆ ಸಲ್ಲದ, ಬಾಲರಂಡೆ ಬಳಸಿದರಂಡೆ ಮುಂಡೆರಾಣಿ
ಹೆಣ್ಣಿನ ಸಂಗವ ಮಾಡುವನ ಸರ್ವಾಂಗಬಾಹ್ಯಾಂತರವೆಲ್ಲವು
ಉಚ್ಚಿಷ್ಟವೆಂದುದು ಗುರುವಚನ.
ಈ ವರ್ಮವ ಕಂಡರಿದು, ಹೊಲಬುದಪ್ಪಿ,
ಪರರ ಹೆಣ್ಣು ಹೊನ್ನು ಮಣ್ಣು ಹಣಗಳ ಅಪಹಾರನಾಗಿ,
ಪ್ರಸಾದ ಪಾದೋದಕ ಸೇವ್ಯರೆಂದು
ಭಕ್ತ ಮಹೇಶ ಪ್ರಸಾದಸ್ಥವ ನುಡಿದುಕೊಂಡು,
ಅಸಗ ನೀರಮಿಂದು ತನುಮನ ಮಡಿಯಾಗದ
ಊರರುವ ಊರ ಸೀರೆಯನುಟ್ಟು,
ಅಂದಚೆಂದಗಳಿಂದ ಮಡಿವಾಳರೆಂದಂತೆ,
ನಾಮಧಾರಕ ಗುರು ನಾಮಧಾರಕ ಶಿಷ್ಯಸಂಬಂಧದಾಚರಣೆಯ
ಬೊಗಳುವಂಥದೆ ಚತುರ್ಥಸೂತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೫೫ ||

**೫೬**

ಶಿವಲಿಂಗಸಂಗವಾಗಿ, ಆ ಲಿಂಗದ ಕೂಟವನರಿಯದೆ,
ಹಾದರಕೆ ಹುಟ್ಟಿದ ಹೊಲಿಕರ್ಮಿ ಹಟಜೀವಿ
ಶೈವಪಾಶಂಡಿ ಷಣ್ಮತದವರಂತೆ ವರ್ತಿಸುವರ
ಮರಣಸೂತಕನಿರಸನದ ವಚನಸೂತ್ರವದೆಂತೆಂದೊಡೆ :
ಶ್ರೀಗುರುವಿನ ಹೃತ್ಕಮಲದಲ್ಲಿ ಉದಯವಾಗಿ ಚಿತ್ಪಿಂಡವ ಧರಿಸಿ,
ಜಂಗಮಲಿಂಗ ಲಿಂಗಜಂಗಮಮೂರ್ತಿಯಾದ
ಶಿವಶರಣರಸಂಗದಲ್ಲಿ ಬೆಳೆದು,
ನಿಜೇಷ್ಟಲಿಂಗದಲ್ಲಿ ಲೀಯವಾದ ಗುರುಚರಭಕ್ತಾಂಗನೆಯರು
ತಾವು ಸಾಕಾರಸೃಷ್ಟಿಗೆ ಬರುವಾಗ,
ನಿಃಕಲಪರಶಿವಕೃಪಾನಂದ ಸಾಕಲ್ಯಸಾವಯುನಿರವಯವೆಂಬ
ತ್ರಿವಿಧಕೃತಿ ಷಟ್ಕೃತಿಯಾಗಿ, ನಿಜಾನಂದವಿಡಿದು,
ಶ್ರುತಿಗುರುಸ್ವಾನುಭಾವ ವೇಧಾ ಮಂತ್ರ
ಕ್ರಿಯಾಚರಣೆಸಂಬಂಧನಿಲುಕಡೆಗಳೆಂಬ

ಷಟ್ಸ್ಥಲಸಂಪದದ ಸ್ವಾನುಭಾವಸೂತ್ರವಿಡಿದು,
ಘನಗುರು ನಿರೂಪಣದಿಂದ ಸತ್ಯಶುದ್ಧ ನಡೆನುಡಿಸಂಪನ್ನ ಸದ್ಧರ್ಮ
ಸ್ಥೂಲಸೂಕ್ಷ್ಮಗಳಡಿಮೆಟ್ಟಿ ನಿಂದ ಕಾರಣಿಕರೆಂದು ಶೈವದಿಂದ ಹೊಗಳಿಸಿ,
ಸಕಲಶಾಸ್ತ್ರಾಗಮ ಪುರಾಣ ಸಾಕ್ಷಿಗಳಾಗಿ,
ಇಹ–ಪರ, ಪುಣ್ಯ–ಪಾಪ, ಸುಖ–ದುಃಖ, ಸ್ತುತಿ–ನಿಂದ,
ಧರ್ಮ–ಕರ್ಮ, ವೀರಶೈವ–ಶೈವ, ಭವಿ–ಭಕ್ತ ಆಚಾರ–ಅನಾಚಾರ,
ಹೆಣ್ಣು–ಗಂಡು, ಸಿರಿ–ದರಿದ್ರ, ಸ್ಥೂಲ–ಸೂಕ್ಷ್ಮಕ್ಕೆ
ಕಾರಣವತಾರ್ಯ ಸಾಕ್ಷಿಕರಾಗಿ,
ಬದ್ಧಮೋಕ್ಷಂಗಳಿಗೆ ಹೊದ್ದಿಯೂ ಹೊದ್ದದೆ,
ಪೂಜಾಪೂಜಕತ್ವವೆಂಬ ಸಂದುಸಂಶಯದಾಲಯವ ಸ್ಥಿರಗೊಳಿಸದೆ
ತಮ್ಮ ತಾವರಿದು ಜನ್ಮ ಜರೆ ಮರಣದ ಕಾಲಕಾವರಡೆಯಾಟವ ಮರೆದು,
ನಿತ್ಯಮುಕ್ತಾಂಗನಾಭರಣರಾಗಿ,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅವಿರಳಪರಂಜ್ಯೋತಿಸ್ವರೂಪವೆಂಬ
ಸಲ್ಲಕ್ಷಣದೊಡನೆ ನಿರವಯ ಅನಾದಿಶರಣ ಚಿದ್ಘನನಿರೂಪಣವಿಡಿದು
ಬಂದ ಮಣಿಹವ ಮತ್ತಾ ಚಿದ್ಘನಗುರುವಿಗೊಪ್ಪಿಸಿ,
ಸಂತೃಪ್ತಿಯಿಂದ ಮತ್ತೆಂದಿನಂತೆ ನಿರವಯ ಲೀಲೆಯ ಧರಿಸುವಾಗ,
ಸಾಕಾರವಾದ ಪಾದೋದಕ ಪ್ರಸಾದ ಮಂತ್ರವೆಂಬ ಅಂಗ,
ನಿರಾಕಾರವಾದ ಪಾದೋದಕ ಪ್ರಸಾದ ಮಂತ್ರವೆಂಬ ಲಿಂಗ,
ಯದೃಷ್ಟಂ ತನ್ನಿಷ್ಟಂ ಎಂಬ ಶ್ರುತಿ ಗುರುಪ್ರಮಾಣದಿಂದ,
ಎಲ್ಲಿ ಹುಟ್ಟಿದಂಥದ್ದೆಲ್ಲ ಅಲ್ಲಿ ಲಯವೆಂಬ ನೀತಿಯೊಳ್
ಸದ್ರೂಪವಾದ ಸಮಾಧಿ, ಚಿದ್ರೂಪವಾದ ನಿರಂಜನಮಂತ್ರದಲ್ಲಿ
ಬಯಲಾದ ಘನಲಿಂಗೈಕ್ಯರ
ಮತ್ತುಳಿದ ಘನಲಿಂಗಸಂಗಿಗಳು ತಮ್ಮಂಗ ಮನ ಪ್ರಾಣವೆಂಬ
ತ್ರಿವಿಧಸ್ಥಾನದಲ್ಲಿ ಸ್ವಾನುಭಾವಜ್ಞಾನಾನಂದದರಿವಿನೊಳು
ಸಗುಣನಿರ್ಗುಣ ಕ್ರಿಯಾಚಾರ ಜ್ಞಾನಾಚಾರ
ಭಾವಾಚಾರವೆಂಬ ಸಾವಧಾನದಿಂದ
ರೂಪಾದ ಕಾಯಸಂಬಂಧ ದ್ರವ್ಯವ ಕ್ರಿಯಾರ್ಪಣವಮಾಡಿ,
ರುಚಿಯಾದ ಕರಣಸಂಬಂಧದ್ರವ್ಯವ ಜ್ಞಾನಾರ್ಪಣವಮಾಡಿ,
ತೃಪ್ತಿಯಾದ ಭಾವಸಂಬಂಧದ ದ್ರವ್ಯವ ಮಹಾಜ್ಞಾನಾರ್ಪಣವಮಾಡಿ,
ಪರಿಪೂರ್ಣಜ್ಯೋತಿರ್ಮಯ ಪರಮಾಣುಲಿಂಗದಲ್ಲಿ
ಸಂದುಸಂಶಯ ಹಿಂದು ಮುಂದಣ ಆಸೆ ಆಮಿಷವನಳಿದುಳಿದು
ಪರಿಪೂರ್ಣಾಂಗ ಲಿಂಗಾಚಾರ ಸಂಧಾನ
ಪರಿಪೂರ್ಣ ಶಕ್ತಿ ಭಕ್ತಿ ಶುಚಿ ರುಚಿ
ಪರಿಪೂರ್ಣ ಸುಹಸ್ತ–ಮುಖ, ನಡೆ–ನುಡಿ

ಪರಿಪೂರ್ಣ ಪದಾರ್ಥ– ಪ್ರಸಾದ
ಪಾದೋದಕ ಪ್ರಸಾದ ಮಂತ್ರಾನಂದದ ಬೆಳಗಿನಲ್ಲಿ
ನಿತ್ಯ ತೃಪ್ತಿ ಭವಭೂಜಕುಠಾರರಾಗಿರ್ಪುದ
ಪ್ರಮಥಗಣಂಗಳ ಸದ್ಧರ್ಮಮಾರ್ಗದ ಸತ್ಯಶುದ್ಧ ನಡಾವಳಿಗಳು.
ಇಂತೆಸೆವ ಘನಮಾರ್ಗವನುಳಿದು, ಲೋಕದ ಕರ್ಮಿಗಳಂತೆ
ನಮ್ಮ ಗುರುವು–ಜಂಗಮವು, ತಂದೆ–ತಾಯಿ
ಸತಿ–ಸುತ–ಒಡಹುಟ್ಟಿದರು ಸತ್ತರು
ನಮಗೆ ಗತಿಯಾವುದೆಂದು, ಲಿಂಗಜಂಗಮದಾರ್ಚನಾರ್ಪಣಗಳನುಳಿದು,
ಶೋಕಾಗ್ನಿಯ ಜ್ವಾಲೆಯನಬ್ಬಿಸಿ ಮಹಾದುಃಖಾಬ್ಧಿಯಲ್ಲಿ ಮುಳುಗಾಡುತ್ತ
ಅಂದಮಾಡಿ, ಗುಂಟಿಕೆಯನಿಕ್ಕಿ, ಗೂಟವ ಬಡಿದು,
ಶಿವಾನಂದಲೋಲುಪ್ತಿಯೆಂಬ ಸ್ತೋತ್ರಧ್ಯಾನ ಮಂಗಳಾರತಿ ಪುಷ್ಪಪತ್ರಿಯ
ಘನಸನ್ಮಾನ ನಿಜೋತ್ಸಾಹದ ಕೈವಲ್ಯ ಶುಭಸಂತೋಷವನರಿಯದೆ
ಅಯ್ಯಯ್ಯೊ ಅಪ್ಪಪ್ಪ ಅವ್ವವ್ವ ಅಣ್ಣಣ್ಣ ಅಕ್ಕಕ್ಕ
ಮಗಳೆ ಮಗಳೆ ಮಗನೆ ಮಗನೆ ಗುರುವೆ ಗುರುವೆ ಸ್ವಾಮಿ ಸ್ವಾಮಿ
ಹೇಂಗ ನಿಮ್ಮ ಕಳಕೊಂಡು ಹೇಂಗ ಜೀವಿಸಲೆಂದು
ಲಿಂಗಸಾವಧಾನವನುಳಿದು, ಬೊಬ್ಬೆಯ ಹೊಡೆಹೊಡೆದು,
ಎದೆ ಎದೆಯ ಬಡಿಬಡಿದು, ಕಿರಾತರಂತೆ ಮಣ್ಣಿನೊಳು ಮುಚ್ಚಿ
ಗುಟ್ಟಿಯ ಮಾಡಿ, ಪ್ರತುಮೆಗಳನಿಟ್ಟು, ಪೂಜಿಸಿ,
ತಾನನಾದಿಲಿಂಗಮಂತ್ರಭೋಗೋಪಭೋಗದೊಡನೆ ಸಲಿಸುವ
ತೀರ್ಥಪ್ರಸಾದವ ತೋರಿ, ವಸ್ತ್ರಾಭರಣಗಳನಿಟ್ಟು,
ಕುಂಡಗೋಳಕರಂತೆ ನಿಜಸಂಗನ ನಿಲವನರಿಯದೆ
ಸತ್ತದಿನ ಮೂರು ಐದು ಒಂಬತ್ತು ತಿಂಗಳು
ವರುಷ ಹನ್ನೆರಡುವರುಷ ಪರಿಯಲ್ಲಿವಿಡಿದು
ಲಿಂಗಬಾಹ್ಯರಂತೆ ಎಡೆ ಹುಡಿಯನುಟ್ಟು, ಪರಮಾನ್ನ ಪಾಯಸಗಳ ಮಾಡಿ,
ಕೊಡಗಳನಿಟ್ಟು, ಪೂಜಿಸಿ, ಘನಗುರುಲಿಂಗಜಂಗಮದ ತೀರ್ಥವ ತೋರಿ,
ಸುಳಿಬಾಳ ಎಲಿಯ ಹಾಸಿ, ದೇವಾದಿದೇವರದೇವಜಂಗಮಕ್ಕೆ
ಅಲ್ಪಸ್ವಲ್ಪ ನೀಡಿ,
ಆ ಸುಳಿಬಾಳೆ ಎಲಿಯೊಳಗೆ ಮಿತಿತಪ್ಪಿ,
ಪಶುವಿನ ಮುಂದೆ ಇಟ್ಟಹಂಗೆ ಮಡುಗಿ,
ತಮ್ಮ ಹೆತ್ತವರ ಸತ್ತವರ ಹೆಸರುಗೊಂಡು
ಗಂಡ ಗುರುಲಿಂಗಜಂಗಮಪ್ರಸಾದಿಯಾಗಿ,
ಹೆಂಡತಿ ಮಕ್ಕಳೊಡಹುಟ್ಟಿದರೆಲ್ಲ
ಶ್ರೀಗುರುವಿತ್ತ ಲಿಂಗವಿಲ್ಲದವರು ಕೆಲರು,
ಲಿಂಗವ ಕಟ್ಟಿಕೊಂಡವರು ಕೆಲರು,

ಆ ಸತ್ತವರ ನೆನಹಿನಿಂದ ಸಮಸ್ತ ಉಪಚಾರವ ಮಾಡಿ,
ಆ ನೆನಹಿಂದುಳುಮೆಯಾದ ಮನದುಷ್ಟವ
ಒಂದೊತ್ತು ಉಪವಾಸವ ಮಾಡಿ
ಮನವೆಲ್ಲ ಸತ್ತವರೊಡಗೂಡಿ,
ಲಿಂಗನೈವೇದ್ಯವ ಮಾಡಿದೆವೆಂಬುದೆ ಶುದ್ಧ ಅನಾಚಾರಕ್ರಿಯಯು.
ಉಳಿದ ಪಿತ ಮಾತ ನೆಂಟತನದ ಗುರುಹಿರಿಯರೆಂದು
ಒಡಲುಪಾಧಿವಿಡಿದು, ಉದರಪೋಷಣಕ್ಕೆ ಹೋಗಿ,
ಆ ಸತ್ತ ಹೊಲೆಕರ್ಮದ ಅನಾಚಾರವ ನೋಡಿ, ಅನುಸರಿಸಿ,
ತನ್ನ ಚಿತ್ಪ್ರಭಾಪುಂಜರಂಜಿತ ಪ್ರಸನ್ನತ ಪ್ರಸಾದೋದಕವ ಕೊಟ್ಟು,
ಏಕಸಮರಸವ ಮಾಡಿ
ಸತ್ಯಶುದ್ಧ ನಡೆನುಡಿಯುಳ್ಳ ಭಕ್ತಗಣಂಗಳಿಗೆ
ಭಿನ್ನ ಬಿಡುಗಡೆಯಿಂದ ಕರೆದೊಯ್ದು,
ಭಾಜನಂಗಳೊಂದೊಂದ ಕಂಚಿನ ಓತ್ತಾಳಿಗಳಲ್ಲಿ ಮಾಡಿ,
ಆಚಾರಸಂಪನ್ನರಿಗೆ ತಟ್ಟು, ಮುಟ್ಟು, ಸೋಂಕುಗಳ ಕಲ್ಪಿಸಿ,
ಅನಾಚಾರಿಗಳ ಭಿನ್ನವಿಲ್ಲದೊಡಗೂಡಿರ್ಪುದ
ಭವಕರ್ಮಿಗಳ ನಡಾವಳಿಯು.
ಇವರಿಗೆ ಉಪದೇಶವ ಮಾಡಿ ಲಿಂಗವಕೊಟ್ಟು,
ಭಕ್ತ ಮಹೇಶ ಪ್ರಸಾದಿಗಳೆಂದು ಬೊಗಳುವವರಿಗೆ
ಶ್ರೀ ಮಹಾಘನ ಜ್ಯೋತಿರ್ಮಯ ಗುರುವಿಲ್ಲ,ಲಿಂಗವಿಲ್ಲ, ಜಂಗಮವಿಲ್ಲ,
ಪಾದೋದಕಪ್ರಸಾದ ಮುಕ್ತಿಯೆಂಬುವುದೆಂದಿಗೂ ಇಲ್ಲ,
ನರಕಜೀವಜನ್ಮವೆ ಪ್ರಾಪ್ತಿಯಾಗಿ
ಕಾಲ ಕಾಮ ಮಾಯೋಚ್ಛಿಷ್ಟ ಪ್ರಾಣಿಗಳಾಗಿ,
ದುಃಖಾಬ್ಧಿಯಲ್ಲಿ ವಾಸವಾಗಿರ್ಪುದೆಂದಿಗೂ ಬಿಡದು ಕಂಡ್ಯಾ.
ಶಾಂಭವಿಗೆ ಬೋಧಿಸಿದ ಹರನಿರೂಪಣ ಸಾಕ್ಷಿ :
"ಯೋ ಗುರುಃ ಮೃತಭಾವೇನ ಯದಾ ಶೋಚ್ಯತಿ ತದ್ದಿನಂ ।
ಗುರುಲಿಂಗಪ್ರಸಾದಂ ಚ ನಾಸ್ತಿ ಯಸ್ಯ ವರಾನನೇ ॥
ತದ್ದಿನಂ ದೂಷಿತಂ ತೇಷಾಂ ಶೋಣಿತಂ ಸುರಾಮಾಂಸಯೋಃ ।
ಏಕಭುಕ್ತ್ಯುಪವಾಸೇನ ನರಕೇ ಕಾಲಮಕ್ಷಯಂ ॥
ಯದ್ಗೃಹೇ ಅನ್ಯದೇವೋಽಸ್ತಿ ತದ್ಗೃಹಾಣಿ ಪರಿತ್ಯಜೇತ್ ।
ಯದ್ಗೃಹೇಷು ಭವಿಪ್ರಾಪ್ತೇ ಸದ್ಗೃಹಾಣಿ ಪರಿತ್ಯಜೇತ್ ॥
ತಿಲಷೋಪಶಭಾಗೇನ ತೃಣಾಗ್ರಬಿಂದುರುಚ್ಯತೇ ।
ಅಣುಗಾತ್ರಪ್ರಯೋಗೇನ ರೌರವಂ ನರಕಂ ವ್ರಜೇತ್ ॥
ಅಸಂಸ್ಕಾರಿಕೃತಂ ಪಾಕಂ ಶಂಭೋರ್ನೈವೇದ್ಯಮೇವ ಚ ।
ಅನಿವೇದಿತಂತು ಭುಂಜಂತಿ ಪ್ರಸಾದಂ ನಿಷ್ಫಲಂ ಭವೇತ್ ॥

ಅನಾಚಾರಿಕೃತಂ ಪಾಕಂ ಲಿಂಗಸ್ಯೈವೇದ್ಯ ಕಿಲ್ಬಿಷಂ ।
ಲಿಂಗಾಚಾರಿಕೃತಂ ಪಾಕಂ ಲಿಂಗಸ್ಯೈವೇದ್ಯಮುತ್ತಮಂ ॥
ಭವಿಹಸ್ತಕೃತಂ ಪಾಕಂ ಲಿಂಗಸ್ಯೈವೇದ್ಯಕಿಲ್ಬಿಷಂ ।
ಭಕ್ತಹಸ್ತಕೃತಂ ಪಾಕಂ ಲಿಂಗಸ್ಯೈವೇದ್ಯಮುತ್ತಮಂ ॥''
ಇಂತೆಂದುದಾಗಿ,
ಹರಗುರುವಾಕ್ಯವ ಮೀರಿ,
ಭವಿಶೈವ ಹೊಲೆಕರ್ಮಿಗಳ ಮರಣಸೂತಕದುಃಖಾಬ್ಧಿಯಲ್ಲಿ
ಮುಳುಮುಳುಗಾಡಿ,
ಹೇಸಿಕೆಯಲ್ಲದೆ ನಾವು ಷಟ್‌ಸ್ಥಲಬ್ರಹ್ಮೋಪದೇಶಿಗಳೆಂದು
ಅನಾಚಾರವನನುಸರಿಸಿ, ಒಡಲುಪಾಧಿವಿಡಿದು,
ನಿಜವನರಿಯದೆ, ಭ್ರಾಂತುಭ್ರಮಿತರಾಗಿ,
ತನು ಮನ ಧನ ನೆನಹುಗೆಟ್ಟು, ಮತಿ ಮಸಳಿಸಿರ್ಪುದೆ
ಪಂಚಮಸೂತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೫೬ ॥

**೫೭**

ಇಪ್ಪೈದು ಬಹಿರಂಗದ ಮನೆಸಂಬಂಧವಾದ
ನರರಾಲಯಗಳಲ್ಲಿ ವರ್ತಿಸಿ
ಲಿಂಗಾಂಗಸಂಬಂಧಿಗಳಲ್ಲಿ ವಿಸರ್ಜನೆಯಾದ
ಸೂತಕಗಳ ಕಂಡಣೆಯ ಹರಗುರುವಾಕ್ಯಪ್ರಮಾಣು.
ಇನ್ನು ತನ್ನ ತಾನರಿದ ಲಿಂಗದೇಹಿಗಳು ವಿಸರ್ಜಿಸಿ ಬಿಡುವ
ನರಗುರಿಗಳಾದ ನಾಮಧಾರಕರ ಕರಣೇಂದ್ರಿಗಳಲ್ಲಿ ವರ್ತಿಸುವ
ಪಂಚಸೂತಕಂಗಳು ಅವಾವೆಂದಡೆ :
ಶ್ರೀ ಗುರುಪರಮಾರಾಧ್ಯ ದೀಕ್ಷಾಕರ್ತನ ಕರುಣಕಟಾಕ್ಷೆಯಿಂದ
ಚಿದ್ಘನಮಹಾನಿಜೇಷ್ಟಲಿಂಗಜಂಗಮ ಜಂಗಮಲಿಂಗ ಬಾಹ್ಯಾಂತರಂಗಳಲ್ಲಿ
ಮೂರ್ತಿಗೊಂಡು ಬೆಳಗುವ ಚಿಜ್ಯೋತಿಯ ಕೂಟಸ್ಥವಿಲ್ಲದ
ಸ್ತ್ರೀಯಳೆಂಬ ಜಡವನಿತೆಯ ರತಿಕ್ರೀಡಾದಿವಿಲಾಸದ
ಭವಕೂಪದಲಿ ಜಾರಿಬಿದ್ದು
ಭೌತಿಕರಸಾನ್ನ ಪಾನಗಳಿಂದ ಸೇವಿಸಿದಲ್ಲಿ
ಆದಿ ವ್ಯಾಧಿಗಳು ಬಂದು ಪೀಡಿಸುತಿರ್ಪವು.
ಆ ಆದಿ ವ್ಯಾಧಿಗಳಿಗೆ ಅಂಜಿ,
ಹರಿಯ ಮೊರೆಯೊಯಿಂದು ಗುರುಮಾರ್ಗಾಚಾರವ ಬಿಟ್ಟು,
ತನುವಿನಿಚ್ಛೆಗ ಚರಿಸಿ, ಜಡಶರೀರಿಗಳಾಗಿ,
ಸಂದೇಹದಿಂದ ಸಂಕಲ್ಪ–ವಿಕಲ್ಪ ಮುಂದುಗೊಂಡು
ನರಗುರಿಗಳಂತೆ ಕ್ರಿಯಾಚಾರ ನಡೆನುಡಿಗಳ ಸೇರಲಾರದ

ಗಾಢಾಂಧಕಾರ ಕಾವಳ ಮುಸುಕಿ ತನ್ನ ತಾನೇಳಲಾರದೆ,
ಈ ದೇಹಸಂಸಾರ ಭೋಗಾದಿ ರತಿಕೂಟಂಗಳೆಲ್ಲ
ಪರಶಿವನಪ್ಪಣೆಯಿಂದ ಬಂದ ಪರಿಣಾಮಪ್ರಸಾದವೆಂದು ನಿಜವಾಗಿ
ಹಸಿವು ತೃಷೆ ನಿದ್ರೆ ಸಿರಿ ದರಿದ್ರ ಭೋಗ ರೋಗಂಗಳು ಸಮಗಾಣಲಾರದ
ಸುಖಸ್ತುತಿ ಲಾಭಕ್ಕೆ ಹಿಗ್ಗಿ, ದುಃಖದ ನಿಂದ್ಯನಷ್ಟಕ್ಕೆ ತಗ್ಗಿ, ಕಂದಿ ಕುಂದಿ,
ಎನ್ನ ದೇಹದ ದುರ್ಗುಣಂಗಳು ಗುರುವಿನಿಂದ ಹೋಗವು,
ಲಿಂಗದಿಂದ ಹೋಗವು, ಜಂಗಮದಿಂದ ಹೋಗವುಯೆಂದು,
ಸಂದೇಹದಿಂದ ಗುರುಭಕ್ತಿಯನುಳಿದು ಲಿಂಗಪೂಜೆಯನುಳಿದು,
ಜಂಗಮದಾಸೋಹವ ಬಿಟ್ಟು,
ಶಿವಗಣಂಗಳ ಪರಮಾನುಭಾವವ ಮರೆದು,
ತನುವಿನಿಚ್ಫೆಗೆ ನಡೆದು, ತನುವಿನಿಚ್ಛೆಗ ನುಡಿದು, ತನುವಿನಿಚ್ಛೆಗೆ ಭೋಗಿಸಿ,
ದುರಾಚಾರಸಂಗಸಮರತಿಯಿಂದ ಪ್ರಮಥಗಣಂಗಳ ಲೇಸು ತೊಲಗಿ,
ಅರ್ಥಪ್ರಾಣಾಭಿಮಾನದ ಕುಂದುಕೊರತೆಗೊಳಗಾಗಿ
ಭವದತ್ತ ಮುಖವಾಗಿ, ಅಧೋಕುಂಡಲಿಸರ್ಪನಂ ತೆಗೆದು ಜೀವಿಯಾಗಿರ್ಪುದ
ಪ್ರಥಮದಲ್ಲಿ ತನ್ನ ಅಂತರಂಗದ ತನುಸೂತಕವೆಂಬೆ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೩೭ ॥

೩೮

ಕಾಯದ ಕಳವಳದ ವಿಲಾಸವಿಭ್ರಮಣೆಗೊಂಡ
ಮನಸೂತಕದಿರವದೆಂತೆಂದೊಡೆ :
ಶ್ರೀ ಗುರುಪರಮಾರಾಧ್ಯ ಶಿಕ್ಷಾಕರ್ತನ ಕರುಣಕಟಾಕ್ಷೆಯಿಂದ
ಮಾರ್ಗಸತ್ಕ್ರಿಯಾಚಾರ ಪ್ರಣಮಜಪಮಾಲೆ
ಮೀರಿದ ಸಮ್ಯಜ್ಞಾನಾಚಾರ ಪ್ರಣಮಜಪಮಾಲೆ
ಪರಿಪೂರ್ಣಾಚಾರ ಮಹಾಜ್ಞಾನ ಪ್ರಣಮಜಪಮಾಲೆ
ಸಚ್ಚಿದಾನಂದ ಸರ್ವಾಚಾರ ಪ್ರಣಮದಿರವಂ ಪಡೆದು
ನವದ್ವಾರದ ನವನಾಳ ನವಚಕ್ರ ನವಕೃತಿ ನವಸ್ಥಾನಂಗಳೊಳ್
ಚಿದ್ವಿಭೂತಿ ಚಿದ್ರುದ್ರಾಕ್ಷಿ ಚಿನ್ಮಂತ್ರಂಗಳಿಂದ
ಕಾಲಮಾರನ ಮಾಯಾಪ್ರಪಂಚಿನಟ್ಟುಳಿಯು
ಇಂದಿಂಗೆ ಹಿಂದಾಗಿ ಸರಿಬಿದ್ದಿತ್ತೆಂಬಂತೆ ನಿಜನೈಷ್ಠೆಯಿಂ ಮರೆದು
ಹುಸಿದೇಹಮಾನವರು ಕೆಟ್ಟ ಭೋಗಾಭಿರತಿಯಿಂದೆ
ಹುಸಿನಡೆಯ ನಡೆದು ಹುಸಿನುಡಿಯ ನುಡಿದು.
ಗಣಸಮ್ಮೇಳಕ್ಕೆ ದೂರಸ್ಥನಾಗಿ,
ತಾನು ಹೀನನನಿಸಿ, ಮತ್ತೊಬ್ಬರನು ಹಳಿದು.
ಬಿರುದೂಷಣೆಗೊಳಗಾಗಿ, ನಿಜಮುಕ್ತಿಮಂದಿರವೆಂಬ ಗೊತ್ತ ಸೇರದೆ,

ಮರ್ಕಟನಂತೆ ಹಲವು ದೇವತೆ, ಹಲವು ಜಪತಪಾನುಷ್ಠಾನ,
ಹಲವು ಶಾಸ್ತ್ರಾನುಭಾವ, ಹಲವರುಂಡುಟ್ಟು, ಬಿಟ್ಟ, ಧನಧಾನ್ಯ,
ಹಲವರೆಂಜಲು ಗಂಧ ರಸ ರೂಪ ಸ್ಪರಿಶನ ಶಬ್ದ ಮೊದಲಾದ
ಪಂಚವಿಷಯವೆಂಬ ಆಶಿಯಾಸೆ ಆತುರತೆಯಿಂದ ಅಭಿಮಾನಗೆಟ್ಟು,
ಮತಿ ಮಸುಳಿಸಿ ಸ್ತುತಿನಿಂದೆಗಳಿಗೊಳಗಾಗಿ,
ಗುರುಲಿಂಗಜಂಗಮ ವಿಭೂತಿ ರುದ್ರಾಕ್ಷಿ ಮಂತ್ರಂಗಳಿಂದ,
ಎನ್ನ ಮನದಭೀಷ್ಟೆ ಕೈಸಾರಲಿಲ್ಲವೆಂದು
ಸತ್ಕ್ರಿಯ ಸಮ್ಯಜ್ಞಾನ ಸದಾಚಾರ ಸದ್ವರ್ತನೆ ಷಟ್‌ಸ್ಥಲಮಾರ್ಗವ ಬಿಟ್ಟು
ಮನೋವಿಲಾಸಿಯಾಗಿ ಕಳವಳದಿಂದಿಪ್ಪುದೆ
ತನುವಿನೊಳಗಣ ಅಂತರಂಗದ ದ್ವಿತೀಯ ಮನಸೂತಕ ಕಾಣಾ,
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೫೮ ॥

೫೯

ಮನಕ್ಕೆ ಮಂಗಳವಾಗಿ ಚೇತಸಕೃತಿಯಿಂದ ವಿರಾಜಿಸುವ
ಪ್ರಾಣಸೂತಕವದೆಂತೆಂದೊಡೆ ವಿಚಾರ :
ಶ್ರೀಗುರುಘನಗಂಭೀರ ಮೋಕ್ಷಕರ್ತನ ಕರುಣಕಟಾಕ್ಷೆಯಿಂದ
ಅಣುವಿಂಗಣು ಮಹತ್ತಿಂಗೆ ಮಹತ್ತಾಗಿ ಪರಿಶೋಭಿಸುವಂತೆ
ಚಿದ್ಬ್ರಹ್ಮವ ಒಳಹೊರಗೆನ್ನದೆ
ಸಾಕಾರ ನಿರಾಕಾರ ಆಚರಣೆಸಂಬಂಧಗಳಿಂದ ತುಂಬಿ ತುಳುಕಾಡುತ್ತ
ಲಿಂಗನಡೆ ಲಿಂಗನುಡಿ ಲಿಂಗದೃಢ ಲಿಂಗರತಿ ಲಿಂಗಗತಿಮತಿ,
ಲಿಂಗಾಂಗಸಂಗಸಮರಸಕೂಟದಭಿಮುಖ ಲಿಂಗಾಭಿಮಾನ,
ಲಿಂಗಭೋಗೋಪಭೋಗಂಗಳೊಳ್ ತಾನೆ ತಾನಾಗಿರ್ಪ ಶಿಯೋಗೀಶ್ವರನು.
ಸ್ಥೂಲಸೂಕ್ಷ್ಮವಾದ ವಿಸರ್ಜನೆ ಬಂದೊದಗಿದ ಸಮಯದಲ್ಲಿ ವಿಸರ್ಜಿಸಿ
ಪ್ರಕ್ಷಾಲ್ಯದಿಂದ ಸುಚಿರ್ಭೂತನಾಗಿ, ಪರಿಣಾಮೋದಕವ ಶೋಧಿಸಿ,
ಪವಿತ್ರತೆಯಿಂದ ಹನ್ನೆರಡು ವೇಳೆ ಪ್ರಕ್ಷಾಲನಂಗೈದು
ದಂತಪಕ್ತಿಗಳ ತೀಡಿ, ಮುಕ್ಕುಳೋದಕದಿಂದ ಪರಿಣಾಮಿತನಾಗಿ,
ಒಂದನೇ ವಿಸರ್ಜಿಸಿದಲ್ಲಿ ಉದಕವು ಬಳಸಿ ಪರಿಣಾಮವಾಗಿ,
ಭಾಂಡವಾದರೆ ಬೆಳಗಿ, ಪಾವುಡವ ತೊಳೆದು ಒಣಹಾಕಿ,
ಹಸ್ತಪಾದವ ತೊಳೆದು, ಪವಿತ್ರೋದಕದಿಂದ
ಆರುವೇಳೆ ಗಂಡೂಷಮಂ ಮಾಡಿ
ಜಿಹ್ವೆಯ ತೊಳೆದು, ತದನಂತರದಲ್ಲಿ ಪರಗುರುಸ್ಮರಣೆಯಿಂದ
ಸುಗಂಧಯುಕ್ತವಾದ ಪತ್ರಿಪುಷ್ಪವು,
ಸುರಸಯುಕ್ತವಾದ ಹಣ್ಣು ಕಾಯಿಗಳ ಕೊಯಿದು ಕಂಟ್ರಿಸಿ,
ಭ್ರಮರಾದಿಗಳುಳಿದು ಗುರುಚರಗಣಾರಾಧ್ಯರಿಗ

ಕೆಲವು ಕೊಟ್ಟು ಶರಣೆಂದು,
ಉಳಿದಂಥವ ತಮ್ಮ ಗೃಹಕ್ಕೆ ತರುವಂಥದೇ
ಮಾರ್ಗಾಚರಣೆಯ ಕ್ರಿಯಾಚಾರದಿರವೆಂದುದು.
ಇದಲ್ಲದೆ ಸ್ಥೂಲಸೂಕ್ಷ್ಮವ ವಿಸರ್ಜಿಸಿ
ತನಗೆ ಜರೂರು ಇದ್ದರೆ ತಂಬಿಗೆ ಹಸ್ತಪಾದವ
ಮೃತ್ತಿಕಾಶೌಚದಿಂದ ಪ್ರಕ್ಷಾಲನಂಗೈದು ನಿರ್ಮಲವೆನಿಸಿ,
ಶ್ರೀಗುರುಲಿಂಗಜಂಗಮದ ನೆನಹು
ನಿರ್ಧಾರವಾಗಿ ನಿಂದ ಭಕ್ತಮಹೇಶ್ವರರು
ಜಿಹ್ವಾಗ್ರವ ಪ್ರಕ್ಷಾಲ್ಯವಂ ಮುಂದಿಟ್ಟು,
ಆ ಜಿಹ್ವಾಗ್ರದಲ್ಲಿ ಚರಿಸುವ ಪರಮಾನಂದಜಲವ ತೂಪಿರಿಸುತ್ತ,
ಸುಗಂಧರಸದ್ರವ್ಯಂಗಳ ಕ್ರಿಮಿಕ್ರಿಮಿಗಳ ಕಂಡ್ರಿಸಿ
ಎಂಜಲವನುಳಿದು ಸುಚಿತ್ತ ಹಸ್ತದಿಂದೆತ್ತಿಕೊಂಬುವುದೆ
ಆಚರಣೆಯೊಳಗಿನ ಸಂಬಂಧವ ಮೀರಿದ ಕ್ರಿಯಾಚರಣೆಯನಿಸಿತ್ತು.
ಗಣಾರಾಧ್ಯರಿಗೆ ಈ ನಿರ್ಣಯಗಳನರಿಯದ
ತಾ ನಿರ್ಮಲ ಪರಿಪಕ್ವವಾದ ಮರ್ಮಾದಿಮರ್ಮವಗಾಣದೆ
ಸ್ಥೂಲಸೂಕ್ಷ್ಮವ ವಿಸರ್ಜಿಸಿ, ಹಸ್ತಪಾದವ ತೊಳೆದು,
ತಂಬಿಗೆಯ ಬೆಳಗಿಕೊಂಡು ಬರುವ ಪಥದಲ್ಲಿ ಸುರಸದ್ರವ್ಯವಂ ಕಂಡು
ಕ್ರಯ ವಿಕ್ರಯವ ಮಾಡಿ , ಸೆರಗಿನಲ್ಲಿ ಕಟ್ಟಿ,
ಬರುವಷ್ಟರೊಳಗೆ ಸುಗಂಧಯುಕ್ತವಾದ ಪುಷ್ಪಪತ್ರಿಗಳ ಕಂಡು,
ಅತಿಮೋಹವಿಟ್ಟು, ಸಂಭ್ರಮದಿಂದ ನಿಂದು,
ಜಿಹ್ವಾಗ್ರವ ತೊಳೆಯಲಿಲ್ಲವುಯೆಂದು
ಸಂಕಲ್ಪದಿಂದ ಭ್ರಾಂತುಭ್ರಮಚಿತ್ತನಾಗಿ,
ಅಂತರಂಗದಲ್ಲಿ ಬಿಡಲಾರದ ಅತಿಯಾಸೆ, ಕೇಳಲಾರದ ಸಂಶಯಗಳಿಂದ
ತೊಳತೊಳಗಿ ಹೊಯಿದಾಡುತಿರ್ಪುದೆ
ತೃತೀಯದಲ್ಲಿ ಮನದೊಳಗಣ ಅಂತರಂಗದ ಪ್ರಾಣಸೂತಕ ಕಾಣಾ
ನಿರವಯಪ್ರಭುಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೫೯ ॥

## ೬೦

ಪ್ರಾಣಕ್ಕೆ ತತ್ಪ್ರಾಣವಾದ ಜೀವಸೂತಕವದೆಂತೆಂದೊಡೆ :
ಶ್ರೀಗುರು ತತ್ಪರಂಜ್ಯೋತಿರ್ಮಯ
ಸಾಕ್ಷಾತ್‌ನಿರ್ವಾಣಪದನಾಯಕ ಷಟ್‌ಸ್ಥಲ ಬ್ರಹ್ಮೋಪದೇಶವ
ಕರುಣಕಟಾಕ್ಷಯಿಂದ ಲಿಂಗಕ್ಕೆ ಲಿಂಗೋಪದೇಶ,
ಮನಕ್ಕೆ ಮಂತ್ರೋಪದೇಶ, ಪ್ರಾಣಕ್ಕೆ ನಿಜೋಪದೇಶ,
ಜೀವಕ್ಕೆ ಜ್ಞಾನೋಪದೇಶದಿಂದ ಕಾಯ ಶುದ್ಧಪ್ರಸಾದವಾಯಿತ್ತು.

ಮನ ಸಿದ್ಧಪ್ರಸಾದವಾಯಿತ್ತು, ಪ್ರಾಣ ಪ್ರಸಿದ್ಧಪ್ರಸಾದವಾಯಿತ್ತು
ಜೀವ ಪ್ರಸನ್ನಪ್ರಸಾದವಾಯಿತ್ತು,
ಇನ್ನೆನಗೇತರ ಭಯವೆಂದು ಪರಮಪದದ ದೃಢತೆ ನೆಲೆಗೊಂಡು,
ಹಿಂದಣ ಪಾಪ ಮುಂದಣ ಭೀತಿಯ ಮರೆದು,
ತನ್ನಷ್ಟತನುವೆ ಅಷ್ಟಾವರಣದಲ್ಲಿ,
ಅಷ್ಟಾವರಣವೆ ತನ್ನಷ್ಟಾಂಗದಲ್ಲಿ ಕೂಟಸ್ಥವಾಗಿ,
ಭಿನ್ನದೋರದೆ ತಾನುತಾನಾಗಿ ನಿಜಮುಕ್ತಿಮಂದಿರವ ಹೊಕ್ಕು,
ಮೇಲೆ ಇಹಲೋಕದ ಭೋಗ ಪರಲೋಕದ ಮೋಕ್ಷನಾಗಬೇಕೆಂದು
ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ
ಗುರುಪೂಜೆ ಲಿಂಗಾರಾಧನೆ ಜಂಗಮಾರಾಧನಾರ್ಪಣವ ಮಾಡಬೇಕೆಂದು
ಅರ್ಪಿತಾವಧಾನವ ತೊರೆದು ಉಪಚಾರಗಳಿದ್ದಲ್ಲಿಗೆ ಹೋಗಿ
ಬೇಡಿ ಬೇಡಿ ಕಾಡಿ ಕಾಡಿ, ಕೊಟ್ಟರೆ ಸ್ತುತಿಸಿ,
ಕೊಡದಿದ್ದರೆ ನಿಂದ್ಯಕ್ಕೊಳಗಾಗಿ,
ಹರಿಯೊ ಮೊರೆಯೊಯೆಂದು ರಿಣಪಾತಕರಾಗಿ,
ಆಡಂಬರಾರಾಧನೆಗಳ ಮಾಡಿ,
ಈ ರಿಣ ಎಂದಿಗೆ ಹೋದೀತೋ ಗುರುವೆಯೆಂದು ಜಡೆಮುಡಿಗಳ ಬಿಟ್ಟು,
ಕ್ಷೀಣಾತ್ಮರಿಗೆ ಹೇಳಿ ಕರಗಿ ಕೊರಗಿ,
ಶೀತೋಷ್ಣಾದಿಗಳ ಬಾಧೆಗಳ ದೆಸೆಯಿಂದ ಪ್ರಮಥಾಚಾರವ ಮರೆದು
ಭವರೋಗಿಯಾಗಿರ್ಪುದೆ
ಚತುರ್ಥದಲ್ಲಿ ಪ್ರಾಣದೊಳಗಣ ಅಂತರಂಗದ
ಜೀವ ಸಂಕಲ್ಪಸೂತಕವಿದೀಗ ಪೂರ್ವಕರ್ಮಕೃತ್ಯ ಕಾಣಾ
ನಿರವಯಪ್ರಭುಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೬೦ ॥

೬೧

ಜೀವಕ್ಕೆ ಸಂಜೀವನವಾದ ಭಾವಸೂತಕವದೆಂತೆಂದೊಡೆ :
ಶ್ರೀಗುರು ನಿರವಯ ಪರಿಪೂರ್ಣಬ್ರಹ್ಮ
ಸಚ್ಚಿದಾನಂದ ಕರುಣಕಟಾಕ್ಷಯಿಂದೆ
ಮಾರ್ಗಕ್ರಿಯಾಚರಣೆಯ ಮೀರಿದ ಕ್ರಿಯಾಚರಣೆ
ಷಟ್‌ಸ್ಥಲಾನುಭಾವದಾರ್ಚನೆ ಅರ್ಪಣಗಳಿಂದ ಕೂಡಿ
ಒಂದೊಡಲಾಗಿ ಎರಡಳಿದು,
ತಾನೆ ಗುರುಸ್ವರೂಪ, ತಾನೆ ಲಿಂಗಸ್ವರೂಪ,
ತಾನೆ ಜಂಗಮಸ್ವರೂಪ, ತಾನೆ ಪಾದೋದಕಪ್ರಸಾದ,
ತನ್ನ ಚಿತ್ಪ್ರಭೆಗಳ ಚಿದ್ವಿಭೂತಿ ರುದ್ರಾಕ್ಷಿ ಮಂತ್ರ,
ತಾನೆ ಅನಾದಿ ಪರವಸ್ತುವಾದುದರಿಂದ

ಆ ಪರಮಗುರು ಬಂದು ತನುವಿನ ಕೊನೆಮೊನೆಯೊಳಗೆ
ಮಹದರುವಾಗಿ ನೆಲೆಗೊಂಡಿರ್ಪನು.
ಪರಿಪೂರ್ಣಲಿಂಗ ಬಂದು ಸರ್ವೇಂದ್ರಿಗಳಲ್ಲಿ ತುಂಬಿತುಳುಕಾಡುತಿರ್ಪನು.
ಪರಮಾನುಭಾವಜಂಗಮ ಬಂದು ಸತ್ಕರಣಂಗಳಲ್ಲಿ
ಬೆಳಗ ಬೀರುತಿರ್ಪನು.
ಚಿತ್ಪಾದೋದಕಪ್ರಸಾದವ ಜ್ಯೋತಿರ್ಮಯ ಕಳೆಗಳೆ
ಸರ್ವಾಂಗದಿ ತುಂಬಿ ಬಿಂಬಿಸುತಿರ್ಪವುಯೆಂಬ ಬೆಳಗ ಕಂಡ ಮೇಲೆ
ಅಸತ್ಯ ಅನಾಚಾರ ಅಜ್ಞಾನ ಕ್ರಿಯಾಚಾರ
ಭ್ರಷ್ಟರಸಂಗವೆ ಭಯಭಂಗವೆಂಬ
ಹರಗುರು ನಿರೂಪಣವ ಕಂಡು,
ಬಿಡಲಾರದೆ ಅವರೊಡವೆರದು, ಸಮರಸಕ್ರಿಯೆಗಳ ಬಳಸಿ,
ಬಯಲಬ್ರಹ್ಮವಾಗಬೇಕೆಂದು ಭ್ರಾಂತುಭ್ರಮೆಗೊಂಡು,
ಬಯಸಿ ಬಡವಾಗಿರ್ಪುದೆ
ಪಂಚಮದಲ್ಲಿ ಜೀವನೊಳಗಣ ಅಂತರಂಗದ ಭಾವಸೂತಕ ಕಾಣಾ
ನಿರವಯಪ್ರಭುಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೬೧ ||

೬೨

ಇಂತೀ ಪಾತಕಸೂತಕಗಳ ಬಾಹ್ಯಾಂತರಂಗದೊಳ್
ನಿಜಪ್ರಸನ್ನ ಪರಿಪೂರ್ಣಾನಂದ ಶ್ರೀಗುರುಕಟಾಕ್ಷದಿಂದ,
ಮಹಾಜ್ಞಾನವೆಂಬಾಯುಧವಿಡಿದು ಕಡಿದು ಕಂಡರಿಸಿ, ಬಿಡುಗಡೆಚಿತ್ತರಾಗಿ,
ಸತ್ಯಶುದ್ಧ ನಡೆನುಡಿಗೆ ಚೈತನ್ಯವಾದ,
ಮಾರ್ಗಾಚಾರ ಮೀರಿದಾಚಾರಗಳನಾಚರಿಸಬೇಕಾದ ಕಾರಣದಿಂದ
ಮುಂದೆ ಸರ್ವಾಚಾರದ ಘನತೆಯನುಸುರುವೆನು.
ಶ್ರೀಗುರುಕರುಣದೊಳ್ ಆ ನಿಲುಕಡೆಯೆಂತೆಂದೊಡೆ :
ಅಯ್ಯಾ ಆಚಾರವೆ ಯೋಗ್ಯ ಗುರು,
ಆಚಾರವೇ ಯೋಗ್ಯವಾದೋದಕ ಪ್ರಸಾದ,
ಆಚಾರವೆ ಯೋಗ್ಯವಾದ ವಿಭೂತಿ ರುದ್ರಾಕ್ಷಿ ಮಂತ್ರ,
ಆಚಾರವೆ ಯೋಗ್ಯವುಳ್ಳ ಭಕ್ತ ಮಹೇಶ ಪ್ರಸಾದಿ
ಪ್ರಾಣಲಿಂಗಿ ಶರಣೈಕ್ಯ ನಿರವಯವಸ್ತು ನೋಡಾ.
ಆಚಾರವೇ ಭಕ್ತ, ಅನಾಚಾರವೆ ಭವಿ.
ಆಚಾರವೆ ಪ್ರಮಥಗಣಾರ್ಪಿತ, ಅನಾಚಾರವೆ ಪ್ರಮಥಗಣಕ್ಕನಾರ್ಪಿತ.
ಆಚಾರವೆ ಕೈವಲ್ಯಪದ, ಅನಾಚಾರವೆ ಭವದೋಕುಳಿ.
ಆಚಾರವೆ ಪರಶಿವನ ಘನಕ್ಕೆ ಘನಮಾರ್ಗ.
ಅನಾಚಾರವೆ ನರಸುರಹರಿಜುಜ ಇಂದ್ರಾದಿಗಳ

ಅಪಮಾನದ ಯೋಗ್ಯಮಾರ್ಗ.
ಈ ಗುರುವಾಕ್ಯವನರಿದು, ಎಚ್ಚರದಳಿದು,
ತಾ ಬಂದ ಮುಕ್ತಿದ್ವಾರ, ತಾನಿರುವ ನಿಜಮುಕ್ತಿಮಂದಿರ,
ತಾ ಬಯಲಾಗಿ ಹೋಗುವ ನಿರಂಜನದುಳುವೆಯ ತಿಳಿದು,
ಮರವೆಯೆಂಬ ಮಾಯಾಪಾಶಕ್ಕೊಳಗಾಗದೆ,
ಮಹದರುವಿನ ಗುರುಮಾರ್ಗದಿರವನರಿದು ನಡೆನುಡಿ ದೃಢಚಿತ್ತರಾಗಿ
ಚಿದ್ಘನಲಿಂಗತನು ಲಿಂಗಮನ ಲಿಂಗಪ್ರಾಣ ಲಿಂಗಭಾವ
ಲಿಂಗಕರಣೇಂದ್ರಿಯ ಭೋಗೋಪಭೋಗ ಲಿಂಗ ಸತಿಸುತ ಪಿತಮಾತೆ
ಲಿಂಗಾರಾಧನೆ ಲಿಂಗಾರ್ಪಣ ಲಿಂಗಾನುಭಾವ ಲಿಂಗೈಕ್ಯನು.
ಸಾರದ ಚಿದ್ಬೆಳಗಿನ ತಿಳುಹು ಅಚ್ಚೊತ್ತಿ
ಪರಮಪಾತಕಸೂತಕವ ಸರ್ವಾವಸ್ಥೆಗಳಲ್ಲಿ ಮರೆದು,
ನಿಮ್ಮ ನಿಜ ಚಿತ್ಕಳೆ ನೀನರಿದರೆ ಅನಾದಿಪ್ರಮಥಗಣದತ್ತ ಬನ್ನಿ.
ನಿಮ್ಮ ನಿಜ ಚಿದ್ಬೆಳಗಿನ ಕಳೆಗಳೊಪ್ಪುವ ಅಷ್ಟಾವರಣವ ಮರೆದರೆ
ಅಜಹರಿಸುರರು ಬದ್ಧಭವದತ್ತ ಹೋಗಿರಯ್ಯೆಯೆಂದು,
ಕಲ್ಯಾಣದೊಳ್ ಪ್ರಮಥಗಣಸಾಕ್ಷಿಯಾಗಿ
ಕಲಕೇತಯ್ಯಗಳು ನುಡಿದ ಪ್ರಸ್ತಾವದ ವಾಕ್ಯ ಕಾಣಾ
ನಿರವಯಪ್ರಭುಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೬೨ ॥

**೬೩**

ಆ ಕಲಕೇತಯ್ಯಗಳು ಗುಪ್ತಪಾತಕಸೂತಕದ
ಅನಾಚಾರದಭ್ರಜಯಾಮಾರುತನಾಗಿ ಕಂಡ್ರಿಸಿ ನುಡಿದ
ನಿರೂಪಣವೆಂಬ ಮೋಡವನೋಡಿಸಿ ಪವಿತ್ರರೆನಿಸುವ
ನಿಮಿತ್ಯಾರ್ಥ ಮೊದಲಾದ ಅರೆಭಕ್ತರೆಲ್ಲ ಒಂದೊಡಲಾಗಿ ಶರಣುಹೊಕ್ಕು,
ಹಸ್ತಾಂಜುಲಿತದೊಳ್ ನಿಂದು, ದೃಢಭಕ್ತಿಯಿಂದ ಹಮುಳಿಗರಾಗಿ,
ಮೃದುತರ ಕಿಂಕರನುಡಿಗಳಿಂದ ನುಡಿದ ಪ್ರತ್ಯುತ್ತರ :
ಹರಹರ ಹಿಂದೆ ತಪ್ಪಿ ನಿಮ್ಮ ಘನಾಚಾರ ಸನ್ಮಾರ್ಗವ ಬಿಟ್ಟು,
ಪರಮಪಾತಕ ಸೂತಕವಾಚರಿಸಿದಕ್ಕೆ ಎಡವಿಬಿದ್ದು,
ಪ್ರಮಥಗಣಾಜ್ಞೆಗ್ಗಳೊಳಗಾಗಿ, ಭವಸಮುದ್ರವ ದಾಂಟಿ,
ನಿಮ್ಮ ನಿಜಮುಕ್ತಿಪದವೆಂಬ ತೊತ್ತುಸ್ಸೇವೆಗೆ ನಿಂದೆವು.
ಇನ್ನು ತಪ್ಪಿದರೆ ನಮ್ಮ ಪ್ರಮಾಣವೆ ನಮಗೆ ಮೃತ್ಯುವಾಗಿ,
ಸದ್ಧರ್ಮವ ಸೇರದಂತೆ ಅಡ್ಡನಿಂದು, ಭವಾರಣ್ಯಕ್ಕೆ ನೂಂಕಲಿ,
ಅದಕ್ಕೆ ಪ್ರಮಥಗಣವೆ ಸಾಕ್ಷಿಯಾಗಿರುವರು.
ಅವರಾರೆಂದೊಡೆ :
ಭಕ್ತಿಸ್ಥಲಕ್ಕೆ ಕಾರಣಿಕರು ಓರಿದಂಡನಾಥ,

ಮಹೇಶ್ವರಸ್ಥಲಕ್ಕೆ ಕಾರಣಿಕರು ವೀರಗಂಟಿ,
ಪ್ರಸಾದಿಸ್ಥಲಕ್ಕೆ ಕಾರಣಿಕರು ಮರುಳಶಂಕರತಂದೆಗಳು,
ಪ್ರಾಣಲಿಂಗಿಸ್ಥಲಕ್ಕೆ ಕಾರಣಿಕರು ಮುಗ್ಧಸಂಗಪ್ಪನವರು,
ಶರಣಸ್ಥಲಕ್ಕೆ ಕಾರಣಿಕರು ಚಿಕ್ಕದಂಡನಾಥ,
ಐಕ್ಯಸ್ಥಲಕ್ಕೆ ಕಾರಣಿಕರು ಅಜಗಣ್ಣತಂದೆಗಳು,
ನಿರವಯಸ್ಥಲಕ್ಕೆ ಕಾರಣಿಕರು ಗುಹೇಶ್ವರ ಅಲ್ಲಮಪ್ರಭುಸಾಕ್ಷಿಯಾಗಿ,
ನಿಮ್ಮ ಸರ್ವಾಚಾರಸಂಪದಸ್ಥಲಕ್ಕೆ ಸಲ್ಲದಂತೆ
ಭವಜೀವಿಗಳಾಗಿ ಹೋಗುವುದಕ್ಕೆ,
ನಮ್ಮ ಮೂಲ ಚಿತ್ತುವಿನಲ್ಲುದಯವಾದ
ಚಿದ್ಬ್ರಹ್ಮಮೂರ್ತಿ ಪರಶಿವಲಿಂಗಮಂತ್ರದಿರವು
ತೊಲಗುವುದೆ ಪ್ರಮಾಣು,
ಇದಕ್ಕೆ ಸಂದುಸಂಶಯವಿಲ್ಲವು.
ಅದೇನುಕಾರಣವೆಂದೊಡೆ :
ಹಿಂದೆ ಮಾಡಿದಂಥ ಪ್ರಮಥಗಣ ಜಿನ್ನಪದ ಕಕ್ಕಯ್ಯಗಳ
ನಿಜಮೋಕ್ಷದ ಪರಮಾಮೃತಪ್ರಸಾದ,
ದೇವರದಾಸಯ್ಯಗಳ ಮಹದರುವಿನ
ಆಚಾರಪರಿಧಿಯಾದ ಪಾವುಡದ ಸಾಕ್ಷಿ.
ಶಿವಲೆಂಕಮಂಚಣ್ಣಗಳ ಜಪಮಾಲೆಯನೊಳಕೊಂಡರಿವಿನ ಶಿವದಾರ,
ಘಟ್ಟಿವಾಳಪ್ಪನ ಚಿತ್ಪ್ರಭಾಪುಂಜರಂಜಿತವಾದ
ಶ್ರೀಮದ್ಘನಭಸಿತವೆ ಸಾಕ್ಷಿ ಕಾಣಾ ತಂದೆಗಳಿರಾಯೆಂದು ಶರಣುಹೊಕ್ಕು,
ಶ್ರೀಗುರುಲಿಂಗಜಂಗಮಗಣಾರಾಧ್ಯರಿಗೆ
ಪರಮಾನಂದಪ್ರಸಾದ ಸ್ಥಲಕುಳದನುವರಿದು
ಶರಣಸಂದೋಹದಿಂದ ಎಮ್ಮ ಕಾಯಾರ್ಪಣ
ಕರಣಾರ್ಪಣ ಭಾವಾರ್ಪಣ ಪರಿಣಾಮಾರ್ಪಣ
ಪರಿಪೂರ್ಣಾರ್ಪಣವೆಂಬ
ಅಭಿವೃದ್ಧಿಗೆ ಕಾರಣಕರ್ತರು,
ನೀವೇ ಗತಿ, ನೀವೇ ಮತಿ, ನೀವೇ ಹಿತ, ನೀವೇ ಪಿತ, ನೀವೇ ಮಾತೆ,
ನೀನೆಮಗೆ ಸರ್ವಚೈತನ್ಯವಯ್ಯಾ.
ನೀನೆಮಗೆ ಅಭಿಮಾನವೆಂಬ ದಯಾಂತಃಕರಣವಿಟ್ಟು
ಭವಾರಣ್ಯವೆಂಬ ಪರಿಭವಬಾಧೆಗೆ ಹಿಂದಕ್ಕೆ ತಿರುಗದಂತೆ ಕೃಪೆಮಾಡಿ,
ನಿಮ್ಮಿಷ್ಟಲಿಂಗದಕಳೆ ಕ್ರಿಯಾಚಾರಶುದ್ಧಪ್ರಸಾದ ನಡೆಪರುಷ.
ನಿಮ್ಮ ಪ್ರಾಣಲಿಂಗದಕಳೆ ಜ್ಞಾನಾಚಾರಸಿದ್ಧಪ್ರಸಾದ ನುಡಿಪರುಷ.
ನಿಮ್ಮ ಭಾವಲಿಂಗದಕಳೆ ಭಾವಾಚಾರಪ್ರಸಿದ್ಧಪ್ರಸಾದ ನೋಟಪರುಷ.
ನಿಮ್ಮಣುಲಿಂಗದಕಳೆ ಧರ್ಮಾಚಾರಪ್ರಸನ್ನಪ್ರಸಾದ ಹಸ್ತಪರುಷ.

ನಿಮ್ಮ ಪರಮಾಣುಲಿಂಗದಕಳೆ ಸರ್ವಾಚಾರ
ಚಿತ್ಪ್ರಭಾಪ್ರಸಾದ ಭಾವಪರುಷ,
ನಿಮ್ಮ ಚಿದ್ಘನಮಹಾನಿರವಯಲಿಂಗದಕಳೆ
ಪರಿಪೂರ್ಣಾಚಾರ ಪರಿಪೂರ್ಣಪ್ರಸಾದದ ಸರ್ವಾಂಗಪರುಷವಿತ್ತು,
ಪರಮಪವಿತ್ರಪ್ರಸಾದವೆನಿಸಿ,
ನೀನರ್ಪಿಸಿದ ನಿಜಶೇಷಪ್ರಸಾದವ ಮಾಡಿ ನಿತ್ಯಮುಕ್ತರೆನಿಸಿರಯ್ಯಾ
ಪ್ರಮಥಗಣವೆ ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮವೆಂದು,
ಪರಿಪೂರ್ಣಭಕ್ತಿಯಿಂದ ಕಿನ್ನರಯ್ಯಗಳೆ ಮೊದಲು
ಇಳೆಹಾಳ ಬ್ರಹ್ಮಯ್ಯಗಳು ಕಡೆಯಾದ
ಮುನ್ನೂರರವತ್ತು ಕಡೆಯಾದ
ಮುನ್ನೂರರವತ್ತು ಗಣಾರಾಧ್ಯರು,
ಕಲಕೇತ ಮೊದಲಾದ ನಿಜವೀರಶೈವ ಸದ್ಧರ್ಮಿಗಳಿಗೆ ಅಭಿವಂದಿಸಿ
ಘನಮನಸಾಕ್ಷಿಯಾಗಿ ಹಸ್ತಾಂಜುಲಿತದೊಳ್ ನಿಂದಿರ್ಪರು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೬೩ ||

೬೪

ಪೂರ್ವವನಳಿದುಳಿದು ಪುನರ್ಜಾತರಾದ
ಕಿನ್ನರಯ್ಯ ಮೊದಲಾದ ಮುನ್ನೂರರವತ್ತು ಗಣಸಮೂಹದ
ಕಿಂಕುರ್ವಾಣಭಕ್ತಿಬಿನ್ನಹಕ್ಕೆ ಕಲಕೇತ ಕಲಿಗಣರು ಮೊದಲಾದ
ನಾನೂರಹತ್ತು ಗಣಾರಾಧ್ಯರು ಕಂಪನವೇರಿ, ಹದುಳಿಗರಾಗಿ,
ಹರಹರಾ ನಮೋ ನಮೋಯೆಂದು ಹಸ್ತಾಂಜುಳಿತದೊಳ್ ನಿಂದು,
ನಮ್ಮ ಮೇಲೆ ಬಹುಭಾವವ ಹೊರಿಸುವರೆ,
ನೀವು ಕೊಟ್ಟ ಮಹದರುವಿನಾಚಾರ,
ನೀವು ಕೊಟ್ಟ ನಿಜವೀರಶೈವ ಭಕ್ತಿಜ್ಞಾನವೈರಾಗ್ಯದಾಚರಣೆ,
ನೀವು ಕೃಪೆಮಾಡಿದ ಪರಿಪೂರ್ಣ ಪ್ರಸನ್ನ ಹರುಷದ
ನಿಧಿನಿಧಾನ ಸಂಬಂಧಸುಧಾರಸ,
ಶರಣುಶರಣಾರ್ಥಿ, ನಮ್ಮ ಗೃಹವ ಪ್ರಸನ್ನಪ್ರಸಾದಮೂರ್ತಿ
ಶ್ರೀಗುರುಲಿಂಗಜಂಗಮ ಒಡಗೂಡಿ,
ದಯಾಂತಃಕರಣವಿಟ್ಟು ಕೃಪೆಮಾಡಿ,
ನಿಮ್ಮ ಮೋಹದ ಕಂದಗಳೆಂದು ತಪ್ಪ ನೋಡದೆ ಒಪ್ಪವಿಟ್ಟು,
ಪರಿಪೂಜ್ಯರ ಮಾಡಿ ಆರೈವುದೆ ನಿಮ್ಮ ಧರ್ಮವಯ್ಯಾ.
ನಾವು ಅನಂತ ನಡೆನುಡಿ ದೃಢನೈಷ್ಠೆ ತಪ್ಪಿದ ತಪ್ಪುಕರು,
ನಮ್ಮಲ್ಲಿ ಗುಣವ ನೋಡುವರೆ ಅಣುಮಾತ್ರ ಹುರುಳಿಲ್ಲದಜ್ಞಾನಿಗಳು.
ನೀವು ನಾವು ಒಂದೊಡಲಾಗಿ, ಪರಿಪೂರ್ಣ

ನಡೆನುಡಿ ಚೈತನ್ಯವ ಸಾಧಿಸಬೇಕಲ್ಲದೆ,
ನಾವೇನು ಪೂರ್ಣಜ್ಞಾನಿಗಳೆ ನಿಮ್ಮ ವಿಜ್ಞಾಪಿಸುವುದಕ್ಕೆ ?
ಎಂದು ತಮ್ಮ ಗೃಹಂಗಳಿಗೆ ಬಿನ್ನೈಸಿ,
ಮುನ್ನೂರರವತ್ತು ಸಮ್ಮೇಳ ಮೊದಲಾದವರು
ನಾನೂರಹತ್ತು ಗಣಾರಾಧ್ಯರು ಸಹವಾಗಿ
ಏಳನೂರೆಪ್ಪತ್ತು ಅಮರಗಣಂಗಳಲ್ಲಿ
ಚಿಕ್ಕದಂಡನಾಥನ ಸಮಯಾಚಾರ
ಅಚ್ಚಪ್ರಸಾದಿಜಂಗಮ ಮೂರುಸಾವಿರ,
ನಿಚ್ಚಪ್ರಸಾದಿಜಂಗಮ ಮೂರುಸಾವಿರ,
ಸಮಯಪ್ರಸಾದಿಜಂಗಮ ಮೂರುಸಾವಿರ ಕೂಡಿ ಗಣಿತವ ಮಾಡಲಾಗಿ,
ಹನ್ನೆರಡುಸಾವಿರ ಪರಿಪೂರ್ಣಪ್ರಸಾದ ಜಂಗಮ ಮುಂತಾದ
ದಂಡನಾಥನ ಅರ್ಪಿತಾವಧಾನದ ಸಮಯಾಚಾರದಲ್ಲಿ
ಪಾದತೀರ್ಥವ ಲಿಂಗಕ್ಕರ್ಪಿಸಿ, ಲಿಂಗತೀರ್ಥವ ಸ್ವೀಕರಿಸಿ,
ಹಸ್ತಸ್ಪರಿಶನವಾದ ಶುದ್ಧಪ್ರಸಾದವ ಲಿಂಗಕ್ಕರ್ಪಿಸಿ,
ಲಿಂಗದಿಂದುಳುಮೆಯಾದ ಸಿದ್ಧಪ್ರಸಾದವ ಸ್ವೀಕರಿಸಿ,
ಪಾದೋದಕ ಭಸ್ಮೋದಕ ಮಂತ್ರೋದಕಸಂಬಂಧವಾದ
ಪರಮಾನಂದಜಲದಿಂದ ಕಂಡಿತವೆನಿಸಿ,
ಪ್ರಸಿದ್ಧಪ್ರಸಾದಿಗಳಿಗೆ ಕಿಂಕುರ್ವಾಣಭಕ್ತಿಭೃತ್ಯತ್ವದಿಂದ
ಆಚಾರಕ್ರಿಯಾಜ್ಞಾನಗಳ ಬೆಸಗೊಂಡು,
ಪಟ್ಸ್ಥಲಮಾರ್ಗಸಾಧನೆಗಳಿಂದ ಪರಿಶೋಭಿಸುವ
ಶುದ್ಧಸಿದ್ಧಪ್ರಸಿದ್ಧಪ್ರಸಾದಿಜಂಗಮವು
ಇಪ್ಪತ್ತುನಾಲ್ಕುಸಾವಿರ ಕೂಡಿ, ಗಣಿತವ ಮಾಡಲಾಗಿ,
ಮೂವತ್ತಾರುಸಾವಿರ ಜಂಗಮವೆ
ದಂಡನಾಥನರ್ಧಾಂಗಿ ಚಿತ್ಪ್ರಭಾಪುಂಜರಂಜಿತೆ,
ಮಹಾರಾಜಾಧಿರಾಜನಾಯಕಿ ನೀಲಲೋಚನೆಯರ
ಕರಮನಭಾವದ ಕೊನೆಮೊನೆಯಲ್ಲಿ ಬೆಳಗುತಿಪ್ಪರು.
ಇಂತೆಸೆವ ಮೂವತ್ತಾರುಸಾವಿರ ಜಂಗಮವು
ಏಳನೂರೆಪ್ಪತ್ತಮರಗಣಂಗಳೆಲ್ಲ ಒಂದೊಡಲಾಗಿ
ಮಾರ್ಗಾಚಾರ ಕ್ರಿಯಾಕಾರ್ಯಾರ್ಪಣದ್ರವ್ಯಗಳ
ಲವಣಮಿಶ್ರಂಗಳೊಳ್ ಪಾಕಂಗೈದು, ಸಾವಧಾನದಿರವನರಿದಂಗವಾಗಿ,
ಲಿಂಗವೆ ತಾನುತಾನಾಗಿರ್ಪ ಆಚಾರವರಿದು,
ಮಿಂದಾಚಾರ ಕ್ರಿಯಾಕರಣಾರ್ಪಣದ್ರವ್ಯಗಳ ಸಾವಧಾನದಿರವನರಿದು,
ಪ್ರಾಣವಾಗಿ, ಪ್ರಾಣಲಿಂಗಾರ್ಪಣವ ಮಾಡಿ,
ಪ್ರಾಣಲಿಂಗಮೂರ್ತಿ ತಾನಾಗಿರ್ಪುದೆ

ಆಚಾರದಿರವು ; ಪರಿಪೂರ್ಣಾಚಾರಕ್ರಿಯೆ.
ಭಾವಾರ್ಪಣದ್ರವ್ಯಗಳ ಸಾವಧಾನದಿರವರಿದು,
ಪೂರ್ಣಾನುಭಾವವಾಗಿ, ಭಾವಲಿಂಗಾರ್ಪಣವ ಮಾಡಿ,
ಭಾವಲಿಂಗಮೂರ್ತಿ ತಾನಾಗಿರ್ಪುದೆ ಆಚಾರದಿರವು.
ಈ ಆಚಾರಮಾರ್ಗ ಹೊದ್ದದಂತೆ ಘನಮಹದರುವಿನ
ಪ್ರಸನ್ನಪ್ರಸಾದ ಭಕ್ತಿಪಾವುಡವೆಂದು ಕೊಟ್ಟು ಕೊಂಬ
ಭಕ್ತಂಗೆ ಮಾಡಿ ನೀಡುವ ಕಾಯಕ,
ಮಹೇಶಂಗೆ ಬೇಡಿ ನೀಡುವ ಕಾಯಕ,
ಇವರಿಬ್ಬರಿಗೆ ಚೈತನ್ಯವಾಗಿ ಸ್ವಯಜಂಗಮ
ಚರಜಂಗಮ ಪರಜಂಗಮವೆನಿಸಿ,
ನಿಜವಿರಕ್ತಿಯಂ ತಳೆದೊಪ್ಪಿ ಆಚಾರದರುವ
ಎಚ್ಚರವೆಚ್ಚರವೆಂದು ಇಚ್ಛೆಯ ನುಡಿದು,
ಮಲತ್ರಯವೆಂಬ ಬಚ್ಚಲೋಕುಳಿಯಲ್ಲಿ ಬೀಳದೆ
ಪವಿತ್ರವ ಕೊಟ್ಟು, ಪವಿತ್ರವ ಕೊಂಡು,
ಭಕ್ತ ಮಹೇಶ್ವರರಿಗೆ ತತ್ಪ್ರಾಣವಾಗಿರ್ಪುದೆ ಜಂಗಮದಕಾಯಕ.
ಇಂತೀ ಕಾಯಕವೆ ಕೈವಲ್ಯವೆಂದು ನಂಬಿ ನಚ್ಚಿ ಮಚ್ಚಿ,
ತಮ್ಮ ತಾವರಿದು, ದೇಹಾದಿ ಭೋಗಭುಕ್ತಯೋಗಸಾಧನೆ
ಫಲಪದಮೋಕ್ಷಾಪೇಕ್ಷೆಗಳ ಮರೆದಿಪ್ಪವರೆ ಕಾರಣಿಕರು ಕಾಣಾ,
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೬೪ ॥

೬೫

ಪರತತ್ವದಿರವನರಿಯದೆ, ಕಟ್ಟುಕಟ್ಟಳೆಗೆ ಹೊರಗಾಗಿ,
ಬೇಡಿದ ಹಾಂಗೆ ಮುಂದುವರಿದು, ಲಿಂಗಭೋಗಿಗಳಾಗಿ.
ಅರುವೆಂಬ ಗುರುಮಾರ್ಗವ ಮರೆದು,
ಭೂರಿಲಿಂಗಲಾಂಛನಧಾರಕರಾಗಿ ದಂಡನಾಥನ
ಪದಾರ್ಥಕ್ಕೆ ಕಾರಣಿಕರೆನಿಸಿ,
ತುಂಡುಜಂಗಮ, ಮಿಂಡಜಂಗಮ, ಚೋರಜಂಗಮವೆನಿಸಿ,
ಶಿವಸೂತ್ರಶರೀರಿಗಳಾಗಿ, ನೆರೆದಿಪ್ಪ ಜಂಗಮವನಂತರುಂಟು.
ಇದರೊಳಗೆ ಪ್ರಮಥಗಣಂಗಳು ಅರಿದರಿದು.
ಪಾತ್ರ ಅಪಾತ್ರ ಸತ್ಪಾತ್ರವೆಂಬ,
ಪದಾರ್ಥ ಸುಪದಾರ್ಥ ಪ್ರಸಾದಗಳೆಂಬ ತ್ರಿವಿಧವರ್ತಕವಿಡಿದು.
ಸತ್ಕ್ರಿಯಾಚಾರಭಕ್ತಿ, ಸಮ್ಯಜ್ಞಾನಾಚಾರಭಕ್ತಿ,
ನಡೆನುಡಿಗಳಿಂದ ಒಬ್ಬರಿಗೊಬ್ಬರು ಭೃತ್ಯರಾಗಿ,
ಅನಾದಿಚಿದ್ಬ್ರಹ್ಮವೆ ಸಾಕ್ಷಿಯಾಗಿ,

ಭಕ್ತಮಹೇಶಜಂಗಮಮೂರ್ತಿ ಮೊದಲಾದವರೆಲ್ಲ
ಭಕ್ತಿಯೇ ಮುಕ್ತಿಗೆ ಜೀವನವೆಂದರಿದು,
ಒಬ್ಬರೊಬ್ಬರು ಚಿನ್ನಪಗಳಿಂದ
ಆಚಾರದಾಜ್ಞೆಯೆಂಬ ಪಾವುಡದ ಚೋಮುವ ಕಟ್ಟಿ,
ಸರ್ವಾಚಾರಸಂಪದವೆಂಬ ಬೆಳೆಯಬೆಳೆದು,
ಅನಾಚಾರವೆಂಬ ಕಸವ ಕಡೆಗೆ ಕಿತ್ತು ಬಿಸುಟಿ,
ಆಚಾರವೆ ಅಂಗ ಮನ ಪ್ರಾಣ ಭಾವ ಕರಣೇಂದ್ರಿಯಗಳಾಗಿ ಆಹ್ವಾನಿಸಿ,
ಅನಾಚಾರವ ಮಲಮೂತ್ರವೆಂದು ವಿಸರ್ಜಿಸಿ,
ತಮ್ಮ ನಿಜಚಿದ್ಬೆಳಗ ತಾವರಿದು,
ಮಲಮಾಯಾಭೋಗವ ಮರೆದಿಪ್ಪರು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೬೫ ॥

೬೬

ಜನನಿಜಠರದಿಂದುಯವಾದಾಕ್ಷಣವೆ,
ಗುರುಕರುಣದಿಂದ ಲಿಂಗವೆಂಬ ಪುರುಷಂಗೆ, ಶರೀರವೆಂಬ ಸತಿಯಳಿಗೆ
ರತಿಕ್ರೀಡೆವಿಲಾಸದೋರಿದವೇಳೆಯೊಳು
ತವನ್ಯಾಚಾರನಿಮಿತ್ತವಾಗಿ ಲಿಂಗಮಂ ಧರಿಸಿ,
ಗುರುಪಾದತೀರ್ಥದ ಬಿಂದುವಂ ಜಿಹ್ವಾಗ್ರಕ್ಕೆರೆದು,
ಲಿಂಗಾಂಗವಾಯಿತ್ತೆಂಬ ಜನಸನ್ಮತವಾಗಿರ್ಪ ತದನಂತರದೊಳು
ಮರ್ತ್ಯದೊಳಿರ್ಪ ಶಿವಲಿಂಗಧಾರಕಮತದವರು
ಒಬ್ಬರಿಗೊಬ್ಬರು ನಂಟರಾಗಿ,
ಗಂಡುಹೆಣ್ಣು ಒಂದಾಸನದ ಮೇಲೆ ತಂಡುಲಮಂ ತಳೆದು,
ಗುರು–ಹಿರಿಯರು ಬಂಧು–ಬಳಗ ಕಳಸ–ಕನ್ನಡಿ–
ಮುತ್ತೈದೆರೆಂದು ನೆರೆದು
ಬಾಸಣಿಗೆಯ ಹಾಕಿ, ಸಲೆ ಪುರುಷರೆಂದು ಕೂಡಿದವರೆಲ್ಲ ಕರೆದು,
ಗಣಸಮುದಾಯಕ್ಕೆ ಶರಣುಮಾಡಿಸಿ,
ಮಧ್ಯಕಲ್ಪನೆಯಿಂದ ಹೆಣ್ಣು ಗಂಡಿನವರಿಗೆ
ಯಾವುದಾದರೂ ಒಂದು ಕುಂದುಕೊರತೆ ಬಂದು
ಸಂಕಲ್ಪವಾದರೂ ಸರಿಯೆ,
ಗಂಡಿಗೆ ಆದಿವ್ಯಾಧಿಗಳಿಂದ ಆಯುಷ್ಯ ತೀರಲರಿಯುವಾದರೂ ಸರಿಯೆ,
ಆ ಗಂಡಿನಾಭರಣವ ಅವರ ತಂದೆತಾಯಿಗೊಪ್ಪಿಸಿ,
ಆ ಶಕ್ತಿಯೆಂಬ ನಾರಿಯ ಮತ್ತೊಬ್ಬ ಪುರುಷಗೆ ಸಲ್ಲಿಸಿ,
ಹಿಂದಣಂತೆ ಗೂತ್ತುಮಾಡಿದ ತದನಂತರದಲ್ಲಿ,
ಮಾತು ಎಷ್ಟು ವೇಳೆಯಾದರೂ ಮಿತಿದಪ್ಪಿ,

ಹಿಂದಣಂತೆ ವರ್ತಿಸಿದೊಡೆ ಮುಂದೆ ಅನಾಚಾರಿಯು,
ಕಂಕಣವ ಕಟ್ಟಿ, ಲಗ್ನವ ಮಾಡುವುದಕ್ಕೆ ಯೋಗ್ಯಳೆ ಸಲ್ಲ, ಸಂದೇಹವಿಲ್ಲ
ಬಾಸಣಿಕೆಯಾದ ತದನಂತರದಲ್ಲಿ ಗುರು–ಹಿರಿಯರು, ಬಂಧು–ಬಳಗ,
ಪುರುಷನುಳ್ಳ ಮುತ್ತೈದೆರೆಲ್ಲ ನೆರೆದು,
ಹಸೆ ಹಂದರ ದಂಡೆ ಬಾಸಿಂಗ ಕಂಭಕುಂಭ ಸಾಕ್ಷಿಯಾಗಿ
ಸೆರಗ ಗಂಟಿಕ್ಕಿ, ಕಂಕಣವ ಕಟ್ಟಿ,
ಸುಮುಹೂರ್ತೇ ಸಾವಧಾನವೆಂದು ಸೇಸೆಯನೆರೆದು,
ಮೇಲೆ ಪುರುಷವಿಯೋಗವಾದ ಮೇಲೆ,
ಆ ಸತಿ ಕಳಸಕನ್ನಡಿ ಸೇವೆಗೆ ಬಾಗಿನ ಮುತ್ತೈದೆಗೆ ಸಲ್ಲುವಳೆ ಸರಿ.
ಅದುಯೇನು ಕಾರಣವೆಂದಡೆ :
ಆ ಸತಿಗೆ ಕ್ರಿಯಾಪುರುಷನ ಕಂಕಣ ಒಂದು,
ಜ್ಞಾನಪುರುಷನ ಕಂಕಣ ಒಂದು,
ಈ ತೆರದಿಂದುಭಯಸಂಗವಾದುದರೊಳು
ಒಬ್ಬ ಕ್ರಿಯಾರಮಣಶೂನ್ಯವಾದಲ್ಲಿ ಜ್ಞಾನರಮಣನ ಕೂಡಿ,
ಮುತ್ತೈದೆಯನಿಸಿ, ತ್ರಿವಿಧೋಪದೇಶದಿಂದ,
ಅಷ್ಟಾವರಣದಿಂದಲ್ಲಿ ಸಮರಸಭಕ್ತಿ ಸರ್ವೇಂದ್ರಿಗಳಲ್ಲಿ ವಿರಕ್ತಿವಿಡಿದು,
ಅಂತರ್ಜ್ಞಾನ ಬಹಿಕ್ರಿಯಾಚಾರದಿಂದ ನಡೆನುಡಿ ದೃಢಚಿತ್ತಳಾಗಿ,
ಸರ್ವಾಚಾರಸಂಪದಮನ್ನನುಭವಿಸಿ, ಲೀಲೆ ಸಮಾಪ್ತವಾಗಿ,
ಶೂನ್ಯವ ಹೊಂದುವುದೆ ನಿರೂಪಾಧಿಕ ಷಟ್‌ಸ್ಥಲ.
ಸದ್ಧರ್ಮನಾಯಕರಾದ ಭಕ್ತಮಹೇಶ್ವರ ಪ್ರಸಾದಸೇವಿತರ
ಯೋಗ್ಯವುಳ್ಳ ಮಾರ್ಗವಿದೀಗ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೬೬ ||

೬೭

ನಿಜವೀರಶೈವಸಂಪನ್ನರ ಘನವಿರತಿಯಮಾರ್ಗವನರಿಯದೆ,
ಶೈವಮತದ ಇಷ್ಟಲಿಂಗಬಾಹ್ಯರಂತೆ,
ಎನ್ನ ಗಂಡ ಸತ್ತನೆಂದು ರೋದನಗಳಿಂದ
ಗಂಡನ ಸಮಾಧಿಯಲ್ಲಿ ಬಳೆಯ ಒಡೆದು, ತಾಳಿಮಣಿಯ ಹರಿದು,
ನಮ್ಮ ಮುತ್ತೈದೆತನ ಇಂದಿಗೆ ಹೋಯಿತೆಂದು ಸಂದೇಹಿಯಾಗಿ,
ಘನಮಂತ್ರಮೂರ್ತಿ ಚಿದ್ಘನಲಿಂಗವೆಂಬ ನಿಜಪುರುಷನ ಮರೆದು,
ಮುಕ್ತಿಮಂದಿರವ ಸೇರದೆ, ಮತ್ತೊಬ್ಬನ ಕೂಡಿಕೊಂಡು,
ಅಯೋಗ್ಯಪುರುಷರೆನಿಸಿ, ವಿಷಯಭೋಗಿಗಳಾಗಿ,
ಅಷ್ಟಾವರಣ ಪಂಚಾಚಾರವ ಕೂಡದ, ಜನ್ಮಜರಾಮರಣಾದಿಗೊಳಗಾಗಿ
ಎಂಬತ್ತನಾಲ್ಕು ಜೀವಜಂತುವೆನಿಸಿ, ಒಂದರಲ್ಲಿ ಸ್ಥಿರವಾಗದ

ತೊಳಲಿ ಬಳಲುವುದೆ ನಿಜಗೆಟ್ಟ, ಅಯೋಗ್ಯರ ಮಾರ್ಗ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೬೭ ||

೬೮

ಲೋಕಾರ್ಥದ ಸತಿಪುರುಷರ ಯೋಗ್ಯ ಅಯೋಗ್ಯದ ತೆರನಂತೆ,
ಮಹದರುವೆಂಬ ಶ್ರೀಗುರುಪ್ರಸನ್ನನಾಗಿ,
ಲಿಂಗದಲ್ಲಿ ದೃಷ್ಟಿನಷ್ಟ, ಗುರುಕರುಣವ ಪಡೆದು,
ನಿಜಮುಕ್ತನಾಗಬೇಕೆಂಬ ಮಹಾಜ್ಞಾನತಲೆದೋರುವ ಪರಿಯಂತರವು,
ಸತಿಪುರುಷರಿಗೆ ಬಾಲತ್ವದಲ್ಲಿ ಗುರುಚಿತ್ತಲಿಂಗ ಭಿನ್ನಭಿನ್ನವಾದರೆ,
ಆ ಲಿಂಗವ ತೆಗೆದು ಗುರುವಿಗೊಪ್ಪಿಸಿದಲ್ಲಿ,
ಆ ಗುರುದೇವನು ಸೂತ್ರವ ಹರಿಯದೆ
ಮುಂದೆ ಸುಯಿಧಾನದಾಜ್ಞೆಯ ಮಾಡಿ,
ಬಂಧುರವೆನಿಸಿ, ಇಪ್ಪತ್ತೊಂದುಪೂಜೆಯ ಮಾಡದೆ,
ಭಂಡಾರದ ಸೇವಕರಿಂದ ಗೋಮೂತ್ರ ಮೊದಲಾದ ಸಮ್ಮಾರ್ಜನೆ,
ಗೋಕ್ಷೀರ ಮೊದಲಾದ ಪಂಚಾಮೃತ
ಧೂಳಪಾದೋದಕದಿಂದ ಮತ್ತೊಂದು ಲಿಂಗವ ತೊಳೆದು,
ಐದುಪೂಜೆಯನಿಸಿ ಪ್ರಸಾದವ ಕೊಡದೆ,
ತೀರ್ಥವೊಂದನೆ ಅರ್ಪಿಸಿ ಮೊದಲು ಸುಯಿಧಾನವ ತಪ್ಪಿದ ಲಿಂಗವ
ಯಾರಾನಾ ಭಕ್ತಗಣಂಗಳು ಲಿಂಗೈಕ್ಯವಾದಾಗ್ಗೆ
ಪ್ರಸಾದ ಪ್ರತಿಪುಷ್ಪದಲ್ಲಿ ಸಮಾಧಿಯೊಳಗೆ
ನಿಕ್ಷೇಪವೆನಿಸುವುದು ಸಾಮಾನ್ಯವು.
ಇದು ಎಲ್ಲಿ ಪರಿಯಂತರವೆಂದಡೆ :
ಆ ಶ್ರೀಗುರುಕರುಣದಿಂದೆ ಭಕ್ತಗಣಸಾಕ್ಷಿಯಾಗಿ,
ಇಪ್ಪತ್ತೊಂದು ಪೂಜೆಗಳೊಳು ಅಂಗವೆ ಸತಿ ಲಿಂಗವೆ ಪತಿಯೆಂದು
ಕಂಕಣವ ಕಟ್ಟಿ ಪರಿಯಂತರವು,
ಎಷ್ಟು ವೇಳೆ ಸುಯಿಧಾನತಪ್ಪಿದರೂ ದೀಕ್ಷಾಗುರುಸ್ಥಲಕ್ಕೆ ಸೇರೋತನಕ
ಲಿಂಗಧಾರಣವ ಮಾಡುವುದು, ಶಂಕಿಸಲಾಗದು.
ಗುರುಕರುಣದಿಂದ ಇಪ್ಪತ್ತೊಂದು ಪೂಜೆಯಮಾಡಿ,
ಶುದ್ಧಸಿದ್ಧಪ್ರಸಾದಿಯಾಗಿ, ಶಿವಮಂತ್ರಜಪವ ಮಾಡುವುದು.
ಚಿದ್ಘನಲಿಂಗಾಂಗವರಿದು, ಸತ್ಕ್ರಿಯೆ ಸಮ್ಯಜ್ಞಾನಾಚರಣೆಯಿಂದ
ನಡೆನುಡಿಗಳಿಂ ಪ್ರಮಥಗಣವೊಪ್ಪಿ,
ಪ್ರಸಿದ್ಧಪಾದೋದಕ, ಪ್ರಸಿದ್ಧಪ್ರಸಾದವ ಕೊಂಡು,
ಪ್ರಸಾದಿಯೆನಿಸಿದ ಮೇಲೆ,
ಗುರುಚಿತ್ತ ಲಿಂಗ ಭಿನ್ನ ಭಿನ್ನವಾದೊಡೆ ವಿಯೋಗವಾದೊಡೆ,
ಸರ್ವಾಚಾರ ಭಕ್ತ ಮಹೇಶ ಪ್ರಸಾದಿ

ಪ್ರಾಣಲಿಂಗಿ ಶರಣಲಿಂಗೈಕ್ಯಸ್ಥಲದವರು,
ಲಿಂಗಬಾಹ್ಯರು ಪ್ರಸಾದಬಾಹ್ಯರು ಆಚಾರಬಾಹ್ಯರು
ಮೊದಲಾದವರ ಸಮ್ಮುಖದಲ್ಲಿ
ಲಿಂಗಾರ್ಚನಾರ್ಪಣಗಳ ಮಾಡಲಾಗದು.
ಅದೇನು ಕಾರಣವೆಂದಡೆ, ಶಿವಾಗಮಸಾಕ್ಷಿ :
''ಅರ್ಚನಾದಿ ಕ್ರಿಯಾಕಾಲೇ ಪ್ರಚ್ಛನ್ನಂ ಪಟಮುತ್ತಮಂ ।
ಪಾಪೀ ಕೋಪೀ ಪರಿಭ್ರಷ್ಟಃ ದುರ್ಮುಖಶ್ಚಾಪ್ಯ ದೀಕ್ಷಿತಃ ॥
ಪ್ರಮಾದಾದ್ದರ್ಶನಂ ಚೈವ ಪೂಜಾಕ್ರಿಯಾರ್ಪಣಂ ತಥಾ ।
ತಥಾಪಿ ನಿಷ್ಫಲಂ ಚೇತಿ ನರಕೇ ಕಾಲಮಕ್ಷಯಂ ॥''
ಎಂದುದಾಗಿ
ಪರಗುರುವಾಕ್ಯವ ಮೀರಿ ಮಾಡಿದೊಡೆ,
ಅವರಂತೆ ಕ್ರಿಯಾಬಾಹ್ಯರಪ್ಪುದು ತಪ್ಪದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೬೮ ॥

೬೯

ಅನಾದಿ ಪರಗಣಮಾರ್ಗದ ಪ್ರಾಣಲಿಂಗಾಚಾರ ನಡೆನುಡಿ ಏಕವಾದ
ಚಿದ್ಬೆಳಗೆ ಅಂತರಂಗವಾಗಿ, ಪರೋಪಕಾರನಿಮಿತ್ಯರ್ಥವಾಗಿ
ಅದೇ ಅಂತರಂಗಸಂಬಂಧವಾದ ನಿಜಚಿತ್ಕಳೆಯ ಪ್ರಭಾವಿಸಿ,
ಮಹದರುವೆಂಬ ಪರಮಗುರುವೆಂಬ ಮಾರ್ಗದ
ಇಷ್ಟಲಿಂಗಾಚಾರ ನಡೆನುಡಿ ಒಂದೊಡಲಾದ
ಚಿದ್ಬೆಳಗೆ ಬಾಹ್ಯರಂಗವಾಗಿ,
ಉಭಯ ಸಂಬಂಧದಾಚರಣೆಗಳಿಂದ ಅಣುಮಾತ್ರ ಹೋದಲ್ಲದೆ
ಬಾಹ್ಯದಲ್ಲಿ ಸತ್ಕ್ರಿಯಾವರ್ತಕ, ಅಂತರಂಗದಲ್ಲಿ ಸಮ್ಯಜ್ಞಾನವರ್ತಕದಿರವಿನ
ಮೂಲಾಧಾರ ಭಾವಲಿಂಗವೆಂಬ ನಿಜಶರಣಜಂಗಮದೇವನ
ಚಿದಂಗ ಚಿದ್ಘನಲಿಂಗದ ಅಖಂಡ ಜ್ಯೋತಿರ್ಮಯಗೋಳಕದ
ಕೊನೆಮೊನೆಯೊಳಗೆ ನೆಲಸಿರ್ಪ ಸತ್ತುಚಿತ್ತಾನಂದ ಪರಬ್ರಹ್ಮದಿರವಿನ,
ಕ್ರಿಯಾಮಂಡಲ ಸುಜ್ಞಾನಮಂಡಲ ಮಹಾಜ್ಞಾನಮಂಡಲವೆಂಬ
ಷಟ್‌ಪ್ರಕಾರದ ಮನೆಯೊಳ್ ತನ್ನ ತಾನು
ಚುಂಬಿಸಿದಾನಂದದಿರವಿನ ಬೆಳಗ ಕಂಡು,
ಕಣ್ಮುಚ್ಚಿ, ಮನ ಮೈಮರೆದು, ಬಚ್ಚಬರಿಯಾನಂದವಾಗಿ,
ತಮ್ಮ ತಾವರಿದು, ಸುಸಂಗಸಂಗಿಗಳಾಗಿ,
ನಿಜಮೋಕ್ಷದಖಣಿಯೆಂಬ ಮುಕ್ತಿಮಂದಿರವ ಹೊಕ್ಕು ಹೊರಡದ
ಭಾವಭರಿತರೆ ನಿಮ್ಮ ಪ್ರತಿಬಿಂಬರು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೬೯ ॥

೭೦

ನಿಜಮೋಕ್ಷಮಂದಿರವ ಸೇರಿ ನಿಂದ ನಿತ್ಯಾನಂದಭರಿತರು,
ಉರಿಯುಂಡಕರ್ಪುರದಂತೆ, ಚಿದ್ಘನಲಿಂಗ ಶರಣರೆ ತಾವಾಗಿ,
ಹಿಂದಮುಂದಣ ಭವಾರಣ್ಯದ ಹಡಿಕೆ ಹಾದಿಯ
ಸಂಭ್ರಮ ಸುಖ–ದುಃಖ, ಪುಣ್ಯ–ಪಾಪ, ಸ್ತುತಿ–ನಿಂದೆ,
ಇಹ–ಪರವೆಂಬುಭಯ ದುರಿತಕರ್ಮಕೃತ್ಯಮಂ ನೆರೆ ನೀಗಿ,
ನಿರವಯಬ್ರಹ್ಮವ ಹೊಂದಿ, ಒಂದೊಡಲಾಗಬೇಕಾದರೆ,
ತನುಭೋಗಭ್ರಾಂತು ಮನಭೋಗಭ್ರಾಂತು ಜೀವಭೋಗಭ್ರಾಂತುವಿನ
ಭವಿಮಾಟಕೂಟದ ವಿಷಯವ್ಯಾಪಾರಮಂ ಕಡಿದು ಕಂಡ್ರಿಸಿ,
ಜಾಗ್ರ ಸ್ವಪ್ನ ಸುಷುಪ್ತಿಗಳಲ್ಲಿ
ಶೂನ್ಯಲಿಂಗಾಂಗಸಂಗಸಂಯೋಗ ಸಮರತಿಯ ಕೂಟವಚ್ಚೊತ್ತಿ
ಭಾವಭರಿತವಾಗಿ ಪರಮಹಂಸನೋಪಾದಿಯಲ್ಲಿ
ಅಯೋಗ್ಯದ ಅನಾರ್ಪಿತಗಳಳಿದುಳಿದು, ಗುಪ್ತಪಾತಕಗಳ ನೆರೆ ನೀಗಿ,
ಚಿದ್ಘನಲಿಂಗ ಭಕ್ತಜಂಗಮ ಗುರುಶಿಷ್ಯಸಂಬಂಧಮಂ
ಹರಗುರುವಾಕ್ಯಂಗಳೊಳು ಸಲುವಷ್ಟು
ಸತ್ಕ್ರಿಯೆ ಸಮ್ಯಜ್ಞಾನಾಚಾರ ನಡೆನುಡಿಗಳ ಸಾಧಿಸುವರೆ
ಪ್ರಸನ್ನಪ್ರಮಥಗಣಮಾರ್ಗದವರೆಂದು,
ತನುಮುಟ್ಟಿ, ಮನಮುಟ್ಟಿ, ಭಾವಭರಿತವಾಗಿ,
ಪರಮಾನಂದಸುಖದಸುಗ್ಗಿಯೊಳು ಪರಿಪೂರ್ಣಮೋಹಾನಂದ
ಕರುಣರಸ ತುಂಬಿ ತುಳುಕಾಡುತ್ತ
ಲೋಲಾಬ್ಧಿ ದರುಶನ ಸ್ಪರಿಶನ ಸಂಭಾಷಣೆ ಪಾದಾಂಬುಶೇಷ ಪ್ರಸಾದಕ್ಕೆ
ಚೈತನ್ಯ ಚಿದ್ವಿಭೂತಿ ರುದ್ರಾಕ್ಷಿ ಮಂತ್ರಾನಂದದ
ನಿಜಕೂಟಾನುಭಾವ ಪರಿಣಾಮವ ಕೊಟ್ಟು ಕೊಂಬೆನೆಂಬುದೆ
ಎನ್ನ ರಮಣನೊಪ್ಪಿ ಸನ್ಮತವಾದ ಸತ್ಯಶುದ್ಧ ಯತಾರ್ಥ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೦ ॥

೭೧

ಅನಾದಿ ಪೂರ್ವಪುರಾತನ ಗಣನಾಯಕ
ಓರಿದಂಡನಾಥನ ಘನಭಕ್ತಿ ದಾಸೋಹಂಭಾವನೊಲ್ಲೆನೊಲ್ಲೆ,
ಬೇಕು ಬೇಕು.
ಅದೇನು ಕಾರಣವೆಂದಡೆ :
ಅಯೋಗ್ಯ ರೂಪು, ಅಕ್ರಿಯೆ, ಅಜ್ಞಾನ,
ಅನಾಚಾರಗಳ ಕಂಡು ಕಣ್ಣಮುಚ್ಚಿ,
ಮಹಾಬೆಳಗಿನ ಷಟ್‍ಸ್ಥಲದ ಮಾರ್ಗವ ಸೇರದೆ,

ಲಿಂಗಲಾಂಛನಕ್ಕೆ ಶರಣೆಂದು ತನುಮನಧನವನರ್ಪಿಸಿದ
ಪರಿಪೂರ್ಣಗುಪ್ತಭಕ್ತಿ ಎನ್ನಂತರಂಗನಾಥ ಪ್ರಾಣಲಿಂಗಕ್ಕೆ ಅರ್ಪಿತ,
ಎನ್ನ ಬಹಿರಂಗದನಾಥ ಇಷ್ಟಲಿಂಗಕ್ಕೆ ಅನಾರ್ಪಿತ.
ನಿಜಮೋಕ್ಷಸ್ವರೂಪರ ಮಹಾಬೆಳಗಿನ
ನಿಜಭಕ್ತಿಜ್ಞಾನವೈರಾಗ್ಯಾಚಾರ ಕ್ರಿಯಾನುಭಾವವೆಂಬ
ಚಿದ್ಬಿಂದುವ ಬಿತ್ತಿ, ಬೆಳೆಮಾಡಿ, ಭವಸಮುದ್ರಕ್ಕೆ ಹಡಗವ ಹಾಕಿ ದಾಂಟಿ,
ನಿಜದುನ್ಮನಿಯ ಸೇರಿ, ನಿಂದ ಹಲಾಯುಧನಂಬಿಗರ ಚೌಡಯ್ಯನ
ಘನಭಕ್ತಿದಾಸೋಹಂಭಾವ ಬೇಕು ಬೇಕು.
ಅದೇನುಕಾರಣವೆಂದಡೆ :
ಘನಕ್ಕೆ ಘನಯೋಗ್ಯ ಸದ್ರೂಪು ಸತ್ಕ್ರಿಯಾ ಸಮ್ಯಜ್ಞಾನ,
ಸದಾಚಾರಗಳ ಕಂಡು ಕಣ್ದೆರೆದು
ತನು ಉಬ್ಬಿ, ಮನ ಉಬ್ಬಿ , ಭಾವಭರಿತನಾಗಿ,
ನಿಜೋಲ್ಲಾಸದಿಂದ ಸರ್ವಾಚಾರ ಷಡುಸ್ಥಲಸಂಪತ್ತಿನ
ನಿಜಾನುಭಾವ ನಡೆನುಡಿ ದೃಢಚಿತ್ತ ಚಿದ್ಘನಲಿಂಗಲಾಂಛನಕ್ಕೆ
ಶರಣು ಶರಣಾರ್ಥಿಯೆಂದು ಸರ್ವಾಂಗಪ್ರಣುತರಾಗಿ,
ನಿರ್ವಂಚಕತ್ವದಿಂದ, ಮಹಿಮಾಪದಭಕ್ತಿಯನುಳಿದು,
ಅರ್ಥಪ್ರಾಣಾಭಿಮಾನ ಸಮರ್ಪಿಸಿದ
ಪರಿಪೂರ್ಣರಹಸ್ಯತ್ವ ಕ್ರಿಯಾಶಕ್ತಿ
ಎನ್ನಂತರಂಗದೊಡೆಯ ಪ್ರಾಣಲಿಂಗನಾಥ,
ಎನ್ನ ಬಹಿರಂಗದೊಡೆಯ ಇಷ್ಟಲಿಂಗನಾಥರಾದ
ಸಾಕಾರ ನಿರಾಕಾರದಾಚರಣೆಯ ಸಂಬಂಧ ಸತ್ಕ್ರಿಯೆ
ಸಮ್ಯಜ್ಞಾನ ಸಾಕ್ಷಿಯಾಗಿ,
ಅರ್ಪಿತವೆ ಪ್ರಭಾವಿಸಿ, ಸಂದುಸಂಶಯವಿಲ್ಲದೆ ಹೊರೆಯೇರಿ
ಸರ್ವಾಂಗ ಉಕ್ಕಿ, ಕುಂದುಕೊರತೆ ನಿಂದ್ಯಾದಿಗಳಿಗಳುಕದೆ,
ಅನಾಚಾರಕ್ಕೊಯಿರಿಯಾದ ಎನ್ನ
ಗುರುಕರುಣ ವೀರಮಾಹೇಶ್ವರಾಚಾರಕ್ಕೆ
ಮೋಹಿಸಿ ತಲೆಬಾಗಿದ ನಿಜಭಕ್ತ ಎನ್ನದೆಂಬೆ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೦ ॥

೭೨

ದೀಕ್ಷಾತ್ರಯಂಗಳಿಗೆ ಕಾರಣಕರ್ತನಾದ
ಘನಗುರುವಾಗಲಿ, ಗುರುಭಕ್ತಿಯುಳ್ಳ ಶಿಷ್ಯನಾಗಲಿ.
ಅರ್ಚನತ್ರಯಂಗಳಿಗೆ ಕಾರಣಕರ್ತ ಘನಲಿಂಗಪತಿಯಾಗಲಿ,
ಲಿಂಗಪತಿಯಭಕ್ತಿಯುಳ್ಳ ಶರಣಸತಿಯಾಗಲಿ.
ಅರ್ಪಣತ್ರಯಕ್ಕೆ ಕಾರಣಕರ್ತನಾದ

ಷಟ್‌ಸ್ಥಲಾನುಭಾವನಾಯಕ ಘನಜಂಗಮನಾಗಲಿ,
ಆ ಘನಗುರುಲಿಂಗಜಂಗಮಕ್ಕೆ ನಿರ್ವಂಚಕಭಕ್ತನಾಗಲಿ,
ಪರತತ್ವಾನುಭಾವಕ್ಕೆ ಅನರ್ಪಿತವಾದ ಅನಾಚಾರಕ್ರಿಯೆ,
ಅಜ್ಞಾನ ಅಸತ್ಯಕಾಯಕ ಅಯೋಗ್ಯಪಾತಕ ಸೂತಕ ನಡೆನುಡಿಗಳಿದ್ದರೆ,
ಒಳಹೊರಗೆನ್ನದೆ ಬೆಳಗುವ ಘನಲಿಂಗಮಂತ್ರಸಾಕ್ಷಿಯಾಗಿ,
ತ್ರಿಕರಣಾರ್ಪಣಗಳೊಳು ಘನಪಾದತೀರ್ಥಪ್ರಸಾದತ್ರಯಂಗಳ
ಸಮರಸಭೋಜನವ ಮಾಡಲೊಲ್ಲೆ,
ಅವರ ಕೂಡಲ್ಲೊಲ್ಲೆ, ಅವರ ದಯಾನಂದ ಕರುಣವ ಬೇಡಲೊಲ್ಲೆ,
ಅವರ ದರುಶನ ಸ್ಪರಿಶನ ಸಂಭಾಷಣೆಗಳ ಕೊಡಕೊಳ್ಳೆನೆಂಬುದ
ಸತ್ಯಂ ಸತ್ಯಂ ನಿತ್ಯಂ ನಿತ್ಯಂ ಯತಾರ್ಥಂ ಎಂದು
ನಿಜಮೋಕ್ಷಸ್ವರೂಪ ಪರಮಾರಾಧ್ಯ ಪರಮಾನುಭಾವನಾಯಕ
ಎನ್ನ ನಿಜಮಹದರುಮೆಂಬ ಗುರುಮಾರ್ಗ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೨ ॥

೭೩

ಆಚಾರದರುವಿನ ಕುರುಹನರಿಯದೆ,
ಅಂಗಭೋಗವಿರಹಿತನಾದ ಮಲತ್ರಯದೂರ
ಭಕ್ತಿತ್ರಯವನರಿದ ಭಕ್ತಸ್ಥಲ,
ಗುಣತ್ರಯವಳಿದುಳಿದು ದೀಕ್ಷತ್ರಯವನರಿದ ಗುರುಸ್ಥಲ,
ಜೀವತ್ರಯವಳಿದುಳಿದು ಅರ್ಚನತ್ರಯವನರಿದ ಲಿಂಗಸ್ಥಲ,
ಅಜ್ಞಾನತ್ರಯವನಳಿದುಳಿದು ಸುಜ್ಞಾನತ್ರಯವನರಿದ ಜಂಗಮಸ್ಥಲ,
ಮನತ್ರಯವಳಿದುಳಿದು ಪರಮಾನುಭಾವತ್ರಯವರಿದ ಪಾದೋದಕಸ್ಥಲ,
ಭಾವತ್ರಯವಳಿದುಳಿದು ಪರಿಪೂರ್ಣಾರ್ಪಣತ್ರಯವರಿದ ಪ್ರಸಾದಸ್ಥಲ,
ಅವಸ್ಥಾತ್ರಯವಳಿದುಳಿದು ಚಿತ್ಕಳಾತ್ರಯವರಿದ ವಿಭೂತಿಸ್ಥಲ,
ತನುತ್ರಯವಳಿದುಳಿದು ಚಿದ್ಬಿಂದುತ್ರಯವರಿದ ರುದ್ರಾಕ್ಷಿಸ್ಥಲ,
ಪ್ರಾಣತ್ರಯವಳಿದುಳಿದು ಚಿನ್ನಾದತ್ರಯವರಿದ ಮಂತ್ರಸ್ಥಲವೆಂಬ
ಇಪ್ಪತ್ತೇಳುಸ್ಥಲವೆ ಆಚರಣೆಯಾಗಿ,
ಉಳಿದ ಇಪ್ಪತ್ತನಾಲ್ಕುಸ್ಥಲವೆ ಸಂಬಂಧವಾಗಿ,
ತನ್ನಾದಿಮಧ್ಯವಸಾನವರಿದು ಮರೆದು ನಿಜದಲ್ಲಿ ನಿಂದು,
ನಿರ್ವಯಲಾದ ನಿಃಕಳಂಕರೆ ಗುರುಸಾಂಪ್ರದಾಯಕರೆಂಬೆ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೩ ॥

೭೪

ಹರಗುರುಮಾರ್ಗಾಚಾರಸಂಪದ ನಾಯಕ ಗುರುಪುತ್ರರು,
ಹರಿಯಜಸುರಮನುಮುನೀಂದ್ರಾದಿ ನರಗುರುಗಳ

ಅಂಗಭೋಗದನಾರ್ಪಿತ ಅನಾಚಾರ ಅಕ್ರಿಯೆ ಅಜ್ಞಾನ ಅಸತ್ಯಕಾಯಕ
ಅಯೋಗ್ಯ ಪಾತಕ ಸೂತಕ ಫಲಪದದ
ನಡೆನುಡಿ ಕೊಡುಕೊಳುವದೇನೂ ಬೆರಸಲಾಗದು.
ಅವಾವೆಂದಡೆ :
ಶ್ರುತಿ ಗುರುವಚನಾನುಭಾವಗಳೊಳು
ಅಲ್ಲವೆಂದುದ ಕಂಡ್ರಿಸಿ ಬಿಟ್ಟು, ನಿರಶನವ ಮಾಡಿದುದ ಮುಟ್ಟಲಾಗದು,
ಕಾಯಭ್ರಾಂತು ಮನಭ್ರಾಂತುವಿಡಿದು
ತನ್ನ ನಿಜ ತಾ ಕಾಣದೆ ಕರದಲ್ಲೊಂದು ಪಿಡಿದು,
ನುಡಿಯಲ್ಲೊಂದು ಸ್ತುತಿಸಿ, ಮನದಲ್ಲೊಂದು ನಂಬಿ ನಚ್ಚಿ ಮಚ್ಚಿ,
ಪರಾತ್ಪರವಿದೆಂದು, ಪುರಾಣ ಶ್ಮಶಾನ ಪ್ರಸೂತಿ ವೈರಾಗ್ಯದಿಂದ,
ನಿಜಭಕ್ತಜ್ಞಾನ ವೈರಾಗ್ಯದ ಕುರುಹ ತಿಳಿಯದೆ,
ಅಂದಿನ ಗಣವೆಂದು ನುಡಿದಲ್ಲಿ
ಅಂದಿನ ನಡೆನುಡಿ ದೃಢಚಿತ್ತವ ಹೋಗಲಾಡಿಸಿದವರಯೋಗ್ಯ ಅನಾಚಾರಿ
ಅಸತ್ಯರೆಂದುದು ನೋಡಾ ಗುರುವಚನ.
ನೀತಿಯ ಕೈಯಲ್ಲಿ ಪಿಡಿದು, ಅನೀತಿಯ ಪಾದದಲ್ಲಿ ಮೆಟ್ಟಿ.
ನೀತಿಯಾದ ಪಾದೋದಕ ಪ್ರಸಾದವನಿತರಲ್ಲಿ ಕೊಟ್ಟುಕೊಂಡು ಬಳಸಿ
ಅನೀತಿಯಾದನ್ನುದಕಾದಿಗಳ ಅನೀತರಲ್ಲಿ
ಸುರುಚಿಗಳಿಂದ ಕೊಟ್ಟುಕೊಂಡು ಬಳಸಿ,
ಲೌಕಿಕ ಅಲೌಕಿಕ ಸಹಜಲೌಕಿಕ ಅರ್ಥಪದಾರ್ಥ
ಪರಮಾರ್ಥದ ವಿವರ ಭೇದಿಸಿ,
ಗುರುವಚನಪ್ರಮಾಣ ಕ್ರಿಯಾಚಾರ ನಡೆನುಡಿ ದೃಢನಿಷ್ಠೆಯನರಿದು,
ತನು ಮನ ಧನ ಪುತ್ರ ಮಿತ್ರ ಕಳತ್ರ ಅರ್ಥ
ಪ್ರಾಣ ಅಭಿಮಾನ ಮನ್ನಣೆಯೆಂಬ
ಮಲತ್ರಯಪಾಶವ ಮರೆದು, ಪಿಪೀಲಿಕನಂತೆ ಬೇರಿನಲ್ಲಿರ್ದು,
ಆ ವೃಕ್ಷವನೇರಿ ಆ ಕೊನೆಯಲ್ಲಿರುವ ಫಲದ ಅಮೃತರಸವ ಸವಿದಂತೆ
ಮಹದರುವೆಂಬ ಗುರುಚರಣಕಮಲದಿರವ
ಘನಮನದೃಷ್ಟಿಯಿಂ ನೋಡಿ, ವಾಸನಂಗೈದು,
ಜ್ಞಾನಾನಂದವೆಂಬ ಪರಿಮಳ ವೇಧಿಸಿ, ಹರುಷಾನಂದವೇರಿ,
ನಿರಾವರಣ ಘನಲಿಂಗಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿಯೆಂಬ ಸರ್ವಾಚಾರವೃಕ್ಷವನೇರಿ,
ಕ್ರಿಯಾಜಪ ಜ್ಞಾನಪಜ ಮಹಾಜ್ಞಾನಜಪಮಂ
ಚಿನ್ನಾದ ಪರನಾದ ಮಹಾನಂದವನೊಳಕೊಂಡು,
ಶೋಭಿಸುವ ಹರೆಹರೆಗಳ ಹಬ್ಬಿ, ಘಟಶಕ್ತಿಯೆಂಬ ಸೆರೆಯಿಂ ಬಿಗಿದಪ್ಪಿ,
ಪರಿಪೂರ್ಣ ಹಸ್ತವ ನಿಗುಚಿ, ತ್ವಾಟಿಯಲ್ಲಿ ಬೀಜವಿಲ್ಲ,

ರೋಗವಿಲ್ಲದಂಥ ತಾನಂಜೂರ ಜ್ಯೋತಿರ್ಮಯವೆಂಬ ಹಣ್ಣು ಕಡಿದು,
ತಾನೇ ತಾನಾಗಿ, ಪರಮಾನಂದರಸವ
ಸವಿದುಂಡುಪವಾಸಿ ಬಳಸಿಬ್ರಹ್ಮವಾಗಿ,
ಇಹಲೋಕದ ಭೋಗ, ಪರಲೋಕದ ಮೋಕ್ಷಕ್ಕೆ ಹೊರಗಾಗಿ,
ನಿರಂಜನಪದ ನಿರ್ವಾಣಫಲದಾಯಕರೆ ನಿಮ್ಮ ಸುಸಂಗಿಗಳು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೪ ॥

೭೫

ಘನಗುರು ಲಿಂಗಜಂಗಮಸೂತ್ರದಿಂದ
ಕ್ರಿಯಾದೀಕ್ಷೆಯಾದಲ್ಲಿ ಶುದ್ಧಪ್ರಸಾದಸಂಬಂಧ.
ಮಂತ್ರದೀಕ್ಷೆಯಾದಲ್ಲಿ ಸಿದ್ಧಪ್ರಸಾದಸಂಬಂಧ.
ವೇಧಾದೀಕ್ಷೆಯಾದಲ್ಲಿ ಪ್ರಸಿದ್ಧಪ್ರಸಾದಸಂಬಂಧ.
ಮತ್ತಂ ಕ್ರಿಯಾದೀಕ್ಷೆಯೊಳಗಿನ ಸಪ್ತವಿಧದೀಕ್ಷೆಯಲ್ಲಿ
ಪ್ರಸಾದಿಯ ಪ್ರಸಾದಸಂಬಂಧ.
ಮಂತ್ರದೀಕ್ಷೆಯೊಳಗಿನ ಸಪ್ತವಿಧದೀಕ್ಷೆಯಲ್ಲಿ
ಪ್ರಸನ್ನಾನುಭಾವ ಪ್ರಸಾದಸಂಬಂಧ.
ವೇಧಾದೀಕ್ಷೆಯೊಳಗಿನ ಸಪ್ತವಿಧದೀಕ್ಷೆಯಾದಲ್ಲಿ
ಪರಿಪೂರ್ಣಪ್ರಸಾದಸಂಬಂಧ.
ಇಂತಪ್ಪ ದೀಕ್ಷೋಪದೇಶದಿಂದ ತ್ರಿವಿಧ ಗುರುಲಿಂಗಜಂಗಮ
ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ
ಮಂತ್ರಾಚಾರ ಕ್ರಿಯಾನುಭಾವ
ಜ್ಞಾನೋಪದೇಶವರಿದಾನಂದದಿಂದ ಕೊಡಕೊಳ್ಳಬಲ್ಲಾತನೆ
ಪೂಜ್ಯಸ್ವರೂಪ ಸಚ್ಚಿದಾನಂದ ಸಾಕಾರಲಿಂಗ ಶರಣನೆಂಬೆ ನೋಡಾ. ಇಂತೆಸೆವ
ಲಿಂಗಶರಣನ ನಿಜನಿಲವನರಿದರ್ಚಿಸಿ ಕೊಡಕೊಳ್ಳಬಲ್ಲಾತನೆ
ಪೂಜ್ಯಕಸ್ವರೂಪ ಸಚ್ಚಿದಾನಂದ ನಿಃಕಳಂಕ
ನಿಃಶೂನ್ಯನಿರಂಜನ ನಿರವಯಪ್ರಭು
ನಿರಾಕಾರ ಶರಣಲಿಂಗನೆಂಬೆ ನೋಡಾ.
ಇಂತೆಸೆವ ಸಾಕಾರಲಿಂಗ ಶರಣನಾಚರಣೆಸಂಬಂಧ
ನಿರಾಕಾರ ಶರಣಲಿಂಗಸಂಬಂಧದಾಚರಣೆಯ ನಿಲವ ತಿಳಿಯದೆ,
ನಾನು ಷಟ್‌ಸ್ಥಲೋಪದೇಶಿ, ನೀನು ಷಟ್‌ಸ್ಥಲೋಪದೇಶಿಗಳೆಂದು ಒಪ್ಪವಿಟ್ಟು
ನುಡಿವ ನುಡಿಜಾಣರ ಕಂಡು,
ಎನ್ನ ತನು ಮನ ಭಾವದ ಕೊನೆಮೊನೆಯಲ್ಲಿ ಬೆಳಗುವ
ನಿಜಘನಜ್ಯೋತಿ ನಾಚಿ ಬಯಲಾಯಿತ್ತು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೫ ॥

೭೬

ಅನಾದಿ ಪ್ರಮಥಗಣ ನಿಜೋಪದೇಶ
ಪ್ರಸನ್ನ ಪ್ರಸಾದಾಚಾರ ನಡೆನುಡಿಸಂಬಂಧಗಳಾಚರಣೆಗಳ ಬಳಿವಿಡಿದು,
ಮುಕ್ತಿಸ್ವರೂಪರಾದ ಘನಗುರುಚರಮೂರ್ತಿಗಳು,
ಪ್ರಥಮದಲ್ಲಿ ಗುರುಕರುಣ ಲಿಂಗಧಾರಣಸ್ಥಲವಳವಟ್ಟು,
ಲಿಂಗನಡೆ ಲಿಂಗನುಡಿಯಾಗಿ,
ಪಾತಕಸೂತಕವಳಿದುಳಿದು ನಿಜೋತ್ತಮಂಗೆ
ಕ್ರಿಯೋಪದೇಶದಿಂದ ಶುದ್ಧಪ್ರಸಾದವ ಕೊಟ್ಟು,
ಮಂತ್ರೋಪದೇಶದಿಂದ ಸಿದ್ಧಪ್ರಸಾದವ ಕೊಟ್ಟು,
ವೇದೋಪದೇಶದಿಂದ ಪ್ರಸಿದ್ಧಪ್ರಸಾದವ ಕೊಟ್ಟು,
ಇವ ಮೂರು ಸ್ಥಲವಿದ್ದವರಲ್ಲಿ ಕೊಳಬಲ್ಲಾತನೆ
ಅನಾದಿಪ್ರಮಥಗಣ ಗುರುಮಾರ್ಗಿಕರೆನಿಸುವರು ನೋಡಾ.
ಇವರನರಿಯದ ಕ್ರಿಯಾದೀಕ್ಷೆ, ಶುದ್ಧಪ್ರಸಾದದೀಕ್ಷೆ,
ಪಾದೋದಕ ಮಂತ್ರದೀಕ್ಷೆ,
ಸಿದ್ಧಪ್ರಸಾದ ಶಿಕ್ಷಾಪಾದೋದಕದಿರವನರಿಯದೆ
ತನುಶುದ್ಧ ಮನಸಿದ್ಧವಿಲ್ಲದೆ,
ವೇಧಾದೀಕ್ಷೋಪದೇಶ ಪ್ರಸಿದ್ಧಪ್ರಸಾದ ಜ್ಞಾನಪಾದೋದಕದಲ್ಲಿ
ಸಮರಸನಾಚರಿಸುವಾತನ ಯೋಗ್ಯನೆಂಬೆ ನೋಡಾ.
ಪ್ರಸಿದ್ಧ ಪಾದೋದಕ ಪ್ರಸಾದ ಮಂತ್ರವರಿಯದ
ಲಿಂಗಲಾಂಛನಧಾರಿಗಳಿಂದ ಷಟ್‌ಸ್ಥಲಬ್ರಹ್ಮೋಪದೇಶ ಪಡೆದರೆಂದು,
ಭಕ್ತನಾಗಿ, ಹತ್ತುಹನ್ನೊಂದರ ಪ್ರಸಾದಿಗಳೆಂದು,
ಸತ್ಕ್ರಿಯೆ ಸಮ್ಯಜ್ಞಾನಾಚಾರದ ಇರವನರಿಯದೆ,
ಸಮರಸದ ಕ್ರಿಯೆಗಳ ಬಳಸಿ
ಉದರವ ಹೊರೆವಾತನಯೋಗ್ಯ ನೆಂಬೆನು ನೋಡಾ.
ಮಲಮೂತ್ರ ವಿಸರ್ಜಿಸಿ, ಸ್ನಾನವಿಲ್ಲದೆ,
ಅನ್ನುದಕ ಹಣ್ಣುಫಲಾದಿ ಕಬ್ಬು ಕಡಲೆಗಳೆಂದು
ಕೈಗೆಬಂದಂತೆ ತಿಂದು ತೇಗಿ,
ಪ್ರಸಾದಿಯೆಂದು, ತೀರ್ಥವ ಸಲಿಸಿ, ಪ್ರಸಾದವ ಮರೆದೆನೆಂದು ಮತ್ತೆ
ತೀರ್ಥಪ್ರಸಾದವೆಂದು ಕೊಡುಕೊಂಬರಿವರು.
ಚಿದ್ಘನಲಿಂಗಾಂಗಸಂಗವೇ
ಪರಿಪೂರ್ಣಾನಂದ ತೀರ್ಥಪ್ರಸಾದವೆಂದರಿಯದವರು,
ಬಿಂದು ಚಿದ್ಬಿಂದು ಪರಬಿಂದುವ
ಅಯೋಗ್ಯಪರಮುಖದಲ್ಲಿ ಚೆಲ್ಲಾಡುವವರು,
ಚರ್ಮಾಸನ ಚರ್ಮದಲ್ಲಿಟ್ಟಂಥ ರಸದ್ರವ್ಯ

ಲಿಂಗಾಭಿಷೇಕ ಪಾದಾಭಿಷೇಕ ಪಂಚಾಮೃತ
ಪಂಚಕಜ್ಜಾಯ ಪರಮಾನ್ನ ಫಲಹಾರವೆಂದು ಆಡಂಬರವ ಹರಹಿ,
ಲಿಂಗಾರ್ಚನೆ ನೈವೇದ್ಯ ಪಾದಪೂಜೆಯ ನೈವೇದ್ಯಭುಂಜಿಸಿ,
ಮತ್ತೆ ನಾಚಿಕೆಯಿಲ್ಲದೆ ಭಕ್ತ ಜಂಗಮ ಪ್ರಸಾದಿಗಳೆಂಬವರು,
ಹೋಮ ನೇಮ ಭಸ್ಮ ಯಜ್ಞಾದಿ ಕೃತ್ಯವ ಮಾಡಿ
ಅಮಲು ಮೊದಲಾದ ಲಾಹರಿಭುಂಜಕರು,
ಮಂತ್ರತಂತ್ರಯಂತ್ರ ಶಕುನ ವೈದ್ಯಗಾರರು,
ದ್ವಿನೇತ್ರ ಪ್ರಕಾಶದೊಳಗಣ ಕುರುಗಿನರುಹನರಿಯದವರು,
ಅಪಾದಮಸ್ತಕ ಪರಿಯಂತರ ಸತ್ಪ್ರಾಣೆಸಿಕೊಂಡಿರ್ಪ ನಿಜವನರಿಯದವರು.
ಗುರುಚರಪರಗಣ ಸನ್ಮಾನಿಗಳ ಆಜ್ಞೆಯ ಮೀರಿ
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ ಬಾಹ್ಯರೆಂಜಲ
ನುಡಿನಡೆಯ ವ್ಯವಹಾರಿಗಳ ಯೋಗ್ಯರಯೋಗ್ಯರೆಂದು
ಗಣಸಾಕ್ಷಿಯಾಗಿ ಗುರುನಿರೂಪಣದಿಂದ
ಡಂಗುರವ ಸಾರಿದೆ ಸಾರಿದೆ ಸಾರಿದೆ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೬ ॥

೭೭

ಅನಾದಿಪ್ರಮಥಗಣದಿರವನರಿದು,
ಸತ್ಯಶುದ್ಧ ನಡೆನುಡಿದೃಢಚಿತ್ತರಾಗಿ,
ಇಹ ಪರ ಭೋಗಯೋಗದ ಬಯಕೆಯ ನೀಗಿ,
ನಿರವಯಲ ಸೇರಿ, ನಿತ್ಯಮುಕ್ತರಾಗಬೇಕಾದ
ಭಕ್ತ ಜಂಗಮ ಗುರುಲಿಂಗಕ್ಕೆ
ಆಚಾರವೆ ಗುರು, ಆಚಾರವೆ ಲಿಂಗ, ಆಚಾರವೆ ಜಂಗಮ,
ಆಚಾರವೆ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ,
ಭಕ್ತಗಣಪ್ರಸಾದಿ ಶರಣೈಕ್ಯರೆಂಬುದು ಗುರುವಚನ;
ಅದು ಕಾರಣವಾಗಿ, ಆಚಾರದ ಕುರುಹ ತಿಳಿದು,
ಆಚರಿಸಿ, ಸಂಬಂಧವಿಟ್ಟು, ತನ್ನ ತಾನಾಗಬಹುದಲ್ಲದೆ,
ಆಚಾರವನುಲ್ಲಂಘಿಸಿ, ಆಚಾರವ ಬಿಟ್ಟು,
ಅನಾಚಾರಸಂಗಸಮರತಿಯ ಬಳಸಿದೊಡೆ
ತನ್ನ ತಾನಾಗಬಾರದೆಂಬುದು ಹರಗುರುವಾಕ್ಯವು.
ಇದ ತಿಳಿದ ಮಹಾಂತರು, ಆಚಾರವನಾಚರಿಸಬೇಕು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೭ ॥

೭೮

ಅನಾದಿಪ್ರಮಥಗಣ ಸನ್ಮಾನಿಗಳಾವವರ ಹೊಂದಿ ಹೊರೆವ
ಪಿತ–ಮಾತೆ, ಸತಿ–ಸುತ, ಸಹೋದರ–ನಂಟರು ಮೊದಲಾದವರಿಗೆ

ಸಲುವಂಥ ಪಂಚಾಚಾರದಿರವಿನ ಸೂತ್ರ.
ಹರನಿರೂಪಣ ಸಾಕ್ಷಿ :
''ಗುರುಲಿಂಗಜಂಗಮಶ್ಚೈವ ಪ್ರಸಾದಂ ಪಾದವಾರಿ ಚ ।
ಲಿಂಗಬಾಹ್ಯಾನ್ನಜಾಸಾತಿ ಅಣುಮಾತ್ರಂ ಚ ಕಾರಯೇತ್ ॥
ಲಿಂಗಾಚಾರಸ್ಸದಾಚಾರಃ ಶಿವಾಚಾರಸ್ತಥೈವ ಚ ।
ಗಣಾಚಾರಃ ಭೃತ್ಯಾಚಾರೋ ಪಂಚಾಚಾರಾಃ ಪ್ರಕೀರ್ತಿತಾಃ ॥''
ತವಮ್ಮಾಚಾರ ಗೃಹದಲ್ಲಿ ಕ್ರಿಯಾಭಾಂಡಂಗಳೊಳಗೆ
ಶುಚಿರುಚಿಯಿಂದ ಗುರುಲಿಂಗಜಂಗಮಾರ್ಪಣಕ್ಕೆಂದು
ಭಾವಭರಿತವಾಗಿ ಶೋಧಕತ್ವದಿಂದ ಮಂತ್ರಸ್ಮರಣೆಯಿಂದ
ಪಾಕಂಗೈದು, ಮಧುರ ಒಗರು ಖಾರ ಆಮ್ಲ ಕಹಿ ಲವಣ ಮೊದಲಾದ
ಷಡ್ರಸದ್ರವ್ಯಗಳ ಇಷ್ಟಲಿಂಗ ಬಾಹ್ಯರಿಗೆ ಹಾಕಲಾಗದು.
ಅವರ ಕಣ್ಣಿಗೆ ದರ್ಶನದಿಂದ ಪಾಕದ ಭಾಂಡಗಳ ಕಾಣಗೊಡಲಾಗದು.
ಅವರ ಸಂಭಾಷಣೆಗಳಿಂದ ಪಾಕವ ಮಾಡಲಾಗದು.
ಭಕ್ತಲಿಂಗಜಂಗಮಕ್ಕೆ ಸಂಭಾಷಣೆಯಿಂದ ನೀಡಲಾಗದು.
ತನ್ನ ಶ್ರೀಗುರು ಕರುಣಿಸಿದ ಲಿಂಗದೇವನ ನಿಮಿಷಾರ್ಧವಗಲಿರಲಾಗದು.
ಆ ಲಿಂಗವಲ್ಲದೆ ಅನ್ಯವಾಗಿ ಭೂಪ್ರತಿಷ್ಠಾದಿಗಳ ನೆನೆಯಲಾಗದು,
ಅರ್ಚಿಸಲಾಗದು, ವಂದಿಸಲಾಗದು.
ಜಡನೇಮವ್ರತ ತಿಥಿ ಉಪವಾಸಗಳ ಮಾಡಲಾಗದು.
ದೇಹ ದಂಡಿಸಿದೊಂದು ಕಾಯಕ
ಬೇಡಿತಂದುದೊಂದು ಕಾಯಕವಲ್ಲದೆ
ಅಕೃತ್ಯದಿಂದ ಕಿರಾತರಂತೆ ಗಳಿಕೆಗೊಳಗಾಗಲಾಗದು.
ಶಿವಲಿಂಗಲಾಂಛನಕ್ಕೆ ಅನ್ನುದಕಾದಿವಸ್ತ್ರಪಾವುಡಗಳ
ವಂಚಿಸಿ ವಿಷಯವ್ಯಸನಿಗಳಾಗಲಾಗದು.
ಆಚಾರ್ಯಬಾಹ್ಯವಾದ ನೀಚಾಶ್ರಯಗಳಲ್ಲಿರಲಾಗದು.
ಆಚಾರಬಾಹ್ಯರ ಸಮರಸಕ್ರಿಯಗಳ ಬಳಸಲಾಗದು.
ಸದಾಚಾರ ಭಕ್ತಗಣ ಗುರುಲಿಂಗಜಂಗಮಕ್ಕೆ
ರಾಗದ್ವೇಷದಿಂದ ಗರ್ವಿಸಿ ನುಡಿಯಲಾಗದು.
ಸರ್ವರು ಒಂದೊಡಲಾಗಿ. ಲಿಂಗನಡೆ, ಲಿಂಗನುಡಿ, ದೃಢಚಿತ್ತದಿಂದ
ಸರ್ವಭೋಗವ ನೀಗಿ, ಪಂಚಾಚಾರಬ್ರಹ್ಮವಾಗಿ,
ಆರುವೈರಿಗಳಡಿಮೆಟ್ಟಿನಿಂದ ನಿಜೋತ್ತಮರಿದೀಗ
ತಮ್ಮ ತನುಸಂಬಂಧವಾದ ನಿಜಾಲಯಕ್ಕೆ
ಯೋಗ್ಯವಾದ ಪಂಚಾಚಾರದಿರವು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೭೮ ॥

೭೯

ಅನಾದಿ ಪ್ರಮಥಗಣನಾಯಕ ಶ್ರೀಗುರುಕರಜಾತ
ತ್ರಿವಿಧೋದಕ ತ್ರಿವಿಧಪ್ರಸಾದಸ್ಥಲಸಂಬಂಧೋಪದೇಶ
ಆಚಾರಭಕ್ತಗಣಾರಾಧ್ಯರಿಗೆ ಯೋಗ್ಯವುಳ್ಳ,
ಆಚರಣೆಯೆ ಪ್ರಾಣವಾದ ತ್ರಿವಿಧಾಚಾರ ಸೂತ್ರವದಕ್ಕೆ.
ಹರನಿರೂಪಣ ಸಾಕ್ಷಿ :
''ಕ್ರಿಯಾಚಾರೋ ಜ್ಞಾನಾಚಾರಃ ಭಾವಾಚಾರಸ್ತಥೈವ ಚ ।
ಸದಾ ಸನ್ಮಾರ್ಗಸಂಪೂಜ್ಯಂ ಆಚಾರಾಂಗಂ ಪ್ರಕೀರ್ತಿತಂ॥''
ಸರ್ವೇಂದ್ರಿಗಳಲ್ಲಿ ಆಹ್ವಾನಿಸುವ ಪರಿಣಾಮವೆಲ್ಲ
ತ್ರಿಯಕ್ಷರಮೂರ್ತಿ ಇಷ್ಟಲಿಂಗದ ಸೊಮ್ಮು ಸಂತೋಷವೆಂದರಿದು.
ವಿಸರ್ಜಿಸುವ ಪರಿಣಾಮವೆಲ್ಲ ಪಂಚಾಕ್ಷರಮೂರ್ತಿ
ಪ್ರಾಣಲಿಂಗದ ಸೊಮ್ಮು ಸಂತೋಷವೆಂದರಿದು,
ಈ ಎರಡರ ಪರಿಣಾಮವೆಲ್ಲ ಷಡಕ್ಷರಮೂರ್ತಿ
ಭಾವಲಿಂಗದ ಸೊಮ್ಮು ಸಂತೋಷವೆಂದರಿದು.
ತ್ರಿವಿಧಾಚಾರಲಿಂಗಮೂರ್ತಿ ತಾನೇ ತಾನಾಗಿ,
ಜಾಗ್ರದಿಂದ ಕ್ರಿಯಾಘನಗುರುವಚನ ಪ್ರಮಾಣಸಾಕ್ಷಿಯಿಂದ,
ಗುದ ಗುಹ್ಯದ ವಿಸರ್ಜನೆಗಳ ಬಿಡುಗಡೆಯ
ಪರಿಣಾಮ ಪ್ರಕ್ಷಾಲ್ಯವೆ ಸಮ್ಯಜ್ಞಾನಾನಂದವಾಗಿ,
ನಾಸಿಕ ಜಿಹ್ವೆಯ ವಿಸರ್ಜನೆಗಳ ಬಿಡುಗಡೆಯ
ಪರಿಣಾಮ ಪ್ರಕ್ಷಾಲ್ಯವೆ ಸತ್ಕ್ರಿಯಾನಂದವಾಗಿ,
ಇಷ್ಟಲಿಂಗಜಂಗಮದಾರ್ಚನೆಯರ್ಪಿತವಧಾನನುಭಾವಸುಖ ಸಮರತಿ
ವಿಲಾಸದ ಪರಿಣಾಮದಾಹ್ವಾನವೆ ಸಮ್ಯಜ್ಞಾನಾನಂದವಾಗಿ,
ಗುದಗುಹ್ಯಗಳೆರಡು ಕ್ರಿಯಾಶಕ್ತಿ ಜ್ಞಾನಶಕ್ತಿಸ್ವರೂಪವೆನಿಸಿ,
ಪ್ರಮಥಗಣ ಒಪ್ಪಿ ಸೊಪ್ಪಡಗಿದ
ನಿಃಪತಿಯನೈದುವದೆ ಮುಕ್ತಿಸ್ವರೂಪವು.
ಇಷ್ಟಲಿಂಗ ಜಂಗಮರೊಪ್ಪಿತದ ಸುಗಂಧ
ಸುರಸದ್ರವ್ಯಗಳ ಪವಿತ್ರಮುಖವನರಿದು,
ಮಂತ್ರಾಹ್ವಾನದ ನಿಜನಿಷ್ಠೆಯಗಲದೆ,
ಅಲ್ಲಿ ತಟ್ಟಿಮುಟ್ಟುವ ಕಾಯದ ಕೈಯ
ಸುಚಿತ್ತ ಸುಬುದ್ಧಿಯ ಪರಿಣಾಮವೆಲ್ಲ ಸತ್ಕ್ರಿಯಾನಂದವಾಗಿ,
ಇವು ನಾಲ್ಕು ಇಷ್ಟಲಿಂಗಾಲಯವೆಂದರಿದು,
ಗುರುಪೀಠದಾಧಾರ ಸ್ವಾಧಿಷ್ಠಾನದ
ಕ್ರಿಯಾಚಾರದ ಮನ ಕಾಣಿರಣ್ಣಗಳಿರಾ.
ಅಲ್ಲಿಂದ ಪಾದ ಪಾಣಿಗಳ ತಟ್ಟುಮುಟ್ಟಿನ ವಿಸರ್ಜನೆಗಳ

ಪ್ರಕ್ಷಾಲ್ಯದ ಪರಿಣಾಮವೆ ಸಮ್ಯಜ್ಞಾನಾನಂದವಾಗಿ,
ನೇತ್ರ ತ್ವಗೇಂದ್ರಿಯದ ವಿಸರ್ಜನೆಗಳ ಪ್ರಕ್ಷಾಲ್ಯದ ಪರಿಣಾಮವೆ
ಸತ್ಕ್ರಿಯಾನಂದವಾಗಿ,
ಪಾದ ಪಾಣಿಗಳೆರಡು ಇಚ್ಛಾಶಕ್ತಿ ಆದಿಶಕ್ತಿಸ್ವರೂಪವೆನಿಸಿ,
ಪ್ರಮಥಗಣ ಒಪ್ಪಿ ಪರಮಾನಂದವನೈದುವುದೆ ಮುಕ್ತಿಸ್ವರೂಪವು.
ಇಷ್ಟಲಿಂಗ ಜಂಗಮಾರೋಪಿತದ
ಸುರೂಪು ಸುಸ್ಪರಿಶನದ್ರವ್ಯಗಳ ಪವಿತ್ರಮುಖವನರಿದು,
ನಿಜದೃಷ್ಟಿ ಮಂತ್ರಾಧ್ಯಾನದ ಪರಿಪೂರ್ಣನೈಷ್ಠೆಯಗಲದೆ,
ಅಲ್ಲಿ ತಟ್ಟು ಮುಟ್ಟುವ ಕಾಯಕದ ಕೈಯ
ನಿರಹಂಕಾರ ಸುಮನದ ಪರಿಣಾಮವೆಲ್ಲ ಸತ್ಕ್ರಿಯಾನಂದವಾಗಿ,
ಇವು ನಾಲ್ಕು ಪ್ರಾಣಲಿಂಗಾಲಯವೆಂದರಿದು,
ಚರಪೀಠದ ಮಣಿಪೂರಕನಾಹತದ
ಜ್ಞಾನಾಚಾರದ ಮನೆಯ ಕಾಣಿರಣ್ಣಗಳಿರಾ.
ಅಲ್ಲಿಂದ ವಾಕು ಪಾಯುವಿನ ದುಃಕೃತದ
ತಟ್ಟುಮುಟ್ಟಿನ ವಿಸರ್ಜನಗಳ ಪರಮಾನಂದ ಜಿಜ್ಞಲದಿಂ
ಪ್ರಕ್ಷಾಲ್ಯದ ಪರಿಣಾಮವೆ ಸಮ್ಯಜ್ಞಾನಾನಂದವಾಗಿ,
ಶ್ರೋತ್ರದ ಶಬ್ದದ ದುಃಕೃತ್ಯದ ತಟ್ಟುಮುಟ್ಟಿನ
ವಿಸರ್ಜನೆಗಳ ಪರಿಪೂರ್ಣಾನಂದಜಲದಿಂ
ಪ್ರಕ್ಷಾಲ್ಯದ ಪರಿಣಾಮವೆ ಸತ್ಕ್ರಿಯಾನಂದವಾಗಿ,
ವಾಕು ಪಾಯುಗಳೆರಡು ಪರಶಕ್ತಿ ಚಿಚ್ಛಕ್ತಿ ಸ್ವರೂಪವೆನಿಸಿ,
ಪ್ರಮಥಗಣ ಒಪ್ಪಿ, ಪರಮಾನಂದವನೈದುವುದೆ ಮುಕ್ತಿಸ್ವರೂಪವು.
ಇಷ್ಟಲಿಂಗ ಜಂಗಮಾರೋಪಿತದ
ಸುಶಬ್ದ ಸುತೃಪ್ತಿದ್ರವ್ಯಗಳ ಪವಿತ್ರಮುಖವನರಿದು,
ಪರನಾದ ಬಿಂದು ಕಳೆಗಳ ಮಂತ್ರಜ್ಞಾನದ ಪರಿಪೂರ್ಣನೈಷ್ಠೆಯಗಲದೆ,
ಅಲ್ಲಿ ತಟ್ಟುಮುಟ್ಟುವ ಕಾಯದ ಕೈಯಲ್ಲಿ
ಸುಜ್ಞಾನ ಸದ್ಭಾವದ ಪರಿಣಾಮವೆಲ್ಲ ಸತ್ಕ್ರಿಯಾನಂದವಾಗಿ,
ಇವು ನಾಲ್ಕು ಭಾವಲಿಂಗಾಲಯವೆಂದರಿದು,
ಪರಪೀಠದ ವಿಶುದ್ಧಿ ಆಜ್ಞಾಮಂಟಪ ಶೂನ್ಯಸಿಂಹಾಸನದ
ಭಾವದಾಚಾರದ ಮನೆ ಕಾಣಿರಣ್ಣಗಳಿರಾ.
ಇಂತೆಸವ ತ್ರಿವಿಧಾಚಾರಸಂಪನ್ನರ ಕೂಡೊಂದೂಡಲಾಗಿ,
ಮನದ ಮಾಯಾಪಾಶವ ಕಡಿದು ಕಂಡ್ರಿಸುತ್ತ,
ತಮ್ಮ ತಾವರಿದು, ನಡನುಡಿ ಒಂದಾಗಿ,
ಮಾಯಾಭೋಗಾಪೇಕ್ಷೆಯ ನೆರೆ ನೀಗಿ, ತ್ರಿವಿಧಾಚಾರಬ್ರಹ್ಮವಾಗಿ,
ತ್ರಿಗುಣಗಳಡಿಮೆಟ್ಟಿ, ನಿಂದ ನಿಜೋತ್ತಮರಿಗಿದೀಗ

ತಮ್ಮ ಮನಸಂಬಂಧವಾದ ನಿಜಾಲಯಕ್ಕೆ
ಯೋಗ್ಯವಾದ ತ್ರಿವಿಧಾಚಾರದಿರವು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೭೯ ||

೮೦

ಅನಾದಿಪ್ರಮಥಗಣನಾಯಕ ಪರಮಾರಾಧ್ಯ
ಶ್ರೀಗುರುಕರಜಾತ ಏಕವಿಂಶೋಪದೇಶ
ಷಟ್ಪ್ರಸಾದ ಪಾದೋದಕ ಮಂತ್ರಸ್ವರೂಪ ಷಟ್ಸ್ಥಲಸಂಬಂಧವಾದ
ಭಕ್ತ ಮಹೇಶ ಗಣಾರಾಧ್ಯರಿಗೆ ಯೋಗ್ಯವುಳ್ಳ
ತ್ರಿವಿಧಾಚಾರಸಂಬಂಧವೆ ಪ್ರಾಣವಾದ ಸೂತ್ರವದಕ್ಕೆ
ಹರನಿರೂಪಣ ಸಾಕ್ಷಿ:
'ಸತ್ಯಾಚಾರಂ ನಿತ್ಯಾಚಾರಂ ಧರ್ಮಾಚಾರಂ ವರಾನನೆ'
ಎಂದುದಾಗಿ,
ಜಾಗ್ರಾವಸ್ಥೆಯ ವಿಶ್ವಪ್ರಪಂಚಿನ ಶಿವಾತ್ಮನ
ಪಾಶಬದ್ಧನಡೆನುಡಿಗಳ ಹೊದ್ದಲೀಯದೆ,
ಕೇವಲ ಗುರುವಾಕ್ಯಪ್ರಮಾಣವಾಗಿ,
ಪೂರ್ವಪುರಾತನೋಕ್ತಿ ವಚನಸಾರಾಮೃತವಿಡಿದು,
ಇಷ್ಟಲಿಂಗದೊಳಗಣ ನವಲಿಂಗಮಂ ಭೇದಿಸಿ,
ಸತ್ಕ್ರಿಯೆ ಸಮ್ಯಜ್ಞಾನ ಸದ್ಭಾವವಿಡಿದು,
ಸತ್ಕ್ರಿಯಾಜಪೋಪದೇಶ ಸಮ್ಯಜ್ಞಾನಜಪೋಪದೇಶ
ಮಹಾಜ್ಞಾನಜಪೋಪದೇಶ ಪರಿಪೂರ್ಣಜ್ಞಾನಜಪೋದೇಶದ
ಮಹಾಬೆಳಗನರಿದು,
ಫಲಪದದಾಯುಷ್ಯದ ಭೋಗಯೋಗವಂ ನೆರೆ ನೀಗಿ,
ಸತ್ಕ್ರಿಯೆ ಘನಗುರುಲಿಂಗಜಂಗಮದ
ಕೃಪಾನಂದದ ನಿರಾಸೆ ನಿರ್ಲಜ್ಜ ನಿರ್ವಿಷಯ ನಿರ್ಮೋಹ
ನಿರಾಪೇಕ್ಷ ನಿರ್ದೇಶ ನಿರಾಶ್ರಯ ನಿರವಯಬ್ರಹ್ಮದ ನಿರಾವರಣನಾಗಿ,
ತನ್ನ ತಾನರ್ಚಿಸಿ ಕೊಡುವಲ್ಲಿ ಕೊಂಬಲ್ಲಿ ನುಡಿವಲ್ಲಿ ನಡೆವಲ್ಲಿ
ಕೈ ಎರಡಾಗದೆ, ನುಡಿ ಎರಡಾಗದೆ,
ಪಾದವಚನಾನಂದದಿಂದ ಶೀಲವ್ರತಾಚಾರ
ನಿತ್ಯನೇಮಂಗಳಲ್ಲಿ ಅಭಿನ್ನಸ್ವರೂಪರಾಗಿ,
ಯಥಾರ್ಥದಿಂದ ಇಹಪರಲೋಕದ
ಭೋಗಮೋಕ್ಷಾಪೇಕ್ಷ ಹೊದ್ದದಿರ್ಪುದೆ
ಮಾರ್ಗಾಚರಣೆಯ ಸತ್ಯದಾಚಾರದಿರವಿನ
ಇಷ್ಟಲಿಂಗ ತಾನ ನೋಡಿರಣ್ಣಗಳಿರಾ.

ಅಲ್ಲಿಂದ ಸ್ವಪ್ನಾವಸ್ಥೆಯ ತೈಜಸನ ಪ್ರಪಂಚಿನ ಅಂತರಾತ್ಮನ
ಪಾಶಬದ್ಧ ನಡೆನುಡಿಗಳಂ ಹೊದ್ದಲೀಯದೆ,
ಕೇವಲ ಘನಲಿಂಗವಾಕ್ಯ ಪ್ರಮಾಣವಾಗಿ,
ಪೂರ್ವಪುರಾತನೋಕ್ತಿ ವಚನ ಸಾರಾಮೃತವಿಡಿದು,
ಪ್ರಾಣಲಿಂಗದೊಳಗಣ ನವಲಿಂಗಮಂ ಭೇದಿಸಿ,
ಮಹಾಮಂತ್ರದ ಚಿದ್ಬೆಳಗನರಿದು, ಮಹಾಬೆಳಗಾಗಿ,
ಸುಳಿಗಾಳಿಯಂತೆ ಲಿಂಗಪ್ರದಕ್ಷಿಣದಿಂದ ಸುಳಿದಾಡಿ,
ಪ್ರದಕ್ಷಿಣಮಂ ಮಾಡುತ್ತ, ಹರಗಣ ಸಮ್ಮೇಳಮಂ ಕೂಡಿಕೊಂಡಾಡುತ್ತಂ,
ಭವರೋಗವೈದ್ಯರಾಗಿರ್ಪುದೆ ನಿತ್ಯಾಚಾರದಿರವಿನ
ಪ್ರಾಣಲಿಂಗಸಂಧಾನದ ಮೀರಿದಾಚರಣೆಯ ಚಿದ್ಬ್ರಹ್ಮಮೂರ್ತಿ
ಮಹಾಘನ ಪ್ರಾಣಲಿಂಗ ತಾನೆ ನೋಡಿರಣ್ಣಗಳಿರಾ.
ಅಲ್ಲಿಂದಂ ಸುಷುಪ್ತ ತೂರ್ಯ ತೂರ್ಯಾತೀತ ನಿರವಯನೆಂಬ
ಪ್ರಜ್ಞಾಪರಿಪೂರ್ಣ ಪರಾತ್ಪರ ನಿರಾತಂಕನ ಪ್ರಪಂಚಿನ
ಪರಮಾತ್ಮ ನಿರ್ಮಲಾತ್ಮ ಶುದ್ಧಾತ್ಮ ಆನಂದಾತ್ಮನ
ನಟನಾಟಕ ಕಪಟವೇಷಮಂ ಹೊದ್ದಲೀಯದ,
ಕೇವಲ ಪರಿಪೂರ್ಣಾನಂದ ಜ್ಯೋತಿರ್ಮಯನಚಲಾನಂದ
ನಿಃಶಬ್ದ ಚಿದ್ಬ್ರಹ್ಮಮಂ ಕೂಡಿ,
ಭಿನ್ನಭಾವವಿಲ್ಲದೆ, ತಾನೇ ತಾನಾಗಿ,
ಸಕಲನಿರಾಕಾರ ಜಾಗ್ರಸ್ವಪ್ನ ತನುಮನದ
ಅಭೀಷ್ಟಾದಿಗಳಿಗೆ ಚೈತನ್ಯ ತಾನಾಗಿ,
ತನಗೊಂದು ಸುಖ–ದುಃಖ, ಪುಣ್ಯ–ಪಾಪ,
ಸ್ತುತಿ–ನಿಂದ್ಯಾದಿಗಳ ಹೊದ್ದಿಗೆಯಿಲ್ಲದೆ,
ಬೆಳಗಿಂಗೆ ಮಹಾಬೆಳಗಾಗಿ, ಬಯಲೊಳಗೆ ಮಹಾಬಯಲಾಗಿರ್ಪುದೆ
ಭಾವಲಿಂಗಸಂಧಾನದ ಪರಿಪೂರ್ಣಾಚರಣೆಯ
ಸದ್ಧರ್ಮದಾಚಾರದಿರವು ಕಾಣಿರಣ್ಣಗಳಿರಾ.
ಇಂತೆಸೆವ ಜಾಗ್ರಾವಸ್ಥೆಯೆ ಸಾಕಾರವಾದ ಇಷ್ಟಲಿಂಗವಾಗಿ,
ಸ್ವಪ್ನಾವಸ್ಥೆಯೆ ನಿರಾಕಾರವಾದ ಪ್ರಾಣಲಿಂಗವಾಗಿ,
ಸುಷುಪ್ತಾವಸ್ಥೆಯೆ ನಿರವಯವಾದ ಭಾವಲಿಂಗವಾಗಿ
ಈ ತ್ರಿವಿಧಲಿಂಗಸ್ವರೂಪನೆ ಶರಣ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೮೦ ॥

೮೧

ಸರ್ವಾಂಗಲಿಂಗಸಂಬಂಧವಾದ ಶಿವಯೋಗೀಶ್ವರರು
ವೈರಿಗಳಡಿಮೆಟ್ಟಿ, ಷಡೂರ್ಮಿ, ಷಡ್ಭ್ರಮೆ,

ಷಡ್ಭಾವವಿಕಾರಮಂ ಕಡೆಗೊದೆದು,
ಷಟ್‌ಸ್ಥಲಮಾರ್ಗದಲ್ಲಿ ನೆರೆನಂಬಿ,
ಅಷ್ಟಾವರಣದವಧಾನದಿಂದ ಪಾವನಾರ್ಥವಾಗಿ
ತನುವಿನಲ್ಲಿ ಸದ್ರೂಪವಾದ ಗುರು,
ಮನದಲ್ಲಿ ಚಿದ್ರೂಪವಾದ ಲಿಂಗ,
ಭಾವದಲ್ಲಿ ಆನಂದಸ್ವರೂಪವಾದ ಜಂಗಮ,
ಜಿಹ್ವಾಗ್ರದಲ್ಲಿ ನಿತ್ಯವಾದ ಪಾದೋದಕ,
ನಾಸಿಕದಲ್ಲಿ ಪರಿಪೂರ್ಣವಾದ ಪ್ರಸಾದ,
ತ್ವಕ್ಕಿನಲ್ಲಿ ಅವಿರಳವಾದ ಚಿದ್ವಿಭೂತಿ,
ಕಂಗಳಲ್ಲಿ ಪರಂಜ್ಯೋತಿ ಚಿದ್ರುದ್ರಾಕ್ಷಿ,
ಶ್ರೋತ್ರಂಗಳಲ್ಲಿ ಪರನಾದಬ್ರಹ್ಮಮೂರ್ತಿ
ಚಿನ್ನಾದ ಬಿಂದು ಕಳಾಮಂತ್ರಮಂ ಧಾರಣಂಗೈದು
ತನುವೆಂಬ ಕ್ರಿಯಾಲಯಕ್ಕೆ
ಇಷ್ಟಲಿಂಗಪಂಚಾಚಾರಮಂ ತಳೆದೊಪ್ಪಿ,
ಮನವೆಂಬ ಜ್ಞಾನಾಲಯಕ್ಕೆ
ಪ್ರಾಣಲಿಂಗದ ತ್ರಿವಿಧಾಚಾರಮಂ ತಳೆದೊಪ್ಪಿ,
ಭಾವವೆಂಬ ಪರಿಪೂರ್ಣಾಲಯಕ್ಕೆ
ಭಾವಲಿಂಗದ ತ್ರಿವಿಧಾಚಾರಮಂ ತಳೆದೊಪ್ಪಿ,
ಸರ್ವಾವಸ್ಥೆಗಳಲ್ಲಿ ಮಹದರುವಿನ ನಿಜಾನುಭಾವದ ಚಿದ್ಬೆಳಗೆ
ಸರ್ವಾಚಾರಸಂಪತ್ತಿನಿರವೆಂದು ಹೊಳೆವ ಶರಣನೆ
ನಿಜಮೋಕ್ಷಸ್ವರೂಪ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೮೧ ॥

೮೨

ಭಕ್ತಿಗೆ ಲಿಂಗಾಚಾರ, ಯುಕ್ತಿಗೆ ಸದಾಚಾರ,
ಮುಕ್ತಿಗೆ ಶಿವಾಚಾರ, ಶಕ್ತಿಗೆ ಗಣಾಚಾರ, ವಿರಕ್ತಿಗೆ ಭೃತ್ಯಾಚಾರ,
ನಡೆಗೆ ಕ್ರಿಯಾಚಾರ,ನುಡಿಗೆ ಜ್ಞಾನಾಚಾರ, ದೃಢಕ್ಕೆ ಭಾವಾಚಾರ,
ತ್ಯಾಗಕ್ಕೆ ಸತ್ಯಾಚಾರ, ಭೋಗಕ್ಕೆ ನಿತ್ಯಾಚಾರ, ಯೋಗಕ್ಕೆ ಧರ್ಮಾಚಾರ,
ನಿಜಕ್ಕೆ ಸರ್ವಾಚಾರವೆಂದು ಪರಶಿವಮೂರ್ತಿಯೆ ಪರಮೇಶ್ವರಿಯೆಂಬ
ತನ್ನ ನಿಜವಲ್ಲಭೆ ಚಿಚ್ಛಕ್ತಿಗೆ ಬೋಧಿಸಿದ ಹರನಿರೂಪ ಸಾಕ್ಷಿ :
''ಸರ್ವಾಚಾರಸುಸಂಪನ್ನೇ ಸದಾ ಸಂಪನ್ನೋ ಹಿತಪ್ರಿಯಃ ।
ಲಿಂಗಾವಸಾನಕಾಲೇಷು ದ್ವಾದಶಾಚಾರಕಂ ಶ್ರುಣು ॥
ಆಚಾರಂ ಗುರುರೂಪಂ ಚ ಅನಾಚಾರಂ ಪುನರ್ನರಃ ।
ಆಚಾರಂ ಗುರುರೂಪಂ ಚ ಆಚಾರಂ ಮುಕ್ತಿರೂಪಕಂ ॥

ಆಚಾರಂ ಲಿಂಗರೂಪೇಣ ಆಚಾರಂ ಸದ್ಗುರೋಃ ಪದಂ ।
ಗುರುರ್ಲಿಗಂ ಜಂಗಮಶ್ಚ ಪ್ರಸಾದಂ ಪಾದವಾರಿಜ ॥
ಭೂತಿ ರುದ್ರಾಕ್ಷಮಂತ್ರೇಣ ಭಕ್ತೋ ಜಗತಿ ಕಥ್ಯತೇ ।
ಪೂಜಾಯಾಂ ಧಾರಣಂ ಚೇತಿ ಆಚಾರಂ ಸರ್ವಕಾರಣಂ ॥''
ಎಂದುದಾಗಿ,
ಸರ್ವಾಚಾರಸಂಪತ್ತಿನಷ್ಟಾವರಣಸ್ವರೂಪ ತಾನೇ ತಾನಾದ
ಸದ್ಧರ್ಮರೆ ನಿತ್ಯಮುಕ್ತರು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೮೨ ॥

**೮೩**

ಪರಿಪೂರ್ಣಜ್ಞಾನಾನುಭಾವ ತಲೆದೋರಿ, ತಾನು ತಾನಾದ
ಶರಣಗಣಾರಾಧ್ಯ ಜಂಗಮಭಕ್ತರೊಂದಾದ ನಿಲುಕಡೆಯೆಂತೆಂದೊಡೆ :
ಜ್ಯೋತಿ ಜ್ಯೋತಿ ಬೆರದಂತೆ, ಉದಕ ಉದಕ ಒಂದಾದಂತೆ,
ಕ್ಷೀರ ಕ್ಷೀರ ಕೂಡಿ ಒಂದೊಡಲಾಗಿ ಪರವಸ್ತ್ಯದಿದೋಪಾದಿಯಲ್ಲಿ,
ತನುವಿನಲ್ಲಿ ತನು ಬೆರೆದು, ಮನದಲ್ಲಿ ಮನ ಬೆರೆದು,
ಧನದಲ್ಲಿ ಧನ ಬೆರೆದು, ನೆನಹಿನಲ್ಲಿ ನೆನಹು ಬೆರೆದು,
ಭೋಗದಲ್ಲಿ ಭೋಗ ಬೆರೆದು, ಯೋಗದಲ್ಲಿ ಯೋಗ ಬೆರೆದು,
ಭಕ್ತಿಯಲ್ಲಿ ಭಕ್ತಿ ಬೆರೆದು, ವಿರಕ್ತಿಯಲ್ಲಿ ವಿರಕ್ತಿ ಬೆರೆದು,
ಕ್ರಿಯಾಚಾರದಲ್ಲಿ ಕ್ರಿಯಾಚಾರ ಬೆರೆದು,
ಜ್ಞಾನಾಚಾರದಲ್ಲಿ ಜ್ಞಾನಾಚಾರ ಬೆರೆದು,
ಭಾವಾಚಾರದಲ್ಲಿ ಭಾವಾಚಾರ ಬೆರೆದು,
ನಡೆಯಲ್ಲಿ ನಡೆ ಬೆರೆದು, ನುಡಿಯಲ್ಲಿ ನುಡಿ ಬೆರೆದು,
ದೃಢದಲ್ಲಿ ದೃಢ ಬೆರೆದು, ಸಡಗರಸಂಪದದಲ್ಲಿ ಸಡಗರ ಸಂಪದಬೆರೆದು,
ಮಾತು ಮರವೆಯ ಪರಿಧಿಯ ಹರಿದು
ಭವಸಮುದ್ರವ ದಾಂಟಿ, ಭಕ್ತನಲ್ಲಿ ಜಂಗಮರತಿಯಿಟ್ಟು,
ಪರಮವಿರತಿಯಿಂದ ಸಾಕಾರ ನಿರಾಕಾರ ನಿರವಯಮಂ ಭೇದಿಸಿ,
ಆಚರಣೆ ಸಂಬಂಧಮಂ ಖಂಡಿಸಿ, ಪಿಂಡಬ್ರಹ್ಮಾಂಡದ
ತೊಡಕು ವಿರಹಿತರಾಗಿ,
ಶೂನ್ಯ ಶೂನ್ಯದಲ್ಲಿ ಲಯವೆನಿಸಿ,
ನಿರಾಕಾರ ನಿರಾಕಾರದಲ್ಲಿ ಶೂನ್ಯವೆನಿಸಿ,
ನಿರವಯ ನಿರವಯದಲ್ಲಿ ಶೂನ್ಯವೆನಿಸಿ,
ತಾನೇ ತಾನಾದ ಚಿದ್ಬ್ರಹ್ಮದ ಬೆಳಗಿನಿರವ ಉಪಮಿಸಬಾರದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೮೩ ॥

**೮೪**

ಚಿದಾವರಣಮೂರ್ತಿ ನಿಜಜಂಗಮಲಿಂಗದೇವನು,
ತಾನು ಪರಿಣಾಮತೃಪ್ತನೆನಿಸಿ
ನಿಂದನಿರಾವಲಂಬಸ್ಥಾನವಾವುದೆಂದೊಡೆ :
ನಿಜವೀರಶೈವ ಭಕ್ತಿಜ್ಞಾನವೈರಾಗ್ಯ ಷಟ್‌ಸ್ಥಲಾನುಭಾವ
ಶ್ರೀಗುರುಲಿಂಗಜಂಗಮದ
ನಿಜಕರಣಾನಂದದ ಚಿತ್ಪ್ರಭಾಪುಂಜರಂಜಿತವಾದ
ನಿಜಕಿರಣವೆ ಕಾಯ ಕರಣ ಭಾವ ಬಯಲಾಗುವುದಕ್ಕೆ
ಕದಳಿಯ ಬೆಳಗಿದೆ ನಿಜಮೋಕ್ಷದ ಮನೆಯೆಂದರಿದು,
ನಡೆ–ನುಡಿ ಒಂದಾಗಿ, ಪೂರ್ವಪುರಾತನ ವಚನಸಾರಾಮೃತವಿಡಿದು
ಸರ್ವಾಚಾರಸಂಪನ್ನನಾದ ಸದ್ಭಕ್ತನಾಶ್ರೈಸಿದ
ಚಿತ್ಪೃಥ್ವಿ ಚಿದಪ್ಪು ಚಿದಗ್ನಿ ಚಿದ್ವಾಯು ಚಿದಾಕಾಶ
ಚಿಚ್ಛಕ್ತಿ ಚಿತ್ಸುತ್ರ ಮಿತ್ರ ಕಳತ್ರಯಾದಿಯಾಧಾರಮೂರ್ತಿ
ಚಿದ್ಘನಲಿಂಗಮೂರ್ತಿ, ಲಿಂಗಾಚಾರವಿರತಿಯ
ಭಕ್ತಿಯೆಂಬ ಮೋಹಾನಂದವೆ ನಿಜಮೋಕ್ಷದ ಖಣಿಯೆಂದು ನೆರೆನಂಬಿ,
ಅಚಲಾನಂದದಿಂದ ಮಹಾಜ್ಞಾನಭಕ್ತಿರತಿಯಿಟ್ಟು,
ಒಳಹೊರಗೊಂದಾಗಿ, ಚಿನ್ನಾದ ಚಿದ್ಬಿಂದು
ಚಿತ್ಕಳಾಮಂತ್ರಮಂ ಧ್ಯಾನಿಸುತ್ತ
ಸರ್ವಮಯಮಂತ್ರವೆಂಬ ದೃಢಲಿಂಗಮಂ ನೋಡುತ್ತ,
ಲಿಂಗಮಂ ಕೂಡುತ್ತ, ಘನಲಿಂಗಾಂಗದೊಳ್ ಮಾತಾಡುತ್ತ,
ತಾನೆ ತಾನಾಗಿ ತನಗೊಂದಾಶ್ರಯವಿಲ್ಲದಿಪ್ಪುದೆ
ನಿಜಜಂಗಮದಿರವು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೮೪ ||

**೮೫**

ನಿಜವಿರತಜಂಗಮಲಿಂಗದೇವನು,
ಸದ್ಭಕ್ತಾಲಯದಲ್ಲಿ, ನಿಜಪಾದೋದಕ ಪಂಚಾಕ್ಷರವ
ಮೂವತ್ತಾರು ತೆರದಲ್ಲಿ ಮೂವತ್ತಾರು ಇಂದ್ರಿಯಗಳಲ್ಲಿ
ತುಂಬಿತುಳುಕಾಡುತ್ತ,
ನಿಜಪ್ರಸಾದವ ಷಡಕ್ಷರವ ಮೂವತ್ತಾರು ತೆರದಲ್ಲಿ
ಮೂವತ್ತಾರು ಕರಣಂಗಳಲ್ಲಿ ತುಂಬಿ ತುಳುಕಾಡುತ್ತ,
ಆ ಪಾದೋದಕ ಪ್ರಸಾದ ಪಂಚಾಕ್ಷರ
ಷಡಕ್ಷರಂಗಳ ನಿಜಕಿರಣವೃಷ್ಟಿಯೆಂಬ
ಸದ್ರೂಪು ಚಿದ್ರೂಪು ಪ್ರಕಾಶಂಗಳ ನಿಜಪ್ರಸನ್ನ ಪ್ರಸಾದವೆ

ತನ್ನ ಪ್ರತಿಬಿಂಬವಾದ ಸದ್ಭಕ್ತನ ತನುದುಂಬಿ ಮನದುಂಬಿ,
ಪುತ್ರಮಿತ್ರಕಳತ್ರರ ತನುಮನಧನದುಂಬಿ
ನೆನಹು ನಿರ್ಧಾರವಾಗಿ, ಪರಿಪೂರ್ಣಾನುಭಾವದಿರವೆ
ನಿಜಜಂಗಮಸ್ಥಲ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೮೫ ॥

**೮೬**

ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ,
ಗುರುಕರುಣಸ್ಥಲ, ಲಿಂಗಧಾರಣಸ್ಥಲ,
ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ,
ಭಕ್ತಿಸ್ಥಲ, ಉಭಯಸ್ಥಲ, ತ್ರಿವಿಧ ಸಂಪದಸ್ಥಲ,
ಚತುರ್ವಿಧಸಾರಾಯಸ್ಥಲ, ಉಪಾಧಿಮಾಟಸ್ಥಲ,
ನಿರೂಪಾಧಿಮಾಟಸ್ಥಲ, ಸಹಜಮಾಟಸ್ಥಲ,
ಮಹೇಶ್ವರಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ,
ವಾಗದ್ವೈತ ನಿರಸನಸ್ಥಲ, ಆಹ್ವಾನನಿರಸನಸ್ಥಲ,
ಅಷ್ಟತನುಮೂರ್ತಿನಿರಸನಸ್ಥಲ, ಸರ್ವಗತನಿರಸನಸ್ಥಲ,
ಶಿವಜಗನ್ಮಯಸ್ಥಲ, ಭಕ್ತದೇಹಿಕಲಿಂಗಸ್ಥಲ–
ಎಂಬ ಇಪ್ಪತ್ತುನಾಲ್ಕು ಸ್ಥಲಂಗಳನ್ನು
ಆಚಾರಾಂಗಸ್ವರೂಪದ ಭಕ್ತ, ಗೌರವಾಂಗಸ್ವರೂಪದ ಮಹೇಶ್ವರ,
ತ್ಯಾಗಾಂಗಸ್ಥಲವನೊಳಕೊಂಡು, ಗುರುವಿನಲ್ಲಿ ತಿಳಿದು,
ಆ ಗುರುವನೆ ಅರುವಿನಲ್ಲಿ ಕಂಡು,
ಆ ಅರುವನೆ ಕ್ರಿಯಾಮಂಡಲಂಗಳಲ್ಲಿ ತರಹರವಾಗಿ,
ಅಲ್ಲಿಂದ ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಜ್ಞಾನಗುರುಸ್ಥಲ,
ಕ್ರಿಯಾಲಿಂಗಸ್ಥಲ, ಜ್ಞಾನಲಿಂಗಸ್ಥಲ, ಭಾವಲಿಂಗಸ್ಥಲ,
ಸ್ವಯಸ್ಥಲ, ಚರಸ್ಥಲ, ಪರಸ್ಥಲ,
ಕ್ರಿಯಾಗಮಸ್ಥಲ, ಜ್ಞಾನಾಗಮಸ್ಥಲ, ಸ್ವಕಾಯಸ್ಥಲ, ಪರಕಾಯಸ್ಥಲ,
ಧರ್ಮಾಚಾರಸ್ಥಲ, ಭಾವಾಚಾರಸ್ಥಲ, ಜ್ಞಾನಾಚಾರಸ್ಥಲವೆಂಬ
ಹದಿನೆಂಟು ಸ್ಥಲಗಳನ್ನು
ಇಪ್ಪತ್ತುನಾಲ್ಕು ಸಕೀಲಂಗಳನೊಳಕೊಂಡು
ಪರಿಶೋಭಿಸುವಂಥ ಆಚಾರಲಿಂಗ,
ಮೂವತ್ತಾರು ಸಕೀಲಂಗಳನೊಳಕೊಂಡು
ಪರಿಶೋಭಿಸುವಂಥ ಗುರುಲಿಂಗ,
ಭಾವಾಭಾವಸ್ಥಲವನೊಳಕೊಂಡು, ನಿಃಕಳಲಿಂಗದಲ್ಲಿ ತಿಳಿದು
ಆ ನಿಃಕಲಬ್ರಹ್ಮವೆ ತಾನೆ ತಾನಾಗಿ,
ಮೂವತ್ತಾರು ಚಿತ್ಪಾದೋದಕ ಪ್ರಸಾದ ಪ್ರಾಣಮಂಗಳೆಂಬ

ಮೂಲಮಂತ್ರಸ್ವರೂಪನಾಗಿ ವಿರಾಜಿಸುವಾತನೆ
ಸತ್ಕ್ರಿಯಾಜಂಗಮಭಕ್ತನಾದ ಸಾಕಾರಮೂರ್ತಿ ಇರವು ನೋಡಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೮೬ ||

೮೭

ಪ್ರಸಾದಿಸ್ಥಲ, ಗುರುಮಹಾತ್ಮೆಸ್ಥಲ, ಲಿಂಗಮಹಾತ್ಮೆಸ್ಥಲ,
ಜಂಗಮಮಹಾತ್ಮೆಸ್ಥಲ, ಭಕ್ತಮಹಾತ್ಮೆಸ್ಥಲ,
ಶರಣಮಹಾತ್ಮೆಸ್ಥಲ, ಪ್ರಸಾದಮಹಾತ್ಮೆಸ್ಥಲ,
ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನಸ್ಥಲ,
ಶಿವಯೋಗಸಮಾಧಿಸ್ಥಲ, ಲಿಂಗನಿಜಸ್ಥಲ,
ಅಂಗಲಿಂಗಸ್ಥಲವೆಂಬ ಹನ್ನೆರಡು ಸ್ಥಲಂಗಳನ್ನು
ಶಿವಾಂಗಸ್ವರೂಪವಾದ ಪ್ರಸಾದಿ,
ಚರಾಂಗಸ್ವರೂಪವಾದ ಪ್ರಾಣಲಿಂಗಿ,
ಭೋಗಾಂಗಸ್ಥಳವನೊಳಕೊಂಡ ಲಿಂಗದಲ್ಲಿ ತಿಳಿದು
ಆ ಲಿಂಗವನ ಮಹಾಜ್ಞಾನದಲ್ಲಿ ಕಂಡು,
ಆ ಮಹಾಜ್ಞಾನವನೆ ಸುಜ್ಞಾನಮಂಡಲದಲ್ಲಿ ತರಹರವಾಗಿ,
ಅಲ್ಲಿಂದ ಕಾಯಾನುಗ್ರಹಸ್ಥಲ, ಇಂದ್ರಿಯಾನುಗ್ರಹಸ್ಥಲ,
ಪ್ರಾಣಾನುಗ್ರಹಸ್ಥಲ, ಕಾಯಾರ್ಪಿತಸ್ಥಲ, ಕರಣಾರ್ಪಿತಸ್ಥಲ,
ಭಾವಾರ್ಪಿತಸ್ಥಲ, ಶಿಷ್ಯಸ್ಥಲ, ಶುಶ್ರೂಷ್ಯಸ್ಥಲ, ಸೇವ್ಯಸ್ಥಲ,
ಜೀವಾತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ,
ನಿರ್ದಯಾಗಮಸ್ಥಲ, ನಿರ್ಭಾವಾಗಮಸ್ಥಲ, ನಷ್ಟಾಗಮಸ್ಥಲ,
ಆದಿಪ್ರಸಾದಿಸ್ಥಲ, ಅಂತ್ಯಪ್ರಸಾದಿಸ್ಥಲ, ಸೇವ್ಯಪ್ರಸಾದಿಸ್ಥಲವೆಂಬ
ಹದಿನೆಂಟು ಸ್ಥಲಂಗಳನ್ನು
ಮೂವತ್ತಾರು ಇಪ್ಪತ್ತನಾಲ್ಕು ಸಕೀಲಂಗಳನೊಳಕೊಂಡು
ಪರಿಶೋಭಿಸುವಂಥ ಜಂಗಮಲಿಂಗ,
ಸ್ವಯಪರವರಿಯದ ಸ್ಥಲವನೊಳಕೊಂಡ ನಿಃಶೂನ್ಯಲಿಂಗದಲ್ಲಿ ತಿಳಿದು,
ಆ ನಿಃಶೂನ್ಯಬ್ರಹ್ಮವೆ ತಾನೇ ತಾನಾಗಿ,
ಮೂವತ್ತಾರು ಚಿತ್ಪಾದೋದಕಪ್ರಸಾದಪ್ರಣಮಂಗಳೆಂಬ
ಮೂಲಮಂತ್ರಸ್ವರೂಪವಾಗಿ ವಿರಾಜಿಸುವಾತನೆ
ಸಮ್ಯಜ್ಞಾನಜಂಗಮಭಕ್ತನಾದ ನಿರಾಕಾರಮೂರ್ತಿಯಿರವು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೮೭ ||

೮೮

ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶನಸ್ಥಲ,
ಶೀಲಸಂಪಾದನಸ್ಥಲ, ಐಕ್ಯಸ್ಥಲ, ಸರ್ವಾಚಾರಸಂಪತ್ತಿನಸ್ಥಲ,

ಏಕಭಾಜನಸ್ಥಲ, ಸಹಜಭೋಜನಸ್ಥಲಯೆಂಬ ಎಂಟು ಸ್ಥಲಂಗಳನ್ನು
ಶೇಷಾಂಗಸ್ವರೂಪವಾದ ಶರಣ
ಮಹದಂಗಸ್ವರೂಪವಾದೈಕ್ಯ ಯೋಗಾಂಗಸ್ಥಲವನೊಳಕೊಂಡು,
ಜಂಗಮದಲ್ಲಿ ತಿಳಿದು, ಆ ಜಂಗಮವ
ಪರಿಪೂರ್ಣಜ್ಞಾನಾನುಭಾವದಲ್ಲಿ ಕಂಡು,
ಆ ಪರಿಪೂರ್ಣಜ್ಞಾನಾನುಭಾವವನೆ
ಮಹಾಜ್ಞಾನಮಂಡಲಂಗಳಲ್ಲಿ ತರಹರವಾಗಿ,
ಅಲ್ಲಿಂದ ದೀಕ್ಷಾಪಾದೋದಕಸ್ಥಲ, ಶಿಕ್ಷಾಪಾದೋದಕಸ್ಥಲ,
ಜ್ಞಾನಪಾದೋದಕಸ್ಥಲ,
ಕ್ರಿಯಾನಿಷ್ಪತ್ತಿಸ್ಥಲ, ಭಾವನಿಷ್ಪತ್ತಿಸ್ಥಲ, ಜ್ಞಾನನಿಷ್ಪತ್ತಿಸ್ಥಲ,
ಪಿಂಡಾಕಾಶಸ್ಥಲ, ಬಿಂದ್ವಾಕಾಶಸ್ಥಲ, ಮಹದಾಕಾಶಸ್ಥಲ,
ಕ್ರಿಯಾಪ್ರಕಾಶಸ್ಥಲ, ಭಾವಪ್ರಕಾಶಸ್ಥಲ, ಜ್ಞಾನಪ್ರಕಾಶಸ್ಥಲ,
ಕೊಂಡುದು ಪ್ರಸಾದಿಸ್ಥಲ, ನಿಂದುದು ಓಗರಸ್ಥಲ,
ಚರಾಚರನಾಸ್ತಿಸ್ಥಲ, ಭಾಂಡಸ್ಥಲ, ಭಾಜನಸ್ಥಲ,
ಅಂಗಲೇಪನಸ್ಥಲವೆಂಬ ಹದಿನೆಂಟುಸ್ಥಲಂಗಳನ್ನು
ಮೂವತ್ತಾರು ಸಕೀಲಂಗಳನೊಳಕೊಂಡು
ಪರಿಶೋಭಿಸುವಂಥ ಮಹಾಲಿಂಗ.
ಜ್ಞಾನಶೂನ್ಯಸ್ಥಲವನೊಳಕೊಂಡು, ನಿರಂಜನಲಿಂಗದಲ್ಲಿ ತಿಳಿದು,
ಆ ನಿರಂಜನಬ್ರಹ್ಮವೇ ತಾನೇ ತಾನಾಗಿ,
ಮೂವತ್ತಾರು ಚಿತ್ಪಾದೋದಕಪ್ರಸಾದಪ್ರಣಮಂಗಳೆಂಬ
ಮೂಲಮಂತ್ರಸ್ವರೂಪನಾಗಿ ವಿರಾಜಿಸುವಾತನೆ
ಪರಿಪೂರ್ಣಾನುಭಾವಜಂಗಮಭಕ್ತನಾದ
ನಿರವಯಮೂರ್ತಿಯಿರವು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೮೮ ||

೮೯

ತನುತ್ರಯಮಂಡಲಂಗಳಲ್ಲಿ
ಸಕಲವ್ಯಾಪಾರದೊಡನೆ ಕೂಡಿ ವರ್ತಿಸುವಂಥ ಜಾಗ್ರನ
ನಿಜವಿಶ್ವಾಸವೆಂಬ ಹೃತ್ಪೀಠಮಧ್ಯದಲ್ಲಿ ಮೂರ್ತಿಗೊಂಡಿರುವ
ನಿಃಕಲಬ್ರಹ್ಮ ಇಷ್ಟಲಿಂಗದೇವನ
ನಿಃಕಳಂಕಹಸ್ತದಲ್ಲಿ ಮೂರ್ತಿಗೊಳಿಸಿ,
ಸಾಕಾರವಾದಷ್ಟವಿಧಾರ್ಚನೆ ಷೋಡಶೋಪಚಾರದಿಂದರ್ಚಿಸಿ,
ಎರಡಳಿದು ತಾನೇ ತಾನಾಗಿ,
ಮಿಶ್ರಾನಂದಭೋಗದಿಂದ ಅಚಲಾನಂದನಾಗಿ,

ಅಲ್ಲಿಂದ ನೂರೆಂಟು ಕ್ರಿಯಾಪ್ರಣಮ ಜಪಮಾಲೆಯಂ
ಜಪಮಣಿಗಳಿಂ ಧ್ಯಾನಿಸಿ ನಿಜಜಂಗಮಲಿಂಗದಲ್ಲೊಡವೆರೆದು,
ಭಕ್ತಿಯುಕ್ತಿಶ್ರದ್ಧಾತುರ ಕಿಂಕುರ್ವಾಣದಿಂದ
ಸತ್ಯಶುದ್ಧ ನಡೆನುಡಿ ದೃಢಚಿತ್ತಮಂ ಸಾಧಿಸುತ್ತ,
ಗುರುಮಾರ್ಗಾಚಾರಸಂಪದಮಂ ಭೇದಿಸುತ್ತ,
ಆ ನಿಃಕಲಬ್ರಹ್ಮವಪ್ಪ ಇಷ್ಟಲಿಂಗದೇವನ ಕಂಗಳು ತುಂಬಿ,
ಮೂಲಚಿತ್ಪ್ರಭೆಗಳ ನೋಡುತ್ತ,
ಘನಮನದ ಕೊನೆಯಲ್ಲಿ ತುಂಬಿ ತೊನೆಯುತ್ತ ತೂಗುತ್ತ,
ಸ್ವಾನುಭಾವದಲ್ಲಿ ಸಂತೃಪ್ತನಾಗುತ್ತ,
ಬೆಳಗಿನೊಳಗೆ ಮಹಾಬೆಳಗಾಗಿ, ಅರುಣೋದಯವೆ ಮೊದಲುವಿಡಿದು,
ಇಪ್ಪತ್ತುಗಳಿಗೆ ಪರಿಯಂತರವು ಸುಚಿತ್ತದ ಕೊನೆಯಲ್ಲಿ
ಅನಾದಿಮೂಲಪ್ರಣಮ ಒಂದು, ಪಾದೋದಕಪ್ರಣಮ ಎರಡು,
ಪ್ರಸಾದಪ್ರಣಮ ಎರಡು ಕೂಡಲಾಗಿ,
ಚಿತ್ಕಲಾಪ್ರಸಾದಪ್ರಣಮ ಒಂದು ಕೂಡಲಾಗಿ,
ಗುರುಪಂಚಾಕ್ಷರವೆನಿಸುವುದು.
ಆಚಾರಲಿಂಗ ಗುರುಲಿಂಗ ಇಷ್ಟಲಿಂಗಾಯ ನಮಃ
ನಿಮಗೆ ಸಮರ್ಪಣವಯ್ಯಾ ಎಂದು, ಮೂಲಚಿತ್ತುವಿನಿಂದ ಧ್ಯಾನಿಸುತ್ತ,
ಅಲ್ಲಿಂದ ಮತ್ತಿಪ್ಪತ್ತುಗಳಿಗೆ ಪರಿಯಂತರವು
ಸುಮನದಕೊನೆಯಲ್ಲಿ ಅನಾದಿಮೂಲಪ್ರಣಮವಿಡಿದು,
ಎರಡನೆಯ ಸಂಬಂಧವಾದ ಪಾದೋದಕಪ್ರಣಮ ಎರಡು,
ಪ್ರಸಾದಪ್ರಣಮ ಎರಡು, ಚಿತ್ಕಲಾಪ್ರಸಾದಪ್ರಣಮ ಒಂದು ಕೂಡಲಾಗಿ
ಶಿವಪಂಚಾಕ್ಷರವೆನಿಸುವುದು.
ಶಿವಲಿಂಗ ಜಂಗಮಲಿಂಗ ಪ್ರಾಣಲಿಂಗಾಯ ನಮಃ
ನಿಮಗೆ ಸಮರ್ಪಣವಯ್ಯಾ ಎಂದು, ಮೂಲಚಿತ್ತುವಿನಿಂದ ಧ್ಯಾನಿಸುತ್ತ,
ಅಲ್ಲಿಂದ ಮತ್ತಿಪ್ಪತ್ತುಗಳಿಗೆ ಪರಿಯಂತರವು ಸ್ವಾನುಭಾವದ ಕೊನೆಯಲ್ಲಿ
ಅನಾದಿಮೂಲಪ್ರಣಮವಿಡಿದು
ಮೂರನೆಯ ಸಂಬಂಧವಾದ ಪಾದೋದಕಪ್ರಣಮ ಎರಡು,
ಪ್ರಸಾದಪ್ರಣಮ ಎರಡು, ಚಿತ್ಕಲಾಪ್ರಸಾದಪ್ರಣಮ ಒಂದು ಕೂಡಲಾಗಿ
ಹರಪಂಚಾಕ್ಷರವೆನಿಸುವುದು.
ಪ್ರಸಾದಲಿಂಗ ಮಹಾಲಿಂಗ ಭಾವಲಿಂಗಾಯ ನಮಃ
ನಿಮಗೆ ಸಮರ್ಪಣವಯ್ಯಾ ಎಂದು
ಮೂಲಚಿತ್ತುವಿನಿಂದ ಧ್ಯಾನಿಸುತ್ತ,
ಘನಕ್ಕೆಘನವಾಗಿ ಮಹದರುವಿನ ಕೊನೆಯಲ್ಲಿ ಧ್ಯಾನಿಸುತ್ತ,
ಧ್ಯಾನಿಸಿದಲ್ಲಿ ದಿನರಾತ್ರಿಗಳೆರಡಕ್ಕೆ ಅರವತ್ತು ಗಳಿಗೆಯಾಗುವುದು.

ಜಪ ಇಪ್ಪತ್ತೊಂದುಸಾವಿರದಾರುನೂರಾಗುವದು.
ಇದೇ ಸಗುಣಾನಂದ ಸಾಕಾರಜಪವೆನಿಸುವುದು.
ಇದೆ ಕರಣಸನ್ಮಾರ್ಗದ ನಿಜಪಂಚಾಕ್ಷರವೆನಿಸುವುದು.
ಇದೆ ನಿಜಜಂಗಮ ಭಕ್ತಗಣಾರಾಧ್ಯರ ಇರವು ಕಾಣಾ,
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೮೯ ||

೯೦

ಮನತ್ರಯಮಂಡಲಂಗಳಲ್ಲಿ
ನಿಃಕಲವ್ಯಾಪಾರದೊಡನೆ ಕೂಡಿ ವರ್ತಿಸುವಂಥ,
ಸ್ವಪ್ನ ನಿಜವಿಶ್ವಾಸವೆಂಬ ಹೃತ್ಪೀಠಮಧ್ಯದಲ್ಲಿ ಮೂರ್ತಿಗೊಂಡಿರುವ,
ನಿಶ್ಶೂನ್ಯಬ್ರಹ್ಮಪ್ರಾಣಲಿಂಗದೇವನ,
ನಿಶ್ಶೂನ್ಯಹಸ್ತದಲ್ಲಿ ಮೂರ್ತಿಗೊಳಿಸಿ,
ನಿರಾಕಾರವಾದಷ್ಟವಿಧಾರ್ಚನೆ, ಷೋಡಶೋಪಚಾರದಿಂದರ್ಚಿಸಿ,
ಎರಡಳಿದು, ತಾನೇ ತಾನಾಗಿ,
ಘನಮಿಶ್ರಾನಂದಭೋಗದಿಂದ ಅಚಲಾನಂದನಾಗಿ,
ಅಲ್ಲಿಂದ ಆ ಜಾಗ್ರದ ನೆನಹನೆಲ್ಲ ಕಂಡು ಪರಿಪೂರ್ಣತೃಪ್ತನಾಗಿ,
ಅದೇ ಪ್ರಾಣಲಿಂಗಮೂರ್ತಿಗಳ ಷಟ್‌ಚಕ್ರಂಗಳಲ್ಲಿ ಸಂಬಂಧವಿಟ್ಟು,
ಅರುಣೋದಯವೆ ಮೊದಲು ಅದಾವುದೆಂದೊಡೆ :
ತನ್ನ ಘನಮನದ ಬೆಳಗ ಅರುಣೋದಯವೆನಿಸುವುದು.
ಆ ಬೆಳಗಿನಲ್ಲಿ ದೃಢಚಿತ್ತವಾಗಿ,
ಪೃಥವಾಲಯ ಚತುಃಕೋಣೆಯ ಚೌದಳಮಂಟಪದಲ್ಲಿ
ಮೂರ್ತಿಗೊಂಡಿರುವ,
ಚತುಸ್ಸಾರಾಯಸ್ವರೂಪದಿಂದ ಧಾತುಗಳಿಗೆ ದಾತಾರನಾದ
ಆಚಾರಲಿಂಗಮಂ ಪರಿಪೂರ್ಣದ್ರವ್ಯಗಳಿಂದರ್ಚಿಸಿ,
ಘನಕ್ಷರನ್ಯಾಯದಂತೆ, ಎಡಬಲಪ್ರದಕ್ಷಣದಿಂದ
ನಮೋ ನಮೋ ಮತ್ಪ್ರಾಣಕಾಂತರ ಭವರುಜೆಗಾದಿವೈದ್ಯ
ಶ್ರೀಗುರುಬಸವದಂಡನಾಥ ಚಿತ್ಪ್ರಭಾಪುಂಜದ ಮಹಾಬೆಳಗೆ,
ನಿಮ್ಮೊಳಗಿಂಬಿಟ್ಟುಕೊಳ್ಳಿರಯ್ಯಾಯೆಂದು
ಶ್ರದ್ಧಾತುರದಿಂದ ಹಾಂಗೆ ದಳಪ್ರಾಣಮಲಿಂಗಮಂ ಧ್ಯಾನಿಸುತ್ತ,
ಷಟ್ಕೋಣೆ ದಶಕೋಣೆ ದ್ವಾದಶಕೋಣೆ
ಷೋಡಶಕೋಣೆ ಸಹಸ್ರಕೋಣೆ
ತ್ರಿಕೋಣೆಯೆಂಬಷ್ಟಕುಲ ಗಿರಿಪರ್ವತಗಳೇರಿ,
ಹಿಂದಮುಂದಣ ಕಾಲಕಾಮಕರ್ಮಸಂಸಾರದಟ್ಟುಳಿಯ ನೀಗಿ,
ನಾದ ಬಿಂದು ಕಳೆಗಳಂ ಮರೆದು,

ಚಿನ್ನಾದ ಚಿದ್ಬಿಂದು ಚಿತ್ಕಳೆಗಳಂ ಅರಿದು
ಪರನಾದ ಬಿಂದುವಂ ಕೂಡಿ,
ಧ್ಯಾನವವಾಟದ ಮಂತ್ರಲಿಂಗಜಪವೆಷ್ಟಾಯಿತೆಂದೊಡೆ,
ಒಂದು ದಿನಕ್ಕೆ ದಿನರಾತ್ರಿಗಳೆರಡು, ತಾಸು ಇಪ್ಪತ್ತುನಾಲ್ಕು,
ಗಳಿಗೆ ಅರವತ್ತು, ದಳ ಐವತ್ತು, ಪ್ರದಕ್ಷಣ ಇಪ್ಪತ್ತೊಂದು,
ಸಾವಿರದಾರುನೂರು ಜಪವೆನಿಸಿ, ಮನಮಂತ್ರಸ್ವರೂಪವಾಗಿ,
ಘನವನೊಡಗೂಟದಂಥದೆ
ನಿರ್ಗುಣಾನಂದದ ನಿರಾಕಾರಜಪವೆನಿಸುವುದು,
ಇದೇ ಶರಣಸನ್ಮಾರ್ಗದ ಪರಮಪಂಚಾಕ್ಷರದಿರವೆನಿಸುವುದು.
ಇದೇ ನಿಜಜಂಗಮಭಕ್ತಗಣಾರಾಧ್ಯರ ಇರವು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೯೦ ॥

೯೧

ಆತ್ಮತ್ರಯಮಂಡಲಗಳಲ್ಲಿ
ನಿರಾವಲಂಬವ್ಯಾಪಾರದೊಡನೆ ಕೂಟ ವರ್ತಿಸುವಂಥ
ಸುಷುಪ್ತನ ನಿಜವಿಶ್ವಾಸವೆಂಬ ಹೃತ್ಪೀಠಮಧ್ಯದಲ್ಲಿ ಮೂರ್ತಿಗೊಂಡಿರುವ
ನಿರಂಜನಬ್ರಹ್ಮ ಭಾವಲಿಂಗದೇವನ,
ನಿರಂಜನಹಸ್ತದಲ್ಲಿ ಮೂರ್ತಿಗೊಳಿಸಿ,
ನಿರವಯವಾದಷ್ಟವಿಧಾರ್ಚನೆ ಷೋಡಶೋಪಚಾರದಿಂದರ್ಚಿಸಿ,
ಎರಡಳಿದು ತಾನೇ ತಾನಾಗಿ,
ಘನಪರಿಪೂರ್ಣ ಮಿಶ್ರಾನಂದಭೋಗದಿಂದ ನಿಶ್ಚಿತಾನಂದನಾಗಿ,
ಅಲ್ಲಿಂದ ಆ ಜಾಗ್ರಸ್ವಪ್ನದಧಿಕಾರಿಗಳಾದ
ಇಷ್ಟಲಿಂಗ ಪ್ರಾಣಲಿಂಗದೇವರ ಪರಮಾನಂದ ಪರಿಪೂರ್ಣಬೆಳಗಿನ
ಸಚ್ಚಿದಾನಂದ ಸಂತೃಪ್ತಿಗೆ ತಾನೆ ಕಾರಣವಾಗಿ ವಿರಾಜಿಸುವಂಥ,
ಆ ಭಾವಲಿಂಗದೇವನ ಇಷ್ಟಲಿಂಗದ ನವತಾರಕಸ್ಥಾನ
ಪ್ರಾಣಲಿಂಗದ ನವತಾರಕಸ್ಥಾನದ ಕೊನೆಮೊನೆಯೆಂಬ ಪಶ್ಚಿಮಾದ್ರಿ
ನವರತ್ನಖಚಿತ ಶೂನ್ಯಸಿಂಹಾಸನದಲ್ಲಿ ಪರಿಪೂರ್ಣಾನುಭಾವದಿಂ
ಮೂರ್ತಿಗೊಳಿಸಿದ ಚಿತ್ಪ್ರಭಾಮಂಡಲದ ಮಹಾಬೆಳಗಿನ ತಿಳುಹಿನಲ್ಲಿ
ಏಕಲಿಂಗನಿಷ್ಠಾಪರದಿಂದ ನಿಂದು,
ಐವತ್ತಕ್ಷರಸ್ವರೂಪವಾದ ಲಿಂಗಮಂತ್ರಗಳ
ಚಿತ್ಪಾದೋದಕ ಚಿತ್ಪ್ರಸಾದಂಗಳಿರವ ತಿಳಿದು,
ತನ್ನ ನಿಜ ಘನಮನೋಲ್ಲಾಸದಿರವು ಹೇಂಗೆ ತೋರಿತ್ತು ಹಾಂಗೆ
ಪ್ರಣಮಲಿಂಗಂಗಳಲ್ಲಿ ತರಹರನಾಗುತ್ತ
ದಿನರಾತ್ರಿ ಉದಯಾಸ್ತಮಾನವೆಂಬ ಸಂಮುಸಂಶಯಮುಂ ನರೆ ನೀಗುತ್ತ,

ಸಪ್ತಕೋಟಿ ಮಹಾಮಂತ್ರಂಗಳಂ ಮೀರಿ ತೋರುತ್ತ,
ಸದುಹೃದಯಕ್ಕೆ ಬೀರುತ್ತ, ಆತ್ಮತ್ರಯಂ ನೆರೆ ನೀಗುತ್ತ,
ಘನಲಿಂಗತ್ರಯಮಂತ್ರಮಂ ಇಚ್ಛಿಸುತ್ತ,
ತನ್ನ ತಾನೇ ಮಹಾಬೆಳಗ ಬೀರುತ್ತಿಪ್ಪುದೆ
ಶರಣಗಣಾರಾಧ್ಯರ ಪರಿಪೂರ್ಣನಿರವಯ ಅಗಣಿತ ಅಪ್ರಮಾಣ
ಅಗೋಚರ ಅಸಾಧ್ಯ ಅಭೇದ್ಯವಾದ ನಿಜಾನಂದ
ನಿರವಯವಾದ ಜಪವೆನಿಸುವುದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೯೧ ॥

೯೨

ಪರಿಪೂರ್ಣಾನಂದ ಜ್ಯೋತಿರ್ಮಯ ಬ್ರಹ್ಮಸ್ವರೂಪನಾದ
ಪರಶಿವಯೋಗೀಶ್ವರನು ನಿವೃತ್ತಿಮಾರ್ಗವನರಿದಾಚರಿಸುತಿರ್ಪುದೆಂತೆಂದೊಡೆ:
ಸದ್ಭಕ್ತನಡಿಯಿಟ್ಟು, ನಿಜದೃಷ್ಟಿಯಿಂ ನೋಡಿ,
ಸುಚಿತ್ತಹಸ್ತದಿಂದ ಮುಟ್ಟಿ ಸ್ಪರಿಶನಂಗೈದಲ್ಲಿ,
ಪೃಥ್ವಿಯಳಿದು ನಿವೃತ್ತಿಯಾಗಿ ಚಿತ್ಪೃಥ್ವಿಯನಿಸಿರ್ಪುದು.
ಸದ್ವೀರಮಹೇಶ್ವರನಡಿಯಿಟ್ಟು, ನಿಜದೃಷ್ಟಿಯಿಂ ನೋಡಿ,
ಸುಬುದ್ಧಿಹಸ್ತದಿಂದ ಮುಟ್ಟಿ ಸ್ಪರಿಶನಂಗೈದಲ್ಲಿ,
ಅಪ್ಪುವಳಿದು ನಿವೃತ್ತಿಯಾಗಿ ಚಿದಪ್ಪುವೆನಿಸಿರ್ಪುದು.
ಪರಿಪೂರ್ಣಪ್ರಸಾದಿಯಡಿಯಿಟ್ಟು, ನಿಜದೃಷ್ಟಿಯಿಂ ನೋಡಿ,
ನಿರಹಂಕಾರಹಸ್ತದಿಂದ ಮುಟ್ಟಿ ಸ್ಪರಿಶನಂಗೈದಲ್ಲಿ,
ಅಗ್ನಿಯಳಿದು ನಿವೃತ್ತಿಯಾಗಿ ಚಿದಗ್ನಿಯೆನಿಸಿರ್ಪುದು.
ಪರಮಾನಂದಪ್ರಾಣಲಿಂಗಿಯಡಿಯಿಟ್ಟು,
ನಿಜದೃಷ್ಟಿಯಿಂ ನೋಡಿ, ಸುಮನಹಸ್ತದಿಂ ಮುಟ್ಟಿ ಸ್ಪರಿಶನಂಗೈದಲ್ಲಿ,
ವಾಯುವಳಿದು ನಿವೃತ್ತಿಯಾಗಿ, ಚಿದ್ವಾಯುವೆನಿಸಿರ್ಪುದು.
ಸಚ್ಚಿದಾನಂದ ಶರಣನಡಿಯಿಟ್ಟು, ನಿಜದೃಷ್ಟಿಯಿಂ ನೋಡಿ,
ಸುಜ್ಞಾನಹಸ್ತದಿಂದ ಮುಟ್ಟಿ ಸ್ಪರಿಶನಂಗೈದಲ್ಲಿ,
ಆಕಾಶವಳಿದು ನಿವೃತ್ತಿಯಾಗಿ ಚಿದಾಕಾಶವೆನಿಸಿರ್ಪುದು.
ನಿರಾಂತಕ ನಿಜೈಕ್ಯನಡಿಯಿಟ್ಟು, ನಿಜದೃಷ್ಟಿಯಿಂ ನೋಡಿ,
ಸದ್ಭಾವಹಸ್ತದಿಂದ ಮುಟ್ಟಿ ಸ್ಪರಿಶನಂಗೈದಲ್ಲಿ,
ಆತ್ಮನಳಿದು, ನಿವೃತ್ತಿಯಾಗಿ, ಚಿದಾತ್ಮನೆನಿಸಿರ್ಪುದು.
ನಿರಾವಲಂಬ ನಿರವಯಮೂರ್ತಿಯಡಿಯಿಟ್ಟು,
ನಿಜದೃಷ್ಟಿಯಿಂ ನೋಡಿ,
ಪರಿಣಾಮಹಸ್ತದಿಂದ ಮುಟ್ಟಿ ಸ್ಪರಿಶನಂಗೈದಲ್ಲಿ,
ಆ ಸೂರ್ಯಚಂದ್ರಾದಿಗಳಳಿದು ನಿವೃತ್ತಿಯಾಗಿ,

ಚಿತ್ಸೂರ್ಯಚಂದ್ರರಾಗಿರ್ಪರು.
ಈ ಮರ್ಮಾದಿಮರ್ಮವನರಿದ ಶಿವಯೋಗೀಶ್ವರರು,
ತಮ್ಮಲ್ಲಿ ಸಂಬಂಧವಾದ ಅಷ್ಟತನುಮೂರ್ತಿಗಳ
ನಿಮಿಷನಿಮಿಷಕ್ಕೆ ಪವಿತ್ರರೆನಿಸಿರ್ಪುದು.
ಆ ಮರ್ಮವೆಂತೆಂದೊಡೆ :
ಪೃಥ್ವಿತತ್ವಸಂಬಂಧವಾದ ಕರ್ಮೇಂದ್ರಿಯಂಗಳೆಲ್ಲ
ಸತ್ಕ್ರಿಯಾಚಾರವೆಂಬ ಸದ್ಭಕ್ತನ ಕಿರಣದಿಂದ ಪವಿತ್ರವೆನಿಸುವುದು.
ಅಪ್ಪುತತ್ವಸಂಬಂಧವಾದ ಜ್ಞಾನೇಂದ್ರಿಗಳೆಲ್ಲ
ಸಮ್ಯಜ್ಞಾನಾಚಾರವೆಂಬ ಸದ್ವೀರಮಹೇಶ್ವರನ ಕಿರಣದಿಂದ
ಪವಿತ್ರವೆನಿಸುವುದು.
ಅಗ್ನಿತತ್ವಸಂಬಂಧವಾದ ಬುದ್ಧೀಂದ್ರಿಗಳೆಲ್ಲ
ಸದ್ಭಾವಾಚಾರವೆಂಬ ಪರಮಪ್ರಸಾದಿಯ ಕಿರಣದಿಂದ ಪವಿತ್ರವೆನಿಸುವುದು.
ವಾಯುತತ್ವಸಂಬಂಧವಾದ ಪ್ರಾಣಾದಿವಾಯುಗಳೆಲ್ಲ
ಸತ್ಯನಿತ್ಯವಾದ ಸರ್ವಾಚಾರಸಂಪದವೆಂಬ
ಪರಮಾನಂದ ಪ್ರಾಣಲಿಂಗಿಯ ಕಿರಣದಿಂದ ಪವಿತ್ರವೆನಿಸುವುದು.
ಆಕಾಶತತ್ವಸಂಬಂಧವಾದ ಕರಣಾದಿಗಳೆಲ್ಲ
ಸತ್ಯಶುದ್ಧ ನಡೆನುಡಿ ದೃಢನೈಷ್ಠೆಯೆಂಬ
ಸಚ್ಚಿದಾನಂದಶರಣನ ಕಿರಣದಿಂದ ಪವಿತ್ರವೆನಿಸುವುದು.
ಆತ್ಮತತ್ವಸಂಬಂಧವಾದ ಅವಸ್ಥಾದಿಗಳೆಲ್ಲ
ನಿಜವಿರಕ್ತಿ ಭಕ್ತಿಸಂಧಾನವೆಂಬ
ಚಿದಾದಿ ಐಕ್ಯನಕಿರಣದಿಂದ ಪವಿತ್ರವೆನಿಸುವುದು.
ಸೂರ್ಯಚಂದ್ರಾದಿಗಳೆಲ್ಲ ಕಲಾತತ್ವಸಂಬಂಧವಾದ
ರಾಗರಚನೆಭೋಗತ್ಯಾಗಯೋಗಾದಿಗಳೆಲ್ಲ
ತನ್ನ ತಾನಾದ ಮಹಾಬೆಳಗೆಂಬ ಪರಾತ್ಪರತತ್ವಮೂರ್ತಿ
ನಿರವಯನ ಕಿರಣದಿಂದ ಪವಿತ್ರವೆನಿಸುವುದು.
ಪ್ರಮಥಗಣಾರಾಧ್ಯರ ಘನಮಹದರುವಿನೆಚ್ಚರ ಕಾಣಿರಣ್ಣಗಳಿರಾ.
ಈ ಮರ್ಮವರಿಯದೆ, ಭಕ್ತ ವಿರಕ್ತ ನಿಜಮುಕ್ತನಾಗಬಾರದು.
ನಿಜಮುಕ್ತನಾದಲ್ಲದೆ, ಬಯಲಬ್ರಹ್ಮದ ಬೆಳಗು ಕಣ್ದೆರವಾಗದು.
ಬಯಲಬ್ರಹ್ಮದ ಬೆಳಗು ಕಣ್ದೆರವಾದಲ್ಲದೆ,
ತನುಮನ ಇಂದ್ರಿಯವೆಂಬ ಮಾಯಾಪಾಶ ಹರೆಹಿಂಗದು.
ಮಾಯಾಪಾಶ ಹರೆಹಿಂಗಿದಲ್ಲದೆ
ತಾನೆ ತಾನಾದ ಘನಮಹಾಮಂತ್ರಮೂರ್ತಿಯಾಗಿ
ನಿರಂಜನ ವಸ್ತುವಿನಲ್ಲಿ ಕೂಡಲಾರಳವಲ್ಲ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೯೨ ||

೯೩

ನಿಜವೀರಶೈವಾಚಾರ ಭಕ್ತಿ ವಿರಕ್ತಿ ಜ್ಞಾನಾನುಭಾವ
ನಿಜವೈರಾಗ್ಯ ಷಡುಸ್ಥಲಮಾರ್ಗೋದ್ಧಾರಕ ಶ್ರೀಗುರುಸೂತ್ರ
ದೀಕ್ಷೋಪದೇಶ ಸತ್ಯಶುದ್ಧ ನಡೆನುಡಿ ದೃಢಚಿತ್ತಿನ ಚಿದಾಂಶಿಕರಪ್ಪ
ಸದ್ಭಕ್ತ ವಿರಕ್ತ ನಿತ್ಯಮುಕ್ತ ಸಾಧ್ಯಗಣಾರಾಧ್ಯರು ತಮ್ಮರಿವ ತಾವರಿದು,
ಹಿಂದುಮುಂದಣ ಪುಣ್ಯಪಾಪವ ಮರೆದು,
ಯೋಗ್ಯ–ಅಯೋಗ್ಯ, ಅರ್ಪಿತ–ಅನರ್ಪಿತ
ಮಾರ್ಗಕ್ರಿಯಾಚರಣೆಸಂಬಂಧದ
ಪೂರ್ವಪುರಾತನರೋಕ್ತಿಯಂ ಕರತಳಾಮಳಕವಾಗಿ,
ಸಾವಧಾನವೆಂಬ ಅತಿಜಾಗ್ರದಿಂದ ತ್ರಿವಿಧಜಪ ಪಂಚಜಪ
ಷಡ್ವಿಧಜಪ ಏಕಜಪ
ಅಗಣಿತ ಅಪ್ರಮಾಣಜಪವೆಂಬ ಶರಣನ ಚಿದ್ವಿಲಾಸದ
ಮಹಾಬೆಳಗಿನ ಪ್ರಭೆ
ಕೊನೆಯ ಮೊನೆಯೊಳಗೆ ನಿಂದು
ಚಿದ್ವಿಭೂತಿ ರುದ್ರಾಕ್ಷಮಾಲಾಲಂಕೃತರಾಗಿ
ಮೂಲಚಿದ್ಬಿಂದು ಚಿತ್ಪ್ರಸಾದಾಮೃತ ಪಾದೋದಕ ಪ್ರಸಾದಮಂ
ಮತ್ತಾ ಮೂಲಚಿದ್ಬಿಂದುಚಿತ್ಪ್ರಸಾದಾಮೃತಸ್ವರೂಪ
ಘನಮಹಾಲಿಂಗಪತಿ ಶರಣನಂಗಸತಿ ಪತಿವ್ರತಭಾವದಿಂದ
ಮೂಲಮೂರ್ತಿ ಚಿತ್ಪಾದೋದಕ ಪ್ರಸಾದ ಪ್ರಣಮದೇವನಾದ
ನಿಜಜಂಗಮನಾಥಂಗೆ ಸಮರ್ಪಿಸಿ,
ಸಾವಯ ನಿರವಯ ನಿರಂಜನ ಜಂಗಮಾರೋಗಣೆಯಿಂದ,
ಭಕ್ತ ಮುಕ್ತ ವಿರಕ್ತರೆಂಬ ತ್ರಿವಿಧಗಣಾರಾಧ್ಯರು
ಹರಹರ ಈ ಗುರುಕರುಣದಿಂದ ಬಹುತಪಸ್ಸಿನಫಲ ಒದಗಿ
ಚಿದಾವರಣ ಚಿದ್ಘನಲಿಂಗಾಂಗಸಂಗವಾದ ತ್ರಿಕೂಟಮಂ ಅರಿದು,
ಅಚ್ಯೊತ್ತಿ, ತ್ರಿವಿಧಾನುಭಾವದಿಂದ ತ್ರಿವಿಧ ಚಿತ್ಪಾದೋದಕ
ಪ್ರಸಾದ ಪ್ರಣಮವ,
ಮತ್ತಾ ಚಿತ್ಪಾದೋದಕ ಪ್ರಸಾದ ಪ್ರಣಮಕ್ಕೆ ತೃಪ್ತಿಯನೈದಿಸಿ,
ಭಕ್ತವಿರಕ್ತಮುಕ್ತರಾಚರಿಸುವ ಪರಿಯೆಂತೆಂದೊಡೆ :
ಭಕ್ತನ ಭಕ್ತಿ ವಿರಕ್ತನಲ್ಲಿ, ವಿರಕ್ತನ ಭಕ್ತಿ ಭಕ್ತನಲ್ಲಿ
ಸಮರಸೈಕ್ಯವಾದುದೆ ಆಚರಣೆಯಾಗಿ,
ಇವರಿಬ್ಬರ ಭಕ್ತಿರತಿ ಮುಕ್ತಿಕಾಂತನಾದ
ನಿಜಸಂಗಸಂಯೋಗ ಚಿದ್ಘನಲಿಂಗದಲ್ಲಿ
ಸಮರಸೈಕ್ಯವಾದುದೆ ಸಂಬಂಧವಾಗಿ,
ನಿಲುಕಡೆಯ ತಿಳಿದು ಭಕ್ತವಿರಕ್ತರಿಬ್ಬರು ಕೂಡಿದಂಥ ಸ್ಥಾನದಲ್ಲಿ

ಮೂಲಮೂರ್ತಿಯಲ್ಲಿ ದೃಷ್ಟಿಸಿನಟ್ಟು,
ಪರಿಣಾಮತರವಾದ ಶಿವತತ್ತ್ವೋದಕವನ್ನು ಶೋಧಕತ್ವದಿಂದ
ಕಠಿಣಮಂ ಕಳೆದುಳಿದು,
ಅನಾದಿನೆನಹಿಂದೆ ಪಾದಾಭ್ಯಂಗನದಿಂದ
ತೊಳೆದಂಥಮಳ ಪಾದೋದಕವನ್ನು ಶಿವತತ್ವ ಲಿಂಗತತ್ವ,
ಆ ಲಿಂಗತತ್ವ ಸಂಬಂಧವಾದ ಪೃಥ್ವಿಜಲಾಗ್ನಿ ಪದಾರ್ಥದ
ಪೂರ್ವಾಶ್ರಯವ ಕಳೆದು,
ಪರಶಿವತತ್ವ ಪದಾರ್ಥಕ್ಕೆ ದ್ರವ್ಯಾರ್ಪಣಕ್ಕೆ ಯೋಗ್ಯವೆನಿಸಿ,
ತನ್ನ ಷಟ್ಪ್ರಣಮ ಸ್ವರೂಪವಾದ ಹಸ್ತದಿಂದ
ಷಟ್ಪ್ರಣಮಸ್ವರೂಪವಾದ ಪಾದದಡಿಮುಡಿಗಳ
ನಾಲ್ಕು ನಾಲ್ಕು ವೇಳೆ ಉಭಯಪಾದವನ್ನು ಸ್ಪರಿಶನಂಗೈದು,
ಭಕ್ತವಿರಕ್ತಗಣಸಮುದಾಯವೆಲ್ಲ ಮುಖಮಜ್ಜನ ಸ್ನಾನ
ಪಾಕಪಚನಾದಿಗಳನಾಚರಿಸಿ, ಲಿಂಗಬಾಹ್ಯರಿಗ ಹಾಕದೆ,
ಸುಯ್ಜ್ಞಾನದಿಂದ ಗುರುಪಾದೋದಕದಲ್ಲಿ ಗುರುಭಕ್ತರಾಗಿ,
ಲಿಂಗಪಾದೋದಕದಲ್ಲಿ ಲಿಂಗಭಕ್ತರಾಗಿ,
ಜಂಗಮಪಾದೋದಕದಲ್ಲಿ ಜಂಗಮಭಕ್ತರಾಗಿ,
ಈ ತ್ರಿವಿಧೋದಕದಲ್ಲಿ, ಒಂದೊಂದರಲ್ಲಿ ಒಂಬತ್ತು,
ಒಂಬತ್ತು ಒಂಬತ್ತು ಅರಿದು ಆಚರಿಸಿದಲ್ಲಿ ಮೂವತ್ತಾರಾಗುವದು.
ಮತ್ತೆ ಒಂದೊಂದರೊಳಗೆ ಹತ್ತುತ್ತರದ ಪಾದೋದಕದಲ್ಲಿ
ಮಿಶ್ರಮಿಶ್ರಂಗಳಿಂದ ಮಹಾಜ್ಞಾನಾಚರಣೆಯಲ್ಲಿ ನೂರು ತೆರನಾಗಿ,
ಮಹಾಬಯಲಾಗಿ ತೋರಿತ್ತು ನೋಡಾ.
ಮತ್ತಂ, ಹಸ್ತಸ್ಪರಿಶನವಾದ ಗುರುಪ್ರಸಾದ, ಲಿಂಗಾರ್ಪಣ
ಲಿಂಗಪ್ರಸಾದ ಜಿಹ್ವಾರ್ಪಣ, ಜಂಗಮಪ್ರಸಾದವೆ ಸಹತ್ರಿವಿಧಾರ್ಪಣವಾದಲ್ಲಿ
ಪರಿಪೂರ್ಣಪ್ರಸಾದವಾಗಿರ್ಪುದು.
ಆ ಪ್ರಸಾದವೆ ಹನ್ನೊಂದುತೆರನಾಗಿರ್ಪುದು.
ಆ ಹನ್ನೊಂದುನೂರಾಯಿಪ್ಪತ್ತೊಂದುತೆರನಾಗಿ
ಬಯಲಿಂಗೆ ಮಹಾಬಯಲಾಗಿರ್ಪುದು ನೋಡಾ.
ಈ ವಿವರವ ಜಂಗಮವರಿದಾನಂದಿಸಿ, ಭಕ್ತಂಗೆ ತೋರಿ,
ಮುಕ್ತನೆನಿಸಿ, ಉಭಯವಳಿದೊಂದಾಗಿ,
ಮಹವ ಸಾಧಿಸಬಲ್ಲವರೆ ನಿನ್ನ ಪ್ರತಿಬಿಂಬರು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೯೩ ॥

೯೪

ನಿರುಪಮಿತವೆನಿಸಿ, ಷಡ್ವಿಧಶೀಲ ವ್ರತಾಚಾರ ನೇಮನಿತ್ಯ
ಸತ್ಯಸದುಭಾವ ಸನ್ಮಾನಿತ ನಿಜೇಷ್ಟಲಿಂಗಸಂಬಂಧ

ಸದ್ಭರ್ಮಪ್ರಸನ್ನ ತ್ರಿವಿಧಪ್ರಸಾದಿಗಳಿರವದೆಂತೆಂದೊಡೆ:
ತನ್ನ ಸತ್ಕಾಯಕಮುಖದಲ್ಲಿ ಗುರುಕರುಣದಿಂದೊದಗಿದ
ತನುಮನಧನ ಸುಪದಾರ್ಥಗಳ ಘನಪವಿತ್ರಂಗಳಿರವನರಿದು,
ತನ್ನ ಸರ್ವೇಂದ್ರಿಯಮುಖದಲ್ಲಿ ಪರಿಣಾಮಿಸಬೇಕೆಂದಿಚ್ಛೆದೋರಿದೊಡೆ,
ಅದರೊಳಗೆ ಕ್ರಿಯಾಮುಖ ಜ್ಞಾನಮುಖ
ಮಹಾಜ್ಞಾನ ಮುಖವನರಿದು,
ಕ್ರಿಯಾರ್ಪಣಪದಾರ್ಥವ ಕ್ರಿಯಾಜಂಗಮ
ಲಿಂಗದೇವಂಗೆ ಸಮರ್ಪಿಸಿ,
ಅವರೊಕ್ಕುದ ಮಿಕ್ಕುದ ಬೆಸಗೊಂಡು,
ಇಷ್ಟಲಿಂಗಾರೋಪಿತಮುಖದಲ್ಲಿ ಪ್ರಾಣಲಿಂಗ ಭಾವಲಿಂಗಾರ್ಪಣವೆನಿಸಿ,
ಆ ಕ್ರಿಯಾಲಿಂಗಜಂಗಮಪ್ರಸಾದವೆ ಎನ್ನ ಕಾಯವೆಂದರಿದು,
ತನು ಮೀಸಲಾಗಿ, ಸತ್ಕ್ರಿಯಾ ಸಾಧನೆಯಳವಟ್ಟು,
ಜೀವಾತ್ಮನ ಸಂಚಲನಡಿಮೆಟ್ಟಿ, ನಿಂದ ನಿಲವೆ ತನುಶುದ್ಧಪ್ರಸಾದದಿರವು.
ಜ್ಞಾನಾರ್ಪಣಪದಾರ್ಥವ, ಜ್ಞಾನಜಂಗಮಲಿಂಗದೇವಂಗ ಸಮರ್ಪಿಸಿ,
ಅವರೊಕ್ಕುಮಿಕ್ಕ ಸಂತೋಷದಿಂದ ಮಹಾಜ್ಞಾನ
ಘನಲಿಂಗಮಂತ್ರಮಯವೆನಿಸಿ,
ಅನಿಮಿಷ ರೂಪು ರುಚಿ ತೃಪ್ತಿಯಾದ ಮಹಾಶೇಷನ ಬೆಸಗೊಂಡು
ಇಷ್ಟಲಿಂಗ ಸೊಮ್ಮುಸಂಬಂಧದಿಂದ
ಪ್ರಾಣಲಿಂಗಾರೋಪಿತಮುಖದಲ್ಲಿ ಇಷ್ಟಲಿಂಗದಲ್ಲಿ ಸಮರಸೈಕ್ಯನಾದ
ಚಿತ್ಪ್ರಣಮ ಪ್ರಾಣಲಿಂಗ ಭಾವಲಿಂಗಾರ್ಪಣವೆನಿಸಿ,
ಆ ಸುಜ್ಞಾನಲಿಂಗಜಂಗಮಪ್ರಸಾದವೆ ಎನ್ನ ಮನವೆಂದರಿದು,
ಮನದ ನುಡಿ ಮೀಸಲಾಗಿ, ಸಮ್ಯಜ್ಞಾನಾಚಾರ ಸಾಧನೆ ಅಳವಟ್ಟು,
ಅಂತರಾತ್ಮನ ಸಂಚಲವನಡಿಮೆಟ್ಟಿ ನಿಂದ ನಿಲವೆ
ಮನ ಸಿದ್ಧಪ್ರಸಾದದಿರವು.
ಮಹಾಜ್ಞಾನಾರ್ಪಣಪದಾರ್ಥವ
ಮಹಾಜ್ಞಾನಜಂಗಮಲಿಂಗದೇವಂಗೆ ಸಮರ್ಪಿಸಿ
ಅವರೊಕ್ಕುಮಿಕ್ಕು ಸಂತೋಷದಿಂದ ಮಹಾಪ್ರಕಾಶಪ್ರಸಾದವೆಂದು
ಪರಿಪೂರ್ಣವೆನಿಸಿ,
ಅನಿಮಿಷಮಹಾವಲೋಕನ ರೂಪು ರುಚಿ ತೃಪ್ತಿಯಾದ
ಮಹಾಘನಚಿತ್ಕಲಾಶೇಷವ ಬೆಸಗೊಂಡು,
ನಿಜೇಷ್ಟಲಿಂಗ ಸೊಮ್ಮುಸಂಬಂಧದಿಂದೆ ಪ್ರಾಣಲಿಂಗಾರೋಪಿತಮುಖದಲ್ಲಿ
ಇಷ್ಟಲಿಂಗದ ಚಿದ್ಹೃದಯದಲ್ಲಿ ಗೋಪ್ಯಮುಖದೊಳ್ ನೆಲೆಗೊಂಡಿರುವಂಥ
ಚಿತ್ಪ್ರಭಾಪ್ರಾಣಲಿಂಗ ಭಾವಲಿಂಗಾರ್ಪಣವೆನಿಸಿ,
ಆ ಮಹಾಜ್ಞಾನ ಲಿಂಗಜಂಗಮ ಪ್ರಸಾದವೆ ಎನ್ನ ಪ್ರಾಣವೆಂದರಿದು,

ಪ್ರಾಣನ ದೃಢ ನೈಷ್ಠೆ ನೆನಹು ನಿರ್ಧರ ಮೀಸಲಾಗಿ,
ಪರಿಪೂರ್ಣ ಮಹಾಜ್ಞಾನಾನುಭಾವಾಚಾರಸಾಧನೆಯಳವಟ್ಟು,
ಪರಮಾತ್ಮನ ಸಂಚಲವನಡಿಮೆಟ್ಟಿ ನಿಂದ ನಿಲವೆ
ಪ್ರಾಣಪ್ರಸಿದ್ಧ ಪ್ರಸಾದದಿರವುಯೆಂದು ಪೂರ್ವಪುರಾತನೋಕ್ತಿಯುಂಟು.
ಈ ಇರವನರಿಯದೆ,
ದಶವಿಧಪಾದೋದಕ ಏಕಾದಶಪ್ರಸಾದ ಪ್ರಣಮವ ಕಾಣಬಾರದು.
ಈ ನಿರ್ಣಯವನರಿದು, ಹಿಂದೆ ಹೇಳಿದ ಅರ್ಪಿತಾವಧಾನವ ಕಂಡುಂಡುಟ್ಟು,
ನಿತ್ಯತೃಪ್ತರಾದವರೆ ಕೇವಲ ನಿಜಜಂಗಮಪ್ರಾಣಿಯಾದ
ಅಚ್ಚಪ್ರಸಾದಿ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೯೪ ||

### ೯೫

ಪಿಂಡಬ್ರಹ್ಮಾಂಡಾದಿ ಮಾಯಾಭೋಗಯೋಗಮಂ ಸೆರ ನೀಗಿ,
ಅನಾದಿಮೂಲಚಿತ್ತಿನ ಚಿದಂಶ
ಪ್ರಮಥಗಣದಾಸೋಹಸಮ್ಮೋಹಿತರಾದ,
ಭಕ್ತಿ ಮುಕ್ತಿ ವಿರಕ್ತಿಯೆಂಬ ಬಾಲಬ್ರಹ್ಮದ ಕುರುಹನರಿದು
ಪರಿಭವಸುಖಕ್ರೀಡಾದ, ಕುಂಡಲತ್ರಯ ಪರಿಪೂರ್ಣಾನಂದಭವನ
ಸುಖಸಮರಸೈಕ್ಯಾನಂದನಿಜಕ್ರೀಡಾದ,
ಚಿತ್ಕುಂಡಲತ್ರಯವರಿದು ಸುಸಂಗದೊಳು ಕೂಡಿ,
ದುಸ್ಸಂಗವನೀಡಾಡಿ, ಪರಿಪೂರ್ಣ ಗಜಮಾರ್ಗವಿಡಿದು,
ಭವಗುರಿಮಾರ್ಗವ ಹೊದ್ದದೆ, ಸತ್ಯಶುದ್ಧ ನಡೆನುಡಿ
ದೃಢನೈಷ್ಠೆ ಮೂಲಚಿತ್ತುವೆ
ಘನಕ್ಕೆ ಮಹಾಘನವೆಂದರಿದ ಭಕ್ತಗಣಾರಾಧ್ಯರ
ಪೂರ್ಣಾನುಭಾವಜ್ಞಾನದಿಂದ,
ಒಪ್ಪತ್ತು ಸತ್ಕಾಯಕದ್ರವ್ಯವ ತೆರಹಿಲ್ಲದೆ ಕೂಡಿ
ಸಂಗಸಮರಸೈಕ್ಯನಾದ ಜಂಗಮ ಪ್ರಾಣಲಿಂಗಾಂಗ
ಮಂತ್ರಾನುಭಾವದಿಂದ ವಿರಾಜಿಸುತ್ತ
ಗುರುವರಪ್ರಸಾದಿಯಾದ ಅಚ್ಚಪ್ರಸಾದಲಿಂಗೈಕ್ಯಂಗೆ ಕಿಂಕುರ್ವಾಣವಾಗಿ,
ಆ ಮಹಾಶರಣನಂತೆ
ಸತ್ಕ್ರಿಯಾಗುರುಲಿಂಗಜಂಗಮಾರಾಧನಂ ಮಾಡಿ.
ಅವರ ನಿಜಶೇಷಪ್ರಸಾದ ಪಾದೋದಕಮಂ ಬಿಸಗೊಂಡು.
ಸಂತೃಪ್ತಾನಂದಮಯನಾಗಿ,
ಮತ್ತೊಪ್ಪತ್ತು ಆ ಸತ್ಕ್ರಿಯಾ ಘನಗುರುಲಿಂಗಜಂಗಮವ
ಶರಣಸತಿ ಲಿಂಗಪತಿಯೆಂಬುಭಯಸ್ಥಲದೊಳಗರಿದು.

ಪರಿಣಾಮಿಸುವ ಪರಿಯೆಂತೆಂದೊಡೆ :
ದೀಕ್ಷಾಪಾದೋದಕದೊಳಗೆ ಶಿಕ್ಷಾಪಾದೋದಕ ಪ್ರಣಮುಸಂಬಂಧವಾದ
ಶ್ರೀಭಸ್ಮೋದಕಮಂ ಮಾಡಿ,
ಚಿತ್ಪ್ರಣಮೋದಕಸಂಬಂಧವಾದ ತ್ರಿವಿಧೋದಕದೊಳಗೆ,
ಚಿತ್ಪ್ರಸಾದ ಅನಾದಿಮೂಲಪ್ರಣಮ ಪರಿಪೂರ್ಣ ಚಿತ್ಪ್ರಸನ್ನಪ್ರಸಾದ
ಅಖಂಡಜ್ಯೋತಿ ಅಖಂಡ ಮಹಾಜ್ಯೋತಿಪ್ರಣಮವೆಂಬ
ತ್ರಿವಿಧಪ್ರಣಮವಂ ಶ್ರೀಗುರುಮುಖದಿಂದರಿದು,
ನೂರೆಂಟು ಪ್ರಸಾದಪಾದೋದಕಪ್ರಣಮಜಪ,
ನೂರೆಂಟು ಪಾದೋದಕಪ್ರಸಾದಪ್ರಣಮಜಪ ಕರತಳಾಮಳಕವಾಗಿ,
ನೂರೆಂಟು ಚಿದಂಗ ಚಿದ್ಘನಲಿಂಗಸ್ಥಾನದ
ಸ್ಥಾನಪ್ರದಕ್ಷಣಪ್ರಣಮದ ಮಹಾಬೆಳಗಿನೊಳ್
ಆಚರಣೆಯ ಪ್ರಥಮ ತಳಿಗೆ ದ್ವಿತೀಯ ಬಟ್ಟಲಾಚರಣೆಯ
ಕಾರಣ ಒದಗಿರ್ದಡೆ,
ಏಕತಟ್ಟೆಬಟ್ಟಲಲ್ಲಿ ಚಿದಾನಂದೋದಕ
ಪರಿಪೂರ್ಣ ಪ್ರಸನ್ನಪ್ರಸಾದ ಸ್ವಯಂಭು ಮಹಾಜ್ಞಾನ
ನಿರಂಜನಜಂಗಮರ ತೀರ್ಥಮಂ ಪಡೆದು
ನಿಜೇಷ್ಟಬ್ರಹ್ಮದ ನವಕೃತಿಗಳಲ್ಲಿ ಬೆಳಗಿ,
ಅಣುವಿಂಗಣು ಪರಮಾಣುವಿಂಗೆ ಪರಮಾಣು,
ಮಹತ್ತಿಂಗೆ ಘನಮಹತ್ತಾಗಿ ವಿರಾಜಿಸುವಂತಾಗಿ,
ನಿಜವಸ್ತುವಂ ಕ್ರಿಯಾದೃಷ್ಟಿ ಜ್ಞಾನದೃಷ್ಟಿ ಮಹಾಜ್ಞಾನದೃಷ್ಟಿಗಳೆಲ್ಲ
ತುಂಬಿ ತುಳುಕಾಡಿ, ಬಿಂಬಿಸುತ್ತ
ಅಚಲಾನಂದನಾದಿಶರಣನಿರವು ತಾನೇ ತಾನಾದ ಕರಣಾರ್ಥ,
ಕಾಯದ ಕರಸ್ಥಲಮೂರ್ತಿಯ ಮಸ್ತಕದ ಮೇಲೆ
ಬಿಂದು ಬಿಂದು ಸುರಿವಂತೆ,
ಚತುರಂಗುಲಪ್ರಮಾಣವಾಗಿ ಸಮರ್ಪಿಸುವಾಗ
ಅನಾದಿಮೂಲಪ್ರಣಮಮಂ ಧ್ಯಾನಿಸುತ್ತ
ಸದ್ಯೋಜಾತೋದಯ ಷಡಕ್ಷರಸ್ಮರಣೆಯಿಂದ,
ಚತುರ್ವಿಧಧಾತುಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ಆಚಾರಸನ್ಮೋಹಿ ಸತ್ಕ್ರಿಯಾಲಿಂಗವೆ ಸ್ವರಿತನೋದಕ
ನಿಮಗೆ ಸಮರ್ಪಿತವಯ್ಯ.
ವಾಮದೇವೋದಯ ಷಡಕ್ಷರಸ್ಮರಣೆಯಿಂದ,
ಷಡ್ವಿಧಬಿಂದು ಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ಮಂತ್ರಾನಂದಮೋಹಿ ಗುರುಲಿಂಗವೆ ಅವಧಾನೋದಕ
ನಿಮಗೆ ಸಮರ್ಪಿತವಯ್ಯ.

ಅಘೋರಾನಂದೋದಯ ಷಡಕ್ಷರಸ್ಮರಣೆಯಿಂದ
ದಶವಿಧ ಕ್ಷೇತ್ರಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ಸದ್ರೂಪು ಚಿದ್ರೂಪು ಚಿನ್ಮಯ
ನಿರೀಕ್ಷಣಾನಂದಮಯನಾದ ಶಿವಲಿಂಗವೆ ಆಪ್ಯಾಯನೋದಕ
ನಿಮಗೆ ಸಮರ್ಪಿತವಯ್ಯ.
ತತ್ಪುರುಷೋದಯ ಷಡಕ್ಷರಸ್ಮರಣೆಯಿಂದ,
ದ್ವಾದಶವಿಕೃತಿಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ಯಜನಾದಿ ಪರಿಣಾಮಾನಂದಮಯನಾದ ಚರಲಿಂಗವೆ ಹಸ್ತೋದಕ
ನಿಮಗೆ ಸಮರ್ಪಿತವಯ್ಯ.
ಈಶಾನ್ಯೋದಯ ಷಡಕ್ಷರಸ್ಮರಣೆಯಿಂದ,
ಷೋಡಶಕಳಾಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ಇಳಾನಾದಪರಿಣಾಮಾನಂದಮಯನಾದ ಪ್ರಸಾದಲಿಂಗವೆ ಪರಿಣಾಮೋದಕ
ನಿಮಗೆ ಸಮರ್ಪಿತವಯ್ಯ.
ಗೋಪ್ಯೋದಯ ಷಡಕ್ಷರಸ್ಮರಣೆಯಿಂದ,
ಉಭಯವಿದ್ಯುಲ್ಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ವೇದಾದಿ ಪರಿಣಾಮಾನಂದಮಯನಾದ ಮಹಾಲಿಂಗವೆ
ನಿರ್ನಾಮೋದಕ ನಿಮಗರ್ಪಿತವಯ್ಯ.
ಅಖಂಡಗೋಪ್ಯೋದಯ ಷಡಕ್ಷರಸ್ಮರಣೆಯಿಂದ,
ಸಹಸ್ರ ಶಿವಕಳಾಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ಪರಿಪೂರ್ಣ ದೀಕ್ಷಾಪರಿಣಾಮಾನಂದಮಯನಾದ
ನಿಃಕಲಾಲಿಂಗವೇ ಆನಂದೋದಕ ನಿಮಗರ್ಪಿತವಯ್ಯ.
ಅಖಂಡಮಹಾಗೋಳಕೋದಯ ಷಡಕ್ಷರಸ್ಮರಣೆಯಿಂದ,
ತ್ರಿವಿಧಚಿತ್ಕಳಾಲಿಂಗಾಲಯದಲ್ಲಿ ಮೂರ್ತಿಗೊಂಡಿರುವ
ಪರಮಾನಂದ ಶಿಕ್ಷಾಪರಿಣಾಮಾನಂದಮಯನಾದ
ನಿಃಶೂನ್ಯಲಿಂಗವೆ ಶಿಕ್ಷಾನಂದೋದಕ ನಿಮಗರ್ಪಿತವಯ್ಯ.
ಅಖಂಡಮಹಾಪರಿಪೂರ್ಣಗೋಳಕೋದಯದ ಷಡಕ್ಷರಸ್ಮರಣೆಯಿಂದ,
ಏಕನಿರಂಜನ ವ್ಯಂಜನಾಲಯದಲ್ಲಿ ಮೂರ್ತಿಗೊಂಡಿರುವ
ಸಚ್ಚಿದಾನಂದ ಮೋಕ್ಷಪರಿಣಾಮಾನಂದಮಯನಾದ
ನಿರಂಜನಲಿಂಗವೆ ಜ್ಞಾನಾನಂದೋದಕ ನಿಮಗರ್ಪಿತವಯ್ಯ.
ಅಖಂಡಮಹಾಪರಿಪೂರ್ಣ ನಿರವಯಗೋಳಕೋದಯ
ತ್ರಿಯಕ್ಷರಸ್ಮರಣೆಯಿಂದ
ಬಯಲಮಂಟಪ ಚಿದಾಲಯದಲ್ಲಿ ಮೂರ್ತಿಗೊಂಡಿರುವ
ನಿರವಯಾನಂದಮಯನಾದ ಜ್ಯೋತಿರ್ಲಿಂಗವೆ ಸತ್ಯೋದಕ
ನಿಮಗರ್ಪಿತವಯ್ಯ.

ಎಂದು ಈ ತೆರದಿಂದ ದಶವಿಧಲಿಂಗಾಂಗಗಳಿಗೆ
ದಶವಿಧಪ್ರಣಮಸ್ಮರಣೆಯಿಂದ ದಶವಿಧಪರಿಪೂರ್ಣ ಚಿತ್ಪ್ರಸಾದೋದಕವ
ಸತಿಪತಿ ಒಂದೆ ಸ್ಥಲವಾದೊಡೆ ತಾ ಸಲಿಸಿದ ಮೇಲೆ
ಸೂಕ್ಷ್ಮಪ್ರಣಮಧ್ಯಾನವ ಕರಿಗೊಳಿಸಿ,
ಅತಿಗೋಪ್ಯದಿಂದ ಕೊಟ್ಟು, ನಿರ್ನಾಮವೆನಿಸಿ,
ತಾ ಸಲಿಸಿದ ಎಡೆಯ ಕೊಡುವುದು ಆಚಾರಸ್ಥಲ :
ಬೇರಾದೊಡೆ ಕೊಡಲಾಗದು.
ಮತ್ತ್ಯಾರಾದೊಡು ಭಕ್ತಗಣಾರಾಧ್ಯರು ಶರಣೆಂದೊಡೆ
ಕೊಂಡುಕೊಳ್ಳುವುದು ಮಾಡಲಾಗದು, ಮಾಡಿದಡೆ ಪಡಕೊಂಡು
ಮಾರ್ಗಕ್ರಿಯಾ ಭಕ್ತಜಂಗಮಲೀಲೆಯ ಬಳಸುವುದೆ
ಪ್ರಮಥಗಣಾಚಾರ ನ್ಯಾಯವು.
ಇನ್ನು ಹಿಂದೆ ಹೇಳಿದ,ಮಹಾಜ್ಞಾನತೀರ್ಥವ ಸಲಿಸಿದ
ಘನಲಿಂಗ ಶರಣನು
ಜಂಗಮಸೂತ್ರದಿಂದ ಹಸ್ತಸ್ಪರಿಶನವ ಮಾಡಿದ
ಗುರುರೂಪದ್ರವ್ಯ ಇಲ್ಲವಾದ ಸ್ಥಲವಾದೊಡೆ,
ಗುರುಪಂಚಾಕ್ಷರ ಲಿಂಗಪಂಚಾಕ್ಷರವ ಅಂತರಂಗದಲ್ಲಿ ಧ್ಯಾನಿಸಿ,
ವಾಮಕರಸ್ಥಲದಲ್ಲಿ ಚಿದ್ಘನಮಹಾನಿಜೇಷ್ಟಲಿಂಗದೇವನ
ಮೂರ್ತಮಾಡಿಸಿಕೊಂಡು,
ಮೂಲಷಡಕ್ಷರ ಪಂಚಾಕ್ಷರ ತ್ರಿಯಕ್ಷರ ಏಕಾಕ್ಷರ ಚಿದ್ಬಿಂದುವೆಂಬ
ಷೋಡಶಚಿತ್ಕಳಾಪ್ರಣಮಸ್ವರೂಪವ ಮಹದರುವಿನ ಕೊನೆಮೊನೆಯಲ್ಲರಿದು,
ಧ್ಯಾನಿಸುತ್ತ ಕ್ರಿಯಾಭಸಿತಸ್ಪರಿಶನಂಗೈದು,
ದಕ್ಷಿಣಹಸ್ತಮಣಿಗಳೆಲ್ಲ ವ್ಯಾಪಿಸಿ,ಆ ಹಸ್ತಕ್ಕೆ ಪಾವುಡವ ಮರೆಮಾಡಿ,
ಗೋಪ್ಯಮುಖದಲ್ಲಿ ಚಿದ್ಗುರುಲಿಂಗಜಂಗಮವೆಂಬ
ತ್ರಿವಿಧಪ್ರಣಮವ ಪ್ರದಕ್ಷಿಸಿ,
ಶುದ್ಧಪ್ರಸಾದಪ್ರಣಮಬಿಂದು, ಸಿದ್ಧಪ್ರಸಾದಪ್ರಣಮಬಿಂದು,
ಪ್ರಸಿದ್ಧಪ್ರಸಾದಪ್ರಣಮಬಿಂದುಯೆಂಬ
ದ್ವಾದಶಪ್ರಣಮಪ್ರಸಾದ ಮಂತ್ರಮಣಿಗಳಂ ಮುಟ್ಟಿ,
ಮನಘನಮಂತ್ರವಾಗಿ, ಮತ್ತಂದಿನಂತೆ ಪ್ರದಕ್ಷಿಸಿ,
ಒಂದೇವೇಳೆ ತನ್ನ ಸರ್ವಾಚಾರಕ್ಕೆ ಕರ್ತೃವಾಗಿ
ಪ್ರಸನ್ನವಾದ ಪವಿತ್ರಮೂರ್ತಿಯ ಚಿದಾಲಯಮಧ್ಯಮಂಟಪ
ಶೂನ್ಯಸಿಂಹಾಸನದ ಪರಚೌಕಮಧ್ಯ ಹೃತ್ಕಮಲವೆಂಬ
ಅನಿಮಿಷಸ್ಥಾನದಲ್ಲಿ ಮಹಾಜ್ಞಾನದಿಂದ ಮೂರ್ತಗೊಳಿಸಿ,
ಆತನ ಮಹಾಜ್ಞಾನಚರಣಕ್ಕೆ ಸ್ಪರಿಶನಂಗೈದು
ಸುಚಿತ್ತವೆಂಬ ಕ್ರಿಯಾಕರಸ್ಥಲವ ಚಿದ್ಘನಲಿಂಗದೇವನ ಮಸ್ತಕದಲ್ಲಿಟ್ಟು,

ತನ್ನೆಡೆಗೆ ಶುದ್ಧಪ್ರಸಾದ ಪಂಚಾಕ್ಷರದಿಂದೆ ಸೆನಹುನಿರ್ಧಾರವಾಗಿ
ಒಂದುವೇಳೆ ಸ್ಪರಿಶನಂಗೈದು ಸಿದ್ಧಪ್ರಸಾದಪಂಚಾಕ್ಷರದಿಂದ
ಮತ್ತೊಮ್ಮೆ ಸ್ಪರಿಶನಂಗೈದಲ್ಲಿ,
ಪ್ರಸಿದ್ಧಪ್ರಸಾದತ್ರಿಯಕ್ಷರ ಸ್ಮರಣೆಯಿಂದ
ಮೂಲಮಂತ್ರಮೂರ್ತಿ ಶ್ರೀಗುರುಲಿಂಗಜಂಗಮವೆ ನಮಃ ಎಂದು
ಮತ್ತೊಮ್ಮೆ ಸ್ಪರಿಶಸಂಗೈದು
ಪರಮಪವಿತ್ರ ಘನಗುರುಸ್ವರೂಪ ಶುದ್ಧಪ್ರಸಾದವೆನಿಸುವುದು.
ಅಂತಪ್ಪ ಶುದ್ಧಪ್ರಸಾದವನು ಸಾಲ್ವತ್ತೆಂಟು
ಪರಮಾನಂದಪ್ರಣಮಸ್ಮರಣೆಯಿಂದ,
ಆಯಾಯ ಹಸ್ತಮುಖಲಿಂಗ ದ್ರವ್ಯಪ್ರಸಾದಂಗಳೆಂಬ
ನಿಜಮಿಶ್ರಾರ್ಪಣದೇಕಾದಶಪ್ರಸಾದದಿರವನರಿದು,
ಚಿತ್ಕಲಾಪ್ರಸನ್ನಪ್ರಸಾದವಾಗಿ ಪರಿಶೋಭಿಸುವ ಶರಣಲಿಂಗ
ತಾನೆ ತಾನಾಗಿ, ಸಂತೃಪ್ತಿಯಿಂದ ಘನಕ್ಕೆ ಘನಗಂಭೀರನೆನಿಸಿ,
ಈ ಸನ್ಮಾರ್ಗವು ಗೋಪ್ಯಕ್ಕತಿಗೋಪ್ಯವಾಗಿ,
ಕರುಣಿಸಿದ ಗುರುವು ತನ್ನೊಳಗಾಗಿ, ತಾನು ಗುರುವಿನೊಳಗಾಗಿ,
ಏಕರೂಪವೆನಿಸಿ, ಒಡಲೊಂದಾಗಿ,
ಅಭಿನ್ನನಿಜಯೋಗಾನಂದದಿಂದ ನಡೆನುಡಿ ದೃಢಚಿತ್ತ ಹೊದ್ದಲ್ಲದೆ
ಜ್ಯೋತಿಜ್ಯೋತಿ ಕೂಡಿ ಬಯಲಾದಂತೆ,
ಕೇವಲ ಜಂಗಮಲಿಂಗವ ಒಪ್ಪತ್ತಾಚರಣೆಯಿಂದ
ಅಚ್ಚಪ್ರಸಾದಿಯಂತೆ ತತ್ಪ್ರಾಣವಾಗಿ
ಮತ್ತೊಪ್ಪೊತ್ತು ಒದಗಿದೊಡೆ ಮಹಾಸಂತೋಷದಿಂದ
ಪರಿಣಾಮತೃಪ್ತಿಯಿಂದ ಆಚರಣೆಯ ಅಂಗ ಮನ
ಪ್ರಾಣವಾಗಿ ಪರಿಶೋಭಿಸಿ.
ಒಪ್ಪತ್ತು ಆಚರಣೆ ಒದಗಿ, ಮತ್ತೊಪ್ಪೊತ್ತು ಆಚರಣೆ ನಿಂತು,
ಚತುರ್ವಿಧಸಾರಾಯಸ್ಥಲ ಶೂನ್ಯ ಚಿದಂಗ ಚಿದ್ಘನಲಿಂಗ
ಸಂಗಸಮರಸೈಕ್ಯನಾಗೊಪ್ಪುವ ಉಭಯಸ್ಥಲವಾದಲ್ಲಿ
ಈ ತೆರದಿಂದ ಸಂಬಂಧಾಚರಣೆಯನಾಚರಿಸಿ, ತನ್ನ ತಾನರಿದು,
ಇದಿರಿಟ್ಟ ಭೋಗವ ಮರೆದಾತನೆ ನಿಚ್ಚಪ್ರಸಾದಿಯೆಂಬೆ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೯೫ ||

೯೬

ಅನಾದಿಮೂಲಚಿತ್ತುವಿನ ಚಿದಂಶಿಕನಾದ
ಶಿವಯೋಗಸಂಪೂಜ್ಯರಾದವರು,
ತಮ್ಮ ತನುಮನಪ್ರಾಣೇಂದ್ರಿಯ ಕರಣಕರ್ಕಶವಿಷಯವ್ಯಾಪಾರ

ಭವಘೋರಸಂಸಾರವೆ ತನ್ನ ತಾನಾಗುವದಕ್ಕೆ
ಕಾಲಕಾಮ ಮಾಯಾಪಾಶದ ತೊಡಕೆಂದರಿದು ನಿರಸನಂ ಮಾಡಿ,
ನರಜೀವಸೂತಕಪಾತಕ ರಿಣಭಾರಕರಡಿಮೆಟ್ಟಿ,
ನಡೆನುಡಿ ಒಡಲಗುಣವಳಿದುಳಿದು,
ದೃಢನೈಷ್ಠಾನುಭಾವರ ಸಂಗಸಮರತಿಯಂ ಸಾಧಿಸಿ ಭೇದಿಸುತ್ತ
ಷಟ್‌ಸ್ಥಲೋಪದೇಶ ಕರತಳಾಮಳಕವಾಗಿ,
ಘನಲಿಂಗಮೆಚ್ಚಿ ನಡೆದು, ಘನಲಿಂಗಮೆಚ್ಚೆ ನುಡಿದು,
ಘನಲಿಂಗಮೆಚ್ಚಿ ಒಡಲೊಂದಾಗಿ ಭೋಗಿಸಿ,
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಚಿತ್ಕಳಾಪ್ರಸಾದಿಗಳಿಗೆ
ಕಿಂಕುರ್ವಾಣಭೃತ್ಯಭಕ್ತಿ ನಿರ್ವಂಚನತೆಯಳವಟ್ಟು ಭಾವಭರಿತವಾಗಿ.
ಈ ಲೀಲಾಸಮಯದೊರಕದೆಂದು,
ಪರಿಪೂರ್ಣಜ್ಞಾನಾನುಭಾವವ ಸಾಧಿಸುತ್ತ,
ಸರ್ವಾಚಾರಸಂಪದಮಂ ಗ್ರಹಿಸಿ,
ಸಗುಣಾರ್ಚನಾರ್ಪಣ ನಿರ್ಗುಣಾರ್ಚನಾರ್ಪಣಮಂ ನೆರೆಯರಿದು.
ಚಿತ್ಕಲಾಪ್ರಸನ್ನಪ್ರಸಾದ ಬಳಸಿಬ್ರಹ್ಮ ಬಾಲಬ್ರಹ್ಮದ
ವಿರಾಗತಿಯನರಿದಾಚಾರಮೂರ್ತಿ ನಿಜಜಂಗಮಲಿಂಗದೇವನು,
ತನ್ನ ದಯಾನಂದದಿಂದ ತೆರಹಿಲ್ಲದೆ
ದಿನರಾತ್ರಿಗಳಲ್ಲಿ ಒದಗಿಬಂದೊಡೆ,
ಮಹಾಸಂತೋಷ ಪ್ರೀತಿ ಪ್ರೇಮಾನಂದದಿಂದ,
ಅಚ್ಚಪ್ರಸಾದಿಯಾಚರಣೆಯಂತೆ ಹರುಕಾಗದೆ
ಶೋಧಕತ್ವದಿಂದ ಸದ್ರೂಪು ರುಚಿ ತೃಪ್ತಿದ್ರವ್ಯಮಂ
ಕಠಿಣಗಳ ಕಳೆದುಳಿದು ಮೌನಮಂತ್ರದಿಂದ ಪರಿಪೂರ್ಣಲಿಂಗಾರ್ಪಣದ
ಮರ್ಮವರಿದು, ಪರಿಣಾಮತಟ್ಟುವಂತೆ
ಮಿಶ್ರಾರ್ಪಣಮಂ ಸಮರ್ಪಿಸಿ,
ಅವರ ಕರುಣಾನಂದ ಚಿದ್ರೂಪು ರುಚಿ ತೃಪ್ತಿ ಶೇಷೋದಕ
ಪ್ರಸಾದಮಂ ಬೆಸಗೊಂಡು,
ಮತ್ತವರ ತೆರಹಿಲ್ಲದೆ ಚರಣಕಮಲಮಂ
ದರುಶನ ಸ್ಪರಿಶನ ಸಂಭಾಷಣೆ ತೀರ್ಥಪ್ರಸಾದಾನುಭಾವಂಗಳಿಂದ
ಸೂತ್ರದೊಳು ಲೋಲುಪ್ತನಾಗುತ್ತ,
ತನುಮನಕರಣೇಂದ್ರಿಯಗಳಲ್ಲಿ ಅಚ್ಚಪ್ರಸಾದಿಸ್ಥಲವಾಗಿ,
ನಿಜನೈಷ್ಠಾನುಭಾವ ಹೊದ್ದಲ್ಲದೆ ಅಲ್ಲಿಂದ ಜಂಗಮಲಿಂಗದೇವನು
ದಿನದಲ್ಲಿ ಒದಗಿ, ರಾತ್ರಿಯಲ್ಲಿ ಒದಗದಿದ್ದರೆ
ನಿಚ್ಚಪ್ರಸಾದಿಯಂತೆ ಸಂಬಂಧದಾಚರಣೆಯನಾಚರಿಸಿ,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣವಾಗಿ

ಅಲ್ಲಿಂದ ಶರಣಸತಿ ಲಿಂಗಪತಿಯೆಂಬ ರತಿಕೂಟದಿಂದ,
ಕ್ರಿಯಾಘನಗುರುಲಿಂಗಜಂಗಮಸೂತ್ರವಿಡಿದು,
ಬಂದ ಕ್ರಿಯಾಭಸಿತ ಪ್ರಣಮಪ್ರಕಾಶಂಗಳಂ
ಕಣ್ಮನ ಭಾವ ತುಂಬಿ ತುಳುಕಾಡುತ್ತ,
ದಿನರಾತ್ರಿಗಳೆಂಬ ಸಂದುಸಂಶಯವಳಿದು,
ಕರ ಮನ ಭಾವದ ಕೊನೆಮೊನೆಯೊಳಗೆ
ಬೆಳಗುವ ಮಹಾಜ್ಯೋತಿಯೊಡಗೂಡಿ, ಸಂಬಂಧದಾಚರಣೆಯನಗಲದೆ,
ಪರಿಪೂರ್ಣ ಮಹಾಘನ ಶೇಷ ಪಾದೋದಕ
ಪ್ರಸನ್ನಪ್ರಸಾದಪ್ರಣಮಕೂಟಂಗಳಿಂದೆ
ಕ್ರಿಯಾಲೀಲೆಯ ಸವಾಪ್ತಮಾಡಬಲ್ಲಾತನೆ,
ಜ್ಯೋತಿ ಜ್ಯೋತಿ ಕೂಡಿ ಬಯಲ ಸೇರಿದಂತೆ,
ಶರಣನ ಲಿಂಗಸಂಗಸಮರಸೈಕ್ಯ
ಸಮಯಪ್ರಸಾದಿಯ ಸ್ಥಲದಿರವು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೯೬ ॥

೯೭

ಪರಮಪವಿತ್ರ ಭಕ್ತೋಪಕಾರ ನಿಜವೀರಶೈವೋದ್ಧಾರಕ
ನಿಜವಿರತಿ ಕೌಪ ಕಟಿಸೂತ್ರ ಕಂತೆ ಕಮಂಡಲ
ಮೊದಲಾದ ಲಾಂಛನ ಪರಿಪೂರಿತ
ಷಟ್‌ಸ್ಥಲೋಪದೇಶ ಮಾರ್ಗೋದ್ಧಾರಕ,
ಸದ್ಭಕ್ತಿ ಜ್ಞಾನಾಚಾರ ಕ್ರಿಯಾನುಭಾವ
ನಿಜವೈರಾಗ್ಯಯೋಗಾನಂದಭರಿತೋಲ್ಲಾಸ,
ಸತ್ಯಶುದ್ಧ ನಡೆನುಡಿ ದೃಢಚಿತ್ತ ಸ್ವಯಚರ
ಪರಸ್ಥಲಕಾರಣವತಾರ್ಯ್ಯರಾಗೊಪ್ಪುವಂಥ,
ನಿಜಜಂಗಮಲಿಂಗಮೂರ್ತಿಗಳಾಚರಿಸಿ,
ಮೂರ್ತಿಸ್ವರೂಪರಾಗಿ ನಿಂದನಿಲುಕಡೆಯೆಂತೆಂದೊಡೆ :
ಸ್ವಯಸ್ಥಲ ಚರಸ್ಥಲ ಪರಸ್ಥಲವನೊಳಕೊಂಡೊಪ್ಪುವ
ಶಕ್ತಿಸಮೇತರಾದ ಘನಲಿಂಗಜಂಗಮಮೂರ್ತಿಗಳಾದರು.
ಕ್ರಿಯಾಶಕ್ತಿವಿರಹಿತರಾದ ಪಟ್ಟದದೇವರು ಅತೀತ ಚರಮೂರ್ತಿಗಳಾದರು.
ಆ ಶಕ್ತಿಸಮೇತವಾದ ಚತುರಾರಾಧ್ಯರು ಲಿಂಗಧಾರಣಸ್ಥಲ
ಶಂಖ ಗಿಳಿಲುವಿಡಿದ ಗುರುಸ್ಥಲ,
ದಂಡಾಗ್ರ ಗಿಳಿಲುವಿಡಿದ ಅತೀತಸ್ಥಲದ
ದೀಕ್ಷಾರ್ಚನಸ್ಥಲ ಮೊದಲಾದ
ತ್ರಿವಿಧಸ್ಥಲವ ಬಿಡುಗಡೆಯುಳ್ಳ ವಿರಕ್ತಸ್ಥಲವಿಡಿದವರಾದರು.

ಚತುರ್ವಿಧಸ್ಥಲದಿಂದ ಆಚರಿಸುವ ಜಂಗಮಮೂರ್ತಿಗಳು
ಭಕ್ತರ ವಿಶ್ವಾಸದಿಂದ ದಾಸೋಹನಿಮಿತ್ಯಾರ್ಥವಾಗಿ
ಲಿಂಗಮುದ್ರಾಭೂಮಿಯೆನಿಸಿ ಮಠಮನೆಗಳ ಮಾಡಿದವರಾಗಲಿ,
ಪಂಚಮುದ್ರೆಗಳ ಧರಿಸಿ ನೂರಾರುಮೂರ್ತಿಗಳೊಡಗೂಡಿ,
ವಾಹನಾದಿ ಸಾಹಿತ್ಯಮಾನದಿಂದ ಗ್ರಾಮಾನುಗ್ರಾಮಕ್ಕೆ
ಉತ್ಸಾಹದಿಂದ ದುಷ್ಟನಿಗ್ರಹ ಶಿಷ್ಟಪ್ರತಿಪಾಲನೆಯ ಮಾಡಿ,
ಆಚಾರೋದ್ಧಾರಕ ಗುರುಮಾರ್ಗವಿಡಿದ ಗುರುಸಾಂಪ್ರದಾಯಕರು,
ತೀರ್ಥಪ್ರಸಾದ ಸ್ಥಲಸಂಬಂಧ ಕೊಡುಕೊಂಬುವ
ತ್ರಿವಿಧದೀಕ್ಷೋಪಕಾರಣಿಕರೆಲ್ಲ ತಮ್ಮ ಸ್ಥಲಸ್ಥಲವಿದ್ದಂತೆ
ಕರ್ತೃಭೃತ್ಯಸ್ಥಲದ ವರ್ಮಾದಿವರ್ಮವರಿದು,
ಭಕ್ತಿಜ್ಞಾನವೈರಾಗ್ಯಕೀಲ ತಿಳಿದು, ನಡೆನುಡಿ ಒಂದಾಗಿ,
ಅಂತರ್ಜ್ಞಾನ ಬಹಿಕ್ರಿಯಾ ಹೋದಲ್ಲದೆ
ಸಪ್ತವಿಧಭಕ್ತಿಗಳಿಂದ ಸಾವಧಾನವಿಡಿದು,
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿಸ್ಥಲವನಾಚರಿಸುವುದು.
ಸತ್ಯಶುದ್ಧಸನ್ಮಾರ್ಗರ ನಡೆಯುಳ್ಳವರ ನಮ್ಮ
ಪರಿಪೂರ್ಣಪ್ರಸಾದಿಗಳೆನಿಸುವರು.
ಗುರುಲಿಂಗಜಂಗಮವು ಅಲ್ಲವಾದಡೆ,
ಷಡುಸ್ಥಲಮಾರ್ಗಕ್ಕೆ ಸಲ್ಲರೆಂಬುವುದೆ ಹರಗುರುವಾಕ್ಯ ಪ್ರಮಾಣವು.
ಅದೇನು ಕಾರಣವೆಂದಡೆ :
ತಮ್ಮ ಮೂಲಚಿತ್ತುವಿನ ಕೊನೆಮೊನೆಯ ಮೇಲೆ ಉದಯವಾದ
ಅಚ್ಚಪ್ರಸಾದಿಗಳು ನಿಚ್ಚಪ್ರಸಾದಿಗಳು ಸಮಯಪ್ರಸಾದಿಗಳು
ಅದರಿಂದ ಎಲ್ಲಿ ಜನನವಾದಂಥಾದೆಲ್ಲ ಅದೇ ಬೆಳೆಯಾಗಿ
ಲಯವಾಗಬೇಕೆಂಬ ದೃಷ್ಟವನರಿದು ಭಕ್ತಗೆ ಸಲ್ಲುವದು.
ತಮಗೆ ಬೇಕಾದಂಥದ ಕೊಂಬೆವು,
ನಮಗೇತರ ಶೀಲ ವ್ರತಾಚಾರ ನೇಮ ನಿತ್ಯವೆಂದು
ಪ್ರಸಾದ ಪಾದೋದಕ ಪ್ರಸಿದ್ಧಪ್ರಸಾದಸೇವಿತರೆಂದು
ನಡೆಗೆಟ್ಟನುಡಿಯ ನುಡಿದು, ನಾವು ಕೊಂಡುದು ಪ್ರಸಾದ,
ನಿಂದುದು ಓಗರವೆಂದು,
ಮನಸಿಗೆ ಕೈಗೆ ಬಂದಂತೆ ತಿಂದು ತೇಗುವ,
ಪಾದೋದಕಪ್ರಸಾದದ್ರೋಹಿಗಳ ಮೋರೆಯ
ಮೇಲೆ ಪಟಪಟನೆ ಹೊಡೆದು
ಭವಘೋರಸಂಸಾರಸಾಗರಕ್ಕೆ ಹಾಕೆಂದವರು
ನಮ್ಮ ಪೂರ್ವಪುರಾತನ ಗುರು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೯೭ ॥

೯೮

ಸತ್ತುಚಿತ್ತಾನಂದ ನಿತ್ಯಪರಿಪೂರ್ಣಾನುಭವಿಯಾದ
ನಿಜಜಂಗಮ ಲಿಂಗಶರಣ ನಿಂದ ನಿಲುಕಡೆಯ ಇರವೆಂತೆಂದೊಡೆ :
ಕಾಯ ವಾಚ ಮಾನಸ ಮೊದಲಾದ
ಕರಣೇಂದ್ರಿಯವಿಷಯಾದಿಗಳೆಲ್ಲ ಒಬ್ಬುಳಿಯಾಗಿ,
ನಿಜಮೋಕ್ಷಸ್ವರೂಪ ಭಕ್ತವಿರಕ್ತಸ್ಥಲದ ಮರ್ಮಮಂ
ಪೂರ್ವಪುರಾತನ ನೂರೊಂದು ವಿರಕ್ತರು,
ನೂತನ ಪುರಾತನ ಗಣಸಮೂಹವೆಲ್ಲ
ಪರಮಪಾತಕಸೂತಕವಿರಹಿತವಾದ
ಮಹದರುವೆಂಬ ಗುರು, ಸರ್ವಾಚಾರವೆಂಬ ಲಿಂಗ,
ಸತ್ಕ್ರಿಯಾಸಮ್ಯಜ್ಞಾನಾನುಭಾವವೆಂಬ ಜಂಗಮಸ್ಥಲವನರಿದವರು
ಲಿಂಗವೆಂಬೆರಡಕ್ಷರ ಸಂಬಂಧವಾದ ಪಿಂಡಬ್ರಹ್ಮಾಂಡಗಳ
ಅನಾಚಾರವ ಕಂಡು ಅವಗಡಿಸಿ ನಿಂದ್ಯನಮಾಡುವುದೆ ಪಾಪದಾಗರ.
ಲಿಂಗವಿದ್ದಸ್ಥಾನವೆಲ್ಲ ನಿಜವೆಂದು, ಅನಾಚಾರವ ಕಂಡು,
ಲಾಂಛನ ವಿಭೂತಿ ರುದ್ರಾಕ್ಷಿಗಳ ನೋಡಿ,
ಭಾವದಲ್ಲಿ ಭರಿತವಿಲ್ಲದೆ ಕೂಡಿ,
ತೀರ್ಥಪ್ರಸಾದಾನುಭಾವಸೇವಿತರನಿಸಿ,
ಸ್ತುತಿಮಾಡುವುದೆ ಪುಣ್ಯದಾಗರ.
ಶೈವಮತದವರು ಮೃತ್ತಿಕೆಯ ಲಿಂಗನ ಮಾಡಿ,
ಅಷ್ಟವಿಧಾರ್ಚನೆ ಷೋಡಶೋಪಚಾರದಿಂದರ್ಚಿಸಿ,
ಪುಣ್ಯವ ಪಡೆದು, ಕಡೆಗೆ ಬಿಟ್ಟಲ್ಲಿ ಪಾಪಕೆ ಗುರಿಯಾದಂತೆ,
ಈಗಳಾದರೂ ಗುರುಮಾರ್ಗಾಚಾರಕೋವಿದರು
ಆ ಸತ್ಯವಾದುದ ದೇವರೆಂದು ಪೂಜಿಸಿದೊಡೆ ಒಂದನೆ ಪುಣ್ಯವಯ್ಯ.
ಪೂಜಿಸಿದಂತಾದ್ದು ಅಸತ್ಯವೆಂದು ಬಾಹ್ಯಾಂತರಂಗದಲ್ಲಿ
ಹೊಳೆದೊಡೆ ಎರಡನೆ ಪಾಪವಯ್ಯ.
ಇಂತಪ್ಪ ಪುಣ್ಯಪಾಪವಿರಹಿತನಾಗಿ,
ಶ್ರುತಿಗುರುಸ್ವಾನುಭಾವಕ್ಕೆ ಸನ್ಮತವಾದುದ ಒಡವೆರದು
ಬಳಸಿಬ್ರಹ್ಮ ಉಂಡುಪವಾಸಿಯಾಗಿಯು,
ತನಗೊಂದಾಶ್ರಯವಿಲ್ಲದೆ ತಮ್ಮ ನಿಜವ ತನಗಾಶ್ರಯವಾಗಿ,
ನಿರಾಶ್ರಯದಿಂದ ಹೊನ್ನು ಹೆಣ್ಣು ಮಣ್ಣೆಂಬ
ಭ್ರಾಂತುಭ್ರಮೆಯಳಿದು ಪೂರ್ವಪುರಾತನರೊಳಗೆ
ಘನಲಿಂಗದೇವರು ಗುಮ್ಮಳಾಪುರದ ಗೌರಮ್ಮನವರು ಸಹವಾಗಿ
ಹೋದ ಪರಮವಿರಾಗತಿಯ,
ಅಂದಿಂದೆಂಬ ಸಂದೇಹದ ರಜಗೀಲ ಕಳೆದುಳಿದು,

ಧ್ಯಾನ ಮೌನ ನೇಮ ನಿತ್ಯ ಸತ್ಯ ಸದುಭಾವಭರಿತನಾಗಿ,
ಗುರುಮಾರ್ಗಾಚಾರ ಸಮ್ಮೋಹಿತರಾದ
ಅಚ್ಚಪ್ರಸಾದಿ ಭಕ್ತ ಜಂಗಮಾಚರಣೆಯ ತನಗಂಗವೆನಿಸಿ,
ನಿಚ್ಚಪ್ರಸಾದಿ ಭಕ್ತಜಂಗಮಾಚರಣೆಯ ತನ್ನ ತತ್ಪ್ರಾಣವೆನಿಸಿ,
ಸಮಯ ಪ್ರಸಾದಿ ಭಕ್ತಜಂಗಮಾಚರಣೆಯ ತನ್ನ ಭಾವವೆನಿಸಿ,
ಗುರುಪ್ರಸಾದವ ಪಡೆದು,
ಲಿಂಗಪ್ರಸಾದಿ ಭಕ್ತಜಂಗಮಾಚರಣೆಯ ತನ್ನ ಹಸ್ತಪಾದವೆನಿಸಿ,
ಈ ಮಾರ್ಗವನರಿಯದೆ ಮೂಢಾತ್ಮ ಲಿಂಗದೇಹಿ ಪರಮಪಾತಕರೆಲ್ಲ
ತನ್ನ ವಿಸರ್ಜನತಾಣವೆಂದರಿದು, ಎಚ್ಚರತಪ್ಪದೆ,
ಸಾವಧಾನ ನಡೆನುಡಿಯಿಂದ ಪರನಾದ ಚಿದ್ಬಂದುಸ್ವರೂಪವಾದ
ವಿಭೂತಿ ರುದ್ರಾಕ್ಷಿ ಪ್ರಣಮ ಪಾದೋದಕ ಪ್ರಸಾದಂಗಳ
ಸಾಕಾರವಾದಿಷ್ಟಲಿಂಗಾರೋಪಿತ,
ನಿರಾಕಾರವಾದ ಪ್ರಾಣಲಿಂಗಾರೋಪಿತ
ನಿರವಯವಾದ ಭಾವಲಿಂಗಾರೋಪಿತಂಗಳಿಂದ
ಪರಿಪೂರ್ಣ ಮಿಶ್ರಾರ್ಪಣದೊಮಾರ್ಡಿಮರ್ಮವರಿದು
ಮೇಲಾದ ಅಯೋಗ್ಯಾತೀತನಾದ ತ್ರಿಕೂಟದ
ಸಂಗಸಮರತಿಯ ಸರ್ವಾವಸ್ಥೆಗಳೆಲ್ಲ ಅಡಿಮೆಟ್ಟಿ,
ಯೋಗ್ಯವಾದ ತ್ರಿಕೂಟದ ಸಂಗಸಮರತಿಯ ಸರ್ವಾವಸ್ಥೆಗಳಲ್ಲಗಲದೆ,
ಎಚ್ಚರಂದಳಿದು, ಮೈಮರೆಯದೆ,
ತ್ರಿವಿಧಗುಹ್ಯಸ್ಥಾನವೆಂಬ ತ್ರಿವಿಧಮನೆಯಲ್ಲಿರ್ಪ
ತ್ರಿವಿಧಬಿಂದುಚಲನಾರಹಿತವಾಗಿ,
ತನ್ನ ತಾ ಸಾಕ್ಷಿಯಿಂದ, ನಿಜನಿವಾಸಕ್ಕೆ ತವರುಮನೆಯೆಂದು,
ಗ್ರಾಮಬಂಧನ ನಿಳಯಬಂಧನ ದ್ರವ್ಯಬಂಧನ ಈಷಣತ್ರಯಬಂಧನವೆಂಬ
ಕಾಲಕಾಮಮಾಯಾಸಂಸಾರಸಾಗರವ ದಾಂಟಿ,
ನಿರ್ಮಾಯ ಕಾಲಕಾಮನಿಃಸಂಸಾರಸಾಗರಮಂ ಅತಿಮೋಹವಿಲ್ಲದೆ,
ಲಿಂಗನಿಮಿತ್ಯವಾಗಿ, ಪರಿಣಾಮದಿಂದ ಯೋಗ್ಯವಾದ
ನಿರ್ಮಲ ನಿಃಕಳಂಕ ದ್ರವ್ಯದ ನಿಃಕಳಂಕಮೂರ್ತಿ ತಾನೇ ತಾನಾಗಿ
ವಿರಾಜಿಸುವವರೆ ಚಿತ್ಕಲಾಪ್ರಸಾದಿ ಭಕ್ತಜಂಗಮ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೯೮ ||

೯೯

ಪರಿಪೂರ್ಣಾಂಗ ಲಿಂಗ ಶಕ್ತಿ ಭಕ್ತಿ ಹಸ್ತ ಮುಖ
ಪದಾರ್ಥ ಪ್ರಸಾದವೆಂಬ
ಅಷ್ಟವಿಧಸಕೀಲವ ಮಾಡಲು,

ಇನ್ನೂರಹದಿನಾರು ಸಕೀಲವೆ ಕಡೆಯಾದ
ಸಮಸ್ತಸಕೀಲದ ಪರ್ಮಾದಿಪರ್ಮವರಿದು,
ಸಚ್ಚಿದಾನಂದಸಾಗರವೆಂಬ ಗುರುಪಾದೋದಕಪ್ರಸಾದಿ,
ಲಿಂಗಪಾದೋದಕಪ್ರಸಾದಿ, ಜಂಗಮಪಾದೋದಕಪ್ರಸಾದಿ,
ಪರಿಪೂರ್ಣಪಾದೋದಕ ಪ್ರಸಾದಿ,
ಚಿತ್ಕಲಾಪಾದೋದಕಪ್ರಸಾದಿಯೆಂಬ ಸ್ಥಲದ ಪರ್ಮವರಿದು, ಬೆರಸಿ,
ವಿನೋದಾರ್ಥದಿಂದ ಉಪಾಧಿಯಿಲ್ಲದೆ
ನಿರುಪಾಧಿಶಿವಾರಣ್ಯಕ್ಕೆ ವಿರೋಧಿಸಿ,
ಪರಿಣಾಮಿಸಬೇಕೆಂಬ ನಿಜಶಿವಯೋಗಿಶ್ವರರು,
ಪಂಚಕಸಂಯುಕ್ತವಾದ ಫಲಂಗಳ ಕಂಡು,
ಭಿಕ್ಷಾಂದೇಹಿಯಾಗಿ ತೆಗೆದುಕೊಂಡು,
ಪರಿಣಾಮಜಲವಿದ್ದಲ್ಲಿಗೆ ಹೋಗಿ,
ಅನಾದಿ ಶ್ರೀಗುರುಲಿಂಗಜಂಗಮಸ್ವರೂಪಧ್ಯಾನದಿಂದ,
ಆ ಉದಕದ ಪೂರ್ವಾಶ್ರಯವ ಕಳೆದು, ಪರಮಾನಂದಜಲವೆಂದು,
ನಿತ್ಯನಿತ್ಯವಾಚರಿಸುವ ಕರ್ಮೇಂದ್ರಿಗಳನ್ನು ಶುಚಿರ್ಭೂತವೆನಿಸಿ,
ಕಟಿಸ್ಥಾನ ಕಂಠಸ್ಥಾನ ಮಂಡೆಸ್ಥಾನಗಳ ಪರಿಣಾಮಪರಿಯಂತರವಾಚರಿಸಿ,
ನಾರಿಕೇಳ ಕೂಷ್ಮಾಂಡ ಬಿಲ್ವಾದಿ ಮೃದ್ಭಾಂಡ ಕಡೆಯಾದ
ಕರಂಡ ಕಪಾಲಗಳಲ್ಲಿ ತೀರ್ಥೋದಕ ಶೇಷೋದಕ
ಚಿದಾನಂದೋದಕಗಳ ಪರಿಣಾಮಿಸಿ,
ರಸಫಲಗಳಲ್ಲಿರುವ ಕಠಿಣ ಕಸವ ಕಳೆದುಳಿದು,
ಪಕ್ವಮಾಡಿಟ್ಟು, ರಂಭಾದಿ ಪಟಫಲ ಕಡೆಯಾದ
ಪಲಾಶವಂತವಾದ ಪರ್ಣಾದಿಗಳಲ್ಲಿ
ಅರ್ಪಿತವಾದನ್ನದ್ರವ್ಯ ಉದಕಂಗಳು
ಸೂಸಲೀಯದಂತೆ ರಚಿಸಿ,
ಸಂಬಂಧಾಚರಣೆಯ ಮಹಾಜ್ಞಾನಸೂತ್ರದಲ್ಲಿ
ತನ್ನ ತಾನೆ ಪ್ರತಿ ಯಾರೂ ಇಲ್ಲದೆ ಸಾವಧಾನದಿಂದ
ಕ್ರಿಮಿಕೀಟಾದಿಗಳಿಗೆ ಶೇಷಪ್ರಸಾದೋದಕ
ಪ್ರಸಾದಂಗಳು ಬೀಳಗೊಡದಂತೆ
ಓರ್ವರಾಚರಿಸಿ ಲಿಂಗವೆ ಜಂಗಮವೆಂಬ
ಸಚ್ಚಿದಾನಂದನ್ಯಾಯದಿಂದ ಪರಿಣಾಮಿಸುವುದ ಏಕಭಾಜನಭೋಜನಸ್ಥಲವು.
ಇದೆ ಸಮಯಪ್ರಸಾದಿಯ ನ್ಯಾಯವು.
ಇಂತಪ್ಪ ಶೇಷಪ್ರಸಾದ ಪಾದೋದಕ ಸೇವಿಸಿದ ಪರ್ಣಂಗಳ
ಭೂನಿಕ್ಷೇಪವ ಮಾಡಿ, ಸುಯಿಧಾನಿಯಾಗಿರ್ಪುದೆ
ಸತ್ಯಶರಣರ ಮಾರ್ಗವು.

ಈ ಮಾರ್ಗವು ಉಭಯಗಣಾಧೀಶ್ವರರು ಆಚರಣೆಯನಾಚರಿಸಿ,
ಅಚ್ಚಪ್ರಸಾದಸ್ಥಲದಿಂದ ಪಡಕೊಂಡು
ಮುಗಿಯಬೇಕೆಂದಡು ಬಂದೀತು.
ಇದು ಬಹುಸಾವಧಾನಿಗಳಾಚರಿಸುವ ನ್ಯಾಯವು.
ಇದಕೇನು ಸಂಶಯವಿಲ್ಲವು ; ಪೂರ್ವಪುರಾತನರೋಕ್ತವುಂಟು.
ಪಾದಾರ್ಚನೆಮಾಡಿ ಪಡಕೊಂಡಾತನು
ಪಾದವ ಪಾಲಿಸಿದಾತನು, ಏಕಭಾಜನಭೋಜನವುಂಟು.
ಬಹುಗೋಪ್ಯದಲ್ಲಿ ಆಚರಿಸುವದು, ಇದು ಸಮರಸಜ್ಞಾನಿಗಳ ಮಾತು.
ಭೌಕ್ತಿಕ ಅನ್ನುದಕಾದಿಗಳ ಗುರುವಿತ್ತ ಲಿಂಗಕ್ಕೆ ನೈವೇದ್ಯವ ಮಾಡಿ,
ಲಿಂಗದ ಸಚ್ಚೆಯ ಧರಿಸಿ ಭೋಜೆಗಟ್ಟಿ ಭುಂಜಿಸುವರೆಲ್ಲ
ಭಿನ್ನ ಭಾಜನಭೋಜನರೆನಿಸುವರು.
ಇವರಿಗೆ ಸಹಸ್ರಜನ್ಮಕ್ಕೆ ಜ್ಞಾನೋದಯವಾಗುವದು.
ಹಸ್ತಪ್ರಸಾದವಾದ ಶುದ್ಧದ್ರವ್ಯಗಳ ಭಕ್ತಗಣಾರಾಧ್ಯ
ಶಿವಶರಣ ಜಂಗಮಕ್ಕೆ
ಪ್ರೀತಿಪ್ರೇಮದಿಂದ ದಾಸೋಹಂಭಾವದೊಳ್
ಸಾವಧಾನದಿಂದ ತನ್ನ ಕರಸ್ಥಲದಿಷ್ಟಲಿಂಗಮೂರ್ತಿಯ
ಅವರ ಕಂಗಳಾಗ್ರದಲ್ಲರಿದು ಲಿಂಗವ ಕೊಡುವಾತ
ಲಿಂಗವ ಕೊಂಬುವಾತನೆಂಬ ನಿಜನೈಷ್ಠಪರನಾಗಿ,
ಸರ್ವಾಂಗಲಿಂಗಸಂಬಂಧದೊಳ್ ಪರಿಪೂರ್ಣ ಭೋಜೆಗಟ್ಟಿ,
ನೀಡಿ ಮಾಡಿ ಸಂತೋಷವೆಂಬ ಪರಮಾನಂದ ಶೇಷೋದಕದಲ್ಲಿ
ಸಂತೃಪ್ತರಾಗಿರ್ಪುದೆ ಪ್ರಸಾದಭೋಜನವೆನಿಸುವದು.
ಅಲ್ಲಿಂದ ಆ ಭಕ್ತಗಣಾರಾಧ್ಯ ಶಿವಶರಣಜಂಗಮೂರ್ತಿಗಳೊಕ್ಕುಮಿಕ್ಕ
ಶೇಷೋದಕಪ್ರಸಾದಮಂ, ಕರ ಮನ ಭಾವದ ಕೊನೆಮೊನೆಯೊಳಗಿಪ್ಪ
ಚಿಜ್ಯೋತಿಪ್ರಣಮಲಿಂಗಂಗಳೊಡನೊಡನೆ
ಸದ್ರೂಪು ಚಿದ್ರೂಪು ಆನಂದರೂಪು ರುಚಿತೃಪ್ತಿಗಳ
ಪರಿಣಾಮಿಸುವುದೆ ಸಹಭೋಜನವೆನಿಸಿರ್ಪುದು.
ಈ ತ್ರಿವಿಧವರಿದು ಮರೆಯದಿರ್ದು ತನ್ನ ತಾನರಿದು
ಘನಗಂಭೀರರಿಗೆ ಎತ್ತಿದ ಲೀಲೆ ಪರಿಣಾಮು
ಪರಿಪೂರ್ಣಜ್ಞಾನದ ಬೆಳಗುದೋರಿ
ಬಯಲೊಳಗ ಮಹಾಬಯಲಪ್ಪುದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. || ೯೯ ||

೧೦೦

ಅಯ್ಯಾ, ನಾನು—ನೀನು, ಆದಿ—ಅನಾದಿ, ತಂದೆ—ತಾಯಿ,
ಹೆಣ್ಣು—ಗಂಡು, ಪುಣ್ಯ—ಪಾಪ, ಸುಖ—ದುಃಖ,

ಇಹ–ಪರ, ಗುರು–ಶಿಷ್ಯ
ಅಂಗ–ಲಿಂಗ, ಜಾಗ್ರ–ಸ್ವಪ್ನ, ಪೂಜ್ಯ–ಪೂಜಕ, ಜೀವ–ಸಜೀವ,
ಕಾಯ–ಪ್ರಾಣ, ಪೃಥ್ವಿ–ಅಪ್–ತೇಜೋವಾಯು–ಆಕಾಶ,
ಸೂರ್ಯ–ಚಂದ್ರ
ಆತ್ಮರಿಲ್ಲದಂದು ಅತ್ತತ್ತಲಾದ ಪರಶಿವಲಿಂಗ ಶರಣಸಂಬಂಧವನರಿದು,
ಭೋಗಯೋಗಾದಿಗಳನಳಿದು ದೇಹಾದಿ
ಕರಣೇಂದ್ರಿಗಳ ಪ್ರಪಂಚನಳಿದು,
ನಡನುಡಿಭಿನ್ನವಾಗದೆ ಕೇವಲಲಿಂಗವೆ ಶರಣನಲ್ಲಿ ಬೆರೆದು,
ಶರಣನೆ ಲಿಂಗದಲ್ಲಿ ಬೆರೆದು ಭಿನ್ನದೋರದ,
ಕ್ಷೀರ–ಕ್ಷೀರ, ತೈಲ–ತೈಲ, ಘೃತ–ಘೃತ, ನೀರು–ನೀರು, ಜ್ಯೋತಿ–ಜ್ಯೋತಿ
ಪರಿಮಳ–ಪರಿಮಳ, ವರ್ಣ–ವರ್ಣ ಒಂದಾಗಿ ಸಮರಸವನೈದಿದಂತೆ,
ತತ್ವಾತೀತನಾಗಿ ತತ್ತ್ವಮಸಿಯೆಂಬ ಪದತ್ರಯಮಂ ಮೀರಿ,
ಜ್ಞಾತೃ–ಜ್ಞಾನ–ಜ್ಞೇಯವೆಂಬ ಜ್ಞಾನತ್ರಯಮಂ ಹಿಂಗಿ,
ಪರಾತ್ಪರದ ಬೆಳಗಿನೊಳಗಣ ಮಹಾಬೆಳಗಾಗಿ
ತನಗೊಂದು ತೊಡಕಿಲ್ಲದೆ
ಸರ್ವಾಚಾರ ಸಚ್ಚಿದಾನಂದ ಸುಧಾಮೃತವ ಒಡನೊಡನೆ ಸವಿದುಂಡು
ಕ್ರಿಯಾನಿಷ್ಪತ್ತಿ, ಜ್ಞಾನನಿಷ್ಪತ್ತಿ, ಭಾವನಿಷ್ಪತ್ತಿಯಂ ಸಾಧಿಸಿ, ಭೇದಿಸಿ,
ತಾನುತಾನಾದಾತನೆ ನಿರವಯವಸ್ತುವ ಕೂಡಿದ
ಘನಲಿಂಗಸಂಗಿಗಳೆಂಬೆ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೦೦ ॥

೧೦೧

ಅಯ್ಯಾ, ತಾನು ತಾನಾದ ಪೂರ್ವಪುರಾತನರ ವಚನಸಾರಾಮೃತವಮಂ
ಕರತಳಾಮಳಕವಾಗಿ, ಜ್ಞಾನೋದಯವಾಗಿ,
ಅಡಿಗೆರಗಿ ಬಂದ ಜ್ಞಾನಕಲಾತ್ಮರಿಗೆ ಉಪದೇಶಿಸಿದಲ್ಲಿ,
ಆ ಜ್ಞಾನಕಲಾತ್ಮರು ನಿಜಾನುಭಾವದಿಂದೆ ಈ ವಚನಸಾರಾಮೃತವನನುಭವಿಸಿ,
ಸುಖಿಸಿದ ಶಿವಯೋಗೀಶ್ವರರಿಗೆ ಪ್ರಸನ್ನತ್ವದ ಬೆಳಗುದೋರಿ,
ಯೋಗಾಂಗವೆಲ್ಲ ನಿರಂಜನಲಿಂಗಜಂಗಮದಲ್ಲಿ ಬಯಲಪ್ಪುದು.
ಭೋಗಾಂಗವೆಲ್ಲ ಶೂನ್ಯಲಿಂಗಜಂಗಮದಲ್ಲಿ ಬಯಲಪ್ಪುದು.
ತ್ಯಾಗಾಂಗವೆಲ್ಲ ನಿಃಕಲಲಿಂಗಜಂಗಮದಲ್ಲಿ ಬಯಲಪ್ಪುದು.
ಮಹವಂಗವೆಲ್ಲ ಮಹಾಲಿಂಗಜಂಗಮದಲ್ಲಿ ಬಯಲಪ್ಪುದು.
ಶೇಷಾಂಗವೆಲ್ಲ ಪರಿಪೂರ್ಣನಿಜಶೇಷಾನಂದಲಿಂಗಜಂಗಮದಲ್ಲಿ
ಬಯಲಪ್ಪುದು.
ಚರಾಂಗವೆಲ್ಲ ನಿತ್ಯತೃಪ್ತಾನಂದ ಚರಲಿಂಗಜಂಗಮದಲ್ಲಿ ಬಯಲಪ್ಪುದು.

ಶಿವಾಂಗವೆಲ್ಲ ಸದ್ರೂಪು ಚಿದ್ರೂಪು ಚಿನ್ಮಯರೂಪು
ಶಿವಲಿಂಗಜಂಗಮದಲ್ಲಿ ಬಯಲಪ್ಪುದು.
ಗೌರವಾಂಗವೆಲ್ಲ ಚಿದ್ಘನಜ್ಯೋತಿರೂಪ
ಗುರುಲಿಂಗಜಂಗಮದಲ್ಲಿ ಬಯಲಪ್ಪುದು.
ಆಚಾರಾಂಗವೆಲ್ಲ ಪರಿಪೂರ್ಣಾನಂದ ಕ್ರಿಯಾಂಗಜಂಗಮದಲ್ಲಿ
ಬಯಲಪ್ಪುವುದು ತಪ್ಪುದು ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ. ॥ ೧೦೧ ॥

ಇಂತೀ ನಿರಾಳ ಚಿತ್ಪ್ರಣಮಮೂರ್ತಿ ಶ್ರೀಗುರುಲಿಂಗಜಂಗಮಸ್ವರೂಪ ಮೂರುಸಾವಿರದ ಮುಕ್ತಿಮುನಿಸ್ವಾಮಿಗಳು ತಮ್ಮ ಚಿದ್ಗರ್ಭೋದಯರಾದ ರೇವಣಸಿದ್ಧಲಿಂಗದೇಶಿಕನೆಂಬ ಚರಗುರುವರಂಗೆ, ಹರಗುರುವಾಕ್ಯ ಪ್ರಮಾಣ ವಾಗಿ, ನಿಜಾನುಭಾವಸೂತ್ರಗಳಿಂದ, ಹಾಲುಕ್ಕಿ ಮೇಲುವರಿದೋಪಾದಿಯಲ್ಲಿ, ಅನಾದಿ ಪ್ರಮಥಗಣ ನಿರಾಭಾರಿ ವೀರಶೈವ ಸನ್ಮಾರ್ಗೋದ್ಧಾರಕ ಸದ್ಭಕ್ತ ಲಿಂಗಜಂಗಮದ ಸತ್ಯಶುದ್ಧ ನಡೆನುಡಿಯುಳ್ಳ ಪರಮ ಸೂತಕ ಪಾತಕ ವಿರಹಿತರಪ್ಪ ಶರಣರಾಚರಣೆಸಂಬಂಧದ ನಿಲುಕಡೆ ವಚನ ಸಾರಾಮೃತೋಪ ದೇಶಾರ್ಥವಾಗಿ, ಬಸವರಾಜ ಮೊದಲಾದಸಂಖ್ಯಾತ ಪ್ರಮಥಗಣ ವಚನಸಾರಾಮೃತೋಪದೇಶದೊಳಗಣ ಆಚರಣೆಯ ಸಂಬಂಧ ಸ್ವಸ್ವರೂಪ ನಿಲುಕಡೆಯ ನಿರವಯ ಪರಿಪೂರ್ಣ ಜ್ಞಾನಾನುಭಾವವ ಷಟ್‌ಸ್ಥಲ ಸಮ್ಮತವಾಗಿ ನೂರೊಂದು ವಚನಗಳಿಂದ ಸೇರಿಸಿ, ಪರಿಪೂರ್ಣಾನಂದವೆನಿಸಿದಂಥ ಸರ್ವಾ ಚಾರಸಾರಾಮೃತಸುಧೆ ಸಮಾಪ್ತ ಮಂಗಳ ಮಹಾ.

■■

## ಮೆಡ್ಲೇರಿ ಶಿವಲಿಂಗನ ವಚನ

೧೮

ಪ್ರತಿಯಿಲ್ಲದ ದೇವನ,
ನಿಗಮಾಗಮಂಗಳಿಗೆ ನಿಲುಕದೆ ದೂರದಲ್ಲಿಹನ,
ಹರಿಯಜ ಬ್ರಹ್ಮ ರುದ್ರ ವಾದ ತರ್ಕಕ್ಕೆ ನಿಲುಕದೆ
ಮಾಯೆಗೆ ಸಿಕ್ಕದಾತನ,
ಬ್ರಹ್ಮ ವಿಷ್ಣು ರುದ್ರರ ನಿರ್ಮಿತವ ಮಾಡಿ,
ಇರುವೆಯು ಮೊದಲು ಆನೆಯು ಕಡೆ
ಜೀವರಾಸಿಯೆಲ್ಲರಿಗೆ ಅಂತು
ಎಂಬತ್ತು ನಾಲ್ಕು ಕೋಟಿಗೆಲ್ಲಕ್ಕೆ ಅಧಿಪತಿಯ ಮಾಡಿ
ನಿಜಹೃದಯದಲ್ಲಿರಿಸಿ,
ಮಾಯಚಿನ್ಮಯವಾಗಿ ಇದ್ದಾತನಂ
ಲೀಲೆ ಬಾಲತ್ವದಿಂದ ಈ ಕೃತಿಯ ಪೇಳ್ವೆನು [ಇಷ್ಟಲಿಂಗೇಶ್ವರಾ]. ॥ ೧ ॥

೧೦೨

ಮೂರ್ಖಂಗೆ ಕಥಾಪ್ರಸಂಗವನು
ಬೋಧಿಸಿದ ಪರಿಯ ಮಾಡುವರೆ ಏನಯ್ಯಾ ?
ಸಂಭ್ರಮದೋಲಗದಲ್ಲಿ ನಂಬಿಗೆಯಂ ಕೊಟ್ಟು
ರಂಬಿಸಿಯೆನ್ನನು ಕುಂಭಿನಿಗೆ ಕಳುಹಿ

ಶಂಭುಶಂಕರ ಸದಾಶಿವ ಮುಂಬರವ
ಬಾರದ ಹಲವು ಯೋಚನದ
ಹಗರಣವ ಮಾಡದ ಹೊಲಬ ಮರೆಯಿಸದ
ಸಮರಸವ ಮರಸದ......
[ಹ]ಲ ಬಗೆಯ ನೆಲೆಯನರುಹುವ ನೀನೆ
ನಿಜವನರುಹುವ ದೇವ ಕಾಣಾ ಇಷ್ಟಲಿಂಗೇಶ್ವರಾ. ॥ ೨ ॥

೧೦೪

ಬೆಲೆಯಿಲ್ಲದ ರತ್ನವ ಬೇಹಾರಿಸಿ ಕೊಂಬುವರಾರನು ಕಾಣೆ.
ಎಲೆ ಮಹಾಪ್ರಭುವೆ ನೀನೆ ಮಹಾರತ್ನವು.
ವ್ಯವಹಾರಿಯು ಬಸವಣ್ಣನು.
ಹೇಮವ ಒರೆಗಲ್ಲಿನಲ್ಲಿ ಒರೆದೊರೆದು, [ನೋಳ್ಪವ]
ಬಸವಣ್ಣ ನೀನೊಬ್ಬನಲ್ಲದೆ ಮತ್ತಾರ್ತನು ಕಾಣೆ
ಕರಸ್ಥಳದ ಇಷ್ಟಲಿಂಗೇಶ್ವರಾ. ॥ ೩ ॥

೧೦೫

ಎಲೆ ಅಯ್ಯಾ, ನಿಮ್ಮ ನಿಲವ ನಿರ್ಮಳವ
ಬಲ್ಲವರಾರು ? ಆರೂ ಇಲ್ಲ.
ಕಾಯದ ನಿಲವ ಮಾಯೆಗೆ ಒಪ್ಪಿಸಿ
ದೇವ ನಿರಾಲಂಬವಾಗಿ,
ನಿರಹಂಕಾರ ನಿರ್ಮಾಲ್ಯ ನಿತ್ಯನಿರ್ಗುಣ
ಸತ್ಯ ಸದಮಲ ಸಮರಸ[ಲಿ]ಂಗ ಸಂಗನ ಶರಣ
ನಮ್ಮ ಅಲ್ಲಾಳೇಶ್ವರನೆಂಬ ನಾಮವು
ನಿನಗೆ ತಕ್ಕುದಲ್ಲದೆ ಕಾಮಾಕ್ಷಿಯೊಳು ಬೆರದು ಪೇಳಿ
ಏಕಚಕ್ಷುದಯನಿತ್ತಾತ ನೀನೆ ಕಾಣಾ
ಕರಸ್ಥಳದ ಇಷ್ಟಲಿಂಗೇಶ್ವರಾ. ॥ ೪ ॥

೧೦೬

ದೇವರೆಲ್ಲವ ಹೊಡದು ತಂದು ಮಾಯೆಯೊಳಗೆ ಕೂಡಿತ್ತು,
ಹರಹರ ಮಾಯೆ[ಯ] ಇರವ ನೋಡಾ !
ಗಿರಿಜೆ ಕಳೆಯ ಇಮ್ಮಡಿ ಗುಣದ ಶಾಂತತೆಯ
ನಿರ್ವಿಕಾರದ ಗಿರಿಜೆ ಕಳೆಯ ರೂಪಾಗಿ ಇಳೆಗೆ ಬಂದು
ಪಾಶವ ಹಾಕಿ ಕಟ್ಟಿನೊಳಗೆ ಅವಿಕಿ ಮರುಳು ಮಾಡಿಸುವಳು.
ಬಾಯ ತೆಗೆಸುವಳು, ಬಳಲಿಸುವಳು,
ಬಣ್ಣ ಗುಂದಿಸುವಳು.

ಮೂರು ಲೋಕದವರೆಲ್ಲ ಮಂಕು ಕುರಿಗಳು
ಬೆಂಬತ್ತಿ ತಿರುಗಿಸುವಳು.
ಇಂಥ ಮಾಯಾವಿಕಾರದ ಮಾಯೆಯ ಜನನವ ನೋಡಾ
ಕರಸ್ಥಳದ ಇಷ್ಟಲಿಂಗೇಶ್ವರಾ. ॥ ೫ ॥

೧೦೭

ಎಲೆ ಅಯ್ಯಾ,
ಮಾಯೆ ಮೋಹಾ, ಮುಖಚಂದ್ರ,
ನಸು ಮುಸುಕು ಕುಚಕಳಸ,
ತೂರ್ಯತ್ರ ಬೆಳನಗೆ[ಗೆ]
ಸಿಕ್ಕದವರು ಆರೂ ಇಲ್ಲವು.
ಸಿಕ್ಕದ ಮಹಿಮನಾರೋ
ಕರಸ್ಥಳದ ಇಷ್ಟಲಿಂಗೇಶ್ವರಾ ? ॥ ೬ ॥

೧೦೮

ಕಾಮ ಕಾಲದ ಕಾಡುವ ಮಾಯೆ
ನೆಳಲುಗತ್ತಲೆ ನೀನು ಮಾಯೆ.
ಸಂಗ ಸುಖದಿಂದ ಹಿಂಗುವರಾರುಯಿಲ್ಲ,
ಬಿಗಿದ ಕುಚ, ಉರಮಧ್ಯವು
ಲಿಂಗಾಕಾರವು ಮಹೇಶ್ವರಗೆಯೂ ಪ್ರೀತಿಯು
ಸನ್ಮೋಹ ಅಮೃತ ಸಾರವು
ಇಳೆ ಉತ್ಪತ್ಯಕ್ಕೆ ಆಧಾರವು
ಇಂಥ ಮೋಹಪ್ರಿಯವಾದ ಮೋಹಿನಿಯರ
ಅಗಲುವುದೆಂತೊ ಕರಸ್ಥಳದ ಇಷ್ಟಲಿಂಗೇಶ್ವರಾ ? ॥ ೭ ॥

೧೦೯

ಮಾಯೆ ಘನವಾದರೆ ಪುರುಷಂಗೆ ಅಳುಕುವಳೆ ?
ಇಳೆಯ ಜನ ಉತ್ಪತ್ತಿಗಳೆಲ್ಲ ಮಾಯೆ ಘನವೆಂಬರು.
ಮರುಳು ಭ್ರಮೆವಿಡಿದು, ಅದು ಹುಸಿಯು.
ಅರಿಯಿರೆ–ಮಾಯಾಂಗನೆಯ ರೂಪಾಗಿ
ಮರ್ತ್ಯಕ್ಕೆ ಬಂದು, ಶರಣ ಮಹಿಮರ ಸೋಲಿಸೇನೆಂದು
ನಿಂದಿಹುದಕ್ಕೆ, ಸಾಕ್ಷಾತ್ ಶಂಭು ಅಲ್ಲಮನೆಂಬ ನಾಮಗಳಿಂದ
ಸೋಲಿಸಿ, ಮಾಯಾಕೋಳಾ[ಹಳ]ನೆಂಬ ಬಿರಿದು ಶಿವಂಗಲ್ಲದೆ
ಮರ್ತ್ಯಲೋಕದ ಮಾನವರಿಗೆ ಸಾಧ್ಯವೆ ?
ತನ್ನ ತಾನೆ ಇತರ ದಾಟಿಯುಮಾಟಿ ಕೊಂಡಳು ಕಾಣಾ
ಕರಸ್ಥಳ[ದ] ಇಷ್ಟಲಿಂಗೇಶ್ವರಾ. ॥ ೮ ॥

೧೧೦

ಕಾಣದುದನರಸುವರಲ್ಲದೆ
ಕಂಡುದನರಸುವರು ಆರೂ ಇಲ್ಲವು.
ದಿಂಡೆಯರು ಮೊಂಡರು ಮೂಕೊರೆಯರು ಪೆಂಡರುಗಳೆಲ್ಲ
ಮಂಡಲದೊಳು ಬಂದು ಭೂತಗಳಾಗಿ ಹೋದವು.
ಕಂಡುದ ನಿಜನಿಲವರಿದು ಭಂಡಿಗಿಗೆ ಸಮವಾಗಿ
ಮುಕ್ತಿಗಳಿಗೇನೆಂಬೆನಯ್ಯ ?
ಶಿವೆ ದೇವಿಗಲ್ಲದೆ ಗಂಡರಬಿಟ್ಟ ದಿಂಡೇರ ಕೈಯಲ್ಲಿ
ಕುಂಡಿಯನುದ್ಧಿಸಿಕೊಂಬ ಮೂಳಹೊಲೆ ಹಾದರಗಿತ್ತಿಗೆ ಸರಿಯೇನಯ್ಯ ?
ಈಶಾನ್ಯಶೆಟ್ಟಿಯ ಸತಿಯು ಶಿವೆದೇವಿಗೆ ಸರಿಯೆಂಬುವರ
ಬಾಯ ಮೇಲೆ ಕುಟ್ಟೆಂದ ನಮ್ಮ ಚೆನ್ನಸಂಗಮದೇವ. ॥ ೯ ॥

೧೧೧

ಕಾಯಯ್ಯ ಕಾಯಯ್ಯ ಕರುಣದಿ ನೀನು.
ಆಸೆಯ ಪಾಶವೆ ಮಾಯೆ[ಯ] ವಾಸದಲ್ಲಿ ಇರಲಮ್ಮದೆ
ಭಾಷೆಯ ಕೊಟ್ಟೆ, ಭಜನೆಯ ತೋ[ರಿದೆ];
ಭಾರವ ಹೊರಿಸದಿರಯ್ಯ.
ದೇಸಿಗರಿಗೆ ದೇವ ನೀನಲ್ಲದೆ ಮತ್ತೆ ದೈವಂಗಳಿಲ್ಲವೆಂದು
ಶ್ರುತಿ ಆಗಮದಲ್ಲಿ ಸಾರುತ್ತಿದ್ದವು.
ಅದನೆ ಒಲಿದು, ಅದನ ಉಟ್ಟೆ, ಅದನೆ ಉಂಡು ಅದನೆ ಹೊದ್ದು,
ಅದನೆ ಹರಸಿ, ಅದನೆ ಬೆರಸಿ, ಅದನೆ ಕೂಡಿ,
ಅದನೆ ಬಿತ್ತಿ, ಅದನೆ ಬೆಳೆದು
ಅಹೋ ರಾತ್ರಿಯಲ್ಲಿ ಸ್ತುತಿಪೆ ಕಾಣಾ ಇಷ್ಟಲಿಂಗೇಶ್ವರಾ. ॥ ೧೦ ॥

೧೧೨

ದೇವಿಯರೊಳಗೆ ದೇವನೆ ಕೂಡಿದ.
ಹರಹರ ಮಾಯೆ[ಯ] ಘನವ ಮನವ ತನುವನಾರಿಗೆಯು ತಿಳಿಯಬಾರದು.
ತಿಳಿದೆನೆಂಬೊ ಭ್ರಮಿ[ತರಿಗೆ] ಕರ ಸನ್ನಿಹಿತವಳವಡುವಳಲ್ಲ.
ತಂದೆ ಅಣ್ಣ ತಮ್ಮ ಬಂಧು ಬಳಗ ಕುಲ ಆವುದೆನ್ನದೆ
ಕುಲಗೆಡುವಂಥವಳಲ್ಲ
ನಮ್ಮ ಘನ ಗುರು ಅಲ್ಲಮ ಪ್ರಭುದೇವನು
ಶಾಂತಿ ಸೈರಣೆ ಉಳ್ಳಂಥವಂಗೆ
ತದ್ರೂಪದ ಮಹಿಮೆಯ ಉಸುರಿ ಹೇಳುವನು
ನಮ್ಮ ತನಯ ಶಿವಶಾಂತ ಮೂರುತಿ ಕಾಣಾ
ಚೆನ್ನಬಸವೇಶ್ವರಾ. ॥ ೧೧ ॥

೧೧೩

ಕಂಡುದ ಸ್ಥಿರವೆಂಬೋರಲ್ಲದೆ
ಕಾಣದ ಸಾಧ್ಯವಾಗಲಾಗದೆಂಬೋರು.
ಮುಗ್ಧ ಶರಣೆಯು ಎಲೆಯಡಗಿದ ವೃಕ್ಷದಂತೆ
ನೆಲೆಯರಿಯದ ಜಲದ ತನುವಿನಂತೆ
ನೆಲದೊಳಗಣ ನಿಧಾನವಿದ್ದು ಕಾಣದೆ ಹಂಬಲಿಪಂತೆ.
ತಾನು ಶುಕ್ರನ ಕೊಟ್ಟು ಜನದೊಳು ನಿಂದು ಮುಳುಗಿ
ಗಡ ಮುರಿದು ವರುಷವಾಯವಾಗಿ (?)
ಹಂಬಲ ಮರದು ಶಿವನ ಧ್ಯಾನಾರೂಢಳಾಗಿ
ಲೋಲುಪ್ತಿಯಿಂದ ಇರುವ ಶರಣೆಗೆ
ಪೂರ್ವ ನಿಜವ ಸಂತಾನವ ತೋರಿ ನಿಧಿನಿಧಾನದಲ್ಲಿರಿಸಿದೆ
ನೀನೆ ಕಾಣಾ ಕರಸ್ಥಳದಿಷ್ಟಲಿಂಗೇಶ್ವರಾ. ॥ ೧೨ ॥

೧೧೪

ಕಂಡುದ ಕಡೆಗಿಡುವರಲ್ಲದೆ
ಕಾಣದುದ ಸ್ಥಿರವೆನಿಸಿ ಪಾಡಿ
ಮಾರ್ಗವ ಹಚ್ಚಿ ಸಚರಾ[ಚರ]ಕ್ಕೆಲ್ಲ ಕಾಣ್ಕೆಯ ಮಾಡಿ
ಭರದಿಂದ ಗೃಹವ ಪೊಗದೆ ಪರವೆಯ ನೋಡದೆ
ವಾಲ್ಮೀಕಿ ನಿಳಯಕ್ಕೆ ಬಂದು ನಯನವಂ ಪಡಕೊಂಡು
ಪರವೆಯ ಸಂಗಸುಖಸಮರಸದಲ್ಲಿ ಇರುತ
ಸಂಕಿಲೆಯ ಕರಸಿ ಸುಖಮಿರ್ದರು ಕಾಣಾ
ಚೆನ್ನಬಸವೇಶ್ವರಾ. ॥ ೧೩ ॥

೧೧೫

ನೆಲದ ನಿಧಾನವು ಇದ್ದಂದದೆ
ಶಿಲೆಯೊಳಗೆ ಲಿಂಗ ಜಂಗಮ ಸಂಗ ಹಿಂಗದಿರುವ
ಸುಳುವು ಪಾವನಮೂರ್ತಿ
ಮರುಳ ಆಕಾರ ವಿಕಾರರಲ್ಲಿ ಪರಶಿವ ನೆಲೆಸಿಹ
ಜ್ಞಾನಾತ್ಮರಲ್ಲಿ ನಿತ್ಯ ನಿತ್ಯವಗಲದೆ ಕೂಡಿರುವ
ನಮ್ಮ ಕುವರ ಚೆನ್ನಬಸವೇಶ್ವರಪ್ರಭುವು ಕಾಣಾ
ಕಲಿದೇವರದೇವ ॥ ೧೪ ॥

೧೧೬

ಆವಾವಸ್ಥಾನದಲ್ಲಿಯು
ಉಗ್ರಮೂರ್ತಿ ನಯನ ಕರುಣದಿಂದ

ಶಿವಲೀಲಾನಂದವಾಗಿ ಇರುವ ಶರಣರು
ಲೌಕಿಕದ ಜಡರು ಮಂಕು ಮರುಳರು
ಕಳ್ಳರು ಸುಳ್ಳರು ಆಹಾರಗಳ್ಳರು ಇತ್ಯಾಧಿಕರು ಅರಿಯಬಲ್ಲರೆ ?
ಅಂತಪ್ಪ ಮಹಿಮರ ಶಿವಲಿಂಗನಿಷ್ಠಾಪರರ
ಏಕದಾರ್ಚನೆಯರ ಮಹಿಮೆಯ ನೋಡಲ್ಕೆ
ಯರಳು ಇದ್ದಲ್ಲಿಗೆ ಸಕ್ಕರೆಯು ಬಂದ ಪರಿಯಾಯಿತ್ತು ಕಾಣಾ
ಕುವರ ಚೆನ್ನಬಸವೇಶ್ವರಾ. || ೧೫ ||

### ೧೧೭

ಆದಿ ಪರಶಿವನ ಜಟಾಮುಗುಟದಲ್ಲಿ
ಫಣಿಯ ತ್ರಿಪುರ ಸಂಗ್ರಾಮದಲ್ಲಿ ರೌದ್ರವು ಪುಟ್ಟಿ
ತ್ರಿಪುರವನೆಸೆವಲ್ಲಿ ರಾಕ್ಷಸರ ಸಂಹರಿಸಲ್ಪಟ್ಟಂಥ
ಶೇಷನ ನಯನವು ಸಸಿಯನು ವಿವರಿಸಿ ಪೇಳಾ
ಚೆನ್ನಬಸವೇಶ್ವರಾ. || ೧೬ ||

### ೧೧೮

ಎಲೆ ಅಯ್ಯಾ,
ನೀನು ಕುಲವು, ಅವಕುಲವು ಎನ್ನದೆ
ಒಲಿದು ಅವರಿಗೆ ಬೆಲೆಯಿಲ್ಲದ ಬಲವ ಮಾಡಿದೆ.
ಒಲಿದು ನಿನ್ನ ಪೂಜಿಪರಿಗೆ ಗೆಲವ ಮಾಡಿ,
ನಿಲುಗಡೆಯ ಮರೆದವರ ತಲೆಯರಿದು ಬಿಸುಡಿ[ದೆ]
ಕಲಿದೇವ, ನಿನಗಾರು ಸರಿಯಿಲ್ಲ ಕಾಣಾ ಚೆನ್ನಬಸವೇಶ್ವರಾ. || ೧೭ ||

### ೧೧೯

ಎಲೆ ಅಯ್ಯಾ, ನಿನ್ನ ಆಸೆ ಬವುಸೆ ತೀರಿಸಿಕೊಂಡು
ಧ್ಯಾನ ಮುಗಿಸಿ ಜವಳವರಿದು ಪವನವೇಗದಿ ಬಂದು ಗಿರಿಜೆಗೆ ಅರುಹಿ
ಮಂದಗರ್ವದ ರಾಕ್ಷಸರನು ಸಂಹರಿಸುವೆನೆಂದು
ಬಸವಗಣನಜ ಹರಿ ಬ್ರಹ್ಮ ದೇವೇಂದ್ರ ಯಮ ದಿಕ್ಪಾಲ
ನವಗ್ರಹ–ರವಿ ಕೇತು ಕಾಲ ರಾಹು ಮರುಳ ಭೂತವು
ಹ್ರೀಂಕಾರಿ ಪ್ರೇತಸ್ಪಿನಿ ಚಾಮುಂಡಿ ನಿಗಂಡಿ
ಇಂತಪ್ಪವಿವೇಕವಾದ ಚಂದ್ರ ಸೂರ್ಯ ವಾಯು
ಮೊದಲಾದ ಸಂಕುಳ ಸಹ ಕೂಡಿ ಬಲವ ನಿಂದು ನಿಲುಕಡೆ ಕಂಡ
ನಮ್ಮ ಘನಗುರು ಸದಾಶಿವನು ಕಾಣಾ ಕುವರ ಚೆನ್ನಬಸವೇಶ್ವರಾ. || ೧೮ ||

೧೨೦

ಇಂದುಧರ ನಿಂದ ನಿಲುಗಡೆಯ ಕಂಡು
ಮಂದದೈತ್ಯರು ತಮ್ಮ ತಮ್ಮ ಸತ್ವದಿಂದ ಹೊರವಂಟು
ಶಿವಗಣರ ಶಿವಾಚಾರರ ಶಿವನಿಷ್ಠೆಯುಳ್ಳವರ ಕೂಡೆ ಕೆಣಕಿ
ನಿಲುಗಡೆಯ ಕಾಣದೆ ಮಂದದೈತ್ಯರು
ತಮ್ಮ ತಮ್ಮ ಸತ್ವದಿಂದ ಹೊರವಂಟು ಸೆಣಸಿ ಮಡಿದರು ಕಾಣಾ
ಕುವರ ಚೆನ್ನಬಸವೇಶ್ವರಾ. ॥ ೧೯ ॥

೧೨೧

ತಿರಿದುಂಬುವ ಹರಿದುಂಬುವ ಗರಿವಿಂದ ಗಂಭೀರವ
ಸಂಗವರಂಗವದಂಗವ ಕೊಡುವಂಗವ ಸಿರಿದಂದವ
ತರಿದಂದವ ಸಿರಿಯಂದವ ಹೂಚೆಂದವ ನಡೆವಂದವ
ಪರಮಂದವ ಸಮರಸಂಗವ ತಿಳಿದು ಕೊಡುವ ಕೊಡುವ ಕಾಣಾ
ಕುವರ ಚೆನ್ನಬಸವೇಶ್ವರಾ. ॥ ೨೦ ॥

೧೨೨

ಆರಾರು ಅರಿದುದಿಲ್ಲ, ತಾನಾರಿಗೆ ಸಾಧ್ಯನಲ್ಲ
ಧಾರುಣಿಗೆ ಮಿಗಿಲಾದೆಲ್ಲ ಊರೂರಿ ತಾನಿಂತಾಗದಲ್ಲ
ತೋರಿ ನಯಕ್ಕೆ ಸಿಕ್ಕದಲ್ಲ
ಧೀರತನದಲ್ಲಿ ಕಂಡು ಎಸೆದನಲ್ಲ
ಸರ್ವರನುಳುಹಿ ರಕ್ಷಿಸಿದನೆಲ್ಲ
ನಮ್ಮ ಘನಗುರು ಸದಾಶಿವಮೂರ್ತಿ ಕಾಣಾ
ಕುವರ ಚೆನ್ನಬಸವೇಶ್ವರಾ. ॥ ೨೧ ॥

೧೨೩

ಚಾಡಿಗನಹುದಲ್ಲ ನೋಡಿಕ್ರೋಧವನೆಲ್ಲ
ಕೂಡಿಎಂದವನಲ್ಲ ಹೇಡಿ ಮಾಡಿದನಲ್ಲ
ಕೂಡೆ ವಿತರ್ಕರ ಸಂತವಿಟ್ಟವನಲ್ಲ
ನಮ್ಮ ಘನಗುರು ಗಿರಿಜೆ ಮನೋಹರನು
ಕಾಣಾ ಕುವರ ಚೆನ್ನಬಸವೇಶ್ವರಾ. ॥ ೨೨ ॥

೧೨೪

ಕೊಟ್ಟು ನೋಡುವ ಕೊಡದಲೆ ಕಾಡುವ
ಸಿಟ್ಟು ಮಾಡುವ ಗಟ್ಟಿಯಾಗುವ
ಹೊಟ್ಟೆಯ ತುಂಬುವ ಹೊಟ್ಟಸಲಹುವ

ಕಟ್ಟೆಯನು ಕಟ್ಟುವ ಬಿಟ್ಟಿಯನು ಮಾಡುವ
ಕಟ್ಟಳಿಲ್ಲದೆ ಉಂಬುವ ಹುಟ್ಟಲಿ ತಿವಿಸಿಕೊಂಬುವ
ಕಟ್ಟಳಿಲ್ಲದೆ ತಿರುಗುವ ಗಟ್ಟಿಯಾಗಿ ಹಡಪವನು ಹೊತ್ತವ
ಒಟ್ಟಿದವನ ಕೊಟ್ಟವಂ ಇಷ್ಟುದಿನ ತಪ್ಪದಲೆ ನಡೆಸಿ
ಹುಟ್ಟದಲೆ ನಂಬಿಗೆ ಕೊಡದಲೆ ತನ್ನನು ನಂಬಿ ಇದ್ದಲ್ಲಿಗೆ ತರಿಸಿದ
ನಮ್ಮ ಘನಗುರು ಸದಾಶಿವ ಸದ್ಗುರುವು ಕಾಣಾ
ಕುವರ ಚೆನ್ನಬಸವೇಶ್ವರಾ. || ೨೩ ||

## ವೀರಣ್ಣದೇವರ ವಚನ

೧೨೫

ಎನ್ನ ಕಾಮದ ಕಳೆಯ ಕಳೆಯಯ್ಯ ಸಿದ್ಧರಾಮಯ್ಯ.
ಎನ್ನ ಕ್ರೋಧದ ಕೊನರ ಚಿವುಟಯ್ಯ ಚೆನ್ನಬಸವಣ್ಣ.
ಎನ್ನ ಲೋಭದ ಬಲೆಯ ಹರಿಯಯ್ಯ ಪ್ರಭುದೇವ.
ಎನ್ನ ಮೋಹದ ಮುಂದ ಬಿಡಿಸಯ್ಯ ಸಂಗನಬಸವಣ್ಣ.
ಎನ್ನ ಮದಕ್ಕೆ ಮಾವತಿಗನಾಗಿ ಬಾರಯ್ಯ ಮಡಿವಾಳಯ್ಯ.
ಎನ್ನ ಮಚ್ಚರಕಿಚ್ಚ ಸುಟ್ಟು ನಿಮ್ಮಲ್ಲೆನ್ನ ಅಚ್ಚೊತ್ತಿದಂತಿರಿಸಯ್ಯಾ
ಮಹಾಘನ ಶಾಂತಮಲ್ಲಿಕಾರ್ಜುನಲಿಂಗವೆ. ॥ ೧ ॥

೧೨೬

ಎನ್ನ ತನು ಬಸವಣ್ಣನಲ್ಲಿ ಅಡಗಿತ್ತು
ಎನ್ನ ಮನ ಚೆನ್ನಬಸವಣ್ಣನಲ್ಲಿ ಅಡಗಿತ್ತು
ಎನ್ನ ಪ್ರಾಣ ಪ್ರಭುದೇವರಲ್ಲಿ ಅಡಗಿತ್ತು
ಎನ್ನ ಸರ್ವಾಂಗದ ಸಕಲಕರಣಂಗಳೆಲ್ಲವು
ನಿಮ್ಮ ಶರಣರ ಶ್ರೀಪಾದದಲ್ಲಿ ಅಡಗಿದವು
ಮಹಾಘನ ಶಾಂತಮಲ್ಲಿಕಾರ್ಜುನ. ॥ ೨ ॥

೧೨೭

ಚೊಕ್ಕ ಭೋಜನಕಂಪಿತವಾದ ತಂದೆಯನು,
ತನ್ನ ಸಾಗಿಸಿ ಸಾಕಿದವ್ವೆಯನು,
ತನ್ನಲ್ಲಿ ಮೆಚ್ಚಿಯಚ್ಚೊತ್ತಿಹ ಬೆಚ್ಚಳನು,
ಇಚ್ಛೆಗಿಚ್ಛೆಯ ಬಿಟ್ಟು ಪರಜಂಗಮವಾಗಿ ನಿಂದ ಬಳಿಕ
ಆ ಚೊಕ್ಕಭೋಜನ ತನಗಿಲ್ಲದಿರಬೇಕು,
ಆ ತಂದೆಗೆ ತಪ್ಪಿರಬೇಕು, ಆ ತಾಯಿಗೆ ಸಂದಿಸದಿರಬೇಕು.
ಹೆಂಡತಿಗೆ ಮನವಿಕ್ಕದಿರಬೇಕು.
ಇಂತಾದಾತನೆ
ಪರಮಪ್ರಭು ಶಾಂತಮಲ್ಲಿಕಾರ್ಜುನದೇವರು ತಾನೇ ಕಾಣಾ
ಲಜ್ಜೆಗೆಟ್ಟ ನಿರ್ಲಜ್ಜನಾದ ಶರಣ. || ೩ ||

೧೨೮

ಪರಿಪೂರ್ಣ ನಿತ್ಯನಿರಂಜನ ನಿರವಯಲಿಂಗದೊಳು
ಸಮರಸೈಕ್ಯವನೆಯ್ದಿಸಿ,
ಘನಕ್ಕೆ ಘನವೇದ್ಯವಾದ ಬಳಿಕ
ಅರಿವೆಂಬುದಿಲ್ಲ, ಮರಹೆಂಬುದಿಲ್ಲ,
ಕೂಡಿದೆನೆಂಬುದಿಲ್ಲ, ಅಗಲಿದೆನೆಂಬುದಿಲ್ಲ,
ಕಂಡೆನೆಂಬುದಿಲ್ಲ, ಕಾಣೆನೆಂಬುದಿಲ್ಲ,
ಸಂಗನಿಸ್ಸಂಗವೆಂಬುದಿಲ್ಲ,
ಶೂನ್ಯ ನಿಶ್ಶೂನ್ಯವೆಂಬ ಭಾವದ ಭ್ರಮೆ ಮುನ್ನಿಲ್ಲ.
ಇಂತಿವೇನೂಯೇನೂ ಇಲ್ಲದೆ ಶಬ್ದಮುಗ್ಧವಾಗಿ
ಭ್ರಮರ ಚಂಪಕದೊಡಗೂಡಿದಂತೆ,
ಉರಿಯೊಳಡಗಿದ ಕರ್ಪುರದಂತೆ,
ಕ್ಷೀರದೊಳು ಬೆರೆದ ಸಲಿಲದಂತೆ,
ಅಂಬುಧಿಯೊಳಡಗಿದ ಆಲಿಕಲ್ಲಿನಂತೆ,
ನಾನೀನೆಂಬೆರಡಳಿದ ಘನಸುಖವನೇನೆಂದುಪಮಿಸುವೆನಯ್ಯ
ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಯ್ಯ ! || ೪ ||

೧೨೯

ಶರಣಾರ್ಥಿ ಶರಣಾರ್ಥಿ ಸಿದ್ಧರಾಮಯ್ಯಾ.
ಶರಣಾರ್ಥಿ ಶರಣಾರ್ಥಿ ಚೆನ್ನಬಸವಣ್ಣಾ.
ಶರಣಾರ್ಥಿ ಶರಣಾರ್ಥಿ ಪ್ರಭುದೇವಾ.
ಶರಣಾರ್ಥಿ ಶರಣಾರ್ಥಿ ಸಂಗನಬಸವಣ್ಣಾ.
ಶರಣಾರ್ಥಿ ಶರಣಾರ್ಥಿ ಅಜಗಣ್ಣಯ್ಯ.

ಶರಣಾರ್ಥಿ ಶರಣಾರ್ಥಿ ಮುಕ್ತಾಯವ್ವಾ.
ಶರಣಾರ್ಥಿ ಶರಣಾರ್ಥಿ
ಮಹಾಘನ ಶಾಂತಮಲ್ಲಿಕಾರ್ಜುನಲಿಂಗವ ತೋರಿದ
ಮಹಾಗಣಂಗಳ ಶ್ರೀಪಾದಕ್ಕೆ ಶರಣಾರ್ಥಿ ಶರಣಾರ್ಥಿ
ನಮೋ ನಮೋ ಎನುತಿರ್ದೆನಯ್ಯಾ. ॥ ೫ ॥

೧೩೦

ಜಂಗಮವೆಂತವನೆಂದಡೆ :
ನಿಜಸ್ವರೂಪವಾದಾತನೀಗ ಜಂಗಮ.
ಅಧೀನವುಳ್ಳಾತನು ಅಲ್ಲ, ಅಧೀನವಿಲ್ಲದಾತನು ಅಲ್ಲ.
ಸಾಕಾರನು ಅಲ್ಲ, ನಿರಾಕಾರನು ಅಲ್ಲ.
ಶಾಂತನು ಅಲ್ಲ, ಕ್ರೋಧಿಯು ಅಲ್ಲ.
ಕಾಮಿಯು ಅಲ್ಲ, ನಿಷ್ಕಾಮಿಯು ಅಲ್ಲ.
ಖಂಡಿತನು ಅಲ್ಲ, ಅಖಂಡಿತನು ಅಲ್ಲ.
ದ್ವೈತಾದ್ವೈತವನುಳಿದು ದ್ವಂದ್ವಾತೀತನಾಗಿ
ನಿಜಗುರು ಶಾಂತಮಲ್ಲಿಕಾರ್ಜುನ ತಾನಾದ ಜಂಗಮ. ॥ ೬ ॥

೧೩೧

ಶರಣಂಗಾಧಾರವಿಲ್ಲ;
ಶರಣ ತಾನೆಲ್ಲವಕ್ಕಾಲಯವಾದ.
ಶರಣಂಗಿಹವಿಲ್ಲ, ಪರವಿಲ್ಲ.
ಎಂತಿರ್ದಂತೆ ಪರಬ್ರಹ್ಮವು ತಾನೇ
ನಿಜಗುರು ಶಾಂತಮಲ್ಲೇಶ್ವರಾ ನಿಮ್ಮ ಶರಣನು. ॥ ೭ ॥

■■

## ವೀರಸಂಗಯ್ಯನ ವಚನ

೧೩೨

ಅಜ್ಞಾನ ಮತ ಲಗ್ನ ಸುಮೂರ್ತ
ನಕ್ಷತ್ರವೆಂಬವು ವರ್ಗಮೂಲ ವಕ್ರಮೂಲ ವಾಚಾಸಿದ್ಧಿ–
ಸುಜ್ಞಾನಕ್ಕೆ ಸುಖ ದುಃಖವು ಏಕವು.
ಅವಿವೇಕಯುಕ್ತಿ ಹೋಕರು
ಋಗ್ವೇದ ಯಜುರ್ವೇದ ಅಥರ್ವಣವೇದ ದಿಗ್ಬಲೆ ಅಸಂತಕೆ
ಲಗ್ನಕ್ಕೆ ಮರಣ ಮುಹೂರ್ತಕ್ಕಪಜಯ
ಸದ್ಗುರು ಕಟಾಕ್ಷಯೆಂತಿಪ್ಪುದು ಅಂತು ಅಪ್ಪದು ತಪ್ಪದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧ ॥

೧೩೩

ಶಿವಲಿಖಿತಕ್ಕೆ ಸಿಕ್ಕು–ವಕ್ರಗಳುಂಟೇನಯ್ಯ ?
ಭವಭವದಲ್ಲಿ ಬಂದರು ಬ್ರಹ್ಮ ವಿಷ್ಣು ರುದ್ರರು,
ಮಾರ್ಕಂಡೇಯಗೆ ಮರಣ ತಪ್ಪುವುದೆ ?
ರವಿ ಚಂದ್ರರ್ಕಗಳಿಗೆ ರಾಹು ಕೇತು ಅಡರದೆ ಬಿಡುವುದೆ ?
ಭುವನದ ಹೆಪ್ಪುವೊಡದು ಭೂತಳವೊಂದಾಗದೆ ?
ದಿವಾರಾತ್ರಿಯೇಕ ದೀಪ್ತಿ;
ಏಕೋವರ್ಣ ಶಾಂತಕ್ಕೆ ಪವಿತ್ರ ಅಪವಿತ್ರ

ಲೋಕಕ್ಕೆ ಭಿನ್ನ ಕಾಣೈ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨ ॥

### ೧೩೪

ಉದಯ ತತ್ಕಾಲವೆ ಅಸ್ತಮಯ,
ಅಸ್ತಮಯ ತತ್ಕಾಲವೆ ಉದಯ.
ಮಧುವೆ ವಿಷ, ವಿಷವೆ ಮಧು.
ಸದರಿವೆರಡಕ್ಕೆ ಮನಸ್ಸಿನ ಸಂದೇಹ ಮಾತ್ರ.
ಅದು ಕಾರಣ
ಮಧುರ ಸಮುದ್ರ, ಲವಣ ಸಮುದ್ರ,
ಕ್ಷೀರ ಸಮುದ್ರ, ದಧಿ ಸಮುದ್ರ
ಚತುರಂಗದೊಳಿರ್ದ ಸಪ್ತಸಮುದ್ರಕ್ಕೆ
ಏಕೋಪಮೊಲ್ಯ ಭಿನ್ನ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೩ ॥

### ೧೩೫

ಎನಬಹುದು ಎನಬಾರದು ;
ಜನರಿಂಗೆ ವೈರವರ್ಗ ಜ್ಞಾನಕ್ಕವರ್ಗ
ಕನಸಿನಲಿ ಕಾಣಿಸುವುದು.
ಮನಸಿನಲಿ ಉಚ್ಚರಿಸಿದಷ್ಟು ನೆನೆದ ದುಃಖ ಬಹುದು.
ನೇಮದ ಕಲೆನೆಲೆಯನರಿತು
ಅನುಶ್ರುತ ಶಿವಸನ್ನಿಧಿಯೊಳು ಮನವರತು ಇದ್ದರೆ
ಮನ ವಾಚಾ ಸಿದ್ಧಿ, ವಾಚಾಮನಸಿದ್ಧಿಯಪ್ಪುದು ತಪ್ಪದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ ॥ ೪ ॥

### ೧೩೬

ತತ್ವಭಕ್ತಿ ತತ್ವಮುಕ್ತಿ
ತತ್ವ ಉತ್ಪತ್ಯದ ತನು ಸಾರಾಯ
ತತ್ವವೃಕ್ಷದಿಂದ ಪುಟ್ಟಿದವು.
ಎಂಬತ್ತು ನಾಲ್ಕು ಲಕ್ಷ ಸಂಕಲ್ಪವೆಲ್ಲ ತತ್ವಾದಿಗಳು.
ಯಾತಕ್ಕೆ ಭೇದವ ಮಾಳ್ಪಿರಯ್ಯಾ ?
ಪೃಥ್ವಿ ಪೃಥ್ವಿಯ ಕೂಡಿತು
ಅಪ್ಪು ಅಪ್ಪುವ ಕೂಡಿತು
ವಾಯು ವಾಯುವ ಕೂಡಿತು
ಆಕಾಶ ಆಕಾಶದೊಳು ಸಮಕಾರ್ಯವಾಯಿತು.

ಆ ಭಕ್ತನ ವಿಭೇದವಿಲ್ಲದ ಕಾರಣದಿಂದ
ಶರೀರ ಭಿನ್ನವಾಗದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೫ ||

೧೩೭

ಶರೀರ ಭಿನ್ನ, ಪರಮಾತ್ಮ ಏಕವೆಂಬುದೇ ವೇದವಾಕ್ಯ.
ಶರೀರ ಗೊಹೇಶ್ವರ, ಈಶ್ವರ ಪರಮಾರ್ಥ,
ಪರಿಪೂರ್ಣನೆಂಬುದೇ ಭಕ್ತಿವಾಕ್ಯ.
ವನಚರವಿದೇಕೆ ? ಚರವಿದೇಕೆ ?
ನರರೇನ ಬಲ್ಲರಯ್ಯ ಅಪ್ರತಿಮಲಿಂಗಾಂಗವ ?
ಅರುಹಿನ ತಿರುಳು, ಮರಹಿನ ಮರುಳು,
ಕರುಳು ಕಡುಸೂತ್ರ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೬ ||

೧೩೮

ಶಬ್ದವೇ ಸಾಹಿತ್ಯ, ಶಬ್ದವೇ ಸಾರೂಪ್ಯ,
ಶಬ್ದವೇ ಸಾಲೋಕ್ಯ, ಶಬ್ದವೇ ಸಾಮೀಪ್ಯ, ಶಬ್ದವೇ ಸಾಯುಜ್ಯ
ಶಬ್ದ ಸಮಾಧಾನಲಿಂಗಾಂಗಿಗೆ ಚತುರ್ವಿಧಪದ.
ಶಬ್ದವ ಸೂಸುವರು, ಆಸ್ಕ[ರಿಸ]ರು ಸೂಸರು.
ಈಶ್ವರನ ಭಕ್ತರು ಶಬ್ದದಲ್ಲಿಯೇ ಮೋಸಹೋದರು.
ಆಶಾಕೃತದಿಂದೀ ಅಭಾಷರು
ಶಬ್ದದ ಮನದ ಕೊನೆಯಲ್ಲಿ ಆಡುತಿಪ್ಪರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೭ ||

೧೩೯

ನುಡಿನಡೆಯಿಂದ ಪಡೆದರು ಪ್ರುಡನ ಸದ್ಭಕ್ತರು.
ಕೊಡುವೆಡೆಗೆ ಕೊಂಬೆಡೆಗೆ ಆಸ್ಕರಿಸರು ವೇಷವಂ ತಾಳರು.
ಬಡತನ ಬಂದರೆ ಅನುಭವಿಸಿ, ಬಾರದ ಬಯಸರು.
ಹಿಡಿದ ವ್ರತವ ಬಿಡದೆ ನಡೆದು
ಕೈವಲ್ಯವ ಪಡದರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೮ ||

೧೪೦

ಗುರುಲಿಂಗ ಜಂಗಮವೆಂಬರಲ್ಲದೆ
ಅರಿವುದಕ್ಕೆ ಒಬ್ಬರೂ ಇಲ್ಲವಯ್ಯ.
ಕರುವ ಕಟ್ಟಿ, ಎರದಲ್ಲದೆ ಕಂಚಿನ ಸ್ವರೂಪು ಅಪ್ಪುದೆ ?

ಸ್ಥಿರಚಿತ್ತದಿಂದ ಜೀವನ ಪರಮು,
ಪರಮನೆ ಜೀವನೆಂದು ಅರಿವುದು.
ಪರಿಪೂರ್ಣವಪ್ಪುದೇ ವಿರಹಿತ ಲೋಕಕ್ಕೆ ?
ಅದಲ್ಲದೆ ಏಕವಾಕ್ಯನು ಅಲ್ಲ
ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗ ಪ್ರಾಣಲಿಂಗ ಸಂಗ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೯ ॥

೧೪೧

ದ್ವಂದ್ವವು ಜೀವನ ಕಾಯಕ್ಕೆ ಒಂದಲ್ಲ ಅನಂತ ಅಸ್ಥಿರ.
ಚಂದ್ರಾರ್ಕ ಹುಟ್ಟು ಹೊಂದು ಹೋಹುದು, ಬಪ್ಪುದು ;
ಒಂದನ ತಿಳಿವುದು ಸದ್ಬಿಂದು ಬೀಜ ಸಹಜವ.
ಮುಂದಣ ಸ್ಥಿತಿ ಹಿಂದಣ ಭವ.
ಅಂದಿಗಂದಿಗೆ ಕಾಬುದು ಅಗಣಿತಗಣಿತ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦ ॥

೧೪೨

ಬಲ್ಲವ ಮಾತ ಕಲಿತರೇನಯ್ಯ
ಬಯಲ ಬೊಮ್ಮದ ಮೇಳದ
ಮಾತಿನ ಮಾಲೆಯೊಳು ಘಾತಕವಿಪ್ಪುದು.
ಹಲ್ಲ ಕಿರಿವರು ಕನ್ನಡಿಗಿದಿರು
ಕನ್ನಡಿ ಕೊಡುವುದೆ ಕಳೆಯುವ ?
ಅಲ್ಲದ ಮಾತು ಅಲಗಿನ ಘಾಯ,
ಬೆಲ್ಲದ ಮಾತು ಭಲ್ಲೆಯದ ಘಾಯ.
ಎಲ್ಲರು ಮಾತಿನಿಂದ ಮರಣವಾದರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೧ ॥

೧೪೩

ಮಾತೇ ಮಂತ್ರ, ಮಾತೇ ತಂತ್ರ, ಮಾತೇ ಯಂತ್ರ,
ಮಾತೇ ಮಾತಿನಿಂದಲಿ ಮಥನ ಮರಣವು.
ಮಾತು ತಪ್ಪಿ ಆಡುವಂಗ ಆತ್ಮಲಿಂಗವೆಲ್ಲಿಯದು ?
ಪ್ರೇತ ಲಿಂಗಸಂಸ್ಕಾರಿಯೆಂಬವ ಮಾತಿಗೆ ತಪ್ಪುವನೆ ?
ಭೂತಪ್ರಾಣಿ ಲಿಂಗಪ್ರಾಣಿಯಾಪನೆ ?
ಬಿನ್ನಣ ಮಾತಿನ ರೀತಿ–
ನಿರುತವೆ ಸದಾಚಾರ, ನಿರ್ಣಯವೆ ಲೋಕಾಚಾರ,

ನಿಜ ಸ್ವರೂಪವೇ ಸದಾಚಾರ,
ಯಾತನ ಶರೀರಕ್ಕೆ ಅಳವಡದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೨ ||

೧೪೪

ಸೂತಕದೊಳು ಪುಟ್ಟಿತು ಸುಜ್ಞಾನ ;
ಶೀತಳದೊಳು ಅಪವಿತ್ರವೆ ಪವಿತ್ರ.
ಜ್ಯೋತಿ ಹೊಲೆಯರ ಮನೆಯಲ್ಲಿರ
ಕುಲಹೀನನೆನಬಹುದೆ ?
ಕಾತುರವೆ ಅಕ್ಕುಲ, ಹುಸಿಯೆಂಬುದೆ ಹೊಲೆಯ,
ಹಸುವೆಂಬುದೆ ಹಾರುವ, ವಿಷಯವೆಂಬುದೆ ಮಾದಿಗ.
ಜಾತಿಯ ಜನಿತದ ಮೂತ್ರದ ಕುಕ್ಷಿಯೊಳಗಣ
ಮೋಹವಲ್ಲವೇನಯ್ಯ ?
ಸೂತನ ನೂರೊಂದು ಕುಲ, ಹದಿನೆಂಟು ಸಮಯ,
ಆರು ದರುಶನ, ಜ್ಯೋತಿರ್ಮಯದ ಲಿಂಗದ ಗೂಡು.
ಅಂಗವಿಕಾರ ಗೀತದ ಮಾತು ಅಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೩ ||

೧೪೫

ಪುಣ್ಯಪಾಪವೆಂಬೆರಡನು ಕಣ್ಣಲಿ ಕಾಣರು,
ಕಿವಿಯಲಿ ಕೇಳರು.
ಪಣ್ಣಮೆದ್ದು ಬೀಜವನುಗುಳುವಂತೆ
ಪುಣ್ಯವನೆತ್ತಬಲ್ಲರಯ್ಯ ?
ಕಣ್ಣೊಳು ಪಾಪ, ಕರ್ಣದೊಳು ಪುಣ್ಯ
ಬಣ್ಣಿಸುವರಾರಳವಲ್ಲ.
ಬಯಲನೆ ಬಯಲು ನುಂಗಿತ್ತು.
ನಿರ್ಣಯಲು ಈ ದೇಹ ಮಣ್ಣಿನ ಮಾಟಕೂಟದೊಳು
ಬಣ್ಣವನಂತ ಸಿಕ್ಕಿಯವೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೪ ||

೧೪೬

ದಾನಧರ್ಮ ಪರೋಪಕಾರವೆಂಬ[ವ]
ಹೀನ ಮರುಳರು ಎತ್ತ ಬಲ್ಲರಯ್ಯ ?
ದೀನನಾರು ? ದಾನದಾರು ?
ಮಾನಿತ ಜ್ಞಾತ ಕೈಯುಪರ ಉಪಕಾರ

ಜಾನದ ಕುರುಳೊಳು ಜೇಳಹಾಕಿ ಮಡಗುವರೆ ?
ಜ್ಞಾನದ ವಾಕ್ಯವಲ್ಲವು.
ನಾನು ನೀನುಯೆಂಬ ಧೇನುಕರ ಮಾತಿಗೆ
ಮೋಘಸುರಿಯುತಿದೆ ಬೆಳೆ ಬೆಳೆಯುತಿದೆ
ನಾ ನೀಡಿದೆ ನಾ ಮಾಡಿದೆ, ನಾ ಬೇಡಿದೆನೆಂಬ ಜನ್ಮಕೆ
ನರಕ ತಪ್ಪದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ ॥ ೧೫ ॥

## ೧೪೭

ತನ್ನ ಧರ್ಮಕೆ ನೀಡಿಸುವ
ಅನ್ನ ಉದಕ ಅರವಟ್ಟಿಗೆ ಕೆರೆ ಬಾವಿ
ಉನ್ನತವಿತ್ತವಿತ್ತ, ಮನದಂತೆ ಮಾಂಗಲ್ಯ
ಘನಮಹಾಲಿಂಗವು ನನ್ನದು ತನ್ನದು ಎಂಬ ಭಿನ್ನಭಾವದ
ಭ್ರಾಂತು ಭವಿಗಳು ಅನಿತ್ಯವೆಂಬರು.
ಸೊನ್ನಾರಿಯಲ್ಲಿ ಹುಟ್ಟಿದ ಹೊನ್ನು ಸೊನ್ನಾರಿಯ ಮಗನೆ ?
ಉನ್ಮತ್ತದಲ್ಲಿ ಹುಟ್ಟಿದ ಹೆಣ್ಣು ಉನ್ಮತ್ತದ ಮಗಳೆ ?
ತನ್ಮಯದಲ್ಲಿ ಹುಟ್ಟಿದ ಮಣ್ಣು ತನ್ಮಯದ ಮಗನೆ ?
ಸನ್ಮನ ಮೂರರ ಮಾಯವೆ ಅಭ್ರಚ್ಛಾಯೆ
ಗೊಹೇಶ್ವರಲಿಂಗನ ಉಪಾಯವು.
ನನ್ನದು ನಿನ್ನದುಯೆಂದು ಹೋರಾಡುವ
ಅನ್ಯಾಯಿಗಳ ಮಾತಕೇಳಲಾಗದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೬ ॥

## ೧೪೮

ಧನ ಧಾನ್ಯ ಅಷ್ಟಮಹದೈಶ್ವರ್ಯದೊಳು
ಮನ ಹೀನನಾಗಿ ಮಾರ್ಗತಪ್ಪಿತು.
ಜೆನಕನ ಮದುವೆಯಂತೆಯಾಯಿತು.
ಇಂದು ನಾಳೆಯೆಂಬ ಸಂದೇಹಮಾತ್ರದಿಂದ
ವನಿತೆ ಸುತ ಮಿತ್ರ ಕಳತ್ರಯದಿಂದ ಅನಾಚಾರ ಹೊಂದಿತು.
ಮುನಿವ ವೈರಿಯ ಕೈಯ ಚಂದ್ರಾಯುಧದ ಮೊನೆಗೆ
ಇದಿರು ಆದಂತಾಯಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೭ ॥

## ೧೪೯

ಎಂಟರ ಮದದಿಂದ ಕಂಟಕ ಹೊಂದಬಹುದು.
ನಂಟು ಪಕ್ಷದಿಂದ ನಾಯಕನರಕ ಹೊಂದಬಹುದು.

ವೆಂಟೆಯ ಶುದ್ಧನಹುದು, ವ್ಯರ್ಥದಿಂದ ಅರ್ಥವು
ಬಂಟತನ ಒಡೆಯತನಕೆ ವೈರವು, ಪ್ರಾಣಹತವು
ಒಂಟೆಯ ಹಾಲಕರದು ತಳೆಯಲಿ ವಡದಂತೆಯಾಯಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೮ ॥

೧೫೦

ಕುರುವ ಹಿಡಿವರೆ ಗುರು ಕರಜಾತ.
ಅರುಹಿನ ಪಿಂಡಕ್ಕೆ ಮರವೆ ಸೋಂಕುವುದೇನಯ್ಯ ?
ವರಲಿಂಗ ಕರುಣದಿಂದ ವ್ಯರ್ಥವೆ ಅರ್ಥವಾಯಿತು.
ಪರಮ ತೃಪ್ತ ತಾನು ತಾನಾದ ಬಳಿಕ ಪರಿಕ್ಷುಪ್ತವುಂಟೆ ?
ವರಕೃಪೆಯುಳ್ಳ ವಸ್ತುವಿನ ವಚನವಂತಗೆ ಸಲ್ಲದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೯ ॥

೧೫೧

ಗುರುಭಕ್ತಿಸ್ಥಲ ತತ್ವಜ್ಞಾನವು
ಅರುಹುತರಿಗಲ್ಲದೆ ದೊರಕುವುದೆ ?
ದೂರಣ ಮಾರ್ಗಕೆ ಕರಿ ಕನ್ನಡಿಯೊಳಡಗಿರದೆ ?
ಕಾರ್ಯಕಾರಣ ಪರುಷ ಪಾಷಾಣದೊಳಗಿದ್ದರೇನು ?
ಪಾಷಾಣದ ಮಗನೆ ?
ಗುರುಸ್ಥಲದರುಹು ನರಜೀವನದವರಿಗೆ ಸಿಕ್ಕದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೦ ॥

೧೫೨

ಪೃಥ್ವಿಯ ಪೋಲ್ವಡೆ ಭಕ್ತ,
ಅಪ್ಪುವ ಪೋಲ್ವಡೆ ಮಹೇಶ್ವರ,
ಅಗ್ನಿಯ ಪೋಲ್ವಡೆ ಪ್ರಸಾದಿ,
ವಾಯುವ ಪೋಲ್ವಡೆ ಪ್ರಾಣಲಿಂಗಿ,
ಆಕಾಶವ ಪೋಲ್ವಡೆ ಶರಣ,
ಅಂತು ಐಕ್ಯ ಅಯ್ದರೊಳು ಸಕಾರಣ ಸಂಗತವದು
ಸೌಖ್ಯ ಷಡುಸ್ಥಲಬ್ರಹ್ಮ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೧ ॥

೧೫೩

ನಾನು ಭಕ್ತ, ನಾನು ಮಹೇಶ್ವರ,
ನಾನು ಪ್ರಸಾದಿ, ನಾನು ಪ್ರಾಣಲಿಂಗಿ,
ನಾನು ಶರಣ, ನಾನು ಐಕ್ಯನೆಂಬುದು ಅಜ್ಞಾನವಾಕ್ಯ.

ವಾನರ ವನದೊಳಗಿದ್ದರೆ ಹನುಮನೆನಬಹುದೆ ?
ಶ್ವಾನ ಬೂದಿಯೊಳು ಹೊರಳಿದರೆ ಭಸ್ಮಾಂಗಿಯಹುದೆ ?
ಮಾನವರೆಲ್ಲ ಭಕ್ತರಾಪರೆ ?
ಮರನೆಲ್ಲ ಗಂಧ ಚಂದನವಾಪುದ ?
ಬಾನದ ಕುರುಳ ಸುಟ್ಟ ಬೂದಿಯಲ್ಲಿ ಭಸಿತವಾಪುದೆ ?
ನಾನು ನೀನುಯೆಂಬ ಪಂತಿನ ಸಂತೆಗೆ ಜ್ಞಾನವಳವಡದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೨ ॥

೧೫೪

ಒಬ್ಬರೊಬ್ಬರ ಕಂಡು ಗೊಬ್ಬರದ ಬಂಡಿಯ ಹೂಡಿದಂತೆ
ನಿಬ್ಬರವಾಗಿ ಅಚ್ಚುಮುರಿದು ನಿಜಗೇಡು,
ಅಪಜಯ ಇಬ್ಬಂದಿಗ ನಗುವ.
ಇಷ್ಟಲಿಂಗವ ಪ್ರಾಣಲಿಂಗವೆಂದ ಕಾರಣದಿಂದ
ಉಬ್ಬರವಾಯಿತು ಉಕ್ಕಿದ ಒಲೆ ತುಂಬಿತು
ಗಬ್ಬಿತನದಿಂದ ಗರತಿ ಜಾರೆಯಾದಂತ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೩ ॥

೧೫೫

ಮಿಸುರವಂ ಸುಡಿವರು, ಮುಸುರುವರು ಸೋಣದಂತೆ.
ಆಶಾಬದ್ಧಕೆ ಅಸಗ ಮೋಳಿಗೆ ಹೊತ್ತಂತೆ
ಜಡೆ ಮಕುಟಗಳು.
ಉಸುರುವರು ಪ್ರಣವ ಉಪದೇಶವ,
ಅಶನಾರ್ಥಿಗಳು ಬಸವನ ಕಂಡು ಅರಿಯರು,
ಕೇಳಿ ಅರಿಯದೆ ಒಡೆಯರಾದರು.
ಉಂಡಮನೆಗೆರಡ ಬಗೆದ ಕಾರಣ
ಕೆಂಡವು ಆರಿ ಬೂದಿಯಾಯಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೪ ॥

೧೫೬

ಜಂಗಮಕೆ ಜನನ ಮರಣವುಂಟೆ ?
ಸಂಗಯ್ಯ ಸಂಗದೋಷವು.
ನಾನು ಎಂದ ಕಾರಣದಿಂದ ನರಕಪ್ರಾಪ್ತಿ.
ಭೃಂಗ ಪುಷ್ಪದ ಕುಸುಮಕ್ಕೆರಗುವುದಲ್ಲದೆ
ಕೇಸರಿಗೆರಗುವುದೆ ?
ಬಂಗಾರ ಮಣ್ಣಿಂದ ಪುಟ್ಟಿತ್ತು

ಮಣ್ಣ ಕೂಡುವುದೆ ?
ಹಿಂಗಡಿಸಬಹುದೆ ತ್ರಿವಿಧವ ?
ವಿಷ ಪಾತಕವ ಶೃಂಗಾರಕ್ಕೆ ಕಟ್ಟಿಬಿಡುವ
ಸಂಬಂಧಿಗಳಿಗೆ ಕಷ್ಟವೆಯಟ್ಟಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೫ ॥

೧೫೭

ಗುರುವ ತನ್ನೊಳಗರಿವುದು ಗುಪ್ತಜ್ಞಾನವಯ್ಯ.
ಪುರೋಹಿತನಾಗುವುದು ಅಂಗದ್ವಾರಕ್ಕೆ.
ಪುರುಷಾರ್ಥ ಮರುಳುಗಳು ಎತ್ತ ಬಲ್ಲರು
ಮಂತ್ರ ಉಪದೇಶವ ?
ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ
ಅರುಹಿತರಿಗುಂಟಲ್ಲದ ಅಸಂಗಿಗುಂಟೆ ?
ಗರಿಯಿಲ್ಲದ ಅಂಬು ಹೆದೆಯಿಲ್ಲದ ಬಿಲ್ಲಿನಲ್ಲಿ
ಸ್ವರಮಂಡಿಗನಿಲ್ಲದ ಏಚ್ಚಂತ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೬ ॥

೧೫೮

ಮಾಡುವರೆ ಮಾಟದಂತಲ್ಲ;
ಕೂಡುವರೆ ಕೂಟದಂತಲ್ಲ,
ಕೃಪೆಯದು ಲಿಂಗವ ಮಾಡುವರೆ ಕಂಗಳುಯಿಲ್ಲ
ತ್ರಿವಿಧ ಸೂತ್ರವ ನೀಡಿ ನಿಜವಿಲ್ಲದ ಕಟ್ಟಿತ್ತು.
ಆಡಾಡಿ ಅರ್ಥವುಹೋಯಿತ್ತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೭ ॥

೧೫೯

ವ್ರತ ಸ್ವವ್ರತಸ್ಥರಲ್ಲ ಗತಿಯಿಂ
ಕೋಳಾದ ವ್ರತಗೇಡಿಯಾದರಯ್ಯ.
ವ್ರತಿಗೆ ಪ್ರತಿ ಗುರುವೆನಬಹುದೆ ?
ವ್ರತಿಗೆ ಪ್ರತಿ ಲಿಂಗವೆನಬಹುದ ?
ವ್ರತಿಗ ಪ್ರತಿ ಜಂಗಮವೆನಬಹುದ ?
ಅದು ಕಾರಣದಿಂದ ಮತ ತಪ್ಪಿಹೋದರು
ಸರಿಕರೆಂಬುತ ಮತಿ ಪ್ರಕಾಶವಡಗಿತು
ಮನದೊಳು ಸಂಚಲ ಪುಟ್ಟಿತು.
ಕೃತಯುಗ ಹೇಮ, ತ್ರೇತಾಯುಗ ಬಳ್ಳಿ,

ದ್ವಾಪರ ತಾಮ್ರ, ಕಲಿಯುಗಕೆ ಕಲ್ಲಾಯಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೮ ॥

### ೧೬೦

ಗುರು ತೀರ್ಥಪ್ರಸಾದ ಅರುಹಿನಘಟ್ಟಿ
ದೊರಕೊಂಬುದೆ ನರಕೀಲಕರಿಗೆ
ಬರಿಯ ಮಾತಿನಮಾಲೆ ಕೊಳುಕೊಡೆಯಲ್ಲವು.
ಕರವತ್ತಿ ಕೊಟ್ಟಾತ ಗುರುವಲ್ಲ; ಕೊಂಡಾತ ಶಿಷ್ಯನಲ್ಲ.
ನಿರುತ ನಿಜಗೊಹೇಶ್ವರನಲ್ಲಿ
ಬೆರದು ಕೊಂಬುದು ತೀರ್ಥ;
ಅರಿತು ಕೊಂಬುದು ಪ್ರಸಾದ.
ಮರೆಯಿದು ಮಾಟ, ಮರ್ತ್ಯದ ಕೂಟ, ಮತಿಗೆ ಬೇಟ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೯ ॥

### ೧೬೧

ಹೇಡಿಯ ಕೈಯಲ್ಲಿ ಚಂದ್ರಾಯುಧವಿದ್ದರೇನಯ್ಯಾ ?
ಪಾಡಿಗೆ ಪಂಥ ಪರಾಕ್ರಮಿ ಪರದಳವಿಭಾಡನಾಪನೆ ?
ಕೋಡಗನ ಕೈಯಲ್ಲಿ ರತ್ನವಿದ್ದರೆ ರಾಜ್ಯರಾಷ್ಟ್ರದೊಳು ಬೆಲೆಗಾಬುದೆ ?
ಮೋಡಕ್ಕೆ ಬಾಯಿದೆರದರೇನು ಕಾಲಕಾಲಕ್ಕೆ ಮಳೆಬಹುದೆ ?
ಹೂಡುವರೆ ಕುದುರೆ ಕೋಣದ ರಥ ಶೃಂಗಾರಕ್ಕೆ ?
ಕಾಡಿನೊಳು ಕರೆದ ಮಳೆ, ಓಡಿನೊಳು ಎರೆದ ನೀರು
ಮೂಡುಮೀ ಕ್ರಿಯೆಯ ಪೂಜೆಯು
ಬೇಡನ ಬೇಟೆಯ ನಾಯಿ ಮೊಲನಕಂಡು
ಆಚರಿಸಿದಂತಾಯಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೩೦ ॥

### ೧೬೨

ಬಲ್ಲೆ ಬಲ್ಲಿದರೆಂಬ ಅಹಂಕಾರಿಗೆ ಸಲ್ಲದು ಭಕ್ತಿ.
ಹುಲ್ಲ ಬೆಂಕಿಯೊಳು ಕೆಂಡ ನಿಲ್ಲುವುದೆ ಹುದುಗಿ ಮುಚ್ಚಿದರೆ ?
ಹಲ್ಲಣವ ಕತ್ತೆಗೆ ಹಾಕಿದರೆ ಉತ್ತಮ ತೇಜಿಯಾದಪುದೆ ?
ಎಲ್ಲಿಯ ಭಕ್ತಿ ? ಎಲ್ಲಿ ಮುಕ್ತಿ ?
ಸಲ್ಲದು ನಿಮ್ಮಾಣೆ ನಿಮ್ಮ ಪ್ರಮಥರಾಣೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೩೧ ॥

### ೧೬೩

ಕಲಿಕೆಯ ಮಾತಿನ ಮಾಲೆಯ ನೀಲೆ ಸೀಲೆಗ
ನಿಲುಕದು ಸಂಗನ ಶರಣಸ್ಥಲ.
ಬಲಾತ್ಕಾರಕೆ ಬಿಡಿಮು ಹಾಲನೆರೆದರೆ ಬಾಲತ್ವವಹುದ ?
ಯಲವದ ಮರದ ಎಲೆ ಹೂ ಸುಂದರ ಫಲಪದವಹುದೆ ?
ಕೊಲೆ ಆತ್ಮದಲಿ ಕೊನೆನಾಲಿಗೆಯ ಮೃದು ಕ್ರೋಧ.....
ಫಲ ನಿಃಫಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೧ ॥

### ೧೬೪

ಮಲಿನವುಂಟೆ ಮಹಾಸಮುದ್ರಕ್ಕೆ ?
ಅರಸಲು ಕೊಲೆ ಹಗೆ ಉಂಟೆ ಸರ್ವ ಜೀವದಯಾಳ್ಗಿಂಗೆ ?
ವಿಸ್ತರಿಸಲು ಕುಲ ಅಕ್ಕುಲವುಂಟೆ ಋಷಿವರ್ಗದೊಳು ?
ಉಚ್ಚರಿಸಲು ಎಲೋ ತಲೋ ಎಂಬುದುಂಟೆ ಜ್ಞಾನಿಸುಖಿಯಲಿ ಬೆರೆಯಲು?
ಭೇದವುಂಟೆ ಅಗ್ನಿ ಆಪೋಷಣಕೆ ?
ನಿದ್ದರಿಸಿನಕೆ ಪಿಂಡವೆ ಬ್ರಹ್ಮಾಂಡ, ಪೃಥ್ವಿಯೆ ಆಧಾರ
ಪ್ರಿಯವೆ ಅಪ್ರಿಯ ಅಪ್ರಿಯವೆ ಪ್ರಿಯ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೨ ॥

### ೧೬೫

ಅನಾದಿ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಮೂರ್ತಿಗೆ
ಪ್ರಸಾದವೆ ಗತಿ.
ಮನಹಿತ ಲಿಂಗಹಿತ ತನುತ್ರಯ ಗುರುಹಿತ
ಘನತರ ಘತಘತಯ ಗೋತ್ರ ಅಜಾತಜಂಗಮಹಿತ
ಅನಾದಿ ಗೋಪೇಶ್ವರಲಿಂಗಕ್ಕೆ ಆಗಮವಿಲ್ಲ ನಿಗಮವಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೪ ॥

### ೧೬೬

'ಯದ್ಭಾವಂ ತದ್ಭವತಿ' ಎಂಬರಲ್ಲದೆ
ತದ್ಭಾವದ ಸದ್ಗತಿಯನೆತ್ತಬಲ್ಲರಯ್ಯ?
ಬುದ್ಬುದಾಕಾರ ಭೂಮಿಯೊಳು ಹುಟ್ಟುಹೊಂದುಯಿಲ್ಲವ ?
ಅದ್ವೈತ ಪರಬ್ರಹ್ಮವನಾಡುವರಿಗೆ ಆತ್ಮನ ತಿಳುಹುಂಟೆ ?
ಯದ್ಭಾವ ಏಕೋದೇವ ಏಕಮನ ಏಕಚಿತ್ತವಾದರೆ
ಸಿದ್ಧಿಯಪ್ಪುದು ತಪ್ಪದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೨೫ ॥

೧೬೭

ಅಂಬಿಗೆ ಗರಿ, ರೆಂಬೆಗೆ ರಾಜಸ್ಯ ಕೊಂಬುಯಿಲ್ಲದೆ
ಫಲವೆಂತು ಅಪ್ಪುದಯ್ಯ ?
ತುರೀಯಾತೀತವು ನಿಂಬಾಲ್ಯವೆನಿಸುವುದು ಸುವರ್ಣಬಿಂಬವು.
ಸಂಭ್ರಮ ಹೊನ್ನು ಹಣ್ಣು ಮಣ್ಣಿನ ಮಾಯಕೆ
ಹಂಬಲಿಸುವರೆ ಹರಿಸುರಬ್ರಹ್ಮರು ?
ಇಂಬಿಲ್ಲವು ನುಡಿವರ ಬಿಡುವರೆ ಹಿಡಿವರೆ
ಕೆಂಬೇಟಿಗೆಡುವರೆ ?
ಮೂವರಿಂದ ಮುಕ್ತಿಯಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೩೬ ॥

೧೬೮

ಮೂರರೊಳಗೆ ಮುಣುಗಿ ಮುಖಭಂಗವಾದರು ಮುನ್ನಿನ ಹಿರಿಯರು.
ವೀರ ಧೀರ ಪುರುಷರೆಲ್ಲರು ವಿವೇಕಗೆಟ್ಟರು ಹಿಡಿಯದ ಕಾರಣದಿಂದ.
ದಾರಿತಪ್ಪಿ ಅಡವಿಯಕೂಡಿ ಮೂರರ ಮೇರೆಯ ಕಾರಣದೆ
ತಾರಕ ಮೂರನು ತನ್ನದುಯೆಂದ ಕಾರಣದಿಂದ ಜಾರೆಯರಾದರು
ಹೋರಿ ಹೋರಿ ಗತಭ್ರಷ್ಟರಾದರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೩೭ ॥

೧೬೯

ನೆಳಲಾಸು ಆಪೆಸುಯೆಂಬ ಅರೆಮರುಳು ಭ್ರಾಂತನೆ ಕೇಳ್ಳೈ.
ತಿಳಿ ನಿನ್ನೊಳು ನೀನು ತ್ರಿಪುರದ ಮಾರ್ಗವನು.
ಸುಳುಹಿನೊಳು ಸೂಕ್ಷ್ಮ ಸುಖದುಃಖಂಗಳು.
ಬೆಳಬೆಳದುಯಿದೆ ಭೇದಾಭೇದವು
ಮೊಳೆಯಂಚಿವು ಭೇದಕಾರಣದಿಂ ಹೆಮ್ಮರನಾಯಿತು ಕಾಣಾ.
ಒಳಗಿದ್ದರ ಹೊರಗೆಯಿತ್ತು, ಹೊರಗಿದ್ದರೆ ಒಳಗೆಯಿತ್ತು
ನೆಳಲ ನುಂಗಿ ತಾನೆ ತಾನಾಯಿತು ಕಾಣಾ
ಎಲ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೩೮ ॥

೧೭೦

ಸತಿಗ ಸದ್ಗತಿ ತನ್ನ ಪತಿಯಿಂದಲಪ್ಪುದಲ್ಲದೆ
ಅತಃಪರದೃಪ ಇನ್ನುಂಟೇನಯ್ಯ ?
ಮಥನ ಇಬ್ಬರಿಗೆ ಮಾಯಸಂಸಾರದೊಳು ಮರ್ಕಟರಾದರು.
ಮತಿಗೇಡಿ ಮನದ್ರವಮಂ ಬಿಟ್ಟು
ಮಾರ್ಗಗೆಟ್ಟ ವ್ರತನಾಶವು ರಥಮುರಿದು

ಆ ಕ್ಷಣವಳಿವುದಾಕ್ಷಣ್ಯ ತಪ್ಪುವುದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೩೯ ॥

೧೭೧

ಪತಿವ್ರತ ಧರ್ಮ ಪಾಷಾಣವ ಪೂಜಿಸಲಾಪುದೆ ?
ಯತಿ–ಮುನಿ ಸನ್ಯಾಸಿಗಳು ಯಾತ್ರೆಯನು ಚರಿಸುವರು
ಸತ್ಪಾತ್ರವಂ ಕಾಣದೆ.
ಪತಿಯ ಪ್ರಾಣ, ಸತಿಯ ಅಂಗ ಸಾಧನವಂ ಮಾಳ್ಪುದು ಪಾಶಕ್ಕೆ ಸಿಕ್ಕದೆ ?
ಘೃತವಾಯಿತು ರಕ್ತದಿಂದ, ರಕ್ತವಾಯಿತು ಘೃತದಿಂದ
ಅಮೃತ ಪಂಚವರ್ಣ ಅಸೀಮದ ಮೂಲವ ಕಾಣದೆ
ಮುಕ್ತಿಗೆಟ್ಟಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೪೦ ॥

೧೭೨

ಇಟ್ಟಿಟ್ಟು ಕಲ್ಲಿಗ ಹರಿದಾಡುವರು
ನೆಟ್ಟನೆ ಜ್ಞಾನಿಗಳಾದರೇನಯ್ಯ ?
ಪಟ್ಟಾಭಿಷೇಕವುಳ್ಳ ರಾಜನಬಿಟ್ಟು
ರಾಜ್ಯಭ್ರಷ್ಟರಾಪರೆ ?
ಹುಟ್ಟು ಹೊಂದುವ ಬ್ರಹ್ಮನ ಕಾಣದೆ
ತಮ್ಮ ತಮ್ಮ ಇಚ್ಛೆಗೆ ಹರಿವರು.
ಭ್ರಷ್ಟತ್ವವಾಗಿ ಹೊಗಳುತಿಪ ವೇದವಾಕ್ಯ.
ಆತ್ಮನೆಂಬ ರಟ್ಟುಮತಕ ಪರಿವ್ರತಿಯಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೪೧ ॥

೧೭೩

ಉದಯ ಅಸ್ತಮಯ ನದಿಯೊಳು ಮುಣುಗಿ
ಗದಗದನೆ ನಡುಗಲು ಗರ್ಭಕ ವೈರವು.
ಸುದ್ದವುಂ ಮರೆದು ಸೂಕ್ಷ್ಮವಂ ತಿಳಿಯದೆ ಗದಬಡಿಸಿ
ಎಮ್ಮೆ ಮಡುವಿನೊಳು ಬಿದ್ದಂತೆ ವ್ಯರ್ಥ ಸ್ನಾನವು.
ಪದರ ಆತ್ಮದೊಳು ಸೂಸಕವೆಂಬ ಅಘ ತಾ ಓಂಗದ
ಮದ ಹೊಲೆಯಿಂದ ಮರ್ಕಟಜ್ಞಾನಿಯಾದರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೪೨ ॥

೧೭೪

ಶಾಸ್ತ್ರವೆಲ್ಲ ಸಂತೆಯ ಸಂಗಡ ;
ಪುರಾಣವೆಲ್ಲ ಪುಂಡರ ಸಂಗಡ ;

ನೇತ್ರ ಸೂತ್ರದಲಿ ಗ್ರಹಿಸಿಪ್ಪುದೆಲ್ಲ ಸುದ್ದ ಅಬದ್ದವು.
ಕಾತುರ ಕಡು ಮೂರ್ಖತ್ವವು ಭ್ರಾಂತು ಚೇಷ್ಟ, ಉಚ್ಛಿಷ್ಟವು
ಭೂತಪ್ರಾಣಿಗೆ ಯಾತಕಯ್ಯ ಭೂಸ್ಪರ್ಗಂಗಳು
ಆತ್ಮ ಶುಚಿಭೂರ್ತನಾದರೆ ಅಪರಿಮಿತ ಅಸಾಧ್ಯ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೪೩ ||

೧೭೫

ಓದುವುದು ಕುತರ್ಕ,
ಮೇದಾರನ ಕತ್ತೆಯಂತೆ ಕೆತ್ತುಗ ಪಾಶ
ಈದ ಹುಲಿಯಂತ ಇಪ್ಪನ ಇಕ್ಷು ಶಿಶುವಿಂಗೆ
ನಾದದ ಮೊದಲು, ಬಿಂದುವಿನ ನಡು, ಕಳೆಯ ಕಡೆಯನು
ವೇದದ ವಿಪ್ರಬಲ್ಲನೆ ಇಚ್ಛಾಶಕ್ತಿಯ ?
ಆದಿಯಾಧಾರದೊಳು ಅಖಂಡ ಬ್ರಹ್ಮಾಂಡ ಅಡಗಿಯವೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೪೪ ||

೧೭೬

ಸಂದುಸಂಶಯವನಳಿದಲ್ಲದೆ
ಮುಂದುದೋರದು ಭಕ್ತಿಸ್ಥಲ.
ಗಂಧ ಗರಗಸದಿಂದ ಕೊರದು ಅರದು ಸುಟ್ಟರೆ
ಪರಿಮಳ ಮಾಣ್ಬುದೆ ?
ವೃಂದ ವನದಿ ವೃಕ್ಷ ಫಲವಾಪಕಾಲಕ್ಕೆ
ಪಾಷಾಣದಲ್ಲಿಯಿಡುವಡೆ
ನೊಂದೆನೆಂದು ನೋವ ತಾಳ್ದ ಮರನು ಪರುಷಕೆ ಆಪುದೆ ?
ಅಂದು ಏನು, ಇಂದು ಏನು
ಭಕ್ತಂಗೆ ಕುಂದು ನಿಂದೆ ಸ್ತುತಿ ಒಂದೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೪೫ ||

೧೭೭

ಶಾಸ್ತ್ರವೈರಾಗ್ಯ, ಪ್ರಸೂತಿ ವೈರಾಗ್ಯ,
ಸ್ಮಶಾನ ವೈರಾಗ್ಯ—ಯಾತನ ಶರೀರಕ
ಇವು ವ್ಯಾಪಾರಂಗಳು.
ನೂತನ ಕಲಿಕಯು ಮಾತು ನುಡಿ ವೈರಾಗ್ಯವು.
ಸೂತಕ ಹೋದ ಮೂರು ದಿನಕ್ಕೆ ಸುರತಾನಂದವು.
ತತ್ಕಾಲದ ತವಕ್ಕೇಪರಿ ದುಃಖಂಗಳು.
ಆ ತತ್ಕಾಲಕ್ಕೆ ವೈರಾಗ್ಯ ಕ್ಷಣದೊಳು ಯೋಗ್ಯವು

ನೀತಿ–ಭಕ್ತಿ–ವೈರಾಗ್ಯ ಸ್ವರೂಪು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೪೬ ॥

೧೭೮

ನಿತ್ಯ ವೈರಾಗ್ಯದಿಂದ ದೊರಕೊಂಬುದು ಭಕ್ತಿಸ್ಥಲ.
ತತ್ವ ವೈರಾಗ್ಯದಿಂದ ದೊರಕೊಂಬುದು ಐಕ್ಯಸ್ಥಲ.
ಚಿತ್ತವೃತ್ತಿಯಲಿ ತಿಳಿದು ಕಾಬುದು ಚಿತ್ಪ್ರಕಾಶವ
ರತ್ನಪರೀಕ್ಷೆಯ ರಾಜಾಧಿರಾಜ ಬಲ್ಲನಲ್ಲದೆ
ರಾಕ್ಷಸರೆತ್ತ ಬಲ್ಲರಯ್ಯ ?
ಕೃತಯುಗದಿಂದತ್ತತ್ತ ಜ್ಞಾನ, ಇತ್ತಿತ್ತ ಅಜ್ಞಾನ
ನಿತ್ಯಜ್ಞಾನ ಅವಿರಳ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೪೭ ॥

೧೭೯

ಬಲ್ಲಬಲ್ಲಿದರನೆಲ್ಲ ಬಲು ಮಾಯೆ ನುಂಗಿತು.
ಸೊಲ್ಲಿನ ಮೃದುವಾಕ್ಯ ಸಾರಾಯವೆಲ್ಲವ ಛಲಮಾಯೆ ನುಂಗಿತು.
ಅಲ್ಲ ಅಹುದು ಎಂಬ ಸಂಶಯವೆಲ್ಲವ ಕಲಿ ಮಾಯೆ ನುಂಗಿತು.
ಬಿಲ್ಲ ಹೆದೆಯಂಬ ನುಂಗಿತು ಬಿರಿದಂಕವನೆಚ್ಚಂತೆ.
ಎಲ್ಲವು ನಾನು ಎಂಬ ಅಹಂಕಾರಕ್ಕೆ ಮಾಯೆ ನಿರಾಕಾರಕ್ಕೆ ತಾಯಿ.
ಅಲ್ಲಿ ಎಲ್ಲರೊಳು ಶಿವಭಕ್ತಿ ಶಕ್ತಿ ಶಿವ
ಬಲ್ಲಿದ ಬಲ್ಲಿದರು ಬಲು ದೂರೆ ಹೋದರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೪೮ ॥

೧೮೦

ನಾನೆಂಬ ಬ್ರಹ್ಮನ ನುಂಗಿದಳು ಮಾಯೆ.
ನಾನೆಂಬ ವಿಷ್ಣುವ ನುಂಗಿದಳು ಮಾಯೆ.
ನಾನೆಂಬ ರುದ್ರನ ನುಂಗಿದಳು ಮಾಯೆ.
ಅಜ್ಞಾನ ತ್ರಿವಿಧವ ನುಂಗಿ ನಯನದೊಳು ಬೊಂಬೆಯಾದಳು ಮಾಯೆ.
ನಾನೆಂಬ ಮಾಯವನು ನುಂಗಿ ಗೊಹೇಶ್ವರ ಅಭ್ರಛಾಯವಾದನು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೪೯ ॥

೧೮೧

ನಾನುಯೆಂಬ ಅಕ್ಷರದ ಮೊದಲ
ಏನೆಂದು ಬಲ್ಲರಯ್ಯ ?
ಕಾನನದೊಳು ಪುಳುವಿರಲು
ಜಲಮಲ ಪುಳುವಿಗೆ ಮರಣ.

ಜೇನುಯೆಂಬುದು ಹುಟ್ಟು, ಹೊಂದಿನ ಜೀವನ ಅವಸ್ಥೆಯ
ನಾನಾ ವಿಧ ಮಧು ಬಂದು ಉದಯವು.
ಪುಟ್ಟುವೇ ಓಂ ನಮೋ ಎಂಬ ಮೂರಕ್ಷರ ಜ್ಞಾನಿಗೆ ತಿಳಿವುಂಟು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೫೦ ||

೧೮೨

ಒಂಬತ್ತು ರತ್ನವೆಂಬರಲ್ಲದೆ,
ಕೊಂಬವರ ಕಾಣೆ ಕೊಡುವವರ ಕಾಣೆ.
ಏಕಾಂಬ ವರರತ್ನ ಮೌಕ್ತಿಕಕೆ ಬೆಲೆಯಿಡಲಿಲ್ಲವು.
ಶಂಭುವೆಸರು ವಸ್ತು ವಿಸ್ತೀರ್ಣ ಪ್ರಮಾಣ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೫೧ ||

೧೮೩

ದರಿದ್ರವನು ಅನುಭವಿಸಿದಲ್ಲದ
ವೀರಧೀರತ್ವಗಳು ಲಿಳವಡದು.
ಕಾರಿದ ಕೂಳಿಗ ಕೈಯ್ಯಾಂತಲ್ಲದೆ
ಕರುಣಪ್ರಸಾದ ಸಿಕ್ಕದು.
ಮೂರ ಮಾರಿಸಿಕೊಂಡಲ್ಲದೆ
ಮಂತ್ರಪಿಂಡವಾಪುದ ?
ದೂರ ವಿಚಾರಿಸಿ ನೋಟದಲ್ಲದೆ
ದುಃಖವಡಗದು ಕಾಣಾ
ಎಲ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೫೨ ||

೧೮೪

ವಿರಕ್ತ ವಿರಕ್ತರು ತೊತ್ತಿನ ತಲೆಯ
ಸಿಡಿಯರುವಯಾದರಯ್ಯ.
ಹೊತ್ತಿದ ಮಸ್ತಕವ ಮುಟ್ಟಿ ಮುಟ್ಟದ, ತಟ್ಟಿ ತಟ್ಟದೆ
ಪ್ರಸ್ತಾಯದ ಪ್ರತ್ತಿಕೆಯ ಮುಟ್ಟ ಮುಟ್ಟದ ತಟ್ಟಿ ತಟ್ಟದ
ಎತ್ತಲೆಂದರಿಯದ ತತ್ವಪ್ರೋಕರಾದರಯ್ಯ.
ಹೊತ್ತ ಪ್ರತ್ತಿಕೆಯೆಂಬುದ ತನು,
ಉತ್ತಮಾಂಗದ ಮನ,
ಅತ್ತ ಇತ್ತ ಎರಡರ ಮಧ್ಯ ಆಬದವ ತಲೆಯ ಸಿಡಿಯರುವ.
ಮುಕ್ತರು ಆದರು ಮೋಹಿತ ವಿರಕ್ತರು.
ರಂಬೆ ಸಿಂಬಿಯೊಳು ಸತ್ತವಲ್ಲ ಹಣ, ಅತ್ತವೆಲ್ಲ ತೃಣ.
ಇತ್ತವಲ್ಲ ಹೋಗಲಾಟ ಅತ್ತಲಿರಸು ಕತ್ತಗಳ

ವಿರಕ್ತರೆನಬಹುದೆ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ ? || ೩೬ ||

### ೧೮೫

ಯಾವಕಾಲತಪ್ಪಿದರೆ ಸಾವಕಾಲ ತಪ್ಪದುಯೆಂಬರಯ್ಯ.
ದೇವದ್ರೋಹಿಗಳು ಎಲ್ಲ ಬಲ್ಲರಯ್ಯ.
ಕೇವಲ ಶರಣಸ್ಥಲಗಳ ಗಾವುದದೊಳು ನೆರಸೂರ ಮುಂದೆ ಕಾಣರು.
ಗೋವಿನ ಕ್ಷೀರದ ಸ್ವಾದವ ಗೋಗಾಯಿಬಲ್ಲನೆ ಗೂಢಪ್ಯಾರ್ಥವ ?
ಈವ ಕಾಲ ತಪ್ಪಿದರೆ ಸಾವಕಾಲ ತಪ್ಪುವುದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೩೪ ||

### ೧೮೬

ತ್ರಿಗುಣಾತ್ಮ ತ್ರಿಸಂಧ್ಯಾಕಾಲದ ಪ್ರವರ್ತನೆಯಲ್ಲಿ ಪೇಟ[illegible],
ತ್ರಿವಿಧ ಶುದ್ಧ ಸಿದ್ಧ ಪ್ರಸಿದ್ಧವ ಪ್ರಮಾಣಿಸಿ,
ತ್ರಿಭುವನ ಏಕವಾದ ಲಿಂಗ ತಾ ತಲ್ಲಿಂಗ ಜಂಗಮ.
ಸನ್ಮತ ಗುರು ತ್ರಿಶೂಲ, ಆಣವಮಲ ಮಾಯಾಮಲ
ಕಾರ್ಮಿಕಮಲತ್ರಯವಂಬುಧಿ
ತ್ರಿಪುಂಡ್ರ, ತ್ರಿಣಾಮಲವಲಿ ಧರಿಸಿ,
ತ್ರಿಯಕ್ಷರ ಪ್ರಮಾಣ ಉಚ್ಚರಿಸಿ,
ಊರ್ಧ್ವದಲ್ಲಿ ನಿಲಿಸಿ ತ್ರಿವಿಧನ ಕಾಣಬಲ್ಲರೆ
ತ್ರಿಭಾಗದೊಳು ಷಡ್ಭಾಗವಾಪುದು,
ತ್ರಿಕಾಲಜ್ಞಾನಕ್ಕೆ ಕಂಡ ಜ್ಞಾನ ಕಾಣಯ್ಯ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೩೩ ||

### ೧೮೭

ಗೊಹೇಶ್ವರಲಿಂಗವೆಂಬ
ಭೇದ ಭೇದಾದ್ವೈತ ಬಾಹ್ಯಾಚಾರವಿಡಿದು ನಡೆವ
ಬಸುರಿಗೇಕೋ ಗೋಹೇ ಗುಪ್ತವು ?
ಲಿಂಗವಿಪ್ಪವು ಜಂಗಮ ಸುಪ್ತವು.
ವಾಯು ಉದ್ಧರಣ ಉತ್ತರ ಪ್ರತಿ ಉತ್ತರ ಉಭಯದ ಮಧ್ಯವು.
ಮಾಯವಾದಿಗಳೆತ್ತ ಬಲ್ಲರ್ಯ ಮಂತ್ರಪಿಂಡವ ?
ಐಕ್ಯ ಗೂಹೇಶ್ವರ ಸಾಹಿತ್ಯ ಈಶ್ವರ ತ್ರಾಹಿ ತ್ರಾಹಿ
ಅನುಭವ ಅಧ್ಯಾತ್ಮ ಅಖಂಡ ಬ್ರಹ್ಮಾಂಡ ಕಾಣಾ
ಎಲ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೨೬ ||

೧೮೮

ತತ್ವ ಅಂತರಂಗ ತರಂಗ ತರಂಗ ತೃಪ್ತ
ನಿತೃಪ್ತ ನಿರಾಲಂಬ ತೃಪ್ತ ನಿರಾಳ ನಾಳ
ಭಕ್ತಾತ್ಮ ಅರ್ಘ್ಯ ಅನರ್ಘ್ಯ ಅಪರಿಮಿತ ಅನರ್ಘ್ಯ
ತತ್ವ ಪಂಚ ಪಂಚವಿಂಶತಿ
ಸತ್ಯಷಡುಸ್ಥಲಬ್ರಹ್ಮ ಸಾಧ್ಯ ಅಸಾಧ್ಯ
ನಿತ್ಯ ಗೊಪೇಶ್ವರಲಿಂಗ ನಿಶ್ಶೂನ್ಯ ನಿಶ್ಶೂನ್ಯ
ಮುಕ್ತ ಮುಖಪ್ರಕಾಶ ಐಕ್ಯಸ್ಥಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೫೭ ॥

೧೮೯

ಮಿಸುಳಸ್ಥಲ ಮೇಲುವ್ರತ
ಸುಸ್ಥಳಾತ್ಮ ಶುದ್ಧ ಸಿದ್ಧ ಪ್ರಸಿದ್ಧ
ಸಚರಾಚರ ಸನ್ನಿದ ಸಮಯಾಚಾರ
ಸಾದೃಶ್ಯ ವಚನ ಅನ್ವಯ ಆತ್ಮ ನಿವಾಸ ಸರ್ವಗತ
ಶುಚಿರ್ಭೂತ ಭುವನಪ್ರಕಾಶ ಚಿತ್ತು
ದಿವ್ಯಜ್ಞಾನ ಚಕ್ಷು ತ್ರೈಲೋಕ ಪ್ರಕಾಶ
ಚಿತ್ತೋನ್ನತ ಬ್ರಹ್ಮನ ಪ್ರತಿ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೫೮ ॥

೧೯೦

ಪಿಂಡಾಂಡವ ಕಾಣದವರು
ಬ್ರಹ್ಮಾಂಡವನೆತ್ತ ಬಲ್ಲರಯ್ಯ ?
ಮುಂಡದಲಿ ಕಾದಿ ಗೆಲ್ವೆನೆಂಬ ಮೂರ್ಖರ
ಒಪ್ಪುವನೆ ಗುರು ?
ಗಂಡನಿದ್ದು ಪರಪುರುಷರ ಸಂಗವ ಮಾಡುವುದು
ಗರತಿಗೆ ಲಕ್ಷಣವೆ ?
ಉಂಡು ತೇಗಿ ತೃಪ್ತಿವಡದಲ್ಲದೆ
ಊರ್ಜಿತವಾಗುವುದೆ ?
ದಂಡವಾಯಿತು ಕ್ರೀಯುದವಾಟ, ನಿಃಕ್ರಿಯದ ಬೇಟ
ಅಂಬಿನಲಿ ಆಳಿದಂತೆ ××× ಸಟ್ಟೆಯಿಂದು ಎಂದರೆ
ಖಂಡಿತವಿಲ್ಲಯಿಲ್ಲಿಂದಲಿ
ಕಾಲಜ್ಞಾನ ಬರ ಸಂವತ್ಸರ ××× ಬ್ರಹ್ಮಾಂಡದೊಳು ಸೂತ್ರ ಕಾಣ್ಯ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೫೯ ॥

### ೧೯೧

ಪಂಚಾಕ್ಷರಕೆ ಪ್ರಥಮ ಅಕ್ಷರವು ನಕಾರವು.
ಮಿಂಚಿನೊಳು ಮಳೆ ಸಿಡಿಲು ಗರ್ಜನೆ ಮಿಸುಕುವಂತೆ,
ಕಿಂಚಿತು ನಕಾರಾತ್ಮವ ತಿಳಿದ ಮಹಾತ್ಮಂಗೆ ಸಂಚಲ ಉಂಟೆ ?
ಷಡಾಧಾರ ಸಾಧ್ಯ ಷಡುಚಕ್ರಂಗಳು
ಪಂಚಭೂತಾತ್ಮವ ಲಿಂಗಾತ್ಮ, ವಂಚನೆಯಿಲ್ಲದೆ ಅರ್ಪಿತ
ಅರ್ಪಿತದ ಭೇದವ ಕಂಡರೆ
ಕಂಗಳ ಬೆಳಗೆ ಬೆಳಗ ಕನ್ನಡಿಯಾದಂತೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೬೦ ॥

### ೧೯೨

ನಾನು ನೀನುಯೆಂಬ ಸಂದೇಹ
ನಕಾರದೊಳು ಪುಟ್ಟಿತಯ್ಯ.
ಜ್ಞಾನ ಅಜ್ಞಾನವೆಂಬುದು ಎರಡು
ಕೂನೆ ಬುಡ ನಂಜಿಗೆ ಅಪನಂಜಿಗ
ಧ್ಯಾನಾರೂಢದಲಿ ಅಜ್ಞಾನವೆಂಬ ಅಂಕುರವ ಚಿವುಟಬಲ್ಲರೆ ?
ಮಾನ್ಯಗೆ ಅಂಥ ಕಾವಳ ಹರಿ[ಹರಿ]ದು ಅಹಂಕಾರವಳಿವುದು
ಮನ ಅನುಮಾನವೆಂಬ ಮರೆ ತೆರೆ ಮಾಯಪಾಶ ಹರಿ[ವುದು]
ಬೇನೆ ಬಂದರೆ ಶರೀರಕ್ಕೆ ಲಘುವಾದಂತೆಯಾಯಿತ್ತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೬೧ ॥

### ೧೯೩

ಸಕಲಯಾತ್ರೆ ಸಮಸ್ತ ಪರ್ವತ
ಪುಣ್ಯಕ್ಷೇತ್ರಾದಿಗಳೆಲ್ಲ
ಮಕಾರತ್ವದೊಳು ಮಡಗಿಯಿದ್ದವು ಕಾಣಾ.
ಓಂಕಾರ ನಕಾರ ಮಕಾರ [ಉಕಾರವು]
ತ್ರಿಯಕ್ಷರವ ತ್ರಿಶೂಲಿ.
ಉತ್ಪತ್ತಿ ಸ್ಥಿತಿ ಲಯ ಪ್ರಕಾಶ ಪ್ರಕಾಶ
ಪ್ರಣಮವು ಅವೆ, ಪ್ರಕಾಶವೆಂಬರೆ ಅವೆ
ಪ್ರಣಪತವೆಂಬರೆ ಅವೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೬೨ ॥

### ೧೯೪

ಓಂಕಾರದ ಪ್ರಣಮದ ಮೂಲದಿಂದ
ವಸ್ತು ನಿರಾಳ ಪುಟ್ಟಿತು.

ನಕಾರದ ಪ್ರಣಮದ ಮೂಲದಿಂದ
ನಾದಬ್ರಹ್ಮದಲಿ ಆದಿಯಾಧಾರ ಪುಟ್ಟಿತು.
ಮಕಾರದ ಪ್ರಣಮದ ಮೂಲದಿಂದ
ವಿಶ್ವತೋಮುಖ ವಿಶ್ವತೋಬಾಹು ವಿಶ್ವತೋ ಚಕ್ಷು ಪುಟ್ಟಿತು.
ಶಿಕಾರದ ಪ್ರಣಮದ ಮೂಲದಿಂದ
ಶಿಕ್ಷೆ ದೀಕ್ಷೆ ಮೋಕ್ಷಕೆ ರುದ್ರನಂಶ ಪುಟ್ಟಿತು.
ವಕಾರದ ಪ್ರಣಮದ ಮೂಲದಿಂದ
ವಿಷ್ಣು ಸ್ಥಿತಿ ಪುಟ್ಟಿತು.
ಯಕಾರದ ಪ್ರಣಮದ ಮೂಲದಿಂದ
ಯಥಾಬ್ರಹ್ಮ ತಥಾ ಉತ್ಪತ್ತಿ ಪುಟ್ಟಿತು.
ಸಹಕಾರ ಷಡು ಅಕ್ಷರದ ಪ್ರಣಮದ ಮೂಲದಿಂದ
ಸಮಸ್ತ ವಿಸ್ತೀರ್ಣ ಪೂರ್ಣವಾಯಿತು.
ಆ ಕಾಲ ಕಾಲ ಪರಿವರ್ತನೆಯಲ್ಲಿ
ಸದ್ಭಕ್ತಸಮುಯ ಅಸಂಖ್ಯಾತರು ಪುಟ್ಟಿದರು.
ಆ ಅಸಂಖ್ಯಾತರಿಗಾಗಿ ಮೇಘಂಗಳಲಿ ಜಲ ಉದ್ಭವಿಸಿತು.
ಆ ಕಾರ್ಯ ಕಾರಣ ಅನುಭವಕ್ಕಾಗಿ
ಆದಿಯಲ್ಲಿ ಒಬ್ಬ ಶರಣ ಅನ್ನನಿಶುದ್ಧಿಯಾಗಿದ್ದ
ಆತನ ಆತ್ಮ ಸುಧೆಯಾಯಿತು.
ಅಕ್ಷುತ್ತಿಗೆ ಸಜ್ಜೀವಿ ಭಕ್ತಂಗೆ ನಿರ್ಜೀವಿ
ಭಕ್ತರು ತೃಪ್ತಿಗೆ ಆಹಾರವಾದರು, ಆ ಕಾಲ ಈ ಕಾಲ
ಆತನೆ ಅನಾಚಾರಿ, ಆತನೆ ಸದಾಚಾರಿ, ಆತನೆ ಶಿವಾಚಾರಿ.
ಆ ಕಾಲ ಸದ್ಭಕ್ತರ ಭಿನ್ನರುಚಿಗಾಗಿ
ಸಪ್ತ ಸಮುದ್ರಂಗಳು ಉದಯಂಗೈದವು.
ಆಕಾರ ಭಕ್ತಿ ನಿರಾಕಾರ ತೃಪ್ತಿ ಏಕ್ಯವಾಯಿತು.
ಆ ಭಕ್ತನ ನಿಡುಮುಂಡ ಜಟಾಮುಕುಟಕ್ಕೆ
ನಕ್ಷತ್ರವು ಪೂಮಾಲೆಯಾಯಿತು.
ಆ ಭಕ್ತ ನೋಡುವ ನೇತ್ರ ಚಂದ್ರಸೂರ್ಯರಾದರು.
ಆ ಭಕ್ತನ ಪದಪಾದತಳ ಪಥಿಯ ಹಪ್ಪಿನಲ್ಲಿ ಪೃಥ್ವಿಯಾಯಿತು.
ಆ ಭಕ್ತನ ಪದನಂಬೂದೇ ಮತ್ರ್ಯ. ಶಿರಸ್ಸುವೇ ಸ್ವರ್ಗ
ಆ ಭಕ್ತನ ಕಟಿಸೂತ್ರದಿಂದ ಗಂಗಾಸ್ನಾನಂಗಳಾದವು.
ಆ ಭಕ್ತನ ಸುಪುರುಷದಿಂದ
ತೆತ್ತೀಸಕೋಟಿ ದೇವರ್ಕಳು ಉದಯವಾದರು
ಆ ಭಕ್ತ ಕಾದುವವಗ ಕೂಟುವಗ
ಅಸಂಖ್ಯಾತ ಗಣಾದಿಗಣಂಗಳು ಸಮ್ಮೋಹಿತವಾದರು

ಆ ಭಕ್ತನ ಸಪಗರ[ಕ್ಕ], ಸಕಲ ಅನುಭವಕ್ಕೆ
ಸಚರಾಚರವಾದವು.
ಆ ಭಕ್ತನ ಒಡನಾಡಿ ಶಕ್ತಿ ಗಾಯತ್ರಿಯ ಮೂಲದಲ್ಲಿ
ಎಂಬತ್ತು ನಾಲ್ಕು ವರ್ಣಾಶ್ರಮಂಗಳು ಪುಟ್ಟಿದವು
ಆ ಭಕ್ತನ ಷಡಾಧಾರ ಷಡುದರಿಸಿನ
ಷಡುಚಕ್ರ ಷಡುಸ್ಥಲಬ್ರಹ್ಮ
ಆ ಭಕ್ತನೆ ಕೂಡಲಚೆನ್ನಸಂಗನ ಬಸವಣ್ಣ
ನಮಸ್ತೇ ನಮಸ್ತುತೆ. ॥ ೬೩ ॥

೧೯೫

ಸಾಸಿರನಾಮ ಭಕ್ತಂಗ ಸಲುವುದಲ್ಲದೆ
ವಸ್ತುವಿಂಗೆ ಸಲ್ಲದು.
ಭಕ್ತಂಗ ನಾಮ, ವಸ್ತು ನಾಮವಿರಹಿತ
ದಾಸೋಹವ ಕೊಂಬಾತ ಅಂತರಂಗಿ
ನಿರಂಗಿ ನಿಶ್ಶಬ್ದ ಬ್ರಹ್ಮ
ದೇಶಾಂತ್ರ ಚರಿಸುವ ಉಚ್ಚರಿಸುವ
ನಿಶ್ಚಿಂತ ನಿರಾಳವಾಸಕ್ಕೆ ನಾಮವಿಟ್ಟು, ಕರವರ ?
ಪುತ್ರ, ಮಿತ್ರ ಕಳತ್ರಯಂಗಳ ದೋಷ ದ್ರೋಹಂಗಳು
ಬೈವೊಡೆ ಹೊಯುವೊಡೆ ಈಶ್ವರ ಜನಿತಕ್ಕೆ ಬಹನೆ ?
ಎಷ್ಟು ಲಕ್ಷೋಪಲಕ್ಷ ವೃಕ್ಷ ಬೀಜದಿಂದ ?
ಆ ಬೀಜ ವೃಕ್ಷದಿಂದ ಸಹ
ಸ್ವನಾಮವ ಸದ್ಭಕ್ತಂಗೆ ಹೆಸರಿಟ್ಟು
ಲಿಂಗಾಂಗ ಸಂಗವಾದ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೬೪ ॥

೧೯೬

ಅಂಕಿತನಾಮದಿಂದ ಶಂಕರ ತಾಳ್ದ ಸರ್ಜೀವಿ ನಿರ್ಜೀವಿ.
ಪಂಕಜಕಮಲದಲಿ ಆತ್ಮ ಭಸಿತ
ಆಪಾದ ಮಸ್ತಕ ವಿಭೂತಿ ಭಸ್ಮಾಂಗ
ಕಂಕಣ ಸ್ಥಾನ ಸ್ಥಾನದಲಿ ಕರಪಾತ್ರ ಶಿರಮಾಲೆ
ಅಂಕದ ಕಣದೊಳು ಮುಟ್ಟಿ, ತುಳಿವರ ಬಿಟ್ಟಾಟಿ ಪಾದರಕ್ಷ
ಲೆಂಕರ ಲೆಂಕಸಂಬ ಕರುಣಾರ್ಥ ಶಂಕರನ ಸದ್ಭಕ್ತರಿಗ
ಸಲುವುದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೬೫ ॥

೧೯೭

ಭಕ್ತರೆಂಬರು ಉತ್ತಮ ಜಲ್ಮವ ಕಾಣರು ;
ಸತ್ತು ಸತ್ತು ಹುಟ್ಟುವರು ಪರಮ ಪುರುಷಾರ್ಥಕ್ಕೆ.
ನಿತ್ಯ ದುಃಖಿಗಳು ಸುಖವ ನೋಡುವರು ಸುರತಾನಂದಕ್ಕೆ
ದಾಕ್ಷಿಣ್ಯ ಸರ್ವಜೀವದಯಾಳ್ದರು ರಾಜೀವ ಮಾನ್ಯರು
ಭುಕ್ತಿ ಮುಕ್ತಿ ಫಲದಾಯಕರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೬೬ ||

**ಷಡುಸ್ಥಲದ ವಚನ :**

೧೯೮

ವಚನವಂ ಕಲಿತು ರಚಿಸುವ
ರುಚಿಕರವೆಂತು ಕುಶಲರಿಗೆ ?
ಕುರೂಪು ರೂಪಹುದೆ ?
ಅಚಲಭಕ್ತಿ ಅಳವಟ್ಟಿತೇಯವರಿಂಗೆ ?
ನೀಚಸ್ಥಲದವರು ಕೋಟಿ ವಚನವ ಕಲಿತರೇನು ?
ವಚನದಂತೆ ಇಹರೆ ?
ಅಚಿತ ಅಚಿತ ಆನಂದ ಆಗಮದಂತೆ
ವಚನ ವಚನದಂತೆ ತಾ ತನ್ನಂತೆ
ವಚನದ ಶ್ರುತಿ . ಅಜಾತರಿಗಲ್ಲದೆ ಅಳವಡದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೬೭ ||

೧೯೯

ಪುರಾಣವಂ ಕಲಿತು ಪುಂಡರ ಸಂಗವ ಮಾಡಿದಂತೆ
ಪರೀಕ್ಷಿಸಿ ಪರರಲ್ಲಿ ತತ್ವಾರ್ಥವಂ ಕೊಟ್ಟು ದ್ರವ್ಯವಂ ತಂದು
ಬಿರಿದಿಗೆ ಉದಾರತ್ವವಂ ಬೀರಲು ಸೆರೆಯಾಗಿ ಮಾಳ್ಪನೆ ?
ಎರವಿನ ವಚನವ ಕಲಿತನೆಂಬ ಹೆಮ್ಮೆಗೆ
ಮುರುಕವ ಮಾಡುವ ಮೂರ್ಖರಿಗೆ ಮುಕ್ತಿಯಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೬೮ ||

೨೦೦

ಲಿಂಗದ ಬೆಳಗ ಅನಂಗದೊಳರಿಯದೆ ಅಂಗೀಕರಿಸುವರು.
ಮತ್ತೆ ಆಗಮ ಶ್ರುತಿಯ ಭಂಗಿತರ
ಮೂಲಿಂಗಿಯ ಮೇದಂತೆ ನುಂಗದೆ ಜೇಹುದೆ ?
ಲಿಂಗಾಂಗದ ಮೂಲವನರಿವುದು ಅನಂಗಿಗಹುದೆ ?
ಲಿಂಗಾಂಗಿಯ ನಡೆ ನುಡಿ ಚೈತನ್ಯ ಸರ್ವಾಂಗಲಿಂಗಮಯ.

ಹಂಗಿನ ಕಟ್ಟೊಡೆದು ಕಾಬುದೆ ಕರುಣ ಕೃಪೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೬೯ ॥

## ೨೦೧

ದಿನಚರಿ ವಾಲಿಯದಿನ ಅನುಭವದಲ್ಲಿ ಚರಿಸಿ
ಮನೋರಾಜನ ಮಂದಿರದ ಮಾರ್ಗವಿಡಿದರೆ
ದಿನಚರಿಗೆ ದಿನಚರಿಗೆ ಅಧಿಕ ಸ್ವರೂಪ
ದಿನವೊಂದಕ್ಕೆ ಧನಿಕರೆಷ್ಟು ಯಚ್ಚವ ಮಾಡಲೇನಯ್ಯ ?
ಕನಕದ ಮಯ ಕುಂದುವುದೆ ?
ದೀನ ವಚನದ ನೀತಿ ಅನರ್ಪಿತ ಅನಿತ್ಯ
ಎನಗೊಂದು ತೋರಿದ ವಚನವೇ ಮಾರ್ಗಾತೀತ
ಅನಾಥ ವಸ್ತುವನಾರು ಬಲ್ಲರಯ್ಯ ?
ಅನಿಲದಂತೆ ಅಡರುವ ಮನದೊಳು ಹೊಳದಂತೆ
ಅಳಿವುಳಿವ ಎನಗೊಂದು ಸಾಧ್ಯವ ಮಾಡಿದ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೭೦ ॥

## ೨೦೨

ಓದುವುದು ಭಕ್ತಿಸ್ಥಲ
ಕಾದಿಹುದು ಕರ್ಮದ ಆಸೆ ಪಾಶ
ಉದರವಿಕ್ಕಿದಂತೆ ಹೊಟ್ಟೆಯೊಳು ಉಬ್ಬಸ ಉಬ್ಬಸ
ಮೇದರ ಕತ್ತಿಯಲ್ಲಿ ಕೆತ್ತಿದ ಸಿಬರಿನಂತೆ
ವಾದ ತರ್ಕ ಓದುವರೆ ಗಟ್ಟಿಯನೇನು
ಕಾಯ ಭೇದಕರಾಪರೆ ?
ಸಾಧ್ಯದ ಸ್ವಯ ಒಂದಾದರೆ ಸಲ್ಲದು ಸರ್ವತ್ರ.
ಭೇದವ ಮಾಡಿ ಕೆಟ್ಟುಹೋಗುವುದಕ್ಕೆ ಕೊಟ್ಟರು ಕ್ರೋಧವ.
ನಾದ ನಿಶ್ಚಳವಾದರೆ ಅದ್ವಿತಿ ಸಾಧ್ಯ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೭೧ ॥

## ೨೦೩

ಜ್ಞಾನಸ್ವರೂಪು ಮಾನವಸ್ವರೂಪಿನೊಳು ಅಡಿಗಿದ್ದ
ಪರಿಯೆಂತು ಹೇಳಾ ?
ಮಾನೀಶಂಗೆ ಮಾಯವಿಲ್ಲದಿರೆ ಮತ್ತೆ
ಉತ್ಪತ್ತಿ ಸ್ಥಿತಿಲಯವಿಲ್ಲ.
ಜ್ಞಾನಕ್ಕೆ ಅಜ್ಞಾನವಾದಿ, ಮನಕ್ಕೆ ನಿರ್ಮನವೆ ಆದಿ.
ಸ್ವಾನುಭಾವ ಕ್ಷಣ ಚಿತ್ತ ಕ್ಷಣದುಚ್ಚಿತ್ತ ಇನಿತು ಅಂತಸ್ತ

ಮಾನೀಶಂಗೆ ಒಂದೆ ಬುಡ ಕಾಣಾ
ಎಲ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೭೨ ||

### ೨೦೪

ಬೀಜ ವೃಕ್ಷದ ಮೊದಲು ಕಡೆ
ಸ್ವಜಾತಿ ಇಂದ್ರಿಯ ಇಂದ್ರಿಯದ ಬುಡಕಡೆ
ಅಜಾತಿ ಜಾತಿ ಜನಿತದ ಜನ್ಮದ ಕಡೆ
ತೇಜ ಅಗ್ನಿ ಜಲಪರವರ ನಡುಗಡೆ
ದ್ವಿಜಾತಿ ಜಾತಿಯತತ್ತ್ವ ಕಡೆ
ಸುಜಾತನಾತ ವರ್ಣಿಸಿದಾತ ವೃಕ್ಷ ಬೀಜವ
ಪೂಜಿತ ಮಾತಿನೊಳು ಮಾತುಂಟು ಮಂತ್ರಗೋಪ್ಯ
ಅಜಾತ ಕೂಡಲಚೆನ್ನಸಂಗನ ಶರಣರುಯಿಕ್ಕಿದ
ಮುಂಟಿಗೆಯ ಕುಲಜಾತಿ ಭೇದವ ಮಾಡುವ
ಜಗದನ್ಯಾಯಿಗಳು ಎತ್ತಿಕೊಳ್ಳಿ. || ೭೩ ||

### ೨೦೫

ಕರ್ಮದಿಂದ ಧರ್ಮ, ಕ್ರಿಯದಿಂದ ನಿಃಕ್ರಿಯ ;
ವರ್ಣಿಸ ವರ್ಣಿಸ ನಿತ್ಯ ಕೃತ್ಯ.
ಧರ್ಮಕೆ ಅಧರ್ಮವೆ ಬುಡ
ಅಂಕರೂಪು ಮಾಳ್ಪುದು ನಿರ್ಮಳ ನಿರಾಧಿ ನಿರ್ಧರ ನಿತ್ಯಂಗೆ
ನಿರ್ಮೋಹಿ ಮೋಹಿ ನಿಮಿಷ ಜ್ಞಾನಿ ಅಜ್ಞಾನಿ
ನಿಮಿತ್ಯ ಕಲ್ಪನೆ ನಿರೂಪು ರೂಪು
ಭುಕ್ತಿ ಭಕ್ತಿ ಕರ್ಮಿಗಳೆಂದು ಕಾಬುದೆ
ಕರುಣ ಕೃಪೆ ಕಾಣಾ
ಎಲ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೭೪ ||

### ೨೦೬

ಗ್ರಂಥವಾಕ್ಯ ಗರ್ವದ ಮಾತು
ಅಂತರಾತ್ಮದ ಸ್ವಯಖ್ಯಾತೇಕೊ ?
ಪ್ರಕೃತಿ ಪಲ್ಲಟವಂತಸ್ತ ವಂತಸ್ತ
ಆತ್ಮ ಅಧ್ಯಾತ್ಮ ಭ್ರಾಂತು ಭ್ರಮಿತ ಭಕ್ತನೆ ಕುತರ್ಕಿ
ಗ್ರಂಥಾತ್ಮಿ ಐಕ್ಯ ಗ್ರಂಥಾತ್ಮಿ ಪ್ರಕಟ
ಗ್ರಂಥಗೋಷ್ಠಿ ಪ್ರಸಂಗದೊಳಗಲ್ಲ
ಪಂತಿ ಪತ್ರಾರ್ಥ ಅಕ್ಷರ ನಿರಕ್ಷರ ಗ್ರಂಥಾಕ್ಷರ
ಗಮನ ನಿರ್ಗಮನ ಪತ್ಸ್ವತ್ವ ಇಂತಪ್ಪ ಅಕ್ಷರ ಗ್ರಂಥವಂತು

ನಿಮ್ಮ ಶರಣಂಗೆ ಸಾಧ್ಯ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೨೫ ||

೨೦೭

ದಾನಧರ್ಮ ಪರೋಪಕಾರ ದಯ ದಾಕ್ಷಿಣ್ಯ
ದೀನತನದಲಿ ಗಳಿಸುವುದು ಸ್ವಯ.
ನಿರ್ದಯ ದಾಕ್ಷಿಣ್ಯ ಮಾನೀಶಗ್ಯಾತಕು ?
ದಾನಧರ್ಮ ಪರೋಪಕಾರ ಅನಂತ ಕಲ್ಪನೆಗೆ ಕೊಟ್ಟ ಕ್ಷುಪ್ತಿತೃಪ್ತಿ
ಪ್ರಾಣಿಕೆ ಪಡಿಯ ನಾ ನೀಡಿದೆ ನಾ ಮಾಡಿದೆನೆಂಬ
ಅಹಂ ಗರ್ವದಿಂದ ನಾನಾ ದೇಹವ ಪ್ರಾಪ್ತಿ
ನಾನಾ ಯೋನಿಗೆ ಸ್ಥಾನ ದೇಹವ ತಾಳಿ ಬಂದು
ಕೂಟವಾಟದೊಳು ಮುಖದಿರುಗಿದಂತೆ
ಏನ ಮಾಡಿದರಿಲ್ಲ ನಿನ್ನ ಕೃಪೆಯಿಲ್ಲದೆ.
ನಾನುಯೆಂಬ ಜಲ್ಮ ನರಕ ತಪ್ಪದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೨೬ ||

೨೦೮

ಆರು ದರುಶನ ಹದಿನೆಂಟು ಸಮಯ
ನೂರೊಂದು ಕುಲಕೆ ಬೇರೆವೊಬ್ಬ ದೈವವೆ ?
ಹೋರಾಡುವರು ಭವಿ ಭಕ್ತರೆಂದು.
ಊರು ಮೊಗವ ನೀರು ಬಾವಿಯೆಂಜಲು,
ತೂರೆ ಅಗ್ನಿಗೆ ಕ್ರಿಯೆ ಉಂಟೆ ? ತಾ ಭವಿ.
ಸೂರ್ಯಚಂದ್ರರು ಭವಿಯ ಕಿರಣದೊಳಗಿದ್ದು
ಭಕ್ತನೆಂತು ದೂರವಿಲ್ಲ.
ಅಷ್ಟದಿಕ್ಪಾಲಕರು ಪಿಂಡಾಂಡ ಬ್ರಹ್ಮಾಂಡಕೆ
ಯಾರಾದರು ತರ್ಕಿಸುವರು.
ಭವಿ ಮೊದಲೊ ? ಭಕ್ತ ಮೊದಲೊ ?
ತೀರದ ಮಾತನಾಡುವ ತಿರುಬೋಟಿಗ ಭಕ್ತಿ ಇಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೨೭ ||

೨೦೯

ಅನ್ನಭವಿ ಅಗ್ಗವಣೆ ಭವಿ
ಹೊನ್ನು ಭವಿ ಹೆಣ್ಣು ಭವಿ ಮಣ್ಣು ಭವಿ
ತನ್ನ ತಾನು ಮೊದಲು ಭವಿ
ಚೆನ್ನ ಚೆಲ್ವಿಕೆ ತಾ ಭವಿ
ಭವಿಯ ಪ್ರಸಾದ ಮುನ್ನ ಯೋಗಿಗೆ ಮಾಣೆಗ

ಕ್ರಿಯವ ಕಟ್ಟಿಯ್ಯೆದಾರೆ ಪೂರ್ವಾಚಾರ್ಯರು .
ಉನ್ನತವಾದ ಕಾಮ ಕ್ರೋಧ ಲೋಭ
ಮೋಹ ಮದ ಮತ್ಸರ ತಾ ಭವಿ.
ಅನ್ಯರ ಮಾತಲ್ಲ
ಅಲ್ಲಮಪ್ರಭು ವಾಕ್ಯ ಲೆಂಕಂಗೆ ಉಪದೇಶ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೭೮ ||

೨೧೦

ಅನಂತ ಯುಗದಲ್ಲಿ ಆತ್ಮದೈವವಲ್ಲದೆ
ಅನ್ಯಾರ್ಥ ದೈವವಿಲ್ಲ,
ಅನಾದಿ ಆದಿ ಅಧ್ಯಾತ್ಮ ಧ್ಯಾನ ಜ್ಞಾನ ಮುಗ್ಧವ್ರತ
ಮಾರ್ಗಗತಿ [ಲಿಂ]ಗಸ್ಥಲ
ಅನುರ್ದ ವಿದ್ಯ ಅವಿದ್ಯ ಕುಲ ಕಾಯಕ
ಆಯುಷ್ಯ ಅಲ್ಪಾಯುಷ್ಯ
ಮನೆ ದೈವವಂ [ಬಿಟ್ಟು] ಅನರ್ಥಕೆ ಎರಗುವುದು ಆವ ಸ್ವಾಯ ?
ಮನೋರಾಜ ಪ್ರಾಣಲಿಂಗ ಪ್ರತಿಷ್ಠದಿ ದ[ರುಶ]ನವುಂಟು
ತನು ತರ್ಕಿ ಅಂಗವಿಕಾರಿಗೆಯೆಲ್ಲಿಯ ಭಕ್ತಿಯೆನಲಿಲ್ಲ
ಎನಿಸಿಕೊಂಡವರಿಲ್ಲ, ಅನೃತ ಮೊದಲಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೭೯ ||

೨೧೧

ವಂದನೆ ಸ್ತುತಿ ನಿಂದ್ಯಸ್ತುತಿ
ಒಂದಲ್ಲದೆ ಎರಡುಂಟೇನಯ್ಯ ?
ವಂದಿಸದೆ ಉಸಿವನ××ತ್ತೆರಡು ಅಕ್ಷರವೈದಕ್ಷರವಿಲ್ಲ
ಕುಂದು ಮಾಡಿಕೊಂಡಿತು ಮನುಷ್ಯಜಲ್ಮ
ಕುತರ್ಕ ಬೇಕಾ××ದ ಲೆಕ್ಕವೆಂದರೆ ಕೊಂದಲಿ
ಕೊಂದರೆ ನೊಂದೆನೆಂಬುದು ಆವ ಸ್ವಾಯ ?
ವಂದನೆ ತಾನು ತಾ[ನಾಗಿ] ವಿಚಾರಿಸಿದರೆ ತರ್ಕವಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೮೦ ||

೨೧೨

ಹಿಂದು ಮುಂದುಯೆಂಬರು ಒಂದೆ ಗರ್ಭದೊಳುಪುಟ್ಟಿ
ಹಿಂದಾದ ಕ್ರಿಯೆ ಮುಂದಾದ ನಿಃಕ್ರಿಯೆ
ಬಂಧನವೆರಡು ಜಾತಕ.
ಬಲ್ಲಿದರಿಗೆ ಬಲ್ಲಿವರು ಆಗಿ ಹಿಂದರಿದು ಮುಂದರಿದು

ಒಂದು ಮಾಡಿ ನಡಸೆಂಬ ಅನುಜ್ಞೆಯಿಂದ ಬಂದರು
ತಂದವರ ಕೂನ ತಂದ[ವರು] ಬಲ್ಲರಲ್ಲದೆ
ಮುಂದೆ ಯಾರು ಅರಿಯರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೮೧ ||

೨೧೩

ಉಳುವೆಯ ಸಮಯರ ಮುಂದೆ
ತಿಳಿವವರೇನ ಬಲ್ಲರಯ್ಯ ?
ಕಳವರೇವಿಧ ಉಂಟು ಕರ್ಮಭಯ ಪಾಶವ ?
ಸುಳುಹು ಸೂಕ್ಷ್ಮದಲಿ ಅರಿವುದು ಶುಭ ಸೂಚನೆ.
ಒಳಗುಂಟಾದರೆ ಎಸೆವುದು ಪರಿಮಳ
ತಿಳಿದವು ತೆಂಗಿನ ನೀರು ಒಳಗರತು ಗಟ್ಟಿಗೊಂಡಂತೆ
ನಿಮ್ಮ ಕೃಪೆ ಹೆಳವರ ಮೇಲೆ ಭಾಗ್ಯ ಬಂತೆಂಬರು
ಕಳಿವರೆ ಉಳಿವರೆ ಎನ್ನಳವಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೮೨ ||

೨೧೪

ನಿರಾಕಾರದೊಳು ನೀರಬೀಜವಮಾಡಿ
ಆರಿಸಿ ಘಟ್ಟಿಗೊಳಿಸಿ ಅರುಹಿದೆ ಸಕಲಕ್ಕೆ.
ಈ ನಾರ. ಗನರ ತಂತ್ರಕ್ಕೆ ಇಟ್ಟಿದಲ್ಲಿ ಮೀರಿದ ಸ್ವಯವು.
ನೀರು ತುಂಬಿಳಿದು ಸಾರಾಯ ಕೊಪ್ಪರಿಕೆ ಬೆಲ್ಲಬಂದಂತೆ.
ನೀರು ಬಂದು ನಿರುತದಲ್ಲಿ
ಕಡಿಗಟ್ಟುವಡೆ ಮರಣವಾದಂತೆ,
ಯಾರ ಕೂಡಬೇಕಾಯಿತು ಅವರ ಕೂಡಿತು.
ನಾರಿವಾಣ ಗುರು, ನೀರು ಬೆಲ್ಲ ಶಿಷ್ಯ.
ಸೇರಿದರೆ ಅಂತು ಆಪುದನು ಸೇರಿ ಸೈ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ || ೮೩ ||

೨೧೫

ತೆಂಗು ತಿಳಿದಂತೆ ಅಂತರಂಗವ ತಿಳಿವರು
ಕಣ್ಣು ಮೂರುಳ್ಳವರು.
ಬಾಹಿರಂಗಕ್ಕೆ ಉಂಬರೆ ಲಿಂಗವೆ ಒಡಲಾಗಿ
ನಿರತಂಗವೆ ಅಡಿಯಾಗಿ
ಸಂಗಂಗೆ ಸಮರ್ಪಿಸಬಲ್ಲಾತ ಸರ್ವಾಂಗಲಿಂಗಮಯ.
ಬಂಗಾರದೊಳು ಮೃದು ಕುಂದಣ ಕಟ್ಟಾಳು ಕೀಳು ಆದಂತೆ

ತನ್ನ ಅಂತರಂಗವ ತಿಳಿವುದೆ ಕಾರಣ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೮೪ ॥

೨೧೬

ನುಡಿದಂತೆ ನಡೆವವರ, ನಡೆದಂತೆ ನುಡಿವವರ
ನಡೆಯ ನಿಮ್ಮ ಭಕ್ತರ ಎನಗೊಮ್ಮೆ ತೋರಿಸಯ್ಯ.
ಅವರಡಿಗೆ ಮಂಡೆಯ ಹಾಸುವೆನು ;
ಅವರ ಲೆಂಕರ ಲೆಂಕನಾಗಿ ಉಗಿವ ಪಡುಗವ ಹಿಡಿವೆ.
ಉಗುಳ್ದ ತಂಬುಲಕೆ ಕೊಡವಿಡಿದು ನಡವೆ ಬೆಸ್ತರ ಬೋವನಾಗಿ.
ದೃಢವುಳ್ಳ ಭಕ್ತರ ಬಾಗಿಲ ಕಾಯ್ದು ನರನಾಗಿ
ಎಡದೆರವಿಲ್ಲದೆ ಅವರಿಪ್ಪಂತೆ ಇಪ್ಪೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೮೫ ॥

೨೧೭

ಬಂಡ ವಚನವ ಕಲಿತರೇನಯ್ಯ ?
ಕಂಡುದ ಬಿಡ, ಕೊಂಡುದ ಕೊಡ.
ಉಂಡಮನೆಗೆರಡ ಬಗೆವುದು ಬಂಡರಮತ.
ಹಂಡಿಗನ ವಗತನದಂತೆ ಹೋಯಿತ್ತು [ಹೋ]ಯಿತ್ತೆಂಬರು.
ಚಾಂಡಾಲರು ನುಡಿವರು  ನಡೆಯರು
ಕಂಡದ್ದಾಡಿ ಬಂಡಿಸಿಕೊಂಬರು ಕರ್ಮಧರ್ಮವ.
ದಿಂಡೆಯರ ಸಂಗವ ಮಾಡುವುದು ದಿಕ್ಕುಗೇಡು
ಬಂಡು ಆವುದು ತಪ್ಪದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೮೬ ॥

೨೧೮

ಖಂಡಿತವಂ ನುಡಿವುದು,
ಕರ್ಮ ಧರ್ಮವ ಕಂಡು ನಡವುದು.
ಮಂಡೆ ಮಾಸಿದರೆ ಮಿಂದಂತೆ
ಮನದ ಮಲಿನ ಬಿಡುವುದು.
ಕಂಡರೆ ಕಣ್ಣ ಮುಚ್ಚುವುದು
ಪರಧನ ಪರಸ್ತ್ರೀ ಪರನಿಂದ್ಯ.
ಉಂಡು ಉಣ್ಣದೆ, ಬಳಸಿ ಬಳಸದೆ, ಬೈದು ಬಯ್ಯದೆ
ಕಂಡವವರು ಆರಿದರೆ ಆರಿದಂತೆ, ಉರಿದರೆ ಉರಿದಂತೆ
ಬೆಂಡಗುಂಟಿಗೆ ಕಟ್ಟಿದಂತೆ ಇರಬೇಕು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೮೭ ॥

೨೧೯

ಅಂತು ಇಪ್ಪ ಶರಣರ
ಅಂತಸ್ಥವ ಎಂತು ಪೊಗಳುವೆನಯ್ಯ ?
ಮಂತ್ರಕೆ ಮೊದಲಿಗರು, ಉಪದೇಶಕೆ ಉಪಮಾತೀತರು.
ಅಂತಸ್ಥ ಆತ್ಮದಲ್ಲಿ ಸರ್ವರಕ್ಷಕರು ತಂತ್ರವಾಹಕರು.
ಸತ್ಯ ಶಿವಾರ್ಚಕರು ಚಿಂತೆ ನಿಶ್ಚಿಂತರು ಚಿದಾನಂದ ಶರಣರು.
ಅವರು ನಿಂತುದೇ ತೀರ್ಥ, ನಿದ್ರೆಯೇ ವಾರಣಾಸಿ,
ನಿರುತ ವಾಕ್ಯವೇ ಪರ್ವತ, ನಿಜವೇ ಕೈಲಾಸ.
ಅಂತು ಅಂತರ್ಮಯರ ಎನಗೊಮ್ಮೆ ತೋರಿಸಯ್ಯ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೮೮ ॥

೨೨೦

ನೋಡುವರ ಎನ್ನಳವೆ ನೋಟಕ್ಕೆ ಸಿಕ್ಕರು;
ಕೂಡುವರೆ ಎನ್ನಳವೆ ಕೂಟಕ್ಕೆ ಬಾರರು;
ಬೇಡುವರೆ ಎನ್ನಳವೆ ಬೇಡಿದ್ದ ಕೊಡರು.
ಓಡಿ ಓಡಿ ಗತಬಿದ್ದೆ ಒಬ್ಬರನು ಕಾಣೆ.
ಬೇಡ ಬೇಂಟೆಗೆ ಹೋಗಿ ಬರಿಗೈಯಲಿ ಬಂದಂತೆ
ನಾಡ ತಿರುಗಲಾರ ನನ್ನಿಂದ ಆಪುದೇನು ?
ನೋಡಿಕೋ ಇನ್ನು ನನ್ನಿಂದ ಆಗದು ನಿನ್ನಿಂದ ಆದುದು
ಬೋಚಿಯಲಿ ಲಕ್ಷಣವ ಅರಸುವರೆ ?
ಕೂಡಗೊಡು ನಿನ್ನ ಮಹಾತ್ಮೆ
ಆಡಿದ ಮಾತಿಗ ತಪ್ಪಲಿಲ್ಲ ಏಕವಾಕ್ಯ
ಪತಿಷ್ಠಚಾರಿ ಕಾಡುವರೆ ನೀನು ನಿಃಕರುಣಿಯಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೮೯ ॥

೨೨೧

ತನ್ನ ತಾನರಿವುದೆ ಉತ್ತಮ ಶರೀರ.
ಇನ್ನು ಹೇಳಿದರೆ ಕೇಳುವದೇ ಮಧ್ಯಮ ಶರೀರ.
ಮನ್ನಿಸದೆ ಅಗ್ನಿಗೆ ಬೀಳುವುದೆ ಕನಿಷ್ಠ ಶರೀರ.
ಹೊನ್ನಿನ ಬಣ್ಣಕ ಇವು ಮೂರು ಬಣ್ಣ ಹೆಚ್ಚು.
ಅನ್ನವ ದಂಡಿಸಿಕೊಂಬುದೆ ಅಧಮ ಜಾತಿ,
ಮನ್ನಣೆಯಿಂದ ನೀಡಿಪ್ಪ ಕೊಂಬುದೆ ಮಧ್ಯಮ ಜಾತಿ.
ಇನ್ನು ಯಾರನು ಬೇಡದೆ ಕೃಷಿಯ ಮಾಡಿ ಉಂಬುದ ಅಪೂರ್ವಜಾತಿ.
ಪನ್ನೊಂದು ಪರಿ ಉದ್ಯೋಗ ಉಂಟು.
ಕರ್ಮಧರ್ಮವ ನೋಡಿಸಬಲ್ಲರೆ ಅನ್ಯಾಯಹತ್ತರ

ಮೇಲು ಧರ್ಮಕಾಯಕ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೯೦ ॥

**೨೨೨**

ಉದ್ಯೋಗವ ಮಾಡಿ ತಂದಾಕ್ಷಣ
ಖಂಡಿಸುವದು ಅನರ್ಥ್ಯ.
ಉದ್ಯೋಗ ದಿನ ಕೃತಿ ಕಾಯಕ ಅಪೂರ್ವ
ಉದ್ಯೋಗ ಮನೆಯೊಳು ನಾಳೆಯೆಂಬುದು ಉತ್ತಮ
ಉದ್ಯೋಗ ದಿನ ನಾಳಿಗೆಂಬುದು ಮಧ್ಯಮ
ಉದ್ಯೋಗ ಅನುಪತ್ಯ ಕಡಮೆಗೊಡುವುದು ಕನಿಷ್ಠ
ಉದ್ಯೋಗ ದಿನ ವಾರ ಬಡ್ಡಿಗೊಡುವುದು ಅಧಮ
ಉದ್ಯೋಗ ಹುಸಿ ಚಾಂಡಾಲ ತೂಕಮಾಪು ಕಡಮೆಗೊಡುವುದು.
ಉದ್ಯೋಗ ತಾನು ಉಣ್ಣದೆ ದ್ರವ್ಯವ ಕೂಡಿಸುವುದು ನಿರ್ನಾಮಿ
ಉದ್ಯೋಗವ ಮಾಡದೆ ಮನೆಗಳ ಕನ್ನಗಳ
ದಾಸಿ ವೇಸಿಯ ಸಂಗ ಪಾಪದ ಪುಂಜ.
ಉದ್ಯೋಗ ನಂಬಿದ ವಡವೆಯನಳುಪುವುದು ನಾಯಕ ನರಕ.
ಉದ್ಯೋಗ ಪರಧನ ಪರಸ್ತ್ರೀ ಪರನಿಂದ್ಯ ಪಾಪದ ಶಾಪ
ಪ್ರಾರಬ್ಧ ನರಕ ತಪ್ಪದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೯೧ ॥

**೨೨೩**

ಇಚ್ಚೆಯನಾಡಿದರೆ ಲೋಕ ಮುಚ್ಚುವುದು ಬೆರವುದು
ಕಚ್ಚೆಗಡುಕರ ಸಂಗವ ಮಾಡುವ ಕರ್ಮಸಾಕು
ಚುಚ್ಚಕರು ಚುಲ್ಲಕರು ಮುಕ್ತಿಯ ಬೇಡಲರಿಯರು
ನಚ್ಚಬೇಡ ಅವರಿಂದ ನರಕ ತಪ್ಪದು.
ಹುಚ್ಚಾಗಿ ಹೋಗುವರೆ ಹುದುಗು ಹುಸಿಕರ
ನಿಶ್ಚಯವಿಲ್ಲದವರ ಸಂಗ
ಉಚ್ಚೆಯಲಿ ಮಿಂದಂತೆ ಬಚ್ಚಿಟ್ಟ ದ್ರವ್ಯವ ಬಂಕುಲಿಗೆ ಹಾಕುವರು.
ನುಚ್ಚಕಟ್ಟಬಾರದ ಅರಿವೆಯಲ್ಲಿ ನುರುಕಿದ ರಂಗೋಲೆ ನಿಲುವುದೆ ?
ಮುಚ್ಚಿದ ದಾಸಿ ವೇಸಿಗೆ ಹರಿವ ಕರ್ಮಿಗೆ ಸಿಕ್ಕುವನೆ ಶಿವ ?
ಲಕ್ಷಕೊಬ್ಬ ಮುಗ್ಧ ದಶಲಕ್ಷಕೊಬ್ಬ ಸಿದ್ಧ
ನಿಶ್ಚಯ ಕೋಟಿಗೊಬ್ಬ ಪುರಾತ
ಅಚ್ಚಲಿಂಗೈಕ್ಯರು ಅಪೂರ್ವ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೯೨ ॥

೨೨೪

ತನ್ನ ಸತಿಯಂ ಬಿಟ್ಟು ಅನ್ಯ ಸತಿಗೆರಗುವ
ಕುನ್ನಿ ನಾಯ ಮುಖವ ನೋಡಲಾಗದು.
ಬಿನ್ನಾಣ ಮಾಡಿದ ರೂಪಿನೊಳು ಶಿವನಿಪ್ಪನೆ ?
ತನ್ನ ಸತಿ ತನ್ನ ಅಂಗ, ಅನ್ಯ ಸತಿ ಅನ್ಯರಂಗ
ಮುನ್ನವೆ ಪ್ರತಿಗೆ ಪ್ರತಿಯಿಟ್ಟರು ಸತಿ ಪತಿಯ
ತನ್ನ ಧನ ತನ್ನ ಸತಿ ತನ್ನ ಮಕ್ಕಳ
ಇನ್ನೊಬ್ಬ ಕೊಂಡು ಪೋಪಾಗ ಸುಮ್ಮನೆ ಇಪ್ಪನೆ ?
ತಿನ್ನ ಬಂದುದ ತಿನ್ನಬೇಕಲ್ಲದೆ ತಿನ್ನದ ತಿಂಬರೆ ?
ಮುನ್ನಲೆ ಪರದ್ವಾರದಿಂದ ದಶಶಿರ ರಾವಣನ ಶಿರ ಹೋಯಿತ್ತು.
ಅನ್ಯಾಯದಿಂದ ಕೆಟ್ಟರು ಅನಂತ ಸಮರ್ಥರು,
ಇನ್ನವರಿಗೆ ಜಲ್ಮವಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೯೩ ||

೨೨೫

ತನ್ನ ಸತಿ ತನ್ನ ಕಾಯಕ ಕೃಷಿಯಲ್ಲದೆ
ಅನ್ಯಾರ್ಥವ ನೋಡಿ ಗ್ರಹಿಸದಾತನ ನೋಟವೆ ನೋಟ.
ಇನ್ನು ಶಿವಸ್ತುತಿಯಲ್ಲದೆ ನರಸ್ತುತಿಯ ಕೇಳ್ದುದೆ ಕರ್ಣ.
ಉನ್ನತದುರ್ಗಂಧ ಹೊಂದದೆ ಸುಗಂಧ ತೃಪ್ತಿವಡವುದೇ ನಾಸಿಕ.
ತನ್ನ ತಾನು ಅರಿತು ಒಬ್ಬರ ಬೇಡದೆ ನಿಂದ್ಯವ ಬಿಟ್ಟುದ್ದೆ ಜಿಹ್ವೆ.
ಮುನ್ನ ತಾ ಈ ನಾಲ್ಕು ಮುಕ್ತಿ ಬೇಕಾದವರು
ಇಂತಪ್ಪುದ ಮನ್ನಿಸೂದು.
ಈ ನಾಲ್ಕು ಶುದ್ಧಯಿಲ್ಲದವರ
ಅನ್ಯಾಯಿಗಳನೊಪ್ಪುವರೆ ನಮ್ಮ ಸಂಗಯ್ಯನ ಶರಣರು ?
ಇನ್ನು ಅನ್ಯಾಯಿಗಳಿಗೆ ಪ್ರಳಯ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೯೪ ||

೨೨೬

ಮೋಡಕೆ ಮುನಿವರು ಮಳೆಬಿಂಬಕೆ ಇಪ್ಪರೇನಯ್ಯ ?
ಬ್ಯಾಡ ಅನ್ಯಾಯಿಗಳ ಬಿಡು ಎಂದರೆ ಬಿಡದವರ ಬಿಡುವುದು.
ಅವರ ಸಂಗವ ಸಾಧಿಸಿ ಮಾಡ ಮಾಡ
ಪಾಪದ ಸಮುದ್ರದಲಿ ಮುಳುಗುವರು.
ಕುಂಭೀ ನರಕಿಗಳಿಗೆ ನೀಡ ಬ್ಯಾಡ ಅನ್ನವ
ಅವರಿಗೆ ಸತ್ತೇನೆಂದರೆ ನೀರ ಕೊಡಬ್ಯಾಡ.

ಮುಖವ ಮುಂದುಗಂಡರೆ ಮುಚ್ಚು ಕಣ್ಣ
ಆಡಬ್ಯಾಡ ಅವರ ಕೂಡ.
ಅನಂತವಾದ ಪೀಡೆ ಪಿಶಾಚಿಯಾಗಬಹುದಲ್ಲದೆ
ಹುಸಿ ಕಳವು ಸಲ್ಲ.
ಅಡಿ ಅಡಗುವದು ಅಂತಪ್ಪರ ಕಂಡಡೆ.
ಮಾಡಿಪ್ಪ ಉಂಡಾರು ತಮ್ಮ ಗಳಿಕೆಯ ತಾವೆ.
ಕೇಡು ತಪ್ಪದು ಇಂತು ಅಪ್ಪುದಕ್ಕೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೯೫ ||

**೨೨೭**

ತತ್ವದ ಮಾತು ತೊತ್ತುಮಾರಿಗಳಿಗ್ಯಾತಕಯ್ಯ ?
ಭಕ್ತಿಯೆಂಬುದು ಸಾಮಾನ್ಯರ ಪಕ್ಷವೆ ?
ಮಿಥ್ಯವ ಮನದಲ್ಲಿ ಇಟ್ಟವನ ಸತ್ಯವ ಸುಡು.
ಹುತ್ತಿನಲ್ಲಿ ಬಂದು ಸತ್ತರೆ ಹಾವಿನ ಕೊಲೆ
ಉತ್ತಮ ಮಧ್ಯಮ ಹೊಂದಲು ಉತ್ತಮಗೋಟಿ.
ಸತ್ತಲಿ ನಿಂದರೆ ದುಃಖ, ಹತ್ತಲಿ ನಿಂದರೆ ಮೋಹ
ಹತ್ರಹೊಂದಬಾರದು ಈ ಮೂರ್ಖ ಸಮೀಪಕ್ಕೆ
ಭಕ್ತರಂಗವ ಬಳಿವ ಕಸಬರಿಗೆಯಾಗಬಹುದಲ್ಲದೆ
ವ್ಯರ್ಥರ ಕೂಟ ಸಲ್ಲದು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೯೬ ||

**೨೨೮**

ಒಬ್ಬರಿಗೆ ಹೇಳಿ ನಡೆಯದವರ ಸಂಗ
ಗೊಬ್ಬರದೊಳಗಣ ಚೇಳಿನಂತೆ.
ಹುಬ್ಬು ಹಾಕತಿಪ್ಪ ಹುಸಿಕರ ಕಂಡರೆ ಹುಸಿ, ದಿಟರ ಕಂಡರೆ ದಿಟ,
ಹಬ್ಬಿಸುವ ಮಾತಿನ ಮಾಲೆಯ ಮರ್ಕಟನಂತೆ
ಇಬ್ಬಂದಿಗತನ ಇಹದಲ್ಲಿ ನಿಂತವಂಗೆ ಇಹಪರವಿಲ್ಲ.
ಉಬ್ಬಿಸುವ ಉರಿಗಿಚ್ಚಿನಂತೆ ಉರಿಗಂಟಿಕೆ
ಹಬ್ಬವ ಮಾಡಿದವರ ಮನೆಗೆ ಹಾದ ಬಂದಂತೆ.
ಸರ್ಪಗ್ರಹಣ ಹಿಡಿವುತಿದೆ ಇಂತು ಎಚ್ಚಕರಿಗೆ
ಅರ್ಬುತನನೆಬ್ಬಿಸಲಿಕೆ ಆಗಮದ ದಮಡೆಯ ಬಂದ
ತುಬ್ಬುನಿಕ್ಕಿ ಇಂಥಾ ವೇಷವ ತುದಿ ಮೂಗ ಕೊಯ್ಯುವನು
ಇನ್ನು ಒಬ್ಬನ ಬೋಧೆಯಲ್ಲದ ಇಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೯೭ ||

೨೭೯

ರೂಪು ಸಂಪನ್ನನಾದಡೇನಯ್ಯ ಸ್ತ್ರೀಯರಿಗೆ ಭಾಜನವಾಯಿತ್ತು.
ಗುಣ ಸಂಪನ್ನನಾದಡೇನಯ್ಯ××× ಭಾಜನವಾಯಿತ್ತು.
ದ್ರವ್ಯ ಸಂಪನ್ನನಾದಡೇನಯ್ಯ ರಾಜರಿಗೆ ಭಾಜನವಾಯಿತ್ತು.
ಖಡ್ಗ ಸಂಪನ್ನನಾದಡೇನಯ್ಯ ರಣಾಗ್ರಕ್ಕೆ ಭಾಜನವಾಯಿತ್ತು.
ತ್ಯಾಗ ಸಂಪನ್ನನಾದಡೇನಯ್ಯ ಯಾಚಕರಿಗೆ ಭಾಜನವಾಯಿತ್ತು.
ಬಸವಣ್ಣ ನಿಮ್ಮ ಭಕ್ತಿ ಸಂಪನ್ನನಾದ ಕಾರಣದಿಂದ
ಸ್ವಯಲಿಂಗಿಯಾದೆನು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೯೮ ॥

೨೮೦

ಮಾಂಸಪಿಂಡ ಮಂತ್ರಪಿಂಡವೆಂಬುದಕ ಕುರುಹ್ಯಾವುದು ?
ಹೊಲೆ ಮೊದಲೆಂಬುದೆ ಮಂತ್ರಪಿಂಡ ;
ಕೂಟ ಮೊದಲೆಂಬುದೆ ಮಾಂಸಪಿಂಡ ;
ಹೊಲಿದ ಪಾದರಕ್ಷೆ ಆಪಾದಮಸ್ತಕದಿಂ ಹುದುಗು
ಎಲುವಿನ ಮೂಳೆ ಮಾಂಸದ ಮಾಟ ರಕ್ತದ ಕೊಣ
ನರದ ಹಂಜರ ನಾನಾ ವಿಧದ ಕ್ರಿಮಿಕೀಟ
ಕುಲಮೊದಲ್ಯಾವುದು ಕಡೆಯಾವುದು ?
ವರ್ಣಾಶ್ರಮಕ್ಕೆ ಫಲವದರಿಂದ ನಿಃಫಲವಾಯಿತು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೯೯ ॥

೨೮೧

ಸೂತಕವೆಂದಲ್ಲಿ ಪಾತಕ ಹೊದ್ದುವುದೇನಯ್ಯ ?
ಮಾತೆಯ ಗರ್ಭದೊಳು ಮಾಂಸ ಹೊಲೆ,
ಅಸ್ಥಿ ಮಾಂಸ ಹೊಲೆ, ಮಜ್ಜೆ ಮಾಂಸ ಹೊಲೆ,
ನರಮಾಂಸ ಹೊಲೆ, ರಕ್ತಮಾಂಸ ಹೊಲೆ,
ಚರ್ಮಮಾಂಸ ಹೊಲೆ, ರೋಮ ಈ ತನು ಮಾಂಸ ಹೊಲ
ತ್ರಿಮಾಂಸ ಹೊಲೆ,
ರೂಪು ಲಾವಣ್ಯ ಸೂಸಕದ ಮುದ್ದು
ಪಾತಕದ ಗಟ್ಟಿ, ಇದಕೆ ಯಾತರ ಕುಲವೊ ?
ರಾತ್ರಿ ಒಂದು, ದಿನ ಒಂದು, ಹೆಣ್ಣೊಂದು ಗಂಡೊಂದು,
ಬಾಹತ್ರ ಕೂಡಿ ಬಲ್ಲೆ ಬಲ್ಲೆನೆಂದು ಹೋರಿ ಕೆಡುವುದು
ಮಾತನಾಡಲಿಕೆ ತೆರಪಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦೦ ॥

೨೩೨

ನೂರೊಂದು ಕುಲ ಕಾಯಕ
ಸಾರೆ ಸರ್ವರಿಗೆ ಬೇಕಾಗಿಹುದು ಅಯ್ಯ.
ಕಾಯಕವೊಂದಕೆ ಒಂದು ಆದಿ ಕಾರಣವದು ಹಾದಿ
ಮಾರಿಕೊಳಬೇಕಾಯಿತು ನೂರೊಂದು ಕುಲ
ಕಾಯಕವನೊಂದಿ ಸರ್ವವಂ ಹೊಂದಿ
ಯಾರಾದರಾಗಲಿ ಕುಲವಂ ಜರವರು
ಕುಲದ ಹಂಗಂ ಬಿಡುವುದು
ಮೋರೆಯ ಮುಚ್ಚಿದರೇನಯ್ಯ ?
ಮೂಗಿನಲ್ಲಿ ಹೋಗುವುದು ದುರ್ವಾಸನೆ
ಚಾರ್ವಾಕ ಮತಕೆ ಮುಕ್ತಿಯಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೦೧ ||

೨೩೩

ಹೊರಗು ಒಳಗುಯೆಂಬ ಮರವೆಯ ಮನುಜರ ಕೇಳಿ
ಹೊರಗು ಜನನ ಮರಣಕೆ
ಹೆಣ್ಣು ಹೊನ್ನು ಮಣ್ಣು ತ್ರಿವಿಧಕ್ಕೆ ಹೊರಗು
ಸ್ವರ್ಗ ಮರ್ತ್ಯ ಪಾತಾಳಕ್ಕೆ
ಪರಾಪರ ವಸ್ತು ಹೊರಗಾದವರ ಹೊರಗೆಂಬುದೆ ಸದಾಚಾರ.
ಒಳಗಾದವರ ಹೊರಗೆಂಬುದೆ ಅನಾಚಾರ.
ಹೊರಗು ಒಳಗುಯೆಂಬ ಉಭಯದ ಭೇದವ
ಮರವೆಯ ನರರೇನ ಬಲ್ಲರಯ್ಯ !
ಶಿವಾಚಾರದ ಖೂನವ ಹೊರಗಾದಾತ ಶಿವಭಕ್ತ,
ಭಕ್ತನೊಳಗಾದಾತ ಶಿವ.
ಹೊರಗೆಂಬುದು ಒಳಗುಂಟು
ಒಳಗೆಂಬುದು ಹೊರಗುಂಟು
ಅರುಹು ಜ್ಞಾನದ ಉಭಯದ ಮಧ್ಯ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೦೨ ||

೨೩೪

ಕುಲಪಾಶ ಮಲಪಾಶ ಜಲಜಾಡ್ಯ
ಹಲವು ಪಾಶವಾಸಯಲ್ಲಿ
ಉಲಿವುತಿದೆ ಶ್ವಾನನಂತೆ.
ಉಭಯದ ಹಳಗಕ್ಕೆ ಎಲೆ ಮಾನವ ಎತ್ತಣ ಭಕ್ತಿಯೊ ?
ವ್ಯಾಕುಳ ಬಿಡದು ; ಕಲಿಪರೆ ವಚನದಂತೆ ಅದೆ ;

ಕಲಿವರೆ ಬೋಧೆಯಂತೆ ಆದೆ
ಸುಲಭದಿಂದ ಸಿಕ್ಕುವುದು ಸದ್ಗುರುವಿನ ಕೃಪೆಯಿಂದ ಭಕ್ತಿ,
ಬಲ್ಲೆ ಬಲ್ಲೆನೆಂಬವರು ಬಲು ಸೂರೆಹೋದರು ಬಯಲಹಮ್ಮಿನಲ್ಲಿ
ಸಲುವುದು ನಿಮ್ಮ ಸಂಗನ ಶರಣರು
ಭಕ್ತ ಪಾಶವಂ ಹರಿಯಲು ಸಾಧ್ಯವು ಭಕ್ತಿ
ಕುಲಮಲಪಾಶದವೊಳಗೆ ಹೊರಳುವ ಕುನ್ನಿಗೆ
ಕುರುಹ್ಯಾಕೆ ಅರುಹ್ಯಾಕೆ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦೩ ॥

೨೩೫

ಹೊನ್ನಿಯ ಹುಳವ ಕಂಡು
ಕುನ್ನಿ ತನ್ನ ಬಾಲವ ಸುಟ್ಟುಕೊಂಡಲ್ಲಿ
ತೊನ್ನಾಗಿ ಹುಳಿತು ಕೊಳತು ಹೋಗುವುದಲ್ಲದ
ಹೊನ್ನೆಯಂತ ಹೊಳವುದ ?
ಧನ್ಯರಾಗಬೇಕು ಭಕ್ತರ ನುಡಿ ನಡೆಯ ಕೇಳಿ ಕಂಡು
ಇನ್ನು ಹೊಲುವೆಗೆ ವೇಷವ ತಾಳಿದರ ಕ್ಲೇಶ ತೊಳವುದೆ ?
ದಿನ್ನಾರಿಯ ಹೊನ್ನಿನ ತೂಕ ಬಣ್ಣ ಹೊನ್ನಿಗುಂಟೆ
ಸನ್ನಹಿತ ಲೋಕಕ್ಕೆ ಸಂಗನ ಶರಣ ವಿರಹಿತ
ಇನ್ನವರ ಪ್ರಭೆ ಸರ್ವಕ್ಕೆ ಕೀಳಾದ ಬಳಿಕ
ಮೇಲು ಮುನ್ನಲೇ ಹೊಲಗೇರಿಯೊಳು ಅಕ್ಕು|ಲ|ಜ ಹುಟ್ಟುವ
ಹನ್ನಿಬ್ಬರ ಬಾಯಿಗೆ ಮುಚ್ಚುಳ, ಮುಗಿದ ಕೈಯಿಕ್ಕುಳ
ತನ್ನ ತಾನರಿತ ಜ್ಞಾನಭರಿತನು ಜಗಭರಿತನ ಭಕ್ತ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦೪ ॥

೨೩೬

ಕುಲ ಅಕ್ಕುಲವೆಂಬ ಕುಮಂತ್ರಿಗಳ ಕೇಳಿರೈ
ಕುಲಜನ ಮೈಯಲ್ಲಿ ಹಾಲು, ಅಕ್ಕುಲಜನ ಮೈಯಲ್ಲಿ ರಕ್ತವಿಪ್ಪುದ ?
ಕುಲಭೇದವ ಮಾಡುವ ಅನ್ಯಾಯಿಗಳಿರಾ
ಕಲಿಕೆಯ ಮಾತು ಕಾತುರ ಭೂತ ಪ್ರಾಣಿಗ ಸೂತಕ
ಕುಲಮಲ ಭಾಂಡ ಮಾರ್ಗವೊಂದು
ಮೂತ್ರ ಕುಕ್ಷಿಯಿಂ ಪುಟ್ಟಿ ಮಾಯ ಮೋಹ ಬಿಲದ್ವಾರದೊಳು
ಸಿಳ್ಳಿ ಸಿಂಬಳ ಕುಗಿನಿ ಕಿಡಿ ಜಲ ಮಲ
ಕುಲಜ ಅಕ್ಕುಲಜನೆಂಬವನೆಂತು ? ಇಪ್ಪ ಕುರುಹ್ಯಾವುದು ?
ಸಲೆ ಶಿವನೊಪ್ಪಿದುದ ಕುಲ, ಒಪ್ಪದುದ ಅಕ್ಕುಲ.
ಬಿಟ್ಟೆಯೊಳು ಸಿಕ್ಕದೆ ಬಯಲ ಅಹಂ ಗರ್ವಮಂ ಬಿಟ್ಟು

ಚನ್ನನ ಕುಲಕೆ ಸರಿಯಲ್ಲ ಕಾಣಾ
ಎಲೆ ನಮ್ಮ ಕೂಡಲ ಚೆನ್ನಸಂಗಮದೇವಯ್ಯ. ॥ ೧೦೫ ॥

೨೩೭

ಒಬ್ಬರ ಕಂಡು ಒಬ್ಬರು ಸಾಹಿತ್ಯವಾದರೇನಯ್ಯ ? ಸನ್ನಹಿತರಲ್ಲ.
ಮುಬ್ಬುಗಾವಳ ಗವಿದಂತೆ
ಮೋರೆಗೆ ಮೋರೆ ತಾಕು ತಾಕು
ಇಬ್ಬರ ವಿಶ್ವಾಸ ಇಕ್ಕುರೋಗವಾಯಿತ್ತು.
ನಿಬ್ಬಣದ ಮನೆಯಲ್ಲಿ ನೀ ಕದ್ದೆ ತಾ ಕದ್ದೆಯೆಂದು
ಕೊಂಡಾಡಿದಂತೆ,
ಕಬ್ಬ ಕಡಿದು ಗಾಣವಂ ಆಡಿಸಿ
ಕಾವಲಿಯೊಳು ಸುಟ್ಟರೆ ಸಿಹಿ ಬಿಟ್ಟೀತೆ ?
ಹುಬ್ಬ ಹಾಕುತ ಹಿರ ಒಡೆಯರಿಗಿದಿರಾಗಿ ಒಡೆಯರು
ಕಬ್ಬು ಕಟ್ಟಿಗೆಗೆ ಆ ಗುಣವಿತ್ತು ಗುರುಶಿಷ್ಯರಿಗೆಯಿಲ್ಲ
ತುಬ್ಬಸಿಕ್ಕಿ ತೆಗದಾರು ಇಬ್ಬರ ಕಳಂಕವ
ಇನ್ನೊಬ್ಬನೆ ಗುರು ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦೬ ॥

೨೩೮

ಎಂಬತ್ತುನಾಲ್ಕು ಲಕ್ಷ ಜೀವರಾಶಿ ಬೆಂಬಳಿ
ಒಂದೊಂದು ಕುಲ, ಒಂದೊಂದು ವರ್ಣ, ಒಂದೊಂದು ಭಾಷೆ.
ಉಂಬುದು ಉಡುವುದು ಕೊಂಬುದು ಕೊಡುವುದು ಜಾತಿಗೆ ಜಾತಿ.
ಉಂಬುದು ಮನುಷ್ಯ ಜನ್ಮ ಒಂದೆ ವರ್ಣ
ಒಂದಕ್ಕೆ ಒಂದು ಕೋಟಿ ಭೇದ ಇಂಬಿಲ್ಲ ನೋಡಿದರೆ
ಇದಕ್ಕೆ ಕಾಯಕ ಕುತರ್ಕ ಸಂಬಳವ ಕಟ್ಟಿಕೊಂಡಿತು
ಕರ್ಮಧರ್ಮವೆಂಬ ವರ್ಮದ ಮೂಲವ
ನಂಜಿದ ಭಕ್ತಂಗೆ ಜಾತಿಯಿಲ್ಲ.
ಆಚಾರಕ್ಕೆ ವ್ರತವಿಲ್ಲ, ಆಕಾಶಕ್ಕೆ ನೆಳಲಿಲ್ಲ.
ಬೆಂಭೂಮಿಗೆ ಪಾತಕವಿಲ್ಲ
ನಂಜಿವರ ಪಂಚತತ್ವಕ್ಕೆ ಪ್ರಕಟವಿಲ್ಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦೭ ॥

೨೩೯

ಭೂಮಿಯ ಹೋಲುವ ಚಕ್ರ
ಜಲವ ಹೋಲುವ ಮಹೇಶ್ವರ

ಅಗ್ನಿಯ ಹೋಲುವ ಪ್ರಸಾದಿ
ವಾಯುವ ಹೋಲುವ ಪ್ರಾಣಲಿಂಗಿ
ಆಕಾಶವ ಹೋಲುವ ಆದ್ಯಂತ ಶರಣ
ಇಂತು ಈ ಪಂಚತತ್ವವ ಹೋಲುವ ಐಕ್ಯ.
ಷಡುಮುಖ ಸಮಸ್ತಕ್ಕೆ ಭಕ್ತನ ಬುಡ
ಶಿವನೇ ಬೀಜ, ವಿಶ್ವವೇ ಮುಖ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦೮ ॥

೨೪೦

ಹಾರುವ ಹಾರೈದ ತನ್ನೊಳು
ದೂರವಿಲ್ಲ ಹೊಲೆ ನಿಷೇಧ ತನ್ನೊಳು
ಆರಂಭಗೃತ ವಿಷಯ ತನ್ನೊಳು
ಪಾರಾಟ ಮಾತಿನ ಮಾಲೆ ಬಣಜಿಗ ತನ್ನೊಳು
ಸೀರೆಯ ನೆಯ್ವ ಜಾಡ ದೇವಾಂಗ ತನ್ನೊಳು
ಮಾರುವ ಕುಂಬಾರ ಆಹಾರ ದೇಹಾರ ತನ್ನೊಳು
ಕರಿಯ ಪಂಚಾಳ ನಿರ್ಮಿತ ಪಂಚವಿಷಯ ತನ್ನೊಳು
ಬೇರಯಿಲ್ಲ ಕುರುಬ ಹಡ್ಡ ಹೇಕುಳಿ ತನ್ನೊಳು
ನೂರೊಂದು ಕಾಯ ತನ್ನೊಳು, ಕುಲವು ತನ್ನೊಳು
ತೋರಿದರ ವಿಶ್ವವ ತೋರಬಹುದು
ಆತ್ಮವ ಹೊಂದಿದಧ್ಯಾತ್ಮ ತನ್ನೊಳು
ಕಾರ್ಯ ಕಾರಣಕ್ಕೆ ಕುತರ್ಕವಿಲ್ಲದೆ ಕೂಡುವುದು ಐಕ್ಯಸ್ಥಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. ॥ ೧೦೯ ॥

೨೪೧

ವೇಶಿಯ ಕುಲವ್ಯಾವುದು ? ದಾಸಿಯ ಕುಲವ್ಯಾವುದು ?
ಹಾಸುವಳು ಸೆರಗ ಹದಿನೆಂಟು ಜಾತಿಗೆ.
ಹೇಸದೆ ಎಂಜಲತಿಂದು ಹಿರಿದುಕುಲನನ್ನದೆಂದು ಮೆರವೆ
ಕಾಸುಗಳ್ಳರಿಗೆ ಕಾತುರ್ಯವೆ ದೇವಾ ?
ಈಸು ಮಾತು ಯಾತಕ್ಕೆ ಇಂತಪ್ಪುದಕ್ಕೆ ?
ದಾಸಿಯಲ್ಲಿ ಗುಣವುಂಟೆ ? ವೇಶಿಯಲಿ ಗುಣವುಂಟು.
ಸರ್ವಜಾತಿ ಒಂದೆಯೆಂದು ಕಾಬಳು.
ಹೇಸಿದ ಬಳಿಕ ಬಿಡಬೇಕು ಹಿಂದಣ ಅವಗುಣವ.
ಹಸು ಮಾತನಾಡಿದರ ಆಡಬಹುದು
ಮಾತಿನಂತೆ ಮನವಿದ್ದರೆ ಈಶ್ವರ ಬೇರಯಲ್ಲ,
ಈ ಪ್ರಪಂಚಬಿಟ್ಟರ

ತ್ರಾಸಿನಂತೆ ಸಮುಕಟ್ಟು ಆದರೆ ತತ್ವವೇ ಕಟ್ಟಳೆ
ನಾಶವಾಗದು ಚಿನ್ನದ ಗಟ್ಟಿ
ನಂಬುಗೆಯೆಂಬುದು ಪಾಶದಾಸೆಯ ಬಿಟ್ಟವರಿಗೆ ಸಾಧ್ಯ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೧೦ ||

೨೪೨

ವೇಶಿಯ ಕಾಯಕ ಮುಂತು
ಸರ್ವ ಅಸಗಕುಲ ಕಾಯಕ ಹಿಂತು.
ಪೇಸಿಕೆಯ ಬಿಟ್ಟಿತ್ತು, ಸೂಸಿತು ಸರ್ವತ್ರವ ಏಕವೆಂದು.
ಆಸೆಯಂ ಬಿಟ್ಟು ದೊರೆ ಬಡವನೇ ? ನಾಶವಾಗದು.
ಕಾಯಕವೆ ಧರ್ಮ ಪಾಶವಂ ತೊಳವುದು
ದೂಷಕ ಮಿಕ್ಕಣ ಕಾಯಕ
ದೋಷ ದ್ರೋಹ ಸಕಲ ಪ್ರಪಂಚು
ವೇಶಿಯ ಕಾಯಕವೇ ತುರೀಯ
ಮಿಕ್ಕಾದ ಅಸಗಕಾಯಕ ಅದರಿಂದಧಮ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೧೧ ||

೨೪೩

ಬಣ್ಣಿಸುವವರು ತಮ್ಮ ವಸ್ತ್ರವ ಬಣ್ಣನೆಯನ್ನಿಟ್ಟು ಭಜನೆಯಂ ಸುಟ್ಟು
ಕಣ್ಣು ತಪ್ಪಿದರೆ ತೂಕ ಮಾಪು ಮೋಸ ವಕ್ರ ಮರವೆವೊಂದೊಂದು
ಪುಣ್ಯವ್ಯಾವುದು ಪುಸಿಗೊಂಡ ವೇಷಕ್ಕೆ ? ಕಾಯಕವೆಲ್ಲಿ ?
ಬನ್ನಣೆ ವೇಶಿ ಬಾಯಮಾತಿನಲ್ಲಿ ಆ ವೇಶಿಯ ಮೀರಿಸಿದಂತೆ
ಕಣ್ಣಿಗೆ ಸಿಕ್ಕದ್ದೇ ಪಾಪ ಸಿಕ್ಕಿದ್ದೇ ಪುಣ್ಯ
ಮಣ್ಣಾಯಿತು ಮಿಕ್ಕಣ ಕಾರ್ಯ.
ಮರವೆಯ ಮಾಯೆ ಬಣ್ಣದ ಉರಿಯಿತು.
ಈ ಕಾಯದ ಸುದ್ದಿಯ ಆಯವಂ ಕಾಣದೆ.
ಹಣ್ಣು ಕಾತಂತೆ ಕಾಸರಿಕನ ಫಲವೆ ನಿಷ್ಫಲ ಕಾಣಾ
ಎಲೆ ನಮ್ಮ ಕೂಡಲಚೆನ್ನಸಂಗಮದೇವಯ್ಯ. || ೧೧೨ ||

■■

# ಷಣ್ಮುಖಸ್ವಾಮಿಗಳ ಷಟ್‍ಸ್ಥಲವಚನ

## ಪಿಂಡಸ್ಥಲ

೨೪೪

ಆದಿಯಾಧಾರವಿಲ್ಲದಂದು,
ನಾದ ಬಿಂದು ಕಲೆಗಳಿಲ್ಲದಂದು,
ವೇದಶಾಸ್ತ್ರಾಗಮ ತರ್ಕತಂತ್ರಗಳಿಲ್ಲದಂದು,
ಚೌಷಷ್ಠಿ ವಿದ್ಯಾಕಲೆಗಳಿಲ್ಲದಂದು,
ಭೇದಾಭೇದಗಳಿಂದೆ ತೋರುವ
ತೋರಿಕೆಗಳೇನೂ ಇಲ್ಲದಂದು,
ಅಖಂಡೇಶ್ವರಾ, ನಿಮ್ಮ ನೀವರಿಯದೆ
ಅನಂತಕಾಲವಿರ್ದಿರಂದು. || ೧ ||

೨೪೫

ಪೃಥ್ವಿ ಆಕಾಶಂಗಳಿಲ್ಲದಂದು,
ದಿಕ್ಕುವಿದಿಕ್ಕುಳಿಲ್ಲದಂದು,
ಸಪ್ತದ್ವೀಪ ಸಪ್ತಸಮುದ್ರಂಗಳಿಲ್ಲದಂದು,
ತತ್ತ್ವಮಸ್ಯಾದಿ ವಾಕ್ಯಂಗಳಿಲ್ಲದಂದು,
ನಿತ್ಯಾನಿತ್ಯಂಗಳೇನೂ ಇಲ್ಲದಂದು
ಅಖಂಡೇಶ್ವರಾ, ನಿಮ್ಮ ನೀವರಿಯದೆ
ಅನಂತಕಾಲವಿರ್ದಿರಂದು. || ೨ ||

೨೪೬

ಕಾಲಕಲ್ಪಿತಂಗಳಿಲ್ಲದಂದು,
ಲೀಲೆ ಇಪ್ಪತ್ತೈದ ನಟಿಸದಂದು,
ಬಾಲಚಂದ್ರನ ಸೂಡದಂದು,
ಸಾಲುಮಸ್ತಕಮಾಲೆಯ ಧರಿಸದಂದು,
ಕಾಲ ಕಾಮ ಮಾಯೆ ದಕ್ಷಾದಿಗಳಿಲ್ಲದಂದು,
ಅಖಂಡೇಶ್ವರಾ, ನಿಮ್ಮ ನೀವರಿಯದೆ
ಅನಂತಕಾಲವಿರ್ದಿರಂದು. ॥ ೩ ॥

೨೪೭

ಪ್ರಕೃತಿ ವಿಕೃತಿಗಳಿಲ್ಲದಂದು,
ಮಹಾಶೇಷ ಕಮಠ ದಿಗ್ಗಜಂಗಳಿಲ್ಲದಂದು,
ಅಷ್ಟತನು ಕುಲಗಿರಿಗಳಿಲ್ಲದಂದು,
ಷಡಧ್ವ ಷಡುಋತುಗಳಿಲ್ಲದಂದು,
ಶಶಿರವಿಗಳ ಬೆಳಗು ಪಸರಿಸದಂದು,
ಅಖಂಡೇಶ್ವರಾ, ನಿಮ್ಮ ನೀವರಿಯದೆ
ಅನಂತಕಾಲವಿರ್ದಿರಂದು. ॥ ೪ ॥

೨೪೮

ಹಗಲಿರುಳ್ಗಳಿಲ್ಲದಂದು,
ಯುಗಜುಗಂಗಳು ಮರಳಿ ಮರಳಿ ತಿರುಗದಂದು,
ಗಗನ ಮೇರು ಕೈಲಾಸಂಗಳಿಲ್ಲದಂದು,
ಖಗ ಮೃಗ ಶೈಲ ವೃಕ್ಷಂಗಳಿಲ್ಲದಂದು,
ಅಜಹರಿಸುರಾಸುರ ಮನುಮುನಿಗಳಿಲ್ಲದಂದು,
ಜಗದ ಲೀಲಾವೈಭವಂಗಳೇನೂ ಇಲ್ಲದಂದು,
ಅಖಂಡೇಶ್ವರಾ, ನಿಮ್ಮ ನೀವರಿಯದೆ
ಅನಂತಕಾಲವಿರ್ದಿರಂದು. ॥ ೫ ॥

## ಪಿಂಡಜ್ಞಾನಸ್ಥಲ

೨೪೯

ನೀವು ನಿಮ್ಮ ಸ್ವಲೀಲೆಯಿಂದೆ
ಜಗದಲೀಲಾ ವೈಭವಂಗಳ ನಟಿಸಬೇಕೆಂದು
ನಿಮ್ಮಲ್ಲಿ ನೆನಹುದೋರಲು,
ಆ ನೆನಹು ನಿರ್ಧರಿಸಿ, ಚಿತ್ತೆನಿಸಿತ್ತು

ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು ಚಿತ್ಕಳೆಗಳೊಗೆದವು.
ಆ ಚಿನ್ನಾದ ಚಿದ್ಬಿಂದು ಚಿತ್ಕಳೆ
ಆ ಮೂಲಚಿತ್ತು ಸಹವಾಗಿ ಗಟ್ಟಿಗೊಂಡು
ಅಖಂಡ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.
ಆ ಮಹಾಲಿಂಗವೇ ಪಂಚಮುಖವನ್ನೈದಿಹ ಸದಾಶಿವನೆಂದೆನಿಸಿತ್ತು.
ಆ ಸದಾಶಿವನಿಂದೆ ಬ್ರಹ್ಮ–ವಿಷ್ಣು–ರುದ್ರರೆಂಬ ತ್ರೈಮೂರ್ತಿಗಳುದಿಸಿದರು.
ಆ ತ್ರೈಮೂರ್ತಿಗಳಿಂದೆ ಸ್ವರ್ಗ–ಮರ್ತ್ಯ–ಪಾತಾಳಂಗಳೆಂಬ
ತ್ರೈಲೋಕಂಗಳು ಜನಿಸಿದವು.
ಆ ತ್ರೈಲೋಕಂಗಳ ಮಧ್ಯದಲ್ಲಿ ಸಚರಾಚರ ಹೆಣ್ಣುಗಂಡು
ನಾಮ ರೂಪ ಕ್ರಿಯಾದಿ ಸಕಲ ವಿಸ್ತಾರವಾಯಿತ್ತು.
ಇಂತಿವೆಲ್ಲವೂ ನಿಮ್ಮ ನೆನಹುಮಾತ್ರದಿಂದಾದವಯ್ಯ ಅಖಂಡೇಶ್ವರಾ. ॥ ೬ ॥

೨೫೦

ಎನ್ನ ತನುವಿನ ಮರೆಯಲ್ಲಿರ್ದ ಚಿನುಮಯನ
ಅರಸುವ ಬನ್ನಿರೇ,
ಎನ್ನ ಮನದ ಮರೆಯಲ್ಲಿರ್ದ ಮಹಾಘನವಸ್ತುವ
ಹುಡುಕುವ ಬನ್ನಿರೇ,
ಎನ್ನ ಪ್ರಾಣದ ಮರೆಯಲ್ಲಿರ್ದ ಪರಬ್ರಹ್ಮವೆಂಬ
ಅಖಂಡೇಶ್ವರನ ನೋಡುವ ಬನ್ನಿರೇ. ॥ ೭ ॥

೨೫೧

ಬೀಜದ ಮರೆಯಲ್ಲಿ ಅಡಗಿರ್ದ ಅಂಕುರವು
ಬಹಿರ್ಗತವಾದಂತೆ,
ಮುಗಿಲಮರೆಯಲ್ಲಿ ಅಡಗಿರ್ದ
ಕ್ಷಣಿತವು ಸ್ಫುರಿಸಿದಂತೆ,
ಎನ್ನ ಮನದ ಮಧ್ಯದಲ್ಲಿ ಅಡಗಿರ್ದ ಮಹಾಘನವು
ತನ್ನ ಲೀಲೆಯಿಂದೆ ತಾನೇ ಉದಯವಾಗಲು
ನಿಮ್ಮ ಆದಿಯನಾದಿಯ ನಿಲವ ಕಂಡೆನಯ್ಯಾ ಅಖಂಡೇಶ್ವರಾ. ॥ ೮ ॥

೨೫೨

ನೆನಹಿಗೆಬಾರದ ವಸ್ತುವ ನೆನವಪರಿ ಇನ್ನೆಂತೋ !
ಭಾವಕ್ಕೆಬಾರದ ವಸ್ತುವ ಭಾವಿಸುವಪರಿ ಇನ್ನೆಂತೋ !
ನೆನೆಯದೆ ಭಾವಿಸದೆ ಎನ್ನೊಳಗೆ ಬಯಲುರೂಪವಾಗಿ
ತೋರಿದನು ನೋಡಾ ಅಖಂಡೇಶ್ವರ. ॥ ೯ ॥

೨೫೩

ಅನಂತಕಾಲ ಎನ್ನ ಒಡಲ ಮರೆಯೊಳಗೆ ಅಡಗಿರ್ದು
ಎನಗೆ ಕಾಣಿಸದೆ ಇದ್ದುದು ಇದೇನು ನಿಮ್ಮ ಗಾರುಡವಯ್ಯಾ !
ನೀವು ನಿಮ್ಮ ಕರುಣದಿಂದೆ ಎನ್ನ ಒಡಲ ಮರವೆಯ ಒಡೆದು,
ಎನ್ನ ಕಣ್ಣ ಮುಂದಣ ಸತ್ತ್ವ–ರಜ–ತಮದ ಪರದೆಯ ಹರಿಯಲೊಡನೆ
ನಿಮ್ಮ ನಿತ್ಯದ ನಿಲವ ಕಂಡೆನಯ್ಯ ಅಖಂಡೇಶ್ವರಾ. ॥ ೧೦ ॥

೨೫೪

ಎನ್ನಂಗದ ಮಧ್ಯದೊಳಗೆ ಮಂಗಳಾಂಗನ ಬೆಳಗು
ಥಳಥಳಿಸಿ ಹೊಳೆಯುತಿರ್ಪುದಾಗಿ,
ಎನ್ನ ಕಂಗಳ ಕಳವಳಿಕೆ ಕಡೆಗಾಯಿತ್ತು.
ಎನ್ನ ಮನದ ಮುಂದಣ ಮರವೆ ಹಾರಿಹೋಯಿತ್ತು.
ಅಖಂಡೇಶ್ವರನ ನಿಲವು ನಿಶ್ಚಲವಾಗಿ ಕಾಣಬಂದಿತ್ತು. ॥ ೧೧ ॥

೨೫೫

ಅಂಜನದ ಬಲದಿಂದೆ ನೆಲದ ಮರೆಯ
ದ್ರವ್ಯವ ಕಾಣುವಂತೆ,
ಎನ್ನ ಚಿತ್ತಿನ ಮಧ್ಯದಲ್ಲಿ
ನಿತ್ಯ ಶಿವಜ್ಞಾನಾಂಜನವು ಪ್ರಜ್ವಲಿಸಲಾಗಿ,
ತತ್ವಾತತ್ತ್ವಂಗಳು ವ್ಯಕ್ತವಾದವು.
ಅಖಂಡೇಶ್ವರನೆಂಬ ಪರವಸ್ತುವು ಹೊಳೆರ್ದ ಗೊತ್ತು ಕಾಣಬಂದಿತ್ತು. ॥ ೧೨ ॥

## ಸಂಸಾರಹೇಯಸ್ಥಲ

೨೫೬

ಎನ್ನ ಭವಭವದಲ್ಲಿ ತೊಳಲಿಸಿ ಬಳಲಿಸಿದ ಕಾರಣವೇನಯ್ಯ ?
ಎನ್ನ ಸಂಸಾರಶರಧಿಯಲ್ಲಿ ಮುಳುಗಿಸಿ
ಏಳುಗೊಡದೆ ಇರಿಸಿದ ಕಾರಣವೇನಯ್ಯ ?
ನಾನು ಮಾಡಿದ ಅಪರಾಧವೇನಯ್ಯ ?
ನೀವು ಮಾಡಲಾನಾದೆನಲ್ಲದೆ ಎನಗೆ ಬೇರೆ
ಸ್ವತಂತ್ರವೇ ಹೇಳಾ ಅಖಂಡೇಶ್ವರಾ ? ॥ ೧೩ ॥

೨೫೭

ಅಡವಿಯಲ್ಲಿರ್ದ ಗೋವು ಮನೆಯಲ್ಲಿರ್ದ
ಕರುವಿಂಗೆ ಚಿಂತಿಸಿ ಬಂದು
ಹಾಲನೂಡಿ ಮೋಹಮಾಡುವುದಲ್ಲದೆ,

ಆ ಕರುವೆತ್ತ ಬಲ್ಲುದಯ್ಯ !
ನಾನು ಕರ್ಮದೇಹವಿಡಿದು ಪರಿಭವದಲ್ಲಿ ತೊಳಲುತ್ತಿರಲು,
ನೀನು ದಯಹುಟ್ಟಿ ಎನ್ನ ಮರವೆಯ ಸಂಸಾರವ ತೊಲಗಿಸಿ
ಕರುಣದಿಂದ ಸಲಹಬೇಕೆಂಬ ಚಿಂತೆ ನಿನಗಲ್ಲದೆ
ನಾನೇನಬಲ್ಲೆನಯ್ಯ ಅಖಂಡೇಶ್ವರಾ ? ॥ ೧೪ ॥

೨೫೮

ಎಂದು ಅಷ್ಟತನುಗಳು ನಿರ್ಮಿತವಾಗಿ ಪಿಂಡಾಂಡವಾದುವು,
ಅಂದು ಇಂದು ಪರಿಯಂತರ ಬಂದೆನಯ್ಯ ಬಹುಜನ್ಮಂಗಳಲ್ಲಿ,
ನೊಂದೆನಯ್ಯ ಸುಖದುಃಖಂಗಳಲ್ಲಿ.
ಬೆಂದೆನಯ್ಯ ಸಂಸಾರದಳ್ಳುರಿಯಲ್ಲಿ;
ಈ ಸಂಸಾರದಂದುಗವ ತೊಲಗಿಸಿ ನಿಮ್ಮತ್ತ
ಎಳೆದುಕೊಳ್ಳಯ್ಯ ಎನ್ನ,
ಅಖಂಡೇಶ್ವರಾ ನಿಮ್ಮ ಧರ್ಮ ನಮ್ಮ ಧರ್ಮ. ॥ ೧೫ ॥

೨೫೯

ಘ್ರಾಣೇಂದ್ರಿಯವಿಷಯದಿಂದೆ ಭ್ರಮರ ಕೆಡುವುದು
ಸಂಪಿಗೆಯ ಪುಷ್ಪದಲ್ಲಿ.
ರಸನೇಂದ್ರಿಯವಿಷಯದಿಂದೆ ಮತ್ಸ್ಯ ಕೆಡುವುದು
ಜಾಲಗಾರನ ಬಲೆಯಲ್ಲಿ.
ನಯನೇಂದ್ರಿಯವಿಷಯದಿಂದೆ ಪತಂಗ ಕೆಡುವುದು
ದೀಪದ ಜ್ವಾಲೆಯಲ್ಲಿ
ತ್ವಗೀಂದ್ರಿಯವಿಷಯದಿಂದ ಗಜ ಕೆಡುವುದು
ರಾಜನ ಕೃತಕದಲ್ಲಿ.
ಶ್ರವಣೇಂದ್ರಿಯವಿಷಯದಿಂದೆ ಎರಳೆ ಕೆಡುವುದು
ಬೇಟೆಗಾರನ ಸರಳಿನಲ್ಲಿ.
ಇಂತೀ ಪ್ರಾಣಿಗಳು ಒಂದೊಂದು ವಿಷಯದಿಂದೆ
ಬಂಧನಕ್ಕೊಳಗಾದವು.
ಇಂತಪ್ಪ ಪಂಚೇಂದ್ರಿಯವಿಷಯವ್ಯಾಪಾರದಲ್ಲಿ
ಲಂಪಟರಾದ ಮನುಜರು
ಕೆಟ್ಟ ಕೇಡನೇನೆಂಬೆನಯ್ಯ ಅಖಂಡೇಶ್ವರಾ ? ॥ ೧೬ ॥

೨೬೦

ವಿಷಯವೆಂಬ ಕಾಳಗಿಚ್ಚಿನ ಜ್ವಾಲೆಯಲ್ಲಿ
ಈರೇಳುಲೋಕವೆಲ್ಲ ಹತವಾಗುತಿರ್ಪುದು ನೋಡಾ !

ಅದೆಂತೆಂದೊಡೆ :
ಕುಂಡಲಿಯೆಂಬ ಮಾಯಾಸರ್ಪನು
ತನ್ನ ಬಾಲವ ಬ್ರಹ್ಮರಂಧ್ರಕ್ಕೇರಿಸಿ,
ನಾಭಿಚಕ್ರವ ಸುತ್ತಿಕೊಂಡು,
ಅಧೋಮುಖವಾಗಿ ಇಂದ್ರಿಯವಿಷವ ಕಾರುತಿಪ್ಪುದು ನೋಡಾ !
ಆ ವಿಷದ ನಂಜು ತಲೆಗೇರಿದಲ್ಲಿ
ಅಸಿಯಜವ್ವನೆಯರ ಸಂಗಸುಖ ಬಹುಸವಿಯೆಂದು
ತಲೆದೂಗುತ್ತಿಪ್ಪುದು ನೋಡಾ ಸಕಲ ಪ್ರಾಣಿಗಳು.
ಇದು ಪಶುಪತಿಯುಮಾಡಿದ
ಮಾಯದ ವಿಧಿಯೆಂದು ತಿಳಿಯದೆ
ಹಸಗೆಟ್ಟುಹೋಯಿತ್ತು ನೋಡಾ ಮೂಜಗವೆಲ್ಲ ಅಖಂಡೇಶ್ವರಾ. ॥ ೧೭ ॥

೨೭೧

ಬಣ್ಣದಚರ್ಮದ ಹೆಣ್ಣಿನಂಗಸಂಗದಕೂಟಸುಖ ಸವಿಯೆಂದು
ಮನವೆಳಸುವ ಕಣ್ಣುಗೆಟ್ಟಣ್ಣಗಳು ನೀವು ಕೇಳಿರೋ !
ಶುನಿ ಎಲುವ ಕಡಿವಲ್ಲಿ
ತನ್ನ ಬಾಯ ಲೋಳೆ ತನಗೆ ಸವಿದಟ್ಟುತಿಪ್ಪುದಲ್ಲದೆ,
ಆ ಎಲುವಿನೊಳಗೇನು ಸಾರಸವಿಯುಂಟೆ ?
ತನ್ನ ಊರ್ಧ್ವಬಿಂದು ಮಾಯಾವಶದಿಂದೆ ಅಧೋಗತಿಗಿಳಿದು
ಮೂತ್ರನಾಳ ತಗುಲಿ ಕಿಂಚಿತ್‌ಸುಖ ಉಂಟಾಗುತಿಪ್ಪುದಲ್ಲದೆ
ಆ ಹೆಣ್ಣಿನಿಂದೇನು ಸುಖವುಂಟೆ ? ಎಡ್ಡ ಪ್ರಾಣಿಗಳಿರಾ !
ಇಂತೀ ದೃಷ್ಟವ ತಿಳಿದು ಭೇದಿಸಿ ಕಾಣಲರಿಯದೆ
ಹೇಸಿಕೆಯ ಕಿಸುಕುಳದ ಕೀವುತುಂಬಿ ಒಸರುವ
ಹಸಿಯತೊಗಲಿನ ಹಳೆಯಗಾಯದಲ್ಲಿ
ವಿಷಯಾತುರದಿಂದೆ ಬಿದ್ದು ಮತಿಮಸುಳಿಸಿ ಮುಂದುಗಾಣದೆ
ಮುಳುಗಾಡುತಿಪ್ಪುದು ನೋಡಾ
ಮೂಜಗವೆಲ್ಲ ಅಖಂಡೇಶ್ವರಾ. ॥ ೧೮ ॥

೨೭೨

ಅಂಡಜ ಇಪ್ಪತ್ತೊಂದು ಲಕ್ಷ, ಪಿಂಡಜ ಇಪ್ಪತ್ತೊಂದು ಲಕ್ಷ,
ಉದ್ಭಿಜ ಇಪ್ಪತ್ತೊಂದು ಲಕ್ಷ, ಜರಾಯುಜ ಇಪ್ಪತ್ತೊಂದು ಲಕ್ಷ,
ಇಂತು ಎಂಬತ್ತುನಾಲ್ಕುಲಕ್ಷ ಜೀವರಾಶಿಗಳೊಳಗೆ
ಒಂದೊಂದು ಜನ್ಮದೊಳಗೆ ಸಹಸ್ರ ಸಹಸ್ರವೇಳೆ ಹುಟ್ಟಿಬಂದ
ಅನೇಕ ದುಃಖವಂತಿರಲಿ.
ಮುಂದೆ ಮನುಷ್ಯದೇಹವಿಡಿದು ಬಂದ ದುಃಖಮಂ ಪೇಳ್ವೆನದೆಂತೆನೆ :

ತಂದೆಯ ವಿಕಾರದದೆಸೆಯಿಂದೆ ಬಂದು ಬಿಂದುರೂಪಾಗಿ,
ತಾಯಿಯ ಬಸುರಲ್ಲಿ ನಿಂದು ಒಂಬತ್ತುತಿಂಗಳ ಪರಿಯಂತರ
ಅವಯವಂಗಳು ಬಲಿದು ಪಿಂಡವರ್ಧನವಾಗಿ,
ಕದ್ದ ಕಳ್ಳನ ಹೆಡಗೈಯಕಟ್ಟಿ ಸೆರೆಮನೆಯಲ್ಲಿ ಕುಳ್ಳಿರಿಸುವಂತೆ,
ಗರ್ಭವೆಂಬ ಸೆರೆಮನೆಯಲ್ಲಿ ಶಿಶುವು
ಮುಚ್ಚಿದ ಕಣ್ಣು, ಮುಗಿದ ಬಾಯಾಗಿ, ಕುಕ್ಕುಟಾಸನದಲ್ಲಿ ಕುಳ್ಳಿರ್ದು,
ಕಡಿವ ಜಂತುಜಂಗುಳಿಯ ಬಾಧೆ,
ಸುಡುವ ಜಠರಾಗ್ನಿಯ ಬಾಧೆ,
ಎಡದಲ್ಲಿ ಮೂತ್ರದ ತಡಿಕೆಯ ಬಾಧೆ,
ಬಲದಲ್ಲಿ ಅಮೇಧ್ಯದ ಹಡಿಕೆಯ ಬಾಧೆ,
ಇಂತಿವು ಮೊದಲಾದನಂತಕೋಟಿ ಬಾಧೆಗಳಿಂದೆ
ದಿನದಿನಕ್ಕೆ ದುಃಖಮಂಬಡುತಿರ್ದು,
ಆ ಮೇಲೆ ಜಾತಿಸ್ಮರತ್ವ ಉದಯವಾಗಿ,
ತನ್ನ ಹಿಂದಣ ಧರ್ಮಕರ್ಮಂಗಳ ಪುಣ್ಯಪಾಪಂಗಳ
ಅರಹು ಮರಹುಗಳನಾರೈದು ನೋಡಿ,
ಹಿಂದರಿಯದ ಪಾಪದ ದೆಸೆಯಿಂದೆ ಈ ಗರ್ಭನರಕಕ್ಕೆ ಬಂದೆ,
ಇನ್ನು ಮುಂದೆ ತೆರನೇನೆಂದು ತನ್ನೊಳಗೆ ತಾನೆ ಚಿಂತಿಸಿ
ಸರ್ವರಿಗೆ ಪರಮೇಶ್ವರನೇ ಕರ್ತನು,
ಸರ್ವರ ಭವಪಾಶಂಗಳ ಛೇದಿಸುವಾತನು ಪರಮೇಶ್ವರನೆಂದರಿದು,
ಮನದಲ್ಲಿ ನಿಶ್ಚೈಸಿಕೊಂಡು ಆ ಪರಮೇಶ್ವರಂಗೆ ಶಿವಧೋ ಶಿವಧೋ
ಎಂದು ಮೊರೆಯಿಡುತ್ತ ಶಿವಧ್ಯಾನಮಂ ಮಾಳ್ಪ ಸಮಯದಲ್ಲಿ
ಕೋಟಿಸಿಡಿಲು ಹೊಯ್ದಂತೆ ವಿಷ್ಣುಪ್ರಸೂತಿಯೆಂಬ ಗಾಳಿ ಬೀಸಲು,
ಅದಕಂಡು ಥರಥರನೆ ನಡುಗಿ ಧ್ಯಾನಪಲ್ಲಟವಾಗಿ
ದಿಗ್‌ಭ್ರಮಣೆಗೊಂಡು ಊರ್ಧ್ವಮುಖವಾಗಿ ಕುಳಿತಿರ್ದ ಶಿಶುವು
ಗಿರ್ರನೆ ತಿರುಗಿ ತಲೆಕೆಳಗಾಗಿ
ಕರ್ತಾರನ ಕಂಬೆಚ್ಚಿನಲ್ಲಿ ಚಿನ್ನದ ಸಲಾಕೆ ತೆಗವಂತೆ,
ಬಚ್ಚಲಹುಳುವಿನಂದದಿ ಯೋನಿಯೆಂಬ
ಸೂಕ್ಷ್ಮದ್ವಾರದಿಂದೆ ಪೊರಮಟ್ಟು ಹುಟ್ಟಿದಲ್ಲಿ
ಕೋಟಿಬಾಧೆಗಳಿಂದ ನೊಂದು ಹಪ್ಪನೆ ಹಾರಿ ಕಡುದುಃಖಮಂಬಟ್ಟು,
ಹಿಂದಣ ಜಾತಿಸ್ಮರತ್ವ ಕೆಟ್ಟು, ಮತಿ ಮಸುಳಿಸಿ,
ತನ್ನ ಮಲಮೂತ್ರಂಗಳಲ್ಲಿ ತಾ ಹೊರಳಾಡಿ
ಬಾಲಲೀಲೆಯ ಸುಖದುಃಖಂಗಳನನುಭವಿಸಿ,
ಆ ಬಾಲಲೀಲೆಯು ಹಿಂದುಳಿದ ಮೇಲೆ ಯೌವನದ ವಯಸ್ಸುವಡೆಗವಲ್ಲಿ,
ಕಾಮದಲ್ಲಿ ಕರಗಿ ಕ್ರೋಧದಲ್ಲಿ ಕೊರಗಿ

ಮದಮತ್ಸರಂಗಳಲ್ಲಿ ಮುಂದುಗೆಟ್ಟು
ನಾನಾ ವ್ಯಾಪಾರವನಂಗೀಕರಿಸಿ
ಬಂದ ಯೋನಿಯೆಂದರಿಯದೆ, ಉಂಡ ಮೊಲೆಯೆಂದರಿಯದೆ,
ಕಾಮವಿಕಾರ ತಲೆಗೇರಿ ವಿಷಯಾತುರನಾಗಿ,
ಈಳಿಗಾರನ ದೆಸೆಯಿಂದ ಈಚಲಮರ ನಿಸ್ಸಾರವಾದಂತೆ,
ಸ್ತ್ರೀಯರ ಸಂಗದಿಂದೆ ದೇಹದೊಳಗಣ ಊರ್ಧ್ವಬಿಂದು
ಜಾರಿ ಜಾರಿ ಇಳಿದು ಸೋರಿ ಸೋರಿ ಹೋಗಿ ದೇಹವು ನಿಸ್ಸಾರವಾಗಿ,
ಯೌವನದ ಬಲಗೆಟ್ಟು ಮುಪ್ಪಾವರಿಸಿ ಅಚೇತನಗೊಂಡು
ಸರ್ವಾಂಗವೆಲ್ಲ ನೆರೆತೆರೆಗಳಿಂದ ಮುಸುಕಲ್ಪಟ್ಟಾತನಾಗಿ,
ಆಧಿ ವ್ಯಾಧಿ ವಿಪತ್ತು ರೋಗ ರುಜೆಗಳಿಂದೆ ಬಹು ದುಃಖಬಟ್ಟು,
ಎದೆ ಗೂಡುಗಟ್ಟಿ, ಬೆನ್ನು ಬಾಗಿ, ಕಣ್ಣು ಒಳನಟ್ಟು,
ಶರೀರ ಎಳತಾಟಗೊಂಡು, ಕಾಲಮೇಲೆ ಕೈಯನೂರಿ
ಕೋಲವಿಡಿದು ಏಳುತ್ತ, ನಾನಾ ತೆರದ ದುಃಖಧಾವತಿಯಿಂದ
ಆತ್ಮ ಕೆಟ್ಟು ನಷ್ಟವಾಗಿ ಹೋಯಿತ್ತು ನೋಡಾ.
ಇದ ಕಂಡು ನಾನಂಜಿ ಮರಳಿ ಜನ್ಮಕ್ಕೆ ಬರಲಾರದೆ
ನಿಮ್ಮ ಮೊರೆಹೊಕ್ಕೆನಯ್ಯಾ ಅಖಂಡೇಶ್ವರಾ. ॥ ೧೯ ॥

**೨೭೩**

ಹರಿಯ ಹತ್ತು ಭವದಲ್ಲಿ ಬರಿಸಿತ್ತು ಮಾಯೆ.
ಬ್ರಹ್ಮನ ತಲೆಯ ಹೋಳುಮಾಡಿತ್ತು ಮಾಯೆ.
ಇಂದ್ರಚಂದ್ರರಂಗಕ್ಕೆ ಭಂಗವಿಕ್ಕಿತ್ತು ಮಾಯೆ.
ಗರುಡ ಗಂಧರ್ವರ ಬರಡುಮಾಡಿತ್ತು ಮಾಯೆ.
ಕಿನ್ನರ ಕಿಂಪುರುಷರ ಚುಸ್ಸಮಾಡಿತ್ತು ಮಾಯೆ.
ಸಿದ್ಧಸಾಧಕರಿಗೆಲ್ಲ ಗುದ್ದಾಟವನಿಕ್ಕಿತ್ತು ಮಾಯೆ.
ಮನುಮುನಿಗಳನೆಲ್ಲರ ಮನವ ಸೆಳಕೊಂಡು
ಮರಣಕ್ಕೊಳಗುಮಾಡಿತ್ತು ಮಾಯೆ.
ಸ್ವರ್ಗಮರ್ತ್ಯಪಾತಾಳಗಳೆಂಬ ಮೂರು ಲೋಕದವರನ್ನೆಲ್ಲ
ಯೋನಿಮುಖದಲ್ಲಿ ಹರಿಹರಿದು ನುಂಗಿ ತೊತ್ತಳದುಳಿದಿತ್ತು ಮಾಯೆ.
ಮುಕ್ಕಣ್ಣಾ, ನೀ ಮಾಡಿದ ಮಾಯವ ಕಂಡು
ಬೆಕ್ಕನೆ ಬೆರಗಾದೆನಯ್ಯ ಅಖಂಡೇಶ್ವರಾ. ॥ ೨೦ ॥

**೨೭೪**

ಬಂಧನಕ್ಕೊಳಗಾದ ಹುಲಿಗೆ ಬಲಾತ್ಕಾರ ಉಂಟೆ ಅಯ್ಯ ?
ಸಂಸಾರದಂದುಗದಲ್ಲಿ ತೊಳಲುವ ಜೀವನಿಗೆ
ಮುಂದೆ ಮುಕ್ತಿಯನರಸುವ ಜ್ಞಾನ ಉಂಟೆ ಅಯ್ಯ
ಅಖಂಡೇಶ್ವರಾ ? ॥ ೨೧ ॥

೨೭೫

ಕೆಟ್ಟೆಕೆಟ್ಟೆನಯ್ಯ ಒಡಲುಪಾಧಿಯ ಹಿಡಿದು,
ಕೆಟ್ಟೆಕೆಟ್ಟೆನಯ್ಯ ಒಡಲ ದುರ್ಗುಣದೊಡನಾಡಿ,
ಕೆಟ್ಟೆಕೆಟ್ಟೆನಯ್ಯ ನಿಮ್ಮಡಿಯ ಭಕ್ತಿಯ ಮರೆದು
ಅಖಂಡೇಶ್ವರಾ. ॥ ೨೨ ॥

೨೭೬

ಕಿಸುಕುಳದ ಕೀವುರಕ್ತದ, ಒಸೆದು ತುಂಬಿದ ಮಲಮೂತ್ರದ
ರಂಜನ ಮುಸುಕಿದ ಮಾಂಸ ಅಸ್ಥಿಗಳ
ಸುತ್ತಿನ ಹಸನಾದ ಚರ್ಮದ ಹೊದಿಕೆಯ
ಹುಸಿಯ ತನುವ ಮೆಚ್ಚಿ, ಪಶುಪತಿ,
ನಿಮ್ಮ ನಾನು ಮರೆದೆನಯ್ಯ ಅಖಂಡೇಶ್ವರಾ. ॥ ೨೩ ॥

೨೭೭

ಸುಡುಸುಡು ಈ ದೇಹದ ರೂಪು:
ನೋಡಿದಡೇನೂ ಹುರುಳಿಲ್ಲವಯ್ಯ.
ಎಲವು ಚರ್ಮ ನರ ಮಾಂಸ ಮಲಮೂತ್ರಯುಕ್ತವಾದ
ಅನಿತ್ಯದೇಹವ ನಚ್ಚಿ ನಿಮ್ಮ ನಿಜವ ಮರೆದು
ಭವಧಾರಿಯಾದೆನಯ್ಯ ಅಖಂಡೇಶ್ವರಾ. ॥ ೨೪ ॥

೨೭೮

ಭವಕ್ಕೆ ಬೀಜವಾದುದು ತನುವೊ ? ಮನವೊ ?
ಎಂದು ವಿವರಿಸಿ ನೋಡಲು ಮನವೆ ಕಾರಣವಾಗಿಪ್ಪುದರಿಂದ,
ಈ ಕೆಟ್ಟಮನದ ಸಂಗದಿಂದೆ ಮರ್ತ್ಯಲೋಕದಲ್ಲಿ ಹುಟ್ಟಿ
ತಾಪತ್ರಯಾಗ್ನಿಯಿಂದೆ ಕಂದಿ ಕುಂದಿ ನೊಂದು ಬೆಂದೆನಯ್ಯ.
ಈ ಮನದ ಸಂಗದಿಂದೆ ಭವಭವಂಗಳಲ್ಲಿ ತೊಳಲಿ ಬಳಲಿದೆನಯ್ಯ.
ಈ ಮನದ ಸಂಗದಿಂದೆ ಅನಂತ ಮರವೆಯ
ಜೋಹಂಗಳಲ್ಲಿ ಸೆರೆಸಿಕ್ಕಿದೆನಯ್ಯ.
ಈ ಮನದ ಸಂಗವ ಬಿಡಿಸಿ ನಿಮ್ಮ ನೆನಹಿನ ಸಂಗದಲ್ಲಿರಿಸಿ
ಸಲಹಯ್ಯ ಎನ್ನ ಅಖಂಡೇಶ್ವರಾ. ॥ ೨೫ ॥

೨೭೯

ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ,
ಇಂದ್ರಿಯಂಗಳೆಂಬ ಶಾಖಶಾಖೆಗೆ ಹಾರಿ,
ವಿಷಯಂಗಳೆಂಬ ಹಣ್ಣು ಫಲಂಗಳ ಗ್ರಹಿಸಿ,

ಭವದತ್ತ ಮುಖವಾಗಿ ಹೋಗುತ್ತಿದೆ ನೋಡಾ !
ಈ ಮನವೆಂಬ ಮರ್ಕಟನ, ನಿಮ್ಮ ನೆನಹೆಂಬ ಪಾಶದಲ್ಲಿ ಕಟ್ಟಿ,
ಎನ್ನನುಳುಹಿಕೊಳ್ಳಯ್ಯ ಅಖಂಡೇಶ್ವರಾ. ॥ ೨೬ ॥

**೨೭೦**

ತನುವಿನ ವಿಕಾರದ ಕತ್ತಲೆಯಲ್ಲಿ ಸಿಲ್ಕಿ,
ಕಂಗೆಟ್ಟು ಕಳವಳಿಸಿ ತೊಳಲಿ ಬಳಲಿದೆನಯ್ಯ.
ಮನದ ವಿಕಾರದ ಮರವೆಯಲ್ಲಿ ಸಿಲ್ಕಿ,
ಮಣ್ಣುಮಸಿಯಾಗಿ ಬಣ್ಣಗೆಟ್ಟೆನಯ್ಯ.
ಈ ತನುಮನದ ವಿಕಾರವ ಮಾಣಿಸಿ,
ನಿಮ್ಮ ಭಕ್ತಿಯ ವಿಕಾರದಲ್ಲಿರಿಸಿ ಸಲಹಯ್ಯ ಎನ್ನ ಅಖಂಡೇಶ್ವರಾ. ॥ ೨೭ ॥

**೨೭೧**

ಮತಿಗೆಟ್ಟೆನಯ್ಯ ಮನದಾಸೆಯ ಕಟ್ಟಿ,
ಧೃತಿಗೆಟ್ಟೆನಯ್ಯ ತನುವಿನಾಸೆಯ ನೆಚ್ಚಿ,
ಈ ತನುಮನದಾಸೆಯ ಕೆಡಿಸಿ,
ನಿಮ್ಮ ಭಕ್ತಿಯ ಲೇಸು ತೋರಿಸಿ
ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೨೮ ॥

**೨೭೨**

ಹಸಿವು ತೃಷೆಯಂಡಲೆಯಾವರಿಸಿ,
ಕುಸಿವುತಿರ್ಪುದು ನೋಡಾ ತನುವು.
ವಿಷಯವಿಕಾರದಂಡಲೆಯಾವರಿಸಿ,
ದೆಸೆದೆಸೆಗೆ ನುಸುಳುತಿಪ್ಪುದು ನೋಡಾ ಮನವು.
ಈ ತನುಮನದಲ್ಲಿ ಮುಸುಕಿದ ಮಾಯಾವಾಸನೆಯ ಕಳೆದು
ನಿಮ್ಮ ಭಕ್ತಿಯ ಲೇಸು ತೋರಿಸಿ ಬದುಕಿಸಯ್ಯ ಎನ್ನ
ಅಖಂಡೇಶ್ವರಾ. ॥ ೨೯ ॥

**೨೭೩**

ಸಾಕುಮಾಡದು ಭವಬಂಧನಂಗಳ,
ನೂಕಿಬಿಡದು ಸಕಲಸಂಸಾರವ,
ಬೇಕೆಂದೆಳಸುವುದು ವಿಷಯಭೋಗಕ್ಕೆ,
ಶಿವಶಿವಾ, ಈ ಕಾಕುಮನಕ್ಕೆ ಏನುಮಾಡಲಿ ?
ಹರಹರಾ, ಈ ಕಳ್ಳಮನಕ್ಕೆ ಎಂತುಮಾಡಲಿ ?
ಅಖಂಡೇಶ್ವರಾ, ನಿಮ್ಮ ಕೃಪಾವಲೋಕನದಿಂದ ನೋಡಿ
ಪಾಲಿಪುದಯ್ಯ ಎನ್ನ, ನಿಮ್ಮ ಧರ್ಮ ನಿಮ್ಮ ಧರ್ಮ. ॥ ೩೦ ॥

೨೭೪

ಸತ್ಯವ ನುಡಿಯದು, ಸದಾಚಾರದಲ್ಲಿ ನಡೆಯದು,
ಭಕ್ತಿಯ ಹಿಡಿಯದು, ಮುಕ್ತಿಯ ಪಡೆಯದು,
ಸುಡು ಸುಡು ಈ ಮನದ ಯುಕ್ತಿಯ.
ಅಖಂಡೇಶ್ವರಾ, ನಿಮ್ಮ ಭಕ್ತಿಯ ಭಾವದಲ್ಲಿರಿಸಿ
ಸಲಹಯ್ಯ ಎನ್ನ, ನಿಮ್ಮ ಧರ್ಮ ನಿಮ್ಮ ಧರ್ಮ. ॥ ೩೧ ॥

೨೭೫

ಹುಲಿಯಬಾಯಲ್ಲಿ ಸಿಲ್ಕಿದ ಹುಲ್ಲೆಯಂತೆ,
ಸರ್ಪನಬಾಯಲ್ಲಿ ಸಿಲ್ಕಿದ ಕಪ್ಪೆಯಂತೆ,
ಸಕಲ ಲೋಕಾದಿಲೋಕಂಗಳು ಮಾಯಾಯಬಲೆಯಲ್ಲಿ ಸಿಲ್ಕಿ,
ಸೆರೆಹೋಗುವುದ ಕಂಡು ನಾನಂಜಿ
ನಿಮ್ಮ ಮೊರೆಹೊಕ್ಕೆ, ಕಾಯಯ್ಯ ಕಾರುಣ್ಯನಿಧಿಯೇ
ಅಖಂಡೇಶ್ವರಾ. ॥ ೩೨ ॥

೨೭೬

ಕಾಲನೆಂಬ ಜಾಲಗಾರನು ಕರ್ಮವೆಂಬ ಬಲೆಯ ಬೀಸಿ,
ಸಂಸಾರಶರಧಿಯಲ್ಲಿರ್ಪ ಸಕಲಪ್ರಾಣಿಗಳೆಂಬ
ಮೀನುಗಳ ಹಿಡಿದು ಕೊಲ್ಲುತಿದ್ದಾನೆ.
ಕಾಮನೆಂಬ ಬೇಂಟೆಗಾರನು ಕಂಗಳ ತೋಹಿನಲ್ಲಿ ನಿಂದು,
ಕಳವಳದ ಬಾಣವನೆಸೆದು ಭವವೆಂಬ ಬಲೆಯಲ್ಲಿ
ಸಕಲಪ್ರಾಣಿಗಳ ಕೆಡಹಿಕೊಂಡು ಕೊಲ್ಲುತಿದ್ದಾನೆ.
ಮಾಯೆಯೆಂಬ ರಕ್ಕಸಿ ಸಕಲ ಪ್ರಾಣಿಗಳ ಸಾರವ ಹೀರಿ
ಹಿಪ್ಪೆಯ ಮಾಡಿ ಉಃಫೆಂದು ಊದುತಿದ್ದಾಳೆ.
ಇಂತೀ ತ್ರಿವಿಧಮುಖದಲ್ಲಿ ಕಾಡುವ
ನಿಮ್ಮ ಮಾಯೆಯ ಗೆಲುವಡೆ ಆರಳವಲ್ಲವಯ್ಯಾ
ಅಖಂಡೇಶ್ವರಾ, ನೀವು ಕರುಣಿಸದನ್ನಕ್ಕ. ॥ ೩೩ ॥

೨೭೭

ಸಿರಿವಂತರೆಂದು ಹೇಳುವವರ ದರಿದ್ರಕ್ಕೆ ಒಳಗುಮಾಡಿ
ಕಾಡಿತ್ತು ನೋಡಾ ನಿಮ್ಮ ಮಾಯೆ.
ನಿಃಕಾಮಿಗಳೆಂದು ಹೇಳುವವರ ಕಾಮದಕತ್ತಲೆಯಲ್ಲಿ ಕೆಡಹಿ
ಕಾಡಿತ್ತು ನೋಡಾ ನಿಮ್ಮ ಮಾಯು.
ಪುರುಷನ ಕಣ್ಣ ಮುಂದೆ ಸ್ತ್ರೀಯಾಗಿ ಸುಳಿದಾಡಿ
ಕಾಡಿತ್ತು ನೋಡಾ ನಿಮ್ಮ ಮಾಯೆ.

ಸ್ತ್ರೀಯ ಕಣ್ಣಮುಂದೆ ಪುರುಷನಾಗಿ ಸುಳಿದು
ಕಾಡಿತ್ತು ನೋಡಾ ನಿಮ್ಮ ಮಾಯೆ.
ಸತ್ಯವಂತರೆಂದು ಹೇಳುವವರ ಅಸತ್ಯಕ್ಕೆ ಒಳಗು ಮಾಡಿ
ಕಾಡಿತ್ತು ನೋಡಾ ನಿಮ್ಮ ಮಾಯೆ.
ಹಿರಿಯರೆಂದು ಹೇಳುವವರ ಕಿರಿಯತನಕ್ಕೆ ಒಳಗು ಮಾಡಿ
ಕಾಡಿತ್ತು ನೋಡಾ ನಿಮ್ಮ ಮಾಯೆ.
ನಿತ್ಯವೆಂದು ಹೇಳುವವರ ಅನಿತ್ಯಕ್ಕೆ ಒಳಗು ಮಾಡಿ
ಕಾಡಿತ್ತು ನೋಡಾ ನಿಮ್ಮ ಮಾಯೆ.
ಇಂತೀ ಜಗವೆಲ್ಲವ ನುಂಗಿ ಜಾಳಿಸುತಿರ್ಪ
ನಿಮ್ಮ ಮಾಯದೇಳಿಗೆಯ ಗೆಲುವಡೆ ಆರಳವಲ್ಲ
ಅಖಂಡೇಶ್ವರಾ, ನೀವು ಕರುಣೆಹುಟ್ಟಿ ಒಲಿಯದನ್ನಕ್ಕ. ॥ ೩೪ ॥

**೨೭೮**

ಎನ್ನ ಕಾಯದ ಕಠಿಣವ ಕಳೆಯಯ್ಯ,
ಎನ್ನ ಜೀವನುಪಾಧಿಯನಳಿಯಯ್ಯ,
ಎನ್ನ ಪ್ರಾಣಪ್ರಪಂಚುವ ತೊಲಗಿಸಯ್ಯ,
ಎನ್ನ ಭಾವದಭ್ರಮೆಯ ಕೆಡಿಸಯ್ಯ,
ಎನ್ನ ಮನದ ವ್ಯಾಕುಲವ ಮಾಣಿಸಯ್ಯ,
ಎನ್ನ ಕರಣೇಂದ್ರಿಯಗಳ ಕಷ್ಟಗುಣವ ನಾಶಮಾಡಯ್ಯ,
ಎನ್ನೊಳಗೆ ನಿಮ್ಮ ಕರುಣಾಮೃತವ ತುಂಬಯ್ಯ ಗುರುವೇ
ಅಖಂಡೇಶ್ವರಾ. ॥ ೩೫ ॥

## ಗುರುಕರುಣಸ್ಥಲ

**೨೭೯**

ಗುರುವೆ ಪರತತ್ವವು ತಾನೆ ನೋಡಾ.
ಗುರುವೆ ಪರವಸ್ತುವು ತಾನೆ ನೋಡಾ.
ಗುರುವೆ ಪರಬ್ರಹ್ಮವು ತಾನೆ ನೋಡಾ.
ಗುರುವೆ ಪರಶಿವನು ತಾನೆ ನೋಡಾ.
ಗುರುವಿನಿಂದೆ ಪರವಿಲ್ಲವೆಂದು ಸಕಲ ಶ್ರುತಿಗಳು
ಹೊಗಳುತಿಪ್ಪುವು ನೋಡಾ.
ಇಂತಪ್ಪ ಶ್ರೀಗುರುವಿಂಗೆ ನಮೋ ನಮೋ ಎಂಬೆನಯ್ಯ
ಅಖಂಡೇಶ್ವರಾ. ॥ ೩೬ ॥

೨೮೦

ಗುರುವೆನಲು ಕೊರೆವುದು ಜನನ ಮರಣದ ಬೇರ ನೋಡಾ.
ಗುರುವೆನಲು ಸುಡುವುದು ಭವಾರಣ್ಯವ ನೋಡಾ.
ಗುರುವೆನಲು ಕಡಿವುದು ಭವಕುಜಲತೆಗಳ ನೋಡಾ.
ಇಂತಪ್ಪ ಸದ್ಗುರುದೇವಂಗೆ ನಮೋ ನಮೋ ಎಂಬೆನಯ್ಯ
ಅಖಂಡೇಶ್ವರಾ. || ೩೭ ||

೨೮೧

ಗುರುವಚನದಿಂದಲ್ಲದೆ ಭವಪಾಶ ಹರಿಯದು.
ಗುರುವಚನದಿಂದಲ್ಲದೆ ಜಾತಿಭೇದ ಮಾಣದು.
ಗುರುವಚನದಿಂದಲ್ಲದೆ ಸೂತಕಪಾತಕಂಗಳು ಕೆಡದಿಹವು.
ಗುರುವಚನದಿಂದಲ್ಲದೆ ಅಂಗ ಮನ ಪ್ರಾಣಂಗಳು ಶುದ್ಧವಾಗಲರಿಯವು.
ಗುರುವಚನದಿಂದಲ್ಲದೆ ಲಿಂಗಕ್ಕೆ ಕಳೆವೆರಸದು.
ಗುರುವಚನದಿಂದಲ್ಲದೆ ಸದ್ಭಕ್ತಿನೆಲೆಗೊಳ್ಳದು.
ಗುರುವಚನದಿಂದಲ್ಲದೆ ನಿಜಮುಕ್ತಿ ಕಾಣಬಾರದು.
ಇದು ಕಾರಣ ಗುರುಮುಟ್ಟಿ ಗುರುವಾದ
ಪರಮಶರಣರ ಶ್ರೀ ಚರಣಕ್ಕೆ ಶರಣು ಶರಣೆಂಬೆನಯ್ಯ
ಅಖಂಡೇಶ್ವರಾ. || ೩೮ ||

೨೮೨

ತಂದೆ–ತಾಯಿ, ಬಂಧು–ಬಳಗ, ಹೆಂಡಿರು–ಮಕ್ಕಳು,
ತೊತ್ತು–ಬಂಟರುಗಳಿಗೆ ಒಬ್ಬನೆ ಗುರುವು.
ಒಂದೇ ದೀಕ್ಷೆಯಾದಡೆ ಅತ್ಯಂತ ಉತ್ತಮ ನೋಡಾ
''ಪತಿಪತ್ನೀಭ್ರಾತೃಪುತ್ರದಾಸ್ಯೋ ಗೃಹಚರಾಶ್ಚ ಯೇ ।
ಏಕ ಏವ ಗುರುಸ್ತೇಷಾಂ ದೀಕ್ಷೈಕಾ ತು ವಿಶೇಷ್ಯತೇ ॥''
ಇದಲ್ಲದೆ ಬಹುಮುಖದ ಗುರು, ಬಹುಮುಖದ ದೀಕ್ಷೆಯಾದಡೆ,
ಅಘೋರನರಕ ತಪ್ಪದಯ್ಯ ಅಖಂಡೇಶ್ವರಾ. || ೩೯ ||

೨೮೩

ಎನ್ನ ಭವಪಾಶಂಗಳ ಹರಿದು ಶಿವಸಂಸ್ಕಾರಿಯ ಮಾಡಿದ
ಶ್ರೀಗುರುವಿಂಗೆ ನಮೋ ನಮೋ ಎಂಬೆನಯ್ಯ,
ಎನ್ನ ಪೂರ್ವಜನ್ಮವಳಿದು ಪುನರ್ಜಾತನ ಮಾಡಿದ
ಶ್ರೀಗುರುವಿಂಗೆ ನಮೋ ನಮೋ ಎಂಬೆನಯ್ಯ.
ಎನ್ನ ಭೂತಕಾಯವ ಕಳೆದು ಮಂತ್ರಶರೀರವ ಮಾಡಿದ
ಶ್ರೀ ಗುರುವಿಂಗೆ ನಮೋ ನಮೋ ಎಂಬೆನಯ್ಯ.

ಎನ್ನ ಹಣೆಯ ದುರ್ಲಿಖಿತವ ತೊಡೆದು
ಶಿವಮಂತ್ರವ ಸಂಬಂಧಿಸಿದ
ಶ್ರೀ ಗುರುವಿಂಗೆ ನಮೋ ನಮೋ ಎಂಬೆನಯ್ಯ.
ಎನ್ನ ವಾಯುಪ್ರಾಣಿಯೆಂದೆನಿಸದೆ ಲಿಂಗಪ್ರಾಣಿಯೆಂದೆನಿಸಿದ
ಶ್ರೀ ಗುರುವಿಂಗೆ ನಮೋ ನಮೋ ಎಂಬೆನಯ್ಯ
ಅಖಂಡೇಶ್ವರಾ. ॥ ೪೦ ॥

**೨೮೪**

ಎನ್ನ ಜೀವಭಾವಿಯೆಂದೆನಿಸದೆ
ಶಿವಭಾವಿಯೆಂದೆನಿಸಿದ ಗುರುವೆ ನಮೋ ನಮೋ.
ಎನ್ನ ಕಾಯಕಲ್ಪಿತವನಳಿದು ಎನ್ನೊಳಗೆ
ಮೂಲಮಂತ್ರವ ತೋರಿದ ಗುರುವೇ ನಮೋ ನಮೋ.
ಎನ್ನ ತನುತ್ರಯಂಗಳಲ್ಲಿ ಮುಸುಕಿದ ಮಲತ್ರಯಂಗಳ ಕಳೆದು
ಲಿಂಗತ್ರಯಂಗಳ ನೆಲೆಗೊಳಿಸಿದ ಗುರುವೇ ನಮೋ ನಮೋ.
ಎನ್ನ ಭವಿಜನ್ಮವಳಿದು ಭಕ್ತನಮಾಡಿ
ಮುಕ್ತಿಪಥವ ತೋರಿದ ಗುರುವೆ ನಮೋ ನಮೋ.
ಅಖಂಡೇಶ್ವರನೆಂಬ ಅನಾದಿ ಮಹಾಗುರುವೆ ನಮೋ ನಮೋ. ॥ ೪೧ ॥

**೨೮೫**

ಎನ್ನ ಭಾವವ ಸಿಂಹಾಸನವ ಮಾಡಿದನಯ್ಯ
ಶ್ರೀಗುರು ಪರಮಶಿವಲಿಂಗಕ್ಕೆ.
ಎನ್ನ ಮನವ ಸಿಂಹಾಸನವ ಮಾಡಿದನಯ್ಯ
ಶ್ರೀಗುರು ಪರಮಶಿವಲಿಂಗಕ್ಕೆ.
ಎನ್ನ ಕಂಗಳ ಸಿಂಹಾಸನವ ಮಾಡಿದನಯ್ಯ
ಶ್ರೀಗುರು ಪರಮಶಿವಲಿಂಗಕ್ಕೆ.
ಎನ್ನ ಕರಸ್ಥಲವ ಸಿಂಹಾಸನವ ಮಾಡಿದನಯ್ಯ
ಶ್ರೀಗುರು ಪರಮಶಿವಲಿಂಗಕ್ಕೆ.
ಎನ್ನ ಸರ್ವಾಂಗವ ಸಿಂಹಾಸನವ ಮಾಡಿದ,
ಎನ್ನ ಪರಿಭವವ ತಪ್ಪಿಸಿದ ಶ್ರೀಗುರುವಿಂಗೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೪೨ ॥

**೨೮೬**

ಸಕಲ ವಿಸ್ತಾರದೊಳಗಲ್ಲ ಲಿಂಗವ ತೋರಿದ.
ಆ ಲಿಂಗದೊಳಗ ಎನ್ನ ತೋರಿದ.
ಎನ್ನೊಳಗ ತನ್ನ ತೋರಿದ

ಮಹಾಗುರುವಿಂಗೆ ನಮೋ ನಮೋ ಎಂಬೆನಯ್ಯ
ಅಖಂಡೇಶ್ವರಾ. || ೪೬ ||

೨೮೭

ಕಲ್ಪತರು ಕಾಡಮರನಾಗಬಲ್ಲುದೇನಯ್ಯಾ ?
ಕಾಮಧೇನು ಕಾಡಪಶುವಾಗಬಲ್ಲುದೇನಯ್ಯಾ ?
ಸಿಂಹದಮರಿ ಸೀಳ್‌ನಾಯಿಯಾಗಬಲ್ಲುದೇನಯ್ಯಾ ?
ಪರಮ ಶ್ರೀಗುರುವಿನ ಕರಕಮಲದಲ್ಲಿ ಉದಯವಾದ
ಮಹಾಶರಣರು ಮರಳಿ ನರರಾಗಬಲ್ಲರೆ ಹೇಳಾ ಅಖಂಡೇಶ್ವರಾ ? || ೪೭ ||

೨೮೮

ಪರುಷಲೋಹದಂತೆ ಮಾಡಿತ್ತೆನ್ನ
ಶ್ರೀಗುರುವಿನ ಉಪದೇಶ.
ಉರಿಯುಂಡ ತೃಣದಂತೆ ಮಾಡಿತ್ತೆನ್ನ
ಶ್ರೀಗುರುವಿನ ಉಪದೇಶ.
ಕರ್ಪುರದ ಜ್ಯೋತಿಯಂತೆ ಮಾಡಿತ್ತೆನ್ನ
ಶ್ರೀಗುರುವಿನ ಉಪದೇಶ.
ಕೀಟ ಕುಂಡಲಿಯಂತೆ ಮಾಡಿತ್ತೆನ್ನ
ಶ್ರೀಗುರುವಿನ ಉಪದೇಶ.
ಪಾರಿಕಲ್ಲ ಪುತ್ಥಳಿ ಅಪ್ಪುವನೊಡಗೂಡಿದಂತೆ ಮಾಡಿತ್ತೆನ್ನ
ಅಖಂಡೇಶ್ವರಾ, ನಿಮ್ಮ ವಚನೋಪದೇಶ. || ೪೮ ||

೨೮೯

ಬೀಜದಿಂದ ಹುಟ್ಟಿದ ವೃಕ್ಷವು ಬೀಜವ ಹೋಲುವಂತೆ,
ತಾಯಿಯಿಂದ ಹುಟ್ಟಿದ ಮಕ್ಕಳು ತಾಯಿಯ ಹೋಲುವಂತೆ,
ಧಾನ್ಯಗಳಿಂದ ಬೆಳೆದ ಬೆಳಸು ಧಾನ್ಯಂಗಳ ಹೋಲುವಂತೆ,
ಗುರುವಿನಿಂದ ಹುಟ್ಟಿದ ಶಿಷ್ಯನು ಗುರುರೂಪವಲ್ಲದ
ಬೇರೊಂದು ರೂಪವಲ್ಲವಯ್ಯ ಅಖಂಡೇಶ್ವರಾ. || ೪೯ ||

೨೯೦

ಸಚ್ಚಿದಾನಂದ ಸದ್‌ಗುರು ತೋರಿದರ
ಕಂಡೆನಯ್ಯಾ ಸತ್ಯಸದಾಚಾರವ.
ಸಚ್ಚಿದಾನಂದ ಸದ್‌ಗುರು ತೋರಿದರ
ಕಂಡೆನಯ್ಯಾ ಭಕ್ತಿ ಜ್ಞಾನ ವೈರಾಗ್ಯವ.
ಸಚ್ಚಿದಾನಂದ ಸದ್‌ಗುರು ತೋರಿದರ
ಕಂಡೆನಯ್ಯ ನಿತ್ಯಲಿಂಗಾಂಗಸಂಗಸಮರಸವ.

ಸಚ್ಚಿದಾನಂದ ಸದ್‌ಗುರು ತೋರಿಸಿದರೆ
ಕಂಡೆನಯ್ಯಾ ಅಖಂಡೇಶ್ವರಾ ನಿಮ್ಮ ಶ್ರೀಚರಣಕಮಲವ. ॥ ४८ ॥

೨೯೧

ಗುರುವಿಡಿದು ಕುರುಹಕಾಣಬೇಕು.
ಕುರುಹುವಿಡಿದು ಅರುಹಕಾಣಬೇಕು.
ಅರುಹುವಿಡಿದು ಆಚಾರವಕಾಣಬೇಕು.
ಆಚಾರವಿಡಿದು ನಿಜವಕಾಣಬೇಕು.
ನಿಜವಿಡಿದು ನಮ್ಮ ಅಖಂಡೇಶ್ವರಲಿಂಗವ ಕೂಡಬೇಕು. ॥ ४७ ॥

೨೯೨

ಶ್ರೀಗುರುಸ್ವಾಮಿ ಮಾಡಿದಡಾಯಿತ್ತು
ಜಗದುತ್ಪತ್ಯ ಸದಾಚಾರಂಗಳೆಲ್ಲ.
ಶ್ರೀಗುರುಸ್ವಾಮಿ ಮಾಡಿದಡಾಯಿತ್ತು
ತತ್ವಾತತ್ವ ಸಕಲಸ್ಥಲಕುಲಂಗಳೆಲ್ಲ.
ಶ್ರೀಗುರುಸ್ವಾಮಿ ಮಾಡಿದಡಾಯಿತ್ತು
ನಿಗಮಾಗಮ ಸಕಲಶಾಸ್ತ್ರಜಾಲಂಗಳೆಲ್ಲ.
ಶ್ರೀಗುರುಸ್ವಾಮಿ ಮಾಡಿದಡಾಯಿತ್ತು ಅಖಂಡೇಶ್ವರಾ,
ನಾನು ನೀನೆಂಬ ಉಭಯದ ತೊಡರುಗಳೆಲ್ಲ. ॥ ४९ ॥

೨೯೩

ಎನ್ನ ತನುವ ತನ್ನ ತನುವ ಮಾಡಿದನಯ್ಯ
ಶ್ರೀಗುರುದೇವನು.
ಎನ್ನ ಮನವ ತನ್ನ ಮನವ ಮಾಡಿದನಯ್ಯ
ಶ್ರೀಗುರುದೇವನು.
ಎನ್ನ ಪ್ರಾಣವ ತನ್ನ ಪ್ರಾಣವ ಮಾಡಿದನಯ್ಯ
ಶ್ರೀಗುರುದೇವನು.
ಎನ್ನ ಜೀವಕಳೆಯ ತನ್ನ ಜೀವಕಳೆಯ ಮಾಡಿದ ಶ್ರೀಗುರುದೇವಂಗ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೫೦ ॥

೨೯೪

ಎನ್ನ ತನುವ ಶೋಧಿಸಿ
ಚಿನುಮಯಲಿಂಗವ ಮಾಡಿ ತೋರಿದನಯ್ಯ ಸದ್ಗುರು.
ಎನ್ನ ಮನವ ಶೋಧಿಸಿ
ಮನಘನಲಿಂಗವ ಮಾಡಿ ತೋರಿದನಯ್ಯ ಸದ್ಗುರು.
ಎನ್ನ ಭಾವವ ಶೋಧಿಸಿ

ಭಾವಭರಿತಲಿಂಗವ ಮಾಡಿ ತೋರಿದನಯ್ಯ ಸದ್ಗುರು.
ಎನ್ನ ಕರಣಂಗಳ ಕಳೆದು ಲಿಂಗಕರಣಂಗಳ ಮಾಡಿದ
ಸದ್‌ಗುರುದೇವಂಗೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥೫೧॥

೨೯೫

ಎನ್ನ ಕರಸ್ಥಲದಲ್ಲಿ ಲಿಂಗಮೂರ್ತಿಯಾಗಿ
ನೆಲೆಗೊಂಡನಯ್ಯ ಶ್ರೀಗುರುದೇವನು.
ಎನ್ನ ಜಿಹ್ವಾಸ್ಥಲದಲ್ಲಿ ಮಂತ್ರಮೂರ್ತಿಯಾಗಿ
ನೆಲೆಗೊಂಡನಯ್ಯ ಶ್ರೀಗುರುದೇವನು.
ಎನ್ನ ಮನಸ್ಥಲದಲ್ಲಿ ಸ್ವಾನುಭಾವಜ್ಞಾನಮೂರ್ತಿಯಾಗಿ
ನೆಲೆಗೊಂಡನಯ್ಯ ಶ್ರೀಗುರುದೇವನು ಅಖಂಡೇಶ್ವರಾ. ॥ ೫೨ ॥

೨೯೬

ಗುರುಚರಣವ ಪೂಜಿಸಿ
ಎನ್ನ ಹಸ್ತಂಗಳು ಪರುಷವಾದವು.
ಗುರುಚರಣವ ನೋಡಿ
ಎನ್ನ ಕಂಗಳು ಪರುಷವಾದವು.
ಗುರುಚರಣವ ಹಾಡಿ ಹರಸಿ
ಎನ್ನ ಜಿಹ್ವೆ ಪರುಷವಾಯಿತ್ತು.
ಗುರುಚರಣವ ನೆನೆದು
ಎನ್ನ ಮನ ಪರುಷವಾಯಿತ್ತು.
ಗುರುಚರಣವ ಧ್ಯಾನಿಸಿ
ಎನ್ನ ಭಾವ ಪರುಷವಾಯಿತ್ತು ನೋಡಾ ಅಖಂಡೇಶ್ವರಾ. ॥ ೫೩ ॥

೨೯೭

ಆದಿಮಯ ಗುರು, ಅನಾದಿಮಯ ಗುರು,
ವೇದಮಯ ಗುರು, ನಾದಮಯ ಗುರು,
ಅಭೇದ್ಯಮಯ ಗುರು, ಸಾಧುಸಜ್ಜನ ಸದ್‌ಗುರುವಿಂಗೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೫೪ ॥

೨೯೮

ಸಚ್ಚಿದಾನಂದ ನಿತ್ಯಪರಿಪೂರ್ಣ ಗುರುವೇ ನಮೋ ನಮೋ.
ಸತ್ಯಸದಮಲ ಸಂಜ್ಞೇಯ ಸೂಚಕ ಗುರುವೇ ನಮೋ ನಮೋ.
ಭಕ್ತಿಬೆಳಗಿನ ಮುಕ್ತಿಸ್ವರೂಪ ಗುರುವೇ ನಮೋ ನಮೋ.
ಅಖಂಡೇಶ್ವರನೆಂಬ ಬಚ್ಚಬರಿಯ
ಬಯಲಬ್ರಹ್ಮವಾದ ಗುರುವೆ ನಮೋ ನಮೋ. ॥ ೫೫ ॥

೨೯೯

ಎನ್ನ ಕರಕಮಲಮಧ್ಯದಲ್ಲಿ
ಪರಮನಿರಂಜನದ ಕುರುಹ ತೋರಿದ.
ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ.
ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ.
ಆ ಬೆಳಗಿನ ನಿಲವಿನೊಳಗೆ ಎನ್ನ ತೋರಿದ.
ಎನ್ನೊಳಗೆ ತನ್ನ ತೋರಿದ.
ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾಗುರುವಿಂಗೆ
ನಮೋ ನಮೋ ಎನುತಿರ್ದೆನಯ್ಯ ಅಖಂಡೇಶ್ವರಾ. || ೫೬ ||

## ಲಿಂಗಧಾರಣಸ್ಥಲ

೩೦೦

ಅಶ್ವವ ಕೊಂದವನಾದಡಾಗಲಿ,
ಪಶುವ ಕೊಂದವನಾದಡಾಗಲಿ,
ಬ್ರಾಹ್ಮಣನ ಕೊಂದವನಾದಡಾಗಲಿ,
ಶಿಶುವ ಕೊಂದವನಾದಡಾಗಲಿ,
ಸ್ತ್ರೀಯ ಕೊಂದವನಾದಡಾಗಲಿ,
ಅನಂತ ಪಾತಕಂಗಳ ಮಾಡಿದವನಾದಡಾಗಲಿ,
ಶಿವಲಿಂಗದ ದರ್ಶನವಾದಾಕ್ಷಣದಲ್ಲಿಯೇ
ಆ ಪಾತಕಂಗಳು ಪಲ್ಲಟವಾಗಿಹವು ನೋಡಾ.
ಅದೆಂತೆಂದೊಡೆ :
''ಅಭಕ್ಷ್ಯಭಕ್ಷಕೋ ವಾಪಿ ಬ್ರಹ್ಮಹಾ ಯದಿ ಮಾತೃಹಾ ।
ಪಿತೃಹಾ ಬಾಲಘಾತೀ ಚ ಗೋಘ್ನಃ ಸ್ತ್ರೀ ಶೂದ್ರಘಾತಕಃ ॥
ವಕ್ತಾಚ ಪರದೋಷಸ್ಯ ಪರಸ್ಯ ಗುಣದೂಷಕಃ ।
ಕೃಪಣೋಽನೃತವಾದೀ ಚ ಮಣಿರತ್ನಾಪಹಾರಕಃ ।
ಸರ್ವಪಾಪಮಯಃ ಪೂತೋ ಮುಚ್ಯತೇ ಲಿಂಗದರ್ಶನಾತ್ ॥''
ಎಂದುದಾಗಿ,
ಪರಮಪದವಿಯನೈದುತಿಹನಯ್ಯ ಅಖಂಡೇಶ್ವರಾ. || ೫೭ ||

೩೦೧

ಜ್ಞಾನದಿಂದಾದಡಾಗಲಿ ಅಜ್ಞಾನದಿಂದಾದಡಾಗಲಿ,
ಭೀತಿಯಿಂದಾದಡಾಗಲಿ ನಿರ್ಭೀತಿಯಿಂದಾದಡಾಗಲಿ,
ಸದ್ಭಾವದಿಂದಾದಡಾಗಲಿ ದುರ್ಭಾವದಿಂದಾದಡಾಗಲಿ,
ಆವ ಪರಿಯಿಂದಾದಡಾಗಲಿ ಪರಮಶಿವಲಿಂಗದರ್ಶನಮಾತ್ರದಿಂದ

ಜಾತಿಸ್ಮರತ್ವ ಮಹದೈಶ್ವರ್ಯ ಪರಮಾಯುಷ್ಯ ಶುದ್ಧವಿದ್ಯೆಂಗಳು
ಸಮ್ಯಕ್‌ಜ್ಞಾನ ಸಕಲಸಂಪತ್ತುಗಳು ದೊರೆಕೊಂಬುವು
ನೋಡಾ ಅಖಂಡೇಶ್ವರಾ. ॥ ೫೮ ॥

೩೦೨

ಆವ ಜಾತಿಯಲ್ಲಿ ಹುಟ್ಟಿದವನಾದಡಾಗಲಿ,
ಶ್ರೀಮಹಾದೇವನ ನೆನೆವಾತನಧಿಕ ನೋಡಾ.
ಆತನಿಂದಧಿಕ ಕಂಗಳು ತುಂಬಿ ನೋಡುವಾತ.
ಆತನಿಂದಧಿಕ ಕೈಮುಟ್ಟಿ ಪೂಜಿಸುವಾತ.
ಅದೆಂತೆಂದಡೆ, ಶಿವಧರ್ಮೇ–
''ಲಿಂಗಸ್ಯ ದರ್ಶನಂ ಪುಣ್ಯಂ ದರ್ಶನಾತ್ ಸ್ಪರ್ಶನಂ ಶುಭಂ ।
ಶಿವಲಿಂಗಂ ಮಹಾಪುಣ್ಯಂ ಸರ್ವದೇವ ನಮಸ್ಕೃತಂ ।
ಯಃ ಸ್ಪೃಶೇದಪಿ ಪಾಣಿಭ್ಯಾಂ ನ ಸ ಪಾಪೈಃ ಪರಿಲಿಪ್ಯತೇ ॥''
ಎಂದುದಾಗಿ,
ಅಂತಪ್ಪ ಶಿವಲಿಂಗವನು ಹೆರೆಹಿಂಗದೆ ಅಂಗದ ಮೇಲೆ
ನಿರಂತರ ಧರಿಸಿಕೊಂಡಿಪ್ಪಾತನೆ ಎಲ್ಲರಿಂದಧಿಕ ನೋಡಾ
ಅಖಂಡೇಶ್ವರಾ. ॥ ೫೯ ॥

೩೦೩

ಮುನ್ನ ಶ್ರೀಗುರುಸ್ವಾಮಿ ಕರುಣಿಸಿ ಕೊಟ್ಟ ಇಷ್ಟಲಿಂಗದಲ್ಲಿ
ನೆಟ್ಟನೆ ಅಂಗ ಮನ ಪ್ರಾಣಂಗಳು ಸಂಗಿಸಬೇಕು.
ಬಳಿಕ ನಡೆನುಡಿಯಲ್ಲಿ
ಆ ಲಿಂಗ ಸನ್ನಿಹಿತವಾಗಿರಬೇಕಲ್ಲದೆ ಹಿಂಗಿರಲಾಗದು.
ಕೊಡುಕೊಂಬ ವ್ಯವಹಾರದಲ್ಲಿ ಆ ಲಿಂಗ
ಸನ್ನಿಹಿತವಾಗಿರಬೇಕಲ್ಲದೆ ಹಿಂಗಿರಲಾಗದು.
ಜಾಗ್ರಸ್ವಪ್ನಸುಷುಪ್ತಿಗಳಲ್ಲಿ
ಆ ಲಿಂಗ ಸನ್ನಿಹಿತವಾಗಿರಬೇಕಲ್ಲದೆ ಹಿಂಗಿರಲಾಗದು.
ಅದೆಂತೆಂದೊಡೆ :
''ಗಚ್ಛನ್ ತಿಷ್ಠನ್ ಸ್ವಪನ್ ಜಾಗ್ರನ್ ಉನ್ಮಿಷನ್ ನಿಮಿಷನ್ನಪಿ ।
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ ॥''
ಎಂದುದಾಗಿ,
ಸರ್ವಾವಸ್ಥೆಯಲ್ಲಿ ಲಿಂಗಸನ್ನಿಹಿತವಾಗಿರಬೇಕಲ್ಲದೆ,
ನಿಮಿಷಾರ್ಧ ಲಿಂಗವನಗಲಿದರೆ
ಕುಂಭೀಪಾತಕ ನಾಯಕನರಕ ತಪ್ಪದು ನೋಡಾ ಅಖಂಡೇಶ್ವರಾ. ॥ ೬೦ ॥

### ೩೦೪

ಸಕಲೇಂದ್ರಿಯಂಗಳ ಪ್ರಪಂಚು ನಾಸ್ತಿಯಾಗಿರಬಲ್ಲಡೆ
ಕಕ್ಷದಲ್ಲಿ ಧರಿಸುವುದಯ್ಯಾ ಶಿವಲಿಂಗವ.
ಕಾಂಚನಕ್ಕೆ ಕೈಯಾನದಿರ್ದಡೆ ಕರಸ್ಥಲದಲ್ಲಿ ಧರಿಸುವುದಯ್ಯ ಶಿವಲಿಂಗವ.
ಪರಸ್ತ್ರೀಯರ ಅಪ್ಪುಗೆ ಇಲ್ಲದಿರ್ದಡೆ
ಉರಸ್ಥಲದಲ್ಲಿ ಧರಿಸುವುದಯ್ಯ ಶಿವಲಿಂಗವ.
ಎಂದೆಂದೂ ಹುಸಿಯನಾಡದಿರ್ದಡೆ
ಜಿಹ್ವಾಪೀಠದಲ್ಲಿ ಧರಿಸುವುದಯ್ಯ ಶಿವಲಿಂಗವ.
ಅನ್ನಪಾನಂಗಳಿಗೆ ಬಾಯ್ದೆರೆಯದಿರ್ದಡೆ
ಅಮಳೋಕ್ಯದಲ್ಲಿ ಧರಿಸುವುದಯ್ಯ ಶಿವಲಿಂಗವ.
ಅನ್ಯರಾಜರಿಗೆ ತಲೆವಾಗದಿರ್ದಡೆ
ಉತ್ತಮಾಂಗದಲ್ಲಿ ಧರಿಸುವುದಯ್ಯ ಶಿವಲಿಂಗವ.
ಇಂತೀ ಷಡ್‌ವಿಧಾಚಾರ ನಲೆಗೊಂಡು
ಷಡ್‌ವಿಧ ಸ್ಥಾನದಲ್ಲಿ ಶಿವಲಿಂಗವ ಧರಿಸಬಲ್ಲಡೆ,
ಭಕ್ತನೆಂಬೆನು, ಮಾಹೇಶ್ವರನೆಂಬೆನು, ಪ್ರಸಾದಿಯೆಂಬೆನು,
ಪ್ರಾಣಲಿಂಗಿಯೆಂಬೆನು, ಶರಣನೆಂಬೆನು, ಐಕ್ಯನೆಂಬೆನು.
ಇಂತೀ ಭೇದವನರಿಯದೆ ಲಿಂಗವ ಧರಿಸಿದಡೆ
ಮಡಿಲಲ್ಲಿ ಕಲ್ಲ ಕಟ್ಟಿಕೊಂಡು ಕಡಲ ಬಿದ್ದಂತಾಯಿತ್ತು
ಕಾಣಾ ಅಖಂಡೇಶ್ವರಾ. ॥ ೬೧ ॥

### ೩೦೫

ಆರೂ ಸಾಧಿಸಬಾರದ ವಸ್ತುವ ಸಾಧಿಸಿ ತಂದುಕೊಟ್ಟನಯ್ಯ
ಶ್ರೀಗುರುವೆನ್ನ ಕರಸ್ಥಲಕ್ಕೆ.
ಆರೂ ಭೇದಿಸಬಾರದ ವಸ್ತುವ ಭೇದಿಸಿ ತಂದುಕೊಟ್ಟನಯ್ಯ
ಶ್ರೀಗುರುವೆನ್ನ ಕರಸ್ಥಲಕ್ಕೆ.
ಆರೂ ನೋಡಬಾರದ ವಸ್ತುವ ನೋಡೆಂದು ತಂದುಕೊಟ್ಟನಯ್ಯ
ಶ್ರೀಗುರುವೆನ್ನ ಕರಸ್ಥಲಕ್ಕೆ.
ಆರೂ ಹಾಡಬಾರದ ವಸ್ತುವ ಹಾಡೆಂದು ತಂದುಕೊಟ್ಟನಯ್ಯ
ಶ್ರೀಗುರುವೆನ್ನ ಕರಸ್ಥಲಕ್ಕೆ.
ಆರೂ ಕೂಡಬಾರದ ವಸ್ತುವ ಕೂಡೆಂದು ತಂದುಕೊಟ್ಟನಯ್ಯ
ಶ್ರೀಗುರುವೆನ್ನ ಕರಸ್ಥಲಕ್ಕೆ.
ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡು ಬೆಳಗುವ ಪರಬ್ರಹ್ಮವ
ಎನ್ನ ಕಂಗಳು ತುಂಬಿ ನೋಡಿ, ಕೈಮುಟ್ಟಿ ಪೂಜಿಸಿ,
ಜಿಹ್ವೆತುಂಬಿ ಕೊಂಡಾಡಿ, ಮನತುಂಬಿ ಅಪ್ಪಿ,
ಅಗಲದೆ ಇಪ್ಪೆನಯ್ಯ ನಿಮ್ಮ ಅಖಂಡೇಶ್ವರಾ. ॥ ೬೨ ॥

### ೩೦೬

ಅಂಧಕಂಗೆ ಕಣ್ಣು ಬಂದಂತೆ, ಹೆಳವಂಗೆ ಕಾಲು ಬಂದಂತೆ,
ಬಂಜೆಗೆ ಮಗನಾದಂತೆ, ನಿರ್ಧನಿಕಂಗೆ ನಿಧಾನವು ಸೇರಿದಂತೆ,
ಮರಣವುಳ್ಳವಂಗೆ ಮರುಜೀವಣಿಗೆ ದೊರೆಕೊಂಡಂತೆ,
ಅಖಂಡೇಶ್ವರಾ, ನೀವೆನ್ನ ಕರಸ್ಥಲಕ್ಕೆ ಬಂದ ಫಲವು ಇಂತುಟಯ್ಯ. ॥ ೬೩ ॥

### ೩೦೭

ಜಗವನೊಳಕೊಂಡ ಲಿಂಗವು
ಸೊಗಸಿಂದೆ ಎನ್ನ ಕರಸ್ಥಲಕ್ಕೆ ಬಂದಿರಲು,
ಕಂಡು ಹಗರಣವಾಯಿತ್ತೆನಗೆ.
ಗುರುಲಿಂಗಜಂಗಮಸ್ವರೂಪವಾಗಿ ಮೂರ್ತಿಗೊಂಡಿತ್ತು ನೋಡಾ.
ಆಹಾ ಎನ್ನ ಪುಣ್ಯವೇ ! ಆಹಾ ಎನ್ನ ಭಾಗ್ಯವೇ !
ಆಹಾ ಅಖಂಡೇಶ್ವರಾ, ನಿಮ್ಮ ಘನವ ಕಂಡು
ಎನ್ನ ಮನಕ್ಕೆ ಮಂಗಳವಾಯಿತ್ತು ನೋಡಾ. ॥ ೬೪ ॥

### ೩೦೮

ಅಣುವಿಂಗೆ ಅಣು ಮಹತ್ತಿಂಗೆ ಮಹತ್ತೆಂದೆನಿಸುವ
ಲಿಂಗದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ಉಪಮಾತೀತ ವಾಙ್ಮನಕ್ಕಗೋಚರನೆಂದೆನಿಸುವ
ಲಿಂಗದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ಶ್ರುತಿತತಿಯ ಶಿರದ ಮೇಲೆ
ಅತ್ಯತಿಷ್ಠದ್ದಶಾಂಗುಲನೆಂದೆನಿಸುವ
ಲಿಂಗದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ಭಾವಭರಿತ ಜ್ಞಾನಗಮ್ಯನೆಂದೆನಿಸುವ
ಲಿಂಗದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ಅಖಂಡೇಶ್ವರನೆಂಬ ಅನಾದಿಪರಶಿವನ
ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ॥ ೬೫ ॥

### ೩೦೯

ಮನಕ್ಕೆ ಮನೋಹರವಾದ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ಕಂಗಳಿಗೆ ಮಂಗಳವಾದ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ಪ್ರಾಣಕ್ಕೆ ಪರಿಣಾಮವಾದ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ತನುವಿಂಗೆ ತರಹರವಾದ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.
ಅಗಮ್ಯ ಅಗೋಚರನಾದ ಅಖಂಡೇಶ್ವರನೆಂಬ ಲಿಂಗಯ್ಯನ
ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ॥ ೬೬ ॥

೩೧೦

ಶಿವಶಿವಾ ಎಂದು ಶಿವನ ನೆನೆದು, ಭವದ ಬೇರ ಕಿತ್ತೊಗೆಯಿರೋ.
ಪರಶಿವಮೂರ್ತಿ ಪರಬ್ರಹ್ಮಲಿಂಗನ ಪೂಜಿಸಿ,
ಹರಿ ಹತ್ತು ಭವವ ನೀಗಿದ ! ಅಜ ಅನಂತಕಲ್ಪವ ಮೀರಿದ,
ಸುಜನ ಮುನಿಗಳು ನಿಜಪದವನ್ನೈದಿದರು ನೋಡಿರೋ
ನಮ್ಮ ಅಖಂಡೇಶ್ವರಲಿಂಗದಲ್ಲಿ ! ॥ ೬೭ ॥

೩೧೧

ಮುನ್ನ ವಿಟ ಶ್ವೇತನು ಶಿವ ಎಂಬ ಶಬ್ದದಿಂದೆ
ಕಾಲನ ಕಂಟಕವ ಗೆಲಿದು ನೀಲಲೋಹಿತನ ಓಲಗದಲ್ಲಿರಲಿಲ್ಲವೆ ?
ಮುನ್ನ ಸುಕುಮಾರನು ಪರಶಿವಲಿಂಗದರ್ಶನದಿಂದೆ
ಯಮನಪುರಿಯ ಬಾಧೆಯ ನೀಗಿ ಹರನ ರಜತಾದ್ರಿಯಲ್ಲಿರಲಿಲ್ಲವೆ ?
ಮುನ್ನ ಮಾರ್ಕಂಡೇಯನು ಪರಬ್ರಹ್ಮಲಿಂಗವ ಪೂಜಿಸಿ,
ಯಮನ ಉರಹರಿದು ಹರನ ಕೈವಲ್ಯವ ಪಡೆಯಲಿಲ್ಲವೆ ?
ಇದನರಿತು ಸ್ಥಿರವಾಗಿ ಪೂಜಿಸಿ ವರವ ಬೇಡಿರೋ
ನಮ್ಮ ಅಖಂಡೇಶ್ವರ ಲಿಂಗದೇವನ. ॥ ೬೮ ॥

೩೧೨

ಹಾಡಿರೋ ಜಿಹ್ವೆದಣೆಯದೆ ಲಿಂಗವ.
ನೋಡಿರೋ ಕಂಗಳುದಣೆಯದೆ ಲಿಂಗವ.
ಮಾಡಿರೋ ಪೂಜೆಯ ಹಸ್ತದಣೆಯದೆ ಲಿಂಗವ.
ಬೇಡಿರೋ ವರವ ಮನಬಂದ ಪರಿಯಲ್ಲಿ
ನಮ್ಮ ಅಖಂಡೇಶ್ವರಲಿಂಗವ. ॥ ೬೯ ॥

೩೧೩

ನಂದಿವಾಹನನಾಗಿ,
ಚಂದ್ರಸೂರ್ಯಾಗ್ನಿ ನೇತ್ರದ ಅಂದ ಉಳ್ಳಾತನಾಗಿ,
ಸಂದಣಿಯಾಗಿ ನೆರೆದ ಪ್ರಮಥಗಣವೃಂದ ಉಳ್ಳಾತನಾಗಿ,
ನಿಂದು ಓಲೈಸುವ ದೇವಸಭೆಯ ಮುಂದೆ ಉಳ್ಳಾತನಾಗಿ,
ದುಂದುಭಿಯ ನಾದ ಮೊಳಗುತ್ತ
ಕೋಟಿಕಂದರ್ಪನ ಸೌಂದರ್ಯವನೊಳಕೊಂಡು ಬಂದಿರಯ್ಯ
ಎನ್ನ ಕರಸ್ಥಲಕ್ಕೆ ಅಖಂಡೇಶ್ವರಾ. ॥ ೭೦ ॥

೩೧೪

ಪಂಚಮುಖ ದಶಪಂಚನೇತ್ರ
ದಶಭುಜ ಎಸೆವ ಕಂಜಪದಗಳ ಶಶಿಮೌಳಿ ದಶದಿಗ್ಭರಿತ

ಅಗ್ರಗಣ್ಯ ಅಗೋಚರ ವ್ಯಾಘ್ರಚರ್ಮಾಂಬರ
ಭರ್ಗೋದೇವನೆನಿಸಿ ಬಂದಿರಯ್ಯ ಎನ್ನ ಕರಸ್ಥಲಕ್ಕೆ ಅಖಂಡೇಶ್ವರಾ. ॥ ೭೧ ॥

**೩೧೫**

ಪರಿಪಯಸವ ಚರಣಕಮಲದಲ್ಲಿ ಧರಿಸಿ,
ಶಿರಮುಕುಟದಲ್ಲಿ ಹರಿವ ಗಂಗೆಯ ತಾಳಿ,
ಅಸುರರ ಶಿರಗಳ ಕೊರಳ ಹಾರವ ಮಾಡಿ,
ಅಜಶಿರಪಾತ್ರೆಯ ಕರಮಧ್ಯದೊಳಗಿರಿಸಿ,
ಗಜಚರ್ಮಾಂಬರ ಭುಜಗಭೂಷಣನೆನಿಸಿ,
ತ್ರಿಜಗವ ಪಾಲಿಸುತ್ತ ಬಂದಿರಯ್ಯ ಎನ್ನ ಕರಸ್ಥಲಕ್ಕೆ ಅಖಂಡೇಶ್ವರಾ. ॥ ೭೨ ॥

**೩೧೬**

ವಿಶ್ವತೋ ಮುಖ ವಿಶ್ವತೋ ಪಾದ
ವಿಶ್ವತೋ ಬಾಹು ವಿಶ್ವತೋ ಚಕ್ಷು
ವಿಶ್ವತೋ ವ್ಯಾಪಕನೆನಿಸಿ ಬಂದಿರಯ್ಯ
ಎನ್ನ ಕರಸ್ಥಲಕ್ಕೆ ಅಖಂಡೇಶ್ವರಾ. ॥ ೭೩ ॥

**೩೧೭**

ಸಾಲೋಕ್ಯವಿದೆ, ಸಾಮೀಪ್ಯವಿದೆ,
ಸಾರೂಪ್ಯವಿದೆ, ಸಾಯುಜ್ಯವಿದೆ,
ಚತುರ್ವಿಧಫಲಪುರುಷಾರ್ಥವಿದೆ.
ಸುರತರುವಿದೆ ಸುರಧೇನುವಿದೆ.
ಪರಚಿಂತಾಮಣಿಯಿದೆ, ಪರುಷದ ವಾರಿಧಿಯಿದೆ.
ಸಂಜೀವನವಿದ ಜ್ಞಾನವಿದ,
ಮೋಕ್ಷವಿದೆ, ಪರತರ ಪರಮಪದವಿದೆ.
ಪರಶಿವ ಪರಂಜ್ಯೋತಿ ಬ್ರಹ್ಮವಿದೆ.
ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡ
ಅಖಂಡೇಶ್ವರಲಿಂಗವಿದೆ. ॥ ೭೪ ॥

**೩೧೮**

ಸತ್‌ಚಿತ್ತಾನಂದ ನಿತ್ಯ ಪರಿಪೂರ್ಣವಾದ ಪರವಸ್ತುವು
ಪ್ರತ್ಯಕ್ಷವಾಗಿ ಎನ್ನ ಕರಸ್ಥಲಕ್ಕೆ ಬಂದಿರಲು,
ಬಳಿಕ ಇನ್ನೆಲ್ಲಿಯದಯ್ಯಾ ಎನಗೆ ಜಪತಪದ ಚಿಂತೆ ?
ಇನ್ನೆಲ್ಲಿಯದಯ್ಯಾ ಎನಗೆ ನೇಮನಿತ್ಯದ ಚಿಂತೆ ?
ಇನ್ನೆಲ್ಲಿಯದಯ್ಯಾ ಎನಗೆ ಮೌನಮುದ್ರೆಯ ಚಿಂತೆ ?

ಅಖಂಡೇಶ್ವರಲಿಂಗವು ಎನ್ನೊಳಹೊರಗೆ ತಾನಾದ ಬಳಿಕ
ಇನ್ನೆಲ್ಲಿಯದಯ್ಯ ಎನಗೆ ಬೇರೆ ತತ್ವವನರಿಯಬೇಕೆಂಬ ಚಿಂತೆ ? ||೭೫||

೩೧೯

ಶಿವಶಿವಾ ಮಹಾಪ್ರಸಾದ
ಎನ್ನ ಚರಣವು ನಿಮ್ಮ ಶಿವಾಚಾರಮಾರ್ಗದಲ್ಲಲ್ಲದೆ
ಅನ್ಯಮಾರ್ಗದಲ್ಲಿ ಚರಿಸದಂತೆ ಮಾಡಯ್ಯ.
ಎನ್ನ ಹಸ್ತವು ನಿಮ್ಮನಲ್ಲದೆ ಅನ್ಯವ ಮುಟ್ಟದಂತೆ ಮಾಡಯ್ಯ.
ಎನ್ನ ಕಂಗಳು ನಿಮ್ಮನಲ್ಲದೆ ಅನ್ಯವ ನೋಡದಂತೆ ಮಾಡಯ್ಯ.
ಎನ್ನ ಶ್ರೋತ್ರವು ನಿಮ್ಮ ಕೀರ್ತನೆಯನಲ್ಲದೆ
ಅನ್ಯವ ಕೇಳದಂತೆ ಮಾಡಯ್ಯ.
ಎನ್ನ ಜಿಹ್ವೆಯು ನಿಮ್ಮನಲ್ಲದೆ ಅನ್ಯರ ಹೊಗಳದಂತೆ ಮಾಡಯ್ಯ.
ಎನ್ನ ಮನವು ನಿಮ್ಮನಲ್ಲದೆ ಅನ್ಯವ ಬಯಸದಂತೆ
ಮಾಡಯ್ಯ ಅಖಂಡೇಶ್ವರಾ. || ೭೬ ||

೩೨೦

ಬಾರಯ್ಯ ಬಾರಯ್ಯ ಭಕ್ತದೇಹಿಕದೇವನೆ.
ಬಾರಯ್ಯ ಬಾರಯ್ಯ ಭಕ್ತವತ್ಸಲನೆ.
ಬಾರಯ್ಯ ಬಾರಯ್ಯ ಭಕ್ತಜನಪ್ರಿಯನೆ.
ಬಾರಯ್ಯ ಬಾರಯ್ಯ ಭಕ್ತಜನಬಂಧುವೆ.
ಬಾರಯ್ಯ ಬಾರಯ್ಯ ಭಕ್ತಜನ ಮನೋವಲ್ಲಭನೆ.
ಬಾರಯ್ಯ ಬಾರಯ್ಯ ಅಖಂಡೇಶ್ವರಾ
ನೀ ಎನ್ನ ಪರಮ ಹೃದಯಮಂದಿರಕ್ಕೆ. || ೭೭ ||

## ವಿಭೂತಿಸ್ಥಲ

೩೨೧

ಶಿವಶಿವಾ ಎಂದು ಶಿವನ ಕೊಂಡಾಡುತ್ತ
ಶ್ರೀ ವಿಭೂತಿಯ ಧರಿಸಿ,
ಶ್ರೀ ಮಹಾದೇವನ ಪೂಜಿಸುವಾತನ ಕಾಯವೇ ಕೈಲಾಸ.
ಆತನ ನಡೆಯೇ ಪಾವನ, ಆತನ ನುಡಿಯೇ ಆಗಮ.
ಆತನ ದರುಶನ ಸ್ಪರುಶನವೇ
ಸಕಲ ಪ್ರಾಣಿಗಳಿಗೆ ಸಾಲೋಕ್ಯಪದವು ನೋಡಾ !
ಆ ಮಹಾತ್ಮನಿಂದಧಿಕರು ಮೂಲೋಕದೊಳಗಿಲ್ಲ
ನೋಡಾ ಅಖಂಡೇಶ್ವರಾ. || ೭೮ ||

೩೨೨

ಹೀನಜಾತಿಯಲ್ಲಿ ಹುಟ್ಟಿದ ಮಾನವನಾದಡಾಗಲಿ
ಶಿವಧ್ಯಾನದಿಂದ ನೊಸಲಲ್ಲಿ ಶ್ರೀ ವಿಭೂತಿಯ ಧರಿಸಿದಾತನ
ಏನೆಂದು ಉಪಮಿಸಬಹುದಯ್ಯ ?
ಆತನಲ್ಲಿ ಜ್ಞಾನಪರೀಕ್ಷೆಯ ಮಾಡಲಾಗದು.
ಆತನಲ್ಲಿ ವ್ರತದ ಪರೀಕ್ಷೆಯ ಮಾಡಲಾಗದು.
ಆತನು ಮಹಾಪೂಜ್ಯನು ನೋಡಾ !
ಅದೆಂತೆಂದೊಡೆ :
''ತಸ್ಮಿನ್ ಜ್ಞಾನಂ ಪರೀಕ್ಷೇತ ನ ಕುಲಂ ನ ವ್ರತಂ ತಥಾ ।
ತ್ರಿಪುಂಡ್ರಾಂಕಿತಭಾಲೇನ ಪೂಜ್ಯ ಏವ ಹಿ ನಾರದ ॥''
ಎಂದುದಾಗಿ,
ಆ ಘನಮಹಿಮ ಇಹಪರಕೆ ಶ್ರೇಷ್ಠನು
ನೋಡಾ ಅಖಂಡೇಶ್ವರಾ. ॥ ೭೯ ॥

೩೨೩

ಹರಿಕುಲದ ವಿಪ್ರರು ಶ್ರೀ ವಿಭೂತಿಯ ಧರಿಸದೆ
ಮೋಕ್ಷಮಾರ್ಗಕ್ಕೆ ತಪ್ಪುಗರಾದರು ನೋಡಾ.
ಸಕಲವೇದಂಗಳು ಶ್ರೀ ವಿಭೂತಿಯೇ ಘನವೆಂದು
ಕರವೆತ್ತಿ ಕೂಗುತಿಪ್ಪುವು ನೋಡಾ.
ಸಕಲಶ್ರುತಿಗಳು ಶ್ರೀ ವಿಭೂತಿಯ ಮಹತ್ವವನೆ
ಹೊಗಳುತಿಪ್ಪುವು ನೋಡಾ.
ಸಕಲಸ್ಮೃತಿಗಳು ಶ್ರೀ ವಿಭೂತಿಯ ಮಹಿಮೆಯನೆ
ಉಗ್ಗಡಿಸುತಿಪ್ಪುವು ನೋಡಾ.
ಅಖಿಲ ಪುರಾಣಂಗಳು ಶ್ರೀ ವಿಭೂತಿಯೇ ಅಧಿಕವೆಂದು
ಹೊಗಳುತಿಪ್ಪುವು ನೋಡಾ.
ಅದೆಂತೆಂದೊಡೆ : ಗಾರುಡೇ
''ಶ್ರುತಯಃ ಸ್ಮೃತಯಃ ಸರ್ವಾಃ ಪುರಾಣಾನ್ಯಖಿಲಾನ್ಯಪಿ ।
ವದಂತಿ ಭೂತಿಮಹಾತ್ಮ್ಯಂ ತತಸ್ತಾಂ ಧಾರಯೇತ್ ದ್ವಿಜಃ ॥
ಎಂದುದಾಗಿ,
ಇಂತಪ್ಪ ಶ್ರೀ ವಿಭೂತಿಯ ಧರಿಸಲೊಲ್ಲದೆ
ಮಣ್ಣುಮಟ್ಟಿಯ ಹಣೆಗಿಟ್ಟುಕೊಂಬ ಮಧ್ವಮತದ
ಚಾಂಡಾಲ ಹೊಲೆಯ ವಿಪ್ರ ಹಾರುವರೆಂಬ
ಅಧಮ ಮಾದಿಗರನೆನಗೊಮ್ಮೆ ತೋರದಿರಯ್ಯ
ಅಖಂಡೇಶ್ವರಾ. ॥ ೮೦ ॥

೩೨೪

ಆವ ಕಾರ್ಯಕ್ಕಾದಡೂ ಶ್ರೀ ವಿಭೂತಿಯೇ ಬೇಕು.
ಆವ ಕ್ರಿಯೆಗಾದಡೂ ಶ್ರೀ ವಿಭೂತಿಯೇ ಬೇಕು.
ಆವನೊಬ್ಬ ಶ್ರೀ ವಿಭೂತಿಯ ಧರಿಸದೆ ವೇದವನೋದಿದಡೇನು ?
ಆತನೋದಿದ ವೇದಂಗಳು ವ್ಯರ್ಥ ಕಾಣಿರೋ !
ಆವನೊಬ್ಬ ಶ್ರೀ ವಿಭೂತಿಯ ಧರಿಸದೆ ಯಜ್ಞಂಗಳ ಮಾಡಿದಡೇನು ?
ಆತ ಮಾಡಿದ ಯಜ್ಞಂಗಳು ವ್ಯರ್ಥ ಕಾಣಿರೋ !
ಆವನೊಬ್ಬ ಶ್ರೀವಿಭೂತಿಯ ದಾನಂಗಳ ಮಾಡಿದಡೇನು ?
ಆತ ಮಾಡಿದ ದಾನಂಗಳು ವ್ಯರ್ಥ ಕಾಣಿರೋ !
ಆವನೊಬ್ಬ ಶ್ರೀ ವಿಭೂತಿಯ ಧರಿಸದೆ ತಪವ ಮಾಡಿದಡೇನು ?
ಆತ ಮಾಡಿದ ತಪ ವ್ಯರ್ಥ ಕಾಣಿರೋ !
ಆವನೊಬ್ಬ ಶ್ರೀ ವಿಭೂತಿಯ ಧರಿಸದ
ನಿತ್ಯ ನೇಮ ವ್ರತ ಉಪವಾಸಂಗಳಂ ಮಾಡಿದಡೇನು ?
ಆತ ಮಾಡಿದ ನಿತ್ಯ ನೇಮ ವ್ರತ ಉಪವಾಸಂಗಳು ವ್ಯರ್ಥ ಕಾಣಿರೋ !
ಅದೆಂತೆಂದೊಡೆ : ಬೋಧಾಯನ ಸ್ಮೃತೌ–
''ವೃಥಾ ವೇದಾ ವೃಥಾ ಯಜ್ಞಾ ವೃಥಾ ದಾನಂ ವೃಥಾ ತಪಃ ।
ವೃಥಾ ವ್ರತೋಪವಾಸೌ ತು ತ್ರಿಪುಂಡ್ರಂ ಯೋ ನ ಧಾರಯೇತ್ ॥''
ಎಂದುದಾಗಿ,
ಸಕಲಕ್ಕೆ ಶ್ರೀ ವಿಭೂತಿಯೇ ಆಧಾರವಯ್ಯ ಅಖಂಡೇಶ್ವರಾ. ॥ ೮೧ ॥

೩೨೫

ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಬ್ರಹ್ಮಂಗೆ
ಬ್ರಹ್ಮಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ವಿಷ್ಣುವಿಂಗೆ
ವಿಷ್ಣುಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ದೇವತೆಗಳಿಗೆ
ದೇವಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿ ಸ್ನಾನವ ಮಾಡಿದ ಋಷಿಗಳಿಗೆ
ಋಷಿಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಗಂಧರ್ವರುಗಳಿಗೆ
ಗಂಧರ್ವಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ರುದ್ರಗಣಂಗಳಿಗೆ
ರುದ್ರಗಣಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಯಕ್ಷರಿಗೆ

ಯಕ್ಷಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಕಿನ್ನರರಿಗೆ
ಕಿನ್ನರಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಅಮರಗಣರಿಗೆ
ಅಮರಗಣಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಪಿತೃಗಣರಿಗೆ
ಪಿತೃಗಣಪದವಾಯಿತ್ತು.
ಆದಿಯಲ್ಲಿ ಶ್ರೀ ವಿಭೂತಿಯ ಸ್ನಾನವ ಮಾಡಿದ ಭೂತಗಣರಿಗೆ
ಭೂತಗಣಪದವಾಯಿತ್ತು.
ಅದೆಂತೆಂದೊಡೆ :
''ಬ್ರಹ್ಮವಿಷ್ಣ್ವಾದಿದೇವಾ ಋಷಯೋ ಗಂಧರ್ವಾ ಯಕ್ಷಕಿನ್ನರಾಃ ।
ಮರುದ್‌ಗಣಾಃ ಪಿತೃಗಣಾಃ ಸರ್ವೇ ಭೂತಗಣಾ ಅಪಿ ।
ನಿತ್ಯಂ ಚ ಸರ್ವಯತ್ನೇನ ಭಸ್ಮಸ್ನಾನಂ ಪ್ರವರ್ತತೇ ॥''
ಎಂದುದಾಗಿ,
ಇಂತಪ್ಪ ಶ್ರೀ ವಿಭೂತಿಯ ಮಹತ್ವವ ಕಂಡು ಕೇಳಿ ನಂಬಲರಿಯದ
ಗರ್ವದಿಂದ ಮುಂದುಗೆಟ್ಟ ಮರುಳಮಾನವರಿಗೆ
ಭವರಾಟಾಳದಲ್ಲಿ ಸತ್ತು ಸತ್ತು ಹುಟ್ಟಿ ಹುಟ್ಟಿ ಬಪ್ಪುದು
ತಪ್ಪದು ನೋಡಾ ಅಖಂಡೇಶ್ವರಾ. ॥ ೮೨ ॥

**೩೨೬**

ಮಹದೈಶ್ವರ್ಯವು ಕೈಗೂಡುವಡೆ
ಶ್ರೀ ವಿಭೂತಿಯಿಂದಲ್ಲದೆ ಇಲ್ಲ ನೋಡಾ.
ಪರಮಪವಿತ್ರನೆನಿಸಬೇಕಾದಡ
ಶ್ರೀ ವಿಭೂತಿಯಿಂದಲ್ಲದೆ ಇಲ್ಲ ನೋಡಾ.
ಸರ್ವೈಶ್ವರ್ಯ ಸರ್ವಸಿದ್ಧಿ ದೊರೆಕೊಂಬುವಡೆ
ಶ್ರೀ ವಿಭೂತಿಯಿಂದಲ್ಲದೆ ಇಲ್ಲ ನೋಡಾ.
ಮಹಾಪುಣ್ಯದ ಫಲವು ಪ್ರಾಪ್ತಿಸುವಡೆ
ಶ್ರೀ ವಿಭೂತಿಯಿಂದಲ್ಲದೆ ಇಲ್ಲ ನೋಡಾ.
ದಿನದಿನಕ್ಕೆ ಪಾಪ ಪಲ್ಲಟವಪ್ಪಡೆ
ಶ್ರೀ ವಿಭೂತಿಯಿಂದಲ್ಲದೆ ಇಲ್ಲ ನೋಡಾ.
ಅಂಗಕ್ಕೆ ಶ್ರೀ ವಿಭೂತಿಯೇ ಶೃಂಗಾರ ನೋಡಾ.
ಅದೆಂತೆಂದೊಡೆ :
'' ಶ್ರೀಕರಂ ಚ ಪವಿತ್ರಂ ಚ ಹಾರಾದ್ಯಾಭರಣಂ ತಥಾ ।
ಲೋಕವಶ್ಯಕರಂ ಪುಣ್ಯಂ ಪಾಪನಾಶಂ ದಿನೇ ದಿನೇ ॥''

ಎಂದುದಾಗಿ,
ಇಂತಪ್ಪ ಶ್ರೀ ವಿಭೂತಿಯ
ಅಂತರಂಗದಲ್ಲಿ ವಿಶ್ವಾಸ ತುಂಬಿ ಧರಿಸಿದ ಮನುಜರಿಗೆ
ಅನಂತಕೋಟಿ ಪಾತಕಂಗಳು ಪರಿಹಾರವಾಗಿ
ಮುಂದೆ ಶಿವಸಾಯುಜ್ಯಪದವು ದೊರಕೊಂಬುದು ನೋಡಾ
ಅಖಂಡೇಶ್ವರಾ. || ೮೩ ||

**೩೨೭**

ಸಂಚಲಗುಣವಳಿದು ಶ್ರೀ ವಿಭೂತಿಯ
ಪಂಚಸ್ಥಾನದಲ್ಲಿ ಪಂಚಬ್ರಹ್ಮಮಂತ್ರದಿಂದೆ ಧರಿಸಲು,
ಪಂಚಮಹಾಪಾತಕಂಗಳು ಪಲ್ಲಟವಪ್ಪುವು ನೋಡಾ.
ಸರ್ವಾಂಗವನು ಧೂಳನವ ಮಾಡಲು
ಸರ್ವವ್ಯಾಧಿಗಳು ಪರಿಹರವಪ್ಪುವು ನೋಡಾ.
ಇದು ಕಾರಣ ಇಂತಪ್ಪ ಶ್ರೀ ವಿಭೂತಿಯ
ಲಲಾಟಾದಿ ಮೂವತ್ತೆರಡು ಸ್ಥಾನಗಳಲ್ಲಿ ಧರಿಸಿ,
ನಿತ್ಯ ಲಿಂಗಾರ್ಚನೆಯ ಮಾಡುವಾತ ಸತ್ಯಶಿವನಲ್ಲದೆ
ಬೇರಲ್ಲವಯ್ಯ ಅಖಂಡೇಶ್ವರಾ. || ೮೪ ||

**೩೨೮**

ಸಚ್ಚಿದಾನಂದ ಪರಶಿವನ ಸದ್ಯೋಜಾತಮುಖದಿಂದ
ಪೃಥ್ವಿತತ್ತ್ವ ಪುಟ್ಟಿತ್ತು.
ಆ ತತ್ವದಿಂದೆ ನಿವೃತ್ತಿ ಎಂಬ ಕಲೆ ಪುಟ್ಟಿತ್ತು.
ಆ ಕಲೆಯಿಂದೆ ಕಪಿಲವರ್ಣದ ನಂದಿನಿಯೆಂಬ ಗೋವು ಪುಟ್ಟಿತ್ತು.
ಆ ಗೋವಿನ ಗೋಮಯದಿಂದೆ
ಮಹದೈಶ್ವರ್ಯವನ್ನುಂಟುಮಾಡುವಂಥ ಭೂತಿ ಎಂಬ
ವಿಭೂತಿ ಪುಟ್ಟಿತ್ತು.
ಮತ್ತಂ,
ಸಚ್ಚಿದಾನಂದ ಪರಶಿವನ ವಾಮದೇವಮುಖದಿಂದೆ
ಅಪ್ಪುತತ್ವ ಪುಟ್ಟಿತ್ತು.
ಆ ತತ್ವದಿಂದೆ ಪ್ರತಿಷ್ಠೆಯೆಂಬ ಕಲೆ ಪುಟ್ಟಿತ್ತು.
ಆ ಕಲೆಯಿಂದೆ ಕೃಷ್ಣವರ್ಣದ ಭದ್ರೆಯೆಂಬ ಗೋವು ಪುಟ್ಟಿತ್ತು.
ಆ ಗೋವಿನ ಗೋಮಯದಿಂದೆ ದಿವ್ಯಪ್ರಕಾಶದಿಂ ಬೆಳಗುವಂಥ
ಭಸಿತವೆಂಬ ವಿಭೂತಿ ಪುಟ್ಟಿತ್ತು.
ಮತ್ತಂ,
ಸಚ್ಚಿದಾನಂದ ಪರಶಿವನ ಅಘೋರಮುಖದಿಂದ

ಅಗ್ನಿತತ್ವ ಪುಟ್ಟಿತ್ತು.
ಆ ತತ್ವದಿಂದೆ ವಿದ್ಯೆಯೆಂಬ ಕಲೆ ಪುಟ್ಟಿತ್ತು.
ಆ ಕಲೆಯಿಂದೆ ರಕ್ತವರ್ಣದ ಸುರಭಿಯೆಂಬ ಗೋವು ಪುಟ್ಟಿತ್ತು.
ಆ ಗೋವಿನ ಗೋಮಯದಿಂದ ಸಮಸ್ತ ಪಾತಕಂಗಳ ಭಕ್ಷಿಸುವಂಥ
ಭಸ್ಮವೆಂಬ ವಿಭೂತಿ ಪುಟ್ಟಿತ್ತು.
ಮತ್ತಂ,
ಸಚ್ಚಿದಾನಂದ ಪರಶಿವನ ತತ್ಪುರುಷಮುಖದಿಂದ
ವಾಯುತತ್ವ ಪುಟ್ಟಿತ್ತು.
ಆ ತತ್ವದಿಂದೆ ಶಾಂತಿಯೆಂಬ ಕಲೆ ಪುಟ್ಟಿತ್ತು.
ಆ ಕಲೆಯಿಂದೆ ಶ್ವೇತವರ್ಣದ ಸುಶೀಲೆಯೆಂಬ ಗೋವು ಪುಟ್ಟಿತ್ತು.
ಆ ಗೋವಿನ ಗೋಮಯದಿಂದ ಸಕಲ ವ್ಯಾಧಿಗಳ ಕಳಿಸುವಂಥ
ಕ್ಷಾರವೆಂಬ ವಿಭೂತಿ ಪುಟ್ಟಿತ್ತು.
ಮತ್ತಂ,
ಸಚ್ಚಿದಾನಂದ ಪರಶಿವನ ಈಶಾನ್ಯಮುಖದಿಂದ
ಆಕಾಶತತ್ವ ಪುಟ್ಟಿತ್ತು.
ಆ ತತ್ವದಿಂದೆ ಶಾಂತ್ಯತೀತವೆಂಬ ಕಲೆ ಪುಟ್ಟಿತ್ತು.
ಆ ಕಲೆಯಿಂದ ಚಿತ್ರವರ್ಣದ ಸುಮನೆಯೆಂಬ ಗೋವು ಪುಟ್ಟಿತ್ತು.
ಆ ಗೋವಿನ ಗೋಮಯದಿಂದ ಭೂತ ಪ್ರೇತ ಪಿಶಾಚಿ
ಬ್ರಹ್ಮರಾಕ್ಷಸ ಚೋರ ಸರ್ಪವ್ಯಾಘ್ರಾದಿಗಳ ಭಯವ ಕಳಿಸುವ
ರಕ್ಷೆಯೆಂಬ ವಿಭೂತಿ ಪುಟ್ಟಿತ್ತು.
ಅದೆಂತೆಂದೊಡೆ : ಜಾಬಾಲೋಪನಿಷದಿ :
'' ಸದ್ಯೋಜಾತಾತ್ ಪೃಥಿವೀ ತಸ್ಯಾಃ ನಿವೃತ್ತಿಃ
ತಸ್ಯಾಃ ಗೋಮಯೇನ ವಿಭೂತಿರ್ಜಾತಾ ॥
ವಾಮದೇವಾದುದಕಂ ತಸ್ಮಾತ್ ಪ್ರತಿಷ್ಠಾ
ತಸ್ಯಾಃ ಕೃಷ್ಣವರ್ಣಾ ಭದ್ರಾ
ತಸ್ಯಾಃ ಗೋಮಯೇನ ಭಸಿತಂ ಜಾತಂ ॥
ಅಘೋರಾದ್ ವಹ್ನಿಃ ತಸ್ಮಾತ್ ವಿದ್ಯಾ
ತಸ್ಯಾಃ ರಕ್ತವರ್ಣಾ ಸುರಭೀ
ತಸ್ಯಾಃ ಗೋಮಯೇನ ಭಸ್ಮ ಜಾತಂ॥
ತತ್ಪುರುಷಾದ್ ವಾಯುಃ ತಸ್ಮಾತ್ ಶಾಂತಿಃ
ತಸ್ಯಾಃ ಶ್ವೇತವರ್ಣಾ ಸುಶೀಲಾ
ತಸ್ಯಾಃ ಗೋಮಯೇನ ಕ್ಷಾರಂ ಜಾತಂ॥
ಈಶಾನಾದಾಕಾಶಃ ತಸ್ಮಾತ್ ಶಾಂತ್ಯತೀತಾ
ತಸ್ಯಾಶ್ಚಿತ್ರವರ್ಣಾ ಸುಮನಾ

ತಸ್ಯಾಃ ಗೋಮಯೇನ ರಕ್ಷಾ ಜಾತಾ॥''
'' ವಿಭೂತಿರ್ಭಸಿತಂ ಭಸ್ಮ। ಕ್ಷಾರಂ ರಕ್ಷೇತಿ ಭಸ್ಮನಃ।
ಭವಂತಿ ಪಂಚನಾಮಾನಿ। ಪಂಚಭಿರ್ನಾಮಭಿರ್ಭೃಶಮ್॥''
'' ಐಶ್ವರ್ಯಕಾರಣಾದ್ಭೂತಿರ್ಭಾಸನಾದ್ಭಸಿತಂ ತಥಾ
ಸರ್ವಾಘಭಕ್ಷಣಾದ್ಭಸ್ಮ ಆಪದಾಂ ಕ್ಷಾರಣಾತ್ ಕ್ಷಾರಂ
ಭೂತ–ಪ್ರೇತ–ಪಿಶಾಚ ಬ್ರಹ್ಮರಾಕ್ಷಸಾಪಸ್ಮಾರ
ಭವಭೀತಿಭ್ಯೋಽಭಿರಕ್ಷಣಾತ್ ರಕ್ಷೇತಿ''
ಎಂದುದಾಗಿ,
ಇಂತಪ್ಪ ಶ್ರೀ ವಿಭೂತಿಯ ನಿರಂತರ ಸಾವಧಾನಭಕ್ತಿಯಿಂದ
ನಾನು ಸರ್ವಾಂಗದಲ್ಲಿ ಧರಿಸಿ ಶುದ್ಧನಿರ್ಮಲ
ಪರಮಪವಿತ್ರ ಕಾಯನಾದೆನಯ್ಯ ಅಖಂಡೇಶ್ವರಾ. ॥ ೮೫ ॥

**೩೨೯**

ಶ್ರೀ ವಿಭೂತಿಯ ಘನಮಹಿಮೆಯ ಹೇಳುವಡೆ
ಬ್ರಹ್ಮಂಗಸದಳ, ವಿಷ್ಣುವಿಂಗಸಾಧ್ಯ, ರುದ್ರಂಗಗೋಚರ ನೋಡಾ!
ಅದೆಂತೆಂದೊಡೆ : ಮತ್ಸ್ಯಪುರಾಣ
'' ಬ್ರಹ್ಮಣಾ ವಿಷ್ಣುನಾ ಚಾಪಿ ರುದ್ರೇಣ ಚ ಮುನೀಶ್ವರೈಃ।
ಭಸ್ಮಧಾರಣಮಹಾತ್ಮ್ಯಂ ನ ಶಕ್ಯಂ ಪರಿಭಾಷಿತಮ್ ॥ ''
ಎಂದುದಾಗಿ, ಇಂತಪ್ಪ ಶ್ರೀ ವಿಭೂತಿಯೆಂಬ
ಪರತರ ಪರಂಜ್ಯೋತಿಸ್ವರೂಪು ನೀವಾದಿರಾಗಿ
ಅಖಂಡೇಶ್ವರಾ, ಎನಗೆ ಶ್ರೀ ವಿಭೂತಿಯ ಸರ್ವಸಿದ್ಧಿಯಯ್ಯಾ. ॥ ೮೬ ॥

## ರುದ್ರಾಕ್ಷಿಸ್ಥಲ

**೩೩೦**

ಗುರುಕಾರುಣ್ಯವ ಪಡೆದು
ಅಂಗದ ಮೇಲೆ ಲಿಂಗಧಾರಣವಾಗಿ,
ಶ್ರೀ ವಿಭೂತಿಯ ಧರಿಸಿದ ಮಹಾತ್ಮನು
ಮುಂದೆ ಶಿವನ ಜ್ಞಾನಚಕ್ಷುವಿನಿಂದುದಯಿಸಿದ
ರುದ್ರಾಕ್ಷಿಯ ಧರಿಸುವ ಭೇದವೆಂತೆಂದೊಡೆ :
ಶಿಖಾಸ್ಥಾನದಲ್ಲಿ ಏಕಮುಖವನುಳ್ಳಂಥ ಒಂದು ರುದ್ರಾಕ್ಷಿಯ
'' ಓಂ ಸದಾಶಿವಾಯ ನಮಃ ''
ಎಂಬ ಮಂತ್ರದಿಂದ ಧಾರಣಮಾಡುವುದು.
ಮಸ್ತಕದಲ್ಲಿ ಎರಡುಮುಖ ಮೂರುಮುಖ
ಹನ್ನೆರಡುಮುಖಂಗಳನುಳ್ಳಂಥ ಮೂರು ರುದ್ರಾಕ್ಷಿಗಳ

" ಓಂ ವಹ್ನಿಸೂರ್ಯಸೋಮಾಧಿಪಾಯ ಶಿವಾಯ ನಮಃ "
ಎಂಬ ಮಂತ್ರದಿಂದ ಧಾರಣಮಾಡುವುದು.
ಶಿರವ ಬಳಸಿ ಹನ್ನೊಂದುಮುಖಂಗಳನುಳ್ಳಂಥ
ಮೂವತ್ತಾರು ರುದ್ರಾಕ್ಷಿಗಳ
"ಓಂ ಷಟ್‌ತ್ರಿಂಶತತ್ತ್ವಾತ್ಮಕಾಯ ಪರಶಿವಾಯ ನಮಃ "
ಎಂಬ ಮಂತ್ರದಿಂದ ಧಾರಣಮಾಡುವುದು.
ಕರ್ಣಯುಗದಲ್ಲಿ ಐದುಮುಖ ಹತ್ತುಮುಖ
ಏಳುಮುಖಂಗಳನುಳ್ಳಂಥ ಒಂದೊಂದು ರುದ್ರಾಕ್ಷಿಯ
"ಓಂ ಸೋಮಾಯ ನಮಃ"
ಎಂಬ ಮಂತ್ರದಿಂದ ಧಾರಣಮಾಡುವುದು.
ಕಂಠಸ್ಥಾನದಲ್ಲಿ ಎಂಟುಮುಖ, ಆರುಮುಖಂಗಳನುಳ್ಳಂಥ
ಮೂವತ್ತೆರಡು ರುದ್ರಾಕ್ಷಿಗಳ
"ಓಂ ತ್ರಿಯಂಬಕಕಲಾತ್ಮನೇ ಶ್ರೀಕಂಠಾಯ ನಮಃ"
ಎಂಬ ಮಂತ್ರದಿಂದ ಧಾರಣಮಾಡುವುದು.
ಉರಸ್ಥಾನದಲ್ಲಿ ನಾಲ್ಕುಮುಖಂಗಳನುಳ್ಳಂಥ
ಐವತ್ತುನಾಲ್ಕು ರುದ್ರಾಕ್ಷಿಗಳ
"ಓಂ ಶ್ರೀಕಂಠಾದಿಮುಕ್ತ್ಯಾತ್ಮಕಾಯ ಶ್ರೀ ಸರ್ವಜ್ಞಾಯ ನಮಃ"
ಎಂಬ ಮಂತ್ರದಿಂದ ಧಾರಣಮಾಡುವುದು.
ಬಾಹುದ್ವಯದಲ್ಲಿ ಹದಿಮೂರುಮುಖಂಗಳನುಳ್ಳಂಥ
ಹದಿನಾರು ಹದಿನಾರು ರುದ್ರಾಕ್ಷಿಗಳ
"ಓಂ ಸುಖಾಸನಾದಿ ಷೋಡಶಮೂರ್ತ್ಯಾತ್ಮಕಾಯ ಶ್ರೀಕಂಠಾಯ ನಮಃ"
ಎಂಬ ಮಂತ್ರದಿಂದ ಬಲದ ತೋಳಿನಲ್ಲಿ ಧಾರಣಮಾಡುವುದು.
"ಓಂ ಸೋಮಕಲಾತ್ಮಕಾಯ ಸೋಮಾಯ ನಮಃ"
ಎಂಬ ಮಂತ್ರದಿಂದ ಎಡದ ತೋಳಿನಲ್ಲಿ ಧಾರಣಮಾಡುವುದು.
ಮುಂಗೈ ಎರಡರಲ್ಲಿ ಒಂಬತ್ತು ಮುಖಂಗಳನುಳ್ಳಂಥ
ಹನ್ನೆರಡು ಹನ್ನೆರಡು ರುದ್ರಾಕ್ಷಿಗಳ
"ಓಂ ದ್ವಾದಶಾದಿತ್ಯಾಕ್ಷಾಯ ಶ್ರೀ ಮಹಾದೇವಾಯ ನಮಃ"
ಎಂಬ ಮಂತ್ರದಿಂದ ಬಲದ ಮುಂಗೈಯಲ್ಲಿ ಧಾರಣಮಾಡುವುದು.
"ಓಂ ಕೇಶವಾದಿತ್ಯಾಯ ಉಮಾಪತಯೇ ನಮಃ"
ಎಂಬ ಮಂತ್ರದಿಂದ ಎಡದ ಮುಂಗೈಯಲ್ಲಿ
ಧಾರಣಮಾಡುವುದು.
ಕಕ್ಷಸ್ಥಾನದಲ್ಲಿ ಯಜ್ಞೋಪವೀತರೂಪವಾಗಿ
ಹದಿನಾಲ್ಕುಮುಖಂಗಳನುಳ್ಳಂಥ ನೂರೆಂಟು ರುದ್ರಾಕ್ಷಿಗಳ
"ಓಂ ಶತರುದ್ರವಿದ್ಯಾಸ್ವರೂಪಾತ್ಮಕಾಯ

ಶ್ರೀ ವಿಶ್ವೇಶ್ವರಾಯ ನಮಃ''
ಎಂಬ ಮಂತ್ರದಿಂದ ಧಾರಣಮಾಡುವುದು.
ಇಂತೀ ಸ್ಥಾನಗಣನೆ ಮುಖಮಂತ್ರಂಗಳ ಭೇದವನರಿದು,
ಶ್ರೀ ರುದ್ರಾಕ್ಷಿಯ ಧರಿಸಿದ ಶರಣ ತಾನೇ
ಸಾಕ್ಷಾತ್ ಪರಶಿವನಲ್ಲದೆ ಬೇರಲ್ಲವಯ್ಯ.
ಅದೆಂತೆಂದೊಡೆ : ಪರಮರಹಸ್ಯದಲ್ಲಿ–
''ಭಾಲೇ ತ್ರಿಪುಂಡ್ರಕಂ ಯಸ್ಯ ಗಲೇ ರುದ್ರಾಕ್ಷಮಾಲಿಕಾ ।
ವಕ್ತ್ರೇ ಷಡಕ್ಷರಂ ಮಂತ್ರಂ ಶಿವಃ ನಾ ಸಂಶಯಃ ॥''
ಎಂದುದಾಗಿ,
ಅಂತಪ್ಪ ಮಹಿಮಂಗ ಶರಣೆಂದವರೆ ಧನ್ಯರಯ್ಯ
ಅಖಂಡೇಶ್ವರಾ. ॥ ೮೭ ॥

೩೩೧

ಅನಂತಕೋಟಿ ಯಜ್ಞಂಗಳ ಮಾಡಿ
ತೊಳಲಿ ಬಳಲಲದೇಕೊ ?
ಆ ಯಜ್ಞಂಗಳ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ !
ಅನಂತಕಾಲ ತಪವಮಾಡಿ ತೊಳಲಿ ಬಳಲಲದೇಕೊ ?
ಆ ತಪಸ್ಸಿನ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ !
ಅನಂತಕಾಲ ದಾನವಮಾಡಿ ತೊಳಲಿ ಬಳಲಲದೇಕೊ ?
ಆ ದಾನದ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ !
ಅನಂತಕಾಲ ವೇದಾಭ್ಯಾಸವಮಾಡಿ ತೊಳಲಿ ಬಳಲಲದೇಕೊ ?
ಆ ವೇದಾಭ್ಯಾಸದ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ !
ಅದೆಂತೆಂದೊಡೆ : ಪದ್ಮಪುರಾಣದಲ್ಲಿ–
''ಸರ್ವಯಜ್ಞತಪೋದಾನವೇದಾಭ್ಯಾಸೈಶ್ಚ ಯತ್ಫಲಮ್ ।
ತತ್ಫಲಂ ಲಭತೇ ಸದ್ಯೋ ರುದ್ರಾಕ್ಷಸ್ಯ ತು ಧಾರಣಾತ್ ॥''
ಎಂದುದಾಗಿ,
ಇಂತಪ್ಪ ರುದ್ರಾಕ್ಷಿಯ ಧರಿಸಿದ ಮಹಾತ್ಮನು
ವಿಶ್ವಾಧಿಕನು ವಿಶ್ವಾತೀತನು ತಾನೇ ನೋಡಾ
ಅಖಂಡೇಶ್ವರಾ. ॥ ೮೮ ॥

೩೩೨

ಮುನ್ನ ಮಹಾನಂದಿನಿಯೆಂಬ ವೇಶ್ಯಾಂಗನೆಯ ದೆಸೆಯಿಂದೆ
ಕುಕ್ಕುಟ ವಾನರ ರುದ್ರಾಕ್ಷಿಯ ಧರಿಸಿ
ರಾಜಪದವಿಯ ಪಡೆದುವು ನೋಡಾ.
ಮುನ್ನ ಬೇಂಟೆಗಾರನ ದೆಸೆಯಿಂದೆ
ಶುನಿಯು ರುದ್ರಾಕ್ಷಿಯ ಧರಿಸಿ ರುದ್ರಪದವಿಯಲ್ಲಿ ನಿಂದಿತ್ತು ನೋಡಾ.
ಮುನ್ನ ಹರದನ ದೆಸೆಯಿಂದೆ ಕತ್ತೆ ರುದಾಕ್ಷಿಯ ಪೊತ್ತು
ಕರ್ತೃ ಶಿವನ ಸಾಯುಜ್ಯಪದವ ಸಾರಿತ್ತು ನೋಡಾ.
ಮುನ್ನ ಚೇರಮರಾಯನು ರುದ್ರಾಕ್ಷಿಯ ಧರಿಸಿ
ಹರನ ಕೈಲಾಸಕ್ಕೆ ದಾಳಿವರಿದನು ನೋಡಾ ಅಖಂಡೇಶ್ವರಾ. ॥ ೮೯ ॥

೩೩೩

ಜಾತಿ ಧರ್ಮ ನೀತಿಯ ಬಿಟ್ಟು,
ವಿಜಾತಿಗಳ ಎಂಜಲುತಿಂಬ ಪಾಪಕರ್ಮಿಗಳಾದಡಾಗಲಿ,
ಸರ್ವಪಾಪವ ಬಿಟ್ಟಾತನಾದಡಾಗಲಿ,
ರುದ್ರಾಕ್ಷಿಮಾಲೆಯ ಕೊರಳಲ್ಲಿ ಧರಿಸಿದರ
ಪರಮಪವಿತ್ರನೆನಿಸಿ ಹರನ ಕೈಲಾಸದಲ್ಲಿಪ್ಪನು ನೋಡಾ.
ಅದೆಂತೆಂದೊಡೆ : ಸ್ಕಂದಪುರಾಣೇ–
"ರುದ್ರಾಕ್ಷಮಾಲಿಕಾಂ ಕಂಠೇ ಧಾರಯೇತ್ ಭಕ್ತಿವರ್ಜಿತಃ ।
ಪಾಪಕರ್ಮಾಪಿ ಯೋ ಮರ್ತ್ಯೋ ರುದ್ರಲೋಕೇ ಮಹೀಯತೇ ॥
ಸೋಚ್ಛಿಷ್ಟೋ ವಾಪಿ ಕರ್ಮಸ್ಥೋ ಯುಕ್ತೋ ವಾ ಸರ್ವಪಾತಕೈಃ ।
ಮುಚ್ಯತೇ ಸರ್ವಪಾಪೇಭ್ಯೋ ನರೋ ರುದ್ರಾಕ್ಷಧಾರಣಾತ್ ॥"
ಎಂದುದಾಗಿ,
ಇಂತಪ್ಪ ರುದ್ರಾಕ್ಷಿಯು ನೀನೆ ಅಯ್ಯ ಅಖಂಡೇಶ್ವರಾ. ॥ ೯೦ ॥

೩೩೪

ಆವನೊಬ್ಬನು ಉಪಪಾತಕ ಮಹಾಪಾತಕಂಗಳ ಮಾಡಿ,
ಶ್ರೀ ರುದ್ರಾಕ್ಷಿಯ ನಾಮೋಚ್ಚರಣೆಯ ಮಾಡಿದಡೆ
ಆ ಪಾತಕಂಗಳು ಪರಿಹಾರವಾಗಿ
ಹತ್ತುಸಾವಿರ ಗೋದಾನದ ಫಲವು ಕೈಸಾರುತಿಪ್ಪುದು ನೋಡಾ.
ಆ ರುದ್ರಾಕ್ಷಿಯ ಸ್ವರೂಪವನು ಕಂಗಳು ತುಂಬಿ ನೋಡಿದಡೆ
ಶತಕೋಟಿ ಪುಣ್ಯದ ಫಲವು ಕೈಸಾರುತಿಪ್ಪುದು ನೋಡಾ.
ಆ ರುದ್ರಾಕ್ಷಿಯ ಮುಟ್ಟಿ ಮುಟ್ಟಿ ಪೂಜಿಸಿದಡೆ
ಸಹಸ್ರಕೋಟಿ ಪುಣ್ಯದ ಫಲವು ಕೈಸಾರುತಿಪ್ಪುದು ನೋಡಾ.
ಆ ರುದ್ರಾಕ್ಷಿಯ ತತ್ ಸ್ಥಾನಂಗಳಲ್ಲಿ ಭಕ್ತಿಯಿಂದ ಧರಿಸಿದಡೆ

ಲಕ್ಷಕೋಟಿ ಪುಣ್ಯದ ಫಲವು ಕೈಸಾರುತಿಪ್ಪುದು ನೋಡಾ.
ಆ ರುದ್ರಾಕ್ಷಿಯ ಮಣಿಗಳಿಂದೆ ಜಪವ ಮಾಡಿದಡೆ
ಅನಂತಕೋಟಿ ಪುಣ್ಯದ ಫಲವು ಕೈಸಾರುತಿಪ್ಪುದು ನೋಡಾ.
ಅದೆಂತೆಂದೊಡೆ :
''ಸಪ್ತಕೋಟಿಶತಂ ಪುಣ್ಯಂ ಲಭತೇ ಧಾರಣಾತ್ ನರಃ ।
ಲಕ್ಷಕೋಟಿಸಹಸ್ರಾಣಿ ಲಕ್ಷಕೋಟಿಶತಾನಿ ಚ ।
ತಜ್ಜಪಾತ್ ಲಭತೇ ಪುಣ್ಯಂ ನಾತ್ರ ಕಾರ್ಯವಿಚಾರಣಾ ॥''
ಎಂದುದಾಗಿ,
ಇಂತಪ್ಪ ರುದ್ರಾಕ್ಷಿಯ ಧರಿಸಿದ ಫಲಕ್ಕೆ
ಇನ್ನಾವ ಫಲವು ಸರಿಯಿಲ್ಲವೆಂದು
ಸಕಲಾಗಮಂಗಳು ಸಾರುತಿಪ್ಪವು ನೋಡಾ
ಅಖಂಡೇಶ್ವರಾ. ॥ ೯೧ ॥

೩೩೫

ರುದ್ರಾಕ್ಷಿಯೆಂದೊಡೆ ಸಾಕ್ಷಾತ್ ಪರಶಿವನು ತಾನೇ ನೋಡಾ.
ಅಗ್ರಜನಾಗಲಿ ಅಂತ್ಯಜನಾಗಲಿ,
ಮೂರ್ಖನಾಗಲಿ ಪಂಡಿತನಾಗಲಿ,
ಸುಗುಣಿಯಾಗಲಿ ದುರ್ಗುಣಿಯಾಗಲಿ
ಆವನಾದಡೇನು ? ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೆ
ಆತ ಇಹಲೋಕದಲ್ಲಿಯೂ ರುದ್ರನೆನಿಸುವನು ;
ಪರಲೋಕದಲ್ಲಿಯೂ ರುದ್ರನೆನಿಸುವನು.
ಅದೆಂತೆಂದೊಡೆ : ಶಿವಧರ್ಮೆ–
''ರುದ್ರಾಕ್ಷಾಣಿ ಸ್ವಯಂ ರುದ್ರೋ ಭವೇತ್ ರುದ್ರಾಕ್ಷಧಾರಕಂ ।
ರುದ್ರಾಕ್ಷಂ ಧಾರಯೇತ್ ತಸ್ಮಾದಿಹ ರುದ್ರಃ ಪರತ್ರ ಚ ॥
ಬ್ರಾಹ್ಮಣೋ ವಾಪಿ ಚಾಂಡಾಲೋ ದುರ್ಗುಣಃ ಸುಗುಣೋಪಿ ವಾ ।
ತಸ್ಮಾತ್ ರುದ್ರಾಕ್ಷಕಂಠೇನ ದೇಹಾಂತೇ ತು ಶಿವಂ ವ್ರಜೇತ್ ॥''
ಎಂದುದಾಗಿ,
ಇದು ಕಾರಣ ರುದ್ರಾಕ್ಷಿಯ ಮಹಿಮೆಯನು ಹೇಳುವಡೆ
ವೇದಶಾಸ್ತ್ರ ಪುರಾಣಗಳಿಗೆ ಅಗೋಚರವಾಗಿಪ್ಪುದಯ್ಯ
ಅಖಂಡೇಶ್ವರಾ. ॥ ೯೨ ॥

೩೩೬

ಅಯ್ಯಾ ಎನಗೆ ರುದ್ರಾಕ್ಷಿಯೇ ಪುಣ್ಯದ ಪುಂಜ ನೋಡಾ.
ಅಯ್ಯಾ ಎನಗೆ ರುದ್ರಾಕ್ಷಿಯೇ ಭಾಗ್ಯದ ನಿಧಿಯು ನೋಡಾ.
ಅಯ್ಯಾ ಎನಗೆ ರುದ್ರಾಕ್ಷಿಯೇ ಸತ್ಯದ ಸದನ ನೋಡಾ.

ಅಯ್ಯಾ ಎನಗೆ ರುದ್ರಾಕ್ಷಿಯೇ ನಿತ್ಯದ ನಿಲವು ನೋಡಾ.
ಅಯ್ಯಾ ಎನಗೆ ರುದ್ರಾಕ್ಷಿಯೇ ಭಕ್ತಿಯ ಬೆಳಗು ನೋಡಾ.
ಅಯ್ಯಾ ಎನಗೆ ರುದ್ರಾಕ್ಷಿಯೇ ಮುಕ್ತಿಯ ಸೋಪಾನ ನೋಡಾ.
ಅಯ್ಯಾ ಎನಗೆ ರುದ್ರಾಕ್ಷಿಯೇ ಶಕ್ತಿಯ ಬಲವು ನೋಡಾ.
ಇಂತಪ್ಪ ರುದ್ರಾಕ್ಷಿಯ ಎನ್ನಂತರಂಗ ಶುದ್ಧವಾಗಿ
ಅವಿರಳಭಕ್ತಿಯಿಂದ ಧರಿಸಿ
ನಿಶ್ಚಿಂತ ನಿಭ್ರಾಂತನಾಗಿರ್ದೆನಯ್ಯ ಅಖಂಡೇಶ್ವರಾ ! ॥ ೯೩ ॥

## ಪಂಚಾಕ್ಷರಿಸ್ಥಲ

**೩೩೭**

ಪಂಚಾಕ್ಷರಿಯೆಂದಡೆ ಪರತತ್ವವು ತಾನೆ ನೋಡಾ.
ಪಂಚಾಕ್ಷರಿಯೆಂದಡೆ ಪರವಸ್ತುವು ತಾನೆ ನೋಡಾ.
ಪಂಚಾಕ್ಷರಿಯೆಂದಡೆ ಪರಬ್ರಹ್ಮವು ತಾನೆ ನೋಡಾ.
ಪಂಚಾಕ್ಷರಿಯೆಂದಡೆ ಪರಮೇಶ್ವರನ ನಿಜನಾಮವು ತಾನೆ ನೋಡಾ.
ಪಂಚಾಕ್ಷರಿಯೆಂದಡೆ ಸಾಕ್ಷಾತ್ ಪರಶಿವನು ತಾನೆ ನೋಡಾ.
ಇಂತಪ್ಪ ಪಂಚಾಕ್ಷರಿಮಂತ್ರವ ಹಗಲಿರುಳೆನ್ನದೆ
ಸದಾ ಸನ್ನಿಹಿತನಾಗಿ ಜಪಿಸಿದಾತನು ಅನಂತ ಪಾತಕಂಗಳ ಮೀರಿ
ಪರಮಪದವನೈದುತಿಪ್ಪನು ನೋಡಾ ಅಖಂಡೇಶ್ವರಾ ! ॥ ೯೪ ॥

**೩೩೮**

ಆವನೊಬ್ಬನ ಹೃದಯದಲ್ಲಿ 'ಓಂ ನಮಃ ಶಿವಾಯ'
ಎಂಬ ಮಂತ್ರವು ನಿಶ್ಚಲವಾಗಿರಲು
ಆತಂಗೆ ಸಕಲಮಂತ್ರಂಗಳ ಸಕಲತಂತ್ರಂಗಳ ಹಂಗಿಲ್ಲ :
ಆತಂಗೆ ಸಕಲಶಾಸ್ತ್ರಂಗಳ ಸಕಲವಿದ್ಯಂಗಳ
ಅಭ್ಯಸಿಸಬೇಕೆಂಬ ಭ್ರಾಮಕವಿಲ್ಲ.
ಆತನಿರ್ದಲ್ಲಿ ಸಕಲಭುವನ ಸಕಲತತ್ತ್ವಂಗಳಿರ್ಪುವು.
ಆತ ನಿರಾವರಣ ನಿರುಪಮ ನಿರಾಲಂಬ
ನಿಜಮುಕ್ತನು ನೋಡಾ ಅಖಂಡೇಶ್ವರಾ ! ॥ ೯೫ ॥

**೩೩೯**

ಏಳುಕೋಟಿ ಮಹಾಮಂತ್ರಗಳ
ಉಪಮಂತ್ರ ಕೋಟ್ಯಾನುಕೋಟಿಗಳ
ಕಲಿತು ತೊಳಲಿ ಬಳಲುವುದೇಕೋ ?
ಫಾಲಾಕ್ಷನ ಮೂಲಮಂತ್ರ ಒಂದೇ ಸಾಲದೇ !
ಸಕಲವೇದಂಗಳ ಮೂಲವಿದು, ಸಕಲಶಾಸ್ತ್ರಂಗಳ ಸಾರವಿದು,

ಸಕಲಾಗಮಂಗಳ ಅರುಹಿದು, ಸಕಲಮಂತ್ರಂಗಳ ಮಾತೆಯಿದು.
ಇಂತಪ್ಪ ಶಿವಮಂತ್ರವೆಂಬ ಸಂಜೀವನವು ಎನ್ನಂಗಕ್ಕೆ ಸಂಗಿಸಲಾಗಿ
ಎನಗೆ ಮರಣದ ಭಯ ಹಿಂಗಿತಯ್ಯಾ ಅಖಂಡೇಶ್ವರಾ ! || ೯೬ ||

೩೪೦

ಶಿವಮಂತ್ರವೆನಗೆ ಕಾಮಧೇನುವಯ್ಯ.
ಶಿವಮಂತ್ರವೆನಗೆ ಕಲ್ಪವೃಕ್ಷವಯ್ಯ.
ಶಿವಮಂತ್ರವೆನಗೆ ಚಿಂತಾಮಣಿಯಯ್ಯ.
ಶಿವಮಂತ್ರವೆನಗೆ ಪರುಷದ ಖಣಿಯಯ್ಯ.
ಶಿವಮಂತ್ರವೆನಗೆ ಮನಃಪ್ರಾಣಮೂಲಿಕೆಯಯ್ಯ
ಅಖಂಡೇಶ್ವರಾ ! || ೯೭ ||

೩೪೧

ಸಕಲವೇದಶಾಸ್ತ್ರಾಗಮ ಪುರಾಣಂಗಳೆಲ್ಲ
ಶಿವಮಂತ್ರದಲ್ಲಿ ಜನಿಸಿದುವಯ್ಯ.
ಸಕಲತತ್ವಶಕ್ತಿಮೂರ್ತಿಗಳೆಲ್ಲ ಶಿವಮಂತ್ರದಲ್ಲಿ ಜನಿಸಿದುವಯ್ಯ.
ಸಕಲಭುವನ ಬ್ರಹ್ಮಾಂಡ ಸಚರಾಚರಂಗಳೆಲ್ಲ
ಶಿವಮಂತ್ರದಲ್ಲಿಯೇ ಜನಿಸಿದುವಯ್ಯ.
ವೃಕ್ಷಬೀಜನ್ಯಾಯದಂತೆ ಸಕಲವಿಸ್ತಾರವನೊಳಗೊಂಡಿರ್ಪ
ಪರಮ ಶಿವಮಂತ್ರವ ನೆನೆನೆನೆದು ಎನ್ನ ಮನದ ಮುಂದಣ
ಮರವೆಯ ಹರಿದು ಭವಸಾಗರವ ದಾಂಟಿದೆನಯ್ಯ
ಅಖಂಡೇಶ್ವರಾ. || ೯೮ ||

೩೪೨

ಈ ಶಿವಷಡಕ್ಷರಮಂತ್ರದಿಂದೆ ಸಾನಂದಋಷಿಯು
ನರಕಜೀವಿಗಳನ್ನೆಲ್ಲ ಹರನ ಓಲಗದಲ್ಲಿರಿಸಿದನು ನೋಡಾ.
ಈ ಶಿವಷಡಕ್ಷರಮಂತ್ರದಿಂದೆ ತಿರುಜ್ಞಾನಸಂಬಂಧಿಗಳು
ಕೂನಪಾಂಡ್ಯನ ವಾದವ ಗೆದ್ದರು ನೋಡಾ.
ಈ ಷಡಕ್ಷರಮಂತ್ರದಿಂದೆ ಶಿವಜಾತಯ್ಯನ ಶಿಷ್ಯ ಮಂತ್ರಜಾತಯ್ಯನು
ಮಹಾಬಯಲನೈದಿದನು ನೋಡಾ.
ಈ ಶಿವಷಡಕ್ಷರಮಂತ್ರದಿಂದೆ ಅಜಗಣ್ಣತಂದೆಗಳು
ನಿಜಲಿಂಗೈಕ್ಯರಾದರು ನೋಡಾ.
ಇಂತಪ್ಪ ಶಿವಷಡಕ್ಷರಮಂತ್ರವನು ಎನ್ನಂತರಂಗದ
ಅರುಹಿನ ಮನೆಯಲ್ಲಿ ಬಚ್ಚಿಟ್ಟುಕೊಂಡು

ಓಂ ನಮಃಶಿವಾಯ, ಓಂ ನಮಃಶಿವಾಯ.
ಓಂ ನಮಃಶಿವಾಯ ಎಂದೆನುತಿರ್ದೆನಯ್ಯ ಅಖಂಡೇಶ್ವರಾ. ॥ ೯೯ ॥

**೩೪೩**

ನಾಲ್ಕು ವರ್ಣ ಹದಿನೆಂಟು ಜಾತಿ
ನೂರೊಂದು ಕುಲದಲ್ಲಿ ಹುಟ್ಟಿದವನಾದಡಾಗಲಿ,
ಅಧಮನಾದಡಾಗಲಿ, ಮೂರ್ಖನಾದಡಾಗಲಿ, ವಿದ್ವಾಂಸನಾದಡಾಗಲಿ,
ಚಿದ್‌ರೂಪ ಶಿವಮಂತ್ರವನು ಶುದ್ಧಸಾವಧಾನದಿಂದೆ ಸ್ಮರಿಸಲು
ಹೊದ್ದಿರ್ದ ಪಾಪದ ಪಡೆಯೆಲ್ಲ
ಬಿದ್ದೋಡಿ ಹೋಗುವದು ನೋಡಾ.
ಅದೆಂತೆಂದೊಡೆ :
"ಅಂತ್ಯಜೋವಾಧಮೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ ।
ಜಪೇತ್ ಪಂಚಾಕ್ಷರೀಂ ವಿದ್ಯಾಂ ಜಪತಃ ಪ್ರಾಪ್ನು ಯಾಚ್ಛಿವಂ ॥"
ಎಂದುದಾಗಿ,
ಇಂತಪ್ಪ ಪಂಚಾಕ್ಷರಿಯ ಮಹಿಮೆಯನೇನೆಂಬೆನಯ್ಯ
ಅಖಂಡೇಶ್ವರಾ. ॥ ೧೦೦ ॥

**೩೪೪**

ಶಿವಶಿವಾ ಎಂದು ಶಿವನ ಕೊಂಡಾಡಿ
ಭವಪಾಶವ ಹರಿದೆನಯ್ಯ.
ಹರಹರಾ ಎಂದು ಹರನ ಕೊಂಡಾಡಿ
ಹರಗಣತಿಂತಿಣಿಯೊಳಗೆ ನಿಂದೆನಯ್ಯ.
ಇದು ಕಾರಣ ಹರಾಯ ಶಿವಾಯ ಶ್ರೀ ಮಹಾದೇವಾಯ
ಓಂ ನಮಃಶಿವಾಯ ಎಂದೆನುತಿರ್ದೆನಯ್ಯ
ಅಖಂಡೇಶ್ವರಾ. ॥ ೧೦೧ ॥

**೩೪೫**

ಅರಿಯದೆ ಒಂದು ವೇಳೆ 'ಓಂ ನಮಃಶಿವಾಯ' ಎಂದಡೆ
ಮರೆದು ಮಾಡಿದ ಹಿಂದೇಳುಜನ್ಮದ
ಕರ್ಮದಕಟ್ಟು ಹರಿದು ಹೋಯಿತ್ತು ನೋಡಾ !
ಅರಿದೊಂದು ವೇಳೆ 'ಓಂ ನಮಃಶಿವಾಯ' ಎಂದಡೆ
ದುರಿತಸಂಕುಳವೆಲ್ಲ ದೂರಾಗಿಪವು ನೋಡಾ !
ಇದು ಕಾರಣ 'ಓಂ ನಮಃಶಿವಾಯ, ಓಂ ನಮಃಶಿವಾಯ'
ಎಂಬ ಶಿವಮಂತ್ರವನು ಜಪಿಸಿ,
ನಾನಾ ಭವದ ಬಳ್ಳಿಯ ಬೇರ ಕಿತ್ತೊಗೆದನಯ್ಯ
ಅಖಂಡೇಶ್ವರಾ. ॥ ೧೦೨ ॥

೩೪೬

'ಓಂ ನಮಃಶಿವಾಯ' ಎಂಬುದೇ ಎನಗೆ ಧರ್ಮ ನೋಡಾ !
'ಓಂ ನಮಃಶಿವಾಯ' ಎಂಬುದೇ ಎನಗೆ ಅರ್ಥ ನೋಡಾ !
'ಓಂ ನಮಃಶಿವಾಯ' ಎಂಬುದೇ ಎನಗೆ ಕಾಮ ನೋಡಾ !
'ಓಂ ನಮಃಶಿವಾಯ' ಎಂಬುದೇ ಎನಗೆ ಮೋಕ್ಷ ನೋಡಾ !
'ಓಂ ನಮಃಶಿವಾಯ' ಎಂಬುದೇ ಎನಗೆ ಸರ್ವಕಾರಣ ನೋಡಾ
ಅಖಂಡೇಶ್ವರಾ. ॥ ೧೦೩ ॥

೩೪೭

ಓಂಕಾರವೆಂಬ ಮರಕ್ಕೆ ಷಟ್‌ಕೃತಿಯೆಂಬ ಶಾಖೆ ಪಸರಿಸಿ,
ಷಡಕ್ಷರಗಳೆಂಬ ತಳಿರು ಕೊನರಿ,
ಷಟ್‌ಸ್ಥಲಗಳೆಂಬ ಕುಸುಮಂಗಳಾಗಿ,
ಷಡುಲಿಂಗಂಗಳೆಂಬ ಮೋಕ್ಷದ ಮಧುರಫಲಂಗಳ
ತಳೆದಿರ್ಪುದು ನೋಡಾ !
ಇದನು ನಾನು ಶ್ರುತಿಗುರುವಚನಸ್ವಾನುಭಾವಂಗಳಿಂದರಿದು
ಓಂಕಾರವೆಂಬ ವೃಕ್ಷವನೇರಿ 'ಓಂ ನಮಃಶಿವಾಯ'
'ಓಂ ನಮಃಶಿವಾಯ' 'ಓ ನಮಃಶಿವಾಯ' ಎಂದು
ಆ ಷಡುಲಿಂಗಂಗಳೆಂಬ ಮೋಕ್ಷದ ಮಧುರಫಲಂಗಳನು
ಸವಿದು ನಿತ್ಯತೃಪ್ತನಾದೆನಯ್ಯ ಅಖಂಡೇಶ್ವರಾ. ॥ ೧೦೪ ॥

೩೪೮

ಎನ್ನ ಷಡ್‌ಧಾತುಗಳೆಲ್ಲ ಷಡಕ್ಷರಮಂತ್ರಸ್ವರೂಪವಾಗಿ
ತೋರುತಿಪ್ಪುವಯ್ಯ.
ಎನ್ನ ಷಡ್‌ಇಂದ್ರಿಯಗಳೆಲ್ಲ ಷಡಕ್ಷರಮಂತ್ರಸ್ವರೂಪವಾಗಿ
ತೋರುತಿಪ್ಪುವಯ್ಯ.
ಎನ್ನ ಷಡ್‌ಭಾವಂಗಳೆಲ್ಲ ಷಡಕ್ಷರಮಂತ್ರಸ್ವರೂಪವಾಗಿ
ತೋರುತಿಪ್ಪುವಯ್ಯ.
ಎನ್ನ ಷಡೂರ್ಮಿಗಳೆಲ್ಲ ಷಡಕ್ಷರಮಂತ್ರಸ್ವರೂಪವಾಗಿ
ತೋರುತಿಪ್ಪುವಯ್ಯ.
ಎನ್ನ ಷಡ್ವರ್ಗಗಳೆಲ್ಲ ಷಡಕ್ಷರಮಂತ್ರಸ್ವರೂಪವಾಗಿ
ತೋರುತಿಪ್ಪುವಯ್ಯ.
ಎನ್ನ ಷಟ್‌ಕರಣಂಗಳೆಲ್ಲ ಷಡಕ್ಷರಮಂತ್ರಸ್ವರೂಪವಾಗಿ
ತೋರುತಿಪ್ಪುವಯ್ಯ.
ಇದು ಕಾರಣ 'ಓಂ ನಮಃಶಿವಾಯ' 'ಓಂ ನಮಃಶಿವಾಯ'

'ಓಂ ನಮಃಶಿವಾಯ' ಎಂಬ ನಿಮ್ಮ ನಾಮಾಮೃತವನುಂಡು
ನಿತ್ಯಮುಕ್ತನಾದೆನಯ್ಯ ಅಖಂಡೇಶ್ವರಾ. ॥ ೧೦೫ ॥

೩೪೯

ಎನ್ನ ಸ್ಥೂಲತನುವೆಂಬ ಮನೆಯಲ್ಲಿ
ಲಿಂಗವೆಂಬ ಜ್ಯೋತಿಯ ತುಂಬಿದೆನಯ್ಯ.
ಎನ್ನ ಸೂಕ್ಷ್ಮತನುವೆಂಬ ಮನೆಯಲ್ಲಿ
ಮಂತ್ರವೆಂಬ ಜ್ಯೋತಿಯ ತುಂಬಿದೆನಯ್ಯ.
ಎನ್ನ ಕಾರಣತನುವೆಂಬ ಮನೆಯಲ್ಲಿ
ಜ್ಞಾನವೆಂಬ ಜ್ಯೋತಿಯ ತುಂಬಿದೆನಯ್ಯ.
ಎನ್ನ ಒಳಹೊರಗೆ ತುಂಬಿ ಬೆಳಗುವ
ಜ್ಯೋತಿಯ ಬೆಳಗಿನೊಳಗೆ ಸುಳಿಯುತಿರ್ದೆನಯ್ಯ
ಅಖಂಡೇಶ್ವರಾ. ॥ ೧೦೬ ॥

## ಭಕ್ತಸ್ಥಲ

೩೫೦

ಶಿವಭಕ್ತಿ ಶಿವಜ್ಞಾನ ಶಿವನಲ್ಲಿ ವಿಶ್ವಾಸವಮಾಡಿದ
ಲಿಂಗಾಂಗಸಂಬಂಧವನುಳ್ಳ ಸದ್ಭಕ್ತಮಹೇಶ್ವರರು
ಇದ್ದ ಠಾವೆಲ್ಲ ಶಿವಕ್ಷೇತ್ರ,
ಅವರು ಸುಳಿದ ಸುಳಿವೆಲ್ಲ ಜಗತ್ಪಾವನ,
ಅವರು ನಿಮಿಷ ನಿಮಿಷಾರ್ಧ ಕುಳಿತ ನೆಲವೆಲ್ಲ
ಶಿವನ ಕೈಲಾಸ ನೋಡಾ !
ಅದೆಂತೆಂದೊಡೆ : ಸ್ಕಂದಪುರಾಣೇ–
''ಯತ್ರ ತಿಷ್ಠತಿ ಲಿಂಗಾಂಗಸಂಬಂಧೀಶಪರಾಯಣಃ ।
ನಿಮಿಷಂ ನಿಮಿಷಾರ್ಧಂ ವಾ ತತ್ ಶಿವಕ್ಷೇತ್ರಮುಚ್ಯತೇ ॥''
ಮತ್ತಂ,
''ಪಾದಾಗ್ರರೇಣವೋ ಯತ್ರ ಪತಂತಿ ಶಿವಯೋಗಿನಾಮ್ ।
ತದೇವ ಸದನಂ ಪುಣ್ಯಂ ಪಾವನಂ ಶಿವಮಂದಿರಮ್ ॥''
ಎಂದುದಾಗಿ,
ಇಂತಪ್ಪ ಸದ್ಭಕ್ತಮಹೇಶ್ವರರ ಘನವ
ನಾನೇನೆಂಬೆನಯ್ಯ ಅಖಂಡೇಶ್ವರಾ. ॥ ೧೦೭ ॥

೩೫೧

ಶಿವಶಿವಾ ಎನ್ನಿರೋ ! ಶಿವನ ಧ್ಯಾನಕ್ಕೆ ತನ್ನಿರೊ !
ಶಿವನು ಕೈಲಾಸ ಮೇರು ಮಂದಿರದಲ್ಲಿಲ್ಲ ನೋಡಿರೊ !

ಶಿವನು ಭಕ್ತಿಗೆ ಸೋತು ನಿಮ್ಮೊಳಗಿಪ್ಪನು ಕಾಣಿರೋ !
ಅದೆಂತೆಂದೊಡೆ : ಶಿವನ ವಾಕ್ಯ –
''ನಾಹಂ ವಸಾಮಿ ಕೈಲಾಸೇ ನ ಮೇರೌ ನ ಚ ಮಂದರೇ ।
ಮದ್‌ಭಕ್ತಾ ಯತ್ರ ತಿಷ್ಠಂತಿ ತತ್ರ ತಿಷ್ಠಾಮಿ ಪಾರ್ವತಿ ॥''
ಎಂದುದಾಗಿ,
ಆಲಸ್ಯವಿಲ್ಲದೆ ಒಲಿಸಿರೋ ನಮ್ಮ ಅಖಂಡೇಶ್ವರನೆಂಬ
ಪರಶಿವನ. ॥ ೧೦೮ ॥

೩೫೭

ಅಕುಲಜ ಅಧಮ ಮೂರ್ಖನಾದಡಾಗಲಿ
ಮುಕ್ಕಣ್ಣ ಹರನ ಭಕ್ತಿಯ ಹಿಡಿದಾತನು
ಸಿಕ್ಕಬಲ್ಲನೇ ಯಮನಬಾಧೆಗೆ ?
ಆತನು ದೇವ ದಾನವ ಮಾನವರೊಳಗೆ ಪೂಜ್ಯನು ನೋಡಾ !
ಅದೆಂತೆಂದೊಡೆ : ಶಿವಧರ್ಮೇ–
''ಅಂತ್ಯಜೋ ವಾಧಮೋ ವಾಪಿ ಮೂರ್ಖೋ ವಾ ಪಂಡಿತೋಽಪಿ ವಾ ।
ಶಿವಭಾವಂ ಪ್ರಪನ್ನಶ್ಚೇತ್ ಪೂಜ್ಯಸ್ಸರ್ವೈ ಸ್ಸುರಾಸುರೈಃ ॥''
ಎಂದುದಾಗಿ,
ಶಿವಭಕ್ತನೇ ಶ್ರೇಷ್ಠನು ನೋಡಾ ಅಖಂಡೇಶ್ವರಾ. ॥ ೧೦೯ ॥

೩೫೮

ಶಿವಶಿವಾ ! ಶಿವಭಕ್ತನಿರ್ದ ಹಳ್ಳಿಯಾದಡಾಗಲಿ,
ಪಟ್ಟಣವಾದಡಾಗಲಿ ಹೊರಗೇರಿಯಾದಡಾಗಲಿ,
ಶ್ರೇಷ್ಠಭೂಮಿಯಾದಡಾಗಲಿ ಕನಿಷ್ಠಭೂಮಿಯಾದಡಾಗಲಿ,
ಆತನಿರ್ದ ಸ್ಥಾನವೇ ಶಿವಲೋಕವೆನಿಸಿತ್ತು,
ಆತನಿರ್ದ ಮನೆಯೇ ಶಿವಮಂದಿರವೆನಿಸಿತ್ತು,
ಆತನಿರ್ದ ದೇಶಕ್ಕೆ ಹಸಿವು ತೃಷೆ ದುರ್ಭಿಕ್ಷವಿಲ್ಲ,
ಆಧಿ ವ್ಯಾಧಿ ರೋಗ ರುಜೆ ವಿಪತ್ತುಗಳಿಲ್ಲ ನೋಡಾ !
ಅದೆಂತೆಂದೊಡೆ : ಲಿಂಗಪುರಾಣೇ–
''ರುದ್ರಾಧ್ಯಾಯೀ ವಸೇದ್ಯಸ್ತು ಗ್ರಾಮೇ ವಾ ನಗರೇಽಪಿ ವಾ ।
ನ ತತ್ರ ಕ್ಷುತ್ ಪಿಪಾಸಾದ್ಯಾ ದುರ್ಭಿಕ್ಷಂ ವ್ಯಾಧಯೋಽಪಿ ವಾ ॥''
ಮತ್ತಂ,
''ಚಾಂಡಾಲವಾಟಿಕಾಯಾಂ ಶಿವಭಕ್ತಃ ಸ್ಥಿತೋ ಯದಿ ।
ತದ್ಭೂಮಿಃ ಶಿವಲೋಕಸ್ತು ತದ್ಗೃಹಂ ಶಿವಮಂದಿರವ್ ॥''
ಎಂದುದಾಗಿ, ಇಂತಪ್ಪ ಪರಮಶಿವಭಕ್ತನ ದರ್ಶನವು
ಪುಣ್ಯದಪುಂಜವು ನೋಡಾ ಅಖಂಡೇಶ್ವರಾ. ॥ ೧೧೦ ॥

೩೫೪

ಪಂಚಮಹಾಪಾತಕಂಗಳ ಮಾಡಿದವನಾದಡಾಗಲಿ,
ಉಪಪಾತಕಂಗಳ ಕೋಟ್ಯನುಕೋಟಿ ಮಾಡಿದವನಾದಡಾಗಲಿ,
ಹತ್ತುಸಾವಿರ ಬ್ರಹ್ಮಹತ್ಯವ ಮಾಡಿದವನಾದಡಾಗಲಿ,
ಒಬ್ಬ ಶಿವಭಕ್ತನ ದರ್ಶನವಾದಲ್ಲಿ
ಆ ಪಾತಕಂಗಳು ಬೆಂದು ಭಸ್ಮವಾಗಿ ಹೋಗುವವು ನೋಡಾ !
ಅದೆಂತೆಂದೊಡೆ : ಲಿಂಗಪುರಾಣೇ–
''ಉಪಪಾತಕ ಕೋಟೀಶ್ಚ ಬ್ರಹ್ಮಹತ್ಯಾಯುತಾನಿ ಚ ।
ದಹತ್ಯಶೇಷಪಾಪಾನಿ ಶಿವಭಕ್ತಸ್ಯ ದರ್ಶನಂ ॥''
ಎಂದುದಾಗಿ, ಶಿವಭಕ್ತನೇ ಶಿವನು ನೋಡಾ ಅಖಂಡೇಶ್ವರಾ. ॥ ೧೧೧ ॥

೩೫೫

ಸದ್‌ಭಕ್ತನಾದಾತನು ಸತ್‌ಪಾತ್ರದಾನಯುಕ್ತನಾಗಿರಬೇಕಲ್ಲದೆ
ಅಪಾತ್ರದಾನವ ಮಾಡಲಾಗದು ನೋಡಾ.
ಅಪಾತ್ರವೆಂದೊಡೆ : ನಾಲ್ಕು ವೇದವನೋದಿದ ಬ್ರಾಹ್ಮಣನಾದಡಾಗಲಿ,
ಶಿವಭಕ್ತಿಯಿಲ್ಲದವಂಗೆ ಗೋದಾನ ಭೂದಾನ ಸುವರ್ಣದಾನ
ಕನ್ನಿಕಾದಾನಂಗಳ ಕೊಟ್ಟರೆ ಮುಂದೆ ನರಕ ತಪ್ಪದು ನೋಡಾ.
ಅದೆಂತೆಂದೊಡೆ : ಲಿಂಗಪುರಾಣೇ–
''ಚತುರ್ವೇದಧರೋ ವಿಪ್ರಃ ಶಿವಭಕ್ತಿವಿವರ್ಜಿತಃ ।
ತಸ್ಮೈ ಕಾಂಚನದಾನೇನ ದಾತಾರು ನರಕಂ ವ್ರಜೇತ್ ॥''
ಎಂದುದಾಗಿ, ಅಪಾತ್ರದಾನ ನಾಯಕನರಕ ನೋಡಾ ಅಖಂಡೇಶ್ವರಾ ॥೧೧೨॥

೩೫೬

ಬ್ರಾಹ್ಮಣನ ದರ್ಶನ ಪಾಪದ ಪುಂಜ ನೋಡಾ.
ಬ್ರಾಹ್ಮಣನಿಗೆ ಕೊಟ್ಟದಾನ ಅಪಾತ್ರ ದೋಷದಾರಿದ್ರ್ಯತೆ ನೋಡಾ.
ಶಿವಭಕ್ತಿಯಿಲ್ಲದ ಬ್ರಾಹ್ಮಣನಿಗೆ ವಂದನೆಯ ಮಾಡಿದರೆ
ಮುಂದೆ ಶುನಿಶೂಕರ ಬಸಿರಲ್ಲಿ ಬಪ್ಪುದು ತಪ್ಪದು ನೋಡಾ.
ಅಂದೆಂತೆಂದೊಡೆ :
''ಶಿವಭಕ್ತಿವಿಹೀನಸ್ಯ ಬ್ರಾಹ್ಮಣಸ್ಯ ತು ದರ್ಶನಮ್ ।
ಕೃತ್ವಾ ತು ಮಾನವೋ ಯಾತಿ ಕೀಟಜನ್ಮ ಪದೇ ಪದೇ ॥''
ಎಂದುದಾಗಿ, ಇಂತಪ್ಪ ಹರಿಕುಲದ ಹಾರುವರ ಮುಖವ
ನೋಡಲಾಗದಯ್ಯ ಅಖಂಡೇಶ್ವರಾ. ॥ ೧೧೩ ॥

### ೩೫೭

ಜಂಗಮವೇ ಜಗದ್ಭರಿತನು ನೋಡಾ.
ಜಂಗಮವೇ ಜಗದೀಶ್ವರನು ನೋಡಾ.
ಜನನನಾಶ ಮರಣ ವಿರಹಿತನಾದ
ಒಬ್ಬ ಪರಮಜಂಗಮನ ದರ್ಶನವ ಮಾಡಿದರ
ಒಂದು ಕೋಟಿ ಲಿಂಗಂಗಳ ದರ್ಶನವಾದಂತೆ ನೋಡಾ.
ಆ ಜಂಗಮದ ಚರಣಕಮಲದ ಮೇಲೆ ಲಲಾಟವನ್ನಿಟ್ಟು
ಶರಣುಮಾಡಿದರೆ ಶತಕೋಟಿ ದೋಷ ಪರಿಹಾರ ನೋಡಾ.
ಅದೆಂತೆಂದೊಡೆ :
''ಪ್ರಭಾತೇ ಜಂಗಮೋ ದೃಷ್ಟೇ ಕೋಟಿಲಿಂಗಸ್ಯ ದರ್ಶನಮ್ ।
ಲಲಾಟೇ ಚರಣಮಧ್ಯೇತು ಕೋಟಿಕರ್ಮ ವಿನಶ್ಯತಿ ॥''
ಎಂದುದಾಗಿ, ಇಂತಪ್ಪ ಪರತರ ಪರಂಜ್ಯೋತಿ ಜಂಗಮವು
ನೀನೇ ಅಯ್ಯ ಅಖಂಡೇಶ್ವರಾ. ॥ ೧೧೪ ॥

### ೩೫೮

ಚತುರ್ವೇದಿಗಳಾದ ಶತಕೋಟಿ ಬ್ರಾಹ್ಮಣರಿಗೆ
ನಿತ್ಯ ಭೋಜನ ಮಾಡಿಸಿದ ಫಲವು,
ಒಬ್ಬ ಜಂಗಮಕ್ಕೆ ತುತ್ತು ಭಿಕ್ಷವ ನೀಡಿದ ಫಲಕ್ಕೆ ಸರಿಯಿಲ್ಲ ನೋಡಿರೋ !
ಸಪ್ತಕೋಟಿ ಕೆರೆಯ ಕಟ್ಟಿಸಿದ ಫಲವು,
ಒಬ್ಬ ಜಂಗಮಕ್ಕೆ ತುತ್ತು ಭಿಕ್ಷವ ನೀಡಿದ ಫಲಕ್ಕೆ ಸರಿಯಿಲ್ಲ ನೋಡಿರೋ !
ಅಶ್ವಯಜ್ಞಂಗಳ ಸಹಸ್ರಕೋಟಿ ಮಾಡಿದ ಫಲವು,
ಒಬ್ಬ ಜಂಗಮಕ್ಕೆ ತುತ್ತು ಭಿಕ್ಷವ ನೀಡಿದ ಫಲಕ್ಕೆ ಸರಿಯಿಲ್ಲ ನೋಡಿರೋ !
ಅದೆಂತೆಂದೊಡೆ :
''ಶತಕೋಟಿ ವೇದವಿಪ್ರಾಣಾಂ ತಟಾಕ ಸಪ್ತಕೋಟಿನಾಮ್ ।
ವಾಜಿಕೋಟಿ ಸಹಸ್ರಾಣಾಮೇಕಭಿಕ್ಷಾ ಸಮರ್ಪಣಮ್॥''
ಎಂದುದಾಗಿ,
ನಮ್ಮ ಅಖಂಡೇಶ್ವರಸ್ವರೂಪವಾದ ನಿಜಜಂಗಮಕ್ಕೆ ನೀಡಿದ ಫಲಕ್ಕೆ
ಇನ್ನಾವ ಫಲವು ಸರಿಯಿಲ್ಲ ನೋಡಿರೊ ! ॥ ೧೧೫ ॥

### ೩೫೯

ಮತ್ತೆ ಕೇಳಿರೋ, ಸತ್ಪಾತ್ರಜಂಗಮಕ್ಕೆ ಇತ್ತ ಪುಣ್ಯವು
ಸಾವಿರಕೊಡಪಾಲು ದಾನದ ಫಲವು.
ಮಲಹರಜಂಗಮಕ್ಕೆ ತುತ್ತು ಭಿಕ್ಷವ ನೀಡಿದಲ್ಲುಂಟು ನೋಡಿರೋ!
ನೂರುಕೊಡ ತುಪ್ಪದ ದಾನದ ಫಲವು,
ಮಲಹರಜಂಗಮಕ್ಕೆ ತುತ್ತು ಭಿಕ್ಷವ ನೀಡಿದಲ್ಲುಂಟು ನೋಡಿರೋ!

ಕೋಟಿಯಜ್ಞಂಗಳ ಮಾಡಿದ ಫಲವು,
ಮಲಹರಜಂಗಮಕ್ಕೆ ತುತ್ತು ಭಿಕ್ಷವ ನೀಡಿದಲ್ಲುಂಟು ನೋಡಿರೋ !
ಅದೆಂತೆಂದೊಡೆ :
''ಕ್ಷೀರಕುಂಭಸಹಸ್ರೇಣ ಘೃತಕುಂಭಶತೈರಪಿ।
ಭಸ್ಮಾಂಗಿಭಿಕ್ಷಮಾತ್ರೇಣ ಕೋಟಿಯಜ್ಞಫಲಂ ಭವೇತ್ ॥''
ಎಂದುದಾಗಿ,
ಜಂಗಮಕ್ಕೆ ನೀಡಿ ನಮ್ಮ ಅಖಂಡೇಶ್ವರಲಿಂಗವನೊಲಿಸಿರೋ. ॥ ೧೧೬ ॥

೩೬೦

ತಂಗಿಗೆ ನೀರನೆರೆದರೆ ಅಂಗೈಯಲ್ಲಿ ಫಲವು ಕಾಣುವಂತೆ
ಜಂಗಮಕ್ಕೆ ಅನ್ನ ಉದಕಂಗಳ ನೀಡಿದ ಫಲವು
ಮೇರುಪರ್ವತಕ್ಕೆ, ಸಪ್ತಸಮುದ್ರಕ್ಕೆ ಸಮಾನವಹುದು.
ಅದಲ್ಲದೆ ಒಂದೊಂದು ಅಗುಳಿಗೆ
ಕೋಟ್ಯನುಕೋಟಿ ಯಜ್ಞಂಗಳ ಮಾಡಿದ ಫಲವಹುದು.
ಅದೆಂತೆಂದೊಡೆ :
''ಕ್ಷಿಪ್ತಂ ಕ್ಷಿಪ್ತಂ ಮಹಾದೇವಿ ಕೋಟಿಯಜ್ಞಫಲಂ ಭವೇತ್ ।
ಅಲ್ಪಬೀಜಾತ್ ಮಹಾವೃಕ್ಷೋ ಯಥಾ ಭವತಿ ಪಾರ್ವತೀ ॥''
ಮತ್ತಂ,
''ಅನ್ನಂ ವಾ ಜಲಮಾತ್ರಂ ವಾ ಯದ್ ದತ್ತಂ ಲಿಂಗಧಾರಿಣೇ ।
ತದನ್ನಂ ಮೇರುಸದೃಶಂ ತಜ್ಜಲಂ ಸಾಗರೋಪಮಮ್ ॥''
ಎಂದುದಾಗಿ,
ಜಂಗಮದಲ್ಲಿ ನಮ್ಮ ಅಖಂಡೇಶ್ವರಲಿಂಗದ ತೃಪ್ತಿ ನೋಡಾ. ॥ ೧೧೭ ॥

೩೬೧

ಜಂಗಮಕ್ಕೆ ನೀಡಿದ ತೃಪ್ತಿ ಜಗಕೆಲ್ಲ ತೃಪ್ತಿಯಾಯಿತ್ತು ಕಾಣಿರೋ !
ಜಂಗಮಕ್ಕೆ ನೀಡಿದ ತೃಪ್ತಿ
ಹರಿ ಸುರ ಬ್ರಹ್ಮಾದಿಗಳಿಗೆಲ್ಲ ತೃಪ್ತಿಯಾಯಿತ್ತು ಕಾಣಿರೋ !
ಜಂಗಮಕ್ಕೆ ನೀಡಿದ ತೃಪ್ತಿ ಸ್ವರ್ಗ ಮರ್ತ್ಯ ಪಾತಾಳ
ಸಚರಾಚರಂಗಳಿಗೆಲ್ಲ ತೃಪ್ತಿಯಾಯಿತ್ತು ನೋಡಿರೋ !
ಜಂಗಮಕ್ಕೆ ನೀಡಿದ ತೃಪ್ತಿ
ಸಾಕ್ಷಾತ್ಪರಬ್ರಹ್ಮ ಪರಶಿವಂಗೆ ತೃಪ್ತಿಯಾಯಿತ್ತು ನೋಡಿರೋ !
ಅದೆಂತೆಂದೊಡೆ :
''ಸುರತೃಪ್ತಂ ಬುಧಸ್ತೋಮಂ ಮಮ ತೃಪ್ತಂತು ವೈಷ್ಣವಮ್ ।
ಜಂಗಮಂತು ಜಗತ್ ತೃಪ್ತಂ ಶಿವತೃಪ್ತಂ ತು ಪದ್ಮಿನಿ ॥''
ಎಂದುದಾಗಿ,

ಇಂತಪ್ಪ ಜಂಗಮ ತೃಪ್ತಿಯಾದಡೆ
ನಮ್ಮ ಅಖಂಡೇಶ್ವರಲಿಂಗ ತೃಪ್ತಿಯಾಯಿತ್ತು ನೋಡಿರೋ ! ॥ ೧೧೮ ॥

೩೬೨

ಆಲಸ್ಯವೇತಕೋ ಲಿಂಗಪೂಜೆಮಾಡುವುದಕ್ಕೆ ?
ಆಲಸ್ಯವೇತಕೋ ಜಂಗಮವನರ್ಚಿಸುವುದಕ್ಕೆ ?
ಆಲಸ್ಯವೇತಕೋ ನಮ್ಮ ಅಖಂಡೇಶ್ವರಲಿಂಗವನೋಲಿಸುವುದಕ್ಕೆ ? ॥ ೧೧೯ ॥

೩೬೩

ಇಂದು ನಾಳೆಯೆಂಬ ಮಂದಬುದ್ಧಿಗೆ ಸಂದುಗೊಡದಿರಣ್ಣಾ.
ಅನಿತ್ಯಕಾಲವನರಿದು ಶ್ರೀ ಮಹಾದೇವನ ಪೂಜಿಸಿರಣ್ಣಾ.
ನೀರುಗುಳ್ಳೆಯಂತೆ ತೋರಿ ಅಡಗುವ ಅನಿತ್ಯಶರೀರದ ಭೋಗವು
ನಿತ್ಯವೆಂದು ನಚ್ಚಿ ಹೊತ್ತುಗಳೆದು ವ್ಯರ್ಥವಾಗಿ ಸತ್ತುಹೋಗದಿರಣ್ಣಾ.
ಕರ್ತೃ ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನಂಗಳ ಸವೆಸಿ
ನಿತ್ಯಪದವ ಸಾಧಿಸಿರಣ್ಣಾ ನಮ್ಮ ಅಖಂಡೇಶ್ವರಲಿಂಗದಲ್ಲಿ. ॥ ೧೨೦ ॥

೩೬೪

ಸಿರಿ ಬಂದೊದಗಿತ್ತೆಂದು ಹಿರಿದಾಗಿ ಹಿಗ್ಗಬೇಡ.
ಸಿರಿಯೆಂಬುದು ಕನಸಿನಪರಿಯಂತೆ ಕಂಡೆಯಾ ಎಲೆ ಮರುಳು ಮಾನವಾ.
ಇದನರಿತು ನಂಬಿ ಶ್ರೀ ಮಹಾದೇವನ ಪೂಜಿಸಿದರೆ
ಸ್ಥಿರವಾದ ಪದವನೀವ ನಮ್ಮ ಅಖಂಡೇಶ್ವರ. ॥ ೧೨೧ ॥

೩೬೫

ಮಡದಿ ಮಕ್ಕಳು, ಪಡೆದ ದ್ರವ್ಯವು ಎನ್ನೊಡವೆ ಎಂದು
ನಚ್ಚಬೇಡಿರೋ ಎಲೆ ಹುಚ್ಚು ಮಾನವರಿರಾ !
ಅವು ನಿಮ್ಮೊಡವೆಯಾದರೆ,
ನೀವು ಮಡಿದು ಹೋಗುವಾಗ ನಿಮ್ಮೊಡನೆ ಬಪ್ಪವೇ ಹೇಳಿರೋ ?
''ಅಸ್ಥಿರ ಜೀವನಂ ಲೋಕೇ ಅಸ್ಥಿರಂ ಧನಯೌವನಂ ।
ಅಸ್ಥಿರಾಃ ಪುತ್ರದಾರಾಶ್ಚ ಸತ್ಯಧರ್ಮಃ ಪುನಃ ಸ್ಥಿರಃ॥''
ಇದನರಿತು ತಡೆಯದೆ ಮೃಡನ ಸೇವೆಯ ಮಾಡಿದರೆ
ಕಡೆ ಮೊದಲಿಲ್ಲದ ಪದವು ದೊರಕೊಂಬುದು ನೋಡಿರೋ
ನಮ್ಮ ಅಖಂಡೇಶ್ವರಲಿಂಗದಲ್ಲಿ. ॥ ೧೨೨ ॥

೩೬೬

ಮಹೇಂದ್ರಜಾಲದಂತೆ ಕಣ್ಣಮುಂದೆ ಒಪ್ಪುವ
ಹುಸಿಯ ಸಂಸಾರದಲ್ಲಿಯೇ ಎಡ್ಡಾಗಬೇಡಿರೋ ಎಲೆ ಎಡ್ಡ ಪ್ರಾಣಿಗಳಿರಾ!

ಅಷ್ಟದಾಸೆಗೆ ದುಟ್ಟಿನ ಲಾಭವ ಕಳೆವರೇ ?
ಗುರುಲಿಂಗಜಂಗಮದ ಸೇವೆಯ ತೊರೆದು ಸಂಸಾರದಲ್ಲಿ ಬೆರೆದರೆ
ಮುಂದೆ ನರಕದಲ್ಲಿಕ್ಕುವ ನಮ್ಮ ಅಖಂಡೇಶ್ವರ. ॥ ೧೨೩ ॥

೩೬೭

ಸುರಚಾಪದಂತೆ ತೋರಿ ಅಡಗುವ ತನುವ ನೆಚ್ಚಬೇಡರೋ !
ಸಚ್ಚಿದಾನಂದ ಗುರುಲಿಂಗಜಂಗಮದ ಪೂಜೆಯ ನಿಚ್ಚ ನಿಚ್ಚ ಮಾಡಿದರೆ
ಮುಚ್ಚಿ ಮಹಾಪದವಿಯನೀವ ನಮ್ಮ ಅಖಂಡೇಶ್ವರ. ॥ ೧೨೪ ॥

೩೬೮

ಇಮ್ಮನ ಭಕ್ತಂಗೆ ಕರ್ಮದ ವಿಧಿ ಕಾಡುತ್ತಿರ್ಪುದು ನೋಡಾ !
ಆ ಇಮ್ಮನವಳಿದು ಒಮ್ಮನವಾಗಿ ನಿಮ್ಮನರಿತರೆ
ಕರ್ಮದವಿಧಿ ಬಿಟ್ಟೋಡಿತ್ತು ನೋಡಾ ಅಖಂಡೇಶ್ವರಾ. ॥ ೧೨೫ ॥

೩೬೯

ಅಂಜನಸಿದ್ಧಿಯ ಸಾಧಿಸುವ ಅಣ್ಣಗಳ ಕಣ್ಣಿನಕ್ಕೆ
ಮಂಜುಗವಿಸಿ ಹೊರಗಾದನು ನೋಡಾ ಪರಶಿವನು.
ಘುಟಿಕಾಸಿದ್ಧಿಯ ಸಾಧಿಸುವ ಅಣ್ಣಗಳ ಕಣ್ಣಿನಕ್ಕೆ
ಸಟೆಯ ತೋರಿಸಿ ಹೊರಗಾದನು ನೋಡಾ ಪರಶಿವನು.
ಯಂತ್ರ ಮಂತ್ರ ತಂತ್ರ ಸಿದ್ಧಿ ಪಾದ ಪತ್ಯವ ಸಾಧಿಸುವ ಅಣ್ಣಗಳ ಕಣ್ಣಿನಕ್ಕೆ
ಗಾಢ ಕತ್ತಲೆಗವಿಸಿ ಹೊರಗಾದನು ನೋಡಾ ಪರಶಿವನು.
ಭಕ್ತಿಸಿದ್ಧಿಯ ಸಾಧಿಸುವ ಅಣ್ಣಗಳ ಮನಕ್ಕೆ ಮುಕ್ತಿಯ ಬೆಳಗನೇ ತೋರಿ
ಒಳಗಾಗಿರ್ಪನು ನೋಡಾ ನಮ್ಮ ಅಖಂಡೇಶ್ವರನೆಂಬ ಪರಶಿವನು. ॥೧೨೬॥

೩೭೦

ವಿದ್ಯೆಯ ಬಹಳ ಕಲಿತಡೇನು ಭಕ್ತಿಯಲ್ಲಿ ಶುದ್ಧನಲ್ಲದವನು.
ಬುದ್ಧಿಯಲ್ಲಿ ವಿಶೇಷವೆನಿಸಿದಡೇನು ಭಕ್ತಿಯಲ್ಲಿ ಬಡವನಾದನು.
ಅರ್ಥದಲ್ಲಿ ಅಧಿಕನಾದಡೇನು ಕರ್ತೃಶಿವನ ನೆನೆಯದವನು.
ಮದ್ದುಗುಣಿಕೆಯ ತಿಂದ ಮದೋನ್ಮತ್ತರ
ಎನ್ನತ್ತ ತೋರದಿರಯ್ಯ ಅಖಂಡೇಶ್ವರಾ. ॥ ೧೨೭ ॥

೩೭೧

ಗಾಳಿ ಬೀಸುವ ವೇಳೆಯಲ್ಲಿ ತೂರಿಕೊಳ್ಳಿರೋ ಬೇಗ ಬೇಗ !
ಗಾಳಿ ನಿಮ್ಮಿಚ್ಛೆಯಲ್ಲ ಕೇಳಿರೋ ಜಾಳಮನುಜರಿರಾ.
ಅಂಗಕ್ಕೆ ಅಳಿವು ಬರುವುದು ದೂರವಿಲ್ಲ ನೋಡಿರೋ.
''ತ್ವರಿತಂ ಜೀವಿತಂ ಯಾತಿ ತ್ವರಿತಂ ಯಾತಿ ಯೌವನಮ್ ।

ತ್ವರಿತಂ ಯಾತಿ ಪ್ರಖ್ಯಾತಿಃ ತಸ್ಮಾತ್ಪೂಜಯ ಶಂಕರಮ್ ॥''
ಇದನರಿದು ಬೇಗ ಬೇಗ ಲಿಂಗವ ಪೂಜಿಸಿರೊ !
ಬೇಗ ಬೇಗ ಜಂಗಮವನೊಲಿಸಿರೋ !
ಅರುವುಳ್ಳ ಕಾಲಕ್ಕೆ ಬೇಗ ಬೇಗ
ನಮ್ಮ ಅಖಂಡೇಶ್ವರಲಿಂಗವ ಕೂಡಿರೋ. ॥ ೧೨೮ ॥

**೩೭೨**

ಮುನ್ನ ಪಡೆಯದ ಇನ್ನು ಬೇಡಿದರೆ ಬರ್ಪುದೆ
ಎಂದು ನುಡಿಯುತಿರ್ಪರಲ್ಲ.
ಮುನ್ನ ಶ್ರೀಗುರುಲಿಂಗಜಂಗಮವ ಮರೆತ ಕಾರಣ
ಇನ್ನು ಕೆಟ್ಟರಲ್ಲ ನಮ್ಮ ಅಖಂಡೇಶ್ವರಲಿಂಗವನರಿಯದ. ॥ ೧೨೯ ॥

**೩೭೩**

ಹಿಂದೆ ಗುರುಭಕ್ತಿ ಲಿಂಗಪೂಜೆ
ಜಂಗಮದಾಸೋಹವನರಿಯದ ಕಾರಣ
ಮುಂದೆ ಹುಟ್ಟುಗುರುಡನಾಗಿ ಕುಂಟನಾಗಿ ಕುಬ್ಜನಾಗಿ ನಪುಂಸಕನಾಗಿ
ದರಿದ್ರನಾಗಿ ಕುಲಹೀನನಾಗಿ ದೇಶಗೇಡಿಯಾಗಿ
ಬಹುರೋಗಿಯಾಗಿ ಮಹಾದುಃಖವಂಬಡುತಿರ್ಪರು ನೋಡಾ
ಅಖಂಡೇಶ್ವರಾ ನಿಮ್ಮನರಿಯದ ಮನುಜರು. ॥ ೧೩೦ ॥

**೩೭೪**

ಹಿಂದಣ ಜನ್ಮದಲ್ಲಿ ಗುರುಲಿಂಗಜಂಗಮವ
ಶಿವನೆಂದರಿದು ನಂಬಿ ಪೂಜಿಸಿದ ಕಾರಣ
ಮುಂದೆ ಹುಟ್ಟುವನು ಸತ್ಕುಲಜ ಬಲವಂತನಾಗಿ,
ಧನಧಾನ್ಯ ಸಕಲ ಭೋಗೈಶ್ವರ್ಯ ಉಳ್ಳವನಾಗಿ,
ಸಕಲಲೋಕಕ್ಕೆ ಮನ್ನಣೆ ಉಳ್ಳವನಾಗಿ,
ವಿದ್ಯಬುದ್ಧಿಯಲ್ಲಿ ವಿಶೇಷನಾಗಿ,
ಸತ್ಯ ಸದಾಚಾರ ಭಕ್ತಿಜ್ಞಾನ ಉಳ್ಳವನಾಗಿ,
ನಮ್ಮ ಅಖಂಡೇಶ್ವರನ
ಪೂರ್ಣ ಒಲುಮೆ ಉಳ್ಳವನಾಗಿರ್ಪನು ನೋಡಿರೋ. ॥ ೧೩೧ ॥

**೩೭೫**

ನುಡಿಯಲ್ಲಿ ಕರ್ಕಶವಿಲ್ಲದೆ ನಡೆಯಲ್ಲಿ ಬೇಸರವಾಗದ,
ಹಿಡಿದ ಭಕ್ತಿಯ ಕಡೆತನಕ ಬಿಡದ,
ಬಿಡತನ ಎಡರು ಕಂಟಕ ಬಂದಲ್ಲಿ
ಚಿಂತೆಯಿಂದ ಕಾಂತಿಗುಂದದ

ಅಡಿಗಡಿಗೆ ಶಿವನೆಂಬ ನುಡಿಯ ಮರೆಯದ
ಇರ್ಪ ಸದ್ಭಕ್ತಂಗೆ ಬೇಡಿದ ಪದವ ಕೊಡುವ ನಮ್ಮ ಅಖಂಡೇಶ್ವರ. ॥ ೧೩೨ ॥

**೩೭೬**

ಎನ್ನ ತನು ಎನ್ನ ಧನ ಎನ್ನ ಮನೆ
ಎನ್ನ ಸತಿ ಸುತರೆಂಬ ಮನಕ್ಕೆ
ಈಶ್ವರಭಕ್ತಿ ಭಿನ್ನವಾಯಿತ್ತು ನೋಡಾ!
ತನ್ನಮರೆದು ಇದಿರನರಿದು
ಒಡವೆಯಾತಂಗೆ ಒಡವೆಯ ಒಪ್ಪಿಸಿದೆಯಾದರೆ
ಕೂಡಿಕೊಂಡಿರ್ಪನು ನೋಡಾ ನಮ್ಮ ಅಖಂಡೇಶ್ವರನು. ॥ ೧೩೩ ॥

**೩೭೭**

ಇದಿರಿನಲ್ಲಿ ಜಂಗಮವು ಬರುವುದು ಕಂಡು
ಸದರನಿಳಿದು ನಡೆದು ಹೋಗಿ,
ಚರಣಕ್ಕೆರಗುವುದೆ ಉತ್ತಮಭಕ್ತಿ ಎನಿಸಿತ್ತು
ಇದ್ದ ಸ್ಥಾನದಲ್ಲಿಯೇ ಎದ್ದು ನಿಲ್ಲುವುದೆ
ಮಧ್ಯಮಭಕ್ತಿ ಎನಿಸಿತ್ತು
ಕುಳಿತಲ್ಲಿಯೇ ಕರಮುಗಿಯುವುದೆ
ಕನಿಷ್ಠಭಕ್ತಿಯನಿಸಿತ್ತು
ಈ ಮೂರುತರದ ಭಕ್ತಿಯಿಲ್ಲದ
ಗರ್ವದಿಂದ ಬರತುಕೊಂಡು ಕುಳಿತರೆ
ಮುಂದ ಹಿರಿಯ ಶೂಲದ ಮೇಲೆ ಕುಳ್ಳಿರಿಸುವನು
ನೋಡಾ ನಮ್ಮ ಅಖಂಡೇಶ್ವರ. ॥ ೧೩೪ ॥

**೩೭೮**

ಸರ್ವಲೋಕೋಪಕಾರವಾಗಿ ಶಿವನೇ ಜಂಗಮವಾಗಿ
ಬಂದನೆಂದರಿಯದವನ ಮುಖವ ನೋಡಲಾಗದು.
ಸರ್ವಲೋಕ ಪಾವನ ಮಾಡಲೋಸುಗ ಶಿವನೇ ಜಂಗಮವಾಗಿ
ಬಂದನೆಂದು ನಂಬದವನ ಅಂಗಳವ ಮೆಟ್ಟಲಾಗದು.
ಅದೆಂತೆಂದೊಡೆ :
''ಸರ್ವಲೋಕೋಪಕಾರಾಯ ಯೋ ದೇವಃ ಪರಮೇಶ್ವರಃ ।
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ ॥''
ಎಂದುದಾಗಿ,
ಇಂತಪ್ಪ ಜಂಗಮದ ಘನವರಿಯದ ಭಂಗಗೇಡಿಗಳ
ಭಕ್ತರೆಂದಡೆ ಭವಹಿಂಗದಯ್ಯಾ ಅಖಂಡೇಶ್ವರಾ. ॥ ೧೩೫ ॥

### ೩೭೯

ಮನೆಗೆ ಬಂದ ಜಂಗಮವ ಕಂಡು
ಮನದಲ್ಲಿ ಉದಾಸೀನವ ತಾಳಿ
ಮೋರೆಯನಪ್ಪನಿಕ್ಕಿದರೆ
ಜಾರಿಹೋಯಿತ್ತು ನೋಡಾ ಹಿಂದೆ ಮಾಡಿದ ಭಕ್ತಿ.
ಪಙ್ತಿಯಲ್ಲಿ ಕುಳಿತ ಜಂಗಮಕ್ಕೆ
ಒಂದ ನೀಡಿ ತಾನೊಂದನುಂಡರೆ
ಹುಳುಗೊಂಡದಲ್ಲಿಕ್ಕುವ ನೋಡಾ
ನಮ್ಮ ಅಖಂಡೇಶ್ವರ. ॥ ೧೩೬ ॥

### ೩೮೦

ಸದ್ಭಕ್ತನ ಸಹಜಸ್ವಭಾವದನಡೆ ಹೇಗಿರಬೇಕೆಂದಡೆ,
ಮನೆಗೆ ಬಂದ ಜಂಗಮವ ಕಂಡು
ಮನದಲ್ಲಿ ಸಂತೋಷವ ತಾಳಬೇಕು.
ಮದುವೆ ಮಾಂಗಲ್ಯ ಒಸಗೆ ಉತ್ಸಾಹದಂತ
ಹರ್ಷಾಬ್ಧಿ ತುಂಬಿ ತುಳುಕಿ ಹೊರಸೂಸಬೇಕು.
ಇಂದು ಎಮ್ಮ ಮನೆಗೆ ಮಹಾಪುಣ್ಯದ ಫಲವು ಬಂದು ತುಂಬಿತೆಂದು
ಕುಣಿಕುಣಿದು ನೋಡಿ ಹಾಡಿ ಹರಸಬೇಕು.
ಸತಿಸುತರು ಸಹವಾಗಿ ಒಡಗೂಡಿ ಭಕ್ತಿಯ ಮಾಡಿ
ನಮ್ಮ ಅಖಂಡೇಶ್ವರಲಿಂಗವನೊಲಿಸಬೇಕು. ॥ ೧೩೭ ॥

### ೩೮೧

ಕೋಳಿ ಕೂಗುವುದು ಬೆಳಗಿನ ವೇಳೆಯನರಿದು.
ಕತ್ತೆ ಕೂಗುವುದು ತನ್ನ ಹೊತ್ತಿನ ಗೊತ್ತನರಿದು.
ಶಿವಭಕ್ತನಾದ ಬಳಿಕ ತನ್ನ ಅರುಹು ಕುರುಹಿನ
ಭಕ್ತಿ ಮುಕ್ತಿಯ ಗೊತ್ತನರಿಯದ ಬಳಿಕ
ಆ ಕೋಳಿ ಕತ್ತೆಗಳಿಂದ ಕರಕಷ್ಟ ನೋಡಾ
ಅಖಂಡೇಶ್ವರಾ. ॥ ೧೩೮ ॥

### ೩೮೨

ಲಿಂಗ ಜಂಗಮಕ್ಕೆ ಮಾಡಿದ ಭಕ್ತಿ
ಮನಕೆ ಮನವೇ ಸಾಕ್ಷಿಯಾಗಿರಬೇಕಲ್ಲದೆ,
ಇದಿರಿಟ್ಟು ನುಡಿಯಲಾಗದು.
ಅದೇನು ಕಾರಣವೆಂದರೆ :
ಬಡವಂಗೆ ಭಾಗ್ಯ ದೊರಕೊಂಡಂತಿರಬೇಕಲ್ಲದೆ,

ಎನ್ನ ಪದಾರ್ಥವ ನಾನು ಮಾಡಿದೆನು ಅವರು ಕೈಕೊಂಡರೆಂದು
ತನ್ನ ಖ್ಯಾತಿ ಭಕ್ತಿಯನು
ಮನ ಒಗ್ಗಿ ಅನ್ಯರೊಡನೆ ಹೇಳಿಕೊಂಡರೆ
ಶಿವನೊಪ್ಪಿಕೊಳ್ಳನು, ಪುರಾತನರು ಮೆಚ್ಚರು.
ಅಂತಪ್ಪ ಖ್ಯಾತಿಭಕ್ತನ ಡಂಭಕದ ಭಕ್ತಿಯೆಂತಾಯಿತ್ತೆಂದರೆ,
ಹಾವಸಗಲ್ಲ ಮೆಟ್ಟಿ ಜಾರಿ ಬಿದ್ದು
ಕೊಡನೊಡೆದಂತಾಯಿತ್ತು ಕಾಣಾ ಅಖಂಡೇಶ್ವರಾ. ॥ ೧೩೯ ॥

### ೩೮೩

ಧರ್ಮಾರ್ಥವಾಗಿ ದೀಕ್ಷೆಯ ಮಾಡಬೇಕಲ್ಲದೆ,
ಆಶಾರ್ಥವಾಗಿ ದೀಕ್ಷೆಯ ಮಾಡಲಾಗದಯ್ಯ.
ಜ್ಞಾನಾರ್ಥವಾಗಿ ಶಾಸ್ತ್ರವನೋದಬೇಕಲ್ಲದೆ,
ವಾದಾರ್ಥವಾಗಿ ಶಾಸ್ತ್ರವನೋದಲಾಗದಯ್ಯ.
ಮೋಕ್ಷಾರ್ಥವಾಗಿ ಶಿವಪೂಜೆಯ ಮಾಡಬೇಕಲ್ಲದೆ,
ಡಂಭಾರ್ಥವಾಗಿ ಶಿವಪೂಜೆಯ ಮಾಡಲಾಗದಯ್ಯ.
ಅದೆಂತೆಂದೊಡೆ :
''ಆಶಾರ್ಥಂ ದೀಯತೇ ದೀಕ್ಷಾ ದಂಭಾರ್ಥಂ ಪೂಜ್ಯತೇ ಶಿವಃ ।
ವಾದಾರ್ಥಂ ಪಠ್ಯತೇ ವಿದ್ಯಾ ಮೋಕ್ಷೋ ನಾಸ್ತಿ ವರಾನನೇ ॥
ಧರ್ಮಾರ್ಥಂ ದೀಯತೇ ದೀಕ್ಷಾ ಮೋಕ್ಷಾರ್ಥಂ ಪೂಜ್ಯತೇ ಶಿವಃ ।
ಜ್ಞಾನರ್ಥಂ ಪಠ್ಯತೇ ವಿದ್ಯಾ ಮೋಕ್ಷಸಿದ್ಧಿರ್ವರಾನನೇ ॥''
ಎಂದುದಾಗಿ, ಇಂತಪ್ಪ ಖ್ಯಾತಿ ಕೀರ್ತಿಯ, ಕಡೆಗೆ ನೂಂಕಿ
ನೀತಿಯ ನಿಜವನು ಅಂಗೀಕರಿಸಿ ಶಿವನನೊಲಿಸುವ ಭಾವವನರಿಯದೆ
ಸಂತೆಯ ಪಸಾರದಂತೆ ಸರ್ವರು ಮೆಚ್ಚಲೆಂದು ಹಾರೈಸಿ
ಹರಹಿಕೊಂಡು ಮಾಡುವ ಡಂಭಕನ ಪೂಜೆ
ಶಂಭುವಿಂಗೆ ಮುಟ್ಟಲರಿಯದು ನೋಡಾ ಅಖಂಡೇಶ್ವರಾ. ॥ ೧೪೦ ॥

### ೩೮೪

ಲಿಂಗಾರ್ಚನೆಯ ಮಾಡಿದ ಬಳಿಕ
ಜಂಗಮಾರ್ಚನೆಯ ಮಾಡಲೇಬೇಕು.
ಜಂಗಮದ ಪಾದೋದಕ ಪ್ರಸಾದವ ಕೊಳ್ಳಲೇಬೇಕು.
ನಿಚ್ಚ ನಿಚ್ಚ ಲಿಂಗದರ್ಚನೆಯ ಮಾಡಿ
ನಿಚ್ಚ ನಿಚ್ಚ ಜಂಗಮದರ್ಚನೆ ಪಾದೋದಕ ಪ್ರಸಾದವಿಲ್ಲದ ಬಳಿಕ
ಆ ಲಿಂಗಾರ್ಚನೆ ಎಂತಾಯಿತ್ತೆಂದಡೆ,
ಮೂಗಕೊಯ್ದು ಮೋರೆಯಂತೆ ನೋಡಾ ಅಖಂಡೇಶ್ವರಾ. ॥ ೧೪೧ ॥

### ೩೮೫

ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು.
ಹೊರಗೆ ಜಂಗಮದ ಮಾಟದಲ್ಲಿ ತನುವಿಡಿದಿರಬೇಕು.
ಈ ಉಭಯವ ಒಂದರೊಳಗೊಂದು ಭೇದಿಸಿಕೊಂಡು
ತಾನಳಿದು ಮಾಡುವ ಭಕ್ತನ ಕೂಡಿಕೊಂಡಿರ್ಪನು ನೋಡಾ
ಅಖಂಡೇಶ್ವರಾ. ॥೧೪೨॥

### ೩೮೬

ಆದಿಯಲ್ಲಿಯು ನೀನೇ ದೇವನು ನಾನೇ ಭಕ್ತನಯ್ಯ ;
ಅನಾದಿಯಲ್ಲಿಯು ನೀನೇ ದೇವನು ನಾನೇ ಭಕ್ತನಯ್ಯ ;
ಆದಿಯನಾದಿಯಿಂದತ್ತಲು ನೀನೇ ದೇವನು ನಾನೇ ಭಕ್ತನಾಗಿ
ನಿಮ್ಮೊಳಗೆ ಅಡಗಿರ್ದೆನಯ್ಯಾ ಅಖಂಡೇಶ್ವರಾ. ॥ ೧೪೩ ॥

### ೩೮೭

ನಿಮ್ಮ ತೊತ್ತಿನ ತೊತ್ತು ಪಡಿಮೊತ್ತೆಂದು
ಎನ್ನ ಕೈವಿಡಿದು ತಲೆದಡಹಿ ವರದಭಯಹಸ್ತವ ಕೊಟ್ಟು,
ಮರ್ತ್ಯಲೋಕಕ್ಕೆ ಎನ್ನ ಕಳುಹಿದಿರಾಗಿ,
ನೀನೇ ಕರ್ತನು ನಾನೇ ಭೃತ್ಯನು ;
ನೀನೇ ಒಡೆಯನು ನಾನೇ ಬಂಟನು ;
ನೀನೇ ಆಳ್ದನು ನಾನೇ ಆಳು ;
ನೀನೇ ದೇವನು ನಾನೇ ಭಕ್ತನಾಗಿ,
ನೀನು ಮಾಡೆಂದ ಮಣಿಹವ ಮಾಡುತಿರ್ಪೆನು ;
ನೀನು ಬೇಡೆಂದ ಮಣಿಹವ ಬಿಡುತಿರ್ಪೆನು;
ನೀನು ಹೇಳಿದ ತೊತ್ತುಸೇವೆಯ ಮಾಡುತಿಪ್ಪೆನಯ್ಯ
ಅಖಂಡೇಶ್ವರಾ. ॥ ೧೪೪ ॥

### ೩೮೮

ಕಾಮವುಳ್ಳಂಗೆ ಲಿಂಗದಪ್ರೇಮವಿನ್ನೆಲ್ಲಿಯದೊ ?
ಕ್ರೋಧವುಳ್ಳವಂಗೆ ಜಂಗಮದಪ್ರೇಮವಿನ್ನೆಲ್ಲಿಯದೊ ?
ಮದಮತ್ಸರವುಳ್ಳವಂಗೆ ಪ್ರಸಾದದಪ್ರೇಮವಿನ್ನೆಲ್ಲಿಯದೊ ?
ಇಂತೀ ಗುಣವರತಲ್ಲದೆ ಸಹಜಭಕ್ತಿ
ನಲೆಗೊಳ್ಳದಯ್ಯ ಅಖಂಡೇಶ್ವರಾ. ॥ ೧೪೫ ॥

### ೩೮೯

ಲಿಂಗಪ್ರೇಮವುಳ್ಳವಂಗ ಭವಬಂಧನವಿಲ್ಲ ;
ಜಂಗಮಪ್ರೇಮವುಳ್ಳವಂಗ ಸಂಸಾರದ ತೊಡಕಿಲ್ಲ.

ಪ್ರಸಾದಪ್ರೇಮವುಳ್ಳವಂಗೆ ಇಹಪರದ ಎಡೆಯಾಟವಿಲ್ಲ.
ತಾನಿಲ್ಲದೆ ಮಾಡುವ ಭಕ್ತಂಗೆ
ಆವಾವ ಫಲಪದದ ಹಂಗಿಲ್ಲವಯ್ಯ ಅಖಂಡೇಶ್ವರಾ. ॥ ೧೪೬ ॥

೩೯೦

ಲಿಂಗಪ್ರೇಮಿಗಳನಂತರುಂಟು ಜಗದೊಳಗೆ,
ಜಂಗಮಪ್ರೇಮಿಗಳಾರನೂ ಕಾಣೆನಯ್ಯ.
ಲಿಂಗಪೂಜಕರನಂತರುಂಟು ಜಗದೊಳಗೆ,
ಜಂಗಮಪೂಜಕರಾರನೂ ಕಾಣೆನಯ್ಯ.
ಲಿಂಗಪ್ರಾಣಿಗಳನಂತರುಂಟು ಜಗದೊಳಗೆ,
ಜಂಗಮಪ್ರಾಣಿಗಳಾರನೂ ಕಾಣೆನಯ್ಯ.
ಲಿಂಗದ ಬಾಯಿ ಜಂಗಮವೆಂದರಿದು
ಮಾಡಿ ಮನವಳಿದು ಘನವಾದ ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೧೪೭ ॥

೩೯೧

ಲಿಂಗಾರ್ಚನೆಯಿಂದ ಜಂಗಮಾರ್ಚನೆಯಧಿಕ ನೋಡಾ.
ಅದೆಂತೆಂದೊಡೆ :
ಆದಿಯಲ್ಲಿ ಲಿಂಗಾರ್ಚನೆಯಮಾಡಿದ
ತಾರಜ ತಂಡಜ ರೋಮಜರಿಗೆ ಪ್ರಳಯವಾಯಿತ್ತು.
ಆದಿಯಲ್ಲಿ ಲಿಂಗಾರ್ಚನೆಯಮಾಡಿದ
ನವಕೋಟಿಬ್ರಹ್ಮರಿಗೆ ಪ್ರಳಯವಾಯಿತ್ತು.
ಆದಿಯಲ್ಲಿ ಲಿಂಗಾರ್ಚನೆಯಮಾಡಿದ
ಶತಕೋಟಿ ನಾರಾಯಣರಿಗೆ ಪ್ರಳಯವಾಯಿತ್ತು.
ಆದಿಯಲ್ಲಿ ಲಿಂಗಾರ್ಚನೆಯಮಾಡಿದ
ಅನಂತಕೋಟಿ ರುದ್ರರಿಗೆ ಪ್ರಳಯವಾಯಿತ್ತು.
ಇದು ಕಾರಣ ಲಿಂಗಾರ್ಚನೆ ಪ್ರಳಯಕ್ಕೊಳಗು,
ಜಂಗಮಾರ್ಚನೆ ಪ್ರಳಯಾತೀತವೆಂದರಿದು
ಜಂಗಮವೇ ಪ್ರಾಣವೆಂದು ನಂಬಿ,
ಅನಂತಕೋಟಿ ಪ್ರಳಯಂಗಳ ಮೀರಿ,
ಪರಬ್ರಹ್ಮವನೊಡಗೂಡಿದ ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೧೪೮ ॥

೩೯೨

ಜಂಗಮವ ಕಂಡು ವಂದನೆಯ ಮಾಡಿದರೆ
ಮುಂದೆ ಭಕ್ತಿಮುಕ್ತಿಪುಣ್ಯದ ಫಲವು ದೊರೆಕೊಂಬುದು ನೋಡಾ !

ಜಂಗಮವ ಕಂಡು ನಿಂದೆಯ ಮಾಡಿದರೆ
ಮುಂದೆ ಬಂಧನಕ್ಕೊಳಗಪ್ಪುದು ತಪ್ಪದು ನೋಡಾ
ಅಖಂಡೇಶ್ವರಾ. ॥ ೧೪೯ ॥

**೩೯೩**

ಜಂಗಮವೇ ಜಗದೀಶನೆಂದು ನಂಬದವನ
ಜನ್ಮವ ಸುಡುಸುಡು !
ಜಂಗಮವೇ ಜಗಭರಿತನೆಂದು ನಂಬದವನ
ಜನ್ಮ ವ್ಯರ್ಥಜನ್ಮ !
ಜಂಗಮವೇ ಶಿವನೆಂದು ನಂಬದವನ
ಮನ ಸುಡುಗಾಡು ನೋಡಾ
ಅಖಂಡೇಶ್ವರಾ. ॥ ೧೫೦ ॥

**೩೯೪**

ಸಂಗನಬಸವಣ್ಣನಂತೆ ಸದ್‌ಭಕ್ತನೆಂದೆನಿಸಯ್ಯ ಎನ್ನ.
ಮಡಿವಾಳಮಾಚಯ್ಯಗಳಂತೆ
ವೀರಮಾಹೇಶ್ವರನೆಂದೆನಿಸಯ್ಯ ಎನ್ನ.
ಚೆನ್ನಬಸವಣ್ಣನಂತೆ ಪರಮಪ್ರಸಾದಿಯೆಂದೆನಿಸಯ್ಯ ಎನ್ನ.
ಸಿದ್ಧರಾಮನಂತೆ ಶುದ್ಧಪ್ರಾಣಲಿಂಗಿಯೆಂದೆನಿಸಯ್ಯ ಎನ್ನ.
ಉರಿಲಿಂಗಪೆದ್ದಯ್ಯಗಳಂತೆ ಉರುತರದ ಶರಣನೆಂದೆನಿಸಯ್ಯ ಎನ್ನ.
ಅಜಗಣ್ಣತಂದೆಗಳಂತ ನಿಜಲಿಂಗೈಕ್ಯನೆಂದೆನಿಸಯ್ಯ ಎನ್ನ.
ನಿಜಗುಣಯೋಗಿಗಳಂತೆ ಪರಮ ಆರೂಢನೆಂದೆನಿಸಯ್ಯ ಎನ್ನ.
ಅಕ್ಕಮಹಾದೇವಿಯಂತೆ ನಿಷ್ಕಾಮಿಯೆಂದೆನಿಸಯ್ಯ ಎನ್ನ.
ಪ್ರಭುದೇವರಂತೆ ಪರಿಪೂರ್ಣನೆಂದೆನಿಸಯ್ಯ ಎನ್ನ.
ಇಂತಿವರ ಕಾರುಣ್ಯದ ನಿಲವನೇ ಕರುಣಿಸಿ
ನಿಮ್ಮ ಗಣಂಗಳ ಸಮ್ಮೇಳನದಲ್ಲಿರಿಸಯ್ಯ ಎನ್ನ ಅಖಂಡೇಶ್ವರಾ. ॥ ೧೫೧ ॥

**೩೯೫**

ಸ್ವರ್ಗಕ್ಕೆ ಏಳು ಸೋಪಾನವಿರ್ಪುದನು ಆರೂ ಅರಿಯರಲ್ಲ !
ಅದು ಹೇಗೆಂದೊಡೆ :
ಜಂಗಮವ ಕಾಣುತ್ತ ಸದ್‌ಭಕ್ತನು ಕುಳಿತಾಸನವ ಬಿಟ್ಟು
ಇದಿರೆದ್ದು ನಡೆವುದೇ ಒಂದನೆಯ ಸೋಪಾನ.
ಮನಕರಗಿ ತನು ಉಬ್ಬಿ ಕಂಗಳಲ್ಲಿ ಪರಿಣಾಮಜಲವುಕ್ಕಿ
ಅವರ ಚರಣಕಮಲದ ಮೇಲೆ ಸುರಿವಂತ
ಸಾಷ್ಟಾಂಗದಿಂದೆ ನಮಸ್ಕರಿಸುವುದೇ ಎರಡನೆಯ ಸೋಪಾನ.

ಆ ಜಂಗಮವ ತನ್ನ ಮಠಕ್ಕೆ ಬಿಜಯಂಗೈಸಿ
ಉನ್ನತಾಸನದ ಗದ್ದುಗೆಯ ಮೇಲೆ ಕುಳ್ಳಿರಿಸಿ
ಪಾದಪ್ರಕ್ಷಾಲನವ ಮಾಡುವುದೇ ಮೂರನೆಯ ಸೋಪಾನ.
ಆ ಜಂಗಮದೇವರ ಅಷ್ಟವಿಧಾರ್ಚನ –
ಷೋಡಶೋಪಚಾರಗಳಿಂದರ್ಚಿಸಿ,
ಪಾದತೀರ್ಥವ ಕೊಂಬುವುದೇ ನಾಲ್ಕನೆಯ ಸೋಪಾನ.
ಆ ಜಂಗಮಕ್ಕೆ ಷ್ಟುಷ್ಟಾನ್ನಪಾನಂಗಳಿಂದೆ
ತೃಪ್ತಿಪಡಿಸುವುದೇ ಐದನೆಯ ಸೋಪಾನ.
ಆ ಜಂಗಮದ ಒಕ್ಕುಮಿಕ್ಕಪ್ರಸಾದವ ಕೊಂಬುವುದೇ
ಆರನೆಯ ಸೋಪಾನ.
ಆ ಜಂಗಮದಲ್ಲಿ ಅನುಭಾವವ ಬೆಸಗೊಂಬುವುದೇ
ಏಳನೆಯ ಸೋಪಾನ.
ಇಂತೀ ಸಪ್ತಸೋಪಾನಂಗಳ ಬಲ್ಲ ಸದ್ಭಕ್ತಂಗೆ
ಕೈಲಾಸ ಕರತಾಳಮಳಕವಲ್ಲದೆ
ತನುವ ಸವೆಸದೆ, ಮನವ ದಂಡಿಸದೆ,
ಧನವ ಸಮರ್ಪಿಸದೆ,
ಮಿಥ್ಯಾಸಂಸಾರದಲ್ಲಿ ಸಿಲ್ಕಿ ಹೊತ್ತುಗಳೆದು
ಹೊಡೆದಾಡಿ ಸತ್ತು ಹೋಗುವ
ವ್ಯರ್ಥಜೀವಿಗಳಿಗೆ ಇನ್ನೆತ್ತಣ ಕೈಲಾಸವಯ್ಯ ಅಖಂಡೇಶ್ವರಾ ? ॥ ೧೫೨ ॥

## ೩೯೬

ಲಿಂಗಪೂಜಕನಾದಡೆ ಜಂಗಮವನರ್ಚಿಸಬೇಕು.
ಲಿಂಗನಿಷ್ಠಾಪರನಾದಡೆ ಜಂಗಮದಲ್ಲಿ ವಿಶ್ವಾಸವನಿಡಬೇಕು.
ಲಿಂಗವ ಪೂಜಿಸಿ ಜಂಗಮವ ಮರೆತಡೆ
ಶಿರವಿಲ್ಲದ ದೇಹದಂತೆ ಕಾಣಾ ಅಖಂಡೇಶ್ವರಾ. ॥ ೧೫೩ ॥

## ೩೯೭

ಭಕ್ತಿಯ ಸ್ಥಳಕುಳವನರಿಯದೆ ಬರಿದೆ ಭಕ್ತರೆನಿಸಿಕೊಂಬ
ಮುಕ್ತಿಗೇಡಿಗಳನೇನೆಂಬೆನಯ್ಯ.
ಅನಾದಿಪರಶಿವನು ತನ್ನ ಲೀಲೆಯಿಂದ
ತಾನೆ ಗುರುಲಿಂಗಜಂಗಮವಾಗಿ ಬಂದನೆಂದರಿದು
ತನುಮನಧನವ ಸಮರ್ಪಿಸಿ ಘನಮುಕ್ತಿಯ ಪಡೆಯಲರಿಯದೆ,
ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳನೆ ಭುಂಜಿಸಿ,
ಸಂಸಾರವಿಷಯರಸವೆಂಬ ನೀರನೆ ಕುಡಿದು,

ಮಾಯಾಮೋಹವೆಂಬ ಮದವು ತಲೆಗೇರಿ
ಸೊಕ್ಕಿದೆಕ್ಕಲನಂತೆ ತಿರುಗುವ ನರಕಜೀವಿಗಳ
ಭಕ್ತರೆನಬಹುದೇ ಅಖಂಡೇಶ್ವರಾ ? || ೧೫೪ ||

೩೯೮

ತನುವ ಗುರುವಿಂಗೆ ಕೊಟ್ಟು, ಗುರುಭಕ್ತನಾಗಬೇಕು.
ಮನವ ಲಿಂಗಕ್ಕೆ ಕೊಟ್ಟು, ಲಿಂಗಭಕ್ತನಾಗಬೇಕು.
ಧನವ ಜಂಗಮಕ್ಕೆ ಕೊಟ್ಟು, ಜಂಗಮಭಕ್ತನಾಗಬೇಕು.
ಇಂತೀ ತ್ರಿವಿಧಭಕ್ತಿಯ ವರ್ಮವನರಿಯದವರ ಮೆಚ್ಚ
ನಮ್ಮ ಅಖಂಡೇಶ್ವರ. || ೧೫೫ ||

೩೯೯

ಗುರುವಿನಲ್ಲಿ ಗುಣವನರಸಿದಡೆ ಒಂದನೆಯ ಪಾತಕ.
ಲಿಂಗದಲ್ಲಿ ಶಿಲೆಯನರಸಿದಡೆ ಎರಡನೆಯ ಪಾತಕ.
ಜಂಗಮದಲ್ಲಿ ಕುಲವನರಸಿದಡೆ ಮೂರನೆಯ ಪಾತಕ.
ಪಾದೋದಕದಲ್ಲಿ ಸೂತಕವನರಸಿದಡೆ ನಾಲ್ಕನೆಯ ಪಾತಕ.
ಪ್ರಸಾದದಲ್ಲಿ ರುಚಿಯನರಸಿದಡೆ ಐದನೆಯ ಪಾತಕ.
ಇಂತೀ ಪಂಚಮಹಾಪಾತಕರ ಎನಗೊಮ್ಮೆ
ತೋರದಿರಯ್ಯ ಅಖಂಡೇಶ್ವರಾ. || ೧೫೬ ||

೪೦೦

ಗುರುವಿನಲ್ಲಿ ಭಕ್ತಿಯಿಲ್ಲ, ಲಿಂಗದಲ್ಲಿ ನಿಷ್ಠೆಯಿಲ್ಲ,
ಜಂಗಮದಲ್ಲಿ ವಿಶ್ವಾಸವಿಲ್ಲ, ಪಾದೋದಕ ಪ್ರಸಾದದಲ್ಲಿ ಪ್ರೇಮವಿಲ್ಲ,
ಬರಿದೆ ಭಕ್ತರೆಂಬ ಭವಭಾರಿಗಳ ಮುಖವ
ನೋಡಲಾಗದಯ್ಯ ಅಖಂಡೇಶ್ವರಾ. || ೧೫೭ ||

೪೦೧

ಭಕ್ತನಾಗಬೇಕು ಭವವ ಹರಿದು.
ಭಕ್ತನಾಗಬೇಕು ಸಕಲ ಪ್ರಪಂಚವ ಮರೆದು.
ಭಕ್ತನಾಗಬೇಕು ಆಶಾಪಾಶವ ಹರಿದು.
ಭಕ್ತನಾಗಬೇಕು ನಮ್ಮ ಅಖಂಡೇಶ್ವರನ ದಿವ್ಯಪಾದವ ನಂಬಿ. || ೧೫೮ ||

೪೦೨

ಸಟೆಯನಾಡದಾತ ಭಕ್ತ
ಕುಟಿಲ ಕುಹಕವ ಮರೆದಾತ ಭಕ್ತ
ನಿಟಿಲಾಕ್ಷನ ಧ್ಯಾನದಲ್ಲಿ ಇದ್ದಾತ ಭಕ್ತ
ನಮ್ಮ ಅಖಂಡೇಶ್ವರನ ಭಕ್ತಿಭಾವದಲ್ಲಿದ್ದಾತನೇ ಸದ್ಭಕ್ತ ನೋಡಾ. || ೧೫೯ ||

೪೦೩

ಶಿವಭಕ್ತನೆನಿಸುವಾತಂಗೆ ಆವುದು ಚಿಹ್ನವೆಂದೊಡೆ :
ಸದಾಚಾರದಲ್ಲಿ ನಡವುದು, ಶಿವನಲ್ಲಿ ಭಕ್ತಿಯಿಂದಿರುವುದು,
ಲಿಂಗಜಂಗಮ ಒಂದೆಯೆಂದು ಕಾಂಬುದು.
ವಿಭೂತಿ ರುದ್ರಾಕ್ಷಿ ಲಿಂಗಧಾರಣ ಮುಂತಾದ
ಶಿವಲಾಂಛನವನುಳ್ಳ ಶಿವಶರಣರಲ್ಲಿ
ಅತಿಭಕ್ತಿಯಾಗಿರ್ಪಾತನೇ ಸದ್‌ಭಕ್ತನೋಡಾ !
ಅದೆಂತೆಂದೊಡೆ :
"ಸದಾಚಾರಃ ಶಿವೇ ಭಕ್ತಿರ್ಲಿಂಗೇ ಜಂಗಮ ಏಕಧೀಃ।
ಲಾಂಛನೇ ಶರಣೇ ಭಕ್ತಿ ಭಕ್ತಸ್ಥಲಮನುತ್ತಮಮ್ ॥"
ಎಂದುದಾಗಿ,
ಇಂತಪ್ಪ ಸಹಜ ಭಕ್ತರ ತೋರಿ ಬದುಕಿಸಯ್ಯ
ಎನ್ನ ಅಖಂಡೇಶ್ವರಾ. ॥ ೧೬೦ ॥

೪೦೪

ಗುರುವಿಂಗೆ ತನುವನರ್ಪಿಸಿದಲ್ಲದೆ
ತನುವಿನ ವಾಸನೆ ಹರಿಯದು.
ಲಿಂಗಕ್ಕೆ ಮನವನರ್ಪಿಸಿದಲ್ಲದೆ ಮನದ ವಾಸನೆ ಹರಿಯದು.
ಜಂಗಮಕ್ಕೆ ಧನವನರ್ಪಿಸಿದಲ್ಲದೆ ಧನದ ವಾಸನೆ ಹರಿಯದು.
ಇದು ಕಾರಣ ತ್ರಿವಿಧಕ್ಕೆ ತ್ರಿವಿಧವನರ್ಪಿಸಿ
ತ್ರಿವಿಧ ವಾಸನೆಯ ಹರಿದು,
ತ್ರಿವಿಧವು ಒಂದಾದ ಘನವನೊಡಗೂಡಬಲ್ಲಡೆ
ಸದ್ಭಕ್ತನೆಂಬೆನಯ್ಯ ಅಖಂಡೇಶ್ವರಾ. ॥ ೧೬೧ ॥

೪೦೫

ಹರಹರಾ, ಎನ್ನ ಬಡಮನದ ಅಳಿಯಾಸೆಯ ನೋಡಾ !
ಸುರಧೇನುವಿದ್ದು ಬರಡಾಕಳಿಗೆ ಆಸೆಮಾಡುವಂತೆ,
ಕಲ್ಪವೃಕ್ಷವಿದ್ದು ಕಾಡಮರಕ್ಕೆ ಕೈಯಾನುವಂತೆ,
ಚಿಂತಾಮಣಿಯಿದ್ದು ಗಾಜಿನಮಣಿಯ ಬಯಸುವಂತೆ,
ಎನ್ನ ಕರ ಮನ ಭಾವದಲ್ಲಿ ನೀವು ಭರಿತರಾಗಿರ್ದುದ
ಮರೆತು ನರರಿಗಾಸೆಯ ಮಾಡಿ ಕೆಟ್ಟೆನಯ್ಯ ಅಖಂಡೇಶ್ವರಾ. ॥ ೧೬೨ ॥

೪೦೬

ಶಿವಶಿವಾ, ನೀವೆನ್ನ ನಡೆಯೊಳಗೆ ನಡೆರೂಪವಾಗಿರ್ದು
ನಡೆಪರುಷವ ಕರುಣಿಸಯ್ಯ ದೇವ.

ಎನ್ನ ನುಡಿಯೊಳಗೆ ನುಡಿರೂಪಾಗಿರ್ದು
ನುಡಿಪರುಷವ ಕರುಣಿಸಯ್ಯ ದೇವ.
ಎನ್ನ ನೋಟದೊಳಗೆ ನೋಟರೂಪಾಗಿರ್ದು
ನೋಟಪರುಷವ ಕರುಣಿಸಯ್ಯ ದೇವ.
ಎನ್ನ ಹಸ್ತದೊಳಗೆ ಹಸ್ತರೂಪಾಗಿರ್ದು
ಹಸ್ತಪರುಷವ ಕರುಣಿಸಯ್ಯ ದೇವ.
ಎನ್ನ ಮನದೊಳಗೆ ಮನರೂಪಾಗಿರ್ದು
ಮನಪರುಷವ ಕರುಣಿಸಯ್ಯ ದೇವ.
ಎನ್ನ ಭಾವದೊಳಗೆ ಭಾವರೂಪಾಗಿರ್ದು
ಭಾವಪರುಷವ ಕರುಣಿಸಯ್ಯ ದೇವಾ ಅಖಂಡೇಶ್ವರಾ. || ೧೬೩ ||

೪೦೭

ನೀನೊಲಿದಡೆ ಕಲ್ಲೆಲ್ಲ ಕನಕವಯ್ಯ.
ನೀನೊಲಿದಡೆ ಹುಲ್ಲೆಲ್ಲ ರಾಜಾನ್ನವಯ್ಯ.
ನೀನೊಲಿದಡೆ ಕೊರಡೆಲ್ಲ ಕಲ್ಪವೃಕ್ಷವಯ್ಯ.
ನೀನೊಲಿದಡೆ ಬರಡೆಲ್ಲ ಕಾಮಧೇನುವಯ್ಯ.
ನೀನೊಲಿದಡೆ ಏನುಂಟು ಏನಿಲ್ಲವಯ್ಯ ಅಖಂಡೇಶ್ವರಾ. || ೧೬೪ ||

೪೦೮

ನೀನೊಲಿದಡೆ ಜಗವೆಲ್ಲ ಕೊಂಡಾಡುತಿರ್ಪುದು ನೋಡಾ ;
ನೀನೊಲಿಯದಿರ್ದಡೆ ಜಗವೆಲ್ಲ ಹೊತ್ತುಗಲ್ಲ
ಹೊತ್ತಿರ್ಪುದು ನೋಡಾ.
ನೀನೊಲಿದಡೆ ವೈರಿಗಳೆಲ್ಲ ಸಖರಪ್ಪರು ನೋಡಾ ;
ನೀನೊಲಿಯದಿರ್ದಡೆ ಸಖರೆಲ್ಲ ವೈರಿಗಳಾಹರು ನೋಡಾ.
ನೀನೊಲಿದಡೆ ಬಾರದ ಪದಾರ್ಥ ಬಪ್ಪುದು ನೋಡಾ;
ನೀನೋಲಿಯದಿರ್ದಡೆ ಬರ್ಪುದು ಬಾರದೆ ಹೋಹುದು ನೋಡಾ.
ಇದು ಕಾರಣ,
ನಿಮ್ಮ ಒಲುಮೆಯಿಂದ ಘನವು ಆವುದು ಇಲ್ಲ ನೋಡಾ
ಅಖಂಡೇಶ್ವರಾ. || ೧೬೫ ||

೪೦೯

ಸತ್ಯನೆಂದೆನಿಸಯ್ಯ ಎನ್ನ ; ನಿತ್ಯನೆಂದೆನಿಸಯ್ಯ ಎನ್ನ ;
ಭಕ್ತನೆಂದೆನಿಸಯ್ಯ ಎನ್ನ ; ಮುಕ್ತನೆಂದೆನಿಸಯ್ಯ ಎನ್ನ ;
ನಿಮ್ಮ ಪೂರ್ಣ ಒಲುಮೆಯ
ಲಿಂಕನೆಂದೆನಿಸಯ್ಯ ಎನ್ನ ಅಖಂಡೇಶ್ವರಾ. || ೧೬೬ ||

೪೧೦

ಎನ್ನ ಕಂಗಳ ಮುಂದಣ ಕಾಮವ ಕಳೆದು
ನಿಮ್ಮ ಮಂಗಳಸ್ವರೂಪವ ತೋರಿಸಯ್ಯ ದೇವಾ.
ಎನ್ನ ಮನದ ಮುಂದಣ ಆಸೆಯ ಬಿಡಿಸಿ
ನಿಮ್ಮ ಮಂತ್ರದ ನೆನಹ ನೆಲೆಗೊಳಿಸಯ್ಯ ದೇವಾ.
ಎನ್ನ ಪ್ರಾಣದ ಮುಂದಣ ಪ್ರಪಂಚವ ಕೆಡಿಸಿ
ನಿಮ್ಮ ಪ್ರಸಾದವ ನೆಲೆಗೊಳಿಸಯ್ಯ ದೇವಾ.
ಎನ್ನ ತನುವ ಮುಸುಕಿದ ತಾಮಸವ ಕಳೆದು
ನಿಮ್ಮ ಭಕ್ತಿಯ ಅನುವ ತೋರಿಸಿ ಬದುಕಿಸಯ್ಯ ದೇವಾ
ಅಖಂಡೇಶ್ವರಾ. ॥ ೧೬೭ ॥

೪೧೧

ಗುರುವ ನೋಡಿರೋ, ಲಿಂಗವ ಹಾಡಿರೋ,
ಜಂಗಮಕ್ಕೆ ನೀಡಿರೋ,
ಅಂಗಜವೈರಿ ಅಖಂಡೇಶ್ವರನ ಕೂಡಿರೋ. ॥ ೧೬೮ ॥

೪೧೨

ಭಕ್ತಿಗೆ ಮುಖವಾದಾತನೇ ಸದ್‌ಭಕ್ತನು.
ಯುಕ್ತಿಗೆ ವಿಚಾರದಲ್ಲಿದ್ದಾತನೇ ಸದ್‌ಭಕ್ತನು.
ಮುಕ್ತಿಗೆ ಮುಂದುವರಿದು ನಡೆವಾತನೇ ಸದ್‌ಭಕ್ತನು.
ನಮ್ಮ ಅಖಂಡೇಶ್ವರನ ಮೆಚ್ಚಿಸುವಾತನೇ
ಮಹಾ ಸದ್‌ಭಕ್ತನು. ॥ ೧೬೯ ॥

೪೧೩

ಗುರುಲಿಂಗಜಂಗಮದಲ್ಲಿ ಭಯ ಭಕ್ತಿ
ಕರುಣ ಕಿಂಕುರ್ವಾಣ ನಯನುಡಿ
ನಮಸ್ಕಾರ ಕ್ಷಮೆ ದಮೆ ಶಾಂತಿ ಸ್ಮರಣೆ
ದಯಾಗುಣ ವಿಶ್ವಾಸ ನಂಬುಗೆ ನಿಷ್ಠೆ ಸಮರಸವನುಳ್ಳ
ಸದ್ಭಕ್ತರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೧೭೦ ॥

೪೧೪

ಸತ್ಕಾಯಕದಿಂದ ತಂದ ದ್ರವ್ಯಂಗಳ
ಅಂದಂದಿಗ ಗುರುಲಿಂಗಜಂಗಮಕ್ಕೆ ಸವೆಸಿ,
ಹಿಂದುಮುಂದನೆಣಿಸದ ಇಂದಿಗೆ ನೂರು ತುಂಬಿತ್ತೆಂಬ
ಆನಂದಭಕ್ತರ ತೋರಿ ಎನ್ನ ಬದುಕಿಸಯ್ಯ ಅಖಂಡೇಶ್ವರಾ. ॥ ೧೭೧ ॥

೪೧೫

ಸತ್ಯವಚನವ ನುಡಿವಾತನೇ ಸದ್‌ಭಕ್ತನು.
ಸದಾಚಾರದಲ್ಲಿ ನಡೆವಾತನೇ ಸದ್‌ಭಕ್ತನು.
ತಥ್ಯ ಮಿಥ್ಯ ರಾಗದ್ವೇಷವನಳಿದಾತನೇ
ಸದ್‌ಭಕ್ತನಯ್ಯ ಅಖಂಡೇಶ್ವರಾ. || ೧೭೨ ||

೪೧೬

ನಾನಾದೇಶವ ತಿರುಗಿದಡಿಲ್ಲ,
ನಾನಾ ವ್ಯಾಪಾರವ ಮಾಡಿದಡಿಲ್ಲ,
ಏನು ಮಾಡಿದಡೇನು ಹುರುಳಿಲ್ಲ,
ಅಖಂಡೇಶ್ವರಾ, ನೀವು ದಯ ಹುಟ್ಟಿ,
ಒಲಿದು ನೋಡಿ ಕರುಣಿಸಿ ಸಲಹದನ್ನಕ್ಕರ
ಉಳಿದುದೆಲ್ಲ ವ್ಯರ್ಥ ನೋಡಾ. || ೧೭೩ ||

೪೧೭

ಭಕ್ತನಾದಡೆ ನಿರ್ವಂಚಕಭಾವದಿಂದೆ
ತ್ರಿವಿಧಕ್ಕೆ ತ್ರಿವಿಧಪದಾರ್ಥವನರ್ಪಿಸಬೇಕು.
ಮಹೇಶ್ವರನಾದಡೆ ತ್ರಿವಿಧವ ಬಯಸದಿರಬೇಕು.
ಪ್ರಸಾದಿಯಾದಡೆ ಹುಲ್ಲುಕಡ್ಡಿ ದರ್ಪಣ ಮೊದಲಾದ
ಸಕಲಪದಾರ್ಥಂಗಳ ಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳದಿರಬೇಕು.
ಪ್ರಾಣಲಿಂಗಿಯಾದಡೆ ಪ್ರಪಂಚ ನಾಸ್ತಿಯಾಗಿರಬೇಕು.
ಶರಣನಾದಡೆ ಸಕಲ ಭೋಗೋಪಭೋಗಂಗಳನು
ತಾನಿಲ್ಲದೆ ಲಿಂಗಮುಖವನರಿದು ಕೊಡಬೇಕು.
ಐಕ್ಯನಾದಡೆ ಸರ್ವವೂ ತನ್ನೊಳಗೆಂದರಿದು
ಸರ್ವರೊಳಗೆಲ್ಲ ತನ್ನನೆ ಕಾಣಬೇಕು.
ಇಂತೀ ಷಟ್‌ಸ್ಥಲದ ಅನುವನರಿದು ಆಚರಿಸುವ
ಮಹಾಶರಣರ ಆಳಿನ ಆಳು ನಾನಯ್ಯ ಅಖಂಡೇಶ್ವರಾ. || ೧೭೪ ||

೪೧೮

ಭಕ್ತಿಯ ಮರ್ಮವನರಿಯೆ, ಜ್ಞಾನದ ಕುರುಹನರಿಯೆ,
ವೈರಾಗ್ಯದ ದೃಢವನರಿಯೆ, ವಿರತಿಯ ಹೊಲಬನರಿಯೆ,
ಮುಕ್ತಿಯ ಪಥವನರಿಯೆ, ಭಕ್ತಿ ಜ್ಞಾನ ವೈರಾಗ್ಯ ವಿರತಿಗಳಿಂದೆ
ಮುಕ್ತರಾದ ಮಹಾಶರಣರ ತೊತ್ತಿನ ಮಗ ನಾನಯ್ಯ
ಅಖಂಡೇಶ್ವರಾ. || ೧೭೫ ||

### ೪೧೯

ಶಿವಶಿವಾ, ಎನ್ನ ಮನದಾಳಾಪವನವಧರಿಸಯ್ಯ ಸ್ವಾಮಿ.
ಎನಗೆ ಭಕ್ತಿ ಬೇಡ, ಎನಗೆ ಜ್ಞಾನ ಬೇಡ,
ಎನಗೆ ವೈರಾಗ್ಯ ಬೇಡ, ಎನಗೆ ವಿರತಿಯು ಬೇಡ.
ನಿಮ್ಮ ಶರಣರು ಉಟ್ಟ ಮೈಲಿಗೆಯ ಬಟ್ಟೆ,
ಉಗುಳಿದ ತಾಂಬೂಲ, ಒಕ್ಕು ಮಿಕ್ಕ ಪ್ರಸಾದವನೆ ಕರುಣಿಸಿ,
ಅವರ ಪಮುಗ ಪಾದರಕ್ಷೆಯನೆ ಹಿಡಿವುದಕ್ಕೆ ಯೋಗ್ಯನ ಮಾಡಿ,
ಅವರ ಕಡೆಯ ಬಾಗಿಲನೆ ಕಾಯುವಂತೆ
ಮಾಡಯ್ಯ ಎನ್ನ ಅಖಂಡೇಶ್ವರಾ. ॥ ೧೭೬ ॥

### ೪೨೦

ಸೋಹಂ ಎಂದಡೆ ಅಂತರಂಗದ ಗರ್ವ;
ಶಿವೋಹಂ ಎಂದಡೆ ಬಹಿರಂಗದ ಅಹಂಕಾರ ;
ಈ ಉಭಯವನಳಿದು ದಾಸೋಹಂ ಎಂದಡೆ ಪರಮಪದವು.
ಇದು ಕಾರಣ, ಎನಗೆ ದಾಸೋಹಂ ಭಾವವನು
ಕರುಣಿಸಿ ಬದುಕಿಸಯ್ಯ ಅಖಂಡೇಶ್ವರಾ. ॥ ೧೭೭ ॥

### ೪೨೧

ಸದ್‌ಭಕ್ತರೇ ಎನ್ನ ತಂದೆ ತಾಯಿಗಳಯ್ಯ.
ಸದ್‌ಭಕ್ತರೇ ಎನ್ನ ಬಂಧು ಬಳಗವಯ್ಯ.
ಸದ್‌ಭಕ್ತರೇ ತಮ್ಮ ಒಕ್ಕುಮಿಕ್ಕುದನಿಕ್ಕಿ ಸಲಹಿದರಾಗಿ
ಅಖಂಡೇಶ್ವರಾ, ನಾ ನಿಮ್ಮ ಕಡೆಯ ಬಾಗಿಲ ಕಾಯ್ವುದಕೆ
ಯೋಗ್ಯನಾದೆನಯ್ಯ. ॥ ೧೭೮ ॥

### ೪೨೨

ಸತ್ಯದ ಮನೆಯಲ್ಲಿ ಶಿವನಿರ್ಪನಲ್ಲದೆ
ಅಸತ್ಯದ ಮನೆಯಲ್ಲಿ ಶಿವನಿರ್ಪನೆ ?
ಇಲ್ಲಿಲ್ಲ ನೋಡಿರೊ.
ಇದು ಕಾರಣ, ನಮ್ಮ ಅಖಂಡೇಶ್ವರಲಿಂಗವನೊಲಿಸಬೇಕಾದಡೆ
ಸತ್ಯವ ಸಾಧಿಸಬೇಕು ಕಾಣಿರೋ. ॥ ೧೭೯ ॥

### ೪೨೩

ಶ್ರೀಗುರುವೇ ತಂದೆ ತಾಯಿಗಳಲ್ಲದೆ,
ಬೇರೆ ಮತ್ತೆ ತಂದೆತಾಯಿಗಳಿಲ್ಲವಯ್ಯ ಎನಗೆ.
ಶಿವಶರಣರೇ ಬಂಧುಬಳಗವಲ್ಲದೆ,

ಬೇರೆ ಮತ್ತೆ ಬಂಧುಬಳಗವಿಲ್ಲವಯ್ಯ ಎನಗೆ.
ಶಿವಕುಲವೆ ಮಹಾಕುಲವಲ್ಲದೆ,
ಬೇರೆ ಮತ್ತೆ ಕುಲವಿಲ್ಲವಯ್ಯ ಎನಗೆ.
ಅಖಂಡೇಶ್ವರಾ, ನೀವೆನ್ನ ಕುಲದೈವ ಮನೆ ದೈವವಲ್ಲದೆ
ಬೇರೆ ಮತ್ತೆ ಕುಲದೈವ ಮನದೈವ ಇಲ್ಲವಯ್ಯ ಎನಗೆ. ॥ ೧೮೦ ॥

**೪೨೪**

ಗುರುಕರಜಾತನಾದೆನಾಗಿ,
ಆಣವಮಲ ಹೋಯಿತ್ತಯ್ಯ ಎನಗೆ.
ಭಕ್ತಜನಬಂಧುತ್ವವಾಯಿತ್ತಾಗಿ,
ಮಾಯಾಮಲ ಹೋಯಿತ್ತಯ್ಯ ಎನಗೆ.
ದ್ರವ್ಯವ ತ್ರಿಲಿಂಗದ ಸೊಮ್ಮೆಂದರಿದೆನಾಗಿ,
ಕಾರ್ಮಿಕಮಲ ಹೋಯಿತ್ತಯ್ಯ ಎನಗೆ.
ಇಂತೀ ಮಲತ್ರಯಂಗಳ ಬಲೆಯ ಹರಿದು
ನಿಮ್ಮ ಕರುಣದ ಕಂದನಾದೆನಯ್ಯ
ಅಖಂಡೇಶ್ವರಾ. ॥ ೧೮೧ ॥

**೪೨೫**

ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ವೈಶ್ಯನಾಗಲಿ ಶೂದ್ರನಾಗಲಿ
ಆವಜಾತಿಯಲ್ಲಿ ಹುಟ್ಟಿದಾತನಾದಡಾಗಲಿ,
ಗುರುಕಾರುಣ್ಯವ ಪಡೆದು ಅಂಗದ ಮೇಲೆ ಲಿಂಗಧಾರಣವಾಗಿ
ಆಚಾರಕ್ರಿಯಾಸಂಪನ್ನನಾದ ಮಹಾತ್ಮನೇ ಮೂರುಲೋಕಕ್ಕಧಿಕ ನೋಡಾ !
ಅದೆಂತೆಂದೊಡೆ :
''ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋ ವಾಪ್ಯಂತ್ಯಜೋಽಪಿ ವಾ ।
ಶಿವಭಕ್ತಃ ಸದಾ ಪೂಜ್ಯಃ ಸರ್ವಾವಸ್ಥಾಂ ಗತೋಽಪಿ ವಾ ॥''
ಎಂದುದಾಗಿ,
ಇಂತಪ್ಪ ಪರಮ ಶಿವಭಕ್ತನು ಶರಣ ನೋಡಾ ಅಖಂಡೇಶ್ವರಾ. ॥ ೧೮೨ ॥

**೪೨೬**

ಭಕ್ತನ ನಡೆ ಶುದ್ಧ, ಭಕ್ತನ ನುಡಿ ಶುದ್ಧ,
ಭಕ್ತನ ತನು ಶುದ್ಧ, ಭಕ್ತನ ಮನ ಶುದ್ಧ,
ಭಕ್ತನ ಭಾವ ಶುದ್ಧ, ಭಕ್ತನ ಸರ್ವಕ್ರಿಯೆಯಲ್ಲ ಶುದ್ಧ.
ಅಖಂಡೇಶ್ವರಾ, ನೀ ಒಲಿದ ಸದ್‌ಭಕ್ತನ
ಕಾಯವೇ ಕೈಲಾಸವಯ್ಯಾ. ॥ ೧೮೩ ॥

**೪೨೭**

ಭಕ್ತನಾದಡೆ ಲಿಂಗನಿಷ್ಠಾಪರನಾಗಿರಬೇಕು.
ಭಕ್ತನಾದಡೆ ಜಂಗಮವೆ ಪ್ರಾಣವಾಗಿರಬೇಕು.
ಭಕ್ತನಾದಡೆ ಅರ್ಥಪ್ರಾಣಾಭಿಮಾನಂಗಳು
ಶಿವನ ಕೂಡಿರಬೇಕು ನೋಡಾ ಅಖಂಡೇಶ್ವರಾ. ॥ ೧೮೪ ॥

**೪೨೮**

ಅರ್ಥ ಗುರುವಿನಲ್ಲಿ ಸವೆದು, ಪ್ರಾಣ ಲಿಂಗದಲ್ಲಿ ಸವೆದು,
ಅಭಿಮಾನ ಜಂಗಮದಲ್ಲಿ ಸವೆದು, ಆ ಗುರುಲಿಂಗಜಂಗಮವೇ
ತನ್ನ ಪ್ರಾಣವೆಂದು ತಿಳಿಯಬಲ್ಲಾತನೇ
ಸದ್‌ಭಕ್ತನು ನೋಡಾ ಅಖಂಡೇಶ್ವರಾ. ॥ ೧೮೫ ॥

**೪೨೯**

ಮನದಲ್ಲಿ ಸಂಚಿಗ, ಮಾತಿನಲ್ಲಿ ಕಿಂಕುರ್ವಾಣ ಜಿಡದೆ
ಲಿಂಗ ಜಂಗಮ ಒಂದೇ ಎಂದು ಭಾವಿಸಿ
ಪೂಜಿಸುವಾತನೇ ಸದ್‌ಭಕ್ತನು ನೋಡಾ
ಅಖಂಡೇಶ್ವರಾ. ॥ ೧೮೬ ॥

**೪೩೦**

ತನುವಂಚನೆಯಿಲ್ಲದೆ ಮಾಡುವಾತನೇ ಭಕ್ತ;
ಮನವಂಚನೆಯಿಲ್ಲದೆ ಕೂಡುವಾತನೇ ಭಕ್ತ;
ಧನವಂಚನೆಯಲ್ಲಿದೆ ನೀಡುವಾತನೇ
ಸದ್‌ಭಕ್ತ ನೋಡಾ ಅಖಂಡೇಶ್ವರಾ. ॥ ೧೮೭ ॥

**೪೩೧**

ಮುಕ್ತಿಯ ಪಡೆವೆನೆಂದು ಯುಕ್ತಿಗೆಟ್ಟು
ಸಕಲ ತೀರ್ಥಕ್ಷೇತ್ರಂಗಳಿಗೆಡಯಾಡಿ
ತೊಟ್ಟನೆ ತೊಳಲಿ ಬಳಲಿ ಬೆಂಡಾಗಲೇತಕೊ ?
ಒಬ್ಬ ಶಿವಭಕ್ತನ ಅಂಗಳದಲ್ಲಿ ಎಂಬತ್ತೆಂಟುಕೋಟಿ ಕ್ಷೇತ್ರಂಗಳಿರ್ಪವು.
ಆತನ ಬಚ್ಚಲಲ್ಲಿ ಅರವತ್ತಾರು ಕೋಟಿ ತೀರ್ಥಂಗಳಿರ್ಪವು.
ಆತನ ಕಾಯವೇ ಕೈಲಾಸ.
ಆತನಂಗದಮೇಲಿರ್ಪ ಲಿಂಗವೇ ಅನಾದಿಪರಶಿವನು.
ಇದು ಕಾರಣ, ಅಂತಪ್ಪ ಸದ್‌ಭಕ್ತನ ಗೃಹಮಂ ಪೊಕ್ಕು,
ಆತನ ದರ್ಶನ ಸ್ಪರ್ಶನವಾದಾತಂಗೆ
ಅನಂತಕೋಟಿ ಭವಪಾತಕಂಗಳು ಪರಿಹಾರವಪ್ಪವು ನೋಡಾ !

ಆತನ ಒಕ್ಕುಮಿಕ್ಕುದ ಕೊಂಡಾತಂಗೆ
ಮುಂದೆ ಮುಕ್ತಿಯಪ್ಪುದು ತಪ್ಪದು ನೋಡಾ
ಅಖಂಡೇಶ್ವರಾ. ॥ ೧೮೮ ॥

೪೩೨

ಸ್ನೇಹ ಸಮರಸ ಮೋಹವಿರಬೇಕು ಗುರುವಿನಲ್ಲಿ,
ಸ್ನೇಹ ಸಮರಸ ಮೋಹವಿರಬೇಕು ಲಿಂಗದಲ್ಲಿ,
ಸ್ನೇಹ ಸಮರಸ ಮೋಹವಿರಬೇಕು ಜಂಗಮದಲ್ಲಿ,
ಸ್ನೇಹ ಸಮರಸ ಮೋಹವಿರಬೇಕು ಪಾದೋದಕ ಪ್ರಸಾದದಲ್ಲಿ,
ಸ್ನೇಹ ಸಮರಸ ಮೋಹವಿರಬೇಕು ಶರಣಜನ ಶಿವಭಕ್ತರಲ್ಲಿ,
ಇಂತಿವರಲ್ಲಿ ಸ್ನೇಹಸಮರಸ ಮೋಹವನುಳ್ಳ
ಸದ್‌ಭಕ್ತರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೧೮೯ ॥

೪೩೩

ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು
ತನುವೆನ್ನದು ಮನವೆನ್ನದು ಧನವೆನ್ನದು ಎಂದು
ಭಿನ್ನಭಕ್ತಿಯ ಮಾಡಿ
ಬಡ್ಡಿಕಾರನಂತೆ ಒಂದು ಕೊಟ್ಟು ಎರಡು ಪಡೆವ
ಜಡಜೀವಿಗಳ ಭಕ್ತರೆನ್ನಬಹುದೇಸಯ್ಯ ಅಖಂಡೇಶ್ವರಾ ? ॥ ೧೯೦ ॥

೪೩೪

ಹೊನ್ನಿನಾಶೆಯ ಮಾಡುವವನಲ್ಲ ಭಕ್ತ
ಹೆಣ್ಣು ತನ್ನದೆಂಬುವವನಲ್ಲ ಭಕ್ತ
ಮಣ್ಣಿಂಗೆ ಮನಸೋಲುವವನಲ್ಲ ಭಕ್ತ
ಅಖಂಡೇಶ್ವರಾ, ನಿಮ್ಮ ಭಕ್ತರ ಮಹಿಮೆಯ ನೀವೇ ಬಲ್ಲಿರಿ. ॥ ೧೯೧ ॥

೪೩೫

ಅಂಗ ಆಪ್ತ ಸ್ಥಾನ ಸದ್ಭಾವ ಎಂಬ
ಚತುರ್ವಿಧಭಕ್ತಿಯಿಂದೆ
ಗುರುಲಿಂಗ ತನುವ ಸವೆಸಿದಡೆ
ಆ ತನುವಿನಲ್ಲಿ ದೀಕ್ಷಾ ಶಿಕ್ಷಾ ಸ್ವಾನುಭಾವಜ್ಞಾನಸ್ವರೂಪವಾದ
ಶ್ರೀಗುರುದೇವನು ನೆಲೆಗೊಂಬನು ನೋಡಾ.
ಮಂತ್ರ ಜ್ಞಾನ ಜಪ ಸ್ತೋತ್ರವೆಂಬ ನಾಲ್ಕು ತೆರದ ಭಕ್ತಿಯಿಂದ
ಲಿಂಗಕ್ಕೆ ಮನವ ಸವೆಸಿದಡೆ
ಆ ಮನದಲ್ಲಿ ಇಷ್ಟ ಪ್ರಾಣ ಭಾವಸ್ವರೂಪವಾದ

ಪರಶಿವಲಿಂಗವು ನೆಲೆಗೊಂಬುದು ನೋಡಾ.
ಅನ್ನ ವಸ್ತ್ರ ಆಭರಣಾದಿ ಹದಿನೆಂಟು ತೆರದ ಭಕ್ತಿಯಿಂದೆ
ಜಂಗಮಕ್ಕೆ ಧನವ ಸವೆಸಿದಡೆ
ಆ ಧನದಲ್ಲಿ ಸ್ವಯ ಚರ ಪರಸ್ವರೂಪವಾದ
ಮಹಾಘನ ಜಂಗಮವು ನೆಲೆಗೊಂಬುದು ನೋಡಾ.
ಇಂತೀ ತ್ರಿವಿಧಸಂಪತ್ತು ನಿಮ್ಮ ಶರಣರಿಗಲ್ಲದೆ
ಉಳಿದವರಿಗಳವಡದಯ್ಯ ಅಖಂಡೇಶ್ವರಾ. ॥ ೧೯೨ ॥

**೪೩೬**

ಗುರುಸೇವೆಯಲ್ಲಿ ತನು ಸವೆದು,
ಲಿಂಗಪೂಜೆಯಲ್ಲಿ ಮನ ಸವೆದು,
ಜಂಗಮದಾಸೋಹದಲ್ಲಿ ಧನ ಸವೆದು,
ಇಂತೀ ತ್ರಿವಿಧಸಂಪತ್ತು ನೆಲೆಗೊಂಡ ಸದ್‌ಭಕ್ತಂಗೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೧೯೩ ॥

**೪೩೭**

ತನುವೆ ಗುರುವೆಂದರಿದ ಬಳಿಕ
ಬಿಡದೆ ಗುರುಭಕ್ತಿಯ ಮಾಡಲೇಬೇಕು.
ಮನವೆ ಲಿಂಗವೆಂದರಿದ ಬಳಿಕ
ಬಿಡದೆ ಲಿಂಗಪೂಜೆಯ ಮಾಡಲೇಬೇಕು.
ಧನವೆ ಜಂಗಮವೆಂದರಿದ ಬಳಿಕ
ಬಿಡದೆ ಜಂಗಮಕ್ಕೆ ಬೇಡಿದ ಪದಾರ್ಥವನೀಯಲೇಬೇಕು.
ಇಂತಪ್ಪ ಸದ್‌ಭಕ್ತನ ತೋರಿ ಬದುಕಿಸಯ್ಯ ಎನ್ನ
ಅಖಂಡೇಶ್ವರಾ. ॥ ೧೯೪ ॥

**೪೩೮**

ಹಿಂದಣಜನ್ಮದ ಸಂಸಾರವ ಮರೆದು,
ಮುಂದಣ ಭವಬಂಧನಂಗಳ ಜರಿದು,
ಸಂದೇಹ ಸಂಕಲ್ಪಗಳ ಹರಿದು,
ನಿಮ್ಮ ಅವಿರಳಭಕ್ತಿಯ ಬೆಳಗಿನಲ್ಲಿ ಬೆರೆದು
ಓಲಾಡುವ ಮಹಾಮಹಿಮರ ತೋರಿ
ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೧೯೫ ॥

**೪೩೯**

ಉಪಾಧಿಯನಳಿದು, ನಿರುಪಾಧಿಯ ತಿಳಿದು,
ಸಹಜಮಾಟದಲ್ಲಿ ಸುಳಿದು,

ಜಾತಿಸೂತಕ ಪ್ರೇತಸೂತಕ ಜನನಸೂತಕ ಉಚ್ಚಿಷ್ಟಸೂತಕ
ರಜಸ್ಸೂತಕವೆಂಬ ಪಂಚಸೂತಕಂಗಳ ಕಳೆದು,
ಸದಾಚಾರ ಲಿಂಗಾಚಾರ ಶಿವಾಚಾರ ಗಣಾಚಾರ
ಭೃತ್ಯಾಚಾರವೆಂಬ ಪಂಚಾಚಾರಂಗಳಳವಟ್ಟು,
ಪಂಚಭೂತಂಗಳ ಪರಿಹರಿಸಿ,
ಪಂಚಪ್ರಾಣವಾಯುಗಳ ಸಂಚಲಗುಣವಳಿದು
ಪಂಚೇಂದ್ರಿಯಂಗಳಲ್ಲಿ ಪಂಚಲಿಂಗಂಗಳ ಪ್ರತಿಷ್ಠಿಸಿ,
ಪಂಚಬ್ರಹ್ಮದ ಮೂಲವನರಿದು,
ಮೂಲೋಕದೊಡೆಯನಲ್ಲಿ ಮನಪಡಗಿರ್ಪ
ಮಹಾಶರಣರ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೧೯೬ ॥

೪೪೦

ತನುವಿನ ಪ್ರಕೃತಿಯಳಿದು, ಮನದ ಮಾಯವಡಗಿ,
ಆತ್ಮನ ಅಹಂಮಮತೆ ಕೆಟ್ಟು, ತಾನ ತಾನಾಗಿ ಮಾಡಿ ಮೈಮರೆದ,
ಮಹಾಮಹಿಮರ ತೋರಿಸಿ ಬದುಕಿಸಯ್ಯ
ಎನ್ನ ಅಖಂಡೇಶ್ವರಾ. ॥ ೧೯೭ ॥

೪೪೧

ತಾನೇ ಗುರುವಾಗಿ ಗುರುಭಕ್ತಿಯ ಮಾಡುತಿರ್ಪನು.
ತಾನೇ ಲಿಂಗವಾಗಿ ಲಿಂಗಪೂಜೆಯ ಮಾಡುತಿರ್ಪನು.
ತಾನೇ ಜಂಗಮವಾಗಿ ಜಂಗಮದಾಸೋಹವ ಮಾಡುತಿರ್ಪನು.
ತಾನೇ ಪಾದೋದಕ ಪ್ರಸಾದವಾಗಿ
ಪಾದೋದಕ ಪ್ರಸಾದವ ಸೇವನೆಯ ಮಾಡುತಿರ್ಪನು.
ತಾನೇ ವಿಭೂತಿ ರುದ್ರಾಕ್ಷಿಯಾಗಿ ವಿಭೂತಿ ರುದ್ರಾಕ್ಷಿಯ ಧರಿಸುತಿರ್ಪನು.
ತಾನೇ ಮಂತ್ರವಾಗಿ ಶಿವಮಂತ್ರವ ಜಪಿಸುತಿರ್ಪನು.
ಇಂತೀ ಅಷ್ಟಾವರಣವೇ ಅಂಗವಾಗಿ, ಅಷ್ಟಾವರಣವ ಲಿಂಗವಾಗಿ,
ಅಷ್ಟಾವರಣವೇ ಸಂಗವಾಗಿ, ಅಷ್ಟಾವರಣವೇ ಸಮರಸವಾಗಿರ್ಪ
ಸದ್‌ಭಕ್ತನು ಸಾಕ್ಷಾತ್ ಪರವಸ್ತುವು ತಾನೇ ಅಯ್ಯಾ ಅಖಂಡೇಶ್ವರಾ. ॥೧೯೮॥

೪೪೨

ಹಾಡಿದರ ಹಾಡುವೆನಯ್ಯ ಶಿವಶರಣರ ಮನವೊಲಿದು.
ನೋಡಿದರ ನೋಡುವೆನಯ್ಯ ಸದ್ಭಕ್ತಸ್ತ್ರೀಯರ
ಎನ್ನ ಹೆತ್ತ ತಾಯಿಗಳೆಂದು.
ಬೇಡಿದರ ಬೇಡುವೆನಯ್ಯ ಎನ್ನ ಶ್ರೀಗುರುವಿನಲ್ಲಿ

ನಿತ್ಯ ನಿಜಮುಕ್ತಿಯ.
ಕೂಡಿದರೆ ಕೂಡುವೆನಯ್ಯ ಅಖಂಡೇಶ್ವರಾ,
ನಿಮ್ಮ ಶ್ರೀಚರಣವನೊಡಗೂಡುವ
ಅವಿರಳ ಸಮರಸಭಕ್ತಿಯಲ್ಲಿ. ॥ ೧೯೯ ॥

**೪೪೩**

ಎನ್ನ ತನುವೆ ಶ್ರೀಗುರುಸ್ಥಾನವಯ್ಯ,
ಎನ್ನ ಮನವೆ ಲಿಂಗಸ್ಥಾನವಯ್ಯ,
ಎನ್ನ ಆತ್ಮವೆ ಜಂಗಮಸ್ಥಾನವಯ್ಯ,
ಎನ್ನ ಪ್ರಾಣವೆ ಪ್ರಸಾದಸ್ಥಾನವಯ್ಯ,
ಎನ್ನ ಭಾವವೇ ಪಾದೋದಕಸ್ಥಾನವಯ್ಯ,
ಎನ್ನ ಲಲಾಟವೇ ವಿಭೂತಿಸ್ಥಾನವಯ್ಯ,
ಎನ್ನ ಗಳವೇ ರುದ್ರಾಕ್ಷಿಸ್ಥಾನವಯ್ಯ,
ಎನ್ನ ಜಿಹ್ವೆಯೇ ಶಿವಮಂತ್ರಸ್ಥಾನವಯ್ಯ,
ಎನ್ನ ಕಂಗಳೇ ಲಿಂಗಾಚಾರಸ್ಥಾನವಯ್ಯ.
ಎನ್ನ ಶ್ರೋತ್ರವೇ ಶಿವಾಚಾರಸ್ಥಾನವಯ್ಯ,
ಎನ್ನ ವಾಕ್ಯವೇ ಭೃತ್ಯಾಚಾರಸ್ಥಾನವಯ್ಯ,
ಎನ್ನ ಹಸ್ತವೇ ಗಣಾಚಾರಸ್ಥಾನವಯ್ಯ,
ಎನ್ನ ಚರಣವೇ ಸದಾಚಾರಸ್ಥಾನವಯ್ಯ,
ಎನ್ನ ಷಡ್‌ಭೂತಂಗಳೇ ಷಟ್‌ಸ್ಥಲಸ್ಥಾನಂಗಳಯ್ಯ,
ಎನ್ನ ಸುಜ್ಞಾನವೇ ಶಿವಾನುಭಾವಸ್ಥಾನವಯ್ಯ.
ಇಂತೀ ಅಷ್ಟಾವರಣ ಪಂಚಾಚಾರ ಷಟ್‌ಸ್ಥಲ
ಶಿವಾನುಭಾವವನೊಳಕೊಂಡ ಎನ್ನ ಚಿದಂಗವೇ
ಮಹಾ ಕೈಲಾಸವಯ್ಯ ನಿಮಗೆ ಅಖಂಡೇಶ್ವರಾ. ॥ ೨೦೦ ॥

**೪೪೪**

ಆದಿಯ ಭಕ್ತ ಅನಾದಿಯ ಜಂಗಮ
ಮಧ್ಯದಲ್ಲಿ ಹುಟ್ಟಿದ ಪದಾರ್ಥ
ಈ ಮೂರು ಬೀಜವೃಕ್ಷಫಲದ ಹಾಗೆ ಒಂದೆಯೆಂದು ಕಾಂಬ
ಮಹಾಭಕ್ತರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೨೦೧ ॥

**೪೪೫**

ತನುವಿಲ್ಲದೆ ಮಾಟ,
ಧನವಿಲ್ಲದೆ ಮನವಿಲ್ಲದೆ ಕೂಡಬಲ್ಲಾತನ
ಮಹಾಭಕ್ತನು ನೋಡಾ ಅಖಂಡೇಶ್ವರಾ. ॥ ೨೦೨ ॥

೪೪೬

ಮಾಡುವ ಭಕ್ತ ನೀನೆಯೆಂದರಿದೆ ;
ಮಾಡಿಸಿಕೊಂಬ ದೇವ ನೀನೆಯೆಂದರಿದೆ.
ಇದು ಕಾರಣ, ಅಖಂಡೇಶ್ವರಾ,
ನಾ ನಿಮ್ಮ ಫಲಪದವ ಬೇಡಲಿಲ್ಲ ;
ನೀವೊಲಿದು ಎನಗೆ ಕೊಡಲಿಲ್ಲ. ॥ ೨೦೩ ॥

೪೪೭

ತನುವ ನಿಮಗೆ ಸಮರ್ಪಿಸಿಹೆನೆಂದಡೆ ತನುವಿಲ್ಲವಯ್ಯ ಎನಗೆ.
ಅದೇನುಕಾರಣವೆಂದೊಡೆ,
ನೀವು ಗುರುವಾಗಿ ಬಂದೆನ್ನ ತನುವನೊಳಕೊಂಡಿರ್ಪಿರಾಗಿ.
ಮನವ ನಿಮಗರ್ಪಿಸಿಹೆನೆಂದಡೆ ಮನವಿಲ್ಲವಯ್ಯ ಎನಗೆ.
ಅದೇನುಕಾರಣವೆಂದೊಡೆ,
ನೀವು ಲಿಂಗವಾಗಿ ಬಂದೆನ್ನ ಮನವನೊಳಕೊಂಡಿರ್ಪಿರಾಗಿ.
ಧನವ ನಿಮಗರ್ಪಿಸಿಹನೆಂದಡೆ ಧನವಿಲ್ಲವಯ್ಯ ಎನಗೆ.
ಅದೇನುಕಾರಣವೆಂದೊಡೆ,
ನೀವು ಜಂಗಮವಾಗಿ ಬಂದೆನ್ನ ಧನವನೊಳಕೊಂಡಿರ್ಪಿರಾಗಿ.
ಅದು ಕಾರಣ ಎನ್ನ ತನುವೆ ಗುರು, ಮನವೇ ಲಿಂಗ,
ಧನವೇ ಜಂಗಮವಾಯಿತ್ತಾಗಿ,
ಅಖಂಡೇಶ್ವರಾ, ನಾ ನಿಮ್ಮೊಳಡಗಿರ್ದೆನಯ್ಯ. ॥ ೨೦೪ ॥

೪೪೮

ಭಾವವಿಲ್ಲದ ಬಯಲಮೂರ್ತಿಯಾದವ ಭಕ್ತ
ಆ ಭಕ್ತನ ಹೃದಯದಲ್ಲಿ ಮೂರ್ತಿಗೊಂಡಾತ ಜಂಗಮ.
ಆ ಜಂಗಮದ ಅಂಗೈಯೊಳಿರ್ಪುದು ಲಿಂಗ.
ಆ ಲಿಂಗದ ಗರ್ಭದೊಳಗೆ ಸಕಲ
ಸ್ಥಲಕುಳಂಗಳಿರ್ಪವು ನೋಡಾ ಅಖಂಡೇಶ್ವರಾ. ॥ ೨೦೫ ॥

೪೪೯

ಕಾಯವಿಲ್ಲದ ಭಕ್ತ, ಜೀವವಿಲ್ಲದ ಭಕ್ತ,
ಭಾವವಿಲ್ಲದ ಭಕ್ತ,
ಅಖಂಡೇಶ್ವರಾ, ನಿಮ್ಮನೊಡಗೂಡಿದ ಮಹಾಭಕ್ತನು
ಉಪಮೆಗ ಉಪಮಾತೀತನು ನೋಡಾ. ॥ ೨೦೬ ॥

೪೫೦

ಮಾಡುವ ತನುವು ನೀವೇ ಆದಿರಿ.
ಕೂಡುವ ಮನವು ನೀವೇ ಆದಿರಿ.
ನೀಡುವ ಧನವು ನೀವೇ ಆದಿರಿ.
ಅಖಂಡೇಶ್ವರಾ, ನಾನೂ ಇಲ್ಲ, ನೀವೂ ಇಲ್ಲ. ಏನೇನೂ ಇಲ್ಲ. ॥ ೨೦೭ ॥

## ಮಾಹೇಶ್ವರಸ್ಥಲ

೪೫೧

ಪರಸ್ತ್ರೀಯರ ಮುಟ್ಟದಿರಬೇಕು.
ಪರಧನವನಪಹರಿಸದಿರಬೇಕು.
ಪರದೈವವ ಪೂಜಿಸದಿರಬೇಕು.
ಪರಹಿಂಸೆಯ ಮಾಡದಿರಬೇಕು.
ಪರಲೋಕದ ಫಲಪದವ ಬಯಸದಿರಬೇಕು.
ಮನವು ನಿರ್ಭಯಲಾಗಿ ಇಷ್ಟಲಿಂಗದಲ್ಲಿ ನಿಷ್ಠೆಬಲಿದಿರಬೇಕು.
ಕಷ್ಟಜನ್ಮಂಗಳ ಕಡೆಗೊಡ್ಡಿರ್ಪಾತನೇ ವೀರಮಾಹೇಶ್ವರನು ನೋಡಾ.
ಅದೆಂತೆಂದೊಡೆ :
''ಪರಸ್ತ್ರೀಯಂ ಪರಾರ್ಥಂ ಚ ವರ್ಜಯೇತ್ ಭಾವಶುದ್ಧಿಮಾನ್ ।
ಲಿಂಗನಿಷ್ಠಾನಿಯುಕ್ತಾತ್ಮಾ ಮಾಹೇಶ್ವರಮುಹಾಸ್ಥಲಂ ॥''
ಎಂದುದಾಗಿ, ಇಂತಪ್ಪ ಪರಮ ಮಾಹೇಶ್ವರನ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೨೦೮ ॥

೪೫೨

ಹುಸಿ ಕಳವು ಪರದಾರ ಪರಹಿಂಸೆಯ ಬಿಟ್ಟು
ಲೋಕದ ನಚ್ಚು ಮಚ್ಚು ಸುಟ್ಟು,
ಸಚ್ಚಿದಾನಂದಲಿಂಗದಲ್ಲಿ ಮನವು ಬೆಚ್ಚಂತಿರ್ಪ
ಅಚ್ಚ ಮಹೇಶ್ವರರ ತೋರಿ ಬದುಕಿಸಯ್ಯ ಎನ್ನ
ಅಖಂಡೇಶ್ವರಾ. ॥ ೨೦೯ ॥

೪೫೩

ನೈಷ್ಠಿಕಭಾವ ನಂಬುಗೆ ಇಲ್ಲದ ಬಳಿಕ,
ಎಷ್ಟು ಓದಿದಡೇನು ? ಎಷ್ಟು ಕೇಳಿದಡೇನು ?
ಎಷ್ಟು ಪೂಜೆಯ ಮಾಡಿದಡೇನು ?
ಅದು ನಷ್ಟವಲ್ಲದೆ ದೃಷ್ಟಕ್ಕೆ ಸಂಧಾನವಲ್ಲ ನೋಡಾ.
ಇದು ಕಾರಣ, ನೈಷ್ಠೆ ಬಲಿದು ಭಾವತುಂಬಿ

ನಂಬುಗೆ ಇಂಬುಗೊಂಡು ಮಾಡುವುದೆ ದೇವರಪೂಜೆ.
ಅದೇ ನಮ್ಮ ಅಖಂಡೇಶ್ವರಲಿಂಗದ ಒಲುಮೆ. ॥ ೨೧೦ ॥

೪೫೪

ನೈಷ್ಠೆಯೆಂಬುದು ತನುವಿನ ಪ್ರಕೃತಿಯ ಕೆಡಿಸುವುದು.
ನೈಷ್ಠೆಯೆಂಬುದು ಮನದ ಮಾಯವನಳಿವುದು.
ನೈಷ್ಠೆಯೆಂಬುದು ಜ್ಞಾನದ ಬಟ್ಟೆಯ ತೋರುವುದು.
ನೈಷ್ಠೆಯೆಂಬುದು ಅಖಂಡೇಶ್ವರಲಿಂಗವನೊಲಿಸುವುದು. ॥ ೨೧೧ ॥

೪೫೫

ನೈಷ್ಠೆನೆಲೆಗೊಳ್ಳಬೇಕು ಗುರುಭಕ್ತಿಯ ಮಾಡುವಲ್ಲಿ.
ನೈಷ್ಠೆನೆಲೆಗೊಳ್ಳಬೇಕು ಲಿಂಗಪೂಜೆಯ ಮಾಡುವಲ್ಲಿ.
ನೃಷ್ಠೆನೆಲೆಗೊಳ್ಳಬೇಕು ಜಂಗಮವನರ್ಚಿಸುವಲ್ಲಿ.
ನೈಷ್ಠೆನೆಲೆಗೊಳ್ಳಬೇಕು ಪಾದೋದಕ ಪ್ರಸಾದವ ಕೊಂಬುವಲ್ಲಿ.
ನೈಷ್ಠೆನೆಲೆಗೊಳ್ಳಬೇಕು ನಮ್ಮ
ಅಖಂಡೇಶ್ವರಲಿಂಗವನೊಲಿಸುವಲ್ಲಿ. ॥ ೨೧೨ ॥

೪೫೬

ಛಲವಿರಬೇಕು ಶಿವಭಕ್ತಿಯ ಮಾಡುವಲ್ಲಿ ಹಿಡಿದುಬಿಡೆನೆಂಬ.
ಛಲವಿರಬೇಕು ನಿತ್ಯನೇಮದಲ್ಲಿ ಹಿಡಿದು ಬಿಡೆನೆಂಬ.
ಛಲವಿರಬೇಕು ಶೀಲವ್ರತದಲ್ಲಿ ಹಿಡಿದು ಬಿಡೆನೆಂಬ.
ಛಲವಿರಬೇಕು ನಮ್ಮ ಅಖಂಡೇಶ್ವರಲಿಂಗವ ಕೂಡಿ
ಎಂದೆಂದೂ ಅಗಲಬಾರದೆಂಬ ನೈಷ್ಠೆಯಲ್ಲಿ. ॥ ೨೧೩ ॥

೪೫೭

ಗುರುಭಕ್ತಿಯ ಮಾಡಿದ ಬಳಿಕ
ಸರ್ವ ಅವಗುಣಂಗಳು ಹಿಂಗಿರಬೇಕು.
ಲಿಂಗಪೂಜೆಯ ಮಾಡಿದ ಬಳಿಕ
ಅಂಗದ ಪ್ರಕೃತಿ ಹಿಂಗಿರಬೇಕು.
ಜಂಗಮಾರ್ಚನೆಯ ಮಾಡಿದ ಬಳಿಕ
ಸಂಸಾರದಲ್ಲಿ ಮೋಹವ ತೊಲಗಿರಬೇಕು.
ಪಾದೋದಕ ಪ್ರಸಾದವ ಕೊಂಡ ಬಳಿಕ
ಇಹಪರ ಭೋಗ ಮೋಕ್ಷಂಗಳ ಬಯಕೆ ಅರತಿರಬೇಕು
ಇದೇ ನಮ್ಮ ಅಖಂಡೇಶ್ವರಲಿಂಗದ ಕೂಟ. ॥ ೨೧೪ ॥

೪೫೮

ಫಲಪದವಿಯ ಬಯಸಿ ಮಾಡಲಾಗದು ಗುರುಭಕ್ತಿಯ.
ಫಲಪದವಿಯ ಬಯಸಿ ಮಾಡಲಾಗದು ಲಿಂಗಪೂಜೆಯ.
ಫಲಪದವಿಯ ಬಯಸಿ ಮಾಡಲಾಗದು ಜಂಗಮಾರ್ಚನೆಯ.
ಅದೇನು ಕಾರಣವೆಂದೊಡೆ :
ಬಯಕೆಯ ಭಕ್ತಿಯ, ಪೂರ್ವಪುರಾತನರು ಮೆಚ್ಚರು.
ನಮ್ಮ ಅಖಂಡೇಶ್ವರದೇವನು ಹಂಗಿನ ಭಕ್ತರನೊಲ್ಲ ನೋಡಾ. ॥ ೨೧೫ ॥

೪೫೯

ನಿತ್ಯ ಗುರುಲಿಂಗಜಂಗಮಕ್ಕೆ ಪೂಜೆಯ ಮಾಡಿ
ನಿತ್ಯ ಮುಕ್ತಿಯ ಪಡೆಯಲರಿಯದೆ,
ಮತ್ತತನದಿಂದ ಅನಿತ್ಯ ಫಲಭೋಗವ ಪಡೆದು
ಮರ್ತ್ಯದ ಭವಜಾಲದಲ್ಲಿ ಸುತ್ತಿ ಸುತ್ತಿ ಸುಳಿದು ತೊಳಲಿ ಬಳಲುವ
ವ್ಯರ್ಥರ ನೋಡಿ ನಗುತಿರ್ದನು ನಮ್ಮ ಅಖಂಡೇಶ್ವರನು. ॥ ೨೧೬ ॥

೪೬೦

ಮೊಟ್ಟೆ ಮೊಟ್ಟೆ, ಪತ್ರಿ ಪುಷ್ಪವ ತಂದು
ಒಟ್ಟಿ ಒಟ್ಟಿ ಲಿಂಗವ ಪೂಜಿಸಿದಡೇನು.
ತನುಮನದ ಕೆಟ್ಟತನವ ಹಿಂಗದನ್ನಕ್ಕರ ?
ಹುಸಿ ಕಳವು ಪರದಾರ ವ್ಯವಹಾರದಲ್ಲಿ
ಹರಿದಾಡುವ ಮರುಳಬುದ್ಧಿಯ ದುರಾಚಾರಿಗಳಿಗೆ
ದೂರನಾಗಿರ್ಪನು ನೋಡಾ ನಮ್ಮ ಅಖಂಡೇಶ್ವರನು. ॥ ೨೧೭ ॥

೪೬೧

ಶಿವಶಿವಾ, ಎನ್ನ ಮನವು ನಿಮ್ಮ ನೆನೆಯಲೊಲ್ಲದೆ
ಅನ್ಯಕ್ಕೆ ಹರಿವುತಿರ್ಪುದು ನೋಡಾ.
ಗುರು ಚರ ಲಿಂಗದ ಸೇವೆಯೆಂದೊಡೆ
ಹಿಂದುಳಿವುತಿರ್ಪುದು ನೋಡಾ.
ಅನ್ಯರ ಒಡವೆಯಾದ ಹೊನ್ನು ಹೆಣ್ಣು ಮಣ್ಣೆಂದೊಡೆ
ಮುಂದುವರಿದು ಓಡುತಿರ್ಪುದು ನೋಡಾ.
ಈ ಮನದ ಉಪಟಳವು ಘನವಾಯಿತ್ತು.
ಇನ್ನೇನು ಗತಿಯಯ್ಯ ಎನಗೆ ಅಖಂಡೇಶ್ವರಾ. ॥ ೨೧೮ ॥

೪೬೨

ಹೊರಗೆ ಹೊನ್ನ ಬಿಟ್ಟೆನೆಂದು ನುಡಿವುತಿರ್ಪನಲ್ಲದೆ
ಒಳಗೆ ಬಿಟ್ಟು ನಿಶ್ಚಿಂತನಲ್ಲವಯ್ಯ ನಾನು.

ಹೊರಗೆ ಹಣ್ಣು ಬಿಟ್ಟೆನೆಂದು ನುಡಿವುತಿರ್ಪೆನಲ್ಲದೆ,
ಒಳಗೆ ಬಿಟ್ಟು ನಿಶ್ಚಿಂತನಲ್ಲವಯ್ಯ ನಾನು.
ಹೊರಗೆ ಮಣ್ಣು ಬಿಟ್ಟೆನೆಂದು ನುಡಿವುತಿರ್ಪೆನಲ್ಲದೆ,
ಒಳಗೆ ಬಿಟ್ಟು ನಿಶ್ಚಿಂತನಲ್ಲವಯ್ಯ ನಾನು.
ಇಂತಪ್ಪ ಏಕಾಂತದ್ರೋಹಿ ಗುಪ್ತಪಾತಕಂಗೆ–
ಅಖಂಡೇಶ್ವರನು ಒಲಿ ಎಂದೊಡೆ ಎಂತೊಲಿವನಯ್ಯ ಎನಗೆ ? ॥ ೨೧೯ ॥

೪೬೩

ಬಾಳೆಯ ಎಲೆಯ ಮೇಲೆ ತುಪ್ಪವ ತೊಡೆದಂತೆ
ಒಪ್ಪವಿಟ್ಟು ವಚನವ ನುಡಿದೆನಲ್ಲದೆ,
ನಡೆಯಲ್ಲಿ ಒಪ್ಪವಿಟ್ಟು ನಡೆಯಲಿಲ್ಲವಯ್ಯ ನಾನು.
ನುಡಿಹೀನ, ನಡೆತಪ್ಪುಗ, ಜಡದೇಹಿ ಕಡುಪಾತಕಂಗೆ,
ಒಡೆಯ ಅಖಂಡೇಶ್ವರಲಿಂಗವು
ಸ್ವಪ್ನದಲ್ಲಿ ಸುಳಿಯಲಿಲ್ಲವಯ್ಯ ಎನಗೆ. ॥ ೨೨೦ ॥

೪೬೪

ದುರ್ಗುಣಿ ದುರಾಚಾರಿಯಯ್ಯ ನಾನು.
ದುರ್ಬುದ್ಧಿ ದುರ್ನೀತಿಯುಳ್ಳವನಯ್ಯ ನಾನು.
ದುಷ್ಟಾತ್ಮ ದುಷ್ಕರ್ಮಿಯಯ್ಯ ನಾನು.
ಶಿಪ್ಪೆಯ ಕೆದರಿದಂತೆ ಶತಕೋಟಿ
ಕೆಟ್ಟ ಗುಣದವನಯ್ಯ ನಾನು.
ಎನ್ನಲ್ಲಿ ಸದ್ಗುಣವನರಸಿದಡೇನು ಹುರುಳಿಲ್ಲವಯ್ಯ.
ಮನದಲ್ಲಿ ವಿಕಾರ ಹುಟ್ಟಿ ತನುವನಂಡಲೆದು
ವಿಷಯಾತುರನಾಗಿ ತಲೆಹುಳಿತ ಶ್ವಾನನಂತೆ
ದೆಸೆದೆಸೆಗೆ ಹರಿದಾಡಿದೆನಲ್ಲದೆ,
ನಿಮ್ಮನರಿವುತ್ತ ಬೆರೆವುತ್ತ ಭಕ್ತಿಜ್ಞಾನವೈರಾಗ್ಯದಲ್ಲಿ
ಸುಳಿಯಲಿಲ್ಲವಯ್ಯ ನಾನು ಅಖಂಡೇಶ್ವರಾ. ॥ ೨೨೧ ॥

೪೬೫

ಆಸೆವಿಡಿದು ಹಲವು ದೇಶಕ್ಕೆ ಹರಿದಾಡಿದೆನಲ್ಲದೆ
ನಿರಾಶೆವಿಡಿದು ನಿಜವಿರಕ್ತನಾಗಿ ಚರಿಸಲಿಲ್ಲವಯ್ಯ ನಾನು.
ವೇಷಾಡಂಬರದಲ್ಲಿ ಅಧಿಕನೆನಿಸಿ
ಲೌಕಿಕ ಮೆಚ್ಚಿ ನಡೆದೆನಲ್ಲದೆ
ಭಾಷೆಯಲ್ಲಿ ಅಧಿಕನೆನಿಸಿ ಲಿಂಗಮೆಚ್ಚಿ ನಡೆಯಲಿಲ್ಲವಯ್ಯ ನಾನು.
ಮಾತಿನಲ್ಲಿ ವಿರಕ್ತನೆಂದು

ಠಕ್ಕುತನದ ಕೀಳುಗಾರಿಕೆಯು ಸುಳ್ಳನೇ ನುಡಿದೆನಲ್ಲದೆ
ಮನದಲ್ಲಿ ಸರ್ವಸಂಗ ಪರಿತ್ಯಾಗಿಯಾದ
ಪರಮ ವಿರಕ್ತನಲ್ಲವಯ್ಯ ನಾನು.
ಇಂತಪ್ಪ ಹುಸಿಹುಂಡ ಹುಸಿಡಾಂಭಿಕ
ದುರ್ಮೂರ್ತಿ ಬರುಕಾಯನಿಗೆ
ಅಖಂಡೇಶ್ವರ ಎಂತು ಮೆಚ್ಚುವನು ಎನಗೆ? ॥ ೨೨೨ ॥

೪೮೬

ಮನದಲ್ಲಿ ಆಸೆ ಮೊಳೆದೋರಿ ಮತ್ತೆ ಮತ್ತೆ ಬೇಕೆಂಬಲ್ಲಿ
ಎನ್ನ ಮನ ಕಿರಿದಾಯಿತ್ತು.
ನುಡಿಯಲ್ಲಿ ಉಪಾಧಿಕೆ ಮೊಳೆದೋರಿ
ಸರ್ವರನು ಕೊಡು ಕೊಡು ಎಂದು ಬೇಡಿದಲ್ಲಿ
ಎನ್ನ ನುಡಿ ಕಿರಿದಾಯಿತ್ತು.
ಲಿಂಗದ ನೆನಹ ಜಂಗಮದ ಸೇವೆಯ–
ತೊರೆದು ಅಂಗವಿಕಾರಕ್ಕೆ ಹರಿದಲ್ಲಿ
ಎನ್ನ ನಡೆ ಕಿರಿದಾಯಿತ್ತು.
ಇಂತೀ ತ್ರಿಕರಣಶುದ್ಧವಿಲ್ಲದೆ ಅಬದ್ಧಪಾಪಿ
ಚಾಂಡಾಲ ದ್ರೋಹಿಗೆ
ಅಖಂಡೇಶ್ವರನು ಎಂತೊಲಿವನೊ ಎನಗೆ? ॥ ೨೨೩ ॥

೪೮೭

ಎನ್ನ ತನುವು ನಿಮ್ಮ ಚರಣವ ಪೂಜಿಸಲೊಲ್ಲದೆ
ಹಸಿವು ತೃಷೆ ವಿಷಯದಲ್ಲಿ ಹತವಾಗುತಿರ್ಪುದು ನೋಡಾ!
ಎನ್ನ ಮನವು ನಿಮ್ಮ ದಿವ್ಯನಾಮವ ನೆನೆಯಲೊಲ್ಲದೆ
ಬಿನುಗು ವಿಷಯಕ್ಕೆ ಹರಿಯುತಿರ್ಪುದು ನೋಡಾ!
ಶಿವಶಿವಾ, ಈ ತನುಮನದ ದುರ್ಗುಣದ ವರ್ತನೆಯನೇನೆಂಬೆನಯ್ಯ?
ಹಂದಿ ಹಡಿಕೆಯ ನೆನೆಸಿ ಹಾಳಗೇರಿಗೆ ಹೋಗುವಂತೆ
ಪ್ರಪಂಚಿನತ್ತ ಓಡಾಡುತಿರ್ಪುವಯ್ಯ
ಎನ್ನ ದುರ್ಗುಣಂಗಳು ಅಖಂಡೇಶ್ವರಾ. ॥ ೨೨೪ ॥

೪೮೮

ತನುವ ನಿಮಗೊಪ್ಪಿಸಿ ತನುಶುದ್ಧನಾಗಲರಿಯೆನಯ್ಯ ನಾನು.
ಮನವ ನಿಮಗೊಪ್ಪಿಸಿ ಮನಶುದ್ಧನಾಗಲರಿಯೆನಯ್ಯ ನಾನು.
ಧನವ ನಿಮಗೊಪ್ಪಿಸಿ ಧನಶುದ್ಧನಾಗಲರಿಯೆನಯ್ಯ ನಾನು.
ಈ ತನುಮನಧನದಲ್ಲಿ ಶುದ್ಧನಲ್ಲದ ಪ್ರಪಂಚಿನ
ಡಂಭಕ ನಾನಯ್ಯ ಅಖಂಡೇಶ್ವರಾ. ॥ ೨೨೫ ॥

**೪೬೯**

ತನುವ ಕೊಟ್ಟು, ನಿಮ್ಮನೊಲಿಸಿಹೆನೆಂದಡೆ,
ಆ ಭಾವವೆನಗೆ ತಿಳಿಯದು.
ಮನವ ಕೊಟ್ಟು, ನಿಮ್ಮನೊಲಿಸಿಹೆನೆಂದಡೆ,
ಆ ಭಾವವೆನಗೆ ತಿಳಿಯದು.
ಧನವ ಕೊಟ್ಟು ನಿಮ್ಮನೊಲಿಸಿಹೆನೆಂದಡೆ,
ಆ ಭಾವವೆನಗೆ ತಿಳಿಯದು.
ಸತಿ ಇದ್ದ ಮನೆಗೆ ಪತಿಯೊಲಿದು ಬರುವಂತೆ
ನೀವೇ ಒಲಿದು ಬಂದು ಎನ್ನ ತನು ಮನ ಧನದಲ್ಲಿ
ಭರಿತನಾಗಯ್ಯ ಅಖಂಡೇಶ್ವರಾ. || ೨೨೬ ||

**೪೭೦**

ಸತ್ತು ಹುಟ್ಟುವನಲ್ಲ ನೋಡಾ ಮಹೇಶ್ವರನು.
ಹುಟ್ಟಿ ಸಾವವನಲ್ಲ ನೋಡಾ ಮಹೇಶ್ವರನು.
ಇಹಲೋಕದ ಭೋಗವ ಬಯಸುವನಲ್ಲ ನೋಡಾ ಮಹೇಶ್ವರನು.
ಪರಲೋಕದ ಮೋಕ್ಷವ ಬಯಸುವನಲ್ಲ ನೋಡಾ ಮಹೇಶ್ವರನು.
ಇಹಪರವ ಹೊದ್ದದ ಧೀರನು.
ಹಿಂದುಮುಂದೆಂಬ ದ್ವಂದ್ವಕರ್ಮಂಗಳ ಮೀರಿದ
ಅಖಂಡೇಶ್ವರಾ. || ೨೨೭ ||

**೪೭೧**

ನುಡಿಯಲ್ಲಿ ಎರಡು ನುಡಿಯನು; ನಡೆಯಲ್ಲಿ ಎರಡು ನಡೆಯನು;
ನುಡಿಯಂತೆ ನಡೆ ವಿಸ್ತರಿಸುವ; ನಡೆಯಂತೆ ನುಡಿ ವಿಸ್ತರಿಸುವ ;
ಹಿಡಿವನು ಗುರುಲಿಂಗಜಂಗಮ ದಾಸೋಹವ.
ಬಿಡುವನು ಹೊನ್ನು ಹೆಣ್ಣು ಮಣ್ಣೆಂಬ ತ್ರಿಮಲದಾಸೆಯ.
ಇಂತಪ್ಪ ವೀರಮಾಹೇಶ್ವರನನೇನೆಂಬೆನಯ್ಯ
ಅಖಂಡೇಶ್ವರಾ. || ೨೨೮ ||

**೪೭೨**

ಹಿಡಿದುದ ಬಿಡುವವನಲ್ಲ; ಬಿಟ್ಟುದ ಹಿಡಿವವನಲ್ಲ.
ನಡುಮಧ್ಯದಲ್ಲಿ ಬಡತನ ಎಡರು ಕಂಟಕ ಬಂದಲ್ಲಿ,
ಕಡುದುಃಖಿಯಾಗಿ ಬಳಲುವವನಲ್ಲ.
ಅಡಿಗಡಿಗೆ ಲಿಂಗಪೂಜೆಯ,
ಅಡಿಗಡಿಗೆ ಜಂಗಮದಾಸೋಹವ ಮರೆವವನಲ್ಲ,
ಇದು ಕಾರಣ ಅಖಂಡೇಶ್ವರಾ,
ನಿಮ್ಮ ಮಹೇಶ್ವರನ ಚಾರಿತ್ರವು ಇಹಲೋಕದೊಳಗಿಲ್ಲಾ. || ೨೨೯ ||

೪೭೩

ಪರಧನ ಪರಸ್ತ್ರೀಯರ ಬಿಟ್ಟಡೆ
ಗುರುಲಿಂಗ ಜಂಗಮವು ಸಾಧ್ಯವು ನೋಡಾ.
ಇಹಪರ ಭೋಗಮೋಕ್ಷದ ಬಯಕೆಯ ಬಿಟ್ಟಡೆ
ಚರಶೇಷವು ಸಾಧ್ಯವು ನೋಡಾ.
ಕರಣಾದಿ ಗುಣಂಗಳಿಗೆ ಹರಿಯದಿರ್ದಡೆ
ಅರುಹು ಸಾಧ್ಯವು ನೋಡಾ.
ತಾನಿದಿರೆಂಬುಭಯವಳಿದಡೆ
ನಿಜವು ಸಾಧ್ಯವು ನೋಡಾ ಅಖಂಡೇಶ್ವರಾ. ॥ ೨೩೦ ॥

೪೭೪

ಮಾತಿನಲ್ಲಿ ಕರ್ಕಶ, ಮನದಲ್ಲಿ ಘಾತಕತನವುಳ್ಳವನ
ಕನಿಷ್ಠನೆಂಬರು.
ಮಾತಿನಲ್ಲಿ ಎಲ್ಲ, ಮನದಲ್ಲಿ ಕತ್ತರಿಯುಳ್ಳವನ
ಮಧ್ಯಮನೆಂಬರು.
ಮಾತಿನಲ್ಲಿ ಮೃದು, ಮನದಲ್ಲಿ ಪ್ರೀತಿಯುಳ್ಳವನ
ಉತ್ತಮನೆಂಬರು ನೋಡಾ ಜಗದವರು.
ಮಾತಿನಲ್ಲಿ ಮಂತ್ರ ಮನದಲ್ಲಿ ಮಹಾನುಭಾವ
ಆತ್ಮದಲ್ಲಿ ಜ್ಯೋತಿಯ ಬೆಳಗುತಿಪ್ಪನಾಗಿ
ಉತ್ತಮನಲ್ಲ ಮಧ್ಯಮನಲ್ಲ ಕನಿಷ್ಠನಲ್ಲ ನೋಡಾ,
ಅಖಂಡೇಶ್ವರಾ ನಿಮ್ಮ ಶರಣನು. ॥ ೨೩೧ ॥

೪೭೫

ತಾ ಒಳ್ಳಿಯವನಾದಡೆ ಸರ್ವರೂ ತನಗೆ
ಒಳ್ಳಿಯವರಾಗಿರ್ಪರು.
ತಾ ಹೀನನಾದಡೆ ಸರ್ವರೂ ತನಗೆ ಹೀನರಾಗಿರ್ಪರು.
ತಾ ಒಳ್ಳಿಯವನಾಗಿ ಸರ್ವರೂ ತನಗೆ ಹೀನರಾದಡೆ
ಅದು ತನ್ನ ಪೂರ್ವದ ಕರ್ಮ.
ತಾ ಹೀನನಾಗಿ ಸರ್ವರೂ ತನಗೆ ಒಳ್ಳಿಯವರಾದಡೆ
ಅದು ತನ್ನ ದೈವದ ಬಲವು ನೋಡಾ ಅಖಂಡೇಶ್ವರಾ. ॥ ೨೩೨ ॥

೪೭೬

ತೊತ್ತಿಂಗೆ ಒಡತಿಯ ಬಲವಯ್ಯಾ.
ಬಡವಂಗೆ ಬಲ್ಲಿದನ ಬಲವಯ್ಯಾ.
ಆಳಿಂಗೆ ಅರಸನ ಬಲವಯ್ಯಾ.

ನನಗೆ ನಮ್ಮ ಗುರುಲಿಂಗಜಂಗಮದ ಬಲವಯ್ಯ
ಅಖಂಡೇಶ್ವರಾ. || ೨೩೩ ||

೪೭೭

ಕಾಯವ ದಂಡಿಸಿ, ಕಂಡ ಕಂಡ ಕ್ಷೇತ್ರಂಗಳಿಗೆ ಹೋಗಿ
ತೊಳಲಿ ಬಳಲಿದಡಿಲ್ಲ.
ಜಪತಪ ಹೋಮ ನೇಮ ನಿತ್ಯಂಗಳ ಮಾಡಿದಡಿಲ್ಲ.
ಅಶನ ವಸನ ವಿಷಯ ವಿಕಾರಂಗಳ ತೊರೆದಡಿಲ್ಲ.
ಅಖಂಡೇಶ್ವರಾ, ನೀವು ಒಲಿದು ಸಲಹದನ್ನಕ್ಕರ
ಏನು ಮಾಡಿದಡೇನು ಫಲವಿಲ್ಲವಯ್ಯ. || ೨೩೪ ||

೪೭೮

ಕನಕ ಕಾಮಿನಿ ಭೂಮಿಗಾಗಿ ಹೊಡೆದಾಡಿ ಕೆಟ್ಟಿತೀ ಜಗವೆಲ್ಲ.
ಇದ ಕಂಡು ಕೇಳಿ ನೀನೇತಕ ಇಚ್ಛೈಸುವೆ ಎಲೆ ಹುಚ್ಚು ಮನವೆ !
ಹಗಲು ಕಂಡ ಕಮರಿಯ ಇರುಳು ಬೀಳುವರೆ ?
ಎಲೆ ಮರುಳು ಮನವೆ ಕಡಬೇಡ ಕೆಡಬೇಡ.
ನಿನಗೊಂದು ಉಪಾಯವ ಹೇಳುವೆ ಕೇಳು ಎಲೆ ಮರುಳುಮನವೆ.
ಜಗದ ಆಗು ಹೋಗನರಿತು
ಜಗದೀಶ ಅಖಂಡೇಶ್ವರನ ನೆರೆನಂಬಿದೆಯಾದಡ
ನಿನಗೆ ಜನನ ಮರಣಂಗಳು ವಿರಹಿತವಾಗಿ
ಪರಮಪದವು ದೊರೆಕೊಂಬುದು ನೋಡಾ ಎಲೆ ಮನವೆ. || ೨೩೫ ||

೪೭೯

ಅಂದೊಬ್ಬ ದೇವ, ಇಂದೊಬ್ಬ ದೇವನೆಂದು
ಸಂದೇಹಗೊಳಬೇಡ ಎಲೆ ಮನವೆ.
ಅಂದು ಕೈಲಾಸದಲ್ಲಿ ಮನುಮುನಿ ದೇವದಾನವರಿಂದ
ಓಲಗವ ಕೊಂಬ ದೇವ ಇಂದು ಎನ್ನ ಕರಸ್ಥಲದಲ್ಲಿದ್ದಾನೆ ;
ಇಲ್ಲಿಯೇ ನೋಡು ಎಲೆ ಮನವೆ.
ಅಂದು ಜೋಳಾದಿಗೊಲಿದ ದೇವ ಇಂದು ಎನ್ನ ಕರಸ್ಥಲದಲ್ಲಿದ್ದಾನೆ;
ಇಲ್ಲಿಯೇ ನೋಡು ಎಲೆ ಮನವೆ.
ಅಂದು ಅರವತ್ತುಮೂರು ಪುರಾತನರಿಗೊಲಿದು
ಶಾಂಭವಪುರಕ್ಕೊಯ್ದ ದೇವ
ಇಂದು ಎನ್ನ ಕರಸ್ಥಲದಲ್ಲಿದ್ದಾನ ;
ಇಲ್ಲಿಯೇ ನೋಡು ಎಲೆ ಮನವ.
ಅಂದು ಬಸವಣ್ಣ ಮೊದಲಾದ ಅಸಂಖ್ಯಾತ ಪ್ರಮಥಗಣಂಗಳ

ತನ್ನೊಳಗೆ ಗರ್ಭೀಕರಿಸಿಕೊಂಡ ದೇವ
ಇಂದು ಎನ್ನ ಕರಸ್ಥಲದಲ್ಲಿದ್ದಾನೆ ;
ಇಲ್ಲಿಯೆ ನೋಡು ಎಲೆ ಮನವೆ.
ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡು ಬೆಳಗುವ
ಪರಶಿವನ ನಂಬಿ ನಿಶ್ಚಯಿಸಿಕೊಂಡೆಯಾದಡೆ
ನಮ್ಮ ಅಖಂಡೇಶ್ವರಲಿಂಗದಲ್ಲಿ
ನಿನ್ನಿಂದ ಬಿಟ್ಟು ಸುಖಿಗಳಾರಿಲ್ಲ ನೋಡಾ ಎಲೆ ಮನವೆ. ॥ ೨೩೬ ॥

**೪೮೦**

ನೋಡಬಾರದು ಪರಸತಿಯರ.
ಮಾಡಬಾರದು ಸುಗುಣವಿಲ್ಲದವರಿಗುಪಚಾರವ.
ಬೇಡಬಾರದು ಸದ್‌ಭಕ್ತರಲ್ಲದವರ.
ಹಾಡಬಾರದು ಶಿವನಲ್ಲದೆ ಅನ್ಯದೈವಂಗಳ.
ಅದೇನು ಕಾರಣವೆಂದೊಡೆ :
ಮುಂದೆ ಭವಬಂಧನದ ತೊಡಕು ಉಂಟಾದ ಕಾರಣ.
ಅಖಂಡೇಶ್ವರಾ, ನಿಮ್ಮನಲ್ಲದೆ ಅನ್ಯವನರಿಯದಂತೆ ಮಾಡು ಎನ್ನ,
ನಿಮ್ಮ ನಾ ಬೇಡಿಕೊಂಬೆನು. ॥ ೨೩೭ ॥

**೪೮೧**

ನೋಟ ಭಂಗ ಪರಸತಿಯರ.
ಬೇಟ ಭಂಗ ಪರಸತಿಯರ.
ಕೂಟ ಭಂಗ ಪರಸತಿಯರ.
ಅದೇನು ಕಾರಣವೆಂದೊಡೆ :
ಮುನ್ನ ಅರಿಯದೆ ಕೆಟ್ಟರು ಕೀಚಕ ರಾವಣ ದೇವೇಂದ್ರರು.
ಇನ್ನು ಬಯಸುವವರಿಗೆ ಅದೇ ವಿಧಿ ನೋಡಾ
ಅಖಂಡೇಶ್ವರಾ. ॥ ೨೩೮ ॥

**೪೮೨**

ಇಂದ್ರಿಯಂಗಳಿಚ್ಛೆಯಲ್ಲಿ ಇರಿಸದಿರಯ್ಯ ಎನ್ನ.
ಕರಣಂಗಳ ಕತ್ತಲೆಯಲ್ಲಿ ಕೆಡಹದಿರಯ್ಯ ಎನ್ನ.
ಕಾಯಜೀವ ಸಂಸಾರದಲ್ಲಿ ಕಳವಳಿಸಿ
ಮುಂದುಗೆಡಿಸದಿರಯ್ಯ ಎನ್ನ.
ಮನದ ಮರವೆಯಲ್ಲಿ ಸುಳಿಸದಿರಯ್ಯ ಎನ್ನ.
ಭಾವದ ಭ್ರಮೆಯಲ್ಲಿ ಬಳಲಿಸದಿರಯ್ಯ ಎನ್ನ.
ಅಖಂಡೇಶ್ವರಾ, ನಿಮ್ಮ ನಾ ಸೆರಗೊಡ್ಡಿ ಬೇಡಿಕೊಂಬೆನು. ॥ ೨೩೯ ॥

**೪೮೩**

ಗುರುಹರ ವಚನ ಪ್ರಮಾಣದಿಂದೆ ಹಿಡಿದ
ವ್ರತಶೀಲನೇಮಂಗಳ ಕಡೆತನಕ ಬಿಡದಿರಬೇಕು.
ಜಾತಿ ವರ್ಣ ಆಶ್ರಮ ಕುಲ ಗೋತ್ರಂಗಳೆಂಬ
ತನ್ನ ಪೂರ್ವಾಶ್ರಮ ಪದ್ಧತಿಯ ಮರೆಯಬೇಕು.
ಇಂದಿಗೆ ಬೇಕು ನಾಳಿಗೆ ಬೇಕೆಂಬ
ಆಸೆಯಾಮಿಷವ ಜರೆಯಬೇಕು.
ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳ ಬಲೆಯ ಹರಿಯಬೇಕು.
ಅರುಹು ಆಚಾರ ಸತ್‌ಕ್ರಿಯಾಸಂಪನ್ನನಾಗಿರಬೇಕು.
ಇಂತೀ ಮರ್ಮವನರಿಯದೆ ಬರಿದೆ ದೇವಭಕ್ತರೆನಿಸಿಕೊಂಬ
ಭವಪಾತಕರ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ. || ೨೪೦ ||

**೪೮೪**

ಎನ್ನ ಜನನಮರಣಂಗಳೆಲ್ಲ ಜಾರಿಹೋದವಯ್ಯ
ನಿಮ್ಮ ನೆನಹಿನ ಬಲದಿಂದೆ.
ಎನ್ನ ಪುಣ್ಯಪಾಪಂಗಳೆಲ್ಲ ಪಲ್ಲಟವಾದವಯ್ಯ
ನಿಮ್ಮ ನೆನಹಿನ ಬಲದಿಂದೆ.
ಎನ್ನ ಪಂಚೇಂದ್ರಿಯ ಸಪ್ತವ್ಯಸನಂಗಳೆಲ್ಲ ಸಣ್ಣಿಸಿ ಹೋದವಯ್ಯ
ನಿಮ್ಮ ನೆನಹಿನ ಬಲದಿಂದೆ.
ಎನ್ನ ಅಷ್ಟಮದ ಅರಿಷಡ್ವರ್ಗಂಗಳೆಲ್ಲ ನಷ್ಟವಾದವಯ್ಯ
ನಿಮ್ಮ ನೆನಹಿನ ಬಲದಿಂದೆ.
ಎನ್ನ ತನುಕರಣೇಂದ್ರಿಯಂಗಳೆಲ್ಲ ತರಹರವಾದವಯ್ಯ
ನಿಮ್ಮ ನೆನಹಿನ ಬಲದಿಂದೆ.
ಎನ್ನ ಮನ ಪ್ರಾಣ ಭಾವಂಗಳೆಲ್ಲ ಬರಿದಾಗಿ ಹೋದವಯ್ಯ
ನಿಮ್ಮ ನನಹಿನ ಬಲದಿಂದೆ ಅಖಂಡೇಶ್ವರಾ. || ೨೪೧ ||

**೪೮೫**

ಎನ್ನ ಕರಕಮಲಮಧ್ಯದಲ್ಲಿ ಪರಮ ಶಿವಲಿಂಗವ ತುಂಬಿ,
ಆ ಲಿಂಗದ ಮಧ್ಯದಲ್ಲಿ ಕಂಗಳ ತುಂಬಿ,
ಆ ಕಂಗಳ ಮಧ್ಯದಲ್ಲಿ ಮನವ ತುಂಬಿ,
ಆ ಮನದ ಮಧ್ಯದಲ್ಲಿ ಭಾವವ ತುಂಬಿ
ಪರವಶನಾಗಿರ್ದೆನಯ್ಯ ನಿಮ್ಮೊಳಗೆ ಅಖಂಡೇಶ್ವರಾ. || ೨೪೨ ||

೪೮೬

ಪ್ರಾಣವು ಲಿಂಗವ ನುಂಗಿತ್ತೋ,
ಲಿಂಗವು ಪ್ರಾಣವ ನುಂಗಿತ್ತೋ ಎಂದರಿಯನಯ್ಯ.
ಭಾವವು ಲಿಂಗದಲ್ಲಿ ತುಂಬಿತ್ತೋ,
ಲಿಂಗವು ಭಾವದಲ್ಲಿ ತುಂಬಿತ್ತೋ ಎಂದರಿಯನಯ್ಯ.
ಮನವು ಲಿಂಗದಲ್ಲಿ ಮುಳುಗಿತ್ತೊ,
ಲಿಂಗವು ಮನದಲ್ಲಿ ಮುಳುಗಿತ್ತೋ ಎಂದರಿಯನಯ್ಯ.
ಅಖಂಡೇಶ್ವರಾ, ನಿಮ್ಮ ಕೂಡುವ ವಿಕಳಾವಸ್ಥೆಯಲ್ಲಿ
ಏನೇನೂ ಅರಿಯದಿರ್ದೆನಯ್ಯ. ॥ ೨೪೩ ॥

೪೮೭

ಘನತರದಿಷ್ಟಲಿಂಗದಲ್ಲಿ ಅನಿಮಿಷದೃಷ್ಟಿ ಬಲಿದು,
ಮನ ಕರಗಿ, ತನು ಉಬ್ಬಿ, ಹೃದಯಕಮಲ ಪಸರಿಸಿ,
ಸರ್ವಾಂಗವು ಗುಡಿಗಟ್ಟಿ,
ಕಂಗಳಲ್ಲಿ ಪರಿಣಾಮಜಲ ಉಕ್ಕಿ ಹೊರಸೂಸುತ್ತ,
ಪರಮಕಾಷ್ಠಯಂತೆ ಚಿತ್ರದ ರೂಹಿನಂತೆ
ಪರಬ್ರಹ್ಮಲಿಂಗದಲ್ಲಿ ಬೆರೆದು ಪರವಶಗೊಂಡಿರ್ಪ
ಮಹಾಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೨೪೪ ॥

೪೮೮

ಬೇಕೆಂಬನಲ್ಲವಯ್ಯ ನಿಮ್ಮ ಶರಣ.
ಬೇಡೆಂಬನಲ್ಲವಯ್ಯ ನಿಮ್ಮ ಶರಣ.
ಲೋಕದ ನಡೆಯಂತೆ ನಡೆಯನಯ್ಯ ನಿಮ್ಮ ಶರಣ.
ಕಾಕುನುಡಿ ಸಟೆ ಕುಟಿಲ ಕುಹಕ ವ್ಯಾಪಾರವ
ಹೊದ್ದನಯ್ಯ ನಿಮ್ಮ ಶರಣ.
ಏಕಲಿಂಗನಿಷ್ಠಾಪರನಾಗಿ ಆವಾವ ಪ್ರಪಂಚವನರಿಯನಯ್ಯ
ನಿಮ್ಮ ಶರಣ ಅಖಂಡೇಶ್ವರಾ. ॥ ೨೪೫ ॥

೪೮೯

ನಿಮ್ಮ ನೋಡಿ ನೋಡಿ ಎನ್ನ ಕಂಗಳು ದಣಿಯವಯ್ಯ.
ನಿಮ್ಮ ಹಾಡಿ ಹಾಡಿ ಎನ್ನ ಜಿಹ್ವೆ ದಣಿಯದಯ್ಯ.
ನಿಮ್ಮ ಪೂಜೆಯ ಮಾಡಿ ಮಾಡಿ ಎನ್ನ ಕೈಗಳು ದಣಿಯವಯ್ಯ.
ನಿಮ್ಮ ನೆನೆನೆನೆದು ಎನ್ನ ಮನವು ದಣಿಯದಯ್ಯ
ಅಖಂಡೇಶ್ವರಾ. ॥ ೨೪೬ ॥

೪೯೦

ಎನ್ನ ಕಂಗಳು ನಿಮ್ಮ ನೋಡಲಿಚ್ಛೈಸುತಿರ್ಪುವು.
ಎನ್ನ ಮನವು ನಿಮ್ಮ ನೆನಹ ಹಾರೈಸುತಿರ್ಪುದು.
ಎನ್ನ ಭಾವವು ನಿಮ್ಮ ಬಯಕೆಯು
ಬಯಸುತಿರ್ಪುದಯ್ಯ ಅಖಂಡೇಶ್ವರಾ. || ೨೪೭ ||

೪೯೧

ನಾನಾ ವರ್ಣದ ಕಾಷ್ಠವ ಸುಟ್ಟಲ್ಲಿ
ಏಕವರ್ಣದ ಬೂದಿಯಪ್ಪುದಲ್ಲದೆ
ಅಲ್ಲಿ ಕಾಷ್ಠದ ಕುಲ ಉಂಟೇ ಅಯ್ಯ ?
ತೊಟ್ಟು ಬಿಟ್ಟ ಹಣ್ಣು ಮರಳಿ ತೊಟ್ಟ ಹತ್ತಬಲ್ಲುದೇ ಅಯ್ಯ ?
ಕಷ್ಟಜನ್ಮದಲ್ಲಿ ಹುಟ್ಟಿದಾತನಾದಡಾಗಲಿ
ನಟ್ಟನೆ ಶ್ರೀಗುರುಕಾರುಣ್ಯವ ಪಡೆದು ಇಷ್ಟಲಿಂಗಸಂಬಂಧಿಯಾಗಿ,
ಆಚಾರ ಕ್ರಿಯಾಸಂಪನ್ನನಾದ ಶರಣನ
ಜಾತಿಪೂರ್ವವ ಎತ್ತಿ ದೂಷಿಸುವ ಪಾತಕರ ಬಾಯಲ್ಲಿ
ಬಾಲಹುಳುಗಳು ಸುರಿಯದೆ ಮಾಣ್ಬವೆ ಹೇಳಾ
ಅಖಂಡೇಶ್ವರಾ ? || ೨೪೮ ||

೪೯೨

ನೀರು ಗಟ್ಟಿಗೊಂಡು ಮುತ್ತಪ್ಪುದಲ್ಲದೆ ಮುತ್ತು ನೀರಪ್ಪುದೇ ಅಯ್ಯ ?
ಹಾಲು ಹಪ್ಪುಗೊಂಡು ತುಪ್ಪವಪ್ಪುದಲ್ಲದೆ
ತುಪ್ಪ ಹಾಲಪ್ಪುದೇ ಅಯ್ಯ ?
ಹೀನಜಾತಿಯಲ್ಲಿ ಜನಿಸಿದ ನರನು
ಗುರುವಿನ ಕಾರುಣ್ಯದಿಂದ ಶಿವಜಾತಶರಣನಾದ ಬಳಿಕ
ಮರಳಿ ನರನಪ್ಪನೇ ಅಯ್ಯ ಅಖಂಡೇಶ್ವರಾ. || ೨೪೯ ||

೪೯೩

ಜಾತಿಪೂರ್ವಾಶ್ರಯವ ಕಳೆದು, ಸೂತಕ ಪಾತಕಂಗಳನಳಿದು,
ಅಂಗತ್ರಯಗಳಲ್ಲಿ ಮುಸುಕಿದ ಅಜ್ಞಾನ ತಾಮಸವ ಜರಿದು,
ಲಿಂಗತ್ರಯಂಗಳ ಸಂಗಸಮರಸವನರಿದ ಶರಣಂಗೆ
ಉತ್ಪತ್ತಿ–ಸ್ಥಿತಿ–ಲಯಂಗಳಿಲ್ಲ ನೋಡಾ !
ಅದೇನು ಕಾರಣವೆಂದೊಡೆ :
ಇಷ್ಟಲಿಂಗದಲ್ಲಿ ಉತ್ಪತ್ತಿ, ಪ್ರಾಣಲಿಂಗದಲ್ಲಿ ರಕ್ಷಣೆ,
ಭಾವಲಿಂಗದಲ್ಲಿ ಬಯಲನೈದಿದ ಮಹಾಶರಣಂಗೆ
ಹುಟ್ಟುಹೊಂದುಗಳು ನಷ್ಟವಾದುವಯ್ಯ ಅಖಂಡೇಶ್ವರಾ. || ೨೫೦ ||

೪೯೪

ತನು ಲಿಂಗವಾದ ಶರಣಂಗೆ ತಾಪತ್ರಯಂಗಳಿಲ್ಲ.
ಮನ ಲಿಂಗವಾದ ಶರಣಂಗೆ ಮಾಯಾವಾಸನಂಗಳಿಲ್ಲ.
ಪ್ರಾಣ ಲಿಂಗವಾದ ಶರಣಂಗೆ ಪ್ರಪಂಚಿನ ಕುರುಹಿಲ್ಲ.
ಸರ್ವಾಂಗಲಿಂಗವಾದ ಶರಣಂಗೆ
ಗರ್ವ ಅಹಂಕಾರವಿಲ್ಲ ನೋಡಾ ಅಖಂಡೇಶ್ವರಾ. ॥ ೨೫೧ ॥

೪೯೫

ಎನ್ನ ಜನನ ಸೂತಕ ಹೋಯಿತ್ತು
ಶ್ರೀಗುರುವಿನ ಪಾಣಿಪದ್ಮದಲ್ಲಿ ಜನಿಸಿದೆನಾಗಿ.
ಎನ್ನ ಜಾತಿಸೂತಕ ಹೋಯಿತ್ತು ಅಜಾತ ಲಿಂಗಸಂಗದಿಂದ.
ಎನ್ನ ಕುಲಸೂತಕ ಹೋಯಿತ್ತು ಶಿವನಲ್ಲದೆ
ಅನ್ಯದೈವವನರಿಯೆನಾಗಿ.
ಎನ್ನ ಛಲಸೂತಕ ಹೋಯಿತ್ತು ಜೀವಭಾವವಿಲ್ಲವಾಗಿ.
ಎನ್ನ ಮನಸೂತಕ ಹೋಯಿತ್ತು ನಿಮ್ಮ ನಾಮವ ನೆನೆನೆನೆದು.
ಎನ್ನ ಕಂಗಳ ಸೂತಕ ಹೋಯಿತ್ತು
ನಿಮ್ಮ ಮಂಗಳಸ್ವರೂಪವ ನೋಡಿ ನೋಡಿ.
ಎನ್ನ ಕೈಯಸೂತಕ ಹೋಯಿತ್ತು
ನಿಮ್ಮ ಮುಟ್ಟಿ ಪೂಜಿಸಿ ಪೂಜಿಸಿ.
ಎನ್ನ ಕಿವಿಯ ಸೂತಕ ಹೋಯಿತ್ತು
ನಿಮ್ಮ ಕೀರ್ತಿಯ ಕೇಳಿ ಕೇಳಿ.
ಎನ್ನ ಜಿಹ್ವೆಯ ಸೂತಕ ಹೋಯಿತ್ತು
ನಿಮ್ಮ ಪರಮಪ್ರಸಾದವ ಸವಿಸವಿದು.
ಇಂತೀ ಸರ್ವಸೂತಕವ ಹರಿದು, ಪೂರ್ವಕಲ್ಪಿತಂಗಳ ಮೀರಿ.
ನಿಮ್ಮೊಳಗೆ ನಿಜನಿಶ್ಚಿಂತನಿವಾಸಿಯಾಗಿರ್ದೆನಯ್ಯ ಅಖಂಡೇಶ್ವರಾ. ॥ ೨೫೨ ॥

೪೯೬

ಆಚಾರ ವಿಚಾರವೆಂದರಿಯರು.
ಅಂತರಂಗ ಬಹಿರಂಗವೆಂದರಿಯರು.
ಸತ್‌ಕ್ರಿಯೆ ಸಮ್ಯಕ್‌ಜ್ಞಾನವೆಂದರಿಯರು.
ಕಾಯಜೀವದ ಕರ್ಮಕತ್ತಲೆಯಲ್ಲಿ ಬಿದ್ದು
ಕರಣಮಥನ ಕರ್ಕಶದಿಂದೆ ಹೊಡೆದಾಡಿ ಹೊತ್ತುಗಳೆದು
ಹೊಲಬುದಪ್ಪಿ ಸತ್ತುಹೋಗುವ ವ್ಯರ್ಥಜೀವಿಗಳ
ಭಕ್ತಮಾಹೇಶ್ವರರೆಂದಡೆ ಭವ ಹಿಂಗದಯ್ಯ ಅಖಂಡೇಶ್ವರಾ. ॥ ೨೫೩ ॥

೪೯೭

ನುಡಿಯಲಾಗದು ನುಡಿಯಲಾಗದು
ನಯನುಡಿಯಿಲ್ಲದವರೊಡನೆ.
ನುಡಿಯಲಾಗದು ನುಡಿಯಲಾಗದು
ದಯಗುಣವಿಲ್ಲದವರೊಡನೆ.
ನುಡಿಯಲಾಗದು ನುಡಿಯಲಾಗದು
ಭಯಭಕ್ತಿಯಿಲ್ಲದವರೊಡನೆ.
ನುಡಿಯಲಾಗದು ನುಡಿಯಲಾಗದು
ಸ್ವಯಜ್ಞಾನವಿಲ್ಲದವರೊಡನೆ ಶಿವಾನುಭಾವವ !
ಅದೇನು ಕಾರಣವೆಂದೊಡೆ :
ತನ್ನ ಅರುಹಿಂಗೆ ಹಾನಿ, ಮಹಾ ಪರಿಣಾಮ ಕೆಡುವುದು.
ಇದು ಕಾರಣ ಕಷುಪಾತಕ ಜಡಜೀವಿಗಳೊಡನೆ
ಲಕ್ಷಕ್ಕೊಮ್ಮೆ ಕೋಟಿಗೊಂದುವೇಳೆಯಾದಡೂ
ನುಡಿಯಲಾಗದಯ್ಯ ಅಖಂಡೇಶ್ವರಾ. ॥ ೨೫೪ ॥

೪೯೮

ನುಡಿಯಬೇಕು ಸತ್ಯಸದಾಚಾರವುಳ್ಳವರೊಡನೆ
ಅನುಭಾವವ.
ನುಡಿಯಬೇಕು ಭಕ್ತಿಯುಕ್ತಿ
ಮುಕ್ತಿಯುಳ್ಳವರೊಡನೆ ಅನುಭಾವವ.
ನುಡಿಯಬೇಕು ಸಾಧು ಸಜ್ಜನ ಸದ್ಭಕ್ತ
ಶರಣರೊಡನೆ ಅನುಭಾವವ.
ನುಡಿಯಬೇಕು ನಮ್ಮ ಅಖಂಡೇಶ್ವರಲಿಂಗವ
ಕೂಡಬೇಕೆಂಬ ಬಯಕೆಯುಳ್ಳವರೊಡನೆ
ಶಿವಾನುಭಾವವ. ॥ ೨೫೫ ॥

೪೯೯

ಇಷ್ಟಲಿಂಗದಲ್ಲಿ ನೈಷ್ಠೆ ಬಲಿಯರು.
ಪ್ರಾಣಲಿಂಗದಲ್ಲಿ ಪ್ರತಿಷ್ಠೆಯನರಿಯರು.
ಬರಿದೆ ಇಷ್ಟಲಿಂಗಸಂಬಂಧವ
ಪ್ರಾಣಲಿಂಗದ ನಿರ್ದೇಶವ ಬಲ್ಲೆವೆಂಬ
ಭ್ರಷ್ಟರನೇನೆಂಬೆನಯ್ಯ ಅಖಂಡೇಶ್ವರಾ ! ॥ ೨೫೬ ॥

೫೦೦

ಇಷ್ಟಲಿಂಗದ ನಿಜವನರಿಯದೆ ಪ್ರಾಣಲಿಂಗದ ಮಾತನಾಡುವ
ನೀತಿಹೀನರ ನಾನೇನೆಂಬೆನಯ್ಯ ?

ಹೆತ್ತ ತಂದೆಯನರಿಯದೆ ಮುತ್ತ್ಯಾನ ಪ್ರತಾಪವ ಹೇಳುವ
ಕತ್ತೆ ಮೂಳರನೇನೆಂಬೆನಯ್ಯ ಅಖಂಡೇಶ್ವರಾ ? ॥ ೨೫೭ ॥

೫೦೧

ಇಷ್ಟಲಿಂಗ ಪ್ರಾಣಲಿಂಗ ಒಂದೆಯೆಂದರಿಯದೆ
ಭಿನ್ನವಿಟ್ಟು ನುಡಿವ ಭ್ರಾಂತರ ಮಾತ ಕೇಳಲಾಗದು.
ಅದೇನು ಕಾರಣವೆಂದೊಡೆ :
ತಿಳಿದುಪ್ಪ ಗಟ್ಟಿಗೊಂಡು ಹೆರೆಮುಪ್ಪವಾದಂತೆ,
ನಿರಾಕಾರ ಪರಬ್ರಹ್ಮವ ಸಾಕಾರಗೊಳಿಸಿ,
ಶ್ರೀಗುರುಸ್ವಾಮಿ ಕರುಣಿಸಿ
ಕರಸ್ಥಲಕ್ಕೆ ಇಷ್ಟಲಿಂಗವೆನಿಸಿ ಕೊಟ್ಟಬಳಿಕ,
ಆ ಲಿಂಗದಲ್ಲಿ ನಿಷ್ಠೆ ಬಲಿಯಲು
ಬಾಹ್ಯ ಕರಣಂಗಳು ತರಹರವಾಗಿ,
ಆ ಲಿಂಗದ ಚಿತ್‌ಕಳೆ ದೃಷ್ಟಿಸೂತ್ರದಿಂದ
ತನ್ನ ಅಂತರಂಗಕ್ಕೆ ವೇಧಿಸಿ ಪ್ರಾಣಲಿಂಗವೆನಿಸುವುದು.
ಸ್ಫಟಿಕದ ಘಟದಲ್ಲಿರಿಸಿದ ಜ್ಯೋತಿಯಂತೆ
ಒಳಹೊರಗೆ ತೋರುತಿರ್ಪುದು ಒಂದೇ ಲಿಂಗವೆಂದರಿಯದೆ,
ಭ್ರಾಂತಿಜ್ಞಾನದಿಂದೆ
ಅಂತರಂಗದಲ್ಲಿ ಬೇರೆ ಪ್ರಾಣಲಿಂಗವುಂಟೆಂದು
ಇಷ್ಟಲಿಂಗದಲ್ಲಿ ಅವಿಶ್ವಾಸಮಾಡುವ
ಭ್ರಷ್ಟಭವಿಗಳ ಮುಖವ ನೋಡಲಾಗದಯ್ಯ ಅಖಂಡೇಶ್ವರಾ. ॥ ೨೫೮ ॥

೫೦೨

ಕಾಷ್ಠದಲ್ಲಿ ಅಗ್ನಿ ಉಂಟೆಂದಡೆ,
ಆ ಕಾಷ್ಠದ ರೂಪ ಸುಡಲರಿಯದು ನೋಡಾ !
ದೇಹಮಧ್ಯದಲ್ಲಿ ಪರವಸ್ತು ಉಂಟೆಂದಡೆ,
ಹರಿಯದು ನೋಡಾ ಆ ದೇಹದ ಜಡಭಾವ !
ಅದೆಂತೆಂದೊಡೆ :
ಕಾಷ್ಠದ ಮಧ್ಯದಲ್ಲಿ ಅಡಗಿರ್ದ ಮಂದಾಗ್ನಿ
ಮಥನದಿಂದೆ ಬಹಿಷ್ಕರಿಸಿ ಆ ಕಾಷ್ಠವ ಸುಡುವಂತೆ,
ದೇಹದ ಮಧ್ಯದಲ್ಲಿ ಅಡಗಿರ್ದ ಪರವಸ್ತುವನು
ಶ್ರೀಗುರುಸ್ವಾಮಿ ತನ್ನ ಕ್ರಿಯಾಶಕ್ತಿಯ ಮಥನದಿಂದೆ ಬಹಿಷ್ಕರಿಸಿ
ಬಹಿರಂಗದ ಮೇಲೆ ಇಷ್ಟಲಿಂಗವಾಗಿ ಧರಿಸಲು,
ಆ ಲಿಂಗದ ಸತ್‌ಕ್ರಿಯಾ ಪೂಜೆಯಿಂದೆ
ಸ್ಥೂಲಾಂಗದ ಕಾಷ್ಠಗುಣಧರ್ಮಂಗಳೆಲ್ಲ ನಷ್ಟವಾಗಿ

ಆ ಲಿಂಗದ ಚಿತ್ಕಳೆಯು ಸರ್ವಾಂಗಕ್ಕೆ ವೇಧಿಸಿ
ಅಂತರಂಗ ಬಹಿರಂಗವೊಂದಾಗಿ ಆತ್ಮನ ಅಹಂಮಮತೆ ಕೆಟ್ಟು,
ಶಿಖಿಕರ್ಪುರ ಸಂಯೋಗದಂತೆ ಪರತತ್ವವನೊಡಗೂಡಿದ
ಮಹಾತ್ಮನ ಕಾಯ ನಿರವಯಲಪ್ಪುದಲ್ಲದೆ
ಬರಿಯ ಒಣ ವಾಗದ್ವೈತದಿಂದೆ ಅಹಂ ಬ್ರಹ್ಮವೆಂದು ನುಡಿದು
ದೇಹ ಪ್ರಾಣಂಗಳ ಪ್ರಕೃತಿವರ್ತನೆಯಲ್ಲಿ
ನಡೆದು ನಿತ್ಯರಾದೇವೆಂಬುವರೆಲ್ಲ
ಭವಾಂಬುಧಿಯಲ್ಲಿ ಬಿದ್ದು ಮುಳುಗುತ್ತೇಳುತ್ತ
ತಡಿಯ ಸೇರಲರಿಯದೆ ಕೆಟ್ಟುಹೋದರು ನೋಡಾ ಅಖಂಡೇಶ್ವರಾ. ||೨೫೯||

೫೦೩

ಪರಾತ್ಪರವಾದ ಪರಶಿವಬ್ರಹ್ಮವನೊಡಗೂಡುವ
ಅವಿರಳ ಸಮರಸ ಸದ್‌ಭಕ್ತಿಯಿಲ್ಲದೆ
ನಾನು ಬ್ರಹ್ಮವು ತಾನು ಬ್ರಹ್ಮವು ಎಂದು
ಪರಬ್ರಹ್ಮದ ನಿಲವನರಿಯದೆ
ಕೆಟ್ಟರು ನೋಡಾ ಹಲಬರು ಕೆಲಬರು.
ಅವರಾರೆಂದೊಡೆ :
ಅಹಂ ಬ್ರಹ್ಮವೆಂದು ನುಡಿದ ಸನತ್ಕುಮಾರಂಗೆ
ಒಂಟೆವಿಧಿಯಾಯಿತ್ತು.
ಅಹಂ ಬ್ರಹ್ಮವೆಂದು ನುಡಿದ ಹರಿವಿರಿಂಚಿಗಳಿಗೆ
ಭವಬಂಧನವಾಯಿತ್ತು.
ಅಹಂ ಬ್ರಹ್ಮವೆಂದು ನುಡಿದ ಇಂದ್ರಚಂದ್ರರಿಗೆ
ಅಂಗದ ಕೊರತೆಯಾಯಿತ್ತು.
ಅಹಂ ಬ್ರಹ್ಮವೆಂದು ನುಡಿದ ಮನುಮುನಿಗಳಿಗೆಲ್ಲ
ಮರಣವಾಯಿತ್ತು.
ಇದನರಿತು ಹಮ್ಮುಬಿಮ್ಮುವನಳಿದು,
ಹಮ್ಮ ಹಿರಿತನವ ನೀಗಿ, ಪರಬ್ರಹ್ಮವನೊಡಗೂಡಿ
ಸುಖಿಯಾಗಿರ್ಪರಯ್ಯ ನಿಮ್ಮ ಶರಣರು
ಅಖಂಡೇಶ್ವರಾ. || ೨೬೦ ||

೫೦೪

ಕ್ರಿಯವೇ ಅಧಿಕವೆಂಬ
ಗೊಡ್ಡು ಸಿದ್ಧಾಂತಿಗಳ ಮಾತು ಸೊಗಸದಯ್ಯಾ ಎನಗೆ.
ಜ್ಞಾನವೇ ಅಧಿಕವೆಂಬ
ವಡ್ಡ ವೇದಾಂತಿಗಳ ಮಾತು ಸೊಗಸದಯ್ಯ ಎನಗೆ.

ಅದೇನು ಕಾರಣವೆಂದೊಡೆ :
ಆವುದಾನೊಂದು ಪಕ್ಷಿಯು
ಉಭಯ ರೆಕ್ಕೆಯಿಂದ ಗಗನಕ್ಕೆ ಹಾರುವಂತೆ
ಅಂತರಂಗದಲ್ಲಿ ಸಮ್ಯಕ್‌ಜ್ಞಾನ
ಬಹಿರಂಗದಲ್ಲಿ ಶಿವಸತ್‌ಕ್ರಿಯಾಸನ್ನಿಹಿತವಿಲ್ಲದೆ
ಪರವಸ್ತುವ ಕೂಡಬಾರದಾಗಿ.
ಇದು ಕಾರಣ,
ಸತ್‌ಕ್ರಿಯಾ ಸಮ್ಯಕ್‌ಜ್ಞಾನಸಂಪನ್ನರಾದ
ಮಹಾತ್ಮರಣರ ತೋರಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ. ॥ ೨೮೦ ॥

**೫೦೫**

ತ್ರೈಪಸಿದ್ಧಾಂತಿಗಳೆಂಬ ಅಬದ್ಧ ಭವಿಗಳ
ಮುಖವ ನೋಡಲಾಗದು.
ಅದೇನು ಕಾರಣವೆಂದೊಡೆ :
ಸಾಂಗೋಪಾಂಗ ಶುದ್ಧಶರೀರಿಯಾಗಿ
ಉನ್ನತಾಸನ ಗದ್ದುಗೆಯಲ್ಲಿ ಕುಳಿತು ಕಣ್ಣುಮುಚ್ಚಿ
ಅಂತರಂಗದಲ್ಲಿ ಪರಮಾತ್ಮನ ಕಳೆಯ ಧ್ಯಾನಿಸಿ
ಮನಸ್ಸಿನಲ್ಲಿ ಕಟ್ಟಿ, ದೃಷ್ಟಿಗೆ ತಂದು,
ಆ ದೃಷ್ಟಿಯಿಂದ ಪುಷ್ಪದಲ್ಲಿ ತುಂಬಿ
ಮೃತ್ತಿಕೆ ಪಾಷಾಣಾದಿ ನಾನಾ ತರಹದ
ಲಿಂಗಾಕಾರದ ಮೂರ್ತಿಯ ಸ್ಥಾಪಿಸಿ, ದೇವರೆಂದು ಭಾವಿಸಿ,
ಜಲ ಗಂಧ ಅಕ್ಷತೆ ಪುಷ್ಪ ಧೂಪ ದೀಪ ನೈವೇದ್ಯ ತಾಂಬೂಲಾದಿ
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನೆ ಮಾಡಿ,
ಆ ಪೂಜಾಂತ್ಯದಲ್ಲಿ ಎನ್ನ ಮಲಿನ ದೇಹದಲ್ಲಿ ನೀನು
ನಿರ್ಮಲವಾದ ವಸ್ತುವು ಇರಬೇಡ ಹೋಗೆಂದು
ತನ್ನ ದೇವರ ಬಾವಿ ಕೆರೆ ಹಳ್ಳ ಕೊಳ್ಳಾದಿ ಸ್ಥಾನಂಗಳಲ್ಲಿ ಹಾಕಿ ಬಿಡುವ
ಶಿವದ್ರೋಹಿಗಳಿಗೆ ಕುಂಭೀಪಾತಕ
ನಾಯಕ ನರಕ ತಪ್ಪದಯ್ಯ ಅಖಂಡೇಶ್ವರಾ. ॥ ೨೮೧ ॥

**೫೦೬**

ಷಡೀಂದ್ರಿಯ ಸಪ್ತಧಾತುಗಳಲ್ಲಿ
ಸಂಭ್ರಮಿಸಿ ತುಂಬಿರ್ಪುದು ಒಂದೇ ಪರವಸ್ತುವೆಂದರಿಯರು.
ಷಡ್‌ಭೂತ ಷಟ್‌ಚಕ್ರಂಗಳಲ್ಲಿ
ಇಡಿದು ತುಂಬಿರ್ಪುದು ಒಂದೇ ಪರವಸ್ತುವೆಂದರಿಯರು.
ತನುತ್ರಯ ಮನತ್ರಯ ಭಾವತ್ರಯಂಗಳಲ್ಲಿ

ಭರಿತವಾಗಿರ್ಪುದು ಒಂದೇ ಪರವಸ್ತುವೆಂದರಿಯರು.
ಒಳಹೊರಗೆ ತೆರಹಿಲ್ಲದೆ
ಪರಿಪೂರ್ಣವಾಗಿ ತುಂಬಿರ್ಪುದು ಒಂದೇ ಪರವಸ್ತುವೆಂದರಿಯರು.
ವಿಪರೀತ ಭ್ರಾಂತಿಜ್ಞಾನದಿಂದ
ಒಳಗೆ ಬೇರೆ ಪರವಸ್ತು ಉಂಟೆಂದು
ಕಣ್ಣುಮುಚ್ಚಿ ನೋಡಿ ಕಳವಳಗೊಂಡು
ಪ್ರಳಯಕ್ಕೊಳಗಾಗಿ ಹೋದವರ ಕಂಡು
ನಗುತಿರ್ಪನು ನಮ್ಮ ಅಖಂಡೇಶ್ವರನು. || ೨೬೩ ||

**೫೦೭**

ಜಗದೊಳಹೊರಗೆಲ್ಲ ತೆರಹಿಲ್ಲದೆ
ಸಂಭ್ರಮಿಸಿ ತುಂಬಿಕೊಂಡಿರ್ಪ ಪರವಸ್ತುವ
ಆಹ್ವಾನಿಸಿ ಕರೆದು ವಿಸರ್ಜಿಸಿ
ಬಿಡುವುದಕ್ಕೆ ಇಂಬುಂಟೇನೋ ಮರುಳೆ ?
ಇಂತೀ ಅಖಂಡ ಪರಿಪೂರ್ಣವಾದ
ಪರಬ್ರಹ್ಮದ ನಿಲವನರಿಯದೆ
ಖಂಡಿತಬುದ್ಧಿಯಿಂದ ಕಲ್ಪಿಸಿ
ಪೂಜಿಸಿ ಕರ್ಮದ ಬಲೆಯಲ್ಲಿ ಸಿಲ್ಕಿ
ಕಾಲಂಗೆ ಗುರಿಯಾಗಿ ಹೋದವರ
ಕಂಡು ಬೆರಗಾದೆನಯ್ಯ ಅಖಂಡೇಶ್ವರಾ. || ೨೬೪ ||

**೫೦೮**

ಕುರುಹು ಉಂಟೇ ಮರುಳೆ ಲಿಂಗಕ್ಕೆ ?
ತೆರಹು ಉಂಟೇ ಮರುಳೆ ಲಿಂಗಕ್ಕೆ ?
ಎಲ್ಲೆಡೆಯೊಳು ಪರಿಪೂರ್ಣವಾದ
ಪರಾತ್ಪರಲಿಂಗದ ನಿಲವನರಿಯದೆ
ಹುಸಿಯನೆ ಕಲ್ಪಿಸಿ, ಹುಸಿಯನೆ ಪೂಜಿಸಿ,
ಹುಸಿಯ ಫಲಪದವನುಂಡು
ಹುಸಿಯಾಗಿ ಹೋದವರ ಕಂಡು
ನಸುನಗುತಿಪ್ಪನಯ್ಯ ನಮ್ಮ ಅಖಂಡೇಶ್ವರನು. || ೨೬೫ ||

**೫೦೯**

ಅಷ್ಟಮೂರ್ತಿಗಳು ದೇವರೆಂಬ
ಭ್ರಷ್ಟಭವಿಗಳ ಮಾತ ಕೇಳಲಾಗದು.
ಅದೇನು ಕಾರಣವೆಂದೊಡೆ :

ಪೃಥ್ವಿದೇವರಾದಡೆ, ಅಪ್ಪುವಿನ ಪ್ರಳಯದಲ್ಲಿ ಕರಗುವುದ ?
ಅಪ್ಪು ದೇವರಾದಡೆ, ಅಗ್ನಿಯ ಪ್ರಳಯದಲ್ಲಿ
ಅರತು ಹೋಗುವುದ ?
ಅಗ್ನಿ ದೇವರಾದಡೆ, ವಾಯುವಿನ ಪ್ರಳಯದಲ್ಲಿ
ಆರಿ ಹೋಗುವುದ ?
ವಾಯು ದೇವರಾದಡೆ, ಆಕಾಶದ ಪ್ರಳಯದಲ್ಲಿ ಲಯವಪ್ಪುದ ?
ಆಕಾಶ ದೇವರಾದಡೆ ಆತ್ಮನಲ್ಲಿ ಅಡಗಿಹೋಗುವುದ ?
ಆತ್ಮದೇವರಾದಡೆ, ದ್ವಂದ್ವಕರ್ಮಂಗಳನುಂಡು
ಜನನಮರಣಂಗಳಲ್ಲಿ ಬಂಧನವಡೆವನೆ ?
ಚಂದ್ರಸೂರ್ಯರು ದೇವರಾದಡೆ
ಭವಬಂಧನದಲ್ಲಿ ಸಿಲ್ಕಿ ತೊಳಲಿ ಬಳಲುವರೆ ?
ಇದು ಕಾರಣ ಇಂತೀ ಅಷ್ಟತನುಗಳು
ಎಂತು ದೇವರೆಂಬೆನು ?
ದೇವರದೇವ ಮಹಾದೇವ ಮಹಾಮಹಿಮ
ಎನ್ನೊಡೆಯ ಅಖಂಡೇಶ್ವರ ಒಬ್ಬನೆ ದೇವನಲ್ಲದೆ
ಉಳಿದವರೆಲ್ಲ ಹುಸಿ ಹುಸಿ ಎಂಬೆನು ನೋಡಾ ! || ೨೬೬ ||

೫೧೦

ಪೃಥ್ವಿ ದೇವರೆಂಬೆನೆ ಪೃಥ್ವಿ ದೇವರಲ್ಲ,
ಅಪ್ಪು ದೇವರೆಂಬೆನೆ ಅಪ್ಪು ದೇವರಲ್ಲ,
ಅಗ್ನಿ ದೇವರೆಂಬೆನೆ ಅಗ್ನಿ ದೇವರಲ್ಲ,
ವಾಯು ದೇವರೆಂಬೆನೆ ವಾಯು ದೇವರಲ್ಲ,
ಆಕಾಶ ದೇವರೆಂಬೆನೆ ಆಕಾಶ ದೇವರಲ್ಲ,
ಆತ್ಮ ದೇವರೆಂಬೆನೆ ಆತ್ಮ ದೇವರಲ್ಲ,
ಸೂರ್ಯ ದೇವರೆಂಬೆನೆ ಸೂರ್ಯ ದೇವರಲ್ಲ,
ಚಂದ್ರ ದೇವರೆಂಬೆನೆ ಚಂದ್ರ ದೇವರಲ್ಲ,
ಅದೇನು ಕಾರಣವೆಂದೊಡೆ :
ಪೃಥ್ವಿ ಶಿವನ ಸದ್ಯೋಜಾತಮುಖದಲ್ಲಿ ಪುಟ್ಟಿತ್ತು,
ಅಪ್ಪು ಶಿವನ ವಾಮದೇವಮುಖದಲ್ಲಿ ಪುಟ್ಟಿತ್ತು,
ತೇಜ ಶಿವನ ಅಘೋರಮುಖದಲ್ಲಿ ಪುಟ್ಟಿತ್ತು,
ವಾಯು ಶಿವನ ತತ್ಪುರುಷಮುಖದಲ್ಲಿ ಪುಟ್ಟಿತ್ತು,
ಆಕಾಶ ಶಿವನ ಈಶಾನ್ಯಮುಖದಲ್ಲಿ ಪುಟ್ಟಿತ್ತು,
ಆತ್ಮ ಶಿವನ ಗೋಪ್ಯಮುಖದಲ್ಲಿ ಪುಟ್ಟಿತ್ತು,
ಸೂರ್ಯ ಶಿವನ ನಯನದಲ್ಲಿ ಪುಟ್ಟಿತ್ತು,
ಚಂದ್ರ ಶಿವನ ಮನಸ್ಸಿನಲ್ಲಿ ಪುಟ್ಟಿತ್ತು,

''ಯತ್ ದೃಷ್ಟವ್ ತತ್ ನಷ್ಟವ್'' ಎಂದು,
ಇಂತೀ ಅಷ್ಟತನುಗಳಿಗೆ ಹುಟ್ಟು ಹೊಂದು ಉಂಟಾದ ಕಾರಣ
ಇವು ಕಲ್ಪಿತವೆಂದು ಕಳೆದು
ನೀನೊಬ್ಬನೆ ನಿತ್ಯ ಪರಿಪೂರ್ಣನೆಂದು
ತಿಳಿದು ಉಳಿದೆನಯ್ಯ ಅಖಂಡೇಶ್ವರಾ. ॥ ೨೬೭ ॥

೫೧೧

ಶರಣಭರಿತ ಶಿವನು ಶಿವಭರಿತ ಶರಣನೆಂಬುದು ನಿಜವಲ್ಲದೆ,
ಜಗಭರಿತ ಶಿವನು ಶಿವಭರಿತ ಜಗವೆಂಬುದು ಹುಸಿ ನೋಡಾ !
ಅದೇನು ಕಾರಣವೆಂದೊಡೆ :
ಜಗಕ್ಕೆ ಪ್ರಳಯ ಮಹಾಪ್ರಳಯಂಗಳುಂಟು.
ಇದು ಕಾರಣ, ಪ್ರಳಯಾತೀತ ಶರಣಸನ್ನಿಹಿತ ನಮ್ಮ
ಅಖಂಡೇಶ್ವರ. ॥ ೨೬೮ ॥

೫೧೨

ಸರ್ವಗತ ಶಿವನೆಂದು ಹೇಳುವ
ಮರುಳು ಮಾನವರ ಮಾತ ಕೇಳಲಾಗದು.
ಅದೆಂತೆಂದೊಡೆ :
ಸರ್ವಜೀವರುಗಳಂತೆ
ವನಿತಾದಿ ವಿಷಯಪ್ರಪಂಚಿನಲ್ಲಿ ಮಗ್ನವಾಗಿರ್ಪನೆ ಶಿವನು ?
ಸರ್ವಜೀವರುಗಳಂತೆ
ತಾಪತ್ರಯಾಗ್ನಿಯಲ್ಲಿ ನೊಂದು ಬೆಂದು ಕಂದಿ ಕುಂದುವನೆ ಶಿವನು ?
ಸರ್ವಜೀವರುಗಳಂತೆ
ಪುಣ್ಯಪಾಪ ಸುಖದುಃಖ ಸ್ವರ್ಗನರಕಂಗಳೆಂಬ
ದ್ವಂದ್ವಕರ್ಮಂಗಳ ಹೊದ್ದಿರ್ಪನೆ ಶಿವನು ?
ಸರ್ವಜೀವರುಗಳಂತೆ
ಉತ್ಪತ್ತಿ ಸ್ಥಿತಿ ಪ್ರಳಯಂಗಳೆಂಬ ಕಷ್ಟ ಬಂಧನಗಳಲ್ಲಿ ಸಿಲ್ಕಿ
ಹೊದಕುಳಿಗೊಂಬನೆ ಶಿವನು ?
ಇಂತೀ ಭೇದವನರಿಯದೆ ಸರ್ವಗತ ಶಿವನೆಂದು ನುಡಿದ
ಕಡುಪಾತಕ ಜಡಜೀವಿಗಳ ಎನಗೊಮ್ಮೆ
ತೋರದಿರಯ್ಯ ಅಖಂಡೇಶ್ವರಾ. ॥ ೨೬೯ ॥

೫೧೩

ಪೃಥ್ವಿ ಆಕಾಶಮಧ್ಯದಲ್ಲಿ ಉತ್ಪತ್ತಿಯಾದ
ಸಕಲ ಪ್ರಾಣಿಗಳ ಶಿವನೆಂದು ಭಾವಿಸಲಾಗದು.

ಅದೇನು ಕಾರಣವೆಂದೊಡೆ :
ಆ ಸಕಲ ಪ್ರಾಣಿಗಳು ಶಿವನಾದಡೆ
ಮದಮತ್ಸರಂಗಳಿಂದೆ ಒಂದನೊಂದು ಕೊಂದು ಕೂಗಿ
ತಿಂದು ತೇಗಲೇತಕೊ ?
ಆ ಸಕಲ ಪ್ರಾಣಿಗಳು ಶಿವನಾದಡೆ
ಜಾತಿ ವರ್ಣಾಶ್ರಮ ಕುಲಗೋತ್ರ ನಾಮಸೀಮೆ
ಬಂದ ಬಟ್ಟೆಗೆ ಬಡಿದಾಡಲೇತಕೊ ?
ಆ ಸಕಲ ಪ್ರಾಣಿಗಳು ಶಿವನಾದಡೆ
ಹಮ್ಮು ಬಿಮ್ಮು ಗರ್ವ ಅಹಂಕಾರ ಹೆಮ್ಮೆ ಹಿರಿತನಕೆ
ಹೊಡೆದಾಡಿ ಮಡಿದು ಹೋಗಲೇತಕೊ ?
ಆ ಸಕಲ ಪ್ರಾಣಿಗಳು ಶಿವನಾದಡೆ
ಮಲತ್ರಯಂಗಳ ಬಲೆಯಲ್ಲಿ ಸಿಲ್ಕಿ
ಭವಭವಂಗಳಲ್ಲಿ ತೊಳಲಿ ಬಳಲಿ ಬೆಂಡಾಗಲೇತಕೊ ?
ಇದು ಕಾರಣ,
ಅನಾದಿಸಂಸಿದ್ಧವಾದ ಪರಮ ಜಂಗಮಲಿಂಗವೇ ಶಿವನಲ್ಲದೆ
ಭವಭವಂಗಳಲ್ಲಿ ಸತ್ತು ಹುಟ್ಟುವ ಸಕಲ ಪ್ರಾಣಿಗಳ ಶಿವನೆಂದಡೆ
ಅಘೋರನರಕ ತಪ್ಪದಯ್ಯ ಅಖಂಡೇಶ್ವರಾ. || ೨೭೦ ||

೫೧೮

ಸರ್ವಜಗದಲ್ಲಿ ಶಿವನಿಲ್ಲವೆಂದಡೆ
ಆ ಜಗವು ಶಿವನಿಂದಲ್ಲದೆ ಬೇರೆ ತೋರಲರಿಯದಾಗಿ,
ಪದ್ಮಪತ್ರಜಲದಂತೆ ವಿಶ್ವಪರಿಪೂರ್ಣನಾಗಿ
ಹೊದ್ದಿಯೂ ಹೊದ್ದದಿರ್ಪನು ನಮ್ಮ ಅಖಂಡೇಶ್ವರ. || ೨೭೧ ||

೫೧೯

ಜಗವಾಗಬಲ್ಲ ನೋಡಿರೊ ನಮ್ಮ ಶಿವನು.
ಜಗವಾಗಲರಿಯದೆ ಇರಬಲ್ಲ ನೋಡಿರೊ ನಮ್ಮ ಶಿವನು.
ಅನಂತಕೋಟಿ ಬ್ರಹ್ಮಾಂಡಗಳ
ನಿಮಿಷಮಾತ್ರದಲ್ಲಿ ಪುಟ್ಟಿಸಬಲ್ಲ ನೋಡಿರೊ ನಮ್ಮ ಶಿವನು.
ಆ ಬ್ರಹ್ಮಾಂಡಗಳ ನಿಮಿಷ ಮಾತ್ರದಲ್ಲಿ
ಕೆಡಿಸಬಲ್ಲ ನೋಡಿರೊ ನಮ್ಮ ಶಿವನು.
ಇಂತಪ್ಪ ಶ್ರೀ ಮಹಾದೇವನ ಘನವನರಿಯದ
ಬರಿಯ ದೇವರು ಉಂಟೆಂದು ಬೊಗಳುವ
ಭವಭಾರಿಗಳ ಮುಖವ
ನೋಡಲಾಗದಯ್ಯ ಅಖಂಡೇಶ್ವರಾ. || ೨೭೨ ||

### ೫೧೬

ಬ್ರಹ್ಮದೇವನಾದಡೆ
ಹಮ್ಮಿನಿಂದ ಹೋದ ತಲೆಯ
ಗಮ್ಮನೆ ಪಡೆಯಲರಿಯನೇತಕೊ ?
ವಿಷ್ಣುದೇವನಾದಡೆ ಸುಟ್ಟು ಹೋದ ಮನ್ಮಥನ ಪ್ರಾಣವ
ನೆಟ್ಟನೆ ಕೂಡಲರಿಯನೇತಕೊ ?
ಇದನರಿಯದೆ,
ಹುಟ್ಟಿಸುವಾತ ಬ್ರಹ್ಮ ರಕ್ಷಿಸುವಾತ ವಿಷ್ಣುವೆಂದು ನುಡಿವ,
ಭ್ರಷ್ಟ ವಿಪ್ರರೆಂಬ ಹೊಲೆಮನದ ಹಾರುವರ
ಮೆಟ್ಟಿ ಮೆಟ್ಟಿ ತುಳಿತುಳಿದು ಹೊಟ್ಟೆ ಹರಿಯಲೊದೆಯೆಂದಾತ
ನಮ್ಮ ಅಖಂಡೇಶ್ವರನು. || ೨೭೩ ||

### ೫೧೭

ಗುರುಭಕ್ತರಾದವರು
ತ್ರಿಕಾಲದಲ್ಲಿ ಹರಸ್ಮರಣೆಯಲ್ಲದ
ಹರಿಯೆಂದು ನುಡಿಯಲಾಗದು.
ಹರಿ ಶಬ್ದವ ಕೇಳಲಾಗದು, ಹರಿಯ ರೂಪವ ನೋಡಲಾಗದು.
ಅದೇನು ಕಾರಣವೆಂದೊಡೆ :
ಪೂರ್ಣಾಯುಷ್ಯವು, ವಿಮಲಮತಿಯು,
ಸತ್ಕೀರ್ತಿಯು, ಮಹಾಬಲವು, ಕೆಟ್ಟು ಹೋಗುತ್ತಿಹುದು ನೋಡಾ !
ಅದೆಂತೆಂದೊಡೆ : ಬ್ರಹ್ಮಾಂಡಪುರಾಣೇ
''ನ ಪ್ರದೋಷೇ ಹರಿಂ ಪಶ್ಯೇತ್ ಯದಿ ಪಶ್ಯೇತ್ ಪ್ರಮಾದತಃ ।
ಚತ್ವಾರಿ ತಸ್ಯ ನಶ್ಯಂತಿ ಆಯುಃ ಪ್ರಜ್ಞಾಯಶೋ ಬಲಮ್ ॥''
ಎಂದುದಾಗಿ,
ಸತ್ತು ಹುಟ್ಟುವ ಹರಿಗೆ ಇನ್ನೆತ್ತಣ ದೇವತ್ವ ಹೇಳಾ ಅಖಂಡೇಶ್ವರಾ ? || ೨೭೪ ||

### ೫೧೮

ಹರಿ ಹರಗೆ ಸರಿಯೆಂಬ
ಎಲೆ ನೀಚ ಪರವಾದಿಗಳಿರಾ ನೀವು ಕೇಳಿರೊ.
ಹರಿ ಹತ್ತು ಭವದಲ್ಲಿ ಹುಟ್ಟಿ ಬಂದು
ನಮ್ಮ ಹರನ ಶ್ರೀಚರಣವನರ್ಚಿಸಿ ಪರವ ಪಡೆವನಲ್ಲದ
ನಮ್ಮ ಹರನು ಆವ ಭವದಲ್ಲಿ ಹುಟ್ಟಿದ ?
ಆವ ದೇವರ ಪೂಜಿಸಿ ಆವ ಆವ ಫಲಪದವ ಪಡೆದನು
ಬಲ್ಲರೆ ನೀವು ಹೇಳಿರೊ ?
ಇದನರಿಯದ ಹರಿ ಹರಗೆ ಸರಿಯೆಂಬ

ಪರವಾದಿಗಳ ಬಾಯ ಕೆರಹಿನಟ್ಟೆಯಲ್ಲಿ ಹೊಯ್ದಲ್ಲದೆ
ಎನ್ನ ಸಿಟ್ಟು ಮಾಣದು ನೋಡಾ ಅಖಂಡೇಶ್ವರಾ. ॥ ೨೭೫ ॥

೫೧೯

ಇಕ್ಕಿದೆನು ಮುಂಡಿಗೆಯ
ಹರಿಕುಲದ ವಿಪ್ರರು ಬೆಕ್ಕನೆ ಬೆರಗಾಗುವಂತೆ.
ಇಕ್ಕಿದೆನು ಮುಂಡಿಗೆಯ
ಸೊಕ್ಕಿದ ರಕ್ಕಸರ ಸಂಹರಿಸಿದ ಶಿವನೇ ಅಧಿಕನೆಂದು.
ಇಕ್ಕಿದೆನು ಮುಂಡಿಗೆಯ
ಹರಿಯಜಸುರಾಸುರರೆಲ್ಲ ಹರನ ಆಳುಗಳೆಂದು.
ಇಕ್ಕಿದೆನು ಮುಂಡಿಗೆಯ ದಿಕ್ಕು ದಿಕ್ಕಿನೊಳಗೆ
ಅಖಂಡೇಶ್ವರನೆಂಬ ಮುಕ್ಕಣ್ಣ ಪರಶಿವನೆ ಘನ ಘನವೆಂದು. ॥ ೨೭೬ ॥

೫೨೦

ಇಕ್ಕಿದೆನು ಮುಂಡಿಗೆಯ ದೇವರದೇವನೆಂದು.
ಇಕ್ಕಿದೆನು ಮುಂಡಿಗೆಯ ದೇವಶಿಖಾಮಣಿಯೆಂದು.
ಇಕ್ಕಿದೆನು ಮುಂಡಿಗೆಯ ದೇವದೇವೇಶ್ವರನೆಂದು.
ಇಕ್ಕಿದೆನು ಮುಂಡಿಗೆಯ ಭಾವಜವೈರಿಯೆಂದು.
ಇಕ್ಕಿದೆನು ಮುಂಡಿಗೆಯ ಭಾಳಲೋಚನನೆಂದು.
ಇಕ್ಕಿದೆನು ಮುಂಡಿಗೆಯ ಜಗದವಲ್ಲಭನೆಂದು
ಇಕ್ಕಿದೆನು ಮುಂಡಿಗೆಯ ಜಂಗುಳಿದೈವದ ಗಂಡ ಅಖಂಡೇಶ್ವರನೆಂದು.
॥ ೨೭೭ ॥

೫೨೧

ಅಜಹರಿಸುರರೆಲ್ಲ ಆವ ದೇವನ ಶ್ರೀಚರಣವನರ್ಚಿಸಿ
ಫಲಪದವ ಪಡೆದರು ತಿಳಿದು ನೋಡಿರೋ
ಮಾಯಾವಾದಿಗಳು ನೀವೆಲ್ಲ.
ಮನು ಮುನಿಗಳು ಮರುಳತಾಂಡವರು
ಅಷ್ಟದಿಕ್ಪಾಲಕರೆಲ್ಲ ಆವ ದೇವನ ಶ್ರೀ ಚರಣವನರ್ಚಿಸಿ
ಫಲಪದವ ಪಡೆದರು ತಿಳಿದು ನೋಡಿರೋ
ಮಾಯಾವಾದಿಗಳು ನೀವೆಲ್ಲ.
ಕಾಲ ಕಾಮ ದಕ್ಷಾದಿಗಳು ಆವ ದೇವನಿಂದ ಅಳಿದು ಹೋದರು
ತಿಳಿದು ನೋಡಿರೊ ಮಾಯಾವಾದಿಗಳು ನೀವೆಲ್ಲ.
ವೇದ ಶಾಸ್ತ್ರ ಆಗಮ ಪುರಾಣ ಶ್ರುತಿ ಸ್ಮೃತಿಗಳೆಲ್ಲ
ಆವ ದೇವನ ಹೊಗಳುತಿರ್ಪುವು ಹೇಳಿರೋ
ಮಾಯಾವಾದಿಗಳು ನೀವೆಲ್ಲ.

ಇಂತೀ ಭೇದವ ಕೇಳಿ ಕಂಡು ತಿಳಿದು ನಂಬಲರಿಯದೆ
ದಿಂಡೆಯ ಮತದ ಡಂಬಕ ಮೂಳ ಹೊಲೆಯರಂತಿರಲಿ.
ಕಾಕು ದೈವದ ಗಂಡ ಲೋಕಪತಿ ಏಕೋದೇವ
ನಮ್ಮ ಅಖಂಡೇಶ್ವರನಲ್ಲದೆ ಅನ್ಯದೈವವಿಲ್ಲವೆಂದು
ಮುಂಡಿಗೆಯನಿಕ್ಕಿ ಹೊಯ್ವೆನು ಡಂಗುರವ ಮೂಜಗವರಿವಂತೆ. ॥ ೧೭೮ ॥

೫೨೨

ಕಟ್ಟಿದೆನು ಬಿರಿದು ಶಿವನಲ್ಲದೆ ಬೇರೆದೇವರಿಲ್ಲವೆಂದು.
ಕಟ್ಟಿದೆನು ಬಿರಿದು ಶಿವಾಚಾರದಿಂದೆ ಬೇರೆ ಘನವಿಲ್ಲವೆಂದು.
ಕಟ್ಟಿದೆನು ಬಿರಿದು ಶಿವಶರಣರಲ್ಲದೆ ಬೇರೆ ಹಿರಿಯರಿಲ್ಲವೆಂದು
ಅಖಂಡೇಶ್ವರಾ ನೀ ಸಾಕ್ಷಿಯಾಗಿ. ॥ ೧೭೯ ॥

೫೨೩

ವೇದಂಗಳು ನಿಮ್ಮ ಭೇದಿಸಲರಿಯವು ನೋಡಾ !
ಆಗಮಂಗಳು ನಿಮ್ಮ ಹೊಗಳಲರಿಯವು ನೋಡಾ !
ಶ್ರುತಿತತಿಗಳು ನಿಮ್ಮ ಸ್ತುತಿಸಲರಿಯವು ನೋಡಾ !
ಶಾಸ್ತ್ರಂಗಳು ನಿಮ್ಮ ಸಾಧಿಸಲರಿಯವು ನೋಡಾ ಅಖಂಡೇಶ್ವರಾ. ॥ ೧೮೦ ॥

೫೨೪

ಎನ್ನ ನಡೆನುಡಿ ಚೈತನ್ಯವೇ ನೀವೆಂದರಿದೆ.
ಎನ್ನ ಒಡಲೇಂದ್ರಿಯಂಗಳೆಲ್ಲ ನಿಮ್ಮವೆಂದರಿದೆ.
ನೀವು ಭಕ್ತದೇಹಿಕ ದೇವನೆಂದು ನಿಮ್ಮ ನಂಬಿದಬಳಿಕ,
ಎನ್ನ ಕಡೆಗೆ ನೂಂಕದಿರಯ್ಯ ಅಖಂಡೇಶ್ವರಾ. ॥ ೧೮೧ ॥

೫೨೫

ಒಮ್ಮೆ ಜ್ಞಾನಿಯೆನಿಸಿ, ಒಮ್ಮೆ ಅಜ್ಞಾನಿಯೆನಿಸಿ,
ಒಮ್ಮೆ ವಿಕಲನೆನಿಸಿ, ಒಮ್ಮೆ ನಿಃಕಲನೆನಿಸಿ,
ಒಮ್ಮೆ ಭ್ರಾಂತನೆನಿಸಿ, ಒಮ್ಮೆ ನಿಭ್ರಾಂತನೆನಿಸಿ,
ನಾನಾ ತೆರದಿಂದೆ ಎನ್ನ ಹುಸಿದಿಟವ ಮಾಡಿಕಾಡದಿರಯ್ಯ.
ನೀವು ದಯಾನಿಧಿ ಎಂದು ನಂಬಿದೆನಯ್ಯ.
ನಿಮ್ಮ ಕರುಣಕಟಾಕ್ಷದಿಂದೆ ನೋಡಿ ಸಲಹಯ್ಯ ಎನ್ನ ಅಖಂಡೇಶ್ವರಾ. ॥೧೮೨॥

೫೨೬

ಸುಖ ಬಂದಲ್ಲಿ ನಿಮ್ಮ ಹಾಡಿಹರಸುವೆನಯ್ಯ.
ದುಃಖ ಬಂದಲ್ಲಿ ನಿಮ್ಮ ಕೋಪಿಸಿ ಬಯ್ವೆನಯ್ಯ.
ಅದೇನು ಕಾರಣವೆಂದೊಡೆ :

ಎನ್ನ ಸುಖದುಃಖಂಗಳಿಗೆ ನೀವೆ ಆಧಾರವಾದ ಕಾರಣ,
ನಿಮ್ಮನೆ ಹಾಡುವೆನಯ್ಯ; ನಿಮ್ಮನೆ ಹೊಗಳುವೆನಯ್ಯ.
ನಿಮ್ಮ ಮುಂದೆ ಎನ್ನ ಒಡಲ
ಕಡು ದುಃಖವನೀಡಾಡುವೆನಯ್ಯ ಅಖಂಡೇಶ್ವರಾ. ॥ ೨೮೩ ॥

೫೨೭

ತಂದೆ ನೀನೆ ಅಯ್ಯ ಎನಗೆ,
ತಾಯಿ ನೀನೆ ಅಯ್ಯ ಎನಗೆ,
ಬಂಧು ನೀನೆ ಅಯ್ಯ ಎನಗೆ,
ಬಳಗ ನೀನೆ ಅಯ್ಯ ಎನಗೆ,
ಗತಿಯು ನೀನೆ ಅಯ್ಯ ಎನಗೆ,
ಮತಿಯು ನೀನೆ ಅಯ್ಯ ಎನಗೆ,
ಸಕಲ ಚೈತನ್ಯವು ನೀನೆ ಅಯ್ಯ ಎನಗೆ.
ಅಖಂಡೇಶ್ವರಾ, ನೀನೆ ದಿಕ್ಕಲ್ಲದೆ
ಮತ್ತಾರೂ ಇಲ್ಲವಯ್ಯ ಎನಗೆ. ॥ ೨೮೪ ॥

೫೨೮

ದರ್ಪಣದೊಳಗಣ ರೂಹಿಗೆ ಚೇಷ್ಟಾಭಾವ ಉಂಟೆಂದಡೆ
ನೋಡುವಾತನ ಚೇತನದಿಂದಲ್ಲದೆ,
ಅದಕ್ಕೆ ಬೇರೆ ಚೇತನ ಉಂಟೆ ಅಯ್ಯ ?
ಎನ್ನ ಕರಣೇಂದ್ರಿಯಂಗಳು ಚೇಷ್ಟಿಸಿದುವೆಂದಡೆ ,
ನಿಮ್ಮ ಚೇತನದಿಂದಲ್ಲದೆ ಅವಕೆ ಬೇರೆ ಚೇತನ ಉಂಟೆ ಅಯ್ಯ ?
ಸೂತ್ರದ ಬೊಂಬೆಯಂತೆ ನೀನಾಡಿಸಿದಂತೆ
ನಾನಾಡುತಿರ್ದೆನಯ್ಯ ಅಖಂಡೇಶ್ವರಾ. ॥ ೨೮೫ ॥

೫೨೯

ಆಚಾರಲಿಂಗವಾಗಿ ಬಂದೆನ್ನ
ಘ್ರಾಣೇಂದ್ರಿಯವನೊಳಕೊಂಡಿರ್ಪಿರಯ್ಯ ನೀವು.
ಗುರುಲಿಂಗವಾಗಿ ಬಂದೆನ್ನ
ಜಿಹ್ವೇಂದ್ರಿಯವನೊಳಕೊಂಡಿರ್ಪಿರಯ್ಯ ನೀವು.
ಶಿವಲಿಂಗವಾಗಿ ಬಂದೆನ್ನ
ನಯನೇಂದ್ರಿಯವನೊಳಕೊಂಡಿರ್ಪಿರಯ್ಯ ನೀವು.
ಜಂಗಮಲಿಂಗವಾಗಿ ಬಂದೆನ್ನ
ತ್ವಗೀಂದ್ರಿಯವನೊಳಕೊಂಡಿರ್ಪಿರಯ್ಯ ನೀವು.
ಪ್ರಸಾದಲಿಂಗವಾಗಿ ಬಂದೆನ್ನ

ಶ್ರೋತ್ರೇಂದ್ರಿಯವನೊಳಕೊಂಡಿರ್ಪಿರಯ್ಯ ನೀವು.
ಮಹಾಲಿಂಗವಾಗಿ ಬಂದೆನ್ನ
ಹೃದಯವನೊಳಕೊಂಡಿರ್ಪಿರಯ್ಯ ನೀವು.
ಇಷ್ಟಲಿಂಗವಾಗಿ ಬಂದೆನ್ನ
ತನುವನೊಳಕೊಂಡಿರ್ಪಿರಯ್ಯ ನೀವು.
ಪ್ರಾಣಲಿಂಗವಾಗಿ ಬಂದೆನ್ನ
ಮನವನೊಳಕೊಂಡಿರ್ಪಿರಯ್ಯ ನೀವು.
ಭಾವಲಿಂಗವಾಗಿ ಬಂದೆನ್ನ
ಆತ್ಮವನೊಳಕೊಂಡಿರ್ಪಿರಯ್ಯ ನೀವು.
ಇಂತೆನ್ನ ಸರ್ವೇಂದ್ರಿಯಂಗಳು ನಿಮ್ಮಲ್ಲಿ
ಸಮರಸವಾದುವಾಗಿ
ನಾನು ನೀನೆಂಬುದಕ್ಕೆ ಭಿನ್ನವಿಲ್ಲವಯ್ಯ ಅಖಂಡೇಶ್ವರಾ. ॥ ೨೮೬ ॥

೫೩೦

ಅರಿದರಿದು ಗುರುಭಕ್ತಿಯು ನೆಲೆಗೊಂಬುದು.
ಅರಿದರಿದು ಲಿಂಗಭಕ್ತಿಯು ನೆಲೆಗೊಂಬುದು.
ಅರಿದರಿದು ಜಂಗಮಭಕ್ತಿಯು ನೆಲೆಗೊಂಬುದು.
ಇಂತೀ ತ್ರಿವಿಧಭಕ್ತಿಯು ನೆಲೆಗೊಂಡು
ಭಿನ್ನಭಾವವನಳಿದ ಸದ್‌ಭಕ್ತನು
ಮೂರು ಲೋಕದೊಳಗೆ ಅಪೂರ್ವವಯ್ಯ ಅಖಂಡೇಶ್ವರಾ. ॥ ೨೮೭ ॥

೫೩೧

ಗುರುಭಕ್ತನಾದ ಬಳಿಕ ಗುರುವಿಂಗೆ
ಪ್ರತ್ಯುತ್ತರವ ಕೊಡದಿರಬೇಕು.
ಲಿಂಗಭಕ್ತನಾದ ಬಳಿಕ ಲಿಂಗವೇ ಪ್ರಾಣವಾಗಿರಬೇಕು.
ಜಂಗಮಭಕ್ತನಾದ ಬಳಿಕ ಜಂಗಮದಲ್ಲಿ
ಅತಿಪ್ರೇಮ ವಿಶ್ವಾಸವ ಬಳಸಬೇಕು ನೋಡಾ ಅಖಂಡೇಶ್ವರಾ ॥ ೨೮೮ ॥

೫೩೨

ಜಂಗಮದಲ್ಲಿ ರೂಪು ಕುರೂಪವ ನೋಡಲಾಗದು.
ಜಂಗಮದಲ್ಲಿ ಉತ್ತಮ ಮಧ್ಯಮವ ನೋಡಲಾಗದು.
ಜಂಗಮದಲ್ಲಿ ಕುಲಶೀಲವ ನೋಡಲಾಗದು.
ಜಂಗಮದಲ್ಲಿ ಉಚ್ಚ ನೀಚವ ನೋಡಲಾಗದು.
ಜಂಗಮದಲ್ಲಿ ಹಿರಿದು ಕಿರಿದು ಮಾಡುವ ಭಕ್ತಂಗೆ
ಭವ ಹಿಂಗದಯ್ಯ ಅಖಂಡೇಶ್ವರಾ. ॥ ೨೮೯ ॥

### ೫೩೩

ಜಂಗಮದ ಘನವನು, ಜಂಗಮದ ನಿಲವನು
ಅರಿಯದೆ ಕೆಟ್ಟರಲ್ಲ ಶಿವಶಿವಾ !
ಜಂಗಮವೆಂದಡೆ ನಿಷ್ಕಳಂಕನು ನೋಡಾ !
ಜಂಗಮವೆಂದಡೆ ನಿರಪೇಕ್ಷನು ನೋಡಾ !
ಜಂಗಮವೆಂದಡೆ ನಿರ್ದೋಷನು ನೋಡಾ !
ಜಂಗಮವೆಂದಡೆ ನಿಸ್ಪೃಹನು ನೋಡಾ !
ಜಂಗಮವೆಂದಡೆ ಅಕ್ರೋಧ ಸತ್ಯವಚನನು ನೋಡಾ !
ಜಂಗಮವೆಂದಡೆ ದಯಾಪರನು ಧರ್ಮಗುಣನು ನೋಡಾ.
ಜಂಗಮವೆಂದಡೆ ಶಾಂತ ಶಿವಜ್ಞಾನಮೂರ್ತಿ
ತಾನೆ ನೋಡಾ ಅಖಂಡೇಶ್ವರಾ. ॥ ೨೯೦ ॥

### ೫೩೪

ಜಂಗಮಕ್ಕೆ ಮಾತಾಪಿತರಿಲ್ಲ.
ಜಂಗಮಕ್ಕೆ ಜಾತಿಬಂಧುಗಳಿಲ್ಲ.
ಜಂಗಮಕ್ಕೆ ನಾಮರೂಪುಗಳಿಲ್ಲ.
ಜಂಗಮಕ್ಕೆ ಸೀಮೆಸಂಗಗಳಿಲ್ಲ.
ಜಂಗಮಕ್ಕೆ ಕುಲಗೋತ್ರಗಳಿಲ್ಲ.
ಜಂಗಮಕ್ಕೆ ಮಲಮಾಯೆಗಳಿಲ್ಲ ನೋಡಾ ಅಖಂಡೇಶ್ವರಾ. ॥ ೨೯೧ ॥

### ೫೩೫

ಸ್ಥಾವರವು ಜಂಗಮವು ಒಂದೆ ಎಂಬಿರಿ,
ಮಂದಮತಿ ಮಾನವರಿರಾ, ನೀವು ಕೇಳಿರೋ !
ಸ್ಥಾವರವು ನಿಃಶಬ್ದಮಯವು, ಜಂಗಮವು ಮಂತ್ರಶಬ್ದಮಯವು.
ಸ್ಥಾವರವು ಅಚೇತನವು, ಜಂಗಮವು ಚೇತನಸ್ವರೂಪವು.
ಎಂದು ಮಾಡಿದ ಭಕ್ತಿಗೆ ಒಲಿದು, ನೀಡಿದ ಪದಾರ್ಥವ ಕೈಕೊಂಡು
ಮುಕ್ತಿಯ ಕೊಡುವ ಮಹಾ ಘನಜಂಗಮವೆ ಅಧಿಕವೆಂದರಿಯದೆ,
ಬರಿದೆ ಸ್ಥಾವರ ಘನವೆಂಬ ಬಿನುಗುಜೀವರನೇನೆಂಬೆನಯ್ಯ
ಅಖಂಡೇಶ್ವರಾ. ॥ ೨೯೨ ॥

### ೫೩೬

ಲಿಂಗಕ್ಕೆ ಅರ್ಪಿಸಿದ ಪದಾರ್ಥವು ಕರ್ತವ್ಯವಲ್ಲ,
ಜಂಗಮಕ್ಕೆ ಅರ್ಪಿಸಿದ ಪದಾರ್ಥವು ಕರ್ತವ್ಯವು.
ಸ್ಥಾವರಕ್ಕೆ ಅರ್ಪಿಸಿದ ಪದಾರ್ಥವು ಕರ್ತವ್ಯವಲ್ಲ,
ಜಂಗಮಕ್ಕೆ ಅರ್ಪಿಸಿದ ಪದಾರ್ಥವು ಕರ್ತವ್ಯವು.

ಅದೆಂತೆಂದೊಡೆ : ಪರಮರಹಸ್ಯೆ–
''ಲಿಂಗಾರ್ಪಿತಂ ನ ಕರ್ತವ್ಯಂ ಕರ್ತವ್ಯಂ ಜಂಗಮಾರ್ಪಿತಂ ।
ಮಯ ತೃಪ್ತಿರುಮಾದೇವಿ ಮಮ ಶ್ರೇಷ್ಠಂತು ಜಂಗಮ ॥''
ಮತ್ತಂ,
''ಯಥಾ ಭೇರುಂಡಪಕ್ಷೀ ತು ದ್ವಿ ಮುಖೇನ ಪ್ರಭುಂಜತೇ ।
ತಥಾ ಚ ಉಮಯಾದೇವಿ ಮಮ ತೃಪ್ತಿಸ್ತು ಜಂಗಮಃ ॥''
ಎಂದುದಾಗಿ,
ಸ್ಥಾವರಕ್ಕೆ ಅರ್ಪಿಸಿದ ನೈವೇದ್ಯವು ಶಿವನಿಗೆ ತೃಪ್ತಿಯಾಗದು.
ಜಂಗಮಕ್ಕೆ ಅರ್ಪಿಸಿದ ನೈವೇದ್ಯವು
ಶಿವನಿಗೆ ಸದಾಕಾಲದಲ್ಲಿಯೂ ತೃಪ್ತಿಯಹುದು ನೋಡಾ ಅಖಂಡೇಶ್ವರಾ.
॥ ೨೯೩ ॥

**೫೩೭**

ಲಿಂಗಭಕ್ತನಾದ ಬಳಿಕ,
ತನ್ನಂಗದಲ್ಲಿ ಧರಿಸಿರ್ಪ ಲಿಂಗ ಒಂದಲ್ಲದೆ
ಅನ್ಯವನರಿಯದಿರಬೇಕು.
ಆ ಲಿಂಗದಲ್ಲಿ ನೈಷ್ಠಿಕಭಾವ ಇಂಬುಗೊಂಡಿರಬೇಕು.
ಆ ಲಿಂಗವೆ ಪತಿ ತಾನ ಸತಿಯೆಂಬ ದೃಢಬುದ್ಧಿ ನಿಶ್ಚಲವಾಗಿರಬೇಕು.
ಹೀಂಗಲ್ಲದೆ,
ತನ್ನ ದೇಹದ ಮೇಲೆ ಇರುತಿರ್ಪ ಲಿಂಗವ ಸಾಮಾನ್ಯವ ಮಾಡಿ,
ಕಂಡ ಕಂಡ ದೇಗುಲದೊಳಗಣ ಕಲ್ಲ
ದೇವರೆಂದು ಭಾವಿಸಿ ಪೂಜಿಸುವ
ಗಾವಿಲ ಮೂಳ ಹೊಲೆಯರ ಮುಖವ ನೋಡಲಾಗದಯ್ಯ
ಅದೆಂತೆಂದೊಡೆ : ವೀರಶೈವಸಂಗ್ರಹ
''ಇಷ್ಟಲಿಂಗಮವಿಶ್ವಾಸಂ ಸ್ಥಾವರಲಿಂಗೇನ ಪೂಜನಂ ।
ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್ ॥''
ಎಂದುದಾಗಿ,
ಇಂತಪ್ಪಂತ್ಯಜರನೇನೆಂಬೆನಯ್ಯಾ ಅಖಂಡೇಶ್ವರಾ. ॥ ೨೯೪ ॥

**೫೩೮**

ಶ್ರೀಗುರುಸ್ವಾಮಿ ಕರುಣಿಸಿಕೊಟ್ಟ ಇಷ್ಟಲಿಂಗವನು
ಉರದಲ್ಲಿ ಧರಿಸಿಕೊಂಡು ಅದು ದೇವರೆಂದು ನಂಬದೆ
ಧರೆಯ ಮೇಲಣ ಕಂಡ ಕಂಡ ಕಲ್ಲ ದೇವರೆಂದು ಕಲ್ಪಿಸಿ
ಹರಿದಾಡುವ ಭಂಡ ಮಾದಿಗರ ಭಕ್ತರೆಂದಡೆ
ಅಘೋರನರಕ ತಪ್ಪದಯ್ಯ ಅಖಂಡೇಶ್ವರಾ. ॥ ೨೯೫ ॥

೫೩೯

ಸದ್ಭಕ್ತರಾದವರು ಸ್ಥಾವರಲಿಂಗದ ಭಜನೆಯ ಮಾಡಲಾಗದು.
ಮನದಲ್ಲಿ ಸ್ಥಾವರ ಘನವೆಂದು ನೆನೆಯಲಾಗದು.
ಅದೇನು ಕಾರಣವೆಂದೊಡೆ :
ಆದಿ ಅನಾದಿಯಿಂದತತ್ತಲಾದ ಮಹಾಘನಪರವಸ್ತುವನು
ಶ್ರೀಗುರುಸ್ವಾಮಿ ಭೇದಿಸಿ ತಂದು,
ಇಷ್ಟಲಿಂಗವೆನಿಸಿ ಕರಸ್ಥಲದಲ್ಲಿ ಕೊಟ್ಟ ಬಳಿಕ
ಆ ಲಿಂಗದಲ್ಲಿ ಸಕಲ ತೀರ್ಥ,
ಸಕಲ ಕ್ಷೇತ್ರಂಗಳುಂಟೆಂದು ಭಾವಿಸಿ,
ಮುಕ್ತಿಯ ಪಡೆಯಲರಿಯದೆ
ಖಂಡಿತ ಬುದ್ಧಿಯಿಂದ ಬೇರೆ ಮುಕ್ತಿಯ ಪಡೆವೆವೆಂದು
ಕಂಡ ಕಂಡ ತೀರ್ಥ ಕ್ಷೇತ್ರಂಗಳಿಗೆಡೆಯಾಡಿ
ತೊಳಲಿ ಬಳಲುವ ಭ್ರಷ್ಟಭವಿಗಳಿಗೆ
ನರಕವೇ ಪ್ರಾಪ್ತಿಯಯ್ಯಾ ಅಖಂಡೇಶ್ವರಾ. ॥ ೨೬೬ ॥

೫೪೦

ಪರದೈವವ ಪೂಜಿಸುವಾತ ಸದ್‌ಭಕ್ತನೆ ?
ಅಲ್ಲಲ್ಲ.
ಪರಸಮಯವ ಬಳಸುವಾತ ಸದ್‌ಭಕ್ತನೆ ? ಅಲ್ಲಲ್ಲ.
ಪರಸ್ತ್ರೀಯರಿಗಳಪುವಾತ ಸದ್‌ಭಕ್ತನೆ ? ಅಲ್ಲಲ್ಲ.
ಪರರೊಡವೆಯ ಅಪಹರಿಸಿಕೊಂಬಾತ ಸದ್‌ಭಕ್ತನೆ ? ಅಲ್ಲಲ್ಲ.
ಇಂತೀ ದುರಾಚಾರದಲ್ಲಿ ನಡೆದು ದುಃಖಕ್ಕೆ ಈಡಾಗಿ ಹೋಗುವ
ಕತ್ತೆ ಮೂಳ ಹೊಲೆಯರ ಸತ್‌ಭಕ್ತರೆಂದಡೆ
ಭವ ಹಿಂಗದಯ್ಯ ಅಖಂಡೇಶ್ವರಾ. ॥ ೨೬೭ ॥

೫೪೧

ಅನಂತಕೋಟಿ ಹೀನ ಭವಿಜನ್ಮವ ನೀಗಿ ಶಿವಜನ್ಮಕ್ಕೆ ಬಂದು,
ಶ್ರೀಗುರುಕಾರುಣ್ಯವ ಪಡೆದು ಪರಮ ಪವಿತ್ರಕಾಯನೆನಿಸಿ,
ಶಿವಭಕ್ತನಾದ ಬಳಿಕ ಮರಳಿ ಭವಿಸಂಗವ ಮಾಡಲಾಗದು.
ಅದೇನು ಕಾರಣವೆಂದೊಡೆ :
ಹಿಂದಣ ಕ್ರಿಮಿ ಕೀಟಕ ಸುನಿ ಸೂಕರಜನ್ಮ ಬಪ್ಪುದಾಗಿ
ಮುಂದೆ ಎಚ್ಚರದಲ್ಲಿ ನಡೆಯಬೇಕು.
ಎಚ್ಚರದಪ್ಪಿ ಅರುಹುಮರಹಿನಿಂದೆ
ಭವಿಸಂಗವ ಮಾಡುವ ಭಕ್ತನ ವಿಧಿ ಎಂತಾಯಿತ್ತೆಂದಡೆ :

ದೇವರಿಗೆಂದು ನೇಮಿಸಿ ಮಾಡಿಸಿದ ಮೀಸಲೋಗರವ
ಶ್ವಾನ ಮುಟ್ಟಿದಂತಾಯಿತ್ತಯ್ಯ ಅಖಂಡೇಶ್ವರಾ. ॥ ೨೯೮ ॥

೫೪೨

ಮಾಡಲಾಗದು ಭವಿಯ ಸಂಪರ್ಕವ.
ನೋಡಲಾಗದು ಭವಿಯ ದೃಷ್ಟಿಪೂರಿತವಾಗಿ
ನಡೆಯಲಾಗದು ಭವಿಯಸಂಗಡ ಬಟ್ಟೆಯ.
ಕುಳ್ಳಿರಲಾಗದು ಭವಿಯಸಹಿತ ಗದ್ದುಗೆಯ ಮೇಲೆ.
ಶಯನವ ಮಾಡಲಾಗದು ಭವಿಯಿರ್ದ ಹಾಸಿಗೆಯಲ್ಲಿ.
ಭೋಜನವ ಮಾಡಲಾಗದು ಭವಿಯು ಕಾಣುವಂತೆ.
ಅದೆಂತೆಂದೊಡೆ :
''ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಮ್ ॥''
ಎಂದುದಾಗಿ,
ಇಂತಪ್ಪ ಭವಿಯ ಸಮ್ಮಿಶ್ರವ ಮಾಡಿದ ಭಕ್ತನು
ಚಂದ್ರಸೂರ್ಯರುಳ್ಳ ಪರ್ಯಂತರವಾಗಿ
ಮಹಾ ಘೋರ ನರಕದ ಕುಳಿಯಲ್ಲಿ ಬಿದ್ದು
ಮುಳುಗುತ್ತೇಳುತ್ತ ತಡಿಯ ಸೇರಲರಿಯದೆ
ಬಾಧೆಪಡುತ್ತಿರ್ಪನಯ್ಯ ಅಖಂಡೇಶ್ವರಾ. ॥ ೨೯೯ ॥

೫೪೩

ನೆರೆಹೊಲ್ಲ ದುರಾಚಾರಿಗಳ, ನೆರೆಹೊಲ್ಲ ಜಾರಚೋರರ,
ನೆರೆಹೊಲ್ಲ ಬ್ರಹ್ಮೇತಿಕಾರರ, ನೆರೆಹೊಲ್ಲ ಸುರೆಭುಂಜಕರ,
ನೆರೆಹೊಲ್ಲ ಗುರುತಪ್ಪಕರ, ನೆರೆಹೊಲ್ಲ ಹುಸಿಡಂಭಕರ,
ಅದೇನು ಕಾರಣವೆಂದೊಡೆ :
ಬಿರುಗಾಳಿಯ ಸಂಗದಿಂದೆ ಜ್ಯೋತಿ ಅಳಿದು ಹೋಗುವಂತೆ,
ಇಂತಪ್ಪ ಪಂಚಮಹಾಪಾತಕರ ನೆರೆಹೊರೆಯ ಸಂಗದಲ್ಲಿರ್ದವಂಗೆ
ಅನಂತಕಾಲ ಮಾಡಿದ ಪುಣ್ಯವು ಕೆಟ್ಟು ಹೋಗಿ
ಮುಂದೆ ಪಾಪವು ಬೆಂಬತ್ತಿ ಕಾಡುವುದಯ್ಯ ಅಖಂಡೇಶ್ವರಾ. ॥ ೩೦೦ ॥

೫೪೪

ಮಾಡಬಾರದು ಮಾಡಬಾರದು
ಮಾನಹೀನ ಮತಿಭ್ರಷ್ಟರ ಸಂಗವ.
ಮಾಡಬಾರದು ಮಾಡಬಾರದು
ಪಾಶಬದ್ಧ ಕ್ಲೇಶಜೀವರ ಸಂಗವ.

ಮಾಡಬಾರದು ಮಾಡಬಾರದು
ಹುಸಿಡಂಭಕ ಹುಸಿಹುಂಡರ ಸಂಗವ.
ಮಾಡಿದಡೆ ಭವದಲ್ಲಿ ಘಾಸಿಯಲ್ಲದೆ
ಮುಕ್ತಿಯ ಲೇಸಿಲ್ಲವಯ್ಯ ಅಖಂಡೇಶ್ವರಾ. ‖ ೩೦೧ ‖

**೫೪೫**

ಒಬ್ಬರೊಬ್ಬರ ಸಂಗವ ಬಯಸುತಿರ್ಪವರು ನೀವು ಕೇಳಿರೋ !
ಮನಕ್ಕೆ ಮನ ತಾರ್ಕಣೆಯಾಗದವರ ಸಂಗವದೇತರ ಸಂಗ ?
ಬುದ್ಧಿ ಬುದ್ಧಿ ಕೂಟಸ್ಥವಾಗದವರ ಸಂಗವದೇತರ ಸಂಗ ?
ಶೀಲ ಶೀಲ ಒಂದಾಗದವರ ಸಂಗವದೇತರ ಸಂಗ ?
ಭಾವ ಭಾವ ಏಕಾರ್ಥವಾಗದವರ ಸಂಗವದೇತರ ಸಂಗ ?
ದುಸ್ಸಂಗವಲ್ಲದೆ ಇಂತಪ್ಪ ದುಸ್ಸಂಗಿಗಳ ಸಂಗ
ದೋಷಕ್ಕೆ ಈಡು ಮುಕ್ತಿಯ ಕೇಡು ಕಂಡೆಯಾ ಅಖಂಡೇಶ್ವರಾ. ‖ ೩೦೨ ‖

**೫೪೬**

ಸಂಗ ಲೇಸು ಸಾಧುಮಹಾಪುರುಷರ.
ಸಂಗ ಲೇಸು ಸದ್‌ಭಕ್ತಶರಣಜನಂಗಳ.
ಸಂಗ ಲೇಸು ಸುಜ್ಞಾನಸಹವಾಸಿಗಳ.
ಸಂಗ ಲೇಸು ಅಖಂಡೇಶ್ವರಲಿಂಗವನೊಡಗೂಡಿದ ಸದ್‌ಭೋಗಿಗಳ. ‖೩೦೩‖

**೫೪೭**

ತನ್ನ ತಾನರಿಯದೆ ಅನ್ಯರ ಗುಣಾವಗುಣಗಳ
ಎತ್ತಿ ಎಣಿಸುವನ್ನಕ್ಕ ಶಿವಶರಣನೆಂತಪ್ಪನಯ್ಯ ?
ಸಜ್ಜನ ಸದ್‌ಭಾವಿ ಸತ್ಪುರುಷರುಗಳ ಮನನೋವಂತೆ
ಹಳಿದು ಹಾಸ್ಯವ ಮಾಡಿ ದೂಷಿಸುವನ್ನಕ್ಕ ಶಿವಶರಣನೆಂತಪ್ಪನಯ್ಯ ?
ಗರ್ವಾಹಂಕಾರವೆಂಬ ಹಿರಿಯ ಪರ್ವತವನೇರಿ
ಮರವೆಯಿಂದೆ ಮುಂದುಗಾಣದೆ ಮನದ ಪ್ರಪಂಚಿನಲ್ಲಿ ನಡೆದು
ಜನನ ಮರಣಂಗಳೆಂಬ ಭವಜಾಲದಲ್ಲಿ ಸಿಲ್ಕಿ
ದುಃಖವ ಪಡುವನ್ನಕ್ಕ ಶಿವಶರಣನೆಂತಪ್ಪನಯ್ಯ ಅಖಂಡೇಶ್ವರಾ. ‖ ೩೦೪ ‖

**೫೪೮**

ತನ್ನ ಎಡೆಯಲ್ಲಿ ಕತ್ತೆ ಸತ್ತುಬಿದ್ದುದನರಿಯದೆ
ಪರರೆಡೆಯಲ್ಲಿ ನೊಣವನರಸುವ ಮರುಳಮಾನವನಂತೆ,
ತನ್ನಂಗಮನದ ಅವಗುಣಂಗಳ ತೊಲಗಿ ನೂಕಲರಿಯದ
ಅನ್ಯರಲ್ಲಿ ಅವಗುಣವ ಸಂಪಾದನೆಯ ಮಾಡುವ
ಕುನ್ನಿಗಳ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ. ‖೩೦೫‖

**೫೪೯**

ತಮ್ಮೊಳಗೆ ತಾವು ತಿಳಿಯಲರಿಯರು,
ಪರವಾಗಿ ಹೇಳಿದರೆ ಗ್ರಹಿಸರು,
ದುರುಳಬುದ್ಧಿಯಿಂದ ನಡೆವ
ದುರಾಚಾರಿಗಳ ಮುಖವ ನೋಡಲಾಗದಯ್ಯ ಅಖಂಡೇಶ್ವರಾ. ॥ ೩೦೬ ॥

**೫೫೦**

ಸಲ್ಲರು ಸಲ್ಲರಯ್ಯ ಶಿವಪಥಕ್ಕೆ
ದುರ್ಮತಿ ದುರಾಚಾರಿಗಳು.
ಸಲ್ಲರು ಸಲ್ಲರಯ್ಯ ಶಿವಪಥಕ್ಕೆ
ದುರ್ನೀತಿ ದುರ್ಗುಣಿಗಳು.
ಸಲ್ಲರು ಸಲ್ಲರಯ್ಯ ಶಿವಪಥಕ್ಕೆ
ದುರ್ಬುದ್ಧಿ ದುರ್ಭಾವಿಗಳು ಅಖಂಡೇಶ್ವರಾ. ॥ ೩೦೭ ॥

**೫೫೧**

ದಯವಿರಬೇಕು ಸಕಲಪ್ರಾಣಿಗಳಲ್ಲಿ,
ಭಯವಿರಬೇಕು ಗುರುಲಿಂಗಜಂಗಮದಲ್ಲಿ,
ಸ್ವಯವಿರಬೇಕು ಸಕಲಗುಣಂಗಳಲ್ಲಿ,
ನಯವಿರಬೇಕು ನುಡಿಗಡಣದಲ್ಲಿ,
ಇಂತೀ ಗುಣವಿಲ್ಲದವರ ಕಂಡರೆ
ಸೊಗಸದಯ್ಯ ಎನಗೆ ಅಖಂಡೇಶ್ವರಾ. ॥ ೩೦೮ ॥

**೫೫೨**

ಬಲ್ಲವರು ಬೆಸಗೊಂಡಡೆ ಸೊಲ್ಲನಾರೈದು
ಮೆಲ್ಲನೆ ನುಡಿಯಬೇಕು.
ಕಲ್ಲಿಗೆ ಕಲ್ಲು ತಾಗಿದಂತೆ ಸೊಲ್ಲು ಬಿಗಿಯಾದಡೆ
ಅಲ್ಲಿ ನಿಲ್ಲನಯ್ಯ ನಮ್ಮ ಅಖಂಡೇಶ್ವರ. ॥ ೩೦೯ ॥

**೫೫೩**

ಬಲ್ಲರೆ ಬಲ್ಲರೆಂಬೆನು, ಲಿಂಗಜಂಗಮ
ಒಂದೇ ಎಂದು ತಿಳಿದು ನಡೆಯಬಲ್ಲರೆ.
ಬಲ್ಲರೆ ಬಲ್ಲರೆಂಬೆನು, ಅಂಗಲಿಂಗದ ಕೀಲವನರಿದು ಕೂಡಬಲ್ಲರೆ.
ಬಲ್ಲರೆ ಬಲ್ಲರೆಂಬೆನು, ಜ್ಞಾನ ಸುಜ್ಞಾನದ ನೆಲೆಯನರಿಯಬಲ್ಲರೆ.
ಬಲ್ಲರೆ ಬಲ್ಲರೆಂಬೆನು, ನಿತ್ಯಾನಿತ್ಯವ
ಬೇರ್ಪಡಿಸಿ ನಿಜವ ಹಿಡಿಯಬಲ್ಲರೆ.

ಇಂತೀ ಬಲ್ಲವಿಕೆಯ ಬಗೆಯನರಿಯದೆ ಸೊಲ್ಲು ಸೊಲ್ಲಿಗೆ ಮಚ್ಚರಿಸಿ
ಕರಣಮಥನ ಕರ್ಕಶದಿಂದ ಹೋರುವವರು
ಸಲ್ಲರೆಂಬೆನಯ್ಯ ನಿಜಪಥಕ್ಕೆ ಅಖಂಡೇಶ್ವರಾ. ॥ ೩೧೦ ॥

೫೫೪

ಅಲ್ಲದುದ ಹಿಡಿವನಲ್ಲ ಶರಣ.
ಇಲ್ಲದುದ ನುಡಿವನಲ್ಲ ಶರಣ.
ಗೆಲ್ಲ ಸೋಲಿಂಗೆ ಹೋರುವವನಲ್ಲ ಶರಣ.
ಬಲ್ಲೆನೆಂದು ತನ್ನ ಬಲ್ಲತನವ ಎಲ್ಲರೊಳು
ಬೀರುವನಲ್ಲವಯ್ಯ ಅಖಂಡೇಶ್ವರಾ ನಿಮ್ಮ ಶರಣ. ॥ ೩೧೧ ॥

೫೫೫

ಸತ್ಯವಚನವ ನುಡಿಯಬಲ್ಲರೆ ಶರಣನೆಂಬೆನು.
ಸದಾಚಾರದಲ್ಲಿ ನಡೆಯಬಲ್ಲರೆ ಶರಣನೆಂಬೆನು.
ವೃತ್ತಿಜ್ಞಾನವಳಿದು ಚಿತ್ತದ ಕೊನೆಯ ಮೊನೆಯಲ್ಲಿ
ನಿತ್ಯಲಿಂಗದ ನೆನಹು ತುಂಬಿ ಸುಳಿಯಬಲ್ಲರ
ಅಚ್ಚ ಶರಣನೆಂಬೆನಯ್ಯ ಅಖಂಡೇಶ್ವರಾ. ॥ ೩೧೨ ॥

೫೫೬

ಹಾಲ ಹರವಿಯ ಮೇಲೆ ಮಜ್ಜಿಗೆಯ ತುಂಬಿರಿಸಿದಡೇನು
ಹೆಪ್ಪಾಗಬಲ್ಲುದೆ ಅಯ್ಯಾ, ಸಮ್ಮಿಶ್ರದಿಂದಲ್ಲದೆ.
ಅಂಗದ ಮೇಲೆ ಲಿಂಗಧಾರಣವಾದಡೇನು
ಸಮರಸವಾಗಬಲ್ಲುದೆ ಅಯ್ಯಾ, ಶಿವಜ್ಞಾನವಿಲ್ಲದೆ ಅಖಂಡೇಶ್ವರಾ. ॥ ೩೧೩ ॥

೫೫೭

ಕ್ರಿಯೆಯಲ್ಲಿ ಬಲ್ಲಿದರು, ಜ್ಞಾನದಲ್ಲಿ ಸಂಪನ್ನರು
ಎಂದು ಹೇಳಲೇತಕೋ ?
ನಡೆನುಡಿಯಲ್ಲಿ ಕಾಣಬಹುದು.
ನಡೆನುಡಿ ಶುದ್ಧವಿಲ್ಲದವರಲ್ಲಿ
ಇರಲೊಲ್ಲ ನೋಡಾ ನಮ್ಮ ಅಖಂಡೇಶ್ವರ. ॥ ೩೧೪ ॥

೫೫೮

ಕಟ್ಟಿದ ಬುತ್ತಿ ಎಷ್ಟು ದಿನ ಈಡೇರಲಾಪುದು.
ಬಿರಿದ ಕೊಡದಲ್ಲಿ ಅಮೃತವ ತುಂಬಿದರೆ
ಎಷ್ಟು ಹೊತ್ತು ಇರಲಾಪುದು.
ಖ್ಯಾತಿಯ ಭಕ್ತಿ, ಕಲಿಕೆಯ ವಿರಕ್ತಿ ಅದರಂತೆ ಕಂಡಯ್ಯ.

ಸದ್ಗುರುನಾಥ ಉದ್ಯೋಗಿಸಿ ಕೊಟ್ಟುದು ನಿಜವಲ್ಲದೆ
ಉಳಿದುದೆಲ್ಲ ಅಬದ್ಧವೆಂಬೆನಯ್ಯ ಅಖಂಡೇಶ್ವರಾ. ॥ ೩೧೫ ॥

**೫೫೯**

ಒಲ್ಲನು ಒಲ್ಲನಯ್ಯ ಶಿವಭಕ್ತಿ ಇಲ್ಲದವರ.
ಒಲ್ಲನು ಒಲ್ಲನಯ್ಯ ಶಿವಜ್ಞಾನ ಇಲ್ಲದವರ.
ಒಲ್ಲನು ಒಲ್ಲನಯ್ಯ ಶಿವಭಾವ ಇಲ್ಲದವರ.
ಒಲ್ಲನು ಒಲ್ಲನಯ್ಯ ಶಿವಚಿಂತನೆ ಇಲ್ಲದವರ.
ಒಲ್ಲನು ಒಲ್ಲನಯ್ಯ ನಮ್ಮ ಅಖಂಡೇಶ್ವರನು
ಶಿವಾಚಾರವಿಲ್ಲದ ಭವಪಾತಕರ. ॥ ೩೧೬ ॥

**೫೬೦**

ಎಚ್ಚರವಿರಬೇಕು ನಡೆನುಡಿಯಲ್ಲಿ.
ಮುಚ್ಚರವಿರಬೇಕು ಭವಸಂಸಾರದಲ್ಲಿ.
ಹುಚ್ಚನಾಗಿರಬೇಕು ಜನರ ಕಣ್ಣಿನಲ್ಲಿ.
ಮನ ಅಚ್ಚೊತ್ತಿದಂತಿರಬೇಕು ಲಿಂಗದಲ್ಲಿ.
ಇಂತೀ ಗುಣವುಳ್ಳಾತನೇ ಅಚ್ಚ ಶರಣನು ನೋಡಾ ಅಖಂಡೇಶ್ವರಾ. ॥೩೧೭॥

**೫೬೧**

ಇಂದು ಎನ್ನ ಮನೆಯಲ್ಲಿ ದೇವರಹಬ್ಬ
ಘನವಾಯಿತ್ತು.
ನಿಮಗೆ ಹೋಗಲು ಎಡೆಯಿಲ್ಲ,
ಹೋಗಿರಲೆ ಕಾಲ ಕಾಮ ಮಾಯಾದಿಗಳಿರಾ.
ಮುಂಬಾಗಿಲಲ್ಲಿ ಕಾಲಾಂತಕನೆಂಬ ದೇವರ ಕುಳ್ಳಿರಿಸಿ
ಪೂಜಿಸುತಿರ್ಪರು ಎಮ್ಮವರು.
ಹಿಂಬಾಗಿಲಲ್ಲಿ ಕಾಮಾಂತಕನೆಂಬ ದೇವರ ಕುಳ್ಳಿರಿಸಿ
ಪೂಜಿಸುತಿರ್ಪರು ಎಮ್ಮವರು.
ಮೇಲು ಮನೆಯಲ್ಲಿ ಮಾಯಾಕೋಳಾಹಳನೆಂಬ
ದೇವರ ಕುಳ್ಳಿರಿಸಿ ಪೂಜಿಸುತಿರ್ಪರು ಎಮ್ಮವರು.
ಇಂತಿದನರಿಯದೆ ನೀವು ನಿಮ್ಮ ಹಳೆಯ ವಿಶ್ವಾಸದಿಂದ
ನಮ್ಮ ಮನೆಯತ್ತ ಸುಳಿದಿರಾದಡೆ
ನಮ್ಮಾಳ್ದ ಅಖಂಡೇಶ್ವರ ಕಂಡರೆ ಸೀಳಿ ಬಿಸಾಟುವನು.
ಹೋಗಿರಲೆ ನಿಮ್ಮ ಬಾಳುವೆಯ ಉಳುಹಿಸಿಕೊಂಡು. ॥ ೩೧೮ ॥

### ೫೬೨

ಹೊನ್ನಿನಾಸೆ ಉಳ್ಳನ್ನಕ್ಕರ ಸಂಚಿತಕರ್ಮ ಬಿಡದು.
ಮಣ್ಣಿನಾಸೆ ಉಳ್ಳನ್ನಕ್ಕರ ಪ್ರಾರಬ್ಧಕರ್ಮ ಬಿಡದು.
ಹೆಣ್ಣಿನಾಸೆ ಉಳ್ಳನ್ನಕ್ಕರ ಆಗಾಮಿಕರ್ಮ ಬಿಡದು.
ಇಂತೀ ತ್ರಿವಿಧದಾಸೆ ಉಳ್ಳನ್ನಕ್ಕರ ಭಕ್ತನಲ್ಲ,
ಮಹೇಶ್ವರನಲ್ಲ, ಪ್ರಸಾದಿಯಲ್ಲ, ಪ್ರಾಣಲಿಂಗಿಯಲ್ಲ,
ಶರಣನಲ್ಲ, ಐಕ್ಯನಲ್ಲ ನೋಡಾ ಅಖಂಡೇಶ್ವರಾ. ॥ ೩೧೯ ॥

### ೫೬೩

ಹೊನ್ನು ಬ್ರಹ್ಮನ ಹಂಗು, ಹೆಣ್ಣು ವಿಷ್ಣುವಿನ ಹಂಗು,
ಮಣ್ಣು ರುದ್ರನ ಹಂಗು.
ಇಂತೀ ತ್ರಿಮೂರ್ತಿಗಳ ಹಂಗು ಹರಿದು
ಲಿಂಗವೇ ಗೂಡಾಗಿರ್ಪ ಮಹಾಶರಣರ ಸಂಗದಲ್ಲಿರಿಸಿ
ಸಲಹಯ್ಯ ಎನ್ನ ಅಖಂಡೇಶ್ವರಾ. ॥ ೩೨೦ ॥

### ೫೬೪

ಶಿವ ಶಿವಾ ಮಹಾಪ್ರಸಾದ
ಎನ್ನ ಮನದಾಳಾಪವನವಧರಿಸಯ್ಯ ಸ್ವಾಮಿ.
ಎನಗೆ ಹೊನ್ನು ಬೇಡ, ಎನಗೆ ಹೆಣ್ಣು ಬೇಡ, ಎನಗೆ ಮಣ್ಣು ಬೇಡ,
ಎನಗೆ ಇಹಲೋಕದ ಭೋಗ ಬೇಡ,
ಪರಲೋಕದ ಮೋಕ್ಷ ಬೇಡ,
ಎನಗೆ ಆವಾವ ಫಲಪದವು ಬೇಡ.
ನಿಮ್ಮ ಶ್ರೀಚರಣವನೊಡಗೂಡುವ
ಅವಿರಳ ಸಮರಸ ಭಕ್ತಿ ಜ್ಞಾನ
ಪರಮವೈರಾಗ್ಯದ ಪದವನೆ ಕರುಣಿಸಿ,
ಮರ್ತ್ಯದತ್ತ ಮರಳಿ ಬಾರದಂತೆ ಮಾಡಯ್ಯ ಎನ್ನ
ಅಖಂಡೇಶ್ವರಾ, ನಿಮ್ಮನಿಂತು ಬೇಡಿಕೊಂಬೆನು. ॥ ೩೨೧ ॥

### ೫೬೫

ಕುಚಿತ್ತವಳಿದು ಸುಚಿತ್ತ ನೆಲೆಗೊಂಡು
ಆಚಾರಲಿಂಗದಲ್ಲಿ ಅವಿರಳ
ಸಮರಸೈಕ್ಯವನರಿಯಬಲ್ಲಡೆ
ಭಕ್ತನೆಂಬೆನು.
ಕುಬುದ್ಧಿಯಳಿದು ಸುಬುದ್ಧಿ ನೆಲೆಗೊಂಡು
ಗುರುಲಿಂಗದಲ್ಲಿ ಅವಿರಳ ಸಮರಸೈಕ್ಯವನರಿಯಬಲ್ಲಡೆ

ಮಹೇಶ್ವರನೆಂಬೆನು.
ಅಹಂಕಾರವಳಿದು ನಿರಹಂಕಾರ ನೆಲೆಗೊಂಡು
ಶಿವಲಿಂಗದಲ್ಲಿ ಅವಿರಳ ಸಮರಸೈಕ್ಯವನರಿಯಬಲ್ಲಡೆ
ಪ್ರಸಾದಿಯೆಂಬೆನು.
ಕುಮನವಳಿದು ಸುಮನ ನೆಲೆಗೊಂಡು
ಜಂಗಮಲಿಂಗದಲ್ಲಿ ಅವಿರಳ ಸಮರಸೈಕ್ಯವನರಿಯಬಲ್ಲಡೆ
ಪ್ರಾಣಲಿಂಗಿಯೆಂಬೆನು.
ಅಜ್ಞಾನವಳಿದು ಸುಜ್ಞಾನ ನೆಲೆಗೊಂಡು
ಪ್ರಸಾದಿಲಿಂಗದಲ್ಲಿ ಅವಿರಳ ಸಮರಸೈಕ್ಯವನರಿಯಬಲ್ಲಡೆ
ಶರಣನೆಂಬೆನು.
ದುರ್ಭಾವವಳಿದು ಸದ್‌ಭಾವ ನೆಲೆಗೊಂಡು
ಮಹಾಲಿಂಗದಲ್ಲಿ ಅವಿರಳ ಸಮರಸೈಕ್ಯವನರಿಯಬಲ್ಲಡೆ
ನಿಜೈಕ್ಯನೆಂಬೆನು.
ಇಂತೀ ಷಡ್‌ವಿಧಬ್ರಹ್ಮವನೊಡಗೂಡಿದ
ಮಹಾಶರಣನ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೩೧೧ ॥

**೫೬೬**

ಗುರುವಿಂಗಾದಡೂ ಅರುಹು ಆಚಾರ ಸತ್ಕ್ರಿಯವೇ ಬೇಕು.
ಲಿಂಗಕ್ಕಾದಡೂ ಅರುಹು ಆಚಾರ ಸತ್ಕ್ರಿಯವೇ ಬೇಕು.
ಜಂಗಮಕ್ಕಾದಡೂ ಅರುಹು ಆಚಾರ ಸತ್ಕ್ರಿಯವೇ ಬೇಕು.
ಅದೆಂತೆನಲು : ವೀರಮಾಹೇಶ್ವರಸಂಗ್ರಹ ಗ್ರಂಥ
''ಜ್ಞಾನಮಾಚಾರಹೀನೇಷು ವೇದಾಗಮೇನ ಪಾರಗಃ ।
ದುಷ್ಟಚಾಂಡಾಲಭಾಂಡೇಷು ಯಥಾ ಭಾಗೀರಥೀಜಲಂ॥''
ಎಂದುದಾಗಿ,
ಅರುಹು ಆಚಾರ ಸತ್ಕ್ರಿಯಾಹೀನರಿಗೆ
ಶಿವನು ಸ್ವಪ್ನದಲ್ಲಿ ಸುಳಿಯನು ನೋಡಾ.
ಅರುಹು ಆಚಾರ ಸತ್ಕ್ರಿಯಾಸಂಪನ್ನರಾದವರಲ್ಲಿ ಪರಶಿವನಿರ್ಪನಾಗಿ,
ಅರುಹುಗೆಟ್ಟು ಆಚಾರತಪ್ಪಿ ಸತ್ಕ್ರಿಯಾಹೀನರಾಗಿರ್ಪವರು
ಸಲ್ಲರಯ್ಯ ಶಿವಪಥಕ್ಕೆ ಅಖಂಡೇಶ್ವರಾ. ॥ ೩೧೨ ॥

**೫೬೭**

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳಲ್ಲಿ ಬಿದ್ದು ಒದ್ದಾಡುವಾತ ಗುರುವಲ್ಲ.
ಅಷ್ಟವಿಧಾರ್ಚನ ಷೋಡಶೋಪಚಾರಂಗಳ ಮಾಡಿ

ಭಿನ್ನಫಲಪದವ ಪಡೆದು ಅನುಭವಿಸುವ
ಉಪಾಧಿಭಕ್ತನ ಹಿಂದೆ ಭವಭವದಲ್ಲಿ
ಎಡೆಯಾಡುವುದು ಲಿಂಗವಲ್ಲ.
ಅಂಗ ಮನ ಪ್ರಾಣೇಂದ್ರಿಯಂಗಳಲ್ಲಿ ಮುಸುಕಿದ
ಅಜ್ಞಾನಾಂಧಕಾರದಲ್ಲಿ ಮುಂದುಗಾಣದೆ
ನಡೆವಾತ ಜಂಗಮವಲ್ಲ.
ಇವರು ದೇವರೆಂದು ನಂಬಿ ಪೂಜಿಸುವಾತ ಭಕ್ತನಲ್ಲ.
ಅದೇನು ಕಾರಣವೆಂದೊಡೆ :
ಅಂಧಕನ ಕೈಯ ಅಂಧಕ ಹಿಡಿದಂತೆ
ಅರುಹು ಆಚಾರಹೀನವಾದ ಗುರುಲಿಂಗಜಂಗಮವ
ದೇವರೆಂದು ಪೂಜಿಸುವ ಭಕ್ತಂಗೆ
ಭವರಾಟಾಳದಲ್ಲಿ ಸತ್ತು ಸತ್ತು
ಹುಟ್ಟಿ ಬಪ್ಪುದು ತಪ್ಪದಯ್ಯ ಅಖಂಡೇಶ್ವರಾ. ॥ ೩೨೪ ॥

**೫೬೮**

ಇಷ್ಟಲಿಂಗದಲ್ಲಿ ತನುವ ಸವೆಯದೆ,
ಪ್ರಾಣಲಿಂಗದಲ್ಲಿ ಮನವ ಸವೆಯದೆ,
ಭಾವಲಿಂಗದಲ್ಲಿ ಧನವ ಸವೆಯದೆ,
ಬರಿದೆ ನಾನು ಜಂಗಮ, ತಾನು ಜಂಗಮವೆಂದು
ತಮ್ಮ ಅಗಮ್ಯವ ನುಡಿದುಕೊಂಡು
ಭಕ್ತಿಯ ಮರೆದು ಯುಕ್ತಿಶೂನ್ಯರಾಗಿ
ಮುಕ್ತಿಯ ಹೊಲಬು ತಪ್ಪಿ
ಆಣವ ಮಾಯಾ ಕಾರ್ಮಿಕವೆಂಬ
ಮಲತ್ರಯಂಗಳ ಕಚ್ಚಿ ಮೂತ್ರದ ಕುಳಿಯೊಳು ಮುಳುಗಾಡುತಿರ್ಪ
ಮೂಳ ಹೊಲೆಯರ ಮುಖವ ನೋಡಲಾಗದಯ್ಯ ಅಖಂಡೇಶ್ವರಾ. ॥೩೨೫॥

**೫೬೯**

ಜಡೆ ಬೋಳು ಲೋಚು ದಿಗಂಬರವನು
ಅಳವಡಿಸಿಕೊಂಡು ನಟಿಸುವ ಅಣ್ಣಗಳಿರಾ.
ನಿಮ್ಮ ಜಡೆಯಾವುದು, ಬೋಳಾವುದು ?
ಲೋಚವಾವುದು, ದಿಗಂಬರವಾವುದು ?
ಬಲ್ಲರೆ ಹೇಳಿರೋ, ಅರಿಯದಿರ್ದಡೆ ನೀವು ಕೇಳಿರೋ.
ಭಕ್ತಿ ಜ್ಞಾನ ವೈರಾಗ್ಯದ ಪುಂಜವೇ ಜಡೆ.
ತನುವಿನ ಆಸೆ ಮನದ ವಾಸನಾ ಧರ್ಮವಳಿದುದೇ ಬೋಳು.
ಸಚರಾಚರ ಪ್ರಾಣಿಗಳ ಮೇಲಣ ಕರುಣವೇ ಲೋಚು.

ಸೃಷ್ಟಿ ಸ್ಥಿತಿ ಪ್ರಳಯಂಗಳು ನಷ್ಟವಾದುದೇ ದಿಗಂಬರ.
ಇಂತೀ ಭೇದವನರಿಯದೆ ತನುವಿನ ವ್ಯಸನ ಧರಿಸಿ
ಮನದ ಪ್ರಕೃತಿಯಲ್ಲಿ ಹರಿದಾಡುವ
ಬಿನುಗು ಜೀವಗಳ್ಳರ ಎನಗೊಮ್ಮೆ ತೋರದಿರಯ್ಯ
ಅಖಂಡೇಶ್ವರಾ. ॥ ೩೨೬ ॥

**೫೭೦**

ಷಡುವರ್ಗಂಗಳ ಸಡಲಿಸಿ ಒಡಲುಪಾಧಿಯನರುಹಿ,
ಷಡುಸ್ಥಲದನುವನರಿದು, ಷಟ್‌ಬ್ರಹ್ಮದ ಸಂಯೋಗವನರಿಯದೆ
ಪೊಡವಿಯ ಪ್ರಪಂಚಿನಲ್ಲಿ ಸಿಲ್ಕಿ
ಹೊಡೆದಾಡಿ ಹೊತ್ತುಗಳೆದು
ಮಡಿದು ಹೋಗುವ ಕಡುಪಾತಕರ
ವಿರಕ್ತರೆನ್ನಬಹುದೆ ಅಯ್ಯ ಅಖಂಡೇಶ್ವರಾ ? ॥ ೩೨೭ ॥

**೫೭೧**

ಒಳಗೆ ಬೋಳಾಗಲರಿಯದೆ ಹೊರವೇಷದ ಬೋಳಿನಲ್ಲಿ
ಸುಳಿದಾಡುವ ಅಣ್ಣಗಳ ಕಂಡು ಬೆರಗಾದೆನಯ್ಯ.
ಅದೇನು ಕಾರಣವೆಂದೊಡೆ :
ತನು ಕರಣೇಂದ್ರಿಯ ವಿಷಯಾದಿಗಳು
ಘನಮಹಾಲಿಂಗದಲ್ಲಿ ತರಹರವಾಗಿರಬಲ್ಲಡೆ ಬೋಳು.
ಹಮ್ಮು ಬಿಮ್ಮು ಗರ್ವ ಅಹಂಕಾರವನಳಿದು
ಆದಿ ಅನಾದಿಯಿಂದತ್ತತ್ತಲಾದ ಅನುಪಮಲಿಂಗದಲ್ಲಿ
ಮನವಡಗಿರಬಲ್ಲಡೆ ಬೋಳು.
ಮನ ಪ್ರಾಣ ಭಾವಂಗಳು ಅನುಪಮಲಿಂಗದಲ್ಲಿ
ನಿಕ್ಷೇಪವಾಗಿರಬಲ್ಲಡೆ ಬೋಳು.
ಅನಂತಕೋಟಿ ಬ್ರಹ್ಮಾಂಡಗಳ ಒಳಹೊರಗೆ ತುಂಬಿ
ತೊಳಗಿ ಬೆಳಗುವ ಅಖಂಡ ಪರಿಪೂರ್ಣವಾದ ಪರಬ್ರಹ್ಮದಲ್ಲಿ
ಭಾವ ತುಂಬಿರಬಲ್ಲಡೆ ಬೋಳು.
ಇಂತೀ ಬೋಳಿನ ಘನವನರಿಯದೆ
ಗಂಡುದೊತ್ತಿನಂತೆ ಮಂಡೆಯ ಬೋಳಿಸಿಕೊಂಡು
ದಿಂಡೆಯತನದಿಂದೆ ಕಂಡಕಂಡವರಲ್ಲಿ ಕೆಲೆದಾಡುತ್ತ
ಮದ ಮತ್ಸರಂಗಳ ಮುಂದುಗೊಂಡು ಚರಿಸುತ್ತ .
ಬಂದ ಭವಂಗಳಲ್ಲಿ ಮುಳುಗಾಡುತಿರ್ಪವರ
ಬೋಳುಗಳೆಲ್ಲ ಜಾಳು ಬೋಳು ನೋಡಾ ಅಖಂಡೇಶ್ವರಾ. ॥ ೩೨೮ ॥

೫೭೨

ವಿರಕ್ತ ವಿರಕ್ತರೆಂದು ನುಡಿದುಕೊಂಬ ಅಣ್ಣಗಳಿರಾ.
ನಿಮ್ಮ ವಿರಕ್ತಿಯ ಪರಿಯೆಂತುಂಟು ಹೇಳಿರೋ ?
ಅರಿಯದಿರ್ದಡೆ ನೀವು ಕೇಳಿರೊ.
ವಿರಕ್ತನಾದ ಬಳಿಕ
ಅಶನ ವ್ಯಸನ ವಿಷಯ ವಿಕಾರಕ್ಕೆ ದೂರನಾಗಿರಬೇಕು.
ವಿರಕ್ತನಾದ ಬಳಿಕ
ತಾ ಮುನ್ನ ಹೇಸಿ ಬಿಟ್ಟ ಹೊನ್ನು ಹೆಣ್ಣು ಮಣ್ಣು ಮರಳಿ ಮುಟ್ಟದಿರಬೇಕು.
ವಿರಕ್ತನಾದ ಬಳಿಕ ಆಶಾಪಾಶ ತಾಮಸವ ತೊಲಗಿಸಬೇಕು.
ವಿರಕ್ತನಾದ ಬಳಿಕ
ಅಷ್ಟಮದಂಗಳ ಅರಿಷಡ್ವರ್ಗವ ನಷ್ಟವಮಾಡಬೇಕು.
ವಿರಕ್ತನಾದ ಬಳಿಕ ಹಮ್ಮು ಬಿಮ್ಮು ಗರ್ವ ಅಹಂಕಾರವ ಕಡೆಮೆಟ್ಟಬೇಕು.
ವಿರಕ್ತನಾದ ಬಳಿಕ ಅಂಗ ಮನ ಪ್ರಾಣೇಂದ್ರಿಯಂಗಳಲ್ಲಿ ಮುಸುಕಿದ
ಅಜ್ಞಾನ ಕತ್ತಲೆಯ ಕಳೆಯಬೇಕು.
ವಿರಕ್ತನಾದ ಬಳಿಕ ಸರ್ವಾವಸ್ಥೆಯಲ್ಲಿ ಲಿಂಗವನಪ್ಪಿರಬೇಕು.
ವಿರಕ್ತನಾದ ಬಳಿಕ ಸಂಕಲ್ಪ ವಿಕಲ್ಪವನಳಿದು
ಮನವು ಮಹಾಲಿಂಗದಲ್ಲಿ ನಿಕ್ಷೇಪವಾಗಿರಬೇಕು.
ವಿರಕ್ತನಾದ ಬಳಿಕ ಚಿಂತೆ ಭ್ರಾಂತುಗಳನಳಿದು
ಭಾವ ನಿರ್ಭಾವವಾಗಿ ಮಹಾಬಯಲ ನಿಜವಾಸಿಯಾಗಿರಬೇಕು.
ಇಷ್ಟುಳ್ಳಡೆ ಪರಮವಿರಕ್ತನೆಂಬೆನು,
ಪಾಶವಿರಹಿತನೆಂಬೆನು, ವೀರಮಾಹೇಶ್ವರನೆಂಬೆನು.
ಹೀಂಗಲ್ಲದೆ ಭ್ರಾಂತಿಬುದ್ಧಿಯಿಂದೆ
ಪರರೊಡವೆ ಪರಸ್ತ್ರೀ ಪರದಾರಗಮನಂಗಳಲ್ಲಿ ಹರಿದಾಡುವ
ಸಂತೆಯ ಸೂಳೆಯ ಮಕ್ಕಳ ವಿರಕ್ತರೆಂದರೆ
ನಗುವರಯ್ಯ ನಿಮ್ಮ ಶರಣರು ಅಖಂಡೇಶ್ವರಾ. ॥ ೩೨೯ ॥

೫೭೩

ನಡೆವ ಗತಿಯಲ್ಲಿ ಲಿಂಗದ ನಡೆಯ ತುಂಬಿ
ನಡೆಯಬಲ್ಲಡೆ ವಿರಕ್ತರೆಂಬೆನು.
ನುಡಿಯ ಕೊನೆಯಲ್ಲಿ ಲಿಂಗದ ನುಡಿಯ ತುಂಬಿ
ನುಡಿಯಬಲ್ಲಡೆ ವಿರಕ್ತರೆಂಬೆನು.
ಕಂಗಳ ಕೊನೆಯಲ್ಲಿ ಲಿಂಗದ ನೋಟವ ತುಂಬಿ
ನೋಡಬಲ್ಲಡೆ ವಿರಕ್ತರೆಂಬೆನು.
ಮನದ ಕೊನೆಯಲ್ಲಿ ಲಿಂಗದ ನೆನಹು ತುಂಬಿ

ನೆನೆಯಬಲ್ಲಡೆ ವಿರಕ್ತರೆಂಬೆನು.
ಭಾವದ ಕೊನೆಯಲ್ಲಿ ಲಿಂಗದ ಬೆಳಗ ತುಂಬಿ
ಸುಳಿಯಬಲ್ಲಡೆ ವಿರಕ್ತರೆಂಬೆನು.
ಇಂತೀ ಲಿಂಗಾಂಗಸಂಗಸಮರಸದ ಪರಮಸುಖವನರಿಯದೆ
ಅರುಹುಹೀನವಾಗಿ ಮರಹು ಮುಂದುಗೊಂಡು
ದುರಾಚಾರದಲ್ಲಿ ನಡೆವ ಭವಭಾರಿಗಳ ಮುಖವ
ನೋಡಲಾಗದಯ್ಯ ಅಖಂಡೇಶ್ವರಾ. || ೩೩೦ ||

೫೭೪

ಈಶನ ಮರೆಯಲ್ಲಿ ವೇಷವ ತೊಟ್ಟಾಡುವರೆಲ್ಲ
ಜಂಗಮವೇ ? ಅಲ್ಲಲ್ಲ.
ಅದೇನು ಕಾರಣವೆಂದೊಡೆ : ತಮ್ಮ ನಿಲವ ತಾವು ಕಾಣರು.
ಮುನ್ನ ಹೋದ ಪುರಾತನರ ಬಟ್ಟೆಯನರಿಯರು.
ಭಿನ್ನ ಪ್ರಪಂಚಿನಲ್ಲಿ ಮನ ಮಗ್ನವಾಗಿರ್ಪ ಭಿನ್ನ ಜೀವಿಗಳಂತಿರಲಿ.
ಇನ್ನು ನಿಜಜಂಗಮದ ನಿಲವೆಂತೆಂದೊಡೆ :
ತಥ್ಯಮಿಥ್ಯ ರಾಗದ್ವೇಷವನಳಿದು ಸ್ತುತಿ ನಿಂದೆ ಸಮವಾಗಿ,
ಇಹಪರದ ಗತಿಯ ಕಡಿಸಿ, ದ್ವೈತಾದ್ವೈತಂಗಳ ನೀಗಿ,
ಸತ್ಯಸದಾಚಾರವೆ ಅಂಗವಾಗಿ, ಭಕ್ತಿ ಜ್ಞಾನ ವೈರಾಗ್ಯವೆ ಭೂಷಣವಾಗಿ,
ಅಂಗ ಮನ ಪ್ರಾಣ ಸಕಲ ಕರಣೇಂದ್ರಿಯಂಗಳೆಲ್ಲ ಲಿಂಗದಲ್ಲಿ ನಿಕ್ಷೇಪವಾಗಿ,
ಸ್ಫಟಿಕದ ಘಟದಲ್ಲಿ ಜ್ಯೋತಿಯನಿರಿಸಿದಂತೆ,
ತನ್ನೊಳಹೊರಗೆ ಮಹಾಜ್ಞಾನವೇ ತುಂಬಿ ತೊಳಗಿ ಬೆಳಗುತ್ತ
ಒಡಲುಪಾಧಿಕೆಯನುರುಹಿ 'ಭಕ್ತಿ ಭಿಕ್ಷಾಂದೇಹಿ' ಎಂದು ಸುಳಿವ
ಪರಮ ಜಂಗಮದ ಸುಳುಹೆಲ್ಲ ಜಗತ್ಪಾವನ.
ಆತನ ನುಡಿಗಡಣವೆಲ್ಲ ಪರಮಬೋಧೆ.
ಆತನ ದರ್ಶನ ಸ್ಪರ್ಶನವೆಲ್ಲ ಮಹಾಪುಣ್ಯವು.
ಆತನು ಕೃಪೆಯಿಂದೆ ನೋಡಿದ ನೋಟವೆಲ್ಲ
ಸಕಲ ಪ್ರಾಣಿಗಳಿಗೆ ಸಾಲೋಕ್ಯಪದವು.
ಇಂತಪ್ಪ ಮಹಾಘನ ಪರಾತ್ಪರವಾದ ಪರಮಜಂಗಮದ
ಶ್ರೀಪಾದಕ್ಕೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. || ೩೩೧ ||

೫೭೫

ಆದಿಯಾಧಾರವಿಲ್ಲದ ಮುನ್ನ,
ನಾದ ಬಿಂದು ಕಳೆಗಳಿಲ್ಲದ ಮುನ್ನ,
ಭೇದಾಭೇದಂಗಳಿಂದೆ ತೋರುವ ಬ್ರಹ್ಮಾಂಡ
ಕೋಟಾನುಕೋಟಿಗಳಿಲ್ಲದ ಮುನ್ನ.

ಸರ್ವಶೂನ್ಯ ನಿರಾಕಾರವಾದ–ಪರವಸ್ತುವು ಸಾಕಾರವಿಡಿದು
ಸರ್ವಲೋಕಂಗಳ ಪಾವನವ ಮಾಡುವ ಪರಮ ಜಂಗಮದಲ್ಲಿ
ಹದಿನಾಲ್ಕು ಲೋಕಂಗಳಡಗಿರ್ಪವು ನೋಡಾ.
ಅದೆಂತೆಂದೊಡೆ :
ಪಾದತಳದಲ್ಲಿ ಅತಳಲೋಕ, ಪಾದೋರ್ಧ್ವದಲ್ಲಿ ವಿತಳಲೋಕ,
ಜಂಘೆಯಲ್ಲಿ ಸುತಳಲೋಕ, ಜಾನುವಿನಲ್ಲಿ ಮಹಾತಳಲೋಕ,
ಊರುವಿನಲ್ಲಿ ತಳಾತಳಲೋಕ, ಗುಹ್ಯೆಯಲ್ಲಿ ರಸಾತಳಲೋಕ,
ಕಟಿಯಲ್ಲಿ ಪಾತಾಳಲೋಕ, ನಾಭಿಯಲ್ಲಿ ಭೂಲೋಕ,
ಕುಕ್ಷಿಯಲ್ಲಿ ಭುವರ್ಲೋಕ, ಹೃದಯದಲ್ಲಿ ಸ್ವರ್ಗಲೋಕ,
ವಕ್ಷದಲ್ಲಿ ಮಹರ್ಲೋಕ, ಕಂಠದಲ್ಲಿ ಜನರ್ಲೋಕ,
ಲಲಾಟದಲ್ಲಿ ತಪರ್ಲೋಕ, ಮೂರ್ಧ್ನಿಯಲ್ಲಿ ಸತ್ಯಲೋಕ.
ಇಂತೀ ಈರೇಳುಲೋಕಂಗಳ ತನ್ನೊಳಗಿಂಬಿಟ್ಟುಕೊಂಡು
ವಿಶ್ವಪರಿಪೂರ್ಣವಾಗಿ ಭಕ್ತಿಹಿತಾರ್ಥವಾಗಿ
ಮರ್ತ್ಯಲೋಕದಲ್ಲಿ ಸುಳಿವ ಕರ್ತೃ ಜಂಗಮದ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. || ೩೩೨ ||

**೫೭೬**

ಜಂಗಮಲಿಂಗವೇ ನಮೋ ನಮೋ.
ಜಂಗಮವ ನಿರ್ಮಿಸಿದ
ಪರಮಜಂಗಮಲಿಂಗವೆ ನಮೋ ನಮೋ.
ಜಗದ ಪ್ರಪಂಚುವನು ಹೊದ್ದದ
ಪರಮಜಂಗಮಲಿಂಗವೆ ನಮೋ ನಮೋ.
ಜಗವ ಪಾವನಮಾಡುವ
ಪರಮಜಂಗಮಲಿಂಗವೆ ನಮೋ ನಮೋ.
ಜಗದಾರಾಧ್ಯನಾದ ಪರಮಜಂಗಮಲಿಂಗವೆ ನಮೋ ನಮೋ.
ಅಗಮ್ಯ ಅಗೋಚರ ಅಪ್ರಮಾಣನಾದ ಅಖಂಡೇಶ್ವರನೆಂಬ
ಅನಾದಿ ಪರಮಜಂಗಮಲಿಂಗವೇ ನಮೋ ನಮೋ. || ೩೩೩ ||

**೫೭೭**

ಎನ್ನ ಗರ್ವ ಅಹಂಕಾರವ ಕೆಡಿಸಯ್ಯ
ಎನ್ನ ಮನ ಪ್ರಾಣಂಗಳ ಸುತ್ತಿದ
ಆಶಾಪಾಶದ ತೊಡರ ಗಂಟ ಬಿಡಿಸಯ್ಯ.
ಎನ್ನ ಸತ್ಯ ಸದಾಚಾರದಲ್ಲಿ ನಡೆಸಯ್ಯ.
ಎನ್ನ ಪರಮಶಿವಾನುಭಾವವ ನುಡಿಸಯ್ಯ.

ಎನಗೆ ಭಕ್ತಿ ಜ್ಞಾನ ವೈರಾಗ್ಯವೆಂಬ ಭೂಷಣವ ತೊಡಿಸಿ
ನಿಮ್ಮ ಕರುಣದ ಕಂದನೆಂದು ಸಲುಹಯ್ಯ ಎನ್ನ ಅಖಂಡೇಶ್ವರಾ. || ೩೩೪ ||

೫೭೮

ಶಿವ ಶಿವಾ, ನೀ ನಡೆಸಿದಂತೆ ನಡೆವೆ.
ಶಿವ ಶಿವಾ, ನೀ ನುಡಿಸಿದಂತೆ ನುಡಿವೆ.
ನಿಮ್ಮ ಊಳಿಗವ ಮಾಡುವೆ.
ನೀವಿರಿಸಿದಲ್ಲಿ ಇರುವೆನಯ್ಯ ಅಖಂಡೇಶ್ವರಾ. || ೩೩೫ ||

೫೭೯

ಮಡುವಿನಗ್ಗಣಿ, ಗಿಡದ ಹೂವು, ಒಡಲಿಗೆ ಅನ್ನ,
ನುಡಿನುಡಿಗೆ ಮೃಡನ ಸ್ಮರಣೆ ಇರಲು,
ಜಡರ ಹಂಗೇಕೆ ಹೇಳಾ.
ಶಿವಧ್ಯಾನ ಶಿವಚಿಂತೆ ಭಿಕ್ಷಾಹಾರ
ಏಕಾಂತವಾಸಿಯ ಮಾಡಯ್ಯ ಎನ್ನ ಅಖಂಡೇಶ್ವರಾ. || ೩೩೬ ||

೫೮೦

ನಿತ್ಯಲಿಂಗಾರ್ಚನೆಯ ಮಾಡುತ್ತ ಸದ್‌ಭಕ್ತರನರಸುತ್ತ
ಭಕ್ತಿಭಿಕ್ಷವ ಬೇಡುವೆನೆಂದು ಬರುವಾಗ
ಗ್ರಾಮದ ಬಾಗಿಲಲ್ಲಿ ತಡೆವಂತೆ ಮಾಡಯ್ಯ ಎನ್ನ.
ಆರಾರು ತಡೆಯದಿರ್ದಡೆ ಆ ಗ್ರಾಮವ ಹೊಕ್ಕು
ಮನೆ ಮನೆ ತಿರಿವಂತೆ ಮಾಡಯ್ಯ ಎನ್ನ.
ಮನೆ ಮನೆ ತಿರಿದಡೆ ಎನ್ನ ಕಂಡು
ಸರ್ವರು ಅಡ್ಡಮೋರೆಯನಿಕ್ಕುವಂತೆ ಮಾಡಯ್ಯ ಎನ್ನ.
ಆ ಗ್ರಾಮವನುಳಿದು ಮತ್ತೊಂದು ಗ್ರಾಮವನರಸಿಕೊಂಡು
ಬರುವ ಬಟ್ಟೆಯಲ್ಲಿ ಜಳತಗುಲಿ ಕಳೆಕುಂದಿ ಮುಖಬಾಡಿ
ಒಡಲೊಳಗಣ ಕ್ಷುಧಾಗ್ನಿ ಥಾಳಿಸಿ ತನು ಸುಟ್ಟು ನಡೆವ ಗತಿಗೆಟ್ಟು,
ದ್ರವಗುಂದಿ ಧರೆಗೆ ಬೀಳುವಂತೆ ಮಾಡಯ್ಯ ಎನ್ನ.
ಆ ಸಮಯದಲ್ಲಿ ನಿಮ್ಮ ನೆನಹು ಮರೆದು
ಜಗದಭೋಗವ ಆಸೆ ಮಾಡಿದೆನಾದಡೆ
ಅಖಂಡೇಶ್ವರಾ, ನಿಮ್ಮ ಶ್ರೀಪಾದಕ್ಕೆ
ಮೂರಸ್ಥನ ಮಾಡಯ್ಯ, ಎನ್ನ ದೇವರದೇವ. || ೩೩೭ ||

೫೮೧

ಒಲ್ಲೆನಯ್ಯ ಜಗದ ಹಂಗಿನ ಭೋಗೋಪಭೋಗವನು.
ಅದೇನು ಕಾರಣವೆಂದೊಡೆ :

ಹಿಂದೆ ಅರಿಯದೆ ಮರೆದು
ಜಗದ ಭೋಗವನು ಆಸೆ ಮಾಡಿ,
ಮರ್ತ್ಯಲೋಕದಲ್ಲಿ ಹುಟ್ಟಿ ನೊಂದು ಬೆಂದು ಕಂಡಿ ಕುಂದಿದೆನಯ್ಯಾ.
ಇದು ಕಾರಣ ಇನ್ನು ಮುಂದೆ ಬಯಸಿದೆನಾದಡೆ
ಅಖಂಡೇಶ್ವರಾ, ನಿಮ್ಮಾಣೆ ನಿಮ್ಮ ಪ್ರಮಥರಾಣೆ. || ೩೩೮ ||

**೫೮೨**

ಹಾಡುವೆನಯ್ಯ ನಿಮ್ಮ,
ನೋಡುವೆನಯ್ಯ ನಿಮ್ಮ,
ಪೂಜೆಯ ಮಾಡುವೆನಯ್ಯ ನಿಮ್ಮ,
ಭಕ್ತಿಯ ಬೇಡುವೆನಯ್ಯ ನಿಮ್ಮ,
ಎರಡಳಿದು ಕೂಡುವೆನಯ್ಯ ನಿಮ್ಮ ಅಖಂಡೇಶ್ವರಾ || ೩೩೯ ||

**೫೮೩**

ನಿತ್ಯ ಲಿಂಗಾರ್ಚನೆಯ ಮಾಡುವೆ.
ಸತ್ಯ ಸದ್‌ಭಕ್ತರ ಮಠವನರಸಿಕೊಂಡು ಹೋಗಿ,
ಲಿಂಗ ಮುಂತಾಗಿ ಭಕ್ತಿಭಿಕ್ಷೆಯ ಬೇಡುವೆ.
ಅವರು ಇಕ್ಕಿದ ಪದಾರ್ಥವ ಚಿತ್ತಶುದ್ಧವಾಗಿ ಕೈಕೊಂಡು
ಎನ್ನೊಡೆಯ ಅಖಂಡೇಶ್ವರಲಿಂಗ ಸಹಿತವಾಗಿ ಭೋಗಿಸುವೆ. || ೩೪೦ ||

**೫೮೪**

ಅಂಜುವೆನಂಜುವೆನಯ್ಯ ಅಡಿಗಡಿಗೆ
ಗುರುವಿನಾಣೆ ಇಡಲಮ್ಮದೆ.
ಅಂಜುವೆನಂಜುವೆನಯ್ಯ ಅಡಿಗಡಿಗ
ಲಿಂಗದಾಣ ಇಡಲಮ್ಮದೆ.
ಅಂಜುವೆನಂಜುವೆನಯ್ಯ ಅಡಿಗಡಿಗ
ಜಂಗಮದಾಣೆ ಇಡಲಮ್ಮದೆ.
ಅಂಜುವೆನಂಜುವೆನಯ್ಯ ಅಡಿಗಡಿಗೆ
ನಿಮ್ಮ ಶರಣರಾಣೆ ಇಡಲಮ್ಮದೆ ಅಖಂಡೇಶ್ವರಾ. || ೩೪೧ ||

**೫೮೫**

ಜಗವೆಲ್ಲ ಮುನಿದಡಂಜೆ.
ಆದಿವ್ಯಾಧಿಗಳು ಬಂದು ತನುವನಂಡಲೆದಡಂಜೆ.
ರಾಜಭಯ, ಚೋರಭಯ, ಮೃಗಭಯ,
ಗ್ರಹಭಯಂಗಳು ಬಂದು
ನಾಲ್ದೆಸೆಯಲ್ಲಿ ಮುಸುಕಿದಡಂಜೆ.

ಮತ್ತೊಂದಕ್ಕಂಜಿ ಅಳುಕುವೆನಯ್ಯ,
ಪರರೊಡವೆ ಪರಸ್ತ್ರೀ ಪರಧನವ ಮುಟ್ಟಲಮ್ಮದೆ
ಅಖಂಡೇಶ್ವರಾ, ನೀ ಸಾಕ್ಷಿಯಾಗಿ. || ೩೪೨ ||

**೫೮೬**

ಮನದೊಡೆಯ ಮನವ ನೋಡುವೆನೆಂದು
ನಾಲ್ಕೆಸೆಯಲ್ಲಿ ಭಯವನೊಡ್ಡಿದಡೆ
ಹೆದರದಿರು ಮನವೆ, ಹೆದರಿ ಹಿಮ್ಮೆಟ್ಟದಿರು ಮನವೆ.
ಕಳವಳಗೊಳ್ಳದೆ ಸಂಚಲವಳಿದು ಅತಿ ಕಲಿವಂತನಾದೆಯಾದಡೆ
ಅಘಹರ ಅಖಂಡೇಶ್ವರ ನಗುತ ಬಂದೆತ್ತಿಕೊಂಡು ಮುದ್ದಾಡಿ
ತನ್ನೊಳಗಿಟ್ಟುಕೊಂಬನು ಕೇಳಾ ಎಲೆ ಮನವೆ. || ೩೪೩ ||

**೫೮೭**

ವೀರಶೈವ ಭಕ್ತಮಾಹೇಶ್ವರರು
ಅಂಗಲಿಂಗದೊಳೊಡಗೂಡುವನ್ನಬರ,
ಶೀಲ ವ್ರತ ನೇಮಂಗಳ ಸೀಮೆಯ ಕಟ್ಟಿ
ನಡೆಯಬೇಕೆಂದು ನುಡಿಯುತಿರ್ಪರು.
ಎನಗೆ ಶೀಲ ವ್ರತ ನೇಮಂಗಳು ಆವಾವವೆಂದಡೆ :
ಪರಧನ ಪರಸ್ತ್ರೀಯರ ಮುಟ್ಟೆನೆಂಬುದೆ ಎನ್ನ ಶೀಲ.
ಒಡಲುಪಾಧಿಕೆಯವಿಡಿದು
ಅನ್ಯರ ಅನ್ನ ವಸ್ತ್ರಂಗಳ ಬಾಯ್ದೆರೆದು ಬೇಡೆನೆಂಬುದೆ ಎನ್ನ ವ್ರತ.
ಸಕಲ ಪದಾರ್ಥಂಗಳ ಲಿಂಗಕ್ಕೆ ಕೊಡದೆ
ಎನ್ನ ಅಂಗದಿಚ್ಛೆಗೆ ಕೊಳ್ಳೆನೆಂಬುದೆ ಎನ್ನ ನೇಮ.
ಇಂತೀ ಶೀಲ ವ್ರತನೇಮಂಗಳಳವಡಿಸಿಕೊಂಡು,
ಎನ್ನೊಡೆಯ ಅಖಂಡೇಶ್ವರಲಿಂಗವನೊಡಗೂಡಿ
ಮರಳಿಬಾರೆನೆಂಬುದೆ ಎನ್ನ ಅರುಹಿನ ಗೊತ್ತು || ೩೪೪ ||

**೫೮೮**

ಗಂಡಸತ್ತನೆಂದು ಗಂಡನೊಡನೆ ಕೆಂಡವ ಬೀಳುವೆನೆಂದು
ಪುಂಡವೀರಮಾಸ್ತಿತಾನು ದಂಡೆಯ ಕಟ್ಟಿಕೊಂಡು
ಖಂಡೆಯವ ಪಿಡಿದು ತಂಡತಂಡದ ಜನರ ಮುಂದೆ
ಮೆರೆದುಕೊಂಡು ಬಂದು,
ಕಿಚ್ಚಿನ ಹೊಂಡವ ಕಂಡು ಹೆದರಿ ಹಿಮ್ಮೆಟ್ಟಿದಡೆ,
ಅವಳಿಗದೇ ಭಂಗವಲ್ಲದೆ ಶೃಂಗಾರಮೆರೆವುದೇ ಅಯ್ಯ ?
ಪತಿ ಲಿಂಗ, ಸತಿ ಶರಣ.

ತನ್ನ ಪತಿವ್ರತಾ ಭಾಷೆಯ ನುಡಿದು ನಡೆಯಲ್ಲಿ ತಪ್ಪಿದಡೆ,
ಅವನ ಭಂಗಕ್ಕೆ ತುದಿ ಮೊದಲಿಲ್ಲ ನೋಡಾ ಅಖಂಡೇಶ್ವರಾ. ॥ ೩೪೫ ॥

೫೮೯

ನಡೆಯೊಳಗೆ ನುಡಿತುಂಬಿ,
ನುಡಿಯೊಳಗೆ ನಡೆತುಂಬಿ,
ನಡೆನುಡಿ ಎರಡು ಪರಿಣಾಮದಲ್ಲಿ ತುಂಬಿ,
ಲಿಂಗವ ಕೂಡಬಲ್ಲಾತನೇ ಶರಣ ನೋಡಾ ಅಖಂಡೇಶ್ವರಾ. ॥ ೩೪೬ ॥

೫೯೦

ನಡೆದು ತಪ್ಪುವರಲ್ಲ ಶರಣರು.
ನುಡಿದು ಹುಸಿವರಲ್ಲ ಶರಣರು.
ಒಡಲುಪಾಧಿಯ ಹೊದ್ದುವರಲ್ಲ ಶರಣರು.
ಅಖಂಡೇಶ್ವರಾ, ನಿಮ್ಮ ಶರಣರ ಪರಿಯ
ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ ? ॥ ೩೪೭ ॥

೫೯೧

ನುಡಿದಂತೆ ನಡೆ ಇಲ್ಲವಯ್ಯ ಎನ್ನಲ್ಲಿ.
ನಡೆದಂತೆ ನುಡಿ ಇಲ್ಲವಯ್ಯ ಎನ್ನಲ್ಲಿ.
ನುಡಿಹೀನ ಕಡುಪಾಪಿಯಯ್ಯ ನಾನು.
ಮನಹೀನ ಮಹಾಪರಾಧಿಯಯ್ಯ ನಾನು.
ಎನ್ನೊಳಗೆ ಸುಗುಣವನರಸಿದಡೇನೂ ಹುರುಳಿಲ್ಲವಯ್ಯ
ನೀವೇ ಕರುಣಿಸಿ ಪಾಲಿಪುದಯ್ಯ ಎನ್ನ,
ಅಖಂಡೇಶ್ವರಾ, ನಿಮ್ಮಧರ್ಮ, ನಿಮ್ಮಧರ್ಮ. ॥ ೩೪೮ ॥

೫೯೨

ಎನ್ನ ಮಾನಾಪಮಾನವೆಲ್ಲ ನಿಮ್ಮದಯ್ಯ.
ಎನ್ನ ಹಾನಿವೃದ್ಧಿಗಳೆಲ್ಲ ನಿಮ್ಮವಯ್ಯ.
ಅಖಂಡೇಶ್ವರಾ, ನೀವು ಭಕ್ತದೇಹಿಕ ದೇವರಾದಿರಾಗಿ
ಎನ್ನ ಸರ್ವಸುಖ ಪರಿಣಾಮವೆಲ್ಲ ನಿಮ್ಮವೆಂದರಿದೆನಯ್ಯ. ॥ ೩೪೯ ॥

೫೯೩

ಶಿವಶಿವಾ ಮಹಾಪ್ರಸಾದ
ಎನ್ನ ಮನವು ನಿಮ್ಮಲ್ಲಿ ಒಂದ ಬಯಸಿ
ಬಡವಾಗುತಿರ್ಪುದು ಅವಧರಿಸಯ್ಯ ದೇವ.
ಶಿವನಡೆ ಶಿವನುಡಿ ಶಿವನೋಟ ಶಿವಭಾವ

ಶಿವಾಚಾರ ಶಿವಭಕ್ತಿ ಶಿವಜ್ಞಾನ ಶಿವಾನುಭಾವ
ಶಿವಶರಣರಸಂಗ ಇವನೆ ಕರುಣಿಸಿ
ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೩೫೦ ॥

೫೯೪

ಹರಹರಾ ಎಂದು ಹರನೊಳಗೈಕ್ಯರಾದ
ಶರಣರ ತೋರಿಸಯ್ಯ.
ಶಿವಶಿವಾ ಎಂದು ಶಿವನ ಅಚ್ಚೊತ್ತಿಗೊಂಡ
ಶರಣರ ತೋರಿಸಯ್ಯ.
ಶ್ರೀಗಿರಿ ಕೈಲಾಸವ ಸೂರೆಗೊಂಡ
ಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೩೫೧ ॥

೫೯೫

ಅಂತರಂಗದಲ್ಲಿ ಅಖಂಡ ಪರಿಪೂರ್ಣ
ಜ್ಞಾನದ ನಿಲವನರಿದು,
ಬಹಿರಂಗದಲ್ಲಿ ಸತ್ಯ ಸದಾಚಾರವನಳವಡಿಸಿಕೊಂಡು,
ಹಿಂದು ಮುಂದಣ ಶಂಕೆಯ ಹರಿದು,
ಆನಂದವೇ ಒಡಲಾಗಿ ಅಭೇದ್ಯಲಿಂಗದ ಬೆಳಗಿನಲ್ಲಿ ಸುಳಿವ
ಅಪ್ರಮಾಣ ಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ. ॥ ೩೫೨॥

೫೯೬

ಸೃಷ್ಟಿ, ಸ್ಥಿತಿ ಪ್ರಳಯಂಗಳ ನೇಮವ ಮೀರಿ,
ಕಾಯ ಜೀವದ ಕಷ್ಟಗುಣಂಗಳು ನಷ್ಟವಾಗಿ,
ಇಷ್ಟಲಿಂಗದಲ್ಲಿ ನೆಟ್ಟನೆ ಮನವಡಗಿ
ತೊಟ್ಟುಬಿಟ್ಟ ಹಣ್ಣಿನಂತೆ ಸುಳಿವ
ಶ್ರೇಷ್ಠ ಶರಣರ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೩೫೩ ॥

೫೯೭

ಎಲೆ ಶಿವನೆ, ನೀವು ಭಕ್ತದೇಹಿಕದೇವನೆಂಬುದು
ಎನಗೆ ನಿಶ್ಚಲವಾಗಿ ಕಾಣಬಂದಿತ್ತು.
ಅದೇನು ಕಾರಣವೆಂದೊಡೆ :
ಎನ್ನ ತನುವೆ ನಿಮ್ಮ ತನುವಾಯಿತ್ತಾಗಿ.
ಈ ತನುವಿಡಿದು ಗುರುವ ಕಂಡೆ.
ಈ ತನುವಿಡಿದು ಲಿಂಗವ ಕಂಡೆ.
ಈ ತನುವಿಡಿದು ಜಂಗಮವ ಕಂಡೆ.

ಈ ತನುವಿಡಿದು ಪಾದತೀರ್ಥ ಪ್ರಸಾದವ ಕಂಡೆ.
ಈ ತನುವಿಡಿದು ವಿಭೂತಿ ರುದ್ರಾಕ್ಷಿಯ ಕಂಡೆ.
ಈ ತನುವಿಡಿದು ಮಂತ್ರದ ಮೂಲವ ಕಂಡೆ.
ಈ ತನುವಿಡಿದು ನಿಮ್ಮ ಶರಣರ ಮಹಾನುಭಾವವ ಕಂಡೆ.
ಈ ತನುವಿಡಿದು ನೀವೇ ನಾನಾದ ಪರಿಯ ಕಂಡು
ಬೆರಗಾದೆನಯ್ಯ ಅಖಂಡೇಶ್ವರಾ. || ೩೫೪ ||

೫೯೮

ಹತ್ತು ದಿಕ್ಕಿನ ಒಳಹೊರಗೆ ಸುತ್ತಿ ಸುಳಿದಾಡುವ
ಎನ್ನ ಮನವು ನಿಲುವುದಕ್ಕೆ ನೀವೇ ಗೊತ್ತಲ್ಲದೆ
ಬೇರೆ ಮತ್ತೆ ಸ್ಥಾನ ಉಂಟೆ ಅಯ್ಯ ?
ಗಾಳಿ ಗಂಧವನಪ್ಪಿದಂತೆ,
ನಿಮ್ಮ ಮುಟ್ಟಿದ ಚಿತ್ತ ಎತ್ತೆತ್ತ ಹರಿದಾಡಿದಡೇನು
ಅತ್ತತ್ತ ನೀವೇ ಅಲ್ಲದೆ ಬೇರೆ ಮತ್ತೆ ಅನ್ಯವಿಲ್ಲವಯ್ಯ ಅಖಂಡೇಶ್ವರಾ. ||೩೫೫||

೫೯೯

ಮನವು–ಘನವ ನುಂಗಿ, ಘನವು ಮನವ ನುಂಗಿ,
ಮನಘನವೆರಡನು ಪರಬ್ರಹ್ಮವು ನುಂಗಿದ ಬಳಿಕ,
ನಾನೆಂಬುವದೆಲ್ಲಿಯದಯ್ಯ ಅಖಂಡೇಶ್ವರಾ ! || ೩೫೬ ||

೬೦೦

ಮಾಡಿದ ಮಾಟವ ಮರೆದೆನಯ್ಯ ನಿಮ್ಮೊಳಗೆ.
ನೋಡಿದ ನೋಟವ ಮರೆದೆನಯ್ಯ ನಿಮ್ಮೊಳಗೆ.
ಕೂಡಿದ ಕೂಟವ ಮರೆದೆನಯ್ಯ ನಿಮ್ಮೊಳಗೆ.
ಕರ್ಪುರದಗಿರಿಯ ಉರಿ ಉಂಡಂತಾದೆನಯ್ಯ
ನಿಮ್ಮೊಳಗೆ, ಅಖಂಡೇಶ್ವರಾ. || ೩೫೭ ||

೬೦೧

ಆಳವಿಲ್ಲದ ನಿರಾಳನಾಟವನೇನೆಂಬೆ,
ಸೀಮೆಯಿಲ್ಲದ ನಿಸ್ಸೀಮನ ಸಂಗವನೇನೆಂಬೆ,
ಖಂಡಿತವಿಲ್ಲದ ಅಖಂಡೇಶ್ವರನ ಕೂಟವನೇನೆಂಬೆನಯ್ಯ ? || ೩೫೮ ||

## ಪ್ರಸಾದಿಸ್ಥಲ

೬೦೨

ಲಿಂಗಕ್ಕೆ ಸಮರ್ಪಿಸಿದ ಸಕಲದ್ರವ್ಯಂಗಳನು
ಲಿಂಗ ಸಹಿತವಾಗಿ ಭೋಗಿಸಬೇಕು.

ಅನರ್ಪಿತವ ಮುಟ್ಟದಿರಬೇಕು.
ಲಿಂಗದಲ್ಲಿ ಅತಿ ಸಾವಧಾನಭಕ್ತಿ ನೆಲೆಗೊಂಡಿರಬೇಕು.
ಅದೆಂತೆಂದೊಡೆ :
"ಲಿಂಗಾರ್ಪಿತಪ್ರಸಾದಸ್ಯ ಸುಭೋಗೀ ಲಿಂಗಸಹಿತಃ ।
ಅನರ್ಪಿತಪರಿತ್ಯಾಗೀ ಪ್ರಸಾದಿಸ್ಥಲಮುತ್ತಮಮ್ ॥"
ಎಂದುದಾಗಿ,
ಇಂತಪ್ಪ ಪರಮಪ್ರಸಾದಿಗಳ ಶ್ರೀಚರಣಕ್ಕೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. ॥ ೩೫೯ ॥

೬೦೩

ಶಿವಶಿವಾ ಮಹಾಪ್ರಸಾದದ ಮಹಿಮೆಯನೇನೆಂಬೆನಯ್ಯ ?
ಕಿನ್ನರ ಕಿಂಪುರುಷರಿಗಗಣಿತವಾಗಿರ್ಪುದು ನೋಡಾ !
ಹರಿಸುರಬ್ರಹ್ಮಾದಿಗಳಿಗೆ ಅಗೋಚರವಾಗಿರ್ಪುದು ನೋಡಾ !
ಸಿದ್ಧಸಾಧಕರಿಗೆ ಅಸಾಧ್ಯವಾಗಿರ್ಪುದು ನೋಡಾ !
ದೇವ ದಾನವ ಮಾನವರಿಗೆ ಅಭೇದ್ಯವಾಗಿರ್ಪುದು ನೋಡಾ !
ಅದೆಂತೆಂದೊಡೆ : ಶಿವರಹಸ್ಯೇ–
"ಪ್ರಸಾದಂ ಗಿರಿಜಾದೇವಿ ಸಿದ್ಧಕಿನ್ನರಗುಹ್ಯಕ ।
ವಿಷ್ಣುಪ್ರಮುಖದೇವಾನಾಮಗ್ರಗಣ್ಯಮಗೋಚರಮ್ ॥"
ಎಂದುದಾಗಿ,
ಇಂತಪ್ಪ ಪರಮಪ್ರಸಾದವೆ ನೀವೆಯಯ್ಯ ಅಖಂಡೇಶ್ವರಾ. ॥ ೩೬೦ ॥

೬೦೪

ನಂಬಿರೊ ನಂಬಿರೊ ಶಿವನ ಪಾದತೀರ್ಥದ
ಮಹಿಮೆಯ ತಿಳಿದು.
ನಂಬಿರೊ ನಂಬಿರೊ ಶಿವನ ಪ್ರಸಾದದ ಘನವ ತಿಳಿದು.
ಮುನ್ನ ಜಂಗಮದ ಪಾದಜಲ ಸೋಂಕಿದ ಸರ್ಪನು ಹೋಗಿ
ಕಳ್ಳನ ಕಾಲ ಕಚ್ಚಲು, ಆ ಕಳ್ಳಂಗೆ ಕೈವಲ್ಯಪದವಾಯಿತ್ತು ನೋಡಾ !
ಜಂಗಮಪ್ರಸಾದ ಸೋಂಕಿದ ಮೀನ ಹಿಡಿದುಕೊಂಡು ಹೋಗಿ
ಜಾಲಗಾರ ಭಕ್ಷಿಸಲು, ಆ ಜಾಲಗಾರಂಗೆ
ಶಿವಸಾಲೋಕ್ಯಪದವಾಯಿತ್ತು ನೋಡಾ !
ಅದೆಂತೆಂದೊಡೆ : ವಾತುಲಾಗಮೇ–
"ಮಹೇಶ್ವರಪದೋಚ್ಛಿಷ್ಟಂ ಜಲಬಿಂದುಸಮನ್ವಿತಮ್ ।
ಮಾರುತಂ ಭುಂಜತೇ ಸರ್ಪಸ್ತ್ಯೋರೋ ದಷ್ಟಸ್ತು ಮುಕ್ತವಾನ್ ॥
ಜಂಗಮಸ್ಯ ಪ್ರಸಾದೇನ ಮತ್ಸ್ಯಭಕ್ಷಸ್ತು ಧೀವರಃ ।
ಅಮೋ ಯಾತಿ ಚ ಕೈವಲ್ಯಂ ಪುನರ್ಜನ್ಮ ನ ವಿದ್ಯತೇ ॥"

ಎಂದುದಾಗಿ,
ಇಂತಪ್ಪ ಪಾದತೀರ್ಥ ಪ್ರಸಾದವನು ನಂಬಿ ಕೊಂಡರೆ
ಶಂಭುವಿನ ಕೈಲಾಸ ಕರತಳಾಮಳಕ ನೋಡಾ ಅಖಂಡೇಶ್ವರಾ. ‖ ೩೬೧ ‖

೬೦೫

ಸಪ್ತಸಾಗರದಷ್ಟು ಪಾದೋದಕವ
ವಿಶ್ವಾಸವಿಲ್ಲದೆ ಕೊಳ್ಳಲೇತಕೊ ?
ವಿಶ್ವಾಸದಿಂದೆ ತೃಣದ ತುದಿಯ ಉದಕದಷ್ಟು ಕೊಂಡಡೆ ಸಾಲದೆ ?
ಸಪ್ತಪರ್ವತದಷ್ಟು ಪ್ರಸಾದವ
ಆತ್ಮವಿಶ್ವಾಸವಿಲ್ಲದೆ ಕೊಳ್ಳಲೇತಕೊ ?
ವಿಶ್ವಾಸದಿಂದೆ ಎಳ್ಳಿನ ಹದಿನಾರು ಭಾಗದೊಳಗೊಂದು
ಭಾಗವ ಕೊಂಡಡೆ ಸಾಲದ ?
ಅದೆಂತೆಂದೊಡೆ :
''ತಿಲಷೋಡಶಭಾಗಸ್ಯ ತೃಣಾಗ್ರಾಂಬುಕಣೋಪಮಂ ।
ಪಾದೋದಕಪ್ರಸಾದಸ್ಯ ಸೇವನಾತ್ ಮೋಕ್ಷಮಾಪ್ನುಯಾತ್ ॥''
ಎಂದುದಾಗಿ,
ವಿಶ್ವಾಸದಿಂದೆ ಕೊಂಡಡೆ ಈಶ್ವರ ತಾನೇ ನೋಡಾ ಅಖಂಡೇಶ್ವರಾ. ‖೩೬೨‖

೬೦೬

ಶಿವಪಾದೋದಕವ ನಂಬಿ ಕೊಂಡಡೆ
ಮಲ ಮಾಯಾ ಕರ್ಮಂಗಳೆಲ್ಲ ಕಡೆಗಾಗಿರ್ಪುವು ನೋಡಾ !
ಶಿವಪಾದೋದಕವ ನಂಬಿಕೊಂಡಡೆ
ಆಧಿವ್ಯಾಧಿ ವಿಪತ್ತು ರೋಗರುಜೆ
ಜನನ ಮರಣಂಗಳು ದೂರವಾಗಿರ್ಪುವು ನೋಡಾ !
ಶಿವಪಾದೋದಕವ ನಂಬಿ ಕೊಂಡಡೆ
ಅನಂತಕೋಟಿ ಪಾಪಂಗಳು ಪಲ್ಲಟವಾಗಿರ್ಪುವು ನೋಡಾ !
ಶಿವಪಾದೋದಕವ ನಂಬಿ ಕೊಂಡಡೆ
ಭಕ್ತಿ ಜ್ಞಾನ ವೈರಾಗ್ಯ ಮುಕ್ತಿಪದವು ದೊರೆಕೊಂಬುದು ನೋಡಾ !
ಅದೆಂತೆಂದೊಡೆ : ವಾತುಲಾಗಮೇ –
''ಅವಿದ್ಯಾ ಮೂಲಹರಣಂ ಜನ್ಮಕರ್ಮನಿವಾರಣಮ್ ।
ಜ್ಞಾನವೈರಾಗ್ಯಫಲದಂ ಗುರುಪಾದೋದಕಂ ಶುಭಮ್ ॥
ಅಕಾಲಮೃತ್ಯುಮಥನಂ ಸರ್ವವ್ಯಾಧಿವಿನಾಶನಂ ।
ಸರ್ವಪಾಪೋಪಶಮನಂ ಶಂಭೋಃ ಪಾದೋದಕಂ ಶುಭಂ ॥''
ಎಂದುದಾಗಿ,
ಇಂತಪ್ಪ ಶಿವಪಾದೋದಕವನು ನಂಬಿ ಅಂತರಂಗದಲ್ಲಿ ನಿಶ್ಚೈಸಿದ ನರನು
ಹರನಪ್ಪುದು ತಪ್ಪದು ನೋಡಾ ಅಖಂಡೇಶ್ವರಾ. ‖ ೩೬೩ ‖

೬೦೭

ಫಲಪದ ಮುಕ್ತಿಯ ಬಯಸಿ ಯುಕ್ತಿಗೆಟ್ಟು
ಸಕಲ ತೀರ್ಥಕ್ಷೇತ್ರಂಗಳಿಗೆ ಎಡೆವಾಡಿ
ತೊಟ್ಟನೆ ತೊಳಲಿ ಬಳಲಿ ಬೆಂಡಾಗಲೇತಕೋ ?
ಆ ಸಕಲ ತೀರ್ಥಕ್ಷೇತ್ರಂಗಳಲ್ಲಿ ಒದಗುವ ಮುಕ್ತಿಫಲಪದಂಗಳು
ಒಬ್ಬ ಪರಮ ಜಂಗಮದ ತೀರ್ಥಪ್ರಸಾದವಕೊಂಡ
ನಿಮಿಷಮಾತ್ರದಲ್ಲಿ ದೊರೆಕೊಂಬುದು ಹುಸಿಯಲ್ಲ ನೋಡಾ !
ಅದೆಂತೆಂದೊಡೆ :
''ಪಾದತೀರ್ಥೇ ಸರ್ವತೀರ್ಥಾನಿ ಪ್ರಸಾದೇ ಕೋಟಿಲಿಂಗಕಂ ।
ನಿತ್ಯಂ ಸೇವಿತಭಕ್ತಾನಾಂ ಮಮ ರೂಪಂ ತು ಪಾರ್ವತಿ ॥''
ಎಂದುದಾಗಿ,
ಇಂತಪ್ಪ ಪಾದತೀರ್ಥಪ್ರಸಾದವನು
ಸದಾ ಸನ್ನಿಹಿತನಾಗಿ ಕೊಂಬ ಸದ್‌ಭಕ್ತನು
ಸಾಕ್ಷಾತ್ ಪರಶಿವಬ್ರಹ್ಮ ತಾನ ನೋಡಾ ಅಖಂಡೇಶ್ವರಾ ॥ ೩೬೪ ॥

೬೦೮

ತ್ರಿಕರಣಂಗಳು ಶುದ್ಧನಾಗಿ
ತ್ರಿವಿಧ ಪದಾರ್ಥವನು ತ್ರಿವಿಧಲಿಂಗಕ್ಕೆ ಸಮರ್ಪಿಸಿ
ತ್ರಿವಿಧ ಪ್ರಸಾದಗ್ರಾಹಕನಾಗಿರ್ಪಾತನೆ
ತ್ರಿಜಗದೊಡೆಯನಯ್ಯಾ ಅಖಂಡೇಶ್ವರಾ. ॥ ೩೬೫ ॥

೬೦೯

ಗುರುಪ್ರಸಾದಿಯಾದಡೆ,
ಗುರುಭಕ್ತಿಯಿಂದೆ ಗುರುವಿಂಗೆ ತನುವ ಸಮರ್ಪಿಸಬೇಕು.
ಲಿಂಗಪ್ರಸಾದಿಯಾದಡೆ,
ಲಿಂಗಭಕ್ತಿಯಿಂದೆ ಲಿಂಗಕ್ಕೆ ಮನವ ಸಮರ್ಪಿಸಬೇಕು.
ಜಂಗಮಪ್ರಸಾದಿಯಾದಡೆ,
ಜಂಗಮಭಕ್ತಿಯಿಂದೆ ಜಂಗಮಕ್ಕೆ ಧನವ ಸಮರ್ಪಿಸಬೇಕು.
ಇಂತೀ ತ್ರಿವಿಧ ಭಕ್ತಿಯಿಲ್ಲದೆ
ಕಂಡವರ ಕಂಡು ಕೈವೊಡ್ಡಿ ಇಕ್ಕಿಸಿಕೊಂಡು ಅವಿಶ್ವಾಸದಿಂದೆ ಕೊಂಡಡೆ
ಅದು ಕೆಂಡದಂತಿರ್ಪುದಯ್ಯಾ ಅಖಂಡೇಶ್ವರಾ. ॥ ೩೬೬ ॥

೬೧೦

ಗುರುಪ್ರಸಾದಿಯಾದಡೆ,
ಗುರುವೇ ಹರನಿಂದಧಿಕವೆಂಬ

ಗುರುವಾಕ್ಯವ ಮೀರದಿರಬೇಕು.
ಲಿಂಗಪ್ರಸಾದಿಯಾದಡೆ,
ತನ್ನಂಗದಮೇಲಿರ್ಪ ಲಿಂಗವಲ್ಲದ
ಅನ್ಯದೈವಂಗಳಿಗೆರಗದಿರಬೇಕು.
ಜಂಗಮಪ್ರಸಾದಿಯಾದಡೆ,
ತಾನು ತನ್ನದೆಂಬ ಅಹಂ ಮಮತೆ ಕೆಟ್ಟು
ತಾನು ತಾನಾಗಬೇಕು.
ಇಂತೀ ತ್ರಿವಿಧಪ್ರಸಾದವನು ಕೊಂಬ
ನಡೆವಳಿಯನರಿಯದೆ
ಪಂಕ್ತಿಯಲ್ಲಿ ಕುಳಿತು ಕಂಡಕಂಡವರ ಕಂಡು
ಒತ್ತಿಗೆ ಕೈಯೊಡ್ಡಿ ಇಕ್ಕಿಸಿಕೊಂಡು
ಅಂತರಂಗದಲ್ಲಿ ವಿಶ್ವಾಸವಿಲ್ಲದೆ
ಮನಸ್ಸಿಗೆಬಂದಂತೆ ಮುಗಿವ ಸಂತೆ ಸೂಳೆಯಮಕ್ಕಳಿಗೆ
ಶಿವಪ್ರಸಾದದ ಒಲುಮೆ ಇನ್ನೆಲ್ಲಿಯದಯ್ಯಾ ಅಖಂಡೇಶ್ವರಾ ? ॥ ३೬೭ ॥

೬೧೧

ಗುರುಪ್ರಸಾದವ ಕೊಂಬ ನೇಮವಿರ್ದ ಬಳಿಕ,
ಗುರುನಿಂದೆಯ ಕೇಳಲಾಗದು.
ಲಿಂಗಪ್ರಸಾದವ ಕೊಂಬ ನೇಮವಿರ್ದ ಬಳಿಕ,
ಲಿಂಗನಿಂದೆಯ ಕೇಳಲಾಗದು.
ಜಂಗಮಪ್ರಸಾದವ ಕೊಂಬ ನೇಮವಿರ್ದ ಬಳಿಕ,
ಜಂಗಮನಿಂದೆಯ ಕೇಳಲಾಗದು.
ಇಂತೀ ನೇಮವುಳ್ಳ ಸದ್‌ಭಕ್ತನು
ಅನ್ಯರಿಂದೆ ಬಂದ ಕುಂದು ನಿಂದ್ಯವ ಕೇಳಿ ಸುಮ್ಮನಿರ್ದಡೆ
ತಾನು ಹಿಂದೆ ಕೊಂಡ ಪ್ರಸಾದವೆಲ್ಲ
ಕಾಳಕೂಟವಿಷವ ಕೊಂಡಂತಾಯಿತ್ತು ಕಾಣಾ ಅಖಂಡೇಶ್ವರಾ. ॥ ३೬೮ ॥

೬೧೨

ನೇಮವಿರಬೇಕು ಗುರುಪ್ರಸಾದವಲ್ಲದೆ
ಅನ್ಯವ ಮುಟ್ಟೆನೆಂಬ.
ನೇಮವಿರಬೇಕು ಲಿಂಗಪ್ರಸಾದವಲ್ಲದೆ ಅನ್ಯವ ಮುಟ್ಟೆನೆಂಬ,
ನೇಮವಿರಬೇಕು ಜಂಗಮಪ್ರಸಾದವಲ್ಲದೆ ಅನ್ಯವಮುಟ್ಟೆನೆಂಬ,
ಇಂತೀ ನೇಮವುಳ್ಳ ಭಕ್ತಂಗೆ
ಗುರುವುಂಟು, ಲಿಂಗವುಂಟು, ಜಂಗಮವುಂಟು,
ಪಾದೋದಕಪ್ರಸಾದವುಂಟು, ಭಕ್ತಿಯುಂಟು, ಮುಕ್ತಿಯುಂಟು.

ಇಂತೀ ನೇಮದ ಕಟ್ಟಳೆಯಿಲ್ಲದೆ ಬಾಯಿಗೆ ಬಂದಂತೆ ಪರಿಣಾಮಿಸುವಾತಂಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕಪ್ರಸಾದವಿಲ್ಲ,
ಭಕ್ತಿಯಿಲ್ಲ, ಮುಕ್ತಿಯು ಮುನ್ನವೇ ಇಲ್ಲ ನೋಡಾ ಅಖಂಡೇಶ್ವರಾ. ॥ ೩೬೯ ॥

೬೧೩

ಕಾಯದ ಕೈಮುಟ್ಟಿ ಇಷ್ಟಲಿಂಗಕ್ಕೆ ರೂಪವನರ್ಪಿಸಿದಲ್ಲಿ
ಶುದ್ಧಪ್ರಸಾದವೆನಿಸಿತ್ತು.
ಮನದ ಕೈಮುಟ್ಟಿ ಪ್ರಾಣಲಿಂಗಕ್ಕೆ ರುಚಿಯನರ್ಪಿಸಿದಲ್ಲಿ
ಸಿದ್ಧಪ್ರಸಾದವೆನಿಸಿತ್ತು.
ಭಾವದ ಕೈಮುಟ್ಟಿ ಭಾವಲಿಂಗಕ್ಕೆ ತೃಪ್ತಿಯನರ್ಪಿಸಿದಲ್ಲಿ
ಪ್ರಸಿದ್ಧಪ್ರಸಾದವೆನಿಸಿತ್ತು.
ಇಂತೀ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗ್ರಾಹಕರ ತೋರಿ,
ಬದುಕಿಸಯ್ಯಾ ಎನ್ನ ಅಖಂಡೇಶ್ವರಾ. ॥ ೩೭೦ ॥

೬೧೪

ಒಂದು ವೇಳೆ ಲಿಂಗಕ್ಕೆ ಕೊಟ್ಟು
ಮತ್ತೊಂದು ವೇಳೆ ಲಿಂಗವ ಬಿಗಿಬಿಗಿದು ಕಟ್ಟಿಕೊಂಡು,
ಬಂದ ಬಂದ ಪದಾರ್ಥವ ತನ್ನೊಡಲಿಚ್ಛೆಗೆ ಕೊಂಡಡೆ,
ಅಮೇಧ್ಯವನು ಕಿಲ್ಬಿಷವನು ಕೂಡಿಸಿ ತಿಂದಂತಾಯಿತ್ತು.
ಒಂದುವೇಳೆ ಪ್ರಸಾದವೆಂದು ಕೊಂಡು
ಮತ್ತೊಂದುವೇಳೆ ಎಂಜಲೆಂದು ಚೆಲ್ಲಿದಡೆ ಪ್ರಸಾದದ್ರೋಹಿ.
ಅದೆಂತೆಂದೊಡೆ :
"ಅಂಗಭೋಗಮನರ್ಪಿತಂ ಲಿಂಗಭೋಗಃ ಪ್ರಸಾದಂ।"
ಎಂದು ಗುರುವಚನ.
ಇಂತಪ್ಪ ಪಂಚಮಹಾಪಾತಕರುಭಯಭ್ರಷ್ಟರ
ಎನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ. ॥ ೩೭೧ ॥

೬೧೫

ಗುರುಪ್ರಸಾದವನರಿಯದವಂಗೆ ಲಿಂಗಪ್ರಸಾದವಿಲ್ಲ.
ಲಿಂಗಪ್ರಸಾದವನರಿದವಂಗೆ ಜಂಗಮಪ್ರಸಾದವಿಲ್ಲ.
ಜಂಗಮಪ್ರಸಾದವನರಿಯದವಂಗೆ ಅರುಹು ಆಚಾರವಿಲ್ಲ.
ಅರುಹು ಆಚಾರವನರಿಯದವಂಗೆ ಇಹಪರವಿಲ್ಲ.
ಇಹಪರವನರಿಯದವಂಗೆ ಬಂದ ಭವದಲ್ಲಿ
ಬಪ್ಪುದು ತಪ್ಪದು ನೋಡಾ ಅಖಂಡೇಶ್ವರಾ. ॥ ೩೭೨ ॥

೬೧೬

ಒಳಗೆ ತಿಳಿಯದೆ ಹೊರಗೆ ಮಾಡುವ ಮಾಟವೆಲ್ಲ
ಅಜ್ಞಾನದ ಗಡಣದೊಳಗು.
ಒಳಗೆ ಗುರುಲಿಂಗಜಂಗಮದ ಪಾದತೀರ್ಥಪ್ರಸಾದವ ಕೊಂಡೆವೆಂದು
ಹೊರಗೆ ಮಾಡುವ ಭಕ್ತಿಯ ಬಿಟ್ಟರೆ
ಮುಂದೆ ಒದಗುವ ಮುಕ್ತಿಯ ಕೇಡು.
ಅದೆಂತೆಂದೊಡೆ :
ಅಸಲು ಕಳೆದ ಬಳಿಕ ಲಾಭವುಂಟೇ ?
ಇಲ್ಲ ಇಲ್ಲ, ಮಾಣು.
ಒಳಗಣ ಕೂಟ, ಹೊರಗಣ ಮಾಟವನರಿಯದೆ
ಕೆಟ್ಟರು ನೋಡಾ ಹಿರಿಯರೆಲ್ಲರು ಅಖಂಡೇಶ್ವರಾ. ॥ ೩೭೩ ॥

೬೧೭

ಆಧಾರದಲ್ಲಿ ಗುರುಸಂಬಂಧವು.
ಸ್ವಾಧಿಷ್ಠಾನದಲ್ಲಿ ಲಿಂಗಸಂಬಂಧವು.
ಮಣಿಪೂರಕದಲ್ಲಿ ಜಂಗಮಸಂಬಂಧವು.
ಅನಾಹತದಲ್ಲಿ ಪಾದೋದಕಸಂಬಂಧವು.
ವಿಶುದ್ಧಿಯಲ್ಲಿ ಪ್ರಸಾದಸಂಬಂಧವು.
ಆಜ್ಞೇಯದಲ್ಲಿ ಅರುಹುಸಂಬಂಧವು.
ಈ ಅರುಹುವಿಡಿದು ಗುರುವ ಕಂಡು,
ಲಿಂಗವ ನೋಡಿ, ಜಂಗಮವ ಕೂಡಿ,
ಪಾದೋದಕ ಪ್ರಸಾದದ ಘನವ ಕಾಂಬುದೆ ಅಂತರಂಗವೆನಿಸುವುದು.
ಈ ಅಂತರಂಗದ ವಸ್ತುವು
ಭಕ್ತಹಿತಾರ್ಥವಾಗಿ ಬಹಿರಂಗಕ್ಕೆ ಬಂದಲ್ಲಿ,
ಗುರುಭಕ್ತಿ, ಲಿಂಗಪೂಜೆ, ಜಂಗಮಾರಾಧನೆ,
ಪಾದೋದಕಪ್ರಸಾದ ಸೇವನೆಯ
ಪ್ರೇಮವುಳ್ಳಡೆ ಬಹಿರಂಗವೆನಿಸುವುದು.
ಇಂತೀ ಅಂತರಂಗ ಬಹಿರಂಗದ ಮಾಟಕೂಟವ ಬಿಡದಿರ್ಪ
ಪರಮಪ್ರಸಾದಿಗಳ ಒಳಹೊರಗೆ ಭರಿತನಾಗಿರ್ಪನು
ನಮ್ಮ ಅಖಂಡೇಶ್ವರನು. ॥ ೩೭೪ ॥

೬೧೮

ಶಿವನೇ ಗುರುವೆಂದು ತಿಳಿದು
ವಿಶ್ವಾಸಭಾವತುಂಬಿರಬೇಕು ಗುರುವಿನಲ್ಲಿ.
ಶಿವನೇ ಲಿಂಗವೆಂದು ತಿಳಿದು

ವಿಶ್ವಾಸಭಾವತುಂಬಿರಬೇಕು ಲಿಂಗದಲ್ಲಿ,
ಶಿವನೇ ಜಂಗಮವೆಂದು ತಿಳಿದು
ವಿಶ್ವಾಸಭಾವತುಂಬಿರಬೇಕು ಜಂಗಮದಲ್ಲಿ,
ಶಿವನೇ ಪಾದೋದಕಪ್ರಸಾದವೆಂದು ತಿಳಿದು
ವಿಶ್ವಾಸಭಾವತುಂಬಿರಬೇಕು ಪಾದೋದಕಪ್ರಸಾದದಲ್ಲಿ,
ಇಂತಿವರಲ್ಲಿ ವಿಶ್ವಾಸಭಾವವಿಲ್ಲದವಂಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ,
ಪಾದೋದಕಪ್ರಸಾದವಿಲ್ಲ.
ಮುಕ್ತಿ ಎಂಬುದು ಮುನ್ನವೇ ಇಲ್ಲ,
ಅವರೆಷ್ಟು ದಿನವಿದ್ದಡೂ ವ್ಯರ್ಥ ಕಾಣಯ್ಯಾ.
ಅದೆಂತೆಂದೊಡೆ : ಶಿವರಹಸ್ಯ–
''ಜೀವಿತಂ ಶಿವಭಕ್ತಾನಾಂ ವರಂ ಪರಂ ಚ ದಿನಾನಿ ಚ ।
ಅಜಕಲ್ಪಸಹಸ್ರೇಭ್ಯೋ ಭಕ್ತಿಹೀನಂತು ಶಾಂಕರಿ ॥''
ಇದು ಕಾರಣ, ವಿಶ್ವಾಸಹೀನರ ಎನಗೊಮ್ಮೆ
ತೋರದಿರಯ್ಯಾ ಅಖಂಡೇಶ್ವರಾ. ॥ ೩೭೫ ॥

## ೬೧೯

ವಿಶ್ವಾಸನೋಟ ಜಾರಿದಡೆ ಜಾರುವನಯ್ಯಾ ಶ್ರೀಗುರುವು.
ವಿಶ್ವಾಸನೋಟ ಜಾರಿದಡೆ ಜಾರುವನಯ್ಯಾ ಶಿವಲಿಂಗವು.
ವಿಶ್ವಾಸನೋಟ ಜಾರಿದಡೆ ಜಾರುವನಯ್ಯಾ ಪರಮಜಂಗಮವು.
ವಿಶ್ವಾಸನೋಟ ಜಾರಿದಡೆ ಜಾರುವವಯ್ಯಾ
ಪಾದೋದಕ ಪ್ರಸಾದಂಗಳು.
ಇಂತೀ ಪಂಚವಿಧವು ಪರಬ್ರಹ್ಮವೆಂದು
ನಂಬಿದ ಭಕ್ತರ ಹೃದಯದಲ್ಲಿ
ಹೆರೆಹಿಂಗದೆ ನಿರಂತರ ನೆಲೆಸಿರ್ಪನು ನಮ್ಮ ಅಖಂಡೇಶ್ವರನು. ॥ ೩೭೬ ॥

## ೬೨೦

ಶುದ್ಧ ಸುಯಿಧಾನ ಭಯ ವಿಶ್ವಾಸವಿರಬೇಕು ಗುರುವಿನಲ್ಲಿ,
ಶುದ್ಧ ಸುಯಿಧಾನ ಭಯ ವಿಶ್ವಾಸವಿರಬೇಕು ಲಿಂಗದಲ್ಲಿ,
ಶುದ್ಧ ಸುಯಿಧಾನ ಭಯ ವಿಶ್ವಾಸವಿರಬೇಕು ಜಂಗಮದಲ್ಲಿ,
ಶುದ್ಧ ಸುಯಿಧಾನ ಭಯ ವಿಶ್ವಾಸವಿರಬೇಕು
ಪಾದೋದಕ ಪ್ರಸಾದಂಗಳಲ್ಲಿ,
ಇಂತಿವರಲ್ಲಿ ಶುದ್ಧ ಸುಯಿಧಾನ ಭಯ ವಿಶ್ವಾಸವಿಲ್ಲದವರು
ಸಲ್ಲರಯ್ಯಾ ನಿಮ್ಮ ನಿಜಪದಕ್ಕೆ ಅಖಂಡೇಶ್ವರಾ. ॥ ೩೭೭ ॥

### ೬೨೧

ಶಿವಶಿವಾ ಪ್ರಸಾದಭಕ್ತರ ತೋರಿಸಯ್ಯಾ.
ಹರಹರಾ ಪ್ರಸಾದವೇ ಪ್ರಾಣವಾಗಿರ್ಪ
ಪರಮಭಕ್ತರ ತೋರಿಸಯ್ಯಾ.
ಅಖಂಡೇಶ್ವರಾ, ಪ್ರಸಾದೈಕ್ಯರ ತೋರಿಸಯ್ಯ
ನಿಮ್ಮ ಧರ್ಮ, ನಿಮ್ಮ ಧರ್ಮ. || ೩೭೮ ||

### ೬೨೨

ಭಕ್ತನಾದಡೆ ಚಿತ್ತ ನಿಶ್ಚಲವಾಗಿ ಸದ್ಭಕ್ತಿ ನೆಲೆಗೊಂಡಿರಬೇಕು.
ಮಹೇಶ್ವರನಾದಡೆ ಸಕಲಕರ್ಮವು ಕ್ಷಯವಾಗಿರಬೇಕು.
ಪ್ರಸಾದಿಯಾದಡೆ ಶಿವಜ್ಞಾನಪರಾಯಣನಾಗಿರಬೇಕು.
ಪ್ರಾಣಲಿಂಗಿಯಾದಡೆ ನಿತ್ಯಾನಿತ್ಯವಿಚಾರವನರಿದಿರಬೇಕು.
ಶರಣನಾದಡೆ ಗರ್ವ ಅಹಂಕಾರದ ಮೊಳೆಯ ಮುರಿದಿರಬೇಕು.
ಐಕ್ಯನಾದಡ ಭಿನ್ನಭಾವವನಳಿದು ಮಹಾಜ್ಞಾನದೊಳಗೆ ಓಲಾಡಬೇಕು.
ಅದಂತೆಂದೊಡ :
''ಭಕ್ತಿಃ ಕರ್ಮಕ್ಷಯೋ ಬುದ್ಧಿರ್ವಿಚಾರೋ ದರ್ಪಸಂಕ್ಷಯಃ ।
ಸಮ್ಯಗ್‌ಜ್ಞಾನಮಿತಿ ಪ್ರಾಜ್ಞೈಃ ಸ್ಥಲಷಟ್ಕಮುದಾಹೃತಮ್ ॥''
ಎಂದುದಾಗಿ,
ಇಂತಪ್ಪ ಷಟ್‌ಸ್ಥಲವೇದ್ಯರಾದ ಮಹಾಶರಣರ ಒಕ್ಕುಮಿಕ್ಕ
ಪ್ರಸಾದವನೇ ಕರುಣಿಸಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ. || ೩೭೯ ||

### ೬೨೩

ಧರ್ಮ ಅರ್ಥ ಕಾಮ ಮೋಕ್ಷವೆಂಬ
ಚತುರ್ವಿಧ ಫಲಪದಂಗಳ ನಾನೊಲ್ಲೆನಯ್ಯಾ.
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ
ಚತುರ್ವಿಧ ಫಲಪದಂಗಳ ನಾನೊಲ್ಲೆನಯ್ಯಾ.
ಅಣಿಮಾದ್ಯಷ್ಟಸಿದ್ಧಿಗಳ ನಾನೊಲ್ಲೆನಯ್ಯಾ.
ಎಲೆ ಶಿವನೆ ನಾನೊಂದ ಬೇಡುವೆನಯ್ಯ.
ನಿಮ್ಮ ಶರಣರು ಉಂಡುಳಿದುದ ಕೊಂಡು ಮಿಕ್ಕಿದ
ಪರಮಪ್ರಸಾದಕ್ಕೆ ಯೋಗ್ಯನ ಮಾಡಿ
ಬದುಕಿಸಯ್ಯ ಎನ್ನ ಅಖಂಡೇಶ್ವರಾ. || ೩೮೦ ||

### ೬೨೪

ಜೀವಭಾವದಿಂದ ಜೀವನ ತಿಂದು
ಜೀವಿಸಿ ಜನನ ಮರಣಂಗಳಿಂದ

ದುಃಖಬಡುತಿರ್ಪುವು ನೋಡಾ ಸಕಲಪ್ರಾಣಿಗಳು.
ಅದಂತೆಂದೊಡೆ :
''ಪೃಥ್ವಿಬೀಜಂ ತಥಾ ಮಾಂಸಂ ಅಪ್‌ದ್ರವ್ಯಂ ಸುರಾಮಯಂ ।
ಆತ್ಮ ಜೀವಸಮಾಯುಕ್ತ ಜೀವಃ ಜೀವೇನ ಭಕ್ಷ್ಯತೇ ॥''
ಎಂದುದಾಗಿ,
ಇಂತಪ್ಪ ಜೀವಮಯವಾದ ಪದಾರ್ಥವನು ಶುದ್ಧಸಂಸ್ಕಾರವ ಮಾಡಿ,
ಲಿಂಗಜಂಗಮದ ಮುಖದಲ್ಲಿ ಸಮರ್ಪಿಸಿ,
ಲಿಂಗಜಂಗಮದ ಮುಖದಲ್ಲಿ ಒದಗಿದ
ಪರಮಪ್ರಸಾದವನು ಭೋಗಿಸುವ ಸದ್‌ಭಕ್ತಂಗೆ
ಜನನಮರಣಂಗಳು ದೂರವಾಗಿರ್ಪುವಯ್ಯಾ ಅಖಂಡೇಶ್ವರಾ. ॥ ೩೮೧ ॥

೬೨೫

ಪರಿಪಾಕವಾದ ಸಕಲಪದಾರ್ಥಂಗಳ ಹಸ್ತಪರುಷದಿಂದ
ಶುದ್ಧಸಂಸ್ಕಾರವ ಮಾಡಿದಲ್ಲದೆ ಲಿಂಗಕ್ಕೆ ಅರ್ಪಿಸಲಾಗದು.
ಅದೇನು ಕಾರಣವೆಂದಡೆ :
ಹಸ್ತಪರುಷವಿಲ್ಲದ ಪದಾರ್ಥ ಉಚ್ಛಿಷ್ಟವೆನಿಸಿತ್ತು,
ಹಸ್ತಪರುಷವಿಲ್ಲದ ಪದಾರ್ಥ ಪಂಚಭೂತ ಪ್ರಕೃತ ಜೀವಮಯವೆನಿಸಿತ್ತು,
ಹಸ್ತಪರುಷವಿಲ್ಲದ ಪದಾರ್ಥ ಜೀರ್ಣಗೋಮಾಂಸವೆನಿಸಿತ್ತು,
ಹಸ್ತಪರುಷವಿಲ್ಲದ ಪದಾರ್ಥ ಅಶುದ್ಧ ಕಿಲ್ಬಿಷವೆನಿಸಿತ್ತು,
ಅದೆಂತೆಂದೊಡೆ :
''ಜಂಗಮಸ್ಯ ಕರಸ್ಪರ್ಶಾತ್ ಸರ್ವದ್ರವ್ಯಂ ಚ ಶುದ್ಧ್ಯತೇ ।
ಹಸ್ತಸ್ಪರ್ಶಂ ವಿನಾ ಪಾಕಂ ಕಿಲ್ಬಿಷಂ ಪ್ರೋಚ್ಯತೇ ಬುಧೈಃ ॥''
ಎಂದುದಾಗಿ, ಇಂತಪ್ಪ ಪದಾರ್ಥದ ಪೂರ್ವಾಶ್ರಯವನು
ಶಿವಮಂತ್ರ ಶ್ರೀ ವಿಭೂತಿಯಿಂದೆ ಕಳೆದು,
ಶುದ್ಧಸಂಸ್ಕಾರವೆನಿಸಿ ಶಿವನೇತ್ರದಿಂದೆ ನೋಡಿ, ಶಿವಹಸ್ತದಿಂದೆ ಮುಟ್ಟಿ,
ಶಿವಲಿಂಗಕ್ಕೆ ಅರ್ಪಿಸಿದಲ್ಲಿ ಶಿವಪ್ರಸಾದವೆನಿಸಿತ್ತು.
ಆ ಶಿವಪ್ರಸಾದವನು ಶಿವಲಿಂಗಸನ್ನಿಹಿತನಾಗಿ
ಶಿವಜಿಹ್ವೆಯಲ್ಲಿ ಭೋಗಿಸುವಾತನೆ ಶಿವಶರಣನು.
ಆತನೆ ಶಿವಪ್ರಸಾದಿ, ಆತನೆ ಶಿವಾನುಭಾವಿ.
ಇಂತಪ್ಪ ಭೇದವನರಿಯದೆ ಮಾಡುವ ಮಾಟವೆಲ್ಲವು
ಜೀವಗಡಣದೊಳಗಯ್ಯಾ ಅಖಂಡೇಶ್ವರಾ. ॥ ೩೮೨ ॥

೬೨೬

ಇಷ್ಟಲಿಂಗಕ್ಕೆ ರೂಪುಪದಾರ್ಥವನರ್ಪಿಸಿ,
ಆ ಇಷ್ಟಲಿಂಗದಮುಖದಲ್ಲಿಯೇ

ರೂಪುಪ್ರಸಾದವ ಪಡೆಯಬಲ್ಲಡೆ ಶಿವಪ್ರಸಾದಿಯೆಂಬೆನು.
ಪ್ರಾಣಲಿಂಗಕ್ಕೆ ರುಚಿಪದಾರ್ಥವನರ್ಪಿಸಿ,
ಆ ಪ್ರಾಣಲಿಂಗದಮುಖದಲ್ಲಿಯೇ
ರುಚಿಪ್ರಸಾದವ ಪಡೆಯಬಲ್ಲಡೆ ಶಿವಪ್ರಸಾದಿಯೆಂಬೆನು.
ಭಾವಲಿಂಗಕ್ಕೆ ತೃಪ್ತಿಪದಾರ್ಥವನರ್ಪಿಸಿ,
ಆ ಭಾವಲಿಂಗದಮುಖದಲ್ಲಿಯೇ
ತೃಪ್ತಿಪ್ರಸಾದವ ಪಡೆಯಬಲ್ಲಡೆ ಶಿವಪ್ರಸಾದಿಯೆಂಬೆನು.
ಇಂತೀ ಭೇದವನರಿಯದೆ
ಒಡಲಕಕ್ಕುತಲೆಗೆ ಒಗುಮಿಗೆ ಒಟ್ಟೈಸಿಕೊಂಡು
ಬಾಯಿಗೆ ಬಂದಂತೆ ತಿಂದು ತನು ಕೊಡಹಿ, ಮನ ಹೇಸಿ,
ರಣಭೂತನಂತೆ ಕಂಡಕಂಡತ್ತ ಚೆಲ್ಲುವ
ದಿಂಡೆಯ ಮೂಳ ಬಂಡ ಹೊಲೆಯರಿಗೆ
ಶಿವಪ್ರಸಾದದ ಒಲುಮೆಯಲ್ಲಿಯದಯ್ಯ ಅಖಂಡೇಶ್ವರಾ. || ೩೮೩ ||

**೬೨೭**

ಪ್ರಸಾದಿ ಪ್ರಸಾದಿಗಳೆಂದು ನುಡಿದುಕೊಂಬ
ಪರಮದ್ರೋಹಿಗಳನೇನೆಂಬೆ ?
ಪ್ರಸಾದಿಗೆ ಪರಸ್ತ್ರೀಯರ ಅಪ್ಪುಗೆಯುಂಟೆ ?
ಪ್ರಸಾದಿಗೆ ಪರದೈವದ ಪೂಜೆಯುಂಟೆ ?
ಪ್ರಸಾದಿಗೆ ಪರದೈವದ ಪ್ರೇಮವುಂಟೆ ?
ಪ್ರಸಾದಿಗೆ ಪ್ರಪಂಚಿನ ವ್ಯವಹಾರ ಉಂಟೆ ?
ಇಂತೀ ತಥ್ಯಮಿಥ್ಯದ ಹೋರಾಟದಲ್ಲಿದ್ದು
ತೊತ್ತಿನೆಂಜಲ ತಿಂಬ ತೊನ್ನ ಹೊಲೆಯರಿಗ
ಉನ್ನತ ಪ್ರಸಾದವೆಲ್ಲಿಯದಯ್ಯ ಅಖಂಡೇಶ್ವರಾ. || ೩೮೪ ||

**೬೨೮**

ಸಿಂಹದ ಮೊಲೆವಾಲು ಸಿಂಹದ ಮರಿಗಲ್ಲದೆ,
ಸೀಳು ನಾಯಿಗೆ ಯೋಗ್ಯವೆ ಅಯ್ಯ ?
ಶಿವಪ್ರಸಾದದ ಒಲುಮೆ ಶಿವಶರಣರಿಗಲ್ಲದೆ
ಉಳಿದ ಭವಭಾರಿಗಳಿಗೆ ಅಳವಡುವುದೆ ಅಯ್ಯ
ಅಖಂಡೇಶ್ವರಾ ? || ೩೮೫ ||

**೬೨೯**

ಗುರುಪ್ರಸಾದಿಯಾದಡೆ
ಬಡತನ ಎಡರು ಕಂಟಕಂಗಳು ಬಂದು ತಾಗಿದಲ್ಲಿ
ಧೈರ್ಯಗುಂದದಿರಬೇಕು.

ಲಿಂಗಪ್ರಸಾದಿಯಾದಡೆ
ಉಪಾಧಿಯಿಂದ ಪರರಿಗೆ ಬಾಯ್ದೆರೆಯದಿರಬೇಕು.
ಜಂಗಮಪ್ರಸಾದಿಯಾದಡೆ ಅಂಗಕ್ಕೆ ವ್ಯಾಧಿ ಸಂಘಟಿಸಿದಲ್ಲಿ
ನಾರು ಬೇರು ವೈದ್ಯವ ಕೊಳ್ಳದಿರಬೇಕು.
ಇಂತೀ ಪ್ರಸಾದದ ಘನವನರಿಯದ ಸಂತೆಯ ಸೂಳೆಯ ಮಕ್ಕಳಿಗೆ
ಎಂತು ಮೆಚ್ಚುವನಯ್ಯ ನಮ್ಮ ಅಖಂಡೇಶ್ವರ. ॥ ೩೮೬ ॥

೬೩೦

ಶಿವಪ್ರಸಾದವನಾರೋಗಣೆಯ ಮಾಡುವಲ್ಲಿ
ಕರಣಂಗಳು ಕಡೆಗೆ ತುಳುಕದಿರಬೇಕು.
ಚಿತ್ತವು ಅತ್ತಿತ್ತ ಹರಿಯದಿರಬೇಕು.
ಶಿವಧ್ಯಾನಪರಾಯಣನಾಗಿರಬೇಕು.
ಶಿವಪ್ರಸಾದದಲ್ಲಿ ಮನವು ಮಗ್ನವಾಗಿರಬೇಕು.
ಪ್ರಸಾದವೆ ಪರಬ್ರಹ್ಮವೆಂಬ ಭಾವ ಬಲಿದಿರಬೇಕು.
ತುತ್ತುತುತ್ತಿಗೆ ಶಿವಮಂತ್ರವ ಉಚ್ಚರಿಸುತಿರಬೇಕು.
ಶಿವಪ್ರಸಾದದ ಘನವ ಕಂಡು ಮನವು ಹಿಗ್ಗಿ
ಪರಮಪರಿಣಾಮದೊಳಗೋಲಾಡುತಿರಬೇಕು.
ಇಂತೀ ಭೇದವನರಿಯಬಲ್ಲಾತನೆ
ಅಚ್ಚಪ್ರಸಾದಿಯಯ್ಯ ಅಖಂಡೇಶ್ವರಾ. ॥ ೩೮೭ ॥

೬೩೧

ದೇವರದೇವ ಮಹಾಪ್ರಸಾದ ತ್ರಿಕರಣಶುದ್ಧವಾಗಿ
ಎನ್ನ ಭಾವದ ನಂಬಿಗೆಯ ಬಣ್ಣಿಸುತಿರ್ಪೆನಯ್ಯ,
ಅವಧರಿಸಯ್ಯ ಸ್ವಾಮಿ.
ಗುರುಲಿಂಗಜಂಗಮದ ಪರಮಪ್ರಸಾದವನು ಪರಬ್ರಹ್ಮವೆಂದು ನಂಬಿ
ಪರಮಾನಂದದಿಂ ಕೈಕೊಂಡು ಪರಿಣಾಮ ತುಂಬಿ
ಆರೋಗಣೆಯ ಮಾಡುವಾಗ,
ಆ ಪ್ರಸಾದದಲ್ಲಿ ಉಪ್ಪು ಸಪ್ಪೆ ಹುಳಿ ಕಹಿ ಒಳಿತು ಹೊಲ್ಲ
ಉಚ್ಚ ನೀಚವನರಸಿದೆನಾದಡೆ ನಿಮ್ಮಾಣೆಯಯ್ಯಾ.
ಮುಂದಿರ್ದ ಶಿವಪ್ರಸಾದದ ಘನವ ಮರೆದು
ಎನ್ನೊಡಲ ಕಕ್ಕುಲತೆಗೆ ಮನವೆಳಸಿದೆನಾದಡೆ
ಅಖಂಡೇಶ್ವರಾ, ನಿಮ್ಮಾಣೆಯಯ್ಯಾ, ನಿಮ್ಮ ಪ್ರಮಥರಾಣೆಯಯ್ಯ. ॥ ೩೮೮ ॥

೬೩೨

ಲಿಂಗವನರಿಯದ ಅಂಗವಿಕಾರಿಗೇತಕೋ ಶಿವಪ್ರಸಾದ ?
ಜಂಗಮವನರಿಯದ ಭಂಗಗೇಡಿಗೇತಕೋ ಶಿವಪ್ರಸಾದ ?

ಜ್ಞಾನವನರಿಯದ ಅಜ್ಞಾನಿಗೇತಕೋ ಶಿವಪ್ರಸಾದ ?
ನೀತಿಯನರಿಯದ ಆತ್ಮಸುಖಿಗೇತಕೋ ಶಿವಪ್ರಸಾದ ?
ಆಚಾರವನರಿಯದ ಅನಾಚಾರಿಗೇತಕೋ ಶಿವಪ್ರಸಾದ ಅಖಂಡೇಶ್ವರಾ?
|| ೩೮೯ ||

೬೩೩

ಜಂಗಮದ ದರ್ಶನ ಸ್ಪರ್ಶನದಿಂದೆ
ಎನ್ನ ತನುಶುದ್ಧವಾಯಿತ್ತು.
ಜಂಗಮದ ಪಾದೋದಕ ಪ್ರಸಾದದಿಂದೆ
ಎನ್ನ ಪ್ರಾಣ ಶುದ್ಧವಾಯಿತ್ತು.
ಜಂಗಮದ ಜ್ಞಾನಾನುಭಾವದಿಂದೆ
ಎನ್ನ ಮನ ಶುದ್ಧವಾಯಿತ್ತು.
ಜಂಗಮವೇ ಎನ್ನ ಪ್ರಾಣವೆಂದರಿದೆನಾಗಿ
ಅಖಂಡೇಶ್ವರಾ, ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯಾ. || ೩೯೦ ||

೬೩೪

ಜಂಗಮ ಜಂಗಮವೆಂದು ನುಡಿಯುತಿರ್ಪರೆಲ್ಲರು,
ಜಂಗಮದ ಘನವನಾರು ಅರಿಯರಲ್ಲ.
ಜಂಗಮವೆಂದಡೆ ನಿರ್ನಾಮ ನಿರ್ದೇಹಿ ;
ಜಂಗಮವೆಂದಡೆ ನಿರ್ಜಡ ನಿರಾವರಣ ;
ಜಂಗಮವೆಂದಡೆ ನಿಃಸೀಮ ನಿರ್ಜಾತ ;
ಜಂಗಮವೆಂದಡೆ ನಿರುಪಮ ನಿರ್ಭೇದ್ಯ ;
ಜಂಗಮವೆಂದಡೆ ನಿರಾಳ ನಿರಾಲಂಬ ;
ಜಂಗಮವೆಂದಡೆ ನಿರಂಜನ ನಿರ್ವಯಲು.
ಇಂತಪ್ಪ ಸಚ್ಚಿದಾನಂದ ನಿತ್ಯಪರಿಪೂರ್ಣ ಜಂಗಮದ
ಪರಮಪ್ರಸಾದವ ಕೊಂಡು
ಎನ್ನ ಪ್ರಾಣದ ತೊಡಕ ಹರಿದೆನಯ್ಯ ಅಖಂಡೇಶ್ವರಾ. || ೩೯೧ ||

೬೩೫

ಗುರುಪ್ರಸಾದವ ಕೊಂಡು ಎನ್ನ ತನು
ಶುದ್ಧಪ್ರಸಾದವಾಯಿತ್ತು.
ಲಿಂಗಪ್ರಸಾದವ ಕೊಂಡು ಎನ್ನ ಮನ
ಸಿದ್ಧಪ್ರಸಾದವಾಯಿತ್ತು.
ಜಂಗಮಪ್ರಸಾದವ ಕೊಂಡು ಎನ್ನ ಪ್ರಾಣವು
ಪ್ರಸಿದ್ಧಪ್ರಸಾದವಾಯಿತ್ತು.
ಇಂತೀ ತ್ರಿವಿಧಪ್ರಸಾದವ ಕೊಂಡು

ಎನ್ನ ಭವ ನಾಸ್ತಿಯಾಗಿತ್ತಾಗಿ,
ಅಖಂಡೇಶ್ವರಾ, ಇನ್ನೆನಗೆ ಆವಾವ ಭಯವಿಲ್ಲವಯ್ಯ. ॥ ೩೯೨ ॥

### ೬೩೬

ಹರಿವಿರಂಚಿಗಳಿಗೆ ನಿಲುಕದ ಪರಬ್ರಹ್ಮಪ್ರಸಾದ.
ನರ ಸುರ ಯಕ್ಷ ರಾಕ್ಷಸರಿಗೆ ಸಿಲುಕದ ತ್ರಿಯಕ್ಷಪ್ರಸಾದ.
ಮನುಮುನಿಗಳಿಗೆ ಒಲಿಯದ ಮಹಾಪ್ರಸಾದ.
ಅಖಂಡೇಶ್ವರನ ಘನಗಂಭೀರ ಪ್ರಸಾದ ಎನಗೊದಗಿತ್ತು ನೋಡಾ ! ॥೩೯೩॥

### ೬೩೭

ಗುರುವೆ ಲಿಂಗವೆಂದರಿದೆನಾಗಿ, ಲಿಂಗದಲ್ಲಿ ನಿಲವ ಕಂಡೆ.
ಲಿಂಗವೆ ಜಂಗಮವೆಂದರಿದೆನಾಗಿ,
ಜಂಗಮದಲ್ಲಿ ಲಿಂಗದ ನಿಲವ ಕಂಡೆ.
ಜಂಗಮವೇ ನೀವೆಂದರಿದೆನಾಗಿ, ನಿಮ್ಮಲ್ಲಿ ಜಂಗಮದ ನಿಲವ ಕಂಡೆ.
ನೀವೇ ಪ್ರಸಾದವೆಂದರಿದೆನಾಗಿ, ಪ್ರಸಾದದಲ್ಲಿ ನಿಮ್ಮ ನಿಲವ ಕಂಡೆ.
ಪ್ರಸಾದವೇ, ನಾನೆಂದರಿದೆನಾಗಿ,
ಎನ್ನೊಳಗೆ ನಿಮ್ಮ ಮಹಾಪ್ರಸಾದದ ನಿಲವ ಕಂಡೆನಯ್ಯ
ಅಖಂಡೇಶ್ವರಾ. ॥ ೩೯೪ ॥

### ೬೩೮

ಶಿವಂಗೆ ಐದುಮುಖವಿರ್ಪುದ ಸಕಲರು ಬಲ್ಲರು.
ಭಕ್ತಂಗೆ ಐದುಮುಖವಿರ್ಪುದನಾರೂ ಅರಿಯರಲ್ಲ.
ಆ ಭಕ್ತಂಗೆ ಗುರು ಒಂದು ಮುಖ,
ಲಿಂಗ ಒಂದು ಮುಖ, ಜಂಗಮ ಒಂದು ಮುಖ,
ಪಾದೋದಕ ಒಂದು ಮುಖ, ಪ್ರಸಾದ ಒಂದು ಮುಖ.
ಇಂತೀ ಪಂಚಮುಖವನುಳ್ಳ ಸದ್ಭಕ್ತನೇ
ಸಾಕ್ಷಾತ್ ಪರಶಿವನು ತಾನೆ ನೋಡಾ ಅಖಂಡೇಶ್ವರಾ. ॥ ೩೯೫ ॥

### ೬೩೯

ಒಮ್ಮೆ ನೀ ದೇವನಾದಲ್ಲಿ ನಾ ಭಕ್ತನಾಗಿರ್ಪೆನು.
ಮತ್ತೊಮ್ಮೆ ನಾ ದೇವನಾದಲ್ಲಿ ನೀವು ಭಕ್ತರಾಗಿರ್ಪಿರಿ.
ಅದೆಂತೆಂದೊಡೆ :
ಎನ್ನ ತನು ಮನ ಪ್ರಾಣೇಂದ್ರಿಯಂಗಳು ನಿಮಗರ್ಪಿತವಾದವು.
ನಿಮ್ಮ ಮಹಾಪ್ರಸಾದವೆನ್ನೊಳಗಾಯಿತ್ತಾಗಿ
ಅಖಂಡೇಶ್ವರಾ, ನೀವೇ ಪದಾರ್ಥ ನಾನೇ ಪ್ರಸಾದವಯ್ಯಾ. ॥ ೩೯೬ ॥

೬೪೦

ಗುರುಭಕ್ತಿಯ ಮಾಡಿದರೆ ಮಾಡಬಹುದು ;
ಲಿಂಗಭಕ್ತಿಯ ಮಾಡಬಾರದಯ್ಯ ಆರಿಗೆಯೂ.
ಲಿಂಗಭಕ್ತಿಯ ಮಾಡಿದರೆ ಮಾಡಬಹುದು ;
ಜಂಗಮಭಕ್ತಿಯ ಮಾಡಬಾರದಯ್ಯ ಆರಿಗೆಯೂ.
ಜಂಗಮಭಕ್ತಿಯ ಮಾಡಿದರೆ ಮಾಡಬಹುದು,
ಪ್ರಸಾದಭಕ್ತಿಯ ಮಾಡಬಾರದಯ್ಯ ಆರಿಗೆಯೂ.
ಇಂತೀ ಚತುರ್ವಿಧ ಭಕ್ತಿಯ ಭೇದವನರಿದು
ಇಂಬುಗೊಂಡ ಸಂಗನಬಸವಣ್ಣನೆಂಬ ಸದ್‌ಭಕ್ತಂಗೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. || ೩೯೭ ||

೬೪೧

ಪ್ರಸಾದಿಯೊಳಗಣ ಭಕ್ತಸ್ಥಲವನಿಂಬುಗೊಂಡರು
ಬಸವಣ್ಣನವರು.
ಪ್ರಸಾದಿಯೊಳಗಣ ಮಹೇಶ್ವರಸ್ಥಲವನಿಂಬುಗೊಂಡರು
ಮಡಿವಾಳಸ್ವಾಮಿಗಳು.
ಪ್ರಸಾದಿಯೊಳಗಣ ಪ್ರಸಾದಿಸ್ಥಲವನಿಂಬುಗೊಂಡರು
ಚೆನ್ನಬಸವಣ್ಣನವರು.
ಪ್ರಸಾದಿಯೊಳಗಣ ಪ್ರಾಣಲಿಂಗಿಸ್ಥಲವನಿಂಬುಗೊಂಡರು
ತಂಗಟೂರ ಮಾರಯ್ಯನವರು.
ಪ್ರಸಾದಿಯೊಳಗಣ ಶರಣಸ್ಥಲವನಿಂಬುಗೊಂಡರು
ಗಜೇಶಮಸಣಯ್ಯನವರು,
ಪ್ರಸಾದಿಯೊಳಗಣ ಐಕ್ಯಸ್ಥಲವನಿಂಬುಗೊಂಡರು
ಬಿಬ್ಬಿಬಾಚಯ್ಯನವರು.
ಇಂತೀ ಪ್ರಸಾದಿ ಷಟ್‌ಸ್ಥಲವನಿಂಬುಗೊಂಡ
ಶರಣರ ಪ್ರಸನ್ನವ ಮಾಡಿಕೊಡಯ್ಯಾ ಎನಗೆ
ಅಖಂಡೇಶ್ವರಾ. || ೩೯೮ ||

೬೪೨

ಪ್ರಸಾದಿಯಾದಡೆ ಚೇಳಿಯಕ್ಕನಂತಿರಬೇಕು.
ಪ್ರಸಾದಿಯಾದಡೆ ಮಾದಾರ ಚೆನ್ನಯ್ಯನಂತಿರಬೇಕು.
ಪ್ರಸಾದಿಯಾದಡೆ ಬೇಡರ ಕಣ್ಣಪ್ಪನಂತಿರಬೇಕು.
ಪ್ರಸಾದಿಯಾದಡೆ ಬಿಬ್ಬಿ ಬಾಚಯ್ಯಗಳಂತಿರಬೇಕು.
ಪ್ರಸಾದಿಯಾದಡೆ ಡೋಹರ ಕಕ್ಕಯ್ಯನಂತಿರಬೇಕು.
ಪ್ರಸಾದಿಯಾದಡೆ ಪರಮಗುರು ಚೆನ್ನಬಸವಣ್ಣನಂತಿರಬೇಕು.

ಅಲ್ಲದೆ ಪ್ರಾಣನ ಹಸಿವೆಗೆಂದು ಬಾಯಿಗೆ ಬಂದಂತೆ ತಿಂಬ
ಜೀವಗಳ್ಳರಿಗೆಲ್ಲಿಯ ಪ್ರಸಾದವಯ್ಯಾ ಅಖಂಡೇಶ್ವರಾ ? || ೩೯೯ ||

**೬೪೩**

ಮಾದಾರ ಚನ್ನಯ್ಯನ ಬಾಯ ತಾಂಬೂಲವ ಮೆಲುವೆ.
ಡೋಹರ ಕಕ್ಕಯ್ಯನ ಒಕ್ಕುಮಿಕ್ಕುದನುಂಬೆ.
ಚೋಳಿಯಕ್ಕನ ಊಳಿಗದವನಾಗುವೆ.
ಶ್ವಪಚಯ್ಯನ ಆಳಾಗಿರುವೆ.
ಇನ್ನುಳಿದ ಸಕಲಗಣಂಗಳ ತೊತ್ತು ಬಂಟ ಲೆಂಕನಾಗಿ
ರಾಜಾಂಗಣ ಬಳಿಯುವೆನಯ್ಯಾ ಅಖಂಡೇಶ್ವರಾ. || ೪೦೦ ||

**೬೪೪**

ತನುವಿನಲ್ಲಿ ಗುರುಭಕ್ತಿಯಿಂಬುಗೊಂಡು,
ಮನದಲ್ಲಿ ಲಿಂಗಭಕ್ತಿಯಿಂಬುಗೊಂಡು,
ಆತ್ಮದಲ್ಲಿ ಜಂಗಮಭಕ್ತಿಯಿಂಬುಗೊಂಡು,
ಪ್ರಾಣದಲ್ಲಿ ಪ್ರಸಾದಭಕ್ತಿಯಿಂಬುಗೊಂಡು,
ಇಂತೀ ಚತುರ್ವಿಧಸ್ಥಾನದಲ್ಲಿ ಚತುರ್ವಿಧಭಕ್ತಿ
ನೆಲೆಗೊಂಡ ಮಹಾಭಕ್ತರ ತೋರಿಸಿ ಬದುಕಿಸಯ್ಯಾ ಎನ್ನ
ಅಖಂಡೇಶ್ವರಾ. || ೪೦೧ ||

**೬೪೫**

ಕ್ರಿಯಾದೀಕ್ಷೆಯಿಂದೆ ಇಷ್ಟಲಿಂಗದಲ್ಲಿ
ಎನ್ನ ತನುವ ಸಂಯೋಗವ ಮಾಡಿದನಯ್ಯಾ ಶ್ರೀಗುರುವು.
ಮಂತ್ರದೀಕ್ಷೆಯಿಂದೆ ಪ್ರಾಣಲಿಂಗದಲ್ಲಿ
ಎನ್ನ ಮನವ ಸಂಯೋಗವ ಮಾಡಿದನಯ್ಯ ಶ್ರೀಗುರುವು.
ವೇಧಾದೀಕ್ಷೆಯಿಂದೆ ಭಾವಲಿಂಗದಲ್ಲಿ
ಎನ್ನ ಜೀವನ ಸಂಯೋಗವ ಮಾಡಿದನಯ್ಯ ಶ್ರೀಗುರುವು.
ಇಂತೀ ತ್ರಿವಿಧಲಿಂಗದ ಪ್ರಸನ್ನಪ್ರಸಾದದಲ್ಲಿ
ಎನ್ನ ಪ್ರಾಣವ ಸಂಯೋಗವ ಮಾಡಿದ ಶ್ರೀಗುರುವಿಂಗೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ. || ೪೦೨ ||

**೬೪೬**

ಶ್ರೀಗುರುವಿನಿಂದಧಿಕರು ಆವ ಲೋಕದೊಳಗಿಲ್ಲವಯ್ಯಾ.
ಶ್ರೀಗುರುವಿನಂತ ಪರೋಪಕಾರಿಗಳ ಮತ್ತಾರನೂ ಕಾಣೆನಯ್ಯಾ.
ಅದೆಂತೆಂದೊಡೆ :
ಎನ್ನ ಕಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರು

ಪರಮಶಿವಲಿಂಗಕ್ಕೆ.
ಎನ್ನ ಕಿವಿಗಳ ಭಕ್ತರ ಮಾಡಿದನಯ್ಯಾ ಶ್ರೀಗುರು
ಪರಮಶಿವಲಿಂಗಕ್ಕೆ.
ಎನ್ನ ನಾಸಿಕ ನಾಲಗೆಗಳ ಭಕ್ತರ ಮಾಡಿದನಯ್ಯಾ ಶ್ರೀಗುರು
ಪರಮಶಿವಲಿಂಗಕ್ಕೆ.
ಎನ್ನ ಕರಚರಣಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರು
ಪರಮಶಿವಲಿಂಗಕ್ಕೆ.
ಎನ್ನ ತನುಮನಪ್ರಾಣಂಗಳ ಭಕ್ತರ ಮಾಡಿದನಯ್ಯಾ ಶ್ರೀಗುರು
ಪರಮಶಿವಲಿಂಗಕ್ಕೆ.
ಎನ್ನ ಸಕಲಕರಣೇಂದ್ರಿಯಂಗಳ ಭಕ್ತರ ಮಾಡಿದನಯ್ಯ ಶ್ರೀಗುರು
ಪರಮಶಿವಲಿಂಗಕ್ಕೆ.
ಇಂತಿವು ಮೊದಲಾಗಿ ಎನ್ನ ಸರ್ವ
ಅವಯವಂಗಳನೆಲ್ಲ ಸದ್ಭಕ್ತರ ಮಾಡಿ
ಲಿಂಗಾರ್ಪಿತಕ್ಕೆ ಅನುಗೊಳಿಸಿದ ಶ್ರೀಗುರುವಿನ
ಮಹಾಘನ ನಿಲವಿಂಗೆ ನಮೋ ನಮೋ ಎಂಬೆನಯ್ಯಾ
ಅಖಂಡೇಶ್ವರಾ. || ೪೦೩ ||

೬೪೭

ತಾರಕಾಕೃತಿ, ನಕಾರಪ್ರಣವು, ಆಧಾರಚಕ್ರ,
ಸದ್‌ಭಕ್ತನೆ ಅಂಗ, ಸುಚಿತ್ತವೆ ಹಸ್ತ, ಆಚಾರಲಿಂಗ,
ಘ್ರಾಣವೆಂಬ ಮುಖ, ಕ್ರಿಯಾಶಕ್ತಿ,
ಶ್ರದ್ಧಾಭಕ್ತಿ, ಸುಗಂಧಪದಾರ್ಥ,
ಗಂಧಪ್ರಸಾದ, ನಿವೃತ್ತಿಕಲೆ,
ಕರ್ಮಸಾದಾಖ್ಯ, ಸತ್ತುವೆಂಬ ಲಕ್ಷಣ,
ಪರವೆಂಬ ಸಂಜ್ಞೆ, ಋಗ್ವೇದ–
ಇಂತಿವೆಲ್ಲವು ಇಷ್ಟಲಿಂಗದ ವೃತ್ತದಲ್ಲಿ ಸಂಬಂಧವು.
ದಂಡಕಾಕೃತಿ, ಮಕಾರಪ್ರಣವು, ಸ್ವಾಧಿಷ್ಠಾನಚಕ್ರ,
ಮಹೇಶ್ವರನೆ ಅಂಗ, ಸುಬುದ್ಧಿಯೆ ಹಸ್ತ
ಗುರುಲಿಂಗ, ಜಿಹ್ವೆಯೆಂಬ ಮುಖ, ಜ್ಞಾನಶಕ್ತಿ,
ನೈಷ್ಠಿಕಭಕ್ತಿ, ಸುರಸಪದಾರ್ಥ, ರಸಪ್ರಸಾದ, ಪ್ರತಿಷ್ಠಾಕಲೆ,
ಕರ್ತೃಸಾದಾಖ್ಯ, ಚಿತ್ತುವೆಂಬ ಲಕ್ಷಣ,
ಗೂಢವೆಂಬ ಸಂಜ್ಞೆ, ಯಜುರ್ವೇದ
ಇಂತಿವೆಲ್ಲವು ಇಷ್ಟಲಿಂಗದ ಕಟಿಯಲ್ಲಿ ಸಂಬಂಧವು.
ಕುಂಡಲಾಕೃತಿ, ಶಿಕಾರಪ್ರಣವು, ಮಣಿಪೂರಕಚಕ್ರ, ಪ್ರಸಾದಿಯೆ ಅಂಗ,

ನಿರಹಂಕಾರವೆ ಹಸ್ತ, ಶಿವಲಿಂಗನೇತ್ರವೆಂಬ ಮುಖ, ಇಚ್ಛಾಶಕ್ತಿ,
ಸಾವಧಾನಭಕ್ತಿ, ಸುರೂಪುಪದಾರ್ಥ, ರೂಪುಪ್ರಸಾದ, ವಿದ್ಯಾಕಲೆ,
ಮೂರ್ತಿಸಾದಾಖ್ಯ, ಆನಂದವೆಂಬ ಲಕ್ಷಣ,
ಶರೀರಸ್ಥವೆಂಬ ಸಂಜ್ಞೆ, ಸಾಮವೇದ–
ಇಂತಿವೆಲ್ಲ ಇಷ್ಟಲಿಂಗದ ಗೋಳಕದಲ್ಲಿ ಸಂಬಂಧವು.
ಅರ್ಧಚಂದ್ರಾಕೃತಿ, ವಕಾರಪ್ರಣವು, ಅನಾಹತ ಚಕ್ರ,
ಪ್ರಾಣಲಿಂಗಿಯೆ ಅಂಗ, ಸುಮನವೆ ಹಸ್ತ, ಜಂಗಮಲಿಂಗ,
ತ್ವಗೀಂದ್ರಿಯವೆಂಬ ಮುಖ, ಆದಿಶಕ್ತಿ, ಅನುಭಾವಭಕ್ತಿ,
ಸುಸ್ಪರ್ಶನಪದಾರ್ಥ, ಸ್ಪರ್ಶನಪ್ರಸಾದ, ಶಾಂತಿಕಲೆ,
ಅಮೂರ್ತಿಸಾದಾಖ್ಯ, ನಿತ್ಯವೆಂಬ ಲಕ್ಷಣ,
ಲಿಂಗಕ್ಷೇತ್ರಸಂಜ್ಞೆ, ಅಥರ್ವಣವೇದ–
ಇಂತಿವೆಲ್ಲ ಇಷ್ಟಲಿಂಗದ ಗೋಮುಖದಲ್ಲಿ ಸಂಬಂಧವು.
ದರ್ಪಣಾಕೃತಿ, ಯಕಾರಪ್ರಣವು, ವಿಶುದ್ಧಿ ಚಕ್ರ, ಶರಣನೆ ಅಂಗ,
ಸುಜ್ಞಾನವೆ ಹಸ್ತ, ಪ್ರಸಾದಲಿಂಗ,
ಶ್ರೋತ್ರವೆಂಬ ಮುಖ, ಪರಾಶಕ್ತಿ, ಆನಂದ ಭಕ್ತಿ, ಸುಶಬ್ದಪದಾರ್ಥ,
ಶಬ್ದಪ್ರಸಾದ, ಶಾಂತ್ಯತೀತಕಲೆ,
ಶಿವಸಾದಾಖ್ಯ, ಪರಿಣಾಮವೆಂಬ ಲಕ್ಷಣ,
ಅನಾದಿವತ್ ಎಂಬ ಸಂಜ್ಞೆ, ಅಜಪೆವೇದ–
ಇಂತಿವೆಲ್ಲ ಇಷ್ಟಲಿಂಗದ ನಾಳದಲ್ಲಿ ಸಂಬಂಧವು.
ಓಂಕಾರಾಕೃತಿ, ಓಂಕಾರಪ್ರಣವು,
ಆಜ್ಞೇಯಚಕ್ರ, ಐಕ್ಯನೆ ಅಂಗ,
ಸದ್‌ಭಾವಹಸ್ತ, ಮಹಾಲಿಂಗ,
ಹೃದಯವೆಂಬ ಮುಖ, ಚಿಚ್ಛಕ್ತಿ,
ಸಮರಸಭಕ್ತಿ, ಸುತೃಪ್ತಿಪದಾರ್ಥ,
ತೃಪ್ತಿಪ್ರಸಾದ, ಶಾಂತ್ಯತೀತೋತ್ತರಕಲೆ,
ಮಹಾಸಾದಾಖ್ಯ, ಅಖಂಡವೆಂಬ ಲಕ್ಷಣ, ಮಹಾಸಂಜ್ಞೆ,
ಗಾಯತ್ರಿಯೆಂಬ ವೇದ–
ಇಂತಿವೆಲ್ಲ ಇಷ್ಟಲಿಂಗದ ಮಸ್ತಕದಲ್ಲಿ ಸಂಬಂಧವು.
ಇಂತೀ ತೊಂಬತ್ತಾರು ಸಕೀಲಗಳನೊಳಕೊಂಡ
ಮಹಾಘನ ಪರಾತ್ಪರವಾದ ಇಷ್ಟಲಿಂಗವನ
ಕರ ಮನ ಭಾವದೊಳಗೆ ಕುಳ್ಳಿರಿಸಿ ಅರ್ಚಿಸಿ.
ಧ್ಯಾನಿಸಿ ಕೂಡಿ ಎರಡಳಿದ ಮಹಾಘನ ಶರಣರ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. ॥ ೪೦೪ ॥

**೬೪೮**

ಕೇಳುವ ಸಂಗೀತ, ನೋಡುವ ಸುರೂಪುಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು.
ವಾಸಿಸುವ ಸುಗಂಧ, ರುಚಿಸುವ ಸುರಸಂಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು.
ತಟ್ಟು, ಮುಟ್ಟು, ತಾಗು ನಿರೋಧ ಸೋಂಕು ಸಂಬಂಧಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು.
ಹಲ್ಲುಕಡ್ಡಿ ದರ್ಪಣ ಮೊದಲಾದ ಪದಾರ್ಥಂಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು.
ಚಳಿ ಮಳೆ ಗಾಳಿ ಬಿಸಿಲು ಸಿಡಿಲು ಮಿಂಚು ನೀರು ನೆಳಲುಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು.
ಪೃಥ್ವಿ ಗಗನ ತತ್ತ್ವತೋರಿಕೆ ಸೂರ್ಯ ಚಂದ್ರ ಅಗ್ನಿ ತಾರೆ ಪ್ರಕಾಶಂಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮಪ್ರಸಾದಿಯೆಂಬೆನು.
ಇಂತೀ ಲಿಂಗಾರ್ಪಿತ ಸಕೀಲವನರಿಯದೆ ಬರಿದೆ ಪ್ರಸಾದಿಗಳೆಂದು
ನುಡಿವ ನುಡಿಜಾಣರ ಕಂಡು ನಾಚಿದೆನಯ್ಯಾ ಅಖಂಡೇಶ್ವರಾ. ॥ ४೦೫ ॥

**೬೪೯**

ಪೃಥ್ವಿಯ ಅಂಗವಾದ ಭಕ್ತಂಗೆ ಚಿತ್ತವೆ ಹಸ್ತ,
ಆ ಹಸ್ತಕ್ಕೆ ಕ್ರಿಯಾಶಕ್ತಿ, ಆ ಶಕ್ತಿಗೆ ಆಚಾರಲಿಂಗ,
ಆ ಲಿಂಗಕ್ಕೆ ಘ್ರಾಣೇಂದ್ರಿಯವೆಂಬ ಮುಖ,
ಆ ಮುಖಕ್ಕೆ ಸುಗಂಧವೆ ಪದಾರ್ಥ ;
ಆ ಪದಾರ್ಥವನು ಘ್ರಾಣದಲ್ಲಿಹ ಆಚಾರಲಿಂಗಕ್ಕೆ
ಶ್ರದ್ಧಾಭಕ್ತಿಯಿಂದರ್ಪಿಸಿ,
ಆ ಸುಗಂಧದ ಪ್ರಸಾದವನು ಪಡೆದು,
ಸುಖಿಸುವಾತನೆ ಸದ್‌ಭಕ್ತನು ನೋಡಾ ಅಖಂಡೇಶ್ವರಾ. ॥ ४೦೬ ॥

**೬೫೦**

ಅಪ್ಪುವೆ ಅಂಗವಾದ ಮಾಹೇಶ್ವರಂಗೆ ಬುದ್ಧಿಯೆ ಹಸ್ತ,
ಆ ಹಸ್ತಕ್ಕೆ ಜ್ಞಾನಶಕ್ತಿ, ಆ ಶಕ್ತಿಗೆ ಗುರುಲಿಂಗ,
ಆ ಗುರುಲಿಂಗಕ್ಕೆ ಜಿಹ್ವೇಂದ್ರಿಯವೆಂಬ ಮುಖ,
ಆ ಮುಖಕ್ಕೆ ಸುರಸವೆ ಪದಾರ್ಥ ; ಆ ಪದಾರ್ಥವನು
ಜಿಹ್ವೆಯಲ್ಲಿಹ ಗುರುಲಿಂಗಕ್ಕೆ ನೈಷ್ಠಿಕಭಕ್ತಿಯಿಂದರ್ಪಿಸಿ,
ಆ ಸುರಸ ಪ್ರಸಾದವನು ಪಡೆದು ಸುಖಿಸುವಾತನೇ
ಮಾಹೇಶ್ವರನು ನೋಡಾ ಅಖಂಡೇಶ್ವರಾ. ॥ ४೦೭ ॥

### ೬೫೧

ಅಗ್ನಿಯೆ ಅಂಗವಾದ ಪ್ರಸಾದಿಗೆ ನಿರಹಂಕಾರವೆ ಹಸ್ತ,
ಆ ಹಸ್ತಕ್ಕೆ ಇಚ್ಛಾಶಕ್ತಿ, ಆ ಶಕ್ತಿಗೆ ಶಿವಲಿಂಗ,
ಆ ಶಿವಲಿಂಗಕ್ಕೆ ನೇತ್ರೇಂದ್ರಿಯವೆ ಮುಖ,
ಆ ಮುಖಕ್ಕೆ ಸುರೂಪುಪದಾರ್ಥ ; ಆ ಪದಾರ್ಥವನು
ನೇತ್ರದಲ್ಲಿಹ ಶಿವಲಿಂಗಕ್ಕೆ ಸಾವಧಾನಭಕ್ತಿಯಿಂದರ್ಪಿಸಿ,
ಆ ಸುರೂಪುಪ್ರಸಾದವನು ಪಡೆದು ಸುಖಿಸುವಾತನೆ
ಪ್ರಸಾದಿಯಯ್ಯಾ ಅಖಂಡೇಶ್ವರಾ. || ೪೦೮ ||

### ೬೫೨

ಪವನವೆ ಅಂಗವಾದ ಪ್ರಾಣಲಿಂಗಿಗೆ ಸುಮನವೆ ಹಸ್ತ,
ಆ ಹಸ್ತಕ್ಕೆ ಆದಿಶಕ್ತಿ, ಆ ಶಕ್ತಿಗೆ ಜಂಗಮಲಿಂಗ,
ಆ ಲಿಂಗಕ್ಕೆ ತ್ವಗಿಂದ್ರಿಯವೆ ಮುಖ,
ಆ ಮುಖಕ್ಕೆ ಸ್ಪರ್ಶನಪದಾರ್ಥ; ಆ ಪದಾರ್ಥವನು
ತ್ವಕ್ಕಿನಲ್ಲಿಹ ಜಂಗಮಲಿಂಗಕ್ಕೆ ಅನುಭಾವಭಕ್ತಿಯಿಂದರ್ಪಿಸಿ,
ಆ ಸುಸ್ಪರ್ಶನ ಪ್ರಸಾದವನು ಪಡೆದು ಸುಖಿಸುವಾತನೆ
ಪ್ರಾಣಲಿಂಗಿಯಯ್ಯಾ ಅಖಂಡೇಶ್ವರಾ. || ೪೦೯ ||

### ೬೫೩

ಗಗನವೆ ಅಂಗವಾದ ಶರಣಂಗೆ ಸುಜ್ಞಾನವೆ ಹಸ್ತ,
ಆ ಹಸ್ತಕ್ಕೆ ಪರಾಶಕ್ತಿ, ಆ ಶಕ್ತಿಗೆ ಪ್ರಸಾದಲಿಂಗ,
ಆ ಲಿಂಗಕ್ಕೆ ಶ್ರವಣೇಂದ್ರಿಯವೆ ಮುಖ,
ಆ ಮುಖಕ್ಕೆ ಸುಶಬ್ದಪದಾರ್ಥ; ಆ ಪದಾರ್ಥವನು
ಕರ್ಣದಲ್ಲಿಹ ಪ್ರಸಾದಲಿಂಗಕ್ಕೆ ಆನಂದಭಕ್ತಿಯಿಂದರ್ಪಿಸಿ,
ಆ ಸುಶಬ್ದಪ್ರಸಾದವನು ಪಡೆದು ಸುಖಿಸುವಾತನೆ
ಶರಣನು ನೋಡಾ ಅಖಂಡೇಶ್ವರಾ. || ೪೧೦ ||

### ೬೫೪

ಆತ್ಮವೆ ಅಂಗವಾದ ಐಕ್ಯಂಗೆ ಸದ್‌ಭಾವನೆ ಹಸ್ತ,
ಆ ಹಸ್ತಕ್ಕೆ ಚಿಚ್ಛಕ್ತಿ, ಆ ಶಕ್ತಿಗೆ ಮಹಾಲಿಂಗ,
ಆ ಲಿಂಗಕ್ಕೆ ಹೃದಯೇಂದ್ರಿಯವೆ ಮುಖ,
ಆ ಮುಖಕ್ಕೆ ಸುತೃಪ್ತಿ ಪದಾರ್ಥ; ಆ ಪದಾರ್ಥವನು
ಹೃದಯದಲ್ಲಿಹ ಮಹಾಲಿಂಗಕ್ಕೆ ಸಮರಸಭಕ್ತಿಯಿಂದರ್ಪಿಸಿ,
ಆ ಪದಾರ್ಥವನು ಹೃದಯದಲ್ಲಿಹ ಮಹಾಲಿಂಗಕ್ಕೆ ಸಮರಸ ಭಕ್ತಿಯಿಂದರ್ಪಿಸಿ
ಆ ಸುತೃಪ್ತಿಪ್ರಸಾದವನು ಪಡೆದು ಸುಖಿಸುವಾತನೆ
ಐಕ್ಯನು ನೋಡಾ ಅಖಂಡೇಶ್ವರಾ. || ೪೧೧ ||

೬೫೫

ಪೃಥ್ವಿಯೆಂಬ ಭೂತಾಂಗದ ಪ್ರಕೃತಿವಿಕಾರದ ಗುಣವಳಿದು,
ಭಿನ್ನಗಂಧದ ಹಂಗುಹರಿದು,
ಆಚಾರಲಿಂಗಕ್ಕೆ ವದನವಾಗಿರ್ಪುದಯ್ಯಾ ಎನ್ನ ಘ್ರಾಣವು.
ಅಪ್ಪುವೆಂಬ ಭೂತಾಂಗದ ಪ್ರಕೃತಿವಿಕಾರದ ಗುಣವಳಿದು,
ಭಿನ್ನರುಚಿಯ ಹಂಗುಹರಿದು,
ಗುರುಲಿಂಗಕ್ಕೆ ವದನವಾಗಿರ್ಪುದಯ್ಯಾ ಎನ್ನ ಜಿಹ್ವೆಯು.
ಅಗ್ನಿಯೆಂಬ ಭೂತಾಂಗದ ಪ್ರಕೃತಿವಿಕಾರದ ಗುಣವಳಿದು,
ಭಿನ್ನರೂಪದ ಹಂಗುಹರಿದು,
ಶಿವಲಿಂಗಕ್ಕೆ ವದನವಾಗಿರ್ಪುದಯ್ಯಾ ಎನ್ನ ನೇತ್ರವು.
ಪವನವೆಂಬ ಭೂತಾಂಗದ ಪ್ರಕೃತಿವಿಕಾರದ ಗುಣವಳಿದು,
ಭಿನ್ನಸ್ಪರ್ಶದ ಹಂಗುಹರಿದು,
ಜಂಗಮಲಿಂಗಕ್ಕೆ ವದನವಾಗಿರ್ಪುದಯ್ಯಾ ಎನ್ನ ಸರ್ವಾಂಗವು.
ಆಕಾಶವೆಂಬ ಭೂತಾಂಗದ ಪ್ರಕೃತಿವಿಕಾರದ ಗುಣವಳಿದು,
ಭಿನ್ನಶಬ್ದದ ಹಂಗುಹರಿದು,
ಪ್ರಸಾದಲಿಂಗಕ್ಕೆ ವದನವಾಗಿರ್ಪುದಯ್ಯಾ ಎನ್ನ ಕರ್ಣವು.
ಆತ್ಮವೆಂಬ ಭೂತಾಂಗದ ಪ್ರಕೃತಿವಿಕಾರದ ಗುಣವಳಿದು,
ಭಿನ್ನತೃಪ್ತಿಯ ಹಂಗುಹರಿದು,
ಮಹಾಲಿಂಗಕ್ಕೆ ವದನವಾಗಿರ್ಪುದಯ್ಯಾ ಎನ್ನ ಹೃದಯವು.
ಇಂತೀ ಷಡ್ವಿಧ ಭೂತಾಂಗದ ಪ್ರಕೃತಿವಿಕಾರದ ಗುಣವಳಿದು,
ಷಡ್ವಿಧ ಭಿನ್ನಪದಾರ್ಥದ ಹಂಗುಹರಿದು
ಷಡ್ವಿಧ ಇಂದ್ರಿಯಂಗಳು ಷಡ್ವಿಧಲಿಂಗಕ್ಕೆ ಷಡ್ವಿಧ ವದನಂಗಳಾಗಿ
ಅಖಂಡೇಶ್ವರಾ, ನಾನೆ ನೀನಾದೆನಯ್ಯಾ. || ೪೧೨ ||

೬೫೬

ಎನ್ನ ತನುವಿನೊಳಗೆ ನಿಮ್ಮ ತನುವಡಗಿರ್ಪುದು ;
ನಿಮ್ಮ ತನುವಿನೊಳಗೆ ಎನ್ನ ತನುವಡಗಿರ್ಪುದು.
ಎನ್ನ ಮನದೊಳಗೆ ನಿಮ್ಮ ಮನವಡಗಿರ್ಪುದು ;
ನಿಮ್ಮ ಮನದೊಳಗೆ ಎನ್ನ ಮನವಡಗಿರ್ಪುದು.
ಎನ್ನ ಪ್ರಾಣದೊಳಗೆ ನಿಮ್ಮ ಪ್ರಾಣವಡಗಿರ್ಪುದು ;
ನಿಮ್ಮ ಪ್ರಾಣದೊಳಗೆ ಎನ್ನ ಪ್ರಾಣವಡಗಿರ್ಪುದು.
ಎನ್ನ ಜೀವದೊಳಗೆ ನಿಮ್ಮ ಜೀವವಡಗಿರ್ಪುದು ;
ನಿಮ್ಮ ಜೀವದೊಳಗೆ ಎನ್ನ ಜೀವವಡಗಿರ್ಪುದು.
ಎನ್ನ ಭಾವದೊಳಗೆ ನಿಮ್ಮ ಭಾವವಡಗಿರ್ಪುದು ;

ನಿಮ್ಮ ಭಾವದೊಳಗೆ ಎನ್ನ ಭಾವವಡಗಿರ್ಪುದು.
ಎನ್ನ ಕರಣಂಗಳೊಳಗೆ ನಿಮ್ಮ ಕರಣಂಗಳಡಗಿರ್ಪುವು ;
ನಿಮ್ಮ ಕರಣಂಗಳೊಳಗೆ ಎನ್ನ ಕರಣಂಗಳಡಗಿರ್ಪುವು.
ಎನ್ನ ಇಂದ್ರಿಯಂಗಳೊಳಗೆ ನಿಮ್ಮ ಇಂದ್ರಿಯಂಗಳಡಗಿರ್ಪುವು ;
ನಿಮ್ಮ ಇಂದ್ರಿಯಂಗಳೊಳಗೆ ಎನ್ನ ಇಂದ್ರಿಯಂಗಳಡಗಿರ್ಪುವು.
ಎನ್ನ ವಿಷಯಂಗಳೊಳಗೆ ನಿಮ್ಮ ವಿಷಯಂಗಳಡಗಿರ್ಪುವು ;
ನಿಮ್ಮ ವಿಷಯಂಗಳೊಳಗೆ ಎನ್ನ ವಿಷಯಂಗಳಡಗಿರ್ಪುವು.
ನಾನು ನೀನೆಂಬ ಭಿನ್ನಭಾವವಳಿದು
ಪುಷ್ಪಪರಿಮಳದಂತೆ, ರೂಪುರುಚಿಯಂತೆ
ಅವಿರಳ ಸಮರಸವಾಗಿರ್ದೆಯ್ಯಾ ಅಖಂಡೇಶ್ವರಾ. ॥ ೪೧೩ ॥

೬೫೭

ಎನ್ನ ಚಿತ್ತ ಸುಚಿತ್ತವಾಯಿತ್ತಯ್ಯಾ.
ಎನ್ನ ಬುದ್ಧಿ ಸುಬುದ್ಧಿಯಾಯಿತ್ತಯ್ಯಾ.
ಎನ್ನ ಅಹಂಕಾರ ನಿರಹಂಕಾರವಾಯಿತ್ತಯ್ಯಾ.
ಎನ್ನ ಮನ ಸುಮನವಾಯಿತ್ತಯ್ಯಾ.
ಎನ್ನ ಜ್ಞಾನ ಸುಜ್ಞಾನವಾಯಿತ್ತಯ್ಯಾ.
ಎನ್ನ ಭಾವ ಸದ್ಭಾವವಾಯಿತ್ತಯ್ಯಾ.
ನಿಮ್ಮ ಮಹಾಜ್ಞಾನದ ಸಂಗದಿಂದೆ
ಎನ್ನ ಸಕಲ ಕರಣಂಗಳು ನಿಮ್ಮಲ್ಲಿ ತರಹರವಾದವಾಗಿ
ಅಖಂಡೇಶ್ವರಾ, ನಿಮ್ಮ ಪರಮಪ್ರಸಾದವು
ಎನಗೆ ಸಾಧ್ಯವಾಯಿತ್ತಯ್ಯಾ. ॥ ೪೧೪ ॥

೬೫೮

ಹಾಡಿದರೆ ಹಾಡುವೆನಯ್ಯಾ ನಿಮ್ಮ ಪರಮಪ್ರಸಾದವನೆ.
ನೋಡಿದರೆ ನೋಡುವೆನಯ್ಯಾ ನಿಮ್ಮ ಪರಮಪ್ರಸಾದವನೆ.
ಬೇಡಿದರೆ ಬೇಡುವೆನಯ್ಯಾ ನಿಮ್ಮ ಪರಮಪ್ರಸಾದವನೆ.
ಕೂಡಿದರೆ ಕೂಡುವೆನಯ್ಯಾ ನಿಮ್ಮ ಪರಮಪ್ರಸಾದವನೆ,
ಅಖಂಡೇಶ್ವರಾ. ॥ ೪೧೫ ॥

೬೫೯

ಆದಿಪ್ರಸಾದ, ಅನಾದಿಪ್ರಸಾದ,
ವೇದಕ್ಕೆ ನಿಲುಕದ ಅಭೇದ್ಯಪ್ರಸಾದ !
ಅಖಂಡೇಶ್ವರನ ಅವಿರಳಪ್ರಸಾದ
ಎನಗೆ ಸಾಧ್ಯವಾಯಿತ್ತು ನೋಡಾ ! ॥ ೪೧೬ ॥

೬೬೦

ನಿಮ್ಮ ಪ್ರಸಾದವೆನಗೆ ತನುವಾಯಿತ್ತು,
ನಿಮ್ಮ ಪ್ರಸಾದವೆನಗೆ ಮನವಾಯಿತ್ತು
ನಿಮ್ಮ ಪ್ರಸಾದವೆನಗೆ ಪ್ರಾಣವಾಯಿತ್ತು,
ನಿಮ್ಮ ಪ್ರಸಾದವೆನಗೆ ಜೀವವಾಯಿತ್ತು,
ನಿಮ್ಮ ಪ್ರಸಾದವೆನಗೆ ಕರಣೇಂದ್ರಿಯ ವಿಷಯಂಗಳಾದವು.
ಇದು ಕಾರಣ, ಅಖಂಡೇಶ್ವರಾ,
ನಿಮ್ಮ ಮಹಾಪ್ರಸಾದದ ನಿಲುವಿನೊಳಗೆ
ಎರಡಳಿದು ಪರಮಸುಖಿಯಾಗಿರ್ದೆನಯ್ಯಾ. ॥ ೪೧೭ ॥

೬೬೧

ಎನ್ನ ನೇತ್ರವು ನಿಮ್ಮ ಪ್ರಸಾದವನೆ ನೋಡುತಿರ್ಪುದು.
ಎನ್ನ ಶ್ರೋತ್ರವು ನಿಮ್ಮ ಪ್ರಸಾದವನೆ ಕೇಳುತಿರ್ಪುದಯ್ಯ.
ಎನ್ನ ನಾಸಿಕವು ನಿಮ್ಮ ಪ್ರಸಾದವನೆ ವಾಸಿಸುತಿರ್ಪುದು.
ಎನ್ನ ಜಿಹ್ವೆಯು ನಿಮ್ಮ ಪ್ರಸಾದವನೆ ಪಾಡುತಿರ್ಪುದು.
ಎನ್ನ ಸರ್ವಾಂಗವು ನಿಮ್ಮ ಪ್ರಸಾದವನೆ ಸ್ಪರ್ಶಿಸುತಿರ್ಪುದು
ಅಖಂಡೇಶ್ವರಾ. ॥ ೪೧೮ ॥

೬೬೨

ಕರಸ್ಥಲದ ಲಿಂಗವನು ಮನಸ್ಥಲದಲ್ಲಿ ಕುಳ್ಳಿರಿಸಿ,
ಘ್ರಾಣವೆಂಬ ಭಾಜನದಲ್ಲಿ ಸುಗಂಧ ಪದಾರ್ಥವ ಗಡಣಿಸಿ
ಸುಚಿತ್ತವೆಂಬ ಹಸ್ತದಿಂದರ್ಪಿಸಿ,
ಆ ಸುಗಂಧ ಪ್ರಸಾದವ ಗ್ರಹಿಸಬಲ್ಲಾತನೆ ಪ್ರಸಾದಿ.
ಜಿಹ್ವೆಯೆಂಬ ಭಾಜನದಲ್ಲಿ ಸುರಸಪದಾರ್ಥವ ಗಡಣಿಸಿ
ಸುಬುದ್ಧಿಯೆಂಬ ಹಸ್ತದಿಂದರ್ಪಿಸಿ,
ಆ ಸುರಸಪ್ರಸಾದವ ಗ್ರಹಿಸಬಲ್ಲಾತನೆ ಪ್ರಸಾದಿ.
ನೇತ್ರವೆಂಬ ಭಾಜನದಲ್ಲಿ ಸುರೂಪುಪದಾರ್ಥವ ಗಡಣಿಸಿ,
ನಿರಹಂಕಾರವೆಂಬ ಹಸ್ತದಿಂದರ್ಪಿಸಿ,
ಆ ಸುರೂಪುಪ್ರಸಾದವ ಗ್ರಹಿಸಬಲ್ಲಾತನೆ ಪ್ರಸಾದಿ.
ತ್ವಕ್ಕೆಂಬ ಭಾಜನದಲ್ಲಿ ಸುಸ್ಪರ್ಶನ ಪದಾರ್ಥವ ಗಡಣಿಸಿ,
ಸುಮನವೆಂಬ ಹಸ್ತದಿಂದರ್ಪಿಸಿ,
ಆ ಸುಸ್ಪರ್ಶನಪ್ರಸಾದವ ಗ್ರಹಿಸಬಲ್ಲಾತನೆ ಪ್ರಸಾದಿ.
ಶ್ರೋತ್ರವೆಂಬ ಭಾಜನದಲ್ಲಿ ಸುಶಬ್ದಪದಾರ್ಥವ ಗಡಣಿಸಿ,
ಸುಜ್ಞಾನವೆಂಬ ಹಸ್ತದಿಂದರ್ಪಿಸಿ,
ಆ ಸುಶಬ್ದಪ್ರಸಾದವ ಗ್ರಹಿಸಬಲ್ಲಾತನ ಪ್ರಸಾದಿ.

ಹೃದಯವೆಂಬ ಭಾಜನದಲ್ಲಿ ಸುತೃಪ್ತಿ ಪದಾರ್ಥವ ಗಡಣೆಸಿ,
ಸದ್ಭಾವವೆಂಬ ಹಸ್ತದಿಂದರ್ಪಿಸಿ,
ಆ ಸುತೃಪ್ತಿಪ್ರಸಾದವ ಗ್ರಹಿಸಬಲ್ಲಾತನೆ ಪ್ರಸಾದಿ.
ಇಂತೀ ಷಡಿಂದ್ರಿಯಂಗಳೆಂಬ ಷಡ್ವಿಧ ಭಾಜನದಲ್ಲಿ
ಷಡ್ವಿಧ ಪದಾರ್ಥವ ಗಡಣೆಸಿ ಷಡ್ವಿಧ ಹಸ್ತದಿಂದರ್ಪಿಸಿ,
ಷಡ್ವಿಧ ಪ್ರಸಾದವ ಗ್ರಹಿಸಲರಿಯದೆ
ಬರಿದೆ ಪ್ರಸಾದಿಗಳೆಂದಡೆ ನಗುವನಯ್ಯಾ ನಮ್ಮ ಅಖಂಡೇಶ್ವರನು. ||೪೧೯||

**೬೬೩**

ಲಿಂಗಘ್ರಾಣದಲ್ಲಿ ಲಿಂಗಕ್ಕೆ ಲಿಂಗಗಂಧವನರ್ಪಿಸಿ,
ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮ ಪ್ರಸಾದಿ.
ಲಿಂಗಜಿಹ್ವೆಯಲ್ಲಿ ಲಿಂಗಕ್ಕೆ ಲಿಂಗರುಚಿಯನರ್ಪಿಸಿ
ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮ ಪ್ರಸಾದಿ.
ಲಿಂಗನೇತ್ರದಲ್ಲಿ ಲಿಂಗಕ್ಕೆ ಲಿಂಗರೂಪನರ್ಪಿಸಿ
ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮ ಪ್ರಸಾದಿ.
ಲಿಂಗತ್ವಕ್ಕಿನಲ್ಲಿ ಲಿಂಗಕ್ಕೆ ಲಿಂಗಸ್ಪರ್ಶವನರ್ಪಿಸಿ
ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮ ಪ್ರಸಾದಿ.
ಲಿಂಗಶ್ರೋತ್ರದಲ್ಲಿ ಲಿಂಗಕ್ಕೆ ಲಿಂಗಶಬ್ದವನರ್ಪಿಸಿ
ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮ ಪ್ರಸಾದಿ.
ಲಿಂಗಹೃದಯದಲ್ಲಿ ಲಿಂಗಕ್ಕೆ ಲಿಂಗತೃಪ್ತಿಯನರ್ಪಿಸಿ
ಲಿಂಗಪ್ರಸಾದವ ಗ್ರಹಿಸುತಿರ್ಪನಯ್ಯಾ ನಿಮ್ಮ ಪ್ರಸಾದಿ.
ಇಂತೀ ಒಳಹೊರಗೆ ತೆರಹಿಲ್ಲದೆ
ಲಿಂಗಕ್ಕೆ ಲಿಂಗವನರ್ಪಿಸಿ, ಲಿಂಗಪ್ರಸಾದವ ಗ್ರಹಿಸಿ,
ಘನಲಿಂಗವಾಗಿರ್ಪ ಮಹಾಪ್ರಸಾದಿಗಳ ಶ್ರೀಚರಣಕ್ಕೆ
ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. || ೪೨೦ ||

**೬೬೪**

ಎನ್ನ ಘ್ರಾಣದ ಪರಿಣಾಮು ನಿಮಗರ್ಪಿತವಯ್ಯಾ.
ಎನ್ನ ಜಿಹ್ವೆಯ ಪರಿಣಾಮು ನಿಮಗರ್ಪಿತವಯ್ಯಾ.
ಎನ್ನ ನೇತ್ರದ ಪರಿಣಾಮು ನಿಮಗರ್ಪಿತವಯ್ಯಾ.
ಎನ್ನ ತ್ವಕ್ಕಿನ ಪರಿಣಾಮು ನಿಮಗರ್ಪಿತವಯ್ಯಾ.
ಎನ್ನ ಶ್ರೋತ್ರದ ಪರಿಣಾಮು ನಿಮಗರ್ಪಿತವಯ್ಯಾ.
ಎನ್ನ ಹೃದಯದ ಪರಿಣಾಮು ನಿಮಗರ್ಪಿತವಯ್ಯಾ.
ಎನ್ನ ಸರ್ವಾಂಗದ ಪರಿಣಾಮು ನಿಮಗರ್ಪಿತವಯ್ಯಾ ಅಖಂಡೇಶ್ವರಾ.
|| ೪೨೧ ||

೬೬೫

ಎನ್ನ ಘ್ರಾಣದ ಕೊನೆಯಲ್ಲಿ ಕುಳ್ಳಿರ್ದು
ಷಡ್ವಿಧಗಂಧವೆಂಬ ಭಕ್ತಿಪದಾರ್ಥವ ಕೈಕೊಂಡು
ಎನಗೆ ಮುಕ್ತಿಪ್ರಸಾದವ ಕರುಣಿಸುವಾತನು ನೀನೆ ಅಯ್ಯಾ.
ಎನ್ನ ಜಿಹ್ವೆಯ ಕೊನೆಯಲ್ಲಿ ಕುಳ್ಳಿರ್ದು
ಷಡ್ವಿಧರಸವೆಂಬ ಭಕ್ತಿಪದಾರ್ಥವ ಕೈಕೊಂಡು
ಎನಗೆ ಮುಕ್ತಿಪ್ರಸಾದವ ಕರುಣಿಸುವಾತನು ನೀನೆ ಅಯ್ಯಾ.
ಎನ್ನ ನೇತ್ರದ ಕೊನೆಯಲ್ಲಿ ಕುಳ್ಳಿರ್ದು
ಷಡ್ವಿಧರೂಪವೆಂಬ ಭಕ್ತಿಪದಾರ್ಥವ ಕೈಕೊಂಡು
ಎನಗೆ ಮುಕ್ತಿಪ್ರಸಾದವ ಕರುಣಿಸುವಾತನು ನೀನೆ ಅಯ್ಯಾ.
ಎನ್ನ ತ್ವಕ್ಕಿನ ಕೊನೆಯಲ್ಲಿ ಕುಳ್ಳಿರ್ದು
ಷಡ್ವಿಧಸ್ಪರ್ಶನವೆಂಬ ಭಕ್ತಿಪದಾರ್ಥವ ಕೈಕೊಂಡು
ಎನಗೆ ಮುಕ್ತಿಪ್ರಸಾದವ ಕರುಣಿಸುವಾತನು ನೀನೆ ಅಯ್ಯಾ.
ಎನ್ನ ಶ್ರೋತ್ರದ ಕೊನೆಯಲ್ಲಿ ಕುಳ್ಳಿರ್ದು
ಷಡ್ವಿಧಶಬ್ದವೆಂಬ ಭಕ್ತಿಪದಾರ್ಥವ ಕೈಕೊಂಡು
ಎನಗೆ ಮುಕ್ತಿಪ್ರಸಾದವ ಕುರಣಿಸುವಾತನು ನೀನೆ ಅಯ್ಯಾ.
ಎನ್ನ ಹೃದಯದ ಕೊನೆಯಲ್ಲಿ ಕುಳ್ಳಿರ್ದು
ಷಡ್ವಿಧ ತೃಪ್ತಿಯೆಂಬ ಭಕ್ತಿಪದಾರ್ಥವ ಕೈಕೊಂಡು,
ಎನಗೆ ಮುಕ್ತಿಪ್ರಸಾದವ ಕರುಣಿಸುವಾತನು ನೀನೆ ಅಯ್ಯಾ
ಅಖಂಡೇಶ್ವರಾ. || ೮೨೨ ||

೬೬೬

ಎನ್ನ ಘ್ರಾಣ ಗಂಧವ ಗ್ರಹಿಸುವುದಕ್ಕೆ ಮೊದಲೆ
ನಿಮಗರ್ಪಿತವಾಯಿತ್ತಯ್ಯಾ.
ಎನ್ನ ಜಿಹ್ವೆ ರುಚಿಯ ಗ್ರಹಿಸುವುದಕ್ಕೆ ಮೊದಲೆ
ನಿಮಗರ್ಪಿತವಾಯಿತ್ತಯ್ಯಾ.
ಎನ್ನ ನೇತ್ರ ರೂಪವ ಗ್ರಹಿಸುವುದಕ್ಕೆ ಮೊದಲೆ
ನಿಮಗರ್ಪಿತವಾಯಿತ್ತಯ್ಯಾ.
ಎನ್ನ ತ್ವಕ್ಕುಸ್ಪರ್ಶನವ ಗ್ರಹಿಸುವುದಕ್ಕೆ ಮೊದಲೆ
ನಿಮಗರ್ಪಿತವಾಯಿತ್ತಯ್ಯಾ.
ಎನ್ನ ಶ್ರೋತ್ರ ಶಬ್ದವ ಗ್ರಹಿಸುವುದಕ್ಕೆ ಮೊದಲೆ
ನಿಮಗರ್ಪಿತವಾಯಿತ್ತಯ್ಯಾ.
ಇದು ಕಾರಣ ಅಖಂಡೇಶ್ವರಾ,
ನಾ ನಿಮಗರಿದು ಕೊಡಬೇಕೆಂಬ
ಖಂಡಿತಭಾವವು ಅಖಂಡಿತವಾಯಿತ್ತಯ್ಯಾ. || ೮೨೩ ||

**೬೬೭**

ಎನ್ನ ಘ್ರಾಣ ಸಮರಸವಾಯಿತ್ತಯ್ಯಾ
ನಿಮ್ಮ ಗಂಧಪ್ರಸಾದವ ಗ್ರಹಿಸಿ ನಿಮ್ಮೊಳಗೆ.
ಎನ್ನ ಜಿಹ್ವೆ ಸಮರಸವಾಯಿತ್ತಯ್ಯಾ
ನಿಮ್ಮ ರುಚಿಪ್ರಸಾದವ ಗ್ರಹಿಸಿ ನಿಮ್ಮೊಳಗೆ.
ಎನ್ನ ನೇತ್ರ ಸಮರಸವಾಯಿತ್ತಯ್ಯಾ
ನಿಮ್ಮ ರೂಪುಪ್ರಸಾದವ ಗ್ರಹಿಸಿ ನಿಮ್ಮೊಳಗೆ.
ಎನ್ನ ತ್ವಕ್ಕು ಸಮರಸವಾಯಿತ್ತಯ್ಯಾ
ನಿಮ್ಮ ಸ್ಪರ್ಶನಪ್ರಸಾದವ ಗ್ರಹಿಸಿ ನಿಮ್ಮೊಳಗೆ.
ಎನ್ನ ಶ್ರೋತ್ರ ಸಮರಸವಾಯಿತ್ತಯ್ಯಾ
ನಿಮ್ಮ ಶಬ್ದಪ್ರಸಾದವ ಗ್ರಹಿಸಿ ನಿಮ್ಮೊಳಗೆ.
ಎನ್ನ ಹೃದಯ ಸಮರಸವಾಯಿತ್ತಯ್ಯಾ
ನಿಮ್ಮ ತೃಪ್ತಿಪ್ರಸಾದವ ಗ್ರಹಿಸಿ ನಿಮ್ಮೊಳಗೆ.
ಎನ್ನ ಸರ್ವಾಂಗ ಸಮರಸವಾಯಿತ್ತಯ್ಯಾ
ನಿಮ್ಮ ಮಹಾಪ್ರಸಾದವ ಗ್ರಹಿಸಿ ನಿಮ್ಮೊಳಗೆ ಅಖಂಡೇಶ್ವರಾ. || ೪೨೪ ||

**೬೬೮**

ಎನ್ನ ತನು ನಿಮ್ಮ ಪ್ರಸಾದವನೆ ಸೋಂಕುತಿರ್ಪುದಯ್ಯಾ.
ಎನ್ನ ಮನ ನಿಮ್ಮ ಪ್ರಸಾದವನೆ ನೆನೆಯುತಿರ್ಪುದಯ್ಯಾ.
ಎನ್ನ ಪ್ರಾಣ ನಿಮ್ಮ ಪ್ರಸಾದವನೆ ಹಾರಯಿಸುತಿರ್ಪುದಯ್ಯಾ.
ಎನ್ನ ಭಾವ ನಿಮ್ಮ ಪ್ರಸಾದವನೆ ಬಯಸುತಿರ್ಪುದಯ್ಯಾ.
ಎನ್ನ ಕರಣೇಂದ್ರಿಯಂಗಳು ನಿಮ್ಮ ಪ್ರಸಾದವನೆ
ಗ್ರಹಿಸುತಿರ್ಪುವಯ್ಯಾ ಅಖಂಡೇಶ್ವರಾ. || ೪೨೫ ||

**೬೬೯**

ಎನ್ನ ನೇತ್ರ ಪ್ರಸಾದವಾಯಿತ್ತಯ್ಯಾ.
ಎನ್ನ ಶ್ರೋತ್ರ ಪ್ರಸಾದವಾಯಿತ್ತಯ್ಯಾ.
ಎನ್ನ ಘ್ರಾಣ ಪ್ರಸಾದವಾಯಿತ್ತಯ್ಯಾ.
ಎನ್ನ ಜಿಹ್ವೆ ಪ್ರಸಾದವಾಯಿತ್ತಯ್ಯಾ.
ಎನ್ನ ತ್ವಕ್ಕು ಪ್ರಸಾದವಾಯಿತ್ತಯ್ಯಾ.
ಎನ್ನ ತನು ಪ್ರಸಾದವಾಯಿತ್ತಯ್ಯಾ.
ಎನ್ನ ಮನ ಪ್ರಸಾದವಾಯಿತ್ತಯ್ಯಾ.
ಎನ್ನ ಪ್ರಾಣ ಪ್ರಸಾದವಾಯಿತ್ತಯ್ಯಾ.
ಎನ್ನ ಭಾವ ಪ್ರಸಾದವಾಯಿತ್ತಯ್ಯಾ.
ಎನ್ನ ಜೀವ ಪ್ರಸಾದವಾಯಿತ್ತಯ್ಯಾ.

ಎನ್ನ ಸಕಲಕರಣೇಂದ್ರಿಯಂಗಳೆಲ್ಲ ಪ್ರಸಾದವಾಗಿ,
ಅಖಂಡೇಶ್ವರಾ, ನಿಮ್ಮ ಮಹಾಪ್ರಸಾದದ
ಬೆಳಗಿನೊಳಗೆ ಓಲಾಡುತ್ತಿದ್ದೆನಯ್ಯಾ. || ೩೨೬ ||

೬೭೦

ಎನ್ನ ಆಧಿವ್ಯಾಧಿಗಳೆಲ್ಲ ಪ್ರಸಾದವಯ್ಯಾ.
ಎನ್ನ ಆಗುಹೋಗುಗಳೆಲ್ಲ ಪ್ರಸಾದವಯ್ಯಾ.
ಎನ್ನ ತಾಗು ನಿರೋಧಗಳೆಲ್ಲ ಪ್ರಸಾದವಯ್ಯಾ.
ಎನ್ನ ಅರಹುಮರಹುಗಳೆಲ್ಲ ಪ್ರಸಾದವಯ್ಯಾ.
ಎನ್ನ ಸುಖದುಃಖಂಗಳೆಲ್ಲ ಪ್ರಸಾದವಯ್ಯಾ.
ಎನ್ನ ಮಾನಾಪಮಾನಂಗಳೆಲ್ಲ ಪ್ರಸಾದವಯ್ಯಾ.
ಎನ್ನ ಹಾನಿವೃದ್ಧಿಗಳೆಲ್ಲ ಪ್ರಸಾದವಯ್ಯಾ.
ಎನ್ನ ಭಯಭೀತಿಗಳೆಲ್ಲ ಪ್ರಸಾದವಯ್ಯಾ.
ಎನ್ನ ಲಜ್ಜೆಮೋಹಗಳೆಲ್ಲ ಪ್ರಸಾದವಯ್ಯಾ.
ಎನ್ನ ಸಜ್ಜನಸಮತೆಗಳೆಲ್ಲ ಪ್ರಸಾದವಯ್ಯಾ.
ಎನ್ನ ಸುಳುಹು ಸಂಚಾರಗಳೆಲ್ಲ ಪ್ರಸಾದವಯ್ಯಾ.
ಎನ್ನ ಚಿತ್ತಸುಚಿತ್ತಗಳೆಲ್ಲ ಪ್ರಸಾದವಯ್ಯಾ.
ಎನ್ನ ಬುದ್ಧಿಸುಬುದ್ಧಿಗಳೆಲ್ಲ ಪ್ರಸಾದವಯ್ಯಾ.
ಎನ್ನ ಅಹಂಕಾರನಿರಹಂಕಾರಗಳೆಲ್ಲ ಪ್ರಸಾದವಯ್ಯಾ.
ಎನ್ನ ಸುಮನ ವ್ಯಾಕುಲಗಳೆಲ್ಲ ಪ್ರಸಾದವಯ್ಯಾ.
ಎನ್ನ ಜ್ಞಾನ ಸುಜ್ಞಾನಗಳೆಲ್ಲ ಪ್ರಸಾದವಯ್ಯಾ.
ಎನ್ನ ಭಾವ ಸದ್‌ಭಾವಗಳೆಲ್ಲ ಪ್ರಸಾದವಯ್ಯಾ.
ಎನ್ನ ತತ್ವ ತೋರಿಕೆಗಳೆಲ್ಲಾ ಪ್ರಸಾದವಯ್ಯಾ.
ಎನ್ನ ಕರಣೇಂದ್ರಿಯಂಗಳೆಲ್ಲ ಪ್ರಸಾದವಯ್ಯಾ.
ಎನ್ನ ಒಳಹೊರಗುಗಳೆಲ್ಲ ಪ್ರಸಾದವಯ್ಯಾ.
ಎನ್ನ ಕೀಳುಮೇಲುಗಳೆಲ್ಲ ಪ್ರಸಾದವಯ್ಯಾ.
ಎನ್ನ ಎಡಬಲಂಗಳೆಲ್ಲ ಪ್ರಸಾದವಯ್ಯಾ.
ಇಂತಾಗಿ ಅಖಂಡೇಶ್ವರಾ,
ನೀನೆಂಬ ಪ್ರಸಾದಶರಧಿಯೊಳಗ
ನಾನೆಂಬುದು ಮುಳುಗಿ ನೆಲೆದಪ್ಪಿಹೋದೆನಯ್ಯಾ. || ೩೨೭ ||

೬೭೧

ಪೃಥ್ವಿಯಾಕಾಶದೊಳಗೆಲ್ಲ
ನಿಮ್ಮ ಪ್ರಸಾದದ ಬೆಳಗು ತುಂಬಿರ್ಪುದಯ್ಯಾ.
ಸಚರಾಚರದೊಳಗೆಲ್ಲ

ನಿಮ್ಮ ಮಹಾಪ್ರಸಾದದ ಬೆಳಗು ತುಂಬಿರ್ಪುದಯ್ಯಾ.
ಪಿಂಡಬ್ರಹ್ಮಾಂಡದೊಳಹೊರಗೆಲ್ಲ
ನಿಮ್ಮ ಮಹಾಪ್ರಸಾದದ ಬೆಳಗು ತುಂಬಿರ್ಪುದಯ್ಯಾ.
ಎಲ್ಲೆಡೆಯಲ್ಲಿ ನಿಮ್ಮ ಮಹಾಪ್ರಸಾದದ ಬೆಳಗೆ ತುಂಬಿರ್ಪುದಾಗಿ,
ಇಲ್ಲ ಉಂಟು ಎಂಬುದಕ್ಕೆ ತೆರಹಿಲ್ಲವಯ್ಯಾ ಅಖಂಡೇಶ್ವರಾ. ॥ ೪೨೮ ॥

### ೬೭೨

ಕಾಯವಿಲ್ಲದ ಪುರುಷನು ಕಸವಿಲ್ಲದ ಭೂಮಿಯಲ್ಲಿ
ಕಾಮಿತವಿಲ್ಲದ ಬೀಜವ ಬಿತ್ತಲು
ಅದು ಅಂಕುರಿಸಿ ಎಲೆ ಎರಡಾಯಿತ್ತು,
ಶಾಖೆ ಮೂರಾಯಿತ್ತು, ತಳಿರು ಆರಾಯಿತ್ತು,
ಕುಸುಮ ಮೂವತ್ತಾರಾಯಿತ್ತು,
ಕಾಯಿ ಇನ್ನೂರಹದಿನಾರಾಯಿತ್ತು,
ಹಣ್ಣು ವಿಶ್ವಪರಿಪೂರ್ಣವಾಯಿತ್ತು.
ಅದು ಅಖಂಡ ರಸತುಂಬಿ ಬಟ್ಟಬಯಲಲ್ಲಿ ತೊಟ್ಟುಬಿಟ್ಟಿತ್ತು.
ಆ ಹಣ್ಣ ನಾನು ಕಣ್ಣಿಲ್ಲದೆ ನೋಡಿ, ಕೈಯಿಲ್ಲದೆ ಮುಟ್ಟಿ,
ಬಾಯಿಲ್ಲದೆ ಸವಿದು, ಮನವಿಲ್ಲದೆ ಪರಿಣಾಮಿಸಿದೆನಾಗಿ,
ಅಖಂಡೇಶ್ವರನು ತನ್ನೊಳಗೆ ಇಂಬಿಟ್ಟುಕೊಂಡನು. ॥ ೪೨೯ ॥

### ೬೭೩

ಎನ್ನ ತನು ಅಡಗುವುದಕ್ಕೆ
ನಿಮ್ಮ ಪ್ರಸಾದವೆ ಆಶ್ರಯವಾಗಿರ್ಪುದು.
ಎನ್ನ ಮನ ಅಡಗುವುದಕ್ಕೆ
ನಿಮ್ಮ ಪ್ರಸಾದವೇ ಆಶ್ರಯವಾಗಿರ್ಪುದು.
ಎನ್ನ ಕರಣೇಂದ್ರಿಯ ಸಕಲ ಅವಯವಗಳು ಅಡಗುವುದಕ್ಕೆ
ನಿಮ್ಮ ಪ್ರಸಾದವೇ ಆಶ್ರಯವಾಗಿರ್ಪುದು.
ಇದು ಕಾರಣ ಅಖಂಡೇಶ್ವರಾ,
ನಿಮ್ಮ ಪ್ರಸಾದದಲ್ಲಿ ಹುಟ್ಟಿ ನಿಮ್ಮ ಪ್ರಸಾದದಲ್ಲಿ ಬೆಳೆದು
ನಿಮ್ಮ ಪ್ರಸಾದದಲ್ಲಿ ಅಡಗುತಿರ್ಪೆನಾಗಿ
ನಿಮ್ಮ ಪ್ರಸಾದವೆನಗೆ ಪ್ರಾಣವಾಗಿರ್ಪುದಯ್ಯಾ. ॥ ೪೩೦ ॥

### ೬೭೪

ಕಾರ್ಯವಿಲ್ಲದ ಪ್ರಸಾದ, ಕಾರಣವಿಲ್ಲದ ಪ್ರಸಾದ,
ಭಾವವಿಲ್ಲದ ಪ್ರಸಾದ, ಬಯಕೆಯಿಲ್ಲದ ಪ್ರಸಾದ,
ಸೀಮೆಯಿಲ್ಲದ ಪ್ರಸಾದ, ನಿಸ್ಸೀಮೆಯಿಲ್ಲದ ಪ್ರಸಾದ,

ಅಖಂಡೇಶ್ವರನೆಂಬ ಮಹಾಘನಪ್ರಸಾದದೊಳಗೆ
ನಾನೆತ್ತ ಹೋದೆನೆಂದರಿಯೆ. || ೪೩೧ ||

೬೭೫

ಭಯವಿಲ್ಲದ ಪ್ರಸಾದ, ನಿರ್ಭಯವಿಲ್ಲದ ಪ್ರಸಾದ,
ಶೂನ್ಯವಿಲ್ಲದ ಪ್ರಸಾದ, ನಿಶ್ಶೂನ್ಯವಿಲ್ಲದ ಪ್ರಸಾದ,
ಸುರಾಳವಿಲ್ಲದ ಪ್ರಸಾದ, ನಿರಾಳವಿಲ್ಲದ ಪ್ರಸಾದ,
ಅಖಂಡೇಶ್ವರನೆಂಬ ಅನಾದಿಯಿಂದತತ್ತ್ವವಾದ
ಅನುಪಮ ಪ್ರಸಾದದೊಳಗೆ ಮುಳುಗಿ ನಾನೆತ್ತ ಹೋದೆನೆಂದರಿಯೆ. || ೪೩೨ ||

೬೭೬

ಅಡಿಮುಡಿಯಿಲ್ಲದ ಪ್ರಸಾದ, ನಡುಕಡೆಯಿಲ್ಲದ ಪ್ರಸಾದ,
ಎಡೆಬಿಡುವಿಲ್ಲದ ಪ್ರಸಾದ,
ಅಖಂಡೇಶ್ವರನೆಂಬ ಮಹಾಘನ ಪರಾತ್ಪರ
ಪರಿಪೂರ್ಣಪ್ರಸಾದದೊಳಗೆ ಮನವಡಗಿ
ನೆನಹುನಿಷ್ಪತ್ತಿಯಾಗಿ ಏನೆಂದರಿಯದಿರ್ದೆನಯ್ಯಾ. || ೪೩೩ ||

## ಪ್ರಾಣಲಿಂಗಸ್ಥಲ

೬೭೭

ಪಂಚಪ್ರಾಣವಾಯುಗಳ ಸಂಚಲಗುಣವನಳಿದಿರಬೇಕು.
ಮುಂಚುವ ಕರಣಂಗಳ ವಂಚನೆಯನತಿಗಳೆದಿರಬೇಕು.
ಚಿತ್ತವು ಲಿಂಗದಲ್ಲಿ ಅಚ್ಚೊತ್ತಿದಂತಿರಬೇಕು.
ಪ್ರಾಣ ಲಿಂಗದಲ್ಲಿ ಕೂಡಿ, ಲಿಂಗ ಪ್ರಾಣದಲ್ಲಿ ಕೂಡಿ,
ಭಿನ್ನವಿಲ್ಲದೆ ಏಕಸಮರಸವಾಗಿರಬೇಕು.
ಸುಖದುಃಖ ನಾಸ್ತಿಯಾಗಿರಬೇಕು.
ಇಷ್ಟುಳ್ಳಾತನೆ ಪ್ರಾಣಲಿಂಗಿ.
ಅದೆಂತೆಂದೊಡೆ :
''ವಾಯುಪ್ರಾಣಗುಣೇ ಲಿಂಗೇ ಲಿಂಗಪ್ರಾಣೇ ಸಮಾಹಿತಃ।
ಸುಖದುಃಖಭಯಮ್ ನಾಸ್ತಿ ಪ್ರಾಣಲಿಂಗಿಸ್ಥಲಂ ಭವೇತ್ ॥ ''
ಎಂದುದಾಗಿ, ಇಂತಪ್ಪ ಪ್ರಾಣಲಿಂಗಿಗಳ ಶ್ರೀಪಾದಕ್ಕೆ
ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. || ೪೩೪ ||

೬೭೮

ಪ್ರಾಣಲಿಂಗ ಪ್ರಾಣಲಿಂಗವೆಂದು
ಪ್ರಾಣಲಿಂಗನ ನುಡಿಗಡಣವ ಕಲಿತು ನುಡಿವರೆಲ್ಲ

ಪ್ರಾಣಲಿಂಗದ ನೆಲೆಯನರಿಯರು ;
ಪ್ರಾಣಲಿಂಗದ ನಿಲವನರಿಯರು ;
ಪ್ರಾಣಲಿಂಗದ ಹೊಲಬನರಿಯರು;
ಪ್ರಾಣಲಿಂಗದ ಸ್ಥಲವನರಿಯರು ;
ಪ್ರಾಣಲಿಂಗದ ಬೆಳಗನರಿಯರು ;
ಪ್ರಾಣಲಿಂಗದ ಕಳೆಯನರಿಯರು ;
ಪ್ರಾಣಲಿಂಗದ ಘನವನರಿಯರು ;
ಪ್ರಾಣಲಿಂಗದ ಘನವ
ಅನಾದಿ ಸಂಸಿದ್ಧವಾದ ನಿಮ್ಮ ಪ್ರಾಣಲಿಂಗಿಯೆ ಬಲ್ಲನಲ್ಲದೆ
ಉಳಿದ ಪ್ರಪಂಚದೇಹಿಗಳೆತ್ತ ಬಲ್ಲರಯ್ಯಾ ಅಖಂಡೇಶ್ವರಾ. || ೪೩೫ ||

**೬೭೯**

ಕ್ಷೀರದ ರುಚಿಯ ಹಂಸಬಲ್ಲುದಲ್ಲದೆ,
ನೀರೊಳಗಿರ್ಪ ನೀರಗೋಳಿ ಎತ್ತಬಲ್ಲುದಯ್ಯಾ ?
ಕಬ್ಬಿನ ಸ್ವಾದವ ಮದಗಜಬಲ್ಲುದಲ್ಲದೆ,
ಸೋಗೆಯ ತಿಂಬ ಕುರಿ ಎತ್ತಬಲ್ಲುದಯ್ಯಾ ?
ಪುಷ್ಪದ ಪರಿಮಳವ ಭೃಂಗಬಲ್ಲುದಲ್ಲದೆ,
ಮರಕಡಿಯುವ ಗುಂಗೆಯಹುಳ ಎತ್ತ ಬಲ್ಲುದಯ್ಯಾ ?
ಆದಿಸ್ಥಳಕುಳದ ನಿರ್ಣಯವ ಅನಾದಿಶರಣ ಬಲ್ಲನಲ್ಲದೆ
ಈ ಲೋಕದ ಗಾದೆಯ ಮನುಜರು ಎತ್ತ ಬಲ್ಲರಯ್ಯಾ ಅಖಂಡೇಶ್ವರಾ ?
|| ೪೩೬ ||

**೬೮೦**

ಪಿಂಡದೊಳಗೆ ಪ್ರಾಣವಿರ್ಪುದ ಎಲ್ಲರೂ ಬಲ್ಲರಲ್ಲದೆ,
ಪ್ರಾಣದೊಳಗೆ ಶಬ್ದವಿರ್ಪುದನಾರೂ ಅರಿಯರಲ್ಲ,
ಪ್ರಾಣದೊಳಗೆ ಶಬ್ದವಿರ್ಪುದ ಎಲ್ಲರೂ ಬಲ್ಲರಲ್ಲದೆ,
ಶಬ್ದದೊಳಗೆ ನಾದವಿರ್ಪುದನಾರೂ ಅರಿಯರಲ್ಲ,
ಶಬ್ದದೊಳಗೆ ನಾದವಿರ್ಪುದ ಎಲ್ಲರೂ ಬಲ್ಲರಲ್ಲದೆ,
ನಾದದೊಳಗೆ ಮಂತ್ರವಿರ್ಪುದನಾರೂ ಅರಿಯರಲ್ಲ,
ಮಂತ್ರದೊಳಗೆ ಶಿವನಿರ್ಪುದ ಎಲ್ಲರೂ ಬಲ್ಲರಲ್ಲದೆ,
ಶಿವನ ಕೂಡುವ ಅವಿರಳಸಮರಸವನಾರೂ
ಅರಿಯರಲ್ಲ ಅಖಂಡೇಶ್ವರಾ. || ೪೩೭ ||

**೬೮೧**

ವೇದ ಶಾಸ್ತ್ರ ಆಗಮ ಪುರಾಣ ತರ್ಕ
ವ್ಯಾಕರಣ ಇತಿಹಾಸಂಗಳ

ಓದಿ ಕೇಳಿ ಹೇಳುವಾತ ಜಾಣನೆ ? ಅಲ್ಲಲ್ಲ.
ಜಾತಿಗೊಂದು ಮಾತು ಕಲಿತು
ಸರ್ವರಿಗೆ ನೀತಿ ಹೇಳುವಾತ ಜಾಣನೇ ? ಅಲ್ಲಲ್ಲ.
ಮತ್ತಾರು ಜಾಣರೆಂದಡೆ :
ಮತ್ತಮತಿಯೆಂಬ ಕತ್ತಲೆಯ ಕಳೆದು,
ತಥ್ಯಮಿಥ್ಯ ರಾಗದ್ವೇಷವನಳಿದು
ನಿತ್ಯ ಲಿಂಗದಲ್ಲಿ ಚಿತ್ತವಡಗಿರ್ಪ
ಚಿನ್ಮಯಶರಣನೇ ಜಾಣನಯ್ಯಾ ಅಖಂಡೇಶ್ವರಾ. || ೪೩೮ ||

**೭೮೨**

ವೇದವನೋದಿದ ವೇದಜ್ಞಾನಿಗಳು ಸರಿಯಲ್ಲ.
ಶಾಸ್ತ್ರವನೋದಿದ ಶಾಸ್ತ್ರಜ್ಞಾನಿಗಳು ಸರಿಯಲ್ಲ.
ಆಗಮವನೋದಿದ ಆಗಮಜ್ಞಾನಿಗಳು ಸರಿಯಲ್ಲ.
ಆದಿಯನಾದಿಯಿಂದತ್ತತ್ತಲಾದ
ಮಹಾಘನವಸ್ತುವನೊಡಗೂಡಿದ ಶರಣಂಗೆ
ಇವರಾರೂ ಸರಿಯಲ್ಲವಯ್ಯಾ ಅಖಂಡೇಶ್ವರಾ. || ೪೩೯ ||

**೭೮೩**

ವೇದಂಗಳು ನಿಮ್ಮ ಭೇದಿಸಿ ಕಂಡಿಹೆವೆಂದು
ಕಾಣಲರಿಯದೆ ಬಳಲಿಬೆಂಡಾಗಿ ಹೋದುವು.
ಶಾಸ್ತ್ರಂಗಳು ನಿಮ್ಮ ಸಾಧಿಸಿ ಕಂಡಿಹೆವೆಂದು
ಕಾಣಲರಿಯದೆ ಸಂದೇಹಕ್ಕೊಳಗಾಗಿ ಹೋದುವು.
ಆಗಮಂಗಳು ನಿಮ್ಮನರಿದು ಕಂಡಿಹೆವೆಂದು
ಕಾಣಲರಿಯದೆ ಮೂಗರಾಗಿ ಹೋದುವು.
ಇಂತೀ ವೇದ ಶಾಸ್ತ್ರ ಆಗಮಂಗಳನೋದಿ ನಿಮ್ಮ
ಕಂಡಿಹೆನೆಂಬವರೆಲ್ಲ ಇನ್ನೆಂತು ಕಾಂಬುವರಯ್ಯಾ ಅಖಂಡೇಶ್ವರಾ. ? || ೪೪೦||

**೭೮೪**

ವೇದಂಗಳಿಗಭೇದ್ಯವಾದ ಶಿವನ
ಭೇದಿಸಿ ಕಂಡರು ನೋಡಾ ಶರಣರು.
ಶಾಸ್ತ್ರಂಗಳಿಗಸಾಧ್ಯವಾದ ಶಿವನ
ಸಾಧಿಸಿ ಕಂಡರು ನೋಡಾ ಶರಣರು.
ಆಗಮಂಗಳಿಗತಿರಹಸ್ಯವಾದ ಶಿವನ
ಅರಿದು ಕಂಡರು ನೋಡಾ ಶರಣರು.
ಅಗಮ್ಯ ಅಪ್ರಮಾಣವಾದ

ಪರಶಿವನ ಪ್ರಮಾಣಿಸಿ ಕಂಡು
ಒಳಪೊಕ್ಕು ಬೆರಸಿದರು ನೋಡಾ
ನಮ್ಮ ಅಖಂಡೇಶ್ವರನ ಶರಣರು. || ೪೪೧ ||

೬೮೫

ಇದಿರ ಹಳಿದು ತನ್ನ ಬಣ್ಣಿಸುವನ್ನಕ್ಕರ
ಶಿವಜ್ಞಾನಿ ಎಂತಪ್ಪನಯ್ಯಾ ?
ಹಮ್ಮು ಬಿಮ್ಮು ಹೆಮ್ಮೆ ಹಿರಿತನವುಳ್ಳನ್ನಕ್ಕರ
ಶಿವಜ್ಞಾನಿ ಎಂತಪ್ಪನಯ್ಯಾ ?
ಉದಮದ ಗರ್ವ ಅಹಂಕಾರ ಮಮಕಾರವುಳ್ಳನ್ನಕ್ಕರ
ಶಿವಜ್ಞಾನಿ ಎಂತಪ್ಪನಯ್ಯಾ ?
ಆಸೆ ಆಮಿಷ ಕ್ಲೇಶ ತಾಮಸವುಳ್ಳನ್ನಕ್ಕರ
ಶಿವಜ್ಞಾನಿ ಎಂತಪ್ಪನಯ್ಯಾ ?
ಇಂತೀ ಗುಣಂಗಳುಳ್ಳನ್ನಕ್ಕರ
ಶಿವಾನುಭಾವಿಯಂತಪ್ಪನಯ್ಯಾ ಅಖಂಡೇಶ್ವರಾ ? || ೪೪೨ ||

೬೮೬

ಅನುಭಾವ ಅನುಭಾವವೆಂದು ನುಡಿವುತಿರ್ಪರೆಲ್ಲರು.
ಅನುಭಾವದ ಕೀಲವನಾರೂ ಅರಿಯರಲ್ಲ !
ಅನುಭಾವವೆಂದೊಡೆ, ಅಂತರಂಗದ ಹೃದಯಕಮಳದ
ಅಷ್ಟದಳಂಗಳ ಮೆಟ್ಟಿ ಚರಿಸುವ ಜೀವಹಂಸನ ಕೊಂದು,
ಇಂದ್ರದಿಕ್ಕಿನ ಎಸಳಿನಲ್ಲಿ ತೋರುವ ಭಿನ್ನಭಕ್ತಿಯನಳಿದು,
ಅಗ್ನಿದಿಕ್ಕಿನ ಎಸಳಿನಲ್ಲಿ ತೋರುವ ಜಡನಿದ್ರೆಯ ಮರ್ದಿಸಿ,
ಯಮದಿಕ್ಕಿನ ಎಸಳಿನಲ್ಲಿ ತೋರುವ ವ್ಯಸನವಿಕಾರವ ಮಸುಳಿಸಿ,
ನೈಋತ್ಯದಿಕ್ಕಿನ ಎಸಳಿನಲ್ಲಿ ತೋರುವ
ಪಾಪದ ದುಷ್ಕೃತವ ಪಲ್ಲಟಿಸಿ,
ವರುಣದಿಕ್ಕಿನ ಎಸಳಿನಲ್ಲಿ ತೋರುವ
ಮಂದಗಮನವ ಪರಿಹರಿಸಿ,
ವಾಯುವ್ಯದಿಕ್ಕಿನ ಎಸಳಿನಲ್ಲಿ ತೋರುವ ದುಷ್ಟಾಚಾರವ ದೂರಮಾಡಿ,
ಕುಬೇರದಿಕ್ಕಿನ ಎಸಳಿನಲ್ಲಿ ತೋರುವ
ದ್ರವ್ಯಾಪೇಕ್ಷೆಯ ಧಿಕ್ಕರಿಸಿ, ಈಶಾನ್ಯದಿಕ್ಕಿನ ಎಸಳಿನಲ್ಲಿ ತೋರುವ
ವನಿತಾದಿ ವಿಷಯ ಪ್ರಪಂಚುಗಳ ಈಡಾಡಿ ನೂಂಕಿ,
ಇಂತೀ ಅಷ್ಟದಳಂಗಳ ಹಿಡಿದು ತೋರುವ ಪ್ರಕೃತಿಗುಣಂಗಳ ನಷ್ಟಮಾಡಿ,
ನಟ್ಟನಡು ಚೌದಳಮಧ್ಯದಲ್ಲಿರ್ಪ ಪರಬ್ರಹ್ಮವನು
ನೆಟ್ಟನೆ ಕೂಡಿ, ಅಷ್ಟಾವಧಾನಿಯಾಗಿ,

ಅಚಲಿತಜ್ಞಾನದಲ್ಲಿ ಸುಳಿಯಬಲ್ಲಡೆ
ಆತನೆ ನಿಜಾನುಭಾವಿ, ಆತನೆ ನಿತ್ಯಮುಕ್ತನು, ಆತನೆ ನಿರ್ಭೇದ್ಯನು.
ಇಂತೀ ಭೇದವನರಿಯದೆ, ಮಾತುಕಲಿತ ಭೂತನಂತೆ
ಆ ಮಾತು ಈ ಮಾತು ಹೋ ಮಾತುಗಳ ಕಲಿತು
ಕಂಡಕಂಡಲ್ಲಿ ನಿಂದನಿಂದಲ್ಲಿ ಮುಂದುವರಿದು ಹರಟೆಗುಟ್ಟುವ
ಒಣ ಹರಟೆಗಾರರ ಶಿವಾನುಭಾವಿಗಳೆಂತೆಂಬೆನಯ್ಯಾ ಅಖಂಡೇಶ್ವರಾ ?
|| ೪೪೩ ||

೬೮೭

ತನುವಿನ ಮಧ್ಯದಲ್ಲಿ ಹೂಳಿರ್ದ ಇಷ್ಟಲಿಂಗದಲ್ಲಿ
ತನುವನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು.
ಮನದ ಮಧ್ಯದಲ್ಲಿ ಹೂಳಿರ್ದ ಪ್ರಾಣಲಿಂಗದಲ್ಲಿ
ಮನವ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು.
ಜೀವನ ಮಧ್ಯದಲ್ಲಿ ಹೂಳಿರ್ದ ಭಾವಲಿಂಗದಲ್ಲಿ
ಜೀವನ ನಿಕ್ಷೇಪವ ಮಾಡಬಲ್ಲರೆ ಅನುಭಾವಿಯೆಂಬೆನು.
ಇಂತೀ ಅನುಭಾವದ ಅನುವನರಿಯದೆ
ತನುವಿನ ಕೈಯಲ್ಲಿ ಘನಲಿಂಗವ ಹಿಡಿದಿರ್ದಡೇನು
ಅದು ಹುಟ್ಟುಗುರುಡನ ಕೈಯ್ಯ ಕನ್ನಡಿಯ
ಕೊಟ್ಟಂತೆ ಕಾಣಾ ಅಖಂಡೇಶ್ವರಾ. || ೪೪೪ ||

೬೮೮

ಅನುಭಾವಿಯಾದಡೆ ತಿರುಳುಕರಗಿದ
ಹುರಿದ ಬೀಜದಂತಿರಬೇಕು.
ಅನುಭಾವಿಯಾದಡೆ ಸುಟ್ಟ ಸರವೆಯಂತಿರಬೇಕು.
ಅನುಭಾವಿಯಾದಡೆ ದಗ್ಧಪಟದಂತಿರಬೇಕು.
ಅನುಭಾವಿಯಾದಡೆ ದರ್ಪಣದೊಳಗಣ ಪ್ರತಿಬಿಂಬದಂತಿರಬೇಕು.
ಅನುಭಾವಿಯಾದಡೆ ಕಡೆದಿಳುಹಿದ ಕಪ್ಪುರದ ಪುತ್ಥಳಿಯಂತಿರಬೇಕು.
ಇಂತಪ್ಪ ಮಹಾನುಭಾವಿಗಳು
ಆವ ಲೋಕದೊಳಗೂ ಅಪೂರ್ವವಯ್ಯಾ ಅಖಂಡೇಶ್ವರಾ. || ೪೪೫ ||

೬೮೯

ಲಿಂಗದ ನಡೆ, ಲಿಂಗದ ನುಡಿ,
ಲಿಂಗದ ನೋಟ, ಲಿಂಗದ ಕೂಟ, ಲಿಂಗದ ಕೂಟ,
ಲಿಂಗದಲ್ಲಿ ಮನವಡಗಿರ್ದ, ಲಿಂಗಾನುಭಾವಿಗಳ
ಸಂಗದಲ್ಲಿರಿಸಿ ಸಲಹಯ್ಯಾ ಎನ್ನ ಅಖಂಡೇಶ್ವರಾ. || ೪೪೬ ||

೬೯೦

ಕಾಯಜೀವದ ಕೀಲವನರಿದು
ಜನನ ಮರಣಂಗಳಾಯಾಸವಳಿದು
ಅಂಗಲಿಂಗದೊಳಗೇಕಾರ್ಥವ ಮಾಡುವ ಭೇದವೆಂತೆಂದಡೆ :
ಪಂಚಭೂತಂಗಳ ಪೂರ್ವಾಶ್ರಯವನಳಿದು
ಪಂಚಕರಣಂಗಳ ಹಂಚುಹರಿಮಾಡಿ,
ಕರ್ಮಬುದ್ಧೀಂದ್ರಿಯಂಗಳ ಮರ್ದಿಸಿ,
ದಶವಾಯುಗಳ ಹಸಗೆಡಿಸಿ
ಕರಣಚತುಷ್ಟಯಂಗಳ ಕಾಲಮುರಿದು
ಪಂಚವಿಂಶತಿ ತತ್ತ್ವಂಗಳ ವಂಚನೆಯನಳಿದು
ಹತ್ತುನಾಡಿಗಳ ವ್ಯಕ್ತೀಕರಿಸಿ
ಅಷ್ಟತನು ಅಷ್ಟಾತ್ಮಂಗಳ ನಷ್ಟಮಾಡಿ
ಅಂತರಂಗದ ಅಷ್ಟಮದಂಗಳ ಸಂತರಿಸಿ,
ಬಹಿರಂಗದ ಅಷ್ಟಮಂದಗಳ ಬಾಯಟೊಣೆದು,
ಅಷ್ಟಮೂರ್ತಿಮದಂಗಳ ಹಿಟ್ಟುಗುಟ್ಟಿ
ಸಪ್ತಧಾತು ಸಪ್ತವ್ಯಸನಂಗಳ ಸಣ್ಣಿಸಿ
ಷಡೂರ್ಮೆ ಷಡ್‌ವರ್ಗಂಗಳ ಕೆಡೆಮೆಟ್ಟಿ
ಷಡ್‌ಭ್ರಮೆ ಷಡ್‌ಭಾವವಿಕಾರಂಗಳ ಗಂಟಸಡಲಿಸಿ,
ಪಂಚಕೋಶ ಪಂಚಕ್ಲೇಶಂಗಳ ಪರಿಹರಿಸಿ
ಅಂಗಚತುಷ್ಟಯಂಗಳ ಶೃಂಗಾರವಳಿದು
ಗುಣತ್ರಯಂಗಳ ಗೂಡಮುಚ್ಚಿ
ಅಹಂಕಾರತ್ರಯಂಗಳ ಶಂಕೆಗೊಳಗುಮಾಡಿ
ತಾಪತ್ರಯಂಗಳ ತಲ್ಲಣಗೊಳಿಸಿ
ತನುತ್ರಯಂಗಳ ತರಹರಮಾಡಿ
ಜೀವತ್ರಯಂಗಳ ಜೀರ್ಣೀಕರಿಸಿ, ಆತ್ಮತ್ರಯಂಗಳ ಧಾತುಗೆಡಿಸಿ,
ಅವಸ್ಥಾತ್ರಯಂಗಳ ಅವಗುಣವಳಿದು,
ತ್ರಿದೋಷಂಗಳ ಪಲ್ಲಟಗೊಳಿಸಿ, ಭಾವತ್ರಯಂಗಳ ಬಣ್ಣಗೆಡಿಸಿ ,
ದುರ್ಭಾವತ್ರಯಂಗಳ ದೂರಮಾಡಿ,
ಮನತ್ರಯಂಗಳ ಮರ್ದನಮಾಡಿ, ತ್ರಿಕರಣಂಗಳ ಛಿದ್ರಗೊಳಿಸಿ,
ಪಂಚಾಗ್ನಿಗಳ ಸಂಚಲವನತಿಗಳೆದು,
ಇಂತೀ ಅಂಗ ಪ್ರಕೃತಿಗುಣಂಗಳೆಲ್ಲ ನಷ್ಟವಾಗಿ
ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡು
ಬಹಿರಂಗದ ಮೇಲಿದ್ದ ಇಷ್ಟಲಿಂಗದಲ್ಲಿ ನೈಷ್ಠಿಕಭಾವಂಬುಗೊಂಡು,
ಅನಿಮಿಷದೃಷ್ಟಿ ಅಚಲಿತವಾಗಿ ಭಾವಬಲಿದಿರಲು.

ಆ ಲಿಂಗವು ಅಂತರಂಗಕ್ಕೆ ವೇಧಿಸಿ ಪ್ರಾಣಲಿಂಗವೆನಿಸಿಕೊಂಡು
ಷಡಾಧಾರಚಕ್ರಂಗಳಲ್ಲಿ ಷಡ್‌ವಿಧ ಲಿಂಗವಾಗಿ ನೆಲೆಗೊಂಬುದು.
ಆ ಷಡ್‌ವಿಧ ಲಿಂಗಕ್ಕೆ
ಷಡಿಂದ್ರಿಯಗಳನೆ ಷಡ್‌ವಿಧಮುಖಂಗಳೆನಿಸಿ,
ಆ ಷಡ್‌ವಿಧ ಮುಖಂಗಳಿಗೆ ಷಡ್‌ವಿಧವಿಷಯಂಗಳನೆ
ಷಡ್‌ವಿಧ ದ್ರವ್ಯಪದಾರ್ಥವೆನಿಸಿ,
ಆ ಪದಾರ್ಥಂಗಳು ಷಡ್‌ವಿಧಲಿಂಗಕ್ಕೆ
ಷಡ್‌ವಿಧ ಭಕ್ತಿಯಿಂದೆ ಸಮರ್ಪಿತವಾಗಲು,
ಅಂಗವೆಂಬ ಕುರುಹು ಅಡಗಿ
ಒಳಹೊರಗೆಲ್ಲ ಮಹಾಘನಲಿಂಗದ ದಿವ್ಯಪ್ರಕಾಶವೆ ತುಂಬಿ
ತೊಳಗಿ ಬೆಳಗುತ್ತಿರ್ಪುದು.
ಇಂತಪ್ಪ ಘನಲಿಂಗದ ಬೆಳಗನೊಳಗೊಂಡಿರ್ಪ
ಚಿದಂಗವೆ ಚಿತ್‌ಪಿಂಡವನಿಸಿತ್ತು.
ಇಂತಪ್ಪ ಅತಿಸೂಕ್ಷ್ಮವಾದ ಚಿತ್‌ಪಿಂಡದ ವಿಸ್ತಾರವನು
ಚಿದ್‌ಬ್ರಹ್ಮಾಂಡದಲ್ಲಿ ವೇಧಿಸಿ ಕಂಡು,
ಆ ಚಿದ್‌ಬ್ರಹ್ಮಾಂಡದ ಅತಿಬಾಹುಲ್ಯವನು
ಆ ಚಿತ್‌ಪಿಂಡದಲ್ಲಿ ವೇಧಿಸಿ ಕಂಡು,
'ಪಿಂಡಬ್ರಹ್ಮಾಂಡಯೋರೈಕ್ಯಂ' ಎಂಬ ಶ್ರುತಿ ಪ್ರಮಾಣದಿಂದ
ಆ ಪಿಂಡಬ್ರಹ್ಮಾಂಡಗಳು ಒಂದೇ ಎಂದು ಕಂಡು,
ಆ ಪಿಂಡಬ್ರಹ್ಮಾಂಡಂಗಳಿಗೆ ತಾನೇ ಆಧಾರವೆಂದು ತಿಳಿದು
ಆ ಪಿಂಡಬ್ರಹ್ಮಾಂಡಗಳ ತನ್ನ ಮನದ ಕೊನೆಯಲ್ಲಿ ಅಡಗಿಸಿ,
ಆ ಮನವ ಭಾವದ ಕೊನೆಯಲ್ಲಿ ಅಡಗಿಸಿ,
ಆ ಭಾವವ ಜ್ಞಾನದ ಕೊನೆಯಲ್ಲಿ ಅಡಗಿಸಿ,
ಆ ಜ್ಞಾನವ ಮಹಾಜ್ಞಾನದಲ್ಲಿ ಅಡಗಿಸಿ,
ಆ ಮಹಾಜ್ಞಾನವನು ಪರಾತ್ಪರವಾದ
ಪರಿಪೂರ್ಣ ಬ್ರಹ್ಮದಲ್ಲಿ ಅಡಗಿಸಿ,
ಆ ಪರಬ್ರಹ್ಮವೆ ತಾನಾದ ಶರಣಂಗೆ ದೇಹಭಾವವಿಲ್ಲ.
ಆ ದೇಹಭಾವವಿಲ್ಲವಾಗಿ ಜೀವಭಾವವಿಲ್ಲ.
ಆ ಜೀವಭಾವವಿಲ್ಲವಾಗಿ ಫಲಪದಂಗಳ ಹಂಗಿಲ್ಲ.
ಫಲಪದದ ಹಂಗಿಲ್ಲವಾಗಿ ಭವಬಂಧನಂಗಳು ಮುನ್ನವೆ ಇಲ್ಲ.
ಭವಬಂಧನಂಗಳು ಇಲ್ಲವಾಗಿ,
ಆ ಶರಣನು ತಾನು ಎಂತಿರ್ದಂತೆ ಪರಬ್ರಹ್ಮವೆ ಆಗಿ
ಆತನ ಹೃದಯಾಕಾಶವು ಬಚ್ಚಬರಿಯ ಬಯಲನೈದಿಪ್ಪುದು.
ಇದು ಕಾರಣ,

ಆ ಶರಣನು ದೇಹವಿದ್ದು ಸುಟ್ಟಸರವಿಯಂತೆ
ನಿರ್ದೇಹಿಯಾದ ಕಾರಣ
ಉಪಮಾತೀತ ವಾಙ್ಮನಕ್ಕಗೋಚರನಾಗಿರ್ಪನಯ್ಯಾ
ಅಖಂಡೇಶ್ವರಾ. || ೪೪೭ ||

೬೯೧

ಪರಾತ್ಪರವಾದ ವಸ್ತುವನೊಡಗೂಡಿದ ಪ್ರಾಣಲಿಂಗಿಯ
ಒಡಲ ಬೆಡಗಿನ ಗಡಣವೆಂತಿರ್ಪುದೆಂದಡೆ :
ಸ್ಫಟಿಕದ ಘಟದೊಳಗೆ ಜ್ಯೋತಿಯನಿರಿಸಿದಂತೆ,
ಕತ್ತಲೆಯ ಮನೆಯಲ್ಲಿ ರತ್ನವ ಹರಡಿದಂತೆ
ರನ್ನದ ಗಿರಿಗೆ ರವಿಕೋಟಿ ಕಿರಣಂಗಳು ಮುಸುಕಿದಂತೆ,
ಬೆಳಗು ಹಳಚಿದ ಮಹಾಬೆಳಗಿನೊಬ್ಬುಳಿಯನೊಳಕೊಂಡು
ಘನಗಂಭೀರವಾದ ಪ್ರಾಣಲಿಂಗಿಗಳ ಪಾದಕಮಲದಲ್ಲಿ
ಸದಮಲ ತುಂಬಿಯಾಗಿರಿಸಯ್ಯಾ ಎನ್ನ ಅಖಂಡೇಶ್ವರಾ. || ೪೪೮ ||

೬೯೨

ಚಿತ್ತ ನಿರ್ಮಲವಾದಾತ್ಮನು ಭಕ್ತಿಯಿಂದೆ
ಸತ್ಯಶರಣರಲ್ಲಿ ತತ್ವಾನುಭಾವವ ಬೆಸಗೊಂಡರೆ
ನಿತ್ಯ ಶಿವಪದ ಘಟಿಸುವುದಕ್ಕೆ ತಡವಿಲ್ಲವಯ್ಯಾ ಅಖಂಡೇಶ್ವರಾ. ||೪೪೯||

೬೯೩

ಸರ್ವಜ್ಞನು ನೀನೇ ಅಯ್ಯಾ.
ಸರ್ವೇಶ್ವರನು ನೀನೇ ಅಯ್ಯಾ.
ಸರ್ವಾಂತರ್ಯಾಮಿ ನೀನೇ ಅಯ್ಯಾ.
ಸರ್ವಗತನು ನೀನೇ ಅಯ್ಯಾ.
ಸರ್ವಕಳಾಭರಿತನು ನೀನೇ ಅಯ್ಯಾ.
ಸರ್ವಗುಣಸಂಪನ್ನನು ನೀನೇ ಅಯ್ಯಾ ಅಖಂಡೇಶ್ವರಾ. || ೪೫೦ ||

೬೯೪

ಕುಂಭಸಹಸ್ರ ಉದಕದೊಳಗೆ
ಬಿಂಬಿಸಿ ತೋರುವ ಸೂರ್ಯನೊಬ್ಬನಲ್ಲದೆ.
ಮತ್ತ ಹಲಬರುಂಟೆ ಅಯ್ಯಾ ?
ಸಕಲ ದೇಹದೊಳಗೆ ಸಂಭ್ರಮಿಸಿ ತುಂಬಿರ್ಪ
ಪರವಸ್ತು ನೀನೊಬ್ಬನಲ್ಲದೆ,
ಮತ್ತಾರನು ಕಾಣೆನಯ್ಯಾ ಅಖಂಡೇಶ್ವರಾ. || ೪೫೧ ||

೬೯೫

ವಿಶ್ವದೊಳಗೆಲ್ಲ ನೀನೇ ದೇವ
ವಿಶ್ವಭರಿತನು ನೀನೇ ದೇವ.
ವಿಶ್ವರೂಪನು ನೀನೇ ದೇವ.
ವಿಶ್ವಪತಿ ನೀನೇ ದೇವ.
ವಿಶ್ವಾತೀತನು ನೀನೇ ದೇವ ಅಖಂಡೇಶ್ವರಾ. || ೪೫೭ ||

೫೯೬

ಸಕಲ ವಿಸ್ತಾರದ ರೂಪು ನಿಮ್ಮೊಳಗಿರ್ಪುದು :
ನೀವೆನ್ನ ಮನದಲ್ಲಿ ಅಡಗಿರ್ಪಿರಿ.
ಅದೆಂತೆಂದೊಡೆ :
ಕರಿ ಕಣ್ಣಾಲಿಯೊಳಗಡಗಿದಂತೆ,
ನೀವು ಭಕ್ತಜನಮನೋವಲ್ಲಭನಾದ ಕಾರಣ
ಎನ್ನ ಮನದ ಕೊನೆಯಮೊನೆಯಲ್ಲಿ ಅಡಗಿರ್ದಿರಯ್ಯಾ ಅಖಂಡೇಶ್ವರಾ.
|| ೪೫೩ ||

೬೯೭

ಪಶ್ಚಿಮದ ಗಿರಿಯಲ್ಲಿ ಚಿತ್‌ಸೂರ್ಯನುದಯವಾದುದ ಕಂಡೆ.
ಸುತ್ತಿ ಮುತ್ತಿದ ಕತ್ತಲೆಯೆಲ್ಲ ಅತ್ತಿತ್ತ ಹರಿದು ಹೋದುದ ಕಂಡೆ.
ಹತ್ತು ದಿಕ್ಕಿನ ಒಳಹೊರಗೆಲ್ಲ ಬೆಳಗಿನ
ಮೊತ್ತವೇ ತುಂಬಿದುದ ಕಂಡೆ.
ಮುಚ್ಚಿದ ಕಮಲಂಗಳೆಲ್ಲ ಬಿಚ್ಚಿ ಅರಳಾಗಿ
ಹೊಚ್ಚ ಹೊಸ ಗಂಧ ದೆಸೆದೆಸೆಗೆ ಎಸೆದುದ ಕಂಡ.
ಇಂತಿದರ ಕುಶಲವ ಕಂಡು ಬೆರಗಾದೆನಯ್ಯಾ ಅಖಂಡೇಶ್ವರಾ. || ೪೫೪ ||

೬೯೮

ಅಂಬರದೊಳಗಣ ಅಮೃತದ ಕೊಣನುಕ್ಕಿ
ಕುಂಭಿನಿಯ ಮೇಲೆ ಸೂಸಲು,
ಅಲ್ಲಿದ್ದ ಸಕಲ ಜನವೆಲ್ಲ
ಅಮೃತವ ಕಂಡು ದಣಿಯಲುಂಡು,
ಅನಿತ್ಯದ ಭೋಗವ ಮರೆದು
ಮರ್ತ್ಯದ ಹಂಗು ಹರಿದು
ನಿತ್ಯಮುಕ್ತರಾಗಿರ್ದರಯ್ಯಾ ಅಖಂಡೇಶ್ವರಾ. || ೪೫೯ ||

### ೨೯೯

ಕಪ್ಪೆಯ ಶಿರದ ಮೇಲೆ ಎಪ್ಪತ್ತೆರಡು ಪುರವಿರ್ಪುವು.
ಆ ಪುರದೊಳಗೆ ಒಬ್ಬ ನಾರಿಯಿರ್ಪಳು.
ಆ ನಾರಿಯ ಕೈಯಲ್ಲಿ ಒಂದು ನಾರಿವಾಣದ ಸಸಿಯಿರ್ಪುದು.
ಈ ನಾರಿವಾಣದ ಸಸಿಯ ಮೂಲದಲ್ಲಿ
ಮೂರುಲೋಕಂಗಳಡಗಿರ್ಪುವು.
ಇಂತಪ್ಪ ಬೆಡಗಿನ ಕೀಲವ ಬಲ್ಲಾತನೆ
ಪ್ರಾಣಲಿಂಗಸಂಬಂಧಿಯಯ್ಯಾ ಅಖಂಡೇಶ್ವರಾ. || ೪೫೬ ||

### ೨೦೦

ನವಖಂಡ ಮಂಡಲದೊಳಗೊಂದು
ಪುಂಡರೀಕವೆಂಬ ಹುತ್ತವಿರ್ಪುದು.
ಆ ಹುತ್ತದೊಳಗೊಂದು ವಿಚಿತ್ರ ಸರ್ಪವಿರ್ಪುದು.
ಆ ಸರ್ಪನ ಬಾಯೊಳಗೊಂದು ಬೆಲೆಯಿಲ್ಲದ ರತ್ನವಿರ್ಪುದು.
ಈ ರತ್ನದ ಬೆಳಗಿನೊಳಗೆ
ಈರೇಳುಲೋಕದ ಸುಳುಹಿರ್ಪುದನಾರೂ ಅರಿಯರಲ್ಲ!
ಆ ಹುತ್ತುವ ಕೆಡಿಸದೆ ಸರ್ಪನ ಕೊಂದು
ರತ್ನವ ಸಾಧ್ಯವಮಾಡಿಕೊಂಡಾತನೆ
ಮುಕ್ತಿರಾಜ್ಯಕ್ಕೆ ಅರಸನಪ್ಪನಯ್ಯಾ ಅಖಂಡೇಶ್ವರಾ. || ೪೫೭ ||

### ೨೦೧

ಅಂಜನಗಿರಿಯಲ್ಲಿ ಅರ್ಕನ ಉದಯವ ಕಂಡೆ.
ಸಂಜೆಯ ಮಬ್ಬು ಅಂಜಿ ಓಡಿದುದ ಕಂಡೆ.
ಕುಂಜರನ ಮರಿಗಳ ಕೋಳಿ ನುಂಗಿದುದ ಕಂಡು
ಬೆರಗಾದೆನಯ್ಯಾ ಅಖಂಡೇಶ್ವರಾ ! || ೪೫೮ ||

### ೨೦೨

ನಂಜು ಅಮೃತವಾದುದ ಕಂಡೆ.
ಮಂಜೂರ ಸುಟ್ಟುದ ಕಂಡೆ.
ಮಂಜಿನ ಮನೆ ಕರಗಿ
ಕುರುಹಿಲ್ಲದೆ ನಿಷ್ಪತ್ತಿಯಾದುದ ಕಂಡೆ.
ಬಂಜೆಯ ಬಸುರಲ್ಲಿ ನಂಜುಗೊರಳನೆಂಬ ಶಿಶುಹುಟ್ಟಿ
ಅಂಜದೆ, ಅರುವತ್ತಾರು ಕೋಟಿ ದೈತ್ಯರ ಕೊಂದುದ
ಕಂಡೆನಯ್ಯಾ ಅಖಂಡೇಶ್ವರಾ. || ೪೫೯ ||

೭೦೩

ಆಕಾಶಮಂಡಲದೊಳಗೆ ಲೋಕೇಶನ
ಪಟ್ಟಣವಿರ್ಪುದು ನೋಡಾ.
ಆ ಪಟ್ಟಣಕ್ಕೆ ನಾಲ್ಕು ಬಾಗಿಲು, ಎಂಟು ಬೀದಿ,
ಹದಿನಾರು ಚದುರಂಗದ ಚಾವಡಿ,
ಮೂವತ್ತೆರಡು ಕೇರಿ.
ಕೇರಿಗಳೊಳಗೆ ಪರಿಕಾರರ ಕಟ್ಟಳೆ ನೋಡಾ !
ಆಕಾಶಮಂಡಲವನಡರಿ, ಲೋಕೇಶನ ಕಂಡಾತಂಗಲ್ಲದೆ
ಆ ಪಟ್ಟಣವು ಆರಿಗೂ ಸಾಧ್ಯವಿಲ್ಲ ನೋಡಾ ಅಖಂಡೇಶ್ವರಾ. ॥ ೪೯೦ ॥

೭೦೪

ಕುಂಡಲಿಯ ಬಾಗಿಲಲ್ಲಿ ಕೆಂಡವ ಪುಟಮಾಡಿ,
ಉದ್ದಂಡವಿಕಾರದ ಉಪಟಳವನುರುಹಿ,
ತಂಡತಂಡದ ನೆಲೆಗಳ ದಾಟಿ ದಂಡನಾಳವ ಪೊಕ್ಕು
ಮಂಡಲತ್ರಯದ ಮೇಲೆ
ಚಂಡ ರವಿಕೋಟಿಪ್ರಭೆಯಿಂದ ಬೆಳಗುವ
ಅಖಂಡಮೂರ್ತಿಯ ಕಂಡು ಕೂಡಬಲ್ಲಾತನೆ
ಪ್ರಚಂಡ ಪ್ರಾಣಲಿಂಗಿಯೆಂಬೆನಯ್ಯಾ ಅಖಂಡೇಶ್ವರಾ. ॥ ೪೯೧ ॥

೭೦೫

ಆನೆಗಳೆಂಟನು ಒಂದು ಮೌನದ ಚಿಕ್ಕಾಡು ನುಂಗಿತ್ತು.
ಕಾನನದರಳೆಯ ಕಪ್ಪೆ ನುಂಗಿತ್ತು.
ಮಾನಿನಿಯ ಮಸ್ತಕದಲ್ಲಿ
ಭಾನುಶತಕೋಟಿ ತೇಜದ ಕಳೆ ಮೊಳೆದೋರಿತ್ತು.
ಇದೇನು ಸೋಜಿಗ ಹೇಳಾ ಅಖಂಡೇಶ್ವರಾ ? ॥ ೪೯೨ ॥

೭೦೬

ಕಡಲಮಧ್ಯದಲ್ಲಿ ವಡವಾಗ್ನಿ ಹುಟ್ಟಿ,
ಆ ಕಡಲ ಸುಡುವುದ ಕಂಡೆ.
ನಡುರಂಗದ ಜ್ಯೋತಿ ಸೊಡರಳಿದು
ಎಡಬಲದಲ್ಲಿ ಕುಡಿವರಿದು
ಬೆಳಗುತಿರ್ಪುದ ಕಂಡೆನಯ್ಯಾ ಅಖಂಡೇಶ್ವರಾ. ॥ ೪೯೩ ॥

೭೦೭

ಬಣ್ಣವಿಲ್ಲದ ಪಕ್ಷಿ
ಕಣ್ಣಿನ ಕೊನೆಯಲ್ಲಿ ಸಣ್ಣಗೂಡನಿಕ್ಕಿ ಸುಳಿವುದ ಕಂಡೆ.

ಬಣ್ಣ ಮೂವತ್ತಾರ ನುಂಗಿತ್ತ ಕಂಡೆ.
ಬಯಲ ಸೀಮೆಯ ವಾಸವಾಗಿರ್ಪ ಪಕ್ಷಿ
ಹೆಣ್ಣೋ ಗಂಡೋ ಎಂದು ಕುರುಹವಿಡಿವ
ಅಣ್ಣಗಳನಾರನೂ ಕಾಣೆನಯ್ಯಾ ಅಖಂಡೇಶ್ವರಾ. || ೪೬೪ ||

**೭೦೮**

ನೀರ ಮಂಟಪದೊಳಗೊಂದು
ನಿರಾಳ ಕಮಲವಿರ್ಪುದ ಕಂಡೆ.
ಆ ಕಮಲಮಧ್ಯದೊಳಗೊಂದು
ನಿರಾಲಂಬ ಕೋಶವಿರ್ಪುದ ಕಂಡೆ.
ಆ ಕೋಶಮಧ್ಯದೊಳಗೊಂದು
ನಿರುಪಮ ಮಾಣಿಕ್ಯದ ಸಿಂಹಾಸನವ ಕಂಡೆ.
ಆ ಸಿಂಹಾಸನದ ಮೇಲೆ ಮೂರ್ತಿಗೊಂಡು ಬೆಳಗುವ
ನಮ್ಮ ಅಖಂಡೇಶ್ವರನೆಂಬ
ನಿರವಯ ಪರಬ್ರಹ್ಮವ ಕಂಡು
ಪರಮಸುಖಿಯಾಗಿರ್ದೆನು. || ೪೬೫ ||

**೭೦೯**

ನಳಿನಾಸನದಲ್ಲಿ ಕುಳ್ಳಿರ್ದು ಅತ್ತಿತ್ತ ಕಳವಳಿಸದೆ
ತುಳುಕುವ ಇಂದ್ರಿಯಂಗಳ ಬಂಧಿಸಿ,
ಸುಳಿವ ಕರಣಂಗಳ ಬಲಿದು ಒಬ್ಬುಳಿಗೊಳಿಸಿ,
ಉನ್ಮನಿಯ ಮಂಟಪದಲ್ಲಿ ನಿರಂತರ
ಬೆಳಗುವ ಪ್ರಾಣಲಿಂಗದಲ್ಲಿ ಮನಪವನಾಗ್ನಿಗಳೊಂದಾಗಿ,
ಸಾವಿರ ಕಿರಣಸಹಿತ ಒಡೆದುಮೂಡಿದ
ಪ್ರಭಾಕಾಲದ ಸೂರ್ಯನಂತೆ,
ಮಹಾಬೆಳಗಿನ ಪ್ರಭಾಪಟಲದಿಂದೆ
ಥಳಥಳಿಸಿ ಬೆಳಗುವ ಪ್ರಾಣಲಿಂಗವನು
ಕಂಗಳು ತುಂಬಿ ನೋಡಿ, ಮನ ತುಂಬಿ ಸಂತೋಷಿಸಿ,
ಸರ್ವಾಂಗ ಗುಡಿಗಟ್ಟಿ, ಪರಮ ಪರಿಣಾಮ ತಲೆದೋರಿ,
ಮಹಾಪರಿಣಾಮದೊಳಗೆ ಓಲಾಡಬಲ್ಲರೆ
ಅದೇ ಪ್ರಾಣಲಿಂಗಸಂಬಂಧ ನೋಡಾ ಅಖಂಡೇಶ್ವರಾ. || ೪೬೬ ||

**೭೧೦**

ದೇಹದ ವಾಸನೆ ಹರಿದು
ಆತ್ಮನ ಭವಬಂಧನದ ಕೀಲಮುರಿದು

ಪರಾತ್ಪರವಾದ ಪ್ರಾಣಲಿಂಗವನೊಡಗೂಡುವುದಕ್ಕೆ
ಆವುದು ಸಾಧನವೆಂದೊಡೆ :
ಎಲ್ಲ ಗಣಂಗಳು ತಿಳಿವಂತೆ ಹೇಳುವೆ ಕೇಳಿರಯ್ಯಾ.
ಎಂಬತ್ತೆಂಟು ಆಸನದೊಳಗೆ ಮುಖ್ಯವಾಗಿರ್ಪುದು ಶಿವಸಿದ್ಧಾಸನವು.
ಆ ಸಿದ್ಧಾಸನದ ವಿವರವೆಂತೆಂದೊಡೆ :
ಗುದಗುಹ್ಯಮಧ್ಯಸ್ಥಾನವಾದ ಯೋನಿಮಂಡಲವೆಂಬ
ಆಧಾರದ್ವಾರಕ್ಕೆ ಎಡದ ಹಿಮ್ಮಡವನಿಕ್ಕಿ,
ಬಲದಹಿಮ್ಮಡವ ಮೇಢ್ರಸ್ಥಾನದಲ್ಲಿರಿಸಿ,
ಅತ್ತಿತ್ತಲುಕದೆ ಬೆನ್ನೆಲವು ಕೊಂಕಿಸದೆ ನೆಟ್ಟನೆ ಕುಳ್ಳಿರ್ದು
ಉಭಯಲೋಚನವನೊಂದು ಮಾಡಿ ಉನ್ಮನಿಯ ಸ್ಥಾನದಲ್ಲಿರಿಸಿ,
ಘ್ರಾಣ ಜಿಹ್ವೆ ನೇತ್ರ ಶ್ರೋತ್ರ ತ್ವಕ್ ಹೃದಯವೆಂಬ
ಆರು ದ್ವಾರಂಗಳನು ಆರಂಗುಲಿಗಳಿಂದೊತ್ತಲು
ಮೂಲಾಧಾರದಲ್ಲಿರ್ದ ಮೂಲಾಗ್ನಿ ಪಟುತರವಾಗಿ,
ಪವನವನೊಡಗೂಡಿ ಮನವ ಸುತ್ತಿಕೊಂಡು ಊರ್ಧ್ವಕ್ಕೆ ಹೋಗಿ,
ಉಭಯದಳದಲ್ಲಿರ್ದ ಮಹಾಲಿಂಗವನೊಡಗೂಡಿ
ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಗೊಂಡು
ಅತಿಸೂಕ್ಷ್ಮವಾಗಿ ಅಂಗುಲಪ್ರಮಾಣವಾಗಿ ಶುದ್ಧತಾರೆಯಂತ
ಕಂಗಳ ನೋಟಕ್ಕೆ ಕರತಲಾಮಲಕವಾಗಿ ಕಾಣಿಸುತಿರ್ಪ ಪ್ರಾಣಲಿಂಗದಲ್ಲಿ
ಪ್ರಾಣನ ಸಂಯೋಗವ ಮಾಡಬಲ್ಲಾತನೆ ಪ್ರಾಣಲಿಂಗಸಂಬಂಧಿ.
ಆತನೇ ಪ್ರಳಯವಿರಹಿತನಯ್ಯಾ ಅಖಂಡೇಶ್ವರಾ. ॥ ೪೬೭ ॥

೨೧೧

ಶುದ್ಧಪದ್ಮಾಸನದಲ್ಲಿ ಕುಳ್ಳಿರ್ದು ಊರ್ಧ್ವಲೋಚನನಾಗಿ,
ಉಳಿವ ಕರಣಂಗಳನೆಲ್ಲ ಉನ್ಮನಿಯ ಸ್ಥಾನದಲ್ಲಡಗಿಸಿ,
ಮನವನೊಮ್ಮನವ ಮಾಡಿ ಅನಾಹತಕರ್ಣದಲ್ಲಿ ಲಾಲಿಸಲು,
ಸಹಸ್ರದಳಕಮಲಮಧ್ಯದಲ್ಲಿ ಉದ್ಘೋಷಿಸುತ್ತಿರ್ಪುದು ಸುನಾದಬ್ರಹ್ಮವು.
ಅಂತಪ್ಪ ಸುನಾದಬ್ರಹ್ಮದಲ್ಲಿ ಮನವಡಗಿ
ಮೈಯ್ಮರೆದಿರ್ಪಾತನೆ ಘನಲಿಂಗಯೋಗಿಯಯ್ಯಾ ಅಖಂಡೇಶ್ವರಾ. ॥ ೪೬೮ ॥

೨೧೨

ಕಮಲದ ಸಾಲುಗಳೊಳಗೆ
ಭ್ರಮರದ ಹಿಂಡು ಝೇಂಕರಿಸುತಿರ್ಪುದು ನೋಡಾ !
ವಿಮಲಚಿತ್ತದಿಂದ ಲಾಲಿಸಲು
ಅದು ತನ್ನ ಸುಮನ ಸುಜ್ಞಾನದ ನಿಲವು ನೋಡಾ ಅಖಂಡೇಶ್ವರಾ. ॥ ೪೬೯ ॥

೭೧೩

ಗಗನಮಂಟಪದಲ್ಲಿ
ಅಘಹರನ ಪೂಜೆ ಒಗುಮಿಗಿಲಾಗುತಿರ್ಪುದು ನೋಡಾ !
ಅಲ್ಲಿ ಧಿಗಿಭುಗಿಲೆಂಬ ಶಬ್ದದ ಸೊಗಸು ನೋಡಾ
ಅಖಂಡೇಶ್ವರಾ. ॥ ೪೭೦ ॥

೭೧೪

ಉತ್ತರಗಿರಿಯ ಚಿತ್ರಮಂಟಪದೊಳಗೆ
ರತ್ನದ ತೋರಣದ ಪರಿಯ ನೋಡಾ !
ಮುತ್ತಿನ ಗದ್ದುಗೆಯ ಮೇಲೆ
ಛತ್ತೀಸಕೋಟಿ ಚಂದ್ರಸೂರ್ಯರ ಬೆಳಗನೊಳಕೊಂಡ
ನಿತ್ಯಪರಿಪೂರ್ಣವಸ್ತುವ ಕೂಡಬಲ್ಲಾತನೆ
ಕರ್ತೃ ಶಿವ ತಾನೆ ನೋಡಾ ಅಖಂಡೇಶ್ವರಾ. ॥ ೪೭೧ ॥

೭೧೫

ತ್ರಿಕೂಟಗಿರಿಯಲ್ಲಿ ತ್ರಿಣಯನ ಕುಳ್ಳಿರಿಸಿ
ತ್ರಿಕಾಲ ಪೂಜೆಯ ಮಾಡಬಲ್ಲಾತನೆ
ತ್ರಿಲೋಕದೊಡೆಯನಯ್ಯಾ ಅಖಂಡೇಶ್ವರಾ. ॥ ೪೭೨ ॥

೭೧೬

ಚಂದ್ರಶಿಲೆಯ ಮಂಟಪದೊಳಗೆ
ಇಂದುಧರನ ಪೂಜೆಯ ವಿಸ್ತಾರವ ನೋಡಾ !
ಬಂದು ನೆರೆದಿರ್ಪರು ಸಕಲ ಗಣಂಗಳು.
ಚಂದ್ರಜ್ಯೋತಿಯ ಸಾಲುಸಾಲಿನ ಸೊಬಗು ನೋಡಾ !
ಅಲ್ಲಿ ಚಂಪಚಂದದ ದುಂದುಭಿನಾದ ಮೊಳಗುತಿರ್ಪುವು.
ಇದರಂದವನೇನ ಹೇಳುವೆನಯ್ಯಾ ಅಖಂಡೇಶ್ವರಾ ! ॥ ೪೭೩ ॥

೭೧೭

ಸಾಸಿರ ಕಂಬದ ಮಂಟಪದೊಳಗೆ
ಈಶ್ವರನ ಓಲಗದ ಸೋಜಿಗವನೇನ ಹೇಳುವೆನಯ್ಯಾ !
ಮೂಜಗದವರೆಲ್ಲ ಮೈಮರೆದಿರ್ಪರು.
ಭಾಸ್ಕರಕೋಟಿ ಬೆಳಗು ಕಂಗಳ ತುಂಬಿತ್ತು ನೋಡಾ
ಅಖಂಡೇಶ್ವರಾ. ॥ ೪೭೪ ॥

೭೧೮

ಅಂಬರದೇಶದ ಕುಂಭ ಕೋಣೆಯೊಳಗೆ
ಜಂಬುಲಿಂಗಪೂಜೆಯ ಸಂಭ್ರಮವ ನೋಡಾ !

ಅಂಬುಜಮುಖಿಯರು ಆರತಿಯನೆತ್ತಿ
ಶಂಭು ಶಿವಶಿವ ಹರಹರ ಎನುತಿರ್ಪರು ನೋಡಾ !
ತುಂಬಿದ ಹುಣ್ಣಿಮೆಯ ಬೆಳದಿಂಗಳು
ಒಂಬತ್ತು ಬಾಗಿಲಲ್ಲಿ ತುಂಬಿ ಹೊರಸೂಸುತಿರ್ಪುದು ನೋಡಾ !
ಈ ಸಂಭ್ರಮವನೇನ ಹೇಳುವೆನಯ್ಯಾ ಅಖಂಡೇಶ್ವರಾ ! ॥ ೪೭೫ ॥

೨೧೯

ದೇಹವೆಂಬ ದೇಗುಲದೊಳಗೆ
ಭಾವಸಿಂಹಾಸನವ ಮಾಡಿ,
ಜೀವದೊಡೆಯನ ಪೂಜಿಸಬಲ್ಲಡೆ
ದೇವರಿಗೆ ದೇವರೆಂಬೆನಯ್ಯಾ ಅಖಂಡೇಶ್ವರಾ ! ॥ ೪೭೬ ॥

೨೨೦

ತನುವೆಂಬ ಗುಡಿಯೊಳಗೆ, ಮನವೆಂಬ ಸಿಂಹಾಸನವನಿಕ್ಕಿ,
ಘನಮಹಾಲಿಂಗವ ಮೂರ್ತಿಗೊಳಿಸಿ,
ಸಕಲ ಕರಣಂಗಳಿಂದೆ ಪೂಜೋಪಚಾರವ ಶೃಂಗರಿಸಬಲ್ಲರ
ಘನಕ್ಕೆ ಘನಮಹಿಮನೆಂಬೆನಯ್ಯಾ ಅಖಂಡೇಶ್ವರಾ. ॥ ೪೭೭ ॥

೨೨೧

ಮೇರುವಿನ ಮಂದಿರದಲ್ಲಿ ಆರೈದು ನೋಡುವರೆ
ಭೇರಿ ಮೃದಂಗದ ಧ್ವನಿ ಭೋರಿಡುತಿರ್ಪುವು.
ಮಾರಾರಿಯ ಮಂಗಳಸಭೆಯ
ಕಂಗಳು ನುಂಗಿತ್ತು ನೋಡಾ ಅಖಂಡೇಶ್ವರಾ. ॥ ೪೭೮ ॥

೨೨೨

ಹೊರಗಣ ಒಂಬತ್ತು ಬಾಗಿಲವ ಮುಚ್ಚಿ
ಒಳಗಣ ಅಂಬರದ ಬಾಗಿಲ ಬೀಗವ ತೆಗೆದು
ಒಳಹೊಕ್ಕು ನೋಡಲು,
ಗಂಗೆ ಸರಸ್ವತಿ ಯಮುನೆಯೆಂಬ ತ್ರಿನದಿಗಳು ಕೂಡಿದ ಠಾವಿನಲ್ಲಿ
ಸಂಗಮಕ್ಷೇತ್ರವೆಂಬ ರಂಗಮಂಟಪವುಂಟು.
ಆ ರಂಗಮಂಟಪದಲ್ಲಿ
ರವಿಕೋಟಿಪ್ರಭೆಯಿಂದೆ ರಾಜಿಸುವ ಮಹಾಲಿಂಗವ ಕಂಡು,
ಆ ಮಹಾಲಿಂಗಕ್ಕೆ ತನ್ಮಾತ್ರಸಂಬಂಧವಾದ ದ್ರವ್ಯಂಗಳಿಂದರ್ಚಿಸಿ,
ಆ ಮಹಾಲಿಂಗದ ಬೆಳಗನು
ಕಂಗಳು ತುಂಬಿ ನೋಡಿ ಮನ ಸಂತೋಷಗೊಂಡು,
ಅಲ್ಲಿಂದತ್ತ ಪಶ್ಚಿಮದಿಕ್ಕಿನಲ್ಲಿ ಮಹಾಕೈಲಾಸವಿರ್ಪುದನು

ತನ್ನ ಸ್ವಾತ್ಮಜ್ಞಾನದಿಂದ ತಿಳಿದು ನೋಡಿ,
ಎಡಬಲದ ಬಟ್ಟೆಯ ಮೆಟ್ಟದೆ
ನಟ್ಟನಡುಮಧ್ಯಮಾರ್ಗವಿಡಿದು ಹೋಗಿ,
ಕೈಲಾಸದ ಪೂರ್ವದಿಕ್ಕಿನ ಹೆಬ್ಬಾಗಿಲ
ಉಪ್ಪರ ಗೋಪುರವ ಕಂಡು ಒಳಹೊಕ್ಕು ಹೋಗಿ
ಕಂಗಳಿಗೆ ಮಂಗಳವಾದ ಶಿವಮಹಾಸಭೆಯ ಕಂಡು,
ಅಲ್ಲಿ ಹೊಡೆವ ಭೇರಿಯನಾದ, ತುಡುಮು ತಾಳ ಮದ್ದಳೆಯನಾದ,
ಗಡಗಡ ಝಲ್ಲೆಂಬ ಸಮಾಳ ಕರಡಿ ಕೌಸಾಳನಾದ
ನುಡಿಸುವ ವೀಣೆ ಕಿನ್ನರಿ ಸ್ವರಮಂಡಲ ತಂಬೂರಿ ಕಾಮಾಕ್ಷಿಯನಾದ,
ಭೋರಿಡುವ ಶಂಖ ಘಂಟೆಯನಾದ,
ಸ್ವರಗೈವ ನಾಗಸ್ವರ ಕೊಳಲು ಸನಾಯದ ನಾದ,
ಕೂಗಿಡುವ ಕಹಳೆ ಹೆಗ್ಗಹಳೆ ಚಿನಿಕಹಳೆ ಕರಣೆಯನಾದ,
ಇಂತಿವು ಮೊದಲಾದ ನಾನಾ ತರದ ನಾದಂಗಳನು
ಕಿವಿದುಂಬಿ ಕೇಳಿ ಮನದುಂಬಿ ಸಂತೋಷಿಸಿ,
ಅಲ್ಲಿಂದ ಮುಂದಕ್ಕೆ ಹೋಗಿ ಸೂರ್ಯವೀಥಿಯ ಕಂಡು ಪೊಕ್ಕು,
ಅಲ್ಲಿ ನಿಂದು ಓಲಗಂಗೊಡುವ ಮೂವತ್ತೆರಡು
ತೆರದ ತೂರ್ಯಗಣಂಗಳಂ ಕಂಡು,
ಅಲ್ಲಿಂದ ಮುಂದಕ್ಕೆ ಹೋಗಿ ಸೋಮವೀಥಿಯ ಕಂಡು ಪೊಕ್ಕು,
ಅಲ್ಲಿ ನಿಂದು ಓಲಗಂಗೊಡುವ ಹದಿನಾರು ತೆರದ ಪ್ರಮಥಗಣಂಗಳ ಕಂಡು
ಅಲ್ಲಿಂದ ಮುಂದಕ್ಕೆ ಹೋಗಿ ಅನಲವೀಥಿಯ ಕಂಡು ಪೊಕ್ಕು,
ಅಲ್ಲಿ ಅಷ್ಟದಿಕ್ಕುಗಳಲ್ಲಿ ನಿಂದು ಓಲಗಂಗೊಡುವ
ಅಷ್ಟ ತೆರದ ಅಮರಗಣಂಗಳ ಕಂಡು,
ಅಲ್ಲಿಂದ ಮುಂದೆ ಹೋಗಿ ಚತುರ್ದಿಕ್ಕಿನಲ್ಲಿ ನಿಂದು ಓಲಗಂಗೊಡುವ
ಚತುಃಶಕ್ತಿಯರ ಸಮ್ಮೇಳವ ಕಂಡು,
ಅಲ್ಲಿಂದ ಮುಂದಕ್ಕೆ ಹೋಗಿ
ನಟ್ಟನಡುವಿರ್ದ ಶೃಂಗಾರಮಂಟಪದ ಮಹಾಸದರಿನಲ್ಲಿ
ಮೂರ್ತಿಗೊಂಡಿರ್ದ ನಿಷ್ಕಲ ಪರಶಿವನ ಕಂಡು ತನು ಉಬ್ಬಿ ಮನ ಕರಗಿ,
ಕಂಗಳಲ್ಲಿ ಪರಿಣಾಮಜಲ ಉಕ್ಕಿ ಕಡೆಗೋಡಿವರಿವುತ್ತ,
ಉರಿಕರ್ಪುರ ಸಂಯೋಗದಂತೆ
ಆ ನಿಷ್ಕಲಪರಶಿವನೊಡನೆ ಬೆರೆದು ಪರಿಪೂರ್ಣವಾದ
ಮಹಾಶರಣರ ತೋರಿಸಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ. ॥ ೪೭೮ ॥

೭೨೩

ಎನ್ನಂತರಂಗದ ಆರು ಭುವನದ ಮೇಲೆ ತೋರುತಿರ್ಪ
ಮಹಾಕೈಲಾಸದ ಮೂರು ಮಂಡಲದಲ್ಲಿ

[ನಾಲ್ಕು] ಎಂಟು ಹದಿನಾರು ಮೂವತ್ತೆರಡು ತಂಡದಲ್ಲಿ
ನಿಂದು ಓಲಗಂಗೊಡುತಿರ್ಪರು ಸಕಲಗಣಂಗಳು ನಿಮಗೆ.
ಎನ್ನ ಮನ ಬುದ್ಧಿ ಚಿತ್ತ ಅಹಂಕಾರಂಗಳು
ನಿಮ್ಮ ಮಂತ್ರಿ ಪ್ರಧಾನಿಗಳಾಗಿರ್ಪರು.
ಎನ್ನ ದಶವಾಯುಗಳು ನಿಮಗೆ ಹಸನಾಗಿ ಗಾಳಿಯ [illegible]ರ್ಪರು.
ಎನ್ನ ಅರಿಷಡ್ವರ್ಗಂಗಳು ನಿಮ್ಮ ಹೊಗಳುವ ಭಟಾಳಿಗಳಾಗಿ
ನಿಮ್ಮ ನಾಮಮಂತ್ರಂಗಳ ಕೊಂಡಾಡುತಿರ್ಪರು.
ಎನ್ನ ಚರಣಂಗಳು ನಿಮ್ಮ ಪ್ರದಕ್ಷಿಣೆಯ ಮಾಡುತಿರ್ಪವು.
ಎನ್ನ ಹಸ್ತಂಗಳು ನಿಮ್ಮ ಶ್ರೀಪಾದವ ಪೂಜಿಸುತ್ತಿರ್ಪವು.
ಎನ್ನ ಗುಹ್ಯ ನಿಮಗಾನಂದಸ್ಥಾನವಾಗಿರ್ಪುದು.
ಎನ್ನ ಪಾಯು ನಿಮಗೆ ವಿಸರ್ಜನ ಕೃತ್ಯಕ್ಕನುವಾಗಿರ್ಪುದು.
ಎನ್ನ ತ್ವಕ್ಕು ನಿಮಗೆ ಹಾಸಿಗೆಯ ಸುಖವನುಂಟುಮಾಡುತಿರ್ಪುದು.
ಎನ್ನ ಕರ್ಣವು ನಿಮಗೆ ನಾದವ ಕೇಳಿಸುತಿರ್ಪುದು.
ಎನ್ನ ಕಂಗಳು ನಿಮಗೆ ನಾನಾ ವಿಚಿತ್ರ ರೂಪವ ತೋರುತಿರ್ಪವು.
ಎನ್ನ ಘ್ರಾಣವು ನಿಮಗೆ ಗಂಧ ಪರಿಣಾಮ [illegible]ತಿರ್ಪುದು.
ಎನ್ನ ಜಿಹ್ವೆ ನಿಮಗೆ ಷಡುರಸ ಪಂಚಕಜ್ಜಾಯಗಳ ದ[illegible]
ಭೋಜನಕೆ ಎಡೆ ಮಾಡುತಿರ್ಪುದು.
ಎನ್ನ ಸಕಲ ಕರಣಂಗಳು
ನಿಮ್ಮ ನಿಜ ಸೇವೆಯನೆ [illegible]
ಇಂತೀ ನಾನಾ ತರದ[illegible]
ಓಲಗದ ಒಡ್ಡವಣೆಯ ಕಂಡು,
ಹೋದುದ ಬಂದುದನರಿಯದೆ
ಸಂಪಿಗೆಯ ಪುಷ್ಪಕ್ಕೆರಗಿದ ಭ್ರಮರನಂತೆ
ನಿಮ್ಮೊಳಗೆ ಪರವಶವಾಗಿರ್ದೆನಯ್ಯಾ ಅಖಂಡೇಶ್ವರಾ. || ೪೮೦ ||

೭೨೪

ಮುಕ್ತಿಗೆ ಸದಾ ಸಂಧಾನವಾದ
ಮಹಾಜ್ಞಾನ ಶಿವಕ್ಷೇತ್ರವೆಂಬ
ಶಾಂಭವಿಯಚಕ್ರವಿವರವೆಂತೆಂದೊಡೆ:
ಅಗ್ನಿಮಂಡಲದ ಪೂರ್ವದಿಕ್ಕಿನ ಸಕಾರವೇ ವಾಮ,
ಷಕಾರವೇ ಜೇಷ್ಠೆ, ಶಕಾರವೇ ರೌದ್ರಿ, ವಕಾರವೇ ಕಾಳಿ.
ಅಗ್ನಿಮಂಡಲದ ನೈಋತ್ಯದಳಕ್ಕೆ ಆಧಾರಚಕ್ರಸಂಬಂಧವು.
ಅದರ ಮುಂದಣ ಲಕಾರವೇ ಬಾಲೆ, ರಕಾರವೇ ಬಲಪ್ರಮಥನಿ,
ಯಕಾರವೇ ಸರ್ವಭೂತದಮನಿ, ಮಕಾರವೇ ಮನೋನ್ಮನಿ.

ಇನ್ನು ಸೂರ್ಯಮಂಡಲದ ಬಕಾರ ಭಕಾರಗಳೆರಡು ಕೂಡಿ
ಅಗ್ನಿಮಂಡಲದ ಈಶಾನ್ಯದಳಕ್ಕೆ ಸ್ವಾಧಿಷ್ಠಾನಚಕ್ರಸಂಬಂಧವು.
ಮುಂದೆ ಚಂದ್ರಮಂಡಲದ ವಿವರವೆಂತೆಂದೊಡೆ:
ಅಃ ಎಂಬುದೇ ಷಣ್ಮುಖಿ, ಅಂ ಎಂಬುದೇ ಭವ,
ಔಕಾರವೇ ಶರ್ವ, ಓಕಾರವೇ ರುದ್ರ,
ಐಕಾರವೇ ಮಹಾದೇವ, ಏಕಾರವೇ ಸೋಮ,
ಲ್ೂಕಾರವೇ ಭೀಮ, ಲೃಕಾರವೇ ಉಗ್ರ,
ೠಕಾರವೇ ಪಶುಪತಿ, ಋಕಾರವೇ ಉಮೇಶ್ವರ,
ಊಕಾರವೇ ಚಂಡೇಶ್ವರ, ಉಕಾರವೇ ನಂದೀಶ್ವರ,
ಈಕಾರವೇ ಮಹಾಕಾಳ, ಇಕಾರವೇ ಭೃಂಗಿರಿಟಿ,
ಆಕಾರವೇ ಗಣೇಶ್ವರ, ಅಕಾರವೇ ವೃಷಭೇಶ್ವರ,
ಚಂದ್ರಮಂಡಲದಲ್ಲಿ ವಿಶುದ್ಧಿಚಕ್ರಸಂಬಂಧವು.
ಇನ್ನು ಮುಂದೆ ಸೂರ್ಯಮಂಡಲವೆಂತೆಂದೊಡೆ:
ಪೂರ್ವದಳದ ಕಕಾರವೇ ಅನಂತ, ಖಕಾರವೇ ಸೂಕ್ಷ್ಮ,
ಗಕಾರವೇ ಶಿವೋತ್ತಮ, ಘಕಾರವೇ ಏಕನೇತ್ರ,
ಙಕಾರವೇ ಏಕರುದ್ರ.
ಚಕಾರವೇ ತ್ರಿಮೂರ್ತಿ. ಛಕಾರವೇ ಶ್ರೀಕಂಠ,
ಜಕಾರವೇ ಶಿಖಂಡಿ, ಝಕಾರವೇ ಇಂದ್ರ, ಞಕಾರವೇ ಅಗ್ನಿ.
ಟಕಾರವೇ ಯಮ, ಠಕಾರವೇ ನೈಋುತ್ಯ.
ಸೂರ್ಯಮಂಡಲದ ನೈಋುತ್ಯದಳಕ್ಕ ಅನಾಹತಚಕ್ರಸಂಬಂಧವು.
ಡಕಾರವೇ ವರುಣ, ಢಕಾರವೇ ವಾಯುವ್ಯ,
ಣಕಾರವೇ ಕುಬೇರ, ತಕಾರವೇ ಈಶಾನ್ಯ,
ಥಕಾರವೇ ಧರಾ, ದಕಾರವೇ ಧ್ರುವ,
ಧಕಾರವೇ ಸೋಮ, ನಕಾರವೇ ಅಪ್ಪು,
ಪಕಾರವೇ ಅನಿಲ, ಫಕಾರವೇ ಅನಲ,
ಸೂರ್ಯಮಂಡಲದ ವರುಣದಳದಿಂದ ಈಶಾನ್ಯದಳಕ್ಕೆ
ಮಣಿಪೂರಕಚಕ್ರ ಸಂಬಂಧವು.
ಈಶಾನ್ಯ ಇಂದ್ರ ಮಧ್ಯದ ಬಕಾರ ಭಕಾರಂಗಳ ಪೆಸರು,
ಬಕಾರವೇ ಪ್ರತ್ಯೇಶ, ಭಕಾರವೇ ಪ್ರಭವ.
ಇವೆರಡು ಸ್ವಾಧಿಷ್ಠಾನಚಕ್ರದವು.
ಇನ್ನು ಅಕಾರ ಹಕಾರಂಗಳಿಗೆ ಭೇದವಿಲ್ಲದ ಕಾರಣ
ಚಂದ್ರಮಂಡಲದ ಅ ಎಂಬಕ್ಷರವು
ಅಗ್ನಿಮಂಡಲದ ಲಂಬಕ್ಷರವು
ಇವೆರಡು ಆಜ್ಞಾಚಕ್ರಸಂಬಂಧವಾಗಿಹವು.

ಈ ಷಟ್‌ಚಕ್ರಂಗಳು ಶಾಂಭವಿಚಕ್ರದಲ್ಲಿ ಸಂಬಂಧವಾಗಿಹವು.
ಇನ್ನು ಅಷ್ಟದಳಂಗಳಿಗೆ ಹಂಚಿಹಾಕುವ ವಿವರವೆಂತೆಂದೊಡೆ:
ವಾಮ, ಗಣೇಶ್ವರ, ವೃಷಭೇಶ್ವರ, ಅನಂತ,
ಸೂಕ್ಷ್ಮ, ಶಿವೋತ್ತಮ, ಇಂದ್ರ, ಸತ್ಯ, ಭೃಂಗಿ, ಅಂತರ್ಲಕ್ಷ
ಈ ಹತ್ತು ಇಂದ್ರದಳದಲ್ಲಿ ಸಂಬಂಧವು.
ಜೇಷ್ಠ, ಮಹಾಕಾಳ, ಭೃಂಗರೀಟಿ, ಏಕನೇತ್ರ,
ಏಕರುದ್ರ, ತ್ರಿಮೂರ್ತಿ, ಅಗ್ನಿ, ಪೂಷನ್, ವಿಧಿ, ದಮ
ಈ ಹತ್ತು ಅಗ್ನಿದಳದಲ್ಲಿ ಸಂಬಂಧವು.
ರೌದ್ರಿ, ನಂದೀಶ್ವರ, ಚಂಡೇಶ್ವರ, ಶ್ರೀಕಂಠ, ಶಿಖಂಡಿ,
ಇಂದ್ರ ಯಮ, ಭಾಸ್ಕರ, ಪುಷ್ಪದತ್ತ, ಬಲಾಟ
ಈ ಹತ್ತು ಯಮದಳದಲ್ಲಿ ಸಂಬಂಧವು.
ಕಾಳಿ, ಉಮೇಶ್ವರ, ಪಶುಪತಿ,
ಅಗ್ನಿ, ಯಮ, ನೈಋತ್ಯ, ದೌವಾರಿಕ, ಸುಗ್ರೀವ, ಆವರಣ
ಈ ಹತ್ತು ನೈಋತ್ಯದಳದಲ್ಲಿ ಸಂಬಂಧವು.
ಬಾಲೆ, ಉಗ್ರ, ಭೀಮ, ವರುಣ, ಏಕನೇತ್ರ, ಕುಬೇರ.
ಅರುಣ, ಅಸುರ, ಗಂಧ್ವರ, ವೇಗ,
ಈ ಹತ್ತು ವರುಣದಳದಲ್ಲಿ ಸಂಬಂಧವು.
ಬಲಪ್ರಮಥನಿ, ಸೋಮ, ಅಪನಿಲ, ಮಹಾದೇವ,
ಈಶಾನ್ಯ, ಧರಾ, ಧ್ರುವ, ವಾಯು, ನಾಗಮುಖ, ಸೋಮ,
ಈ ಹತ್ತು ವಾಯುವ್ಯದಳದಲ್ಲಿ ಸಂಬಂಧವು.
ಸರ್ವಭೂತದಮನಿ, ರುದ್ರ, ಶರ್ವ, ಸೋಮ.
ಅಪ್ಪು, ನೀಲ, ಕುಬೇರ, ಅಘೋರ, ದಿತಿ, ಅದಿತಿ,
ಈ ಹತ್ತು ಕುಬೇರದಳದಲ್ಲಿ ಸಂಬಂಧವು.
ಮನೋನ್ಮನಿ, ಭವ, ಷಣ್ಮುಖಿ, ನಳ, ಪ್ರತ್ಯೇಶ.
ಪ್ರಭವ, ಈಶಾನ್ಯ, ಪರ್ಜನ್ಯ, ಜಯಂತ, ಸಂಕರ,
ಈ ಹತ್ತು ಈಶಾನ್ಯದಳದಲ್ಲಿ ಸಂಬಂಧವು.
ಇಲ್ಲಿಗೆ ಅಷ್ಟದಳದ ವಿವರ ಮುಗಿಯಿತು.
ಇನ್ನು ಮುಂದೆ ಚೌದಳದ ವಿವರವೆಂತೆಂದೊಡೆ :
ಇಂತಪ್ಪ ಅಷ್ಟದಳವನೊಳಕೊಂಡು
ಅಂಬಿಕೆ, ಗಣಾನಿ, ಈಶ್ವರಿ, ಮನೋನ್ಮನಿ ಎಂಬ
ಚತುರ್ದಳ ಶಕ್ತಿಯರಿರ್ಪರು.
ಪೂರ್ವದಳದ ಸಕಾರವೇ ಅಂಬಿಕೆ.
ದಕ್ಷಿಣದಳದ ಅಕಅರವೇ ಗಣಾನಿ.
ಪಶ್ಚಿಮದಳದ ವಿಕಾರವೇ ಈಶ್ವರಿ.

ಉತ್ಪತ್ತಿಯಾದ ಕ್ಷೀರವೇ ಜ್ಯೋತ್ಸ್ನೆ.
ಇಂತೀ ಚಿತ್ತಾರ್ಭಿದಶಕ್ತಿಯನೊಳಕೊಂಡಿರ್ಪಳು ಹ್ರೀಂಕಾರಶಕ್ತಿ.
ಹ್ರೀಂಕಾರಶಕ್ತಿ ಎಂದಡೂ ಮೂಲಜ್ಞಾನ ಚಿತ್ತು ಎಂದಡೂ
ಚಿದಾತ್ಮ ಎಂದಡೂ ಪರ್ಯಾಯ ನಾಮವು.
ಇಂತಪ್ಪ ಹ್ರೀಂಕಾರಶಕ್ತಿಗೆ ಆಶ್ರಯವಾಗಿರ್ಪುದು ನಿಷ್ಕಲಲಿಂಗವು.
ನಿಷ್ಕಲಲಿಂಗವೆಂದಡೂ ಶುದ್ಧಪ್ರಸಾದವೆಂದಡೂ
ಹಕಾರಪ್ರಣವವೆಂದಡೂ ಪರ್ಯಾಯ ನಾಮಂಗಳು.
ಇಂತಪ್ಪ ನಾಮಂಗಳನೊಳಕೊಂಡು
ಪಿಂಡ ಬ್ರಹ್ಮಾಂಡಗಳೊಳಹೊರಗೆ ಪರಿಪೂರ್ಣವಾಗಿ ತುಂಬಿ
ತೊಳಗಿ ಬೆಳಗುತಿರ್ಪುದು ನೋಡಾ ನಿಷ್ಕಲಲಿಂಗವು.
ಇಂತಪ್ಪ ಅನಾದಿ ನಿಷ್ಕಲ ಪರಶಿವಬ್ರಹ್ಮದ ನಿಜದ ನಿಲವನು
ಶ್ರುತಿಗುರುವಚನ ಸ್ವಾನುಭಾವಂಗಳಿಂದರಿದು
ತನ್ನೊಳಗೆ ಗರ್ಭೀಕರಿಸಿಕೊಂಡು ಸುಳಿವ ಮಹಾಶರಣರ
ಶ್ರೀಚರಣಕ್ಕೆ ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. ॥ ೪೮೧ ॥

೭೨೫

ಉನ್ಮನಿಯ ಮಂಟಪದಲ್ಲಿ ಉಮೆಯಾಣ್ಮನ ಉಗ್ಗಡಣೆಯ ನೋಡಾ !
ಪರಿಪರಿಯ ಗಣಂಗಳು ತರತರದಲ್ಲಿ ನೆರೆದು ನಿಂದು
ಉಘೇ ಉಘೇ ಎನುತಿರ್ಪರು ನೋಡಾ ಅಖಂಡೇಶ್ವರಾ. ॥ ೪೮೨ ॥

೭೨೬

ಸೂರ್ಯಮಂಡಲದಲ್ಲಿ ವೀರಗಣಂಗಳ ವಿಪರೀತವಿದೇನೋ ?
ಚಂದ್ರಮಂಡಲದಲ್ಲಿ ನಂದಿವಾಹನರ ಸಂದಣಿಯಿದೇನೋ ?
ಅಗ್ನಿಮಂಡಲದಲ್ಲಿ ಪ್ರಾಜ್ಞಗಣಂಗಳ ಸಂಜ್ಞೆಯಿದೇನೋ ?
ಇಂತೀ ಮಂಡಲತ್ರಯದ ಮಧ್ಯದಲ್ಲಿ ಮೂರ್ತಿಗೊಂಡಿರ್ಪ
ಅಖಂಡಾದ್ವಯ ಅವಿರಳ ಪರಶಿವನ ಅತಿಶಯ ಬೆಳಗಿನೊಳಗೆ
ತಾನು ಮರೆದು ಪರಶಿವನಾಗಿರ್ದನಯ್ಯಾ ಅಖಂಡೇಶ್ವರಾ. ॥ ೪೮೩ ॥

೭೨೭

ಸಹಸ್ರದಳ ಕಮಲಮಧ್ಯದಲ್ಲಿ ಪಂಚಪತ್ರ.
ಆ ಪಂಚಪತ್ರದ ಮಧ್ಯದಲ್ಲಿ ಮಂಡಲತ್ರಯ.
ಆ ಮಂಡಲತ್ರಯ ಮಧ್ಯದಲ್ಲಿ ಪ್ರಣವಪೀಠ.
ಆ ಪ್ರಣವಪೀಠದ ಮೇಲೆ ಮೂರ್ತಿಗೊಂಡು ಬೆಳಗುವ
ನಿಮ್ಮ ದಿವ್ಯ ಮೂರ್ತಿಯ ಕಂಡು ಹರುಷಿತನಾದೆನಯ್ಯಾ
ಅಖಂಡೇಶ್ವರಾ. ॥ ೪೮೪ ॥

೭೨೮

ಯೋಗ ಯೋಗವೆಂದು ನುಡಿಯುತಿರ್ಪರೆಲ್ಲರು ;
ಯೋಗದೊಳಗಣ ಯೋಗವನಾರೂ ಅರಿಯರಲ್ಲ !
ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗವೆಂದು
ಯೋಗ ಚತುರ್ವಿಧವೊಳಗೆ,
ಮೊದಲು ಮಂತ್ರಯೋಗದ ಭೇದವಂತೆಂದೊಡೆ :
ಆವನಾನೊಬ್ಬ ಯೋಗಸಿದ್ಧಿಯ ಪಡೆವಾತನು
ಪಕ್ಷಿಗಳುಲಿಯದ ಮುನ್ನ, ಪಶುಗಳು ಕೂಗದ ಮುನ್ನ,
ಪ್ರಕೃತಿ ಆತ್ಮರು ಸುಳಿಯದ ಮುನ್ನ,
ಶುಭಮುಹೂರ್ತದಲ್ಲಿ ಶಿವಧ್ಯಾನಮಂ ಮಾಡುತೆದ್ದು
ಶೌಚಾಚಮನ ದಂತಧಾವನಂಗಳಂ ಮಾಡಿ ಜಲಸ್ನಾನಂಗೈದು,
ಏಕಾಂತಸ್ಥಳದಲ್ಲಿ ಕಂಬಳಾಸನದ ಗದ್ದುಗೆಯಲ್ಲಿ
ಪೂರ್ವಮುಖವಾಗಲಿ ಉತ್ತರಮುಖವಾಗಲಿ
ತನಗಿಷ್ಟಾಸನದಲ್ಲಿ ಕುಳ್ಳಿರ್ದು, ಭಸ್ಮಸ್ನಾನಂಗಳನಾಚರಿಸಿ
ಆಗಮೋಕ್ತದಿಂದೆ ಈಶ್ವರಾರ್ಚನೆಯಂ ಮಾಡಿ
ಬಳಿಕ ಅಂತರಾಳಹೃದಯಕಮಲ ಕರ್ಣಿಕಾಸ್ಥಲದಲ್ಲಿಹ
ಹಕಾರವೆಂಬ ಬೀಜಾಕ್ಷರಮಧ್ಯದಲ್ಲಿ
ಮೂರ್ತಿಧ್ಯಾನಂ ಮಾಡುವುದೆಂತೆನೆ :
ಶುದ್ಧಪದ್ಮಾಸನನಾಗಿ ಚಂದ್ರಕಲಾಧರನಾದ
ಪಂಚಮುಖ ತ್ರಿನೇತ್ರಂಗಳುಳ್ಳ
ಶೂಲ ವಜ್ರ ಖಡ್ಗ ಪರಶು ಅಭಯಂಗಳಾಂತ
ಪಂಚ ದಕ್ಷಿಣಹಸ್ತಂಗಳುಳ್ಳ
ನಾಗ ಪಾಶ ಘಂಟೆ ಅನಲ ಅಂಕುಶಂಗಳಾಂತ
ಪಂಚ ವಾಮಕರಂಗಳುಳ್ಳ
ಕಿರೀಟಾದ್ಯಾಭರಣಂಗಳಿಂದಲಂಕೃತನಾದ
ಸ್ಫಟಿಕದ ಕಾಂತಿಮಯನಾದ ಸದಾಶಿವಮೂರ್ತಿಯ ಧ್ಯಾನಿಸುತ್ತೆ,
''ಓಂ ಅಸ್ಯ ಶ್ರೀಷಡಕ್ಷರಮಂತ್ರಸ್ಯ ವಾಮದೇವ ಋಷಿಃ
ಪಂಕ್ತಿಃ ಛಂದಃ ಶ್ರೀಸದಾಶಿವೋ ದೇವತಾ
ಓಂ ಬೀಜಂ ಉಮಾಶಕ್ತಿಃ ಉದಾತ್ತಸ್ವರಃ
ಶ್ವೇತವರ್ಣಃ ಸದಾಶಿವಪ್ರೀತ್ಯರ್ಥೇ ಜಪೇ ವಿನಿಯೋಗಃ॥''
ಎಂಬ ಷಡಕ್ಷರಮಂತ್ರಾನುಷ್ಠಾನಾದಿ ಅಖಿಳಮಂತ್ರಗಳಿಂದ
ಕರಶಿರಾದಿ ಷಡಂಗನ್ಯಾಸಂಗಳಂ ಮಾಡಿ
ನಿತ್ಯಜಪಾನುಷ್ಠಾನಮಂ ಮೋಕ್ಷಾರ್ಥಿಯಾದಾತನು
ರುದ್ರಾಕ್ಷಿ ನೂರೆಂಟರಿಂದಾದಡೂ ಇಪ್ಪತ್ತೈದರಿಂದಾದಡೂ

ಆಗಮೋಕ್ತಮಾರ್ಗದಿಂದ ಜಪಮಾಲಿಕೆಯಿಂದೆ
ಅಂಗುಷ್ಠಮಧ್ಯಮೆಗಳಿಂದ ಉಪಾಂಶುರೂಪದಿಂದೆ
ಧ್ಯಾನಪೂರ್ವಕದಿಂ ಜಪವಂ ಮಾಡುವುದೆ
ಮಂತ್ರಯೋಗವೆನಿಸಿತ್ತು ಅಖಂಡೇಶ್ವರಾ. ॥ ೪೮೫ ॥

## ೨೧೯

ಈಡಾ ಪಿಂಗಳೆಯಲ್ಲಿ ತುಂಬಿ ಸೂಸುವ
ಹಂಸರೂಪವಾದ ಪ್ರಕೃತಿಪ್ರಾಣವಾಯುವನು
ಸೋಹಂಭಾವದಿಂದೆ ವೈಕೃತಪ್ರಾಣನಂ ಮಾಡಿ
ಧ್ಯಾನಮೂರ್ತಿಯಲಾದಡೂ
ಪ್ರಾಣಾತ್ಮಕವಾದ ಸುನಾದದಲಾದಡೂ ಲಕ್ಷ್ಯಂಗಳಲಾದಡೂ
ಮನೋಮಾರುತಂಗಳೊಳಗೂಡಿ ಲಯಿಸುವುದೆ
ಲಯಯೋಗ ನೋಡಾ ಅಖಂಡೇಶ್ವರಾ. ॥ ೪೮೬ ॥

## ೨೨೦

ಇನ್ನು ಹಠಯೋಗಕ್ಕೆ ಸಾಧನವಾದ
ಬಂಧತ್ರಯಂಗಳ ಭೇದವೆಂತೆಂದೊಡೆ :
ವಾಮಪಾದದ ಹಿಮ್ಮಡದಿಂ ಯೋನಿಸ್ಥಾನವನೊತ್ತಿ
ಬಲಪಾದಮಂ ನೀಡಿ,
ಎರಡು ಹಸ್ತಗಳಿಂದೆ ಅಂಗುಷ್ಠಮಂ ಪಿಡಿದು,
ಕಂಠಸ್ಥಾನದಲ್ಲಿ ಚುಬುಕವನಿರಿಸಿ,
ವಾಯುಧಾರಣಮಂ ಮಾಡುವುದೆ ಜಾಲಂಧರಬಂಧವೆನಿಸುವುದು.
ವಾಮಪಾದದ ಹಿಮ್ಮಡದಿಂದಾಧಾರವನೊತ್ತಿ,
ಎಡದ ತೊಡೆಯ ಮೇಲೆ ಬಲದ ಪಾದವನಿರಿಸಿ
ವಾಯುಪೂರಣಮಂ ಮಾಡಿ,
ಜಾಲಂಧರಮಂ ಬಂಧಿಸುವುದೆ ಮಹಾಬಂಧವೆನಿಸುವುದು.
ನಾಭಿಯ ಊರ್ಧ್ವ ಅಧೋಭಾಗಂಗಳನು
ಬಲಾತ್ಕಾರದಿಂ ಬಂಧಿಪುದೆ ಉಡ್ಯಾಣಬಂಧವೆನಿಸುವುದು.
ಈ ಬಂಧತ್ರಯಂಗಳಿಂದೆ
ಛೇದನ ಚಾಲನ ದೋಹನಾದಿ ಕ್ರೀಯಂಗಳಿಂದೆ
ಪೆಚ್ಚಿರ್ದ ಜಿಹ್ವೆಯನು ಭ್ರೂಮಧ್ಯಸ್ಥಾನಕ್ಕೇರಿಸಿ
ಸ್ಥಿರದೃಷ್ಟಿಯಾಗಿಹುದೇ ಹಠಯೋಗ ನೋಡಾ ಅಖಂಡೇಶ್ವರಾ. ॥ ೪೮೭ ॥

## ೨೨೧

ಈ ಹಠಯೋಗಕ್ಕೆ ನಿಜದಂಗವಾಗಿರ್ಪ
ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ

ಧ್ಯಾನ ಧಾರಣ ಸಮಾಧಿಗಳೆಂಬ ಅಷ್ಟಾಂಗಯೋಗದೊಳಗೆ
ಮೊದಲು ಯಮಯೋಗದ ಲಕ್ಷಣವೆಂತೆಂದೊಡೆ :
ಪರಸ್ತ್ರೀಯರ ಸಂಗವಿರಹಿತವಾಗಿಹುದು.
ಪರದ್ರವ್ಯವನಪಹರಿಸದಿಹುದು.
ಪರಹಿಂಸೆಯ ಮಾಡದಿಹುದು.
ದುಃಖಿತರಿಗೆ ಹಿತವ ಚಿಂತಿಸುವುದು.
ಶೋಕಭೀತಿಗಳಿಲ್ಲದಿಹುದು, ಅಲ್ಪಾಹಾರಿಯಾಗಿಹುದು.
ಕುಟಿಲತೆಯಿಲ್ಲದಿಹುದು, ಕಾರ್ಪಣ್ಯವಿಲ್ಲದಿಹುದು.
ಸತ್ಯವಚನವ ನುಡಿವುದು.
ಜಲಸ್ನಾನ ಭಸ್ಮಸ್ನಾನಾದಿಗಳನಾಚರಿಸುವುದು.
ಯಮಯೋಗವೆನಿಸುವುದಯ್ಯಾ ಅಖಂಡೇಶ್ವರಾ. ॥ ೪೮೮ ॥

## ೨೩೨

ಬಳಿಕ ನಿಯಮದ ಲಕ್ಷಣವೆಂತೆಂದೊಡೆ :
ಸಕಲ ವಿಷಯಂಗಳಲ್ಲಿ ಉದಾಸೀನತ್ವವು.
ಶಿವಾಗಮೋಕ್ತಂಗಳಲ್ಲಿ ವಿಶ್ವಾಸವು.
ಸತ್‌ಕೃತ್ಯದಲ್ಲಿ ವಿರಕತೆಯು.
ದೇಹಶೋಷಣರೂಪವಾದ ತಪವು.
ನಾನಾರು ಮೋಕ್ಷವೆಂತಪ್ಪುದು ಎಂಬಾಲೋಚನೆಯು
ಭಸ್ಮನಿಷ್ಠಾದಿ ವ್ರತವು, ಶಿವಲಿಂಗಾರ್ಚನೆಯು.
ಪ್ರಣವ ಪಂಚಾಕ್ಷರಾದಿ ಮಂತ್ರಜಪವು.
ಲೋಕವಿರುದ್ಧ ವೇದವಿರುದ್ಧವಾದ
ಮಾರ್ಗಂಗಳಲ್ಲಿ ಮನವೆರಗದಿಹುದು.
ಯೋಗಶಾಸ್ತ್ರಂಗಳ ಕೇಳುವುದು.
ಸತ್‌ಪಾತ್ರದಾನಯುಕ್ತವಾಗಿಹುದು
ನಿಯಮಯೋಗ ನೋಡಾ ಅಖಂಡೇಶ್ವರಾ. ॥ ೪೮೯ ॥

## ೨೩೩

ಇನ್ನು ಆಸನದ ಭೇದವೆಂತೆಂದೊಡೆ:
ಒಂದು ಹಿಮ್ಮಡದಿಂ ಯೋನಿಸ್ಥಾನವನೊತ್ತಿ,
ಮತ್ತೊಂದು ಹಿಮ್ಮಡಮಂ ಮೇಢ್ರದ ಮೇಲಿರಿಸಿ,
ಏಕಚಿತ್ತನಾಗಿ ಋಜುಕಾಯನಾಗಿ,
ಭ್ರೂಮಧ್ಯದಲ್ಲಿ ದೃಷ್ಟಿಯುಳ್ಳಾತನಾಗಿಹುದೇ ಸಿದ್ಧಾಸನವೆನಿಸುವುದು.
ಎರಡು ತೊಡೆಗಳ ಮೇಲೆ
ಎರಡು ಪಾದಂಗಳ ಮೇಲುಮುಖವಾಗಿರಿಸಿ,

ಎರಡು ಕರತಳಂಗಳನು ನಡುವೆ ಮೇಲುಮುಖವಾಗಿರಿಸಿ,
ರಾಜದಂತಗಳನಡುವೆ ರಸನಾಗ್ರವನಿಟ್ಟು,
ನಾಸಾಗ್ರದೃಷ್ಟಿಯಿಂದಿಹುದೆ ಪದ್ಮಾಸನವೆನಿಸುವುದು.
ಎರಡು ತೊಡೆ ಕಿರಿದೊಡೆಗಳ ಸಂದಿಗಳಲ್ಲಿ
ಎರಡು ಪಾದಂಗಳನಿರಿಸಿ,
ಋಜುಕಾಯನಾಗಿಹುದೇ ಸ್ವಸ್ತಿಕಾಸನವೆನಿಸುವುದು.
ಮೇಢ್ರದ ಮೇಲೆ ಎಡದ ಹಿಮ್ಮಡವನಿರಿಸಿ,
ಅದರ ಮೇಲೆ ಬಲದ ಹಿಮ್ಮಡವನಿರಿಸಿ,
ಋಜುಕಾಯನಾಗಿಹುದೆ ಮುಕ್ತಾಸನವೆನಿಸುವುದು.
ಬಲದ ಹಿಮ್ಮಡಮಂ ಎಡದ ಪೊರವಾರಿನೊಳಿಟ್ಟು,
ಎಡದ ಹಿಮ್ಮಡಮಂ ಬಲದ ಪೊರವಾರಿನೊಳಿಟ್ಟು,
ಜಾನುಗಳೆರಡನು ಗೋಮುಖಾಕಾರಮಂ ಮಾಳ್ಪುದೇ
ಗೋಮುಖಾಸನವೆನಿಸುವುದು.
ಈ ಸಕಲ ಆಸನಗಳಿಂದೆ ಯೋಗಮಂ ಸಾಧಿಸುವುದೇ
ಆಸನಯೋಗ ನೋಡಾ ಅಖಂಡೇಶ್ವರಾ. || ೪೯೦ ||

### ೭೩೪

ಇನ್ನು ಪ್ರಾಣಾಯಾಮದ ಲಕ್ಷಣವೆಂತೆಂದೊಡೆ :
ಪ್ರಾಕೃತಪ್ರಾಣಾಯಾಮವೆಂದು, ವೈಕೃತಪ್ರಾಣಾಯಾಮವೆಂದು,
ಆ ಎರಡರಿಂ ಪೊರತಾದ ಕೇವಲ ಕುಂಭಕವೆಂದು,
ಮೂರು ಪ್ರಕಾರವಾಗಿರ್ಪುದದೆಂತೆನೆ :
ದಿನವೊಂದಕ್ಕೆ ಇಪ್ಪತ್ತೊಂದು ಸಾವಿರದ ಆರುನೂರು
ಹಂಸ ಹಂಸವೆಂದುಚ್ಚರಿಸುವ
ಅಹಂಕಾರಾತ್ಮಕವಾದ ಜೀವಜಪವೇ
ಪ್ರಾಕೃತ ಪ್ರಾಣಾಯಾಮವೆನಿಸುವುದು.
ಮತ್ತಾ ಜೀವಜಪವನು ಗುರೂಪದೇಶದಿಂದ ಲೋಪವಮಾಡಿ
ಸೋಹಂ ಸೋಹಂ ಎಂಬ ಮಂತ್ರಸಂಸ್ಕಾರದಿಂದುಚ್ಚರಿಸುವುದೆ
ವೈಕೃತಪ್ರಾಣಾಯಾಮವೆನಿಸುವುದು.
ಆ ವೈಕೃತಪ್ರಾಣಾಯಾಮವೆ
ಇನ್ನೊಂದು ಪ್ರಕಾರವಾಗಿ ಪೇಳಲ್ಪಡುವುದವೆಂತೆನೆ :
ಕನಿಷ್ಠೆ ಅನಾಮಿಕೆಗಳಿಂದೆ ಈಡನಾಡಿಯಂ ಬಲಿದು,
ಪಿಂಗಳನಾಡಿಯಿಂದೆ ದೇಹಾಂತರ್ಗತ ವಾಯುಮಂ
ಅಕಾರೋಚ್ಚರಣದಿಂ ಪನ್ನೆರಡು ಮಾತ್ರೆ ರಚಿಸಿ,
ಮತ್ತ ಪಿಂಗಳನಾಡಿಯಂ ಅಂಗುಷ್ಠದಿಂ ಬಲಿದು,
ಈಡಾನಾಡಿಯಿಂದೆ ಪನ್ನೆರಡು ಮಾತ್ರೆ ಉಕಾರೋಚ್ಚರಣದಿಂ ಪೂರಿಸಿ,

ನಾಭಿ ಹೃದಯ ಕಂಠವೆಂಬ ತ್ರಿಸ್ಥಾನದೊಳೊಂದರಲ್ಲಿ
ಪನ್ನೆರಡು ಮಾತ್ರೆ ಮಕಾರೋಚ್ಚರಣದಿಂ ತುಂಬಿಪುದೆ
ಕನಿಷ್ಠಪ್ರಾಣಾಯಾಮವೆನಿಸುವುದು.
ಅದೆಂತೆಂದೊಡೆ :
ಶೀಘ್ರವಲ್ಲದೆ ವಿಳಂಬವಲ್ಲದೆ ಜಾನುಪ್ರದಕ್ಷಿಣಮಂ ಮಾಡಿ,
ಅಂಗುಲಿಸ್ಫೋಟನಮಂ ಮಾಡಿದರೆ ಒಂದು ಮಾತ್ರೆ ಎನಿಸುವುದು.
ಇಂತಹ ಮಾತ್ರೆ ಪನ್ನೆರಡು ಆದರೆ ಕನಿಷ್ಠವೆನಿಸುವುದು.
ಮತ್ತಾ ಮಾತ್ರೆ ಇಪ್ಪತ್ತುನಾಲ್ಕಾದರೆ ಮಧ್ಯಮವೆನಿಸುವುದು.
ಬಳಿಕಾ ಮಾತ್ರೆ ಮೂವತ್ತಾರಾದರೆ ಉತ್ತಮವೆನಿಸುವುದು.
ಇಂತೀ ಮೂವತ್ತಾರು ಮಾತ್ರೆಗಳು
ಮಂತ್ರ ಸ್ಮರಣೆ ಧ್ಯಾನ ಸಹಿತವಾಗಿ ಮಾಳ್ಪುದೆ
ಪ್ರಾಣಾಯಾಮದಲ್ಲಿ ಉತ್ತಮ ಪ್ರಾಣಾಯಾಮವೆನಿಸುವುದು.
ಇನ್ನು ಕೇವಲ ಕುಂಭಕವೆಂತೆನೆ :
ವಾಮಭಾಗದ ಈಡಾನಾಡಿಯೇ ಚಂದ್ರನಾಡಿಯೆಂದು
ಯಮುನಾನದಿ ಎಂದು ಪೇಳಲ್ಪಡುವುದು.
ದಕ್ಷಿಣಭಾಗದ ಪಿಂಗಳನಾಡಿಯೇ ಸೂರ್ಯನಾಡಿಯೆಂದು
ಗಂಗಾನದಿಯೆಂದು ಪೇಳಲ್ಪಡುವುದು.
ಸುಷುಮ್ನೆಯೆಂಬ ಮಧ್ಯನಾಡಿಯೇ ಅಗ್ನಿಯೆಂದು
ಸರಸ್ವತಿನದಿಯೆಂದು ಪೇಳಲ್ಪಡುವುದಾಗಿ,
ಆ ನದಿತ್ರಯಂಗಳ ಸಂಬಂಧದಿಂ ತ್ರಿವೇಣಿಯೆಂಬ ಯೋಗಸ್ಥಲಕ
ತ್ರಿಕೂಟವೆಂದು, ಮಧ್ಯಹೃದಯವೆಂದು, ಶಾಂತಿಕ್ಷೇತ್ರವೆಂದು,
ಕೂರ್ಚವೆಂದು ಆಜ್ಞಾಚಕ್ರವೆಂದು, ಪರ್ಯಾಯ ನಾಮಂಗಳನುಳ್ಳ
ಶಿವಧ್ಯಾನಕ್ಕೆ ರಹಸ್ಯವಾದ ಭ್ರೂಮಧ್ಯಸ್ಥಾನದಲ್ಲಿ
ಮನೋಮಾರುತಂಗಳನೈದಿಸಿ ಯೋಗಮಂ ಸಾಧಿಸಲ್ತಕ್ಕುದೇ
ಪ್ರಾಣಾಯಾಮಾಭ್ಯಾಸ ನೋಡಾ ಅಖಂಡೇಶ್ವರಾ. || ೪೯೧ ||

**೭೩೫**

ಇನ್ನು ಪ್ರತ್ಯಾಹಾರದ ಭೇದವೆಂತೆನೆ :
ಯೋಗಾಭ್ಯಾಸವ ಮಾಡುವಲ್ಲಿ
ಆಲಸ್ಯವಾದ ಮಂದಸ್ವರೂಪವಾದ ಅತಿ ಉಷ್ಣವಾದ
ಅತಿ ಶೀತಲವಾದ ಅತಿ ಕಟುವಾದ ಅತಿ ಆಮ್ಲವಾದ
ಅಪವಿತ್ರವಾದ ಅನ್ನಪಾನಂಗಳಂ ಬಿಟ್ಟು,
ಯೋಗೀಶ್ವರರಿಗೆ ಸ್ವೀಕರಿಸಲು ಯೋಗ್ಯವಾದ
ಗೋದುವೆ ಶಾಲಿ ಜವೆ ಪಸರು ಹಾಲು ತುಪ್ಪ ಜೇನುತುಪ್ಪ

ಮುಂತಾದ ಪವಿತ್ರ ಅನ್ನಪಾನಂಗಳು
ಬಹು ಬಹುಳವಲ್ಲದೆ, ಬಹು ಸೂಕ್ಷ್ಮವಲ್ಲದೆ,
ಸುಪ್ರಮಾಣದಲ್ಲಿ ಸ್ವೀಕರಿಸುವುದೆ ಪ್ರತ್ಯಾಹಾರವೆನಿಸುವುದು.
ಅಂತುಮಲ್ಲದೆ ಬಾಹ್ಯಾರ್ಥಂಗಳಲ್ಲಿ ಎರಗುವ ಚಿತ್ತಮಂ
ಹೃದಯಾಕಾಶದಲ್ಲಿ ನಿಲಿಸುವುದೆ ಪ್ರತ್ಯಾಹಾರವು.
ಮತ್ತ ಹೃದಯಸ್ಥಾನದಿಂ ಚಲಿಸುವ ಮನಮಂ ಮರಳಿ ಮರಳಿ
ಅಲ್ಲಿಯೇ ಸ್ಥಾಪಿಸುವುದೇ ಪ್ರತ್ಯಾಹಾರವಯ್ಯಾ ಅಖಂಡೇಶ್ವರಾ. ॥ ೪೯೨ ॥

## ೭೩೬

ಇನ್ನು ಯೋಗೀಶ್ವರರ ಧ್ಯಾನಯೋಗಕ್ಕೆ ಸ್ಥಾನಂಗಳಾವುವೆನೆ :
ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ
ಆಜ್ಞೇಯ ಭ್ರೂಮಧ್ಯಾದಿ ಸ್ಥಾನಂಗಳಲ್ಲಿ
ಬಂಧಮುದ್ರೆಗಳಿಂದೆ ಧ್ಯಾನಮಂ ಮಾಳ್ಪುದಂತೆನೆ :
ಆಧಾರಚಕ್ರಗಳ ನಾಲ್ಕೆಸಳಮಧ್ಯದಲ್ಲಿ
ಇಷ್ಟಾರ್ಥಮಂ ಕೊಡುವ ಸುವರ್ಣ ಕಾಂತಿಯನುಳ್ಳ
ಆಧಾರಶಕ್ತಿಯಂ ಧ್ಯಾನಿಸುವುದು.
ಸ್ವಾಧಿಷ್ಠಾನಚಕ್ರ ಆರೆಸಳಮಧ್ಯದಲ್ಲಿ ಸಕಲವರ್ಣದಿಂ
ಲಿಂಗಸ್ವರೂಪನಾದ ಶಿವನಂ ಧ್ಯಾನಿಸುವುದು.
ಮಣಿಪೂರಕಚಕ್ರ ಹತ್ತೆಸಳಮಧ್ಯದಲ್ಲಿ
ಸುಪ್ತಸರ್ಪಾಕಾರದ ಮಿಂಚಿಗೆ ಸಮಾನದೀಪ್ತಿಯುಳ್ಳ,
ಸಕಲಸಿದ್ಧಿಗಳಂ ಕೊಡುವ ಕುಂಡಲಿಶಕ್ತಿಯಂ ಧ್ಯಾನಿಸುವುದು.
ಅನಾಹತಚಕ್ರ ಹನ್ನೆರಡೆಸಳಮಧ್ಯದಲ್ಲಿ
ಜ್ಯೋತಿರ್ಮಯಲಿಂಗಮಂ ಧ್ಯಾನಿಸುವುದು.
ವಿಶುದ್ಧಿಚಕ್ರ ಷೋಡಶದಳಮಧ್ಯದಲ್ಲಿ
ಸುಸ್ಥಿರವಾದ ಆನಂದರೂಪಿಣಿಯಾದ
ಸುಷುಮ್ನೆಯಂ ಧ್ಯಾನಿಸುವುದು.
ಆಜ್ಞಾಚಕ್ರ ದ್ವಿದಳಮಧ್ಯದಲ್ಲಿ ವಾಕ್ಸಿದ್ಧಿಯಂ ಕೊಡುವ
ದೀಪದ ಜ್ವಾಲೆಗೆ ಸಮಾನವಾದ ಜ್ಞಾನನೇತ್ರವೆನಿಸುವ
ಶುದ್ಧಪ್ರಸಾದಜ್ಯೋತಿಯಂ ಧ್ಯಾನಿಸುವುದೇ
ಧ್ಯಾನಯೋಗ ನೋಡಾ ಅಖಂಡೇಶ್ವರಾ. ॥ ೪೯೩ ॥

## ೭೩೭

ಇನ್ನು ಧಾರಣಯೋಗದ ಲಕ್ಷಣವೆಂತೆನೆ :
ಸಂಕಲ್ಪ ವಿಕಲ್ಪಾತ್ಮಕವಾದ ಮನಸ್ಸು
ಕಾಕಾಕ್ಷಿಯಂತೆ ಬಾಹ್ಯಾಭ್ಯಂತರಗಳಿಗೆ ತಾನೇ ಕಾರಣವಪ್ಪುದರಿಂದ

ಆ ಮನಮಂ ಮುದ್ರಾಕರಣಬಂಧಂಗಳಿಂದಂತರ್ಮುಖಮಂ ಮಾಡಿ,
ಅನವಚ್ಛಿನ್ನ ತೈಲಧಾರೆಯಂತೆ ಶಿವಧ್ಯಾನಮಂ ಮಾಡುತಿರಲು
ಆ ಧ್ಯಾನಾಕಾರದಿಂ ಕರಿಗೊಂಡ ವಸ್ತುವಿನೊಳು
ಆ ಮನವು ನಿಶ್ಚಲವಾಗಲದೇ ಧಾರಣಯೋಗ ನೋಡಾ
ಅಖಂಡೇಶ್ವರಾ. || ೪೯೪ ||

೨೩೮

ಇನ್ನು ಸಮಾಧಿಯೋಗವೆಂತೆಂದೊಡೆ :
ಸುಖದುಃಖ ಪುಣ್ಯಪಾಪ ಪೂಜಾಪೂಜಂಗಳು
ಸಂಕಲ್ಪವಿಕಲ್ಪಂಗಳೇನೂ ತೋರದೆ,
ತಾನೆಂಬ ಅಹಂಭಾವವಳಿದು
ಅಖಂಡಪರಿಪೂರ್ಣವಾದ ಪರಬ್ರಹ್ಮದಲ್ಲಿ ಕೂಡಿದ
ಸಮರಸಭಾವವೇ ಸಮಾಧಿಯಯ್ಯಾ ಅಖಂಡೇಶ್ವರಾ. || ೪೯೫ ||

೨೩೯

ಬಳಿಕೀ ಪ್ರಕಾರವಾದ ಹಠಯೋಗರೂಪಮಪ್ಪ
ಅಷ್ಟಾಂಗಗಳಂ ನಿರಾಲಸ್ಯದಿಂ ಎಡಬಿಡುವಿಲ್ಲದ ಮಾಡಿದಾತಂಗೆ
ಆಗುವ ಸಿದ್ಧಿಪ್ರಕಾರಗಳೆಂತೆನೆ :
ಮೊದಲನೆಯ ವರ್ಷದಲ್ಲಿ
ನಿರೋಗಿಯಾಗಿ ಸಕಲಜನ ಪ್ರೀತನಾಗುವನು.
ಎರಡನೆಯ ವರ್ಷದಲ್ಲಿ
ಸುಸಂಸ್ಕೃತ ಭಾಷೆಯಿಂದ ಕವಿತ್ವವಂ ಮಾಡುವನು.
ಮೂರನೆಯ ವರ್ಷದಲ್ಲಿ
ಸರ್ಪಾದಿ ದುಷ್ಟಪ್ರಾಣಿಗಳಿಂದೆ ಬಾಧಿಸಿಕೊಳ್ಳುತಿರನು.
ನಾಲ್ಕನೆಯ ವರ್ಷದಲ್ಲಿ
ಹಸಿವು ತೃಷೆ ವಿಷಯ ನಿದ್ರೆ ಶೋಕ ಮೋಹಾದಿಗಳಂ ಬಿಡುವನು.
ಐದನೆಯ ವರ್ಷದಲ್ಲಿ
ದೂರಶ್ರವಣ ವಾಕ್ಸಿದ್ಧಿ ಪರಕಾಯಪ್ರವೇಶಾಧಿಕವುಳ್ಳಾತನಹನು.
ಆರನೆಯ ವರ್ಷದಲ್ಲಿ
ವಜ್ರಾದ್ಯಾಯುಧಗಳಿಂದ ಭೇದಿಸಲ್ಪಡದಾತನಾಗಿ,
ಶೀಘ್ರಗಾಮಿಯಾಗಿ ದೂರದರ್ಶನವುಳ್ಳಾತನಾಗುವನು.
ಏಳನೆಯ ವರ್ಷದಲ್ಲಿ ಖೇಚರಗಾಮಿಯಾಗುವನು.
ಎಂಟನೆಯ ವರ್ಷದಲ್ಲಿ
ಅಣಿಮಾದಿ ಅಷ್ಟಮಹದೈಶ್ವರ್ಯಸಂಪನ್ನನಾಹನು.
ಒಂಬತ್ತನೆಯ ವರ್ಷದಲ್ಲಿ ಸ್ವೇಚ್ಛಾಗಮನಿಯಾಗಿ ವಜ್ರಶರೀರಿಯಾಹನು.

ಹತ್ತನೆಯ ವರ್ಷದಲ್ಲಿ
ಮನೋಯೋಗಿಯಾಗಿ ಇಚ್ಛಾವಿಷಯಂಗಳ ಪಡೆಯುವನು.
ಹನ್ನೊಂದನೆಯ ವರ್ಷದಲ್ಲಿ
ಸಕಲ ಲೋಕಂಗಳಿಗೆ ಆಜ್ಞಾಕರ್ತೃವಾಹನು.
ಹನ್ನೆರಡನೆಯ ವರ್ಷದಲ್ಲಿ
ಶಿವನ ಸಮಾನವಾಗಿ ಸೃಷ್ಟಿಸ್ಥಿತಿಲಯಂಗಳಂ ಮಾಡುತಿರ್ಪುದೇ
ಹಠಯೋಗಸಿದ್ಧಿ ನೋಡಾ ಅಖಂಡೇಶ್ವರಾ. || ೪೯೬ ||

## ೬೪೦

ಇನ್ನು ತಾರಕಯೋಗದ ಲಕ್ಷಣಮಂ ಪೇಳ್ವೆನೆಂತೆನೆ :
ಮಂತ್ರಯೋಗ ಲಯಯೋಗ ಹಠಯೋಗಕ್ಕೆ
ಉತ್ತರೋತ್ತರ ವಿಶಿಷ್ಟವಾದ ರಾಜಯೋಗವೇ
ಸಾಂಖ್ಯಯೋಗವೆಂದು ತಾರಕಯೋಗವೆಂದು ಅಮನಸ್ಕಯೋಗವೆಂದು
ಮೂರು ಪ್ರಕಾರವಾಗಿರ್ಪುದು.
ಆ ಮೂರರೊಳಗೆ ಮೊದಲು ಸಾಂಖ್ಯಯೋಗವೇ
ತತ್ವಜ್ಞಾನರೂಪವಪ್ಪುದರಿಂದ, ಆ ತತ್ವಂಗಳೆಂತೆನೆ :
ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ
ಪಂಚತತ್ವಂಗಳಿಂದ ಜನಿತವಾದ
ವಾಗಾದಿ ಕರ್ಮೇಂದ್ರಿಯಂಗಳೈದು, ಶಬ್ದಾದಿ ವಿಷಯಂಗಳೈದು,
ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು, ಪ್ರಾಣಾದಿ ವಾಯುಗಳೈದು,
ಜೀವನಗೂಡಿ ಮಾನಸಾದಿ ಅಂತಃಕರಣಂಗಳೈದು,
ಇಂತೀ ಪಂಚವಿಂಶತಿ ತತ್ವಂಗಳು ನಾನಲ್ಲ,
ಅವು ನನ್ನವಲ್ಲವೆಂದು ವಿಭಾಗಿಸಿ ಕಳೆದು,
ಪರಾತ್ಪರವಾದ ಪರಶಿವಬ್ರಹ್ಮವೆ ನಾನೆಂದು ತಿಳಿವುದೇ
ಸಾಂಖ್ಯಯೋಗ ನೋಡಾ ಅಖಂಡೇಶ್ವರಾ. || ೪೯೭ ||

## ೬೪೧

ಇನ್ನು ತಾರಕಯೋಗದ ಲಕ್ಷಣವೆಂತೆನೆ:
ವೇದ ಶಾಸ್ತ್ರಾಗಮ ಪುರಾಣ ಕವಿತ್ವಗಳೆಂಬ
ನುಡಿಗಳಿಂದೆ ವಾಚಾಳಕರಾದವರಿಗೆ
ತಾರಕಬ್ರಹ್ಮವು ಸಾಕ್ಷಾತ್ಕಾರವಾಗದು.
ಬ್ರಹ್ಮಚಾರಿ ಗೃಹಸ್ಥ ವಾನಪ್ರಸ್ಥ ಯತಿಗಳೆಂಬ
ಚತುರಾಶ್ರಮಗರ್ವಿತರಿಗೆ
ತಾರಕಬ್ರಹ್ಮವು ಸಾಕ್ಷಾತ್ಕಾರವಾಗದು.
ಜ್ಞಾನಖಾಂಡ ಕರ್ಮಖಾಂಡಗಳೆಂಬ ವೇದಾಂತಿ ಸಿದ್ಧಾಂತಿಗಳಿಗೆ

ತಾರಕಬ್ರಹ್ಮವು ಸಾಕ್ಷಾತ್ಕಾರವಾಗದು.
ಶ್ರೀ ಗುರುಕಟಾಕ್ಷದಿಂದಲ್ಲದೆ ತಾರಕಬ್ರಹ್ಮವು
ಆರಾರಿಗೂ ಸಾಕ್ಷಾತ್ಕಾರವಾಗದಯ್ಯಾ ಅಖಂಡೇಶ್ವರಾ. ॥ ೨೯೮ ॥

೭೪೨

ಸದ್ಗುರುಪ್ರಸಾದದಿಂದೊಗೆದ ತಾರಕಬ್ರಹ್ಮದ ಅಭ್ಯಾಸವೆಂತೆನೆ;
ಈ ತಾರಕಬ್ರಹ್ಮವು ನಾದವೆಂದು ಕಲೆಯೆಂದು ಬಿಂದುವೆಂದು
ಮೂರುಪ್ರಕಾರಮಪ್ಪುದು.
ಅವರೊಳಗೆ ಆ ಕಲೆಯೆ ಕಮಲತಂತುವಿನಂತೆ
ಪರಮಸೂಕ್ಷ್ಮವಾಗಿ, ಹರಿಹಂಚಿಲ್ಲದೆ
ಬ್ರಹ್ಮರಂಧ್ರಸ್ಥಾನದಲ್ಲಿ ದಿವ್ಯಪ್ರಕಾಶರೂಪದಿಂದಿಹುದು.
ಮತ್ತಾ ಕಲೆಯೆ ಬಲಿದು
ಅಂಗುಷ್ಠಮಾತ್ರಮಾದ ದ್ವೀಪಜ್ವಾಲೆಯಾಕರದಿಂ
ಭ್ರೂಮಧ್ಯಸ್ಥಾನದಲ್ಲಿ ಕಾಣಿಸಲು ಅದೇ ನಾದವೆನಿಸುವುದು.
ಬಳಿಕಾ ನಾದವೆ ಬಲಿದು
ಚಂದ್ರಸೂರ್ಯರ ಪ್ರಭಾಮಂಡಲಂಗಳನೊಳಕೊಂಡು
ನೇತ್ರಮಧ್ಯದೊಳಿರಲು
ಅದೇ ಬಿಂದುವೆನಿಸುವುದಯ್ಯಾ ಅಖಂಡೇಶ್ವರಾ. ॥ ೨೯೯ ॥

೭೪೩

ಚಂದ್ರಸೂರ್ಯರೆನಿಸುವ
ವಾಮದಕ್ಷಿಣ ನೇತ್ರಂಗಳಮಧ್ಯದಲ್ಲಿ ತಾರಕಂಗಳಾಗಿರ್ದ
ಊರ್ಧ್ವಮುಖವಪ್ಪುದರಿಂದೆ ಚಲಿಸದೆ ಜಪಿಸುತಿರ್ಪ
ಜೀವಚೈತನ್ಯಸೂತ್ರಕ್ಕೆ ಮುಖ್ಯವಾದ
ಪರಮಸೂಕ್ಷ್ಮದ್ವಾರಗಳಿಂ ಕೂಡಿದ
ನೀಲಬಿಂದುಗಳೆರಡನು ಶ್ರೀಗುರೂಪದೇಶದಿಂದೆ ಲೇಸಾಗಿ ತಿಳಿದು
ಆ ತಾರಕಬ್ರಹ್ಮವನಭ್ಯಾಸಂಗೈವಾತನೆ
ರಾಜಯೋಗಿ ನೋಡಾ ಅಖಂಡೇಶ್ವರಾ. ॥ ೩೦೦ ॥

೭೪೪

ದಕ್ಷಿಣಜ್ಯೋತಿಮಂಡಲದ ಮಧ್ಯದಲ್ಲಿ
ಪ್ರತ್ಯಕ್ಷನಾಗಿರ್ಪ ಪರಮಾತ್ಮನೆ ಪತಿ,
ವಾಮಜ್ಯೋತಿಮಂಡಲಮಧ್ಯದಲ್ಲಿ
ಬೆಳಗುತಿರ್ಪ ಜೀವಾತ್ಮನೆ ಸತಿ.
ಈ ಮಂಡಲಗಳ ಯೋಗವೇ

ತತ್ವಮಸಿಯೆಂಬ ಮಹಾವಾಕ್ಯಾರ್ಥವಾದ
ಜೀವಪರಮರೈಕ್ಯವದೇ ಲಿಂಗಾಂಗಸಂಯೋಗವದೇ
ಶಿವಾತ್ಮರ ಸಮರಸವದೇ ನೋಡಾ ಅಖಂಡೇಶ್ವರಾ. ॥ ೫೦೧ ॥

೭೪೫

ಪರತರ ಪರಮ ಸಮರಸಸ್ವರೂಪವಾದ ತಾರಕಬ್ರಹ್ಮವು
ಅಂತರ್ಲಕ್ಷ್ಯವೆಂದು ಬಹಿರ್ಲಕ್ಷ್ಯವೆಂದು ಮಧ್ಯಲಕ್ಷ್ಯವೆಂದು
ತ್ರಿವಿಧವಪ್ಪುದು.
ಅದರಲ್ಲಿ ಮೊದಲು ಅಂತರ್ಲಕ್ಷ್ಯವೆಂತೆನೆ :
ಮೂಲಾಧಾರದಿಂದೆ ಬ್ರಹ್ಮರಂಧ್ರ ಪರಿಯಂತರವಾಗಿ
ಕೋಟಿಮಿಂಚುಗಳಿಗೆ ಸದೃಶವಾದ ಬಿಂದುವನು
ಮನಸ್ಸಿನಿಂದ ಧ್ಯಾನಿಸುವುದು.
ಮತ್ತಂ, ಗೋಲಾಟಮಂಡಲವೆನಿಸುವ ಲಲಾಟದುಪರಿಭಾಗದಲ್ಲಿ
ಮಿನುಗುತಿರ್ದ ನಕ್ಷತ್ರಾಕಾರವನು ಮನಸ್ಸಿನಿಂದೆ ಸ್ಮರಿಸುವುದು.
ಮತ್ತಂ, ಶ್ರವಣಂಗಳೆರಡನು ಬೆರಳಿನಿಂದೆ ಮಿಗಿಲಾಗಿ ಒತ್ತಲಾಗಿ
ಕಪಾಲಕುಹರದಲ್ಲಿ ಘಮುಘಮುಧ್ವಾನಸ್ವರೂಪವಾದ
ಪ್ರಣವಘೋಷವನಾಲಿಪುದು.
ಮತ್ತಂ, ಲೋಚನಂಗಳ ಮಧ್ಯದ
ಕರಿಯ ನಕ್ಷತ್ರರೂಪಮಂ ಲಕ್ಷಿಪುದೇ
ಅಂತರ್ಲಕ್ಷ್ಯವಯ್ಯಾ ಅಖಂಡೇಶ್ವರಾ. ॥ ೫೦೨ ॥

೭೪೬

ನಾಸಿಕಾಗ್ರದಿಂ ಮುಂದೆ ನಾಲ್ಕಂಗುಲಪ್ರಮಾಣದಲ್ಲಿ
ನೀಲವರ್ಣವಾದಾಕಾಶವನು,
ಆರಂಗುಲದಲ್ಲಿ ಧೂಮವರ್ಣವಾದ ವಾಯುವನು,
ಎಂಟಂಗುಲದಲ್ಲಿ ರಕ್ತವರ್ಣವಾದ ಅಗ್ನಿಯನು,
ಹತ್ತಂಗುಲದಲ್ಲಿ ತೆರೆಗಳ ವರ್ಣವಾದ ಅಪ್ಪುವನು,
ಹನ್ನೆರಡಂಗುಲದಲ್ಲಿ ಹೊಂಬಣ್ಣವಾದ ಪೃಥ್ವಿಯನು
ಲಕ್ಷಿಪುದೆ ಬಹಿರ್ಲಕ್ಷ್ಯ ನೋಡಾ ಅಖಂಡೇಶ್ವರಾ. ॥ ೫೦೩ ॥

೭೪೭

ಮತ್ತಂ, ಶಿರಸ್ಸಿನ ಮೇಲುಭಾಗದ ಹನ್ನೆರಡಂಗುಲಪ್ರಮಾಣೆನಲ್ಲಿ
ರಕ್ತ ಪೀತಾದಿ ಸಕಲವರ್ಣಾಕಾರಮಿಲ್ಲದ
ಶುದ್ಧಸಾತ್ವಿಕವಾದ ಬೆಳಗಿನೊಬ್ಬುಳಿಯನು ಲಕ್ಷಿಪುದೇ
ಬಹಿರ್ಲಕ್ಷ್ಯವಯ್ಯಾ ಅಖಂಡೇಶ್ವರಾ. ॥ ೫೦೪ ॥

೭೪೮

ಚತುರ್ಭೂತಂಗಳನೊಳಕೊಂಡು
ನೀಲಲೋಹಿತಾದಿ ವರ್ಣಂಗಳಿಲ್ಲದಿಹುದೆ ಭೂತಾಕಾಶವೆನಿಸುವುದು.
ಅದನೊಳಗೊಂಡುದು ನೀಲವರ್ಣವಾದ ಸ್ಥೂಲಾಕಾಶವೆನಿಸುವುದು.
ಅದನೊಳಗೊಂಡುದು ಅರುಣವರ್ಣವಾದ ಮಹದಾಕಾಶವೆನಿಸುವುದು.
ಅದನೊಳಗೊಂಡುದು ಶ್ವೇತವರ್ಣವಾದ ತತ್ತ್ವಾಕಾಶವೆನಿಸುವುದು.
ಈ ಚತುರ್ವಿಧದಾಕಾಶವನೊಳಗೊಂಡುದು
ಕೋಟಿಸೂರ್ಯಪ್ರಕಾಶವಾದ ಚಿಂದ್ವಾಕಾಶವೆನಿಸುವುದಾಗಿ,
ಕಣ್ಣಮುಂದಣ ಬಯಲಿನೊಳಗೆ
ಕ್ರಮದಿಂದಾಯಾಯ ಆಕಾಶಂಗಳನು ಕಾಣ್ಬುದೆ
ಮಧ್ಯಲಕ್ಷ್ಯ ನೋಡಾ ಅಖಂಡೇಶ್ವರಾ. || ೫೦೫ ||

೭೪೯

ಈ ಲಕ್ಷ್ಯತ್ರಯಂಗಳನರಿದ ಯೋಗೀಶ್ವರನು
ಮುಂದೆ ಮುದ್ರಾತ್ರಯಂಗಳನರಿಯಬೇಕೆಂತೆನೆ :
ಶಿವಧ್ಯಾನದಲ್ಲಿ ಕುಳ್ಳಿರ್ದು
ನವದ್ವಾರಂಗಳಂ ಬಲಿವುದೆ ಷಣ್ಮುಖೀಮುದ್ರೆ.
ಈ ಷಣ್ಮುಖೀಮುದ್ರೆಯಿಂದೆ ಒಳಗೆ
ನಾದಾನುಸಂಧಾನದಲ್ಲಿ ಮನೋಮಾರುತಂಗಳು ನಿಶ್ಚಲವಾಗಿರ್ಪುದ
ಖೇಚರೀಮುದ್ರೆ ಎನಿಸುವುದು.
ನೇತ್ರಂಗಳ ತುದಿಯ ಸೂಕ್ಷ್ಮರಂಧ್ರವನುಳ್ಳ
ಕೃಷ್ಣತಾರಾಮಂಡಲದಮಧ್ಯದಲ್ಲಿ ಶುದ್ಧಚಿತ್ತದಿಂದ
ನಿಶ್ಚಲವಾದ ಪರಮಾತ್ಮಜ್ಯೋತಿಸ್ವರೂಪಮಪ್ಪ
ದಿವ್ಯಲಿಂಗಮಂ ಕಾಣ್ಬುದೇ
ಶಾಂಭವೀಮುದ್ರೆಯೆನಿಸುವುದಯ್ಯಾ ಅಖಂಡೇಶ್ವರಾ. || ೫೦೬ ||

೭೫೦

ರಾಜಯೋಗಾನುಸಂಧಾನದಿಂದೆ ಕಾಣಿಸುವ ವಿಚಿತ್ರ ಪ್ರಭಾಮಂಡಲಕ್ಕೆ
ದಿವ್ಯಾನಂದ ನಿಧಿನಿಕ್ಷೇಪಭೂಮಿಯಪ್ಪ
ಪರಮ ಹೃದಯವೆನಿಸುವ ಲೋಚನಂಗಳೆ ಮುಖ್ಯವಾಗಿರ್ಪುವು.
ಆ ಲೋಚನಂಗಳ ಮಧ್ಯದಲ್ಲಿ ಅಭೇದ್ಯ ಪರವಸ್ತುವನರಿವುದ
ತಾರಕಯೋಗ ನೋಡಾ ಅಖಂಡೇಶ್ವರಾ. || ೫೦೭ ||

೭೫೧

ಸಕಲ ಸಾಧನಂಗಳಿಲ್ಲದ ಬಹುಪ್ರಯಾಸವಿಲ್ಲದೆ
ಅತಿ ಸುಲಭದಲ್ಲಿಯ ಜೀವನ್ಮುಕ್ತಿಯನೀವ ಅಮನಸ್ಕಯೋಗವೆಂತೆನೆ :

ಅಂತರಂಗದ ಮನಮಂ ನೆನೆಯದಂತೆ ಮುದ್ರಿಸಿ
ನಿರ್ಲಕ್ಷ್ಯದೊಳ್ನಿಲುವುದೆ ಅಮನಸ್ಕರಾಜಯೋಗ ನೋಡಾ
ಅಖಂಡೇಶ್ವರಾ. || ೫೦೮ ||

೭೫೨

ತ್ರಿಕೂಟವೆಂಬ ಭ್ರೂಮಧ್ಯಸ್ಥಾನದಲ್ಲಿ
ನಿರಂತರ ಬೆಳಗುವ ಪರಂಜ್ಯೋತಿಯೊಳ್ ಮನವು ನಿಶ್ಚಲವಾಗಿರ್ಪುದೇ
ಅಮನಸ್ಕರಾಜಯೋಗ ನೋಡಾ ಅಖಂಡೇಶ್ವರಾ. || ೫೦೯ ||

೭೫೩

ರಾಜಯೋಗದಲ್ಲಿ ನಿಶ್ಚಿಂತನಾದ ಯೋಗೀಶ್ವರನ
ಸಹಜವರ್ತನಧರ್ಮವೆಂತೆನೆ :
ಅರ್ಧಾವಲೋಚನವೆನಿಸುವ ಅರೆಮುಗಿದ ನೇತ್ರವುಳ್ಳಾತನಾಗಿ,
ಸಕಲ ಸಂಶಯಂಗಳ ಬಿಟ್ಟು ಮನವುಳ್ಳಾತನಾಗಿ,
ಮತ್ತಾ ಮನವು ಸುಷುಪ್ತಿಯಲ್ಲಿ ಮರೆಯದಂತೆ
ಜಾಗ್ರದಲ್ಲಿ ಕೆದರದಂತೆ ನಿಶ್ಚಲಮಂ ಮಾಡಿ,
ಭ್ರೂಮಧ್ಯಲಕ್ಷ್ಯದಲ್ಲಿರಲದೇ ಉನ್ಮನಿಯ ಸ್ವರೂಪವು.
ಅದೇ ಪರಮಪದವು; ಅದೇ ಜ್ಞಾನವು; ಅದೇ ಮೋಕ್ಷವು;
ಅದೇ ಪರಮರಹಸ್ಯಮಾದ ಶಿವಯೋಗವು.
ಅದರಿಂದೆ ಅನ್ಯವಾದ ಅರ್ಥಮಂ ಪೇಳ್ವ
ಗ್ರಂಥವಿಸ್ತಾರವೆಲ್ಲವು ವ್ಯರ್ಥಮಪ್ಪುದಾಗಿ
ಈ ಉನ್ಮನಿಯ ಸಾಧಿಸುವಾತನೆ ಜೀವನ್ಮುಕ್ತ ನೋಡಾ
ಅಖಂಡೇಶ್ವರಾ. || ೫೧೦ ||

೭೫೪

ಕಾಯದೊಳಗಣ ಮನಸ್ಸು
ಕಂಗೆಟ್ಟು ಹೊರಬಿದ್ದು ಕರಣೇಂದ್ರಿಯಂಗಳನೆ ಕೂಡಿ,
ಆಯಾಸಂಗೊಂಡು ಧಾವತಿಯಿಂದೆ ಸಾಯುತಿರ್ಪುದು ನೋಡಾ ಜಗವೆಲ್ಲ.
ಆ ಕಾಯದ ಕಳವಳ ಹಿಂಗಿ
ಮನವು ಮಹಾಘನದಲ್ಲಿ ಅಡಗಲು,
ಸಾವು ತಪ್ಪಿತ್ತು ನೋಡಾ ಅಖಂಡೇಶ್ವರಾ. || ೫೧೧ ||

೭೫೫

ಎನ್ನ ಆಧಾರಚಕ್ರವೆ ಶ್ರೀಶೈಲಕ್ಷೇತ್ರ :
ಅಲ್ಲಿರ್ಪ ಆಚಾರಲಿಂಗವೇ ಶ್ರೀಮಲ್ಲಿಕಾರ್ಜುನದೇವರು.
ಎನ್ನ ಸ್ವಾಧಿಷ್ಠಾನಚಕ್ರವೆ ಸೇತುಬಂಧಕ್ಷೇತ್ರ;

ಅಲ್ಲಿರ್ಪ ಗುರುಲಿಂಗವೆ ರಾಮೇಶ್ವರನು.
ಎನ್ನ ಮಣಿಪೂರಕ ಚಕ್ರವೇ ಪಂಪಾಕ್ಷೇತ್ರ;
ಅಲ್ಲಿರ್ಪ ಶಿವಲಿಂಗವೆ ವಿರೂಪಾಕ್ಷೇಶ್ವರನು.
ಎನ್ನ ಅನಾಹತಚಕ್ರವೇ ಹಿಮವತ್ಕೇದಾರಕ್ಷೇತ್ರ;
ಅಲ್ಲಿರ್ಪ ಜಂಗಮಲಿಂಗವೆ ಹಿಮಗಿರೀಶ್ವರನು.
ಎನ್ನ ವಿಶುದ್ಧಿಚಕ್ರವೆ ಅವಿಮುಕ್ತಿಕ್ಷೇತ್ರ:
ಅಲ್ಲಿರ್ಪ ಪ್ರಸಾದಲಿಂಗವೆ ವಿಶ್ವೇಶ್ವರನು.
ಎನ್ನ ಆಜ್ಞಾಚಕ್ರವೆ ಸಂಗಮಕ್ಷೇತ್ರ:
ಅಲ್ಲಿರ್ಪ ಮಹಾಲಿಂಗವೆ ಸಂಗಮೇಶ್ವರನು.
ಇಂತಿವು ಮೊದಲಾದ ಸಕಲಕ್ಷೇತ್ರಂಗಳನೊಳಕೊಂಡ
ಎನ್ನ ಬ್ರಹ್ಮಚಕ್ರವೆ ಮಹಾಕೈಲಾಸ.
ಅಲ್ಲಿರ್ಪ ನಿಷ್ಕಲಲಿಂಗವೆ ಅನಾದಿ ಪರಶಿವನು
ನೀನೇ ಅಯ್ಯಾ ಅಖಂಡೇಶ್ವರಾ. ॥ ೫೧೨ ॥

೭೫೬

ಎನ್ನ ಆರುಚಕ್ರಂಗಳಲ್ಲಿ ಪೂರೈಸಿ ತುಂಬಿರ್ಪ
ಪರಮಾತ್ಮನು ನೀನೇ ಅಯ್ಯಾ.
ಎನ್ನ ನರನಾಳಂಗಳಲ್ಲಿ ಹೊಳೆದು ಸುಳಿವ
ಪರವಸ್ತುವು ನೀನೇ ಅಯ್ಯಾ.
ಎನ್ನ ಕರ ಮನ ಭಾವದ ಒಳಹೊರಗೆ ತೊಳಗಿ ಬೆಳಗುವ
ಪರಬ್ರಹ್ಮವು ನೀನೇ ಅಯ್ಯಾ.
ಎನ್ನ ಬ್ರಹ್ಮರಂಧ್ರದ ಸಹಸ್ರದಳಕಮಲಮಧ್ಯದಲ್ಲಿ
ನಿರಂತರ ಬೆಳಗುವ ಪರಂಜ್ಯೋತಿ
ನೀನೇ ಅಯ್ಯಾ ಅಖಂಡೇಶ್ವರಾ. ॥ ೫೧೩ ॥

೭೫೭

ಪ್ರಾಣಲಿಂಗಸಂಬಂಧಿಗಳೆಂದು ನುಡಿಯುವವರು ಅನೇಕರುಂಟು:
ಪ್ರಾಣಲಿಂಗದ ಕಳೆಯನಾರೂ ಅರಿಯರಲ್ಲ!
ಪ್ರಾಣಲಿಂಗದ ಕಳೆ ಎಂತೆಂದಡೆ :
ಆಧಾರದಲ್ಲಿ ಎಳೆಯ ಸೂರ್ಯನಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಸ್ವಾಧಿಷ್ಠಾನದಲ್ಲಿ ಪೂರ್ಣಚಂದ್ರನಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಮಣಿಪೂರಕದಲ್ಲಿ ಮಿಂಚಿನಲತೆಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.

ಅನಾಹತದಲ್ಲಿ ಸ್ಫಟಿಕದ ಸಲಾಕೆಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ವಿಶುದ್ಧಿಯಲ್ಲಿ ಮೌಕ್ತಿಕದ ಗೊಂಚಲದಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಆಜ್ಞೇಯದಲ್ಲಿ ರತ್ನದ ದೀಪ್ತಿಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಬ್ರಹ್ಮರಂಧ್ರದಲ್ಲಿ ಸ್ವಯಂಜ್ಯೋತಿಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಶಿಖೆಯಲ್ಲಿ ಶುದ್ಧತಾರೆಯಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಪಶ್ಚಿಮದಲ್ಲಿ ಉಳುಕ ನಕ್ಷತ್ರದಂತೆ
ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು.
ಇಂತಪ್ಪ ಪ್ರಾಣಲಿಂಗದ ಕಳೆಯನರಿಯದೆ
ಪ್ರಾಣನ ಸಂಯೋಗಿಸಿ ಪ್ರಳಯವ ಗೆಲಲರಿಯದೆ
ಮಾತಿನ ಮಾಲೆಯ ನುಡಿದು
ನೀತಿಶಾಸ್ತ್ರ ಘಾತಕದ ಕಥೆಗಳ ಕಲಿತು
ಓತು ಎಲ್ಲರೊಡನೆ ಹೇಳಿ ಚಾತುರ್ಯನೆನಿಸಿಕೊಂಡು
ಒಡಲ ಹೊರೆವ ಉದರಘಾತಕರ
ಪ್ರಾಣಲಿಂಗಸಂಬಂಧಿಗಳೆಂತೆಂಬೆನಯ್ಯಾ ಅಖಂಡೇಶ್ವರಾ. || ೫೧೪ ||

೭೫೮

ಎನ್ನ ಆಧಾರದಲ್ಲಿ
ಅರವತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಎನ್ನ ಸ್ವಾಧಿಷ್ಠಾನದಲ್ಲಿ
ಎಪ್ಪತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಎನ್ನ ಮಣಿಪೂರಕದಲ್ಲಿ
ಎಂಬತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಎನ್ನ ಅನಾಹತದಲ್ಲಿ
ತೊಂಬತ್ತುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಎನ್ನ ವಿಶುದ್ಧಿಯಲ್ಲಿ

ನೂರುಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಎನ್ನ ಆಜ್ಞೇಯದಲ್ಲಿ
ಅನಂತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಎನ್ನ ಬ್ರಹ್ಮರಂಧ್ರದಲ್ಲಿ
ಅಗಣಿತಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಎನ್ನ ಶಿಖಾಚಕ್ರದಲ್ಲಿ
ಅಖಂಡ ಬೆಳಗನೊಳಕೊಂಡು
ಬೆಳಗುತಿರ್ಪಿರಯ್ಯಾ ನೀವು.
ಇಂತು ಎನ್ನೊಳಗೆ ಥಳಥಳಿಸಿ ಬೆಳಗುವ
ಬೆಳಗಿನ ಬೆಳಗು ಮಹಾಬೆಳಗಿನೊಳಗೆ ಮುಳುಗಿ
ಎನ್ನಂಗದ ಕಳೆಯಳಿದಿರ್ದೆನಯ್ಯಾ ಅಖಂಡೇಶ್ವರಾ. ॥ ೫೧೫ ॥

೭೫೯

ನವನಾಳಂಗಳ ಬಲಿದು ಶಿವಧ್ಯಾನದಲ್ಲಿ ಕುಳ್ಳಿರ್ದು
ಭಾವದ ದೃಕ್ಕಿನಿಂದ ನವಲಿಂಗಗಳ ನೋಡಿ ಪೂಜಿಸಿ,
ಕದಡುವ ಭೇದವೆಂತೆಂದೊಡೆ :
ಆಧಾರಚಕ್ರವೆಂಬ ರಂಗಮಂಟಪದಲ್ಲಿ
ಮೂರ್ತಿಗೊಂಡಿರ್ದ ಆಚಾರಲಿಂಗಕ್ಕೆ
ಶಿವಾನಂದ ಜಲದಿಂ ಮಜ್ಜನಕ್ಕೆರೆದು
ಪೃಥ್ವಿ ನಿವೃತ್ತಿಯಾದ ಗಂಧವ ಧರಿಸಿ,
ಚಿತ್ತ ಸುಚಿತ್ತವಾದ ಅಕ್ಷತೆಯನಿಟ್ಟು,
ಅಲ್ಲಿಯ ಚತುರ್ದಳಂಗಳನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಯ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಯ ಪೀತವರ್ಣವನೆ ಕರ್ಪುರದ ಜ್ಯೋತಿಯೆಂದು ಬೆಳಗಿ,
ಅಲ್ಲಿಯ ಜಾಗ್ರಾವಸ್ಥೆಯೆಂಬ ನವೀನ ವಸ್ತ್ರವ ಹೊದಿಸಿ,
ನಿಷ್ಕಾಮವೆಂಬ ಆಭರಣವ ತೊಡಿಸಿ,
ಸುಗಂಧವೆಂಬ ನೈವೇದ್ಯವನರ್ಪಿಸಿ,
ಶ್ರದ್ಧೆಯೆಂಬ ತಾಂಬೂಲವನಿತ್ತು,
ಇಂತು ಆಚಾರಲಿಂಗದ ಅಷ್ಟವಿಧಾರ್ಚನೆಯ ಮಾಡಿ,
ಕೋಟಿಸೂರ್ಯಪ್ರಭೆಯಂತ ಬೆಳಗುವ
ಆಚಾರಲಿಂಗವನು ಕಂಗಳು ತುಂಬಿ ನೋಡಿ

ಮನದಲ್ಲಿ ಸಂತೋಷಂಗೊಂಡು
ಆ ಆಚಾರಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ
ಓಂ ನಂ ನಂ ನಂ ನಂ ನಂ ನಂ ಎಂಬ
ನಕಾರಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಆಚಾರಲಿಂಗವನು ಕೂಡಿ ಎರಡಳಿದು
ಅಲ್ಲಿಂದ ಮುಂದಕ್ಕೆ ಹೋಗಿ,
ಸ್ವಾಧಿಷ್ಠಾನಚಕ್ರವೆಂಬ ರಂಗಮಂಟಪದಲ್ಲಿ
ಮೂರ್ತಿಗೊಂಡಿರ್ದ ಗುರುಲಿಂಗಕ್ಕೆ
ಪರಿಣಾಮವೆಂಬ ಜಲದಿಂ ಮಜ್ಜನಕ್ಕೆರೆದು,
ಅಪ್ಪು ನಿವೃತ್ತಿಯಾದ ಗಂಧವ ಧರಿಸಿ
ಬುದ್ಧಿ ಸುಬುದ್ಧಿಯಾದ ಅಕ್ಷತೆಯನಿಟ್ಟು,
ಅಲ್ಲಿಯ ಷಡುದಳಂಗಳನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಯ ಕಮಲ ಸದ್ವಾಸನೆಯ ಧೂಪವ ಬೀಸಿ,
ಅಲ್ಲಿಯ ನೀಲವರ್ಣವನೆ ಕರ್ಪುರದ ಜ್ಯೋತಿಯೆಂದು ಬೆಳಗಿ
ಅಲ್ಲಿಯ ಸ್ವಪ್ನಾವಸ್ಥೆಯೆಂಬ ವಸ್ತ್ರವ ಹೊದಿಸಿ
ನಿಃಕ್ರೋಧವೆಂಬ ಆಭರಣವ ತೊಡಿಸಿ
ಸುರುಚಿಯೆಂಬ ನೈವೇದ್ಯವನರ್ಪಿಸಿ, ನಿಷ್ಠೆಯೆಂಬ ತಾಂಬೂಲವನಿತ್ತು,
ಇಂತು ಗುರುಲಿಂಗದ ಅಷ್ಟವಿಧಾರ್ಚನೆಯ ಮಾಡಿ,
ಕೋಟಿಸೂರ್ಯಪ್ರಭೆಯಂತೆ ಬೆಳಗುವ
ಗುರುಲಿಂಗವನು ಕಂಗಳು ತುಂಬಿ ನೋಡಿ
ಮನದಲ್ಲಿ ಸಂತೋಷಂಗೊಂಡು
ಆ ಗುರುಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ,
ಓಂ ಮಂ ಮಂ ಮಂ ಮಂ ಮಂ ಮಂ ಎಂಬ
ಮಕಾರಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಗುರುಲಿಂಗವನು ಕೂಡಿ ಎರಡಳಿದು
ಅಲ್ಲಿಂದ ಮುಂದಕ್ಕೆ ಹೋಗಿ
ಮಣಿಪೂರಕವೆಂಬ ರಂಗಮಂಟಪದಲ್ಲಿ
ಮೂರ್ತಿಗೊಂಡಿರ್ದ ಶಿವಲಿಂಗಕ್ಕೆ
ಪರಮಾನಂದವೆಂಬ ಜಲದಿಂ ಮಜ್ಜನಕ್ಕೆರೆದು,
ಅಗ್ನಿನಿವೃತ್ತಿಯಾದ ಗಂಧವ ಧರಿಸಿ
ಅಹಂಕಾರ ನಿರಹಂಕಾರವಾದ ಅಕ್ಷತೆಯನಿಟ್ಟು,
ಅಲ್ಲಿಯ ದಶದಳಂಗಳನೆ ಪುಷ್ಪದಮಾಲೆಯೆಂದು ಧರಿಸಿ
ಅಲ್ಲಿ ಕಮಲ ಸದ್ವಾಸನೆಯ ಧೂಪವ ಬೀಸಿ
ಅಲ್ಲಿಯ ಕೆಂಪುವರ್ಣವನೆ ಕರ್ಪುರದ ಜ್ಯೋತಿಯೆಂದು ಬೆಳಗಿ

ಅಲ್ಲಿಯ ಸುಷುಪ್ತಾವಸ್ಥೆಯೆಂಬ ವಸ್ತ್ರವ ಹೊದಿಸಿ
ನಿರ್ಲೋಭವೆಂಬ ಆಭರಣವ ತೊಡಿಸಿ
ಸುರೂಪವೆಂಬ ನೈವೇದ್ಯವನರ್ಪಿಸಿ
ಸಾವಧಾನವೆಂಬ ತಾಂಬೂಲವನಿತ್ತು,
ಇಂತು ಶಿವಲಿಂಗದ ಅಷ್ಟವಿಧಾರ್ಚನೆಯ ಮಾಡಿ
ಕೋಟಿಸೂರ್ಯಪ್ರಭೆಯಂತೆ ಬೆಳಗುವ
ಶಿವಲಿಂಗವನು ಕಂಗಳು ತುಂಬಿ ನೋಡಿ
ಮನದಲ್ಲಿ ಸಂತಸಂಗೊಂಡು
ಆ ಶಿವಲಿಂಗದ ಪೂಜೆಯ ನಿರ್ಮಾಲ್ಯಮಂ ಮಾಡದೆ,
ಓಂ ಶಿಂ ಶಿಂ ಶಿಂ ಶಿಂ ಶಿಂ ಶಿಂ ಎಂಬ
ಶಿಕಾರಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಶಿವಲಿಂಗವನು ಕೂಡಿ ಎಡರಳಿದು,
ಅಲ್ಲಿಂದ ಮುಂದಕ್ಕೆ ಹೋಗಿ
ಅನಾಹತಚಕ್ರವೆಂಬ ರಂಗಮಂಟಪದಲ್ಲಿ
ಮೂರ್ತಿಗೊಂಡಿರ್ದ ಜಂಗಮಲಿಂಗಕ್ಕೆ
ಶಾಂತಿಯೆಂಬ ಜಲದಿಂ ಮಜ್ಜನಕ್ಕೆರೆದು
ವಾಯುನಿವೃತ್ತಿಯಾದ ಗಂಧವ ಧರಿಸಿ
ಮನ ಸುಮನವಾದ ಅಕ್ಷತೆಯನಿಟ್ಟು
ಅಲ್ಲಿಯ ದ್ವಾದಶದಳಂಗಳನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಯ ಕಮಲ ಸದ್ವಾಸನೆಯ ಧೂಪವ ಬೀಸಿ
ಅಲ್ಲಿಯ ಮಾಂಜಿಷ್ಟವರ್ಣವನೆ ಕರ್ಪುರದಜ್ಯೋತಿಯೆಂದು ಬೆಳಗಿ,
ಅಲ್ಲಿಯ ತೂರ್ಯಾವಸ್ಥೆಯೆಂಬ ವಸ್ತ್ರವ ಹೊದಿಸಿ
ನಿರ್ಮೋಹವೆಂಬ ಆಭರಣವ ತೊಡಿಸಿ
ಸುಸ್ಪರ್ಶನವೆಂಬ ನೈವೇದ್ಯವನರ್ಪಿಸಿ
ಅನುಭಾವವೆಂಬ ತಾಂಬೂಲವನಿತ್ತು
ಇಂತು ಜಂಗಮಲಿಂಗಕ್ಕೆ ಅಷ್ಟವಿಧಾರ್ಚನೆಯ ಮಾಡಿ,
ಕೋಟಿಸೂರ್ಯಪ್ರಭೆಯಂತ ಬೆಳಗುವ
ಜಂಗಮಲಿಂಗವನು ಕಂಗಳು ತುಂಬಿ ನೋಡಿ
ಮನದಲ್ಲಿ ಸಂತೋಷಂಗೊಂಡು
ಆ ಜಂಗಮಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ
ಓಂ ವಾಂ ವಾಂ ವಾಂ ವಾಂ ವಾಂ ವಾಂ ಎಂಬ
ವಕಾರಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಜಂಗಮಲಿಂಗವನು ಕೂಡಿ ಎರಡಳಿದು,
ಅಲ್ಲಿಂದ ಮುಂದಕ್ಕೆ ಹೋಗಿ

ವಿಶುದ್ಧಿಚಕ್ರವೆಂಬ ರಂಗಮಂಟಪದಲ್ಲಿ
ಮೂರ್ತಿಗೊಂಡಿರ್ದ ಪ್ರಸಾದಲಿಂಗಕ್ಕೆ
ಕ್ಷಮೆಯೆಂಬ ಜಲದಿಂ ಮಜ್ಜನಕ್ಕೆರೆದು
ಗಗನನಿವೃತ್ತಿಯಾದ ಗಂಧವ ಧರಿಸಿ,
ಜ್ಞಾನ ಸುಜ್ಞಾನವಾದ ಅಕ್ಷತೆಯನಿಟ್ಟು,
ಅಲ್ಲಿಯ ಷೋಡಶದಳಂಗಳೆನೆ ಪುಷ್ಪದ ಮಾಲೆಯೆಂದು ಧರಿಸಿ,
ಅಲ್ಲಿಯ ಕಮಲಸದ್ವಾಸನೆಯ ಧೂಪವ ಬೀಸಿ,
ಅಲ್ಲಿಯ ಕೃಷ್ಣವರ್ಣವನೆ ಕರ್ಪುರದ ಜ್ಯೋತಿಯೆಂದು ಬೆಳಗಿ,
ಅಲ್ಲಿಯ ತೂರ್ಯಾತೀತಾವಸ್ಥೆಯೆಂಬ ವಸ್ತ್ರವ ಹೊದಿಸಿ
ನಿರ್ಮದವೆಂಬ ಆಭರಣವ ತೊಡಿಸಿ
ಸುಶಬ್ದವೆಂಬ ನೈವೇದ್ಯವನರ್ಪಿಸಿ
ಆನಂದವೆಂಬ ತಾಂಬೂಲವನಿತ್ತು,
ಇಂತು ಪ್ರಸಾದಲಿಂಗದ ಅಷ್ಟವಿಧಾರ್ಚನೆಯ ಮಾಡಿ
ಕೋಟಿ ಸೂರ್ಯಪ್ರಭೆಯಂತೆ ಬೆಳಗುವ
ಪ್ರಸಾದಲಿಂಗವನು ಕಂಗಳು ತುಂಬಿ ನೋಡಿ
ಮನದಲ್ಲಿ ಸಂತೋಷಂಗೊಂಡು
ಆ ಪ್ರಸಾದಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ
ಓಂ ಯಂ ಯಂ ಯಂ ಯಂ ಯಂ ಯಂ ಎಂಬ
ಯಕಾರಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಪ್ರಸಾದಲಿಂಗವನು ಕೂಡಿ ಎರಡಳಿದು,
ಅಲ್ಲಿಂದ ಮುಂದಕ್ಕೆ ಹೋಗಿ
ಆಜ್ಞಾಚಕ್ರವೆಂಬ ರಂಗಮಂಟಪದಲ್ಲಿ
ಮೂರ್ತಿಗೊಂಡಿರ್ದ ಮಹಾಲಿಂಗಕ್ಕೆ
ಸಂತೋಷವೆಂಬ ಜಲದಿಂ ಮಜ್ಜನಕ್ಕೆರೆದು
ಆತ್ಮನಿವೃತ್ತಿಯಾದ ಗಂಧವ ಧರಿಸಿ,
ಭಾವ ಸದ್ಭಾವವಾದ ಅಕ್ಷತೆಯನಿಟ್ಟು,
ಅಲ್ಲಿಯ ದ್ವಿದಳಂಗಳನೆ ಪುಷ್ಪದಮಾಲೆಯೆಂದು ಧರಿಸಿ,
ಅಲ್ಲಿಯ ಕಮಲಸದ್ವಾಸನೆಯ ಧೂಪವ ಬೀಸಿ
ಅಲ್ಲಿಯ ಮಾಣಿಕ್ಯವರ್ಣವನೆ ಕರ್ಪುರದಜ್ಯೋತಿಯೆಂದು ಬೆಳಗಿ,
ಅಲ್ಲಿಯ ನಿರಾವಸ್ಥೆಯೆಂಬ ವಸ್ತ್ರವ ಹೊದಿಸಿ
ನಿರ್ಮಲವೆಂಬ ಆಭರಣವ ತೊಡಿಸಿ
ಸುತೃಪ್ತಿಯೆಂಬ ನೈವೇದ್ಯವನರ್ಪಿಸಿ
ಸಮರಸವೆಂಬ ತಾಂಬೂಲವನಿತ್ತು,
ಇಂತು ಮಹಾಲಿಂಗದ ಅಷ್ಟವಿಧಾರ್ಚನೆಯ ಮಾಡಿ

ಕೋಟಿಸೂರ್ಯಪ್ರಭೆಯಂತೆ ಬೆಳಗುವ
ಮಹಾಲಿಂಗವನು ಕಂಗಳು ತುಂಬಿ ನೋಡಿ
ಮನದಲ್ಲಿ ಸಂತೋಷಂಗೊಂಡು
ಆ ಮಹಾಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ,
ಓಂ ಓಂ ಓಂ ಓಂ ಓಂ ಓಂ ಓಂ ಎಂಬ
ಓಂಕಾರಷಡ್ವಿಧಮಂತ್ರಂಗಳಿಂದೆ ನಮಸ್ಕರಿಸಿ,
ಆ ಮಹಾಲಿಂಗವನು ಕೂಡಿ ಎರಡಳಿದು
ಅಲ್ಲಿಂದ ಮುಂದಕ್ಕೆ ಹೋಗಿ
ಬ್ರಹ್ಮರಂಧ್ರವೆಂಬ ಸಹಸ್ರದಳಮಂಟಪದಲ್ಲಿ
ಮೂರ್ತಿಗೊಂಡಿರ್ದ ನಿಷ್ಕಳಲಿಂಗಕ್ಕೆ
ಅನುಪಮವೆಂಬ ಜಲದಿಂ ಮಜ್ಜನಕ್ಕೆರೆದು
ಅನಾದಿಯೆಂಬ ಗಂಧವ ಧರಿಸಿ,
ಅಗಮ್ಯವೆಂಬ ಅಕ್ಷತೆಯನಿಟ್ಟು
ಅವಿರಳವೆಂಬ ಪುಷ್ಪದ ಮಾಲೆಯ ಧರಿಸಿ,
ಅಪ್ರಮಾಣವೆಂಬ ಧೂಪವ ಬೀಸಿ
ಅಖಂಡವೆಂಬ ಜ್ಯೋತಿಯ ಬೆಳಗಿ
ಸತ್ಯವೆಂಬ ವಸ್ತ್ರವ ಹೊದಿಸಿ
ಸದಾನಂದವೆಂಬ ಆಭರಣವ ತೊಡಿಸಿ
ನಿತ್ಯವೆಂಬ ನೈವೇದ್ಯವನರ್ಪಿಸಿ
ನಿರುಪಮವೆಂಬ ತಾಂಬೂಲವನಿತ್ತು
ಇಂತು ನಿಷ್ಕಲಲಿಂಗದ ಅಷ್ಟವಿಧಾರ್ಚನೆಯ ಮಾಡಿ
ಅನಂತಕೋಟಿಸೂರ್ಯಪ್ರಭೆಯಂತೆ ಬೆಳಗುವ
ನಿಷ್ಕಲಲಿಂಗವನು ಕಂಗಳು ತುಂಬಿ ನೋಡಿ
ಮನದಲ್ಲಿ ಸಂತೋಷಂಗೊಂಡು
ಆ ನಿಷ್ಕಲಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ
ಅಗಣಿತವೆಂಬ ನಮಸ್ಕಾರಮಂ ಮಾಡಿ,
ಆ ನಿಷ್ಕಲಲಿಂಗವನು ಕೂಡಿ ಎರಡಳಿದು,
ಅಲ್ಲಿಂದ ಮುಂದಕ್ಕೆ ಹೋಗಿ
ಶಿಖಾಚಕ್ರವೆಂಬ ತ್ರಿದಳಮಂಟಪದಲ್ಲಿ
ಮೂರ್ತಿಗೊಂಡಿರ್ದ ಶೂನ್ಯಲಿಂಗಕ್ಕೆ
ನಿರ್ಭಾವವೆಂಬ ಜಲದಿಂ ಮಜ್ಜನಕ್ಕೆರೆದು,
ನಿರ್ಜಾತವೆಂಬ ಗಂಧವ ಧರಿಸಿ
ನಿರ್ಜಡವೆಂಬ ಅಕ್ಷತೆಯನಿಟ್ಟು,
ನಿರ್ದ್ವಂದ್ವವೆಂಬ ಪುಷ್ಪದಮಾಲೆಯ ಧರಿಸಿ

ನಿರ್ಲಜ್ಜೆಯೆಂಬ ಧೂಪವ ಬೀಸಿ
ನಿರಾಭಾರವೆಂಬ ಜ್ಯೋತಿಯ ಬೆಳಗಿ
ನಿರಾಮಯವೆಂಬ ವಸ್ತ್ರವ ಹೊದಿಸಿ
ನಿಸ್ಪೃಹವೆಂಬ ಆಭರಣವ ತೊಡಸಿ
ನಿರಾಳವೆಂಬ ನೈವೇದ್ಯವನರ್ಪಿಸಿ
ನಿರಾಲಂಬವೆಂಬ ತಾಂಬೂಲವನಿತ್ತು,
ಇಂತು ಶೂನ್ಯಲಿಂಗದ ಅಷ್ಟವಿಧಾರ್ಚನೆಯಂ ಮಾಡಿ,
ಅಗಣಿತ ಕೋಟಿಸೂರ್ಯ ಪ್ರಭೆಯಂತೆ ಬೆಳಗುವ
ಶೂನ್ಯಲಿಂಗವನು ಕಂಗಳು ತುಂಬಿ ನೋಡಿ
ಮನದಲ್ಲಿ ಸಂತೋಷಂಗೊಂಡು
ಆ ಶೂನ್ಯಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ
ನಿರ್ಭೇದ್ಯವೆಂಬ ನಮಸ್ಕಾರಮಂ ಮಾಡಿ
ಆ ಶೂನ್ಯಲಿಂಗವನು ಕೂಡಿ ಎರಡಳಿದು, ಅಲ್ಲಿಂದ ಮುಂದಕ್ಕೆ ಹೋಗಿ,
ಪಶ್ಚಿಮಚಕ್ರವೆಂಬ ಏಕದಳಮಂಟಪದಲ್ಲಿ
ಮೂರ್ತಿಗೊಂಡಿರ್ದ ನಿರಂಜನಲಿಂಗಕ್ಕೆ
ನಿರ್ನಾಮವೆಂಬ ಜಲದಿಂ ಮಜ್ಜನಕ್ಕೆರೆದು
ನಿಷ್ಕಾರಣವೆಂಬ ಗಂಧವ ಧರಿಸಿ
ನಿಃಸಂಗವೆಂಬ ಅಕ್ಷತೆಯನಿಟ್ಟು
ನಿಸ್ಸಾರವೆಂಬ ಪುಷ್ಪವ ಧರಿಸಿ
ನಿರುಪಾಧಿಕವೆಂಬ ಧೂಪವ ಬೀಸಿ
ನಿಷ್ಕಳೆಯೆಂಬ ಜ್ಯೋತಿಯ ಬೆಳಗಿ
ನಿಶ್ಚಲವೆಂಬ ವಸ್ತ್ರವ ಹೊದಿಸಿ
ನಿರ್ವಾಸನೆಯೆಂಬ ಆಭರಣವ ತೊಡಿಸಿ
ನಿಃಶೂನ್ಯವೆಂಬ ನೈವೇದ್ಯವನರ್ಪಿಸಿ
ನಿರವಯವೆಂಬ ತಾಂಬೂಲವನಿತ್ತು,
ಇಂತು ನಿರಂಜನಲಿಂಗದ ಅಷ್ಟವಿಧಾರ್ಚನೆಯ ಮಾಡಿ
ತೆರಹಿಲ್ಲದೆ ಬೆಳಗಿನ ಮಹಾಬೆಳಗನೊಳಕೊಂಡು ಬೆಳಗುವ
ನಿರಂಜನಲಿಂಗವನು ಕಂಗಳು ತುಂಬಿ ನೋಡಿ,
ಮನದಲ್ಲಿ ಸಂತೋಷಂಗೊಂಡು
ಆ ನಿರಂಜನಲಿಂಗದ ಪೂಜೆಯ ನಿರ್ಮಾಲ್ಯವ ಮಾಡದೆ,
ನಿಃಶಬ್ದವೆಂಬ ನಮಸ್ಕಾರಮಂ ಮಾಡಿ
ಆ ನಿರಂಜನಲಿಂಗವನು ಕೂಡಿ ಎರಡಳಿದು
ಅಲ್ಲಿಂದ ಮುಂದೆ ನೋಡಲು
ಬಚ್ಚಬರಿಯ ಬಯಲಿರ್ಪುದ ಕಂಡು

ಆ ಬಯಲೆ ತನ್ನ ನಿಜನಿವಾಸವೆಂದು ತಿಳಿದು
ಆ ನಿಜವಾಸದಲ್ಲಿ ತಾ ನಿಂದು
ತನ್ನಿಂದ ಕೆಳಗಣ ನವಚಕ್ರಂಗಳಲ್ಲಿರ್ದ
ನವಲಿಂಗಗಳ ಪೂಜೆಯ ನಿರಂತರದಲ್ಲಿ ಮಾಡುವ
ಶಿವಯೋಗಿಗೆ ಭವಬಂಧನವಿಲ್ಲ.
ಆ ಭವಬಂಧನವಿಲ್ಲವಾಗಿ
ಜೀವಕಲ್ಪಿತವು ಮುನ್ನವೇ ಇಲ್ಲ.
ಆ ಜೀವಕಲ್ಪಿತವಿಲ್ಲವಾಗಿ
ಆತನು ಪರಿಪೂರ್ಣನಾಗಿ ಪರಾತ್ಪರನಾಗಿ
ಪರಶಿವಬ್ರಹ್ಮವೇ ಆಗಿ ಇರ್ಪನಯ್ಯಾ ಅಖಂಡೇಶ್ವರಾ. ॥ ೫೧೬ ॥

### ೭೬೦

ಅಯ್ಯಾ, ನಿಮ್ಮನೆನ್ನ ಕರಸ್ಥಲದಲ್ಲಿ ನೋಡಿದಡೆ
ನೀವೆನ್ನ ಕಂಗಳ ಕೊನೆಯಲ್ಲಿ ತೋರುತಿರ್ಪಿರಿ :
ಇದೇನು ನಿಮ್ಮ ಗಾರುಡವಯ್ಯಾ !
ಅಯ್ಯಾ, ನಿಮ್ಮನೆನ್ನ ಕಂಗಳ ಕೊನೆಯಲ್ಲಿ ನೋಡಿದಡೆ
ನೀವೆನ್ನ ಮನದ ಕೊನೆಯಲ್ಲಿ ತೋರುತಿರ್ಪಿರಿ :
ಇದೇನು ನಿಮ್ಮ ಗಾರುಡವಯ್ಯಾ !
ಅಯ್ಯಾ, ನಿಮ್ಮನೆನ್ನ ಮನದ ಕೊನೆಯಲ್ಲಿ ನೋಡಿದಡೆ
ನೀವೆನ್ನ ಪಂಚಮುಖದಲ್ಲಿ ತೋರುತಿರ್ಪಿರಿ :
ಇದೇನು ನಿಮ್ಮ ಗಾರುಡವಯ್ಯಾ !
ಅಯ್ಯಾ, ನಿಮ್ಮನೆನ್ನ ನೆನಹಿನ ಪಂಚಮುಖದಲ್ಲಿ ನೋಡಿದಡೆ
ನೀವೆನ್ನ ನವಚಕ್ರದಲ್ಲಿ ತೋರುತಿರ್ಪಿರಿ :
ಇದೇನು ನಿಮ್ಮ ಗಾರುಡವಯ್ಯಾ !
ಅಯ್ಯಾ, ನಿಮ್ಮನೆನ್ನ ನವಚಕ್ರದಲ್ಲಿ ನೋಡಿದಡೆ
ನೀವೆನ್ನ ಸರ್ವಾಂಗದಲ್ಲಿ ತೋರುತಿರ್ಪಿರಿ :
ಇದೇನು ನಿಮ್ಮ ಗಾರುಡವಯ್ಯಾ ಅಖಂಡೇಶ್ವರಾ ! ॥ ೫೧೭ ॥

### ೭೬೧

ಎನ್ನೊಡಲೊಳಗೆ ತೋರಿ ತೋರಿ ಅಡಗುವ
ನಿಮ್ಮ ಬೆಡಗು ಬಿನ್ನಾಣವ ತಿಳಿಯಬಾರದು.
ಭಕ್ತಕಾಯ ಮಮಕಾಯ ಭಕ್ತಪ್ರಾಣ ಮಮಪ್ರಾಣವೆಂಬ
ನಿಮ್ಮ ನುಡಿ ಸೂಚಿಸುತ್ತದೆ.
ಇದು ಕಾರಣ, ಎನ್ನ ತನುವೆಂಬ ಗುಡಿಯೊಳಗೆ
ಮನೋಮೂರ್ತಿಲಿಂಗವಾಗಿ

ಇನಕೋಟಿ ಪ್ರಭೆಯನೊಳಕೊಂಡು
ಹೆರೆಹಿಂಗದೆ ನಿರಂತರ ಬೆಳಗುತ್ತಿರಬೇಕಯ್ಯಾ ನೀವು ಅಖಂಡೇಶ್ವರಾ. ॥೫೧೮॥

**೭೬೨**

ಎನ್ನ ಸ್ಥೂಲತನುವೆಂಬ ಕೈಲಾಸದ ಮೇಲೆ
ಕಂಗಳ ಮಂಟಪದಲ್ಲಿ ಕುಳ್ಳಿರ್ದು
ದೃಶ್ಯಾದೃಶ್ಯದ ಲೀಲೆಯನಾಡುವಾತ ನೀನೇ ಅಯ್ಯಾ.
ಎನ್ನ ಸೂಕ್ಷ್ಮತನುವೆಂಬ ಕೈಲಾಸದ ಮೇಲೆ
ಮನೋಮಂಟಪದಲ್ಲಿ ಕುಳ್ಳಿರ್ದು
ದೃಶ್ಯಾದೃಶ್ಯದ ಲೀಲೆಯನಾಡುವಾತನು ನೀನೇ ಅಯ್ಯಾ.
ಎನ್ನ ಕಾರಣತನುವೆಂಬ ಕೈಲಾಸದ ಮೇಲೆ
ಭಾವಮಂಟಪದಲ್ಲಿ ಕುಳ್ಳಿರ್ದು
ಕೇವಲ ಅದೃಶ್ಯಲೀಲೆಯನಾಡುವಾತನು ನೀನೆ ಅಯ್ಯಾ.
ಎನ್ನ ಮಹಾಕಾರಣತನುವೆಂಬ ಕೈಲಾಸದ ಮೇಲೆ
ಮಹಾಜ್ಞಾನಮಂಟಪದಲ್ಲಿ ಕುಳ್ಳಿರ್ದು
ಅಖಂಡಪರಿಪೂರ್ಣ ನಿರವಯಲೀಲೆಯನಾಡುವಾತನು
ನೀನೇ ಅಯ್ಯಾ ಅಖಂಡೇಶ್ವರಾ. ॥ ೫೧೯ ॥

**೭೬೩**

ಕೇಳು ಕೇಳಯ್ಯ ಪ್ರಾಣನಾಥನೆ,
ಎನ್ನ ಪ್ರಾಣಪೂಜೆಯ ಬಗೆಯ ಬಣ್ಣಿಸುತಿರ್ಪೆನು
ಅವಧರಿಸಯ್ಯಾ ಸ್ವಾಮಿ.
ಎನ್ನ ಕಾಯವೆ ಕೈಲಾಸವಯ್ಯ ನಿಮಗೆ.
ಎನ್ನ ಮನವೆ ಶೃಂಗಾರಮಂಟಪವಯ್ಯ ನಿಮಗೆ.
ಎನ್ನ ಭಾವವೆ ಶೂನ್ಯಸಿಂಹಾಸನವಯ್ಯಾ ನಿಮಗೆ.
ಎನ್ನ ಪರಮಾನಂದವೆ ಮಜ್ಜನವಯ್ಯಾ ನಿಮಗೆ.
ಎನ್ನ ಪರಮಶಾಂತಿಯೆ ಗಂಧವಯ್ಯಾ ನಿಮಗೆ.
ಎನ್ನ ನಿರಹಂಕಾರವೆ ಅಕ್ಷತೆಯಯ್ಯಾ ನಿಮಗೆ.
ಎನ್ನ ಅವಿರಳವೆ ಪುಷ್ಪದ ಮಾಲೆಯಯ್ಯಾ ನಿಮಗೆ.
ಎನ್ನ ಸ್ವಾನುಭಾವವೆ ಧೂಪವಯ್ಯಾ ನಿಮಗೆ.
ಎನ್ನ ದಿವ್ಯಜ್ಞಾನವೆ ದೀಪದ ಗಡಣವಯ್ಯಾ ನಿಮಗೆ.
ಎನ್ನ ಸುಚರಿತ್ರವೆ ಸರ್ವವಸ್ತ್ರವಯ್ಯಾ ನಿಮಗೆ.
ಎನ್ನ ಸುವಿವೇಕವೆ ಸಕಲಾಭರಣವಯ್ಯಾ ನಿಮಗೆ.
ಎನ್ನ ಆತ್ಮವೆ ಪರಮಾಮೃತದ ನೈವೇದ್ಯವಯ್ಯಾ ನಿಮಗೆ.
ಎನ್ನ ಪರಿಣಾಮವೆ ಹಸ್ತೋದಕವಯ್ಯಾ ನಿಮಗೆ.

ಎನ್ನ ಸದ್ಭಕ್ತಿರಾಗರಸವೆ ತಾಂಬೂಲವಯ್ಯಾ ನಿಮಗೆ.
ಎನ್ನ ನಿರ್ಮಲವೆ ದರ್ಪಣವಯ್ಯಾ ನಿಮಗೆ.
ಎನ್ನ ಸತ್ಯವೆ ಘಂಟೆಯಯ್ಯಾ ನಿಮಗೆ.
ಎನ್ನ ಸದಾನಂದವೆ ಶಂಖವಾದ್ಯವಯ್ಯಾ ನಿಮಗೆ.
ಎನ್ನ ಸಮತೆಯೆ ಚಾಮರವಯ್ಯಾ ನಿಮಗೆ.
ಎನ್ನ ಕ್ಷಮೆಯೆ ಆಲವಟ್ಟವಯ್ಯಾ ನಿಮಗೆ.
ಎನ್ನ ಸುಮನವೆ ವಾಹನವಯ್ಯಾ ನಿಮಗೆ.
ಎನ್ನ ಸುಬುದ್ಧಿಯೆ ಜಗಜಂಪನವಯ್ಯಾ ನಿಮಗೆ.
ಎನ್ನ ಸುಚಿತ್ತವೆ ನಂದಿಧ್ವಜವಯ್ಯಾ ನಿಮಗೆ.
ಎನ್ನ ಸುಜ್ಞಾನವೆ ಶೃಂಗಾರದ ಪಲ್ಲಕ್ಕಿಯಯ್ಯಾ ನಿಮಗೆ.
ಎನ್ನ ನುಡಿಗಡಣವೆ ಮಂಗಳಸ್ತೋತ್ರವಯ್ಯಾ ನಿಮಗೆ.
ಎನ್ನ ಸುಳುಹಿನ ಸಂಚಾರವೆ ಪ್ರದಕ್ಷಿಣೆಯಯ್ಯಾ ನಿಮಗೆ.
ಎನ್ನ ಮಂತ್ರೋಚ್ಚರಣವೆ ನಮಸ್ಕಾರವಯ್ಯಾ ನಿಮಗೆ.
ಎನ್ನ ಸಕಲಕರಣಂಗಳಿಂದ ಮಾಡುವ ಸೇವೆಯ
ನಾನಾ ತೆರದ ಉಪಚಾರವಯ್ಯಾ ನಿಮಗೆ.
ಇಂತೀ ಪ್ರಾಣಪೂಜೆಯ ನಿರಂತರ ತೆರಹಿಲ್ಲದೆ ನಿಮಗಳವಡಿಸಿ
ನಾ ನಿಮ್ಮೊಳಡಗಿರ್ದೆನಯ್ಯಾ ಅಖಂಡೇಶ್ವರಾ. ॥ ೫೭೦ ॥

೭೬೪

ಒಳಗೆ ನೋಡಿದಡೆ ನಿಮ್ಮನೆ ನೋಡುವೆನಯ್ಯಾ.
ಹೊರಗೆ ನೋಡಿದಡೆ ನಿಮ್ಮನೆ ನೋಡುವೆನಯ್ಯಾ.
ಒಳಗೆ ಪೂಜಿಸಿದಡೆ ನಿಮ್ಮನೆ ಪೂಜಿಸುವೆನಯ್ಯಾ.
ಹೊರಗೆ ಪೂಜಿಸಿದಡೆ ನಿಮ್ಮನೆ ಪೂಜಿಸುವೆನಯ್ಯಾ.
ಒಳಗೆ ಧ್ಯಾನಿಸಿದಡೆ ನಿಮ್ಮನೆ ಧ್ಯಾನಿಸುವೆನಯ್ಯಾ.
ಹೊರಗೆ ಧ್ಯಾನಿಸಿದಡೆ ನಿಮ್ಮನೆ ಧ್ಯಾನಿಸುವೆನಯ್ಯಾ.
ನೀವು ಭಕ್ತ್ಯಾನುಕಂಪಿತರಾದ ಕಾರಣ
ಎನ್ನ ಭಾವವು ಎಲ್ಲಿ ನಿಂದಿಹುದು ಅಲ್ಲಿ
ನಿಮ್ಮ ನಿಲವೆ ತುಂಬಿರ್ಪುದಯ್ಯಾ ಅಖಂಡೇಶ್ವರಾ. ॥ ೫೭೧ ॥

೭೬೫

ಒಳಗೆ ಕೂಡಿ ಹೊರಗೆ ಮರೆದಿರ್ಪೆನಯ್ಯಾ.
ಹೊರಗೆ ಕೂಡಿ ಒಳಗೆ ಮರೆದಿರ್ಪೆನಯ್ಯಾ.
ಒಳಹೊರಗೆಂಬ ಸಂದು ಸಂಶಯವನಳಿದು
ತೆರಹಿಲ್ಲದೆ ನಿಮ್ಮೊಳಗೆ ಏನೇನು ಅರಿಯದಂತಿರ್ದೆನಯ್ಯಾ
ಅಖಂಡೇಶ್ವರಾ. ॥ ೫೭೨ ॥

**೭೬೬**

ಒಳಗೆಂಬುದನರಿಯೆ, ಹೊರಗೆಂಬುದನರಿಯೆ,
ಸ್ವಾನುಭಾವ ಜ್ಞಾನಾಮೃತವನುಂಡು
ಏನೇನು ಅರಿಯದಂತಿರ್ದೆನಯ್ಯಾ ಅಖಂಡೇಶ್ವರಾ. ॥ ೫೨೩ ॥

**೭೬೭**

ನೇತ್ರದ ಸೂತ್ರದಲ್ಲಿ
ಸಕಲ ವಿಸ್ತಾರದ ರೂಪಿರ್ಪುದನಾರೂ ಅರಿಯರಲ್ಲ!
ಅದೆಂತೆಂದೊಡೆ : ''ನೇತ್ರದೇವೋ ನ ಚ ಪರಃ''
ಎಂಬ ಶ್ರುತಿ ಸಾಕ್ಷಿಯಾಗಿ ನೇತ್ರವೆ ಶಿವನೆಂದರಿದು,
ಆ ಶಿವನಿರ್ದಲ್ಲಿಯೆ ಕೈಲಾಸ ಮೇರು ಮಂದರವಿರ್ಪುವು.
ಆ ಶಿವನಿರ್ದಲ್ಲಿಯೆ ಸಕಲಪ್ರಮಥಗಣಂಗಳಿರ್ಪರು.
ಆ ಶಿವನಿರ್ದಲ್ಲಿಯೆ ಸಕಲತೀರ್ಥಕ್ಷೇತ್ರಂಗಳಿರ್ಪುವು.
ಆ ಶಿವನಿರ್ದಲ್ಲಿಯೆ ಸಕಲವೇದವೇದಾಂತಗಳಿರ್ಪುವು.
ಆ ಶಿವನಿರ್ದಲ್ಲಿಯೆ ಸಕಲ ಸಚರಾಚರಂಗಳಿರ್ಪುವು.
ಇಂತೀ ಸಕಲವಿಸ್ತಾರವನೊಳಕೊಂಡ
ನೇತ್ರದ ನಿಲವು ನೀನೇ ಅಯ್ಯಾ ಅಖಂಡೇಶ್ವರಾ. ॥ ೫೨೪ ॥

**೭೬೮**

ತನುವಿನ ಕೊನೆಯಲ್ಲಿ ನೇತ್ರದ ಅನುವ ಕಂಡೆನಯ್ಯಾ
ಆ ನೇತ್ರದ ಕೊನೆಯಲ್ಲಿ ಮನದ ಸುಳುಹು ಕಂಡೆನಯ್ಯಾ.
ಆ ಮನದ ಕೊನೆಯಲ್ಲಿ ಘನಮಹಾಶಿವನ ಕಂಡೆನಯ್ಯಾ.
ಆ ಶಿವನೊಳಗೆ ಅನಂತಕೋಟಿಬ್ರಹ್ಮಾಂಡಗಳಡಗಿರ್ಪುದ ಕಂಡು
ಬೆರಗಾದೆನಯ್ಯಾ ಅಖಂಡೇಶ್ವರಾ. ॥ ೫೨೫ ॥

**೭೬೯**

ನೇತ್ರವೆಂಬ ಸುವರ್ಣದ ಕೊಡದಲ್ಲಿ
ಪರಿಣಾಮವೆಂಬ ಉದಕವ ತುಂಬಿ,
ಅಭಿಷೇಕವ ಮಾಡುವೆನಯ್ಯಾ ನಿಮಗೆ.
ನೇತ್ರವೆಂಬ ದಿವ್ಯ ಪುಷ್ಪದ ಮಾಲೆಯ
ಧರಿಸುವೆನಯ್ಯಾ ನಿಮಗೆ.
ನೇತ್ರದ ಸ್ನೇಹ ನೋಟದಿಂದೆ
ಮನಕ್ಕೆ ಮನೋಹರವ ಮಾಡುವೆನಯ್ಯಾ ನಿಮಗೆ.
ನೇತ್ರವೆಂಬ ಅರಮನೆಯಲ್ಲಿ ಪಟ್ಟಮಂಚದಮೇಲೆ
ಸುಷುಪ್ತಿಗೆಯ ಹಾಸುಗೆಯ ಮಾಡುವೆನಯ್ಯಾ ನಿಮಗೆ.
ನೇತ್ರಸೂತ್ರದಿಂದ ಕೂಡುವೆನಯ್ಯಾ ನಿಮ್ಮ ಅಖಂಡೇಶ್ವರಾ. ॥ ೫೨೬ ॥

### ೭೭೦

ಭಾವವೇ ಬ್ರಹ್ಮವಾದ ಬಳಿಕ
ಇನ್ನಾವ ವೇಷವ ತೊಡಲೇತಕೋ ?
ತನುವೇ ಲಿಂಗವಾದ ಬಳಿಕ
ಆವ ಫಲಪದದ ಹಂಗೇತಕೊ ?
ಮನದಲ್ಲಿ ತನಗೆ ತಾನೆ ಸ್ವಾತ್ಮಜ್ಞಾನ ಉದಯವಾದ ಬಳಿಕ
ಇನ್ನು ಹಲವು ಶಾಸ್ತ್ರವನೋದಿ ತಿಳಿಯಬೇಕೆಂಬ ಸಂದೇಹವೇತಕೊ ?
ಒಳಹೊರಗೆ ಸರ್ವಾಂಗದಲ್ಲಿ ಮಹಾಜ್ಞಾನವ ತುಂಬಿದ ಬಳಿಕ
ಮುಂದೆ ಮುಕ್ತಿಯ ಪಡೆಯಬೇಕೆಂಬ ಭ್ರಾಮಕವೇತಕೊ ?
ಇದು ಸತ್ಯದ ನಡೆಯಲ್ಲ ; ಶರಣರ ಮೆಚ್ಚಲ್ಲ ;
ನಮ್ಮ ಅಖಂಡೇಶ್ವರನ ಒಲುಮೆ ಮುನ್ನವೆ ಅಲ್ಲ. || ೫೨೭ ||

### ೭೭೧

ಕಾಲಲ್ಲಿ ಕಣ್ಣು ಮೂಡಿತ್ತ ಕಂಡೆ.
ನೆತ್ತಿಯ ಕುಂಭವನೊಡೆದು ಸುಧೆ ಸರ್ವಾಂಗದಲ್ಲಿ ತುಂಬಿತ್ತ ಕಂಡೆ.
ಕತ್ತಲೆ ಬೆಳಗಾಯಿತ್ತ ಕಂಡು ಬೆರಗಾದೆನಯ್ಯಾ ಅಖಂಡೇಶ್ವರಾ. || ೫೨೮ ||

### ೭೭೨

ಕಾಲಿಲ್ಲದೆ ನಡೆಯಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ಕೈಯಿಲ್ಲದೆ ಮುಟ್ಟಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ಕಣ್ಣಿಲ್ಲದೆ ನೋಡಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ಕಿವಿ ಇಲ್ಲದೆ ಕೇಳಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ನಾಲಿಗೆ ಇಲ್ಲದೆ ಸವಿಯಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ನಾಸಿಕವಿಲ್ಲದೆ ವಾಸಿಸಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ಮನವಿಲ್ಲದೆ ನೆನೆಯಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ತಾನಿಲ್ಲದೆ ಕೂಡಬಲ್ಲಡೆ ಶಿವಯೋಗಿಯೆಂಬೆನಯ್ಯಾ.
ಇಂತೀ ಭೇದವನರಿಯದೆ ವೇಷವ ಧರಿಸಿ ತಿರುಗುವರೆಲ್ಲರು
ಭವರೋಗಿಗಳೆಂಬೆನಯ್ಯಾ ಅಖಂಡೇಶ್ವರಾ. || ೫೨೯ ||

### ೭೭೩

ತನುವಿನವಗುಣಂಗಳ ತರಿದೊಟ್ಟಿ,
ಮನದ ಮಾಯಾವಿಕಾರದ ಬಾಯ ಟೊಣೆದು,
ಕರಣಂಗಳ ಕತ್ತಲೆಯ ಕಡೆಗೊದ್ದು ಎಡಬಲಂಗಳ ತಡಹಿ,
ನಡುಮಧ್ಯಮಾರ್ಗವಿಡಿದು ಸುಷುಮ್ನಗಿರಿಯನಡರಿ,
ಕಡೆಮೊದಲಿಲ್ಲದೆ ಬೆಳಗಿನೊಳಗಡಗಿ ಬೆಳಗುತಿರ್ದೆನಾಗಿ
ನಾನು ಪರಮಶಿವಯೋಗಿಯಾದೆನಯ್ಯಾ ಅಖಂಡೇಶ್ವರಾ. || ೫೩೦ ||

೭೭೪

ಕರ್ಮಸಾದಾಖ್ಯಸ್ವರೂಪವಾದ ಆಚಾರಲಿಂಗದಲ್ಲಿ
ನಕಾರಮಂತ್ರಸ್ವರೂಪವಾದ ಘ್ರಾಣೇಂದ್ರಿಯ ಸಂಯೋಗವ
ಮಾಡಬಲ್ಲಾತನೆ ಪ್ರಾಣಲಿಂಗಿ.
ಕರ್ತೃಸಾದಾಖ್ಯಸ್ವರೂಪವಾದ ಗುರುಲಿಂಗದಲ್ಲಿ
ಮಕಾರಮಂತ್ರಸ್ವರೂಪವಾದ ಜಿಹ್ವೇಂದ್ರಿಯಸಂಯೋಗವ
ಮಾಡಬಲ್ಲಾತನೆ ಪ್ರಾಣಲಿಂಗಿ.
ಮೂರ್ತಿಸಾದಾಖ್ಯಸ್ವರೂಪವಾದ ಶಿವಲಿಂಗದಲ್ಲಿ
ಶಿಕಾರಮಂತ್ರಸ್ವರೂಪವಾದ ನೇತ್ರೇಂದ್ರಿಯಸಂಯೋಗವ
ಮಾಡಬಲ್ಲಾತನೆ ಪ್ರಾಣಲಿಂಗಿ.
ಅಮೂರ್ತಿಸಾದಾಖ್ಯಸ್ವರೂಪವಾದ ಜಂಗಮಲಿಂಗದಲ್ಲಿ
ವಕಾರಮಂತ್ರಸ್ವರೂಪವಾದ ತ್ವಗಿಂದ್ರಿಯಸಂಯೋಗವ
ಮಾಡಬಲ್ಲಾತನೆ ಪ್ರಾಣಲಿಂಗಿ.
ಶಿವಸಾದಾಖ್ಯಸ್ವರೂಪವಾದ ಪ್ರಸಾದಲಿಂಗದಲ್ಲಿ
ಯಕಾರಮಂತ್ರಸ್ವರೂಪವಾದ ಶ್ರವಣೇಂದ್ರಿಯಸಂಯೋಗವ
ಮಾಡಬಲ್ಲಾತನೆ ಪ್ರಾಣಲಿಂಗಿ.
ಮಹಾಸಾದಾಖ್ಯಸ್ವರೂಪವಾದ ಮಹಾಲಿಂಗದಲ್ಲಿ
ಓಂಕಾರಮಂತ್ರಸ್ವರೂಪವಾದ ಹೃದಿಂದ್ರಿಯಸಂಯೋಗವ
ಮಾಡಬಲ್ಲಾತನೆ ಪ್ರಾಣಲಿಂಗಿ.
ಇಂತೀ ಷಡ್ವಿಧಲಿಂಗದಲ್ಲಿ ಷಡಿಂದ್ರಿಯಂಗಳ ಸಂಯೋಗವಮಾಡಿ,
ಆ ಷಡ್ವಿಧ ಲಿಂಗಂಗಳೊಂದಾದ ಮಹಾಘನವೆ ತಾನಾಗಿ
ಸುಳಿಯಬಲ್ಲಾತನೆ ಪ್ರಾಣಲಿಂಗಸಂಬಂಧಿಯಯ್ಯಾ
ಅಖಂಡೇಶ್ವರಾ. ॥ ೫೩೧ ॥

೭೭೫

ಎನ್ನ ಘ್ರಾಣದ ಕೊನೆಯಲ್ಲಿ
ನೀವು ಗಂಧಪದಾರ್ಥವ ಗ್ರಹಿಸುತಿರ್ಪಿರಿ:
ನಿಮ್ಮ ಘ್ರಾಣದ ಕೊನೆಯಲ್ಲಿ
ನಾನು ಗಂಧಪ್ರಸಾದವ ಗ್ರಹಿಸುತಿರ್ಪೆನಯ್ಯಾ.
ಎನ್ನ ಜಿಹ್ವೆಯ ಕೊನೆಯಲ್ಲಿ
ನೀವು ರುಚಿಪದಾರ್ಥವ ಗ್ರಹಿಸುತಿರ್ಪಿರಿ:
ನಿಮ್ಮ ಜಿಹ್ವೆಯ ಕೊನೆಯಲ್ಲಿ
ನಾನು ರುಚಿಪ್ರಸಾದವ ಗ್ರಹಿಸುತಿರ್ಪೆನಯ್ಯಾ.
ಎನ್ನ ನೇತ್ರದ ಕೊನೆಯಲ್ಲಿ

ನೀವು ರೂಪುಪದಾರ್ಥವ ಗ್ರಹಿಸುತಿರ್ಪಿರಿ:
ನಿಮ್ಮ ನೇತ್ರದ ಕೊನೆಯಲ್ಲಿ
ನಾನು ರೂಪುಪ್ರಸಾದವ ಗ್ರಹಿಸುತಿರ್ಪೆನಯ್ಯಾ.
ಎನ್ನ ತ್ವಕ್ಕಿನ ಕೊನೆಯಲ್ಲಿ
ನೀವು ಸ್ಪರ್ಶನಪದಾರ್ಥವ ಗ್ರಹಿಸುತಿರ್ಪಿರಿ:
ನಿಮ್ಮ ತ್ವಕ್ಕಿನ ಕೊನೆಯಲ್ಲಿ
ನಾನು ಸ್ಪರ್ಶನಪ್ರಸಾದವ ಗ್ರಹಿಸುತಿರ್ಪೆನಯ್ಯಾ.
ಎನ್ನ ಶ್ರೋತ್ರದ ಕೊನೆಯಲ್ಲಿ
ನೀವು ಶಬ್ದಪದಾರ್ಥವ ಗ್ರಹಿಸುತಿರ್ಪಿರಿ:
ನಿಮ್ಮ ಶ್ರೋತ್ರದ ಕೊನೆಯಲ್ಲಿ
ನಾನು ಶಬ್ದಪ್ರಸಾದವ ಗ್ರಹಿಸುತಿರ್ಪೆನಯ್ಯಾ.
ಎನ್ನ ಹೃದಯದ ಕೊನೆಯಲ್ಲಿ
ನೀವು ತೃಪ್ತಿಪದಾರ್ಥವ ಗ್ರಹಿಸುತಿರ್ಪಿರಿ:
ನಿಮ್ಮ ಹೃದಯದ ಕೊನೆಯಲ್ಲಿ
ನಾನು ತೃಪ್ತಿ ಪ್ರಸಾದವ ಗ್ರಹಿಸುತಿರ್ಪೆನಯ್ಯಾ.
ಇಂತೆನ್ನ ಷಡಿಂದ್ರಿಯಂಗಳ ಸುಖವು ನಿಮಗರ್ಪಿತವಾಯಿತ್ತು.
ನಿಮ್ಮ ಷಡಿಂದ್ರಿಯಂಗಳು ಎನಗೆ ಪ್ರಸನ್ನಪ್ರಸಾದವಾಯಿತ್ತಾಗಿ,
ಎನ್ನ ಜೀವಭಾವದ ಶನಿ ಹಾಳಾಗಿ ಹೋಯಿತ್ತಯ್ಯಾ
ಅಖಂಡೇಶ್ವರಾ. ‖ ೫೩೭ ‖

೭೭೬

ಗುರುಪಾದೋದಕವ ಕೊಂಡು
ಎನ್ನ ಸಂಚಿತಕರ್ಮ ನಾಸ್ತಿಯಾಯಿತ್ತು.
ಲಿಂಗಪಾದೋದಕವ ಕೊಂಡು
ಎನ್ನ ಪ್ರಾರಬ್ಧಕರ್ಮ ನಾಸ್ತಿಯಾಯಿತ್ತು.
ಜಂಗಮಪಾದೋದಕವ ಕೊಂಡು
ಎನ್ನ ಆಗಾಮಿಕರ್ಮ ನಾಸ್ತಿಯಾಯಿತ್ತು.
ಇಂತೀ ತ್ರಿಮೂರ್ತಿಗಳ ತ್ರಿವಿಧಪಾದೋದಕವ ಕೊಂಡು
ಎನ್ನ ತ್ರಿಕರ್ಮಂಗಳು ನಾಸ್ತಿಯಾದುವಾಗಿ,
ಅಖಂಡೇಶ್ವರಾ, ಎನ್ನ ಹುಟ್ಟುಹೊಂದುಗಳು ನಷ್ಟವಾದುವಯ್ಯಾ. ‖ ೫೩೮ ‖

೭೭೭

ಪಾದತೀರ್ಥವೆಂದಡೆ ಪರಾತ್ಪರವು ತಾನೆ ನೋಡಾ.
ಪಾದತೀರ್ಥವೆಂದಡೆ ಪರಬ್ರಹ್ಮವು ತಾನೆ ನೋಡಾ.
ಪಾದತೀರ್ಥವೆಂದಡೆ ಪರಿಪೂರ್ಣ ಮಹಾಜ್ಞಾನವು ತಾನೆ ನೋಡಾ.

ಪಾದತೀರ್ಥವೆಂದಡೆ ಪರಾತ್ಪರವಾದ ಪರವಸ್ತುವು ತಾನೆ ನೋಡಾ.
ಪಾದತೀರ್ಥವೆಂದಡೆ ನಿತ್ಯನಿರವಯ ನಿರಂಜನಬ್ರಹ್ಮವು ತಾನೆ ನೋಡಾ.
ಪಾದತೀರ್ಥವೆಂದಡೆ ಮಹಾಘನ ಪರತರ ಪರಂಜ್ಯೋತಿ ತಾನೆ ನೋಡಾ.
ಪಾದತೀರ್ಥವೆಂದಡೆ ಸಾಕ್ಷಾತ್ ಪರಶಿವನು ತಾನೆ ನೋಡಾ.
ಇಂತಪ್ಪ ಪಾದತೀರ್ಥದ ಘನವ ಕಂಡು
ತನುಕರಗಿ ಮನಹಿಗ್ಗಿ ಹೃದಯ ಪಸರಿಸಿ
ಅಂತರಂಗದಲ್ಲಿ ವಿಶ್ವಾಸ ತುಂಬಿ,
ಬಹಿರಂಗದ ಭಕ್ತಿಯಿಂದೆ ಸಾಷ್ಟಾಂಗ ನಮಸ್ಕರಿಸಿ,
ಆ ಮಹಾಘನ ಪರಾತ್ಪರವಾದ ಪಾದತೀರ್ಥವನು
ಹದುಳಿಗಚಿತ್ತನಾಗಿ ಹರ್ಷಾನಂದದಿಂ ಸೇವನೆಯಮಾಡಿ
ಭವಸಾಗರವ ದಾಂಟಿ, ಕಾಯಜೀವದ ಸಂಸಾರವ ನೀಗಿ,
ಪರಮಪವಿತ್ರ ಶಿವಮಯನಾಗಿರ್ದೆನಯ್ಯಾ ಅಖಂಡೇಶ್ವರಾ. || ೫೨೪ ||

೭೭೮

ಜಂಗಮದ ಪಾದತೀರ್ಥವು ಭವರೋಗವೈದ್ಯವಯ್ಯಾ.
ಜಂಗಮದ ಪಾದತೀರ್ಥವು ಶಿವಸಾಯುಜ್ಯವಯ್ಯಾ.
ಜಂಗಮದ ಪಾದತೀರ್ಥವು ಜೀವನ್ಮುಕ್ತಿಯಯ್ಯಾ.
ಜಂಗಮದ ಪಾದತೀರ್ಥವು ಆಧಿ ವ್ಯಾಧಿ ವಿಪತ್ತು
ರೋಗರುಜಿನಂಗಳ ಶೋಧಿಸಿ ಕಿತ್ತು ಬಿಸುಟುವುದಯ್ಯಾ.
ಜಂಗಮದ ಪಾದತೀರ್ಥವು ಅಂಗದ ಅವಗುಣವ ಕಳೆವುದಯ್ಯಾ.
ಜಂಗಮದ ಪಾದತೀರ್ಥವು ಲಿಂಗಕ್ಕೆ ಕಳೆಯನಿಪ್ಪುದಯ್ಯಾ.
ಇಂತಪ್ಪ ಜಂಗಮದ ಪಾದತೀರ್ಥಕ್ಕೆ
ಭಕ್ತನಾದಡೂ ಆಗಲಿ ಮಹೇಶ್ವರನಾದಡೂ ಆಗಲಿ
ಆರಾದಡೇನು ಅಡಿಯಿಟ್ಟು ನಡೆದು ಬಂದು
ಭಯಭಕ್ತಿಯಿಂದೆ ಅಡ್ಡಬಿದ್ದು,
ಜಂಗಮದ ಪಾದತೀರ್ಥವನು
ಶುದ್ಧ ಸಾವಧಾನದಿಂದೆ
ತನ್ನ ಲಿಂಗಕ್ಕೆ ಅರ್ಪಿಸಿ, ಅಂಗಕ್ಕೆ ಕೊಳ್ಳಬಲ್ಲಡೆ,
ಆ ಮಹಾತ್ಮನೆ ಆದಿಪುರಾತನನೆಂಬೆ;
ಅಭೇದ್ಯ ಭೇದಕನೆಂಬೆ.
ಹೀಗಲ್ಲದೆ ಭಕ್ತಿಹೀನನಾಗಿ, ಯುಕ್ತಿಶೂನ್ಯನಾಗಿ,
ಗರ್ವದ ಪರ್ವತವನೇರಿ ಹೆಮ್ಮೆ ಹಿರಿತನವು ಮುಂದುಗೊಂಡು
ಆ ಜಂಗಮದ ಪಾದತೀರ್ಥವನು
ಕಾಲಿಲ್ಲದ ಹೆಳವನಂತೆ ತಾನಿದ್ದಲ್ಲಿಗೆ ತರಿಸಿಕೊಂಡು

ಅವಿಶ್ವಾಸದಿಂದೆ ಕೊಂಬ ಜೀವಗಳ್ಳರ
ಎನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ. || ೫೩೫ ||

### ೭೭೯

ನಿತ್ಯನಿರಂಜನ ಜಂಗಮವ ಭಕ್ತಿಯಿಂ ಬಿಜಯಂಗೈಸಿ
ಮುಕ್ತಿಸಿಂಹಾಸನದ ಮೇಲೆ ಕುಳ್ಳಿರಿಸಿ,
ಸತ್ಯೋದಕದಿಂದೆ ಪಾದಪ್ರಕ್ಷಾಲನವ ಮಾಡಿ
ಆ ಜಂಗಮದ ಜ್ಞಾನಕ್ರಿಯಂಗಳೆಂಬ ಶ್ರೀಚರಣಯುಗಳವನು
ಸುಚಿತ್ತವೆಂಬ ಹಸ್ತದ ಮಧ್ಯದಲ್ಲಿ ಮೂರ್ತಿಗೊಳಿಸಿ,
ಸದ್ಭಾವನೆಂಬ ಹಸ್ತದಿಂದ ಚಿತ್ಪ್ರಕಾಶವೆಂಬ ವಿಭೂತಿಯ ಧರಿಸಿ,
ಚಿತ್ಕರಣಂಗಳೆಂಬ ಪುಷ್ಪದ ಮಾಲೆಯ ಶೃಂಗರಿಸಿ
ಸ್ವಾನುಭಾವವೆಂಬ ಧೂಪವನರ್ಪಿಸಿ
ಸಮ್ಯಕ್‌ಜ್ಞಾನವೆಂಬ ದೀಪವ ಬೆಳಗಿ
ನಿಃಶೂನ್ಯವೆಂಬ ಕೊಣದಲ್ಲಿರ್ದ ನಿರವಯ ಉದಕದ ತಂದು,
ಆ ನಿರಂಜನಜಂಗಮದ ಪಾದಾಭಿಷೇಕವ ಮಾಡಿ,
ನಿರಾಳವೆಂಬ ಬಟ್ಟಲಲ್ಲಿ ಗಡಣಿಸಿಕೊಂಡು
ಪೂಜೆಯಂ ಸಂಪೂರ್ಣಂಗೈದು,
ಬಳಿಕ ಆ ತೀರ್ಥವನು ಆ ಜಂಗಮವು
ತಮ್ಮ ಲಿಂಗಕ್ಕೆ ಅರ್ಪಿಸಿ, ಆ ಲಿಂಗಸಹಿತ ಭೋಗಿಸಿ,
ಉಳಿದ ಮಹಾಜ್ಞಾನತೀರ್ಥವನು
ಅವಿರಳಭಕ್ತಿಯಿಂದೆ ಕೈಕೊಂಡು
ತನ್ನ ಲಿಂಗಸಹಿತ ಸಲಿಸುವಾತನೆ ಅನಾದಿಭಕ್ತನು.
ಇಂತಪ್ಪ ಅನಾದಿಭಕ್ತನ ಘನಕ್ಕೆ
ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. || ೫೩೬ ||

### ೭೮೦

ಕೇಳಿ, ಕೇಳಿರಯ್ಯಾ ಶಿವಭಕ್ತಶರಣಜನಂಗಳು ನೀವೆಲ್ಲ,
ನೂರೊಂದು ಸ್ಥಲದ ನಿರ್ಣಯವನು ಆರುಸ್ಥಲದಲ್ಲಡಗಿಸಿ,
ಆರುಸ್ಥಲದ ನಿರ್ಣಯವನು ಮೂರುಸ್ಥಲದಲ್ಲಡಗಿಸಿ,
ಆ ಮೂರುಸ್ಥಲ ಒಂದಾದ ಮೂಲಬ್ರಹ್ಮದಲ್ಲಿ
ಶರಣನ ಕುರುಹು ಅಡಗಿ ನಿವಾರ್ಣಯವಾದ ಭೇದಮಂ ಪೇಳ್ವೆ.
ಅದೆಂತೆನಲು :
ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ,
ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ,
ರುದ್ರಾಕ್ಷಿಸ್ಥಲ, ಪಂಚಾಕ್ಷರಿಸ್ಥಲ, ಭಕ್ತಸ್ಥಲ,

ಉಭಯಸ್ಥಲ, ತ್ರಿವಿಧಸಂಪತ್ತಿಸ್ಥಲ, ಚತುರ್ವಿಧಸಾರಾಯಸ್ಥಲ,
ಉಪಾಧಿಮಾಟಸ್ಥಲ, ನಿರುಪಾಧಿಮಾಟಸ್ಥಲ, ಸಹಜಮಾಟಸ್ಥಲ,
ಈ ಹದಿನೈದು ಭಕ್ತಸ್ಥಲಂಗಳು.
ದೀಕ್ಷಾಗುರುಸ್ಥಲ, ಶಿಕ್ಷಾಗುರುಸ್ಥಲ, ಜ್ಞಾನಗುರುಸ್ಥಲ,
ಕ್ರಿಯಾಲಿಂಗಸ್ಥಲ, ಭಾವಲಿಂಗಸ್ಥಲ, ಜ್ಞಾನಲಿಂಗಸ್ಥಲ,
ಸ್ವಯಸ್ಥಲ, ಚರಸ್ಥಲ, ಪರಸ್ಥಲ,
ಈ ಒಂಬತ್ತು ಆಚಾರಲಿಂಗಸ್ಥಲಂಗಳು.
ಇಂತೀ ಉಭಯ ಸ್ಥಲವು ಕೂಡಿ ೨೪ ಸ್ಥಲಂಗಳಾಗಿ,
ಆಧಾರಚಕ್ರದಲ್ಲಿ ಸಂಬಂಧವಾಗಿರ್ಪುವು.
ಮಹೇಶ್ವರಸ್ಥಲ, ಲಿಂಗನಿಷ್ಠಾಸ್ಥಲ, ಪೂರ್ವಾಶ್ರಯನಿರಸನಸ್ಥಲ,
ವಾಗದ್ವೈತನಿರಸನಸ್ಥಲ, ಆಹ್ವಾನನಿರಸನಸ್ಥಲ,
ಅಷ್ಟತನುಮೂರ್ತಿನಿರಸನಸ್ಥಲ, ಸರ್ವಗತನಿರಸನಸ್ಥಲ,
ಶಿವಜಗನ್ಮಯಸ್ಥಲ, ಭಕ್ತದೇಹಿಕಸ್ಥಲ,
ಈ ಒಂಬತ್ತು ಮಹೇಶ್ವರಸ್ಥಲಂಗಳು.
ಕ್ರಿಯಾಗಮಸ್ಥಲ, ಭಾವಾಗಮಸ್ಥಲ, ಜ್ಞಾನಾಗಮಸ್ಥಲ,
ಸಕಾಯಸ್ಥಲ, ಅಕಾಯಸ್ಥಲ, ಪರಕಾಯಸ್ಥಲ,
ಧರ್ಮಾಚಾರಸ್ಥಲ, ಭಾವಾಚಾರಸ್ಥಲ, ಜ್ಞಾನಾಚಾರಸ್ಥಲ,
ಈ ಒಂಬತ್ತು ಗುರುಲಿಂಗಸ್ಥಲಂಗಳು.
ಇಂತೀ ಉಭಯಸ್ಥಲವು ಕೂಡಿ ೧೮ ಸ್ಥಲಂಗಳಾಗಿ,
ಸ್ವಾಧಿಷ್ಠಾನಚಕ್ರದಲ್ಲಿ ಸಂಬಂಧವಾಗಿರ್ಪುವು.
ಪ್ರಸಾದಿಸ್ಥಲ, ಗುರುಮಹಾತ್ಮೆಸ್ಥಲ, ಲಿಂಗಮಹಾತ್ಮೆಸ್ಥಲ,
ಜಂಗಮಮಹಾತ್ಮೆಸ್ಥಲ, ಭಕ್ತಮಹಾತ್ಮೆಸ್ಥಲ,
ಶರಣಮಹಾತ್ಮೆಸ್ಥಲ, ಪ್ರಸಾದಮಹಾತ್ಮೆಸ್ಥಲ,
ಈ ಏಳು ಪ್ರಸಾದಿಸ್ಥಲಂಗಳು.
ಕಾಯಾನುಗ್ರಹಸ್ಥಲ, ಇಂದ್ರಿಯಾನುಗ್ರಹಸ್ಥಲ, ಪ್ರಾಣಾನುಗ್ರಹಸ್ಥಲ,
ಕಾಯಾರ್ಪಿತಸ್ಥಲ, ಕರಣಾರ್ಪಿತಸ್ಥಲ, ಭಾವಾರ್ಪಿತಸ್ಥಲ,
ಶಿಷ್ಯಸ್ಥಲ, ಶುಶ್ರೂಷಾಸ್ಥಲ, ಸೇವ್ಯಸ್ಥಲ,
ಈ ಒಂಬತ್ತು ಶಿವಲಿಂಗಸ್ಥಲಂಗಳು.
ಇಂತೀ ಉಭಯಸ್ಥಲವು ಕೂಡಿ ೧೬ ಸ್ಥಲಂಗಳಾಗಿ,
ಮಣಿಪೂರಕಚಕ್ರದಲ್ಲಿ ಸಂಬಂಧವಾಗಿರ್ಪುವು.
ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನಾಸ್ಥಲ,
ಶಿವಯೋಗಸಮಾಧಿಸ್ಥಲ, ಲಿಂಗನಿಜಸ್ಥಲ, ಅಂಗಲಿಂಗಸ್ಥಲ,
ಈ ಐದು ಪ್ರಾಣಲಿಂಗಿಸ್ಥಲಂಗಳು.
ಜೀವಾತ್ಮಸ್ಥಲ, ಅಂತರಾತ್ಮಸ್ಥಲ, ಪರಮಾತ್ಮಸ್ಥಲ,

ನಿರ್ದೇಹಾಗಮಸ್ಥಲ, ನಿರ್ಭಾವಾಗಮಸ್ಥಲ, ನಷ್ಟಾಗಮಸ್ಥಲ,
ಆದಿಪ್ರಸಾದಿಸ್ಥಲ, ಅಂತ್ಯಪ್ರಸಾದಿಸ್ಥಲ, ಸೇವ್ಯಪ್ರಸಾದಿಸ್ಥಲ,
ದೀಕ್ಷಾಪಾದೋದಕಸ್ಥಲ, ಶಿಕ್ಷಾಪಾದೋದಕಸ್ಥಲ,
ಜ್ಞಾನಪಾದೋದಕಸ್ಥಲ,
ಈ ಹನ್ನೆರಡು ಜಂಗಮಲಿಂಗಸ್ಥಲಂಗಳು.
ಇಂತೀ ಉಭಯಸ್ಥಲವು ಕೂಡಿ ೧೬ ಸ್ಥಲಂಗಳಾಗಿ,
ಅನಾಹತಚಕ್ರದಲ್ಲಿ ಸಂಬಂಧವಾಗಿರ್ಪುವು.
ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನಾಸ್ಥಲ,
ಈ ನಾಲ್ಕು ಶರಣಸ್ಥಲಂಗಳು.
ಕ್ರಿಯಾನಿಷ್ಪತ್ತಿಸ್ಥಲ, ಭಾವನಿಷ್ಪತ್ತಿಸ್ಥಲ, ಜ್ಞಾನನಿಷ್ಪತ್ತಿಸ್ಥಲ,
ಪಿಂಡಾಕಾಶಸ್ಥಲ, ಬಿಂದ್ವಾಕಾಶಸ್ಥಲ, ಮಹದಾಕಾಶಸ್ಥಲ,
ಕ್ರಿಯಾಪ್ರಕಾಶಸ್ಥಲ, ಭಾವಪ್ರಕಾಶಸ್ಥಲ, ಜ್ಞಾನಪ್ರಕಾಶಸ್ಥಲ,
ಈ ಒಂಬತ್ತು ಪ್ರಸಾದಿಲಿಂಗಸ್ಥಲಂಗಳು.
ಇಂತೀ ಉಭಯಸ್ಥಲವು ಕೂಡಿ ೧೩ ಸ್ಥಲಂಗಳಾಗಿ,
ವಿಶುದ್ಧಿಚಕ್ರದಲ್ಲಿ ಸಂಬಂಧವಾಗಿರ್ಪುವು.
ಐಕ್ಯಸ್ಥಲ, ಸರ್ವಾಚಾರಸಂಪತ್ತಿಸ್ಥಲ,
ಏಕಭಾಜನಸ್ಥಲ, ಸಹಭೋಜನಸ್ಥಲ,
ಈ ನಾಲ್ಕು ಐಕ್ಯಸ್ಥಲಂಗಳು.
ಕೊಂಡುದು ಪ್ರಸಾದಿಸ್ಥಲ, ನಿಂದುದೋಗರಸ್ಥಲ, ಚರಾಚರನಾಸ್ತಿಸ್ಥಲ,
ಭಾಂಡಸ್ಥಲ, ಭಾಜನಸ್ಥಲ, ಅಂಗಲೇಪನಸ್ಥಲ,
ಸ್ವಪರಜ್ಞಾನಸ್ಥಲ, ಭಾವಾಭಾವನಷ್ಟಸ್ಥಲ, ಜ್ಞಾನಶೂನ್ಯಸ್ಥಲ,
ಈ ಒಂಬತ್ತು ಮಹಾಲಿಂಗಸ್ಥಲಂಗಳು.
ಇಂತೀ ಉಭಯಸ್ಥಲವು ಕೂಡಿ ೧೩ ಸ್ಥಲಂಗಳಾಗಿ,
ಆಜ್ಞಾಚಕ್ರದಲ್ಲಿ ಸಂಬಂಧವಾಗಿರ್ಪುವು.
ಇಂತೀ ೧೦೧ ಸ್ಥಲಕುಳಂಗಳು
ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ,
ಎಂಬ ಆರು ಚಕ್ರಂಗಳಲ್ಲಿ ಸಂಬಂಧಿಸಿ,
ಆ ಆರು ಚಕ್ರಂಗಳನು
ನಿಃಷ್ಕಲಶೂನ್ಯನಿರಂಜನವೆಂಬ ಮೂರು ಚಕ್ರಂಗಳಲ್ಲಿ ಅಡಗಿಸಿ,
ಆ ಮೂರು ಚಕ್ರಂಗಳೆಂಬ ಮಂಟಪದಲ್ಲಿ
ಗುರುಲಿಂಗಜಂಗಮವ ಕುಳ್ಳಿರಿಸಿ,
ನಿಷ್ಕಲಶೂನ್ಯ ನಿರಂಜನ ಭಕ್ತಿಯಿಂದರ್ಚಿಸಿ,
ಆ ಗುರುಲಿಂಗಜಂಗಮದ ಘನಪ್ರಸಾದವ ಪಡೆದು
ಆ ಗುರುಲಿಂಗಜಂಗಮವು ಒಂದಾದ

ಮಹಾಘನ ಪರಬ್ರಹ್ಮದಲ್ಲಿ ಮನವಡಗಿ ಭಾವ ನಿಷ್ಪತ್ತಿಯಾಗಿ
ಶರಧಿಯಲ್ಲಿ ಮುಳುಗಿದ ಪೂರ್ಣಕುಂಭದಂತಿರ್ಪ
ಮಹಾಶರಣರ ಪರಮಗುರು ಬಸವರಾಜದೇವರ
ದಿವ್ಯ ಶ್ರೀಪಾದಕ್ಕೆ ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. ॥ ೫೩೭ ॥

೭೮೧

ಆದಿಯಾಧಾರವಿಲ್ಲದ ಮುನ್ನ,
ನಾದಬಿಂದುಕಳೆಗಳಿಲ್ಲದ ಮುನ್ನ,
ಭೇದಾಭೇದ ಬ್ರಹ್ಮಾಂಡಕೋಟಿಗಳಿಲ್ಲದ ಮುನ್ನ,
ಬಸವನೆಂಬ ಬೀಜದ ಮಧ್ಯದಲ್ಲಿ
ಲಿಂಗವೆಂಬ ಅಂಕುರ ಉದಯವಾಯಿತ್ತು.
ಆ ಲಿಂಗಾಂಕುರವೆ
ಸಕಲತತ್ವ ತೋರಿಕೆಯೆಂಬ ಶಾಖೆ ಪರ್ಣಂಗಳು ಪಸರಿಸಿ,
ವೃಕ್ಷ ಪಲ್ಲವಿಸಿತ್ತು.
ಇಂತಪ್ಪ ಚಿದ್‌ಬ್ರಹ್ಮವೃಕ್ಷವೆಂಬ ಪರಮಗುರು ಸಂಗನಬಸವಣ್ಣನ
ಶ್ರೀಪಾದಕಮಲದಲ್ಲಿ ಭ್ರಮರನಾಗಿರಿಸಯ್ಯಾ ಅಖಂಡೇಶ್ವರಾ. ॥ ೫೩೮ ॥

೭೮೨

ನಿರುಪಮ ಬಸವಣ್ಣನ ನಿರಾಳ ಬೆಳಗಿನೊಳಗೆ
ನಿರಂತರ ಬೆಳಗುತಿರ್ದೆನಯ್ಯಾ.
ಅದೆಂತೆಂದೊಡೆ :
ಬಕಾರವೇ ಎನ್ನ ಸ್ಥೂಲತನು,
ಸಕಾರವೇ ಎನ್ನ ಸೂಕ್ಷ್ಮತನು,
ವಕಾರವೇ ಎನ್ನ ಕಾರಣತನು.
ಮತ್ತಂ,
ಬಕಾರವೇ ಎನ್ನ ಜೀವಾತ್ಮನು,
ಸಕಾರವೆ ಎನ್ನ ಅಂತರಾತ್ಮನು,
ವಕಾರವೆ ಎನ್ನ ಪರಮಾತ್ಮನು.
ಮತ್ತಂ,
ಬಕಾರವೆ ಗುರುವಾಗಿ ಬಂದೆನ್ನ
ತನುವನೊಳಕೊಂಡಿತ್ತು.
ಸಕಾರವೆ ಲಿಂಗವಾಗಿ ಬಂದೆನ್ನ
ಮನವನೊಳಕೊಂಡಿತ್ತು.
ವಕಾರವೆ ಜಂಗಮವಾಗಿ ಬಂದೆನ್ನ
ಧನವನೊಳಕೊಂಡಿತ್ತು.

ಮತ್ತಂ,
ಬಕಾರವೆ ಇಷ್ಟಲಿಂಗವಾಗಿ ಬಂದೆನ್ನ
ಸ್ಥೂಲತನುವನೊಳಕೊಂಡಿತ್ತು.
ಸಕಾರವೆ ಪ್ರಾಣಲಿಂಗವಾಗಿ ಬಂದೆನ್ನ
ಸೂಕ್ಷ್ಮತನುವನೊಳಕೊಂಡಿತ್ತು.
ವಕಾರವೆ ಭಾವಲಿಂಗವಾಗಿ ಬಂದೆನ್ನ
ಕಾರಣತನುವನೊಳಕೊಂಡಿತ್ತು.
ಮತ್ತಂ,
ಬಕಾರವೆ ಶುದ್ಧಪ್ರಸಾದವಾಗಿ ಬಂದೆನ್ನ
ಜೀವಾತ್ಮನನೊಳಕೊಂಡಿತ್ತು.
ಸಕಾರವೇ ಸಿದ್ಧಪ್ರಸಾದವಾಗಿ ಬಂದೆನ್ನ
ಅಂತರಾತ್ಮನನೊಳಕೊಂಡಿತ್ತು.
ವಕಾರವೆ ಪ್ರಸಿದ್ಧಪ್ರಸಾದವಾಗಿ ಬಂದೆನ್ನ
ಪರಮಾತ್ಮನನೊಳಕೊಂಡಿತ್ತು.
ಮತ್ತಂ,
ಬಕಾರವೆ ಸತ್ಕ್ರಿಯೆಯಾಗಿ ಬಂದೆನ್ನ
ಬಹಿರಂಗವ ಅವಗ್ರಹಿಸುತಿರ್ಪುದು.
ಸಕಾರವೆ ಸಮ್ಯಕ್‌ಜ್ಞಾನವಾಗಿ ಬಂದೆನ್ನ
ಅಂತರಂಗವ ಅವಗ್ರಹಿಸುತಿರ್ಪುದು.
ವಕಾರವೆ ಮಹಾಜ್ಞಾನವಾಗಿ ಬಂದೆನ್ನ
ಒಳಹೊರಗನೆಲ್ಲ ಅವಗ್ರಹಿಸುತಿರ್ಪುದು.
ಇಂತೀ ಬಸವಾಕ್ಷರಕತ್ರಯಂಗಳಲ್ಲಿ ನಾನು ನಿಕ್ಷೇಪವಾಗಿರ್ದು
ಬಸವ ಬಸವ ಬಸವ ಎಂದು ಬಸವಣ್ಣನ ನಾಮತ್ರಯವನು
ಎನ್ನ ಮನದಣಿವಂತೆ ತಣಿಯಲುಂಡು
ಭವಸೂತ್ರವ ಹರಿದು ಶಿವಸ್ವರೂಪನಾದೆನಯ್ಯಾ ಅಖಂಡೇಶ್ವರಾ. ॥ ೫೩೯॥

೭೮೩

ಬೀಜದೊಳಗೆ ಅಂಕುರವಿರ್ಪುದು.
ಅಂಕುರದೊಳಗೆ ಬೀಜವಿರ್ಪುದು.
ಅಂಕುರ ಬೀಜವೆಂದು ಹೆಸರು ಎರಡಾದಡೇನು ?
ಒಳಗಿರ್ಪ ಸಾರವು ಒಂದೇ ಆಗಿರ್ಪಂತೆ
ಬಸವಣ್ಣನೆ ಶಿವನು, ಶಿವನೆ ಬಸವಣ್ಣನು.
ಬಸವಣ್ಣ ಶಿವನೆಂಬ ಹೆಸರೆರಡಾದಡೇನು ?
ಅಖಂಡವಸ್ತು ಒಂದೇ ಆದಕಾರಣ,

ನಿಮ್ಮ ಅಖಂಡೇಶ್ವರನೆಂದು ಹೆಸರಿಟ್ಟು ಕರೆದೆನಯ್ಯಾ
ದೇವರದೇವಾ. || ೫೪೦ ||

೭೮೪

ಎನ್ನ ಪೃಥ್ವಿತತ್ತ್ವದಲ್ಲಿ ಆಧಾರಚಕ್ರವಿರ್ಪುದು.
ಆ ಚಕ್ರವೇ ಭಕ್ತಸ್ಥಲ.
ಆ ಸ್ಥಲವ ಬಸವಣ್ಣನಿಂಬುಗೊಂಡನಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ಅಪ್ಪುತತ್ತ್ವದಲ್ಲಿ ಸ್ವಾಧಿಷ್ಠಾನಚಕ್ರವಿರ್ಪುದು.
ಆ ಚಕ್ರವೇ ಮಹೇಶ್ವರಸ್ಥಲ.
ಆ ಸ್ಥಲವ ಮಡಿವಾಳಮಾಚಯ್ಯಗಳಿಂಬುಗೊಂಡರಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ಅಗ್ನಿತತ್ತ್ವದಲ್ಲಿ ಮಣಿಪೂರಕಚಕ್ರವಿರ್ಪುದು.
ಆ ಚಕ್ರವೆ ಪ್ರಸಾದಿಸ್ಥಲ.
ಆ ಸ್ಥಲವ ಚೆನ್ನಬಸವಣ್ಣನಿಂಬುಗೊಂಡನಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ವಾಯುತತ್ತ್ವದಲ್ಲಿ ಅನಾಹತಚಕ್ರವಿರ್ಪುದು.
ಆ ಚಕ್ರವೆ ಪ್ರಾಣಲಿಂಗಿಸ್ಥಲ.
ಆ ಸ್ಥಲವ ಸಿದ್ಧರಾಮಯ್ಯದೇವರಿಂಬುಗೊಂಡರಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ಗಗನತತ್ತ್ವದಲ್ಲಿ ವಿಶುದ್ಧಿಚಕ್ರವಿರ್ಪುದು.
ಆ ಚಕ್ರವೆ ಶರಣಸ್ಥಲ.
ಆ ಸ್ಥಲವ ಉರಿಲಿಂಗಪೆದ್ದಿದೇವರಿಂಬುಗೊಂಡರಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ಜೀವತತ್ತ್ವದಲ್ಲಿ ಅಜ್ಞಾನಚಕ್ರವಿರ್ಪುದು.
ಆ ಚಕ್ರವೆ ಐಕ್ಯಸ್ಥಲ.
ಆ ಸ್ಥಲವ ಅಜಗಣ್ಣತಂದೆಗಳಿಂಬುಗೊಂಡರಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ಬ್ರಹ್ಮಚಕ್ರವೆ ಪರಮ ಆರೂಢಸ್ಥಲ.
ಆ ಸ್ಥಲವ ನಿಜಗುಣಯೋಗಿಗಳಿಂಬುಗೊಂಡರಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ಶಿಖಾಚಕ್ರವೆ ನಿತ್ಯನಿರುಪಮಸ್ಥಲ.
ಆ ಸ್ಥಲವ ಅಕ್ಕಮಹಾದೇವಿಯರಿಂಬುಗೊಂಡರಾಗಿ
ಎನಗಾಸ್ಥಲ ಬಯಲಾಯಿತ್ತು.

ಎನ್ನ ಪಶ್ಚಿಮಚಕ್ರವ ಪರಮನಿರಂಜನಸ್ಥಲ.
ಆ ಸ್ಥಲವ ಪ್ರಭುಸ್ವಾಮಿಗಳಿಂಬುಗೊಂಡರಾಗಿ
ಎನಗಾಸ್ಥಲ ಬಯಲಾಯಿತ್ತು.
ಎನ್ನ ಒಳಹೊರಗೆ ತೋರುವ ಎಲ್ಲ ಸ್ಥಳಕುಳಂಗಳನು
ಉಳಿದ ಸಕಲಗಣಂಗಳು ಇಂಬುಗೊಂಡರಾಗಿ
ಎನಗೆ ಎಲ್ಲ ಸ್ಥಲಂಗಳು ಬಯಲಾದುವು.
ಇದು ಕಾರಣ, ಆದಿ ಅನಾದಿಯಿಂದತ್ತತ್ತಲಾದ
ಘನಕೆ ಘನವಾದ ಮಹಕೆ ಮಹವಾದ
ಮಹಾಸ್ಥಲವನಿಂಬುಗೊಂಡಿರಯ್ಯಾ ಎನಗೆ ಅಖಂಡೇಶ್ವರಾ. ॥ ೫೪೧ ॥

**೨೪೫**

ಮನವ ನಿಲಿಸಿಹೆನೆಂದು ನುಡಿವ ಅಣ್ಣಗಳ
ಕಣ್ಣಗೆಡಿಸಿ ಬಣ್ಣಗುಂದಿಸಿ ಬಂಧನಕ್ಕೊಳಗುಮಾಡಿ
ಭವದಲ್ಲಿ ಸೆರೆಹಿಡಿದಿರ್ಪುದು ನೋಡಾ ಮನವು.
ಅದೆಂತೆಂದೊಡೆ :
ವ್ರತವುಳ್ಳವರ ಭ್ರಾಂತುಗೆಡಿಸಿತ್ತು ನೋಡಾ ಮನವು.
ಯತಿಗಳೆಂಬವರ ಮತಿಹೀನರ ಮಾಡಿತ್ತು ನೋಡಾ ಮನವು.
ಕಣ್ಣುಮುಚ್ಚಿ ಧ್ಯಾನಿಸುವ ಅಣ್ಣಗಳ
ಕಳವಳಗೊಳಿಸಿತ್ತು ನೋಡಾ ಮನವು.
ಏಕಾಂತವಾಸಿಗಳೆಲ್ಲರ ಹಿಡಿತಂದು
ಲೋಕದ ಮಧ್ಯದೊಳಗಿರಿಸಿ
ಕಾಕುತನದಲ್ಲಿ ಕಾಡಿ ಏಡಿಸಿತ್ತು ನೋಡಾ ಮನವು.
ಯೋಗಿಗಳೆಂಬವರ ಭೋಗಕ್ಕೊಳಗುಮಾಡಿ
ಕಾಡಿತ್ತು ನೋಡಾ ಮನವು.
ಇಂತೀ ಮನವ ನಿಲಿಸಿಹೆವೆಂದು ನುಡಿದು
ಮತಿಗೆಟ್ಟು ಮಣ್ಣುಮಸಿಯಾಗಿ ಹೋದರು ನೋಡಾ ಹಲಕೆಲಬರು.
ಅವರಂತಿರಲಿ.
ಇನ್ನು ಮನವ ನಿಲಿಸುವ ಭೇದವ ಹೇಳಿಹೆ ಕೇಳಿರೆ.
ಆದಿ–ಅನಾದಿ, ಸುರಾಳ–ನಿರಾಳ, ಶೂನ್ಯ–ನಿಃಶೂನ್ಯ,
ಸಾಕಾರ–ನಿರಾಕಾರ, ಸಗುಣ–ನಿರ್ಗುಣ, ಮೂರ್ತಿ–ಅಮೂರ್ತಿ,
ಶಿವ–ಶಕ್ತಿ, ನಾಮ–ರೂಪು–ಕ್ರಿಯೆ ಸಕಲ ಬ್ರಹ್ಮಾಂಡ ಸಚರಾಚರಾದಿ
ನಾನಾ ತೋರಿಕೆಯಲ್ಲವು ತಾನೆ ಎಂದು ತಿಳಿಯಲು
ಆ ತಿಳಿದಮಾತ್ರದಲ್ಲಿಯೆ ಮನದ ಕಲ್ಪಿತವಳಿದು
ಕಾಯಿ ಹಣ್ಣಾದಂತೆ,

ಆ ಮನವು ಮಹಾಘನಪರಬ್ರಹ್ಮವೆ ಅಪ್ಪುದು.
ಆ ಮನವು ಮಹಾಘನವಾದಲ್ಲಿಯೆ
ಶರಣನ ಹುಟ್ಟು ಹೊಂದು ನಷ್ಟವಾಗಿರ್ಪುದು.
ಆ ಶರಣನ ಹುಟ್ಟು ಹೊಂದು ನಷ್ಟವಾದಲ್ಲಿಯೆ
ಅಖಂಡೇಶ್ವರನೆಂಬ ಕುರುಹು ನಿರ್ವಯಲು ನೋಡಾ. ॥ ೫೪೨ ॥

೭೮೬

ನಿಮ್ಮ ಸ್ವಲೀಲೆಯಿಂದೆ
ಹಲವು ನಾಮರೂಪುಕ್ರಿಯೆಯಿಂದೆ ಸಾಕಾರವೆನಿಸಿ
ನೀವು ಆಚಾರಲಿಂಗವಾದಲ್ಲಿ,
ನಾನು ಭಕ್ತನೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ಗುರುಲಿಂಗವಾದಲ್ಲಿ,
ನಾನು ಮಹೇಶ್ವರನೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ಶಿವಲಿಂಗವಾದಲ್ಲಿ,
ನಾನು ಪ್ರಸಾದಿಯೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ಜಂಗಮಲಿಂಗವಾದಲ್ಲಿ,
ನಾನು ಪ್ರಾಣಲಿಂಗಿಯೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ಪ್ರಸಾದಲಿಂಗವಾದಲ್ಲಿ,
ನಾನು ಶರಣನೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ಮಹಾಲಿಂಗವಾದಲ್ಲಿ,
ನಾನು ಐಕ್ಯನೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ನಿಷ್ಕಲಲಿಂಗವಾದಲ್ಲಿ,
ನಾನು ಮೂಲಜ್ಞಾನಚಿತ್ತೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ಶೂನ್ಯಲಿಂಗವಾದಲ್ಲಿ,
ನಾನು ಮಹಾಜ್ಞಾನಶಕ್ತಿಯೆಂಬಂಗವಾಗಿ ನಿಮ್ಮೊಳಗೇಕವಾಗಿರ್ದೆನಯ್ಯಾ.
ನೀವು ನಿರಂಜನಲಿಂಗವಾದಲ್ಲಿ,
ನಾನು ಅಖಂಡ ಪರಿಪೂರ್ಣಮಹಾಕಳೆಯೆಂಬಂಗವಾಗಿ
ನಿಮ್ಮೊಳಗೇಕವಾಗಿರ್ದೆನಯ್ಯಾ .
ನೀವು ಆವಾವ ರೂಪುಧರಿಸಿದಲ್ಲಿ ನಾನು ಆಯಾಯ ರೂಪಿಂಗೆ ತಕ್ಕಂಗವಾಗಿ
ನಿಮ್ಮೊಳಗೇಕವಾಗಿರ್ದೆನಯ್ಯಾ ಅಖಂಡೇಶ್ವರಾ. ॥ ೫೪೩ ॥

೭೮೭

ಬಚ್ಚಬರಿಯ ಬಯಲೊಳಗೊಂದು
ಅಚ್ಚ ಅಂಕುರ ಹುಟ್ಟಿ, ಅಣುಚಕ್ರವೆನಿಸಿತ್ತು
ಆ ಅಣುಚಕ್ರದಿಂದಾಯಿತ್ತು ಪಶ್ಚಿಮಚಕ್ರ.

ಆ ಪಶ್ಚಿಮಚಕ್ರದಿಂದಾಯಿತ್ತು ಶಿಖಾಚಕ್ರ.
ಆ ಶಿಖಾಚಕ್ರದಿಂದಾಯಿತ್ತು ಬ್ರಹ್ಮಚಕ್ರ.
ಆ ಬ್ರಹ್ಮಚಕ್ರದಿಂದಾಯಿತ್ತು ಆಜ್ಞಾಚಕ್ರ.
ಆ ಆಜ್ಞಾಚಕ್ರದಿಂದಾಯಿತ್ತು ವಿಶುದ್ಧಿಚಕ್ರ.
ಆ ವಿಶುದ್ಧಿಚಕ್ರದಿಂದಾಯಿತ್ತು ಅನಾಹತಚಕ್ರ.
ಆ ಅನಾಹತಚಕ್ರದಿಂದಾಯಿತ್ತು ಮಣಿಪೂರಕಚಕ್ರ.
ಆ ಮಣಿಪೂರಕಚಕ್ರದಿಂದಾಯಿತ್ತು ಸ್ವಾಧಿಷ್ಠಾನಚಕ್ರ.
ಆ ಸ್ವಾಧಿಷ್ಠಾನಚಕ್ರದಿಂದಾಯಿತ್ತು ಆಧಾರಚಕ್ರ.
ಆ ಆಧಾರಚಕ್ರಕ್ಕೆ ಚತುರ್ದಳ.
ಆ ಚತುರ್ದಳದಲ್ಲಿ ಚತುರಕ್ಷರಂಗಳು.
ಆ ಚತುರಕ್ಷರಂಗಳ ಮಧ್ಯ ಬೀಜಾಕ್ಷರವೇ ನಕಾರಪ್ರಣವ.
ಆ ನಕಾರಪ್ರಣವಪೀಠದ ಮೇಲೆ ಬೆಳಗುತಿರ್ಪುದು ಆಚಾರಲಿಂಗ.
ಅದರಿಂದ ಮೇಲೆ ಸ್ವಾಧಿಷ್ಠಾನಚಕ್ರವಿರ್ಪುದು.
ಆ ಚಕ್ರಕ್ಕೆ ಷಡುದಳ.
ಆ ಷಡುದಳಂಗಳಲ್ಲಿ ಷಡಕ್ಷರಂಗಳು.
ಆ ಷಡಕ್ಷರಂಗಳ ಮಧ್ಯ ಬೀಜಾಕ್ಷರವೇ ಮಕಾರಪ್ರಣವ.
ಆ ಮಕಾರಪ್ರಣವಪೀಠದ ಮೇಲೆ ಬೆಳಗುತಿರ್ಪುದು ಗುರುಲಿಂಗ.
ಅದರಿಂದ ಮೇಲೆ ಮಣಿಪೂರಕಚಕ್ರವಿರ್ಪುದು.
ಆ ಚಕ್ರಕ್ಕೆ ದಶದಳ.
ಆ ದಶದಳಂಗಳಲ್ಲಿ ದಶಾಕ್ಷರಂಗಳು.
ಆ ದಶಾಕ್ಷರಂಗಳ ಮಧ್ಯ ಬೀಜಾಕ್ಷರವೇ ಶಿಕಾರಪ್ರಣವ.
ಆ ಶಿಕಾರ ಪ್ರಣವ ಪೀಠದ ಮೇಲೆ ಬೆಳಗುತಿರ್ಪುದು ಶಿವಲಿಂಗ.
ಅದರಿಂದ ಮೇಲೆ ಅನಾಹತಚಕ್ರವಿರ್ಪುದು.
ಆ ಚಕ್ರಕ್ಕೆ ದ್ವಾದಶದಳ.
ಆ ದ್ವಾದಶದಳಂಗಳಲ್ಲಿ ದ್ವಾದಶಾಕ್ಷರಂಗಳು.
ಆ ದ್ವಾದಶಾಕ್ಷರಂಗಳ ಮಧ್ಯ ಬೀಜಾಕ್ಷರವೇ ವಕಾರಪ್ರಣವ.
ಆ ವಕಾರಪ್ರಣವಪೀಠದ ಮೇಲೆ ಬೆಳಗುತಿರ್ಪುದು ಜಂಗಮಲಿಂಗ.
ಅದರಿಂದ ಮೇಲೆ ವಿಶುದ್ಧಿಚಕ್ರವಿರ್ಪುದು.
ಆ ಚಕ್ರಕ್ಕೆ ಷೋಡಶದಳ.
ಆ ಷೋಡಶದಳಂಗಳಲ್ಲಿ ಷೋಡಶಾಕ್ಷರಂಗಳು.
ಆ ಷೋಡಶಾಕ್ಷರಂಗಳ ಮಧ್ಯ ಬೀಜಾಕ್ಷರವೇ ಯಕಾರಪ್ರಣವ.
ಆ ಯಕಾರಪ್ರಣವಪೀಠದ ಮೇಲೆ ಬೆಳಗುತಿರ್ಪುದು ಪ್ರಸಾದಲಿಂಗ.
ಅದರಿಂದ ಮೇಲೆ ಆಜ್ಞಾಚಕ್ರವಿರ್ಪುದು.
ಆ ಚಕ್ರಕ್ಕೆ ದ್ವಿದಳ.

ಆ ದ್ವಿದಳಂಗಳಲ್ಲಿ ದ್ವಯಾಕ್ಷರಂಗಳು.
ಆ ದ್ವಯಾಕ್ಷರಂಗಳ ಮಧ್ಯ ಬೀಜಾಕ್ಷರವೇ ಓಂಕಾರಪ್ರಣವ.
ಆ ಓಂಕಾರಪ್ರಣವಪೀಠದ ಮೇಲೆ ಬೆಳಗುತಿರ್ಪುದು ಮಹಾಲಿಂಗ.
ಅದರಿಂದ ಮೇಲೆ ಬ್ರಹ್ಮಚಕ್ರವಿರ್ಪುದು.
ಆ ಚಕ್ರಕ್ಕೆ ಸಹಸ್ರದಳ.
ಆ ಸಹಸ್ರದಳಂಗಳಲ್ಲಿ ಸಹಸ್ರಾಕ್ಷರಂಗಳು.
ಆ ಸಹಸ್ರಾಕ್ಷರಂಗಳ ಮಧ್ಯ ಬೀಜಾಕ್ಷರವೇ ನಿಷ್ಕಲಪ್ರಣವ.
ಆ ನಿಷ್ಕಲಪ್ರಣವಪೀಠದ ಮೇಲೆ ಬೆಳಗುತಿರ್ಪುದು ನಿಷ್ಕಲಲಿಂಗ.
ಅದರಿಂದ ಮೇಲೆ ಶಿಖಾಚಕ್ರವಿರ್ಪುದು.
ಆ ಚಕ್ರಕ್ಕೆ ತ್ರಿದಳ.
ಆ ತ್ರಿದಳಂಗಳಲ್ಲಿ ತ್ರಯಾಕ್ಷರಂಗಳು.
ಆ ತ್ರಯಾಕ್ಷರಂಗಳ ಮಧ್ಯ ಬೀಜಾಕ್ಷರವೇ ಶೂನ್ಯಪ್ರಣವ.
ಆ ಶೂನ್ಯಪ್ರಣವಪೀಠದ ಮೇಲೆ ಬೆಳಗುತಿರ್ಪುದು ಶೂನ್ಯಲಿಂಗ.
ಅದರಿಂದ ಮೇಲೆ ಪಶ್ಚಿಮಚಕ್ರವಿರ್ಪುದು.
ಆ ಚಕ್ರಕ್ಕೆ ಏಕದಳ.
ಆ ಏಕದಳದಲ್ಲಿ ಸರ್ವರಂಜನೆಯನೊಳಕೊಂಡು
ವಾಚಾತೀತವೆನಿಸುವ ನಿರಂಜನಪ್ರಣವ.
ಆ ನಿರಂಜನ ಪ್ರಣವಪೀಠದ ಮೇಲೆ ಬೆಳಗುತಿರ್ಪುದು ನಿರಂಜನಲಿಂಗ.
ಇಂತೀ ತರುವಾಯದಿಂದೆ
ಆಧಾರ ಸ್ವಾಧಿಷ್ಠಾನದಲ್ಲಿ ಲಯ,
ಆ ಸ್ವಾಧಿಷ್ಠಾನ ಮಣಿಪೂರಕದಲ್ಲಿ ಲಯ.
ಆ ಮಣಿಪೂರಕ ಅನಾಹತದಲ್ಲಿ ಲಯ.
ಆ ಅನಾಹತ ವಿಶುದ್ಧಿಯಲ್ಲಿ ಲಯ.
ಆ ವಿಶುದ್ಧಿ ಆಜ್ಞೆಯಲ್ಲಿ ಲಯ.
ಆ ಆಜ್ಞೆ ಬ್ರಹ್ಮಚಕ್ರದಲ್ಲಿ ಲಯ.
ಆ ಬ್ರಹ್ಮಚಕ್ರ ಶಿಖಾಚಕ್ರದಲ್ಲಿ ಲಯ.
ಆ ಶಿಖಾಚಕ್ರ ಪಶ್ಚಿಮಚಕ್ರದಲ್ಲಿ ಲಯ.
ಆ ಪಶ್ಚಿಮಚಕ್ರ ಅಣುಚಕ್ರದಲ್ಲಿ ಲಯ.
ಆ ಅಣುಚಕ್ರ ನಿರವಯಲಲ್ಲಿ ಲಯ.
ಆ ನಿರವಯಲು ನಿಜವ ಕೂಡಿ ಸಹಜವಾದಲ್ಲಿ
ಅಖಂಡೇಶ್ವರನೆಂಬ ಶಬ್ದ ಮುಗ್ಧವಾಯಿತ್ತು. || ೫೪೪ ||

೭೮೮

ಪಿಂಡದೊಳಗೊಂದು ಅಖಂಡಜ್ಯೋತಿ
ಥಳಥಳಿಸಿ ಬೆಳಗುತಿರ್ಪುದು ನೋಡಾ.

ಆ ಅಖಂಡಜ್ಯೋತಿಯನೊಡಗೂಡಿ
ಅವಿರಳ ಶಿವಯೋಗಿಯಾದೆನಾಗಿ,
ಪಿಂಡದ ಖಂಡಿತವು ಕಡೆಗಾಯಿತ್ತು ನೋಡಾ ಅಖಂಡೇಶ್ವರಾ. ॥ ೫೪೫ ॥

೨೮೯

ದ್ವೀಪ ಏಳರೊಳಗೆ ವ್ಯಾಪಿಸಿಕೊಂಡಿರ್ಪುದು
ಒಂದೇ ಜ್ಯೋತಿ ನೋಡಾ.
ಅದು ರೂಪಲ್ಲ ನಿರೂಪಲ್ಲ.
ಸರ್ವವ್ಯಾಪಾರವ ಹೊದ್ದದ ಸ್ವಯಂಜ್ಯೋತಿ ನೋಡಾ.
ಅದೇ ಎನ್ನ ಪ್ರಾಣಲಿಂಗವೆಂಬ
ಪರತರ ಪರಂಜ್ಯೋತಿ ಪರಮಾನಂದ ನೋಡಾ
ಅಖಂಡೇಶ್ವರಾ. ॥ ೫೪೬ ॥

೨೯೦

ಒಂಬತ್ತುನಾಳದೊಳಗ ತುಂಬಿಸೂಸುವ ಮನಪವನಂಗಳ
ಒಂದೇ ಮಾರ್ಗದಲ್ಲಿ ನಡೆಸಿ,
ಶಂಕಿನಿನಾಳವನಡರಿ, ಪಶ್ಚಿಮದ್ವಾರವ ಪೊಕ್ಕು,
ಆ ಬ್ರಹ್ಮರಂಧ್ರವ ನುಸುಳಿ,
ಶಿಖಾಗ್ರಂಥಿಯನೊಡೆದು
ಆ ನಿರಂಜನಪೀಠವ ಮುಟ್ಟಿ,
ಮಹಾಬೆಳಗಿನ ಪ್ರಭಾಪುಂಜದಿಂದೆ ರಂಜಿಸುವ
ನಿರಂಜನಸಮಾಧಿಯೊಳಗೆ
ನಿರಂತರ ಬೆಳಗುತಿರ್ದೆನಯ್ಯಾ ಅಖಂಡೇಶ್ವರಾ. ॥ ೫೪೭ ॥

೨೯೧

ನೀರಿಲ್ಲದ ಭೂಮಿಯಲ್ಲಿ ಬೇರಿಲ್ಲದ ವೃಕ್ಷಹುಟ್ಟಿತ್ತ ಕಂಡೆ.
ಆ ವೃಕ್ಷ ಎಲೆಯಿಲ್ಲದೆ ಹಣ್ಣು ತಳೆದಿರ್ಪುದ ಕಂಡೆ.
ಆ ಹಣ್ಣನು ಒಂದು ಕಾಲಿಲ್ಲದ ಇರುವೆ ಬಂದು ನುಂಗಿತ್ತ ಕಂಡೆ.
ಆ ಇರುವೆಯಗರ್ಭದಲ್ಲಿ ಇಬ್ಬರು ಸತ್ತುದ ಕಂಡೆ.
ಈ ವಿಚಿತ್ರವ ಹೇಳುವಡೆ ನಾನಿಲ್ಲ,
ಕೇಳುವಡೆ ನೀನಿಲ್ಲವಯ್ಯಾ ಅಖಂಡೇಶ್ವರಾ. ॥ ೫೪೮ ॥

## ಶರಣಸ್ಥಲ

೨೯೨

ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣ ಅಖಂಡವೆಂಬ
ಆರು ಲಕ್ಷಣಯುಕ್ತವಾದ ಮಹಾಲಿಂಗವೇ ಪತಿ, ನಾನೇ ಶರಣಸತಿ

ಎಂಬ ದೃಢಬುದ್ಧಿ ನಿಶ್ಚಲವಾಗಿರಬೇಕು.
ಮತ್ತೆ ತಾನೇ ಸರ್ವಾಧಾರ ಪರಮಸ್ವತಂತ್ರನು
ಎಂಬ ಭಾವ ಇಂಬುಗೊಂಡಿರಬೇಕು.
ಅಂಗಭೋಗೋಪಭೋಗಂಗಳೆಲ್ಲ ಹಿಂದುಳಿದಿರಬೇಕು.
ಲಿಂಗಭೋಗೋಪಭೋಗಂಗಳೆಲ್ಲ ಮುಂದುಗೊಂಡಿರ್ಪಾತನೆ
ಶರಣ ನೋಡಾ !
ಅದೆಂತೆಂದೊಡೆ :
''ಪತಿರ್ಲಿಂಗಂ ಸತೀಚಾಹಂ ಹೃದಿಯುಕ್ತಃ ಸ್ವಯಂ ಪ್ರಭುಃ ।
ಪಂಚೇಂದ್ರಿಯ ಸುಖಂ ನಾಸ್ತಿ ಶರಣಸ್ಥಲಮುತ್ತಮಮ್ ॥''
ಎಂದುದಾಗಿ, ಇಂತಪ್ಪ ಮಹಾಶರಣರ ಸಂಗದಲ್ಲಿರಿಸಿ
ಸಲಹಯ್ಯ ಎನ್ನ ಅಖಂಡೇಶ್ವರಾ. ॥ ೫೪೯ ॥

### ೭೯೩

ಕಾಮದ ಕಳವಳದಲ್ಲಿ ಕಂಗೆಡುವನಲ್ಲ ಶರಣ.
ಜೀವನುಪಾಧಿಕೆಯ ಹೊದ್ದುವನಲ್ಲ ಶರಣ.
ಭಾವದ ಭ್ರಮೆಯಲ್ಲಿ ಸುಳಿವನಲ್ಲ ಶರಣ.
ಮನದ ಮರವೆಯಲ್ಲಿ ಮಗ್ನನಲ್ಲ ಶರಣ.
ಕರಣಂಗಳ ಕತ್ತಲೆಯಲ್ಲಿ ಸುತ್ತಿ ಬೀಳುವನಲ್ಲ ಶರಣ.
ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವನಲ್ಲ ಶರಣ.
ಪರತರಲಿಂಗದ ಬೆಳಗಿನೊಳಗೆ ಬೆರೆದು
ತೆರಹಿಲ್ಲದೆ ಬೆಳಗುವ ಪರಮಗಂಭೀರ
ಶರಣನ ನಿಲವಿಂಗೆ ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. ॥ ೫೫೦ ॥

### ೭೯೪

ಗೋಸುಂಬೆ ಹುಳದಂತೆ ಬಹುವೇಷಧಾರಿಯಲ್ಲ ಶರಣ.
ಇಂದ್ರಧನುವಿನಂತೆ ಚಂದದ ಬಣ್ಣಕ್ಕೆ ಮೋಹಿಯಲ್ಲ ಶರಣ.
ಹಿಂದುಮುಂದಣ ನೆನೆವ ಹಾರುವನಲ್ಲ ಶರಣ.
ಆನಂದಭರಿತ ಶರಣನ ಏನೆಂದುಪಮಿಸಬಹುದಯ್ಯಾ ಅಖಂಡೇಶ್ವರಾ.
॥ ೫೫೧ ॥

### ೭೯೫

ಮನದಲ್ಲಿ ಒಂದು, ಮಾತಿನಲ್ಲಿ ಎರಡಾಗಿ
ನುಡಿವನಲ್ಲ ಶರಣ.
ನೀತಿಗೆಟ್ಟು ನಿಜವ ಬಿಟ್ಟು ನಡೆವನಲ್ಲ ಶರಣ.
ಭೂತದೇಹಿಯಂತೆ ಸೋತು ಸುಖದಲ್ಲಿ ಬೀಳುವನಲ್ಲ ಶರಣ.
ಜಾತಿಸೂತಕವಿಡಿದು ಹೊಡೆದಾಡಿ

ಮಡಿದು ಹೋಗುವನಲ್ಲ ಶರಣ ನೋಡಾ
ಅಖಂಡೇಶ್ವರಾ. || ೫೫೧ ||

**೭೯೬**

ಸತ್ಯಸದಾಚಾರಿಯಯ್ಯಾ ನಿಮ್ಮ ಶರಣ .
ನಿತ್ಯನಿರುಪಮನಯ್ಯಾ ನಿಮ್ಮ ಶರಣ .
ಭಕ್ತಿಭಾವಕನಯ್ಯಾ ನಿಮ್ಮ ಶರಣ .
ಯುಕ್ತಿವಿಚಾರನಯ್ಯಾ ನಿಮ್ಮ ಶರಣ .
ಮುಕ್ತಿಮೂಲಿಗನಯ್ಯಾ ನಿಮ್ಮ ಶರಣ .
ಅಖಂಡೇಶ್ವರಾ, ನಿಮ್ಮ ಶರಣನ ಘನವ ನೀವೇ ಬಲ್ಲಿರಲ್ಲದೆ
ಲೋಕದ ಕುನ್ನಿಮಾನವರೆತ್ತ ಬಲ್ಲರಯ್ಯಾ . || ೫೫೨ ||

**೭೯೭**

ಲಿಂಗದ ನಡೆಯಂತೆ ನಡೆವನಲ್ಲದೆ,
ಲೋಕದ ನಡೆಯಂತೆ ನಡೆವನಲ್ಲ ನೋಡಾ ನಿಮ್ಮ ಶರಣ.
ಲಿಂಗದ ನುಡಿಯಂತೆ ನುಡಿವನಲ್ಲದೆ,
ಲೋಕದ ನುಡಿಯಂತೆ ನುಡಿವನಲ್ಲ ನೋಡಾ ನಿಮ್ಮ ಶರಣ.
ಲಿಂಗದ ಮಚ್ಚಿನಲ್ಲಿ ಸುಳಿವನಲ್ಲದೆ,
ಲೋಕದ ಮಚ್ಚಿನಲ್ಲಿ ಸುಳಿವನಲ್ಲ ನೋಡಾ ನಿಮ್ಮ ಶರಣ.
ಲಿಂಗದ ವ್ಯವಹಾರದಲ್ಲಿರುತ್ತಿಹನಲ್ಲದೆ,
ಲೋಕದ ವ್ಯವಹಾರದಲ್ಲಿರುತ್ತಿಹನಲ್ಲ ನೋಡಾ ನಿಮ್ಮ ಶರಣ.
ಇಂತಪ್ಪ ಲಿಂಗಾಂಗಸಂಗಸಮರಸವನರಿದ ಶಿವಶರಣನ
ಶಿವನೆನಬೇಕಲ್ಲದೆ,
ಲೋಕದವರೆಂದು ನುಡಿವ ಸೂತಕದೇಹಿಗಳಿಗೆ
ಪಾತಕ ತಪ್ಪದಯ್ಯಾ ಅಖಂಡೇಶ್ವರಾ. || ೫೫೪ ||

**೭೯೮**

ಅಂದಿನ ಶರಣರಿಗೆ ಇಂದಿನವರು ಸರಿಯಲ್ಲವೆಂದು ನುಡಿವ
ಸಂದೇಹ ಸೂತಕ ಹೊಲೆಯರ ಮಾತ ಕೇಳಲಾಗದು.
ಆ ಪಂಚಮಹಾಪಾತಕರ ಮುಖವ ನೋಡಲಾಗದು.
ಅದೆಂತೆಂದೊಡೆ :
ತಾ ಮೂಕೊರಯನೆಂದರಿಯದೆ ಕನ್ನಡಿಗ ಮೂಗಿಲ್ಲೆಂಬಂತೆ.
ತಾ ಕುಣಿಯಲಾರದೆ ಅಂಗಳ ಡೊಂಕೆಂಬಂತೆ,
ತನ್ನಲ್ಲಿ ನಡೆನುಡಿ ಸಿದ್ಧಾಂತವಿಲ್ಲದೆ
ಇತರರ ಹಳಿವ ಅಧಮ ಮಾದಿಗರನೇನೆಂಬೆನಯ್ಯಾ !

ಅಷ್ಟಾವರಣ ಪಂಚಾಚಾರವು
ಅಂದೊಂದು ಪರಿ ಇಂದೊಂದು ಪರಿಯೇ ?
ಷಟ್‌ಸ್ಥಲ ಸ್ವಾನುಭಾವವು
ಅಂದೊಂದು ಪರಿ ಇಂದೊಂದು ಪರಿಯೇ ?
ಭಕ್ತಿ ವಿರಕ್ತಿ ಉಪರತಿ ಜ್ಞಾನ ವೈರಾಗ್ಯ
ಅಂದೊಂದು ಪರಿ ಇಂದೊಂದು ಪರಿಯೇ ?
ನಡೆನುಡಿ ಸಿದ್ಧಾಂತವಾದ ಶರಣರ ಘನವು
ಅಂದೊಂದು ಪರಿ ಇಂದೊಂದು ಪರಿಯೇ ?
ಇಂತೀ ವಿಚಾರವನರಿಯದೆ
ಪರಸಮಯವನಾದಡೂ ಆಗಲಿ,
ಶಿವಸಮಯವನಾದಡೂ ಆಗಲಿ,
ವರ್ಮಗೆಟ್ಟು ನುಡಿವ ಕರ್ಮಜೀವಿಗಳ ಬಾಯಲ್ಲಿ
ಬಾಲ್ಹುಳ ಸುರಿಯದ ಮಾಣ್ಬುವೆ ಹೇಳಾ ಅಖಂಡೇಶ್ವರಾ ? || ೩೩೩ ||

೭೯೯

ಶರಣಸ್ಥಲದ ಕುರುಹಿನ ಮಾರ್ಗವನರಿಯದೆ,
ನಾನು ಶರಣ ತಾನು ಶರಣನೆಂದು ನುಡಿವ
ಕರ್ಮಜೀವಿಗಳ ಮುಖವ ನೋಡಲಾಗದು.
ಅದೇನು ಕಾರಣವೆಂದೊಡೆ :
ತಾವು ಶರಣರಾದಡೆ
ತಮ್ಮ ಚಿತ್ತಿನ ಕೊನೆಯಲ್ಲಿ ಮುಸುಕಿದ ಕತ್ತಲೆಯ ಕಳೆಯಬೇಕು.
ತಾವು ಶರಣರಾದಡೆ
ತಮ್ಮ ಆತ್ಮನ ಸುತ್ತಿದ ಅಷ್ಟಮದಂಗಳ ಕತ್ತರಿಗಡಿಯಬೇಕು.
ತಾವು ಶರಣರಾದಡೆ
ತಮ್ಮ ಲಿಂಗದಲ್ಲಿ ಅತ್ತಿತ್ತ ಹರಿದಾಡುವ ಮನವ ನಿಕ್ಷೇಪವ ಮಾಡಬೇಕು.
ತಾವು ಶರಣರಾದಡೆ
ನಿತ್ಯಾನಿತ್ಯವನರಿದು ತತ್ತ್ವಾತತ್ತ್ವಂಗಳ ವ್ಯಕ್ತೀಕರಿಸಿ
ಮಹಾಜ್ಞಾನದ ಮೊತ್ತದಲ್ಲಿ ಸುಳಿಯಬೇಕು.
ಇಂತೀ ಭೇದವನರಿಯದೆ ತುತ್ತುಸವಿಯೆಂದುಂಡು
ಮರ್ತ್ಯದ ವಿಷಯಪ್ರಪಂಚಿನ ಸುಖದಲ್ಲಿ ವ್ಯವಹರಿಸಿ,
ಅಜ್ಞಾನದ ಕತ್ತಲೆಯಲ್ಲಿ ಸೆರೆಯ ಸಿಕ್ಕಿ ಮುಂದುಗಾಣದೆ
ಮುಕ್ತಿಯ ಹೊಲಬುದಪ್ಪಿ ಹೋಗುವ ವ್ಯರ್ಥಪ್ರಾಣಿಗಳ ಕಂಡು
ನಗುತಿರ್ದನು ನೋಡಾ ನಮ್ಮ ಅಖಂಡೇಶ್ವರ. || ೩೩೪ ||

**೮೦೦**

ಮಾತಿನಲ್ಲಿ ಶುದ್ಧವಿಲ್ಲದವರು ಶರಣರೆ ?
ಮನದಲ್ಲಿ ನಿಜವಿಲ್ಲದವರು ಶರಣರೆ ?
ಇಂದ್ರಿಯಂಗಳಿಗೆ ಮೈಗೊಡುವವರು ಶರಣರೆ ?
ವಿಷಯಕ್ಕೆ ಮುಂದುವರಿವವರು ಶರಣರೆ ? ಅಲ್ಲಲ್ಲ,
ಹಿಂದಣ ಮರವೆ ಮುಂದಣ ಎಚ್ಚರಿಕೆಯನರಿತು
ಜಾಗ್ರ ಸ್ವಪ್ನ ಸುಷುಪ್ತಿಯ ಹರಿದು,
ನಿರಾಳಲಿಂಗದಲ್ಲಿ ನಿಂದಾತ ಶರಣನಲ್ಲದೆ,
ಬಣ್ಣಗಾರ ಬಾಯಬಡುಕ ಭವದುಃಖಿಗಳ ಶರಣರೆಂದಡೆ
ನಗುವರಯ್ಯಾ ನಿಮ್ಮ ಶರಣರು ಅಖಂಡೇಶ್ವರಾ. ॥ ೫೫೭ ॥

**೮೦೧**

ಸತ್ತು ಹೋಗುವರೆಲ್ಲ ಸ್ವರ್ಗಪದಸ್ಥರೆ ? ಅಲ್ಲಲ್ಲ.
ಕೈದುವ ಪಿಡಿವರೆಲ್ಲ ಮಹಾಕಲಿಗಳೆ ? ಅಲ್ಲಲ್ಲ.
ಲಿಂಗವ ಧರಿಸುವರೆಲ್ಲ ಲಿಂಗಪ್ರಾಣಿಗಳೆ ? ಅಲ್ಲಲ್ಲ.
ಅದೇನು ಕಾರಣವೆಂದಡೆ :
ಕಪಿಯ ಕೈಯಲ್ಲಿ ರತ್ನವ ಕೊಟ್ಟಡೆ
ಅದು ಹಣ್ಣೆಂದು ಕಡಿದು ನೋಡಿ ಕಲ್ಲೆಂದು ಬೀಸುಟುವುದಲ್ಲದೆ,
ಆ ರತ್ನದ ದಿವ್ಯಬೆಳಗನರಿವುದೆ ಅಯ್ಯಾ ?
ಇಂತೀ ದೃಷ್ಟದಂತೆ
ಮಡ್ಡಜೀವಿಗಳ ಕೈಯಲ್ಲಿ ದೊಡ್ಡಲಿಂಗವಿರ್ದಡೇನು ?
ಆ ಲಿಂಗದಲ್ಲಿ ಮಹಾಘನ ಪರಮಕಲೆಯನರಿಯದ ಬಳಿಕ
ಅದು ಒಡ್ಡುಗಲ್ಲಿನಂತೆ ಕಂಡೆಯಾ ಅಖಂಡೇಶ್ವರಾ ? ॥ ೫೫೮ ॥

**೮೦೨**

ಪುರುಷನಿಲ್ಲದ ಬಳಿಕ ಸ್ತ್ರೀಗೆ ಗರ್ಭವಿನ್ನೆಲ್ಲಿಯದೊ ?
ಬೀಜವಿಲ್ಲದ ಬಳಿಕ ವೃಕ್ಷವಿನ್ನೆಲ್ಲಿಯದೊ ?
ಹಾಲಿಲ್ಲದ ಬಳಿಕ ತುಪ್ಪವಿನ್ನೆಲ್ಲಿಯದೊ ?
ಪರಮ ಶ್ರೀಗುರುವಿನುಪದೇಶವಿಲ್ಲದ ಬಳಿಕ
ಲಿಂಗಕ್ಕೆ ಪರಮಶಿವಕಳೆಯಿನ್ನೆಲ್ಲಿಯದೊ ?
ಇದು ಕಾರಣ,
ಉಪದೇಶವಿಲ್ಲದ ಲಿಂಗ ಜಡಪಾಷಾಣವೆಂದೆನಿಸಿತ್ತು.
ಆ ಜಡಪಾಷಾಣವ ಅನಂತಕೋಟಿವರ್ಷ
ಪೂಜೆಯ ಮಾಡಿದರು ವ್ಯರ್ಥವಲ್ಲದೆ ಸಾರ್ಥವಿಲ್ಲ ನೋಡಾ !
ಇಂತೀ ಭೇದವನರಿಯದೆ

ಮೂಢಮತಿಯಿಂದೆ ಜಡಪಾಷಾಣವ ಪೂಜಿಸಿ
ಈಷಣತ್ರಯವೆಂಬ ಸಂಕೋಲೆಯಲ್ಲಿ ಬಂಧನವಡೆದು
ಭವದಲ್ಲಿ ಘಾಸಿಯಾಗುವ ಹೇಸಿಮೂಳರ ಕಂಡು
ನಾಚಿತ್ತಯ್ಯಾ ಎನ್ನ ಮನವು ಅಖಂಡೇಶ್ವರಾ. ॥ ೫೫೯ ॥

೮೦೩

ಗುರು ಕರುಣಿಸಿಕೊಟ್ಟ ಮಂತ್ರವೆ
ಸಕಲಬಯಕೆಯನುಂಟುಮಾಡುವುದಲ್ಲದೆ,
ತನ್ನ ತಾ ನೆನೆದ ಮಂತ್ರವು ಸಿದ್ಧಿಯನುಂಟುಮಾಡದು ನೋಡಾ !
ಗುರುಕೊಟ್ಟ ಲಿಂಗವೆ ಮುಕ್ತಿಯನೀವುದಲ್ಲದೆ,
ತನ್ನ ತಾನೆ ಕಟ್ಟಿಕೊಂಡ ಲಿಂಗವು
ಮುಕ್ತಿಯನೀಯದು ನೋಡಾ !
ಇದು ಕಾರಣ, ಗುರೂಪದೇಶವ ಪಡೆಯಲರಿಯದೆ
ಬರಿದೆ ಭಕ್ತರೆನಿಸಿಕೊಂಬ ಶೈವಮತದ ಭವಿಗಳಿಗೆ
ಭವಜಾಲದಲ್ಲಿ ಬಪ್ಪುದು ತಪ್ಪದು ನೋಡಾ ಅಖಂಡೇಶ್ವರಾ. ॥ ೫೬೦ ॥

೮೦೪

ಗುರುದೀಕ್ಷೆಯಿಲ್ಲದ ಲಿಂಗವು ಧರೆಯ ಕಲ್ಲೆನಿಸಿತ್ತು.
ಗುರುದೀಕ್ಷೆಯಿಲ್ಲದ ನರನು ಶರಣರ ಸಮಯಕ್ಕೆ ಸಲ್ಲ.
ಅದೆಂತೆಂದೊಡೆ :
ಸುಟ್ಟ ಮಡಿಕೆಯಲ್ಲಿ ನೀರ ತುಂಬಿದಡೆ ದಿಟವಾಗಿ ನಿಲ್ಲುವುದಲ್ಲದೆ,
ಹಸಿಯಮಡಿಕೆಯಲ್ಲಿ ನೀರತುಂಬಿದಡೆ ದಿಟವಾಗಿ ನಿಲ್ಲುವುದೆ ಹೇಳಾ ?
ಇದು ಕಾರಣ,
ಗುರುದೀಕ್ಷೆಯಿಲ್ಲದವ ಎಷ್ಟು ಜ್ಞಾನಿಯಾದಡು
ಅವನ ಜ್ಞಾನವು ಪ್ರಯೋಜನಕ್ಕೆಬಾರದು.
ಅವನು ಎಷ್ಟು ಕ್ರಿಯೆಯನಾಚರಿಸಿದಡು
ಅವನ ಕ್ರಿಯೆಯು ನಿಷ್ಫಲ ನೋಡಾ ಅಖಂಡೇಶ್ವರಾ. ॥ ೫೬೧ ॥

೮೦೫

ಗುರುಶಿಷ್ಯ ಸಂಬಂಧವೆಂದು ನುಡಿಯುತಿರ್ಪರೆಲ್ಲರು;
ಗುರುಶಿಷ್ಯ ಸಂಬಂಧವನಾರೂ ಅರಿಯರಲ್ಲ !
ಗುರುಶಿಷ್ಯ ಸಂಬಂಧವೆಂತೆಂದೊಡೆ ಹೇಳಿಹೆವು ಕೇಳಿರೋ
ಸದ್ಭಕ್ತ ಶರಣಜನಂಗಳೆಲ್ಲರು.
ಶ್ರೀಗುರು ಶಿಷ್ಯಂಗೆ ಉಪದೇಶವ ಮಾಡುವ ಕಾಲದಲ್ಲಿ
ಆ ಶಿಷ್ಯನ ಸ್ಥೂಲತನು ಸೂಕ್ಷ್ಮತನು ಕಾರಣತನುವೆಂಬ

ತನುತ್ರಯಂಗಳಲ್ಲಿ ಮುಸುಕಿದ
ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳ ಕಳೆದು,
ಮಾಯಾಪ್ರಕೃತಿಕಾಯದ ಪೂರ್ವಾಶ್ರಯವನು
ಚಿದಗ್ನಿಯಿಂದೆ ಸುಟ್ಟು ಚಿತ್ಕಾಯವೆಂದೆನಿಸಿ,
ಆ ಚಿತ್ಕಾಯಸ್ವರೂಪವಾದ ಶಿಷ್ಯನ ಮಸ್ತಕದ ಮೇಲೆ
ಹಸ್ತವನಿರಿಸಿ ಮಥನವ ಮಾಡಿ,
ಶಿಷ್ಯನ ಭಾವದ ಘಟ್ಟಿಯನೆ ಕರದಲ್ಲಿ ಕೊಡುವುದು.
ಅದೆಂತೆಂದೊಡೆ :
"ಜ್ವಲತ್ಕಾಲಾನಲಾಭಾಸಾ ತಟಿತ್ಕೋಟಿ ಸಮಪ್ರಭಾ ।
ತಚ್ಚೋರ್ಧ್ವಂತು ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾ ಕಳಾ ॥
ಯಥಾಕಲಾಸ್ತಥಾಭಾವೋ ಯಥಾಭಾವಸ್ತಥಾ ಮನಃ ।
ಯಥಾಮನಸ್ತಥಾ ದೃಷ್ಟಿಃ ಯಥಾದೃಷ್ಟಿಸ್ತಥಾ ಸ್ಥಲಂ ॥
ಏವಂ ಭೇದಾಃ ಕಳಾದೇವಿ ಸದ್ಗುರುಶಿಷ್ಯಮಸ್ತಕೇ ।
ಹಸ್ತಾಬ್ಜಮಥನಗ್ರಾಹ್ಯಂ ತಸ್ಯ ಭಾವಃ ಕರೋದಿತಃ ॥
ಏತೇ ಗುರುಕರಾಜ್ಜಾತಾಃ ಲಿಂಗಭಕ್ತಾ ವಿಭೇದತಃ ।
ನಾದಬಿಂದುಕಳಾತೀತಂ ಗುರೂಣಾಂ ಲಿಂಗಮುದ್ಭವಂ ॥"
—ಪರಮರಹಸ್ಯ

ಎಂಬ ಶಿವಾಗಮೋಕ್ತವಾಗಿ,
ಆ ಶಿಷ್ಯನ ಪಶ್ಚಿಮದಿಶೆಯಲ್ಲಿ ಬೆಳಗುತಿರ್ಪ
ನಿತ್ಯನಿರಂಜನ ಪರಮಕಳೆಯ ಧ್ಯಾನಿಸಿ ಭಾವಸ್ಥಲಕ್ಕೆ ತಂದು,
ಆ ಭಾವಸ್ಥಲದಿಂದೆ ಮನಸ್ಥಲಕ್ಕೆ ತಂದು,
ಆ ಮನಸ್ಥಲದಿಂದೆ ದೃಷ್ಟಿಸ್ಥಲಕ್ಕೆ ತಂದು,
ಆ ದೃಷ್ಟಿಸ್ಥಲದಿಂದೆ ಕರಸ್ಥಲಕ್ಕೆ ತಂದು,
ಸಾಕಾರಲಿಂಗಮೂರ್ತಿಯಲ್ಲಿ ತುಂಬಿ
ಇಷ್ಟಲಿಂಗವೆನಿಸಿ ಕರಸ್ಥಲದಲ್ಲಿ ಮೂರ್ತಿಗೊಳಿಸಿ
ಆ ಲಿಂಗಕ್ಕೆ ಜಂಗಮದ ಪಾದತೀರ್ಥ ಪ್ರಸಾದವನೆ
ಪ್ರಾಣಕಳೆಯೆಂದರ್ಪಿಸಿ,
ಮತ್ತಂ, ಆ ಇಷ್ಟಲಿಂಗವ
ಅನಿಷ್ಟಪಂಚಕಂಗಳೆಂಬ ಕತ್ತಲೆಯನೋಡಿಸುವುದಕ್ಕೆ
ಚಿತ್ಸೂರ್ಯನೆಂದು ನಂಬುಗೆಯನಿಂಬುಗೊಳಿಸಿ,
ಮತ್ತಮಾಲಿಂಗದಲ್ಲಿ
ವೃತ್ತ ಕಟಿ ವರ್ತುಳ ಗೋಮುಖ ನಾಳ ಗೋಳಕವೆಂಬ
ಆರು ಸ್ಥಾನಂಗಳ ತೋರಿ,

ಆ ಆರು ಸ್ಥಾನಂಗಳಲ್ಲಿ
ನಕಾರ ಮಕಾರ ಶಿಕಾರ ವಕಾರ ಯಕಾರ ಓಂಕಾರ
ಎಂಬ ಆರು ಪ್ರಣವಂಗಳನೆ ಬೋಧಿಸಿ,
ಆ ಆರು ಪ್ರಣವಂಗಳನೆ
ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ
ಎಂಬ ಆರು ಲಿಂಗಗಳೆಂದರುಹಿ,
ಆ ಆರು ಲಿಂಗಂಗಳಿಗೆ
ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ ಹೃದಯ
ಎಂಬ ಆರು ಇಂದ್ರಿಯಂಗಳನೆ ಆರು ಮುಖಗಳೆಂದು ತಿಳುಹಿ,
ಆ ಆರು ಮುಖಂಗಳಿಗೆ
ಗಂಧ ರುಚಿ ರೂಪು ಸ್ಪರ್ಶನ ಶಬ್ದ ತೃಪ್ತಿ
ಎಂಬ ಆರು ಪದಾರ್ಥಂಗಳನು
ಶ್ರದ್ಧೆ ನಿಷ್ಠೆ ಸಾವಧಾನ ಅನುಭಾವ ಆನಂದ ಸಮರಸ
ಎಂಬ ಆರು ಭಕ್ತಿಗಳಿಂದರ್ಪಿಸುವ
ಸಕೀಲದ ವಿವರವ ತೋರಬಲ್ಲಾತನೇ ಗುರು.
ಆ ಗುರುವಿನ ಕರುಣದಿಂದೆ ಪಡೆದ ಇಷ್ಟಲಿಂಗವನು
ಕರಸ್ಥಲ ಮನಸ್ಥಲ ಭಾವಸ್ಥಲಮಂಟಪದಲ್ಲಿ ಮೂರ್ತಿಗೊಳಿಸಿ,
ಸಗುಣಪೂಜೆ ನಿರ್ಗುಣಪೂಜೆ ಕೇವಲ ನಿರ್ಗುಣಪೂಜೆಯ ಮಾಡಿ,
ಆ ಲಿಂಗದ ಮಹಾಬೆಳಗಿನೊಳಗೆ ತನ್ನಂಗದ ಕಳೆಯನಡಗಿಸಿ,
ಉರಿ–ಕರ್ಪುರ ಸಂಯೋಗದಂತೆ
ಅವಿರಳ ಸಮರಸವಾಗಿರ್ಪಾತನೆ ಶಿಷ್ಯನು.
ಇಂತೀ ಅರುಹು ಆಚಾರಸನ್ನಿಹಿತ ಗುರುಶಿಷ್ಯರಿಬ್ಬರು
ಬಯಲು ಬಯಲ ಬೆರದಂತೆ
ನಿರವಯಲ ಪರಬ್ರಹ್ಮದಲ್ಲಿ ನಿಷ್ಪತ್ತಿಯನೈದಿರ್ಪರು ನೋಡಾ !
ಇಂತೀ ಅರುಹಿನ ವಿಚಾರವನರಿಯದೆ
ಮಾಡುವ ಮಾಟವೆಲ್ಲ ಅಜ್ಞಾನಗಡಣದೊಳಗು.
ಈ ಅಜ್ಞಾನಗುರುಶಿಷ್ಯರ ವಿಧಿಯೆಂತಾಯಿತ್ತೆಂದಡೆ,
ಹುಟ್ಟುಗುರುಡನ ಕೈಯ ಕೆಟ್ಟಗಣ್ಣವ ಹಿಡಿದು
ಬಟ್ಟೆಯ ಕಾಣದೆ ಕಮರಿಯ ಬಿದ್ದು ಸತ್ತಂತಾಯಿತ್ತು
ಕಾಣಾ ಅಖಂಡೇಶ್ವರಾ. || ೮೦೫ ||

೮೦೬

ನೋಡಿರೆ ನೋಡಿರ ಒಂದು ವಿಚಿತ್ರವ.
ಶಿಷ್ಯನೆಂಬ ಹೆಂಡತಿಯ ಶ್ರೀಗುರುವೆಂಬ ಗಂಡನು

ಹಸ್ತಮಸ್ತಕಸಂಯೋಗವೆಂಬ ಕೂಟವ ಕೂಡಲು,
ಜಿಹ್ವೆಯೆಂಬ ಮೇಢ್ರದಲ್ಲಿ
ಷಡಕ್ಷರಮಂತ್ರವೆಂಬ ವೀರ್ಯವು ಚಲನೆಯಾಗಿ,
ಆ ಶಿಷ್ಯನೆಂಬ ಹೆಂಡತಿಯ ಕರ್ಣವೆಂಬ ಗರ್ಭಪ್ರವೇಶವಾಗಲು,
ಮನ ಬಸುರಾಗಿ, ಕಂಗಳೆಂಬ ಯೋನಿಯಲ್ಲಿ ಲಿಂಗವೆಂಬ ಮಗನ ಹಡೆದು,
ಅಂಗೈಯೆಂಬ ತೊಟ್ಟಿಲಲ್ಲಿಕ್ಕಿ
ಮಂಗಳಸ್ತೋತ್ರವೆಂಬ ಜೋಗುಳವ ಹಾಡಿ,
ಅಖಂಡೇಶ್ವರನೆಂಬ ಹೆಸರಿಟ್ಟರು ನೋಡಾ !
ಇದು ಕಾರಣ, ನೀವೀಗವೆನಗೆ ಮಗನಾದಿರಿ,
ನಾ ನಿಮಗೆ ತಾಯಾದೆನಯ್ಯಾ ಅಖಂಡೇಶ್ವರಾ. || ೫೬೩ ||

೮೦೭

ಶ್ರೇಷ್ಠ ಶ್ರೀಗುರುಸ್ವಾಮಿ
ಇಷ್ಟಲಿಂಗವೆ ನಿನ್ನ ಪ್ರಾಣವೆಂದು ನಿರೂಪಿಸಿದನು.
ಆ ನಿರೂಪವನು ಮಹಾಪ್ರಸಾದವೆಂದು ಕೈಕೊಂಡು
ಇಷ್ಟಲಿಂಗದಲ್ಲಿ ನಿಷ್ಠೆ ನಿಬ್ಬೆರಗಾಗಿ ಆಚರಿಸುವಲ್ಲಿ
ಆ ಇಷ್ಟಲಿಂಗದ ಗೋಳಕವು
ತನ್ನ ಹಸ್ತದಿಂದಾದಡು ಪರಹಸ್ತದಿಂದಾದಡು ಕಿತ್ತುಬಂದಡೆ,
ಸಂದೇಹಗೊಳಲಾಗದು.
ಮರಳಿ ಮುನ್ನಿನಂತೆ ಧರಿಸಿಕೊಂಬುವುದು.
ಇದು ನಿರಾಳದ ಅಚ್ಚು, ವೀರಶೈವದ ಗಚ್ಚು,
ಪುರಾತನರ ಮಚ್ಚು, ಸರ್ವಗಣಂಗಳಿಗೆ ಸಮ್ಮತ.
ಅದೆಂತೆಂದೊಡೆ ;
''ವಿಯೋಗೇ ಶಿವಭಕ್ತಸ್ಯ ಶಂಕಾ ವೀರಶೈವಿನಾಂ ।
ಪುನರ್ಬಂಧಂ ತಥಾ ಕೃತ್ವಾ ತಲ್ಲಿಂಗಂ ಧಾರಯೇತ್ ಸುಧೀಃ ॥
ಹಸ್ತೇನ ಲಿಂಗಮುತ್ಪಾತಂ ಪುನರ್ಬಂಧೇನ ಧಾರಯೇತ್ ।
ಸಂದೇಹೋ ನಾಸ್ತಿ ವೀರಾಣಾಮಿತ್ಯಾಹ ಪರಮೇಶ್ವರಃ ॥''
—ಭೀಮಾಗಮದಲ್ಲಿ ಪರಮೇಶ್ವರನ ವಾಕ್ಯ.
ಇಂತಪ್ಪ ಶಿವನ ವಾಕ್ಯವನು ಮೀರಿ
ಸಂದೇಹಗೊಂಡು ಸಾಯಬೇಕೆಂಬ ಸೂತಕಮನದ
ಪಾತಕ ಹೊಲೆಯರ ಮುಖವ ನೋಡಲಾಗದಯ್ಯ
ಅಖಂಡೇಶ್ವರಾ. || ೫೬೪ ||

೮೦೮

ಶ್ರೀಗುರು ಕರುಣಿಸಿ ಕರಸ್ಥಲಕ್ಕೆ ಕೊಟ್ಟ ಇಷ್ಟಲಿಂಗವನು
ಶುದ್ಧಸಾವಧಾನದಿಂದ ಧರಿಸಿಕೊಂಡು,

ಆ ಲಿಂಗವ ಪತಿ ತಾನೆ ಸತಿ ಎಂಬ ಭಾವದಿಂದೆ ಆಚರಿಸುವ ಕಾಲದಲ್ಲಿ
ಆ ಲಿಂಗವು ಮೋಸದಿಂದೋಸರಿಸಿ ಹೋದಡೆ
ಅರಸಿ ನೋಡಿಕೊಂಡು,
ಸಿಕ್ಕಿದಲ್ಲಿ ಸೂಕ್ಷ್ಮ ವಿಚಾರವ ತಿಳಿದು
ಮುನ್ನಿನಂತೆ ಧರಿಸಿಕೊಂಬುವುದು.
ಮತ್ತಾ ಲಿಂಗವು
ವೃತ್ತ ಕಟಿ ವರ್ತುಳ ಗೋಮುಖ ನಾಳ ಗೋಳಕ ಎಂಬ
ಷಟ್‌ಸ್ಥಾನಂಗಳಲ್ಲಿ ಭಿನ್ನವಾದಡೆಯೂ
ಕಣ್ಣಿಗೆ ಕಾಣಿಸಿಕೊಳ್ಳದೆ ಹೋದಡೆಯೂ
ಲಿಂಗಕ್ಕೆ ತನ್ನ ಪ್ರಾಣವನು ತ್ಯಾಗವಮಾಡಬೇಕಲ್ಲದೆ,
ಅಲ್ಲಿ ಹಿಂದು ಮುಂದು ನೋಡಲಾಗದು.
ಇದಕ್ಕೆ ಶಿವನ ವಾಕ್ಯವೆ ಸಾಕ್ಷಿ :
''ಗುರುಣಾ ದತ್ತಲಿಂಗಂ ತು ಸಾವಧಾನೇನ ಧಾರಯೇತ್ ।
ಪ್ರಮಾದಾತ್ಪತಿತೇ ಲಿಂಗೇ ಪ್ರಾಣಾನಪಿ ಪರಿತ್ಯಜೇತ್ ॥
ವೃತ್ತನಾಲಸಮಂ ಪೀಠಂ ಗೋಲಕಂ ಮಧ್ಯಗೋಮುಖಂ ।
ಭಿನ್ನಂ ಷಡ್ವಿಧಸ್ಥಾನೇನ ಪ್ರಾಣಾಂ ಸ್ತ್ಯಕ್ತ್ವಾ ಶಿವಂ ವ್ರಜೇತ್ ॥''

—ಸಿದ್ಧಾಂತ ಶಿಖಾಮಣಿ

ಇಂತಪ್ಪ ಲಿಂಗೈಕ್ಯವಾದ ಶರಣರ
ನೀನೆಂದೇ ಕಾಂಬೆನಯ್ಯಾ ಅಖಂಡೇಶ್ವರಾ. ॥ ೫೭೫ ॥

**೮೦೯**

ಸದ್ಗುರುಕಾರುಣ್ಯವ ಪಡೆದು ಲಿಂಗಾಂಗಸಮರಸವುಳ್ಳ
ವೀರಶೈವ ಭಕ್ತ ಮಹೇಶ್ವರರೆನಿಸಿಕೊಂಡ ಬಳಿಕ
ತಮ್ಮಂಗದ ಮೇಲಣ ಲಿಂಗವು ಷಟ್‌ಸ್ಥಾನಂಗಳಲ್ಲಿ ಭಿನ್ನವಾದಡೆ
ಆ ಲಿಂಗದಲ್ಲಿ ತಮ್ಮ ಪ್ರಾಣವ ಬಿಡಬೇಕಲ್ಲದೆ,
ಮರಳಿ ಆ ಭಿನ್ನವಾದ ಲಿಂಗವ ಧರಿಸಲಾಗದು.
ಅದೇನು ಕಾರಣವೆಂದಡೆ :
ತಾನು ಸಾಯಲಾರದೆ ಜೀವದಾಸೆಯಿಂದೆ
ಆ ಭಿನ್ನವಾದ ಲಿಂಗವ ಧರಿಸಿದಡೆ
ಮುಂದೆ ಸೂರ್ಯಚಂದ್ರರುಳ್ಳನ್ನಕ್ಕರ
ನರಕಸಮುದ್ರದಲ್ಲಿ ಬಿದ್ದು ಮುಳುಗಾಡುವ ಪ್ರಾಪ್ತಿಯುಂಟಾದ ಕಾರಣ.
ಇದಕ್ಕೆ ಸಾಕ್ಷಿ :
''ಶಿರೋ ಯೋನಿರ್ಗೋಮುಖಂ ಚ ಮಧ್ಯಂ ವೃತ್ತಂ ಚ ಪೀಠಕಂ ।
ಷಟ್‌ಸ್ಥಾನೇ ಛಿದ್ರಯೋಗೇ ತು ತಲ್ಲಿಂಗಂ ನೈವ ಧಾರಯೇತ್ ।

ತಥಾಪಿ ಧಾರಣಾತ್ ಯೋಗೀ ರೌರವಂ ನರಕಂ ವ್ರಜೇತ್ ॥''
—ಸೂಕ್ಷ್ಮಾಗಮ.
ಇಂತಪ್ಪ ನರಕಜೀವಿಗಳ ಎನ್ನತ್ತ ತೋರದಿರಯ್ಯಾ ಅಖಂಡೇಶ್ವರಾ. ॥ ೫೬೬ ॥

ಅ೧೦

ಸಕಲ ಗಣಂಗಳು ಸಾಕ್ಷಿಯಾಗಿ
ಶ್ರೀಗುರುದೇವನು ಕರಸ್ಥಲಕ್ಕೆ ಕರುಣಿಸಿಕೊಟ್ಟ
ಇಷ್ಟಲಿಂಗದಲ್ಲಿ ನಿಷ್ಠೆನಿಬ್ಬೆರಗಾಗಿ,
ಶರಣಸತಿ ಲಿಂಗಪತಿ ಭಾವಬಿಡದೆ
ಆಚರಿಸುವ ಲಿಂಗವು ಓಸರಿಸಿ ಹೋದಡೆ,
ಆ ಲಿಂಗದಲ್ಲಿ ತನ್ನ ಪ್ರಾಣತ್ಯಾಗವ ಮಾಡಬೇಕಲ್ಲದೆ
ಜೀವನ ಕಕ್ಕುಲಾತಿಯಿಂದುಳಿಯಲಾಗದು.
ಮರಳಿ ಮತ್ತೊಂದು ಲಿಂಗವ ಧರಿಸಲಾಗದು.
ಅದೇನು ಕಾರಣವೆಂದಡೆ :
ಕಾಷ್ಠದಲ್ಲಿ ಅಗ್ನಿಯಿರ್ಪುದಲ್ಲದೆ
ಕರಿಗೊಂಡ ಇದ್ದಲಿಯಲ್ಲಿ ಅಗ್ನಿಯಿರ್ಪುದೇ ?
ಇಂತೀ ದೃಷ್ಟದಂತೆ,
ಮುನ್ನ ಗುರೂಪದೇಶವಿದ್ದ ದೇಹದಲ್ಲಿ ಶಿವಕಳೆಯಿರ್ಪುದಲ್ಲದೆ,
ಗುರೂಪದೇಶವಾಗಿ ಲಿಂಗವ್ರತವನಾಚರಿಸಿ
ಮರಳಿ ಲಿಂಗಬಾಹ್ಯ ವ್ರತಗೇಡಿಯಾದ ದೇಹದಲ್ಲಿ
ಪರಮಶಿವಕಳೆಯೆಲ್ಲಿಯದೊ ?
ಆ ಶಿವಕಳೆಯಿಲ್ಲದ ದೇಹಕ್ಕೆ
ಮರಳಿ ಲಿಂಗಧಾರಣವಾದಡೆಯು ಆ ಲಿಂಗ ಪ್ರೇತಲಿಂಗವು ;
ಅವ ಭೂತಪ್ರಾಣಿ.
ಆ ಲಿಂಗದ ಪೂಜೆಯ ಎಷ್ಟು ದಿನ ಮಾಡಿದಡೆಯು ಫಲವಿಲ್ಲ;
ಮುಂದೆ ಮುಕ್ತಿಯಿಲ್ಲ.
ಅವಗೆ ರಾಜನರಕ ಪ್ರಾಪ್ತಿಯಾಗಿರ್ಪುದು ನೋಡಾ.
ಇದಕ್ಕೆ ಸಾಕ್ಷಿ :
''ಲಿಂಗಬಾಹ್ಯಾತ್ ವ್ರತಭ್ರಷ್ಟಃ ಪುನರ್ಲಿಂಗಂ ನ ಧಾರಯೇತ್ ।
ತತ್‌ಪೂಜಾ ನಿಷ್ಫಲಾ ಚೈವ ರೌರವಂ ನರಕಂ ವ್ರಜೇತ್ ॥
ಮತ್ತಂ,
''ಪ್ರೇತಲಿಂಗೇನ ಸಂಸ್ಕಾರೇ ಭೂತಪ್ರಾಣೇ ನ ಜಾಯತೇ ।
ಪ್ರಭಾತೇ ತನ್ಮುಖಂ ದೃಷ್ಟ್ವಾ ಕೋಟಿ ಜನ್ಮಸು ಸೂಕರಃ ॥''
ಎಂದುದಾಗಿ,
ಇಂತಪ್ಪ ಲಿಂಗಬಾಹ್ಯ ವ್ರತಭ್ರಷ್ಟನ ಮುಖವ

ಪ್ರಾತಃಕಾಲದಲ್ಲಿ ನೊಡಿದಾತಂಗೆ
ಕೋಟಿವೇಳೆ ಶುನಿ ಸೂಕರನ ಬಸುರಲ್ಲಿ
ಬಪ್ಪುದು ತಪ್ಪದು ನೋಡಾ ಅಖಂಡೇಶ್ವರಾ. ॥ ೫೬೭ ॥

೮೧೧

ಲಿಂಗ ಭಿನ್ನ ಭಿನ್ನವಾದಡೆ ಸ್ಥೂಲಸೂಕ್ಷ್ಮವನರಿಯಬೇಕು.
ಸ್ಥೂಲವಾವುದು ಸೂಕ್ಷ್ಮವಾವುದು ಎಂದಡೆ :
ಲಿಂಗದ ಶಕ್ತಿಪೀಠದಲ್ಲಿ
ಅಕ್ಕಿಯ ತೂಕ ಮೇಣವನೊತ್ತಿ ನೋಡಿದಲ್ಲಿ
ಆ ಮೇಣ ಒಳಗಾದಡೆ ಸ್ಥೂಲ, ಆ ಮೇಣ ಹೆಚ್ಚಾದಡೆ ಸೂಕ್ಷ್ಮ.
ಮತ್ತಂ,
ಲಿಂಗದ ಕಟಿಯಲ್ಲಿ ಅರ್ಧ ಅಕ್ಕಿಯ ತೂಕ ಮೇಣವನು ಒತ್ತಿ ನೋಡಿದಲ್ಲಿ
ಆ ಮೇಣ ಒಳಗಾದಡೆ ಸ್ಥೂಲ, ಆ ಮೇಣ ಹೆಚ್ಚಾದಡೆ ಸೂಕ್ಷ್ಮ.
ಮತ್ತಂ, ಲಿಂಗದ ವರ್ತುಳ ಗೋಮುಖದಲ್ಲಿ
ಅರ್ಧ ಅಕ್ಕಿಯ ಸರಿಭಾಗವ ಮಾಡಿದಲ್ಲಿ ಗಿರ್ದವೆನಿಸಿತ್ತು.
ಆ ಗಿರ್ದ ಅಕ್ಕಿಯ ತೂಕ ಮೇಣವನ್ನು ಒತ್ತಿ ನೋಡಿದಲ್ಲಿ
ಆ ಮೇಣ ಒಳಗಾದಡೆ ಸ್ಥೂಲ, ಆ ಮೇಣ ಹೆಚ್ಚಾದಡೆ ಸೂಕ್ಷ್ಮ.
ಮತ್ತಂ, ಲಿಂಗದ ನಾಳ ಗೋಳಕದಲ್ಲಿ
ಎಳ್ಳಿನ ತೂಕ ಮೇಣವನ್ನು ಒತ್ತಿ ನೋಡಿದಲ್ಲಿ
ಆ ಮೇಣ ಒಳಗಾದಡೆ ಸ್ಥೂಲ, ಆ ಮೇಣ ಹೊರಗಾದಡೆ ಸೂಕ್ಷ್ಮ.
ಮತ್ತಂ, ಲಿಂಗದ ಮಸ್ತಕದಿಂದೆ ಕೆಳಗಣ ಪೀಠಪರಿಯಂತರವಾಗಿ
ಕೂದಲು ಮುಳುಗುವಷ್ಟು ಸೀಳಿದಡೆ ಸ್ಥೂಲ,
ಆ ಕೂದಲು ಹೆಚ್ಚಾದಡೆ ಸೂಕ್ಷ್ಮ.
ಈ ಉಭಯಾರ್ಥವ ತಿಳಿದು
ಸೂಕ್ಷ್ಮವಾದಡೆ ಮುನ್ನಿನಂತೆ ಧರಿಸಿಕೊಳ್ಳಬೇಕು.
ಸ್ಥೂಲವಾದಡೆ ಆ ಲಿಂಗದಲ್ಲಿ ಐಕ್ಯವಾಗಬೇಕು.
ಅದೆಂತೆಂದೊಡೆ:
''ವ್ರೀಹಿ ವ್ರೀಹ್ಯರ್ಧ ವಿಚ್ಛಿನ್ನಂ ಕೇಶಗ್ರಾಹ್ಯಂ ಪ್ರಮಾದತಃ।
ಪೀಠಾದಿ ಲಿಂಗಪರ್ಯಂತಂ ತ್ಯಜೇತ್ ಪ್ರಾಣಾನ್ ನಗಾತ್ಮಜೇ ॥''
ಮತ್ತಂ;
''ತಂಡುಲಾರ್ಧಂ ಪೀಠಮಧ್ಯಂ ತದರ್ಧಂ ವೃತ್ತಗೋಮುಖಂ।
ತಿಲಮಾತ್ರ ಯೋನಿಲಿಂಗಂ ತದಾಧಿಕ್ಯಂ ತ್ಯಜೇದಸೂನ್ ॥''
ಎಂದುದಾಗಿ,
ಇಂತಪ್ಪ ಲಿಂಗೈಕ್ಯರಾದ ಮಹಾಶರಣರು
ಮೂರುಲೋಕಕ್ಕೆ ಅಧಿಕರು ನೋಡಾ ಅಖಂಡೇಶ್ವರಾ. ॥ ೫೬೮ ॥

೮೧೨

ಎಂಬತ್ತುನಾಲ್ಕುಲಕ್ಷ ಮಂಡಲದೊಳಗೆ
ಒಂದೊಂದು ಜನ್ಮದಲ್ಲಿ ಸಹಸ್ರವೇಳೆ ಸತ್ತು ಹುಟ್ಟಿ ಸುತ್ತಿಸುಳಿದು
ಸುಖದುಃಖಗಳಿಂದೆ ನೊಂದು ಬೆಂದು
ತೊಳಲಿ ಬಳಲುವ ಜೀವಂಗೆ,
ಬಡವಂಗೆ ಕಡವರ ದೊರೆಕೊಂಡಂತೆ,
ಮನುಷ್ಯದೇಹವು ದೊರೆಕೊಂಡಲ್ಲಿ,
ಶಿವಕೃಪೆಯಿಂದ ಗುರುಕಾರುಣ್ಯವಾಗಿ
ಅಂಗದ ಮೇಲೆ ಲಿಂಗಧಾರಣವಾದ ಬಳಿಕ
ಆ ಲಿಂಗದ ಮೇಲೆ ಪ್ರಾಣಪ್ರತಿಷ್ಠೆಯಂ ಮಾಡಿ
ನಿಮಿಷ ನಿಮಿಷಾರ್ಧವಗಲದಿರಬೇಕು.
ಮತ್ತಂ, ಆ ಲಿಂಗದಲ್ಲಿ ಐಕ್ಯವಾಗುವನ್ನಬರ
ಸತ್ಕ್ರಿಯಾ ಸಮ್ಯಕ್‌ಜ್ಞಾನವ ಬಿಡದಿರಬೇಕು.
ಇಷ್ಟುಳ್ಳಾತಂಗೆ ಶಿವನಲ್ಲಿ ಸಮರಸವಲ್ಲದೆ,
ಅಂತರಂಗದಲ್ಲಿ ಅಂತಃಪ್ರಾಣಲಿಂಗದ ಪರಿಪೂರ್ಣ ಬೆಳಗಕಂಡೆವು.
ಇನ್ನು ಇಷ್ಟಲಿಂಗದ ಹಂಗು ಏತಕೆಂದು
ಆ ಇಷ್ಟಲಿಂಗವ ಕಡೆಗೆ ತೆಗೆದು ಹಾಕಿ
ಲಿಂಗಬಾಹ್ಯನಾಗಿ ವ್ರತಗೇಡಿಯಾದಾತನು
ಒಂದುಕೋಟಿ ಕಲ್ಪಾಂತರವು ನರಕದೊಳಗಿರ್ದು
ಅಲ್ಲಿಂದತ್ತ ಎಂಬತ್ತುನಾಲ್ಕುಲಕ್ಷ ಜನ್ಮದಲ್ಲಿ
ಬಂಧನಬಡುತಿರ್ಪನಲ್ಲದೆ ಶಿವನಲ್ಲಿ
ಅವಿರಳ ಸಮರಸವಿಲ್ಲ ನೋಡಾ !
ಅದೆಂತೆಂದೊಡೆ :
''ಅಂಗೇ ಚ ಲಿಂಗಸಂಬಂಧಃ ಲಿಂಗಂಚ ಪ್ರಾಣಸಂಯುತಂ ।
ನಿಮಿಷಾರ್ಧಂ ಪ್ರಾಣವಿಯೋಗೇನ ನರಕೇ ಕಾಲಮಕ್ಷಯಂ॥''
ಎಂದುದಾಗಿ, ಇಂತಪ್ಪ ಅದ್ವೈತ ಹೀನಮಾನವರ
ಎನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ. || ೫೭೯ ||

೮೧೩

ಶ್ರೀಗುರುವಿನ ಕರಗರ್ಭದಲ್ಲಿ ಉದಯವಾದ
ಶರಣಸತಿ ನಾನು.
ಶ್ರೀಗುರುವಿನ ಹೃದಯಗರ್ಭದಲ್ಲಿ ಉದಯವಾದ ಲಿಂಗಪತಿಗೆ
ಎನ್ನ ಮದುವೆಯ ಮಾಡುವ ಕಾಲದಲ್ಲಿ
ಸಹಸ್ರದಳಕಮಲವೆಂಬ ಸಾವಿರಕಂಬದ ಮಂಟಪವ ರಚಿಸಿ,

ಆ ಮಂಟಪದ ಮಧ್ಯದಲ್ಲಿ
ಪಂಚಪಾತ್ರವೆಂಬ ಪಂಚಮುದ್ರೆಯ ರಂಗವಲ್ಲಿಯ ತುಂಬಿ,
ಆ ಪಂಚಮುದ್ರೆಯಲ್ಲಿ ಪಂಚಪ್ರಣವೆಂಬ ಪಂಚಕಲಶವ ಹೂಡಿ,
ಆ ಪಂಚಕಲಶಂಗಳಿಗೆ ಸ್ವಾನುಭಾವಜ್ಞಾನವೆಂಬ ಸುರಗಿಯ ಸುತ್ತಿ,
ಆ ಮಧ್ಯದಲ್ಲಿ ಎನಗೆ ಶೃಂಗಾರವ ಮಾಡಿದರೆಂತೆನಲು,
ಸರ್ವಾಚಾರಸಂಪತ್ತೆಂಬ ಸೀರೆಯನುಡಿಸಿ,
ಸುಜ್ಞಾನವೆಂಬ ಕುಪ್ಪಸವ ತೊಡಿಸಿ,
ಸದ್ಭಕ್ತಿಯೆಂಬ ಬಳೆಯನಿಡಿಸಿ,
ಏಕಭಾವದ ನಿಷ್ಠೆಯೆಂಬ ತಾಳಿಯ ಕಟ್ಟಿ,
ನಿಜಮುಕ್ತಿಯೆಂಬ ಮೂಗುತಿಯನಿಟ್ಟು,
ಶಿವಮಂತ್ರವೆಂಬ ಕರ್ಣಾಭರಣವ ಧರಿಸಿ,
ಸತ್ಕ್ರಿಯೆಯೆಂಬ ಪಾದಾಭರಣವ ಧರಿಸಿ,
ಪರಮೇಶ್ವರನ ಚಿತ್‌ಪ್ರಕಾಶವೆಂಬ ಚಿದ್‌ವಿಭೂತಿಯನ ತಂದು,
ಎನ್ನ ಲಲಾಟದಲ್ಲಿ ಪಟ್ಟವ ಕಟ್ಟಿ,
ಸತಿಸಂಗವಗಲಬೇಡವೆಂದು
ಎನ್ನ ಪತಿಯ ಸೆರಗ ತಂದು ಎನ್ನ ಸೆರಗಿಗೆ ಕೂಡಿಸಿ,
ಷಟ್‌ಸ್ಥಲಬ್ರಹ್ಮಗಂಟನಿಕ್ಕಿ,
ಪತಿಭಕ್ತಿಯಗಲದಿರೆಂದು ಎನ್ನ ಮುಂಗೈಯಲ್ಲಿ
ಸಕಲಗಣಂಗಳ ಸಾಕ್ಷಿಯಾಗಿ ಬಿರುದಿನ ವೀರಕಂಕಣವ ಕಟ್ಟಿ,
ಜಂಗಮದ ಪಾದತೀರ್ಥ ಪ್ರಸಾದವೆಂಬ ಭೂಮವನುಣಿಸಿ,
ಮದುವೆಯ ಮಾಡಿದರಂದು.
ಇಂದು ಎನಗೆ ಯೌವನವಾಯಿತ್ತು
ಏಳುನೆಲೆಯ ಮೇಲುಪ್ಪರಿಗೆಯ ಮೇಲೆ
ಲೀಲೆಯಿಂದ ಕೂಡಿ ಸುಖಿಸಯ್ಯಾ ಎನ್ನ ಅಖಂಡೇಶ್ವರಾ. ॥ ೫೭೦ ॥

### ಲಗಳ

ಎಲೆ ಶಿವನೆ, ನೀನು ಎನ್ನ ಮೆಚ್ಚಿ ಕೈವಿಡಿದ ಕಾರಣ
ಎಮ್ಮವರು ಸಕಲಗಣಂಗಳ ಸಾಕ್ಷಿಯಮಾಡಿ
ನಿನಗೆ ಎನ್ನ ಮದುವೆಯಮಾಡಿಕೊಟ್ಟರು.
ನೀನು ಎನ್ನನಗಲಿದಡೆ ಗುರುದ್ರೋಹಿ.
ಆನು ನಿನ್ನನಗಲಿದಡೆ ಸಮಯಕ್ಕೆ ಹೊರಗು.
ಅದಂತೆಂದೊಡೆ :
ಮುನ್ನ ಶ್ರೀಗುರುಸ್ವಾಮಿ
ಎನ್ನ ಪ್ರಾಣದೊಳಗೆ ನಿನ್ನ ಪ್ರಾಣವ ಹುದುಗಿಸಿ,

ನಿನ್ನ ಪ್ರಾಣದೊಳಗೆ ಎನ್ನ ಪ್ರಾಣವ ಹುದುಗಿಸಿ
ಎಂದೆಂದೂ ಅಗಲಬೇಡೆಂದು ನಿರೂಪಿಸಿದನು.
ಆ ನಿರೂಪವನು ಮಹಾಪ್ರಸಾದವೆಂದು ಕೈಕೊಂಡ ಬಳಿಕ
ನಾವಿಬ್ಬರು ಎಂದೆಂದಿಗೂ ಅಗಲದಿರಬೇಕಯ್ಯಾ ಅಖಂಡೇಶ್ವರಾ. ॥ ೫೭೧ ॥

**೮೧೫**

ಪುರುಷನೆಂದು ಕರೆವುತಿರ್ಪುದು ಜಗದವರೆಲ್ಲ ಎನ್ನ ;
ನಾನು ಪುರುಷನಲ್ಲವಯ್ಯಾ.
ಅದೆಂತೆಂದೊಡೆ :
ಹೊರಗಣ ಸಾಕಾರವೆ ನೀನು, ಒಳಗಣ ನಿರಾಕಾರವೆ ನಾನು.
ಹೊರಗಣ ಸಾಕಾರದ ಪುರುಷರೂಪೇ ನೀವಾಗಿ,
ಒಳಗಣ ನಿರಾಕಾರ ಸ್ತ್ರೀರೂಪೇ ನಾನಾಗಿ,
ನಿಮಗೆ ರಾಣಿವಾಸವಾದೆನಯ್ಯಾ ಅಖಂಡೇಶ್ವರಾ. ॥ ೫೭೨ ॥

**೮೧೬**

ಗಂಡನುಳ್ಳ ಗರತಿಯರೆಲ್ಲರು
ನಿಮ್ಮ ಗಂಡನ ಕುರುಹ ನೀವು ಹೇಳಿರೆ ;
ನೀವರಿಯದಿರ್ದಡೆ
ನಾವು ನಮ್ಮ ಗಂಡರ ಕುರುಹ ಹೇಳಿಹೆವು ಕೇಳಿರೆ.
ಹೊಳೆವ ಕೆಂಜೆಡೆಗಳ, ಬೆಳಗುವ ಭಾಳಲೋಚನದ,
ಥಳಥಳಿಪ ಸುಲಿಪಲ್ಲಿನ,
ಕಳೆದುಂಬಿ ನೋಡುವ ಕಂಗಳ ನೋಟದ,
ಸೊಗಸಿಂದೆ ನಗುವ ಮುಗುಳುನಗೆಯ,
ರತ್ನದಂತೆ ಬೆಳಗುವ ರಂಗುದುಟಿಯ,
ಚಂಪಕದ ನಗೆಯಂತೆ ಸೊಂಪಾದ ನಾಸಿಕದ,
ಶಶಿಯಂತೆ ಬೆಳಗುವ ಎಸೆವ ಕದಪಿನ,
ಮಿಸುಪ ಎದೆ ಭುಜ ಕಂಠದ,
ಶೃಂಗಾರದ ಕುಕ್ಷಿಯ, ಸುಳಿದೆಗೆದ ನಾಭಿಯ,
ತೊಳಪ ತೊಡೆಮಣಿಪಾದಹರಡಿನ,
ನಕ್ಷತ್ರದಂತೆ ಹೊಳೆವ ನಖದ ಪಂಕ್ತಿಯ
ಚರಣಕಮಲದಲ್ಲಿ ಹರಿಯ ನಯನದ ಕುರುಹಿನ.
ಸಕಲಸೌಂದರ್ಯವನೊಳಕೊಂಡು
ರವಿಕೋಟಿಪ್ರಭೆಯಂತೆ ರಾಜಿಸುವ ರಾಜಾಧಿರಾಜ
ನಮ್ಮ ಅಖಂಡೇಶ್ವರನೆಂಬ ನಲ್ಲನ ಕುರುಹು ಇಂತುಟು ಕೇಳಿರವ್ವಾ. ॥ ೫೭೩ ॥

### ೮೧೭

ಎಲ್ಲರಂತಲ್ಲ ನೋಡಿರೆ ನನ್ನ ನಲ್ಲ.
ಬಲ್ಲಿದ ನಾರಾಯಣ ಬ್ರಹ್ಮರ ಕೂಡೆ
ಮೆಲ್ಲನೆ ಸೇವೆಯ ಕೊಂಬನು.
ಖುಲ್ಲ ದನುಜರನೆಲ್ಲ ನಿಲ್ಲದೆ ಸಂಹರಿಸಿದನು.
ಕಲ್ಲುಕಲ್ಲಲಿ ಹೊಡೆಸಿಕೊಂಡನು.
ಭಕ್ತಿಗೆ ಮೆಚ್ಚಿ ಬಿಲ್ಲಲಿ ಹೊಯಿಸಿಕೊಂಡನು.
ಭಾವಕ್ಕೆ ಮೆಚ್ಚಿ ಸೂಲ್ಲಿಗ ಸೋತು ಶಿಶುವಾದನು ಅಮ್ಮವ್ವೆಗೆ.
ಮಲ್ಲಮಲ್ಲರ ಗಂಡನೆಂಬ ಬಿರುದು ನೋಡಿರೆ
ನಮ್ಮ ಅಖಂಡೇಶ್ವರನೆಂಬ ನಲ್ಲನಿಗೆ. || ೫೭೪ ||

### ೮೧೮

ನಲ್ಲನ ಕಾಣದೆ
ತಲ್ಲಣಗೊಳುತಿರ್ಪುದು ನೋಡಾ ಎನ್ನ ಮನವು.
ಜಾಗ್ರಾವಸ್ಥೆಯಲ್ಲಿ
ನಲ್ಲನ ಚಿಂತೆಯಿಂದ ಸುಳಿವುತಿರ್ದೆನವ್ವಾ.
ಸ್ವಪ್ನಾವಸ್ಥೆಯಲ್ಲಿ
ನಲ್ಲನ ಚಿಂತೆಯಿಂದೆ ಕಳವಳಿಸುತಿರ್ದೆನವ್ವಾ.
ಸುಷುಪ್ತಾವಸ್ಥೆಯಲ್ಲಿ
ನಲ್ಲನ ಚಿಂತೆಯಿಂದೆ ಮೈಮರೆದಿರ್ದೆನವ್ವಾ.
ಸರ್ವಾವಸ್ಥೆಯಲ್ಲಿ
ಅಖಂಡೇಶ್ವರನೆಂಬ ನಲ್ಲನ ಕೂಡಬೇಕೆಂಬ ಭ್ರಾಂತಿಯಿಂದೆ
ಬಡವಾಗುತಿರ್ದೆನವ್ವಾ. || ೫೭೫ ||

### ೮೧೯

ಚಿತ್ತದೊಲ್ಲಭನ ಕಾಣದೆ
ಚಿಂತೆಗೊಂಡಿತ್ತು ನೋಡಾ ಎನ್ನ ಮನವು.
ಹೊತ್ತಿನ ಗೊತ್ತಿಗೆ ಬಾರದಿರ್ದಡೆ
ಹೊತ್ತು ಹೋಗದು ಕೇಳಿರೆ.
ಕರ್ತೃ ಅಖಂಡೇಶ್ವರನು ಬಾರದಿರ್ದಡೆ
ಕತ್ತಲೆಯ ಕಳೆಯಲಾರೆನವ್ವಾ. || ೫೭೬ ||

### ೮೨೦

ಬುದ್ಧಿಗೂಡದು ನಿದ್ರೆಬಾರದು ಎನಗೆ, ಸುದ್ದಿ ಹೇಳಿರೆ ಆತಗೆ.
ಸದ್ದಿಲ್ಲದೆ ಎದ್ದು ಹೋದನು ನೋಡಿರೆ,

ಮುದ್ದಿಸಿ ಮುನಿಸು ತಿಳುಪಿ
ಇದ್ದಲ್ಲಿಗೆ ಕರೆದು ತನ್ನಿರೆ ಅಖಂಡೇಶ್ವರನೆಂಬ ಶಿವನ. || ೫೭೭ ||

**೬೨೧**

ಅರಳಿಯ ಮರದೊಳಗಿರುವ ಅರಗಿಳಿಗಳಿರಾ,
ನಮ್ಮ ಅಖಂಡೇಶ್ವರನ ಕಂಡರೆ ಹೇಳಿರೆ !
ಮಾವಿನ ಮರದೊಳಗೆ ಕೂಗುವ ಕೋಗಿಲೆ ಹಿಂಡುಗಳಿರಾ,
ನಮ್ಮ ನಾಗಭೂಷಣನ ಕಂಡಡೆ ಹೇಳಿರೆ!
ಕೊಳನ ತೀರದಲಾಡುವ ಕಳಹಂಸಗಳಿರಾ,
ನಮ್ಮ ಎಳೆಯಚಂದ್ರಧರನ ಕಂಡಡೆ ಹೇಳಿರೆ!
ಮೇಘಧ್ವನಿಗೆ ಕುಣಿವ ನವಿಲುಗಳಿರಾ,
ನಮ್ಮ ಅಖಂಡೇಶ್ವರನೆಂಬ
ಅವಿರಳಪರಶಿವನ ಕಂಡಡೆ ಹೇಳಿರೆ! || ೫೭೮ ||

**೬೨೨**

ಆತನ ಆಳಾಪದಿಂದೆ ಹಗಲಾದುದನರಿಯೆನವ್ವಾ !
ಆತನ ಆಳಾಪದಿಂದೆ ಇರುಳಾದುದನರಿಯೆನವ್ವಾ !
ಅಖಂಡೇಶ್ವರನೆಂಬ ಪ್ರಾಣದೊಲ್ಲಭನ
ಕೂಡಬೇಕೆಂಬ ಭ್ರಾಂತಿಯಿಂದೆ
ಹೋದುದ ಬಂದುದನರಿಯೆನವ್ವಾ ! || ೫೭೯ ||

**೬೨೩**

ನಾನೇನೆಂದೆನೆ ? ತಾನೇತಕೆ ಮುನಿದನೆ ?
ಮಾನಿನಿ ಹೋಗಿ ಕರೆದು ತಾರೇ
ಅಖಂಡೇಶ್ವರನೆಂಬ ಇನಿಯನ. || ೫೮೦ ||

**೬೨೪**

ತನ್ನನಲ್ಲದೆ ಅನ್ಯವ ನೋಡೆನವ್ವಾ.
ತನ್ನನಲ್ಲದೆ ಅನ್ಯವ ಮುಟ್ಟೆನವ್ವಾ.
ತನ್ನನಲ್ಲದೆ ಅನ್ಯವ ನೆನೆಯೆನವ್ವಾ.
ತನ್ನನಲ್ಲದೆ ಅನ್ಯವ ಬಯಸೆನವ್ವಾ.
ತನ್ನನಗಲಿ ಇನ್ನೆಂತು ಬದುಕುವೆನವ್ವಾ ?
ಅಖಂಡೇಶ್ವರನೆಂಬ ನಲ್ಲನ ಮುನಿಸನು ತಿಳುಹಿರವ್ವಾ. || ೫೮೧ ||

**೬೨೫**

ಜೀವದೊಡೆಯನನಗಲಿ ಜೀವಿಸಲಾರೆನವ್ವಾ.
ನಿಮಿಷ ನಿಮಿಷಾರ್ಧವಾದಡೂ ಬಾಳಲಾರೆನವ್ವಾ.

ಹೇಳಲಿನ್ನೇನ ? ಸಾವು ಬಂದಿತ್ತವ್ವಾ.
ಕಂಡಡೆ ಹೇಳಿರವ್ವಾ.
ನಮ್ಮ ತಂಗಿಯ ಭಾವನ ಕರೆದು ತೋರಿರವ್ವಾ
ಅಖಂಡೇಶ್ವರನೆಂಬ ನಲ್ಲನ. ॥ ೫೮೨ ॥

೮೨೬

ಪ್ರಾಣನಾಯಕನ ಕಾಣದೆ
ಕ್ಷೋಣಿಯೊಳಗೆ ಬದುಕಲಾರೆನವ್ವಾ.
ಏಣಾಂಕಧರನು ಏಕೆ ಬಾರನೇ ?
ಜಾಣೆ ಪ್ರವೀಣೆ ಕರೆದುತೋರ
ಅಖಂಡೇಶ್ವರನೆಂಬ ನಲ್ಲನ. ॥ ೫೮೩ ॥

೮೨೭

ಅರಸನ ಕಾಣದಬಳಿಕ ಹರುಷವಿಲ್ಲವ್ವಾ ಎನಗೆ.
ಅರಸು ಅಖಂಡೇಶ್ವರನೆಂಬ
ಪರಶಿವನ ಬೆರಸದ ಬಳಿಕ
ಸರಸವೆಲ್ಲಿಯದವ್ವಾ ಎನಗೆ ? ॥ ೫೮೪ ॥

೮೨೮

ಕಂಡರೆ ಸಂತೋಷ, ಕಾಣದಿರ್ದರೆ ಕಡುದುಃಖವೆನಗೆ
ಹಿಂಡುದೈವದ ಗಂಡ ಮಂಡಲಾಧಿಪತಿ ಅಖಂಡೇಶ್ವರನು
ನಿಮಿಷವಾದಡೂ ತಡೆದರೆ ಪ್ರಾಣ ಉಳಿಯದವ್ವಾ. ॥ ೫೮೫ ॥

೮೨೯

ಬಾರನೇತಕವ್ವಾ ನಮ್ಮನೆಯಾತ ?
ತೋರನೇತಕವ್ವಾ ತನ್ನ ದಿವ್ಯರೂಪವ ?
ಬೀರನೇತಕವ್ವಾ ಅತಿಸ್ನೇಹವ ?
ಇನ್ನೆಂತು ಸೈರಿಸುವೆನವ್ವಾ.
ಹೇಗೆ ತಾಳುವೆನವ್ವಾ.
ತನು ತಾಪಗೊಳ್ಳುತ್ತಿದೆ, ಮನ ತಲ್ಲಣವಾಗುತ್ತಿದೆ.
ಅಖಂಡೇಶ್ವರನೆಂಬ ನಲ್ಲನ ತೋರಿಸಿ
ಎನ್ನ ಪ್ರಾಣವನುಳುಹಿಕೊಳ್ಳಿರವ್ವಾ. ॥ ೫೮೬ ॥

೮೩೦

ಘಲ್ಲುಘಲ್ಲೆಂದಡೆ ನಲ್ಲ ಬರುತಾನೆಂದು
ಎಲ್ಲ ಹಾದಿಯ ಮೆಟ್ಟಿ ನೋಡುತಿರ್ದೆನವ್ವಾ.

ನಲ್ಲನ ಸೊಲ್ಲನಾಲಿಸಿ ಕೇಳುತಿರ್ದೆನವ್ವಾ.
ಅಖಂಡೇಶ್ವರನೆಂಬ ನಲ್ಲನ ಕಂಡರೆ
ಮಹಾಸಂತೋಷವು,
ಕಾಣದಿರ್ದರೆ ಕಡುದುಃಖ ಕೇಳಿರವ್ವಾ ಎನಗೆ. ॥ ೫೮೭ ॥

**೮೩೧**

ಹಗಲು ಹನ್ನೆರಡುತಾಸು ತನ್ನ ಹಂಬಲದಲ್ಲಿ
ವೇಳೆಕಳೆವುತಿರ್ದೆನವ್ವಾ.
ಇರುಳು ಹನ್ನೆರಡುತಾಸು ತನ್ನನೇ
ಎದ್ದೆದ್ದು ನೋಡುತಿರ್ದೆನವ್ವಾ.
ಅಖಂಡೇಶ್ವರನೆಂಬ ನಲ್ಲನ ಹಂಬಲದಿಂದ
ಸರ್ವಸಂಗವ ತೊರೆದೆನು ನೋಡಿರವ್ವಾ. ॥ ೫೮೮ ॥

**೮೩೨**

ಬಾರಯ್ಯ ಬಾರಯ್ಯ ಗಂಡನೆ,
ಇನ್ನೇತಕೆ ನಾಚುವೆ ನಾನು ಸರಿಮಿಂಡಿಯಾದ ಬಳಿಕ.
ಇನ್ನೇತಕೆ ದಿನಕಾಲ ಹೋಗಲಾಡುವೆ,
ತುಂಬಿದ ಜವ್ವನ ಸಡಿಲಿಹೋಗುತ್ತಿದೆ.
ಸುರತಸಂಭ್ರಮದ ಚುಂಬನಂಗಳಿಂದ ಕೂಡಿ
ಪರಿಣಾಮುಗೊಳ್ಳಯ್ಯಾ ಎನ್ನ ಅಖಂಡೇಶ್ವರಾ. ॥ ೫೮೯ ॥

**೮೩೩**

ನೋಡು ನೋಡಯ್ಯಾ ಗಂಡನೆ,
ಎನ್ನ ಕಂಗಳುಪ್ಪರಿಗೆಯ ಮೇಲೆ ಕುಳ್ಳಿರ್ದು ಸಕಲ ವಿಚಿತ್ರವ.
ಆಡು ಆಡಯ್ಯಾ ಗಂಡನೆ, ಎನ್ನ ಮನದ ಕೊನೆಯಲ್ಲಿ
ಮಹಾಜ್ಞಾನದುಯ್ಯಾಲೆಯ ಕಟ್ಟಿ.
ಮನಬಂದ ಪರಿಯಲ್ಲಿ
ಕೂಡು ಕೂಡಯ್ಯಾ ಗಂಡನೆ ಎನ್ನ
ಸತ್ಕಲೆಗಳಿಂದ ಸವಿದೋರಿಸಿ ಅಖಂಡೇಶ್ವರಾ. ॥ ೫೯೦ ॥

**೮೩೪**

ಸೊಕ್ಕಿದ ಜವ್ವನದ, ಕಕ್ಕಸಕುಚದ,
ಸಡಲಿದ ಸೋರ್ಮುಡಿಯ,
ಬಡನಡುವಿನ, ಬಳಕುವ ಹೆಣ್ಣಿನ ಕಡುಸ್ನೇಹವನಗಲಿ
ಕಡೆಗೆ ಹೋಗುವುದು, ಇದು ಎಂಥ ವಿಗಡ ಚಾರಿತ್ರವೆ ಅವ್ವಾ!

ಅಖಂಡೇಶ್ವರನೆಂಬ ನಲ್ಲನ ಚಿಂತೆಯಿಂದೆ,
ಮನವು ಸಣ್ಣೆಸಿ, ತನುವು ಕರಗಿ ಹೋಯಿತ್ತು ನೋಡಿರವ್ವಾ. ॥ ೫೯೧ ॥

### ೮೩೫

ಇಂದಿನ ಇರುಳಿನಲ್ಲಿ
ನಲ್ಲನು ಚಲ್ಲವಾಡುತ ಬಂದು
ಮೆಲ್ಲನೆ ಎನ್ನ ಕೈವಿಡಿದನವ್ವಾ.
ಅಲ್ಲಿ ಉಟ್ಟ ಸೀರೆಯ ನಿರಿಗಳು ಸಡಲಿ ಬಿದ್ದುವವ್ವಾ.
ತೊಟ್ಟ ರವಕೆಯ ಗಂಟು ಬಿಚ್ಚಿ ಕಡೆಗಾದುವವ್ವಾ.
ಅಖಂಡೇಶ್ವರನೆಂಬ ನಲ್ಲನು ಎನ್ನ
ಬಿಗಿಯಪ್ಪಿ ತಕ್ಕೈಸಿಕೊಂಡು
ಕೂಡಿದ ಸುಖವ ಇದಿರಿಟ್ಟು ಹೇಳಲಾರೆನವ್ವಾ. ॥ ೫೯೨ ॥

### ೮೩೬

ಚಂದ್ರಸಾಲೆಯಲ್ಲಿ ಬಂದು ನಿಂದವನಾರೆಂದು
ನೋಡಹೋದಡೆ.
ಅಲ್ಲಿ ಹೊಂದಿ ಎನ್ನ ನೆರೆದನವ್ವಾ.
ಆತನ ಸೌಂದರ್ಯ ಕೋಟಿಕಂದರ್ಪರಂತಿರ್ದುದವ್ವಾ.
ಆತನಂಗದ ಬೆಳಗು
ಅನಂತಕೋಟಿ ಸೂರ್ಯರ ಪ್ರಭೆಯಂತಿರ್ದುದವ್ವಾ.
ಅಖಂಡೇಶ್ವರನೆಂಬ ನಲ್ಲನ ಅಂಗಶೃಂಗಾರದ ಬೆಳಗ
ನೋಡಲಮ್ಮದೆ ಕಂಗಳ ಮುಚ್ಚಿ ನೆರೆದೆನವ್ವಾ. ॥ ೫೯೩ ॥

### ೮೩೭

ಆತನ ದಿವ್ಯರೂಪು ನೋಡಿ ಎನ್ನ ಕಂಗಳು ದಣಿಯವು.
ಆತನ ಲಲ್ಲೆವಾತ ಕೇಳಿ ಎನ್ನ ಕಿವಿಗಳು ದಣಿಯವು.
ಆತನ ಜಿಹ್ವೆಯ ಚುಂಬಿಸಿ ಎನ್ನ ಬಾಯಿ ದಣಿಯದು.
ಆತನ ಸರ್ವಾಂಗವನಪ್ಪಿ ಎನ್ನ ತನು ದಣಿಯದು.
ಆ ಅಖಂಡೇಶ್ವರ ಕೂಡಿ ಒಳಪೊಕ್ಕು
ಪರಿಣಾಮ ಸೂರೆಗೊಂಡು
ಎನ್ನ ಮನ ದಣಿಯದು ನೋಡಿರವ್ವಾ. ॥ ೫೯೪ ॥

### ೮೩೮

ನಲ್ಲನ ಕೂಡಿದ ಸುಖವೆಲ್ಲವ
ಮೆಲ್ಲನೆ ಉಸುರುವೆ ಕೇಳಿರವ್ವಾ.
ಏಳು ನೆಲೆಯ ಮಣಿಮಾಡದ ಮಾಣಿಕ್ಯಮಂಟಪದುಪ್ಪರಿಗೆಯ ಮೇಲೆ

ಚಪ್ಪರ ಮಂಚವ ಹಾಸಿ,
ಒಪ್ಪುವ ಊಟವ ನೀಡಿ, ಕರ್ಪೂರವೀಳ್ಯವ ಕೊಟ್ಟು,
ಲಜ್ಜೆಗೆಟ್ಟು ನಾಚಿಕೆಯ ತೊರೆದು, ತನು ಜಜ್ಜರಿತವಾಗಿ,
ತೆಕ್ಕೆ ಚುಂಬನಾದಿಗಳಿಂದ ಅಮರ್ದಪ್ಪಿ
ಅಸ್ಥಿಗಳು ನುಗ್ಗುನುರಿಯಾಗಿ
ಮನದ ಪರಿಣಾಮ ಹೊರಹೊಮ್ಮಿ
ಪರಮಾನಂದ ಮಹಾಪರಿಣಾಮದ ಸುಗ್ಗಿಯೊಳಗೆ
ಪರವಶಗೊಂಡಿರ್ದೆನು ಅಖಂಡೇಶ್ವರನೆಂಬ ನಲ್ಲನ ಕೂಡಿ. ॥ ೫೯೫ ॥

೮೩೯

ಬಾಯೊಳಗೆ ಬಾಯನಿಕ್ಕಿ
ಎದೆಗೆ ಎದೆಯ ತಕ್ಕೈಸಿ
ಮೈಗೆ ಮೈಯ ಹೊಂದಿಸಿ ಕೂಡಿದ
ಅಖಂಡೇಶ್ವರನ ಸುಖವು
ಜೇನುಸಕ್ಕರ ಸವಿದಂತಾಯಿತ್ತು ನೋಡಿರವ್ವಾ. ॥ ೫೯೬ ॥

೮೪೦

ಕೇಳಿರೇ ಕೇಳಿರವ್ವಾ ಕೆಳದಿಯರೆಲ್ಲ,
ಮನಕ್ಕೆ ಮನೋಹರವಾದ,
ಕಂಗಳಿಗೆ ಮಂಗಳವಾದ,
ಶೃಂಗಾರದ ಸೊಬಗಿನ ನಲ್ಲ ಬಂದು
ಎನ್ನ ತನ್ನೊಳಗೆ ಮಾಡಿಕೊಂಡ
ಒಂದು ವಿಪರೀತವ ಹೇಳುವೆ
ಚಿತ್ತವೊಲಿದು ಲಾಲಿಸಿರವ್ವಾ.
ಎನ್ನ ತನುವಿನೊಳಗೆ ತನ್ನ ತನುವನಿಟ್ಟು
ಮಹಾತನುವಮಾಡಿದ.
ಎನ್ನ ಮನದೊಳಗೆ ತನ್ನ ಮನವನಿಟ್ಟು
ಘನಮನವಮಾಡಿದ.
ಎನ್ನ ಪ್ರಾಣದೊಳಗೆ ತನ್ನ ಪ್ರಾಣವನಿಟ್ಟು
ಚಿತ್‌ಪ್ರಾಣವಮಾಡಿದ.
ಎನ್ನ ಜೀವದೊಳಗೆ ತನ್ನ ಜೀವವನಿಟ್ಟು
ಸಂಜೀವನವಮಾಡಿದ.
ಎನ್ನ ಭಾವದೊಳಗೆ ತನ್ನ ಭಾವವನಿಟ್ಟು
ಸದ್ಭಾವವಮಾಡಿದ.
ಎನ್ನ ಕರಣಂಗಳೊಳಗೆ ತನ್ನ ಕರಣಂಗಳನಿಟ್ಟು

ಚಿತ್‌ಕರಣಂಗಳವಮಾಡಿದ.
ಎನ್ನ ಇಂದ್ರಿಯಂಗಳೊಳಗೆ ತನ್ನ ಇಂದ್ರಿಯಂಗಳನಿಟ್ಟು,
ಚಿದಿಂದ್ರಿಯಂಗಳವಮಾಡಿದ.
ಎನ್ನ ವಿಷಯಂಗಳೊಳಗೆ ತನ್ನ ವಿಷಯಂಗಳನಿಟ್ಟು,
ನಿರ್ವಿಷಯಂಗಳ ಮಾಡಿದನಾಗಿ,
ಅಖಂಡೇಶ್ವರನೆಂಬ ನಲ್ಲನೊಳಗೆ
ಕರ್ಪುರವೆಣ್ಣು ಉರಿಪುರುಷನನಪ್ಪಿ
ರೂಪಳಿದಂತಾದೆನು ಕೇಳಿರವ್ವಾ. || ೫೯೭ ||

## ೮೪೧

ನಿಚ್ಚ ನಿಚ್ಚ ಶರಣಂಗೆ ಹಬ್ಬ ಆವಾಸಗಿರಿ ತಾನೆ ಕಾಣಿರೊ.
ನಿಚ್ಚ ನಿಚ್ಚ ಶರಣಂಗೆ ಶುದ್ಧಶಿವರಾತ್ರಿ ತಾನೆ ಕಾಣಿರೊ.
ನಿಚ್ಚ ನಿಚ್ಚ ಶರಣಂಗೆ ಜಾತ್ರೆ ಉತ್ಸವ ತಾನೆ ಕಾಣಿರೊ.
ನಿಚ್ಚ ನಿಚ್ಚ ಶರಣಂಗೆ ಪರಮಾನಂದದೋಕುಳಿ ತಾನೆ ಕಾಣಿರೊ.
ನಿಚ್ಚ ನಿಚ್ಚ ನಮ್ಮ ಅಖಂಡೇಶ್ವರನ ಶರಣಂಗೆ
ಒಸಗೆ ವೈಭವಂಗಳು ತಾನೆ ಕಾಣಿರೊ. || ೫೯೮ ||

## ೮೪೨

ಶರಣನ ಚರಣದಲ್ಲಿ ನಡೆಪರುಷ.
ಶರಣನ ಕರದಲ್ಲಿ ಹಸ್ತಪರುಷ.
ಶರಣನ ಜಿಹ್ವೆಯಲ್ಲಿ ರುಚಿಪರುಷ.
ಶರಣನ ನೇತ್ರದಲ್ಲಿ ನೋಟಪರುಷ.
ನಮ್ಮ ಅಖಂಡೇಶ್ವರನ ಶರಣನ ಮನದಲ್ಲಿ
ಭಾವಪರುಷವಿರ್ಪುದು ನೋಡಿರೊ. || ೫೯೯ ||

## ೮೪೩

ಶರಣನ ಕಂಗಳೆ ಕಾಮಧೇನುವಿನ ಹಿಂಡು.
ಶರಣನ ಹಸ್ತಂಗಳೆ ಕಲ್ಪವೃಕ್ಷದ ವನ.
ಶರಣನ ಪಾದಂಗಳೆ ಚಿಂತಾಮಣಿಯ ರಾಶಿ.
ಶರಣನ ಬಾಯೆ ಸಂಜೀವನದ ಬಣವೆ.
ನೀವೊಲಿದ ಶರಣನ ಮನವೆ
ಪರುಷದ ಪರ್ವತವು ನೋಡಾ ಅಖಂಡೇಶ್ವರಾ. || ೬೦೦ ||

## ೮೪೪

ಎಲೆ ಶಿವನೆ ನಿಮ್ಮಲ್ಲಿ ನಾನೊಂದ ಬೇಡಿಕೊಂಬೆನು.
ನೀವೊಲಿದು ಕರುಣಿಸಯ್ಯಾ ಎನಗೆ.

ನಿಮ್ಮ ಶರಣರ ಸಚ್ಚರಿತ್ರದ ಘನಮಹಿಮೆಯ ಕೇಳುವಲ್ಲಿ
ಎನ್ನ ಹೃದಯಕಮಲವು ಅರಳುವಂತೆ ಮಾಡಯ್ಯಾ.
ನಿಮ್ಮ ಶರಣರ ನಿಜಮೂರ್ತಿಗಳ ಕಂಡಲ್ಲಿ
ಎನ್ನ ಸರ್ವಾಂಗವು ಗುಡಿಗಟ್ಟಿ ಕಂಗಳಲ್ಲಿ ಪರಿಣಾಮಜಲವುಕ್ಕಿ
ಅವರ ಚರಣಕಮಲದ ಮೇಲೆ ಸುರಿವಂತೆ ಮಾಡಯ್ಯಾ.
ನಿಮ್ಮ ಶರಣರು ಶಿವಾನುಭವಸಂಪಾದನೆಯ ಮಾಡುವಲ್ಲಿ
ಎನ್ನ ಕರ್ಣದ್ವಯದಲ್ಲಿ ಸಕಲಕರಣಂಗಳು
ನಾ ಮುಂಚೆ ತಾ ಮುಂಚೆ ಎಂದಾಗ್ರಹಿಸುವಂತೆ ಮಾಡಯ್ಯಾ.
ನಿಮ್ಮ ನಿಜವನಿಂಬುಗೊಂಡ ಶರಣರ ಸಂಗದಲ್ಲಿ
ಪರಹಿಂಗದಿರುವಂತೆ ಮಾಡಯ್ಯಾ ಎನ್ನ ಅಖಂಡೇಶ್ವರಾ. || ೬೦೧ ||

೮೪೫

ಅಂಗಕ್ಕೆ ಆಚಾರವೆ ಚೆಲುವು.
ಮನಕ್ಕೆ ಮಹಾನುಭಾವವೆ ಚೆಲುವು.
ಆತ್ಮಂಗೆ ಅರುಹವೆ ಚೆಲುವು.
ಅಖಂಡೇಶ್ವರನೆಂಬ ನಿಜವಿಂಬುಗೊಂಡವಂಗೆ
ಶರಣರ ಸಂಗವೆ ಚೆಲುವು. || ೬೦೨ ||

೮೪೬

ಶರಣರ ಸಂಗದಿಂದ ತನು ಶುದ್ಧವಪ್ಪುದು ನೋಡಿರೆ.
ಶರಣರ ಸಂಗದಿಂದ ಮನ ನಿರ್ಮಲವಪ್ಪುದು ನೋಡಿರೆ.
ಶರಣರ ಸಂಗದಿಂದ ಸಕಲೇಂದ್ರಿಯಂಗಳು
ಲಿಂಗಮುಖವಪ್ಪುವು ನೋಡಿರೆ.
ನಮ್ಮ ಅಖಂಡೇಶ್ವರನ ಶರಣರ ಸಂಗದಿಂದ
ಮುಂದೆ ಸತ್ಫಲವು ದೊರಕೊಂಬುದು ತಪ್ಪದು ನೋಡಿರೆ. || ೬೦೩ ||

೮೪೭

ಸಕಲ ಗಣಂಗಳು
ತಮ್ಮ ವಚನಾನುಭಾವವೆಂಬ ಪರಮಾಮೃತವನು
ಎನ್ನ ಕರ್ಣವೆಂಬ ಕುರುಹ ಕಟ್ಟಿ ಎರಕವೆರೆಯಲು,
ಅದು ಮನದಲ್ಲಿ ಮೂರ್ತಿಯಾಗಿ
ಒಳಗೆ ಪ್ರಾಣಲಿಂಗವಾಯಿತ್ತು; ಹೊರಗೆ ಇಷ್ಟಲಿಂಗವಾಯಿತ್ತು.
ಎನ್ನೊಳಹೊರಗೆ ಭರಿತವಾದ
ಅಖಂಡೇಶ್ವರನೆಂಬ ಪರಶಿವನು
ನುಡಿಸಿದಂತೆ ನುಡಿದೆನಲ್ಲದೆ
ಎನ್ನ ಮನಕ್ಕೆಬಂದಂತೆ ನುಡಿಯಲಿಲ್ಲ ಕೇಳಿರೆ. || ೬೦೪ ||

೮೪೮

ಅನುಭಾವಿಗಳ ಸಂಗ ಕೀಟಕ ಭ್ರಮರವಾದಂತೆ ಕಾಣಿರೊ.
ಅನುಭಾವಿಗಳ ಸಂಗ ಲೋಹ ಪರುಷವಾದಂತೆ ಕಾಣಿರೊ.
ನಮ್ಮ ಅಖಂಡೇಶ್ವರಲಿಂಗದೊಡನೆ
ನೆರೆದ ಅನುಭಾವಿಗಳ ಸಂಗ
ಕರ್ಪೂರದಜ್ಯೋತಿಯಂತೆ ಕಾಣಿರೊ. ॥ ೬೦೫ ॥

೮೪೯

ಅಗ್ನಿಯ ಸಂಗದಿಂದೆ ಕಾನನ ಕೆಟ್ಟಂತೆ,
ಜ್ಯೋತಿಯ ಸಂಗದಿಂದ ಕತ್ತಲೆ ಕೆಟ್ಟಂತೆ,
ಪರುಷದ ಸಂಗದಿಂದ ಕಬ್ಬಿಣ ಕೆಟ್ಟಂತೆ,
ಲಿಂಗಾನುಭಾವಿಗಳ ಸಂಗದಿಂದೆ
ಎನ್ನ ಹುಟ್ಟು, ಹೊಂದುಗಳು ನಷ್ಟವಾಗಿ
ಕೆಟ್ಟುಹೋದುವು ನೋಡಾ ಅಖಂಡೇಶ್ವರಾ. ॥ ೬೦೬ ॥

೮೫೦

ಕಾಯವೇ ಕೈಲಾಸವಾಗಿ,
ಮನವೇ ಮಹಾಲಿಂಗವಾಗಿ,
ಭಾವವೇ ಅವಿರಳಪುಷ್ಪದ ಪೂಜೆಯಾಗಿ,
ಅಖಂಡ ಪರಿಪೂರ್ಣಜ್ಞಾನದ ಬೆಳಗಿನೊಳಗೆ ಸುಳಿವ
ಮಹಾಶರಣರ ತೋರಿಸಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ. ॥ ೬೦೭ ॥

೮೫೧

ಒಬ್ಬರು ನಡೆದಾಚರಣೆಯಲ್ಲಿ ನಡೆಯರು.
ಒಬ್ಬರು ಹಿಡಿದ ಶೀಲವ ಹಿಡಿಯರು.
ಒಬ್ಬರು ನುಡಿದ ಭಾಷೆಯ ನುಡಿಯರು.
ಅದೇನು ಕಾರಣವೆಂದೊಡೆ :
ತಮ್ಮ ಲಿಂಗಮುಟ್ಟಿ ನಡೆವರು.
ತಮ್ಮ ಲಿಂಗಮುಟ್ಟಿ ಹಿಡಿವರು.
ತಮ್ಮ ಲಿಂಗಮುಟ್ಟಿ ನುಡಿವರು.
ಇದು ಕಾರಣ.
ಅಖಂಡೇಶ್ವರಾ, ನಿಮ್ಮ ಶರಣರು ಪರಮ ಸ್ವತಂತ್ರಶೀಲರು. ॥ ೬೦೮ ॥

೮೫೨

ಶೀಲವಂತ ಶೀಲವಂತರೆಂದು
ಶೀಲಸಂಪಾದನೆಯ ಮಾಡುವ ಕರ್ಮಿಗಳನೇನೆಂಬೆನಯ್ಯಾ !

ಗುರುಭಕ್ತಿಯಿಂದೆ ತನುಶುದ್ಧವಾಗಲಿಲ್ಲ.
ಲಿಂಗಭಕ್ತಿಯಿಂದೆ ಮನಶುದ್ಧವಾಗಲಿಲ್ಲ.
ಜಂಗಮದಾಸೋಹದಿಂದೆ ಧನಶುದ್ಧವಾಗಲಿಲ್ಲ.
ಸಟೆಯ ಸಂಸಾರಶರಧಿಯೊಳಗೆ ಮುಳುಗಿ
ಕುಟಿಲವ್ಯಾಪಾರವನಂಗೀಕರಿಸಿ,
ನಾವು ದಿಟದ ಶೀಲವಂತರೆಂದು ನುಡಿದುಕೊಂಬ
ಘಟಿಂಗ ಭಂಡರ ವಿಧಿ ಎಂತಾಯಿತ್ತೆಂದರೆ,
ಹೆಂಡದ ಮಡಕೆಗೆ ವಿಭೂತಿಮುಂಡಲವ ಬರೆದಂತಾಯಿತ್ತು
ಕಾಣಾ ಅಖಂಡೇಶ್ವರಾ. || ೬೦೯ ||

೮೫೩

ಶಿವನೆ ಗುರುವೆಂದು ಗುರುವಿಂಗೆ ತನುವನರ್ಪಿಸಿ,
ಶಿವನೆ ಲಿಂಗವೆಂದು ಲಿಂಗಕ್ಕೆ ಮನವನರ್ಪಿಸಿ,
ಶಿವನೆ ಜಂಗಮವೆಂದು ಜಂಗಮಕ್ಕೆ ಧನವನರ್ಪಿಸಿ,
ಆ ಗುರುಲಿಂಗಜಂಗಮದ ಘನಪ್ರಸಾದವ ಪಡೆದು
ನಿಜಮುಕ್ತಿಯನೈದಲರಿಯದೆ,
ನನ್ನ ಶೀಲ ಹೆಚ್ಚು ತನ್ನ ಶೀಲ ಹೆಚ್ಚೆಂದು
ಕುಲಸೂತಕ ಛಲಸೂತಕದಿಂದೆ
ಒಬ್ಬರನೊಬ್ಬರು ಹಳಿದಾಡುವ
ದುಃಶೀಲವಂತರ ಮೆಚ್ಚುವನೆ ನಮ್ಮ ಅಖಂಡೇಶ್ವರ. || ೬೧೦ ||

೮೫೪

ಶೀಲ ಶೀಲವೆಂದು ನುಡಿವುತಿರ್ಪರೆಲ್ಲರು.
ಶೀಲದ ಹೊಲಬನಾರೂ ಅರಿಯರಲ್ಲ.
ಕೆರೆ ಬಾವಿ ಹಳ್ಳ ಕೊಳ್ಳ ಹೊಳೆಗಳ ನೀರ ಬಳಸದಿರ್ದಡೆ ಶೀಲವೆ ?
ಕೊಡಕ್ಕೆ ಪಾವಡವ ಹಾಕಿ
ಚಿಲುಮೆಯ ಶೀತಳವ ತಂದಡೆ ಶೀಲವೆ ?
ಒಳ್ಳೆ ಭಂಗಿ ಉಳ್ಳೆ ನುಗ್ಗೆಯ ಬಿಟ್ಟಡೆ ಶೀಲವೆ ?
ಬೆಳೆದ ಬೆಳೆಸು ಕಾಯಿಹಣ್ಣುಗಳ ಬಿಟ್ಟಡೆ ಶೀಲವೆ ?
ಉಪ್ಪು ಎಣ್ಣೆ ತುಪ್ಪ ಹಾಲು ಇಂಗು ಮೆಣಸು
ಅಡಿಕೆ ಎಲೆಗಳ ಬಿಟ್ಟಡೆ ಶೀಲವೆ ?
ಪರಪಾಕವ ಬಿಟ್ಟು, ಸ್ವಯಪಾಕದಲ್ಲಿರ್ದಡೆ ಶೀಲವೆ ? ಅಲ್ಲಲ್ಲ.
ಭವಿಕಾಣಬಾರದಂತಿರ್ದಡೆ ಶೀಲವೆ ? ಅಲ್ಲಲ್ಲ.
ಅದೇನು ಕಾರಣವೆಂದೊಡೆ :
ಇಂತಿವೆಲ್ಲವು ಹೊರಗಣ ವ್ಯವಹಾರವು.

ಇನ್ನು ಅಂತರಂಗದ ಅರಿಷಡ್ವರ್ಗಂಗಳೆಂಬ ಛವಿಯ ಕಳೆಯಲಿಲ್ಲ,
ಮಾಯಾಮೋಹವೆಂಬ ಒಳ್ಳೆ ಛಂಗಿ ಉಳ್ಳೆ ನುಗ್ಗೆಯ ಬಿಡಲಿಲ್ಲ,
ಸಂಸಾರವಿಷಯರಸವೆಂಬ ಹಳ್ಳ ಕೊಳ್ಳ ಕೆರೆ ಬಾವಿಗಳ ನೀರ ನೀಗಲಿಲ್ಲ,
ಅಷ್ಟಮದಂಗಳೆಂಬ ಉಪ್ಪು ಎಣ್ಣೆ ತುಪ್ಪ ಹಾಲು
ಇಂಗು ಮೆಣಸು ಅಡಿಕೆ ಬೆಲ್ಲಗಳ ಬಿಡಲಿಲ್ಲ,
ಸಕಲ ಕರಣಂಗಳೆಂಬ ಬೆಳಸು ಫಲಂಗಳ ಬಿಡಲಿಲ್ಲ,
ಮನವೆಂಬ ಕೊಡಕ್ಕೆ ಮಂತ್ರವೆಂಬ ಪಾವಡವ ಮುಚ್ಚಿ
ಚಿತ್‌ಕೋಣವೆಂಬ ಚಿಲುಮಿಯಲ್ಲಿ ಚಿದಾಮೃತವೆಂಬ ಶೀತಳವ ತಂದು
ಚಿನ್ಮಯಲಿಂಗಕ್ಕೆ ಅಭಿಷೇಕವ ಮಾಡಲಿಲ್ಲ,
ಇಂತೀ ಅಂತರಂಗದ ಪದಾರ್ಥಂಗಳ ಬಿಟ್ಟು,
ಮುಕ್ತಿಯ ಪಡೆವೆನೆಂಬ ಯುಕ್ತಿಗೇಡಿಗಳಿಗೆ
ಭವಬಂಧನಂಗಳು ಹಿಂಗಲಿಲ್ಲ, ಜನನಮರಣಂಗಳು ಜಾರಲಿಲ್ಲ,
ಸಂಸಾರದ ಮಾಯಾಮೋಹವ ನೀಗಲಿಲ್ಲ.
ಇಂತಪ್ಪ ಅಜ್ಞಾನಜೀವಿಗಳ ವಿಧಿಯೆಂತಾಯಿತ್ತೆಂದಡೆ :
ಹುತ್ತದೊಳಗಣ ಹಾವ ಕೊಲುವೆನೆಂದು ಮೇಲೆ ಹುತ್ತವ ಬಡಿದ
ಅರಮರುಳನಂತಾಯಿತ್ತು ನೋಡಾ ಅಖಂಡೇಶ್ವರಾ. ॥ ೬೧೧ ॥

**೮೫೫**

ಇಷ್ಟಲಿಂಗದಲ್ಲಿ ತನುವನಡಗಿಸಿ,
ಪ್ರಾಣಲಿಂಗದಲ್ಲಿ ಮನವನಡಗಿಸಿ,
ಭಾವಲಿಂಗದಲ್ಲಿ ಜೀವನನಿಕ್ಷೇಪಿಸಿ,
ಆ ಇಷ್ಟ, ಪ್ರಾಣ ಭಾವಲಿಂಗವು ಒಂದಾದ
ಮಹಾಘನ ಪರಬ್ರಹ್ಮದಲ್ಲಿ ತಾನೆಂಬ ನೆನಹಡಗಿ,
ದ್ವಂದ್ವಕರ್ಮಂಗಳ ನೀಗಿ,
ಆ ಪರಿಪೂರ್ಣ ಪರಬ್ರಹ್ಮವೆ ತಾನಾದುದು
ಮಹಾಶೀಲವಯ್ಯಾ ಅಖಂಡೇಶ್ವರಾ. ॥ ೬೧೨ ॥

**೮೫೬**

ತನು ಗುರುವಾದುದೆ ಶೀಲ.
ಮನ ಲಿಂಗವಾದುದೆ ಶೀಲ.
ಧನ ಜಂಗಮವಾದುದೆ ಶೀಲ.
ಅಖಂಡೇಶ್ವರನೆಂಬ ಪರಶಿವನು
ತಾನೆ ಆಗಿ ಸುಳಿವುದೆ ಮಹಾಶೀಲ ನೋಡಿರಣ್ಣಾ. ॥ ೬೧೩ ॥

**೮೫೭**

ಶಿವನ ಕೂಡಿರ್ಪ ಶರಣರ ಶೀಲವನೇನೆಂಬೆನಯ್ಯಾ !
ನೀರು ನೀರ, ಕ್ಷೀರವು ಕ್ಷೀರ ಬೆರೆದಂತೆ.

ತನುಮನಧನಂಗಳು ಗುರುಲಿಂಗಜಂಗಮದಲ್ಲಿ ಭರಿತವಾದ
ಮಹಾಶರಣರ ನೀವೇ ಬಲ್ಲಿರಯ್ಯಾ ಅಖಂಡೇಶ್ವರಾ. ‖ ೬೧೪ ‖

೮೯೮

ಶರಣನಾದಡೆ ಮುರಿದ ಬಂಗಾರದ
ಬೆಳಗಾರದಲ್ಲಿ ಬೆಚ್ಚಂತಿರಬೇಕು ಲಿಂಗದಲ್ಲಿ.
ಶರಣನಾದಡೆ ಶುಭ್ರವಸ್ತ್ರಕ್ಕೆ ಅಚ್ಚೊತ್ತಿದಂತಿರಬೇಕು ಲಿಂಗದಲ್ಲಿ.
ಶರಣನಾದಡೆ ಕರಕುಕಟ್ಟಿರದ
ಲೋಹದ ಪುತ್ಥಳಿಯಂತಿರಬೇಕು ಲಿಂಗದಲ್ಲಿ.
ಇಂತೀ ಸಮರಸಭಾವವನರಿಯದೆ
ಹುಸಿಹುಂಡನಂತೆ ವೇಷವ ಧರಿಸಿ
ಗ್ರಾಸಕ್ಕೆ ತಿರುಗುವ ವೇಷಗಳ್ಳರ
ಎನಗೊಮ್ಮೆ ತೋರದಿರಯ್ಯಾ ಅಖಂಡೇಶ್ವರಾ. ‖ ೬೧೫ ‖

೮೯೯

ತಾಮಸಗುಣಂಗಳಲ್ಲಿ ಬಿದ್ದು,
ತ್ವರಿತದ ವಿಷಯದಲ್ಲಿ ಹರಿದಾಡಿ,
ಭವಜಾಲದಲ್ಲಿ ಸತ್ತು ಹುಟ್ಟುವಾತ
ಗುರುಸ್ಥಲಕ್ಕೆ ಸಲ್ಲ, ಚರಸ್ಥಲಕ್ಕೆ ಸಲ್ಲ, ಪರಸ್ಥಲಕ್ಕೆ ಸಲ್ಲ.
ಗುರುಸ್ಥಲವೆಂದಡೆ ಘನಲಿಂಗಸ್ಥಲವು.
ಚರಸ್ಥಲವೆಂದಡೆ ಅತೀತಸ್ಥಲವು.
ಪರಸ್ಥಲವೆಂದಡೆ ವಿರಕ್ತಿಸ್ಥಲವು.
ಇಂತೀ ತ್ರಿವಿಧಸ್ಥಲದ ನಿರ್ಣಯವ ಬಲ್ಲಾತನೆ
ಗುರುಸ್ಥಲಕ್ಕೆ ಯೋಗ್ಯನೆಂಬೆನು ;
ಚರಸ್ಥಲಕ್ಕೆ ಯೋಗ್ಯನೆಂಬೆನು ;
ಪರಸ್ಥಲಕ್ಕೆ ಯೋಗ್ಯನೆಂಬೆನು.
ಇಂತೀ ತ್ರಿವಿಧನಿರ್ಣಯವನರಿಯದ
ತ್ರಿವಿಧಮಲದಲ್ಲಿ ಭಂಗಿತರಾದವರ
ಎನಗೊಮ್ಮೆ ತೋರದಿರಯ್ಯಾ
ಅಖಂಡೇಶ್ವರಾ ನಿಮ್ಮ ಧರ್ಮ. ‖ ೬೧೬ ‖

೯೦೦

ಗುರುಸ್ಥಲದ ಗಂಭೀರವಸ್ತುವ ಕೂಡಬಲ್ಲಡೆ
ಗುರುಸ್ಥಲದವರೆಂಬೆನು.
ಚರಸ್ಥಲದ ಚಿನ್ಮಯಶಿವನ ಕೂಡಬಲ್ಲಡೆ

ಚರಸ್ಥಲದವರೆಂಬೆನು.
ಪರಸ್ಥಲದ ಪರಾತ್ಪರ ಪರಬ್ರಹ್ಮವ ಕೂಡಬಲ್ಲಡೆ
ಪರಸ್ಥಲದವರೆಂಬೆನು.
ಇಂತೀ ಭೇದವನರಿಯದೆ
ಹರನ ವೇಷವ ಧರಿಸಿ ನರನ ಓಲೈಸುವ
ಬರಿ ಮೂರ್ಖರನೇನೆಂಬೆನಯ್ಯಾ ಅಖಂಡೇಶ್ವರಾ ? ॥ ೬೧೭ ॥

೮೬೧

ಘನಲಿಂಗದೇವರು ಘನಲಿಂಗದೇವರೆಂದು
ನುಡಿದುಕೊಂಬ ಬಿನುಗು ಹೊಲೆಯರನೇನೆಂಬೆನಯ್ಯಾ !
ಹೊಟ್ಟೆಯಕಿಚ್ಚಿಗೆ ಒಟ್ಟಿದ ಬಣವೆಯ ಸುಟ್ಟಾತ
ಘನಲಿಂಗದೇವರೆ ?
ಕೊಟ್ಟಾತ ಒಳಗು, ಕೊಡದಾತ ಹೊರಗೆಂದು
ಕಟ್ಟಿದಲಿಂಗವ ಮುಟ್ಟಿ ಮುಟ್ಟಿ ಹರಿವಾತ ಘನಲಿಂಗದೇವರೆ ?
ಒಡೆಯನ ವೇಷವ ಧರಿಸಿ
ಒಡಲ ಕಿಚ್ಚಿಗೆ ತುಡುಗನಾಯಂತೆ
ಕಡಿದು ಕನ್ನವನಿಕ್ಕುವಾತ ಘನಲಿಂಗದೇವರೆ ?
ಅಹುದಾದುದನಲ್ಲಮಾಡಿ ಅಲ್ಲವಾದುದ ಅಹುದುಮಾಡಿ
ಅಧರ್ಮ ಅನ್ಯಾಯದಲ್ಲಿ ಹೊಡೆದಾಡಿ
ಹೊಲಬುದಪ್ಪಿ ಮುಡಿದುಹೋಗುವ
ಬಾಯಬಡಕ ಭ್ರಷ್ಟಮಾದಿಗರ ಘನಲಿಂಗದೇವರೆಂದಡೆ
ಅಘೋರನರಕ ತಪ್ಪದಯ್ಯಾ ಅಖಂಡೇಶ್ವರಾ ? ॥ ೬೧೮ ॥

೮೬೨

ಸತ್ಯಾಸತ್ಯವೆಂದು ವಿವರಿಸಿ ತಿಳಿದು
ಅಸತ್ಯವ ಕಳೆದು ಸತ್ಯವ ಸಾಧಿಸಬಲ್ಲಡೆ
ಘನಲಿಂಗದೇವರೆಂಬೆನು.
ನಿತ್ಯಾನಿತ್ಯವೆಂದು ವಿವರಿಸಿ ತಿಳಿದು
ಅನಿತ್ಯವ ಕಳೆದು ನಿತ್ಯವ ಹಿಡಿಯಬಲ್ಲಡೆ
ಘನಲಿಂಗದೇವರೆಂಬೆನು.
ಪುಣ್ಯಪಾಪವೆಂದು ವಿವರಿಸಿ ತಿಳಿದು
ಪಾಪವ ಕಳೆದು ಪುಣ್ಯವ ಗ್ರಹಿಸಬಲ್ಲಡೆ
ಘನಲಿಂಗದೇವರೆಂಬೆನು.
ಧರ್ಮಕರ್ಮವೆಂದು ವಿವರಿಸಿ ತಿಳಿದು
ಕರ್ಮವ ಕಳೆದು ಧರ್ಮವ ಬಿಡದಿರಬಲ್ಲಡೆ

ಘನಲಿಂಗದೇವರೆಂಬೆನು.
ಆಚಾರ ಅನಾಚಾರವೆಂದು ವಿವರಿಸಿ ತಿಳಿದು
ಅನಾಚಾರವ ಕಳೆದು ಆಚಾರಸಂಪನ್ನನಾಗಬಲ್ಲಡೆ
ಘನಲಿಂಗದೇವರೆಂಬೆನು.
ಇಂತೀ ಉಭಯದ ನ್ಯಾಯವನರಿಯದೆ
ಸಟೆಯನೆ ದಿಟವ ಮಾಡಿ ದಿಟವನೆ ಸಟೆಯ ಮಾಡಿ
ಘಟವ ಹೊರೆವ ಕುಟಿಲ ಕುಹಕರ
ತುಟಿಯತನಕ ಮೂಗಕೊಯ್ದು
ಕಟವಾಯ ಸೀಳಿ ಕನ್ನಡಿಯ ತೋರಿ
ಕಷ್ಟಜನ್ಮದಲ್ಲಿ ಹುಟ್ಟಿಸದೆ ಬಿಡುವನೆ ನಮ್ಮ ಅಖಂಡೇಶ್ವರ ? || ೬೧೯ ||

೮೬೩

ಪರಧನವ ಹಿಡಿಯದೆ,
ಪರಸ್ತ್ರೀಯರ ಮುಟ್ಟದೆ,
ಪರದೈವವ ಪೂಜಿಸದೆ,
ಪರಹಿಂಸೆಯ ಮಾಡದೆ,
ಪರಲೋಕದ ಫಲಪದವ ಬಯಸದೆ,
ಪರನಿಂದೆಯ ಕೇಳದೆ,
ಗರ್ವಾಹಂಕಾರದಲ್ಲಿ ಬೆರೆಯದೆ,
ಕರಣಾದಿ ಗುಣಂಗಳಲ್ಲಿ ಹರಿಯದೆ,
ಗುರುಭಕ್ತಿ ಲಿಂಗಪೂಜೆ
ಜಂಗಮದಾಸೋಹವ ಮರೆಯದೆ,
ಸತ್ಯಸದಾಚಾರವ ತೊರೆಯದೆ,
ಸರ್ವಾಚಾರಸಂಪನ್ನನಾದ ಮಹಾತ್ಮನೆ
ಅನಾದಿಗುರುಪಟ್ಟಕ್ಕೆ ಯೋಗ್ಯನು.
ಆ ಮಹಾತ್ಮನೆ ಪರಮಘನಲಿಂಗದೇವರೆಂಬೆನು
ಆ ಮಹಾತ್ಮನೆ ಭವಕ ಘನವಾದ
ಮಹಾಘನ ಪರಶಿವಮೂರ್ತಿಯೆಂಬೆನಯ್ಯಾ ಅಖಂಡೇಶ್ವರಾ. || ೬೨೦ ||

೮೬೪

ಮಹಾಂತನ ಕೂಡಿದ ದೇವರುಗಳೆಂಬ
ಭ್ರಾಂತಿಗುಣದ ಭ್ರಷ್ಟರನೇನೆಂಬೆನಯ್ಯಾ.
ಮಹಾಂತೆಂದಡೆ,
ಗುರುಮಹಾತ್ಮೆ, ಲಿಂಗಮಹಾತ್ಮೆ,
ಜಂಗಮಮಹಾತ್ಮೆ, ಪಾದೋದಕಮಹಾತ್ಮೆ,

ಪ್ರಸಾದಮಹಾತ್ಮೆ, ವಿಭೂತಿಮಹಾತ್ಮೆ,
ರುದ್ರಾಕ್ಷಿಮಹಾತ್ಮೆ, ಮಂತ್ರಮಹಾತ್ಮೆ,
ಎಂಬ ಅಷ್ಟಾವರಣದ ಘನಮಹಾತ್ಮೆಯನರಿದು,
ಅಷ್ಟಾವರಣವೆ ಅಂಗವಾಗಿ, ಪಂಚಾಚಾರವೆ ಪ್ರಾಣವಾಗಿ,
ಅನಂತ ಸ್ಥಳಕುಳಂಗಳನೊಳಕೊಂಡು
ಪರಬ್ರಹ್ಮವ ಕೂಡುವ
ಸಮರಸಭಾವ ಸಕೀಲದ ಭೇದವನರಿಯದೆ,
ಆಶಾಕ್ಲೇಶಂಗಳಲ್ಲಿ ಕಟ್ಟುವಡೆದು
ಕಾಸು ವಿಷಯ ಮಠ ಮನೆಗೆ ಬಡಿದಾಡುವ ಭಾಷೆಭ್ರಷ್ಟರಿಗೆ
ಮಹಾಂತಿನ ಘನವಿನ್ನೆಲ್ಲಿಯದೊ ?
ಇಂತಪ್ಪ ಮಹಾಂತಿನ ಅರುಹು ಕುರುಹಿನ ಘನವನರಿಯದೆ
ನಾನು ಮಹಾಂತಿನ ಕೂಡಿದ ದೇವರೆಂದು
ಹೊರಗೆ ಆಡಂಬರ ವೇಷವ ತಾಳಿ ಜಡೆಯ ಬಿಟ್ಟಡೇನು ?
ಆಲದ ಮರಕ್ಕೆ ಬೇರಿಳಿದಂತೆ.
ಸರ್ವಾಂಗಕ್ಕೆ ಭಸ್ಮವ ಹೂಸಿದಡೇನು ?
ಚಪ್ಪರದ ಮೇಲೆ ಕಗ್ಗುಂಬಳಕಾಯಿ ಬಿದ್ದಂತೆ.
ಸ್ಥಾನ ಸ್ಥಾನಕ್ಕೆ ರುದ್ರಾಕ್ಷಿಯನಲಂಕರಿಸಿದಡೇನು ?
ಹೇರಂಡಲಗಿಡ ಗೊನೆಯ ಬಿಟ್ಟಂತೆ ಕಾಣಾ ಅಖಂಡೇಶ್ವರಾ. || ೬೧ ||

**೮೬೫**

ಅಂತರಂಗದಲ್ಲಿ ಅರುಹಿನ ಶುದ್ಧಿಯನರಿಯದೆ,
ಬಹಿರಂಗದಲ್ಲಿ ಕಂಥೆ ಕರ್ಪರ ದಂಡ ಕಮಂಡಲು
ಭಸ್ಮದಗುಂಡಿಗೆ ಎಂಬ ಪಂಚಮುದ್ರೆಗಳ ಧರಿಸಿ,
ಧರೆಯ ಮಂಡಲದೊಳಗೆ ಚರಿಸುವ
ಅಣ್ಣಗಳ ಕಂಡು ಬೆರಗಾದೆನಯ್ಯಾ.
ಅದೇನು ಕಾರಣವೆಂದೊಡೆ :
ಪುರಜನರ ಮೆಚ್ಚಿಸುವೆನೆಂದು ಜಾತಿಕಾರನು
ಓತು ವೇಷವ ಧರಿಸಿ ಒಡಲ ಹೊರೆವಂತೆ,
ಕೊಡುಕೊಂಬುವ ಭಕ್ತನ ಮೆಚ್ಚಿಸುವೆನೆಂದು
ವೃಷಭನ ವೇಷವ ಧರಿಸಿ, ಒಡಲ ಕಕ್ಕುಲತೆಗೆ ತಿರುಗುವ
ಕಡುಪಾತಕ ಜಡಜೀವಿಗಳ ಮುಖವ
ನೋಡಲಾಗದಯ್ಯಾ ಅಖಂಡೇಶ್ವರಾ. || ೬೨ ||

**೮೬೬**

ಅನುಪಮಲಿಂಗದಲ್ಲಿ ಅಂಗ ಮನ ಪ್ರಾಣಂಗಳನಡಗಿಸಿ
ಅವಿರಳ ಸಮರಸದಿಂದಿರ್ಪ ಮಹಾಶರಣನ

ಅರುಹಿನ ಪಂಚಮುದ್ರೆಗಳು ಆವುವೆಂದಡೆ :
ಸರ್ವಾಚಾರಸಂಪತ್ತೆಂಬ ಕಂಥೆ, ಅನಾದಿಯೆಂಬ ಕರ್ಪರ,
ಅಖಂಡವೆಂಬ ದಂಡ, ಅಜಾಂಡವೆಂಬ ಕಮಂಡಲು,
ಪರಿಪೂರ್ಣಮಹಾಜ್ಞಾನವೆಂಬ ಭಸ್ಮದಗುಂಡಿಗೆ,
ಇಂತೀ ಅರುಹಿನ ಪಂಚಮುದ್ರೆಗಳ ಅಂತರಂಗದಲ್ಲಿ ಧರಿಸಿ
ಹೊರಗೆ ಬಹಿರಂಗದ ಮೇಲೆ ಮುನ್ನಿನ ಮಾರ್ಗಕ್ರಿಯೆಯಂತೆ
ಪಂಚಮುದ್ರೆಗಳ ಧರಿಸಿಕೊಂಡು,
ಮಾಯಾವಿರಹಿತವೆಂಬ ಹಾವಿಗೆಯ ಮೆಟ್ಟಿಕೊಂಡು,
ಅಂಗ ಮನ ಪ್ರಾಣಂಗಳಲ್ಲಿ
ಕ್ಷಮೆ ದಮೆ ಶಾಂತಿ ಸೈರಣೆ ಕರುಣ
ಹರ್ಷಾನಂದವ ತುಂಬಿಕೊಂಡು,
ಲೋಕಪಾವನವ ಮಾಡುತ್ತ ಭಕ್ತಿಭಿಕ್ಷಾಂದೇಹಿಯಾಗಿ ಸುಳಿವ
ಮಹಾಘನ ಪರಮಮಹಾಂತಿನ ಜಂಗಮದ
ಶ್ರೀಪಾದಕ್ಕೆ ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. ॥ ೭೨ ॥

೮೭೭

ನಾದಬಿಂದುಕಳಾತೀತವಾದ ಪರವಸ್ತುವೆ
ಮಹಾಂತು ನೋಡಾ.
ಶ್ರುತಿತತಿಗಸಾಧ್ಯವಾದ ಪರವಸ್ತುವೆ
ಮಹಾಂತು ನೋಡಾ.
ಆದಿ ಮಧ್ಯಾಂತವಿಲ್ಲದ ಪರವಸ್ತುವೆ
ಮಹಾಂತು ನೋಡಾ.
ಉಪಮಾತೀತ ವಾಙ್ಮನಕ್ಕಗೋಚರವಾದ
ಪರವಸ್ತುವೆ ಮಹಾಂತು ನೋಡಾ.
ಇಂತಪ್ಪ ಮಹಾಂತಿನ ಅತೀತ ಘನಮಹಾಜಂಗಮದ
ಶ್ರೀಪಾದವ ತೋರಿಸಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ. ॥ ೭೪ ॥

೮೭೮

ವಿರಕ್ತನೆನಿಸುವಂಗಾವುದು ಚಿಹ್ನವೆಂದೊಡೆ :
ವಿಷಯವಿಕಾರವ ಸುಟ್ಟಿರಬೇಕು.
ಬಯಕೆ ನಿರ್ಬಯಕೆಯಾಗಿರಬೇಕು.
ಸತ್ತ್ವರಜತಮವೆಂಬ ತ್ರೈಗುಣಂಗಳನಿಟ್ಟೊರಸಿರಬೇಕು.
ಅದೆಂತೆಂದೊಡೆ :
''ವಿಕಾರಂ ವಿಷಯಾತ್‌ದೂರಂ ರಕಾರಂ ರಾಗವರ್ಜಿತಂ ।
ತಕಾರಂ ತ್ರೈಗುಣಂ ನಾಸ್ತಿ ವಿರಕ್ತಸ್ಯ ಸುಲಕ್ಷಣಂ ॥''

ಇಂತಪ್ಪ ವಿರಕ್ತನ ಶ್ರೀಪಾದಕ್ಕೆ ನಮೋ ನಮೋ
ಎಂಬೆನಯ್ಯಾ ಅಖಂಡೇಶ್ವರಾ. || ೬೨೫ ||

**೮೭೯**

ವಿರಕ್ತಂಗೆ ಕಾಮಕ್ರೋಧಂಗಳುಂಟೆ ?
ವಿರಕ್ತಂಗೆ ಲೋಭಮೋಹಂಗಳುಂಟೆ ?
ವಿರಕ್ತಂಗೆ ಮದಮತ್ಸರಂಗಳುಂಟೆ ?
ವಿರಕ್ತಂಗೆ ಆಶಾರೋಷಂಗಳುಂಟೆ ?
ವಿರಕ್ತಂಗೆ ಕ್ಲೇಶತಾಮಸಂಗಳುಂಟೆ ?
ವಿರಕ್ತಂಗೆ ದೇಹಪ್ರಾಣಾಭಿಮಾನಂಗಳುಂಟೆ ?
ವಿರಕ್ತಂಗೆ ಇಹಪರದ ತೊಡಕುಂಟೆ ?
ವಿರಕ್ತಂಗೆ ನಾನು ನನ್ನದೆಂಬ ಪಕ್ಷಪಾತವುಂಟೆ ?
ಇಂತೀ ಭೇದವನರಿಯದ ವಿರಕ್ತಂಗೆ
ಎಂತು ಮಚ್ಚುವನಯ್ಯಾ ನಮ್ಮ ಅಖಂಡೇಶ್ವರ ? || ೬೨೬ ||

**೮೭೦**

ಹಲವು ವೇಷವ ಧರಿಸಿ
ಹಲವು ಭಾಷೆಯ ಕಲಿತು
ಹಲವು ದೇಶಕ್ಕೆ ಹರಿದಾಡಿದಡೇನು ?
ಕಾಲಾರಿಯಂತಲ್ಲದೆ ನಿಜವಿರಕ್ತಿಯಿಲ್ಲ ನೋಡಾ.
ಅದೇನು ಕಾರಣವೆಂದೊಡೆ :
ತನುವಿನ ಆಶೆಯಾಮಿಷ ಹಿಂಗದಾಗಿ.
ಊರಾಶ್ರಯವ ಬಿಟ್ಟು ಕಾಡಾಶ್ರಮ ಗಿರಿಗಂಹರದಲ್ಲಿರ್ದಡೇನು ?
ಹಗಲು ಕಣ್ಣುಕಾಣದ ಗೂಗೆಯಂತಲ್ಲದೆ
ನಿಜವಿರಕ್ತಿಯಿಲ್ಲ ನೋಡಾ.
ಅದೇನು ಕಾರಣವೆಂದೊಡೆ :
ಮನದ ಮಾಯವಡಗದಾಗಿ.
ಹಸಿವು ತೃಷೆಯ ಬಿಟ್ಟು ಮಾತನಾಡದೆ ಮೌನವಾಗಿರ್ದಡೇನು ?
ಕಲ್ಲು ಮರ ಮೋಟು ಗುಲ್ಮಂಗಳಂತಲ್ಲದೆ ನಿಜವಿರಕ್ತಿಯಿಲ್ಲ ನೋಡಾ.
ಅದೇನು ಕಾರಣವೆಂದೊಡೆ :
ವಿಷಯವ್ಯವಹಾರ ಹಿಂಗದಾಗಿ.
ನಿದ್ರೆಯ ತೊರೆದು ಎದ್ದು ಕುಳ್ಳಿರ್ದಡೇನು ?
ಕಳ್ಳ ಊರಹೊಕ್ಕು ಉಲುಹು ಅಡಗುವನ್ನಬರ
ಮರೆಯಲ್ಲಿ ಕುಳಿತಂತಲ್ಲದೆ ನಿಜವಿರಕ್ತಿಯಿಲ್ಲ ನೋಡಾ.
ಅದೇನು ಕಾರಣವೆಂದೊಡೆ:

ಅಂತರಂಗದ ಘನಗಂಭೀರ ಮಹಾಬೆಳಗಿನ
ಶಿವಸಮಾಧಿಯನರಿಯದ ಕಾರಣ.
ಇಂತಪ್ಪ ಹೊರವೇಷದ ಡಂಭಕ ಜೊಳ್ಳುಮನದವರ
ವಿರಕ್ತರೆಂದಡೆ ಮಚ್ಚರಯ್ಯ ನಿಮ್ಮ ಶರಣರು ಅಖಂಡೇಶ್ವರಾ. ॥ ೬೯೭ ॥

**೮೭೧**

ಬಹುಕ್ರಿಯೆಯ ನಟಿಸದೆ, ಬಹುಶಾಸ್ತ್ರಕ್ಕೆ ಮುಖವಾಗದೆ,
ಬಹುವ್ಯಾಪಾರದಲ್ಲಿ ತೊಳಲದೆ, ಬಹುಭಾಷಾವಂತನಾಗದೆ,
ಹುಸಿ ಕಳವು ಪರದಾರ ಹಿಂಸೆಗೆ ಚಿತ್ತವೆಳಸದೆ,
ಸುಖದುಃಖಕ್ಕೆ ಚಿಂತಿಸದೆ ನಿಂದೆಸ್ತುತಿಗಳಿಗೆ ಹಿಗ್ಗಿಕುಗ್ಗದೆ,
ಹಿಂದುಮುಂದನೆಣಿಸದೆ, ಹಿರಿಯತನಕ್ಕೆ ಹೋಗದೆ,
ಶಿವಜ್ಞಾನಸಂಪನ್ನನಾಗಿ, ಶಿವಮಂತ್ರಸುಯಿಧಾನಿಯಾಗಿ,
ಶಿವಧ್ಯಾನಪರಾಯಣನಾಗಿ, ಏಕಾಂತವಾಸಿಯಾಗಿ, ಭಿಕ್ಷಾಹಾರಿಯಾಗಿ,
ಅಂಗ ಮನದಾಸೆಯ ಹಿಂದುಳಿದು, ಲಿಂಗದ ನೆನಹು ಮುಂದುಕೊಂಡು,
ಶಿವನಾಣತಿಯಿಂದೆ ಬಂದ ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿ,
ಲಿಂಗದ ನಡೆ, ಲಿಂಗದ ನುಡಿ, ಲಿಂಗದ ನೋಟ
ಸರ್ವಾಂಗದಲ್ಲಿ ಭರಿತವಾಗಿ,
ಕರ್ಪುರವು ಉರಿಯನಪ್ಪಿ ನಿರ್ವಯಲಾದಂತೆ,
ತನುವು ಇಷ್ಟಲಿಂಗವನಪ್ಪಿ
ಮನವು ಪ್ರಾಣಲಿಂಗವನಪ್ಪಿ
ಭಾವವು ಅಖಂಡ ಬಯಲಬ್ರಹ್ಮವನಪ್ಪಿ
ತಾನು ತಾನಾದ ಮಹಾಘನ ಪರಮ ವಿರಕ್ತನ ಶ್ರೀಪಾದಪದ್ಮಕ್ಕೆ
ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. ॥ ೬೯೮ ॥

**೮೭೨**

ಚರಣದೊಳಗೆ ಚರಣವಿಟ್ಟು ನಡೆವ ಭೇದವು
ನಿಮ್ಮ ಶರಣರಿಗಲ್ಲದೆ ಉಳಿದವರಿಗಳವಡದು ನೋಡಾ.
ಕರದೊಳಗೆ ಕರವನಿಟ್ಟು ಮುಟ್ಟುವ ಭೇದವು
ನಿಮ್ಮ ಶರಣರಿಗಲ್ಲದೆ ಉಳಿದವರಿಗಳವಡದು ನೋಡಾ.
ಘ್ರಾಣದೊಳಗೆ ಘ್ರಾಣವನಿಟ್ಟು ವಾಸಿಸುವ ಭೇದವು
ನಿಮ್ಮ ಶರಣರಿಗಲ್ಲದೆ ಉಳಿದವರಿಗಳವಡದು ನೋಡಾ.
ಜಿಹ್ವೆಯೊಳಗೆ ಜಿಹ್ವೆಯನಿಟ್ಟು ರುಚಿಸುವ ಭೇದವು
ನಿಮ್ಮ ಶರಣರಿಗಲ್ಲದ ಉಳಿದವರಿಗಳವಡದು ನೋಡಾ.
ಕಂಗಳೊಳಗೆ ಕಂಗಳನಿಟ್ಟು ನೋಡುವ ಭೇದವು
ನಿಮ್ಮ ಶರಣರಿಗಲ್ಲದೆ ಉಳಿದವರಿಗಳವಡದು ನೋಡಾ.

ಕಿವಿಯೊಳಗೆ ಕಿವಿಯನಿಟ್ಟು, ಕೇಳುವ ಭೇದವು
ನಿಮ್ಮ ಶರಣರಿಗಲ್ಲದೆ ಉಳಿದವರಿಗಳವಡದು ನೋಡಾ.
ಮನದೊಳಗೆ ಮನವನಿಟ್ಟು, ನೆನೆವ ಭೇದವು
ನಿಮ್ಮ ಶರಣರಿಗಲ್ಲದೆ ಉಳಿದವರಿಗಳವಡದು ನೋಡಾ.
ಭಾವದೊಳಗೆ ಭಾವವನಿಟ್ಟು, ಸುಳಿವ ಭೇದವು
ನಿಮ್ಮ ಶರಣ ಸಂಗನಬಸವಣ್ಣ ಪ್ರಭುವಿನ
ಸಂತತಿಗಳಿಗಲ್ಲದೆ ಉಳಿದವರಿಗಳವಡದು ನೋಡಾ ಅಖಂಡೇಶ್ವರಾ. ॥೬೨೯॥

### ೮೭೩

ಎನ್ನ ತನುವೆ ಬಸವಣ್ಣನು.
ಎನ್ನ ಮನವೆ ಚೆನ್ನಬಸವಣ್ಣನು.
ಎನ್ನ ಪ್ರಾಣವ ಪ್ರಭುದೇವರು.
ಎನ್ನ ಸರ್ವಕರಣಂಗಳೆಲ್ಲ ಅಸಂಖ್ಯಾತ–
ಮಹಾಗಣಂಗಳಾಗಿರ್ಪರಾಗಿ,
ಅಖಂಡೇಶ್ವರಾ, ನಿಮ್ಮೊಳಗೆ ನಿಜವು
ಸಾಧ್ಯವಾಯಿತ್ತಯ್ಯಾ ಇಂದೆನಗೆ. ॥ ೬೩೦ ॥

### ೮೭೪

ಬಸವಣ್ಣನೆ ಗುರುವೆನಗೆ,
ಬಸವಣ್ಣನೆ ಲಿಂಗವೆನಗೆ,
ಬಸವಣ್ಣನೆ ಜಂಗಮವೆನಗೆ,
ಬಸವಣ್ಣನೆ ಪಾದೋದಕವೆನಗೆ,
ಬಸವಣ್ಣನೆ ಪ್ರಸಾದವೆನಗೆ,
ಬಸವಣ್ಣನೆ ವಿಭೂತಿಯೆನಗೆ,
ಬಸವಣ್ಣನೆ ರುದ್ರಾಕ್ಷಿಯೆನಗೆ,
ಬಸವಣ್ಣನೆ ಮೂಲಮಂತ್ರವೆನಗೆ,
ಬಸವಣ್ಣನೆ ಅಷ್ಟಾವರಣವೆನಗೆ,
ಬಸವಣ್ಣನೆ ಪಂಚಾಚಾರವೆನಗೆ,
ಬಸವಣ್ಣನೆ ಷಟ್‌ಸ್ಥಲಬ್ರಹ್ಮವೆನಗೆ,
ಬಸವಣ್ಣನೆ ಸರ್ವಾಚಾರಸಂಪತ್ತಾದನಾಗಿ
ಬಸವಣ್ಣನ ಹಾಸಿಕೊಂಡು, ಬಸವಣ್ಣನ ಹೊದ್ದುಕೊಂಡು,
ಬಸವಣ್ಣನ ಸುತ್ತಿಕೊಂಡು, ಬಸವಣ್ಣನ ಧರಿಸಿಕೊಂಡು,
ಬಸವಣ್ಣನ ಚಿದ್‌ಗರ್ಭದೊಳಗೆ ಕುಳ್ಳಿರ್ದು
ನಾನು ಬಸವ ಬಸವ ಬಸವಾ ಎನುತಿರ್ದೆನಯ್ಯಾ ಅಖಂಡೇಶ್ವರಾ. ॥೬೩೧॥

**೮೭೫**

ಬಸವನ ನಾಮವು ಕಾಮಧೇನು ಕಾಣಿರೊ.
ಬಸವನ ನಾಮವು ಕಲ್ಪವೃಕ್ಷ ಕಾಣಿರೊ.
ಬಸವನ ನಾಮವು ಚಿಂತಾಮಣಿ ಕಾಣಿರೊ.
ಬಸವನ ನಾಮವು ಪರುಷದಖಣಿ ಕಾಣಿರೊ.
ಬಸವನ ನಾಮವು ಸಂಜೀವನಮೂಲಿಕೆ ಕಾಣಿರೊ.
ಇಂತಪ್ಪ ಬಸವನಾಮಾಮೃತವು
ಎನ್ನ ಜಿಹ್ವೆಯತುಂಬಿ ಹೊರಸೂಸಿ ಮನವ ತುಂಬಿತ್ತು.
ಆ ಮನವತುಂಬಿ ಹೊರಸೂಸಿ ಸಕಲಕರಣೇಂದ್ರಿಯಂಗಳ ತುಂಬಿತ್ತು.
ಆ ಸಕಲ ಕರಣೇಂದ್ರಿಯಂಗಳ ತುಂಬಿ ಹೊರಸೂಸಿ
ಸರ್ವಾಂಗದ ರೋಮಕುಳಿಗಳನೆಲ್ಲ ವೇಧಿಸಿತ್ತಾಗಿ
ನಾನು ಬಸವಾಕ್ಷರವೆಂಬ ಹಡಗವೇರಿ
ಬಸವ ಬಸವ ಬಸವಾ ಎಂದು
ಭವಸಾಗರವ ದಾಟಿದೆನಯ್ಯಾ ಅಖಂಡೇಶ್ವರಾ. || ೬೩೨ ||

**೮೭೬**

ಇಷ್ಟಲಿಂಗವಾಗಿ ಎನ್ನ ಸ್ಥೂಲತನುವಿಗೆ
ಅರಸನಾಗಿಪ್ಪನಯ್ಯಾ ಬಸವಣ್ಣನು.
ಪ್ರಾಣಲಿಂಗವಾಗಿ ಎನ್ನ ಸೂಕ್ಷ್ಮತನುವಿಗೆ
ಅರಸನಾಗಿಪ್ಪನಯ್ಯಾ ಚೆನ್ನಬಸವಣ್ಣನು.
ಭಾವಲಿಂಗವಾಗಿ ಎನ್ನ ಕಾರಣತನುವಿಗೆ
ಅರಸನಾಗಿಪ್ಪನಯ್ಯಾ ಪ್ರಭುರಾಯನು.
ಇದು ಕಾರಣ,
ಎನಗೆ ರಾಜಯೋಗದ ಮನ್ನಣೆಯವು ದೊರಕಿತಯ್ಯಾ ಅಖಂಡೇಶ್ವರಾ. || ೬೩೩||

**೮೭೭**

ಜಗದ ಮಧ್ಯದಲ್ಲಿ ಶರಣ ಜನಿಸಿದಡೇನು
ಆ ಜಗದ ಸ್ವರೂಪನೆ ? ಅಲ್ಲಲ್ಲ.
ಅದೇನು ಕಾರಣವೆಂದೊಡೆ :
ಕೋಗಿಲೆಯ ತತ್ತಿಯನೊಡೆದು
ಕಾಗೆ ಮರಿಯಮಾಡಿ ಸಲಹಿದಡೇನು
ಅದು ತನ್ನ ಕೋಗಿಲೆಯ ಹಿಂಡ ಕೂಡುವುದಲ್ಲದೆ
ಮರಳಿ ಕಾಗೆಯ ಹಿಂಡ ಬೆರೆವುದೆ ಹೇಳಾ ?
ಲೋಕದ ಮಧ್ಯದಲ್ಲಿ ಅನಾದಿಶರಣನು
ಲೋಕೋಪಕಾರಕ್ಕಾಗಿ ಜನಿಸಿದಡೇನು

ತನ್ನ ಮುನ್ನಿನ ಶಿವತತ್ವವನ ಬೆರೆವನಲ್ಲದೆ
ಮರಳಿ ಲೋಕವ ಬೆರೆಯನು ನೋಡಾ,
ನಿಮ್ಮನರಿದ ಶಿವಜ್ಞಾನಿಶರಣನು ಅಖಂಡೇಶ್ವರಾ. || ೬೩೪ ||

೮೭೮

ಜನನವಿಲ್ಲದ ಶರಣ, ಮರಣವಿಲ್ಲದ ಶರಣ,
ಕಾಲನ ಬಾಧೆಗೆ ಹೊರಗಾದ ಶರಣ, ಕರ್ಮವಿರಹಿತ ಶರಣ,
ಮಾಯಾಮೋಹದ ಬೇರ ಕೊರೆದ ಶರಣ,
ಭವಜಾಲವ ಹರಿದ ಶರಣ,
ಅಖಂಡೇಶ್ವರಾ, ನಿಮ್ಮ ಶರಣನ ಮಹಿಮೆಯ
ನೀವೇ ಬಲ್ಲಿರಲ್ಲದೆ ಉಳಿದ ಕೀಟಕಪ್ರಾಣಿಗಳೆತ್ತ ಬಲ್ಲರಯ್ಯಾ. || ೬೩೫ ||

೮೭೯

ಶರಣನ ತನುವೆ ಕೈಲಾಸ ತಾನೆ ನೋಡಾ.
ಶರಣನ ಮನವೆ ಸಾಕ್ಷಾತ್ ಪರಶಿವಲಿಂಗವು ತಾನೆ ನೋಡಾ.
ಶರಣನ ಕರಣಂಗಳೆಲ್ಲ ಸಕಲಪ್ರಮಥಗಣಂಗಳು ತಾನೆ ನೋಡಾ.
ನಮ್ಮ ಅಖಂಡೇಶ್ವರನ ಚಾರಿತ್ರದಲ್ಲಿ ಸುಳಿವ
ಶರಣನ ಸುಳುಹೆಲ್ಲ ಜಗತ್‌ಪಾವನವು ತಾನೆ ನೋಡಾ. || ೬೩೬ ||

೮೮೦

ಶರಣ ಗಮನಿಯಾದಡೆ ಕಿರಿದೆಂಬರು,
ಶರಣ ನಿರ್ಗಮನಿಯಾದಡೆ ಹಿರಿದೆಂಬರು,
ನಾವಿದನರಿಯೆವಯ್ಯಾ.
ಶರಣ ಆಶ್ರಮವಂತನಾದಡೆ ಕಿರಿದೆಂಬರು,
ಶರಣ ನಿರಾಶ್ರಮವಂತನಾದಡೆ ಹಿರಿದೆಂಬರು,
ನಾವಿದನರಿಯೆವಯ್ಯಾ
ಶರಣ ಸರ್ವವ್ಯಾಪಾರಿಯಾದಡೆ ಕಿರಿದೆಂಬರು,
ಶರಣ ನಿರ್ವ್ಯಾಪಾರಿಯಾದಡೆ ಹಿರಿದೆಂಬರು,
ನಾವಿದನರಿಯೆವಯ್ಯಾ.
ಶರಣ ಸಕಲಭೋಗೋಪಭೋಗಿಯಾದಡೆ ಕಿರಿದೆಂಬರು,
ಶರಣ ನಿರ್ಭೋಗಿಯಾದಡೆ ಹಿರಿದೆಂಬರು,
ನಾವಿದನರಿಯೆವಯ್ಯಾ.
ಹುರಿದ ಬೀಜ ಮರಳಿ ಹುಟ್ಟಬಲ್ಲುದೆ ?
ಬೆಂದ ನುಲಿ ಮರಳಿ ಕಟ್ಟುವಡೆವುದೆ ?
ಹುಟ್ಟುಗೆಟ್ಟ ಶರಣ ಸಟೆಯ ದೇಹವ ಧರಿಸಿ

ಸಾಕಾರವೆನಿಸಿ ಲೋಕದೊಳಡಗಿರ್ದಡೇನು
ಲೋಕದಂತಾತನೆ ? ಅಲ್ಲಲ್ಲ.
ಆತನ ಪರಿ ಬೇರೆ ಕಾಣಿರೊ
ಅದೆಂತೆಂದೊಡೆ :
ಬಿರಿಸಿನೊಳಗಣ ಮದ್ದು ಅಗ್ನಿಯ ಸೋಂಕಿ
ಅಗ್ನಿಯ ಸ್ವರೂಪವಾಗಿ ತೋರುವಂತೆ,
ಆ ಶರಣನ ತನುಮನಭಾವ ಸರ್ವಕರಣೇಂದ್ರಿಯಗಳೆಲ್ಲ
ಲಿಂಗವನಪ್ಪಿ ಲಿಂಗಮಯವಾಗಿ ತೋರುತಿರ್ಪವಾಗಿ,
ಆತ ಆವಾವ ಕ್ರಿಯೆಯಲ್ಲಿರ್ದಡೇನು, ಆವಾವ ಆಚಾರದಲ್ಲಿರ್ದಡೇನು,
ಆವಾವ ಭೋಗದಲ್ಲಿರ್ದಡೇನು,
ಕುಂದು ಕೊರತೆಯಿಲ್ಲ, ಹಿಂದೆ ಶಂಕೆಯಿಲ್ಲ, ಮುಂದೆ ಜನ್ಮವಿಲ್ಲ.
ಆ ಶರಣನು ಎಂತಿರ್ದಂತೆ ಸಹಜಪರಬ್ರಹ್ಮವೆ ಆಗಿರ್ಪನು ನೋಡಿರೊ
ನಮ್ಮ ಅಖಂಡೇಶ್ವರಲಿಂಗದಲ್ಲಿ. || ೬೩೭ ||

೮೮೧

ಸಂದೇಹಿಸೂತಕಿಯಲ್ಲ ಶರಣ,
ಬಂದಿತೊ ಬಾರದೊ ಎಂಬ ತಥ್ಯಮಿಥ್ಯ
ರಾಗದ್ವೇಷಿಯಲ್ಲ ಶರಣ.
ಸ್ತುತಿ ನಿಂದೆಗೆ ಹಿಗ್ಗಿ ಕುಗ್ಗುವನಲ್ಲ ಶರಣ.
ಇದು ಕಾರಣ, ಅಖಂಡೇಶ್ವರಾ, ನಿಮ್ಮ ಶರಣನ ಪರಿ
ಆವ ಲೋಕದೊಳಗೆ ಇಲ್ಲ ನೋಡಾ. || ೬೩೮ ||

೮೮೨

ಕಾಷ್ಠದಲ್ಲಿ ಬೊಂಬೆಯ ಮಾಡಿ,
ಪಟ್ಟುನೂಲ ಸೂತ್ರವ ಹೂಡಿ,
ತೆರೆಯ ಮರೆಯಲ್ಲಿ ನಿಂದು,
ಸೂತ್ರಿಕನು ಕುಣಿಸಿದಡೆ ಕುಣಿಯುತಿರ್ಪುದಲ್ಲದೆ
ಆ ಅಚೇತನ ಬೊಂಬೆ ತನ್ನ ತಾನೆ ಕುಣಿವುದೆ ಅಯ್ಯಾ ?
ಎನ್ನ ತನುವೆಂಬ ಅಚೇತನ ಬೊಂಬೆಗೆ
ಪ್ರಾಣವಾಯುವೆಂಬ ಜೀವಸೂತ್ರವ ಹೂಡಿ
ಮನವೆಂಬ ತೆರೆಯ ಮರೆಯಲ್ಲಿ ನಿಂದು
ನೀನಾಡಿಸಿದಡೆ ನಾನಾಡುತಿರ್ಪೆನಲ್ಲದೆ
ಎನಗೆ ಬೇರೆ ಸ್ವತಂತ್ರವೆ ಹೇಳಾ ಅಖಂಡೇಶ್ವರಾ ? || ೬೩೯ ||

೮೮೩

ಎನ್ನ ನಡೆವ ನಡೆಗಳೆಲ್ಲ ನಿಮ್ಮ ನಡೆಗಳಯ್ಯಾ.
ಎನ್ನ ನುಡಿವ ನುಡಿಗಳೆಲ್ಲ ನಿಮ್ಮ ನುಡಿಗಳಯ್ಯಾ.
ಎನ್ನ ನೋಡುವ ನೋಟವೆಲ್ಲ ನಿಮ್ಮ ನೋಟವಯ್ಯಾ.
ಎನ್ನ ಕೇಳುವ ಕೇಳಿಕೆಯೆಲ್ಲ ನಿಮ್ಮ ಕೇಳಿಕೆಯಯ್ಯಾ.
ನಾನು ಆವಾವ ಪರಿಯಲ್ಲಿ ಆಡುವ ಆಟಗಳೆಲ್ಲಾ
ನಿಮ್ಮ ಬೆಡಗಿನ ರೀತಿಯಯ್ಯಾ ಅಖಂಡೇಶ್ವರಾ. || ೬೪೦ ||

೮೮೪

ಎನ್ನ ಸ್ಥೂಲತನುವಿನ ಜಾಗ್ರಾವಸ್ಥೆಯಲ್ಲಿ
ಸಕಲ ದೃಶ್ಯದ ಲೀಲೆಯನಾಡುವಾತನು ನೀನೆ ಅಯ್ಯಾ.
ಎನ್ನ ಸೂಕ್ಷ್ಮತನುವಿನ ಸ್ವಪ್ನಾವಸ್ಥೆಯಲ್ಲಿ
ದೃಶ್ಯಾದೃಶ್ಯದ ಲೀಲೆಯನಾಡುವಾತನು ನೀನೆ ಅಯ್ಯಾ.
ಎನ್ನ ಕಾರಣತನುವಿನ ಸುಷುಪ್ತ್ಯಾವಸ್ಥೆಯಲ್ಲಿ
ಕೇವಲ ನಿರವಯ ಲೀಲೆಯನಾಡುವಾತನು
ನೀನೆ ಅಯ್ಯಾ ಅಖಂಡೇಶ್ವರಾ. || ೬೪೧ ||

೮೮೫

ಲಿಂಗಾಂಗಸಾಮರಸ್ಯವನರಿಯದೆ
ಖಂಡಿತ ಬುದ್ಧಿಯಿಂದೆ ಲಿಂಗವ ಬೇರಿಟ್ಟುಕೊಂಡು
ಸಕಲಭೋಗೋಪಭೋಗವನು ಅರ್ಪಿಸಿದೆವೆಂಬ
ಭಂಗಗೇಡಿಗಳ ಮಾತ ಕೇಳಲಾಗದು.
ಅದೆಂತೆಂದೊಡೆ :
ಆ ಲಿಂಗಕ್ಕೆ ಶರಣನಂಗದ ಮಜ್ಜನಸುಖವಲ್ಲದೆ
ಬೇರೆ ಮಜ್ಜನಸುಖವುಂಟೆ ?
ಆ ಲಿಂಗಕ್ಕೆ ಶರಣನ ಲಲಾಟದ
ಶ್ರೀವಿಭೂತಿ ಗಂಧಾಕ್ಷತೆಯ ಶೃಂಗಾರವಲ್ಲದೆ
ಬೇರೆ ಶೃಂಗಾರವುಂಟೆ ?
ಆ ಲಿಂಗಕ್ಕೆ ಶರಣನ ಕರ್ಣದಲ್ಲಿಯ
ಪಂಚಮಹಾವಾದ್ಯದ ಕೇಳಿಕೆಯಲ್ಲದೆ ಬೇರೆ ಕೇಳಿಕೆಯುಂಟೆ ?
ಆ ಲಿಂಗಕ್ಕೆ ಶರಣನ ಜಿಹ್ವೆಯಲ್ಲಿಯ
ಷಡುರಸಾನ್ನದ ನೈವೇದ್ಯವಲ್ಲದೆ ಬೇರೆ ನೈವೇದ್ಯವುಂಟೆ ?
ಆ ಲಿಂಗಕ್ಕೆ ಶರಣನ ಕಂಗಳಲ್ಲಿಯ
ನಾನಾ ವಿಚಿತ್ರರೂಪಿನ ವಿನೋದವಲ್ಲದೆ ಬೇರೆ ವಿನೋದವುಂಟೆ ?
ಆ ಲಿಂಗಕ್ಕೆ ಶರಣನ ತ್ವಕ್ಕಿನಲ್ಲಿಯ

ವಸ್ತ್ರಾಭರಣದ ಅಲಂಕಾರವಲ್ಲದೆ ಬೇರೆ ಅಲಂಕಾರವುಂಟೆ ?
ಆ ಲಿಂಗಕ್ಕೆ ಶರಣನ ಘ್ರಾಣದಲ್ಲಿಯ
ಸುಗಂಧ ಪರಿಮಳವರ್ಪಿತವಲ್ಲದೆ ಬೇರೆ ಅರ್ಪಿತವುಂಟೆ ?
ಆ ಲಿಂಗಕ್ಕೆ ಶರಣನ ಪರಮ ಹೃದಯಕಮಲವೆ
ನಿಜವಾಸವಲ್ಲದೆ ಬೇರೆ ನಿಜವಾಸವುಂಟೆ ?
ಇಂತೀ ಶರಣಸನ್ನಿಹಿತಲಿಂಗ, ಲಿಂಗಸನ್ನಿಹಿತ ಶರಣನೆಂಬುದನರಿಯದೆ
ಅನಂತಕಾಲ ಲಿಂಗವ ಧರಿಸಿಕೊಂಡು ಲಿಂಗಾಂಗಿಯೆನಿಸಿಕೊಂಡಡೇನು ?
ಅದು ಪಶುವಿನ ತೊಡೆಯಲ್ಲಿ ಬರೆದ ಮುದ್ರೆಯಂತೆ ಕಂಡೆಯಾ
ಅಖಂಡೇಶ್ವರಾ. || ೬೪೨ ||

೮೮೬

ತನುವಿನ ಕೈಯಲ್ಲಿರ್ದ ಘನಲಿಂಗವನು
ಮನೋಮಂಟಪದಲ್ಲಿ ಕುಳ್ಳಿರಿಸಿ
ನೆನಹಿನ ಪರಿಣಾಮವ ಕೊಡಬಲ್ಲಾತನೆ ಶರಣನು.
ಮತ್ತಾ ಲಿಂಗವನು ಕರ್ಣಮಂಟಪದಲ್ಲಿ ಕುಳ್ಳಿರಿಸಿ
ಶಬ್ದ ಪರಿಣಾಮವ ಕೊಡಬಲ್ಲಾತನೆ ಶರಣನು.
ಲಿಂಗವನು ಘ್ರಾಣಮಂಟಪದಲ್ಲಿ ಕುಳ್ಳಿರಿಸಿ
ಗಂಧಪರಿಣಾಮವ ಕೊಡಬಲ್ಲಾತನೆ ಶರಣನು.
ಲಿಂಗವನು ಜಿಹ್ವಾಮಂಟಪದಲ್ಲಿ ಕುಳ್ಳಿರಿಸಿ
ರುಚಿಪರಿಣಾಮವ ಕೊಡಬಲ್ಲಾತನೆ ಶರಣನು.
ಲಿಂಗವನು ಸರ್ವಾಂಗಮಂಟಪದಲ್ಲಿ ಕುಳ್ಳಿರಿಸಿ
ಸರ್ವಪರಿಣಾಮವನು ಕೊಡಬಲ್ಲಾತನೆ ಶರಣನು.
ಅಲ್ಲದೆ ಉಳಿದ ಅಂಗವಿಕಾರ ಆತ್ಮಸುಖಿಗಳೆಲ್ಲ
ಭವದ ಕುರಿಗಳಯ್ಯಾ ಅಖಂಡೇಶ್ವರಾ. || ೬೪೩ ||

೮೮೭

ಅನಾದಿ ಪರವಸ್ತುವು ತನ್ನ ಸ್ವಲೀಲಾಸ್ವಭಾವದಿಂದೆ
ತಾನೇ ಅಂಗವಾದುದು.
ತಾನೇ ಲಿಂಗವಾದುದು.
ತಾನೇ ಸಂಗವಾದುದು.
ತಾನೇ ಸಮರಸವಾದುದು.
ಎಂಬ ಭೇದವ ನಿಮ್ಮ ಶರಣ ಬಲ್ಲನಲ್ಲದೆ
ಉಳಿದ ಕಣ್ಣುಗೆಟ್ಟಣ್ಣಗಳೆತ್ತ ಬಲ್ಲರಯ್ಯಾ
ಅಖಂಡೇಶ್ವರಾ ? || ೬೪೪ ||

**೮೮೮**

ಅನಾದಿ ಶಿವಾಂಶಿಕರಾದ ಶಿವಶರಣರಿಗಲ್ಲದೆ
ವೇದ್ಯವಾಗದು ನೋಡಾ ಭಕ್ತಿಜ್ಞಾನ ವೈರಾಗ್ಯವು.
ಅನಾದಿ ಶಿವಾಂಶಿಕರಾದ ಶಿವಶರಣರಿಗಲ್ಲದೆ
ವೇದ್ಯವಾಗದು ನೋಡಾ ಶಿವಾಚಾರ ಸತ್‌ಪಥವು.
ಅನಾದಿ ಶಿವಾಂಶಿಕರಾದ ಶಿವಶರಣರಿಗಲ್ಲದೆ
ವೇದ್ಯವಾಗದು ನೋಡಾ ಶಿವಾನುಭಾವವು.
ಅನಾದಿ ಶಿವಾಂಶಿಕರಾದ ಶಿವಶರಣರಿಗಲ್ಲದೆ
ವೇದ್ಯವಾಗದು ನೋಡಾ ನಿರ್ಧರ ನಿಷ್ಪತ್ತಿಯು.
ಅನಾದಿ ಶಿವಾಂಶಿಕರಾದ ಶಿವಶರಣರಿಗಲ್ಲದೆ ವೇದ್ಯವಾಗದು
ಅಖಂಡೇಶ್ವರಾ, ನಿಮ್ಮ ನಿಜೈಕ್ಯಪದವು. || ೬೪೫ ||

**೮೮೯**

ಶರಣಲಿಂಗಕ್ಕೆ ನೋಡುವ ಕಣ್ಣು
ಒಂದಲ್ಲದೆ ಎರಡಿಲ್ಲ ಕಾಣಿರೊ.
ಶರಣಲಿಂಗಕ್ಕೆ ಕೇಳುವ ಶ್ರೋತ್ರ
ಒಂದಲ್ಲದೆ ಎರಡಿಲ್ಲ ಕಾಣಿರೊ.
ಶರಣಲಿಂಗಕ್ಕೆ ವಾಸಿಸುವ ನಾಸಿಕ
ಒಂದಲ್ಲದೆ ಎರಡಿಲ್ಲ ಕಾಣಿರೊ.
ಶರಣಲಿಂಗಕ್ಕೆ ರುಚಿಸುವ ಜಿಹ್ವೆ
ಒಂದಲ್ಲದೆ ಎರಡಿಲ್ಲ ಕಾಣಿರೊ.
ಶರಣಲಿಂಗಕ್ಕೆ ಸೋಂಕುವ ತ್ವಕ್ಕು
ಒಂದಲ್ಲದೆ ಎರಡಿಲ್ಲ ಕಾಣಿರೊ.
ಶರಣಲಿಂಗಕ್ಕೆ ನೆನೆವ ಮನ
ಒಂದಲ್ಲದೆ ಎರಡಿಲ್ಲ ಕಾಣಿರೊ.
ನಮ್ಮ ಅಖಂಡೇಶ್ವರನಲ್ಲಿ ಒಡವೆರೆದ
ಶರಣಲಿಂಗಕ್ಕೆ ಅಂಗ ಪ್ರಾಣಂಗಳೊಂದಲ್ಲದೆ
ಎರಡಿಲ್ಲ ಕಾಣಿರೊ. || ೬೪೬ ||

**೮೯೦**

ಅರಿದಲ್ಲಿ ಶರಣ ಮರೆದಲ್ಲಿ ಮಾನವನೆಂದು ನುಡಿವ
ಅಜ್ಞಾನಿಗಳ ಮಾತ ಕೇಳಲಾಗದು.
ಅದೇನು ಕಾರಣವೆಂದೊಡೆ :
ಜಗದಗಲದ ಗುರಿಯ ಹೂಡಿ ಮುಗಿಲಗಲದ ಬಾಣವನೆಸೆವಡೆ
ತಪ್ಪಿ ಕಡೆಗೆ ಬೀಳುವ ಸ್ಥಾನವುಂಟೆ ?

ಒಳಹೊರಗೆ ಸರ್ವಾಂಗಲಿಂಗವಾದ ಶರಣನಲ್ಲಿ
ಅರುಹುಮರಹುಗಳು ತೋರಲೆಡೆಯುಂಟೆ ?
ಇದು ಕಾರಣ,
ನಮ್ಮ ಅಖಂಡೇಶ್ವರನ ಶರಣನಲ್ಲಿ ತೋರುವ ತೋರಿಕೆಯೆಲ್ಲ
ಲಿಂಗವು ತಾನೆ ಕಾಣಿರೊ. || ೬೪೭ ||

**೮೯೧**

ಅನಂತಕೋಟಿ ಬ್ರಹ್ಮಾಂಡಗಳನೊಳಕೊಂಡ
ಮಹಾಘನಲಿಂಗದಲ್ಲಿ
ತನ್ನ ಅಂಗ ಮನ ಪ್ರಾಣೇಂದ್ರಿಯ ವಿಷಯ ಕರಣಂಗಳ ಹೂಳಿ,
ತಾನಿಲ್ಲದೆ ನಡೆವುತ್ತೆ, ತಾನಿಲ್ಲದೆ ನುಡಿವುತ್ತೆ,
ತಾನಿಲ್ಲದೆ ಹಿಡಿವುತ್ತೆ, ತಾನಿಲ್ಲದೆ ಬಿಡುತ್ತೆ
ತಾನಿಲ್ಲದೆ ನೋಡುತ್ತೆ, ತಾನಿಲ್ಲದೆ ಆಡುತ್ತೆ
ಬಯಲ ಬೊಂಬೆಯಂತೆ ಸುಳಿವ ಮಹಾಶರಣರ ತೋರಿಸಿ
ಬದುಕಿಸಯ್ಯಾ ಎನ್ನ ಅಖಂಡೇಶ್ವರಾ. || ೬೪೮ ||

**೮೯೨**

ಎನ್ನ ತನುವಿನೊಳಗೆ ತನುರೂಪಾಗಿರ್ದಿರಯ್ಯಾ ನೀವು.
ಎನ್ನ ಮನದೊಳಗೆ ಮನರೂಪಾಗಿರ್ದಿರಯ್ಯಾ ನೀವು.
ಎನ್ನ ಪ್ರಾಣದೊಳಗೆ ಪ್ರಾಣರೂಪಾಗಿರ್ದಿರಯ್ಯಾ ನೀವು.
ಎನ್ನ ಭಾವದೊಳಗೆ ಭಾವರೂಪಾಗಿರ್ದಿರಯ್ಯಾ ನೀವು.
ಎನ್ನ ಇಂದ್ರಿಯಂಗಳೊಳಗೆ ಇಂದ್ರಿಯಂಗಳ ರೂಪಾಗಿರ್ದಿರಯ್ಯಾ ನೀವು.
ಎನ್ನ ವಿಷಯಂಗಳೊಳಗೆ
ವಿಷಯಂಗಳ ರೂಪಾಗಿರ್ದಿರಯ್ಯಾ ನೀವು.
ಎನ್ನ ತನು ಮನ ಪ್ರಾಣ ಭಾವ ಇಂದ್ರಿಯಂಗಳೆಲ್ಲವು ನಿಮ್ಮವಾಗಿ
ಇಂತು ಎನ್ನೊಳಗೆ ನೀವು ಈ ಪರಿಯಲ್ಲಿರ್ದಿರಾಗಿ
ನಾ ನಿಮ್ಮೊಳಗೆ ಚಿನ್ನಬಣ್ಣದಂತೆ
ರತ್ನದೀಪ್ತಿಯಂತೆ ಜ್ಯೋತಿಪ್ರಭೆಯಂತಿರ್ದೆನಯ್ಯಾ ಅಖಂಡೇಶ್ವರಾ. ||೬೪೯||

**೮೯೩**

ಅಂಗಕ್ಕೆ ಇಷ್ಟಲಿಂಗದ ಸತ್ಕ್ರಿಯವನಳವಡಿಸಿಕೊಂಡು
ಪ್ರಾಣಕ್ಕೆ ಪ್ರಾಣಲಿಂಗದ ಸಮ್ಯಕ್‌ಜ್ಞಾನಾಚಾರವ ಸಂಬಂಧಿಸಿ,
ಅಂಗಲಿಂಗವೆಂಬ ಭಿನ್ನಭಾವವಳಿದು
ಒಳಹೊರಗೆಲ್ಲ ಅಖಂಡಜ್ಞಾನ ಸತ್‌ಕ್ರಿಯಾಚಾರಮಯವಾದ ಶರಣಂಗೆ
ವಾರ ತಿಥಿ ಲಗ್ನ ವಿಘ್ನಂಗಳಿಲ್ಲ, ಶುಭಾಶುಭಂಗಳಿಲ್ಲ,

ಸ್ತುತಿನಿಂದೆಗಳಿಲ್ಲ, ಪೂಜ್ಯಾಪೂಜ್ಯಂಗಳಿಲ್ಲವಾಗಿ,
ಅಖಂಡೇಶ್ವರಾ, ನಿಮ್ಮ ಶರಣ ಎಂತಿರ್ದಂತೆ
ಸಹಜಬ್ರಹ್ಮವೆ ಆಗಿರ್ಪನು. || ೬೫೦ ||

**೮೯೪**

ಘನಮಹಾಲಿಂಗಕ್ಕೆ
ಮನವೆ ಪೀಠವಾಗಿ, ತನುವೆ ಶಿವಾಲಯವಾಗಿ,
ನೆನವೆ ಪೂಜೆಯಾಗಿ, ಧ್ಯಾನವೆ ತೃಪ್ತಿಯಾಗಿ,
ಅಂಬುಧಿಯೊಳಗೆ ಮುಳುಗಿದ ಪೂರ್ಣಕುಂಭದಂತೆ,
ನಿಮ್ಮ ಅವಿರಳ ದಿವ್ಯ ಮಹಾಬೆಳಗಿನೊಳಗೆ ಮುಳುಗಿ,
ನಾನು ನೀನೆಂಬುಭಯದ ಕುರುಹ ಮರೆದು
ಏನೇನೂ ಅರಿಯದಿರ್ದೆನಯ್ಯಾ ಅಖಂಡೇಶ್ವರಾ. || ೬೫೧ ||

**೮೯೫**

ಶಿವಶಿವಾ, ಏನೆಂಬೆನಯ್ಯಾ ಶಿವಶರಣರ ಘನವನು !
ಶಿವಶರಣರ ಮಹಿಮೆಯನು, ಶಿವಶರಣರ ಚಾರಿತ್ರವನು,
ಶಿವನೇ ಬಲ್ಲನಲ್ಲದೆ ಉಳಿದವರದನೆಂತು ತಿಳಿವರಯ್ಯಾ ?
ಹೊರಗಣ ಕ್ರಿಯೆಯು ಹಲವು ಪ್ರಕಾರವಾದಡೂ
ಒಳಗೆ ನೀರು ನೀರ ಕೂಡಿದಂತೆ, ಕ್ಷೀರ ಕ್ಷೀರವ ಬೆರೆದಂತೆ,
ಮಾರುತಾಂಬರ ಸಂಯೋಗವಾದಂತೆ, ಶಿಖಿಕರ್ಪುರದ ನಿಷ್ಪತ್ತಿಯಂತೆ,
ಸಚ್ಚಿದಾನಂದಪರಬ್ರಹ್ಮವ ಕೂಡಿ
ಬಿಚ್ಚಿ ಬೇರಾಗದಿರ್ಪ ಭವರಹಿತ ಶರಣರೆ
ಕೇವಲಜ್ಞಾನಸ್ವರೂಪರು, ಜೀವನ್ಮುಕ್ತರು.
ಅವರೇ ನಿಮ್ಮ ಶರಣರು,
ಅವರೇ ಮಹಾಜ್ಞಾನಘನವ ನುಂಗಿದ
ಮಹಾಂತರು ನೋಡಾ ಅಖಂಡೇಶ್ವರಾ. || ೬೫೨ ||

**೮೯೬**

ಮನ ಮಹಾಘನವಾಯಿತ್ತು
ಭಾವ ನಿರ್ಭಾವವಾಯಿತ್ತು
ಖಂಡಿತ ಅಖಂಡಿತವಾಯಿತ್ತು
ಬೆರಗು ನಿಬ್ಬೆರಗಾಯಿತ್ತು
ನೆನಹು ನಿಷ್ಪತ್ತಿಯಾಯಿತ್ತು
ಅರುಹು ಕರಗಿ ನಿರವಯಲಾಗಿತ್ತಾಗಿ
ಅಖಂಡೇಶ್ವರನೆಂಬ ಶಬ್ದ ಮುಗ್ಧವಾಯಿತ್ತು || ೬೫೩ ||

## ಐಕ್ಯಸ್ಥಲ

### ೮೯೭

ಕ್ಷುತ್ ಪಿಪಾಸೆ ಶೋಕ ಮೋಹ ಜನನ ಮರಣವೆಂಬ
ಷಡೂರ್ಮೆಗಳ ಹುಡಿಮಾಡಿ ಸುಟ್ಟುರುಹಿ,
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ
ಅರಿಷಡ್‌ವರ್ಗಂಗಳ ಬೇರ ಕಿತ್ತು ಬಿಸುಟು.
ಇಷ್ಟಲಿಂಗಕ್ಕೆ ನೈಷ್ಠೆಯಿಂದ ಜಲ ಗಂಧಾಕ್ಷತೆ
ಧೂಪ ದೀಪ ನೈವೇದ್ಯ ತಾಂಬೂಲವೆಂಬ
ಅಷ್ಟವಿಧಾರ್ಚನೆಯ ಮಾಡಿ,
ಮತ್ತಾ ಲಿಂಗವನು ಧ್ಯಾನಮುಖದಿಂದೆ ಅಂತರಂಗಕ್ಕೆ ಬಿಜಯಂಗೈಸಿ,
ಹೃದಯಕಮಲಕರ್ಣಿಕಾಸ್ಥಾನದಲ್ಲಿ ಕುಳ್ಳಿರಿಸಿ,
ಪ್ರಾಣಾಯಾಮ ನಿರ್ಗುಣದ ಅಷ್ಟವಿಧಾರ್ಚನೆಯ ಮಾಡಿ,
ಚಿತ್ತಸ್ವಸ್ಥಿರವಾಗಿ,
ಭಾವವು ಬಯಲಬ್ರಹ್ಮದಲ್ಲಿ ಹೂಳಿಹೋಗಿ
ತಾನಿದಿರೆಂಬುದನಳಿದು,
ಉರಿ ಕರ್ಪುರದಂತೆ ಅವಿರಳ ಸಮರಸವಾಗಿರ್ಪಾತನೆ ನಿಜೈಕ್ಯನು ನೋಡಾ.
ಅದೆಂತೆಂದೊಡೆ :
''ಷಡೂರ್ಮಯಶ್ಚ ಷಡ್ವರ್ಗೋ ನಾಸ್ತಿ ಚಾಷ್ಟವಿಧಾರ್ಚನಂ ।
ನಿರ್ಭಾವಂ ನಿಜಲಿಂಗೈಕ್ಯಂ ಶಿಖಿಕರ್ಪೂರಯೋಗವತ್''॥
ಎಂದುದಾಗಿ, ಇಂತಪ್ಪ ನಿಜಲಿಂಗೈಕ್ಯರ ಮಹಾಘನ ನಿಜದ ನಿಲವಿಂಗೆ
ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ. ॥ ೭೫೪ ॥

### ೮೯೮

ವೇದ ಶಾಸ್ತ್ರಾಗಮ ಪುರಾಣಂಗಳನೋದಿ
ಆದಿಯ ಪಥವ ಸಾಧಿಸಬೇಕೆಂಬ ಭೇದಬುದ್ಧಿಯ
ಭ್ರಾಂತಜ್ಞಾನಿಯಲ್ಲ ನೋಡಾ ಲಿಂಗೈಕ್ಯನು.
ಷಟ್‌ದರ್ಶನಂಗಳ ಶೋಧಿಸಿ ಕಡುಮುಕ್ತಿಯ ಪಡೆವೆನೆಂಬ
ಜಡಮತಿಯವನಲ್ಲ ನೋಡಾ ಲಿಂಗೈಕ್ಯನು.
ಕುಟಿಲವ್ಯಾಪಾರದಿಂದೆ ಸಟೆಯನೆ ಸಂಪಾದಿಸಿ
ಘಟವ ಹೊರೆವವನಲ್ಲ ನೋಡಾ ಲಿಂಗೈಕ್ಯನು.
ಕಾಕುಮನದ ಕಳವಳನಡಗಿಸಿ ಲೋಕರಂಜನೆಯನುಡುಗಿಸಿ
ಕುರುಹಿಲ್ಲದ ಬ್ರಹ್ಮದಲ್ಲಿ ತೆರಹಿಲ್ಲದಿರ್ಪನು ನೋಡಾ
ಅಖಂಡೇಶ್ವರಾ ನಿಮ್ಮ ನಿಜಲಿಂಗೈಕ್ಯನು. ॥ ೭೫೫ ॥

### ೮೯೯

ಸಗುಣನಲ್ಲ ನಿರ್ಗುಣನಲ್ಲ ನೋಡಾ ಲಿಂಗೈಕ್ಯನು.
ಸಾಕಾರನಲ್ಲ ನಿರಾಕಾರನಲ್ಲ ನೋಡಾ ಲಿಂಗೈಕ್ಯನು.
ಶೂನ್ಯನಲ್ಲ ನಿಃಶೂನ್ಯನಲ್ಲ ನೋಡಾ ಲಿಂಗೈಕ್ಯನು.
ಜ್ಞಾನಿಯಲ್ಲ ಅಜ್ಞಾನಿಯಲ್ಲ ನೋಡಾ ಲಿಂಗೈಕ್ಯನು.
ಕಾಮಿಯಲ್ಲ ನಿಃಕಾಮಿಯಲ್ಲ ನೋಡಾ ಲಿಂಗೈಕ್ಯನು.
ದ್ವೈತಿಯಲ್ಲ ಅದ್ವೈತಿಯಲ್ಲ ನೋಡಾ ಲಿಂಗೈಕ್ಯನು.
ಕರ್ತೃವಲ್ಲ ಭೃತ್ಯನಲ್ಲ ನೋಡಾ ಲಿಂಗೈಕ್ಯನು.
ಇಂತು ಈ ತೆರದಲ್ಲಿ ತೋರುವ ತೋರಿಕೆಗಳೆಲ್ಲವು ತಾನೆಯಾಗಿ
ಇಹಪರದ ಗತಿಗೆಡಿಸಿ ಪರಿಪೂರ್ಣಬ್ರಹ್ಮದಲ್ಲಿ ತನ್ನ ಕುರುಹಡಗಿ
ನಿರ್ವಯಲಾಗಿರ್ಪ ನಿಜಲಿಂಗೈಕ್ಯನ
ಏನೆಂದು ಉಪಮಿಸಬಹುದಯ್ಯಾ ಅಖಂಡೇಶ್ವರಾ ? ॥ ೬೫೬ ॥

### ೯೦೦

ಸಾವಯವ ನಿರವಯವನಲ್ಲ ನೋಡಾ ಲಿಂಗೈಕ್ಯನು.
ಗಮನಿಯಲ್ಲ ನಿರ್ಗಮನಿಯಲ್ಲ ನೋಡಾ ಲಿಂಗೈಕ್ಯನು.
ಸುಮನಸಾರಾಯ ಸುಜ್ಞಾನಭರಿತನು ನೋಡಾ ಲಿಂಗೈಕ್ಯನು.
ಅಮಲಬ್ರಹ್ಮದ ಕೂಟದ ಅಚಲಿತ ಅಭೇದ್ಯನು
ನೋಡಾ ಲಿಂಗೈಕ್ಯನು.
ಅದ್ವಯಭಾವ ಅಗಣಿತ ಮಹಿಮನು ನೋಡಾ
ಅಖಂಡೇಶ್ವರಾ ನಿಮ್ಮ ನಿಜಲಿಂಗೈಕ್ಯನು. ॥ ೬೫೭ ॥

### ೯೦೧

ನಿರುಪಮ ನಿರಾಳನು ನೋಡಾ ಲಿಂಗೈಕ್ಯನು.
ನಿಸ್ಸೀಮ ನಿರ್ಜಡನು ನೋಡಾ ಲಿಂಗೈಕ್ಯನು.
ನಿಃಕಳಂಕ ನಿಃಶಬ್ದನು ನೋಡಾ ಲಿಂಗೈಕ್ಯನು.
ನಿರಾವರಣ ನಿರಂಜನನು ನೋಡಾ
ಅಖಂಡೇಶ್ವರಾ ನಿಮ್ಮ ನಿಜಲಿಂಗೈಕ್ಯನು. ॥ ೬೫೮ ॥

### ೯೦೨

ಕಾಯಕಲ್ಪಿತಕ್ಕೆ ದೂರನು ನೋಡಾ ಲಿಂಗೈಕ್ಯನು.
ಕರ್ಮವಿರಹಿತನು ನೋಡಾ ಲಿಂಗೈಕ್ಯನು.
ಸೋಲುಗೆಲ್ಲಕ್ಕೆ ಹೋರುವನಲ್ಲ ನೋಡಾ ಲಿಂಗೈಕ್ಯನು.
ಶೀಲ ವ್ರತ ನೇಮದ ಸೀಮೆಯ ಮೆಟ್ಟಿ ನಡೆವನಲ್ಲ ನೋಡಾ ಲಿಂಗೈಕ್ಯನು.
ಅಖಂಡೇಶ್ವರಾ, ನಿಮ್ಮ ನಿಜಲಿಂಗೈಕ್ಯನ ಘನವ ನೀವೇ ಬಲ್ಲಿರಿ. ॥ ೬೫೯ ॥

೯೦೩

ಸರ್ವಾಚಾರಸಂಪತ್ತನರಿದಲ್ಲದೆ
ನಿರವಯಲಪದವ ಕಾಣಬಾರದು ನೋಡಾ ಆರಿಗೆಯು.
ಸರ್ವಾಚಾರಸಂಪತ್ತು ಎಂತೆನಲು,
ಷಡ್‌ಭೂತಂಗಳಲ್ಲಿ ಷಡ್ವಿಧ ಮಂತ್ರಂಗಳ ನೆಲೆಗೊಳಿಸಿ,
ಆ ಷಡ್ವಿಧ ಮಂತ್ರಂಗಳನೆ ಷಡ್ವಿಧಚಕ್ರಂಗಳೆಂದು ತಿಳಿದು,
ಆ ಷಡ್ವಿಧ ಚಕ್ರಂಗಳಿಗೆ ಷಡ್ವಿಧ ಅಧಿದೈವಂಗಳನೆ
ಷಡ್ವಿಧ ಅಂಗವೆಂದಾಧಾರಗೊಳಿಸಿ,
ಆ ಷಡ್ವಿಧ ಅಂಗಕ್ಕೆ ಷಡ್ವಿಧ ಕರಣಂಗಳನೆ
ಷಡ್ವಿಧ ಹಸ್ತಂಗಳೆಂದು ಅರಿದಳವಡಿಸಿಕೊಂಡು,
ಆ ಷಡ್ವಿಧ ಹಸ್ತಂಗಳಿಗೆ ಷಡ್ವಿಧ ಲಿಂಗಂಗಳನಳವಡಿಸಿಕೊಂಡು,
ಆ ಷಡ್ವಿಧ ಲಿಂಗಕ್ಕೆ ಷಡ್ವಿಧೇಂದ್ರಿಯಂಗಳನೆ
ಷಡ್ವಿಧ ಪದಾರ್ಥಂಗಳೆಂದರಿದು,
ಆ ಷಡ್ವಿಧ ಪದಾರ್ಥಂಗಳನು ಷಡ್ವಿಧ ಭಕ್ತಿಯಿಂದೆ
ಷಡ್ವಿಧ ಲಿಂಗಮುಖಂಗಳಿಗೆ ಸಮರ್ಪಿಸಲು,
ಒಳಹೊರಗೆಲ್ಲ ಆ ಷಡ್ವಿಧ ಲಿಂಗದ ಬೆಳಗು ತುಂಬಿ
ತೊಳಗಿ ಬೆಳಗುತಿರ್ಪುದು ನೋಡಾ.
ಎಡೆದೆರಹಿಲ್ಲದೆ ಆ ಷಡ್ವಿಧ ಲಿಂಗದ ಬೆಳಗಿನೊಳಗೆ
ತನ್ನ ಷಡ್ವಿಧಾಂಗದ ಕಳೆಗಳನೆಲ್ಲವನಡಗಿಸಿ,
ತಾನೆಂಬ ಕುರುಹುದೋರದಿರ್ದಡೆ ಅದೇ ಸರ್ವಾಚಾರಸಂಪತ್ತು ನೋಡಾ.
ಇಂತಪ್ಪ ಸರ್ವಾಚಾರಸಂಪತ್ತು
ನಿಮ್ಮ ಪೂರ್ಣ ಒಲುಮೆಯ ಶರಣರಿಗಲ್ಲದೆ
ಉಳಿದವರಿಗಳವಡದಯ್ಯಾ ಅಖಂಡೇಶ್ವರಾ ? ॥ ೬೬೦ ॥

೯೦೪

ಗರ್ವಾಹಂಕಾರವಳಿದು ಸರ್ವಕರಣಂಗಳು ತರಹರವಾಗಿ
ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡ ಲಿಂಗೈಕ್ಯಂಗೆ
ಅಖಂಡಪರಿಪೂರ್ಣ ಮಹಾಲಿಂಗವೆ ಭಾಜನವಾಗಿ,
ಆ ಘನಮಹಾಲಿಂಗಕ್ಕೆ ಆ ನಿಜಲಿಂಗೈಕ್ಯನೆ ಭಾಜನವಾಗಿ,
ಅಂಗಲಿಂಗವೆಂಬ ಉಭಯಭಾವವಳಿದು
ಕ್ಷೀರ ಕ್ಷೀರವ ಬೆರೆದಂತೆ
ಅವಿರಳ ಸಮರಸವಾಗಿರ್ಪ ಲಿಂಗೈಕ್ಯಂಗೆ ಏಕಭಾಜನವಲ್ಲದೆ
ಉಳಿದವರಿಗೆಲ್ಲಿಯದಯ್ಯಾ ಅಖಂಡೇಶ್ವರಾ ? ॥ ೬೬೧ ॥

### ೯೦೫

ಅಂಗದ ಗುಣವಳಿಯದೆ, ಪ್ರಾಣದ ಪ್ರಪಂಚು ಹಿಂಗದೆ,
ಭಾವದ ಭ್ರಮೆಯುಡುಗದೆ, ಮನದ ಮಾಯವಡಗದೆ,
ಆತ್ಮನ ಅಹಂಮಮತೆ ಕೆಡದೆ,
ಲಿಂಗಕ್ಕೆ ತಮಗೆ ಏಕಭಾಜನವೆಂದು ನುಡಿವ
ಕಾಕುಮಾನವರನೇನೆಂಬೆನಯ್ಯಾ ಅಖಂಡೇಶ್ವರಾ. || ೬೬೨ ||

### ೯೦೬

ಅಂಗವಿಕಾರಿಗೇಕೊ ಲಿಂಗದೊಡನೆ ಏಕಭಾಜನ ?
ಆತ್ಮಸುಖಿಗೇಕೊ ಲಿಂಗದೊಡನೆ ಏಕಭಾಜನ ?
ಹುಸಿ ಡಂಭಕಗೇಕೊ ಲಿಂಗದೊಡನೆ ಏಕಭಾಜನ ?
ಜಾರಚೋರಂಗೇಕೊ ಲಿಂಗದೊಡನೆ ಏಕಭಾಜನ ?
ನಮ್ಮ ಅಖಂಡೇಶ್ವರನ ನಿಜವನರಿಯದವರಿಗೇಕೊ
ಪರಮ ಶಿವಲಿಂಗದೊಡನೆ ಏಕಭಾಜನ ? || ೬೬೩ ||

### ೯೦೭

ಇಷ್ಟಲಿಂಗಕ್ಕೆ ತನುವೆ ಭಾಜನ.
ಪ್ರಾಣಲಿಂಗಕ್ಕೆ ಮನವೆ ಭಾಜನ.
ಭಾವಲಿಂಗಕ್ಕೆ ಜೀವವೆ ಭಾಜನವೆಂದರಿಯದ
ಮರುಳು ಮಾನವರಿಗೆ
ಭವಬಂಧನ ಪ್ರಾಪ್ತಿಯಯ್ಯಾ ಅಖಂಡೇಶ್ವರಾ. || ೬೬೪ ||

### ೯೦೮

ಮನವೆಂಬ ಒರಳಿಗೆ
ಸಕಲಕರಣಂಗಳೆಂಬ ತಂಡುಲವ ಹಾಕಿ,
ಸುಜ್ಞಾನವೆಂಬ ಒನಕೆಯ ಪಿಡಿದು
ಪರಮಪರಿಣಾಮದೊಳಗೋಲಾಡುತ್ತ ಕುಟ್ಟಿ,
ಅಜ್ಞಾನವೆಂಬ ತೌಡ ಕೇರಿ
ಚಿತ್ಕರಣಂಗಳೆಂಬ ಅಕ್ಕಿಯ ತೆಗೆದುಕೊಂಡು
ಸದ್ಭಾವವೆಂಬ ಭಾಂಡದಲ್ಲಿ ತುಂಬಿ
ಪರಮಾನಂದ ಜಲವೆಂಬ ಎಸರನಿಟ್ಟು,
ತ್ರಿಪುಟಿಯೆಂಬ ಒಲೆಯ ಹೂಡಿ
ಚಿದಗ್ನಿಯೆಂಬ ಬೆಂಕಿಯ ಪುಟವನಿಕ್ಕಿ
ಅರಿಷಡ್ವರ್ಗಗಳೆಂಬ ಸೌದೆಯ ಹೊತ್ತಿಸಿ,
ಮಹಾಜ್ಞಾನವೆಂಬ ಪಾಕವ ಮಾಡಿ

ಪರಿಪೂರ್ಣವೆಂಬ ಪರಿಯಾಣದಲ್ಲಿ ಗಡಣಿಸಿಕೊಂಡು,
ಅಖಂಡಪರಿಪೂರ್ಣ ಮಹಾಘನಲಿಂಗಕ್ಕೆ
ಸಲಿಸಬಲ್ಲಾತನೆ ಶರಣನು.
ಆತನೆ ನಿಜಾನುಭಾವಿ. ಆತನೆ ಲಿಂಗೈಕ್ಯನು.
ಇಂತೀ ಭೇದವನರಿಯದೆ ಮಣ್ಣಪರಿಯಾಣ, ಲೋಹಪಾತ್ರೆಯಲ್ಲಿ
ಮನಬಂದ ಪರಿಯಲ್ಲಿ ಹಾಯ್ಕಿ ಹಾಯ್ಕಿ ಒಟ್ಟೈಸಿಕೊಂಡು
ಬಾಯಿಗೆ ಬಂದಂತೆ ತಿಂಬುವ ಜೀವಗಳ್ಳ ಭವಭಾರಕರಿಗೆ
ಏಕಭಾಜನವೆಲ್ಲಿಯದಯ್ಯಾ ಅಖಂಡೇಶ್ವರಾ. || ೬೬೫ ||

೯೦೯

ಬಾರಯ್ಯ ಬಾರಯ್ಯ ಗಂಡನೆ,
ಎನ್ನ ಘ್ರಾಣವೆಂಬ ಭಾಜನದಲ್ಲಿ
ಸುಗಂಧಪದಾರ್ಥವೆಂಬ ಸುಯಿಧಾನವ ಗಡಣಿಸಿ
ನಿಮಗೆ ಉಣಲಿಕ್ಕುವೆ.
ಬಾರಯ್ಯ ಬಾರಯ್ಯ ಗಂಡನೆ,
ಎನ್ನ ಜಿಹ್ವೆಯೆಂಬ ಭಾಜನದಲ್ಲಿ
ಸುರುಚಿಪದಾರ್ಥವೆಂಬ ಸುಯಿಧಾನವ ಗಡಣಿಸಿ
ನಿಮಗೆ ಉಣಲಿಕ್ಕುವೆ.
ಬಾರಯ್ಯ ಬಾರಯ್ಯ ಗಂಡನೆ,
ಎನ್ನ ನೇತ್ರವೆಂಬ ಭಾಜನದಲ್ಲಿ
ಸುರೂಪುಪದಾರ್ಥವೆಂಬ ಸುಯಿಧಾನವ ಗಡಣಿಸಿ
ನಿಮಗೆ ಉಣಲಿಕ್ಕುವೆ.
ಬಾರಯ್ಯ ಬಾರಯ್ಯ ಗಂಡನೆ,
ಎನ್ನ ತ್ವಕ್ಕೆಂಬ ಭಾಜನದಲ್ಲಿ
ಸುಸ್ಪರ್ಶನಪದಾರ್ಥವೆಂಬ ಸುಯಿಧಾನವ ಗಡಣಿಸಿ
ನಿಮಗೆ ಉಣಲಿಕ್ಕುವೆ.
ಬಾರಯ್ಯ ಬಾರಯ್ಯ ಗಂಡನೆ,
ಎನ್ನ ಶ್ರೋತ್ರವೆಂಬ ಭಾಜನದಲ್ಲಿ
ಸುಶಬ್ದಪದಾರ್ಥವೆಂಬ ಸುಯಿಧಾನವ ಗಡಣಿಸಿ
ನಿಮಗೆ ಉಣಲಿಕ್ಕುವೆ.
ಬಾರಯ್ಯ ಬಾರಯ್ಯ ಗಂಡನೆ,
ಎನ್ನ ಮನವೆಂಬ ಭಾಜನದಲ್ಲಿ
ನೆನವೆಂಬ ಸುಯಿಧಾನವ ಗಡಣಿಸಿ
ಉಣಲಿಕ್ಕುವೆನಯ್ಯಾ ನಿಮಗೆ ಅಖಂಡೇಶ್ವರಾ. || ೬೬೬ ||

೯೧೦

ಕೇಳಿ ಕೇಳಿರವ್ವಾ ನಮ್ಮ ಮನೆಯಾತನ
ಒಂದು ಬೆಡಗು ಬಿನ್ನಾಣವ.
ಎನ್ನ ಕಟ್ಟಿದ ಮುಡಿಯ ಸಡಿಲಿಸಿದ.
ಎನ್ನ ಉಟ್ಟುದ ಸೆಳೆದುಕೊಂಡ.
ಎನ್ನ ತೊಟ್ಟುದ ಬಿಡಿಸಿದ.
ಎನ್ನ ಲಜ್ಜೆನಾಚಿಕೆಯ ತೊರೆಸಿದ.
ಎನ್ನ ಮೌನದಲ್ಲಿರಿಸಿ ಎನ್ನ ಕರವಿಡಿದು ಕರೆದುಕೊಂಡು,
ತಾನುಂಬ ಪರಿಯಾಣದಲ್ಲಿ
ಎನ್ನ ಕೂಡಿಸಿಕೊಂಡು ಉಂಡನು ಕೇಳಿರವ್ವಾ
ನಮ್ಮ ಅಖಂಡೇಶ್ವರನು. || ೬೬೭ ||

೯೧೧

ಲಿಂಗದೊಡನೆ ಸಹಭೋಜನ ಮಾಡುವ
ಲಿಂಗವಂತರೆಲ್ಲ ನೀವು ಕೇಳಿರೊ !
ನಿಮ್ಮ ತನು ಸಂಸಾರವಿಷಯಪ್ರಪಂಚಿನಲ್ಲಿ ಮುಳುಗಿರ್ಪುದು.
ನಿಮ್ಮ ಮನ ಮಾಯಾ ಮಲತ್ರಯಂಗಳಲ್ಲಿ ಸುತ್ತಿರ್ಪುದು.
ನಿಮ್ಮ ಜೀವ ಭವಭವದಲ್ಲಿ ತೊಳಲುತಿರ್ಪುದು.
ನೀವಿಂತು ಮಲಮಾಯಾಸ್ವರೂಪರಾಗಿರ್ದು
ಭಯವಿಲ್ಲದೆ ಅಮಲಲಿಂಗದೊಡನೆ ಸಹಭೋಜನವ ಮಾಡಿದಡೆ
ಅಘೋರ ನರಕದಲ್ಲಿಕ್ಕದೆ ಮಾಣ್ಬನೆ ನಮ್ಮ ಅಖಂಡೇಶ್ವರನು ? || ೬೬೮ ||

೯೧೨

ಭಾಷೆಗಳ್ಳಗೇಕೊ ಸಹಭೋಜನ ?
ದ್ವೇಷಗುಣಿಗೇಕೊ ಸಹಭೋಜನ ?
ವೇಷಧಾರಿಗೇಕೊ ಸಹಭೋಜನ ?
ಹುಸಿಹುಂಡಗೇಕೊ ಸಹಭೋಜನ ?
ಮೋಸ ಮರವೆಯಿಂದೆ
ಈಶನೊಡನೆ ಸಹಭೋಜನ ಮಾಡಿದಡೆ
ಭವದಲ್ಲಿ ಘಾಸಿಯಾಗುತಿರ್ಪರು ನೋಡಾ ಅಖಂಡೇಶ್ವರಾ. || ೬೬೯ ||

೯೧೩

ಪ್ರಾಣನ ಹಸಿವೆದ್ದು ದೇಹವನಂಡಲೆವಾಗ
ಬಾಯ ಸವಿಯನುಂಬರಲ್ಲದೆ
ಲಿಂಗದೇವನ ನೆನಹು ಎಲ್ಲಿಯದೊ ?

ಆ ಲಿಂಗದ ನೆನಹ ಮರೆದು ಅಂಗಕ್ಕೆ ಕೊಂಡರೆ
ಅದೇ ಎಂಜಲು ನೋಡಾ.
ಅಂತಹ ಎಂಜಲೋಗರವ ಮರಳಿ
ಲಿಂಗಕ್ಕೆ ಕೊಡಲಾಗದು ನೋಡಾ.
ಅದೇನು ಕಾರಣವೆಂದೊಡೆ :
ಕಂಡವರ ಕಂಡು ತಾನುಂಡು ಎಂಜಲವ ಮರಳಿ ಮರಳಿ
ಭೋಜಿಯ ಕಟ್ಟಿ ಲಿಂಗಕ್ಕೆ ತೋರಿದಡೆ
ಹುಳುಗೊಂಡದಲ್ಲಿಕ್ಕುವನು ನೋಡಾ ನಮ್ಮ ಅಖಂಡೇಶ್ವರನು. ॥ ೬೭೦ ॥

**೯೧೪**

ಗುರುವಿನೊಡನೆ ಸಹಭೋಜನ ಮಾಡಬೇಕಾದಡೆ,
ಚತುರ್ವಿಧಭಕ್ತಿಯಿಂದೆ ಗುರುವಿನೊಳಗೆ ತನುಪಡಗಿರಬೇಕು.
ಲಿಂಗದೊಡನೆ ಸಹಭೋಜನ ಮಾಡಬೇಕಾದಡೆ,
ಸಂಕಲ್ಪ ವಿಕಲ್ಪ ಸೂತಕ ಪಾತಂಕಗಳಳಿದು
ಲಿಂಗದೊಳಗೆ ಮನಪಡಗಿರಬೇಕು.
ಜಂಗಮದೊಡನೆ ಸಹಭೋಜನ ಮಾಡಬೇಕಾದಡೆ,
ಮಜ್ಜನ ಭೋಜನ ಕುಸುಮ ಗಂಧಾನುಲೇಪನ
ಅನ್ನ ವಸ್ತ್ರ ಮಣಿ ರತ್ನಾಭರಣ ಗೀತ ವಾದ್ಯ ನೃತ್ಯ
ಹಾಸುಮಂಚ ಸ್ತ್ರೀಭೋಗ ಮೊದಲಾದ
ಅನೇಕ ಭಕ್ತಿಯಿಂದೆ ಜಂಗಮಕ್ಕೆ ಧನವ ಸಮರ್ಪಿಸಬೇಕು.
ಇಂತೀ ತ್ರಿವಿಧ ಭಕ್ತಿಯ ನಿರ್ಣಯವನರಿಯದ,
ತನು ಮನ ಧನಂಗಳ ಹಿಂದಿಟ್ಟುಕೊಂಡು
ಮಾತಿನ ಬಣಬೆಯ ಮುಂದಿಟ್ಟುಕೊಂಡು
ನೀತಿಹೀನರು ಸಹಭೋಜನ ಕವಳ ಪ್ರಸಾದವ ಕೊಟ್ಟು ಕೊಂಡಡೆ
ಹುಳುವಿನ ಕೊಂಡದಲ್ಲಿ ಮುಳುಗಿಸಿಬಿಡುವನು ನೋಡಾ
ನಮ್ಮ ಅಖಂಡೇಶ್ವರಾ. ॥ ೬೭೧ ॥

**೯೧೫**

ಕಾಯದ ಕಳವಳದಲ್ಲಿ ಕಂಗೆಟ್ಟು,
ಜೀವನುಪಾಧಿಯಲ್ಲಿ ಸುಳಿದು,
ಪಂಚೇಂದ್ರಿಯಂಗಳಲ್ಲಿ ಸಂಚರಿಸಿ,
ಅರಿಷಡ್‌ವರ್ಗಂಗಳಲ್ಲಿ ಹರಿದಾಡಿ,
ಅಷ್ಟಮದಂಗಳಲ್ಲಿ ಕಟ್ಟುವಡೆದು,
ಇಂತೀ ಅಂಗಪ್ರಕೃತಿಯ ಅಜ್ಞಾನದಲ್ಲಿ ಮಗ್ನವಾಗಿರ್ದು
ಮಹಾಘನಲಿಂಗದೊಡನೆ ಸಹಭೋಜನವ ಮಾಡುವ

ಮರವೆಯ ಹೀನಮಾನವರಲ್ಲರು ಕಲ್ಪಕಲ್ಪಾಂತರ
ನರಕಸಮುದ್ರದಲ್ಲಿ ಮುಳುಗಾಡುತಿರ್ಪರು ನೋಡಾ
ಅಖಂಡೇಶ್ವರಾ. || ೬೭೨ ||

೯೧೬

ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು
ಮನೆಯೆನ್ನದು ಮಕ್ಕಳೆನ್ನವರೆಂದು ಭಿನ್ನಭಾವದಲ್ಲಿರ್ದು,
ಸನ್ನಿಹಿತಜಂಗಮದೊಡನೆ ಸಹಭೋಜನವ ಮಾಡಿದಡೆ
ಕುನ್ನಿ ಕುಕ್ಕುಟನ ಬಸುರಲ್ಲಿ ಬಪ್ಪುದು ತಪ್ಪದು ನೋಡಾ
ಅಖಂಡೇಶ್ವರಾ. || ೬೭೩ ||

೯೧೭

ಸಂಸಾರದೊಳಗಿರ್ದ ಸದ್ಭಕ್ತನು
ಲಿಂಗದೊಡನೆ ಸಹಭೋಜನವ ಮಾಡಬೇಕಾದಡೆ
ಜಂಗಮಪ್ರಸಾದವ ಕೈಕೊಂಡು ತನ್ನ ಲಿಂಗಕ್ಕರ್ಪಿಸಿ
ಆ ಲಿಂಗದೊಡನೆ ಸಹಭೋಜನವ ಮಾಡಬೇಕಲ್ಲದೆ,
ಜಂಗಮಪ್ರಸಾದವಿಲ್ಲದೆ
ಲಿಂಗದೊಡನೆ ಸಹಭೋಜನವ ಮಾಡಲಾಗದು.
ಅದೇನು ಕಾರಣವೆಂದೊಡೆ :
ಜಂಗಮಪ್ರಸಾದವು ಲಿಂಗಕ್ಕೆ ಪರಮಜೀವಕಳೆಯಾದ ಕಾರಣ.
ಅಂತಪ್ಪ ಜಂಗಮದಲ್ಲಿ ರೂಪು ಕುರೂಪು ಕುಲಛಲವ ನೋಡಲಾಗದು.
ಆ ಜಂಗಮದಲ್ಲಿ ವಿದ್ಯೆ ಶಾಸ್ತ್ರ ಬುದ್ಧಿವರ್ಧನ
ಜ್ಞಾನ ಆಚಾರ ಮಾತಿನ ಜಾಣ್ಮೆಯ ಹುಡುಕಲಾಗದು.
ಆ ಜಂಗಮದಲ್ಲಿ ಉಚ್ಚನೀಚವನರಸಲಾಗದು.
ಆ ಜಂಗಮದಲ್ಲಿ ಹಾಸ್ಯ ರಹಸ್ಯ
ಉದ್ದೇಶ ಉದಾಸೀನಂಗಳ ಮಾಡಲಾಗದು.
ಆ ಜಂಗಮದಲ್ಲಿ ಪಂಕ್ತಿಭೇದ, ಪಾಕಭೇದವ ಮಾಡಲಾಗದು.
ಆ ಜಂಗಮದಲ್ಲಿ ಮದಮತ್ಸರಂಗಳಿಂದೆ
ಹಗೆತನವ ಸಾಧಿಸಬಾರದು.
ಆ ಜಂಗಮದ ಮೇಲೆ ಮಿಥ್ಯಾಲಾಪದಿಂದೆ
ಇಲ್ಲದ ಅಪವಾದವ ಕಲ್ಪಿಸಬಾರದು.
ಆ ಜಂಗಮಕ್ಕೆ ಕೋಪಾಟೋಪದ ಉದ್ರೇಕದಿಂದೆ
ನಿಷ್ಠುರವಾಕ್ಯ ನುಡಿಯಲಾಗದು.
ಆ ಜಂಗಮದ ಹಾದಿ ಮಾರ್ಗ ಬೀದಿ ಬಾಜಾರಂಗಳಲ್ಲಿ ಕಂಡು
ಗರ್ವ ಅಹಂಕಾರದಿಂದೆ ಬೇಗ ಬಿರತುಕೊಂಡು ಹೋಗಲಾಗದು.

ಆ ಜಂಗಮದ ಸನ್ನಿಧಿಯಲ್ಲಿ ಆನೆ ಕುದುರೆ
ಅಂದಳ ಪಲ್ಲಕ್ಕಿಗಳ ಏರಲಾಗದು.
ಆ ಜಂಗಮವು ಬರುವ ಇದಿರಿನಲ್ಲಿ
ತೂಗುದೊಟ್ಟಿಲು, ಚಪ್ಪರಮಂಚ,
ಗಗನಮುಪ್ಪರಿಗೆ ಉನ್ನತ ಚೌಕಿಯ ಮೇಲೆ ಕುಳ್ಳಿರಲಾಗದು.
ಆ ಪರಮಜಂಗಮವು ತಮ್ಮ ಕರುಣದಿಂದೆ ಲಿಂಗಾರ್ಪಿತಕ್ಕೆ
ಜಂಘೆಯನಿಟ್ಟು ನಡೆದು ಮನೆಗೆ ಬಂದಲ್ಲಿ
ಕಂಡು ಅಷ್ಟದೋರೆಯನ್ನಿಕ್ಕಲಾಗದು.
ಇಂತೀ ಭೇದಗುಣಂಗಳ ಜಂಗಮದಲ್ಲಿ
ಮಾಡುವ ತಾಮಸಭಕ್ತರಿಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ,
ಪಾದೋದಕ ಪ್ರಸಾದವು ಮುನ್ನವೇ ಇಲ್ಲ,
ಮುಕ್ತಿಯೆಂಬುದು ಎಂದೆಂದಿಗೂ ಇಲ್ಲ.
ಇಂತಪ್ಪ ಅಜ್ಞಾನ ತಾಮಸಭಕ್ತನು
ಲಿಂಗದೂಷಕನ ಸಹಭೋಜನವ ಮಾಡಿದಡೆ
ಶುನಿ ಸೂಕರ ಕುಕ್ಕುಟ ಬಸುರಲ್ಲಿ ಬಂದು ಬಂದು
ಸೂರ್ಯಚಂದ್ರರುಳ್ಳನ್ನಕ್ಕರ
ಹೊಲೆಯರ ಬಾಗಿಲ ಕಾಯ್ದುಕೊಂಡಿಪ್ಪುದು
ತಪ್ಪದು ನೋಡಾ ಅಖಂಡೇಶ್ವರಾ. || ೬೭೪ ||

೯೧೮

ನಡೆವ ಕಾಲದಲ್ಲಿ ನಿಮ್ಮ ಕೂಡೆ ನಡೆವೆನಯ್ಯಾ.
ನುಡಿವ ಕಾಲದಲ್ಲಿ ನಿಮ್ಮ ಕೂಡೆ ನುಡಿವೆನಯ್ಯಾ.
ಹಿಡಿವ ಕಾಲದಲ್ಲಿ ನಿಮ್ಮ ಕೂಡೆ ಹಿಡಿವೆನಯ್ಯಾ.
ಬಿಡುವ ಕಾಲದಲ್ಲಿ ನಿಮ್ಮ ಕೂಡೆ ಬಿಡುವೆನಯ್ಯಾ.
ನೋಡುವ ಕಾಲದಲ್ಲಿ ನಿಮ್ಮ ಕೂಡೆ ನೋಡುವೆನಯ್ಯಾ.
ಕೇಳುವ ಕಾಲದಲ್ಲಿ ನಿಮ್ಮ ಕೂಡೆ ಕೇಳುವೆನಯ್ಯಾ.
ಸೋಂಕುವ ಕಾಲದಲ್ಲಿ ನಿಮ್ಮ ಕೂಡೆ ಸೋಂಕುವೆನಯ್ಯಾ.
ವಾಸಿಸುವ ಕಾಲದಲ್ಲಿ ನಿಮ್ಮ ಕೂಡೆ ವಾಸಿಸುವೆನಯ್ಯಾ.
ರುಚಿಸುವ ಕಾಲದಲ್ಲಿ ನಿಮ್ಮ ಕೂಡೆ ರುಚಿಸುವೆನಯ್ಯಾ.
ನೆನೆವ ಕಾಲದಲ್ಲಿ ನಿಮ್ಮ ಕೂಡೆ ನೆನೆವೆನಯ್ಯಾ.
ಮರೆವ ಕಾಲದಲ್ಲಿ ನಿಮ್ಮ ಕೂಡೆ ಮರೆವೆನಯ್ಯಾ.
ಅರಿವ ಕಾಲದಲ್ಲಿ ನಿಮ್ಮ ಕೂಡೆ ಅರಿವೆನಯ್ಯಾ.
ಇನಮಂಡಲಕಿರಣದಂತೆ

ಸಕಲ ತೋರಿಕೆಯ ತೋರುವ ಕಾಲದಲ್ಲಿ
ನಿಮ್ಮ ಕೂಡೆ ತೋರುವೆನಾಗಿ,
ಅಖಂಡೇಶ್ವರಾ, ನಿಮ್ಮಲ್ಲಿ ಎನಗೆ
ಸಹಭೋಜನವು ಸಮನಿಸಿತ್ತು ನೋಡಾ. ॥ ೬೭೫ ॥

೬೧೯

ಎನಗೆ ನೀನೇ ಚಿದ್‌ಭಾಂಡವಯ್ಯಾ;
ನಿನಗೆ ನಾನೇ ಚಿದ್‌ಭಾಂಡವಯ್ಯಾ.
ಎನಗೆ ನೀನೇ ಚಿದ್‌ಭಾಜನವಯ್ಯಾ;
ನಿನಗ ನಾನೇ ಚಿದ್‌ಭಾಜನವಯ್ಯಾ.
ಎನಗೆ ನೀನೇ ಸಕಲ ದ್ರವ್ಯ ಪದಾರ್ಥವಯ್ಯಾ ;
ನಿನಗೆ ನಾನೇ ಸಕಲದ್ರವ್ಯಪದಾರ್ಥವಯ್ಯ.
ನಾನು ನೀನು ಒಂದೇ ಹರಿವಾಣದಲ್ಲಿ
ಸಹಭೋಜನ ಮಾಡುತಿರ್ದವಾಗಿ,
ಅಖಂಡೇಶ್ವರಾ, ನಾನು ನೀನೆಂಬುಭಯದ
ಕೀಲು ಕಳಚಿತ್ತು ನೋಡಾ. ॥ ೬೭೬ ॥

೬೨೦

ಕೇಳು ಕೇಳಯ್ಯಾ ಕರುಣಿ,
ನೀವು ಎನ್ನ ಮರ್ತ್ಯಲೋಕಕ್ಕೆ ಕಳುಹಿದಿರಾಗಿ,
ನಾನು ಮರವೆಯ ತನುವ ತಾಳಿ ಅರುಹ ಮರೆತು,
ಧರಣಿಯ ವ್ಯಾಪಾರದಲ್ಲಿ ದಿಕ್ಕುಗೆಟ್ಟೆನಯ್ಯಾ.
ಭಕ್ತದೇಹಿಕದೇವನೆಂಬ ಶ್ರುತಿಯ ಮರೆಯಲಾಗದಯ್ಯಾ.
ನಿನ್ನ ಕಂದನೆಂದು ಎನ್ನ ಕರವಿಡಿದು ತಲೆದಡಹಿ
ಪೂರ್ಣಜ್ಞಾನದ ಕಣ್ದೆರೆಸಯ್ಯಾ ಅಖಂಡೇಶ್ವರಾ. ॥ ೬೭೭ ॥

೬೨೧

ತಂದೆ ಕೇಳಯ್ಯಾ ಲಿಂಗವೆ.
ನಾನು ಹಿಂದಣ ಕರ್ಮವಾಸನೆಯಿಂದೆ ಹುಟ್ಟಿದೆನೋ ?
ನಿನ್ನ ಚಿದಂಶಿಕನಾಗಿ ಹುಟ್ಟಿದೆನೋ ?
ಎನಗೆ ಈ ಉಭಯದ ಕೀಲ ತಿಳಿಯಬಾರದು.
ನೀನೊಲಿದು ಕರುಣಿಸಯ್ಯಾ ಶಿವನೆ.
ಎನ್ನ ಮನದ ಸಂಕಲ್ಪದ ಅನುಮಾನವ ಪರಿಹರಿಸಯ್ಯಾ
ಅಖಂಡೇಶ್ವರಾ. ॥ ೬೭೮ ॥

೬೨೨

ಒಮ್ಮೆ ಜ್ಞಾನಿಯೆನಿಸಿ ಮತ್ತೊಮ್ಮೆ ಅಜ್ಞಾನಿಯೆನಿಸಿ
ಎನ್ನನೇತಕೆ ಕಾಡುವೆ ಹೇಳಯ್ಯಾ ?
ಒಮ್ಮೆ ಸಂತೋಷದಲ್ಲಿರಿಸಿ ಮತ್ತೊಮ್ಮೆ ಚಿಂತೆಯಲ್ಲಿರಿಸಿ
ಎನ್ನನೇತಕೆ ಕಾಡುವೆ ಹೇಳಯ್ಯಾ ?
ಮರ್ಕಟನಂತೆ ಎನ್ನ ಮನವ ವ್ಯಾಕುಲದಲ್ಲಿ ಹುಚ್ಚುಗೊಳಿಸಿ
ಎನ್ನನೇತಕೆ ಕಾಡುವೆ ಹೇಳಯ್ಯಾ ?
ನಿಮಗೆ ಹೊತ್ತು ಹೋಗದೆ, ಮತ್ತೊಂದು ವ್ಯಾಪಾರವಿಲ್ಲದೆ
ಎನ್ನ ಕೂಡೆ ಹದರು ಚದುರಿನಿಂದೆ
ವೇಳೆಯವ ಕಳೆವರೆ ಹೇಳಾ ಅಖಂಡೇಶ್ವರಾ. || ೬೨೯ ||

೬೨೩

ಸಕಲ ವ್ಯಾಪಾರವ ಬಿಟ್ಟು ನಿಮಗೆ ನಾನು ಮರುಳಾಗಿರ್ಪೆನಯ್ಯಾ.
ಸಕಲ ವ್ಯಾಪಾರವ ಬಿಟ್ಟು ನನಗೆ ನೀವು ಮರುಳಾಗಿರ್ಪಿರಯ್ಯಾ
ನಿಮಿಷ ನಿಮಿಷಾರ್ಧ ನಾ ನಿಮ್ಮನಗಲದಿರ್ಪೆನಯ್ಯಾ.
ನೀವೆನ್ನ ನಿಮಿಷ ನಿಮಿಷಾರ್ಧವಗಲದಿರ್ಪಿರಯ್ಯಾ.
ಚಿನ್ನ ಬಣ್ಣದಂತೆ ನಾವಿಬ್ಬರು ಕೂಡಿ
ಎಂದೆಂದಿಗೂ ಅಗಲದಂತಿರ್ಪೆವಯ್ಯಾ
ಅಖಂಡೇಶ್ವರಾ. || ೬೩೦ ||

೬೨೪

ಪರಮನಪ್ಪಣೆಯಿಂದ ಧರೆಗಿಳಿದು ಬಂದು
ಗುರುಲಿಂಗಜಂಗಮದ ಭಕ್ತಿಯನಳವಡಿಸಿಕೊಂಡು,
ಷಟ್‌ಸ್ಥಲಬ್ರಹ್ಮದ ಅನುವನರಿದು
ನೂರೊಂದು ಸ್ಥಳಕುಳಂಗಳ ಕರತಳಾಮಳಕವಾಗಿ ತಿಳಿದು,
ನಿಜೈಕ್ಯಪಥದಲ್ಲಿ ನಿರ್ವಯಲಾದರು ಬಸವಣ್ಣ ಮೊದಲಾದ
ಅಸಂಖ್ಯಾತ ಮಹಾಗಣಂಗಳು.
ಅದೆಂತೆಂದೊಡೆ :
ಸಂಗನಬಸವಣ್ಣನು ಕಪ್ಪಡಿಯಸಂಗಯ್ಯನೊಳಗೆ ಬಯಲಾದನು.
ಅಕ್ಕಮಹಾದೇವಿ, ಪ್ರಭುದೇವರು
ಶ್ರೀಶೈಲ ಕದಳಿಯ ಜ್ಯೋತಿರ್ಮಯಲಿಂಗದೊಳಗೆ ಬಯಲಾದರು.
ಹಡಪದಪ್ಪಣ್ಣ, ನೀಲಲೋಚನೆತಾಯಿ ಮೊದಲಾದ
ಕೆಲವು ಗಣಂಗಳು ತಮ್ಮ ಲಿಂಗದಲ್ಲಿ ಬಯಲಾದರು.
ಚೆನ್ನಬಸವಣ್ಣ, ಮಡಿವಾಳ ಮಾಚಿದೇವ,
ಕಿನ್ನರಿಯ ಬ್ರಹ್ಮಿತಂದೆ ಮೊದಲಾದ

ಉಳಿದ ಗಣಂಗಳು ಉಳಿವೆಯ ಮಹಾಮನೆಯಲ್ಲಿ
ಮಹಾಘನಲಿಂಗದೊಳಗೆ ಬಯಲಾದರು.
ಇಂತಪ್ಪ ಸಕಲಗಣಂಗಳಿಗೆ ಆಯಾಯ ಸ್ಥಾನದಲ್ಲಿ
ನಿರವಯಲಪದವ ಕರುಣಿಸಿಕೊಟ್ಟಾತ ನೀನೊಬ್ಬನಲ್ಲದೆ
ಮತ್ತಾರನು ಕಾಣೆನಯ್ಯಾ.
ಇಂತಪ್ಪ ಸಕಲಗಣಂಗಳ ತೊತ್ತಿನಮಗನೆಂದು
ಎನ್ನನೆತ್ತಿಕೊಂಡು ಸಲಹಿದಿರಾಗಿ
ಎನಗೆ ನಿಜೈಕ್ಯ ನಿರವಯಲಪದವೆಲ್ಲಿಹುದೆಂದೊಡೆ :
ಉತ್ಪತ್ತಿ ಸ್ಥಿತಿ ಪ್ರಳಯಂಗಳಿಗೆ ಹೊರಗಾದ
ನಿಮ್ಮ ಪರಾತ್ಪರ ಪರಮ ಹೃದಯಕಮಲಕರ್ಣಿಕಾವಾಸಮಧ್ಯ
ಸೂಕ್ಷ್ಮಬಯಲೊಳಗೆನ್ನ
ನಿರವಯಲ ಮಾಡಿಕೊಳ್ಳಯ್ಯಾ ಅಖಂಡೇಶ್ವರಾ. ॥ ೬೮೧ ॥

೬೨೫

ಸಕಲಮೂರ್ತಿಯಾಗಿ ಇಷ್ಟಲಿಂಗವಾಯಿತ್ತು
ನಿಷ್ಕಲಮೂರ್ತಿಯಾಗಿ ಪ್ರಾಣಲಿಂಗವಾಯಿತ್ತು
ಕೇವಲ ನಿರವಯಮೂರ್ತಿಯಾಗಿ ಭಾವಲಿಂಗವಾಯಿತ್ತು
ಸಕಲಮೂರ್ತಿಗೆ ಕ್ರಿಯೆ, ನಿಷ್ಕಲಮೂರ್ತಿಗೆ ಜ್ಞಾನ,
ಕೇವಲ ನಿರವಯಮೂರ್ತಿಗೆ ಆನಂದ,
ಸ್ಥೂಲವೇ ಕಾಯ, ಸೂಕ್ಷ್ಮವೇ ಪ್ರಾಣ, ಕಾರಣವೇ ವಸ್ತು
ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ ಹೃದಯವೆಂಬವು
ಸೂಕ್ಷ್ಮದ ಷಡ್ವಿಧಲಿಂಗವು.
ಇವಕ್ಕೆ 'ಓಂ ನಮಃಶಿವಾಯ' ಎಂಬುದೇ ತೃಪ್ತಿ
ಸಂತೋಷವೇ ಕಾರಣ, ಮಹಾಕಾರಣವೇ ಪರಿಣಾಮ.
ತೂರ್ಯಾತೀತವಾಗಿ ಸರ್ವಕೇಳಿಕೆಯಂ ಕೇಳಿ
ನಿಜಾನಂದವಾಗಿಹುದು.
ವಿರಾಟವೇ ಸುನಾದವಾಗಿ ಹೊರಬಿದ್ದು ನುಡಿದು
ಭೇರಿನಾದದಂತೆ ಆಕಾಶಧ್ವನಿಯಂತೆ ತನಗೆ ತಾನೇ ಕೇಳುವುದು.
ಹಿರಣ್ಯಗರ್ಭಬಿಂದುವಿನ ಮನೆಯಲ್ಲಿ
ಗಾಳಿಪಟಕ್ಕೆ ಬೇರಬಿರಿಕೆಯ ಕಟ್ಟಿ ನುಡಿಸುವ ತೆರದಂತ ತೇಜವಾಗಿ
ಶಂಖದ ಧ್ವನಿಯಂತೆ ತೋರುತಿರ್ಪ ಸುನಾದಕ್ಕೆ
ಎರಡಂಗುಲದ ಮೇಲೆ ತೇಜವಿಹುದು.
ಅದು ತುಂಬಿದ ಹುಣ್ಣಿಮೆಯ ಬೆಳದಿಂಗಳಂತೆ,
ಚಂದ್ರಜ್ಯೋತಿಯ ಪ್ರಭೆಯಂತೆ, ಹೂಬಿಸಿಲಿನಂತೆ ತೋರುತಿರ್ಪುದು.

ಕಳೆಯ ಮನೆಯಲ್ಲಿ ಎರಡಂಗುಲ ಪ್ರಮಾಣ.
ಮೂಲಪ್ರಕೃತಿ ಮೂಗಿನಮೇಲೆ ಭ್ರೂಮಧ್ಯ ಪ್ರಣವದಲ್ಲಿ
ಓಂಕಾರಧ್ವನಿಯ ಝೇಂಕಾರದಂತೆ, ಘಂಟೆಯ ಬಾರಿಸಿದಂತೆ,
ತಟತಟನೆ ಹಾರಿ ಅದು ಭ್ರೂಮಧ್ಯಸ್ಥಾನದಲ್ಲಿ ತೋರುವುದು.
ನಾದವೇ ಶಬ್ದ, ನಿಃಶಬ್ದವೇ ಬಿಂದುಮಯ.
ನಾದದೊಳಗಿರ್ದ ನಾದವೇ ಓಂಕಾರ.
ಚಿಜ್ಜ್ಯೋತಿಯ ಪ್ರಕಾಶ ಭ್ರೂಮಧ್ಯದ ಪಣೆಯ ಮೇಲೆ
ಎರಡಂಗುಲದಲ್ಲಿ ಕಾಣಿಸುತ್ತಿಹುದು.
ಅದು ಮನದಿಂದೆ ಕಂಡಿತೋ ಕಣ್ಣಿನಿಂದ ಕಂಡಿತೋ ಎಂದಡೆ,
ನೆನಹು ಎಂಬ ಅಂತಃಕರಣ
ಓಂ ನಮಃಶಿವಾಯ ಎಂಬ ಪ್ರಣವಜ್ಯೋತಿಯ ತೋರಿತ್ತು
ಚಿತ್ತದ ತೋರಿಕೆ
ಅರವತ್ತಾರುಕೋಟಿ ಪ್ರಣವಜ್ಯೋತಿಯ ಕಿರಣದಲ್ಲಿ
ತೇರಿನ ಬಡಿಯ ಬಿರಿಸಿನೋಪಾದಿಯ
ನೆನಹು ಮಾತ್ರಕ್ಕೆ ತೋರುತ್ತಿಹುದು.
ಹೊರದೃಷ್ಟಿಯ ಒಳಗಿಟ್ಟು, ಒಳದೃಷ್ಟಿಯ ಹೊರಗಿಟ್ಟು ಪರಿಪೂರ್ಣವಾಗಲು,
ಒಳಹೊರಗೆ ನೋಡುವ ಶಿವಶರಣರ ಮನ ಭಾವಕ್ಕೆ
ಆನಂದವೇ ತೋರುತ್ತಿಹುದು.
ದಿನಕರನ ಕಾಂತಿ, ಮಧ್ಯಾಹ್ನದ ಬಿಸಿಲು, ಅಂತರಂಗದ ಛಾಯೆಯಂತೆ,
ನಿರ್ಮಲವಾದ ದರ್ಪಣದ ಪ್ರತಿಬಿಂಬದಂತೆ,
ತನ್ನ ರೂಪಂಗಳ ತಾನೆ ನೋಡಿದಾತನು ಜೀವನ್ಮುಕ್ತನು.
ಆತ ಭವದಬಳ್ಳಿಯ ಹರಿದು
ನಿತ್ಯಾನಂದ ನಿರ್ಮಳ ನಿರಾವರಣ ನಿಜ ಚಿನ್ಮಯನಾಗಿಹನು.
ಇನ್ನು 'ಓಂ ನಮಃಶಿವಾಯ' ಎಂಬ ಊರ್ಧ್ವಪ್ರಣವ.
ಅಳ್ಳನೆತ್ತಿಯ ಸ್ಥಾನದಲ್ಲಿ ಅರುಹಿನ ಮನೆಯುಂಟು.
ಅದಕ್ಕೆ ತಟಿಮಂತ್ರ.
ಅಂತರಂಗದ ಬಾಯಲ್ಲಿ ಎಡಬಲವು ಎರಡು ಕರ್ಣದ್ವಾರಂಗಳಲ್ಲಿ
ನುಡಿಯ ಕೇಳಿದಡೆ ಸುನಾದವಾಯಿತ್ತು.
ಅದು ದಶನಾದಂಗಳಿಂದೆ
ಶರಧಿ ನಿರ್ಝರ ಮೇಘ ಮುರಜ ಭೇರಿ ಕಹಳೆ
ಘಂಟೆ ಶಂಖ ವೀಣೆ ಭ್ರಮರನಾದಂಗಳೆಂಬ ದಶನಾದಂಗಳನು
ಗುರುಮುಖದಿಂದರಿತು ಹಗಲಿರುಳು ಆ ದಶನಾದಂಗಳೊಳಗಾದ
ಸುನಾದವನು
ಎಡೆದೆರಹಿಲ್ಲದೆ ಲಾಲಿಸಿ ಕೇಳುವುದು ಶಿವಯೋಗೀಶ್ವರರು.

ಅದು ಪ್ರಸಾದಲಿಂಗಸ್ಥಲ, ವಿಶುದ್ಧಿಯ ಮನೆ ; ಶರಣಸ್ಥಲ.
ಆ ಸ್ಥಲದಲ್ಲಿ ನಾದವ ಕೇಳಿದವರಿಗೆ
ಜಾಗ್ರ ಸ್ವಪ್ನ ಸುಷುಪ್ತಿಗಳೆಂಬ ಮೂರವಸ್ಥೆಗಳು, ತನುತ್ರಯಂಗಳು
ತೂರ್ಯದಲ್ಲಿ ಹರಿದುಹೋಗುವವು.
ಸುನಾದದಲ್ಲಿ ಮನಸ್ಸಿಟ್ಟಡೆ
ಓಂ ನಮಃಶಿವಾಯ ಎಂಬ ಪ್ರಣವನಾದವ ಕೇಳಿದವರಿಗೆ
ಸ್ವಪ್ನವು ಎಂದಿಗೂ ತೋರದು.
ಇರುಹೆ ಸುಳಿದಡೆ ಎಚ್ಚರಿಕೆ,
ದಿಗಿಲುಭುಗಿಲೆಂದಡೆ ನೀನಾರೆಲಾ ಎಂದು ಮಾತನಾಡಿಸಿಬಿಡುವನು.
ಆ ಪ್ರಣವಘೋಷ ಸತ್ತೆನೆಂಬಂತೆ ದಿವಸ ಹನ್ನೆರಡು ತಾಸಿನೊಳಗೆ
ತನುವ ಬಿಡುವ ಸಮಯದಲ್ಲಿ
ಆ ಘೋಷ ನಿರ್ಘೋಷವಾಗಿ ನಾದ ನುಡಿಯದು.
ಅದು ಲಕ್ಷವಿಟ್ಟು ನೋಡಿದಡೆ ತೋರುವುದು.
ಅಂಗುಲ ಪ್ರಮಾಣವಾಗಿ ವಸ್ತುವು ಅಂಗುಷ್ಟಕ್ಕೆ ಬರುವುದು.
ವೃಕ್ಷವನೇರಿದ ಸರ್ಪನಂತೆ ಬ್ರಹ್ಮರಂಧ್ರದ ಕೊನೆಗೇರುವುದು.
ಹೆದ್ದುಂಬಿಯ ಕೊಳವಿಯೋಪಾದಿಯಲ್ಲಿ
ವಸ್ತುವು ಅಳ್ಳಿನೆತ್ತಿಯ ಸ್ಥಾನದಲ್ಲಿ ಏರಿ ಹೋಗುವುದು.
ಈ ಮನೆಯ ಶಿವಶರಣ ಬಲ್ಲ.
ಇದು ಹನ್ನೆರಡು ತಾಸು ಪುರಸತ್ತಿಗೆಯ ಹೇಳಿದ ಅರುಹು.
ಇಂತಪ್ಪ ವಸ್ತುವಿನ ನಿಲುಕಡೆಯ ಬಲ್ಲ ಶರಣನು.
ತನ್ನವಸಾನಕಾಲದ ಎಚ್ಚರಿಕೆಯನರಿದು,
ಗೋವು ಮಲಗುವಷ್ಟು ಧರಣಿಯ ಸಾರಣೆಯ ಮಾಡುವುದು.
ಗೋಮಯ ಗೋಮೂತ್ರ ಗೋಕ್ಷೀರ ಗೋದಧಿ
ಗೋಘೃತ ಗೋರೋಚನ ಎಂಬ ಷಡುಸಮ್ಮಾರ್ಜನೆಯ ಮಾಡುವುದು.
ಶಿವಜಂಗಮದ ಧೂಳಪಾದಾರ್ಚನೆಯ ಉದಕಮಂ ನೀಡಿ
ಸಮ್ಮಾರ್ಜನೆಯ ಮಾಡುವುದು.
ರಂಗವಲ್ಲಿಯ ತುಂಬುವುದು, ಭಸ್ಮವ ತಳೆವುದು.
ಪಾದೋದಕ ಪ್ರಸಾದಮಂ ಸಲಿಸಿ,
ಶಿವಗಣಂಗಳಿಗೆ ವಂದನೆಯ ಮಾಡಿ,
ಆ ಸಮ್ಮಾರ್ಜನೆಯ ಮಾಡಿದ ಗದ್ದುಗೆಯ ಮೇಲೆ ಮುಹೂರ್ತವ ಮಾಡಿ,
'ಓಂ ನಮಃಶಿವಾಯ' ಎಂಬ ಪ್ರಣವಸ್ಮರಣೆಯ ಮಾಡುವುದು.
ಹಸ್ತದಲ್ಲಿ ಇಷ್ಟಲಿಂಗವ ಹಿಡಿದುಕೊಂಡು
ಇರವಂತಿಗೆ ಸೇವಂತಿಗೆ ಮೊಲ್ಲೆ ಮಲ್ಲಿಗೆ
ಜಾಜಿ ಕರವೀರ ಸುರಹೊನ್ನೆ ಸಂಪಿಗೆ

ಮರುಗ ಪಚ್ಚೆ ದವನ ಬಿಲ್ವಪತ್ರೆ
ಮೊದಲಾದ ಸಮಸ್ತ ಪುಷ್ಪ ಪತ್ರೆಗಳ ಧರಿಸಿ,
ಆ ಶಿವಲಿಂಗವನು ಮನವೊಲಿದು ಕಂಗಳ ತುಂಬಿ ನೋಡುತ್ತ
ದೇವಭಕ್ತರು ಬಂದಡೆ ಶರಣಾರ್ಥಿ ಎಂದು,
ಮಜ್ಜನವ ನೀಡಿಸಿ, ವಿಭೂತಿಯ ಧರಿಸಿ,
ಪುಷ್ಪಪತ್ರೆಗಳ ಧರಿಸಿ ಎಂದು ಅವರ ಪಾದವಿಡಿದು,
ಶರಣಾರ್ಥಿ ಸ್ವಾಮಿಗಳಿಗೆ ಎಂದು ಹೇಳಿ,
ಶಿವಾರ್ಪಣವ ಮಾಡಿ ಎಂದು ಬಿನ್ನಹವ ಮಾಡುವುದು.
ಮದುವೆ ಮಾಂಗಲ್ಯ ಅರ್ತಿ ಉತ್ಸಾಹ ಶಿಶುವಿನ ಹೆಸರಿಡುವ ಹಾಗೆ
ಹರುಷ ಪರುಷ ಧೈರ್ಯವೇ ಭೂಷಣವಾಗಿ ನಿರೋಧಂಗಳ ಮಾಡದೆ
''ಓಂ ನಮಃಶಿವಾಯ' ಎಂಬ ಮಂತ್ರ ಘೋರ್ಗರೆಯೆ
ನಿರ್ಮಲ ನೈಷ್ಠಿಕದಿಂದೆ
ಶಿವಜಂಗಮದ ಪಾದವನು ಮಸ್ತಕದ ಮೇಲೆ ಇಡಿಸುವುದು.
ಹಿತವಂತರಾದವರು ವೀರಶೈವ ಪರಮವಚನಂಗಳಂ ಕೇಳಿಸುವುದು.
ಎಡಬಲದಲ್ಲಿರ್ದ ಸಕಲ ಭಕ್ತರು ಮಹೇಶ್ವರರು
'ಓಂ ನಮಃಶಿವಾಯ' ಎಂಬ ಶಿವಮಂತ್ರವನ್ನು
ಆ ಶರಣನ ಕರ್ಣಂಗಳಲ್ಲಿ ಉಚ್ಚರಿಸುವುದು.
ಈ ಹಡಗದ ಹಗ್ಗವ ಮತ್ತೊಂದು ಹಡಗಕ್ಕೆ ಹಾಕಿ ಬಿಗಿದಡೆ,
ಹಡಗಕ್ಕೆ ಹಡಗ ಕೂಡಿ, ಸಮುದ್ರದ ತೆರೆಯೋಪಾದಿಯಲ್ಲಿ
ಹಡಗವ ಬಿಟ್ಟು ಪ್ರತಿಹಡಗದೊಳಗೆ ಮೂರ್ತವ ಮಾಡಿದಂತೆ,
ಮಂತ್ರಮಂತ್ರವು ಸಂಬಂಧವಾಗಿ,
ಉರಿ ಕರ್ಪುರ ಕೊಂಡಂತಾಯಿತ್ತು ಶರಣನ ದೇಹಪ್ರಾಣವು.
ಇದು ಗುಹ್ಯಕ್ಕೆ ಗುಹ್ಯ, ಗೋಪ್ಯಕ್ಕೆ ಗೋಪ್ಯ,
ರಹಸ್ಯಕ್ಕೆ ಅತಿ ರಹಸ್ಯ ನೋಡಾ ಅಖಂಡೇಶ್ವರಾ. ॥ ೬೮೨ ॥

೬೨೬

ಏನೆಂಬೆನೇನೆಂಬೆನಯ್ಯ ಒಂದು ಎರಡಾದುದ.
ಏನೆಂಬೆನೇನೆಂಬೆನಯ್ಯ ಎರಡು ಒಂದಾದುದ.
ಏನೆಂಬೆನೇನೆಂಬೆನಯ್ಯಾ ಸರ್ವತೋರಿಕೆ ನಿರವಯಲಾದುದ.
ಏನೆಂಬೆನೇನೆಂಬೆನಯ್ಯಾ ಅಖಂಡೇಶ್ವರಾ
ನಿಮ್ಮೊಳಗೆನಗೆ ಸಮರಸೈಕ್ಯಸಂಬಂಧವಾದುದ. ॥ ೬೮೩ ॥

೬೨೭

ತನುವಿನ ಕೈಯಲ್ಲಿ ಮೂರ್ತಿಗೊಂಡಿರ್ದ
ಘನಮಹಾಲಿಂಗದೊಡನೆ

ಮನ ಬಂದು ಬೇಟವ ಮಾಡಲು
ತನುಮನವೆರಡು ಉರಿನುಂಗಿನ ಕರ್ಪುರದಂತೆ ಕಾಣಾ
ಅಖಂಡೇಶ್ವರಾ. ॥ ೬೮೪ ॥

೬೨೮

ನಾನಿಹ ಪರಿಯಂತರ ನೀನುಂಟು ;
ನೀನಿಹ ಪರಿಯಂತರ ನಾನುಂಟು.
ನಾನು ನೀನೆಂಬುಭಯದ ಸಂದು ಹೋಳಿದ ಬಳಿಕ,
ಇನ್ನೇನುಂಟು ಹೇಳಾ ಅಖಂಡೇಶ್ವರಾ ? ॥ ೬೮೫ ॥

೬೨೯

ತನುವಿಹ ಪರಿಯಂತರ ನಿಮ್ಮ ಪೂಜಿಸಿದೆನಯ್ಯಾ.
ಮನವಿಹ ಪರಿಯಂತರ ನಿಮ್ಮ ನೆನೆದೆನಯ್ಯಾ.
ಭಾವವಿಹ ಪರಿಯಂತರ ನಿಮ್ಮ ಬಯಸಿದೆನಯ್ಯಾ.
ಇಂತಿವೆಲ್ಲವು ನಿಮ್ಮಲ್ಲಿ ಸಯವಾದ ಬಳಿಕ
ಗಜಭುಕ್ತಕಪಿತ್ಥದಂತಿರ್ದೆನಯ್ಯಾ ಅಖಂಡೇಶ್ವರಾ. ॥ ೬೮೬ ॥

೬೩೦

ತನು ನಿಮ್ಮದಾದ ಬಳಿಕ
ಎನಗೆ ಬೇರೆ ತನುವಿಲ್ಲವಯ್ಯಾ.
ಮನ ನಿಮ್ಮದಾನ ಬಳಿಕ
ಎನಗೆ ಬೇರೆ ಮನವಿಲ್ಲವಯ್ಯಾ.
ಧನ ನಿಮ್ಮದಾದ ಬಳಿಕ
ಎನಗೆ ಬೇರೆ ಧನವಿಲ್ಲವಯ್ಯಾ ಅಖಂಡೇಶ್ವರಾ. ॥ ೬೮೭ ॥

೬೩೧

ನಿಮ್ಮ ಪೂಜಿಸಿಹೆನೆಂದಡೆ ತನುವಿಲ್ಲವಯ್ಯಾ ಎನಗೆ.
ಅದೇನು ಕಾರಣವೆಂದೊಡೆ,
ಆ ಪೂಜಿಸುವ ತನು ನೀವೆ ಆದಿರಾಗಿ.
ನಿಮ್ಮ ನೆನೆದಿಹೆನೆಂದಡೆ ಮನವಿಲ್ಲವಯ್ಯಾ ಎನಗೆ.
ಅದೇನು ಕಾರಣವೆಂದೊಡೆ,
ಆ ನೆನೆವ ಮನ ನೀವೆ ಆದಿರಾಗಿ.
ನಿಮ್ಮ ಅರಿದಿಹೆನೆಂದಡೆ ಅರುಹುವಿಲ್ಲವಯ್ಯಾ ಎನಗೆ.
ಅದೇನು ಕಾರಣವೆಂದೊಡೆ,
ಆ ಅರುಹು ನೀವೇ ಆದಿರಾಗಿ.
ಅಖಂಡೇಶ್ವರಾ, ನಿಮ್ಮೊಳಗೆ ನಾನು
ಉರಿಯುಂಡ ಕರ್ಪುರದಂತಿರ್ದೆನಯ್ಯಾ ದೇವರದೇವಾ. ॥ ೬೮೮ ॥

೯೩೨

ಎನ್ನ ಕಾಲಕಲ್ಪಿತಂಗಳು ಹೊರಗಾದುವಯ್ಯಾ.
ಎನ್ನ ಭವಬಂಧನಂಗಳು ಹೊರಗಾದುವಯ್ಯಾ.
ಎನ್ನ ಉತ್ಪತ್ತಿ ಸ್ಥಿತಿಲಯಂಗಳು ಹೊರಗಾದುವಯ್ಯಾ.
ಎನ್ನ ಪ್ರಳಯ ಮಹಾಪ್ರಳಯಂಗಳು ಹೊರಗಾದುವಯ್ಯಾ.
ಇಂತಿವೆಲ್ಲವು ಹೊರಗಾಗಿ ಹೋದುವಾಗಿ
ಅಖಂಡೇಶ್ವರಾ, ನಾನೊಬ್ಬನೆ ನಿರ್ಮಳಗಾದೆನಯ್ಯಾ. ॥ ೬೮೯ ॥

೯೩೩

ಅಹುದೆನಲಮ್ಮೆ, ಅಲ್ಲೆನಲಮ್ಮೆ,
ಇಲ್ಲೆನಲಮ್ಮೆ, ಉಂಟೆನಲಮ್ಮೆ,
ಬೇಕೆನಲಮ್ಮೆ, ಬೇಡೆನಲಮ್ಮೆ
ಅಖಂಡೇಶ್ವರಾ, ನೀವೆಂತಿರ್ದಂತೆ ಸಹಜವಾಗಿರ್ದೆನಯ್ಯಾ. ॥ ೬೯೦ ॥

೯೩೪

ಕಾಲಿಲ್ಲದ ನಡೆ, ಒಡಲಿಲ್ಲದ ರೂಪು,
ಕಂಗಳಿಲ್ಲದ ನೋಟ,
ಮನವಿಲ್ಲದ ಬೇಟ;
ಭಾವವಿಲ್ಲದ ತೃಪ್ತಿ, ಜೀವವಿಲ್ಲದ ಶರಣನ
ಸುಳುಹ ಕಂಡು
ಬೆರಗಾದೆನಯ್ಯಾ ಅಖಂಡೇಶ್ವರಾ. ॥ ೬೯೧ ॥

೯೩೫

ಕನ್ನಡಿಯ ನೋಡುವಲ್ಲಿ ಪ್ರತಿರೂಪು ಕಾಣುತಿರ್ಪುದು.
ಆ ನೋಟವನುಳಿದಲ್ಲಿ ಆ ಪ್ರತಿರೂಪು
ನಿಜರೂಪಿನಲ್ಲಿ ಅಡಗುವಂತೆ
ಅನುಪಮಬ್ರಹ್ಮದಲ್ಲಿ ನೆನಹುದೋರಿ ಚಿತ್ತೆನಿಸಿತ್ತು.
ಆ ಚಿತ್ತಿನಿಂದೆ ಚಿನ್ನಾದ ಚಿದ್ಬಿಂದು
ಚಿತ್ಕಳೆಗಳೊಗೆದುವು.
ಆ ಚಿನ್ನಾದ ಚಿದ್ಬಿಂದು ಚಿತ್ಕಳೆಗಳು
ಆ ಮೂಲ ಚಿತ್‌ಸ್ವರೂಪನಾದ ಶರಣಂಗೆ ದೇಹ ಪ್ರಾಣಾತ್ಮಂಗಳಾಗಿ
ಲಿಂಗಕ್ಕೆ ಪದಾರ್ಥಂಗಳಾಗಿರ್ಪವು.
ಆ ಪದಾರ್ಥಂಗಳು ಲಿಂಗಮುಖಕ್ಕೆ ಸಮವೇಧಿಸಿ
ಆ ಚಿತ್ತು ಚಿತ್‌ಘನವ ಬೆರೆಯಲೊಡನೆ
ಮುನ್ನಿನಂತೆ ಏಕವಾಯಿತ್ತಯ್ಯಾ ಅಖಂಡೇಶ್ವರಾ. ॥ ೬೯೨ ॥

**೯೩೬**

ನಾದ ನಿಜವೆಂಬೆನೆ ? ನಾದ ನಿಜವಲ್ಲ.
ಬಿಂದು ನಿಜವೆಂಬೆನೆ ? ಬಿಂದು ನಿಜವಲ್ಲ.
ಕಳೆ ನಿಜವೆಂಬೆನೆ ? ಕಳೆ ನಿಜವಲ್ಲ.
ಆ ನಾದ ಬಿಂದು ಕಳೆಗಳಿಂದೊಗೆದ
ಜಗವು ನಿಜವೆಂಬೆನೆ ? ಜಗವು ನಿಜವಲ್ಲ.
ಆ ಜಗದ ಮಧ್ಯದಿ ತೋರುವ ಲೀಲೆ ನಿಜವೆಂಬೆನೆ ?
ಲೀಲೆ ನಿಜವಲ್ಲ.
ಇನ್ನಾವುದು ನಿಜವೆಂದೊಡೆ :
ಅಲ್ಲ–ಅಹುದು, ಇಲ್ಲ–ಉಂಟು, ಬೇಕು–ಬೇಡ
ಎಂಬ ಭಾವಕ್ಕೆ ಇಂಬಿಲ್ಲದೆ
ತಾನಿದಿರೆಂಬ ಶಂಕೆದೋರದೆ,
ಅಖಂಡ ಪರಿಪೂರ್ಣವಾದ ಮಹಾಘನವೆ
ನಿಮ್ಮ ನಿಜದ ನಿಲವಯ್ಯಾ ಅಖಂಡೇಶ್ವರಾ. ॥ ೬೯೩ ॥

**೯೩೭**

ಘನಗಂಭೀರ ಮಹಾಘನ ಬೆಳಗಿನೊಳಗೆ
ನಾನೆಂಬುದನರಿಯದಿರ್ದೆನಯ್ಯಾ.
ನೀನೆಂಬುದನರಿಯದಿರ್ದೆನಯ್ಯಾ.
ಏನೇನೂ ಅರಿಯದೆ ಮೌನದಿಂದೆ
ಮರೆದಿರ್ದೆನಯ್ಯಾ ಅಖಂಡೇಶ್ವರಾ. ॥ ೬೯೪ ॥

**೯೩೮**

ಖಂಡಿತಭಾವವಳಿದು ಅಖಂಡಬ್ರಹ್ಮದಲ್ಲಿ
ಅವಿರಳ ಸಮರಸದಿಂದಡಗಿದ ಶರಣಂಗೆ
ಜ್ಞಾನಕ್ರಿಯೆಯೆಂಬುದೇನೊ ?
ಧ್ಯಾನಮೌನವೆಂಬುದೇನೊ ?
ನೇಮ ನಿತ್ಯವೆಂಬುದೇನೊ ?
ಜಪತಪವೆಂಬುದೇನೊ ?
ಅರುಹು ಆಚಾರವೆಂಬುದೇನೊ ?
ಕುರುಹು ಪೂಜೆಯೆಂಬುದೇನೊ ?
ಇಂತೀ ಮೇರೆಯುಳ್ಳನ್ನಕ್ಕರ ಭಿನ್ನಫಲಪ್ರಾಪ್ತಿಯಲ್ಲದೆ,
ಮುಂದೆ ಅವಿರಳ ಸಮರಸ ನಿಜೈಕ್ಯ ನಿರವಯಲ ಪದವಿನ್ನೆಲ್ಲಿಯದೊ ?
ಇದನರಿದು ಇಂತಿವೆಲ್ಲವು ಹಾಳು ಸಂಕಲ್ಪ,
ವಿಪರೀತ ಭ್ರಾಂತಿ, ಅಜ್ಞಾನವೆಂದು ತಿಳಿದು,

ಇವನೆಲ್ಲವ ವಿಭಾಗಿಸಿ ಕಳೆದು,
ಬಚ್ಚಬರಿಯ ಬಯಲಬ್ರಹ್ಮವ ತನ್ನ ನಿಜದ ನಿಲವೆಂದು ತಿಳಿದು,
ದಗ್ಧಪಟನ್ಯಾಯದಂತೆ ದೇಹವಿರ್ದು ನಿರ್ದೇಹಿಯಾಗಿರ್ದನಯ್ಯಾ
ನಿಮ್ಮ ಶರಣ ಅಖಂಡೇಶ್ವರಾ. || ೬೯೫ ||

೬೩೯

ಅನಂತಸಾಧಕಂಗಳ ಕಲಿತ ಆಯಗಾರನು,
ಅಭ್ಯಾಸಿಗಳಿಗೆ ಸಾಧಕವ ಕಲಿಸುವನಲ್ಲದೆ
ತಾ ಮರಳಿ ಅಭ್ಯಾಸವ ಮಾಡುವನೆ ಅಯ್ಯಾ ?
ಅಖಂಡಪರಿಪೂರ್ಣಬ್ರಹ್ಮವನೊಡಗೂಡಿದ
ಮಹಾಘನ ಪರಮ ಶಿವಶರಣನು,
ಸತ್‌ಕ್ರಿಯವನಾಚರಿಸಿದಡೂ
ಲೋಕೋಪಕಾರವಾಗಿ ಆಚರಿಸುವನಲ್ಲದೆ
ಮರಳಿ ತಾನು ಫಲಪದದ ಮುಕ್ತಿಯ
ಪಡೆವೆನೆಂದು ಆಚರಿಸುವನೆ ಅಯ್ಯಾ ?
ಇದು ಕಾರಣ,
ನಿಮ್ಮ ಶರಣನು ಎಷ್ಟು ಸತ್ಕ್ರಿಯವನಾಚರಿಸಿದಡು
ಘೃತಸೋಂಕಿದ ರಸನೆಯಂತೆ, ಕಾಡಿಗ ಹತ್ತಿದ ಅಲಿಯಂತ,
ಹುಡಿ ಹತ್ತದ ಗಾಳಿಯಂತೆ
ನಿರ್ಲೆಪನಾಗಿರ್ಪನಯ್ಯಾ ಅಖಂಡೇಶ್ವರಾ. || ೬೯೬ ||

೬೪೦

ಶರಣನಿರ್ದಲ್ಲಿ ಸಕಲತೀರ್ಥಕ್ಷೇತ್ರಂಗಳಿರ್ಪವು.
ಶರಣನಿರ್ದಲ್ಲಿ ಕೈಲಾಸ ಮೇರು ಮಂದರ ಕುಲಶೈಲಂಗಳಿರ್ಪವು.
ಶರಣನಿರ್ದಲ್ಲಿ ಈರೇಳುಭುವನ ಹದಿನಾಲ್ಕು ಲೋಕಂಗಳಿರ್ಪವು.
ನಮ್ಮ ಅಖಂಡೇಶ್ವರನ ಶರಣನಿರ್ದಲ್ಲಿ
ಅನಂತಕೋಟಿ ಬ್ರಹ್ಮಾಂಡಗಳಿರ್ಪವು ನೋಡಾ. || ೬೯೭ ||

೬೪೧

ಹಿಂದಣ ಶಂಕೆಯ ಹರಿದು, ಮುಂದಣ ಭವವ ಮರೆದು,
ಉಭಯ ಸಂದುಗಿಡಿದು, ಅಖಂಡಬ್ರಹ್ಮವ ತಾನಾದ ಶರಣಂಗೆ
ಜನನವಿಲ್ಲ, ಮರಣವಿಲ್ಲ; ಕಾಲವಿಲ್ಲ, ಕಲ್ಪಿತವಿಲ್ಲ;
ಸುಖವಿಲ್ಲ, ದುಃಖವಿಲ್ಲ; ಪುಣ್ಯವಿಲ್ಲ, ಪಾಪವಿಲ್ಲ;
ಪ್ರಳಯ ಮಹಾಪ್ರಳಯಂಗಳು ಮುನ್ನವೇ ಇಲ್ಲ,
ಇದು ಕಾರಣವಾಗಿ,

ಅನಂತಕೋಟಿ ಅಜಾಂಡಂಗಳು ಅಳಿದುಹೋದಡೆಯೂ
ಅಖಂಡೇಶ್ವರಾ, ನಿಮ್ಮ ಶರಣ ನಿತ್ಯನಾಗಿ ಉಳಿದಿಹನು. ॥ ೧೯೮ ॥

೬೪೨

ಇಂದ್ರಚಂದ್ರರು ಪ್ರಳಯವಾಗಿ ಹೋದಡು
ಶರಣನೇನೆಂದರಿಯನು.
ಹರಿವಿರಿಂಚಿಗಳು ಪ್ರಳಯವಾಗಿ ಹೋದಡು
ಶರಣನೇನೆಂದರಿಯನು.
ದೇವ ದಾನವ ಮಾನವರು ಪ್ರಳಯವಾಗಿ ಹೋದಡು
ಶರಣನೇನೆಂದರಿಯನು.
ಮನುಮುನಿಗಳು ಪ್ರಳಯವಾಗಿ ಹೋದಡು
ಶರಣನೇನೆಂದರಿಯನು.
ಪಂಚತತ್ತ್ವ ಬ್ರಹ್ಮಾಂಡಕೋಟಿಗಳು ಪ್ರಳಯವಾಗಿ ಹೋದಡು
ಅಖಂಡೇಶ್ವರಾ, ನಿಮ್ಮ ಶರಣನೇನೆಂದರಿಯನಯ್ಯಾ. ॥ ೧೯೯ ॥

೬೪೩

ಅಣುವಿಂಗೆ ಅಣು ಮಹತ್ತಿಂಗೆ ಮಹತ್ತಾದ
ಮಹಾಲಿಂಗದೊಳಗೆ ಶರಣನಿರ್ಪನು.
ಆ ಶರಣನೊಳಹೊರಗೆಲ್ಲ ಮಹಾಲಿಂಗವೆ ಭರಿತವಾಗಿರ್ಪುದಾಗಿ,
ನಮ್ಮ ಅಖಂಡೇಶ್ವರನ ಶರಣನ
ಮೂರ್ತಿ ಸಣ್ಣದಾದಡು ಕೀರ್ತಿ ಜಗದಗಲಿರ್ಪುದು ನೋಡಾ. ॥ ೨೦೦ ॥

೬೪೪

ಘನಕ್ಕೆ ಘನವಾದ ಮಹಾಘನವಸ್ತುವಿನಲ್ಲಿ
ಮನವಡಗಿದ ಮಹಾಮಹಿಮಂಗೆ
ಮರಳಿ ನೆನೆಯಬೇಕೆಂಬುದಿಲ್ಲ.
ನೆನೆದು ಧ್ಯಾನಿಸಬೇಕೆಂಬುದಿಲ್ಲ.
ಧ್ಯಾನಿಸಿ ಕಾಣಬೇಕೆಂಬುದಿಲ್ಲ.
ಕಂಡು ಕೂಡಬೇಕೆಂಬುದಿಲ್ಲ.
ಅಖಂಡೇಶ್ವರಾ, ನಿಮ್ಮನೊಡಗೂಡಿದ
ಶರಣಂಗೆ ಏನೆಂದೆನಲಿಲ್ಲ. ॥ ೨೦೧ ॥

೬೪೫

ಎಲ್ಲಿ ನೋಡಿದಡಲ್ಲಿ ನೀನೇ ದೇವ.
ಎಲ್ಲಿ ಮುಟ್ಟಿದಡಲ್ಲಿ ನೀನೇ ದೇವ.
ಎಲ್ಲಿ ನೆನೆದಡಲ್ಲಿ ನೀನೇ ದೇವ.

ಎಲ್ಲಿ ಭಾವಿಸಿದಡಲ್ಲಿ ನೀನೇ ದೇವ.
ಎಲ್ಲೆಡೆಯಲ್ಲಿ ನಿಮ್ಮ ಮಹಾಪ್ರಭೆ ಮುಸುಕಿತ್ತಾಗಿ
ಅಖಂಡೇಶ್ವರಾ, ನಾನು ನೀನೆಂಬುದಕ್ಕೆ ತೆರಹಿಲ್ಲ ದೇವಾ. || ೭೦೨ ||

೯೪೬

ತೆರಹಿಲ್ಲ ತೆರಹಿಲ್ಲವಯ್ಯಾ ನಡೆನೋಟಕ್ಕೆ.
ತೆರಹಿಲ್ಲ ತೆರಹಿಲ್ಲವಯ್ಯಾ ನುಡಿಗಡಣಕ್ಕೆ.
ತೆರಹಿಲ್ಲ ತೆರಹಿಲ್ಲವಯ್ಯಾ ಮನಜ್ಞಾನಕ್ಕೆ.
ತೆರಹಿಲ್ಲ ತೆರಹಿಲ್ಲವಯ್ಯಾ ಭಾವಭಾವಕ್ಕೆ.
ಅಖಂಡೇಶ್ವರಾ, ಎಲ್ಲವು ನೀವೆ ಆದಿರಿ.
ನಿಮ್ಮೊಳಗೆ ನೀವೆ ಸುಳಿಯುತಿರ್ಪಿರಿ.
ನಿಮ್ಮ ನೀವೆ ಅರಿಯುತಿರ್ಪಿರಯ್ಯಾ. || ೭೦೩ ||

೯೪೭

ಅಂಡಾಭರಣರು ಘನವೆಂಬೆನೆ ? ಅಂಡಾಭರಣರು ಘನವಲ್ಲ,
ರುಂಡಾಭರಣರು ಘನವೆಂಬೆನೆ ? ರುಂಡಾಭರಣರು ಘನವಲ್ಲ,
ಗಂಗಾಧರರು ಘನವೆಂಬೆನೆ ? ಗಂಗಾಧರರು ಘನವಲ್ಲ,
ಗೌರೀವಲ್ಲಭರು ಘನವೆಂಬೆನೆ ? ಗೌರೀವಲ್ಲಭರು ಘನವಲ್ಲ,
ಚಂದ್ರಶೇಖರರು ಘನವೆಂಬೆನೆ ? ಚಂದ್ರಶೇಖರರು ಘನವಲ್ಲ,
ನಂದಿವಾಹನರು ಘನವೆಂಬೆನೆ ? ನಂದಿವಾಹನರು ಘನವಲ್ಲ,
ತ್ರಿಯಂಬಕರು ಘನವೆಂಬೆನೆ ? ತ್ರಿಯಂಬಕರು ಘನವಲ್ಲ,
ತ್ರಿಪುರವೈರಿ ಘನವೆಂಬೆನೆ ? ತ್ರಿಪುರವೈರಿ ಘನವಲ್ಲ,
ಪಂಚಮುಖರು ಘನವೆಂಬೆನೆ ? ಪಂಚಮುಖರು ಘನವಲ್ಲ,
ಫಣಿಕುಂಡಲರು ಘನವೆಂಬೆನೆ ? ಫಣಿಕುಂಡಲರು ಘನವಲ್ಲ,
ಶೂಲಪಾಣಿಗಳು ಘನವೆಂಬೆನೆ ? ಶೂಲಪಾಣಿಗಳು ಘನವಲ್ಲ,
ನೀಲಲೋಹಿತರು ಘನವೆಂಬೆನೆ ? ನೀಲಲೋಹಿತರು ಘನವಲ್ಲ,
ಅದೇನು ಕಾರಣವೆಂದೊಡೆ,
ಇಂತಿವರಾದಿಯಾಗಿ ಅನಂತಕೋಟಿ ರುದ್ರಗಣಂಗಳು
ಶರಣನ ಸರ್ವಾಂಗದಲ್ಲಿ ಅಡಗಿಹರಾಗಿ
ಅಖಂಡೇಶ್ವರಾ, ನಿಮ್ಮ ಶರಣ ಘನಕ್ಕೆ ಘನವೆಂಬೆನಯ್ಯಾ. || ೭೦೪ ||

೯೪೮

ಅಖಂಡಜ್ಞಾನಭರಿತ ಶರಣಂಗೆ ಪೃಥ್ವಿಯು ಖಟ್ವಾಂಗ,
ಆಕಾಶವೇ ಕಿರೀಟ, ಮೇಘಾದಿಗಳೆ ಮಜ್ಜನ,
ನಕ್ಷತ್ರಂಗಳೆ ಪುಷ್ಪಮಾಲೆಗಳು, ವೇದಂಗಳೆ ಮುಖಂಗಳು,

ಶಾಸ್ತ್ರಂಗಳೆ ಅವಯವಂಗಳು,
ಸೋಮಸೂರ್ಯಾಗ್ನಿಗಳೆ ನಯನಂಗಳು,
ದಶದಿಕ್ಕುಗಳೆ ಹೊದಿಕೆಗಳು, ಬ್ರಹ್ಮಾಂಡವೆ ಒಡಲಾದ
ಮಹಾಮಹಿಮನ ಏನೆಂದು ಉಪಮಿಸಬಹುದಯ್ಯಾ ಅಖಂಡೇಶ್ವರಾ. ?
|| ೨೦೫ ||

**೯೪೯**

ಪೃಥ್ವಿ ಅಡಗುವುದಕ್ಕೆ ಅಪ್ಪುವೆ ಆಶ್ರಯವಾಗಿರ್ಪುದು.
ಆ ಅಪ್ಪು ಅಡಗುವುದಕ್ಕೆ ಅಗ್ನಿಯೆ ಆಶ್ರಯವಾಗಿರ್ಪುದು.
ಆ ಅಗ್ನಿ ಅಡಗುವುದಕ್ಕೆ ವಾಯುವೆ ಆಶ್ರಯವಾಗಿರ್ಪುದು.
ಆ ವಾಯು ಅಡಗುವುದಕ್ಕೆ ಆಕಾಶವೆ ಆಶ್ರಯವಾಗಿರ್ಪುದು.
ಆ ಆಕಾಶ ಅಡಗುವುದಕ್ಕೆ ಆತ್ಮವೆ ಆಶ್ರಯವಾಗಿರ್ಪುದು.
ಆ ಆತ್ಮ ಅಡಗುವುದಕ್ಕೆ ಆದಿಯೆ ಆಶ್ರಯವಾಗಿರ್ಪುದು.
ಆ ಆದಿ ಅಡಗುವುದಕ್ಕೆ ಅನಾದಿಯೆ ಆಶ್ರಯವಾಗಿರ್ಪುದು.
ಆ ಅನಾದಿ ಅಡಗುವುದಕ್ಕೆ ಶೂನ್ಯವೆ ಆಶ್ರಯವಾಗಿರ್ಪುದು.
ಆ ಶೂನ್ಯ ಅಡಗುವುದಕ್ಕೆ ನಿರವಯವೆ ಆಶ್ರಯವಾಗಿರ್ಪುದು.
ಆ ನಿರವಯ ಅಡಗುವುದಕ್ಕೆ ನಿಜವೆ ಆಶ್ರಯವಾಗಿರ್ಪುದು.
ಆ ನಿಜ ಅಡಗುವುದಕ್ಕೆ ಅಖಂಡೇಶ್ವರಾ, ನಿಮ್ಮ ಶರಣನ
ಪರಮ ಹೃದಯಕಮಲವೆ ಆಶ್ರಯವಾಗಿರ್ಪುದಯ್ಯಾ. || ೨೦೬ ||

**೯೫೦**

ಅನುಪಮ ಶರಣನ ನೆನಹಿನ ಕೊನೆಯಲ್ಲಿ ಘನಲಿಂಗವು.
ಆ ಘನಲಿಂಗದ ನೆನಹಿನ ಕೊನೆಯಲ್ಲಿ ನಿರವಯವು.
ಆ ನಿರವಯದ ನೆನಹಿನ ಕೊನೆಯಲ್ಲಿ ನಿರಾಲಂಬವು.
ಆ ನಿರಾಲಂಬದ ನೆನಹಿನ ಕೊನೆಯಲ್ಲಿ ನಿರಾಳವು.
ಆ ನಿರಾಳದ ನೆನಹಿನ ಕೊನೆಯಲ್ಲಿ ಆದಿಮಹಾಲಿಂಗವು.
ಆ ಆದಿ ಮಹಾಲಿಂಗದ ನನಹಿನ ಕೊನೆಯಲ್ಲಿ ಚಿತ್‌ಶಕ್ತಿ
ಆ ಚಿತ್‌ಶಕ್ತಿಯ ನೆನಹಿನ ಕೊನೆಯಲ್ಲಿ ಪರಮೇಶ್ವರನು.
ಆ ಪರಮೇಶ್ವರನ ನೆನಹಿನ ಕೊನೆಯಲ್ಲಿ ಪರಾಶಕ್ತಿ
ಆ ಪರಾಶಕ್ತಿಯ ನೆನಹಿನ ಕೊನೆಯಲ್ಲಿ ಸದಾಶಿವನು.
ಆ ಸದಾಶಿವನ ನನಹಿನ ಕೊನೆಯಲ್ಲಿ ಆದಿಶಕ್ತಿ
ಆ ಆದಿಶಕ್ತಿಯ ನೆನಹಿನ ಕೊನೆಯಲ್ಲಿ ಈಶ್ವರನು.
ಆ ಈಶ್ವರನ ನೆನಹಿನ ಕೊನೆಯಲ್ಲಿ ಇಚ್ಫಾಶಕ್ತಿ
ಆ ಇಚ್ಛಾಶಕ್ತಿಯ ನೆನಹಿನ ಕೊನೆಯಲ್ಲಿ ಮಹೇಶ್ವರನು.
ಆ ಮಹೇಶ್ವರನ ನೆನಹಿನ ಕೊನೆಯಲ್ಲಿ ಜ್ಞಾನಶಕ್ತಿ

ಆ ಜ್ಞಾನಶಕ್ತಿಯ ನೆನಹಿನ ಕೊನೆಯಲ್ಲಿ ಶ್ರೀರುದ್ರಮೂರ್ತಿ.
ಆ ಶ್ರೀರುದ್ರಮೂರ್ತಿಯ ನೆನಹಿನ ಕೊನೆಯಲ್ಲಿ ವಿಷ್ಣುವು.
ಆ ವಿಷ್ಣುವಿನ ನೆನಹಿನ ಕೊನೆಯಲ್ಲಿ ಮಹಾಲಕ್ಷ್ಮಿ.
ಆ ಮಹಾಲಕ್ಷ್ಮಿಯ ನೆನಹಿನ ಕೊನೆಯಲ್ಲಿ ಬ್ರಹ್ಮನು.
ಆ ಬ್ರಹ್ಮನ ನೆನಹಿನ ಕೊನೆಯಲ್ಲಿ ಸರಸ್ವತಿ.
ಆ ಸರಸ್ವತಿಯ ನೆನಹಿನ ಕೊನೆಯಲ್ಲಿ ಸಕಲ ಚರಾಚರಂಗಳು.
ಇಂತಿವೆಲ್ಲವು ಶರಣನ ನೆನಹುಮೋರಿದಲ್ಲಿಯೇ ತೋರುತಿರ್ಪವು,
ಆ ಶರಣನ ನೆನಹು ನಿಂದಲ್ಲಿಯೇ ಅಡುಗುತಿರ್ಪುವಾಗಿ,
ಅಖಂಡೇಶ್ವರಾ, ನಿಮ್ಮ ಶರಣನು ಘನಕ್ಕೆ ಘನಮಹಿಮ,
ವಾಙ್ಮನಕ್ಕಗೋಚರನು, ಉಪಮೆಗೆ ಉಪಮಾತೀತನು ನೋಡಾ. ॥ ೭೦೭ ॥

೬೫೧

ಆಕಾಶದಲ್ಲಿ ತೋರಿದ ಇಂದ್ರಧನು ಅಡಗುವುದಕ್ಕೆ
ಆಕಾಶವ ಆಶ್ರಯವಲ್ಲದೆ ಬೇರೆ ಆಶ್ರಯವುಂಟೆ ಅಯ್ಯಾ ?
ಗಾಳಿಯಲ್ಲಿ ತೋರಿದ ಸುಳಿಗಾಳಿ ಅಡಗುವುದಕ್ಕೆ
ಆ ಗಾಳಿಯ ಆಶ್ರಯವಲ್ಲದೆ ಬೇರೆ ಆಶ್ರಯವುಂಟೆ ಅಯ್ಯಾ ?
ಅಗ್ನಿಯಿಂದ ತೋರಿದ ಕಿಡಿಗಳು ಅಡಗುವುದಕ್ಕೆ
ಆ ಅಗ್ನಿಯೆ ಆಶ್ರಯವಲ್ಲದೆ ಬೇರೆ ಆಶ್ರಯವುಂಟೆ ಅಯ್ಯಾ ?
ಸಮುದ್ರದಲ್ಲಿ ತೋರಿದ ನೊರೆತೆರೆ ತುಂತುರ್ವನಿ ಅಡಗುವುದಕ್ಕೆ
ಆ ಸಮುದ್ರವೆ ಆಶ್ರಯವಲ್ಲದೆ ಬೇರೆ ಆಶ್ರಯವುಂಟೆ ಅಯ್ಯಾ ?
ಆದಿ ಅನಾದಿಯಿಂದತ್ತತ್ತಲಾದ ಮಹಾಘನವಸ್ತುವಿನಲ್ಲಿ
ರೂಪಿಸಿ ತೋರಿದ ನಿಜೈಕ್ಯನಡಗುವುದಕ್ಕೆ
ಆ ಪರವಸ್ತುವೆ ಆಶ್ರಯವಲ್ಲದೆ,
ಬೇರೆ ಆಶ್ರಯವುಂಟೆ ಅಯ್ಯಾ ಅಖಂಡೇಶ್ವರಾ. ॥ ೭೦೮ ॥

೬೫೨

ಬಯಲು ಬಯಲು ಬೆರೆದಲ್ಲಿ ಮೇರೆಯುಂಟೆ ಅಯ್ಯಾ ?
ಕ್ಷೀರ ಕ್ಷೀರವ ಕೂಡಿದಲ್ಲಿ ಪದರುಂಟೆ ಅಯ್ಯಾ ?
ಉರಿಕರ್ಪುರಸಂಯೋಗ ನಿಷ್ಪತ್ತಿಯಾದಲ್ಲಿ
ಮರಳಿ ರೂಪಿಸಿ ಹಿಡಿಯಲುಂಟೆ ಅಯ್ಯಾ ?
ನಿಮ್ಮೊಳೊಡವೆರೆದ ನಿಜೈಕ್ಯನ ಕುರುಹ
ಮರಳಿ ತೋರಲುಂಟೆ ಅಯ್ಯಾ ಅಖಂಡೇಶ್ವರಾ ? ॥ ೭೦೯ ॥

೬೫೩

ನದಿ ನದಿಯ ಕೂಡಿದಂತೆ, ಬಯಲು ಬಯಲ ಬೆರೆದಂತೆ,
ವಾತು ವಾತ ಕಲೆತಂತೆ, ಜ್ಯೋತಿ ಜ್ಯೋತಿ ಒಂದಾದಂತೆ

ಅಖಂಡೇಶ್ವರಾ, ನಿಮ್ಮೊಳೊಡವೆರೆದ
ನಿಜೈಕ್ಯನ ಕುರುಹು ಇಂತುಟಯ್ಯಾ. || ೭೧೦ ||

**೯೫೪**

ಕೇಳಿ ಕೇಳಿರಯ್ಯಾ ಮರ್ತ್ಯಲೋಕದ ಮಹಾಗಣಂಗಳು ನೀವೆಲ್ಲ.
ನಾವು ನಮ್ಮ ಲಿಂಗದೊಳಗೆ
ಅಂಗಸಹಿತ ಐಕ್ಯವಾಗುವ ಠಾವ ಹೇಳಿಹೆವು ಕೇಳಿರಯ್ಯಾ !
ಕೇಳಿರಯ್ಯಾ, ಏಕಚಿತ್ತರಾಗಿ ಲಾಲಿಸಿರಯ್ಯಾ.
ಷಣ್ಮುಖನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಸದಾನಂದನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಸದಾನಂದನೆಂಬ ಗಣೇಶ್ವರನ ಹೃದಯಕಮಲಕರ್ಣಿಕದಲ್ಲಿ
ವಿಶ್ವತೋಮುಖನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ವಿಶ್ವತೋಮುಖನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಆದಿನಾಥನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಆದಿನಾಥನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಅನಾದಿನಾಥನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಅನಾದಿನಾಥನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಗೋಳಕನಾಥನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಗೋಳಕನಾಥನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಅಗಮ್ಯೇಶ್ವರನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಅಗಮ್ಯೇಶ್ವರನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಅಖಂಡೇಶ್ವರನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಅಖಂಡೇಶ್ವರನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಜ್ಯೋತಿರ್ಮಯನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಜ್ಯೋತಿರ್ಮಯನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಅಭೇದ್ಯನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಅಭೇದ್ಯನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಅಪ್ರಮಾಣನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಅಪ್ರಮಾಣನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಅವಾಚ್ಯಾತ್ಮಕನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಅವಾಚ್ಯಾತ್ಮಕನೆಂಬ ಗಣೇಶ್ವರನ ಹೃದಯಕಮಲದಲ್ಲಿ
ಸರ್ವಶೂನ್ಯ ನಿರಾಲಂಬನೆಂಬ ಗಣೇಶ್ವರನು ಮೂರ್ತಿಗೊಂಡಿರ್ಪನು.
ಆ ಸರ್ವಶೂನ್ಯ ನಿರಾಲಂಬನೆಂಬ ಗಣೇಶ್ವರನ ಹೃದಯಕಮಲಮಧ್ಯದ
ಮಹಾಬಯಲೊಳಗೆ ನಮ್ಮ ಅಖಂಡೇಶ್ವರಲಿಂಗಸಹಿತ ನಿರವಯಲಾಗಿ
ಮರಳಿ ಇತ್ತ ಬಾರದಿರ್ಪೆವು ಕೇಳಿರಯ್ಯಾ. || ೭೧೧ ||

೬೫೫

ಬಯಲ ಸ್ತ್ರೀಯಳ ನಿರವಯಲ ಪುರುಷ ಬಂದು ಕೂಡಲು
ಚಿದ್‌ಬಯಲೆಂಬ ಶಿಶು ಹುಟ್ಟಿತ್ತು,
ಆ ಶಿಶುವನು ಮಹಾಬಯಲೆಂಬ ತೊಟ್ಟಿಲಲ್ಲಿ ಮಲಗಿಸಿ
ನಿರಾಳ ನಿಃಶೂನ್ಯವೆಂಬ ನೇಣ ಕಟ್ಟಿ ತೂಗಿ ಜೋಗುಳವಾಡಲು,
ಆ ಶಿಶುವು ತನ್ನಿಂದ ತಾನೇ ತಂದೆ ತಾಯಿಗಳಿಬ್ಬರನೂ ನುಂಗಿತ್ತು,
ಆ ತಂದೆ ತಾಯಿಗಳ ನುಂಗಲೊಡನೆ ಜೋಗುಳದ ಉಲುಹು ಅಡಗಿತ್ತು,
ಆ ಜೋಗುಳದ ಉಲುಹು ಅಡಗಿದೊಡನೆ
ನಿರಾಳ ನಿಃಶೂನ್ಯವೆಂಬ ನೇಣು ಹರಿಯಿತ್ತು,
ಆ ನಿರಾಳ ನಿಃಶೂನ್ಯವೆಂಬ ನೇಣು ಹರಿಯಲೊಡನೆ
ಆ ಶಿಶು ತೊಟ್ಟಿಲಸಹವಾಗಿ ಬಟ್ಟಬಯಲಾಯಿತ್ತು,
ಆ ಶಿಶು ತೊಟ್ಟಿಲಸಹವಾಗಿ ಬಟ್ಟಬಯಲಾಗಲೊಡನೆ
ಅಖಂಡೇಶ್ವರನೆಂಬ ಬಯಲಿನ ಬಯಲ ಬಚ್ಚಬರಿಯ
ಘನಗಂಭೀರ ಮಹಾಬಯಲೊಳಗೆ ನಾನೆತ್ತ ಹೋದೆನೆಂದರಿಯೆ. ॥ ೭೧೨ ॥

೬೫೬

ನೋಡಲಿಲ್ಲದ ಬಯಲು, ಸೂಡಲಿಲ್ಲದ ಬಯಲು,
ಕೂಡಲಿಲ್ಲದ ಬಯಲು,
ನಾಮವಿಲ್ಲದ ಬಯಲು, ಸೀಮೆಯಿಲ್ಲದ ಬಯಲು,
ಕಾರ್ಯವಿಲ್ಲದ ಬಯಲು, ಕಾರಣವಿಲ್ಲದ ಬಯಲು,
ಅಖಂಡೇಶ್ವರನೆಂಬ ಬಯಲಿನ ಬಯಲು
ಮಹಾಬಯಲೊಳಗೆ ನಾನೆತ್ತ ಹೋದೆನೆಂದರಿಯೆ. ॥ ೭೧೩ ॥

೬೫೭

ಮೂರ್ತಿಯಿಲ್ಲದ ಬಯಲು, ಅಮೂರ್ತಿಯಿಲ್ಲದ ಬಯಲು,
ಸಗುಣವಿಲ್ಲದ ಬಯಲು, ನಿರ್ಗುಣವಿಲ್ಲದ ಬಯಲು,
ಅಖಂಡೇಶ್ವರನೆಂಬ ಮಹಾಬಯಲೊಳಗೆ
ನಾನೆತ್ತ ಹೋದೆನೆಂದರಿಯೆ. ॥ ೭೧೪ ॥

೬೫೮

ಸಾಕಾರವಿಲ್ಲದ ಬಯಲು, ನಿರಾಕಾರವಿಲ್ಲದ ಬಯಲು,
ಪ್ರವೃತ್ತಿಯಿಲ್ಲದ ಬಯಲು, ನಿವೃತ್ತಿಯಿಲ್ಲದ ಬಯಲು,
ಅಖಂಡೇಶ್ವರನೆಂಬ ಮಹಾಬಯಲೊಳಗೆ
ನಾನೆತ್ತ ಹೋದೆನೆಂದರಿಯೆ. ॥ ೭೧೫ ॥

೯೫೯

ಭಾವವಿಲ್ಲದ ಬಯಲು, ಜೀವವಿಲ್ಲದ ಬಯಲು,
ಮನವಿಲ್ಲದ ಬಯಲು, ಮನನವಿಲ್ಲದ ಬಯಲು,
ಅಖಂಡೇಶ್ವರನೆಂಬ ಮಹಾಬಯಲೊಳಗೆ
ನೆನಹಡಗಿ ನಿಷ್ಪತ್ತಿಯಾಗಿರ್ದೆನು. ॥ ೭೧೬ ॥

೯೬೦

ಆದಿಯಿಲ್ಲದ ಬಯಲು, ಅನಾದಿಯಿಲ್ಲದ ಬಯಲು,
ಶೂನ್ಯವಿಲ್ಲದ ಬಯಲು, ನಿಃಶೂನ್ಯವಿಲ್ಲದ ಬಯಲು,
ಸುರಾಳವಿಲ್ಲದ ಬಯಲು, ನಿರಾಳವಿಲ್ಲದ ಬಯಲು,
ಸಾವಯವಿಲ್ಲದ ಬಯಲು, ನಿರಾವಯವಿಲ್ಲದ ಬಯಲು,
ಅಖಂಡೇಶ್ವರನೆಂಬ ಬಯಲಿನ ಬಯಲು
ಮಹಾಘನ ಬಚ್ಚಬರಿಯ ಬಯಲೊಳಗೆ
ಎಚ್ಚರವಡಗಿ ನಾನೆತ್ತ ಹೋದೆನೆಂದರಿಯೆನು. ॥ ೭೧೭ ॥

■■

## ಸಂಗನಬಸವೇಶ್ವರದೇವರ ವಚನ

೯೬೧

ಅಯ್ಯಾ, ಇಂತು ವಿರಾಜಿಸುವ ಗುರುಸಿದ್ಧೇಶ್ವರಸ್ವಾಮಿಗಳು.
ಮುಂದೆ, ಗುರುಪುರದ ಮೇಲುಮಠದ ಮಹಾಮಂದಿರದ
ರಂಗಮಂಟಪ ಸಿಂಹಾಸನಕ್ಕೆ ಮೂಲಮೂರ್ತಿಯಾದ
ಮರಿಮಹಾಂತೇಶ್ವರಸ್ವಾಮಿಗಳು.
ಆ ಮರಿಮಹಾಂತೇಶ್ವರನ ಕರಕಮಲೋದ್ಭವನಾದ
ಶಿವಪುರದ ಬಸವಪ್ರಭುಶೆಟ್ಟಿ.
ಆ ಬಸವಪ್ರಭುಶೆಟ್ಟಿಯ ಕರ ಮನ ಸುಭಾವದಲ್ಲಿ ಪೂಜೆಗೊಂಡು
ಆ ಬಸವಪ್ರಭುಶೆಟ್ಟಿಯ ತಮ್ಮ ಚರಣಕಮಲದಲ್ಲಿ
ಅಮಳ್ಯೈಕ್ಯವ ಮಾಡಿಕೊಂಡ ಮೇಲೆ ಮಹಾಜ್ಞಾನ ತಲೆದೋರಿ
ಸಮಸ್ತ ಭೋಗಂಗಳ ತ್ಯಜಿಸಿ ವೈರಾಗ್ಯದಿಂದ
ಗುರೂಪಾವಸ್ಥೆಯ ಮಾಡುತ್ತಿರಲು,
ಆ ಸಮಯದಲ್ಲಿ ಹರದನಹಳ್ಳಿ ಸ್ಥಾಪನಾಚಾರ್ಯ
ಶಿವಲಿಂಗಶಕ್ತಿವಲ್ಲಭನಾದ
ಬಸವಲಿಂಗದೇಶಿಕೋತ್ತಮನು ಪ್ರತ್ಯಕ್ಷವಾಗಿ
ಆ ಸಂಗನಬಸವೇಶ್ವರಸ್ವಾಮಿಗಳ ಒಡಗೂಡಿಕೊಂಡು
ಶ್ರೀಶೈಲಪರ್ವತಕ್ಕೆ ನೈಋತ್ಯಭಾಗದಲ್ಲೊಪ್ಪುವ
ಕುಮಾರಪರ್ವತದ ಉತ್ತರದಿಕ್ಕಿನಲ್ಲೊಪ್ಪುವ

ನಾಗರಗವಿಯೆಂಬ ಸಿಂಹಾಸನದಲ್ಲಿ ಜಂಗಮಮೂರ್ತಿಗಳೊಡಗೂಡಿ
ಶಿವಾನುಭಾವಸೂತ್ರದಲ್ಲೊಪ್ಪುವ ಗುರುಸಿದ್ಧಸ್ವಾಮಿಗಳಿಗೆ
ಉಭಯಮೂರ್ತಿಗಳು ಅಷ್ಟಾಂಗಪ್ರಣಿತರಾಗಿ ಅಭಿವಂದಿಸಲು,
ಆಗ ಮಹಾಸ್ವಾಮಿಗಳು ದಯಾಂತಃಕರುಣ ಹುಟ್ಟಿ
ಬಸವಲಿಂಗದೇಶಿಕೇಂದ್ರನ ಆಪ್ತತ್ವದಿಂದ ಹರಗುರುವಾಕ್ಯಪ್ರಮಾಣವಾಗಿ
ಸ್ಥಲಮೆಟ್ಟಿಗೆಯಿಂದ ಮಣಿಗಣಸೂತ್ರದಂತೆ ಸೇರಿಸಿ
ಬೋಧಿಸುವ ಸಮಯದಲ್ಲಿ ಬಸವಲಿಂಗೇಶ್ವರನು ಲಿಖಿತವ ಮಾಡಿ,
ಆ ಗುರುವರನ ಹಸ್ತಕಮಲಕ್ಕೆ ಕೊಡಲು,
ಆಗ ಗುರುವರನು ಈ ಉಭಯಮೂರ್ತಿಗಳ ಒಡಗೂಡಿ
ಆಸನವ ಬಿಟ್ಟೆದ್ದು ಕರ್ತುಸ್ವರೂಪವಾದ
ಶಾಂತಮಲ್ಲಸ್ವಾಮಿಗಳ ಮುಂದೆ ಆ ಪುಸ್ತಕವನಿಟ್ಟು,
ತ್ರಿವಿಧಮೂರ್ತಿಗಳು ಶರಣುಹೊಗಲು,
ಆಗ ಶಾಂತಮಲ್ಲಸ್ವಾಮಿಗಳು ಆ ಪುಸ್ತಕವ ಬಿಚ್ಚಿ
ಈ ತ್ರಿವಿಧಮೂರ್ತಿಗಳು ಸಹವಾಗಿ
ಸಮಸ್ತ ಜಂಗಮಮೂರ್ತಿಗಳೊಡಗೂಡಿ
ಸ್ವರೂಪಾರ್ಥ–ಸಂಬಂಧಾರ್ಥ–ನಿಶ್ಚಯಾರ್ಥಂಗಳಿಂದ
ಅನುಭಾವವ ಮಾಡಿ,
ಆ ಪುಸ್ತಕಕ್ಕೆ 'ಅನಾದಿಷಟ್ಸ್ಥಲ ನಿರಾಭಾರಿ ವೀರಶೈವ ಶರಣನ
ನಿಜಾಚರಣೆಸಂಬಂಧ ಬೋಧಾಮೃತ ನಿಲುಕಡೆ
ಚಿದೈಶ್ವರ್ಯ ಚಿದಾಭರಣ'ವೆಂದು ನಾಮಾಂಕಿತವಿಟ್ಟು,
ಬಸವಲಿಂಗ ಸಾಕ್ಷಿಯಾಗಿ
ಆ ಸಂಗನಬಸವೇಶ್ವರನೆಂಬ ಗಣೇಶ್ವರನ
ಸಿಂಹಾಸನದ ಮೇಲೆ ಮೂರ್ತಮಾಡಿಸಿ,
ಆ ಪುಸ್ತಕವ ತೊಡೆಯಮೇಲಿಟ್ಟು, ಸ್ತೋತ್ರವ ಮಾಡಿ,
ಮಂಗಳಾರತಿಯನೆತ್ತಿ, ಪುಷ್ಪಾಂಜಲಿಯ ಮಾಡಿ,
ವಂದಿಸಿದ ಸಮಯದಲ್ಲಿ
ಆಗ ಸಂಗನಬಸವೇಶ್ವರಸ್ವಾಮಿಗಳು
ಈ ವಚನಶಾಸ್ತ್ರದ ಅಭಿಧಾನಕ್ಕೆ ಟಿಪ್ಪಣಿಯ ಮಾಡಿ,
ಸಕಲಪ್ರಮಥಗಣಂಗಳ ಸ್ತೋತ್ರಂಗೈದು
ಮಂಗಳಾರತಿಯನೆತ್ತಿ ಅನಾದಿಸೂತ್ರವ ಹೇಳಿ
ಸಮಾಪ್ತವ ಮಾಡುವ ಪ್ರಸ್ತಾವದ ವಚನ.
ಟೀಕು –
ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರಿಂದ
ಪೂಜಾನಮಸ್ಕಾರಕ್ಕೆ ಕರ್ತುವಾದ ಪರಶಿವಮೂರ್ತಿ,

ಅಂತಪ್ಪ ಪರಶಿವಮೂರ್ತಿಯೆ ಐವರಿಗೆ ಅನಾದಿಯು.
ಅಂತಪ್ಪ ಪರಶಿವ ಸದ್ಭಕ್ತನ ಕರ–ಮನ–ಸುಭಾವದಲ್ಲಿ
ಪೂಜೆಗೊಂಬ ನಿಃಕಲಪರಶಿವಮೂರ್ತಿ ಗುರುಲಿಂಗಜಂಗಮವೆ
ಅನಾದಿಗೆ ಅನಾದಿಯಾಗಿರ್ಪುದೆಂಬುದೀಗ
'ಅನಾದಿ' ಎಂಬ ಶಬ್ದಕ್ಕರ್ಥ.
ಹೀಂಗೆ ಒಪ್ಪಲ್ಪಟ್ಟಂಥ ನಿಃಕಲಪರಶಿವಮೂರ್ತಿ
ಗುರುಲಿಂಗಜಂಗಮದ ಚಿದಾಂಶವೆ
ಭಕ್ತ ಮಹೇಶ್ವರಪ್ರಸಾದಿಪ್ರಾಣಲಿಂಗಿ ಶರಣೈಕ್ಯರೆಂಬುದೀಗ
'ಷಟ್‌ಸ್ಥಲ' ಎಂಬ ಶಬ್ದಕ್ಕರ್ಥ.
ಬ್ರಹ್ಮ ವಿಷ್ಣು ಇಂದ್ರ ಚಂದ್ರ ಮನು ಮುನಿ ದೇವ ದಾನವ
ಮಾನವರೆಲ್ಲ ಬಿದ್ದ ಭವಪಾಶಂಗಳ ದಾಂಟಿ,
ಸರ್ವಸಂಗಪರಿತ್ಯಾಗತ್ವದಿಂದಿರ್ಪರು
ಭಕ್ತಮಹೇಶ್ವರರೆಂಬುದೀಗ 'ನಿರಾಭಾರಿ' ಎಂಬ ಶಬ್ದಕ್ಕರ್ಥ.
ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಪಾಶುಪತ
ಕಾಳಾಮುಖಿಯೆಂಬ ಷಣ್ಮತದವರೆ ಶೈವರು!
ಗೊಲ್ಲಾಳಯ್ಯ ಬಳ್ಳೇಶಮಲ್ಲಯ್ಯ ಗುರುಭಕ್ತಯ್ಯ ಮೊದಲಾದ
ನವಮುಗ್ಧರೆ 'ವೀರಶೈವರು'.
ಇವ ಎರಡನು ಓಡಿದು ಬಳಸುವರೆ ಅಪಶೈವರು.
ಇಂತೀ ಶೈವ–ವೀರಶೈವ ಅಪಶೈವಂಗಳಿಗೆ ಉಪರಿಯಾಗಿ
ಉಪಾಧಿಮಾಟಸ್ಥಲವಿಡಿದು ಒಪ್ಪಲ್ಪಟ್ಟಂಥಾದೆ
ಸಾಮಾನ್ಯ ವೀರಶೈವವೆನಿಸುವುದು.
ಈ ಸಾಮಾನ್ಯ ವೀರಶೈವ–ಅಪಶೈವಂಗಳಿಗೆ ಉಪರಿಯಾಗಿ
ಗುರುಲಿಂಗಜಂಗಮಭಕ್ತಿಯಿಂದ ನಿರುಪಾಧಿಕಮಾಟಸ್ಥಲವಿಡಿದು
ಒಪ್ಪಲ್ಪಟ್ಟಂಥಾದೆ ವಿಶೇಷ ವೀರಶೈವವೆನಿಸುವುದು.
ಆ ವಿಶೇಷ ವೀರಶೈವಕ್ಕೆ ಉಪರಿಯಾಗಿ
ಅಷ್ಟಾವರಣಂಗಳಂತರಂಗ ಬಹಿರಂಗದಲ್ಲಿ
ಸಂಬಂಧಾಚರಣೆಗಳಿಂದ ಆಚ್ಛಾದಿಸಿಕೊಂಡು
ತನ್ನ ತಾನೆ ಪೂಜ್ಯಪೂಜಕತ್ವದಿಂದಿರ್ಪುದೆಂಬುದೀಗ
'ನಿರಾಭಾರಿವೀರಶೈವ' ಎಂಬ ಶಬ್ದಕ್ಕರ್ಥ.
ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ,
ಧ್ಯಾನ ಧಾರಣ ಸಮಾಧಿಯೆಂಬ ಹಟಯೋಗಿಗಳಿಗೆ
ಉಪರಿಯಾಗಿ ರಾಜಿಸುವಂಥ
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯಸ್ಥಲಂಗಳ ಮೀರಿ
ನಿರಾವಯ, ನಿಃಶೂನ್ಯ, ನಿರಂಜನಸ್ಥಲದಲ್ಲಿ ನಿಂದ

ಶಿವಯೋಗಿ ಎಂಬುದೀಗ 'ಶರಣ' ಎಂಬ ಶಬ್ದಕ್ಕರ್ಥ.
ಭಕ್ತಸ್ಥಲ ಹಚಿನೈದು, ಮಹೇಶ್ವರಸ್ಥಲ ಒಂಬತ್ತು,
ಪ್ರಸಾದಿಸ್ಥಲ ಏಳು, ಪ್ರಾಣಲಿಂಗಿಸ್ಥಲ ಐದು,
ಶರಣಸ್ಥಲ ನಾಲ್ಕು, ಐಕ್ಯಸ್ಥಲ ನಾಲ್ಕು,
ಆಚಾರಲಿಂಗಸ್ಥಲ ಒಂಬತ್ತು, ಗುರುಲಿಂಗಸ್ಥಲ ಹನ್ನೆರಡು,
ಪ್ರಸಾದಲಿಂಗಸ್ಥಲ ಒಂಬತ್ತು ಮಹಾಲಿಂಗಸ್ಥಲ ಒಂಬತ್ತು
ಇಂತೀ ನೂರೊಂದುಸ್ಥಲಗಳೆ ಶರಣಂಗೆ
ಮಾರ್ಗಕ್ರಿಯಾಸ್ವರೂಪವಾದವೆಂಬುದೀಗ
'ನಿಜ ಆಚರಣೆ' ಎಂಬ ಶಬ್ದಕ್ಕರ್ಥ.
ಭಕ್ತನಂಗಸ್ಥಲ ಹದಿನೆಂಟು,
ಮಹೇಶ್ವರನಂಗಸ್ಥಲ ಹದಿನೆಂಟು,
ಪ್ರಸಾದಿಯಂಗಸ್ಥಲ ಹದಿನೆಂಟು,
ಪ್ರಾಣಲಿಂಗಿಯಂಗಸ್ಥಲ ಹದಿನೆಂಟು,
ಶರಣನಂಗಸ್ಥಲ ಹದಿನೆಂಟು,
ಐಕ್ಯನಂಗಸ್ಥಲ ಹದಿನೆಂಟು,
ಆಚಾರಲಿಂಗಸ್ಥಲ ಹದಿನೆಂಟು,
ಗುರುಲಿಂಗಸ್ಥಲ ಹದಿನೆಂಟು,
ಶಿವಲಿಂಗಸ್ಥಲ ಹದಿನೆಂಟು,
ಜಂಗಮಲಿಂಗಸ್ಥಲ ಹದಿನೆಂಟು,
ಪ್ರಸಾದಲಿಂಗಸ್ಥಲ ಹದಿನೆಂಟು,
ಮಹಾಲಿಂಗಸ್ಥಲ ಹದಿನೆಂಟು,
ಇಂತೀ ಇನ್ನೂರ ಹದಿನಾರು ಸ್ಥಲಂಗಳೆ ಶರಣಂಗ
ಮೀರಿದ ಕ್ರಿಯಾಸ್ವರೂಪವಾದವೆಂಬುದೀಗ
'ಸಂಬಂಧ' ಎಂಬ ಶಬ್ದಕ್ಕರ್ಥ.
ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ,
ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ವಾಯತ,
ಸಮಯ, ನಿಃಸಂಸಾರ, ನಿರ್ವಾಣ, ತತ್ವ, ಅಧ್ಯಾತ್ಮ
ಅನುಗ್ರಹ, ಸತ್ಯಶುದ್ಧ, ಏಕಾಗ್ರಚಿತ್ತ, ದೃಢವ್ರತ,
ಪಚೇಂದ್ರಿಯಾರ್ಪಿತ, ಅಹಿಂಸೆ, ಲಿಂಗನೈಷ್ಠೆ,
ಮನೋರ್ಲಯ, ಸಮ್ಯಜ್ಞಾನಮುಕ್ತಿ.
ಇಂತೀ ಇಪ್ಪತ್ತೊಂದು ದೀಕ್ಷೆಗಳೆ
ಶರಣನ ಮಾರ್ಗಕ್ರಿಯಾ ಮೀರಿದಕ್ರಿಯವನೊಳಕೊಂಡು
ಸನ್ಮಾರ್ಗ ನಡೆನುಡಿಗಳಾಗಿರ್ಪುವೆಂಬುದೀಗ
'ಬೋಧಾಮೃತ' ಎಂಬ ಶಬ್ದಕ್ಕರ್ಥ.

ನೂರೊಂದು ಸ್ಥಲಂಗಳೆ
ಚಿದಂಗ ಚಿದ್ಘನಲಿಂಗವಾಗಿ,
ಇನ್ನೂರ ಹದಿನಾರುಸ್ಥಲಂಗಳೆ
ಚಿತ್ಪ್ರಾಣಾಂಗ ಚಿತ್ಪ್ರಾಣಲಿಂಗವಾಗಿ,
ಏಕವಿಂಶತಿ ದೀಕ್ಷೆಗಳೆ
ಚಿದ್ಭಾವಾಂಗ ಚಿದ್ಭಾವಲಿಂಗವಾಗಿ.
ಇಂತು ಶರಣನ ಅಂಗ–ಪ್ರಾಣ–ಭಾವಂಗಳೆಲ್ಲ
ಇಷ್ಟ–ಪ್ರಾಣ–ಭಾವ 'ಆಚರಣೆ–ಸಂಬಂಧ' ಸ್ವರೂಪಗಳಿಂದ
ಒಪ್ಪುತ್ತಿರ್ಪವೆಂಬುದೀಗ 'ನಿಲುಕಡೆ' ಎಂಬ ಶಬ್ದಕ್ಕರ್ಥ.
ಸದ್ಭಕ್ತನ ಆಚಾರಲಿಂಗಾನುಭಾವ
ವೀರಮಾಹೇಶ್ವರನ ಗುರುಲಿಂಗಾನುಭಾವ,
ಶಿವಪ್ರಸಾದಿಯ ಶಿವಲಿಂಗಾನುಭಾವ,
ನಿಜಪ್ರಾಣಲಿಂಗಿಯ ಚರಲಿಂಗಾನುಭಾವ,
ನಿಜಶರಣನ ಪ್ರಸಾದಲಿಂಗಾನುಭಾವ,
ನಿರಾಲಂಬನ ನಿಃಕಳಲಿಂಗಾನುಭಾವ,
ನಿಜೈಕ್ಯನ ಮಹಾಲಿಂಗಾನುಭಾವ,
ನಿರಾವಯನ ನಿಃಶೂನ್ಯಲಿಂಗಾನುಭಾವ,
ನಿರ್ವಾಣಿಯನ ನಿರಂಜನಲಿಂಗಾನುಭಾವ,
ಇಂತು ನವಲಿಂಗಾನುಭಾವಂಗಳೆ
ಶರಣನಂತರಂಗದಲ್ಲಿ ಮಹಾಜ್ಞಾನಪ್ರಕಾಶದಿಂದ
ಒಪ್ಪುತ್ತಿರ್ಪವೆಂಬುದೀಗ 'ಚಿದೈಶ್ವರ್ಯ' ಎಂಬ ಶಬ್ದಕ್ಕರ್ಥ.
ಅರವತ್ತುನಾಲ್ಕು ತೆರದ ಆವರಣಂಗಳು,
ನೂರ ನಾಲ್ವತ್ತುನಾಲ್ಕು ಆಚಾರಂಗಳು,
ಮುನ್ನೂರ ಇಪ್ಪತ್ತುನಾಲ್ಕು ಚಕ್ರಂಗಳು,
ಸರ್ವಾಚಾರಸಂಪತ್ತಿನ ಮೂವತ್ತೆರಡು ಉದ್ಧರಣೆಗಳು,
ಶಿವಯೋಗಸ್ಥಾಪನಸ್ಥಲ, ಪ್ರಾಣಲಿಂಗಪೂಜಾವಿಧಾನಸ್ಥಲ,
ನವಲಿಂಗಾರ್ಚನಾಸ್ಥಲ, ಪರತತ್ವಲಿಂಗಪ್ರಕಾಶಸ್ಥಲ,
ಶಿವಾದ್ವೈತ ಶರಣಪ್ರಕಾಶಸ್ಥಲ, ಮಹಾಲಿಂಗೈಕ್ಯಸ್ಥಲ,
ಜ್ಞಾನಶೂನ್ಯಸ್ಥಲವೆಂಬ ಏಳು ಮಂತ್ರಗೋಪ್ಯಂಗಳು,
ಅಷ್ಟವಿಧ ಮಹಾಮಂತ್ರ ಸಕೀಲ ಸಮಾಧಿ ಮೊದಲಾದ
ಚಿತ್ಕಲಾಶತಂಗಳ ಶರಣಂಗೆ ಆಭರಣವಾಗಿರ್ಪುದು.
ಶ್ರೀಗುರು ಸಿದ್ಧಲಿಂಗೇಶ್ವರನ ಕೃಪಾಪ್ರಸನ್ನತ್ವದಿಂದ
ಎನ್ನ ಕರ–ಮನ–ಸುಭಾವದಲ್ಲಿ ಪ್ರಭಾವಿಸುವ
ಚಿದ್ಘನ ಇಷ್ಟಮಹಾಲಿಂಗದ ಬೆಳಗಿನೊಳಗ ಕಂಡೆನೆಂಬುದೀಗ

'ಚಿದಾಭರಣ' ಎಂಬ ಶಬ್ದಕ್ಕರ್ಥ.
ಹೀಂಗೆ ಅನಾದಿವಿಡಿದು ಬಂದ ಗುರು–ಲಿಂಗ–ಜಂಗಮ
ಅನಾದಿವಿಡಿದುಬಂದ ಪಾದೋದಕ–ಪ್ರಸಾದ
ಅನಾದಿವಿಡಿದುಬಂದ ವಿಭೂತಿ–ರುದ್ರಾಕ್ಷಿ
ಅನಾದಿವಿಡಿದುಬಂದ ತ್ರಿಯಕ್ಷರ–ಪಂಚಾಕ್ಷರ–ಷಡಕ್ಷರ
ಅನಾದಿವಿಡಿದು ಬಂದ ಗುರು–ಶಿಷ್ಯ,
ಅಂಗ–ಲಿಂಗ, ಭಕ್ತ–ಜಂಗಮ ಶರಣಸಂಬಂಧ,
ಅನಾದಿವಿಡಿದು ಬಂದ ಆಚಾರ–ಆಚರಣೆ
ಸಂಬಂಧ ಸತ್ಕ್ರಿಯಾ ಜ್ಞಾನಸ್ವರೂಪ ನಿಲುಕಡೆ.
ಅನಾದಿವಿಡಿದುಬಂದ ಭಕ್ತಿ–ಜ್ಞಾನ–ವೈರಾಗ್ಯ–ಸಕೀಲಸಂಬಂಧ
ಶಿವಯೋಗ ಶಿವಾನುಭಾವದ ನಿಜಮಹಾಲಿಂಗೈಕ್ಯಾನುಭಾವ ನೋಡಾ
ಶ್ರೀಗುರುಸಿದ್ಧಲಿಂಗೇಶ್ವರರಿಗೆ ರೂಪು ರುಚಿತೃಪ್ತಿಯಾದ
ಬಸವಲಿಂಗೇಶ್ವರ. ॥ ೧ ॥

## ಸಿದ್ಧಮಲ್ಲಪ್ಪನ ವಚನ

೯೭೨

ವೈರಾಗ್ಯ ವೈರಾಗ್ಯವೆಂತೆಂದು ಹೆಸರಿಟ್ಟುಕೊಂಡು
ನುಡಿವ ಅಣ್ಣಗಳಿರಾ ನೀವು ಕೇಳಿರೊ.
ಆ ವೈರಾಗ್ಯದ ಭೇದವೆಂತೆಂದರೆ ಬಲ್ಲರೆ ಹೇಳಿ,
ಅರಿಯದಿರ್ದಡೆ ಕೇಳಿ.
ನಿಮ್ಮ ಅಂಗ ಕುಲ ಚಲ ಸೂತ್ರಕವೆಂಬ ಕಂಬವನ್ನು
ತನ್ನ ಕೈಯಲ್ಲಿ ಹಿಡಿದುಕೊಂಡು ಕುಲದೈವ ಮನೆದೈವವೆಂಬ
ಗುಡಿಯ ಹಳಿಯ ಹೊತ್ತು,
ಕುಲಗುರುವೆಂಬ ಲಿಂಗದ ಪೂಜೆಯನೆ ಮಾಡಿ,
ಕುಲನೀತಿಯೆಂಬ ಧರ್ಮಶಾಸ್ತ್ರವ ನೋಡಿಕೊಂಡು
ಹಲವು ಜಾತಿಗಳೆಲ್ಲ ಅರಿದೆನೆಂದು,
ತನ್ನ ದ್ವಾರವಟ್ಟಕ್ಕೆ ಬಂದು ನಿಂದರೆ,
ತನ್ನ ಮನ ಒಲ್ಮೆಯಿಂದ ಅನ್ನವನು ನೀಡಿ,
ಉಮ್ಮಾಯದಲ್ಲಿ ನಿಂದು ತನ್ನ ಮನ ವೈರಾಗ್ಯವಾದರೆ
ವಾರ ತಿಥಿ ನಕ್ಷತ್ರ ಯೋಗ ಕರಣ ಇಂತಿವೈದನು
ಪಂಚಾಂಗದಲ್ಲಿ ತಿಳಿದು ನೋಡಿ,
ಬ್ರಹ್ಮ ಕಲ್ಯಾಣೆಯೊಳು ಪತ್ರವ ಕೊಂಡು ಇದ್ದು
ನಾಳೆ ಸಂದುಹೋದೆನೆಂಬುವನು ಮುಂದಲಿತ್ತು

ತನ್ನ ಕುಲಬಾಂಧವರಿಗೆ ಹೇಳಿ ಬಲಾತ್ಕಾಗಿ ಹೋಗಬಲ್ಲರೆ
ಆತನಿಗೆ 'ವೈರಾಗ್ಯದದೇವರೆಂದು' ಎನ್ನಬಹುದು ಕಾಣಿರೊ.
ಇಂತೀ ವೈರಾಗ್ಯದ ಭೇದವನರಿಯದೆ
ಕಾಕುಮನುಜರು ತಮ್ಮ ಕುಲಛಲವೆಂಬುವ ಕಂಬವ ಕೈಹಿಡಿದು
ಕುಲದೈವ ಮನೆದೈವವೆಂಬ ಗುಡಿಯ ಹಳಿಯ ಕೆಡವಿಬಿಟ್ಟು
ಕುಲಗುರುವೆಂಬ ಲಿಂಗಪೂಜೆಯನು ಬಿಟ್ಟು
ಕುಲನೀತಿಯೆಂಬ ಧರ್ಮದ ಶಾಸ್ತ್ರದ ಪತ್ರವನು ಹರಿದುಬಿಟ್ಟು
ಪಾಷಂಡಿಮತದ ರಾಶಿಯೊಳಗಾದ ಮನುಜರ ಕೈಯಲ್ಲಿ
ದೀಕ್ಷೆಯನು ಮಾಡಿಕೊಂಡು, ಕಾವಿ ಅರಿವೆಯ ಹೊದ್ದುಕೊಂಡು,
ದೇವರೊಳಗೆ ದೇವರಾದೆನೆಂದು ಭಕ್ತರ ಕೂಡೆ ಶರಣಂಗೊಟ್ಟು,
ನಾನು ವೈರಾಗ್ಯದ ದೇವರೊಳಗೆ ದೇವರೆಂದು ಹೆಸರಿಟ್ಟುಕೊಂಡು,
ನುಡಿವಾಚಾರರೂಪದ ಸೂಳೆಯರು ಏನಾಯಿತ್ತು ಎಂದರೆ,
ಜ್ಞಾನಶ್ರವಣರ ವಾಹನಕ್ಕೆ ಹುಟ್ಟಿದಂಥ
ಕುನ್ನಿ ತೊತ್ತಿನ ಮಕ್ಕಳಾಗಿರ್ದ
ವೆಂದಾತ ಸಿದ್ಧಮಲ್ಲನದಾತ
ಮೇಗಣಗವಿಯ ಗುರುಸಿದ್ಧೇಶ್ವರಪ್ರಭುವೆ. ॥ ೧ ॥

೯೬೩

ಶಿವಯೋಗಿ ಶಿವಯೋಗಿ ಎಂದ್ಹೆಸರಿಟ್ಟುಕೊಂಡು ನುಡಿವ ಅಣ್ಣಗಳಿರಾ !
ನಿಮ್ಮ ಅಂಗಕುಳ ಒಳಗೊಂಡು ಕಾಮಿನಿಯರ ಬೆಳೆದ ಹೊಲನ ಹೊಕ್ಕು
ಕೂಡಿಸಿ ತಿಂಬುವ ಪಶುವಿನ ನಾಲ್ಕು ಕಾಲನು ಮುರಿದು,
ಘಟ್ಟವೆಂಬ ಗವಿಯೊಳಗೆ ಮನದ ದಿಟ್ಟವೆಂಬ ಗೂಟಕ್ಕೆ ಕಟ್ಟಿ,
ತನುವೆಂಬ ಗಿರಿಗಹ್ವರದೊಳಗೆ ಬೆಳೆದಿದ್ದ
ನಾನಾ ಪರಿಪರಿಯ ಗಿಡ, ಕಸಾದಿಗಳೆಲ್ಲವ ಭಾನುವೊಲು
ಮಂತ್ರದಿಂದ್ಹಲ್ಲ ಕಿತ್ತು ಸುಟ್ಟು ಬೂದಿಯನು ಮಾಡಿ
ಸರ್ವಕ್ಕೆಲ್ಲ ಪಣಮಾಡಿಕೊಂಡು ಇರಬಲ್ಲರೆ,
ಹಲವು ಕಡೆಗೆ ಹರಿದಾಡುವಂತೆ ಮನವನೆಲ್ಲ ನೆಲೆಗೊಳಿಸಿ
ನಿಲಿಸಿದಂತಾ ಮಹಿಮನ ಶಿವಯೋಗೀಶ್ವರನೆಂದೆನ್ನಬಹುದು ಕಾಣಿರೊ !
ನಿಮ್ಮ ಅಂಗ ಗುರುಕೊಟ್ಟ ಅರಿವಿನ ಅರಿವೆಯನು ಬಿಟ್ಟು,
ಮರವಿನ ಮನೆಯೊಳಗೆ ಮೂರ್ಛೆಗೈದರೆ,
ನಿಮ್ಮನ್ನು ಹರಕೊಂಡು ತಿಂದೆನೆಂದು ಬರುವ
ಕಾಳೋರಗನೆಂಬ ಸರ್ಪನ ಉತ್ತರದ ಬಾಯ ಮುಚ್ಚಿ
ನವದ್ವಾರಂಗಳನ್ನೆಲ್ಲ ಹೊಲಿದು, ಒಂಬತ್ತು ಬಾಗಿಲಿಗೆ ಬೀಗಮುದ್ರೆಯ ಮಾಡಿ,
ತುಂಬಿದಾ ಕುಂಭದೊಳಗಿನ ಉದಕದಂತೆ ಇರಬಲ್ಲರೆ

ಅಂತಹವನಿಗಾ ಕಾಲನ ಬಾಧೆಯ ಗೆಲಿದಂಥ
ಮಹಿಮನೆಂದೆನ್ನಬಹುದು ಕಾಣಿರೊ!
ನಿಮ್ಮಂಗ ಆಧಾರವೆಂಬ ಗದ್ದಿಗೆಯ ಮೇಲೆ
ಪದ್ಮಾಸನವೆಂಬ ಪವನಗ್ರಂಥಿಯ ಹೊಲಿದು,
ನಿರ್ಮಳ ಸುಚಿತ್ತದಲ್ಲಿ ಮೂರ್ತವನು ಮಾಡಿಕೊಂಡು,
ಪೂರ್ವದಿಕ್ಕಿನಲ್ಲಿ ಮುಖವನಿಕ್ಕಿ ಪಂಚಮಕ್ಕೆ ದೃಷ್ಟಿಯನ್ನಿಟ್ಟು ನೋಡಲಾಗಿ,
ಅಡರೇರಿ ಬರುವ ಸಿಡಿಲು ಮಿಂಚಿನ ಅವಸ್ಥೆ ಶೌರ್ಯವನು ಕಂಡು,
ಪಶ್ಚಿಮಕ್ಕೆ ಮುಖವ ತಿರುವಿ ಪೂರ್ವಕ್ಕೆ ದೃಷ್ಟಿಯನ್ನಿಟ್ಟು ನೋಡಲಾಗಿ
ಭಾನುವಿನ ಸಮೀಪದಲ್ಲಿ ಇದ್ದ ಬಯಲಿಗೆ ಬಯಲು
ಆಕಾರಗೆಟ್ಟ ಪುರುಷನ ನಿಲವು ನಿಧಾನವ ನೋಡಿಕೊಂಡು
ಸರ್ವಮುನಿಜನಂಗಳಿಗೆಲ್ಲ ಅರ್ತಿಯನು ಮಾಡಿ ಹೇಳಿ
ನಿರ್ವಾಯವಾಗಿ ಹೋಗಬಲ್ಲರೆ ಆತನಿಗಾ ಮರಣಕ್ಕೆ ವಿಧಿಹಿತನಾದಂಥ
ಮಹಾಮಹೇಶ್ವರನೆಂದೆನ್ನಬಹುದು ಕಾಣಿರೊ !
ಇಂತು ಇದನರಿಯದೆ ಯೋಗಿ ಶ್ರವಣ ಸನ್ಯಾಸಿ
ಕಾಳಾಮುಖಿ ಪಾಶುಪತಿಗಳೆಂಬ ಹೆಸರಿಟ್ಟುಕೊಂಡು
ದೇಶವ ತಿರುಗುವ ಶಿವಯೋಗಿಗಳೆಂಬುವ
ಮೋಸ ಡಂಬಕರ ಕುಟಿಲಗಳ ಕಂಡು ನಗುತ್ತಿರ್ದಾತ
ಸಿದ್ಧಮಲ್ಲನದಾತ ಮೇಗಣಗವಿಯ ಗುರುಸಿದ್ಧೇಶ್ವರಪ್ರಭುವೆ. ॥ ೨ ॥

೯೬೪

ಶಿವಯೋಗಿ ಶಿವಯೋಗಿಯೆಂದ್ಹೆಸರಿಟ್ಟುಕೊಂಡು ನುಡಿವ ಅಣ್ಣಗಳಿರಾ !
ನಿಮ್ಮ ಧ್ಯಾನಮೂಲವೆಂಬ ಮನೆಯ ಪೂರ್ವಸ್ಥಾನ ಬಾಗಿಲೊಳಗೆ ಬರುವ
ಭಾನುವಿನ ಬಟ್ಟೆಯ ಬೆಳಕಿನಲ್ಲಿ ನಿಂದು,
ಶ್ರೀರಾಮ ರಾಮನೆಂಬುವ ಸ್ಮರಣೆಯನು ಮಾಡಬಲ್ಲರೆ
ಆತನಿಗೆ ತನ್ನ ಕಾಯಪುರವೆಂಬ ಪಟ್ಟಣದೊಳಗೆ
ಮೇಲುದುರ್ಗದೊಳಗಿರ್ದ ಅರಸಿನ ದಾಳಿಯನು ಮಾಡಿ
ಕೊಳುಕೊಂಡು ಹೋದನೆಂದು ಬರುವ ಕಾಲನ ಪರಿವಾರವ ಕಂಡು,
ಮೇಲುದುರ್ಗದೊಳಗಿರ್ದ ಅರಸಿನ ವಲಯಂ ಬಿಟ್ಟು,
ಪಟ್ಟಣವ ಹಾಳಕೆಡವಿ ಗೋಳಿಟ್ಟ ಅರಸನಂತೆ,
ಬಯಲಿಗೆ ಬಯಲು ಆಕಾರದಲ್ಲಿ ನಿಂದು,
ಬರುತ್ತಲಾ ಪರಿವಾರವನ್ನು ಕಂಡು,
ಕಾದಿ ಜಗಳವನು ಕೊಟ್ಟು ಹಿಂದಕ್ಕೆ ನೂಕಿ,
ಪರಾಲಯದೊಳಗಿರ್ದ ಅರಸನನ್ನು ಮೇಲುದುರ್ಗಕ್ಕೆ ತಂದು ಇಂಬಿಟ್ಟು
ಹಾಳ ಪಟ್ಟಣವನ್ನು ತುಂಬಿಸಿ ಮೇಳೈಸಿ

ಮನೆಯ ಬಂಧು ದಾಯಾದರೆಲ್ಲರು ಆತಂಗೆ ಕಾಲವಂಚನೆಗೆ ಗೆಲಿದಂಥ
ಶಿವಯೋಗೀಶ್ವರನೆಂದೆನ್ನಬಹುದು ಕಾಣಿರೋ.
ಇಂತು ಕಾಯದ ಕೀಲನೆ ಅರಿಯದೆ, ಕಾಲವಂಚನೆಗೆ ಒಳಗಾಗಿ,
ನಾನು ಶಿವಯೋಗಿ ಶಿವಯೋಗಿಯೆಂದು ಹೆಸರಿಟ್ಟುಕೊಂಡು
ಒಬ್ಬರಿಗೊಬ್ಬರು ಗುರೂಪದೇಶವ ಕೊಟ್ಟು,
ಉರಿಯ ಸೋಂಕಿದ ಕರ್ಪುರದ ಧೂಪವಂತೆ ಇರಬೇಕೆಂದು,
ಹೆಂಡಿರ ಬಿಟ್ಟು, ಮಕ್ಕಳ ಬಿಟ್ಟು, ಮಂಡೆಯನು ಬೋಳಿಸಿಕೊಂಡು
ಮನದ ನಿಲುಗಡೆಯನರಿಯದ ಗೂಬೆಗಳು
ಕಾವಿಯ ಅರಿವೆಯನು ಹೊದ್ದುಕೊಂಡು,
ದೇವರೊಳಗೆ ದೇವರೆಂದು ಪೂಜೆಗೊಂಡು,
ಮಠ ಮನೆಯಲ್ಲಿ ಬಸಲ ಪರ್ಯ್ಯಾದಿಯಲ್ಲಿ ನಿಂದು,
ಬೋನದಾಸೆಗೆ ಜ್ಞಾನಬೋಧೆಯನು ಹೇಳುವ ಗುರುವಿನ
ಬ್ರಹ್ಮಕಲ್ಪನೆಯ ಮನ ತುಂಬಿ ಬಿರಿಕಿಕ್ಕಿ ಹೋಗುವಾಗ,
ಕಾಲನವರು ತಮ್ಮ ಪತ್ರವನು ನೋಡಿಕೊಂಡು ಬಂದು ಹೋಗಲಿತ್ತ
ಕಲಿತ ವಿದ್ಯೆ ಕೈಕಾಲನು ಹಿಡಿದು ಎಳಕೊಂಡು ಹೋಗುವಾಗ
ಗಟ್ಟಿನೆಲಕ್ಕೆ ಬಿದ್ದು ಕೆಟ್ಟೆ, ಕೆಟ್ಟೆ, ಸತ್ತೆ ಸತ್ತೆ ಎಂದು
ಹಲ್ಲುಗಂಟಲ್ಹರಕೊಂಡು ಹೋಗುವಂಥ ಶಿವಯೋಗಿಗಳೆಂಬ ಕುಟಿಲರ ಕಂಡು
ನಗುತ್ತಿರ್ದಾತ ಸಿದ್ಧಮಲ್ಲನದಾತ ಮೇಗಣಗವಿಯ
ಗುರುಸಿದ್ಧೇಶ್ವರಪ್ರಭುವೆ. ॥ ೩ ॥

೯೭೫

ನಾನಾ ಜನ್ಮಂಗಳ ತಿರುಗಿ ಮಾನವ ಜನ್ಮಕ್ಕೆ ಬಂದು
ಲಿಂಗೈಕ್ಯನಾಗಿರುವುದೇ ಚಂದ.
ಶಾಸ್ತ್ರಂಗಳ ಓದಿ ಸಂಪಾದನೆಯ ಮಾಡಿ ಹೇಳಿ ಕೇಳುವ ಅಣ್ಣಗಳಿರಾ
ಕೃತಯುಗದಲ್ಲಿ ಹನ್ನೆರಡು ಭಾರ ಜ್ಯೋತಿರ್ಲಿಂಗವನು
ಬ್ರಹ್ಮರ್ಷಿಗಳು ತಮ್ಮ ವೇದಮಂತ್ರದಿಂದ ನಿರ್ಮಿತವ ಮಾಡಿದ ಲಿಂಗವು
ರವಿ ಶಶಿ ಆದಿಗಳು ಇರುವನಂತ ಸ್ಥಾವರಲಿಂಗವಾಗಿ
ಸ್ಥಾಪ್ಯಗೊಂಡವು ಕಾಣಿರೊ.
ತ್ರೇತಾಯುಗದಲ್ಲಿ ಲಕ್ಷ ಲಿಂಗವನು ನಮ್ಮ ರವಿಕುಲ ರಘುರಾಮರು
ತಮ್ಮ ವೇದಮಂತ್ರದಿಂದ ನಿರ್ಮಿತವ ಮಾಡಿದ ಲಿಂಗವು
ರವಿ ಶಶಿಯಾದಿಗಳು ಇರುವನಕ ಸ್ಥಾವರಲಿಂಗವಾಗಿ
ಸ್ಥಾಪ್ಯಗೊಂಡಿದ್ದವು ಕಾಣಿರೋ.
ದ್ವಾಪರಯುಗದಲ್ಲಿ ಸೋಮವಂಶಿಕರು ತಮ್ಮ ವೇದಮಂತ್ರದಿಂದ
ನಿರ್ಮಿತವ ಮಾಡಿವ ಲಿಂಗವು ಗ್ರಾಮಕ್ಕೆ ಒಂದು ಕಲ್ಲೇಶ್ವರನಾಗಿ

ರವಿ ಶಶಿಗಳಿರುವನಕ ಸ್ಥಾವರಲಿಂಗವಾಗಿ ಸ್ಥಾಪ್ಯಗೊಂಡವು ಕಾಣಿರೋ.
ಕಲಿಯುಗದಲ್ಲಿ ಹುಟ್ಟಿದ ಮನುಜರು
ಕೃತ, ತ್ರೇತಾ, ದ್ವಾಪರ ಇವು ಮೂರು ಯುಗದಲ್ಲಿ
ಬ್ರಹ್ಮ ಕ್ಷತ್ರಿಯರು ತಮ್ಮ ವೇದಮಂತ್ರದಿಂದ ನಿರ್ಮಿತವ ಮಾಡಿ,
ಇದ್ದ ಲಿಂಗವನು ಅತಿಗಳೆದು ಇಷ್ಟಲಿಂಗಯೆಂದು
ಅದಕ್ಕೆ ಪಾದ್ಯ ತೀರ್ಥ ಪ್ರಸಾದವನು ಅರ್ಪಿಸಿ,
ಹುಟ್ಟಿದ ಮನುಜರೆಲ್ಲ ತಲೆತಲೆಗೊಂದು ಲಿಂಗವನು
ಕಟ್ಟಿಕೊಂಡಿದ್ದರೇನಯ್ಯ, ಆ ಲಿಂಗಕ್ಕೆ ನಿಷ್ಕ್ರಿಯವಾಗಲಿಲ್ಲ.
ಕಾರ್ಯಕ್ಕೆ ಬಾರದೆ ಅಕಾರ್ಯವಾಗಿ ಹೋಗಿತ್ತು ಕಾಣಿರೋ.
ಅದು ಎಂತೆಂದರೆ :
ಕೃತಯುಗದಲ್ಲಿ ಹುಟ್ಟಿದ ಮನುಜರು
ಸುವರ್ಣಲಿಂಗವನು ಪೂಜೆಯ ಮಾಡಿಪ್ಪರು.
ಆ ಸುವರ್ಣವು ಕಲಿಯುಗದಲ್ಲಿ ಹುಟ್ಟಿದ ಮನುಜರ
ರಾಯರ ದೇವರ ಭಂಡಾರಕ್ಕೆ ಯೋಗ್ಯವಾಯಿತ್ತು ಕಾಣಿರೋ.
ತ್ರೇತಾಯುಗದಲ್ಲಿ ಹುಟ್ಟಿದ ಮನುಜರು
ಕಾರಪತ್ರದ ಲಿಂಗದ ಪೂಜೆಯ ಮಾಡಲು,
ಆ ಕಾರಪತ್ರದ ಲಿಂಗವು ಕಲಿಯುಗದಲ್ಲಿ ಹುಟ್ಟಿದ ಮನುಜರ
ರಾಯರ ದೇವರ ಭಂಡಾರಕ್ಕೆ ಯೋಗ್ಯವಾಗಿತ್ತು ಕಾಣಿರೋ.
ದ್ವಾಪರಯುಗದಲ್ಲಿ ಹುಟ್ಟಿದ ಮನುಜರು
ನಾಗತಾಮ್ರದ ಲಿಂಗವನು ಪೂಜೆಯ ಮಾಡಲು
ಆ ನಾಗತಾಮ್ರದ ಲಿಂಗವು ಕಲಿಯುಗದಲ್ಲಿ ಹುಟ್ಟಿದ ಮನುಜರ
ರಾಯರ ದೇವರ ಭಂಡಾರಕ್ಕೆ ಯೋಗ್ಯವಾಯಿತ್ತು ಕಾಣಿರೋ.
ಕಲಿಯುಗದಲ್ಲಿ ಹುಟ್ಟಿದ ಮನುಜರು ಕಲ್ಲುಲಿಂಗವನು
ತಮ್ಮ ಕೈಲ್ಹಿಡಿದುಕೊಂಡು ಪಂಚಮುಖದ ಪರಮೇಶ್ವರದೇವರು
ಎಮ್ಮ ಕರಸ್ಥಲಕ್ಕೆ ಬಂದನೆಂದು ಬಿಂಕವನು ಹೇಳುವ ಡೊಂಕುಮನುಜರು
ಕಾಯ ಅಸುವಳಿದು ನೆಲಕ್ಕೆ ಬಿದ್ದು ಹೋಗುವಾಗ
ಕೈಯಲ್ಲಿ ಕಲ್ಲುಲಿಂಗವು ಭೂಮಿ ಆಸ್ತಿಯನು ಭೂಮಿ ಕೂಡಿ ಹೋಗುವಾಗ
ಓಂ ನಮಃಶಿವಾಯ ಎಂಬ ಮಂತ್ರವು ಮರೆತು ಹೋಯಿತು.
ಅದ ಕಂಡು ನಗುತಿರ್ದಾತ ಸಿದ್ಧಮಲ್ಲನದಾತ
ಮೇಗಣಗವಿಯ ಗುರುಸಿದ್ಧೇಶ್ವರಪ್ರಭುವೆ. || ೪ ||

೯೭೭

ಪೂರ್ವವನಳಿದು ಪುನರ್ಜಾತನಾದೆನೆಂದು
ಪೆಸರಿಟ್ಟುಕೊಂಡು ನುಡಿವ ಅಣ್ಣಗಳಿರಾ,
ನಿಮ್ಮ ಅಂಗ, ಆ ಈಶ್ವರದೇವರು ಹುಟ್ಟಿಸಿದ

ಮೂರೂವರೆ ಮೊಳದ ಸ್ಥೂಲಕಾಯವಾಗಿ ಜೀಕಿತ್ತು.
ಬ್ರಹ್ಮಕಲ್ಪನೆಯ ಮಾನವನು ಜಾಜಿಯನಾಗಿಸಿ
ಮರುವಾದೆ ಮನುಜರ ಕೈಯಲ್ಲಿ ಅನ್ನ ಉಣ್ಣದೆ.
ಅಂಗಿಯ ಕೊಳ್ಳದೆ, ಸ್ವರ್ಗ–ಮರ್ತ್ಯ–ಪಾತಾಳ
ಇವು ಮೂರು ಲೋಕವನು ಬಿಟ್ಟು, ಬೇರೊಂದು ಸ್ಥಳದಲ್ಲಿ ಇರಬಲ್ಲರ,
ಆತನಿಗೆ ಪೂರ್ವವನಳಿದ ಮನುಜೋತ್ತಮನೆಂದೆನ್ನಬಹುದು ಕಾಣಿರೋ.
ನಿಮ್ಮ ಅಂಗದ ಈಶ್ವರದೇವರು ಹುಟ್ಟಿಸಿದ
ಮೂರುವರೆ ಮೊಳದ ಸ್ಥೂಲಕಾಯವನು ಮುಂದಿಟ್ಟುಕೊಂಡು
ಹಲವು ಜಾತಿಗಳ ನೆಲೆಯನರಿಯದೆ,
ಮನೆ ಮನೆಯಲ್ಲಿ ಕಾಡಿ ಬೇಡಿ ಉಂಬುವ
ಪಾಷಂಡಿಗಳ ದೀಕ್ಷೆಯನು ಮಾಡಿಕೊಂಡು,
ಕಾವಿಯರಿವೆಯನ್ಹೊದ್ದುಕೊಂಡು
ನಾನು ಪೂರ್ವವನಳಿದು ಪುನರ್ಜಾತನಾದನೆಂದು ಪೂಜೆಗೊಂಬುವ
ಜಾತಿಶ್ರೇಷ್ಠ ಅಜ್ಞಾನಿಗಳಿಗೆ ಜಾತಿಸೂತಕ ಉಳಿಯಿತೆ ?
ಸುಜ್ಞಾನಿಗಳು ಹೋಗಿ ಅವರಿಗೆ ಶರಣಂ ಕೊಟ್ಟರೆ,
ಅವರಾ ಮನೆಯಲ್ಲಿ ಅನ್ನವನುಂಡರೆ, ಅಗ್ನಿಯ ಕಂಡರೆ,
ಮೊದಲೆ ತಾವೇ ಭೋಗಿಸಿ ಮೇಲೆ ಮಲಮೂತ್ರವ ಭುಂಜಿಸಿದಂತೆ ಆಯಿತ್ತು
ಎಂದಾತ ಸಿದ್ಧಮಲ್ಲನದಾತ ಮೇಗಣಗವಿಯ
ಗುರುಶಿವಸಿದ್ಧೇಶ್ವರಪ್ರಭುವೆ. ॥ ೫ ॥

೯೬೭

ಎದೆಯಲಿಂಗವನು ಬಿಟ್ಟು ಗುಡಿಯಲಿಂಗಕ್ಕೆ
ಶರಣೆನ್ನಲಾಗದು ಎಂದು ಹೇಳುವ ಕುದಿಗಿಳಿಗಳು ನೀವು ಕೇಳಿರೋ.
ನಿಮ್ಮ ಅಂತರಂಗದೊಳಗಿರ್ಪ ಲಿಂಗವನು ಬಿಟ್ಟು
ಅನ್ಯದೈವಕ್ಕೆ ಶರಣೆಂದರು, ಅದು ಎಂತೆಂದರೆ,
ಬೀದಿಯೊಳು ಹಿಟ್ಟು ಮಾಡುವ ಕಲ್ಲುಲಿಂಗವ ತಂದು
ಅದಕ್ಕೆ ಪಾದ್ಯ ತೀರ್ಥ ಪ್ರಸಾದವನರ್ಪಿಸಿ,
ಶಿವಲಿಂಗದೇವರೆಂದು ಶಿಖೆಯಲ್ಲಿ ಕಟ್ಟಿಕೊಂಡು
ನಾವು ಶಿವಭಕ್ತರು ಅನ್ಯದೈವಕ್ಕೆ ಶರಣೆನ್ನಲಾಗದು ಎಂದು
ಹೇಳುವ ಬರಿಯ ಮಾತಿನ ತರ್ಕಿಗಳ ಕಂಡು ನಗುತಿರ್ದಾತ
ಸಿದ್ಧಮಲ್ಲನದಾತ ಮೇಗಣಗವಿಯ ಗುರುಶಿವಸಿದ್ಧೇಶ್ವರಪ್ರಭುವೆ. ॥ ೬ ॥

೯೬೮

ಜ್ಞಾನಗುರುವಿನ ಶ್ರೀಪಾದವಿಡಿದ ಶಿವಕವಿ ಅತೀತನೆಂತನೆ :
"ಪರಬ್ರಹ್ಮಸ್ವರೂಪ ಉತ್ತಮಂ ಮುಕ್ತಿ ಸಂತತಃ

ದೇವದೂತಿ ಪ್ರಸನ್ನಿತ ಉಭಯಮಾರ್ಗ ವರಕವಿ ಮುದಿಮಾವ್
ಪ್ರಳಯಕಾಲಸ್ಯ ।
ಆತ್ಮತೃಪ್ತಿ ನರಕವಿ ರಾಜವಂದಿತಾ ತನ್ನಿಷ್ಟ ನರಕಪಿತಃ
ತ್ರಿವಿಧ ಶಬ್ದ ಶಾಸ್ತ್ರಯಿತಾರ್ಥ ಸರ್ವೋದ್ದಿಷ್ಟ ವಚನಧಾರಿ ನಿಷ್ಕಳಂ ॥''(?)
ಶ್ರೀ ಶ್ರೀ ಕವಿಗಳೆಂದು ಪೆಸರಿಟ್ಟುಕೊಂಡು ನುಡಿವಣ್ಣಗಳಿರಾ
ಕಾಯದ ಕೀಲನರಿತು ಕಾವ್ಯತ್ವವನು ಮಾಡಿ ಭೇದವ ಬಲ್ಲರೆ ಹೇಳಿ,
ಅರಿಯದಿರ್ದೊಡೆ ಕೇಳಿ.
ನಿಮ್ಮ ಅಂಗ ಪಾತಾಳವೆಂಬ ಪವನಸೂತ್ರವನು ಮೆಟ್ಟಿ
ಬಿಡುವಿಲ್ಲದಂತಾ ಉಯ್ಯಾಲೆಯನಾಡುತಿಹುದು.
ನಿಮ್ಮ ಅಂಗ ಭುವಿಯೆಂಬ ಭೂಚಕ್ರದ ಮೂಲ ತಿಳಿದು
ನಾಭಿಮಂಡಲವೆಂಬ ಹುತ್ತದೊಳಗಿರ್ದ
ನಾಗಕೂರ್ಮನೆಂಬ ಘಟಸರ್ಪನ ತಲೆಕೆಳಗಾಗಿ
ಬಾಲ ಮೇಲಕಾಗಿರುವುದು ಕಾಣಿರೋ.
ಯೋಗದೃಷ್ಟಿಯೆಂಬ ನಾಗೇಶ್ವರನನು ಹಿಡಿದುಕೊಂಡು ಊದಲಾಗಿ
ಆಗ ನಾಗಕೂರ್ಮನೆಂಬ ಸರ್ಪ ಸಭೆಯನು ತಿಳಿಯಲಿಕ್ಕೆ ಇಳುಹಿ
ತಲೆಯ ಮೇಲಕ್ಕೆ ಮಾಡಿ ಗಗನಾಕಾರವೆಂಬ ಮಂಡಲಕ್ಕೆ
ಹೆಡೆಯೆತ್ತಿ ಆರ್ಭಟಿಸಿ ಝೇಂಕರಿಸಿ ನಲಿದಾಡುವಂತೆ,
ನಾದವನು ತನ್ನಲ್ಲಿ ಜ್ಞಾನೋದಯದಿಂದ ಲಾಲಿಸಿ
ಕೇಳಬಲ್ಲರೆ ಆತನಿಗೆ ಝೇಂಕಾರ ಮೊದಲಾದ
ನಾಲ್ಕು ವೇದ, ಆರು ಶಾಸ್ತ್ರ, ಹದಿನೆಂಟು ಪುರಾಣ
ಇಪ್ಪತ್ತೆಂಟು ದಿವ್ಯಾಗಮ, ಮೂವತ್ತೆರಡು ಉಪಶಾಸ್ತ್ರಂಗಳಲ್ಲಿ
ಗೀತ ಗಾಯನ ಯತಿ ಪ್ರಾಸ ದೀರ್ಘ ಗುರು ಲಘು
ಬತ್ತೀಸ ರಾಗವನು ಎತ್ತಿ ಹಾಡುವಂತ ಮೂಲದ ಕೀಲ
ಬಲ್ಲನೆಂದೆನ್ನಬಹುದು ಕಾಣಿರೋ.
ನಿಮ್ಮ ಅಂಗ ಪಂಚಶತಕೋಟಿ ಭುವನದಲ್ಲಿ
ಚಲಿಸ್ಯಾಡುವಂಥ ಮನದ ಚಂಚಲವೆಂಬ ಪಕ್ಷಿಯ ಪಕ್ಕವನು ಹರಿದು,
ತನುವೆಂಬ ಪಂಜರದೊಳಗೆ ಇಂಬಿಟ್ಟುಕೊಂಡು,
ತಾಮಸ ಮದಗುಣಾದಿಗಳೆಂಬ ಹುಳುಗಳ ಜಾತಿಗಳ
ತೂಗಡಿಕೆ ಮದನಿದ್ರೆ ಹಾಪಡಿಕೆ ಆಕಳಿಕೆ ಸೀನು ಬಿಕ್ಕಳಿಕೆ
ಬದಗರ ತೇಗು ಮೊದಲಾದ ತಾಮಸಗುಣಾದಿ ಗುಣಂಗಳೆಂಬ
ಹುಳುಜಾತಿಗಳನ್ನೆಲ್ಲ ತಿಂದು ನುಂಗಿ ನಿರ್ಮಲ ದೇಹಿಯಾಗಿರಬಲ್ಲರೆ
ಆತನಿಗೆ ಓಂ ನಮಃಶಿವಾಯ ಎಂಬ ಷಡಕ್ಷರದ ಭೇದವ
ಬಲ್ಲನೆಂದೆನ್ನಬಹುದು ಕಾಣಿರೋ.
ನಿಮಗೆ ಅಷ್ಟದಿಕ್ಕಿನಲ್ಲಿ ಆಡುವಂಥ ದಶರೂಪಗಳನ್ನೆಲ್ಲ

ಚಿತ್ತ ಏಕ ಮಾಡಿ, ಸುಜ್ಞಾನವೆಂಬ ಹಸ್ತದಲ್ಲಿ ಹಿಡಿದು,
ಮುಖದ ಮೇಲುಗಿರಿಮಂದರಪರ್ವತದ ಶಿಖರದ ತುದಿಯಲ್ಲಿ ನಿಲ್ಲಿಸಿ,
ಕ್ಷೀರಸಾಗರವೆಂಬ ಸಮುದ್ರದೊಳಗೆ ಹುಚ್ಚೆದ್ದು ಸೂಸಿ ಆಡುವಂಥ
ತೆರೆಗಳನ್ನೆಲ್ಲ ನಿಲ್ಲಿಸಬಲ್ಲರೆ ಆತನಿಗದು
ತ್ರಿಕಾಲ ಮರಣಾದಿಗಳನ್ನೆಲ್ಲ ಗೆಲಿಯಬಲ್ಲಂಥ
ಮಹಾಶಿವಯೋಗೀಶ್ವರನೆಂದನ್ನಬಹುದು ಕಾಣಿರೋ.
ಆತನಿಗೆ ಜ್ಞಾನ ಅರ್ಥ ಪದದ ಕೀಲ ವಚನಂಗಳ ಅರ್ಥ
ಅನುಭಾವಂಗಳ ಮಾಡಬಲ್ಲನೆಂದೆನ್ನಬಹುದು ಕಾಣಿರೋ !
ಇಂತು ಮಂತ್ರದ ಕೀಲನರಿಯದ ಕವಿಗಳು
ಕಂದಯ್ಯಗೆ ಮಹಾಪ್ರಭುಲಿಂಗಲೀಲೆ, ಕರಣಹಸಿಗೆ, ಮಿಶ್ರಾರ್ಪಣ,
ನವಚಕ್ರಕೋಟಿಗಳೆಂಬ ಇಂತೀ ಭುವಿಯಲ್ಲಿ ಶಿವಾಗಮವೆಂದು
ಬರಿಯ ಮಾತಿನ ಮತಿಯ ಪತ್ರವನು ಹಿಡಕೊಂಡು ಓದಿ,
ಅದರೊಳಗಿನ ಅರ್ಥವನು ಭಾವಂಗಳಲಿ ತಿಳಿತಿಳಿದು ನೋಡಿ,
ಜ್ಞಾತತ್ವದ ವಚನಂಗಳ ಮಾಡಿ ಇಡುವಂಥ ಕವಿಗಳು
ತಮ್ಮ ಆತ್ಮದ ಶುದ್ಧಿಯ ತಾವರಿಯದೆ
ಭೂತವೊಡೆದವರು ಬೊಗಳಾಡಿದಂತೆ ಆಯಿತ್ತು ಕಾಣಿರೋ.
ಅದೆಂತೆಂದರೆ : ಛಂದಸ್ಸು, ನಿಘಂಟು, ಅಮರ, ವ್ಯಾಕರಣ,
ನಾನಾರ್ಥಗಳೆಂಬ ಹಂಚಿನ ಕುಡಿಕೆಯೊಳಗೆ ತುಂಬಿದ
ಅರ್ಥ ಅನುಭಾವಂಗಳ ತಿಳಿತಿಳಿದು ನೋಡಿ,
ಪೃಥ್ವಿ ಅಪ್ಪು ತೇಜ ವಾಯು ಆಕಾಶ ರವಿಶಶಿಯಾದಿಗೂ
ಹೆಸರದೆಸೆಯ ಕೊಂಡುಕೊಂಡು, ಇಂತಿವು ಮೂರನು ಕೂಡಿಕೊಂಡು,
ಒಂದಕ್ಕೆ ಒಂದು ಕಟ್ಟಿ ಹಾಕಿ ಪ್ರಾಸ ಬಿದ್ದಿತೊ ಬೀಳದೊ ಎಂದು ತಮ್ಮನದಲ್ಲಿ
ತಾವು ಅಳದಾಡುವಂತೆ
ಒಂದು ಹೊದವಿದ ಪದ್ಯವನು ಮಾಡಿ ಇಡುವಂತಹ
ಕಲಿಕೆಯ ಕವಿಗಳು ಮುಂದೆ ಅಜ್ಞಾನದಿಂದ
ಮುಕ್ತಿಯ ದಾರಿಯ ಕಾಣಲರಿಯದೆ ಮುಂದುಗಾಣದ ತುರುಕರು
ಅಘೋರವೆಂಬ ನರಕದ ಕಿಚ್ಚಿನ ಕೊಂಡದೊಳಗೆ ಬಿದ್ದು
ಹೋರಟೆಗೊಳ್ಳುತ್ತಿದ್ದರು ಕಾಣಿರೋ.
ಅದೆಂತೆಂದರೆ ; ಛಂದಸ್ಸು ನಿಘಂಟು ಅಮರ ವ್ಯಾಕರಣ
ನಾನಾರ್ಥಂಗಳೆಂಬುವೆಲ್ಲ ಕವಿಯೆಂಬ ಕುಂಬಾರ ಮಾಡಿ
ಸವಿದುಂಡು ಬೀದಿಯೊಳಗೆ ಬಿಟ್ಟಿರ್ದ ಎಂಜಲ ಪತ್ರಾವಳಿಯೊಳಗಿನ
ಭೋಜನಕ್ಕೆ ಕವಿಗಳೆಂಬುವ ಆರುಮಂದಿ ಸೊಣಗಗಳು
ಕೂಗಿಡುತಿರ್ದವು ಕಾಣಿರೋ.
ಅದೆಂತೆಂದರೆ: ಕಾಮ ಘನವೆಂದು ಮಾಡಿದಾತ ಒಬ್ಬ ಕವಿಯೆಂಬ ಸೊಣಗ.

ಕ್ರೋಧ ಘನವೆಂದು ಮಾಡಿದಾತ ಒಬ್ಬ ಕವಿಯೆಂಬ ಸೊಣಗ.
ಮದ ಘನವೆಂದು ಮಾಡಿದಾತ ಒಬ್ಬ ಕವಿಯೆಂಬ ಸೊಣಗ.
ಮೋಹ ಘನವೆಂದು ಮಾಡಿದಾತ ಒಬ್ಬ ಕವಿಯೆಂಬ ಶ್ವಾನನು.
ಮಚ್ಚರ ಘನವೆಂದು ಮಾಡಿದಾತ ಒಬ್ಬ ಕವಿಯೆಂಬ ಶ್ವಾನನು.
ಲೋಭ ಘನವೆಂದು ಮಾಡಿದಾತ ಒಬ್ಬ ಕವಿಯೆಂಬ ಶ್ವಾನನು.
ಇಂತಿವರು ಆರು ಮಂದಿ ಕವಿಗಳೆಂಬ ಶ್ವಾನಗಳು ಕೂಡಿ
ನಾ ಹೆಚ್ಚು ತಾ ಹೆಚ್ಚು ಎಂದು ಒಂದಕ್ಕೊಂದು ಕಾದಾಡಿ ಚಿತ್ತಪಲ್ಲಟವಾಗಿ,
ಆ ಪತ್ರದೊಳಗಿನ ಬೋನದ ಸವಿಯನು ಬಿಟ್ಟು ಚಿತ್ತಪಲ್ಲಟವಾಗಿ,
ಆ ಪತ್ರದ ತುಳಿಯನು ಹರಿದುಕೊಂಡು ತಿಂದು ಹಲವು ಕಡೆಗೆ
ಹರಿದಾಡುತ್ತಿದ್ದವು ಕಾಣಿರೋ.
ಅದು ಎಂತೆಂದರೆ : ಇಂತು ಕಾಯದ ಕೀಲನರಿಯದೆ ಮಾಡಿದ ಕವಿಗಳು
ಕಾಲನ ಬಾಧೆಗಳೆಂಬ ಮರಣಕ್ಕೆ ಒಳಗಾಗಿ ಹೋದಂತೆ
ಕುರುಡ ಕವಿಗಳಂ ಕಂಡು ನಗುತ್ತಿದ್ದಾತ ಸಿದ್ಧಮಲ್ಲನದಾತ
ಮೋಗಣಗವಿಯ ಗುರುಸಿದ್ಧೇಶ್ವರಪ್ರಭುವೆ. ॥ ೭ ॥

### ೯೬೯

ಕವಿ ಕವಿಗಳೆಂದು ಹೆಸರಿಟ್ಟುಕೊಂಡು ನುಡಿವ ಅಣ್ಣಗಳಿರಾ !
ಕಾಯದ ಕೀಲನರಿತು ಕವಿತ್ವವನು ಮಾಡುವಂಥ ಭೇದವನು
ಬಲ್ಲರೆ ಹೇಳಿ, ಅರಿಯದಿರ್ದರೆ ಕೇಳಿ.
ನಿಮ್ಮ ಅಂಗಕಾಯವೆಂಬ ಅಕ್ಷರಕ್ಕೆ 'ವಾ' ಎಂಬ ಒತ್ತು ಕೊಟ್ಟು
ಇಳಿಯ ತೆಗೆದು ಜನ್ಮದಲ್ಲಿ ನುಡಿಸಬಲ್ಲರೆ
ಆತನೀಗ ಪಂಚತತ್ವದ ಮೂಲವ ತಿಳಿದು
ಮನವೆಂಬ ಗದ್ದಿಗೆಯ ಅಜ್ಞಾನವೆಂಬ ನಾದಸ್ವರವನು ಹಿಡಿದುಕೊಂಡು
ಅದರ ಅನುವರಿತು ಊದಿ, ಪಿಂದೆ ವಾಡೆಯಿಂದ
ಪೃಷ್ಠಿಯ ಎತ್ತಿದ ಸರ್ಪನ ಎಬ್ಬಿಸಿ ಬ್ರಹ್ಮಾಂಡಕ್ಕೆ ಮುಖ ಮಾಡಿ
ನಿಲ್ಲಿಸಬಲ್ಲರೆ ಆತನಿಗಾಗಿ ಗೀತ ಗಾಯನ ವಾದ್ಯ
ಪ್ರಾಸ ದೀರ್ಘ ಗುರು ಲಘುಗಳೆಂಬ ಭೇದವ ಬಲ್ಲನೆಂದೆನ್ನಬಹುದು.
ನಿಮ್ಮ ಅಂಗ ಕಾಯವೆಂಬ ಅಕ್ಷರಕ್ಕೆ 'ವಾ' ಎಂಬ ಒತ್ತುಕೊಟ್ಟು ಕಾಣಿರೋ !
ಗುಡಿಸ ಕೊಟ್ಟು, ಗುಡಿಸಿನ ಒಳಗೆ ಸುಳಿದು ಜಿಹ್ವೆಯಲ್ಲಿ ನುಡಿಸಬಲ್ಲರೆ
ಅಂತಹವನಿಗ ತನ್ನ ತನುವೆಂಬ ಹುತ್ತದ
ಒಂಬತ್ತು ಹೆಜ್ಜವನು ಮುಚ್ಚಿದ ದ್ವಾರಂಗಳನ್ನೆಲ್ಲ ಬಳಿದು
ಅಂಬರಮಂಟಪದೊಳಗ ಸುಳಿದಾಡುವಂಥ ಶಂಭುಲಿಂಗವನು
ನೋಡಿಕೊಂಡು ಸಂತೈಸಿ, ವರುಷ ವರುಷಕ್ಕೆ
ಒಂದು ಸಂಭ್ರಮದ ಜಾತ್ರೆಯ ನೆರೆಯಬಲ್ಲರೆ
ಆತನಿಗೆ ಮಹಾಪ್ರೌಢನೆಂದೆನ್ನಬಹುದು ಕಾಣಿರೋ.

ನಿಮ್ಮ ಕಾಯವೆಂಬ ಅಕ್ಷರಕ್ಕೆ 'ವಾ' ಎಂಬ ಒತ್ತುಕೊಟ್ಟು,
ಕೊಂಬಿನಿಂದಿಳಿಯ ತೆಗೆದು ಆತನಿಗೆ ಆರು ಮೂರುಗಳೆಂಬ
ನವರಸವಿದ್ಯ ನಾದವನೆಬ್ಬಿಸುವಂಥ ತಾಳಗತಿಯ
ಪದಕಾರಣವ ಬಲ್ಲನೆಂದೆನ್ನಬಹುದು ಕಾಣಿರೋ.
ನಿಮ್ಮ ಅಂಗಕಾಯವೆಂಬ ಅಕ್ಷರಕ್ಕೆ 'ವಾ' ಎಂಬ ಒತ್ತುಕೊಟ್ಟು
ಮೇಲೆತ್ವವಂ ಕೊಟ್ಟು, ಕೆಳಗೈತ್ವವಂ ಕೊಟ್ಟು,
ಇವೆರಡನು ಕೂಡಿ ಒಂದಮಾಡಿ ನುಡಿಸಬಲ್ಲರೆ
ಆತನಿಗೆ ಸ್ವರ್ಗ ಮರ್ತ್ಯ ಪಾತಾಳ ಇಂತೇಳು ಭುವನ,
ಹದಿನಾಲ್ಕು ಲೋಕ, ಸಪ್ತೇಳುಸಾಗರ, ಅಷ್ಟಲಕ್ಷ ಗಿರಿಪರ್ವತಗಳನ್ನೆಲ್ಲ
ತನ್ನ ಅಂತರಂಗವೆಂಬ ಕುಕ್ಷಿಯೊಳಗೆ ಇಂಬಿಟ್ಟುಕೊಂಡು
ಪರರಿಗೆ ಕಾಣಬಾರದಂತಹ ಕುರೂಪಿಯಾಗಿ ಇರಬಲ್ಲರೆ
ಆತನಿಗೆ ಮಹಾಶಿವಜ್ಞಾನಿಯೆಂದೆನ್ನಬಹುದು ಕಾಣಿರೋ.
ನಿಮ್ಮ ಅಂಗಕಾಯವಂಬ ಅಕ್ಷರಕ್ಕೆ 'ವಾ' ಎಂಬ ಒತ್ತುಕೊಟ್ಟು,
ಉತ್ವ ಔತ್ವ ಕೊಟ್ಟು, ಉತ್ವ ಔತ್ವವೆರಡನು ಕೂಡಿ
ಒಂದುಮಾಡಿ ನಿಲಿಸಿ ಜಮ್ಮದಲ್ಲಿ ನುಡಿಸಬಲ್ಲರೆ
ಆತನಿಗೆ ಆ ನರಕವಿ ವರಕವಿಗಳ ಕಣ್ಣಿಗೆ ಕಾಣಬಾರದಂತಹ
ಮುಸುಕಿನ ಮುಡಿಯಂ ಮಂದಿರ ಮನೆಯೊಳಗೆ
ಮುಹೂರ್ತವ ಮಾಡಿಕೊಂಡಿಹುದು.
ಓಂಕಾರವೆಂಬುವದೊಂದು ಅಕ್ಷರವ ನೋಡಿ
ಅನಂತ ಪರಿಪರಿಯ ವಚನಗಳ ಮಾಡಬಲ್ಲರೆ
ಆತನಿಗೆ ಮಹಾ ಉತ್ತಮ ಶಿವಕವೀಶ್ವರನೆಂದೆನ್ನಬಹುದು ಕಾಣಿರೋ.
ನಿಮ್ಮ ಅಂಗಕಾಯವೆಂಬ ಅಕ್ಷರಕ್ಕೆ 'ವಾ' ಎಂಬ ಒತ್ತುಕೊಟ್ಟು
ಒಂದು ಸೊನ್ನೆಯ ಕೊಟ್ಟರೆ 'ವಂ' ಎಂದು ಅಂತರಂಗದಲ್ಲಿ ತಿಳಿದು,
ಜಿಹ್ವೆಯಲ್ಲಿ ನುಡಿಯಬಲ್ಲರೆ ಆತನಿಗೆ ಕಾಯಪುರವೆಂಬ ಪಟ್ಟಣದೊಳಗೆ
ಹರಿದಾಡುವಂಥ ಆರುಮಂದಿ ತಳವಾರರ ತಲೆಯ ಕುಟ್ಟಿ,
ಮೂರುಮಂದಿ ಗರ ಬೆರೆದ ನೆಂಟರ ಮೂಗ ಕೊಯ್ದು,
ಸಾವಿರೆಸಳಿನ ಕಮಲದೊಳಗೆ ಪೊಕ್ಕು,
ತನ್ನ ಸಾವು ಮರಣ ತಪ್ಪಿಸಿಕೊಳ್ಳಬಲ್ಲರೆ ಆತನಿಗೆ
ಮಹಾಶಿವಯೋಗೀಶ್ವರನೆಂದೆನ್ನಬಹುದು ಕಾಣಿರೋ.
ನಿಮ್ಮ ಅಂಗಕಾಯವೆಂಬ ಅಕ್ಷರಕ್ಕೆ 'ವಾ' ಎಂಬ ಒತ್ತುಕೊಟ್ಟು
ಎರಡು ಸೊನ್ನೆಯ ಕೊಟ್ಟರೆ 'ವಃ' ಎಂದು ಅಂತರಂಗದಲ್ಲಿ ತಿಳಿದು
ಜಿಹ್ವೆಯಲ್ಲಿ ನುಡಿಯಬಲ್ಲರೆ, ಆತನಿಗೆ ತನ್ನ ಅಂತರಂಗವೆಂಬ
ಹರಿವಾಣದೊಳಗೆ ತುಂಬಿಟ್ಟಿದ್ದಂತಹ ಷಡುರಸ ಪಂಚಾಮೃತ
ಪಂಚಕಜ್ಜಾಯಗಳೆಲ್ಲ ಸವಿದುಂಡು ಚಪ್ಪರಿಸಿ ಓಪ್ಪೆಯ ಮಾಟ

ಬೀದಿಯೊಳಗೆ ಬಿಸುಟಬಲ್ಲರೆ ಆತನಿಗೆ ಕಾಯದ ಕೀಲನರಿತು
ಕವಿತ್ವವನು ಮಾಡುವಂತಹ ಪ್ರೌಢನೆಂದೆನ್ನಬಹುದು ಕಾಣಿರೋ.
ಇಂತೀ ಕಾಯದ ಕೀಲನರಿಯದ ಕವಿಗಳು
ಛಂದಸ್ಸು, ನಿಘಂಟು, ಅಮರ, ವ್ಯಾಕರಣ,
ನಾನಾರ್ಥಗಳೆಂಬ ಹೆಂಚ ಹೊಡೆದು ನೆತ್ತಿಯ ಮೇಲೆ ಹೊತ್ತುಕೊಂಡು
ತಿರುಗುವ ಕವಿಗಳೆಂಬ ಚಾತುರ್ಯದ ಮಾತ ನಿಟ್ಟಿಸಲು
ಆಡ ಸವಿವ ಜಾತಿಗಳ ಕಂಡು ನಗುತಿರ್ದಾತ
ಸಿದ್ಧಮಲ್ಲನದಾತ ಮೇಗಣಗವಿಯ ಗುರು ಶಿವಸಿದ್ಧೇಶ್ವರಪ್ರಭುವೆ. || ೮ ||

೯೭೦

ಕವಿ ಕವಿಗಳೆಂದು ಹೆಸರಿಟ್ಟುಕೊಂಡು ನುಡಿವ ಅಣ್ಣಗಳಿರಾ !
ನಿಮ್ಮ ಸಪ್ತಪಾತಾಳದಿಂದ ಅತ್ತತ್ತವಿತ್ತು
ಮುಂದೆ ಭುವನದ ಮೂಲವ ತಿಳಿದು ಗುಪ್ತಮಂಡಲವೆಂಬ
ಹುತ್ತದೊಳಗೆ ಇರ್ದ ಫಟಸರ್ಪದ ಅಡಿಯ ಮೇಲಕ್ಕೆ ಮಾಡಿ,
ಒಡನೆ ನಿಲಿಸಬಲ್ಲರೆ ಆತನಿಗೆ ಆ ನರಕವಿ ವರಕವಿಗಳ
ಕಣ್ಣಿಗೆ ಕಾಣಬಾರದಂತಹ ಮುಸುಕಿನ ಮಂದಿರದ ಮನೆಯೊಳಗೆ ಇದ್ದುಕೊಂಬ,
ತನ್ನ ತಲೆಕೆಳಗಾಗಿ ಪಾದ ಮೇಲಾಗಿ ಉಧೋ ಎಂದು
ಅರ್ತು ಗುರ್ತವಿಟ್ಟು ಆಳಬಲ್ಲರೆ ಆತನಿಗೆ
ಮಹಾಶಿವಜ್ಞಾನಿ ಎಂದನ್ನಬಹುದು ಕಾಣಿರೋ.
ನಿಮ್ಮ ಅಂಗ ಸ್ವರ್ಗ ಮರ್ತ್ಯ ಪಾತಾಳ, ಈರೇಳು ಭುವನ,
ಹದಿನಾಲ್ಕುಲೋಕ, ಪಂಚಶತಕೋಟಿ ಭುವನದ ವಿಸ್ತಾರವನ್ನೆಲ್ಲ
ತನ್ನ ಅಂತರಂಗದೊಳಗೆ ನೋಡಿಕೊಂಡು,
ಹೊರಗೆ ಶಿವಶಾಸ್ತ್ರ ಆಗಮ ಪುರಾಣಂಗಳ ನಿರ್ಮಿತವ ಮಾಡಿ,
ಇರಬಲ್ಲರೆ ಆತನಿಗೆ ಉತ್ತಮ ಶಿವಕವೀಶ್ವರ ಎಂದೆನ್ನಬಹುದು ಕಾಣಿರೋ.
ನಿಮ್ಮ ಅಂಗ ಉತ್ತರ ದಕ್ಷಿಣ ಪೂರ್ವ ಪಶ್ಚಿಮ
ನಾಲ್ಕು ದಿಕ್ಕಿನ ಮೂಲವ ತಿಳಿದು ಘಟಿಕಾಸ್ಥಾನವೆಂಬ ಒಂದಾಸನವ ಬರೆದು,
ಎಂಬತ್ನಾಲ್ಕು ಆಸನದ ಭೇದದ ಗುಣಾವಗುಣಗಳೆಲ್ಲಾ
ಒಂದೇ ಆಸನದಲ್ಲಿ ತಿಳಿದು, ಸತ್ಯವ ಹಿಡಿದು,
ನಿತ್ಯನಾಗಿರಬಲ್ಲರೆ ಆತ ತನಗೆ ಬಂದಂತಹ
ಮೂನ್ನೂರರವತ್ತು ಕಂಟಕಗಳನ್ನೆಲ್ಲ ಬಡಬಾಗ್ನಿಯ ಕಿಚ್ಚಿನಲ್ಲಿ ಸುಟ್ಟು,
ಬೂದಿಯನು ಗಂಗೆಯ ಕೂಡಿಸಿ, ಲಿಂಗಾಂಗಿಯಾಗಿರಬಲ್ಲರೆ
ಆತನಿಗೆ ಸ್ನಾನ ನೇಮ ಸಂಧ್ಯಾವಂದನ ಜಪ ಗಾಯತ್ರಿ ಸಪ್ತಗಾಯತ್ರಿಗಳ
ಸ್ಥಾನಸ್ಥಾನವಲ್ಲಿ ನುಡಿದು ಪ್ರಾಣಲಿಂಗದ ದರುಶನವಾಗಿರಬಲ್ಲರೆ,
ಆತನಿಗ ಅನಂತಕಾಲ ಚಕ್ರವ ಗಲಿದಂತಹ ಅಖಂಡಪರಿಪೂರ್ಣ

ಮಹಾಮಹಾದೇವರೆಂದೆನ್ನಬಹುದು ಕಾಣಿರೋ.
ಇಂತು ತಮ್ಮ ಅಂತರಂಗದೊಳಗಿದ್ದ ಕುಲಭಕ್ತನ ಭೇದವನರಿಯದೆ,
ನರಕವಿ ವರಕವಿಗಳು ಹಲವು ಶಾಸ್ತ್ರ ಆಗಮ ಪುರಾಣಗಳ ಓದಿ,
ಬಹುಮಾತುಗಳ ಕಲಿತು, ಬಂದ ಬರವು ನಿಂದ ನಿಲವು ತಿಳಿಯನರಿಯದೆ,
ಒಂದೊಂದನೆ ಪದ ಪದ್ಯವನು ಮಾಡಿ,
ಆಸ್ಥಾನದ ಸಭೆಯೊಳಗೆ ಕುಳಿತುಕೊಂಡು ಹಾಡಿ ಪಾಡುವಂತಹ
ಕವಿಗಳೆಂಬ ಕತ್ತೆಗಳ ಕಂಡು ನಗುತಿರ್ದಾತ
ಸಿದ್ಧಮಲ್ಲನದಾತ ಮೇಗಣಗವಿಯ ಗುರುಶಿವಸಿದ್ಧೇಶ್ವರಪ್ರಭುವೆ. ॥ ೯ ॥

■■

## ಸಿದ್ಧವೀರದೇಶಿಕೇಂದ್ರನ ವಚನ

೯೭೧

ವ್ಯಾಸನುಸುರ್ದ ಸ್ಕಂದಪುರಾಣದಲ್ಲಿಯ
ಶ್ರೀಶೈಲಕಲ್ಪ ನೋಳ್ಪುದಯ್ಯಾ.
ಅಲ್ಲಿ ಸಿದ್ಧಸಾಧಕರ ಸನ್ನಿಧಿಯಿಂದರಿಯಬಹುದಯ್ಯಾ.
ಮಾಡಿದನೊಬ್ಬ ಪೂರ್ವದಲ್ಲಿ ಗೋರಕ್ಷ
ಮಾಡಿದನೊಬ್ಬ ಮತ್ಸ್ಯೇಂದ್ರನಾಥ,
ಮಾಡಿದರೆಮ್ಮ ವಂಶದ ಶ್ರೀಗುರುಶಾಂತದೇವರು.
ಇದು ಕಾರಣ,
ಯೋಗದ ಭೇದ ಯೋಗಿಗಳಂತರಂಗದಿಂದರಿತಡೆ
ಯೋಗಸಿದ್ಧಿ ಸತ್ಯ ಸತ್ಯ,
ಶ್ರೀಗುರು ತೋಂಟದಸಿದ್ಧಲಿಂಗೇಶ್ವರ. || ೧ ||

# ಹೇಮಗಲ್ಲ ಹಂಪನ ಹೇಮಗಲ್ಲ ಷಟ್‌ಸ್ಥಲ

## ಶಿವಸ್ತೋತ್ರಸ್ಥಲ

೯೭೨

ಜಯ ಜಯ ನಿತ್ಯನಿರಂಜನ ಪರಶಿವ,
ಜಯ ಜಯ ಅಮೃತಕರ,
ಜಯ ಸದಾನಂದ, ಜಯ ಕರುಣಜಲ,
ಜಯ ಭಕ್ತರೊಂದ್ಯ,
ಜಯ ಜ್ಞಾನಸಿಂಧು, ಜಯ ಕರ್ಮವಿದೂರ,
ಜಯ ಚಿನ್ಮಯ ಚಿದ್ರೂಪ, ಜಯ ಜಗದೀಶ
ಎನ್ನವಗುಣವ ನೋಡದೆ ರಕ್ಷಿಸು
ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧ ॥

೯೭೩

ಪರಮಾರ್ಥ ಪರಬ್ರಹ್ಮ
ಪರಂಜ್ಯೋತಿಲಿಂಗ ಪರಶಿವ
ಪರಾಪರ ಶಾಂತಿ ಪರಾತ್ಮಸಂಜೀವ,
ಪನ್ನಗಭೂಷಣ, ಪರಹಿತ,
ಪರದೇವಾತ್ಮಲಿಂಗ, ಪರಜನ್ಮಕರ್ಮವಿದೂರ,

ಪರಿಣಾಮಿ. ಪರಾಪರನಿಲಯ.
ಪಾವನಸ್ವರೂಪನೆ ರಕ್ಷಿಸುವುದು
ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩ ॥

೯೭೪

ಚಿನ್ಮಯ ಚಿದ್ರೂಪ ಚಿತ್ಪ್ರಕಾಶ ಚಿದಾನಂದ
ಚಿದ್ಘನ ಚಿತ್ಪ್ರಭೆ ಚಿದ್ಘನಾತ್ಮ ಚಿದ್ಘನಲಿಂಗ
ಚಿದ್ರೂಪ ಚಿತ್ಪರಶಿವ
ಚಿತ್ಪರಬ್ರಹ್ಮ ಚಿದಾತ್ಮಸ್ವರೂಪನೆ ರಕ್ಷಿಸುವುದು
ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨ ॥

೯೭೫

ಅಗಣಿತ ಅಚಲಲಿಂಗಾಂಗರೂಪ.
ಜಗದಗಲಾತ್ಮ ಅಪ್ರತಿಮ
ಅಘೋರಿಗಳಿಗೆ ಅನಂತ ಅನಾಮಯ
ಅಚಲ ಅಗಣಿತ ಅತಿಶಕ್ತ
ಅಭವ ಅಭಂಗ ಅತಿಪರಾತ್ಪರ
ಅನಾದಿ ಅಪರಂಪಾರ ಅನಿರ್ವಾಚ್ಯ
ಅಪ್ರಾಕೃತಪರಂಜ್ಯೋತಿ ಅಕ್ಷಯ ಅಮಲ ಅವ್ಯಕ್ತ
ಅತುಲ್ಯ ಅಭವ ಅರೂಪಮಯ ಅನುಪಮ ಅಘಟಿತ
ಅಚಿಂತ್ಯ ಅಪ್ರಮೇಯ ಅದ್ವೈತ
ಅದ್ವಯ ಅಸಾಧ್ಯ ಅಗಮ್ಯ ಅನಂತಗುಣಾನಂದ
ರಕ್ಷಿಸುವುದು ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪ ॥

೯೭೬

ತ್ರಿಪುರಸಂಹಾರ ತ್ರಿಶೂಲಿ ತ್ರಿನಯನ
ತ್ರಿಗುಣರಹಿತ ತ್ರಿಮೂರ್ತ್ಯಾತ್ಮಲಿಂಗ
ತ್ರಿಮಂಡಲಾಧಾರ ತ್ರಿಲಿಂಗೇಶ ತ್ರಿಸ್ಥಾನ
ತ್ರಿಲೋಚನ ತ್ರಿಕೋಟಿ ತ್ರಿಪದ
ಅಷ್ಟವಿಧ ಶಿವಾರ್ಚನಪ್ರಿಯ
ತ್ರ್ಯಕ್ಷರ ಅ[ಖಂ]ಡತ್ರಿಪುರಹರ
ತ್ರಿಯಾಕ್ಷರಾತ್ಮ ಪರಮಾನಂದ ಪರಬ್ರಹ್ಮ

ರಕ್ಷಿಪುದೆಮ್ಮ ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫ ॥

೯೭೭

ಮಾರಮಥನ ಮಸಣಾಲಯ ಮನಾತೀತ
ಮಾ[ನಿ] ದ್ಯುಮಣಿಧರ ಮತ್ಸರವಿರಹಿತ
ಮದ್ಗುರು ಮಹಾಶಂಭು ಮಹಾದೇವ
ಮಹಾಜ್ಞಾನ ಮಹಾತ್ಮನೆ ಮಹಾದೇವದೇವ
ಮರಣವಿರಹಿತ ಮರಹುದೂರ ಅರುಹಾನಂದ
ಮನುಮುನಿವಂದ್ಯ ಮೂಲಾಧಾರ ಮಹಾಗಣಪ್ರೇಮ
ಮಾಯಾಕೋಳಾಹಳ ಮಾಯ ನಿರ್ಮಮಗುಣಮಗೋಚರ
ಮಹಾಜ್ಯೋತಿ ಪರಶಿವ ಮೂರುಲೋಕಪ್ರಕಾಶ
ಸರ್ವಕಾವದೇವನೆಂದು ಮೊರೆಹೊಕ್ಕೆ,
ಎನ್ನ ಕಾಯ್ದು ರಕ್ಷಿಸು
ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೬ ॥

೯೭೮

ಗಜಾಸುರಸಂಹರ ಗಗನಾತ್ಮ ಘನಗುರು
ಗರುಡಗಂಧರ್ವರೊಂದ್ಯ ಘನಶಿವ
ಗರಳಧರ ಘಟಾತ್ಮಜ್ಯೋತಿಪ್ರಕಾಶ
ಗಂಗಾಧರ ಗಮನನಿರ್ಗಮನ
ಗಣಸಕಲರಾತ್ಮೇಶ ಗರುಡ ಅತಿವಿಭೂಷ
ಜ್ಞಾನಜ್ಯೋತಿಪ್ರಕಾಶ ಗರುವ ಗಂಭೀರ
ಗುಣಸಾರ ಕುಜನಕುಠಾರ ಭವದೂರ
ಧರ್ಮವಿಚಾರ ದೇವರದೇವನೆಂದು ಮೊರೆಹೊಕ್ಕೆ
ಕೇಳೆನ್ನ ಹುಯ್ಯಲ,
ರಂಬಿಸಿ ಅಂಜದಿರೆಂದು ತಲೆವಿಡಹಿ ರಕ್ಷಿಸು
ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭ ॥

೯೭೯

ಕಾಲಸಂಹರ ಕಾಮವಿದೂರ
ಕರಣಾತೀತ ಕರ್ಮಗಿರಿಗೂಜ್ರ
ಕಮಲಮಿತ್ರ ಶಶಿಭೂಷ ಕರುಣಕಟಾಕ್ಷ

ಕಮಲೋದ್ಭವಶಿರಕರಕಪಾಲ
ಕಮಲಪೂಜಿತನಯನ ಪಾದಚರಣದಲಿ ಧರಿಸಿದ ದೇವ
ವಿಶ್ವಕ್ಸೇನ ಹಣಾಸ ಹೊತ್ತ ದೇವ
ವೇದಶಾಸ್ತ್ರಕಶೀತದೇವನೆಂದು ಮೊರೆಹೊಕ್ಕೆ.
ಎನ್ನಯ ಮೊರೆಯಂ ಕೇಳಿ ಕಾದರೆ ಕಾಯಿ,ಕೊಂದರೆ ಕೊಲ್ಲು
ನಿಮ್ಮ ಧರ್ಮ, ನಿಮ್ಮ ಧರ್ಮ.
ನೀನೆ ಹುಟ್ಟಿಸಿ, ನೀನೆ ಕರ್ಮಕಾಯಕೆ ಗುರಿಮಾಡಿ,
ನೀನಗಲಿದರೆ ನೊಂದೆ ಬೆಂದೆ.
ಬಿಡಬೇಸದಿರು, ಎನ್ನನಿತ್ತ 'ಬಾ'ಯೆಂದು ತಲೆದಡಹೊ
ಜಯಜಯ ಹರಹರ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೮ ||

೯೮೦

ದೇವರದೇವ ನಿತ್ಯದೇವ ಸ್ವಯಂಭೂದೇವ
ಗಿರಿವಾಸದೇವ ಗಣರೊಂದ್ಯ ದೇವೇಂದ್ರಭಜಿತದೇವ
ಸರ್ವಲೋಕಪ್ರಕಾಶದೇವ ಸರ್ವರ ಕಾವದೇವ
ಶುಭ್ರವರ್ಣದೇವ ನಂದೀಶದೇವ ಪಂಚವಕ್ತ್ರದೇವ
ಪಂಚಬ್ರಹ್ಮದೇವ ಪಂಚಾಕ್ಷರಿಯಧ್ಯಾತ್ಮಜ್ಯೋತಿದೇವ
ಕೆಂಜೆಡೆಯ ಭೂಷಣದೇವ ರವಿಕೋಟಿತೇಜದೇವ
ನಂದಮಯ ನಾದೋರ್ಲಿಂಗಂ ನಾದಪ್ರಿಯ ನಾಗೇಶ್ವರ
ಆದಿಮಧ್ಯಾಂತರಹಿತ ದೇವಂ ವೇದವಿದವರಂ
ವ್ಯೋಮಜ್ಯೋತಿರೂಪಕಂ ಎಂದೆನಿಸುವ ದೇವನೆಂದು ಮೊರೆಹೊಕ್ಕೆ.
ಎನ್ನಯ ಮೊರೆಯಂ ಕೇಳಿ ಅಂಜದಿರೆಂದು ರಕ್ಷಿಸು
ಹರಹರ ಜಯಜಯ ಶಿವಶಿವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೯ ||

೯೮೧

ರಾಗ : ದೇಶಿ

ಪಲ್ಲ : ಜಯಜಯ ಪರಮೇಶ ಪರಬ್ರಹ್ಮ
ಜಯಜಯ ನಿತ್ಯಾನಂದ
ಪದ : ಹರಿಯಜಸುರರೊಂದ್ಯ ಜಯಜಯ
ಗಿರಿಸುತೆಪ್ರಾಣೇಶ ಜಯಜಯ
ಪರಮುನಿಗಳಾತ್ಮ ಜಯಜಯ
ಪರಂಜ್ಯೋತಿರ್ಲಿಂಗ ಜಯಜಯ
ತರಣಿಕೋಟಿತೇಜ ಜಯಜಯ

ಉರಗಾಭರಣಭವ ಜಯಜಯ
ಕರುಣರಸಸಿಂಧು ಜಯಜಯ
ಮುರಹರ ಮೃತರಹಿತ ಜಯಜಯ ॥ ೧ ॥

ತ್ರಿಪುರಸಂಹರ ನಿತ್ಯ ಜಯಜಯ
ಅಪರಂಪಾರಮೂರ್ತಿ ಜಯಜಯ
ಕೃಪತ್ರೈಲೋಕೇಶ ಜಯಜಯ
ಉಪಮೆರಹಿತಪುಣ್ಯ ಜಯಜಯ
ಜಪತಪಕೊಲಿವಾತ ಜಯಜಯ
ಅಪಹರಿ ಶಿಖಿಯೊಳಿಟ್ಟ ಜಯಜಯ
ವಿಪಿನಕಾಷ್ಠಾರಿನೇತ್ರ ಜಯಜಯ
ನಿಪುಣ ನಿರ್ಗುಣ ಶಂಭು ಜಯಜಯ ॥ ೨ ॥

ಮಾರಾರಿ ಮದಚರ್ಮ ಜಯಜಯ
ಮೂರುನೇತ್ರದ ಭವ ಜಯಜಯ
ಈರೇಳು ಭುವನಾತ್ಮಜ ಜಯಜಯ
ವಾರಿಜ ಅರಿಭೂಷ ಜಯಜಯ
ಮೇರುವಿಗಣಪೂಜ್ಯ ಜಯಜಯ
ಪೂರಿತ ಪುಣ್ಯಾಂಗ ಜಯಜಯ
ಧಾರುಣಿ ದಯಪಾಲ ಜಯಜಯ
ಕರುಣಿ ಚಿನ್ಮಯ ಜಯಜಯ ॥ ೩ ॥

ನಂದಿವಾಹನ ನಿತ್ಯ ಜಯಜಯ
ಅಂಧಕಾಸುರವೈರಿ ಜಯಜಯ
ಕಂದುಗೊರಳ ಶಿವನೆ ಜಯಜಯ
ಸಂದ ಕುಣಪಶೂಲ ಜಯಜಯ
ಕಂದಗೆ ವರವಿತ್ತ ಜಯಜಯ
ಗಂಧರ್ವರಿಗೊಲಿದೆ ಜಯಜಯ
ಇಂದ್ರಪೂಜಿತಲಿಂಗ ಜಯಜಯ
ತಂದೆತಾಯಿಲ್ಲದ ಮೋನ ಜಯಜಯ ॥ ೪ ॥

ಭವರೋಗಕ್ಕೆ ವೈದ್ಯ ಜಯಜಯ
ಶಿವ ವಿಶ್ವಕುಟುಂಬಿ ಜಯಜಯ
ಜವನ ಸಂಹರ ಅಮಲ ಜಯಜಯ
ಪವಿತ್ರಸ್ವರೂಪಕಾಯ ಜಯಜಯ
ಭುವನ ಸರ್ವಕೆ ದೇವ ಜಯಜಯ
ಕುವರ ಹಂಪನ ಪ್ರಾಣ ಜಯಜಯ

ದೇವ ಗುರುಸಿದ್ಧಮಲ್ಲ ಜಯಜಯ
ಕವಿವ ದುರಿತಹರ ಜಯಜಯ ॥ ೯ ॥
॥ ೧೦ ॥

## ಪಿಂಡಸ್ಥಲ

ಸೂತ್ರ : ಇಂತು ಮುಂದೆ ಪಿಂಡಸ್ಥಲ ವಚನ.

### ೯೩

ಪಿಂಡ ಬ್ರಹ್ಮಾಂಡವ ಒಂದು ಮಾಡಿ ನಿರ್ಮಿಸಿದ
ಶಿವನ ಕಂಡವರುಂಟೇ ? ಹೇಳಿರೆ !
ಕಂಡವರುಂಟು, ಅದು ಹೇಗೆಂದಡೆ :
ಶಿಲೆಯೊಳಗಣ ಪಾವಕನಂತೆ, ತಿಲದೊಳಗಣ ತೈಲದಂತೆ,
ಬೀಜದೊಳಗಣ ವೃಕ್ಷದಂತೆ, ಉದಕದೊಳಗಣ ಪ್ರತಿಬಿಂಬದಂತೆ,
ಹಸುವಿನೊಳಗಣ ಘೃತದಂತೆ ಇದ್ದಿತ್ತು
ಆ ಪರಬ್ರಹ್ಮದ ನಿಲವು.
ಇದ್ದರೇನು, ಕಾಣಬಹುದೇ ? ಕಾಣಬಾರದು.
ಕಾಣುವ ಬಗೆ ಹೇಗೆಂದರೆ ಹೇಳುವೆ ಕೇಳಿರಣ್ಣಾ :
ಶಿಲೆಯೊಳಗಣ ಅಗ್ನಿ
ಚಕಿಮಕಿ ದೂದಿವಿಡಿದು ಕ್ರೀಯಿಟ್ಟು ಮಾಡಿದಲ್ಲದೆ ಪ್ರಜ್ವಲಿಸದು.
ತಿಲದೊಳಗಣ ತೈಲ
ಯಂತ್ರದಲ್ಲಿ ಕ್ರೀಡಿಸಿದಲ್ಲದೆ ತೋರದು.
ಬೀಜದೊಳಗಣ ವೃಕ್ಷ
ಮೇಘದ ದೆಸೆಯಲ್ಲಿ ಪಸಿಯಕ್ಷೇತ್ರಕ್ಕೆ ಬಿದ್ದಲ್ಲದೆ ಮೊಳೆದೋರದು.
ಪಶುವಿನೊಳಗಣ ಘೃತ
ಪಶುವ ಬೋಧಿಸಿ ಕ್ರೀಯಿಟ್ಟು, ಅಮೃತ ಕರೆದರೆ ಕೊಡುವುದು.
ಮೇಘದ ದೆಸೆಯಲಿ ಉದಕ ಬಂದು ಎಲೆಯ ತುಂಬಿದರೆ
ಸೂರ್ಯನ ಪ್ರತಿಬಿಂಬವದರೊಳು ತೋರುವಂತೆ,
ನಾದ ಬಿಂದು ಕಳೆಯ ದೆಸೆಯಲಿ ಪಿಂಡವಾಯಿತ್ತು,
ಆ ಪಿಂಡದೊಳಗಣ ಜೀವ ಶಿವಚೈತನ್ಯ.
ಅದು ಹೇಗೆಂದಡೆ, ಅದಕ್ಕೆ ಸಾಕ್ಷಿ :
''ಶಿವೋ ಜೀವಃ ಜೀವಂ ಶಿವಃ
ಸ ಜೀವಃ ಕೇವಲಂ ಶಿವಃ''
ಎಂದುದಾಗಿ,
ಪಿಂಡ ಬ್ರಹ್ಮಾಂಡದೊಳಗಣ ಶಿವನಿಲವು ಇಂತಿದ್ದಿತ್ತು

ಇದ್ದರೇನು ? ಲೋಕದ ಜಡದೇಹಿಗಳಿಗೆ ಕಾಣಬಾರದು.
ಆದಿಯಲ್ಲಿ ಶಿವಬೀಜವಾದ ಮಹಿಮರಿಗೆ ತೋರುವುದು.
ಉಳಿದವರಿಗೆ ಸಾಧ್ಯವೇ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೧ ॥

೯೮೩

ಪಿಂಡಾಂಡ ಕಿರಿದಲ್ಲ, ಬ್ರಹ್ಮಾಂಡ ಹಿರಿದಲ್ಲ, ಕಾಣಿರಣ್ಣಾ !
'ಪಿಂಡ ಬ್ರಹ್ಮಾಂಡ ದ್ವಯೋರೈಕ್ಯ'ಯೆಂದುದಾಗಿ.
ಇದು ಕಾರಣ, ಪಿಂಡ ಬ್ರಹ್ಮಾಂಡವಾಯಿತ್ತು,
ಆ ಪಂಚಭೂತವೆ ಶರೀರವಾಯಿತ್ತು.
ಅದು ಹೇಗೆಂದಡೆ :
'ಪಂಚಭೂತಮಯಂ ದೇಹಂ' ಎಂದುದಾಗಿ,
ಬ್ರಹ್ಮಾಂಡದಲ್ಲುಳ್ಳ ಜನನ ಪಿಂಡಾಂಡದಲ್ಲುಂಟು ;
ಪಿಂಡಾಂಡದಲ್ಲುಳ್ಳ ಜನನ ಬ್ರಹ್ಮಾಂಡದಲ್ಲುಂಟು.
ಬ್ರಹ್ಮಾಂಡದ ಲಯ ಬ್ರಹ್ಮಾಂಡಕ್ಕೆ.
ಪಿಂಡಾಂಡದ ಲಯ ಬ್ರಹ್ಮಾಂಡಕ್ಕೆ
ಇಂತೀ ಎರಡರ ಭೇದವ ನೀನೆ ಬಲ್ಲೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨ ॥

೯೮೪

ಪರಬ್ರಹ್ಮ ಪರವಸ್ತುವಿನ ಪಂಚಮುಖದಲ್ಲಿ ಹುಟ್ಟಿದ
ಪಂಚಮಹಾಭೂತವೆ ಶರೀರವಾಯಿತ್ತು.
ಅದು ಎಂತೆಂದೊಡೆ :
ಮಣ್ಣು ನೀರು ಶಿಲೆಯ ಕೂಡಿ ಭಿತ್ತಿಯನಿಕ್ಕುವಂತೆ,
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಇವೈದು ಕೂಡಿ
ಶರೀರ ನಿರ್ಮಿತವಾಯಿತಯ್ಯ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩ ॥

೯೮೫

ಪಂಚಭೂತಂಗಳೆ ಪಂಚವಿಂಶತಿತತ್ವಯುಕ್ತವಾಗಿ
ಶರೀರವಾಯಿತ್ತು.
ಅದು ಹೇಗೆಂದಡೆ :
ಆಕಾಶದಿಂದ ಅಂತಃಕರಣಚತುಷ್ಟಯಂಗಳು ಹುಟ್ಟಿದವಯ್ಯ.
ವಾಯುವಿನಿಂದ ಪಂಚಪ್ರಾಣವಾಯುಗಳು ಹುಟ್ಟಿದವಯ್ಯ.
ಅಗ್ನಿಯಿಂದ ಬುದ್ಧೀಂದ್ರಿಯಂಗಳು ಹುಟ್ಟಿದವಯ್ಯ.

ಅಪ್ಪುವಿನಿಂದ ಶಬ್ದಾದಿ ಪಂಚವಿಷಯಂಗಳು ಹುಟ್ಟಿದವಯ್ಯ.
ಪೃಥ್ವಿಯಿಂದ ವಾಗಾದಿ ಕರ್ಮೇಂದ್ರಿಯಂಗಳು ಹುಟ್ಟಿದವಯ್ಯ.
ಇಂತೀ ಚತುರ್ವಿಂಶತಿತತ್ವಯುಕ್ತವಾಗಿ
ಶರೀರವೆತ್ತಿ ಕರೆಸಿತಯ್ಯ
ಪರುಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೪ ॥

೯೮೬

ಚತುರ್ವಿಂಶತಿತತ್ವಕೂಡಿ ಶರೀರ ಹೇಗಾಯಿತ್ತೆಂದಡೆ,
ಹೇಳುವೆ ಕೇಳಿರಣ್ಣಾ :
ಆ ಆಕಾಶ ಆಕಾಶವ ಬೆರಸಲು ಜ್ಞಾನ ಹುಟ್ಟಿತ್ತು
ಆ ಆಕಾಶ ವಾಯುವ ಬೆರಸಲು ಮನ ಹುಟ್ಟಿತ್ತು
ಆಕಾಶ ಅಗ್ನಿಯ ಬೆರಸಲು ಅಹಂಕಾರ ಹುಟ್ಟಿತ್ತು
ಆಕಾಶ ಅಪ್ಪುವ ಬೆರಸಲು ಬುದ್ಧಿ ಹುಟ್ಟಿತ್ತು
ಆಕಾಶ ಪೃಥ್ವಿಯ ಬೆರಸಲು ಚಿತ್ತ ಹುಟ್ಟಿತ್ತು
ಇಂತಿವು ಕರಣಚತುಷ್ಟಯಂಗಳುತ್ಪತ್ತಿಯೆಂದು ಹೇಳಲ್ಪಟ್ಟಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೫ ॥

೯೮೭

ವಾಯು ಆಕಾಶವ ಬೆರಸಲು
ಸಮಾನವಾಯು[ವಿ]ನ ಜನನ.
ವಾಯು ವಾಯುವ ಬೆರಸಿದಲ್ಲಿ
ಉದಾನವಾಯು[ವಿ]ನ ಜನನ.
ವಾಯು ಅಗ್ನಿಯ ಬೆರಸಿದಲ್ಲಿ
ವ್ಯಾನವಾಯು[ವಿ]ನ ಜನನ.
ವಾಯು ಅಪ್ಪು[ವಿನ] ಬೆರಸಿದಲ್ಲಿ
ಅಪಾನವಾಯು[ವಿ]ನ ಜನನ.
ವಾಯು ಪೃಥ್ವಿಯ ಬೆರಸಿದಲ್ಲಿ
ಪ್ರಾಣವಾಯು[ವಿ]ನ ಜನನ.
ಇಂತಿವು ಪಂಚವಾಯು[ವಿ]ನ
ಪಂಚಕೃತಿಯೆಂದು ಹೇಳಲ್ಪಟ್ಟಿತ್ತು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬ ॥

೯೮೮

ಅಗ್ನಿ ಆಕಾಶವ ಬೆರಸಲು
ಶ್ರೋತ್ರೇಂದ್ರಿಯದುತ್ಪತ್ತಿಯಯ್ಯ.

ಅಗ್ನಿ ವಾಯುವ ಬೆರಸಲು
ತ್ವಗೀಂದ್ರಿಯದುತ್ಪತ್ತಿಯಯ್ಯ.
ಅಗ್ನಿ ಅಗ್ನಿಯ ಬೆರಸಲು
ನೇತ್ರೇಂದ್ರಿಯದುತ್ಪತ್ತಿಯಯ್ಯ.
ಅಗ್ನಿ ಅಪ್ಪುವ ಬೆರಸಲು
ಜಿಹ್ವೇಂದ್ರಿಯದುತ್ಪತ್ತಿಯಯ್ಯ.
ಅಗ್ನಿ ಪೃಥ್ವಿಯ ಬೆರಸಲು
ಘ್ರಾಣೇಂದ್ರಿಯದುತ್ಪತ್ತಿಯಯ್ಯ.
ಇಂತಿವು ಬುದ್ಧೀಂದ್ರಿಯಂಗಳುತ್ಪತ್ತಿ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೭ ॥

೯೮೯

ಅಪ್ಪು ಆಕಾಶವ ಬೆರಸಲು ಶಬ್ದ ಹುಟ್ಟಿತ್ತು.
ಅಪ್ಪು ಅಪ್ಪುವ ಬೆರಸಲು ರಸ ಹುಟ್ಟಿತ್ತು.
ಅಪ್ಪು ವಾಯುವ ಬೆರಸಲು ಸ್ಪರುಶನ ಹುಟ್ಟಿತ್ತು.
ಅಪ್ಪು ಅಗ್ನಿಯ ಬೆರಸಲು ರೂಪ ಹುಟ್ಟಿತ್ತು.
ಅಪ್ಪು ಪೃಥ್ವಿಯ ಬೆರಸಲು ಗಂಧ ಹುಟ್ಟಿತ್ತು.
ಇಂತಿವು ಪಂಚವಿಷಯಂಗಳುತ್ಪತ್ತಿಯೆಂದು ಹೇಳಲ್ಪಟ್ಟಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೮ ॥

೯೯೦

ಪೃಥ್ವಿ ಆಕಾಶವ ಬೆರಸಲು
ವಾಗೀಂದ್ರಿಯದ ಜನನ.
ಪೃಥ್ವಿ ವಾಯುವ ಬೆರಸಲು
ಪ್ರಾಣೇಂದ್ರಿಯದ ಜನನ.
ಪೃಥ್ವಿ ತೇಜವ ಬೆರಸಲು
ಪಾದೇಂದ್ರಿಯದ ಜನನ.
ಪೃಥ್ವಿ ಅಪ್ಪುವ ಬೆರಸಲು
ಗುಹ್ಯೇಂದ್ರಿಯದ ಜನನ.
ಪೃಥ್ವಿ ಪೃಥ್ವಿಯ ಬೆರಸಲು
ಪಾಯುವಿಂದ್ರಿಯದ ಜನನ.
ಇಂತಿವು ಚತುರ್ವಿಂಶತಿತತ್ವಂಗಳುತ್ಪತ್ಯವೆಂದು
ಅರಿಯಲು ಯೋಗ್ಯವಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೯ ॥

೯೯೧

ಆಕಾಶದೊಳಗಣ ಆಕಾಶ ಜ್ಞಾನ.
ಆಕಾಶದೊಳಗಣ ವಾಯು ಮನಸ್ಸು.
ಆಕಾಶದೊಳಗಣ ಅಗ್ನಿ ಅಹಂಕಾರ.
ಆಕಾಶದೊಳಗಣ ಅಪ್ಪು ಬುದ್ಧಿ.
ಆಕಾಶದೊಳಗಣ ಪೃಥ್ವಿ ಚಿತ್ತ.
ಇಂತಿವು ಆಕಾಶದ ಪಂಚಶ್ರುತಿಯೆಂದು ಹೇಳಲ್ಪಟ್ಟಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೦ ॥

೯೯೨

ವಾಯುವಿನೊಳಗಣ ವಾಯು ಉದಾನವಾಯು.
ವಾಯುವಿನೊಳಗಣ ಆಕಾಶ ಸಮಾನವಾಯು.
ವಾಯುವಿನೊಳಗಣ ಅಗ್ನಿ ವ್ಯಾನವಾಯು.
ವಾಯುವಿನೊಳಗಣ ಅಪ್ಪು ಅಪಾನವಾಯು.
ವಾಯುವಿನೊಳಗಣ ಪೃಥ್ವಿ ಪ್ರಾಣವಾಯು.
ಇಂತಿವು ವಾಯುವಿನ ಪಂಚಕೃತಿಯೆಂದು ಹೇಳಲ್ಪಟ್ಟಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧ ॥

೯೯೩

ಅಗ್ನಿಯೊಳಗಣ ಅಗ್ನಿ ನೇತ್ರೇಂದ್ರಿಯ.
ಅಗ್ನಿಯೊಳಗಣ ಆಕಾಶ ಶ್ರೋತ್ರೇಂದ್ರಿಯ.
ಅಗ್ನಿಯೊಳಗಣ ವಾಯು ತ್ವಗೀಂದ್ರಿಯ.
ಅಗ್ನಿಯೊಳಗಣ ಅಪ್ಪು ಜಿಹ್ವೇಂದ್ರಿಯ.
ಅಗ್ನಿಯೊಳಗಣ ಪೃಥ್ವಿ ಘ್ರಾಣೇಂದ್ರಿಯ.
ಇಂತಿವು ಅಗ್ನಿಯ ಪಂಚಕೃತಿಯೆಂದು ಹೇಳಲ್ಪಟ್ಟಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨ ॥

೯೯೪

ಅಪ್ಪುವಿನೊಳಗಣ ಅಪ್ಪು ರಸ.
ಅಪ್ಪುವಿನೊಳಗಣ ಆಕಾಶ ಶಬ್ದ.
ಅಪ್ಪುವಿನೊಳಗಣ ವಾಯು ಸ್ಪರುಶನ.
ಅಪ್ಪುವಿನೊಳಗಣ ಅಗ್ನಿ ರೂಪ.
ಅಪ್ಪುವಿನೊಳಗಣ ಪೃಥ್ವಿ ಗಂಧ.
ಇಂತಿವು ಅಪ್ಪುವಿನ ಪಂಚಕೃತಿಯೆಂದು ಹೇಳಲ್ಪಟ್ಟಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೩ ॥

## ೯೯೫

ಪೃಥ್ವಿಯೊಳಗಣ ಪೃಥ್ವಿ ಪಾಯುವಿಂದ್ರಿಯ.
ಪೃಥ್ವಿಯೊಳಗಣ ಆಕಾಶ ವಾಗೀಂದ್ರಿಯ.
ಪೃಥ್ವಿಯೊಳಗಣ ವಾಯು ಪಾಣೇಂದ್ರಿಯ.
ಪೃಥ್ವಿಯೊಳಗಣ ಅಗ್ನಿ ಪಾದೇಂದ್ರಿಯ.
ಪೃಥ್ವಿಯೊಳಗಣ ಅಪ್ಪು ಗುಹ್ಯೇಂದ್ರಿಯ.
ಇಂತಿವು ಪೃಥ್ವಿಯ ಪಂಚಕೃತಿಯಯ್ಯ.
ಪಂಚಮಹಾಭೂತಂಗಳು ಪಂಚೀಕೃತಿಯನೈದಿ
ಶರೀರರೂಪಾಯಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೪ ॥

## ೯೯೬

ಮಾಯದ ಮರಣದೊಳು ಛಾಯದ ಗಿಡ ಹುಟ್ಟಿ,
ಒಂಬತ್ತು ಗಳಿಗೆಗೆ ಹೂವು ಕಾಯಿ ಹಣ್ಣು ಫಲವಾಗಿ,
ಮರ ಬೇರುವರಿದು ಪ್ರಜ್ವಲಿಸಿದುದ ಕಂಡೆನಯ್ಯಾ !
ಇದೇನು ಚೋದ್ಯ ಹೇಳಾ !
ಮಾರುದ್ದ ಮರನಡಗಿ ಛಾಯದ ಗಿಡವಾಗಿ,
ಪಿರಿದಪ್ಪ ವೃಕ್ಷವಾಗಿ, ಜಗಕೆ ತೋರಿದ ಭೇದವ
ವೃಕ್ಷಕೆ ನೀರೆರೆದು ಸಲಹಿದಾತ ಬಲ್ಲ;
ಉಳಿದವರಿಗಸಾಧ್ಯ.
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫ ॥

## ೯೯೭

ಎರಡು ಹೆಸರಿನ ಮರದ
ಬೊಡ್ಡೆಯಲಾಡುವಾಲಿಯ ಮನೆ
ಏಳು ಬಗೆಯ ನಿರ್ಮಿತ,
ಹತ್ತು ಬಗೆಯ ಹರವರಿ,
ಒಂಬತ್ತು ಬಗೆಯ ಹಾದಿ.
ಆ ಮನೆಯ ಪಂಚಾಳರು ರಚಿಸಿದರು ನೋಡಾ !
ಮನೆಯೊಳಗೆ ಮಧುರದ ಪಾಕವಾಗುತಿರೆ,
ಆ ಮಧುರದ ಸವಿಗೆಟ್ಟು, ಹೊತ್ತಿ
ಹೊಗೆ ಮನೆಯ ಸುತ್ತಿದುದ ಕಂಡು,
ಕೆಟ್ಟಬಿಗೆಯನಟ್ಟು, ಶುದ್ಧ ಮಾಡುವೆನೆಂದು,
ಹಿಂದಣ ಮನೆಯ ಸುಟ್ಟು, ಮುಂದೊಂದು ಮನೆಯ ಕಟ್ಟಿ,

ಅಂದಚೆಂದವ ನೋಡಿ,
ಆಡಿಸುತ್ತಿದ್ದ ಭೇದವ ನೀನೆ ಬಲ್ಲೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬ ॥

೯೯೮

ಜಗದೊಳಗೆ ಜಗ ಹುಟ್ಟಿ
ಜಗಮಯವಾಗಿದ್ದುದ ಕಂಡೆನು.
ಜಗವನಾಳುವ ದೊರೆ ರಾಕ್ಷಿಗವಿಯಲ್ಲಿ ಸಿಲ್ಕಿ,
ಘಾಸಿಯಾಗುತಿರ್ದನು ನೋಡಾ.
ಆ ರಾಕ್ಷಿ ಬ್ರಹ್ಮನ ಚರ್ಮವ ಹೊತ್ತು
ವಿಷ್ಣುವಿನ ರಕ್ತವ ಕುಡಿದು, ರುದ್ರನ ಭಸ್ಮವ ಮಾಡಿ,
ಈಶ್ವರನ ಗಾಳಿಯಾಗಿ ಹಾರಿಸಿ,
ಸದಾಶಿವನ ಆಕಾಶದ ಗುರಿಯನೆ[ಚ್ಚಿ] ಆಡುತಾಡುತ ಬಂದವಳು.
ಅರಸಿನ ಪ್ರಜೆ–ಪರಿವಾರ, ಆನೆ–ಸೇನೆ ಎಲ್ಲವ ನುಂಗಿ ತೇಗಿ,
ಜಗದೊಳಗಣ ಜಗ ಹಿರಿದಪ್ಪ ಜಗವಾಗಿ
ಜಲದ ಕೊಣದಲ್ಲಿ ಹೊರಟು
ದೃಷ್ಟವಾಗಿ ನಿಂದುದ ಕಂಡು ರಕ್ಷಿ ನಗುತಿದೆ.
ಈ ಭೇದವ ಹಳೆಯ ಮನೆಯ ಸುಟ್ಟು
ಹೊಸ ಮನೆಯಾದಲ್ಲಿ ಕಂಡೆ, ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೭ ॥

೯೯೯

ಹಂಸೆಯ ಪಂಜರವ ಹಿಡಿದಾಳುವ ರಕ್ಷಿ
ಮಾಂಸದ ಗುಡಿಯ ತಿಂದು,
ಮರುಜೇವಣಿಗೆಯ ಬೆಟ್ಟವನಡರಿ
ಕೂಗುತ ತೆಳಗಿಳಿಯದ ಮುನ್ನ
ಒಡ್ಡಿದಾವೆ ಮಹಾದುಃಖದಲ್ಲಿ ಮೂರು ಬಲಿ.
ಬಲಿಯ ಬಿದ್ದು, ನಲಿದಾಡುವ ಮಾಯೆಯ ಕಂಡೆನೆಂದ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೮ ॥

೧೦೦೦

ಐದುಮುಖದಂಗನೆಗೆ ತನು ಮೂರು,
ತದಂಗವೆರಡು, ಜೀವವೊಂದು, ಗುಣ ಇಪ್ಪತ್ತೈದು.
[ವಂಶದ]ವರು ಇಪ್ಪತ್ತೈದುಮುಂಡಿಯ ಕೈವಿಡಿದು
ಅಷ್ಟದಿಕ್ಕು ನವಖಂಡ ಜಂಬೂದ್ವೀಪವ

ಮೇಲುಹೊದಿಕೆಯ ಮಾಡಿ, ಹೊದ್ದುಕೊಂಡು,
ದೃಷ್ಟಜಗಕ್ಕೆ ಬಂದು
ಕಷ್ಟಬಡುತಿದ್ದ ಭೇದವ ನೀನೆ ಬಲ್ಲೆ, ಉಳಿದರಿಗಸಾಧ್ಯ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೮ ॥

೧೦೦೧

ರಾಗ : ದೇಶಿ

ಪಲ್ಲ: ಪಿಂಡವಾಯಿತ್ತು ನಾದಬಿಂದು ಕಳೆಗಳ ಕೂಡಿ
ಕೊಂಡು ಸ್ವರೂಪ ತತ್ವವಿಡಿದು ಚೆನ್ನಾಗಿ
ಪದ : ಧರೆಯಿಂದಲೆದು ಕರ್ಮೇಂದ್ರಿಯಂಗಳ ಜನನ
ಸರಸದಿಂದ ಪಂಚವಿಷಯಂಗಳುತ್ಪತ್ಯ ಮೇಣ್
ಉರಿಯಿಂದ ಬುದ್ಧೀಂದ್ರಿಯಂಗಳಾದವು ನೋಡಿರ.
ಮರುತನಿಂದ್ಯೆದು ಪ್ರಾಣವಾಯುಗಳ ಜನನ
ಓರಿದಪ್ಪ ಗಗನದಲ್ಲಿ ಚತುರ ಕರಣವು
ಆತ್ಮ ನೆರೆ ಕೂಡಿ ಪಂಚವಿಂಶತಿತತ್ವವಿಡಿದು. । ೧ ।

ಆರೂರ್ಮೆ ಏಳುಧಾತ್ಯೆದುವಿಂಶತಿ ಅಂಶ
ಈ ಮೂರು ತನುಗುಣವು ಇಪ್ಪತ್ತೈದು ಎರಡಂಗ
ಆರು ಚಕ್ರವು ಕಮಲದೈವತ್ತೊಂದರಕ್ಷರಗಳಿಂ
ವಾರಿಜ ದಾಕ್ಷಾಯಣಿ ಹರಿ ರುದ್ರ ಈಶ್ವರ
ಮೀರಿದ ಸದಾಶಿವನಧಿದೈವಂಗಳು,
ನವದ್ವಾರ ಚೆನ್ನಾಗಿ ಸಕಲಾರಂಭತತ್ವವಿಡಿದು. । ೨ ।

ಮೂರು ಕರ್ಮಗಳು ಏಳ್ನೂರು ಎಪ್ಪತ್ತು ಲೊ
ಓರಣದ ಕರಣದ ಕರಣ ಅರುವತ್ತಾರು ಕೋಟಿಯಂ ಮೂ
[ರಾ]ರು ಗುಣ ಅಂತರಂಗದಷ್ಟವೇದವು ಸಹಿತದ
ಮೂರು ಮಲ ದಶವಾಯು ಅಂಗದೊಳು ಚರಿಸುತಿಹ
ಮಾರುತ ಮನ ಮಂತ್ರಿ ಪ್ರಾಣ ನಾಯಕನರಸು ಶ
ರೀರ ಜಗದೊಳುತ್ಪತ್ಯವಾಗಿದೆ ದೇವ. । ೩ ।

ನೆಲ ನೀರು ಶಿಲೆಯಿಂದ ಚಿತ್ತಿಗಟ್ಟಿಯೆ ಅದನು
ಸಲೆ ಗೋಮಯದಿ ಶುದ್ಧಮಾಡಿ ಸಾರಿಸುವಂತೆ
ಎಲು ಚರ್ಮ ನರ ತೊಗಲು ಮಾಂಸ ಮಜ್ಜೆಯ ಕೂಟಿಯ
ಚೆಲುವಾಗಿ ಈ ಕಾಯ ಗಾಳಿ ತುಂಬಿ ವೃಕ್ಷ
ಉಲಿವಂತೆ ಶಿವಬೀಜವ ಚೈತನ್ಯದಿಂದವಲಿ
ಇಳೆಗೆ ತೋರುತಿರೆ ನೋಡಿದ ತಿಳಿಯಿರಣ್ಣ. । ೪ ।

ಆದಿ ಮಧ್ಯ ಅಂತ್ಯ ಭಾಂಡದೊಳು ಶಿವ ತಾನೆ
ಆದಿಯಾಗಿಯೆ ನೆಲದ ಮರೆಯಲ್ಲಿಹ ಧನದಂತೆ
ಭೇದಿಸದೆಯಿಪ್ಪ ಭೇದವನಾರು ಅರಿಯರಲ್ಲ
ಅಭೇದ್ಯಗುರು ಪಡುವಿಡಿ ಸಿದ್ಧಮಲ್ಲಿನಾಥನ
ಪಾದವಿಡಿದ ತನುವು ಸುಕೃತದೇಹಿಯಾಗಿ
ಮೇದಿನಿಗೆ ತೋರುತಿದೆ ಶಿವಶರಣರಿದ ತಿಳಿಯರೆ. । ೫ ।
॥ ೩೦ ॥

## ಪಿಂಡಜ್ಞಾನಸ್ಥಲ

ಸೂತ್ರ : ಇಂತು ಪಿಂಡಾಂಡವ ನಿರ್ಮಿಸಿದ ವಸ್ತುವು ಆ ಪಿಂಡಾಂಡದೊಳು ಜ್ಞಾನವಾಗಿ ತೋರುತಿದ್ದ ಭೇದವೆಂತಿದ್ದಿತ್ತೆಂದಡೆ, ದ್ವಿತೀಯೆಯಲ್ಲಿ ಪಿಂಡಜ್ಞಾನಸ್ಥಲವಾದುದು.

### ೧೦೦೨

ಪಿಂಡಾಂಡವ ನಿರ್ಮಿಸಿದ ಶಿವನು ಆ ಪಿಂಡದೊಳು ಜ್ಞಾನವ
ಆನೆ ಕಡೆ ಇರುವೆ ಮೊದಲು ಎಂಬತ್ತನಾಲ್ಕುಲಕ್ಷ ಜೀವರಾಶಿಯೊಳಗೆ
ಜ್ಞಾನಚೈತನ್ಯಸ್ವರೂಪವಾಗಿಯಿದ್ದನು.
ಅದಕ್ಕೆ ಸಾಕ್ಷಿ :
''ಸಕಲಜೀವ ಶಿವಚೈತನ್ಯಂ ಸಕಲ ಜಗದಾರಾಧ್ಯದೈವಂ
ಸಕಲ ದೇವರೊಂದೇ ಪಿತಾ ಪರಮೇಶ್ವರಂ ನಿತ್ಯನಿತ್ಯಃ ॥''
ಎಂದುದಾಗಿ, ಇದು ಕಾರಣ,
ಸಕಲರಾತ್ಮಜ್ಞಾನಜ್ಯೋತಿಯಾಗಿ ನೀನೆ ಇದ್ದೆಯಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩೧ ॥

### ೧೦೦೩

ಆದಿ ಇದ್ದಂದು ನೀನೆ, ಆದಿ ಇಲ್ಲದಂದು ನೀನೆ ;
ಅನಾದಿ ಇದ್ದಂದು ನೀನೆ, ಅನಾದಿ ಇಲ್ಲದಂದು ನೀನೆ ;
ನಾದ ಬಿಂದು ಕಳೆ ಇದ್ದಂದು ನೀನೆ, ಅವು ಇಲ್ಲದಂದು ನೀನೆ ;
ಸಾವಯವ ನಿರವಯವವಿದ್ದಂದು ನೀನೆ, ಅವು ಇಲ್ಲದಂದು ನೀನೆ ;
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩೨ ॥

### ೧೦೦೪

ಜಗವಿದ್ದಂದು ನೀನೆ, ಜಗವಿಲ್ಲದಂದು ನೀನೆ ;
ಪಂಚಶತಕೋಟಿ ವಿಸ್ತೀರ್ಣ ಭೂಮಂಡಲವಿದ್ದಂದು ನೀನೆ,
ಅವು ಇಲ್ಲದಂದು ನೀನೆ ;
ಈರೇಳುಭುವನ ಹದಿನಾಲ್ಕು ಲೋಕವಿದ್ದಂದು ನೀನೆ,

ಅವು ಇಲ್ಲದಂದು ನೀನೆ ;
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೩೩ ||

೧೦೦೫

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಇದ್ದಂದು ನೀನೆ,
ಅವರಿಲ್ಲದಂದು ನೀನೆ ;
ಪಿಂಡದ ಬೀಜವ ನವಬ್ರಹ್ಮರು ತಂದಂದು ನೀನೆ,
ಅವ ತಾರದಂದು ನೀನೆ.
ಆದಿ ಮಧ್ಯಾಂತವಿದ್ದಂದು ನೀನೆ,ಅವು ಇಲ್ಲದಂದು ನೀನೆ ;
ಪಿಂಡನಿರ್ಮಿತವಾದಂದು ನೀನೆ ;
ಪಿಂಡಜ್ಞಾನವಾದಂದು ನೀನೆ, ಪಿಂಡಜ್ಞಾನವಿಲ್ಲದಂದು ನೀನೆ ;
ಸರ್ವರಾತ್ಮಜ್ಞಾನವಾಗಿ ತೋರುತ್ತಿದ್ದೆಯಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೩೪ ||

೧೦೦೬

ಅನಾದಿವಿಡಿದು ಆದಿ, ಆದಿವಿಡಿದು ಸಾವಯವ ;
[ಸಾವಯವವಿಡಿದು ನಿರ್ವಯ], ನಿರ್ವಯವಿಡಿದು ಪಂಚಬ್ರಹ್ಮತ್ವ ;
ಪಂಚಬ್ರಹ್ಮತ್ವವಿಡಿದು ತತ್ವಬ್ರಹ್ಮಾಂಡ,
ತತ್ವಬ್ರಹ್ಮಾಂಡವಿಡಿದು ಪಿಂಡಾಂಡ,
ಪಿಂಡಾಂಡವಿಡಿದು ಜ್ಞಾನ,
ಜ್ಞಾನವಿಡಿದು ನಿಂದ ನಿಲವು ನೀನೆ ಅಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೩೫ ||

೧೦೦೭

ನಿರಾಕಾರಲಿಂಗವಿಡಿದು ಸಾಕಾರಲಿಂಗ,
ಸಾಕಾರಲಿಂಗವಿಡಿದು ಆಕಾರಲಿಂಗ,
ಆಕಾರಲಿಂಗವಿಡಿದು ಮಹಾಲಿಂಗ,
ಮಹಾಲಿಂಗವಿಡಿದು ವಿಷ್ಣು, ವಿಷ್ಣುವಿಡಿದು ಬ್ರಹ್ಮ
ಬ್ರಹ್ಮವಿಡಿದು [ಬ್ರಹ್ಮಾಂಡ], ಬ್ರಹ್ಮಾಂಡವಿಡಿದು ಪಿಂಡಾಂಡ,
ಪಿಂಡಾಂಡವಿಡಿದು ಜ್ಞಾನ, ಜ್ಞಾನವಿಡಿದು ನಾನು,
ನಾನುವಿಡಿದು ನೀನು,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೩೬ ||

೧೦೦೮

ಆಕಾರವಿಲ್ಲದಂದು
ನಿರಾಕಾರದ ಮರೆಯಲ್ಲಿ ಇದ್ದೆಯಯ್ಯಾ.

ನಿರಾಕಾರದ ಮರೆಯಿಲ್ಲದಂದು,
ಸ್ವಯಪರದ ಮರೆಯಲ್ಲಿದ್ದೆ ಅಯ್ಯಾ.
ಸ್ವಯಪರದ ಮರೆಯಿಲ್ಲದಂದು,
ನೀನೆ ನೀನಾಗಿ ಜ್ಞಾನಪರನಾಗಿಯಿದ್ದೆ ಅಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩೭ ॥

೧೦೦೯

ಅನಾದಿ ಆದಂದು
ಅನಾದಿಯ ಮರೆಯಲ್ಲಿಯಿದ್ದೆಯಯ್ಯಾ.
ತತ್ವಬ್ರಹ್ಮಾಂಡವಾದಂದು
ತತ್ವಬ್ರಹ್ಮಾಂಡದ ಮರೆಯಲ್ಲಿಯಿದ್ದೆಯಯ್ಯಾ.
ಪಿಂಡಾಂಡವಾದಂದು
ಪಿಂಡಾಂಡದ ಮರೆಯಲ್ಲಿಯಿದ್ದೆ ಅಯ್ಯಾ.
ಜ್ಞಾನವಾದಂದು
ಜ್ಞಾನದ ಮರೆಯಲ್ಲಿದ್ದೆ ಅಯ್ಯಾ.
ನಾನಾದಂದು
ನನ್ನ ಆತ್ಮದಲ್ಲಿ ನೀನೆ ಹೊಳೆವುತಿದ್ದೆ ಅಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩೮ ॥

೧೦೧೦

ಜಲದ ಮರೆಯಲ್ಲಿಪ್ಪ ಸೂರ್ಯನಂತೆ,
ಸ್ಫಟಿಕದ ಘಟದೊಳಗೆತ್ತಿದ ಜ್ಯೋತಿಯಂತೆ,
ಮುಗಿಲಮರೆಯಲ್ಲಿ ಹೊಳೆಯುತ್ತಿಹ ಮಿಂಚಿನಂತೆ,
ಎನ್ನ ಪಿಂಡಾಂಡದೊಳು
ಜ್ಞಾನವಾಗಿ ಹೊಳೆಯುತ್ತಿದ್ದೆ ಅಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩೯ ॥

೧೦೧೧

ಎನ್ನ ಪಿಂಡದೊಳು ಹೊಳೆಯುತಿಹ ಜ್ಞಾನ,
ಸೋಮ ಸೂರ್ಯರ ಪ್ರಕಾಶವ ಮೀರಿತ್ತು,
ಜಗವ ಮೀರಿತ್ತು, ಜಗದಗಲವ ಮೀರಿತ್ತು,
ಸ್ವಯಪರವ ಮೀರಿತ್ತು,
ಕಾರಣ, ಎನ್ನ ಆತ್ಮ ಸ್ವಯಜ್ಯೋತಿಯಾಗಿದ್ದೆ ಅಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪೦ ॥

೧೦೧೨

ಬೆಳಗಿನೊಳು ಮಹಾಬೆಳಗಿನ ಜ್ಯೋತಿಯ ಕಂಡೆನು,
ಶತಕೋಟಿ ಮಿಂಚಿನ ಪ್ರಭೆಯ ಕಂಡೆನು,
ಅನಿಲನ ಸಂಗದಲುರಿವ ಕರ್ಪುರದ ಗಿರಿಯ ಕಂಡೆನು.
ಕಂಡ ಕಾರಣ,
ಎನ್ನ ಪಿಂಡದೊಳಗಿಹ ಸ್ವಯಜ್ಞಾನವೆ
ಪರಬ್ರಹ್ಮವೆಂದು ತಿಳಿದು ಸಂತೈಸುತಿದ್ದೆ.
ಭೇದದಿಂದ ಪರಮಾತ್ಮ ಎನ್ನ ಮರ್ತ್ಯಕ್ಕೆ ಆಜ್ಞೆಯಿಸಿ ಕಳುಹಿ
ಅಂಜದಿರೆಂದು ಅಭಯಕೊಟ್ಟು, ತಲೆದಡಹಿ,
ನೀನಿದ್ದಲ್ಲಿ ನಾನಿಹೆನೆಂದು ನಿರೂಪಿಸಿ,
ಆದಿಪಿಂಡವ ಮಾಡಿ, ಜಗಕ್ಕೆ ನಿರ್ಮಿಸೆ,
ಹೇಮುಗಲ್ಲ ಹಂಪನೆಂಬ ನಾಮವಿಡಿದು ಬಂದ.
ಆ ಭೇದವ ಪಿಂಡಜ್ಞಾನದಿಂದಲರಿದು
ಆಚರಿಸುತ್ತಿದ್ದೆನು ಎನ್ನಾಳ್ದ
[ಪರಮ]ಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪೧ ॥

೧೦೧೩

ಅನಾದಿಪರಶಿವನ ಶಿಷ್ಯ
ಆದಿಶಂಭುವೆಂಬ ಗಣೇಶ್ವರ.
ಆದಿಗಣೇಶ್ವರನ ಶಿಷ್ಯರು
ನಿರಂಜನನೆಂಬ ಗಣೇಶ್ವರ.
ನಿರಂಜನನೆಂಬ ಗಣೇಶ್ವರನ ಶಿಷ್ಯರು
ಆದಿ ಪಡುವಿಡಿ, ಅನಾದಿ ಪಡುವಿಡಿ,
ಶಿವಸಿದ್ಧಪಡುವಿಡಿಯಪ್ರಭುವೆಂಬ ಗಣೇಶ್ವರ.
ಪ್ರಭುವೆಂಬ ಗಣೇಶ್ವರನ ಶಿಷ್ಯರು
ಮಹಾಂತಮಲ್ಲಿಕಾರ್ಜುನನೆಂಬ ಗಣೇಶ್ವರ.
[ಮಹಾಂತ ಮಲ್ಲಿಕಾರ್ಜುನನ] ಶಿಷ್ಯರು
ಜಾಲಹಳ್ಳಿಯ ಶಾಂತದೇವರು.
ಜಾಲಹಳ್ಳಿಯ ಶಾಂತದೇವರ ಶಿಷ್ಯರು
ಸಿದ್ಧಮಲ್ಲಿನಾಥೇಶ್ವರ.
ಸಿದ್ಧಮಲ್ಲಿನಾಥೇಶ್ವರನ ಶಿಷ್ಯರು
ಪಡುವಿಡಿಯ ರಾಚೇಶ್ವರ.
ಪಡುವಿಡಿಯ ರಾಚೇಶ್ವರನ ಕರಕಮಲದಲ್ಲಿ ಉತ್ಪತ್ಯವಾದ
ಶಿಶುವು ಹೇಮುಗಲ್ಲ ಹಂಪ ನಾನಯ್ಯ.

ಹೀಗೆ, ಅನಾದಿವಿಡಿದು ಬಂದ ಗುರು–ಶಿಷ್ಯ ಸಂಬಂಧ,
ಅನಾದಿವಿಡಿದು ಬಂದ ಲಿಂಗ–ಜಂಗಮ,
ಅನಾದಿವಿಡು ಬಂದ ಭಕ್ತಿ–ಜ್ಞಾನ–ವೈರಾಗ್ಯ.
ಇದು ಸತ್ಯ, ಇದು ಸತ್ಯ ಎನ್ನಾಳ್ದ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೪೨ ||

೧೦೧೪

ನೀರ ಮಧ್ಯೆ ಉರಿವ ಜ್ಯೋತಿ
ಊರೊಳಗೆ ಬೆಳಗುವುದ ಕಂಡೆ.
ಊರೊಳಗೆಲ್ಲ ಬೆಳಗಾಗಿ,
ಊರ ಕದಳಿಯವನದ ಗಿರಿಯನಡರಿ ಉರಿವುದ ಕಂಡೆನು.
ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೪೩ ||

೧೦೧೫

ಘಟ್ಟಬೆಟ್ಟದ ನಟ್ಟನಡುವಿನ ಗಿರಿಯಲ್ಲಿ
ಹುಟ್ಟಿತೊಂದು ಸೋಜಿಗದಗ್ನಿಯ ಕಳೆ.
ಆ ಕಳೆಯ ಬೆಳಗ ಕಾಣೆನೆಂದು
ಇಬ್ಬರು ಮುಂದುಗೆಟ್ಟರು, ಮೂವರು ತಾಮಸಕ್ಕೊಳಗಾದರು,
ನಾಲ್ವರು ನಡೆಗೆಟ್ಟರು, ಐವರು ಅಂಧಕರಾದರು,
ಆರುಮಂದಿ ಹೋರಾಟಗೊಳುತಿರೆ,
ಏಳುಮಂದಿ ಕೂಪವ ಬಿದ್ದರು,
ಎಂಟುಮಂದಿ ತಂಟುಕಕ್ಕೆ ಒಳಗಾದರು.
ಒಂಬತ್ತು [ಮಂದಿ] ಕಣವಿಯ ಹರವರಿಯಲ್ಲಿ [ಹೊಕ್ಕರು.]
ಹತ್ತು ಬಗೆಯವರು ಹರಿದಾಡುತಿರೆ,
ಇದನು ಕಂಡು, ತರುಗಿರಿಯ ನಡುವ ಹರಿವ ಉದಕ ಗಾಳಿ ಬಂದು
ಬೆಟ್ಟವನಡರಿ, ಉರಿವ ಜ್ಯೋತಿಯ ತಾಗದ ಮುನ್ನ
ನೀರಹರಿಯನಡ್ಡಂಗಟ್ಟಿ, ಗಾಳಿಯ ಓಮ್ಮೆಟ್ಟಿಸಿ,
ಜ್ಞಾನಪರಬ್ರಹ್ಮದಲ್ಲಿ ನಿಂದವರಾರೆಂದರೆ :
ಪ್ರಭುದೇವರು, ಚೆನ್ನಬಸವೇಶ್ವರದೇವರು,
ಮೋಳಿಗೆಯ್ಯನವರು, ಸಂಗನಬಸವೇಶ್ವರದೇವರು,
ನೀಲಾಂಬಿಕೆ ತಾಯಿ, ಅಕ್ಕನಾಗಮ್ಮ, ಮಹಾದೇವಿಯಕ್ಕ,
ಮುಕ್ತಾಯಿ ಮುಖ್ಯವಾದ ಏಳುನೂರಾ ಎಪ್ಪತ್ತು
ಅಮರಗಣಂಗಳ ಲೆಂಕರ ಲೆಂಕನಾಗಿ
ಎನ್ನ ಆದಿಪಿಂಡವ ಧರಿಸಿ,

ಮರ್ತ್ಯಕ್ಕೆ ಕಳುಹಿದ ಭೇದವ ಪಿಂಡಜ್ಞಾನದಿಂದಲರಿದು
ಆಚರಿಸುತ್ತಿದ್ದೆನಯ್ಯಾ ಎನ್ನಾಳ್ವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪೪ ॥

೧೦೧೬

ಮುಂಡವ ಹೊಂದದ ರಣಭೂತ
ಸಂಖ್ಯೆಯ ಮೀರಿದ ತಲೆಯ ಕಂಡವರುಂಟೆ ? ಹೇಳಿರಣ್ಣಾ,
ತಲೆಯ ಕಂಡೆನೆಂದರೆ,
ಕಾಣಗುಡದೆ ಮುಂಡವೆದ್ದು ಭೂಮಂಡಲವ ನುಂಗುವುದ ಕಂಡೆ.
ಹರಿ ಸುರರು, ದನುಜ ಮನುಜರು
ಮುಂಡದ ಭೀತಿ ಸೋಂಕಿ ಭಯಕೊಳಗಾದುದ ಕಂಡೆ.
ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪೫ ॥

೧೦೧೭

ರಾಗ : ಮಧುಮಾಧವಿ

ಪಲ್ಲ : ಕಂಡೆನೊಂದು ಸ್ವಪನವ ಕಾನನದ ಮಾಗಿಯೊಳು
ಚಂಡಕೋಟಿಪ್ರಭೆಯ ಮೀರುವ ಜ್ಯೋತಿಯನು
ಪದ : ಮುಂಡವ ಹೊಂದದೆ ತಲೆಯಂತರದೆ ನಲಿದಾಡಿ
ಮಂಡಲಕ್ಕೆ ಚೇರುವರಿದು ಮರುಳ್ಗಳ ಶಂಕೆಯ ಮೀರಿ
ಹಿಂಡುಸೂರ್ಯಗಳನೊಂದು ದ್ವಿಯಕ್ಷರದ ಪಕ್ಷಿಯು ನುಂಗಿ
ಕೊಂಡು ಉಗುಳಲಾರದಿರೆ ಬೆಳಗಾಗೆ ನಾನೆಚ್ಚತ್ತೆನು ।೧।

ಹಿಂದಣ ಮುಂದಣ ಮನೆಯ ಸಂದಿನಲ್ಲಿ ಉರಿವಜ್ಯೋತಿ
ಬಂದು ನಟ್ಟನಡುಸಮುದ್ರದೊಳು ಹೊಕ್ಕು
ನೊಂದಿ ನೊಂದದುರಿವುತಿರೆ, ಅಂಧಕಾರ ಕವಿದ ಲೋಕ,
ಮುಂದುಗೆಟ್ಟು, ಕಣ್ಗಾಣದಿರಲು ಬೆಳಗಲೆಚ್ಚತ್ತೆನೊ ।೨।

ತಮ ಹೆಚ್ಚಿ ಜ್ಯೋತಿಯ ನುಂಗಿ, ಕಮಲ ಪರಿಮಳವ ನುಂಗಿ
ಭ್ರಮರ ಕಂಪನೊಲ್ಲದೆ ತಾ ಬಾವಿಯ ಬೀಳೆ
ದ್ಯುಮಣಿಯನು ಜಲ ನುಂಗಿ ಕಾಳಗವಿದ ಲೋಕವೆಲ್ಲ
ಭ್ರಮಿತರಾಗಿ ಗೊಂದಿಲಿಯ ಮರ[ನ]ನೆಂಬಲಾನೆಚ್ಚತ್ತೆನೊ ।೩।

ಕಂಬದೊಳಗಿಹ ಮಾಣಿಕವ ಕಳಬಂದು ನಾಲ್ವರು ಮಿಂದಿ
ಅಂಬರಗತ್ತಲೆಯ ಮಾರಿಯೊಳಿರುತಿರಲು
ನಂಬುಗಿಯಾ ಭೂತ ಹೆಚ್ಚಿ ನಾದ ನುಂಗುತಲಿ ಬರುವ
ಸಂಭ್ರಮವ ಕಂಡು ಹೆದರಿ ನಾನೆಚ್ಚತ್ತೆನಯ್ಯಾ ।೪।

ಪ್ರಳಯದ ಮುಖದ ಪಕ್ಷಿ ಕಾಕವಿಂಡ ಕೂಡಿಕೊಂಡು
ಸಲೆ ಪರಮಗೂಡಿನೊಳಿಪ್ಪ ಪಕ್ಕಿಗೆ ಮುಕುರಿ ತಾವು
ಕೊಲ್ಲೆವೆನ್ನಲದು ಗುರುಸಿದ್ಧಮಲ್ಲನ ಪಾದಂಘ್ರಿಯೊಳು
ನೆಲಸಿ ಮಾಯವಾಗಲಾನು ಎಚ್ಚತ್ತೆ ಪಿಂಡಜ್ಞಾನದಿ । ೫ ।
॥ ೪೬ ॥

## ಮಾಯಾವಿಡಂಬನಸ್ಥಲ

ಸೂತ್ರ: ಇಂತು ಪಿಂಡಜ್ಞಾನದಲ್ಲಿ ಆಚರಿಸಿದ ಮಹಾತ್ಮನು ಮುಂದೆ ಮಾಯಾವಿಡಂಬನವ ಮಾಡುತ್ತಿದ್ದ ಕಾರಣದೆ ಏಕದ್ವಯದಲ್ಲಿ ಮಾಯಾವಿಡಂಬನಸ್ಥಲವಾದುದು.

### ೧೦೧೮

ಹರಿ ಸುರ ಬ್ರಹ್ಮರ ಪರಿಯಾಟಗೊಳಿಸಿದ
ಮಾಯಾದುರಿತವೆನ್ನ ಕಾಡುತಿದೆ, ಶಿವಶಿವ ಇದಕಿನ್ನೆಂತೊ !
ನೀನಿಕ್ಕಿದ ಕಿಚ್ಚು ನೀ ನೊಂದಿಸಿದರೆ ನೊಂದೂದಲ್ಲದೆ
ಮತ್ತಾರಿಗೆಯೂ ನೊಂದದು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪೭ ॥

### ೧೦೧೯

ಶಕ್ತಿ ಸಾಧನೆಯ ಸಾಧಿಸಿ,
ಆನೆ ಸೇನೆ ತಳತಂತ್ರ ಮಾರ್ಬಲ ಅಲಗು ಈಟೆಯ
ಮೊನೆ ಹಿಡಿದು ಕಾದುವರುಂಟೆ ?
ಮಂತ್ರಿ ಮನ್ನೆಯ ಬಂಟರೆಲ್ಲರು ರಣದೊಳಗೆ
ಕಾದಿ ಗೆಲ್ವರಲ್ಲದೆ.
ಮಾಯಾಪಾಶವೆಂಬ ರಾಕ್ಷಿ,
ಕರಣಗುಣವೆಂಬ ಭೂತಗಳ ಕೂಡಿಕೊಂಡು,
ಭೂಮಂಡಲ ಹತಮಾಡುತ, ತಿಂದು ತೇಗುತ ಬರುತಿದೆ.
ಮಾಯಾರಣ್ಯವ ಕಾದಿ ಗೆಲುವರನಾರನೂ ಕಾಣೆ ಎನ್ನಾಳ್ದ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪೮ ॥

### ೧೦೨೦

ಹುಲಿಯ ಬಾಯೊಳು ಸಿಲ್ಕಿದೆರಳೆಯಮರಿಯಂತೆ,
ಸರ್ಪನ ಬಾಯೊಳು ಸಿಲ್ಕಿ[ದ] ಕಪ್ಪೆಯಮರಿಯಂತೆ,
ಮಾರ್ಜಾಲನ ಬಾಯೊಳು ಸಿಲ್ಕಿದ ಮೂಷಕನಂತೆ,
ಮಾಯೆ ತನ್ನ ಬಾಯೊಳಿಕ್ಕಿ ಎನ್ನ ತಿಂದು ತೇಗುತಿದೆ !
ಇದಕಿನ್ನೆಂತೊ ಹರಹರ ! ನಿನಗನ್ಯನಾದ ಕಾರಣ ಎನಗೀ ದುರಿತ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೪೯ ॥

೧೦೨೧

ಬಲೆಯೊಳಗಣ ಅನು[ಮಿಷ]ನಂತೆ,
ಕೂಪವ ಬಿದ್ದ ಸರ್ಪನಂತೆ, ಮಧುರದೊಳು ಬಿದ್ದ ಮಕ್ಷಕನಂತೆ,
ಮಾಯಪಾಶವೆಂಬ ಬಲೆಯೊಳೆನ್ನನಿಕ್ಕಿ ಕಾಡುತ್ತಿದ್ದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೦ ॥

೧೦೨೨

ಪಂಕದಲ್ಲಿ ಬಿದ್ದ ಪಶುವಿನಂತೆ, ಕಿರಾತನ ಕೈಯ ಮೃಗದಂತೆ,
ಗರುಡನ ಮುಂದಿನ ಸರ್ಪನಂತೆ, ಸಿಂಹದ ಮುಂದಣ ಕರಿಯಂತೆ,
ದೀಪದ ಮುಂದಣ ಪತಂಗನಂತೆ, ಪಾಪಿಯ ಕೂಸಿನಂತೆ.
ಇಂತಿವೆಲ್ಲಕ್ಕೆಯೂ ಸ್ಥಿರವಿಲ್ಲದಂತೆ,
ಮಾಯವೆಂಬ ರಾಕ್ಷಿಯ ಬಲೆಯಲ್ಲಿ ಸಿಲ್ಕಿ ಬಳಲುತಿರ್ದೆ.
ನಿನಗನ್ಯನಾದ ಕಾರಣ ಎನಗೀ ದುರಿತ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೧ ॥

೧೦೨೩

ಪಶುವಿನ ಮುಂದೆ ಮುರವುಂ ಹಾಕಿ
ಅಮೃತವ ಕರಕೊಂಬಂತೆ,
ಹೊನ್ನು ಹೆಣ್ಣು ಮಣ್ಣು ಮೂರೆಂಬ ಮಾಯಾಪಾಶ[ದ]
ಹಸರು ಹುಲ್ಲಂ ಎನ್ನ ಮುಂದೆ ಚೆಲ್ಲಿ
ಆಸೆಗೆಳೆಸಿ, ಶಿವಜ್ಞಾನಾಮೃತವನೊಯಿದು
ಅಜ್ಞಾನಕೆನ್ನ ಗುರಿ ಮಾಡಿ ಎನ್ನ ಕಾಡುತಿದ್ದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೨ ॥

೧೦೨೪

ಮಾಯಾಪಾಶವದಾರನೂ ಬಿಟ್ಟುದಿಲ್ಲ,
ವೀರರು ಧೀರರು ಯತಿಗಳು ಜತಿಗಳು ಸಿದ್ಧರು ಸಾಧ್ಯರು
ಮನುಗಳು ಮುನಿಗಳು ದನುಜರು ಮನುಜರು
ಇಂತಿವರು ಸಮೂಹವಾದ ಮೂರು ಲೋಕವನೆಲ್ಲ
ತಿಂದು ತೇಗುತಿರ್ದುದಯ್ಯ ನಿನ್ನ ಮಾಯೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೩ ॥

೧೦೨೫

ಇಂದ್ರನ ಮೈಯ ಯೋನಿಯ ಮಾಡಿತ್ತು ಮಾಯೆ.
ಬ್ರಹ್ಮನ ತಲೆಯ ಕಳೆಯಿತ್ತು ಮಾಯೆ.
ವಿಷ್ಣುವಿನ ಕಷ್ಟಬಡಿಸಿತ್ತು ಮಾಯೆ.

ಚಂದ್ರನ ಕ್ಷಯರೋಗಿಯ ಮಾಡಿತ್ತು ಮಾಯೆ.
ರವಿಯ ಕೊಷ್ಠನ ಮಾಡಿತ್ತು ಮಾಯೆ.
ಈ ಮಾಯೆಯೆಂಬ ವಿಧಿ ಆರಾರನೂ ಕೆಡಿಸಿತ್ತು ನೋಡ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೪ ॥

### ೧೦೨೬

ಒರಳೊನಕಿಯ ನಡುವಿನ ಸಿಹಿಧಾನ್ಯದಂತೆ,
ಖಣೆ ಗಾಣದ ನಡುವಿನ ತಿಲದಂತೆ,
ಅಗ್ನಿ ಕುಂಭದ ನಡುವಿನ ಜೀವಪಾಕದಂತೆ,
ತ್ರಿದೋಷದಿಂದಲೆನ್ನ ಕಾಡುತಿದೆ ಮಾಯೆ.
ಅದುಯೆಂತೆಂದಡೆ :
ಜನನ ಮರಣವೆಂಬ ಯಂತ್ರದಲ್ಲಿ ತಿರುವಿ,
ಹೊನ್ನು ಹೆಣ್ಣು ಮಣ್ಣೆಂಬ ಒರಳೊನಕಿಯ ನಡುವೆ ಹಾಕಿ ಕುಟ್ಟಿ,
ತಾಪತ್ರಯವೆಂಬ ಅಗ್ನಿ ಕುಂಭದೊಳಿಟ್ಟೆನ್ನ ಸುಟ್ಟು
ಸೂರೆಮಾಡಿ ಕಾಡುತಿರ್ದುದೀ ಮಾಯೆ, ಕಳೆವರೆನ್ನಳವಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೫ ॥

### ೧೦೨೭

ಒಂದೆಸೆಯಲ್ಲಿ ಹುಲಿ, ಒಂದೆಸೆಯಲ್ಲಿ ರಕ್ಷಿ,
ನಡುವೆ ಬಂದು ಸಿಲ್ಕಿದ ಪಶುವಿನಂತೆ ;
ಒಂದೆಸೆಯಲ್ಲಿ ಕರಿ, ಒಂದೆಸೆಯಲ್ಲಿ ಭಲ್ಲೂಕ,
ನಡುವೆ ಬಂದು ಸಿಲ್ಕಿದ ಎರಳೆಯಮರಿಯಂತೆ ;
ಒಂದೆಸೆಯಲ್ಲಿ ಕಾಕ, ಒಂದೆಸೆಯಲ್ಲಿ ಗಿಡುಗ,
ನಡುವೆ ಬಂದು ಸಿಲ್ಕಿದ ಗಿಳಿಯಂತೆ.
ಇಂತಿವು ಸ್ಥಿರವಿಲ್ಲದಂತೆ ಎನ್ನ ಬಾಳ್ವೆ.
ಅದು ಎಂತೆಂದೊಡೆ :
ಕಾಲವ್ಯಾಘ್ರನೆಂಬ ಹುಲಿ ಮರಣಕ್ಕೆ ಗುರಿಮಾಡಿ
ನರಕಕ್ಕಿಕ್ಕಿ ಕೊಲ್ಲುತ್ತಿಪ್ಪುದಾಗಿ.
ಮಾಯೆಯೆಂಬ ರಕ್ಷಿ ಜನನಕ್ಕೆ ಗುರಿಮಾಡಿ
ಸುಖದುಃಖಕ್ಕಿಕ್ಕಿ ಕೊಲ್ಲುತ್ತಿಪ್ಪುದಾಗಿ.
ಅಷ್ಟಮದವೆಂಬ ಕರಿ ಮೆಟ್ಟಿ ಕೊಲ್ಲುತ್ತಿಪ್ಪುದಾಗಿ.
ಅರಿಷಡ್ವರ್ಗವೆಂಬ ಭಲ್ಲೂಕಂಗಳು ಹರಿದು
ಹೀರಿ ಹಿಪ್ಪೆಯ ಮಾಡುತ್ತಿಪ್ಪುವಾಗಿ.
ಮನವೆಂಬ ಕಾಗೆ ಕಂಡಕಡೆಗೆ ಹಾರಿ,
ಅಜ್ಞಾನವೆಂಬ ಗಿಡುಗ ಅಂತರಂಗದೊಳುಲಿದಾಡಿ

ಸುಜ್ಞಾನವ ಮರಸಿ ಕಾಡುತಿಪ್ಪುದು ನಿನ್ನ ಮಾಯೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೬ ॥

### ೧೦೨೮

ಅರಣ್ಯದೊಳಗೊಂದು ಮನೆಯ ಕಟ್ಟಿದರೆ
ಹುಲಿ ರಕ್ಷಿ ಕರಿ ಭಲ್ಲೂಕಂಗಳ ಹಾವಳಿಯ ನೋಡಾ.
ಹಾವಳಿಗಂಜಿ ಮನೆಯೊಡೆಯ ಅಳಲಿ ಬಳಲುತ್ತೈದಾನೆ.
ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ! ॥ ೫೭ ॥

### ೧೦೨೯

ಕೂಪದ ತಡಿಯ ಹುಲ್ಲ ಮೇವ ಎರಳೆಯನೆಚ್ಚಲು ಬಂದ
ವ್ಯಾಧನ ಬಾಣದಲೊಂದು ಅಚ್ಚ ಆಶ್ಚರ್ಯವ ಕಂಡೆನು.
ಕರಿಯ ಮುಖವೈದು, ಬಿಳಿಯ ಮುಖವೈದು,
ಮುಂದೈದು ಮುಖದ ಸಂಭ್ರಮವ ಕಂಡು
ಎರಳೆ ಬೆದರಿ ಬಾವಿಯ ಬೀಳುತಿರ್ದುಡಿದೇನು ಚೋದ್ಯವೋ !
ಚೋದ್ಯದ ಹಗರಣವ ಕಂಡು ಅಡವಿಯ ರಕ್ಷಿ ನಗುತಿದೆ
ಇದೇನೋ ನಿನ್ನ ಮಾಯದ ವಿಗಡ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೫೮ ॥

### ೧೦೩೦

ಧರೆಯಾಗಿ ನಿಂದು, ಹರಿಯಾಗಿ ಹರಿದು,
ಉರಿಯಾಗಿ ಉಲಿವ ಅಂಗನೆ,
ಬ್ರಹ್ಮ ವಿಷ್ಣು ರುದ್ರರ ನುಂಗಿ ಜಾಲವ ಬೀಸುತಿಪ್ಪಳು ನೋಡಾ !
ಆಕೆಯ ಮಹೇಂದ್ರಜಾಲದ ತೆರೆಯೊಳು ಅನುಮಿಷ
ಮೊದಲು ತಲೆಯಿಲ್ಲದ ಏಡಿಯ ನುಂಗಿ,
ಆ ಏಡಿಯ ಬೆನ್ನಿನಲ್ಲಿ ಆನೆ ಎಂಟು, ಶ್ವಾನ ಐದು,
ಆರು ಮೊಸಳೆಯ ನುಂಗಿ, ಏಳು ಬಗೆಯ ಮಡುವಿಗೆ ಬಿದ್ದು,
ತಮ್ಮ ತಾವೆ ಒದ್ದಾಡುತಿವೆ ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ! ॥ ೫೯ ॥

### ೧೦೩೧

ಕೋಣನ ಕೊರಳಲ್ಲಿ ಕಪಿ. ಬೆನ್ನಿನಲ್ಲಿ ರಕ್ಷಿ,
ಬಾಲದ ಜವೆಗೊಂದೊಂದು ಮುಸುವ,
ಕೊಂಬಿನ ಮೇಲೆ ಕುಣಿವ ಗಿಡುಗ ;
ಇಂತಿವೆಲ್ಲವ ಸಂತೈಸಿಕೊಂಡು ರಕ್ಷಿ ನಡೆದಳು.

ತಮಪುರವೆಂಬ ಪಟ್ಟಣಕ್ಕೊಸ್ತಿಯ ಹೋಗಿ,
ಆ ಪಟ್ಟಣದೊಳು ಸ್ಥಿರವಾಗಿ ನಿಂದು,
ಬದುಕು ಮನೆ ಅರ್ಥವಂ ಗಳಿಸಿ,
ತಮಪುರದರಸಿಂಗೆ ಸರಿಗೊರನಿಕ್ಕಿ
ತಮದ ಮರೆಯಲ್ಲಿಪ್ಪ ವನಿತೆಯ ಕಂಡರೊ[ಂದ]ಗ್ನಿ,
ನಡೆದರೆರಡಗ್ನಿ, ನುಡಿದರೆ ಮೂರಗ್ನಿ,
ಕೇಳಿದರೆ ನಾಲ್ಕಗ್ನಿ, ವಾಸಿಸಿದರೈದಗ್ನಿ.
ಆ ಗಿರಿಯೊಳು ನಿಂದು, ಗಿಡುಗನನಡಸಿ, ಮುಸುವನ ಹರಿಯಬಿಟ್ಟು,
ಕಪಿಯ ಕೈವಿಡಿದು ಜಪವ ಮಾಡಿ,
ಕೋಣನ ನೆರೆ ಕೂಗುವವ ನುಡಿಯ ಪಾಶದೊಳು ಸಿಲ್ಕಿ,
ತ್ರಿಲೋಕವೆಲ್ಲ ವ್ರತಭ್ರಷ್ಟರಾದ ಚೋದ್ಯವ ಕಂಡು
ನಾ ಬೆರಗಾಗುತಿರ್ದೆನು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೬೦ ||

ಗಂ೩೨

ಧರಣಿಯನಾಳುವ ಅರಸಿಂಗೆ,
ಮಾರಿಯ ಭಯ, ಭೂರಿಯ ಭಯ, ಚೋರ ಭಯ.
ಅಗ್ನಿಯ ಭಯ, ಹಿರಿದಪ್ಪ ಅರಿರಾಯರ ಭಯ.
ಇವೈದು ಭಯಕಂಜಿ, ಅಷ್ಟದಳಮಂಟಪದ ಕೋಣೆಯ
ನೆರೆ ಪೂರ್ವದಿಕ್ಕಿನ ರಾಜ್ಯಕ್ಕೊಳಿತಂ ಬಯಸಿ,
ಅಗ್ನಿಕೋಣೆಯ ರಾಜ್ಯವ ಭಕ್ಷಿಪೆನೆಂದು,
ಯಮದಿಕ್ಕಿನ ರಾಜ್ಯವ ಕ್ರೋಧದಲ್ಲುರುಹುವನೆಂದು,
ನೈಋತ್ಯದಿಕ್ಕಿನ ರಾಜ್ಯವ ಮರತು ಮಲಗಿಸುವೆನೆಂದು,
ವರುಣದಿಕ್ಕಿನ ರಾಜ್ಯಕ್ಕೆ ಸತ್ಯವ ಬಯಸಿ,
ವಾಯುವ್ಯದಿಕ್ಕಿನ ರಾಜ್ಯವ ಗಾಳಿಗಿಕ್ಕಿ ಹಾರಿಸುವೆನೆಂದು,
ಕುಬೇರದಿಕ್ಕಿನ ರಾಜ್ಯಕ್ಕೆ ಧರ್ಮನು ಬಯಸಿ
ಈಶಾನ್ಯಕೋಣೆಯ ರಾಜ್ಯದ ಹೆಣ್ಣ ವಿಷಯತೂರ್ಯದಲ್ಲಿ
ದಳೆಯ ಹಿಡಿವೆನೆಂದು,
ಅಷ್ಟದಿಕ್ಕಿನ ರಾಜ್ಯದ ನಟ್ಟನಡುವ ಕಷ್ಟಬಡುತಿರ್ಪ
ಅರಸಿನ ಕಳವಳಿಕೆ ; ಬುದ್ಧಿಗುಡುವ ಮಂತ್ರಿ,
ಕಪಿಚಾಷ್ಠಿ ತಂತ್ರಿ, ತಾಮಸಬುದ್ಧಿ ದಳವಾಯಿಗಳು,
ದಶಗುಣಿಗಳು ಮನ್ನೆಯ ನಾಯಕರು,
ಮದಪರು ಪಾಯದಳ.
ಪರಿಯಾಟಗೊಳಿಸುವ ಅರಸಿನ ಪ್ರಜೆ ಪರಿವಾರ ಮಂತ್ರಿಮನ್ನೆಯರನಲ್ಲ

ಕೈಸೆರೆಯ ಹಿಡಿದು ಆಳುವ ಅಂಗನೆ
ರಾಜ್ಯಾಧಿಪತಿಯಾದುದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೬೧ ॥

ಗ೦೩೩

ಹೆಣ್ಣು ಗಂಡು ಕೂಡಿ ರಚಿಸಿದ ಬಣ್ಣದ ಕೊತ್ತಳದೊಳು
ಮನೆಮಾಡಿಕೊಂಡಿರ್ಪ ದುರ್ಗಿಯ ಕಂಡೆನಿಂದು.
ಆಕೆಯ ಮುಖ ಮೂರು, ಕಣ್ಣಾರು, ಬಾಯಿ ಮೂರು,
ನಾಸಿಕ ಮೂರು, ನಾಲಗೆ ಮೂರು, ಮೊಲೆ ಏಳು,
ಅಂಗವೆರಡು, ಶೃಂಗಾರ ನಾಲ್ಕು, ಬಯಕೆ ಎಂಟು,
ಬಾಳ್ವೆ ಎರಡು, ದುಃಖವೈದು.
ದುರಿತ ನೂರಿಪ್ಪತ್ತರ ದುಮ್ಮಾನದಲ್ಲಿ
ಮಾಯದ ರಕ್ಷೆಯ ಮುಂದಿಟ್ಟುಕೊಂಡು,
ಛಾಯದ ಕೊಳಗದಲಳೆವುತ್ತಲಳೆವುತ್ತ
ಮುಡಿ ಮಾಸಿತೆಂದು ಮಾನುನಿ ಮರುಗಿ,
ರಾಸಿಗೆ ಕಾಲ ಮಾಡಿ, ಮಾನಕೆ ತಲೆಯನಿಟ್ಟು,
ರೋಷದಿಂದ ಶೋಕಂಗೈವುತ್ತಿಪ್ಪ ಅಂಗನೆ,
ಮುಖ ಮೂರ ತಿರುವೆ, ಮೂರುಲೋಕವದರಿದ್ದ ಕಂಡೆ.
ಕಣ್ಣಾರಲ್ಲಿ ಉರಿವುತ್ತಿಪ್ಪ ಅಗ್ನಿ ಲೋಕವ ಸುತ್ತುವುದ ಕಂಡೆನು.
ಬಾಯಿ ಮೂರು ತೆರೆಯ ಎಣೆಯಿಲ್ಲದ ತಾರೆಯ ಕಂಡೆನು.
ಏಳು ಮೊಲೆಯೊಳಗಣ ವಿಷ ಹೊರಹಬ್ಬಿ ಹರಿವುದ ಕಂಡೆನು.
ಅಂಗವೆರಡು ಅಲೆದಾಡುವುದ ಕಂಡೆನು.
ಶೃಂಗಾರವು ನಾಲ್ಕು ದಿಕ್ಕಿಗೆ ಬೆಳಗುವುದ ಕಂಡೆನು.
ಬಯಕೆ ಎಂಟು ಬ್ರಹ್ಮಾಂಡವ ಕೊಂಡು ಮುಣುಗುವುದ ಕಂಡೆನು.
ದುಃಖವೈದು ಮೊರೆಯಿಡುವುದ ಕಂಡೆನು.
ದುರಿತ ನೂರಿಪ್ಪತ್ತು ಧೂಳಿಗೊಟ್ಟೆಯ ಕೊಂಬುದ ಕಂಡೆ,
ಕೋಟೆಯ ಅರಸು ಬೆನ್ನೂರಿಲಿ ನಿಂದು
ತಾಪಸಬಡುತಿರ್ದ, ಮಾಯದುರಿತಕಂಜಿ.
ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೬೨ ॥

ಗ೦೩೪

ಅಲೆಯ ಮನೆಯೊಳಗಣ ಕಿಚ್ಚು ಅಲೆದಾಡದ ಮುನ್ನ,
ಊರ ಮುಂದೆ ನಾಲ್ವರು ಸತ್ತು ಒಳಗೆ ಬೇವುದ ಕಂಡೆ.
ಊರು ಬೆಂದು, ಕಿಚ್ಚಿನ ಊನ್ಯವ ಕೇಳಬಂದ ರಕ್ಷೆ,

ಹುಲಿಯನೇರಿಕೊಂಡು ಕಳೆದುಳಿದುದಕ್ಕೆ ತಾನೊಡತಿಯಾಗಿ
ಊರುಂಬಳಿಯನುಂಬುದ ಕಂಡೆ.
ಅತ್ತುದ್ದೊಂದಲ್ಲದೆ ಹೆಣ ಬಂದು ಕಚ್ಚದಿದೇನು
ಚೋದ್ಯದ ದುಃಖ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೬೩ ||

## ೧೦೩೫

ನಗನೂರತಾಣ್ಯದ ತೆಳಗಿಪ್ಪ ಇಪ್ಪತ್ತೈದು ಹಳ್ಳಿಯ ಸಾಗಿಸಿ
ಕೋರನಡಸುವ ಕಾರಕೂನರೈವರು,
ಕಾಡಹೊಲನ ಕಂಡಣೆಯ ಮಾಡುತಿರೆ ;
ಹಾರುವರು ಹರಿಕಾರರು, ಗೌಡರಿಬ್ಬರು ಗೊಮುಗುಸುಕರು,
ಊರೊಳಹೊರಗ ಬಾರದ ಸೇನಬೋವರು,
ಕಿಂಚಿತು ಉಳಿಯಗೊಡದ ಠೇವಣೆಯನಿಕ್ಕುವರು.
ಹೃದಯಧರರು ಹುಸಿಕಾರರು,
ರಾತಿಯನೊಕ್ಕುವ ಒಕ್ಕಲಿಗರು ವಂಚಕರು,
ಊರ ಪಂಚಾಳರು ಪ್ರಪಂಚಿಗಳು, ಅಗಸ ಮೈಲಿಗೆಗಳ್ಳ,
ನಾಯಿಂದ ಕೇಶಭುಂಜಕ, ಕುರುಬ ಭುಸಗೊಂಡ,
ಕುಂಬಾರ ತಿಗುರಿಸುತ್ತಳ, ತಳವಾರರು ಮರೆದೊರಗುವರು,
ಬಾರಿಕ ಬಲುಬೆದಕ, ಹೊಲೆಯ ಹುಸಿಕಾರ,
ಮಾದಿಗ ಮಾಂಸಭುಂಜಕ ;
ರಾಜ್ಯದ ತಪ್ಪ ವಿಚಾರಿಸುವ ರಾಜ ಮಹಾಕ್ರೋಧಿ,
ಪರಿವಾರ ಬಾಧಕರು.
ಇಂತಿವರೊಳೊಬ್ಬನೂ ಮೋಹಿಯಲ್ಲ! ನಾನೆಂತು ಜೀವಿಪೆನಯ್ಯಾ ?
ಕಾಯಪುರದ ಸಂಭ್ರಮದ ಮಾಯಾಪಾಶಕೆನ್ನನಿಕ್ಕಿ ನೀನಗಲಿದೆಯಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೬೪ ||

## ೧೦೩೬

ರಕ್ಷೆಗೆ ಒತ್ತೆಯ ಕೊಟ್ಟ ಶಿಶುವಿನಂತೆ,
ಕಟುಕಗೆ ಮಾರಿದ ಕುರಿಯಂತೆ,
ಕಮ್ಮಾರಗೆ ಮಾರಿದ ಕಬ್ಬಿಣದಂತೆ,
ಅಕ್ಕಸಾಲಿಗೆ ಮಾರಿದ ಸೀಸದಂತೆ,
ಮಾಯಾಭ್ರಮೆಗೆನ್ನ ಮಾರಿ, ಕರಗಿಸಿ ಕೊರಗಿಸಿ
ಕೋಯಿಸಿ ತಿನಿಸಿ ಸುಟ್ಟು ಸೂರೆಮಾಡಿ ಎನ್ನ ಕಾಡುತ್ತಿದ್ದೆಯಲ್ಲ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೬೫ ||

೧೦೩೭

ಹಾಳೂರೊಳಗಣ ನಾಯಜಗಳಕ್ಕೆ
ಘೂ[ತ]ಗಳಿದ್ದು ಕೆಲೆವುದ ಕಂಡೆ.
ಗಗನದಲಿಪ್ಪ ಗಿಣಿ, ಮಾರ್ಜಾಲನ ನುಂಗುವುದ ಕಂಡೆನು.
ಸೂಳೆ ನೆಂಟನ ನುಂಗಿ, ಕೋಳಿ ಸರ್ಪನ ನುಂಗಿ,
ಅರಗು ಉದಕವ ನುಂಗಿ, ಸಿರಿ ದರಿದ್ರವ ನುಂಗುವುದ ಕಂಡೆ.
ಇದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೬೬ ||

೧೦೩೮

ಗಳಿಗೆಯ ಮೇಲೆ ಗಾಳಿ ಹರಿಯದ ಮುನ್ನ
ಕೊಳಗ ರಾಶಿಯ ನುಂಗುವುದ ಕಂಡೆ.
ಮುಂಡವದ್ದು ಭೂಮಂಡಲವ ನುಂಗಿ
ಆಲಿಯ ಮರೆಗೊಂಬುದ ಕಂಡೆನು.
ಹಗಲೆಗತ್ತಲೆಯಾಗಿ ಆಗ ಗಿಡಿಯ ಮಂಜಿನ ಹೊಗೆಯ
ದಾಳಿಯ ಕಂಡನು.
ಅಂಬುಧಿಯೊಳು ಮುಳುಗಿ ಲೋಕ ತೇಲಾಡುವುದ ಕಂಡೆನು.
ಇದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೬೭ ||

೧೦೩೯

ಸಾಗರದೊಳಿಪ್ಪ ಊರಿಂಗೆ ದ್ವಾರವತಿಯ ಭಯ.
ದ್ವಾರವತಿಗ ಅಗ್ರಗಿರಿಯ ಚಂದ್ರ ಸೂರ್ಯರ ಭಯ.
ಚಂದ್ರಸೂರ್ಯರಿಬ್ಬರಿಗೆ ನಡೆಗೋಟೆಯ ಭಯ.
ನಡೆಗೋಟೆಗೆ ಸ್ವರುಷನಪುರದ ಭಯ.
ಇವು ನಾಲ್ಕನೂ ಮೂರುಮುಖದ ಪಕ್ಷಿ
ನುಂಗಿಕೊಂಡಿಪ್ಪುದಿದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೬೮ ||

೧೦೪೦

ಆಸೆಯಾಗಿ ನಿಂದು, ರೋಷವಾಗಿ ಕೊಂದು,
ಮೋಸವಾಗಿ ತಿಂದು, ವೇಷವಾಗಿ ಸುಳಿದು,
ಭಾಷೆಯಾಗಿ ನಿಂದು, ಪಾಶವಾಗಿ ಕಟ್ಟಿ,
ಶೇಷವಾಗಿ ಕರಗಿ, ಮೊಸಲಕ್ಷಿಯಾಗಿ

ಜಗವ ಮರುಳುಮಾಡಿ ಕಾಡುತಿದ್ದುದು ನಿಮ್ಮ ಮಾಯದ ದಿಗಡ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೬೯ ॥

೧೦೪೧

ರಾಗ : ಶಂಕರಾಭರಣ

ಪಲ್ಲ: ಆರೆ ನೀನಾರೆ ಮಾಯದ ಬಲೆಯ
ತೋರೆನ್ನ ಸಿಗಿಸಿ ನೀನಗಲಿದರೆ.

ಪದ : ತ್ರಿವಿಧ ಗುಣವು ತ್ರಿವಿಧ ಮಲವು
ತ್ರಿವಿಧ ತನುವು ತ್ರಿವಿಧ ಮನವು
ತ್ರಿವಿಧ ಕರಣ ತ್ರಿವಿಧ ಅಗ್ನಿಗೆನ್ನನಿಕ್ಕಿ
ಭಾವಿಸಿ ಕಾಡುತಿದೆ ನಿನ್ನ ಮಾಯ. । ೧ ।

ಪಂಚವಿಂಶವು ಪಂಚಭೂತಗಳುಪವಿ
ಪಂಚಕರ್ಮೇಂದ್ರಿಯಂಗಳ ಬಲೆಯು
ಸಂಚನಿಕ್ಕಿ ಹರಿಹಂಚ ಮಾಡಿ ಮಾಯಾ ಪ್ರ
ಪಂಚನ ಕಾಡುತಿದೆ ಗುರುವೆ. । ೨ ।

ಹೊನ್ನಾಗಿ ಚರಿಸಿ ಹೆಣ್ಣಾಗಿ ಸುಳಿದು
ಮಣ್ಣಾಗಿ ನಿಂದು ಮಾಯಾರಕ್ಕಸಿಯು
ಕಣ್ಣಿಂದ ನೋಡಿ ಕಾಲ್ನೆಡಿಸಿ ಅಜಹರಿಸುರರ
ಬಣ್ಣಗುಂದಿಸಿ ಕಾಡುತಿದೆ ಗುರುವೆ. । ೩ ।

ಪಶುವಿನ ಮುಂದೆ ಗ್ರಾಸವ ಚೆಲ್ಲಲದು
ಹಸುರೆಂದು ಆಸೆಗೈವಂತೆ ಮಾಯಾ
ರಸ ವಿಷಯ ಅಲ್ಪಸುಖಕೆನ್ನ ಗುರಿಮಾಡಿ
ವಿಷಕಂಠ ನೀನಗಲಿದೆ ಗುರುವೆ. । ೪ ।

ಪರುಷಕೆ ಪಾಷಾಣವನೊತ್ತೆಯಿಡುವಂತೆ
ಶರೀರಮಾಯೆಗೆ ಎನ್ನ ಗುರಿ ಮಾಡಿ
ಹರ ನೀನಗಲದಿರು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. । ೫ ।
॥ ೭೦ ॥

## ಮಾಯಾತಮಂಧ ನಿರಸನಸ್ಥಲ

ಸೂತ್ರ : ಇಂತು ಮಾಯಾವಿಡಂಬನಸ್ಥಲದಲ್ಲಿ ಆಚರಿಸಿ ಮಾಯಾವಿಡಂಬನ ಮಾಡಿದ ಮಹಾತ್ಮಂಗೆ ಮುಂದೆ ಸಮುದ್ರದ ತೆರೆಯೋಪಾದಿಯಲ್ಲಿ ಮಾಯಾತಮವೆಂಬ ಕತ್ತಲೆ ಮುಸುಕಿ ಅರಿವ ಕವಿಯುತ್ತಿದ್ದ ಕಾರಣ ಮಾಯಾತಮಂಧವ ನಿರಸನವ ಮಾಡುತಿರ್ದನು, ಚತುರ್ಥದಲ್ಲಿ ಮಾಯಾತಮಂಧನಿರಸನಸ್ಥಲವಾದುದು.

### ೧೦೪೨

ಮಾಯಾತಮಂಧವೆಂಬ ಕತ್ತಲೆಯು ಮುಸುಕಿ ಮುಂದುಗಾಣದೆ
ಅರುಹಿರಿಯರೆಲ್ಲರು, ಸಿದ್ಧಸಾಧ್ಯರೆಲ್ಲರು ಕಣ್ಗಾಣದೆ ಮರೆದೊರಗಿದರು.
ಅದು ಎಂತೆಂದೊಡೆ : ವಸಂತತಿಲಕವೃತ್ತ –
''ಮಾಯಾತಮಂಧ ಮಹಾಘೋರ ಕಾಲವಿಷಂ
ಜ್ಞಾನಸ್ಯ ಸೂರ್ಯ ನಚ ಸಿದ್ಧ ಸಾಧ್ಯಂ ಭೂಲೋಕ
ತ್ರಿಗುಣಾಕಾರ ಮಧ್ಯ ಶಯನೇಶದೇಹಿ
ಶಿವಮುಕ್ತಿರಹಿತ ಭವಯಂತ್ರ ಕ್ರೀಡಾದಿಜನಿತಂ'' (?)
ಎಂದುದಾಗಿ, ಇದು ಕಾರಣ,
ತನುವೆಂಬ ಉರುರಾಜ್ಯಕ್ಕೆ ಜ್ಞಾನಸೂರ್ಯನ ಮುಳುಗಿಸಿ
ಅನುದಿನ ಎನ್ನ ಕಣ್ಗೆಡಿಸಿ,
ಮಾಯಾತಮಂಧವೆಂಬ ಕತ್ತಲೆಗೆ ನಡೆಸಿ,
ಅಜ್ಞಾನವೆಂಬ ಕೊರಡನೆಡವಿಸಿ,
ತಾಪತ್ರಯವೆಂಬ ಅಗ್ನಿಗಿರಿಯನಡರಿಸಿ,
ಮನವಿಕಾರಗಳೆಂಬ ಭೂತಗಳ ಹರಿಯಬಿಟ್ಟು,
ಅರಿಷಡ್ವರ್ಗವೆಂಬ ಕೂರಸಿಯ ಸಿಗಿಸಿ,
ಷಡ್ಭಾವವೈಕರಣಗಳೆಂಬ ಹಳ್ಳಕೊಳ್ಳ ನಡುವಿಕ್ಕಿ
ಎನ್ನ ಕಾಡುತಿರ್ದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭೧ ॥

### ೧೦೪೩

ಮಾಯಾತಮಂಧವೆಂಬ ಸಹಗತ್ತಲೆ ಇರುತಿರೆ,
ಮರಹು ಮೋಹ ನಿದ್ರಾಂಗನೆಯೆಂಬ ಮೋಡವ ಕವಿಸಿ,
ಜಾಗ್ರ ಸ್ವಪ್ನ ಸುಷುಪ್ತಿಯೆಂಬ ಕಾಳಾಂಧಕಾರದೊಳು
ಮರದೊರಗಿ ಮೈಮರಸಿ ಎಚ್ಚರಗೊಡದೆ ಎನ್ನ ಕಾಡುತಿರ್ದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭೨ ॥

೧೦೪೪

ಅನ್ನ ಉದಕದ ದೆಸೆಯಿಂದ ನಿದ್ರೆ, ನಿದ್ರೆಯಿಂದ ಕಾಮ,
ಕಾಮದಿಂದ ಅಜ್ಞಾನ, ಅಜ್ಞಾನದಿಂದ ಕರ್ಮ,
ಕರ್ಮದಿಂದ ಮಾಯಾತಮಂಧಕ್ಕೆ ಗುರಿ.
ಮಾಯಾತಮಂಧದಿಂದ ಮರಣಕ್ಕೆ ಗುರಿಮಾಡಿ
ಸತ್ತು ಸತ್ತು ಹುಟ್ಟಿಸಿ, ಎನ್ನ ಭವಾರಣ್ಯದೊಳಗೆ
ಕಣ್ಗಾಣದಂಧಕನಂತೆ ತಿರುವಿ ತಿರುವಿ ಕಾಡುತಿರ್ದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭೩ ॥

೧೦೪೫

ಮರ್ಕಟ ಮದ್ಯಪಾನವ ಸವಿದು ಕುಡಿದು
ಹೇರಾರಣ್ಯದೊಳು ಹೋಗುತಿರ,
ವಿಜಿಯ ಪತ್ರಿಯ ಸವಿದು, ದತ್ತೂರಕಾಯ ಸವಿದು ತಿಂದು
ನತ್ತಿಗೇರಿ, ಆಡಿಯಿಡುತಿರ,
ಮೇಣ್ ವೃಶ್ಚಿಕ ಕಚ್ಚಿ ಬೇನೆಯಲ್ಲಿ ನರಳುತಿರ,
ಹಿರಿದಪ್ಪ ಭೂತ ಸೋಂಕಿ ಅಂಗಲಾಚುವ ಸಮಯಕ್ಕೆ,
ಪಗಲೊಡೆಯ ಮುಣುಗೆ, ಅಂಧಕಾರ ಕತ್ತಲೆಯೊಳಗೆ ಸಿಲ್ಕಿ,
ಕಪಿ, ವಿಕಾರ ಹಿಡಿದು ಕಲ್ಲನೆಲನಂ ಹಾಯ್ದು ಸಾವಂತೆ ಎನ್ನ ಬಾಳುವೆ.
ಅದು ಎಂತೆಂದೊಡೆ :
ಭವಾರಣ್ಯದೊಳು ಬರುತಿರೆ ತನುವಿಕಾರವೆಂಬ ಸೋರೆಯ ಗಡಿಗೆ
ಮನವಿಕಾರವೆಂಬ ಭಂಗಿಯ ಸೊಪ್ಪು ಮೆದ್ದು,
ಹೊನ್ನು ಹೆಣ್ಣು ಮಣ್ಣು ಮೂರೆಂಬ ತೊರೆ ತಲೆಗೇರಿ,
ಮನವೆಂಬ ಚೇಳೂರಿ, ಕರಣಗುಣವೆಂಬ ಭೂತಸೋಂಕಿ,
ಅಜ್ಞಾನಕೆ ಗುರಿಮಾಡಿ, ಸುಜ್ಞಾನವೆಂಬ ಸೂರ್ಯನನಡಗಿಸಿ,
ಮಾಯಾತಮಂಧವೆಂಬ ಕತ್ತಲೆಯೊಳಗೆನ್ನನಿಕ್ಕಿ,
ಮುಕ್ತಿಯಹಾದಿಯ ಕಾಣಲೀಸದೆ ಎನ್ನ ಕಾಡುತಿರ್ದೆಯಲ್ಲಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭೪ ॥

೧೦೪೬

ಜ್ಯೋತಿಯಿಲ್ಲದ ಕತ್ತಲೆಮನೆಯಂತೆ,
ಸೂರ್ಯನಿಲ್ಲದ ಗಗನದ ಕಾಳದಂತೆ,
ಆತ್ಮ ದೇಹ ಮಧ್ಯದ ಗೃಹದೊಳು
ಮಾಯಾತಮಂಧವೆಂಬ ಕತ್ತಲೆಯ ಹೆಚ್ಚಿಸಿ,
ಶಿವಜ್ಞಾನವನಡಗಿಸಿ,
ಅಹಂಕಾರ ಮಮಕಾರವೆಂಬ ಅಜ್ಞಾನಕೆನ್ನ ಗುರಿಮಾಡಿ,

ನೀ ತೊಲಗಿ ಹೋದರೆ ನಾ ಬೀದಿಗರುವಾದೆ.
ಗ್ರಾಣಕೊಂಡ ಚಂದ್ರನಂತಾದೆ,
ಪಿತ–ಮಾತೆಯಿಲ್ಲದ ಶಿಶುವಿನಂತಾದೆ,
ಎನ್ನ ಹುಯ್ಯಲಂ ಕೇಳಿ, ರಂಬಿಸಿ ತಲೆದಡಹು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೭೫ ||

೧೦೪೭

ಕಣ್ಗೆಡಿಸಿತ್ತು ಮಾಯಾಕಾವಳ, ಕಾಲ್ಗೆಡಿಸಿತ್ತು ಮಾಯಾಕಾವಳ,
ತನುಗೆಡಿಸಿತ್ತು ಮಾಯಾಕಾವಳ.
ದಿನಕ್ಕೊಮ್ಮೆ ಕತ್ತಲೆಗವಿದರೆ,
ಎನಗೆ ಗಳಿಗೆ ಗಳಿಗೆಗೆ ಮಾಯಾತಮಂಧ ಕತ್ತಲೆ.
ಸಮುದ್ರಕ್ಕೆ ದಿನಕ್ಕೊಮ್ಮೆ ತೆರೆ ಬಂದರೆ,
ಎನ್ನ ಮನವಿಕಾರದ ತೆರೆ ವೇಳೆವೇಳೆಗೆ ಕವಿದವು.
ವರುಷವರುಷಕೊಂದು ಜೋಳದ ಬೆಳೆಯಾದರೆ
ಎನ್ನ ತನುವಿಕಾರದ ಚಿಂತೆ ಕರ್ಮದ ಬೆಳೆಯು
ಸದಾ ಬೆಳೆಯುತಿಪ್ಪುದು.
ಈ ಮಾಯಾತಮಂಧವೆಂಬ ವಿಧಿಗೆನ್ನ ಗುರಿಮಾಡಿ
ಬಿಟ್ಟೋಗದಿರು, ತೊಲಗದಿರು.
ಕಾಳಿ ಹೊಲೆಯನದಾದಡೇನು, ಬಿರಿದು ಒಡೆಯನದು.
ಕರ್ಮದ ಬಾಯಿ ಹೊಲೆಯಾದಡೇನು
ಸುಜ್ಞಾನದ ಮರ್ಮವನಿತ್ತು ಸಲಹಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೭೬ ||

೧೦೪೮

ಅನ್ಯದೇಹಿಯೆಂದು ಎನ್ನ ಕಳೆಯದಿರು,
ಕರ್ಮದೇಹಿಯೆಂದು ಕೈಯ ಬಿಡದಿರು,
ಮರ್ತ್ಯನೆಂದು ಮಾಯಕ್ಕೆ ಗುರಿಮಾಡದಿರು,
ಮದಡನೆಂದು ಮನವಿಕಾರಕ್ಕೆ ಗುರಿಮಾಡದಿರು,
ಅಜ್ಞಾನಿಯೆಂದು ಅಹಂಕಾರಕ್ಕೆ ಗುರಿಮಾಡದಿರು,
ಮದದೇಹಿಯೆಂದು ಮಾಯಾತಮಂಧಕ್ಕೆ ಗುರಿಮಾಡದಿರು,
ಜಲ ಅಗ್ನಿಯ ಗುಣವಿರಲೊ ಎನ್ನಯ್ಯ.
ಅದು ಎಂತೆಂದೊಡೆ :
ಜಲ ಹರಿವಡೆಯಲ್ಲಿ ಹೊಲಗೇರಿ ಉತ್ತಮಗೇರಿ
ಅಮೇಧ್ಯದಗೇರಿಯೆಂದು ನೋಡಿ ಹರಿವುದೆ ?
ಹರಿಯದು ; ಅದಕ್ಕೆಲ್ಲ ಸಮ.

ಅಗ್ನಿ ಶ್ವಪಚರ ಮನೆ, ಗೃಹಸ್ಥರ ಮನೆ, ಬೇಡ ಮಾದಿಗ
ಹದಿನೆಂಟು ಜಾತಿ ಎಂದು ಅಡಿಯಿಡಲು ಮುನಿವುದೆ ? ಮುನಿಯದು.
ಎನ್ನ ಅನ್ಯದೇಹಿಯೆಂದು, ಕರ್ಮದೇಹಿಯೆಂದು,
ಮರ್ತ್ಯದೇಹಿಯೆಂದು, ಮದಡದೇಹಿಯೆಂದು,
ಅಜ್ಞಾನಿಯೆಂದು ಕಳೆವಡೆ ಹುರುಳಿಲ್ಲ.
ಅತ್ತಿಯಹಣ್ಣು ಬಿಚ್ಚಿದರೆ ಬಲು ಹುಳು.
ಎನ್ನ ಚಿತ್ತದೊಳವಗುಣವ ವಿಸ್ತರಿಸಿದರೇನು ? ಫಲವಿಲ್ಲ.
ನೋಡದೆ ಕಾಡದೆ ಮಾಯಾತಮವಕಳೆದು ಜ್ಞಾನಜ್ಯೋತಿಯ ತೀವು.
ಎನ್ನ ನಿಮ್ಮಯ ಶರಣರು
ಚೆನ್ನಬಸವಣ್ಣ ಅಕ್ಕನಾಗಮ್ಮ ನೀಲಲೋಚನೆ ನಿಂಬವ್ವೆ
ಮಹಾದೇವಿ ಮುಕ್ತಾಯಕ್ಕ ಅಜಗಣ್ಣ ಅಂಬಿಗರ ಚೌಡಯ್ಯ
ಕಲಿಕೇತಯ್ಯ ಬ್ರಹ್ಮಯ್ಯ ನಿರ್ಲಜ್ಜಶಾಂತಯ್ಯ
ನಿಜಗುಣದೇವರು ಸಿದ್ಧರಾಮಿತಂದೆ
ಮರುಳಶಂಕರದೇವರು ಕಿನ್ನರಿಬ್ರಹ್ಮಯ್ಯ
ವೀರಗಂಟೆಯ ಮಡಿವಾಳಯ್ಯ ಮೇದರ ಕೇತಯ್ಯಗಳು
ಅರವತ್ತುಮೂವರು ಪುರಾತನರು ತೇರಸರು
ಷೋಡಶರು ದಶಗಣರು ಮುಖ್ಯವಾದ್ಯೆನೂರಾ ಎಪ್ಪತ್ತು
ಅಮರಗಣಂಗಳ
ಆಳಿನಾಳಿನಾ ಮನೆಯ ಕೀಳಾಳ ಮಾಡಿ
ಅವರ ಲೆಂಕನಾಗಿ, ಅವರುಟ್ಟ ಮೈಲಿಗೆ, ಉಗುಳ್ದ ತಾಂಬೂಲ
ಪಾದೋದಕ, ಅವರೊಕ್ಕ ಪ್ರಸಾದಕೆನ್ನ ಯೋಗ್ಯನಮಾಡೆ
ಏಳೇಳು ಜನ್ಮದಲ್ಲಿ ಬರುವೆ ಕಂಡಾ,
ಭವವಿರಹಿತ ತಂದೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭೭ ॥

### ೧೦೪೯

ರಾಗ : ಶಾಂತಭೈರವಿ

ಪಲ್ಲ : ಕಣ್ಗಾಣದೆ ಲೋಕ ಮಾಯಾತಮಂಧವೆಂಬ
ಬಣ್ಣಛಾಯಕ್ಕೆ ಸಿಲ್ಕಿ ಭ್ರಮಿತಗೊಂಡಿತು.
ಪದ : ತನುಮದ ಹುತ್ತದೊಳು ಮನವಿಕಾರದ ಸರ್ಪ
ಜನರನೆಲ್ಲರ ಕಚ್ಚಿ ವಿಷವೇರಿಸಿ
ಅನುದಿನ ಉಳಿಯಗೊಡದಾ ಮಾಯಾತಮಂಧವೆಂಬ
ಅಣಲಿಂಗೆ ಗುರಿಯಾಗಿ ಬರಿದೆ ಕಲಿಗೆಡುತಲಿ. । ೧ ।

ಷಡೂರ್ಮೆ ಷಟ್ಕರ್ಮ ಷಡ್ಭಾವವ್ಯೆಕರಣ
ಷಢ್ಭ್ರಮೆಗಳೆಂದೆಂಬುದ
ಷಡು ಅಂಗ ಕತ್ತಲೆಗೆ
ನಡೆದು ಮೈಮರೆದು ಬರಿದೆ. । ೨ ।

ಅಸಿಯ ಜವ್ವನೆಯರ ವಿಷಯರಸವೆಂದೆಂಬ
ಪ್ರಸರದೊಳು ಲೋಕವನು ಗುರಿಮಾಡಿಯೆ ;
ಅಸನ ವ್ಯಸನ ನಿದ್ರೆ ಆಲಸ್ಯ ಮಾಯಾತನು
ಬೆಸುಗೆಯೊಳು ಸಿಲ್ಕಿ ಬರಿದೆ. । ೩ ।

ಹಿರಿದು ಮಾಯಾತಮವೆಂಬ ಕತ್ತಲೆಯೊಳಗೆ ನಡೆದು
ಬರುತಲಿ ಅಜ್ಞಾನವೆಂದೆಂಬುವ
ಕೊರಡನೆಡವಿಯೆ ತಾಪತ್ರಯದಗ್ನಿಗಿರಿಯೊಳಗೆ
ಮರೆಗೊಂಡು ಮುಂದುಗಾಣದೆ ಮೂಲೋಕ । ೪ ।

ಸುರೆಗುಡಿದ ಮರ್ಕಟಗೆ ವಿರಚಿ ಭೂತಂ ಸೋಂಕಿ
ಹಿರಿದು ಚೇಷ್ಟೆಯ ತೆರದಿ ಮಾಯಾಮದದ
ಗುರುವಹಂಕಾರ ಮನ ಚೇಷ್ಟೆಯಂಗಳ ತೊರದು
ಗುರುಸಿದ್ಧ ಮಲ್ಲಿನಾಥನೊಳು ಬೆರೆಯಲರಿಯದೆ. । ೫ ।
॥ ೭೮ ॥

## ದಶವಾಯುನಿರಸನಸ್ಥಲ

ಸೂತ್ರ : ಇಂತು ಮಾಯಾತಮಂಧವ ನಿರಸನವ ಮಾಡಿ, ಜಲದೊಳಗಣ ಸೂರ್ಯನಂತೆ ಮಾಯಾತಮಂಧದೊಳು ಹೊದ್ದಿ ಹೊದ್ದದೆಯಿರುವ ಮಹಾತ್ಮ ನೀನೇ. ಮುಂದ ದಶವಾಯುನಿರಸನವ ಮಾಡುತ್ತಿರಲು ಷಡುದಲ್ಲಿ ದಶವಾಯು ನಿರಸನ ಸ್ಥಲವಾದುದು.

೧೦೫೦

ಹತ್ತುವಾಯು ಹರಿದಾಡಿ ಆನೊಳ ಸುತ್ತಿ ಸುತ್ತಿ
ಕೃತ್ಯದಿಂದ ನರಳಿಸಿ ಒರಲಿಸಿ ಚೇತರಿಸಿ ಆವರಿಸಿ ಕಾಡುತಿದೆ.
ಅದು ಎಂತೆಂದೊಡೆ :
ಅರೆಗಾಯವಡೆದ ಉರಗಗೆ ಇರುವೆ ಮುಕುರುವಂತೆ,
ದಶವಾಯುಗಳ ಮುಖದಲ್ಲಿ ಹರಿವ ಕರಣೇಂದ್ರಿಯಂಗಳು
ಮನವೆಂಬ ಅರೆಗಾಯದ ಸರ್ಪಂಗೆ ಮುಕುರಿ
ನರಳಿ[ಸಿ] ಕಾಡುತಿವೆ ; ಕಾಡಿದರೇನು ?
ಹಲವು ಬಗೆಯಲ್ಲಿ ಹರಿವ ವಾಯುಮುಖದಲ್ಲಿ ನೀನೆ ;

ನೀನಲ್ಲದನ್ಯವಿಲ್ಲ.
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೭೯ ॥

೧೦೫೧

ಅಗ್ನಿಗೆ ಮೈಯೆಲ್ಲ ಮುಖ, ಬಲಕೆ ಮೈಯೆಲ್ಲ ಕಾಲು.
ಆತ್ಮದೇಹಿಂಗೆ ದಶವಾಯುಗಳ ಮುಖದಲ್ಲಿ ಹರಿವ
ಕರಣೇಂದ್ರಿಯಂಗಳೆಲ್ಲ ಮುಖ ಕಾಲಾಗಿ ಚರಿಸುತಿಪ್ಪವು.
ತನುವೆಂಬ ಕೊಟಾರದೊಳು ಚರಿಸಿದರೇನು ?
ಅವಕೆ ಬೆಸಸೆ ಎನ್ನ ಸ್ವತಂತ್ರವಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೦ ॥

೧೦೫೨

ಹುಟ್ಟಿದ ಮಾನ್ಯರೆಲ್ಲ ದಶವಾಯು ಪಂಚಭೂತ ಸಪ್ತಧಾತು
ಅರಿಷಡ್ವರ್ಗ ಅಷ್ಟಮದಂಗಳನೆಲ್ಲ ಸುಟ್ಟು ಸೂರೆಮಾಡಿ
ನಿನ್ನೊಳು ಬೆರೆದರೆ,
ಅಂಡಜ ಶ್ವೇದಜ ಉದ್ಭಿಜ ಜರಾಯುಜವೆಂಬ ನಾಲ್ಕು ತೆರದ
ಯೋನಿಯಲ್ಲಿ ಹುಟ್ಟಿ, ಚೌರಾಸಿಲಕ್ಷ ಜೀವರಾಸಿಯಾಗಿ
ಪಾಪಕರ್ಮವ ಗಳಿಸಿ ಯಮಂಗೆ ಗುರಿಯಾಗುವರಾರು ?
ಅದು ಕಾರಣ,
ಮೋಡದಮರೆಯ ಸೂರ್ಯನಂತೆ,
ಸ್ಫಟಿಕದ ಘಟದೊಳಗಣ ಜ್ಯೋತಿಯಂತೆ,
ಸರ್ವರ ಆತ್ಮದೊಳು ಮರೆಗೊಂಡುಯಿಪ್ಪ
ತನುಗುಣ ಮನಗುಣ ಅಹಂಕಾರ ಮಾಯಾಮದದ
ತಮಂಧದ ಕತ್ತಲೆಯ ಮರೆಮಾಡಿ
ಕಾಣಗೊಡದೆಯಿಪ್ಪ ಮರಗೊಂಡ ಭೇದವ
ಶಿವಶರಣರು ಬಲ್ಲರುಳಿದ ನರಗುರಿಗಳಿಗಸಾಧ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೧ ॥

೧೦೫೩

ದಶವಾಯುಗಳು ಅವಾವೆಂದಡೆ ಹೇಳುವ ಕೇಳಿರಣ್ಣಾ :
ಪ್ರಾಣ ಅಪಾನ ವ್ಯಾನ ಉದಾನ ಸಮಾನ ನಾಗ
ಕೂರ್ಮ ಕೃಕರ ದೇವದತ್ತ ಧನಂಜಯವೆಂಬ ದಶವಾಯುಗಳು.
ಇವರ ಗುಣಧರ್ಮಕರ್ಮವಂತೆಂದಡೆ, ಅದಕ್ಕೆ ವಿವರ :
ಪ್ರಾಣವಾಯು ಇಂದ್ರನೀಲವರ್ಣ, ಹೃದಯಸ್ಥಾನದಲ್ಲಿದ್ದು
ಅಂಗುಷ್ಠ ತೊಡಗಿ ಪ್ರಾಣಾಗ್ರಪರಿಯಂತರದಲು

ಸಪ್ರಾಣಿಸಿಕೊಂಡು ಉಚ್ಛ್ವಾಸ ನಿಶ್ವಾಸಮನ್ನೈದು
ಅನ್ನ ಜೀರ್ಣಕಾರವಂ ಮಾಡಿಸುತ್ತಿಹುದು.
ಅಪಾನವಾಯು ಹರಿತವರ್ಣ, ಗುದಸ್ಥಾನದಲ್ಲಿದ್ದು
ಮಲಮೂತ್ರಂಗಳ ವಿಸರ್ಜನೆಯಂ ಮಾಡಿಸಿ
ಅಧೋದ್ವಾರವಮಂ ಬಲಿದು ಅನ್ನರಸವ್ಯಾಪ್ತಿಯಂ ಮಾಡಿಸುತ್ತಿಹುದು.
ವ್ಯಾನವಾಯು ಗೋಕ್ಷೀರವರ್ಣ, ಸರ್ವಸಂಧಿಯಲ್ಲಿದ್ದು
ನೀಡಿಕೊಂಡಿದ್ದುದ ಅಸುವಂ ಮಾಡಿಸಿ
ಅನ್ನಪಾನವ ತುಂಬಿಸುತ್ತಿಹುದು.
ಉದಾನವಾಯು ಎಳೆಮಿಂಚಿನವರ್ಣ, ಕಂಠಸ್ಥಾನದಲ್ಲಿದ್ದು
ಸೀನುವ, ಕೆಮ್ಮುವ, ಕನಸುಕಾಣುವ, ಏಳಿಸುವ ಕಾರ್ಯಗೈದು
ವರ್ಧಿಸಿ ರೋಧನಂಗಳಂ ಮಾಡಿಸಿ ಅನ್ನರಸ ಆಹಾರ
ಸ್ಥಾಪನಂಗೈಸುತ್ತಿಹುದು.
ಸಮಾನವಾಯು ನೀಲವರ್ಣ, ನಾಭಿಸ್ಥಾನದಲ್ಲಿದ್ದು
ಆಪಾದಮಸ್ತಕ ಪರಿಯಂತರದಲ್ಲು ಸಪ್ರಾಣಿಸಿಕೊಂಡು
ಇದ್ದಂಥ ಅನ್ನರಸವನು ಎಲ್ಲ ರೋಮನಾಳಂಗಳಿಗೆ
ಹಂಚಿಹಾಕುತ್ತಿಹುದು.
ಇಂತಿವು ಪ್ರಾಣಪಂಚಕವು.
ಇನ್ನು ನಾಗವಾಯು ಪೀತವರ್ಣ, ರೋಮನಾಳಂಗಳಲ್ಲಿದ್ದು
ಚಲನೆಯಿಲ್ಲದೆ ಹಾಡಿಸುತ್ತಿಹುದು.
ಕೂರ್ಮವಾಯು ಶ್ವೇತವರ್ಣ, ಉದರ ಲಲಾಟದಲ್ಲಿದ್ದು
ಶರೀರಮಂ ತಾಳ್ದು ದೇಹಮಂ ಪುಷ್ಟಿಯಂ ಮಾಡಿಕೊಂಡು
ಬಾಯ ಮುಚ್ಚುತ್ತ ತೆರೆಯುತ್ತ ನಯನದಲ್ಲಿ
ಉನ್ಮೀಲನಮಂ ಮಾಡಿಸುತ್ತಿಹುದು.
ಕೃಕರವಾಯು ಅಂಜನವರ್ಣ, ನಾಶಿಕಾಗ್ರದಲ್ಲಿದ್ದು
ಕ್ಷುಧಾದಿ ಧರ್ಮಂಗಳಂ ನೆಗಳಿಸಿ ಗಮನಾಗಮನಂಗಳಂ ಮಾಡಿಸುತ್ತಿಹುದು.
ದೇವದತ್ತವಾಯು ಸ್ಫಟಿಕವರ್ಣ, ಗುಹ್ಯ ಕಟಿಸ್ಥಾನದಲ್ಲಿದ್ದು
ಕುಳ್ಳಿರ್ದಲ್ಲಿ ಮಲಗಿಸಿ, ಮಲಗಿದ್ದಲ್ಲಿ ಏಳಿಸಿ,
ಚೇತರಿಸಿ, ಒರಲಿಸಿ, ಮಾತಾಡಿಸುತ್ತಲಿಹುದು.
ಧನಂಜಯವಾಯು ನೀಲವರ್ಣ, ಬ್ರಹ್ಮರಂಧ್ರಸ್ಥಾನದಲ್ಲಿದ್ದು
ಕರ್ಣದಲ್ಲಿ ಸಮುದ್ರಘೋಷವಂ ಘೋಷಿಸುತ್ತಿಹುದು.
ಮರಣಕಾಲಕ್ಕೆ ನಿರ್ಘೋಷಮಪ್ಪುದು.
ಇಂತಿವು ದಶವಾಯುಗಳು.
ನಿನ್ನ ಕಟ್ಟಳೆಯಿಲ್ಲದೆ ಅಂಗದೊಳು ಚರಿಸ್ಯಾಡಲು

ಈ ದಶವಾಯುಗಳಿಗಳವಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೨ ॥

೧೦೫೪

ರಾಗ : ಸಾರಂಗ

ಪಲ್ಲ : ವಾಯುಮುಖದಲುಲಿವಾವಯದ ವೃಕ್ಷದೊಳು
ಆಯತವಾಗಿಹ ಹಣ್ಣಿನ ರುಚಿಯನು
ಸವಿಯನರಿಯದೆ ಯತಿ ಸಿದ್ಧ ಸಾಧ್ಯರು
ಬಾಯಸವಿಯನುಂಬರು.

ಪದ : ಸರಸಿಜನೆಂಬ ಭೂಮಿಗೆ ವಿಷ್ಣುವೆಂಬ ನೀರಾಗಿ
ನೆರದು ರುದ್ರಾಗ್ನಿಯೆಂದೆಂಬುವ ಮೂಲದ
ಪರಬ್ರಹ್ಮವೃಕ್ಷದ ತುಟ್ಟತುದಿಯಲ್ಲಿಹ
ವರ ಅಮೂರ್ತ ಹಣ್ಣಿನ ಸವಿಗೆರಗೊಡದಲ್ಲಾಡಿ. । ೧ ।

ಐದು ಹತ್ತನು ಕೂಡಿದ ಸ್ವಸ್ಥಾನದಲ್ಲಿ ನಿಂದು ಈ
ರೈದು ಗುಣವ ಕೊಟ್ಟು ಒರಲಿ ಚೇತರಿಸುತಿರಲಿ
ಮೈಗುಂದಿ ಮೂಲೋಕ ಅಸುರಪಡೆಗೆ ಸಿಲ್ಕಿ
ಸಾಯಸಬಡುತಿದೆ ಸಂಸಾರಬಂಧನದೊಳು. । ೨ ।

ವಾಯು ಸರ್ಪನ ನುಂಗಿ ಮೇಲೆ ಗಗನವನಡರಿ
ಛಾಯದ ಮನೆಯೊಳು ನಿಂದು ಚತುಃಕರಣ
ಮಾಯಮದದಹಂಕಾರಗಿರಿಯನೇರಿ
ಆಯಸಗೊಳುತಿದೆ ಬರಿದೆ ಅಜ್ಞಾನದೊಳು. । ೩ ।

ವಾಯುಮುಖದ ತನು ವಾಯುಮುಖದ ಮನವು
ವಾಯುಮುಖದ ಕರಣ ವಾಯುಮುಖದ ಚಿತ್ತ
ವಾಯುಮುಖದ ಬುದ್ಧಿ ವಾಯುಮುಖದ ಆತ್ಮ
ವಾಯುವಿಂಗೆ ಗುರಿಯಾಯಿತ್ತು. । ೪ ।

ಗುಡಿಯಮುಖದಿ ದೇವರ ಕಾಣ್ಬಂದದಿಂ
ಒಡಲ ವಾಯುಮುಖದಿ ಲಿಂಗವ ಕಂಡು
ಕೂಡಿಯೆ ಒಡವೆರದು ಗುರುಸಿದ್ಧಮಲ್ಲಿನಾಥನ ಪಾದ
ದೆಡೆಯ ನಂಬಿಯೆ ನಿತ್ಯನಾದೆನೆಲೆ ದೇವ. । ೫ ।

॥ ೮೩ ॥

## ಅಂತರಂಗದ ಅಷ್ಟಮದನಿರಸನಸ್ಥಲ

ಸೂತ್ರ : ಇಂತು ದಶವಾಯುನಿರಸನಸ್ಥಲವಾಡಿ ಆ ವಾಯುಗಳೊಳು ಹೊಂದಿ ಹೊಂದದೆ ಇರುವ ಮಹಾಮಹಿಮಂಗೆ ಮುಂದ ಅಂತರಂಗದ ಅಷ್ಟಮದ ನಿರಸನಸ್ಥಲವಾದುದು.

೧೦೫೫

ಅಂಗದೊಳಗಣ ಅಷ್ಟಮದಮೋಹಿನಿಗಳನಾರನೂ ಕಾಣೆ.
ಭಂಗಿಯ ಸೊಪ್ಪು ತಿಂದ ಬಳ್ಳಿ ಉಳ್ಳಿಟ್ಟು ಒದರುವಂದದಿ
ದೇಹ ಆತ್ಮದ ತಲೆಗೇರಿ,
ಬರಿದೆ ವೇದಶಾಸ್ತ್ರಪುರಾಣವೆಂದೋದಿ
ಬಲ್ಲವರೆನಿಸಿಕೊಂಬರು ಲಜ್ಜೆಭಂಡರು.
ನುಡಿಯಂತೆ ನಡೆಯಲರಿಯದ ಜಡದೇಹಿಗಳ ಮೆಚ್ಚುವನೆ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೪ ॥

೧೦೫೬

ವೇದಶಾಸ್ತ್ರ ಪುರಾಣಾಗಮಂಗಳನೋದುತ್ತಿದ್ದೇವೆಂಬುತಿಪ್ಪರು,
ವೇದಶಾಸ್ತ್ರ ಪುರಾಣಾಗಮ ಆವೆಂದರಿಯರು.
ವೇದಶಾಸ್ತ್ರಪುರಾಣಾಗಮವನೋದಿ,
ಹೊರಹೊರಗಡೆ ಹೊತ್ತುಗಳೆದು,
ಒಳಗಿಪ್ಪ ಅಷ್ಟಮದವ ನಿರಸನವ ಮಾಡಲರಿಯದೆ
ಕಷ್ಟಬಡುತಿಪ್ಪುದೆನ್ನಯ ಮನವು.
ಲೋಕ ಆಡಿಯಾಡಿ ಕೆಟ್ಟು, ಕೆಲಸಾರಿ ಹೋಗುತಿದೆ,
ಸೃಷ್ಟಿ ಪ್ರತಿಪಾಲಕ ನಿಮ್ಮ ಜ್ಞಾನವ ಮರದು,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೫ ॥

೧೦೫೭

ಮನವು ಮಹಾದೇವನಲ್ಲಿ ವೇದ್ಯವಾದರೆ,
ವೇದಶಾಸ್ತ್ರನಾಮದ ಶಿವನ ಅಂಗ ಲಿಂಗವ ಮಾಡಿ
ಹಿಂಗದೆ ಸದಾ ಪೂಜೆಮಾಡಬಲ್ಲರೆ ಶಾಸ್ತ್ರ.
ಪೂರ್ವವನಳಿದು ಪುನರ್ಜಾತನಾಗಿ ಮಾಯಾಮದ ಹಿಂಗಿಸಿ
ಆ ಜ್ಞಾನ ಅಂಗದೊಳು ಪೂರಿತವಾಗಿರಬಲ್ಲರೆ ಪುರಾಣ.
ಅಂತರಂಗದ ಅಷ್ಟಮದ ಹಿಂಗಿ, ನಿರಂತರನಾಗಿರಬಲ್ಲುದೆ ಆಗಮ.
ಇಂತಪ್ಪ ವೇದಶಾಸ್ತ್ರಪುರಾಣಾಗಮವ ಬಲ್ಲ
ನಿಜದೇಹಿಗಳ ಪಾದಕ್ಕೆ ನಮೋ ನಮೋಯೆಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೬ ॥

೧೦೫೮

ವೇದವನೋದಿ ವ್ಯಾಧಿ ಪರಿಹಾರವಾಗದು.
ಶಾಸ್ತ್ರವನೋದಿ ಸಂಕಲ್ಪ ಹಿಂಗದು.
ಪುರಾಣವನೋದಿ ಪೂರ್ವಕರ್ಮವ ಕಳೆಯಲರಿಯರು.
ಆಗಮವನೋದಿ ಅಂಗದೊಳು ಹೊರಗಿಪ್ಪ
ಅಷ್ಟಮದವ ಕಳೆಯಲರಿಯರು.
ಇಂತು ವೇದಾಗಮಪುರಾಣವೆಂಬನಾದಿಯ ಮಾತ
ಮುಂದಿಟ್ಟುಕೊಂಡು ನಾ ಬಲ್ಲೆನೆಂದು
ಗರ್ವ ಅಹಂಕಾರಿಕೆಯೆಂಬ ಅಜ್ಞಾನಕ್ಕೆ ಗುರಿಯಾಗಿ ಕೆಟ್ಟರು
ಅರುಹಿರಿಯರೆಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೭ ॥

೧೦೫೯

ಅಂತರಂಗದ ಅಷ್ಟಮದ ಆವಾವೆಂದರೆ ಹೇಳುವೆ ಕೇಳಿರಣ್ಣಾ :
ಪೃಥ್ವಿಮದ ಸಲಿಲಮದ ಪಾವಕಮದ ಪವನಮದ
ಅಂಬರಮದ ರವಿಮದ ಶಶಿಮದ ಆತ್ಮಮದವೆಂಬ
ಅಷ್ಟಮೂರ್ತಿಯ ಮದಂಗಳು.
ಇವರ ಗುಣಧರ್ಮಕರ್ಮವೆಂತೆಂದಡೆ, ಅದಕ್ಕೆ ವಿವರ :
ಪೃಥ್ವಿಮದವೆತ್ತಿದಲ್ಲಿ ತನುಗುಣಭರಿತನಾಗಿ,
ಆಭರಣ ಅನುಲೇಪನ ತಾಂಬೂಲವಂ ಬಯಸುತ್ತಿಪ್ಪನು.
ಸಲಿಲಮದವೆತ್ತಿದಲ್ಲಿ ಸಂಸಾರಭರಿತನಾಗಿ,
ಎನಗೆ ಬೇಕು, ಮನೆಗೆ ಬೇಕು, ಮಕ್ಕಳಿಗೆ ಬೇಕು ಎನುತಿಹನು.
ಪಾವಕಮದವೆತ್ತಿದಲ್ಲಿ ಕಾಮರಸಭರಿತನಾಗಿ,
ಕರಸಬೇಕು ನುಡಿಸಬೇಕು ಆಲಿಂಗಿಸಬೇಕು ಎನುತಿಹನು.
ಪವನಮದವೆತ್ತಿದಲ್ಲಿ ಕೋಪಾಗ್ನಿಭರಿತನಾಗಿ,
ಕೊಂದೇನು ತಿಂದೇನು ಸಾಧಿಸೇನು ಭೇದಿಸೇನು [ಎನುತಿಹನು].
ಶಶಿಮದವೆತ್ತಿದಲ್ಲಿ ಚಿಂತಾಭರಿತನಾಗಿ,
ಆದೀತೊ ಆಗದೊ, ಇದ್ದೀತೊ ಇಲ್ಲವೊ ಎನುತಿಹನು.
ಆತ್ಮಮದವೆತ್ತಿದಲ್ಲಿ ಅಹಂಕಾರಭರಿತನಾಗಿ,
ಎನಗಿಂದು ಅಧಿಕರಿಲ್ಲ, ಎನಗಿಂದು ಇದಿರಿಲ್ಲವೆಂದು
ಅಹಂಭಾವದಿಂದ ಅಹಂಕರಿಸುತ್ತಿಹನು.
ಇಂತೀ ಅಷ್ಟಮೂರ್ತಿಮದಂಗಳ ಭ್ರಾಂತಿನ ಬಲೆಯೊಳಿಟ್ಟೆನ್ನನಗಲದಿರು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೮ ॥

## ೧೦೬೦

ಅಷ್ಟತನುಕೋಣೆಯ ಅಷ್ಟಾತ್ಮದ ನಡುವೆ ಕಟ್ಟಿಪ್ಪವೆಂಟಾನೆಯ
ಭೂಮಿಯಾಕಾಶಕ್ಕೆ ಬೆಳೆದಿಪ್ಪ ಒಂಟೆ ನುಂಗಿ,
ಉಗುಳಲಾರದಿಪ್ಪುದಿದೇನು ಚೋದ್ಯವೋ !
ಒಂಟೆಯ ತಲೆಯಲ್ಲಿ ಉರಿಲಿಂಗ ಹುಟ್ಟಿ,
ಎಂಟಾನೆಯ ಸುಟ್ಟು, ಕಂಟಕಂಗಳ ಗೆಲಿದಿಪ್ಪ
ಶರಣರ ಚರಣದರುಶನದಿಂದಲೆನ್ನ ಭವ
ಹಿಂಗುವಂತೆ[ಮಾಡು] ಭವವಿರಹಿತ ತಂದೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೮೯ ॥

## ೧೦೬೧

ಬಸುರಿಲ್ಲದ ಬಯಕೆ ಇದೆತ್ತಣದೊ !
ಶಿಶುವಿಲ್ಲದ ಜೋಗುಳ ತೊಟ್ಟಿಲು ತೂಗುವುದಿದೇನೊ !
ಆಸವಲ್ಲದ ಹೊಳೆಯ ಅಂಬಿಗನ ಹುಟ್ಟುನುಂಗಿ,
ಶಶಿಯಿದ್ದ ಗಗನ ಬಿಸಿಯಾಗಿಪ್ಪುದಿದೇನೊ !
ಮಸಣವ ನುಂಗಿದ ಹೆಣ, ವಿಷವ ನುಂಗಿದ ಸರ್ಪನೊ !
ಕೃಷಿ ಹೊಲನ ನುಂಗಿ, ಬೀಜಕೆ ನೆಲೆಯಿಲ್ಲ.
ಆಸವಲ್ಲದ ಕೊಟ್ಟವ ಬೇಡನ ಬಲೆ ನುಂಗಿ
ಎಸೆವುದಿದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೯೦ ॥

## ೧೦೬೨

**ರಾಗ : ಭೂಪಾಳಿ**

ಪಲ್ಲ : ಅಂಗದೊಳಗಣ ಅಷ್ಟಮೂರ್ತಿ ಮದಂಗಳ
ಹಿಂಗಿ ನಿರ್ಮದನಾದಡವಂ ಸತ್ಯ ನಿತ್ಯ.
ಪದ : ಪೃಥ್ವಿ ಸಲಿಲಂ ಅಗ್ನಿ ಪವನ ಅಂಬರಮದ
ಮೊತ್ತಿಲಿ ರವಿ ಶಶಿ ಆತ್ಮಮದವೆಂದೆಂಬ
ಕೃತ್ಯದಲಿ ಸರಳಿ ಹಲವಂ ಬಯಸಿ ಹಂಬಲಿಸಿ
ಕತ್ತಲನ್ನೆಲ್ಲವ ಕಳೆದು ನಿರ್ಮದನಾಗಿಯೆ
ನಿತ್ಯ ಶ್ರುತ ದೃಷ್ಟ ಅನುಮಾನದಿಂದಲಿ ಶಿವನ
ಆತ್ಮದೊಳು ನೆಲೆಗೊಳಿಸಿ ಅಪಮೃತ್ಯು ಮಾರಿಗಳ
ಒತ್ತರಿಸಿ ಓಂ ನಮಃ ಪ್ರಣಮಪಂಚಾಕ್ಷರಿಯ
ಬಿತ್ತರಿಸುತಿಪ್ಪ ನಿಜ ತಾ ಸತ್ಯ ನಿತ್ಯನು. । ೧ ।

ಅಷ್ಟಾತ್ಮ ಅಷ್ಟತನುವಂತರಂಗದೊಳಿಪ್ಪ
ಅಷ್ಟಮೂರ್ತಿಮದಂಗಳಷ್ಟ, ಅಂತರ್‌ಬಾಹ್ಯ
ಅಷ್ಟಮದ ಅಷ್ಟಾಂಗವಾವರಿಪ ಕರ್ಮಗಳನಿಟ್ಟೊರಸಿ
ಸುಟ್ಟು ಸೂರೆಮಾಡಬಲ್ಲರೆ ಶರಣ
ಇಷ್ಟನೆಲ್ಲವ ಅಂಗದೊಳಹೊರಗ ಬಲಿದು ಈ
ಕಷ್ಟಕಾಯಕ್ಕೆ ಗುರಿಯಾಗಿ ಕರ್ಮದ ಬೆಳೆಯು
ನಷ್ಟವಾಡಲರಿಯದೆ ವೇದ ಶಾಸ್ತ್ರಾಗಮವ
ಎಷ್ಟುದಿನ ಓದಿದರೇನು ವ್ಯರ್ಥ ನಿಜವಿಲ್ಲದಿರಲು. । ೨ ।

ವೇದ ಶಾಸ್ತ್ರಾಗಮ ಪುರಾಣವನೋದಿ ತಾನು
ವೇದಿ ಸಂಕಲ್ಪ ಪೂರ್ವದ ಕರ್ಮ ಅನನ್ಯ
ಬಾಧೆಗೆ ಕಳೆಯಲರಿಯದೆ ಬರಿಯ ದುರ್ನಡೆಯ
ಹಾದಿಗೆಳಸಿಯ ನುಡಿದು ನಡೆಯಲರಿಯದ
ಬಾಧಕತನದೊಡಲ ಹೊರೆವ ಪಿಸುಣನಿಗೆ ಆ
ಸಾಧ್ಯ ಶಿವಮುಕ್ತಿಯೆಂಬುದು ಸ್ವಪನದಲಿಲ್ಲ
ಈ ದೇಹವಿಡಿದು ಗುರುಸಿದ್ಧಮಲ್ಲಿನಾಥನ
ಪಾದಕ್ರಾಂತದಿ ಶಿವಾನಂದಸುಖಿ ಸತ್ಯ ನಿತ್ಯ. । ೩ ।
॥ ೯೧ ॥

## ಬಹಿರಂಗದ ಅಷ್ಟಮದನಿರಸನಸ್ಥಲ

ಸೂತ್ರ : ಇಂತು ಅಷ್ಟಮೂರ್ತಿಯ ಮದಂಗಳ ನಿರಸ[ನ]ವ ಮಾಡಿ, ಅಷ್ಟಮೂರ್ತಿ ಮದಂಗಳೊಳು ಹೊಂದಿ ಹೊಂದದಿರುವ ಮಹಾಮಹಿಮಂಗೆ ಅಷ್ಟಮದಲ್ಲಿ ಬಹಿರಂಗದ ಅಷ್ಟಮದನಿರಸನಸ್ಥಲವಾದುದು.

### ೧೦೬೩

ಕರಿಯ ಕಾಲೊಳಗೆ ಸಿಕ್ಕಿದ ಮರಿಯ ನಾಯಿಯಂತೆ,
ಅಷ್ಟಮದವೆಂಬ ಕರಿಯ ಕಾಲೊಳಗೆನ್ನ ಸಿಗಿಸಿ,
ಮೆಟ್ಟಿ ಮೆಟ್ಟಿ ತುಳಿಸುತ್ತಿದ್ದೆಯಲ್ಲ!
ಅರಸಿನ ಉಪ್ಪನುಂಡು ಆನೆ ಸೇನೆ ದಳ
ಅರಸ[ನ] ಕೈಸೆರೆ ಹಿಡಿವಂತೆ,
ಎನ್ನಾತ್ಮದಲ್ಲಿ ಹುಟ್ಟಿದ ಮದ, ಎನ್ನನೆ ತಿಂದು ತೇಗುತ್ತಿದ್ದವಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೯೨ ॥

### ೧೦೬೪

ಕುಲ ಛಲ ರೂಪ ಯೌವ್ವನ ವಿದ್ಯೆ ಧನ ರಾಜ್ಯ ತಪಮದವೆಂಬ
ಅಷ್ಟಮದಂಗಳ ಬಹಿರಂಗದಲ್ಲಿ ನೆನೆದು

ಬರಿದೆ ಭ್ರಮೆಗೆ ಸಿಲ್ಕಿ ಬಳಲುತ್ತಿಪ್ಪರಯ್ಯ.
ಅದು ಎಂತೆಂದಡೆ :
ಅಂಧಕನ ಮುಂದಣ ಬಟ್ಟೆಯಂತೆ,
ಹುಚ್ಚಾನೆಯ ಮುಂದಣ ಭಿತ್ತಿಯಂತೆ,
ಎನ್ನ ಅನ್ಯೋನ್ಯದ ಬಾಳುವೆಗೆ ಗುರಿಮಾಡಿ
ಎನ್ನ ಕಾಡುತಿದ್ದೆಯಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೯೩ ||

೧೦೬೫

ಹೊಲೆಯೊಳು ಹುಟ್ಟಿ, ಹೊಲೆಯೊಳು ಬೆಳೆದು,
ಕುಲಮದಕೆ ಹೋರಾಡುತಿಪ್ಪರಯ್ಯಾ.
ಅದು ಎಂತೆಂದರೆ :
ಹುಟ್ಟುವುದು ಹೊಲೆ, ಹೊಂದುವುದು ಹೊಲೆ.
ಬಾಹ್ಯದ ಹೊಲೆಯ ಹೇಳೇನೆಂದರಳವಲ್ಲ.
ಕರುಳ ಜಾಳಿಗೆ, ಅಮೇಧ್ಯದ ಹುತ್ತು, ರಕ್ತದ ಮಡು,
ಮಾಂಸದ ಕೊಗ್ಗಸರು, ಕೀವಿನ ಹೊಲಸು,
ಕ್ರಿಮಿಕೀಟಕ ಜಂತಿನ ರಾಸಿ, ಎಲುವಿನ ಹಂಜರು,
ಚರ್ಮದ ಮೇಲುಹೊದಿಕೆ.
ಇಂತೀ ಹೊಲೆಯೊಳು ಜನಿತವಾದ ಕರ್ಮಕಾಯವೆಂದರಿಯದೆ
ಕುಲಮದಕ್ಕೆ ಹೋರಾಡುವರು.
ಕುಲವ ಕೇಳೇನೆಂದರೆ,
ಇಂದ್ರ ಶೂದ್ರ, ಬ್ರಹ್ಮ ವೈಶ್ಯ, ವಿಷ್ಣು ಕ್ಷತ್ರಿಯ,
ಈಶ್ವರ ಬ್ರಾಹ್ಮಣ.
ಸಾಕ್ಷಿ : ''ಪಿತಾಮಹಸ್ತು ವೈಶ್ಯಸ್ಯ ಕ್ಷತ್ರಿಯಸ್ಯ ಪರೋ ಹರಿಃ ।
ಬ್ರಾಹ್ಮಣೋ ಭಗವಾನ್ ರುದ್ರಃ ಇಂದ್ರಃ ಶೂದ್ರಕುಲಸ್ಯ ಚ ॥ ''
ಎಂದುದಾಗಿ, ಇನ್ನುಳಿದ ಮುನಿಕುಲ ಕೇಳ್ವರೆ–
ಹೊಲೆಮಾದಿಗರ ಅಗಸರ ಬಸುರಲ್ಲಿ ಬಂದು
ಶಿವನ ಪೂಜೆಯ ಮಾಡಿ, ಶಿವಕುಲವಾದುದನರಿಯದೆ
ಕುಲಕ್ಕೆ ಹೋರಾಡುತಿಪ್ಪರಯ್ಯಾ.
ಸಾಕ್ಷಿ: ''ಚಾಂಡಾಲವಾಟಿಕಾಯಾಂ ವಾ ಶಿವಭಕ್ತಃ ಸ್ಥಿತೋ ಯದಿ ।
ತತ್‌ಶ್ರೇಣೇ ಶಿವಲೋಕಸ್ಯ ತದ್ಗೃಹಂ ಶಿವಮಂದಿರಂ ॥
ಯಸ್ಯ ಚಿತ್ತಂ ಶಿವೇ ಲೀನಂ ತಸ್ಯ ಜಾತಿಃ ಕರೋತಿ ಕಿಂ ।
ಶಿವಲಿಂಗಶೀಲಬುದ್ಧಿಂ ಕುರ್ವಣಮೇವ ಪಾತಕಂ ॥''
ಎಂದುದಾಗಿ, ಇದುಕಾರಣ,

ಶಿವಕುಲವಾದವರೊಳು ಕುಲವನರಸುವರುಂಟೆ ? ಅರಸಲಿಲ್ಲ
ಅರಸಿದರೆ ಪಾತಕ. ಅದಕ್ಕೆ ಸಾಕ್ಷಿ :
''ಶಿವಕುಲಂ ಶಿವಭಕ್ತಸ್ಯ ಅನ್ಯಾಶ್ರಯೇಷು ನಿಂದಕಃ ।
ಶ್ವಾನಯೋನಿಶತಂ ಗತ್ವಾ ರೌರವಂ ನರಕಂ ವ್ರಜೇತ್ ॥''
ಎಂದುದಾಗಿ, ಪರಮಾತ್ಮಾ, ನಿನ್ನ ಕುಲವಾದವರಿಗೆ ಕುಲವನೆತ್ತಿನುಡಿವ
ಪಾತಕರನೆನಗೊಮ್ಮೆ ತೋರದಿರು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೯೪ ॥

೧೦೬೬

ಛಲಮದವೆಂಬುದು ತಲೆಗೇರಿ
ಗುರುಹಿರಿಯರ ನೆಲೆಯನರಿಯದೆ ಮದಿಸಿಪ್ಪರಯ್ಯ.
ರೂಪಮದ ತಲೆಗೇರಿ ಮುಂದುಗೊಂಡು
ತಮ್ಮ ತನುವಿನ ರೂಪ ಚೆಲ್ವಿಕೆ ನೋಡಿ ಮರುಳಾಗಿ
ಚಿದ್ರೂಪನ ನೆನಹ ಮರೆದರಯ್ಯಾ.
ಯವ್ವನಮದ ತಲೆಗೇರಿ
ಮದಸೊಕ್ಕಿದಾನೆಯಂತೆ ಪ್ರಯಾಸಮತ್ತರಾಗಿ
ಕಾಮನ ಬಲೆಯೊಳಗೆ ಸಿಲ್ಕಿ
ಕಾಮಾರಿನೆನಹ ಮರೆದರಯ್ಯಾ.
ಧನಮದವೆಂಬುದು ತನುವಿನೊಳು ಇಂಬುಗೊಂಡು
ಅರ್ಥಭಾಗ್ಯ ಕಾಡಿ ವ್ಯರ್ಥ ಸತ್ತಿತು ಲೋಕ.
ವಿದ್ಯಾಮದವೆಂಬುದು ಬುದ್ಧಿಗೆಡಿಸಿ
ನಾ ಬಲ್ಲವ ತಾ ಬಲ್ಲವನೆಂದು ತರ್ಕಿಸಿ ಪ್ರಳಯಕಿಳಿದರು.
ರಾಜ್ಯಮದವೆದ್ದು ರಾಜ್ಯವನಾಡಿಸಿ ಬೇಡಿಸಿಕೊಂಡೆನೆಂದು
ರಾಜರಾಜರು ಹತವಾದರು.
ತಪಮದವೆದ್ದು ನಾ ತಪಸಿ ನಾ ಸಿದ್ಧ ನಾ ಯೋಗಿ
ನನಗಾರು ಸರಿಯಿಲ್ಲವೆಂದು
ಅಹಂಕಾರಕ್ಕೆ ಗುರಿಯಾಗಿ ಭವಕ್ಕೆ ಬಂದರು ಹಲಬರು.
ಇಂತೀ ಅಷ್ಟಮದವೆಂಬ ಭ್ರಾಂತು[ವ] ತೊಲಗಿಸಿ
ನಿಭ್ರಾಂತನಾಗಿರಬಲ್ಲರೆ ಶಿವಶರಣನೆಂಬೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೯೫ ॥

೧೦೬೭

ಕುಲಮದಕ್ಕೆ ಹೋರಾಡಿ ಕೆಟ್ಟುದು ಕೋಟಿ.
ಧನಮದಕ್ಕೆ ಹೋರಾಡಿ ಕೆಟ್ಟುದು ಕೋಟಿ.
ವಿದ್ಯಾಮದಕ್ಕೆ ಹೋರಾಡಿ ಕೆಟ್ಟುದು ಕೋಟಿ.

ರಾಜ್ಯಮದಕ್ಕೆ ಹೋರಾಡಿ ಸತ್ತುದು ಕೋಟಿ.
ತಪಮದ[ಕ್ಕೆ] ಹೋರಾಡಿ ಕೆಟ್ಟುದು ಕೋಟಿ.
ನಿನಗಾಗಿ ಕೆಟ್ಟವರನಾರನೂ ಕಾಣೆನಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೯೬ ॥

೧೦೬೮

ಕುಲದಲ್ಲಿ ಶಿವಕುಲವೆಂಬೆ, ಛಲದಲ್ಲಿ ಶಿವಛಲವೆಂಬೆ,
ರೂಪದಲ್ಲಿ ಶಿವರೂಪವೆಂಬೆ, ತಪದಲ್ಲಿ ಶಿವತಪವೆಂಬೆ.
ಇಂತೀ ಅಷ್ಟಮದಮುಖದಲ್ಲಿ ಶಿವಮುಖವಾಗಿಪ್ಪ ಶಿವಶರಣರ
ಚರಣಕ್ಕೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೯೭ ॥

೧೦೬೯

ಕರಿಗಳ ಹೊಯಿದಾಟದಾ ನಡುವಿನ ಮರ ಮುರಿ[ವಂತೆ]
ಆ ಜಗವಾಗಿದೆ ನೋಡಾ.
ಮಾವುತಿಗನ ಅಂಕುಶಕ್ಕಂಜದಾನೆಗಳು ಮನಬಂದಂತೆ ಹರಿವವು.
ಮರದ ಬೇರು ಭೂಮಿಯಾಕಾಶಕ್ಕೆ ಹಬ್ಬಿ,
ಕೊಂಬೆಕೊಂಬೆಯ ಮೇಲೆ ಕುಣಿವ ಅರಗಿಣಿ ಕೋಡಗ.
ಗಿಣಿ ಆನೆಯ ನುಂಗಿ, ಆನೆಯ ಮೇಲೆ ಮಾವುತನ ನುಂಗಿ,
ಭಾನುಕೆ ಹರಿದುದಿದೇನು ವಿಚಿತ್ರ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೯೮ ॥

೧೦೭೦

ರಾಗ : ಕನ್ನಡ ಕಾಂಬೋದಿ.

ಪಲ್ಲ ; ಮದ ಎಂಟರೊಳು ಸಿಲ್ಕಿ ಮೈಮರೆದು ಅಲ್ಲಮನ
ಪಾದಯುಗಳನು ಮರೆಯದಿರು ಮರೆದರೆ ಆತ್ಮ
ಸುಧೆಯ ಹೊರಚೆಲ್ಲಿ ಸುರೆಗಾಟಿಯ ಸವಿವವನ
ವಿಧಿ ಕಂಡಾ ಶಿವನ ಮರೆಯದೆ ನೆನೆ ಆತ್ಮ.
ಪದ : ಕುಲ ಛಲ ರೂಪ ಯವ್ವನ ಧನ ವಿದ್ಯೆ ರಾಜ್ಯ
ಸಲೆ ತಪಮದವೆಂಬ ಎಂಟಾನೆಯವೆ ಆತ್ಮ
ನಿಲಿಸುವನು ದೃಢವೆಂಬ ಕಂಬದೊಳು ಕಟ್ಟಿಯೆ
ಹಲವು ದೆಸೆಗವ ಹರಿಯಗೊಡದೆ ಎಲೆ ಆತ್ಮ
ತಲೆಯೊಳಗೆ ಮೊಟು ಶಿವಜ್ಞಾನಾಂಕುಶವ ಪಿಡಿದು
ಕೊಲ್ಲುತಲಿರು ಕಂಡ್ಯಾ ಮಲಹರನ ಮರೆಯದೆ ಆತ್ಮ । ೧ ।

ಮರವುಮೋಡವು ಕವಿದು ಕರಣೇಂದ್ರಿಯೆಂದೆಂಬ
ಬಿರುಮಳೆಯು ಕರೆವುತೆ ಭೀತಿಯಾಗದೆ ಆತ್ಮ
ಬರಸಿಡಿಲು ಕಾಲನೆಂಬುವುದು ಚಿಟಿಚಿಟಿಲೆನುತ
ಬರುತಲದೆ ಮುಂದೆ ರಕ್ಷಿಯ್ಯಾಗಿರ್ದ ನೀ ಆತ್ಮ
ಅರಿಗಳಲ್ಲದೆ ಹಿತವರಾರಿಲ್ಲ ಕೇಳು ನೀ
ಪರಮಾತ್ಮನನು ಮರೆಯದಿರು ಕಂಡ್ಯಾ ಆತ್ಮ । ೨ ।

ಕಾಳಗದಿ ಕೈಮರದ ಪಟ ಬರೆಸಿ ಮರಣಾರ್ಥಿ
ಯೊಳಗಲಿದನುಮಿಷಗೆ ಮೃತ್ಯು ಕೇಳಲೆ ಆತ್ಮ
ನಾಲಗುಳ್ಳನಕ ಶಿವಸ್ಮೃತಿಯ ಮರೆದರೆ ನಿನಗೆ
ಕಾಲಮೃತ್ಯು ಮಾರಿಗಳು ಉಂಟೇ ಆತ್ಮ
ಹೋರಾಡಿ ಲಿಂಗಾಂಗಸಂಗ ಖಡ್ಗದಲ್ಲಿ ನೀ
ಮೇಲಿಪ್ಪ ಗುರುಸಿದ್ಧ ಮಲ್ಲಿನಾಥನ ನಂಬು ಆತ್ಮ । ೩ ।
॥ ೯೯ ॥

## ಅರಿಷಡುವರ್ಗನಿರಸನಸ್ಥಲ

ಸೂತ್ರ : ಇಂತು ಅಷ್ಟಮದವ ನಿರಸನವ ಮಾಡಿ, ಅಷ್ಟಮದದೊಳು ಹೊದ್ದಿ ಹೊದ್ದದಿರುವ ಮಹಾತ್ಮನಿಗೆ ನವಮದಲ್ಲಿ ಅರಿಷಡ್ವರ್ಗನಿರಸನಸ್ಥಲವಾದುದು.

೧೦೭೧

ಅರಿಷಡುವರ್ಗವೆಂದೆಂಬ ಕರ್ಮಿಗಳ ಬಲಿಯೊಳಿಟ್ಟೆನ್ನನಗಲಿದೆ.
ಅಗಲಿದರೆ, ನಾ ಗೊರಲೆಯ ಹುತ್ತಕ್ಕೆ ಉರಗ ನಡೆಗೊಂಡಂತೆ,
ಅರಸಿಲ್ಲದ ರಾಜ್ಯಕ್ಕೆ ಚೋರರ ಹಾವಳಿಯಂತೆ,
ನೀ ಪಡೆದೆ ತನುವಿಂಗೆ ನೀನನ್ಯನಾಗಿ ಬರಿಯ
ದುರಿತಭ್ರಮೆಗೆನ್ನನಿಟ್ಟು, ಬಿಡುಬೀಸಿ ಕಾಡುತ್ತಿದ್ದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೦ ॥

೧೦೭೨

ಅರಿಗಳಾರುಮಂದಿ ಬರಸಿಡಿಲಂತೆ
ಎರಗಿ ಎರಗಿ ಕಾಡುತಿವೆ.
ಸಿಡಿಲಬ್ಬರ ಅರಗಳಿಗೆಯಾದರೆ,
ಅರಿಷಡುವರ್ಗದಬ್ಬರ ವೇಳೆವೇಳೆಗೆ,
ಬಗೆಯ ನೆನದು ಕಾಡುತಿವೆ.
ಅರಿಗಳನುರುವಿ ಪರಮಪದ[ದ]ಲಿಪ್ಪ ಶರಣರ
ದರುಶನ ಸ್ಪರುಶನದಿಂದಲೆನ್ನ ಬದುಕಿಸಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೧ ॥

೧೦೭೩

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರದ ಸೀಮೆಗಳೆನಿಸಿ
ಯತಿ ಸಿದ್ಧ ಸಾಧ್ಯರೆಲ್ಲ ವ್ರತಭ್ರಷ್ಟರಾದರು.
ಅದು ಎಂತೆಂದೊಡೆ :
ಕಾಮವೆಂಬ ಅಗ್ನಿ, ಕ್ರೋಧವೆಂಬ ಕಾಷ್ಠ, ಲೋಭವೆಂಬ ಗಾಳಿ
ಪುಟಮಾಡಿ, ಮೋಹವೆಂಬರಣ್ಯ, ಮದವೆಂಬ ಕುಳ್ಳು,
ಮತ್ಸರವೆಂಬ ಗಿರಿಗೆ ಬೆಂಕಿ ಹತ್ತಿ,
ಸುಟ್ಟು ಸುಟ್ಟು ಬೆಂದರು ಹಲಬರು, ನೊಂದರು ಹಲಬರು.
ಕಾಮವ ಕಳದು ನಿಃಕಾಮಿಯಾಗಿ,
ಕ್ರೋಧವ ಕಳದು ನಿಃಕ್ರೋಧಿಯಾಗಿ,
ಲೋಭವ ಕಳದು ನಿರ್ಲೋಭಿಯಾಗಿ,
ಮೋಹವ ಕಳದು ನಿರ್ಮೋಹಿಯಾಗಿ,
ಮದವ ಕಳದು ನಿರ್ಮದವಾಗಿ,
ಮತ್ಸರವ ಕಳದು ನಿರ್ಮತ್ಸರರಾಗಿಪ್ಪ
ಚೆನ್ನಬಸವೇಶ್ವರದೇವರು ಪ್ರಭುರಾಯ ಮುಗ್ಧಸಂಗಯ್ಯ
ಘಟ್ಟಿವಾಳಯ್ಯ ಮರುಳಶಂಕರದೇವರು ಮುಖ್ಯವಾದ
ಏಳ್ನೂರಯೆಪ್ಪತ್ತು ಅಮರಗಣಂಗಳ ಪಾದಕ್ಕೆ
ನಮೋ ನಮೋ ಎಂಬೆನಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೨ ॥

೧೦೭೪

ಕಾಮವೆಂಬ ಆನೆಯ ಕಾಲಿಂಗೆ ಹಾಕಿ ತುಳಿಸಿ,
ಕ್ರೋಧವೆಂಬ ಹುಲಿಯ ಬಳಿಯಿಕ್ಕಿ,
ಲೋಭವೆಂಬ ಸರ್ಪನ ಕಚ್ಚಿಸಿ,
ಮೋಹವೆಂಬ ಸಿಂಹ[ನ] ತೊಡರಿಸಿ,
ಮದವೆನಿಪ್ಪ ಮರೆಯಹಿಂಡ ಕವಿಸಿ,
ಮತ್ಸರವೆಂಬ ಭಲ್ಲೂಕಂಗಳನಡರಿಸಿ,
ಭವಾರಣ್ಯದ ಬಟ್ಟೆಯೊಳು ತಿರುವಿ ತಿರುವಿ ಕಾಡುತಿದ್ದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೩ ॥

೧೦೭೫

ನೆನೆವ ಜಿಹ್ವೆ[ಗೆ] ಕಾಮನ ನೆನಸಿದೆ,
ನೋಡುವ ಕಂಗಳಿಗೆ ಕಾಮನ ನೋಡಿಸಿದೆ,
ಕೇಳುವ ಕರ್ಣಕ್ಕೆ ಕಾಮವನೆ ಕೇಳಿಸಿದೆ,
ವಾಸಿಸುವ ನಾಸಿಕಕ್ಕೆ ಕಾಮವನೆ ವಾಸಿಸಿದೆ,

ಮುಟ್ಟುವ ಹಸ್ತಕ್ಕೆ ಕಾಮವನೆ ಮುಟ್ಟಿಸಿದೆ.
ಅದು ಎಂತೆಂದೊಡೆ :
ನೆನೆವ ಜಿಹ್ವೆ ಪರಧನ ಪರಸ್ತ್ರೀಯರ ನೆನೆವುದು,
ನೋಡುವ ಕಂಗಳು ಪರಧನ ಪರಸ್ತ್ರೀಯರನೆ ನೋಡುವವು,
ಕೇಳುವ ಕರ್ಣ ಪರಧನ ಪರಸ್ತ್ರೀಯರ ಪರನಿಂದ್ಯವನೆ ಕೇಳುವವು,
ವಾಸಿಸುವ ನಾಸಿಕ ಪರಧನ ಪರಸ್ತ್ರೀಯರ ವಾಸಿಸುವುದು,
ಮುಟ್ಟುವ ಹಸ್ತ ಪರಧನ ಪರಸ್ತ್ರೀಯರನೆ ಮುಟ್ಟುವುದು.
ಇಂತೀ ಪಂಚೇಂದ್ರಿಯಮುಖದಲ್ಲಿ ಕಾಮವೆ ಮುಖ್ಯವಾಗಿಪ್ಪುದಯ್ಯ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರದ ಸೀಮೆಗೆಳಸದ
ನಿಸ್ಸೀಮ ಶರಣಂಗೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೪ ॥

### ೧೦೭೬

ನುಡಿವೆಡೆಯಲ್ಲಿ ಕ್ರೋಧವನೆ ನುಡಿವರು,
ನೋಡುವೆಡೆಯಲ್ಲಿ ಕ್ರೋಧವನೆ ನೋಡುವರು,
ಕೇಳುವೆಡೆಯಲ್ಲಿ ಕ್ರೋಧವನೆ ಕೇಳುವರು,
ವಾಸಿಸುವೆಡೆಯಲ್ಲಿ ಕ್ರೋಧವನೆ ವಾಸಿಸುವರು,
ಮುಟ್ಟುವೆಡೆಯಲ್ಲಿ ಕ್ರೋಧವನೆ ಮುಟ್ಟಿಸುವರು,
ಇಂತೀ ಪಂಚೇಂದ್ರಿಯಮುಖದಲ್ಲಿ ಕ್ರೋಧವೆ
ಮುಖ್ಯವಾಗಿಪ್ಪರು ನಿಮ್ಮನೆಂತು ಬಲ್ಲರಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೫ ॥

### ೧೦೭೭

ಒಡವೆ ವಸ್ತು ಧನ ಧಾನ್ಯವ ಲೋಭದಿಂದ ಗಳಿಸಿ,
ಮಡದಿಮಕ್ಕಳಿಗೆಂದು ಮಡುಗಿಕೊಂಡು,
ದಾನಧರ್ಮವ ಪರ ಉಪಕಾರಕ್ಕೆ ನೀಡದೆ,
ಹೇಸಿಗುಣದಲ್ಲಿಪ್ಪ ಮಾನವರ ಆಯುಷ್ಯ ವ್ಯಯಿದು
ಕಾಲಮೃತ್ಯು ಬಂದು ಹೊಡೆದೊಯ್ಯು[ವಾಗ],
ಸುಖದಲ್ಲಿರುವಂದಿನ ಮಡದಿ–ಮಕ್ಕಳು ಒಡವೆ–ವಸ್ತು
ಧನಧಾನ್ಯ ಕಾಯುವವೆ ? ಕಾಯವು.
ಎರವಿನ ಸಿರಿ, ಎರವಿನ ಮನೆ, ಎರವಿನ ಮಡದೇರು,
ಎರವಿನ ಮಕ್ಕಳ ನೆಚ್ಚಿಕೊಂಡು
ಊರ ಸೀರಿಂಗೆ ಅಗಸ ಬಡದು ಸಾವಂತೆ,
ಪರಾರ್ಥನರಕದೊಡವೆಯ ನೆಚ್ಚಿ
ನನ್ನತನ್ನದೆಂದು ಲೋಭತ್ವದಿಂದ ಕೆಟ್ಟರು.

ಬರುತೇನು ತರಲಿಲ್ಲ, ಹೋಗುತೇನು ಒಯ್ಯಲಿಲ್ಲ,
ಹುಟ್ಟುತ್ತಲೆ ಬತ್ತಲೆ, ಹೋಗುತಲೆ ಬತ್ತಲೆ.
ಈ ನಷ್ಟಸಂಸಾರವ ನಂಬಿ ಕೆಡದಿರಿ ಮನುಜರಿರ.
ನಂಬಿ ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವ. ॥ ೧೦೬ ॥

೧೧೭೮

ಹೊನ್ನು ಹೆಣ್ಣು ಮಣ್ಣಿನ ಮೇಲೆ ಮೋಹವಿಪ್ಪಂತೆ
ಗುರು ಲಿಂಗ ಜಂಗಮದ ಮೇಲೆ ಮೋಹವಿಲ್ಲ.
ಧನ ಧಾನ್ಯವ ಗಳಿಸುವಂತೆ
ಲಿಂಗ ಜಂಗಮ ಗಳಿಸಲರಿಯರು.
ಗುರು ಲಿಂಗ ಜಂಗಮ ಕಂಡರೆ, ವೈರಿಯ ಕಂಡಂತೆ ಕಾಣ್ಬರು.
ಮುಂದಕ್ಕೆ ಹೋಹ ಬಿಟ್ಟು, ಹೆದರಿಸಿ ಬೆದುರಿಸಿ
ನುಡಿದು ನಿಂದಿಸುವ ಪಾಪಿಯ ಕೊರಳಲ್ಲಿಪ್ಪುದು
ಶಿಲೆಯಲ್ಲದೆ ಲಿಂಗವಲ್ಲ.
ಅದು ಎಂತೆಂದೊಡೆ :
ಆಡಿನ ಕೊರಳಲ್ಲಿ ಮೊಲೆ ಇದ್ದರೇನು
ಅಮೃತವ ಕರೆಯಬಲ್ಲುದೆ ? ಕರೆಯಲರಿಯದು.
ಕಡಿಯಲರಿಯದವ ಹಿಡಿದರೇನಾಯುಧವ ?
ಮಡದಿ ಮಕ್ಕಳು, ಅರ್ಥಭಾಗ್ಯವ ನೆಚ್ಚಿಪ್ಪ ಪಾಪಿಗೆ
ಹೊನ್ನೆ ದೈವ, ಹೆಣ್ಣೆ ದೈವ, ಮಣ್ಣೆ ದೈವ.
ಅವನಿಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ
ಪಾದೋದಕವಿಲ್ಲ ಪ್ರಸಾದವಿಲ್ಲ,
ನಿಮ್ಮ ಕೃಪೆಯೆಂಬುದು ಮುನ್ನವೆ ಇಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೭ ॥

೧೧೭೯

ವೃಥಾ ಸತಿ ಸುತ ಪಿತ ಮಾತೆಯರ ಮದ ತಲೆಗೆ ಹತ್ತಿ
ಉನ್ಮತ್ತದ ಕಾಯ ಸವಿದ ಕಪಿಯಂತೆ,
ಹುಮ್ಮಸದಿಂದುಲಿದು, ಧರ್ಮದಾಯಗುಣವಿಲ್ಲದೆ
ಕರ್ಮಕೆ ಗುರಿಯಾಗಿ ಕೆಟ್ಟರು ಹಲಬರು.
ಮತ್ಸರದ ಮಾಯದ ಬಲೆಯಲ್ಲಿ ಹುಚ್ಚುಗೊಂಡಿಪ್ಪರು.
ಅದು ಎಂತೆಂದೊಡೆ :
ಗುರುವಿನೆಡೆಗೆ ಮತ್ಸರ, ಲಿಂಗದೆಡೆಗೆ ಮತ್ಸರ,
ಜಂಗಮದೆಡೆಗೆ ಮತ್ಸರ, ಹಿರಿಯರೆಡೆಗೆ ಮತ್ಸರ ಮಾಡಿ,

ಭವವೆಂಬ ಮಾರಿಯ ಅಣಲೊಳಗೆ ಸಿಕ್ಕಿದರಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೮ ॥

೧೦೮೦

ಕಾಮವುಳ್ಳವ ಭಕ್ತನಲ್ಲ, ಕ್ರೋಧವುಳ್ಳವ ಮಹೇಶ್ವರನಲ್ಲ,
ಲೋಭವುಳ್ಳವ ಪ್ರಸಾದಿಯಲ್ಲ, ಮೋಹವುಳ್ಳವ ಪ್ರಾಣಲಿಂಗಿಯಲ್ಲ,
ಮದವುಳ್ಳವ ಶರಣನಲ್ಲ, ಮತ್ಸರವುಳ್ಳವ ಐಕ್ಯನಲ್ಲ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವುಳ್ಳನಕ
ಎಂತು ಭಕ್ತನೆಂಬೆ ? ಎಂತು ಮಹೇಶ್ವರನೆಂಬೆ ?
ಎಂತು ಪ್ರಸಾದಿಯೆಂಬೆ ? ಎಂತು ಪ್ರಾಣಲಿಂಗಿಯೆಂಬೆ ?
ಎಂತು ಶರಣನೆಂಬೆ ? ಎಂತು ಐಕ್ಯನೆಂಬೆ ?
ಬರಿಯ ಮಾತಿನ ಬಣಗರು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೦೯ ॥

೧೦೮೧

ಕಾಮವಿಲ್ಲದಾತ ಭಕ್ತ, ಕ್ರೋಧವಿಲ್ಲದಾತ ಮಹೇಶ್ವರ,
ಲೋಭವಿಲ್ಲದಾತ ಪ್ರಸಾದಿ, ಮೋಹವಿಲ್ಲದಾತ ಪ್ರಾಣಲಿಂಗಿ,
ಮದವಿಲ್ಲದಾತ ಶರಣ, ಮತ್ಸರವಿಲ್ಲದಾತ ಐಕ್ಯ.
ಅದು ಎಂತೆಂದೊಡೆ :
ಕಾಮವಿಲ್ಲದ ಭಕ್ತ ಬಸವಣ್ಣ,
ಕ್ರೋಧವಿಲ್ಲದ ಮಹೇಶ್ವರ ಪ್ರಭುರಾಯ,
ಲೋಭವಿಲ್ಲದ ಪ್ರಸಾದಿ ಚೆನ್ನಬಸವೇಶ್ವರದೇವರು,
ಮೋಹವಿಲ್ಲದ ಪ್ರಾಣಲಿಂಗಿ ಘಟ್ಟಿವಾಳಯ್ಯ,
ಮದವಿಲ್ಲದ ಶರಣ ಮೋಳಿಗೆಯ್ಯನವರು,
ಮತ್ಸರವಿಲ್ಲದ ಲಿಂಗೈಕ್ಯಳು ನೀಲಲೋಚನ ತಾಯಿ.
ಇಂತಿವರು ಮುಖ್ಯವಾದ ಏಳನೂರ ಎಪ್ಪತ್ತು ಅಮರಗಣಂಗಳ
ಪಾದಕ್ಕೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೧೦ ॥

೧೦೮೨

ಕಾಮವು ಲಿಂಗಮುಖವಾಗಿ, ಕ್ರೋಧವು ಲಿಂಗಮುಖವಾಗಿ,
ಲೋಭವು ಲಿಂಗಮುಖವಾಗಿ, ಮೋಹವು ಲಿಂಗಮುಖವಾಗಿ,
ಮದವು ಲಿಂಗಮುಖವಾಗಿ, ಮತ್ಸರವು ಲಿಂಗಮುಖವಾಗಿ
ಇಪ್ಪಾತನೆ ನಿರ್ಮೋಹಿ.
ಅದು ಎಂತೆಂದೊಡೆ :

ಪರಧನ ಪರಸ್ತ್ರೀಯ ಕಾಮಿಸುವಂತೆ
ಲಿಂಗವ ಕಾಮಿಸುವುದೆ ಕಾಮ.
ಪರರೊಳು ಕ್ರೋಧಿಸುವಂತೆ ಕರ್ಮವಿರಹಿತನಾದರೆ ಕ್ರೋಧ.
ಅರ್ಥ ಸ್ತ್ರೀಯರ ಮೇಲೆ ಲೋಭವಿಡುವಂತೆ
ಲಿಂಗದೊಡನೆ ಲೋಭವಿಟ್ಟು ಲಿಂಗವ ಕೂಡಬಲ್ಲರೆ ಲೋಭ.
ಅನ್ಯರ ಮೋಹಿಸುವಂತೆ ಲಿಂಗವ ಮೋಹಿಸಬಲ್ಲರೆ ಮೋಹ.
ಅನ್ನಮದ ಪ್ರಾಯಮದ ತಲೆಗೇರುವಂದದಿ
ಲಿಂಗಮದನಾಗಿರಬಲ್ಲರೆ ಮದ.
ಅನ್ಯರೊಡನೆ ಮತ್ಸರಿಸುವಂತೆ ಲಿಂಗದೊಡನೆ ಮತ್ಸರಿಸಿ
ಶರಣಕೃಪೆಯ ಪಡೆಯಬಲ್ಲರೆ ಮತ್ಸರ.
ಇಂತಪ್ಪ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರದಲ್ಲಿ
ಲಿಂಗಮುಖವಾಗಿಪ್ಪ ಶರಣರ ಪಾದಕ್ಕೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೧೧ ॥

### ೧೦೮೩

ಆನೆಯ ನುಂಗಿದ ಹುಲಿ, ಹುಲಿಯ ನುಂಗಿದ ಸರ್ಪ,
ಸರ್ಪನ ನುಂಗಿದ ಸಿಂಹ, ಸಿಂಹನ ನುಂಗಿದ ಮರೆ,
ಮರೆಯ ನುಂಗಿದ ಭಲ್ಲೂಕ ಇಂತಿವರು ಹಕ್ಕಿಯ ಹೊಲನಲ್ಲಿ
ತಮ್ಮ ತಮ್ಮ ವೈರತ್ವದಿಂದಲಿರುವುದಿದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೧೨ ॥

### ೧೦೮೪

ಸೊಂಡಿಲ್ಲದಾನೆ ಹೊಯಿವುದ ಕಂಡೆ,
ಹಲ್ಲಿಲ್ಲದ ಹುಲಿ ತಿಂಬುದ ಕಂಡೆ,
ವಿಷವಿಲ್ಲದ ಸರ್ಪ ಕಚ್ಚುವದ ಕಂಡೆ,
ಮುಖವಿಲ್ಲದ ಸಿಂಹ ನುಂಗುವುದ ಕಂಡೆ,
ಕಣ್ಣಿಲ್ಲದ ಮರೆಯಹಿಂಡು ಕವಿವುದ ಕಂಡೆ.
ಕೈಕಾಲಿಲ್ಲದ ಭಲ್ಲೂಕ ಚಿಕಲಿಗುಲಿಯ ಮಾಡುವುದ ಕಂಡೆ.
ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ! ॥ ೧೧೩ ॥

### ೧೦೮೫

ರಾಗ : ಸಾರಂಗ

ಪಲ್ಲ : ಅರಿಷಡ್ವರ್ಗವೆಂಬ ಕರ್ಮಿಯು ಬಲಿಯೊಳಿಂಬು
ಗುರು ನೀ ಮಾಡಲಿಬೇಡ ಗುಪ್ತದಿಂದಲೆನ್ನ ಕೂಡೆ.

ಪದ : ಕಾಮ ಕ್ರೋಧ ಲೋಭ ಮೋಹ ಮದ ಮತ್ಸರದ ಡಂಬು
ಈ ಮಹಾಬಲೆಯೊಳಿಟ್ಟು ನೀ ಮುನ್ನಗಲಿದೆ ದಿಟ
ತಾಮಸಗುಣವನಳಿದು ಆ ಮಹಾಜ್ಞಾನದೊಳುಳಿದು
ಭೂಮಿಯೊಳಗಿಪ್ಪ ಗಣಸ್ತೋಮದ ಪದಕ್ಕೆ ನಮೋಯೆಂದು ಶರಣು. । ೧ ।

ಕರಿಯ ಸೊಂಡಿಲ ಮುರಿದು ವ್ಯಾಘ್ರನ ಶಿರವನರಿದು
ಉರಗನ ಹೆಡೆಯ ಮೆಟ್ಟಿ ಸಿಂಹನ ಉರಿಯೊಳಿಟ್ಟು
ಮರೆಯ ಕಣ್ಣ ಕಳದು ಭಲ್ಲೂಕನ ಕರದು
ಇರಬಲ್ಲಡಾತನೆ ಸತ್ಯ ಈ ಭುವನದೊಳಗೆ ನಿತ್ಯ. । ೨ ।

ಪರಮನ ಲಿಂಗಮುಖವಾಗಿ ಸತ್ಯಸಂಗ
ಶರಣ ನಿರ್ಮಲದೇಹಿ ಸರ್ವಗಣಕೆಲ್ಲ ಮೋಹಿ
ಗುರು ಪಡುವಿಡಿ ಸಿದ್ಧವರಮಲ್ಲಿನಾಥನೊಳಿರ್ದು
ಹೆರೆಹಿಂಗದಿಪ್ಪ ಜಾಣ ಮೂರುಲೋಕಪ್ರವೀಣ. । ೩ ।

॥ ೧೧೪ ॥

## ಸಪ್ತವ್ಯಸನ ನಿರಸನಸ್ಥಲ

ಸೂತ್ರ : ಇಂತು ಆರು ಷಡುವರ್ಗವನು ನಿರಸನವ ಮಾಡಿ, ಆರು ಷಡುವರ್ಗದೊಳು ಹೊದ್ದಿ ಹೊದ್ದದಿರುವ ಮಹಾಮಹಿಮಂಗೆ ದಶದಲ್ಲಿ ಸಪ್ತವ್ಯಸನ ನಿರಸನಸ್ಥಲವಾದುದು.

**೧೧೮೭**

ವ್ಯಸನವೇಳೆಂಬ, ರಸವ್ಯಸನವೇಳೆಂಬ
ರಸವಿಷಯದ ಮಡುವು ದೆಸೆದೆಸೆಗೆ ಹಬ್ಬಿ,
ವಸುಧೆಯರನೆಲ್ಲರ ಮಸಿಮಣ್ಣ ಮಾಡಿ ಹಸಗೆಡಿಸಿ ಕಾಡುತಿದೆ.
ವ್ಯಸನವೇಳನುರುಹಿ, ಅಸಮಪದದಲ್ಲಿಪ್ಪ
ನಿರ್ವ್ಯಸನ[ನ] ಪಾದಕ್ಕೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೧೫ ॥

**೧೧೮೮**

ಏಳುವ್ಯಸನಂಗಳೆಂಬ ಕಾಳುವಿಷಯಕ್ಕೆನ್ನ
ಮೇಳವಿಸಿ ಕಾಡುತಿದೆ.
ಅದು ಎಂತೆಂದೊಡೆ :
ವಿಪಿನದೊಳು ಹೋಗುವ ಮನುಜರ ಕಣ್ಣಿಂಗೆ
ಕೋಮಳದ ಹೂವಿನಂತಿದ್ದು,
ಮೋಹಿಸಿ ನೆಗವಿದವರ ಹೀರುವ ಪಾಪಿಕೂಸಿನಂತೆ,
ಎನ್ನ ಹೀರಿ ಹಿಪ್ಪೆಯಮಾಡಿ ಕಾಡುತಿವೆ.

ಇವ ನಿರಸನವ ಮಾಡುವ ಮೋಹಿಗಳನಾರನೂ ಕಾಣೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೧೬ ॥

೧೧೮

ಅಹೋ ನಿಲ್ಲಿ ನಿಲ್ಲಿ ವ್ಯಸನಗಳಿರಾ !
ಬಲ್ಲೆ ಬಲ್ಲೆ ನಿಮ್ಮ ಗುಣಂಗಳ.
ಮಲ್ಲರ ಕಾಳಗದ ನಡುವಿನ ಶಿಶುವಿನಂತೆ,
ಎನ್ನ ತುಳಿದೇನೆಂಬಿರಿ.
ಬಿಲ್ಲು ಬಾಣದ ನಡುವಿನ ಹುಲಿಯಂತೆ
ಎನ್ನ ನಿಲಿಸೇನೆಂಬಿರಿ.
ಎಂದರೆ ನಿಮ್ಮ ಹವಣಿಕೆ ಬೇರೆ, ಎನ್ನ ಹವಣಿಕೆ ಬೇರೆ.
ಅದು ಹೇಗೆಂದಡೆ :
ಎನ್ನ ಹವಣಿಕೆ ಶಿವಜ್ಞಾನಾಗ್ನಿಯಿಂದ ನಿಮ್ಮನುರುವಿ
ನಿರ್ವ್ಯಸನಿಯಾದೇನೆಂಬೆ ;
ನಿಮ್ಮ ಹವಣಿಕೆ ಎನ್ನ ಸುಟ್ಟು ಸೂರೆಮಾಡುವೆನೆಂಬಿರಿಯೆಂದರೆ
ನಿಮ್ಮದು ಅನ್ಯದ ಹಾದಿ, ಎನ್ನದು ಪುಣ್ಯದ ಹಾದಿ.
ಎನ್ನ ನಿಮ್ಮ ಹಾದಿಯ ನಡುಮಧ್ಯದಲ್ಲಿಪ್ಪ
ಮನೋಮೂರ್ತಿಮಹಾಲಿಂಗ ಮಾಡಿದಂತೆ ಆಗುವೆ,
ಆಡಿಸಿದಂತೆ ಆಡುವೆ, ನಡೆಸಿದಂತೆ ನಡೆವೆ,
ನುಡಿಸಿದಂತೆ ನುಡಿವೆ, ಕೆಡಸಿದಂತೆ ಕೆಡವೆನ್ನೈ ; ಇನ್ನಂಜೆ.
[ವೈದ್ಯನ] ನಂಬಿ ಸೇವಿಸಿದರೆ ವ್ಯಾಧಿ ಪರಿಹಾರವಾಗುವುದು ;
ಮಂತ್ರವ ನಂಬಿ ಜಪಿಸಿದರೆ ಭೂತ ಪ್ರೇತಗಳ ಭಯ ಪರಿಹಾರ.
ಹಡಗವ ನಂಬಿದವರು ಕಡಲವ ದಾಟುವರು.
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವಿನ
ನಂಬಿದವರು ಭವಸಾಗರವ ದಾಟುವರು. ॥ ೧೧೭ ॥

೧೧೯

ತನುವ್ಯಸನ ಮನವ್ಯಸನ ಧನವ್ಯಸನ ರಾಜ್ಯವ್ಯಸನ
ಉತ್ಸಾಹವ್ಯಸನ ವಿಶ್ವಾಸವ್ಯಸನ ಸೇವಕವ್ಯಸನವೆಂಬ ಸಪ್ತವ್ಯಸನಂಗಳು.
ಇವಕ್ಕೆ ವಿವರ :
ತನುವ್ಯಸನವೆತ್ತಿದಲ್ಲಿ ಪುತ್ರಮಿತ್ರಕಳತ್ರಯಾದಿಗಳ ಬಯಸುತಿಹನು.
ವಿಶ್ವಾಸವ್ಯಸನವೆತ್ತಿದಲ್ಲಿ ವಿಶ್ವಾಸದಿಂದ
ಪರರಿಗೆ ಬೋಧಿಸಿ ಭೇದಿಸೇನೆನುತ್ತಿಹನು.
ಸೇವಕವ್ಯಸನವೆತ್ತಿದಲ್ಲಿ
ಹೋಗಬೇಕು ಬರಬೇಕು ತರಬೇಕು ಕೋಟಲೆಗೊಳಬೇಕು ಎನುತಿಹನು.

ಇಂತೀ ಸಪ್ತವ್ಯಸನಂಗಳಲ್ಲಿ ನೀನಲ್ಲದನ್ಯವಿಲ್ಲವಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೧೮ ॥

೧೦೯೦

ತನುವ್ಯಸನವೆತ್ತಿದಲ್ಲಿ ತರಣಿಕೋಟಿತೇಜಪ್ರಕಾಶನ ನೆನೆವೆನು.
ಮನವ್ಯಸನವೆತ್ತಿದಲ್ಲಿ ಮನೋಮೂರ್ತಿಯ ನೆನೆವೆನು.
ಧನ ವ್ಯಸನವೆತ್ತಿದಲ್ಲಿ ದಯಾಕರುಣಕೃಪಾಲನ ನೆನೆವೆನು.
ರಾಜ್ಯವ್ಯಸನವೆತ್ತಿದಲ್ಲಿ ವಿಷಕಂಠನ ನೆನವೆನು.
[ಉತ್ಸಾಹ ವ್ಯಸನವೆತ್ತಿದಲ್ಲಿ ರಜತಗಿರಿನಿವಾಸನ ನೆನೆವೆನು.
ವಿಶ್ವಾಸವ್ಯಸನವೆತ್ತಿದಲ್ಲಿ ಉರ್ವಿಪಾಲನ ನೆನೆವೆನು.]
ಸೇವಕವ್ಯಸನವೆತ್ತಿದಲ್ಲಿ ಶರಣಗಣರಕ್ಷಾಮಣಿಯ ನೆನೆವೆನು.
ಇಂತೀ ಸಪ್ತವ್ಯಸನಂಗಳ ಮುಖದಲ್ಲಿ ತರಣಿಕೋಟಿಪ್ರಕಾಶ,
ಮನೋಮೂರ್ತಿ, ದಯಾಕರುಣಕೃಪಾಲ,
ರಜತಗಿರಿನಿವಾಸ, ಉರ್ವಿಪಾಲ, ವಿಷಕಂಠ,
ಶರಣಗಣರಕ್ಷಾಮಣಿ ಶಿವಾಯ ಪರಾಯ ಭವಾಯಯೆಂದು
ಭವಸಾಗರವ ದಾಂಟಿ ನಿತ್ಯನಾಗಿರ್ದೆ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವ. ॥ ೧೧೯ ॥

೧೦೯೧

ತನುವಿನ ಹಂಬಲವ ಮರೆದಂಗೆ ತನುವ್ಯಸನವೆಲ್ಲಿಯದೋ ?
ಮಾಯದ ಬೇಳುವೆಯನೂರಸಿದಾತಂಗೆ ಮನವ್ಯಸನವೆಲ್ಲಿಯದೋ ?
ಶಿವಜ್ಞಾನದೊಳಿಂಬುಗೊಂಡಾತಂಗೆ ಧನವ್ಯಸನವೆಲ್ಲಿಯದೋ ?
ಶಿವಲಿಂಗ ವಿಶ್ವಾಸದಿ ಅನುಮಿಷದೃಷ್ಟಿಯಿಟ್ಟಾತಂಗೆ
ವಿಶ್ವಾಸವ್ಯಸನವೆಲ್ಲಿಯದೋ ?
ಶಿವಲಿಂಗ ಸಾಧ್ಯಮಾಡಿ ಕರುಣಕೃಪೆ ಪಡೆದಾತಂಗೆ
ಸೇವಕವ್ಯಸನವೆಲ್ಲಿಯದೋ ?
ಇಂತೀ ಸಪ್ತವ್ಯಸನಂಗಳಮುಖದಲ್ಲಿ
ಶಿವತನು ಶಿವಮನ ಶಿವದ್ರವ್ಯ ಶಿವರಾಜ್ಯ
ಶಿವಉತ್ಸಾಹ ಶಿವವಿಶ್ವಾಸ ಶಿವಸೇವಕವೆಂದಿಪ್ಪ
ಶರಣರ ಚೆಮ್ಮಾವುಗೆಯ ಕಿರುಗುಣಿಕೆಯ ಮಾಡೆನ್ನನಿರಿಸಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨೦ ॥

೧೦೯೨

ಅನ್ನದ ಗೊಡವಿಲ್ಲದಾತಂಗ ಆರಂಭದ ಗೊಡವಿಯುಂಟೇ ?
ಖೇಚರ ಪವನಸಾಧಕಂಗ

ಭೂಚರರದಲಡಿಯಿಡುವ ಬಯಕೆಯುಂಟೇ ?
ವಜ್ರಾಂಗಿಯ ತೊಟ್ಟಿಪ್ಪಾತಂಗೆ ಬಾಣದ ಭಯವುಂಟೇನಯ್ಯಾ ?
ನಿರ್ವಾಯಕಂಗೆ ಮಾಯದ ಹಂಗುಂಟೇ ?
ನಿರ್ವ್ಯಸನಿಗೆ ವ್ಯಸನದ ಹಂಗುಂಟೇ ?
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥನೊಳು
ಬೆರೆದಾತಂಗೆ ಅನ್ಯದೈವದ ಹಂಗುಂಟೇ ? ॥ ೧೨೧ ॥

### ೧೦೯೩

ಏಳು ಸಮುದ್ರ ಉಕ್ಕಿ ಜಂಬೂದ್ವೀಪವ ಮುಸುಕದ ಮುನ್ನ
ಧರೆಯ ಹೊತ್ತ ಸರ್ಪ[ನ] ಫಣೆ ಉಡುಗುವುದ ಕಂಡೆ.
ಕೂರ್ಮ ಗಜ ಶಿರವಲುಗುವುದ ಕಂಡೆ.
ನಾಗಲೋಕ ದೇವಲೋಕವನೊಂದು ಕಪ್ಪೆ ನುಂಗಿ
ಪಿರಿಯತಡಿಯಲೊದರುವುದ ಕಂಡೆ.
ಇದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨೨ ॥

### ೧೦೯೪

ಉರು ಬಡತನಕ್ಕೆ ಪಾಳಿ (?) ಧನಿಕನಾಗುವುದ ಕಂಡೆ.
ಧನವ ಬೇಡುವ ಧನಿಕನ ನುಂಗುವುದ ಕಂಡೆನು.
ರಾಜ್ಯ[ವ]ನಾಳೇನೆಂಬ ಅರಸು
ತೇಜಿಯ ಕಡಿವಾಣದೊಳಡಗುವುದ ಕಂಡೆ.
ಉತ್ಸಾಹವ ಬೇಡುವ ಹೆಣ್ಣು
ಉನ್ಮತ್ತದಕಾಯೊಳಡಗಿದ್ದುದ ಕಂಡೆನು.
ವಿಶ್ವಾಸದಿಂದ ಕುಡಿದ ಅಮೃತ ವಿಷವಾಗುವುದ ಕಂಡೆನು.
ಸೇವಕ ಒಡೆಯನ ಕಾಣದೆ
ಬಟ್ಟೆಬಟ್ಟೆಯಲರಸುವುದ ಕಂಡೆನು.
ಇದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨೩ ॥

### ೧೦೯೫

ಶೂಲದ ಮೇಲಣ ಕುಣಪಂಗಳು
ತಾಳು ತಾಳಮರದ ಮೇಲೆ ಕುಣಿವುದ ಕಂಡೆನು.
ಏಳು ಸಮುದ್ರದೊಳಿಪ್ಪ ಕಪ್ಪೆಯಧ್ವನಿ
ಮೂರುಲೋಕ ಕೇಳಿಸುವುದ ಕಂಡೆನು.
ಹಣನ ತಿನಬಂದ ನಾಯಿ ಕಪ್ಪೆಯ ಗೆಣತನದಿಂದ

ಅಲಗಿನ ಮೇಲೆ ಅಡಿ ಇಡುವುದ ಕಂಡೆನು.
ಇದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ! ॥ ೧೨೪ ॥

೧೧೯೬

ರಾಗ : ವರಾಳಿ

ಪಲ್ಲ: ಸಪ್ತವ್ಯಸನವೆಂಬ ಪಾಪಿಯ ಕೂಸಿಂಗೆ
ಒಪ್ಪಿಸಿಕೊಟ್ಟು ನೀನಗಲಬೇಡವೊ ಗುರುವೆ.

ಪದ : ಉರಿಗೆ ಕೊಟ್ಟ ಅರಗಿನಂದದಿ, ಕಿರಾತನ ಕೈಯ
ಲಿರುವ ಎರಳೆಯ ಮರಿಯಂತೆ, ಪಂಜರದೊಳಗ
ಣರಗಿಣಿಯ ಮಾರ್ಜಾಲಗೆ ಸೆರೆಗೊಡುವಂತೆ,
ಪರಿಯಲೆನ್ನನು ಮನಭ್ರಮೆಯ ಸಪ್ತವ್ಯಸನಕ್ಕೆ
ಗುರಿಮಾಡಿ ನೀ ಎನ್ನ ಅಗಲಿಹೋಗದೆ ಕರುಣಾ
ಕರ ರಕ್ಷಿಸಯ್ಯಾ ಕೃಪೆಯಿಂಧ ರಕ್ಷಿಸು ಸದ್ಗುರುರಾಯ. । ೧ ।

ತನು ಮನ ವ್ಯಸನ ಸಮಸ್ತಂಧಕಾರದ
ಧನವ್ಯಸನದ ಬಯಕೆಯ ರಾಜ್ಯವ್ಯಸನದ
ವಿನಯದುತ್ಸಾಹ ವ್ಯಸನವಿಶ್ವಾಸದಿಂದ ಪರರ
ಅನುದಿನ ಆಶ್ರಯಿಸುವ ಸೇವಕ ವ್ಯ
ಸನಗುಣವ ಕೊಟ್ಟು ಸಪ್ತವ್ಯಸನಕ್ಕೆ ಗುರಿ ಮಾಡಿ
ತ್ರಿಣಯ ಸದ್ಗುರುರಾಯ ಅಗಲದಿರಯ್ಯ. । ೨ ।

ಓಡಿನಲ್ಲುಂಟೆ ಕನ್ನಡಿಯ ನೋಟವು ? ಭವ
ಕಾಡೊಳು ತಿರುಗಿಯೆ ಸತ್ತು ಹುಟ್ಟುತಿಹೆ ;
ಮೂಢನಪಾಯವ ಕಾಯೋ ದೇವ, ನಿಮ್ಮೊ
ಳಾಡಲು ಹುರುಳಿಲ್ಲ, ಎನ್ನ ಗುಣವನು
ನೋಡಿ ಕಾಡದೆ ಬಿಡಬೀಸದೆ ಕುಮಾರನ
ಕೂಡಿಕೊ ಗುರು ಪಡುವಿಡಿ ಸಿದ್ಧಮಲ್ಲೇಶ. । ೩ ।
॥ ೧೨೫ ॥

## ಪಂಚೇಂದ್ರಿಯನಿರಸನಸ್ಥಲ

ಸೂತ್ರ : ಇಂತು ಸಪ್ತವ್ಯಸನವ ದೂಡಿ ಸಪ್ತವ್ಯಸನಂಗಳೊಳು ಹೊದ್ದಿ ಹೊದ್ದದಿರುವ ಮಹಾ ಮಹಿಮಂಗೆ ಏಕಾದಶದಲ್ಲಿ ಪಂಚೇಂದ್ರಿಯನಿರಸನಸ್ಥಲ [ವಾದುದು].

೧೧೯೭

ಪಂಚೇಂದ್ರಿಯೆಂಬ ಕರ್ಮಿಗಳ ಉರಿಯ ಪ್ರಪಂಚಿಗೆ ಗುರಿಯಾಗಿ
ಯತಿ ಸಿದ್ಧ ಸಾಧ್ಯರೆಲ್ಲ ಮತಿಭ್ರಷ್ಟರಾದರು.

ಅದು ಎಂತೆಂದೊಡೆ :
ಹಾಳೂರ ಹೊಕ್ಕರೆ ನಾಯ ಜಗಳವ ಕಂಡಂತೆ,
ಶಿವಜ್ಞಾನವಿಲ್ಲದಂಗಹಾಳಿಂಗೆ ಪಂಚೇಂದ್ರಿಯವೆಂಬ,
ನಾಯಿ ಬೊಗಳೆ ಹಂಚು[ಹರಿಯಾದರು] ಕೆಲಬರು.
ಇಂತೀ ಪಂಚೇಂದ್ರಿಯಂಗಳು ಸುಟ್ಟು,
ಲಿಂಗೇಂದ್ರಿಯಮುಖವಾಗಿಪ್ಪ ಶರಣನ
ಏನೆಂದು ಉಪಮಿಸುವೆನಯ್ಯಾ ?
ಆತನಂಗವೆ ಶಿವನಂಗ, ಶಿವನಂಗವೆ ಶರಣನಂಗ,
ಸಾಕ್ಷಿ : ''ಶಿವಾಂಗಂ ಶರಣಾಂಗಂ, ಚ ಶರಣಾಂಗಂ ಶಿವಾಂಗಕಂ ।
ದ್ವಯೋರಂಗಯೋರ್ಭೇದಃ ನಾಸ್ತಿ ಸಾಕ್ಷಾತ್ ಪರಶಿವಃ ॥''
ಎಂದುದಾಗಿ, ನಿಮ್ಮ ಶರಣರ ದರುಶನದಿಂದಲೆನ್ನ ಬದುಕಿಸಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨೬ ॥

**೧೦೯೮**

ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣವೆಂಬ ಪಂಚೇಂದ್ರಿಯಂಗಳು.
ಸಾಕ್ಷಿ : ''ಶ್ರೋತ್ರತ್ವಕ್‌ನೇತ್ರಜಿಹ್ವಾಶ್ಚ ಘ್ರಾಣಂ ಪಂಚೇಂದ್ರಿಯಾಸ್ತಥಾ ।
ಆಕಾಶ ಅಗ್ನಿವಾಯುರ್ಶ್ಚ ಅಪ್‌ಪೃಥ್ವೀ ಕ್ರಮೇಣ ಚ ॥''
ಎಂದುದಾಗಿ, ಇವಕ್ಕೆ ವಿವರ :
ಶ್ರೋತ್ರೇಂದ್ರಿಯಕ್ಕೆ ಆಕಾಶವೆಂಬ ಮಹಾಭೂತ,
ದಶದಿಕ್ಕುಗಳೆ ಅಧಿದೈವ, ಅದಕ್ಕೆ ಶಬ್ದ ವಿಷಯ.
ಅಕ್ಷರಾತ್ಮಕ ಅನಕ್ಷರಾತ್ಮಕ ಇವು ಎರಡು ಅಕ್ಷರ ಭೇದ.
ತ್ವಗಿಂದ್ರಿಯಕ್ಕೆ ವಾಯುವೆಂಬ ಮಹಾಭೂತ, ಚಂದ್ರನಧಿದೇವತೆ
ಅದಕ್ಕೆ ಸ್ಪರುಶನ ವಿಷಯ ; ಮೃದು ಕಠಿಣ ಶೀತ ಉಷ್ಣ
ಇವು ನಾಲ್ಕು ಸ್ಪರುಶನ ಭೇದ.
ನೇತ್ರೇಂದ್ರಿಯಕ್ಕೆ ಅಗ್ನಿಯೆಂಬ ಮಹಾಭೂತ, ಸೂರ್ಯನಧಿದೇವತೆ.
ಅದಕ್ಕೆ ರೂಪ ವಿಷಯ ; ಶ್ವೇತಪೀತ ಹರಿತ
ಮಾಂಜಿಷ್ಟ ಕೃಷ್ಣ ಕಪೋತವರ್ಣ ಇವಾರು ರೂಪಭೇದ.
ಜಿಹ್ವೇಂದ್ರಿಯಕ್ಕೆ ಅಪ್ಪುವೆಂಬ ಮಹಾಭೂತ, ವರುಣನಧಿದೇವತೆ.
ಅದಕ್ಕೆ ರಸ ವಿಷಯ ; ಮಧುರ ಆಮ್ಲ ತಿಕ್ತ
ಕಟು ಕಷಾಯ ಲವಣ ಇವಾರು ರಸಭೇದ.
ಘ್ರಾಣೇಂದ್ರಿಯಕ್ಕೆ ಪೃಥ್ವಿಯೆಂಬ ಮಹಾಭೂತ.
ಅಶ್ವಿನಿ ಅಧಿದೇವತೆ, ಇದಕ್ಕೆ ಗಂಧ ವಿಷಯ ;
ಸುಗಂಧ ದುರ್ಗಂಧವೆರಡು ಗಂಧ ಭೇದ.
ಇಂತೀ ಪಂಚೇಂದ್ರಿಯೆಂಬ ಶುನಕ

ಕಂಡಕಡೆಗೆ ಹರಿಯುತಿವೆ.
ಈ ಪಂಚೇಂದ್ರಿಯವ ನಿರಸನವ ಮಾಡಿ, ಪಂಚವದನನೊಳು
ಬೆರದಿಪ್ಪ ನಿರ್ವಂಚಕ ಶರಣಂಗೆ
ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨೭ ॥

೧೦೬೯

ಮೋಷನ ದನಿಗೇಳಿ ಹುಲಿ ಬಲಿಯ ಬೀಳ್ವಂತೆ,
ಕರ್ಣ ಹರನಿಂದ್ಯ ಗುರುನಿಂದ್ಯವ ಕೇಳುವುದು.
ಶಿವಮಂತ್ರ ಶಿವಸ್ತೋತ್ರ ಶಿವಾಗಮ ಶಿವಸೂತ್ರವ ಕೇಳದೆ
ಕರ್ಮಗುರಿಯಾಗುವದು ಈ ಶ್ರೋತ್ರೇಂದ್ರಿಯ.
ಕರಿಯು ಸ್ಪರುಶನೇಂದ್ರಿಯದಲ್ಲಿ ಮಡಿದಂತೆ,
ಪರಧನ ಪರಸ್ತ್ರೀ ಪರರನ್ನವ ಮುಟ್ಟೇನೆಂಬುದೀ ಹಸ್ತ,
ಶಿವಪೂಜೆ ಶಿವಲಿಂಗವ ಮುಟ್ಟಿ ಶಿವಜಪವನೆಣಿಸದೆ
ಅನ್ಯಕ್ಕೆ ಗುರಿಯಾಯಿತ್ತು ತ್ವಗಿಂದ್ರಿಯ.
ದೀಪವ ಕಂಡು ಮುಟ್ಟುವ ಪತಂಗನಂತೆ ನಯನೇಂದ್ರಿಯ.
ಪರಧನ ಪರಸ್ತ್ರೀಯ ಆಟ ನೋಟ ಪರಾನ್ನವ ನೋಡಿ
ಮರುಳಾಗಿ ಶಿವಲಿಂಗ ಶಿವಪೂಜೆಗೆ
ಅನುಮಿಷದೃಷ್ಟಿಯಿಡದೆ ಕೆಡುವುದೀ ನಯನೇಂದ್ರಿಯ.
ಕೀಳುಮಾಂಸದ ಸವಿಗೆ ಗಂಟಲಗಾಣವ ಬೀಳುವ ಮೀನಿನಂತೆ ಜಿಹ್ವೇಂದ್ರಿಯ.
ಹರನಿಂದೆ ಗುರುನಿಂದೆ ಪರನಿಂದ್ಯವ ಮಾಡಿ,
ಕಾಳಗವಾರ್ತೆಯನಾಡಿ,
ಪುರಾತರ ವಚನ ಶಿವಸ್ತುತ್ಯ ಶಿವಮಂತ್ರ ಶಿವಾಗಮವನೋದದೆ
ಕರ್ಮಕ್ಕೆ ಗುರಿಯಾಗುವದೀ ಜಿಹ್ವೇಂದ್ರಿಯ.

ಕಂದ : ಶ್ರೀಕಂಠ ಶಿವನ ನೆನೆಯದೆ
ಲೌಕಿಕ ವಾರ್ತೆಯನೆ ಪೊರಹುತ್ತಿರ್ದಪುದೆನ್ನೀ
ಬಾಕುಳಿಕ ಜಿಹ್ವೆಯಿದರಿಂ
ನಾ ಕರನೊಂದೆ ಪ್ರಸನ್ನಶಂಕರಲಿಂಗ । ೧ ।

ಎನ್ನಯ ನಾಲಿಗೆಯ ನಿಮ್ಮಯ
ಮನ್ನಣೆಯ ಮಹಾನುಭಾವಿಗಳ ಚರಣಕ್ಕಂ
ಹೊನ್ನಹಾವುಗೆಯ ಮಾಡೆಲೆ
ಪನ್ನಗಕಟಕಾ ಪ್ರಸನ್ನಶಂಕರಲಿಂಗ । ೨ ।

ಕಾಳಗದ ವಾರ್ತೆಯಂ ಸ್ಮರ
ಲೀಲೆಯ ಪದಗಳ ಗಳಹುತಿರ್ದಪುದೆನ್ನೀ.

ನಾಲಗೆಯಂ ಬೇರುಸಹಿತಂ
ಕೀಳುವರಿಲ್ಲಾ ಪ್ರಸನ್ನಶಂಕರಲಿಂಗ । ೩ ।

ಈ ತೆರದಿ ಸಂಪಿಗೆಯ ಕುಸುಮದ ಪರಿಮಳಕೆರ[ಗಿ]ದಳಿ ಮೃತವಾದಂತೆ
ನಾಸಿಕೇಂದ್ರಿಯ ಮಾಯಾದುರ್ಗಂಧಚಂದನವಾಸನೆಗೆಳಸಿ
ಸ್ವಾನುಭಾವಸದ್ವಾಸನೆಯ ಮರೆದು
ಕರ್ಮಕ್ಕೆ ಗುರಿಯಾಯಿತ್ತೀ ಘ್ರಾಣೇಂದ್ರಿಯ.
ಇಂತೀ ಪಂಚೇಂದ್ರಿಯಂಗಳೆಂಬ ಶುನಿ ಕಂಡಕಡೆಗೆ ಹರಿದು
ಭಂಗಬಡಿಸಿ ಕಾಡುತಿದೆ, ಇವಕಿನ್ನೆಂತೊ ಶಿವಶಿವ, ಇವಕ್ಕಿನ್ನೆಂತೊ ಹರಹರ.
ಇವ ನಿರಸನವ ಮಾಡೇನೆಂದರೆನ್ನಳವಲ್ಲ,
ನಿಮ್ಮ ಧರ್ಮ ಕಾಯೋ ಕಾಯೋ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨೮ ॥

೧೧೦೦

ಮೊಲನ ಕಂಡರೆ ಶ್ವಾನಂಗಳು ತುಡುಕುವಂತೆ.
ಹೊನ್ನು ಹೆಣ್ಣು ಮಣ್ಣು ಮೂರೆಂಬ ಮೊಲಕ್ಕೆ
ಪಂಚೇಂದ್ರಿಯಂಗಳೆಂಬ ಬೇಟೆಯ ನಾಯಿಗಳು
ತೊಡರುತ ಎನ್ನಬಿಡು ತನ್ನ ಬಿಡು ಎನ್ನುತ್ತಲಿವೆ.
ನೊಂದೆನಿವರ ದಾಳಿಯಲ್ಲಿ, ಬೆಂದೆನಿವರ ದಾಳಿಯಲ್ಲಿ,
ನೊಂದು ಬೆಂದು ಕುಂದಿ ಕುಸಿವನ 'ಕಂದ ಬಾ' ಎಂದು
ಎನ್ನ ತಲೆದಡಹೊ ಭವವಿರಹಿತ ತಂದೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೨೯ ॥

೧೧೦೧

ಹರನಿಂದೆ ಗುರುನಿಂದೆ ಪರನಿಂದ್ಯವ ತೊರೆದು
ಶಿವಕೇಳಿಯೊಳಿಂಬುಗೊಂಡ ಕರ್ಣಕ್ಕೆ
ಕರ್ಣೇಂದ್ರಿಯವೆಲ್ಲಿಹುದೋ ?
ಕಾಮವೆಂಬ ಶೀತ, ಕ್ರೋಧವೆಂಬ ಉಷ್ಣ,
ಮೋಹನ ಮುದ್ದುಮುಖ ಮೊಲೆ,
ಅಂಗನೆಯೆಂಬ ಮೃದು, ವಿಷಯಾತುರವೆಂಬ ಕಠಿಣವ ಮುಟ್ಟದೆ,
ಲಿಂಗ ಮುಟ್ಟಿ ಲಿಂಗವ ಪೂಜಿಸಿ ಲಿಂಗವ ಮೋಹಿಪ
ಹಸ್ತಕ್ಕೆ ತ್ವಗಿಂದ್ರಿಯವೆಲ್ಲಿಯದೋ ?
ಶ್ವೇತ ಪೀತ ಹರಿತ ಮಾಂಜಿಷ್ಟ, ಮಾಣಿಕ್ಯ ಕಪೋತವರ್ಣವೆಂಬ
ಷಡುರೂಪವ ಕಳೆದು ಲಿಂಗದ ಷಡುರೂಪಮೊಳಿಂಬುಪಡೆದುಕೊಂಡು
ಅನುಮಿಷದೃಷ್ಟಿ ಇಟ್ಟ ನಯನಕ್ಕೆ ನೇತ್ರೇಂದ್ರಿಯವೆಲ್ಲಿಯದೊ ?

ತಿಕ್ತ ಕಟು ಕಷಾಯ ಮಧುರ ಆಮ್ಲ ಲವಣವೆಂಬ
ಷಡುರುಚಿಗೆಳಸದೆ, ಲಿಂಗಾನುಭಾವಾಮೃತವ
ಸೇವಿಪ ಜಿಹ್ವೆಗೆ ಜಿಹ್ವೇಂದ್ರಿಯವೆಲ್ಲಿಯದೋ ?
ಗಂಧ ದುರ್ಗಂಧವನಳಿದು ಸ್ವಾನುಭಾವಸದ್ವಾಸನೆಗೆಳಸಿಪ್ಪ
ನಾಸಿಕಕ್ಕೆ ಘ್ರಾಣೇಂದ್ರಿಯವೆಲ್ಲಿಯದೋ ?
ಇಂತೀ ಪಂಚೇಂದ್ರಿಯಮುಖದಲ್ಲಿ ಪಂಚವದನನ ಮುಖವಾಗಿಪ್ಪ
ಶಿವಶರಣರು ಲಕ್ಷಗಾವುದದಲ್ಲಿದ್ದರೂ ಇರಲಿ,
ಅಲ್ಲಿಗೆನ್ನ ಮನವಮಂ ಹರಿಯಬಿಟ್ಟು ನಮಸ್ಕರಿಸುವೆನು.

ಕಂದ : ಲಕ್ಷಯೋಜನದೊಳಾಡೆ
ಮುಕ್ಕಣ್ಣನ ಶರಣನೈದನೆನೆ ಕೇಳ್ದೊಲವಿಂ
ದಿಕ್ಕನೆ ಮನಮಂ ಕಳುಹಿ ಪ
ದಕ್ಕೆರಗುವ ನಾಂ ಪ್ರಸನ್ನಶಂಕರಲಿಂಗ.

ಈ ಕಾರಣ ನಿಮ್ಮ ಶರಣರ ನೆನೆದು ನೋಡಿ ವಾರ್ತೆಯ ಕೇಳಿ
ಮನಮುಟ್ಟಿ ದರುಶನವ ಮಾಡಲೆನ್ನ ಭವ ಹಿಂಗಿತ್ತು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೦ ॥

೧೧೦೨

ಸರ್ಪಕಡಿದು ಸತ್ತ ಹೆಣನೆದ್ದು ಸುಳಿದಾಡುವುದ ಕಂಡೆ.
ಎಡೆ ಐದರೊಳಿಪ್ಪ ಆಗಳಿಗೊಂದೊಂದು ಭೂತನ ಕಂಡೆ.
ಭೂತನ ಗಣವಿಡಿದ ಕಾಗೆಯಕುಳ ತಿಂಬುದ ಕಂಡೆ.
ಮಡುವಿಗೆ ಜಾಲವಬೀಸುವ ಮಾಯದ ಜಾಲಗಾರ
ಚಂದ್ರಸೂರ್ಯರ ಒಡಲಂ ಹೊಕ್ಕು ನೆಗೆದಾಡದ ಮುನ್ನ
ಉಡುಪತಿ ಗಾದ ಬಿದ್ದ, ಕಸಪತಿ ತೊದಳಿಗನಾದ,
ಗಂಧಪತಿ ಮಂದುಗಕ್ಕೊಳಗಾದ,
ಮುನ್ನ ಸ್ವರುಷನಪತಿ ಪರಿಯಟಂಗೊಂಡ.
ಇಂತೀ ಎಳೆದಾಟ ಮುಂದುಗೊಳ್ಳದ ಮುನ್ನ
ಯತಿಗಳ ಯತಿತನ ಹಾರಿತ್ತು; ಸಿದ್ಧರ ಸಿದ್ಧತ್ವ ಕೆಟ್ಟಿತ್ತು.
ಶಿವಯೋಗಿಗಳ ಯೋಗತ್ವ ಕೆಡುವುದ ಕಂಡೆನಿದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೧ ॥

೧೧೦೩

ರಾಗ : ವರಾಳಿ

ಪಲ್ಲ : ಅನ್ಯವಿಷಯ ಪಂಚೇಂದ್ರಿಯವೆಂದೆಂಬ
ಕುನ್ನಿಗಳ ಬಲಿಯೊಳಗಿರಿಸಬೇಡವೊ ಗುರುವೆ.

ಪದ : ಹರಗುರು ನಿಂದೆಕಾರರ ಕಾವ್ಯಕಥೆಗಳ
ಒರೆದು ಕೇಳುವರೆನ್ನವೆರಡು ಕಿವಿಯು ತಾ
ಹಿಡಿದಾಕಾರಕೆ ಬಾಯದೆರದು ರಂಜಿಸುತಲಿಹೆ
ಪರಮಾತ್ಮನ ಶ್ರುತಿ ಮಂತ್ರಾಗಮಂಗಳ
ವಿರಚಿಸಲೊಲ್ಲದೆ ಕುರಿಯ ದನಿಗೆ ಹುಲಿ
ಶರೀರವನಳಿದಂತೆ ಕರ್ಣೇಂದ್ರಿಯ ದೇವ. । ೧ ।

ಅನ್ಯಗೋಷ್ಠಿಯ ಪರನಿಂದ್ಯಗಳ ನುಡಿವರೆ
ಎನ್ನಾ ನಾಲಗೆ ಹರಿವುದುರುಗನಂತೆ
'ಓನ್ನಮಃಶಿವಾಯ'ಯೆಂಬಮಂತ್ರವ ನೆನೆಯದಲ್ಲಿ
ತನ್ನ ತಾ ಹಿಂದಕ್ಕೆ ಸೇದುತಲಿದೆ ಕರ್ಮಿ
ಗಿನ್ನಂತೂ ಹೇಳಾ ಗುರುವೆ ಮಾಂಸದ ಸವಿಗೆ ಮೀನು
ತನ್ನ ದೇಹವನಳಿದಂತೆ ಜಿಹ್ವೇಂದ್ರಿಯವು. । ೨ ।

ಪರಧನ ಪರಸ್ತ್ರೀಯರಾಟ ನೋಟಗಳನು
ನೆರೆ ನೋಡುವರೆನ್ನ ನಯನ ತಿಗುರಿಯಂತೆ
ತಿರುಗುತಲಿಗೆ ಸದಾ ಅನ್ಯಾಯವನಾಶ್ರಯಿಸಿ
ಹರಗುರುಲಿಂಗ ಪೂಜೆಗೆ ಅನುಮಿಷದೃಷ್ಟಿ
ಇರಿಸಿ ನೋಡದೆ ತಾ ಪತಂಗ ಹಾರಿಯೆ ಬಂದು
ಉರಿಯೊಳು ಮಡಿದಂತೆ ನಯನೇಂದ್ರಿಯ ದೇವಾ. । ೩ ।

ಜೂಜು ಪಗಡಿ ಲೆತ್ತನಾಡಿ ಪರನಾರಿಯರ
ವಾಜಿಯಿಂದಲಿ ಹಿಡಿದೆಳೆವರೆ ದ್ವಿಹಸ್ತ
ರಾಜಿಸುತಿದೆ ರಮ್ಯವಾಗಿ, ಹರಗುರುಲಿಂಗದ
ಪೂಜೆಯ ಮಾಡೇನೆಂದರೆ ಕೈ ಏಳದೆ ಕರ್ಮ
ಭಾಜನದೊಳು ಸಿಲ್ಕಿ ಸ್ಪರ್ಶೇಂದ್ರುದಿ ಕರಿ
ತಾ ಜೀವಮೃತವಾದಂತೆ ತ್ವಗಿಂದ್ರಿಯ. । ೪ ।

ಪೂಸಿಪ ಗಂಧ ಚಂದನ ಪರಿಮಳಗಳ
ವಾಸಿಸುವಂತೆ ಲಿಂಗಾನುಭವದ ಜ್ಞಾನ
ವಾಸನೆಯರಿಯದೆ ಸಂಪಿಗೆಗಳಿ ಮಡಿದಂದದಿ
ನಾಸಿಕೇಂದ್ರಿಯ ಇವೈದರಿಂದಲಿ ಮಹಾ
ದೋಷಕೇಡಾದೆ ಪಡುವಿಡಿ ಸಿದ್ಧಮ
ಲ್ಲೇಶಾ ಎನ್ನನು ಕಾಯಿದು ರಕ್ಷಿಸು ಕರುಣಾಂಬುವೆ. । ೫ ।
॥ ೧೩೨ ॥

## ಮನೋವಿಕಾರನಿರಸನಸ್ಥಲ

ಸೂತ್ರ : ಇಂತು ಪಂಚೇಂದ್ರಿಯವೆಂಬ ಪಂಚಮಹಾಪಾಪಿಗಳ ಗುಣ ಧರ್ಮಕರ್ಮವ ಹೊದ್ದದೆ ಇರುವ ಆ ಪಂಚೇಂದ್ರಿಯನಿರಸನವ ಮಾಡಿಪ್ಪ ಶಿವಶರಣರಿಗೆ ದ್ವಾದಶದಲ್ಲಿ ಮನೋವಿಕಾರನಿರಸನಸ್ಥಲವಾದುದು.

೧೧೦೪

ದ್ಯುಮಣಿ ಇಲ್ಲದ ಸಭೆಕೆ ತಮದ ಹಾವಳಿ ನೋಡಾ.
ರಾಜರಿಲ್ಲದ ರಾಜ್ಯಕ್ಕೆ ತಸ್ಕರರ ಹಾವಳಿ ನೋಡಾ.
ಕದವಿಲ್ಲದ ಗೃಹಕೆ ಶುನಿ ಮಾರ್ಜಾಲಂಗಳ ಹಾವಳಿ ನೋಡಾ.
ಹಾಳೂರಿಂಗೆ ಧೂಳದ ಹಾವಳಿ ನೋಡಾ.
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ.
ನೀನಿಲ್ಲದಂಗಕ್ಕೆ ಮನೋವಿಕಾರದ ಹಾವಳಿ ನೋಡಾ. ॥ ೧೩೩ ॥

೧೧೦೫

ವಿಕಾರದೊಳು ವಿಕಾರ ಕಪಿವಿಕಾರ.
ವಿಕಾರದೊಳು ವಿಕಾರ ಸುರೆಗುಡಿದವನ ವಿಕಾರ.
ವಿಕಾರದೊಳು ವಿಕಾರ ದತ್ತೂರಿಯ ಸವಿದ ವಿಕಾರ.
ಇಂತೀ ಎಲ್ಲಕೆ ಗುರು ಮನೋವಿಕಾರವೆಂಬುದು.
ಸುರೆ ದತ್ತೂರಿಯ ಸವಿದವನದು ಒಂದಿನಕಾದರೂ ಪರಿಹಾರವಾಗುವದು.
ಮನೋವಿಕಾರದ ದತ್ತೂರಿ ಅನುದಿನ ತಲೆಹೇರಿಕೊಂಡು ಮುಳುಗಿತ್ತು.
ಭೂಲೋಕದ ಯತಿ ಸಿದ್ಧ ಸಾಧ್ಯರ ಕೊಂಡು ಮುಳುಗಿತ್ತು.
ದೇವಲೋಕದ ದೇವಗಣ ಅಜಹರಿಸುರರ
ಜನನಮರಣವೆಂಬ ಅಣಲೊಳಗಿಕ್ಕಿತ್ತು ಮನೋವಿಕಾರ.
ಮನೋವಿಕಾರದಿಂದ ತನುವಿಸಕಾರ, ಮನೋವಿಕಾರದಿಂದ ಮಾಯಾಮದ.
ಮನೋವಿಕಾರದಿಂದ ಪಂಚಭೂತ ಸಪ್ತಧಾತು
ದಶವಾಯು ಅರಿಷಡ್ವರ್ಗ ಅಷ್ಟಮದ ಪಂಚೇಂದ್ರಿಯ,
ಅಂಗದೊಳು ಚರಿಸುವ ಜೀವ ಪ್ರಾಣ ಕರಣಾದಿ
ಗುಣಂಗಳೆಲ್ಲಕ್ಕೆಯು ಮನವೆ ಮುಖ್ಯ ನೋಡಾ.
ಮನೋವಿಕಾರವನಳಿದು ಶಿವವಿಕಾರದೊಳು ಇಂಬುಗೊಂಡಾತ
ಮೂರುಲೋಕಾರಾಧ್ಯನೆಂಬೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೪ ॥

೧೧೦೬

ರಾಜಂಗೆ ಮಂತ್ರಿ ಮುಖ್ಯವಾದಂತೆ
ಬಾಹ್ಯಪ್ರಾಣಕ್ಕೆ ಮನವೆ ಮುಖ್ಯ ನೋಡಾ.

ಮನ ಮುಖ್ಯವಾಗಿ ಸರ್ವಪಾಪ ಅನ್ಯಾಯವ ಗಳಿಸಿ,
ಕಾಲಂಗೆ ಗುರಿಮಾಡಿ, ಜನನ ಮರಣಕ್ಕೆ ತರಿಸಿ,
ಮುನ್ನ ಕಾಡುತ್ತಿದೆ.
ಮನವ ನಿರಸನವ ಮಾಡುವರೆನ್ನಳವೆ ?
ನಿನ್ನಳವ ಎನ್ನೊಳಿತ್ತು ಮನ್ನಿಸಿ ಕಾಯಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೫ ॥

೧೧೦೭

ನೊಂದೆನೀ ಮನದಿಂದಲಿ, ಬೆಂದೆನೀ ಮನದಿಂದಲಿ,
ಕಂದಿದೆನೀ ಮನದಿಂದಲಿ, ಕುಂದಿದೆನೀ ಮನದಿಂದಲಿ.
ಮನವೆಂಬ ಸಂದೇಹದ ಕೀಲ ಕಳೆದು,
ನಿಸ್ಸಂದೇಹಿಯಾಗಿಪ್ಪ ನಿರಾಭಾರಿ ಶರಣಂಗೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೬ ॥

೧೧೦೮

ಎಲ್ಲಿ ನೋಡಿದರೆನ್ನಯ ಮನವಿಪ್ಪುದು.
ಜಗದಗಲದಲ್ಲಿ ನೋಡಿದರೆನ್ನ ಮನವಿಪ್ಪುದು.
ಸಪ್ತಸಾಗರದಿಂದತ್ತತ್ತವೆನ್ನಯ ಮನವಿರುತ ಚರಿಸುತಿಪ್ಪುದು.
ಸಾಕ್ಷಿ ಗ್ರಂಥ :
''ಮಕಾರಂ ಮರುತರೂಪಯೋ ನಕಾರಂ ನಾಹಂ ಕೋಹಂ । (?)
ಅಕ್ಷರದ್ವಯ ಮನೋ ನಾಮ ಸರ್ವದಾ ಸಮಾಶ್ರೀತಂ ॥''
ಎಂದುದಾಗಿ, ಮನವೆಂಬ ವಾಯು ಹರಿದು ಗಳಿಗೆ ಗಳಿಗೆಗೆ
ಒಂದೊಂದು ನೆನೆನೆನೆದು ಹಂಬಲಿಸಿ ಹತವಾಗುತಿದೆ.
ಮನದ ಗಂಧೆಯ ತುರುಸಿದರೆ ಸುಖವಾಗುತಿದೆ.
ಸುಖದಿಂದ ದುಃಖ, ದುಃಖದಿಂದ ಪ್ರಳಯಕ್ಕಿಕ್ಕಿ ಕೊಲ್ಲುತಿದೆ ಮನ.
ಮನವೆಂಬ ಮಾಯದ ಬಲೆಯಲೆನ್ನ ಕೆಡವದೆ ಉಳುಹಿಕೊಳ್ಳಯ್ಯ
ನಿರ್ಮಳ ನಿರ್ಮಳಾತ್ಮಕ ಜಗದಾರಾಧ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೭ ॥

೧೧೦೯

ಸ್ಥೂಲದಲ್ಲಿಪ್ಪುದೆನ್ನಯ ಮನ, ಸೂಕ್ಷ್ಮದಲ್ಲಿಪ್ಪುದೆನ್ನಯ ಮನ,
ಕಾರಣದಲ್ಲಿಪ್ಪುದೆನ್ನ ಮನ.
ಅದೆಂತೆಂದರೆ :
ಸ್ಥೂಲದಲ್ಲಿಪ್ಪುದ ಕಂಡು ಸೂಕ್ಷ್ಮದಲ್ಲಿ ನೆನೆದು,
ಕಾರಣದಲ್ಲಿ ಹೇಳುತ್ತಿಪ್ಪುದೆನ್ನಯ ಮನ.

ದಿವ್ಯಧ್ಯಾನದಂತೆ ಹಲವು ಪರಿಗಾದರೂ
ರತಿಸುತಿದೆ ಎನ್ನಯ ಮನ.
ಮರ್ಕಟನ ದಾಳಿಯಿಂದ ಸಾಯಸಬಡುತಿದ್ದೆನಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೮ ॥

## ೧೧೧೦

ಹಳ್ಳ ಮೇರೆದಪ್ಪಿದರೆ ಇಳಿವುದು, ಹೊಳೆ ಮೇರೆದಪ್ಪಿದರೆ ಇಳಿವುದು,
ಸಮುದ್ರ ಮೇರೆದಪ್ಪಿದರೆ ಇಳಿವುದು.
ಮನ ಮೇರೆದಪ್ಪಿದರೆ ಪರಿ ಇಳಿದು ಕಾಡುತ್ತಿದ್ದ.
ಅದು ಎಂತೆಂದರೆ :
ಹಳ್ಳ ಮೇರೆದಪ್ಪಿದರೆ ಸಂಗಡ ಕಾಯಿಯಿಂದ ನಡೆವುದು.
ಹೊಳೆ ಮೇರೆದಪ್ಪಿದರೆ ಹರುಗೋಲು ನಡವುದು.
ಸಮುದ್ರ ಮೇರೆದಪ್ಪಿದರೆ ಛತ್ರ ನಡವುದು.
ಮನ ಮೇರೆದಪ್ಪಿದರೆ ಎನ್ನ ಕೊಂಡು ಮುಳುಗಿತ್ತು.
ಈ ಮನ ವೇದ ಶಾಸ್ತ್ರ ಆಗಮದ ಕಟ್ಟಳೆಗೆ ನಿಲ್ಲುವುದ ?
ನಿಲ್ಲದು.
ಓದುವುದು ಮನ, ಹೇಳುವುದು ಮನ, ಕೇಳುವುದು ಮನ,
ಕೇಳಿ ನರಕಕ್ಕಿಳಿವುದು ಕೆಡುವುದು ಮನ.
ಈ ಮನದಂದುಗದ ದಾಳಿಯಲ್ಲಿ ನೊಂದು ಬೆಂದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೩೯ ॥

## ೧೧೧೧

ಉಳಿ ಬಾಚಿಂಗೆ ಹರಿಯದ ಕೊರಡು,
ಕೊಡಲಿ ಕುಡುಗೋಲಿಂಗೆ ಹರಿವುದೆ ?
ಪುರಾತರ ವಚನಾಮೃತವೆಂಬ ಉಳಿಯಲ್ಲಿ ಕಡಿದು
ಬಾಚಿಯಲ್ಲಿ ಕೆತ್ತಿದರೆ ನಾಚದೆ ಮನ ?
ವೇದಾಗಮವೆಂಬ ಕೊಡಲಿ ಕುಡುಗೋಲಿಂಗೆ ಹರಿವುದೆ ? ಹರಿಯದು.
ಕೊರಡುಮನ ಜರಡುಮನ ಜಾಳುಮನ ಹಾಳುಮನ
ಕೋಳುಮನ ಕುಪಿತಮನ ಸರ್ವಚಾಂಡಾಲ ಮನದ
ಮೇಳದ ಬಲೆಯೊಳು ಬಿದ್ದು ಭಂಗಬಡುತ್ತಿದ್ದೆನ್ನೈ
ನಿರ್ಭಂಗ ನಿರ್ಲೇಪ ನಿಜಗುರು ನಿಶ್ಚಿಂತ ಸ್ವಯಂಭೂ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೪೦ ॥

## ೧೧೧೨

ಉದಯವಾಯಿತೆಂದು ಉದರಕ್ಕೆ ಕುದಿವುದೀ ಮನ.
ರಾತ್ರಿಯಾದುದ ಕಂಡು ವಿಷಯಕ್ಕೆ ಕುದಿವುದೀ ಮನ.

ಉದಯ ಅಸ್ತಮಾನವೆಂಬ ಕಾನನದ ನಡುವೆ ಸಿಲ್ಕಿ
ಸುತ್ತುತ್ತಿಪ್ಪುದು ಕಣ್ಗಾಣದಂಧಕನಂತೆ.
ಸದಾ ಚಣಚಣಕೊಂದೊಂದನೆಣಸಿನೆಣಸಿ ಕಾಡೂದೀ
ಬಣಗುಮನ, ಜಣಗುಮನ, ಠಕ್ಕಮನ
ಟುಕ್ಕಮನ, ಕೋಪಿಮನ, ಜಾಪಿಮನ.
ಜಾಪಿಮನದ ತಾಪಸದೊಳು ಸಿಲ್ಕಿ ನಾ ಪರದೇಶಿಯಾದೆನಯ್ಯಾ.
ಮನವೆಂಬ ಮಾರಿಗೆನ್ನನೊಪ್ಪಿಸದೆ ಕಾಯೊ ಕಾಯೊ ಕರುಣಾಳುವೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೪೧ ||

೧೧೧೩

ವನದೊಳಿಪ್ಪ ಕಪಿ ವನವನುಂಗಿ, ವನದ ತಿಳಿಗೊಳನನುಂಗಿ,
ತಿಳಿಗೊಳದೊಳಗಿಪ್ಪ ಕಮಲವ ನುಂಗಿ,
ಕಮಲದ ಪರಿಮಳವ ನುಂಗಿ, ವಾಯುವಿನೇಣಿಯಿಂದ
ಆಕಾಶಕ್ಕೆ ಹಾರಿದುದಿದೇನು ಚೋದ್ಯ ಹೇಳಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೪೨ ||

೧೧೧೪

ಪಕ್ಕವಿಲ್ಲದ ಹಕ್ಕಿ ಅಕ್ಕಜನ ಪಂಜರವ ಗೂಡುಮಾಡಿಕೊಂಡು
ದಿಕ್ಕುದಿಕ್ಕನ್ನೆಲ್ಲ ಚರಿಸ್ಯಾಡಿ ಬರುತಿಪ್ಪದು.
ಆ ಪಕ್ಷಿಯ ನೆರಳು ಬೀಳೆ ಯತಿ ಸಿದ್ಧ ಸಾಧ್ಯ ಯೋಗಿಗಳ
ಯೋಗತ್ವ ಯತಿತನ ಸಿದ್ಧತ್ವ ಕೆಟ್ಟು
ಕೆಲಸಾರಿ ಹೋಗುವುದ ಕಂಡೆ.
ಪಕ್ಕವಿಲ್ಲದ ಹಕ್ಕಿಯ ಕೊಂದು
ಅಕ್ಕಜನ ಪಂಜರವ ಮುರಿದುದಲ್ಲದೆ ನಿರ್ಮನನಲ್ಲ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೪೩ ||

೧೧೧೫

ನೀರ ನೆಳಲ ಮಧ್ಯದಲ್ಲಿ ಹಾರುವ ಭ್ರಮರನ ಗರಿಯ ಗಾಳಿಯಲ್ಲಿ
ಮೂರುಲೋಕವೆಲ್ಲ ತಲೆಕೆಳಗಾದುದ ಕಂಡೆ.
ನೀರನೆಳಲಂ ಕಡಿದು ಹಾರುವ ಭ್ರಮರನ ಗರಿಯ ಮುರಿವಲ್ಲದೆ
ನಿರ್ಮನ ನಿರ್ಮಳ ನಿಶ್ಚಿಂತ ನಿಃಶಂಕ ನಿಃಕಳಂಕ
ಶರಣನಲ್ಲ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೪೪ ||

೧೧೧೬

ಗೂಡಿನೊಳಗಿಪ್ಪ ಪಕ್ಷಿಗೆ ಗೂಡಿನ ಹೊರಗೆ ಪಕ್ಕ ಬಂದಿವೆ.
ನೋಡಿದರೆ ಪಕ್ಷಿ ಒಳಗೆ, ರೆಕ್ಕೆ ಹೊರಗೆ.

ಪಕ್ಷಿಯ ಎರಡು ರೆಕ್ಕೆಯೊಳು, ಒಂದು ರೆಕ್ಕೆಯೊಳು ಚಂದ್ರನಡಗಿಪ್ಪ,
ಒಂದು ರೆಕ್ಕೆಯೊಳು ಸೂರ್ಯನಡಗಿಪ್ಪ.
ಪಕ್ಷಿಯ ಕೊಂದು ಗೂಡಿನ ಹೊರಗಣ ರೆಕ್ಕೆಯೊಳಿಪ್ಪ
ಚಂದ್ರ ಸೂರ್ಯರ ಶೀತ ಉಷ್ಣವ ತೆಗೆಸಿ
ರೆಕ್ಕೆಯ ಮುರಿದಾತನಲ್ಲದೆ ಶಿವಶರಣನಲ್ಲ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥೧೪೫॥

೧೧೧೭

ಪಲ್ಲ : ಮನವಿಕಾರ ಸುಟ್ಟಿದನು ಮನವಿಕಾರದ ಭ್ರಮೆಯ ಹೋರಟೆಯಾಗದೆಂ
ಬನುವಿನಿಂ ತ್ರಿಲೋಕವೆಲ್ಲ ಭಂಗಿತರಾಗಿ
ಜನನ ಮರಣಕೆ ಬರುವ ಮನವು ನಿರ್ಮನವಾಗಲವ ಸತ್ಯ ನಿತ್ಯ ಶರಣ.

ಪದ : ಹರಿದು ಮರ್ಕಟನ ವಿಕಾರಕಿಂದಲಿ ಮೇಣು
ಸುರೆ ಸವಿದವನ ವಿಕಾರವದರಿಂದ ಥ
ತ್ತುರಿಯ ಸೇವಿಸಿದವನ ವಿಕಾರಯಿವು ತ್ರಿವಿಧಕೆ ಗೌರವಂ ಮನವಿಕಾರ
ಚರಿಯ ಮದದ ಅಮಲು ತಲೆಗೇರಿ ತಾಮಸದಲಿಂ
ಗಿರಿಯಂಥಕನವೋಲಿನಂತೆ ದೇವತಾ ಸತ್ಯ
ಪುರುಷರುಂ ಶಿವಜ್ಞಾನ ಹೊಲಬನರಿಯದ ಕೆಟ್ಟುದನೇನ ಹೊಗಳ್ವೆ ನಾನು । ೧ ।

ಹರಿಯ ಮುಂದುಗೆಡಿಸಿ ಅಜನ ಶಿರವ ಕಳೆಸಿ
ಸುರನ ಮೈಯೋನಿಯಂ ಮಾಡಿ ದೇವರ್ಕಳಂ
ನೆರೆ ಕೆಡಿಸಿ ಯತಿ ಸಿದ್ಧಸಾಧ್ಯರಲ್ಲರ ಸರೆಯ ಹಿಡಿದು ಭಂಗಿತರ ಮಾಡಿ
ಧರೆಯ ಮನುಜರ ತಿಂದು ತೇಗಿ ಕಾಡುವ ಮನವ
ನಿರಸನಮಾಡಿ ನಿರ್ಮೋಹಿಯಾಗಿಹ ಸತ್ಯ
ಶರಣರಡಿಧೂಳಿಯ ಚಮ್ಮಾವುಗೆಯ ಪೊರೆವೆನೆನಗಿದೆ ಸತ್ಯ ಮುಕ್ತಿ ಕಂಡಾ ।೨।

ಇಳೆಪತಿಗೆ ಮಂತ್ರಿ ತಾ ಮುಖ್ಯವಾದಂತೆ ಕಾಯ
ದೊಳು ಚರಿಸುವ ಜೀವ ಪ್ರಾಣದ್ವಯ ದಶವಾಯು
ಗಳು ಅಷ್ಟಮದ ಸಪ್ತವ್ಯಸನ ಅರಿವರ್ಗ ಚತುರಂತಃಕರಣವಿಪ್ಪೆಲ್ಲಕೆ
ಸಲೆ ಮನಂ ಮುಖ್ಯವಾಗಿಯೂ ಪಾಪ ಅನ್ಯಾಯವ
ಗಳಿಸಿ ಯಮನಿಂಗೆ ಗುರಿಮಾಡಿ ಬಂಧಿಸಿ ಜನರ
ಕೊಲ್ಲಿಸುತಿಹ ವಿಧಿಗಂಜಿ ನಿಮ್ಮ ಮೊರೆಹೊಕ್ಕನಲೆ ಕಾಯೋ ಶಂಭುವೆ. । ೩ ।

ಚಣಚಣಕ್ಕೆ ಪಾತಾಳಲೋಕಕ್ಕೆಯ್ದುವ ಮನಂ
ಚಣಚಣಕ್ಕೆ ಆಕಾಶದತ್ತ ಹಾರುವ ಮನಂ
ಚಣಚಣಕ್ಕೆ ಸಪ್ತಸಮುದ್ರವ ಚರಿಸಿಬರುವುದೀ ಮನಮರುತ ಸರ್ವಾಂಗದಿ
ಚಣಕೊಂದು ಬುದ್ಧಿಯ ನೆನದು ಕಾಡುವ ಮನದ

ಗುಣದಿಂದ ನಾ ಕರ್ಮಶರಧಿಯೊಳು ಮುಣಗಿದೆನು
ತ್ರಿಣಯ ನೀ ಕೈವಿಡಿದು ತೆಗೆದು ರಕ್ಷಿಸು ಎನ್ನ ಕರುಣಾಳು ದುರಿತಹರನೆ । ೪ ।

ಮನದಿಂದೆ ನೊಂದೆ ನಾ ಮನದಿಂದೆ ಬೆಂದೆ ನಾ
ಮನದಿಂದ ಕಂದಿ ಕುಂದಿಯೆ ಕುಸಿದು ಭವಗಿರಿಯ
ನನುದಿನಂ ಸುತ್ತುತ್ತಿರ್ದೆನು ಅಂಧಕನ ತೆರದಿ ಮನದ ನಸು
ಗುನ್ನಿ ಚುರಿಚಿತನವು ಸರ್ವಾಂಗವೆಲ್ಲವ ಕೊಂಡು
ತಿನಿಸೆದ್ದು ಮನದ ಗಂಧೆಯ ತುರಿಸಿ ತುರಿಸನೇ ಹಂಬಲಿಸಿ
ಕನಲುತಿರ್ದೆನು ಎನ್ನ ಗುಣವ ನೋಡದೆ ಕಾಯೋ ಕಾಯೋ ಕರುಣಾಳುವೆ ।೫।

ಪಾಪಿಮನ ಠಕ್ಕಮನ ಸರ್ವರೊಳು
ಕೋಪಿಮನ ಕುಕ್ಕಮನ ಕಾಕುಮನ
ಜಾಪಿಮನ ಹೇವಮನ ಹೆಬಗಮನ ಗುಣಧರ್ಮಕರ್ಮದಿಂದ
ತಾಪಸಬಡುತಿರ್ದ ಗಾಯವಡೆದ ಉರಗ
ನಾಪರಿಯಲೆನ್ನ ನೆರಳಿಸಿ ಒರಲಿಸುವ ಮನದ
ರೂಪನಳಿದು ಜ್ಞಾನವಿತ್ತುಸಲವಯ್ಯಾ ಚಿದ್ರೂಪ ಚಿನ್ಮಯ ಶಂಭುವೆ. । ೬ ।

ಕೂಳಮನ ಕುರಿಮನ ಸರ್ವಚಾಂ
ಡಾಲಿಮನ ಪರಧನ ಪರಸ್ತ್ರೀಯರನ್ಯಕ್ಕೆ
ಕೋಳುಗೊಂಬುವ ಹೆಡ್ಡಮನ ಜಿಡ್ಡುಮನ ಜಾಳುಮನ
ಹಾಳುಮನದ ಪಾಳೆಯವು ಹಲವು ಪರಿಯ ಮನದ
ಗಾಡಿಗೆ ಸಿಲ್ಕಿ ಕಾಲಕರ್ಮಕ್ಕೆ ಗುರಿಯಾದೆನಿದ ಪರಿಹರಿಸಿ
ಶೂಲಿ ಸರಸಿಜನ ಕಪಾಲಿ ಶಿರಮಾಲಿ ರಕ್ಷಿಸು ಕರುಣಾಂಬುನಿಧಿ ಗಿರಿಜೇಶನೆ ।೭।

ಅಂಗಗೂಡಿನೊಳು ಮನಪಕ್ಷಿ ಹೊರಗಿರುವ ಪ
ಕ್ಕಂಗಳೆರಡರೊಳು ಉಡುಪತಿ ಭಾನುವಂ ಪಿಡಿದು
ಜಂಗಿಟ್ಟು ಭೂವ್ಯೋಮ ಮಧ್ಯದೊಳು ಚರಿಸುತಿರಲತಿ ಸಿದ್ಧಸಾಧ್ಯರೆಲ್ಲ
ಭಂಗಬಡುವರು ಮನವೆಂಬ ಪಕ್ಷಿಯ ಮುರಿದು
ನುಂಗಬಲ್ಲಡೆ ಸತ್ಯಶಿವಯೋಗಿ ಶರಣ ನಿ
ರ್ಭಂಗ ನಿರ್ಲೇಪ ನಿರ್ಮನ ನಿರಾಭಾರಿಯಾಗಿಪರೆನ್ನ ಪ್ರಾಣಲಿಂಗ. । ೮ ।

ಹರನ ಶ್ರೀಪಾದದೊಳು ಮನವನಿಟ್ಟಿಹ ಸತ್ಯ
ಶರಣಬಸವೇಶ ಪ್ರಭುರಾಯ ಮೋಳಿಗೆ ಮಾರ
ಗುರುಭಕ್ತನೆಂಬಣ್ಣ ದಾಸಿ ಕೇಶಯ್ಯನೋಹಿಲದೇವನುದುಟಯ್ಯ
ಮರುಳಶಂಕರ ಮುಖ್ಯವಾದ ಪ್ರಮಥರ ದಿವ್ಯ
ಚರಣದಲಿ ಮನವ ಮಗ್ನಿಸಿದ ದಾಸೋಹಿಗಳ
ವರಪ್ರಸಾದಕ್ಕೆ ಯೋಗ್ಯನ ಮಾಡು ಮಮವಿಠಿ ಸಿದ್ಧಮಲ್ಲಿನಾಥಪ್ರಭುವೆ. । ೯ ।
॥ ೧೪೬ ॥

## ಆಶಾಬದ್ಧನಿರಸನಸ್ಥಲ

ಸೂತ್ರ : ಇಂತು ಮನೋವಿಕಾರದ ನಿರಸನವ ಮಾಡಿ, ಆ ಮನೋವಿಕಾರದ ಭ್ರಮೆಯೊಳು ಹೊದ್ದಿ ಹೊದ್ದದಿರುವ ಶಿವಶರಣಂಗೆ ತ್ರಯೋದಶದಲ್ಲಿ ಆಶಾಬದ್ಧನಿರಸನಸ್ಥಲ ವಾದುದು.

೧೧೧೮

ಆಶೆಯಾಮಿಷವೆಂಬ ಮಾಯಾಪಾಶಕೆನ್ನ ಗುರಿಮಾಡಿ ನೀ ಸಿಕ್ಕದೆ
ನಿರ್ವಾಯನಾಗಿ ಮಾಯಕದ ಬಲೆಯೊಳಿಟ್ಟೆನ್ನ.
ಅದು ಎಂತೆಂದರೆ :
ನೆನೆವ ಮನಕಾಸೆಯನೆ ತೋರಿದೆ,
ನೋಡುವ ಕಂಗಳಿಗಾಸೆಯನೆ ನೋಡಿಸಿದೆ,
ನುಡಿವ ಜಿಹ್ವೆಗೆ ಆಸೆಯನೆ ನುಡಿಸಿದೆ,
ಕೇಳುವ ಕರ್ಣಕೆ ಆಸೆಯನೆ ಕೇಳಿಸಿದೆ,
ವಾಸಿಸುವ ನಾಸಿಕಕೆ ಆಸೆಯನೆ ವಾಸಿಸಿದೆ,
ಮುಟ್ಟುವ ಹಸ್ತಕ್ಕೆ ಆಸೆಯನೆ ಮುಟ್ಟಿಸಿದೆ.
ಆಸೆಯನೆ ಕಳೆದು, ನಿರಾಸೆಯಾಗಿಪ್ಪ ಶರಣರ ಪಾದಕ್ಕೆ
ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೪೭ ||

೧೧೧೯

ಮಾನಸ ವಾಚಿಕ ಕಾಯಿಕದಲ್ಲಿ
ಆಸೆಯನೆ ಮುಂದುಗೊಳಿಸಿದೆಯಯ್ಯಾ.
ಅದು ಎಂತೆಂದರೆ :
ಮನಸ್ಸು ನಿಮ್ಮ ನೆನೆಯದೆ ಅನ್ಯಕ್ಕೆ ಹರಿದು
ಪರಧನ ಪರಸ್ತ್ರೀಯರಾಸೆಯನೆ ನೆನವುದು.
ವಾಚಿಕ ನಿಮ್ಮ ಸ್ತೋತ್ರಿಸದೆ ಒಡಲಾಸೆಯನೆ ನುಡಿವುದು.
ಕಾಯಿಕ ನಿಮ್ಮ ಮುಟ್ಟಿ ಪೂಜಿಸದೆ
ಅನ್ಯವನಾಸೆಗೈದು ಮುಟ್ಟುತ್ತಿಪ್ಪುದು.
ಇಂತೀ ಮಾನಸ ವಾಚಿಕ ಕಾಯಿಕವೆಂಬ ತ್ರಿಕರಣದಲ್ಲಿ
ಆಸೆಯನೆ ಮುಂದುಗೊಂಡುಯಿಪ್ಪ ಮಾನವರು ನಿರಾಸಕ್ತನನೆತ್ತ ಬಲ್ಲರಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೪೮ ||

೧೧೨೦

ಆಸೆಯೆಂಬುದು ಆರಾರನು ಕೆಡಿಸದಯ್ಯ ?
ಸೀಮೆ ಭೂಮಿಗಾಸೆಗೈದು ಮಡಿದ ರಾಜರ

ಹೇಳೆಂದವರೊಂದು ಕೋಟ್ಯಾನುಕೋಟಿ.
ಹೊನ್ನು ಹೆಣ್ಣಿಂಗೆ ಆಸೆಗೈದು ಮಡಿದವರ
ಹೇಳೆಂಪರೊಂದು ಕೋಟ್ಯಾನುಕೋಟಿ.
ಹೆಣ್ಣು ವಿಷಯಕ್ಕೆ ಆಸೆಗೈದು ಮಡಿದವರೊಂದು ಕೋಟ್ಯಾನುಕೋಟಿ.
ಹೊನ್ನು ಹೆಣ್ಣು ಮಣ್ಣಿಗೆ ಆಸೆಗೈದು ಮಡಿದವರ ಕಾಂಬೆನಲ್ಲದೆ,
ನಿನಗಾಗಿ ನಿರಾಸಕ್ತರಾಗಿ ಸತ್ತವರನಾರನೂ ಕಾಣೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೮೯ ॥

೧೮೨೧

ಯತಿಗಳು ಆಸೆರೋಷವ ಕಳೆಯಲರಿಯದೆ ಮತಿಭ್ರಷ್ಟರಾದರು.
ಸಿದ್ಧರು ಆಸೆರೋಷವ ಕಳೆಯಲರಿಯದೆ ಬುದ್ಧಿಹೀನರಾದರು.
ಯೋಗಿಗಳು ಆಸೆರೋಷವ ಕಳೆಯಲರಿಯದೆ ಹಗ್ಗರಾದರು.
ಇಂತೀ ಯತಿ ಸಿದ್ಧ ಸಾಧ್ಯಯೋಗಿಗಳನರಿಯದ ಆಸೆಬದ್ಧವೆಂಬ ಮಾಯ
ಕುರಿಮಾನಪರನೆತ್ತ ಬಲ್ಲುದಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೯೦ ॥

೧೮೨೨

ಸಹಸ್ರಲಕ್ಷ ದ್ರವ್ಯದೊರೆದರೂ ಅದು ಸಾಲದೆಂಬುದೀ
ಆಸೆಬದ್ಧವೆಂಬ ಮಾಯೆ.
ಸಹಸ್ರಲಕ್ಷ ಭೂಮಿದೊರೆದರೂ ಅದು ಸಾಲದೆಂಬುದೀ
ಆಸೆಬದ್ಧವೆಂಬ ಮಾಯೆ.
ಅದು ಎಂತೆಂದರೆ :
ಸಾಕ್ಷಿ : ''ಆಶಯಾ ಬದ್ಧತೇ ಲೋಕಃ ಕರ್ಮಣಾ ಬಹುಚಿಂತಯಾ ।
ಆಶಾ ಚಲ ಪರಮಂ ದುಃಖಂ ನಿರಾಶಾ ಪರಮಂ ಸುಖಂ ॥''
ಎಂದುದಾಗಿ,
ಈ ಆಸ ರೋಷ ಅಮಿಷವೆಂಬ ಮಾಯಾಪಾಶದೊಳಗೆ ಸಿಲ್ಕಿ
ನೊಂದೆ ಬೆಂದೆನಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೯೧ ॥

೧೮೨೩

ತನುವೆಂಬ ಹೊಲದೊಳು ಜೀವವೆಂಬ ಒಕ್ಕಲಿಗ,
ಅಜ್ಞಾನವೆಂಬ ಕೂರಿಗೆ, ಪಂಚೇಂದ್ರಿಯವೆಂಬ ತಾಳುಗಳಿಗೆ,
ಪಂಚವಿಷಯವೆಂಬ ಸೆಡ್ಡೆಯಕೋಲನಿಕ್ಕಿ,
ಚಿತ್ತವೆಂಬ ಸೆಡ್ಡೆಯಬಟ್ಟಲಿಗೆ ಬುದ್ಧಿಯೆಂಬ ಹಸ್ತದಿಂದ
ದಶವಾಯುಗಳೆಂಬ ಬೀಜವ ಬಿತ್ತಿ,
ಕರಣಾದಿಗುಣವೆಂಬ ಬೆಳೆಯು ಬೆಳೆವುತ್ತಿರೆ,

ಮನವಿಕಾರಭ್ರಮೆಯೆಂಬ ಮೂಷಕನ ಹಿಂಡು ಕವಿಯೆ,
ಅದಕ್ಕೆ ರೋಷವೆಂಬ ಬಡಿಗಲ್ಲನೊಡ್ಡಿ,
ಆಸೆಯೆಂಬ ಜಂಪವಿಟ್ಟು, ರೋಷವೆಂಬ ಬಡಿಗಲ್ಲು ಮೇಲೆ ಬೀಳೆ,
ಒದ್ದಾಡಿ ಒರಲೊರಲಿ ಸಾಯುತಿರೆ,
ತನುವೆಂಬ ಹೊಲನ ಕೆಡಿಸಿ, ಜೀವವೆಂಬ ಒಕ್ಕಲಿಗನ ಕೊಂದು,
ಅಜ್ಞಾನವೆಂಬ ಕೂರಿಗೆಯನುರುಹಿ,
ಪಂಚೇಂದ್ರಿಯವೆಂಬ ತಾಳ ಮುರಿದು,
ಪಂಚವಿಷಯವೆಂಬ ಸೆಡ್ಡಿಯಕೋಲ ಸೀಳಿಬಿಟ್ಟು,
ಚಿತ್ತವೆಂಬ ಸೆಡ್ಡಿಯಬಟ್ಟಲನೊಡದು,
ಬುದ್ಧಿಯೆಂಬ ಹಸ್ತದ ಸಂದ ತಪ್ಪಿಸಿ,
ದಶವಾಯುಗಳೆಂಬ ಬೀಜವ ಹುರಿದು,
ಕರಣೇಂದ್ರಿಯವೆಂಬ ಬೆಳೆಯ ಕೊಯಿದು ಕೆಡಿಸಿ,
ನಿಃಕರಣವಾಗಿ ನಿಜಲಿಂಗಪದವ ಸಾರಿಪ್ಪ ಶರಣಂಗೆ
ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೫೨ ॥

೧೧೫೪

ಕಾಳರಕ್ಕಸಿಯ ಕೈಯೊಳಿಪ್ಪ ಶಿಶುವಿನ ಭ್ರಮೆ
ಮೂರುಲೋಕಕ್ಕೆ ಕೊಂಡು ಭ್ರಮಿತರಾಗುವುದ ಕಂಡೆ.
ಕಾಳರಕ್ಷಿಯ ಕೊಂದು, ಕಾಳ ರಕ್ಷಿಯ ಕೈಯೊಳಿಪ್ಪ ಶಿಶುವಿನ
ಗೋಣ ಮುರಿದಾತನಲ್ಲದೆ ಶಿವಶರಣನಲ್ಲ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೫೩ ॥

೧೧೫೫

ಮೂರುಮುಖದ ಪಕ್ಷಿಯ ಹೆಸರಕ್ಷರವೆಂಟು.
ಎರಡಕ್ಷರದಂಗನೆಯ ಸಂಗವ ಮಾಡುತ್ತಿರೆ
ಸಂಗದಿಂದ ಹುಟ್ಟಿತೊಂದು ಹೆಬ್ಬುಲಿ.
ಹೆಬ್ಬುಲಿಯ ಗಡಣದಿಂದ ಭೂಮಂಡಲವೆಲ್ಲ ನಡಗುವುದ ಕಂಡೆನು.
ಮೂರುಮುಖದ ಪಕ್ಷಿಯ ಮುಖ ಒಂದಾಗಿ,
ಕೆಳದಿಯರೈವರ ಕಡೆಗೆ ತಲೆದಿರುವಿ, ಎಂಟಕ್ಷರವ ಕೆಡಿಸಿ,
ಎರಡಕ್ಷರದಂಗನೆಯ ಶಿರವನರಿದು,
ಹುಟ್ಟಿದ ಹುಲಿಯ ಕೊಂದು, ಗಡಣೆಯ ತೂಲಗಿಸಿದಾತನಲ್ಲದೆ
ನಿರಾಸಕ್ತನಲ್ಲ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೫೪ ॥

೧೧೨೭

ಲಿಂಗಾಸಕ್ತಂಗೆ ಅಂಗಾಸಕ್ತಿವುಂಟೇನಯ್ಯಾ ?
ಜಂಗಮವಾಸಕ್ತಂಗೆ ಅನ್ಯಸಂಗ ಪರಧನ ಪರಸ್ತ್ರೀಯಾರಾಸೆ ಉಂಟೇನಯ್ಯಾ ?
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ
ನಿಮ್ಮಾಸೆಯೊಳು ಇಂಬುಗೊಂಡಾತಂಗೆ
ಜನ್ಮ ಮೃತ್ಯುವುಂಟೇನಯ್ಯಾ ? ॥ ೧೫೫ ॥

೧೧೨೮

ರಾಗ : ಆಹೇರಿ

ಪಲ್ಲ : ಆಸೆಬದ್ಧವು ಬಿಡದು ಈ ಮನದ
ಸಾಸಿರಬಗೆಯ ಬೋಧೆಯ ಹೇಳ್ದಡೆಳ್ಳಿನಿತು.

ಪದ : ಮೋಷನ ದನಿಗೆ ಆಸೆಗೈದ ವ್ಯಾಘ್ರಬಂಧನ
ಸೂಸಲಿನಾಸೆಗೈದು ಮೂಷಕ ಮಡಿಯದೆ ?
ಆಸೆಮಾಡದಿರು ಪರಧನ ಪರಸ್ತ್ರೀಯರಿಗೆ
ರೋಷಧಿಪತಿಯ ಬಾಧೆಯಿದೆಯೆನೆ ನಾಚದೆ. । ೧ ।

ದಶದಿಕ್ಕು ಆನೆ ಸೇನೆ ಹೊನ್ನು ಭಂಡಾರ ಕೈ
ವಶವಾಗಿ ಇದು ಸಾಲದೆಂಬುದೀ ಆಸೆಯೆಂಬ
ಹಸುಗೂಸನೆತ್ತಲು ರೋಷವೆಂಬ ತಾಯಿ ಸುಳಿದು
ವಸುಧೆಯ ಜನರ ತಿಂದು ತೇಗಿ ಕಾಡುವ ಮನದ । ೨ ।

ಆಸೆಯನಳಿದು ನಿರಾಸೆಯಾಗಿಹರೆ ಶರಣ–
ರಾ ಶಿಶುವಾಗೆನ್ನನಿರಿಸು ಕಂಡೆಲೆ ಜಗದೀಶ
ಗುರು ಪಡುವಿಡಿ ಸಿದ್ಧಮಲ್ಲಿನಾಥ ನಿಮ್ಮ
ಭಾಷೆಯನಿತ್ತು ಮನವ ಸೆರೆಯ ಹಿಡಿಯಯ್ಯ ದೇವ. । ೩ ।
॥ ೧೫೬ ॥

## ಶಿವನಧಿಕಾಂಕ್ಷೆಸ್ಥಲ

ಸೂತ್ರ : ಇಂತು ಆಸೆಬದ್ಧವೆಂಬ ಬಲೆಯೊಳು ಹೊದ್ದಿ ಹೊದ್ದದಿರುವ ಶರಣ, ಅನ್ಯಾಸೆಯ ತೊರೆದು ಶಿವನನಾಸೆಗೈವುತ್ತಿದ್ದ ಕಾರಣದಿಂ ಚತುರ್ದಶದಲ್ಲಿ ಶಿವನಧಿಕಾಂಕ್ಷೆಸ್ಥಲ ವಾದುದು.

೧೧೨೯

ಆಸೆ ಮಾಡದಿರು ಅಧಮ ಚಾಂಡಾಲಿ ನರರಿಂಗೆ.
ಆಸೆಗೈಯದಿರು
ಹೊನ್ನು ಹೆಣ್ಣು ಮಣ್ಣಿನ ಮದದಮಲು ತಲೆಗೇರಿದ ಪಿಸುಣಿ ಮಾನವರ.
ಆಸೆಗೈಯದಿರು ಪಾಪಿ ಮನವೆ.

ಆಸೆಗೈ ಆಸೆಗೈ ಇನ್ನೊಮ್ಮೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ
ಸಮುದ್ರವನಾಸೆಗೈದರೆ ಹವಳ ಮುತ್ತನೀಗುವುದು. ॥ ೧೧೭೮ ॥

೧೧೭೯

ಕೊಡುವವ ಮಾನವನೆಂದು ಒಡಲಾಸೆಯ ತೋರದಿರು,
ಕೊಡುವವ ಮಾನವನಲ್ಲ.
ಕೊಡುವವ ಕೊಂಬುವವ ಮಾನವರ ನಡುವಿಪ್ಪ
ಮಹಾತ್ಮ ಸಂಜೀವಂಗೆ ಒಡಲಾಸೆ ತೋರಿ ಬೇಡಿಕೊ.
ಜೀವನ ಬುದ್ಧಿಯಿಂದ ನರನನಾಸೆಗೈಯದಿರು.
ಆಸೆಗೈದರೆ ಕಾವವರಲ್ಲ, ಕೊಲ್ಲುವವರೂ ಅಲ್ಲ,
ಕೊಡುವವರೂ ಅಲ್ಲ, ಬಿಡುವವರೂ ಅಲ್ಲ.
ನಾಯ ಬಾಲವ ನಂಬಿ ಹೊಳೆಯ ಹಾದವರುಂಟೇ ?
ವೃಷಭನ ಬಾಲವ ಪಿಡಿದರೆ ನದಿಯ ತಡಿಯ ಸೇರುವರಲ್ಲದೆ.
ನಂಬು ನಂಬು ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲನೆಂಬ
ಮಹಾಭಾಗ್ಯವ ನಂಬಿದರೆ ನಿನಗೆ ಬಡತನವೆ ಆತ್ಮ ? ॥ ೧೧೭೯ ॥

೧೧೮೦

ವಾರಿಯಿಲ್ಲದ ಕೆರೆಗೆ ಹಾರೈಸಿ ಬಂದ ತುರುವಿನತೆ,
ಬೂರದ ಮರಕ್ಕೆ ಹಾರೈಸಿ ಬಂದ ಗಿಣಿಹಿಂಡಿನಂತೆ,
ನಳಿನವಿಲ್ಲದ ಕೊಳಕೆರಗಿದಳಿವಿಂಡಿನಂತೆ,
ಮಲಹರನ ಭಕ್ತಿ ಜ್ಞಾನ ವೈರಾಗ್ಯವಿಲ್ಲದ ಅಧಮರಿಗೆ ಆಸೆಮಾಡದಿರು :
ಆಸೆ ಮಾಡಿದರೆ ವ್ಯರ್ಥ.
ಆಸೆಮಾಡು ಆಸೆಮಾಡು ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥನೆಂಬ ಧನಿಕನ. ॥ ೧೧೮೦ ॥

೧೧೮೧

ಕಾಮಧೇನುವಲ್ಲದೆ ಸಾದಾ ಧರೆಯ ಗೋವುಗಳು
ಪಂಚಾಮೃತವನೀಯಬಲ್ಲವೆ ?
ಸರ್ವರ ತೃಪ್ತಿಂಗೆ ಕೇಳು ಆತ್ಮ,
ಕಲ್ಪವೃಕ್ಷ ಸ್ವಾದಫಲವೀವುದೆಂದು
ಬೇವಿನಮರಕೆ ಹಾರೈಸಿಹೋದರೆ ಬರಕಾಯಿ.
ಕಾಮಧೇನು ಕಲ್ಪವೃಕ್ಷಗಿಂದಲಿ ಮೀರಿದ
ಕಾಮಾರಿಲಿಂಗ ನಿನ್ನ ಆತ್ಮದೊಳಿರಲು
ಅದ ಮರದು ಅನ್ಯರಿಗೆ ಆಸೆಗೈಯದಿರು.

ಆಸೆಗೈ ಆಸೆಗೈ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವ. ॥ ೧೬೦ ॥

೧೧೩೨

ಒಡಲಾಸೆಗೆ ಅನ್ಯರ ಸೇವೆಯ ಮಾಡುವ
ಕಡುಪಾಪಿಮನವೆ ಕೇಳು.
ದಧಿಯ ಮಥನವ ಮಾಡೆ ಪಂಚಾಮೃತವ ಕೊಡುವುದಲ್ಲದೆ,
ಉದಕವ ಕಡೆಯಲೇನ ಕೊಡದ ತೆರದಲ್ಲಿ
ಅನ್ಯರನಾಸೆಗೈದರೆ–
ಪರುಷ ಮನೆಯೊಳಿರೆ ಪರರ ಹಣವ ಬೇಡಿ
ಚಾಲಿವರಿವ ಮರುಳುಮಾನವನಂತೆ,
ಪರ ಅಮೃತಬಾವಿ ಗೃಹದೊಳಿರೆ ಸವುಳು ನೀರಿಂಗೆ
ಚಾಲಿವರಿವ ಹೆಡ್ಡಮನುಜನಂತೆ,
ಸರ್ವರ ಮನ ಧರ್ಮ ಕರ್ಮವನರಿವ ಪರಮಾತ್ಮ
ನಿನ್ನ ಅಂಗೈಕರದೊಳಿರೆ ಪರರಾಸೆಗೈಯದಿರು, ಆಸೆಗೈಯದಿರು.
ಆಸೆಗೈ ಆಸೆಗೈ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವನಾಸೆಗೈದರೆ
ನಿನಗೆ ಮುಕ್ತಿಯುಂಟು ಕೇಳಲೆ ಮನುಜ. ॥ ೧೬೧ ॥

೧೧೩೩

ರಾಗ : ಶುದ್ಧ ಆಹೇರಿ

ಪಲ್ಲ : ಆಸೆ ಮಾಡದಿರು ಪರರಿಗೆ ಕೇಳು ಮನವೆ
ದೋಷರಹಿತಲಿಂಗವಲ್ಲದನ್ಯರಿಗೆ ದಯವೆಂದು.

ಪದ : ಜಲವಿಲ್ಲದ ಕೆರೆಗೆ ತುರು ಬಂದು ಹಿಂದಿರುಗುವಂತೆ
ಫಲವಿಲ್ಲದ ಮರಕೆ ಗಿಣಿವಿಂಡು ಮುಸುಕಿದಂತೆ
ನಳಿನವಿಲ್ಲದ ಕೊಳಕೆರಗಿದಳಿಚರದಂತೆ
ಮಲಹರನ ಭಕ್ತಿಜ್ಞಾನವೈರಾಗ್ಯವಿಲ್ಲದವರಿಗೆ । ೧ ।

ಕಾಮಧೇನಲ್ಲದೆ ಸಾಧಾರೆಯ ಗೋವುಗಳು [ಪಂ
ಚಾಮೃತವನೀಯಬಲ್ಲುದೆ ? ಕಲ್ಪವೃಕ್ಷವಲ್ಲದೆ ಬೇವು ಸ್ವಾ
ದು ಫಲವನೀವುದೇ ? x x x]ಪಡುವುದೆ
ಕಾಮಾರಿಲಿಂಗವಲ್ಲದನ್ಯರಿಗೆ ದಯವೆಂದು । ೨ ।

ಕರಸರೆಯಲ್ಲಿ ಹಣ್ಣಿರೆ ಮರನೇರಿ ಕೊಯ್ಯುವರುಂಟೇ ?
ಪರುಷ ಮನೆಯೊಳಿರೆ ಪರರ ಹಣವ ಬೇಡಲುಂಟೇ ?

ಪರಬ್ರಹ್ಮ ಮೂಲವೃಕ್ಷ ಶರೀರದೊಳಿರೆ ಲೋಕ
ನರರನಾಸೆಗೈವೆನೆಂಬ ಭ್ರಾಂತಿಯಾಕೆ ಮಾನುಜ ? । ೩ ।

ದಧಿಯ ಮಥನವ ಮಾಡೆ ಪಂಚಾಮೃತವ ಕುಡುವುದು
ಉದಕವ ಕಡೆಯಲೇನ ಕೊಡುವುದಾ ತೆರದಲ್ಲಿ
ಸುಧಾಕರ ರತ್ನಲಿಂಗ ನಿನ್ನಿದಿರಿನಲ್ಲಿರುತಿರೆ
ಅಧಮರಾದನ್ಯರಿಗೆ ಆಸೆಗೈಯಲಿಬೇಡ. । ೪ ।

ಸರ್ವರ ಮನಧರ್ಮವನರಿವ ಪರಮಾತ್ಮ ನಿನ್ನ
ಕರದೊಳಿರೆ ಅನ್ಯಸಂಗವ ಮಾಣೆಸಿ
ಗುರು ಪಡುವಿಡಿ ಸಿದ್ಧಮಲ್ಲಿನಾಥನೊಳು
ಬೆರೆದು ನಿಶ್ಚಿಂತನಾಗಿರು ಕಂಡ್ಯ ಮನವೆ. । ೫ ।
॥ ೧೬೨ ॥

## ಸಂಸಾರಹೇಯಸ್ಥಲ

ಸೂತ್ರ : ಇಂತು ಶಿವನ ಅಧಿಕಾಂಕ್ಷೆಯೊಳಿಂಬುಗೊಂಡು ಶಿವಜ್ಞಾನವ ಹಿಂಗದೆಯಿಪ್ಪ ಶಿವಶರಣಂಗೆ ಸಂಸಾರಸಾಗರ ತೆರೆ ತಟ್ಟಿ ತಟ್ಟಿ ಅಣೆವುತಿರಲು [ಪಂಚದಶದಲ್ಲಿ ಸಂಸಾರಹೇಯಸ್ಥಲವಾದುದು].

### ೧೧೩೪

ಏನ ಹೇಳುವೆನಯ್ಯಾ ? ಸಂಸಾರಬಂಧನದಲ್ಲಿ ಕಂದಿಕುಂದಿದೆನಯ್ಯಾ.
ಅದು ಎಂತೆಂದರೆ :
ಭಾನುವಿನ ಕಿರಣದಲ್ಲಿ ಬಾಡಿದ ಕಮಲದಂತಾದ.
ಗಾಳಿಗುಲಿವ ತರಗೆಲೆಯಂತೆ, ಸಂಸಾರವೆಂಬ ಸುಂಟರಗಾಳಿ
ಆಕಾಶಕ್ಕೆ ನೆಗವಿ, ಭೂಕಾಂತೆಗೆನ್ನಬಿಟ್ಟು,
ಕಣ್ಣು ಬಾಯೊಳು ಹುಡಿಯಂ ಹೊಯಿದು,
ಮಣ್ಣಕಾಯವ ಮಣ್ಣಿಂಗೆ ಗುರಿಮಾಡಿ ಕಾಡುತಿಪ್ಪುದೀ
ಸಂಸಾರವೆಂಬ ಹೆಮ್ಮಾರಿಯ ಬಾಯಿಗೆನ್ನನಿಕ್ಕದೆ ಕಾಯೋ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೩ ॥

### ೧೧೩೫

ಇನ್ನೇವೆ ಇನ್ನೇವೆನಯ್ಯಾ ?
ಸಂಸಾರಕೂಪದ ನೆಲೆಯಿಲ್ಲದ ಜಲದೊಳು ಎನ್ನ ಕೆಡವಿದೆ.
ನೆಲೆಗಾಣದೆ ಹಲವು ದೆಸೆಗೆ ಹಂಬಲಿಸಿ
ಮುಳುಮುಳುಗಿ ಏಳುತ್ತಿದ್ದೆನಯ್ಯಾ.
'ಸಂಸಾರಕೂಪಜಲಮುಚ್ಯತೇ' ಎಂದುದಾಗಿ
ಈ ಸಂಸಾರವೆಂಬ ಬಾವಿಯ ಜಲದೊಳು ಮುಳುಗಿರುಪಂಗೆ

ದುರಿತಸಂಹರವೆಂಬ ತೊಟ್ಟಿಲಿಂಗೆ,
ಕರುಣಾಕೃಪೆಯೆಂಬ ಸೇದೆಯ ಹಗ್ಗವ ಕಟ್ಟಿ ಇಳಿವಿಟ್ಟು
ಎನ್ನನೆಳೆತೆಗೆದು ಕಾಯೊ ಕಾಯೊ ನಿಮ್ಮ ಧರ್ಮ ನಿಮ್ಮ ಧರ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೪ ॥

೧೧೩೭

ಕ್ಷೀರವನೊಲ್ಲದೆ ಹಂಸ ನೀದಂಗೆ ಹರಿವಂತೆ,
ಕಮಲದ ಪರಿಮಳವನೊಲ್ಲದ ತುಂಬಿ ದತ್ತೂರ ಕುಸುಮಕ್ಕೆ ಹರಿವಂತೆ,
ನಿನ್ನಸಂಗದಿಂದಾದ ತನುಮನ ನಿನ್ನನರಿಯದೆ
ಸಂಸಾರಸಂಗಕ್ಕೆಳಸುವವು. ಇದಕಿನ್ನೆಂತೂ ಶಿವನೆ !
ನೀನೊಡ್ಡಿದ ಸಂಸಾರಬಂಧನವ ನೀನೆ ಪರಹರಿಸಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೫ ॥

೧೧೩೮

ನೆಲೆಯನರಿಯದ ಮನುಜರು ಜಲವ ಹೊಕ್ಕರೆ ಮುಳುಗುವರಲ್ಲದೆ
ನೆಲೆಯಬಲ್ಲವರು ಮುಳುಗುವರೇನಯ್ಯಾ ?
ಆ ತೆರದಿ, ನಾ ನೆಲೆಯನರಿಯದೆ ಸಂಸಾರವೆಂಬ ಸಾಗರ ಹೊಕ್ಕರೆ
ಪ್ರಥಮದಲ್ಲಿ ಜಂಘೆಗೆ ಬಂತು,
ದ್ವಿತೀಯೆಯಲ್ಲಿ ಮಣಿಪಾದಕ್ಕೆ ಬಂತು,
ತೃತೀಯೆಯಲ್ಲಿ ಕಟಿಸ್ಥಾನಕ್ಕೆ ಬಂತು,
ಚತುರ್ಥದಲ್ಲಿ ನಾಭಿತನಕ್ಕೆ ಬಂತು,
ಪಂಚಮದಲ್ಲಿ ಉರಸ್ಥಾನಕ್ಕೆ ಬಂತು,
ಆರನೆಯಲ್ಲಿ ಕಂಠಸ್ಥಾನಕ್ಕೆ ಬಂತು,
ಏಳನೆಯಲ್ಲಿ ಸರ್ವಾಂಗವನೆಲ್ಲ ಮುಳುಗಿ
ಸಲೆ ಸಾಯಲಾರದೆ ಒದ್ದಾಡುತ್ತಿರುವನ ಕಂಡು ಸುಮ್ಮನಿರದಿರೋ
ಭೈತ್ರಾಧಿಪತಿಯೆ,
ನಿನ್ನ ಕರುಣಕೃಪೆಯೆಂಬ ಭೈತ್ರವ ಎನ್ನ ಕಡೆಗೆ ತಂದು
'ಸಂಸಾರಸಾಗರಜಲಂ' ಎಂದುದಾಗಿ,
ಸಂಸಾರಸಾಗರದ ನಟ್ಟನಡುವೆ ಮುಳುಗಿಪ್ಪವನನೆಳೆದು
ತೆಗೆಯೊ ಅಘಹರನೆ ಅಮೃತಕರನೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೬ ॥

೧೧೩೯

ಅಕಟಾ, ರಾಟಾಳದ ಘಟದಂತೆ ಭವಾರಣ್ಯದೊಳು ತಿರುಗಿತಿರುಗಿ
ಸತ್ತು ಸತ್ತು ಹುಟ್ಟುವಂತಿದ್ದೆನಯ್ಯಾ.

ಅದು ಎಂತೆಂದರೆ :
ಶ್ವೇದಜ ಉದ್ಭಿಜ ಜರಾಯುಜ ಅಂಡಜವೆಂಬ
ನಾಲ್ಕು ತೆರದ ಮುಖ್ಯ ಆನೆ ಕಡೆ ಇರುವೆ ಮೊದಲು
ಎಂಬತ್ತುನಾಲ್ಕು ಲಕ್ಷ ಜೀವರಾಶಿಯಲ್ಲಿ
ಒಂದೊಂದು ಯೋನಿಯಲ್ಲಿ ಸಾವಿರಬಾರಿ ತಿರುಗಿ,
ಆವಾವ ಜನ್ಮದಲ್ಲಿ ಆವಾವ ಆಹಾರವನುಂಡು,
ಆವಾವ ಭೂಮಿಯಲ್ಲಿ ಪುಟ್ಟಿ, ಆವಾವ ಕರ್ಮವ ಕಂಡು,
ಭಂಗ ಬಡುತ್ತಿದ್ದುದಯ್ಯಾ ಶರೀರ.
ಸಾಕ್ಷಿ : ''ನಾನಾಯೋನಿಸಹಸ್ರಾಣಿ ಕೃತಂ ಚೈವ ತು ಮಾಯಯಾ ।
ಅನೇಕಂ ವಿವಿಧಾಹಾರಂ ಪೀತಾಶ್ಚ ವಿವಿಧಾಃ ಸ್ತನಾಃ ॥''
ಎಂದುದಾಗಿ,
ಇಂತಪ್ಪ ಸಂಸಾರಭ್ರಾಂತಿನ ಬಲೆಯ ತೊಲಗಿಸಿ
ನಿಃಸಂಸಾರಿಯಾಗಿಪ್ಪ ಶರಣರ ಪಾದಕ್ಕೆ ನಮೋ ನಮೋಯೆಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೭ ॥

೧೧೩೯

ಹಿಂದಣಜನ್ಮದಲ್ಲಿ ಗುರುವ ಮರೆದ ಕಾರಣ,
ಹಿಂದಣಜನ್ಮದಲ್ಲಿ ಲಿಂಗವ ಮರದ ಕಾರಣ,
ಹಿಂದಣಜನ್ಮದಲ್ಲಿ ಅರುಹು ಕುರುಹೆಂಬುದನರಿಯದಕಾರಣದಿಂ
ಸಂಸಾರಬಂಧನಕ್ಕೆ ಗುರಿಯಾದೆನಯ್ಯಾ.
ನಿನ್ನವರ ಮರೆದ ಕಾರಣದಿ ಅನ್ಯ ಭವಕ್ಕೆ ಎನ್ನ ಗುರಿ ಮಾಡಿದೆ.
ಇನ್ನಾದರೂ ನಿಮ್ಮ ಸೊಮ್ಮೆಂಬ ಗುರುಲಿಂಗಜಂಗಮುವ ಮರೆಯೆ.
ಮರೆದರೆ ಮೂಗಿನ ಧಾರೆಯ ತೆಗೆವೆನು.
ಸರ್ವ ಅಪರಾಧಿ, ಎನ್ನವಗುಣವ ನೋಡದೆ ಕಾಯೋ ಕಾಯೋ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೮ ॥

೧೧೪೦

ಪಂಕದೊಳು ಬಿದ್ದ ಪಶುವಿನಂತೆ
ಸಂಸಾರರಸವಿಷಯದ ಕೊಗ್ಗಸರ ನಟ್ಟನಡು ಹುದಿಲೊಳಿಪ್ಪವನ
ಪಶುವಿನೊಡೆಯ ಪಶುವನರಸಿಕೊಂಡು ಬಂದು ಎಳೆತಗೆವಂತೆ
ನರಪಶು ನನ್ನವನೆಂದು ಹುದಿಲೊಳಿಪ್ಪವನ ತೆಗೆದು
ಕರುಣಜಲವೆಂಬ ನೀರೆರೆದು ಮೈದೊಳೆದು ತಲೆದಡಹಿ
ಕಾಯಿದು ರಕ್ಷಣ್ಯವ ಮಾಡಿಕೊಳ್ಳಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೯ ॥

೧೧೪೧

ಅಸತ್ತ ಸಂಸಾರಸಂಗಕ್ಕೆ, ಬೇಸತ್ತ ಸಂಸಾರಸಂಗಕ್ಕೆ.
ಸಂಸಾರಸಂಗಬಂದ ಓಸರಿಸಿ ಒಯ್ಯನ ಕಂಡಿ ಕುಂಡಿ.
ಭವಗಿರಿಯ ಸುತ್ತುತ್ತಿದ್ದೆನಯ್ಯಾ.
ಅಯ್ಯಾ, ಅಯ್ಯಾ ಎಂದು ಒಯ್ಯನೆ ಒದರಿದರ
'ಓ' ಎನ್ನಲೊಲ್ಲೇಕೆಲೊ ಅಯ್ಯ ?
ನೀ ಪಡೆದ ಸಂಸಾರ ಸುಖ ದುಃಖ, ನೀನೆ ಬೇಗೆಯನಿಕ್ಕಿ,
ನೀನೊಲ್ಲೆನೆಂದರೆ ನಾ ಬಿಡೆ, ನಾ ಬಿಡೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೦ ॥

೧೧೪೨

ಕೆಚ್ಚಲ ಕಚ್ಚಿದ ಉಣ್ಣೆ
ಸಿಕ್ಷ್ಯಾಮೃತದ ಸವಿಯನೆತ್ತಬಲ್ಲುದಯ್ಯಾ ?
ಪಾಯಸದೊಳಿಹ ಸಟ್ಟುಗ ರುಚಿಯಬಲ್ಲುದೆ ?
ಸರ್ಪನ ಮುಟ್ಟಿ, ಮೂಸುವ ಮಕ್ಷಿಕ ಶುಚಿಯ ಬಲ್ಲುದೇನಯ್ಯಾ ?
ಸಂಸಾರದೋಷ ದುಸ್ಸಂಗ ದುಶ್ಚರಿತ್ರದೊಳಿಪ್ಪ ಮಾನವರು
ಶಿವಜ್ಞಾನಾಮೃತದ ಸವಿಯನತ್ತ ಬಲ್ಲರಯ್ಯಾ ? ಉಣ್ಣೆಯಂತೆ.
ಹುಗ್ಗಿಯೊಳಿಹ ಹುಟ್ಟು, ತೊಳಸಬಲ್ಲುದಲ್ಲದ
ಸವಿಯ ಬಲ್ಲುದೇನಯ್ಯಾ ?
ವೇದಾಗಮವನೋದಿದ ಮಾನವರಲ್ಲ
ಸಂಸಾರಬಂಧನವ ಕಳೆಯಬಲ್ಲರೇನಯ್ಯಾ ?
ಮನಮಕ್ಷಿಕ ಸರ್ಪದುಚ್ಚಿಷ್ಟವ ಮುಟ್ಟಿ ಮುಟ್ಟಿ
ಹಲವು ಕಡಗ ಹಾರುತಿರಲು, ಮಹದರುವನತ್ತ ಬಲ್ಲುದಯ್ಯಾ !
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೧ ॥

೧೧೪೩

ಮಾಯದ ಸಂಸಾರಬಲೆಯೊಳು ಸಿಲ್ಕಿ ಆಯಾಸಗೊಳುತ
ಒರಲೂರಲಿ ಕರೆದರೆ 'ಓ' ಎನ್ನಲೊಲ್ಲೆಯೇಕೋ ಅಯ್ಯಾ ?
ಒಂದರ ಮುಂದ ಹುಲ್ಲು, ಒಂದರ ಮುಂದೆ ಕಲ್ಲು ಹಾಕಿದಂತೆ
ಮಾಡಬೇಡಯ್ಯಾ.
ಒಬ್ಬರಿಗೊಲಿದು ಒಬ್ಬರ ಕಾಡಬೇಡಯ್ಯಾ.
ನಿನಗೇಕೆ ಪ್ರಪಂಚದ ಗುಣ ? ನಿಷ್ಪ್ರಪಂಚ ನಿರ್ಲೇಪ ನಿಜಗುಣ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೬೨ ॥

### ೧೧೪೪

ಎಂದಾದರೂ ಸಂಸಾರದಂದುಗ ಬಿಡದು ನೋಡಯ್ಯಾ !
ಎಂದಾದರೂ ಸಂಸಾರಬಂಧನ ಬಿಡದು ನೋಡಯ್ಯಾ !
ಎಂದಾದರೂ ಸಂಸಾರವಿಷಯ ಹಿಂಗದು ನೋಡಯ್ಯಾ !
ಸಂಸಾರದಂದುಗ ಕಳೆದು ನಿರ್ದಂದುಗನಾಗಿಪ್ಪುದು ಎಂದೊ ಎಂದೂ ?
ನಿಮ್ಮ ನೆನವು ನೆಲೆಗೊಂಬುದು ಎಂದೊ ಎಂದೂ ?
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೭೩ ||

### ೧೧೪೫

ಹೆಳವರ ನಡುವೆ ಅಂಧಕರ ನಡುವೆ ಮನೆಬೆಂದಂತೆ ಸಂಸಾರ.
ಅದು ಎಂತೆಂದರೆ :
ಹೆಳವ ಅಡಿಯಿಟ್ಟು, ನೊಂದಿಸಲಾರ, ಅಂಧಕ ಕಣ್ಣುಗಾಣ.
ಅಜ್ಞಾನವೆಂಬುದೆ ಅಂಧಕನ ತೆರ,ಸುಜ್ಞಾನವೆಂಬುದ ಹೆಳವನ ತೆರ.
ಅದು ಎಂತೆಂದರೆ :
ಕರಣಗುಣ ಮನವಿಕಾರಂಗಳು ಹೆಚ್ಚಿಗೆ ನಡೆಯದೆ,
ಕೈಕಾಲು ಮುರಿದು ಅಡಿಯಿಡಗೂಡದಕಾರಣ
ಹೆಳವನೆಂಬ ಭಾವ.
ಇಂತಿವರಿಬ್ಬರ ನಡುವ ಜೀವ ಮನೆಯೆಂದರೆ
ಪಂಚಭೂತಸಂಬಂಧವಪ್ಪ ದೇಹ.
ಈ ದೇಹಕ್ಕೆ ತಾಪತ್ರಯವೆಂಬ ಅಗ್ನಿ ಹತ್ತಿ
ಸುಡುತ್ತಿದ್ದಕಾರಣದಿ ಅಗ್ನಿಯೆಂಬ ನಾಮ.
ಮರಕೆ ಮರ ಹೊಸದು ಅಗ್ನಿ ಬಿದ್ದಂತೆ
ತನುಗುಣ ಮನಗುಣ ಹೊಸೆದಾಡಿ ಕಾಯದೊಳುರಿದುರಿದು
ಬೆಂದು ಜೀವ ಘೋರಸಂಸಾರ.
ಅದು ಎಂತೆಂದರೆ :
ಸಾಕ್ಷಿ : ''ಸಂಸಾರದುಃಖಕಾಂತಾರೇ ನಿಮಗ್ನಶ್ಚ ಮಹಾತಪೇ ।
ಚಕ್ರವದ್ಭ್ರಮತೇ ದೇವಿ ಲಿಂಗಂ ನೈವ ಚ ದರ್ಶಿತಂ ॥ ''
ಎಂದುದಾಗಿ, ಇಂತಪ್ಪ ಸಂಸಾರವನೆಂತು ನೀಗುವೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ? || ೧೭೪ ||

### ೧೧೪೬

ಯೋನಿಯಲ್ಲಿ ಹುಟ್ಟಿ, ಯೋನಿಯನೆ ಬಯಸಿ,
ಯೋನಿಯ ಮುಖಕೆ ಗುರಿಯಾಗಿ ಸತ್ತು ಸತ್ತು
ಯೋನಿಯೆಂಬ ಗಾಣದಲ್ಲಿ ಹುಟ್ಟುತ್ತಿಪ್ಪುದು
'ಶಿವ' ನಿಮ್ಮ ನೆನವ ಮರೆದ ಕಾರಣ.

ಅದು ಎಂತೆಂದರೆ :

ಸಾಕ್ಷಿ : ''ಇದಂ ಗರ್ಭಗತಂ ಶ್ರುತ್ವಾ ಯೋನಿಯಂತ್ರಪ್ರಪೀಡನಂ ।
ಜಾಯತೇ ವಾಯುನಾ ವೇತ್ತಿ ವಿಸ್ಮೃತೇ ವೈಷ್ಣವೇ ಶ್ರುತೇ ॥''
ಎಂದುದಾಗಿ, ಸಂಸಾರ ವಿಷಯದ ಸರ್ಪನ ವಿಷ ತಲೆಗೇರಿ
ಮುಂದುಗಾಣದೆ ಅರುಹಿರಿಯರೆಲ್ಲ ಭಂಗಬಡುತ್ತಿದ್ದರು–
ನಿನ್ನನೆಂತು ಬಲ್ಲರಯ್ಯ ?
ಸಂಸಾರವೆಂಬುದ ಮುಂದುಗೊಂಡು ನಿನ್ನ ಮರೆದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೭೫ ॥

## ೧೧೪೭

ಹರಿಣಪಾದಮಾತ್ರದಷ್ಟು ಉಪಾಸ್ತಕೆ (?)
ಹರಿ ಸುರ ಬ್ರಹ್ಮಾದಿಗಳು ನೆರೆ ಮೂರುಲೋಕವೆಲ್ಲ ಮರುಳಾಗಿ
ವಿಷಯಭಂಗಿತರಾಗಿ ಭವಕೆ ಗುರಿಯಾದರಯ್ಯಾ.
ಅದು ಎಂತೆಂದರೆ :

ಸಾಕ್ಷಿ : ಹರಣಿಪದಮಾತ್ರೇಣ ಮೋನಸ್ಯ (?) ಜಗತ್ರಯಂ ।
ಸುಖ ಬಿಂದು ವಿಷಯಾಸ್ತತ ದುಃಖಪರ್ವತ ಏವ ಚ ॥ (?) ''
ಎಂದುದಾಗಿ, ಬಿಂದುಸುಖ ವಿಷಯಧಾವತಿಯ ದಂದುಗ,
ಸಂಸಾರದುಃಖ ಪರ್ವತದಷ್ಟು ನೋಡ.
ನೀಸಂಸಾರಿ ನಿರಾಭಾರಿಯಾಗಿ ನೋಡುತಿದ್ದೆಯಲ್ಲ ಜಗದಾಟವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೭೬ ॥

## ೧೧೪೮

ಹೆಣ್ಣಿನ ಮುದ್ದುಮುಖ ಮೊಲೆ ಮೋಹನ ಮುಗುಳುನಗೆಯ
ಕಣ್ಣಿಂದ ಕಂಡು ಕಾಮಾತುರದಿಂದ ತಿಲದಷ್ಟು ಸುಖಕ್ಕಾಗಿ
ಬಣ್ಣಗುಂದಿ ಭ್ರಮಿತರಾದರು ನೋಡಾ ಮನುಜರು.
ತೆರನರಿಯದೆ ಹೆಣ್ಣಿನ ಮುಖಕಳೆ ತನ್ನ ಕೆಡಿಸುವ
ಬಣ್ಣದ ಛಾಯೆಯೆಂದರಿಯರು ನೋಡಾ.
ಹೆಣ್ಣಿನ ಸೋಲ್ನುಡಿ ತಮ್ಮ ಕಟ್ಟುವ ಪಾಶವೆಂದರಿಯದೆ
ಹೆಣ್ಣಿನ ಮುಗುಳನಗೆ ತಮ್ಮ ಮುದ್ದಿಸಿ ಭವಕೆ ತರುವ
ಮೋಹವೆಂದರಿಯರು ನೋಡಾ.
ಹೆಣ್ಣಿನ ಚುಂಬನ ತಮ್ಮ ಹೀರುವ ಭೂತವೆಂದರಿಯರು ನೋಡಾ.
ಹೆಣ್ಣಿನ । ನೋಟ ತಮ್ಮ ಇರಿವ ಕಠಾರಿಯೆಂದರಿಯರು ನೋಡಾ.
ಹೆಣ್ಣಿನ ಮೊಲೆ ತಮ್ಮ ಭವಕ್ಕಿಕ್ಕಿ ಈಡಿಸುವ ಗುಂಡೆಂದರಿಯರು ನೋಡಾ.
ಹೆಣ್ಣಿನ ಯೋನಿ ತಮ್ಮ ತಿರುಹುವ ಗಾಣವೆಂದರಿಯರು ನೋಡಾ.
ಇಂತಪ್ಪ ಹೆಣ್ಣಿನ ಮುದ್ದುಮುಖ ಮೊಲೆ ನೋಟ ಮುಗುಳನಗೆ ಚುಂಬನ

ಭವದ ಭ್ರಾಂತಿಗೆ ತರಿಸಿ ಹಿಂಡಿ ಹೀರಿ ಹಿಪ್ಪೆಯ ಮಾಡಿ
ನುಂಗುವ ಮೃತ್ಯುದೇವತೆಯೆಂದರಿಯರು ನೋಡಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೭೭ ||

೧೧೪೯

ಹೊನ್ನಿನಾಸೆ ತನುವಿನೊಳಿಂಬುಗೊಂಡು ಪನ್ನಗಧರ ನಿಮ್ಮ ಮರೆಸಿತಯ್ಯ.
ಹೆಣ್ಣಿನ ವಿಷಯ ಮನದೊಳಿಂಬುಗೊಂಡು ಪನ್ನಗಧರ
ನಿಮ್ಮಿಂದರಿವ ಜ್ಞಾನವ ಮರೆಸಿತಯ್ಯ.
ಮಣ್ಣಿನಾಸೆ ತನು ಮನ ಬುದ್ಧಿಯೊಳಿಂಬುಗೊಂಡು
ಜ್ಞಾನದಿಂದರಿವ ಪುಣ್ಯಫಲವ ಮರೆಸಿತಯ್ಯ.
ಹೊನ್ನು ಹೆಣ್ಣು ಮಣ್ಣು ಮೂರೆಂಬ ಭಿನ್ನ ವಿಷಯವ ನೆಚ್ಚಿ.
ಸಂಸಾರಸಾಗರದೊಳು ಮುಳುಗಿದವರು ನಿಮ್ಮನೆತ್ತ ಬಲ್ಲರಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೭೮ ||

೧೧೫೦

ಸಂಸಾರಸುಖಕ್ಕೆ ಕಟ್ಟಿದ ಮನೆ, ಸಂಸಾರಸುಖಕ್ಕೆ ಕೊಂಡ ಹೆಣ್ಣು,
ಸಂಸಾರಸುಖಕ್ಕೆ ಆದ ಮಕ್ಕಳು, ಸಂಸಾರಸುಖಕ್ಕೆ ನೆರೆದ ಬಂಧುಬಳಗ,
ಸಂಸಾರಸುಖಕ್ಕೆ ಗಳಿಸಿದ ದ್ರವ್ಯ, ಸಂಸಾರಸುಖಕ್ಕೆ ಹೊಂದಿದ ಕ್ಷೇತ್ರ ಬೇಸಾಯ,
ಸಂಸಾರ ಸುಖ–ದುಃಖ ಘನವಾಗಿ ಸತ್ತು ಸತ್ತು ಹುಟ್ಟುವ ಮಾನವರು
ನಿಃಸಂಸಾರದಿಂದ ನಿಮ್ಮನರಿದು, ನಿಮ್ಮ ಜ್ಞಾನದೊಳಿಂಬುಗೊಂಡು,
ಭವವಿರಹಿತರಾಗುವುದಿದನೇನಬಲ್ಲರಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ? || ೧೭೯ ||

೧೧೫೧

ಮನೆ ಮಡದಿ ಮಕ್ಕಳು ದ್ರವ್ಯ ಬಂಧುಬಳಗವೆಂಬುದು
ಸಂಸಾರವಲ್ಲ ಕಾಣಿರೋ.
ಸಂಸಾರವಾವುದೆಂದರೆ ಹೇಳುವೆ ಕೇಳಿರಣ್ಣ,
ತನುವೆಂಬುದೆ ಮನೆ, ಪ್ರಾಣನಾಯಕನೆಂಬುವನೆನ್ನೊಡೆಯ,
ಶರೀರಮಾಯೆಯೆಂಬುವಳೆ ಹೆಣ್ಣು
ಪಂಚಭೂತವೆ ಮಕ್ಕಳು ಕಾಣಿರಣ್ಣ.
ಪಂಚೇಂದ್ರಿಯಮುಖದಲ್ಲಿ ಬಳಸುತಿಪ್ಪ ವಿಷಯವೆ ದ್ರವ್ಯಕಾಣಿರೊ.
ಅರುವತ್ತಾರುಕೋಟಿ ಕರಣದೊಳಿಂಬುಗೊಂಡಿಪ್ಪುದೆ ಬಂಧುಬಳಗ.
ಇಂತಪ್ಪ ಸಂಸಾರವನರಿಯದೆ, ತಮ್ಮ ತಿಂದು ತೇಗುವುದನರಿಯದೆ,
ಹೋರಾಟದ ಸಂಸಾರವ ಕಂಡರೆ ಸಂಸಾರವೆಂದು ನುಡಿಯುತಿಪ್ಪರಯ್ಯ.
ಈ ಸಂಸಾರಮಾಯೆಯ ಕಳೆದಿಪ್ಪವರೆನ್ನ ಪ್ರಾಣಲಿಂಗ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೮೦ ||

೧೦೫೨

ಬಲ್ಲನೆಂಬುವರ ಭ್ರಾಂತಿಗೊಳಗುಮಾಡಿತ್ತು ಮಾಯ,
ಅರಿಯೆನೆಂಬುವರ ಅನಂತಭವವ ಸುತ್ತಿಸಿತ್ತು ಸಂಸಾರಮಾಯ,
ವೀರರೆಂಬುವರ ಗಾರುಮಾಡಿತ್ತು ಮಾಯ,
ಧೀರನೆಂಬುವರ ಎದೆಯ ನಡುಗಿಸಿತ್ತು ಸಂಸಾರಮಾಯೆ,
ಯತಿಗಳೆಂಬುವರ ಏಡಿಶಾಡಿಕಾಡಿತ್ತು ಸಂಸಾರಮಾಯೆ,
ಜತಿಗಳೆಂಬುವರ ಜನ್ಮವ ಮೃತ್ಯುವಿಗೆ ಈಡುಮಾಡಿತ್ತು ಮಾಯ
ಸಿದ್ಧರೆಂಬುವರ ಬುದ್ಧಿಗೆಡಿಸಿತ್ತು ಸಂಸಾರಮಾಯ
ಸಾಧ್ಯರೆಂಬುವರ ಬೋಧೆಗೊಳಗುಮಾಡಿತ್ತು ಮಾಯೆ.
ಯತಿ ಸಿದ್ಧ ಸಾಧ್ಯರೆಂಬುವರ ಮತಿಭ್ರಷ್ಟರ ಮಾಡಿ ಕಾಡೂದದು.
ನೀನಿಕ್ಕಿದ ಸಂಸಾರಮಾಯದ ವಿಗಡ ಸರ್ವರ ಬಾಯಂ ಟೊಣೆದೆ
ಹೋಯಿತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೮೧ ॥

೧೧೫೩

ತೆರಣಿಯ ಹುಳು ತನ್ನ ಮನೆಯೊಳು ತಾನೆ
ನುಲಿ ಸುತ್ತಿಕೊಂಡು ಸಾವಂತೆ,
ಎನ್ನ ಸಂಸಾರ ಸುಖ ದುಃಖ ಎನ್ನನೆ ಸುತ್ತಿಕೊಂಡು
ಕಾಲಮೃತ್ಯುವಿಂಗೆ ಗುರಿಮಾಡಿ ಕಾಡುತಿಪ್ಪುದು ನೋಡಯ್ಯಾ,
ಈ ಸಂಸಾರ ಸುಖ ದುಃಖವ ನೀಗಿ ನಿಶ್ಚಿಂತದಲ್ಲಿಪ್ಪುದೆಂದೊಯೆಂದೊ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೮೨ ॥

೧೧೫೪

ಕುಣಪ ಕೂಗದಕಿಂದ ಮುನ್ನ,
ಶಾಸ್ತ್ರ ತೆರೆಮುಸುಕದಕಿಂದ ಮುನ್ನವೆ
ಸಂಸಾರಪಾಶವ ಸುಟ್ಟು ನಿಃಸಂಸಾರಿಯಾಗಿಪ್ಪ
ಅಚಲರ ತೋರಿ ಬದುಕಿಸೊ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೮೩ ॥

೧೧೫೫

ಹೊತ್ತು ಹೋಗಿ ಕತ್ತಲೆಯಾಗದಕಿಂದ ಮೊದಲೆ,
ಇತ್ತಣ ಮಾಯವಳಿದು ಅತ್ತಣ ರೂಹು ನೆಲಗೊಂಡು
ಹೊತ್ತಾರೆ ಬೆಯಿಗ[ಯ]ಂಬ ಮಿಥ್ಯವನಳಿದು,
ಸಂಸಾರಬಂಧನವ ಕಳೆದು ನಿರ್ಬಂಧನವರರಾಗಿಪ್ಪ
ಸತ್ಯಸದಾಚಾರಿಗಳ ಪಾದವ ತೋರಿ ಬದುಕಿಸು.

ಗಡಗಡನುರುಳುವ ಎನ್ನವಸರವಂ ಕಳೆಯಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೮೪ ॥

೧೧೫೬

ಮುಂಡೆಗೆ ಮುತ್ತೈದೆತನ ಬಂದಂದಿಗೆ,
ಗಂಡ ಬಂದು ಹೆಂಡತಿಯನಪ್ಪಿದಂದಿಗೆ,
ಸಾಯುವ ಮಗ ಹುಟ್ಟಿದಂದಿಗೆ,
ಅಂಗೈಯೊಳಗಣ ಮೊಲೆ ಅಮೃತವ ಕರೆದಂದಿಗೆ,
ಮಾಯದ ಬಲೆಯ ಸಂಸಾರಬಂಧನ ಹಿಂಗಿದಾಗಳೆ
ನಿರ್ಮಾಯಕ ನಿರಾಭಾರಿ ನಿಷ್ಕಲಶರಣ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೮೫ ॥

೧೧೫೭

ನಡೆಯಲಾರದ ಹೆಳವಂಗೆ ಅಂಥ ಹೆಂಡತಿ ದೊರೆತರೆ
ನಡೆವುದೇನಯ್ಯಾ ಅವರ ಜೀ[ವಿ]ತರೂಪ ?
ನುಡಿಯಿಲ್ಲದ ಮೂಕಮಾನವಂಗೆ ಅರಸುಪಟ್ಟಬಂದರೆ,
ಪ್ರಜೆ ಪರಿವಾರ ರಾಜ್ಯವ ನಡೆಸಿಕೊಳಬಲ್ಲನೇನಯ್ಯಾ ?
ಅಜ್ಞಾನಗುಣ ಮಾಯಕ ಹರಿವನಕ
ಸುಜ್ಞಾನಸಂಸಾರವುಂಟೇನಯ್ಯಾ ?
ಜೀವನ ಬುದ್ಧಿಗುಣವುಳ್ಳನಕ್ಕ ಪರಮಾತ್ಮನ ಬೋಧಗ ಹರಿಯೆ
ಸ್ವಸ್ಥಿರ ಚಿತ್ತನಯ್ಯಾ !
ಸಂಸಾರಮಾಯೆ ಪ್ರಾಣವಾಗಿಪ್ಪವರಿಗೆ ನಿಃಸಂಸಾರವುಂಟೇನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥ ಪ್ರಭುವೆ ? ॥ ೧೮೬ ॥

೧೧೫೮

ಆನೆಯ ಹೆಣಕ್ಕೆ ಕೋಡಗ ಶೋಕಂಗೈವುದ ಕಂಡೆ.
ಮಾಗಿಗಂಜಿದ ಕೋಗಿಲೆ ಮರುಜೀವಣೆಗೆಯ
ಬೆಟ್ಟವೊಳಡಗುವುದ ಕಂಡೆನು.
ಸಾಗರದ ಮೇಲೆ ಹಾರುವ ಹಂಸ ಭ್ರಮರನ ಗೆಣೆವಿಡಿಯಲಿ.
ಯತಿ ಸಿದ್ಧ ಸಾಧ್ಯರೆಲ್ಲ ಸಂಸಾರಭರಿತರಾದರೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ? ॥ ೧೮೭ ॥

೧೧೫೯

ಹಳ್ಳದೊಳು ತೇಲಿಹೋಗುವ ಕಂಬಕ ತೊರೆನೆರೆಗಳು ಮುಸುಕಿ
ಹೋಗುತಿದೆ ನೋಡಾ !
ತೊರೆನೆರೆಗಳ ಸಂಭ್ರಮದಲ್ಲಿ ಹೋಗುವ ಸ್ತಂಭ

ಆರಿಗೆ ಕಾಣಬಾರದು ನೋಡಾ !
ಹಳ್ಳವ ಬತ್ತಿಸಿ, ತೊರೆನೆರೆಗಳ ಕೆಡಿಸಿ,
ಹಳ್ಳದೊಳಿಹ ಕಂಬದೊಳಿಪ್ಪ ಮಾಣಿಕ್ಯವ
ಸಾಧಿಸಿಕೊಳಬಲ್ಲರೆ ನಿಃಸಂಸಾರಿ ನಿರಾಭಾರಿ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೮೮ ||

೧೧೬೦

ಇ[ರಿ]ವಾಕಳದೆರಡು ಕೋಡು ಧರೆಯಾಕಾಶಕ್ಕೆ ಬೆಳೆದಿಪ್ಪುದ ಕಂಡೆನು
ಆಕಳಕೊಂಬಿನ ಭಯಕೆ ರಂಭೆಯರು
ಅಮೃತವ ತೊರೆಗಿಳಿಸಲಾರದೆ
ಕರೆವ ಮಗಿಯೊಳಡಗುವುದ ಕಂಡೆನು.
ಕೊಂಬ ಮುರಿದು, ಗೋವ ತುರಿಸಿ,
ರಂಭೆಯರು ಕರೆದ ಅಮೃತವ ದಣಿಯಲುಂಡು
ನಿಸ್ಸಂಸಾರಿಯಾಗಿಪ್ಪರ ತೋರಿ ಬದುಕಿಸು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೮೯ ||

೧೧೬೧

ಸಾಸುವೆಯ ಮೇಲೆ ಸಾಗರ ಹರಿವುದ ಕಂಡೆನು.
ರಾಶಿಯನೊಕ್ಕುವ ಒಕ್ಕಲಿಗ ರಾಶಿಯ ನುಂಗುವುದ ಕಂಡೆನು.
ಮಾಸಿದ ಕಪ್ಪಡವ ಅಂಗಕ್ಕೆ ತೊಟ್ಟು, ಅಂಗನೆ,
ಮೂರುಲೋಕವ ಏಡಿಸುವುದ ಕಂಡೆನು.
ಮುಂಡ ಕುಣಿಯದ ಮುನ್ನ ಲೋಕವೆಲ್ಲ ಭಂಡಾಗಿ,
ಸಂಸಾರಬಂಧನರಾಗಿರುವುದ ಕಂಡೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೯೦ ||

೧೧೬೨

ಅತ್ತಿಯಹಣ್ಣಿಗಾಗಿ ಬಂದು ಸಿಕ್ಕಿದ ಪಿಕಳಿಯಂತೆ
ವ್ಯರ್ಥ ಕಾಯರಸವಿಷಯಕ್ಕಾಸೆಗೈದು ಸತ್ತು ಸತ್ತು ಹುಟ್ಟಿ
ಭವಕ್ಕೆ ಗುರಿಯಾಗಿ,
ಮಾಯಾಬಲೆಯ ಸಂಸಾರಬಂಧನದೊಳು ಬಂದು ಸಿಲ್ಕಿದೆನಯ್ಯಾ.
ಮಾಯೆಯ ಹರಿದು, ಸಂಸಾರಬಂಧನವ ಕೆಡಿಸಿ,
ಭವರೋಗಕ್ಕೆ ವೈದ್ಯನ ಮಾಡೋ ಶಿವ ವಿಶ್ವಕುಟುಂಬಿ ಮಹಾದೇವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೧೯೧ ||

೧೧೬೩

ಅಂಗಗುಣಸಂಸಾರಿಗೆ ಲಿಂಗಗುಣಸಂಸಾರವುಂಟೇನಯ್ಯಾ ?
ಲಿಂಗಗುಣಸಂಸಾರಿಗೆ ಅಂಗಗುಣಸಂಸಾರವುಂಟೇನಯ್ಯಾ ?

ಈ ಲಿಂಗ ಅಂಗವೆಂಬ ಉಭಯ ಮಧ್ಯೆ ಜ್ಞಾನಸಂಸಾರಿಯಾಗಿಪ್ಪ
ಶರಣ ಬಸವಣ್ಣ ಚೆನ್ನಬಸವಣ್ಣ ಪ್ರಭುರಾಯ
ಮೋಳಿಗೆಯ್ಯಗಳು ಮುಖ್ಯವಾದ ಏಳುನೂರಾ ಎಪ್ಪತ್ತು
ಅಮರಗಣಂಗಳ ಪಾದಕ್ಕೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೯೨ ॥

## ೧೧೬೪

ಅರ್ಥ ಪ್ರಾಣ ಅಭಿಮಾನವ ಗುರುಲಿಂಗಜಂಗಮಕ್ಕೆ ಸವೆದು,
ಸಂಸಾರಬಂಧನವ ಕಳೆದ ಸಂಸಾರಿಗಳಿಗೆ ಸದ್ಭಕ್ತರಿಗೆ
ಸಂಸಾರಿಗಳೆನಬಹುದೆ ? ಎನಲಾಗದು.
ಅದು ಎಂತೆಂದರೆ :
ಚಂದ್ರಮನ ಕಿರಣದೊಳು ಬಿಸಿಯುಂಟೇನಯ್ಯಾ ?
ಪರಮಾತ್ಮನ ಬೆರೆದ ನಿಬ್ಬೆರಗಿ[ನ] ಶರಣರಿಗೆ ಸಂಸಾರ ಉಂಟೇನಯ್ಯಾ ?
ತನುಸಂಸಾರಂಭವ ಗುರುವಿಂಗಿತ್ತು,
ಮನಸಂಸಾರಂಭವ ಲಿಂಗಕ್ಕಿತ್ತು, ಧನಸಂಸಾರಂಭವ ಜಂಗಮಕ್ಕಿತ್ತು
ನಿಃಸಂಸಾರಿಯಾಗಿಪ್ಪ
ಶರಣ ಬಸವಣ್ಣ ಚೆನ್ನಬಸವಣ್ಣ ಪ್ರಭುರಾಯ ಮುಖ್ಯವಾದ
ಪ್ರಮಥಗಣಂಗಳ ಪಾದಕ್ಕೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೯೩ ॥

## ೧೧೬೫

ರಾಗ : ಧನಶ್ರೀ

ಪಲ್ಲ : ಬಂಧನ ಸಂಸಾರದಂದುಗದ ದಾಳಿಯಲ್ಲಿ
ನೊಂದು ಬೆಂದೆನೊ ಎನ್ನ ಹುಯ್ಲು
ತಂಬಿಸು ಗುರುವೆ ಭವಹರ ನಿತ್ಯನಿರ್ಮಳಾತ್ಮಕ ಶಂಭುವೆ.

ಪದ : ಹಲವು ಜನ್ಮದಿ ಹುಟ್ಟಿ ಹಲವಾಹಾರವನುಂಡು
ಹಲವು ಭೂಮಿಯ ಮೆಟ್ಟಿ ಹಲವು ಕರ್ಮವ ಕಂಡು
ಹಲವು ಭವಕೀಡಾಗಿ ಹಲವು ಹಂಬಲಿಸುತಿರುವ
ಹೊಲೆಜನ್ಮ ಸಂಸಾರ ಮಾಯಾರಕ್ಕಸಿ ತುಡುರೆ
ನಿಲ್ಲಲಾರದಲಿ ನಿಮ್ಮ ಮರೆಹೊಕ್ಕೆ ಎನ್ನ ಕೊಡದೆ
ಗೆಲಿದುಕೊ ದುರಿತಹರ ಕರುಣಾಳು ಪರಮಗುರುವೆ. । ೧ ।

ಸಟೆ ಠಕ್ಕು ಠೌಳಿ ಅಟಮಟದ ಬಂಧನದ
ಕುಟಿಲಸಂಸಾರಸಾಗರದ ತೊರೆನೆರೆಗಳೊಳು
ಪುಟನೆಗೆದು ತಲೆ ಮುಣುಗುತಲಿರುವನ ಕಂಡು

ನಿಟಿಲಾಕ್ಷ ಕೃಪೆಯೆಂಬ ಹಡಗವನು ತಂದೊಲಿ
ತಟಕೆನ್ನನೆಳೆದು ತಗೆದೀಗ ಇನಿತಾತ್ಮ
ಘಟದೊಳಗೆ ಜ್ಞಾನಜ್ಯೋತಿಯ ತೀವು ಪರಮಗುರುವೆ. । ೨ ।

ರಸವಿಷಯ ಮೋಹನದ ಕೂಪಜಲದೊಳು ಮುಳುಗಿ
ದೆಸೆದೆಸೆಗೆ ಚಾಲಿವರಿವನ ಕಂಡು ಬೇಗದಲಿ
ವಿಷಕಂಠ ದುರಿತಸಂಹರ ಕರುಣಾಕರ ತೊಟ್ಟಿಲಿಗೆ
ಎಸೆವ ಹಗ್ಗವ ಕಟ್ಟಿ ಎಳೆದು ತಗೆಯೆನ್ನ ರಂ
ಬಿಸುತ ಸಂತೈಸಿ ದುಃಖದಲ್ಲಿ ಘೋರ್ಗರೆದಳುವ
ಶಿಶುವ ಬೋಳೈಸುವಂದದಲೆನ್ನ ಬೋಳೈಸು ಅಸಮಾಕ್ಷ ಪರಮಗುರುವೆ.। ೩ ।

ತೆರಣಿಯ ಹುಳು ನೂಲು ಸುತ್ತಿಕೊಂಡು ಎಸೆವ
ತೆರದಿ ಈ ಸಂಸಾರ ಸುಖದುಃಖ ಎನ್ನನು ಸುತ್ತಿ
ಪರಿಭವಕ್ಕೆ ಗುರಿಯಾಗಿ ಯೋನಿಯಂತ್ರದೆ
ತಿರುಗಿಯೆ ಬರುತಲಿರ್ದೆನು ಘೋರ ಅರಣ್ಯದೊಳು ಸುತ್ತಿ
ಹರಹರ ನಿಮ್ಮ ಸ್ಮರಣೆಯ ಮರೆದ ಕಾರಣದಿ
ದುರಿತನ್ಯಾಯದ ಬಂಧನಕೆ ಗುರಿಯಾಗಿದ್ದೆನಯ್ಯಾ ಶಿವನೆ. । ೪ ।

ಮಾಯಾಸಂಸಾರಸರ್ಪನ ವಿಷವು ತಲೆಗೇರಿ
ನೋಯುತಿದ್ದೆನು ಹಲವುವಿಧದಾಸೆಪಾಶದಲಿ
ಬೇಯುವವನ ಕಂಡು ನೀ ಬೇಗಲೊಯಿದ್ಯವ ಮಾಡಿಯೆ
ಶವವನುಳುವಿಕೋ ಭವರೋಗವೈದ್ಯ
ನಿತ್ಯ ಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭು
ನೀವಲ್ಲದೆನಗನ್ಯವಿಲ್ಲ ಕಾಯೋ ಕಾಯೋ ದೇವಾ. । ೫ ।
॥ ೧೯೪ ॥

## ಗುರುಕರುಣಸ್ಥಲ

ಸೂತ್ರ : ಇಂತು ಸಂಸಾರವ ಮಾಡಿದ ಮಹಾಮಹಿಮನು ತನ್ನ ಮುಖವ ನೋಡುವರೆ ಇದಿರಲಿ ಕನ್ನಡಿವಿಡಿದಲ್ಲದೆ ಕಾಣಬಾರದು, ಆ ತೆರದಿ ಗುರುಕುರಣವೆಂಬ ಕನ್ನಡಿಯನುಂಟು ಮಾಡಿಕೊಂಡು ಆತ್ಮದೊಳಡಗಿಹ ಪರಬ್ರಹ್ಮವ ನೋಡಬೇಕಾದ ಕಾರಣ ಶಿವಶರಣಂಗೆ ಗುರುವೆ ಅಧಿಕವಾಗಿ ಸೇವಿಸುತ್ತಿರೆ ಆ ಶಿವಶರಣನು ಗುರುಕರುಣವ ಪಡೆವುತಿದ್ದನು. ಷೋಡಶದಲ್ಲಿ ಗುರು ಕರುಣಸ್ಥಲವಾದುದು.

೧೧೬೭

ಗಗನದ ತಮವ ಕಳೆವರೆ ರವಿ ಅಧಿಕ ನೋಡಾ.
ವಿಪಿನದ ತರುಗಿರಿಕಾಷ್ಠವೆಲ್ಲಕೆಯು ಸುರತರು ಅಧಿಕ ನೋಡಾ.
ನವರತ್ನ ಮಾಣಿಕ್ಯ ಮೌಕ್ತಿಕ ವಜ್ರ ಪುಷ್ಯರಾಗ

ಅರ್ಥಭಾಗ್ಯವೆಲ್ಲಕ್ಕೆಯೂ ಪರುಷವಧಿಕ ನೋಡಾ.
ಧರೆಮೂರುಲೋಕದ ಗೋವುಗಳಿಗೆಲ್ಲ ಸುರಭಿಯಧಿಕ ನೋಡಾ.
ಈರೇಳು ಭುವನ ಹದಿನಾಲ್ಕು ಲೋಕವೆಲ್ಲಕ್ಕೆಯೂ
ಗುರುವಿಂದಧಿಕವಿಲ್ಲ ನೋಡಾ.
ಸಾಕ್ಷಿ : ''ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಂ ।
ವಿದಿತಂ ವಿದಿತಂ ವಿದಿತಂ ವಿದಿತಂ ಶಿವಶಾಸನಂ ॥''
ಎಂದುದಾಗಿ,
ಗುರುವಿಂದಧಿಕವಿಲ್ಲ, ಗುರುವಿಂದಧಿಕವಿಲ್ಲ, ಗುರುವೆ ಪರಮಾತ್ಮ
ಎನ್ನ ಮಾನವಜನ್ಮದ ಹೊಲೆಯ ಕಳೆದು
ಶಿವದೇಹಿಯ ಮಾಡಿದ ಪರಮಗುರು ಪಡುವಿಡಿ
ಸಿದ್ಧಮಲ್ಲಿನಾಥಪ್ರಭುವೆಂಬ ಗುರುವ ಮರೆದವರಿಗೆ ಇದೇ ನರಕ. ॥ ೧೯೫ ॥

೧೧೬೭

ಹಡಗ ಹರಿಗೋಲ ನಂಬಿದವರು
ಕಡಲತೊರೆ ದಾಂಟರೇನಯ್ಯಾ ?
ಧನು ಖಡ್ಗವ ಪಿಡಿದು ಕಾಳಗವ ಮಾಡಿದವರು
ರಣವ ಗೆಲ್ಲರೇನಯ್ಯಾ ?
ಗುರುವ ನಂಬಿದವರು ಭವವ ಗೆಲ್ಲರೇನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ? ॥ ೧೯೬ ॥

೧೧೬೮

ಗುರುವೆ ಸುರತರುವೆ ಸಕಲಾಗಮದಿರವೆ
ಮುಕ್ತಿಯಾಗರವೆ ಚಿದ್ಘನಗುರುವೆ ಚಿತ್ಪ್ರಕಾಶಮೂರ್ತಿಗುರುವೆ.
ಶ್ರೀಗುರುವೆ ಶಾಂತಿಕಳಾ ಗುರುವ ವಿದ್ಯಾಗುರುವೆ
ಮದ್ಗುರುವೆ ಜ್ಞಾನಗುರುವೆ ಪರಬ್ರಹ್ಮಗುರುವೆ
ಪರಮಾನಂದಗುರುವ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ,
ನಿಮ್ಮಡಿದಾವರೆಯೊಳಗೆನ್ನ ಮನವ ಭೃಂಗವ ಮಾಡಾ. ॥ ೧೯೭ ॥

೧೧೬೯

ಏನು ಸುಕೃತದ ಫಲವೋ, ಅದೇನು ಪುಣ್ಯವೋ,
ಅದೇನು ಭಾಗ್ಯವೋ, ಅದೇನು ತಪ[ಸಿನ] ಫಲವೋ,
ಅದೇನು ಕಾರಣವಾಗಿ ಗುರುಪಾದ ದೊರಯಿತ್ತು,
ಗುರುಪಾದ ದರುಶನದಿಂದ ಕಿಂಕುರ್ವಾಣ ಭಯಭಕ್ತಿಯಿಂದಿರುತಿರ,
ಗುರು ಕರುಣಿಸಿ ಇಷ್ಟಲಿಂಗವನೆನ್ನ ಕರಕೆ ಸೇರಿಸಿ,
ಪೂರ್ವಜನ್ಮವ ಕಳೆದು ಪುನರ್ಜಾತನ ಮಾಡಿದ

ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ
ಗುರುವ ಮರೆದವರಿಗೆ ಇದೇ ನರಕ. || ೧೯೮ ||

೧೧೭೦

ಹಿಂದೇನು ಸುಕೃತವ ಮಾಡಿದ ಕಾರಣ
ಇಂದೆನಗೆ ಗುರುಪಾದ ದೊರೆಯಿತ್ತು ನೋಡಾ.
ಗುರುವೆಂಬೆರಡಕ್ಷರದ ಸ್ಮರಣೆಯ ನೆನೆದು
ಪರಿಭವವ ತಪ್ಪಿಸಿಕೊಂಡೆ ನೋಡಾ.
ಗುರುವೆಂಬೆರಡಕ್ಷರವನೇನೆಂದು ಉಪಮಿಸವೆನಯ್ಯಾ,
ಸಾಕ್ಷಿ : ''ಗುಕಾರಂ ಚ ಗುಣಾತೀತಂ ರುಕಾರಂ ರೂಪವರ್ಜನಮ್ ।
ಗುಣರೂಪಮತೀತೊ ಯೋ ಸದೃಷ್ಟಃ [ಸ]ಗುರುಃ ಸ್ಮೃತಃ ॥''
ಎಂದುದಾಗಿ,
ಇಂತಪ್ಪ ಗುರುವನೆಂತು ಮರವೆನಯ್ಯಾ.
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ
ಗುರುವ ಮರೆದವರಿಗಿಂದೇ ನರಕ. || ೧೯೯ ||

೧೧೭೧

ಅಂದು ಸಹಸ್ರಜನ್ಮಾಂತರದಲ್ಲಿ ತಪೋಧ್ಯಾನವ ಮಾಡಿ
ಪಡೆದಕಾರಣ ಮುಂದೆನಗೆ ಗುರುಪಾದ ದೊರೆಯಿತ್ತು.
ಆ ಗುರುಪಾದದರುಶನದಿಂದ ಹಿಂದೇಳು ಜನ್ಮಾಂತರದಲ್ಲಿ
ಭವಾಂತರ ಹಿಂಗಿ, ಇಂದೆನಗೆ ಶಿವಲಿಂಗವ[ನಿರಿಸೆ],
ಶಿವದೇಹಿ ಶಿವಭಕ್ತ ಶಿವಮಾಹೇಶ್ವರನೆಂಬ
ನಾಮ ನನಗಾಯಿತ್ತು ನೋಡಾ.
ಸಾಕ್ಷಿ : ''ಜನ್ಮಾಂತರಸಹಸ್ರೇಷು ತಪೋ ಧ್ಯಾನಂ ಸಮಾಚರೇತ್ ।
ನರಾಣಾಂ ಕ್ಷೀಣಪಾಪಾನಾಂ ಶಿವೇ ಭಕ್ತಿಃ ಪ್ರಜಾಯತೇ ॥''
ಎಂದುದಾಗಿ,
ಹೀಗೆಂಬ ಸುಕೃತಫಲದಿಂದ ಭವಸಾಗರವ ದಾಂಟಿ
ಭಕ್ತ ಬಸವಣ್ಣ ಮಾಹೇಶ್ವರ ಪ್ರಭುರಾಯರು ಮುಖ್ಯವಾದ
ಪ್ರಮಥಗಣಂಗಳ ಲೆಂಕರ ಲೆಂಕನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೦೦ ||

೧೧೭೨

ಗುರುವೆ ಬೇರೆ ಹರ ಬೇರೆಯೆಂಬ
ಕುನ್ನಿ ಮಾನವ ನೀ ಕೇಳು.
ಗುರು ಬೇರಲ್ಲ, ಹರ ಬೇರಲ್ಲ; ಗುರುವೂ ಹರನೂ ಒಂದೇ.
ಗುರು ಕಿರಿದ ಮಾಡಿ, ಹರನ ಹಿರಿದು ಮಾಡಬಾರದು.

ಹರನ ಕಿರಿದು ಮಾಡಿ, ಗುರುವ ಹಿರಿದು ಮಾಡಬಾರದು.
ಪಾರ್ವತಿಯೊ[ಳು] ಪರಮೇಶ ಗುರುವಿನ ಮಹಿಮೆ ಹೇಳಿದ.
ಕೇಳರಿಯಾ ಮನುಜ ?
ಅದು ಎಂತೆಂದರೆ.
ಗುರುದೇವನು ಮಹಾದೇವನು, ಗುರುದೇವನೆ ಸದಾಶಿವನು,
ಗುರುವಿಂದ ಪರವಿನ್ನಾವುದೂ ಇಲ್ಲ.
ಸಾಕ್ಷಿ : ''ಗುರುದೇವೋ ಮಹಾದೇವೋ ಗುರುದೇವಃ ಸದಾಶಿವಃ ।
ಗುರುದೈವಾತ್ ಪರನ್ನಾಸ್ತಿ ತಸ್ಮೈ ಶ್ರೀಗುರುವೇ ನಮಃ ॥''
ಎಂದುದಾಗಿ,
ಹೀಗೆಂಬ ಗುರುವ ಮರೆದಾಗಳೆ ಭವಮಾಲೆ ತಪ್ಪದಯ್ಯಾ,
[ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ]. ॥ ೨೦೧ ॥

## ೧೧೭೩

ಹಲವು ತರುಗಿರಿ ತೃಣಕಾಷ್ಠವೆಲ್ಲಕೆಯೂ ಒಂದೇ ಕಿಡಿ ಸಾಲದೇನಯ್ಯಾ !
ಹಲವು ಜನನದಲ್ಲಿ ಒದಗಿದ ಪಾಪಂಗಳ ಸುಡುವರೆ
ಗುರುಕರುಣವೆಂಬ ಒಂದೇ ಕಿಡಿ ಸಾಲದೇನಯ್ಯಾ ?
ಸಾಕ್ಷಿ : ''ಇಂಧನಂ ವಹ್ನಿಸಂಯುಕ್ತಂ ವೃಕ್ಷನಾಮ ನ ವಿದ್ಯತೇ ।
ಗುರುಸಂಸಾರಸಂಪನ್ನಃ ಸ ರುದ್ರೋ ನಾತ್ರ ಸಂಶಯಃ ॥''
ಎಂದುದಾಗಿ,
ಅದು ಕಾರಣ, ಎನ್ನ ಭವವ ಕಳೆದು ಲಿಂಗದೇಹಿಯ ಮಾಡಿದ,
ಮಾಂಸಪಿಂಡವ ಕಳೆದು ಮಂತ್ರಪಿಂಡವ ಮಾಡಿದ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥನೆಂಬ ಗುರುವ
ಮರೆದವರಿಗೆ ಇದೇ ನರಕ. ॥ ೨೦೨ ॥

## ೧೧೭೪

ಗುರುವ ನರನೆಂದು ನುಡಿವ ಕುರಿಮಾನವರ
ನೆರೆಹೊರೆಯಲ್ಲಿರಲಾಗದು.
ದೊರೆಸಂಗವಾದರೂ ನುಡಿಸಲಾಗದು.
ನುಡಿಸಿದರೆ ಮಹಾನರಕವಯ್ಯಾ !
ಗುರುವೆ ಪರಶಿವನು, ಗುರುವೆ ಪರಬ್ರಹ್ಮ, ಗುರುವು ಹರನಿಂದಲಧಿಕ.
ಗುರುವಿನಿಂದ ಹರನ ಕಾಣ್ಬರಲ್ಲದೆ, ಹರನಿಂದ ಗುರುವ ಕಾಣಬಾರದು.
ಅದು ಎಂತೆಂದರೆ :
ಮರ್ತ್ಯಲೋಕಕ್ಕೆನ್ನ ಮಾನವಶರೀರಿಯ ಮಾಡಿ ಕಳುಹಿ,
ಎನ್ನ ಮಾನವಜನ್ಮದ ಬಂಧನ ಕಳೆದು,
ಗುರುವಾಗಿ ಬಂದು ಮುಕ್ತಿಯ ತೋರಿಸಿ

ಕೈಲಾಸಕೆನ್ನ ಯೋಗ್ಯನ ಮಾಡಿದ.
ಇಹದಲ್ಲಿ ಪುಣ್ಯ, ಪರದಲ್ಲಿ ಮುಕ್ತಿಯೆಂಬ ಇವನೆರಡು
ಗುರುಪಾದದಲ್ಲಿಯೆ ಕಂಡೆನಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೦೩ ॥

೧೧೭೫

ಗುರುವೆಂಬೆರಡಕ್ಷರವು ಹರನಾಮವಲ್ಲದೆ ನರನಾಮವೇನಯ್ಯಾ ?
ನರರ ನಾಮವೆನಲಾಗದು.
ಗಿರಿಜೆಗೆ ಪರಮಾತ್ಮ ಹೇಳಿದ ವಾಕ್ಯವ ಕೇಳಿ ಅರಿಯಾ ಮನುಜ.
ಸಾಕ್ಷಿ : ''ಗುಕಾರಂ ಮಮ ರೂಪಂಚ ರುಕಾರಂ ತವ ರೂಪಕಂ ।
ಉಭಯೋಃ ಸಂಗಮೋ ದೇವಃ ಗುರುರೂಪೇ ಮಹೇಶ್ವರಿ ॥''
ಎಂದುದಾಗಿ,
ಪಾಷಾಣದಮುಖದಲ್ಲಿ ಪುರುಜೀವಣೆಗ ಉದಯವಾದಂತೆ,
ನರಜನ್ಮಮುಖದಿ ಬಂದು ಎನ್ನ ಸರ್ವಜನ್ಮವ ಕಳೆದು
ಪುನರ್ಜಾತನ ಮಾಡಿದ ಪರಮಗುರು
ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ ಗುರುವೆ ಎನ್ನ ಪ್ರಾಣ. ॥ ೨೦೪ ॥

೧೧೭೬

ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ್ಯವೆಂಬ
ಪರಶಿವನ ಪಂಚಮುಖವೆ ಪಂಚಕಳಸವೆಂದಿಕ್ಕಿ,
ಹಸೆ–ಹಂದರದ ನಡುವೆ, ಶಿವಗಣಂಗಳ ಮಧ್ಯದಲ್ಲಿ
ದೀಕ್ಷವನಿತ್ತು, ದೀಕ್ಷವೆಂಬೆರಡಕ್ಷರದ ವರ್ಮವನರುಹಿದ.
ದೀಕಾರವೆ ಲಿಂಗಸಂಬಂಧವೆಂದು,
ಕ್ಷಕಾರವೆ ಮಲತ್ರಯಂಗಳ ಕಳೆವುದೆಂದು ಅರುಹಿದ.
ಸಾಕ್ಷಿ : ''ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಂ ।
ದೀಯತೇ ಕ್ಷೀಯತೇ ಚೈವ ಶಿವದೀಕ್ಷಾಭಿಧೀಯತೇ ॥''
ಎಂದುದಾಗಿ,
ದೀಕ್ಷದ ವರ್ಮವನರುಹಿ, ಅರುಹೆಂಬ ಸೂತ್ರವ ಹಿಡಿಸಿ,
ಮರವೆಂಬ ಮಾಯವ ಕಳೆದು, ಹಸ್ತಮಸ್ತಕ ಸಂಯೋಗ ಮಾಡಿ,
ನೆತ್ತಿಯೊಳಿಹ ಪರಬ್ರಹ್ಮವಸ್ತುವ ಇಂತೆನ್ನ
ಕರ ಉರ ಶಿರ ಮನ ಜ್ಞಾನದೊಳು ನೆಲೆಗೊಳಿಸಿ,
ಪ್ರಣವಮಂತ್ರವ ಕರ್ಣದಲ್ಲಿ ಹೇಳಿ,
ಮಾಂಸಪಿಂಡವ ಕಳೆದು ಮಂತ್ರಪಿಂಡವ ಮಾಡಿದ ಗುರು
ಪರಮಾತ್ಮನಲ್ಲದೆ ನರನೆನಬಹುದೇ ? ಎನಲಾಗದು.
ಎಂದರೆ ಕುಂಭೀ ನಾಯಕ ನರಕದಲ್ಲಿಕ್ಕುವ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೦೫ ॥

೧೧೭೭

ಪರಸ್ರಾವದಲ್ಲಿ ಹುಟ್ಟಿ, ನರಸ್ರಾವವ ನೆನೆವ
ಭಂಢರನೆನಗೊಮ್ಮೆ ತೋರದಿರಯ್ಯಾ !
ಪರಸ್ರಾವವೆಂದರೆ–ಗುರುವಿನ ಕರಕಮಲದಲ್ಲಿ ಹುಟ್ಟಿ
ನರರ ತಂದೆತಾಯಿಗಳೆನಬಹುದೆ ? ಎನಲಾಗದು.
ನಿಮಗೆ ತಂದೆ ತಾಯಿಗಳೆಂದರೆ ಹೇಳುವೆ ಕೇಳಿರೊ.
ಗುರುವೆ ತಾಯಿ, ಗುರುವೆ ತಂದೆ, ಗುರುವೆ ಬಂಧು,
ಗುರುವೆ ಬಳಗ, ಗುರುವಿನಿಂದ ಅಧಿಕವಾಗಿಪ್ಪರು ಇನ್ನಾರೂ ಇಲ್ಲ.
ಸಾಕ್ಷಿ : ''ಗುರುರ್ಮಾತಾ ಗುರುಃಪಿತಾ ಗುರುಶ್ಚ ಬಂಧುರೇವ ಚ ।
ಗುರುದೈವತಾತ್‌ಪರಂ ನಾಸ್ತಿ ತಸ್ಮೈ ಶ್ರೀ ಗುರುವೇ ನಮಃ ॥''
ಎಂದುದಾಗಿ,
ಗುರುಪುತ್ರನಾಗಿ ನರರ ಹೆಸರ ಹೇಳುವ
ನರಕಜೀವಿಯನೆನಗೊಮ್ಮೆ ತೋರದಿರಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೦೬ ॥

೧೧೭೮

ಗುರುದೀಕ್ಷೆಯ ಪಡೆದು, ಗುರುಲಿಂಗವ ಶಿರದಲ್ಲಿ ಧರಿಸಿ,
ಗುರುಮಂತ್ರವ ಕರ್ಣದಲ್ಲಿ ಕೇಳಿ, ಗುರುಕುಮಾರ ತಾನಾಗಿ,
ಮುಂಡೆಗೆ ಮುತ್ತೈದೆತನ ಬಂದಂತೆ ಭವದಂಡಲೆಯ ಕಳೆದು,
ಶಿವಭಕ್ತನ ಮಾಡಿದ ಗುರುದೈವವನರಿಯದೆ,
ಅನ್ಯದೈವವ ಹೊಗಳುವ ಕುನ್ನಿ ಮಾನವ ನೀ ಕೇಳಾ !
ಗುರುದೇವರಲ್ಲದನ್ಯದೇವರ ಹೊಗಳಿದರೆ ನರಕವೆಂಬುದನರಿಯಾ.
ಗುರುವೆ ಪರಬ್ರಹ್ಮ, ಪರಶಿವ.
ಗುರುವಿನಿಂದ ಪರಮಾತ್ಮನ ನೆನಹು ಅಂಗದೊಳು ನೆಲೆಗೊಂಡಿತಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೦೭ ॥

೧೧೭೯

ಗುರುಹಸ್ತದಿಂದ ಹುಟ್ಟಿದ ಮೇಲೆ
ಶಿವಭಕ್ತನೆಂಬ ನಾಮವಾದೀತಯ್ಯಾ !
ಗುರುಹಸ್ತದಿಂದ ಹುಟ್ಟದಿದ್ದರೆ ಶಿವಭಕ್ತನೆಂಬ ನಾಮವೆಲ್ಲಿಯದಯ್ಯಾ ?
ತಮ್ಮ ಪೂರ್ವಜನ್ಮವನು ಗುರುವಿಂಗೊಪ್ಪಿಸಿ ಪುನರ್ಜಾತರಾಗಿ
ಗುರುವಿನ ಕರುಣ ಕೃಪೆಯ ಪಡೆದ ಮೇಲೆ
ಅನ್ಯಜೀವಿಯ ಹೊಗಳುವ ನರಕಜೀವಿಯನೆನಗೊಮ್ಮೆ ತೋರದಿರಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೦೮ ॥

೧೧೪೦

ಗುರು ನರನೆಂದು, ಸತ್ತನುಕೆಟ್ಟನುಯೆಂಬ ನರಕಜೀವಿ ನೀ ಕೇಳಾ.
ಗುರು ಸತ್ತರೆ ಜಗವುಳಿಯಬಲ್ಲುದೆ ?
ಗುರು ಅಳಿವವನೂ ಅಲ್ಲ, ಉಳಿವವನೂ ಅಲ್ಲ.
ಸಾಕ್ಷಿ : ''ಸ್ಥಾವರ ಜಂಗಮಾದರಂ ನಿರ್ಮಾಲ್ಯೇ ಸ್ಥಿರಮೇವ ಚ । (?)
ಜ್ಞಾನವಂದಿತಪಾದಾಯ ತಸ್ಮೈ ಶ್ರೀಗುರುವೇ ನಮಃ ॥''
ಎಂದುದಾಗಿ,
ಗುರು ಸತ್ತ, ಕೆಟ್ಟ, ಎಂದು ಬಸುರ ಹೊಯಿದುಕೊಂಡು ಅಳುತಿಪ್ಪ
ಕುರಿಮಾನವರಿಂಗೆ ಗುರುವಿಲ್ಲ, ಲಿಂಗವಿಲ್ಲ,
ಜಂಗಮವಿಲ್ಲ, ಪಾದೋದಕ ಪ್ರಸಾದವಿಲ್ಲವಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೦೯ ॥

೧೧೪೧

ಗುರುದೀಕ್ಷೆಯಿಲ್ಲದ ಶಿಲೆಯ ಕೊರಳಲ್ಲಿ ಕಟ್ಟಿಕೊಂಡು
ಲಿಂಗವೆಂದು ನುಡಿವ ಚಾಂಡಾಲಿ ನೀ ಕೇಳಾ.
ಗುರುದೀಕ್ಷೆಯಿಲ್ಲದುದು ಶಿಲೆಯಲ್ಲದೆ, ಲಿಂಗವಲ್ಲ.
ಅದು ಎಂತೆಂದರೆ :
ಭಿತ್ತಿಯ ಮೇಲಣ ಚಿತ್ರಕ್ಕೆ ಚೈತನ್ಯವುಂಟೇನಯ್ಯಾ ?
ಗುರುದೀಕ್ಷವಿಲ್ಲದ ಲಿಂಗಕ್ಕೆ ಪ್ರಾಣಕಳೆಯುಂಟೇನಯ್ಯಾ ?
ಪ್ರೇತಲಿಂಗವ ಕೊರಳಲ್ಲಿ ಕಟ್ಟಿ ಭೂತಪ್ರಾಣಿಗಳಾಗಿ
ಲಿಂಗವಂತರೆಂಬ ಪಾಷಂಡಿಗಳ ನೋಡಾ !
ಸಾಕ್ಷಿ : ''ಪ್ರೇತಲಿಂಗ ಸಂಸ್ಕಾರಿ ಭೂತಪ್ರಾಣೀ ನ ಜಾನಾತಿ''
ಎಂದುದಾಗಿ,
ಹೆಸರಿನ ಲಿಂಗ, ಹೆಸರಿನ ಗುರುವಾದರೆ
ಅಸಮಾಕ್ಷನ ನೆನಹು ನೆಲೆಗೊಳ್ಳದು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೦ ॥

೧೧೪೨

ಗುರು ಸಂಸಾರಿ, ಶಿಷ್ಯ ಯತಿಯಾದರೇನಯ್ಯಾ !
ಗುರುವಿನೆಡೆಗೆ ಶಿಷ್ಯ ಭಕ್ತಿ ಕಿಂಕುರ್ವಾಣವಿರಬೇಕಯ್ಯಾ.
ಇಲ್ಲದ ಅಹಂಕಾರದಲ್ಲಿ
'ನಾ ಯತಿ, ಗುರು ಸಂಸಾರಿ ' ಎಂಬ ಭಾವ
ಅಂಗದೊಳು ಹೊಳೆದರೆ ಕೂಗಿಡೆ ಕೂಗಿಡೆ ನರಕದಲ್ಲಿಕ್ಕುವ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೧ ॥

೧೧೮೩

ಗುರು ಸಹಜವಾಗಿರೆ,
ಶಿಷ್ಯ ಸತ್ಯ ಪವಾಡಪುರುಷನಾದರೂ ಆಗಲಿ.
ಶಿಷ್ಯನ ಭಾವಕ್ಕ ಗುರು ಹೆಚ್ಚಲ್ಲದೆ,
ಗುರುವಿನ ಭಾವಕ್ಕೆ ಶಿಷ್ಯ ಹೆಚ್ಚೇ ?
'ನಾ ಪವಾಡಪುರುಷ, ಗುರು ಸಹಜಮಾನವ ಭಾವ ' ಎಂಬ
ಅಂಗದೊಳು ಹುಟ್ಟಿತಾದರೆ ಇಪ್ಪತ್ತೆಂಟುಕೋಟಿ ನರಕದಲ್ಲಿಕ್ಕುವ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೨ ॥

೧೧೮೪

ಪುರುಷನಿಂದ ಸತಿ ಹಿರಿಯಳಾದರೂ ಆಗಲಿ,
ಹಸೆಹಂದರವನಿಕ್ಕಿ ಮದುವೆಯ ಮಾಡಿದ ಮೇಲೆ
ಪುರುಷನಿಂದ ಕಿರಿಯಳು ನೋಡಾ.
ಗುರುವಿಗಿಂದ ಶಿಷ್ಯ ಅರುಹುಳ್ಳಾತನಾದರೂ ಆಗಲಿ,
ಶಿಷ್ಯನ ಭಾವಕ್ಕ ಗುರು ಅಧಿಕ ನೋಡಾ.
ನಾನರುಹುಳ್ಳಾತ, ಗುರುವಿಗರುಹುವಿಲ್ಲೆಂದು ಜರದು ನುಡಿವ ನುಡಿ
ಅಂಗದೊಳು ಹೊಳೆದರೆ ಕುಂಭಿನಿಯ ಪಾಪದೊಳಿಕ್ಕುವ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೩ ॥

೧೧೮೫

ಗುರುವಿನಲ್ಲಿ ಗುಣ ವಿದ್ಯೆ ಕುಲ ಬಾಲ್ಯ ಯೌವನ
ವೃದ್ಧನೆಂದು ಅರಸಲುಂಟೇ ? ಅರಸಿದರೆ ಮಹಾಪಾತಕ.
ಸಾಕ್ಷಿ : " ಆಚಾರ್ಯೇ ಬಾಲಬುದ್ಧಿಶ್ಚ ನರಬುದ್ಧಿಸ್ತಥೈವ ಚ ।
ಅಸಿಷ್ಟ ಬುದ್ಧಿಭಾವೇನ ರೌರವಂ ನರಕಂ ವ್ರಜೇತ್ ॥ "
ಎಂದುದಾಗಿ,
ಎನ್ನ ಗುರು ಬಾಲನೂ ಅಲ್ಲ, ಯೌವನನೂ ಅಲ್ಲ, ವೃದ್ಧನೂ ಅಲ್ಲ,
ಮೃತರಹಿತ ಪರಶಿವ.
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ
ಗುರುವ ಮರೆದವರಿಗೆ ಇದೇ ನರಕ. ॥ ೨೧೪ ॥

೧೧೮೬

ಗುರುಲಿಂಗವಿದ್ದ ಊರು ಸೀಮೆಯ ಕಂಡಾಕ್ಷಣವ
ತುರಗ ಅಂದಣಾದಿಗಳನಿಳಿದು, ಭಯಭಕ್ತಿಕಿಂಕುರ್ವಾಣದಿಂದ
ಹೋಗಿ, ಗುರುವಿನ ಪಾದೋದಕವ ಕೊಂಬುದು ಶಿಷ್ಯಗೆ ನೀತಿ.

ಸಾಕ್ಷಿ : '' ಶಿಷ್ಯೋ ಗುರುಸ್ಥಿತಂ ಗ್ರಾಮಂ ಪ್ರವೇಶಿತಂ ವಾಹನಾದಿಕಂ ।
ವರ್ಜಯೇತ್ ಗೃಹಸಾಮಿಪ್ಯಂ ಛಂದಯೋಶ್ಚ ವಿಪಾದುಕಃ ॥ ''
ಎಂದುದಾಗಿ,
ಹೀಗೆಂಬುದನರಿಯದೆ ಅಹಂಕಾರದಲ್ಲಿ ಬೆಬ್ಬನೆ ಬೆರತು,
ಗುರುವಿದ್ದ ಊರು ಸೀಮೆಯೊಳು ಅಂದಣ ಕುದುರೆಯನೇರಿ
ನಡೆದರೆ ರೌರವ ನರಕದಲ್ಲಿಕ್ಕುವ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೫ ॥

## ೧೧೮೭

ಗುರುವರಿಯದವನೆಂದುದಾಸೀನವ ಮಾಡಿ
ನೆರೆ ಬಲ್ಲವರನರಸಿ, ಭಕ್ತಿಯ ಮಾಡುವ
ಪಾಪಿ ಮಾನವ ನೀ ಕೇಳು.
ಸಾಕ್ಷಿ : ''ಗುರೌ ಸನ್ನಿಹಿತೇ ಯಸ್ತು ಪೂಜಾಯಾಮನ್ಯಮಾನಸಃ ।
ಸ ಪಾಪೀ ನರಕಂ ಯಾತಿ ಕಾಲಸೂತ್ರಮಿಮೋತ್ಸರೇತ್ ॥''
ಎಂದುದಾಗಿ,
ಗುರುವರಿಯದವನೂ ಅಲ್ಲ, ಬಲ್ಲವನೂ ಅಲ್ಲ,
ಗುರು ನಿರಂಜನ, ಗುರು ಪರಶಿವ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೬ ॥

## ೧೧೮೮

ಸರ್ವರಲ್ಲಿ ಹುಸಿಯನಾಡಿದರೆ ಆಡಲಿ,
ಗುರುವಿನೆಡೆಗೆ ಹುಸಿಯಿಲ್ಲದಿರಬೇಕು.
ಸರ್ಪ ಕಡೆಯಲೆಲ್ಲ ಡೊಂಕಾಗಿ ಚರಿಸುತ್ತ
ಹುತ್ತದೆಡೆಗೆ ಸಸಿನವಾಗಿ ಹೋದಂತೆ.
ಅನ್ಯರೆಡೆಗೆ ಹುಸಿ ಠಕ್ಕು ಠೌಳಿ ಇದ್ದರೂ ಇರಲಿ,
ಗುರುವಿನೆಡೆಗೆ ಹುಸಿಬೇಡ.
ಕೊಟ್ಟೆ ಕೊಂಡೆನೆಂದು ನುಡಿದು ಕೊಡದೆ ವಾಚಾಳತ್ವವಾದರೆ
ಬ್ರಾಹ್ಮಣನ ಕೊಂದ ಪಾಪದಷ್ಟು ಪಾಪ
ನಿಮಗಂಡಲೆವವು ಕಾಣಿರೊ !
ಸಾಕ್ಷಿ : ''ಯೋ ಶುದ್ಧಿ ಗೋಪಾದಪ್ರೋಕ್ತಂ ಗುರುರಂಘ್ರಿಸುತಸ್ಯ ಚ ।
ವಾಗ್ವಿದನ್ಯಪ್ರದಾನೇನ ಬ್ರಹ್ಮಹತ್ಯಾಸಮಾಹಿತಃ (?) ॥''
ಎಂದುದಾಗಿ,
ಇಂತಪ್ಪ ಗುರುವಿನೆಡೆಗೆ ಹುಸಿ[ದು] ಜೀವಿಸೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೭ ॥

೧೧೮೯

ಧ್ಯಾನಕೆಲ್ಲ ಮೂಲ ಗುರುವಿನ ಮೂರ್ತಿ ಕಾಣಿರೊ !
ಪೂಜೆಗೆಲ್ಲ ಮೂಲ ಗುರುವಿನ ಪಾದ ಕಾಣಿರೋ !
ಮಂತ್ರಕೆಲ್ಲ ಮೂಲ ಗುರುವಿನ ವಾಕ್ಯ ಕಾಣಿರೋ !
ಮುಕ್ತಿಗೆಲ್ಲ ಮೂಲ ಗುರುವಿನ ಕೃಪೆ ಕಾಣಿರೋ !
ಗುರು ಹೇಳಿದಂತಿಹುದೆ ವೇದಾಗಮಶಾಸ್ತ್ರ ಕಾಣಿರೋ !
ಸಾಕ್ಷಿ : ''ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಂ ।
ಮಂತ್ರಮೂಲಂ ಗುರೋರ್ವಾಕ್ಯಂ । ಮುಕ್ತಿಮೂಲಂ ಗುರೋಃ ಕೃಪಾ ॥''
ಎಂದುದಾಗಿ,
ಗುರುಮೂರ್ತಿಯ ಧ್ಯಾನದಲ್ಲಿ ನೀನೇಯಾದ,
ಅನ್ಯವ ಧ್ಯಾನಿಸುವ ಅಜ್ಞಾನಿ ನೀ ಕೇಳಾ.
ಗುರುಪಾದಪೂಜೆಯ ಮಾಡದೆ ಅನ್ಯಪೂಜೆಯ ಮಾಡುವ
ಅಧಮ ಚಾಂಡಾಲಿ ಮಾನವ ನೀ ಕೇಳಾ.
ಗುರುಮಂತ್ರವ ಜಪಿಸದೆ ಅನ್ಯಮಂತ್ರವ ಜಪಿಸುವ
ಅನಾಮಿಕ ಹೊಲೆಯ ನೀ ಕೇಳಾ.
ಗುರುಕೃಪೆಯ ಪಡೆಯದ
ಅನ್ಯದೈವದ ಕೃಪೆಯ ಪಡೆದೆನೆಂಬ ಪಾಪಿ ನೀ ಕೇಳಾ.
ಗುರುಕರುಣ ಕೃಪೆಯ ಪಡೆದರೆ ಹರಿದು ಹೋಹುದು
ನಿನ್ನ ಪೂರ್ವಜನ್ಮದ ಹೊಲೆ.
ಗುರುವನರಿಯದೆ, ಲಿಂಗವನರಿಯದೆ, ಜಂಗಮವನರಿಯದೆ,
ಅನ್ಯದೈವ ಕೊಟ್ಟಿತೆಂದು ಅನ್ಯವ ಹೊಗಳಿದರೆ
ಎಂದೆಂದಿಗೂ ಭವಹಿಂಗದೆಂದಾತ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೮ ॥

೧೧೯೦

ಗುರುಶಿಷ್ಯ ಸಂಬಂಧಕೆ ಹೋರಾಡಿ, ಧರೆಯೆಲ್ಲ ಬಂಡಾದರು ನೋಡಾ.
ಗುರುವಿನ ಭವವ ಶಿಷ್ಯನರಿಯ,
ಶಿಷ್ಯನ ಭವವ ಗುರುವರಿಯ.
ಜ್ಞಾನಹೀನ ಗುರುವಿಂಗೆ ಜ್ಞಾನಹೀನ ಶಿಷ್ಯನಾದರೆ
ಅವರ ಪಾತಕಕೆ ಕಡೆ ಏನಯ್ಯಾ ?
ಸಾಕ್ಷಿ : ''ಜ್ಞಾನಹೀನಗುರೋಃ ಪ್ರಾಪ್ತಂ ಶಿಷ್ಯಜ್ಞಾನಂ ನ ಸಿದ್ಧ್ಯತಿ ।
ಮೂಲಚ್ಛಿನ್ನೇ ಯಥಾವೃಕ್ಷೇ ಗಂಧಃ ಪುಷ್ಪಂ ಫಲಂ ತಥಾ ॥''
ಎಂದುದಾಗಿ,
ಹೀಗೆಂಬುದನರಿಯದೆ, ಹೊನ್ನು ವಸ್ತ್ರದಾಸೆಗ

ಲಿಂಗವ ಮಾರಿಕೊಂಡುಂಬ ಗುರು ಶಿವದ್ರೋಹಿ,
ಲಿಂಗವ ಕೊಂಬ ಶಿಷ್ಯ ನರದ್ರೋಹಿ.
ಇಂತಪ್ಪ ಗುರು ಶಿಷ್ಯ ಸಂಬಂಧವ ನೋಡಿ ನೋಡಿ ನಗುತಿದ್ದ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೧೯ ॥

೧೧೯೧

ಅಂಧಕ ಅಂಧಕರು ಕರವಿಡಿದರಣ್ಯದೊಳು
ಹೋಗುತೊಂದು ಕೊಳ್ಳವ ಬಿದ್ದು ಚಾಲಿವರಿವಂತೆ,
ಅಜ್ಞಾನಿ ಗುರುವಿಂಗೆ ಅಜ್ಞಾನಿ ಶಿಷ್ಯನಾದರೆ
ಅವರ ಪಾತಕಕೆ ಕಡೆಯೇನಯ್ಯಾ !
ಹೆಸರಿನ ಗುರುವಿಗೆ ಹೆಸರಿನ ಶಿಷ್ಯನಾಗಿ
ಗುರು–ಶಿಷ್ಯ ಸಂಬಂಧಕ್ಕೆ ಹೋರಾಡಿ
ಒಡಲಾಸೆಗೆ ಲಿಂಗವ ಮಾರಿಕೊಂಬ ಕಡುಪಾಪಿಗೆ
ಗುರುತ್ವವುಂಟೇನಯ್ಯಾ ? ಗುರುತ್ವವಿಲ್ಲ.
ಸಾಕ್ಷಿ : ''ನಾಮಧಾರಕ ಶಿಷ್ಯಶ್ಚ ನಾಮಧಾರೀ ಗುರುಸ್ತಥಾ ।
ಅಂಧಕೋಂಧಕರಾಬದ್ಧೋ ದ್ವಿವಿಧಂ ಪಾತಕಂ ಭವೇತ್ ॥''
ಎಂದುದಾಗಿ,
ಬುದ್ಧಿಹೀನ ಶಿಷ್ಯಂಗೆ ಉಪದೇಶವ ಕೊಟ್ಟ ಗುರುವ
ಎದ್ದೆದ್ದು ತೆಗೆಯುವರು ರೌರವ ನರಕದಲ್ಲಿ ಎಂದಾತ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೦ ॥

೧೧೯೨

ಬೀರ ಜಟ್ಟಿ ಮೈಲಾರ ಮಾರಿ ಮಸಣೆಯೆಂಬ
ಅನ್ಯದೈವವು ಮನೆಯೊಳಿರುತಿರೆ, ಅದ ವಿಚಾರಿಸದೆ,
ನಿನ್ನ ಚಿತ್ಕಳೆ ಪರಬ್ರಹ್ಮಲಿಂಗವನವರಿಗೆ ಕೊಟ್ಟು,
ಹೊನ್ನು ಹಣವ ಬೇಡಿ ಕೊಂಡು ಒಡಲ ಹೊರೆದು
ಗುರುವೆಂದುಕೊಂಬ ಗುರುವೆ ನೀ ಕೇಳಾ.
ವಿಚಾರಹೀನರಿಗೆ ಉಪದೇಶವ ಕೊಟ್ಟರೆ ಅವಿಚಾರಿ
ನೀನಹುದನರಿಯಾ ?
ಸಾಕ್ಷಿ : ''ಅನ್ಯದೈವಪೂಜಕಸ್ಯ ಗುರೋರುಪದೇಶಃ ನಾಸ್ತಿ ನಾಸ್ತಿ ।
ಅವಿಚಾರಂ ತದೀಕ್ಷಣಾತ್ ರೌರವಂ ನರಕಂ ವ್ರಜೇತ್ ॥''
ಎಂದುದಾಗಿ,
ಮುನ್ನ ಯಮಪಾತಕಕೆ ಗುರಿಯಾಗುವ ಸಂದೇಹಿಗಳ
ಗುರು ಶಿಷ್ಯ ಸಂಬಂಧವ ಕಂಡು ನಸುನಗುತ್ತಿದ್ದನಯ್ಯಾ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೧ ॥

೧೧೯೩

ಪಟ್ಟವ ಕಟ್ಟಿದ ಮೇಲೆ ಲಕ್ಷಣವನರಸಲುಂಟೇನಯ್ಯಾ ?
ಕೊಡುಂಡು ಜಾತಿಭೇದವನರಸಲುಂಟೇನಯ್ಯಾ ?
ಅನ್ಯಭವಿಗೆ ಲಿಂಗುಪದೇಶವ ಕೊಟ್ಟು,
ಅವನಲ್ಲುಣಬಾರದೆಂದು ಕುಲಕಂಜಿ, ಒಣ ಪಡಿಯ
ತಂದು, ಬೆರಸಿ ಪಾಕವ ಮಾಡಿ ಉಂಬ ಅಜ್ಞಾನಿ ಗುರು ನೀ ಕೇಳಾ.
ನಿನ್ನ ಚಿತ್ಕಳಾಪರಬ್ರಹ್ಮಲಿಂಗವನವರಿಗೆ ಕುಡುವಾಗ
'ಅವರು ಮಾಡಿದ ದೋಷ ಎನ್ನನಂಡಲೆವವು ಕೊಡಲಮ್ಮ'
ಎಂಬ ಭಾವ ನಿನ್ನಲ್ಲರಿಯದೆ,
ಕಾಂಚಾಣ ಕಪ್ಪಡದಾಸೆಗೆ ದೀಕ್ಷವ ಮಾಡಿ,
ಹಿಂದೆ ಉಣಬಾರದೆಂಬ ಶೀಲವ ಹಿಡಿದರೆ,
ಮುಂದೆ ಯಮದಂಡನೆ ಬರುವುದನರಿಯಾ ?
ಇಂತೀ ಅಜ್ಞಾನಿಗಳ ಗುರು ಶಿಷ್ಯ ಸಂಬಂಧಕ್ಕೆ ಎಂತು ಮೆಚ್ಚುವನಯ್ಯಾ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೨ ॥

೧೧೯೪

ಜ್ಞಾನ ಗುರುವಿಗೆ ಜ್ಞಾನ ಶಿಷ್ಯನಾದರೆ
ಜೇನುತುಪ್ಪದೊಳು ಮಧುರ ಬೆರೆದಂತೆ.
ಅಜ್ಞಾನಿ ಗುರುವಿಂಗೆ ಅಜ್ಞಾನಿ ಶಿಷ್ಯನಾದರೆ
ಅಮವಾಸೆಯ ಮುಂದಣ ಕಾಳದೊಳು ಮೋಡಕವಿದು
ಘೋರಾಂಧಕಾರ ಕತ್ತಲೆಯಾಂದತೆ.
ಎನ್ನ ಗುರು ಶಿಷ್ಯ ಸಂಬಂಧ ಇಂತಲ್ಲವಯ್ಯಾ !
ಎನ್ನ ಗುರು ಜ್ಞಾನಿಯಲ್ಲ, ಅಜ್ಞಾನಿಯಲ್ಲ.
ಜ್ಞಾನಿಯಜ್ಞಾನಿಯಿಬ್ಬರಿಗೆ ಸುಜ್ಞಾನವನೀವ ನಿಚ್ಚೆರಗಿ ಪರಮಾತ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೩ ॥

೧೧೯೫

ಗುರುದೈವದ ಮುಂದೆ ಪರದೈವವ ಹೊಗಳುವ
ಕರ್ಮಿ ನೀ ಕೇಳಾ.
ಗುರುದೈವವಿದ್ದ ಮೇಲೆ ಪರದೈವ ಸಲ್ಲದು.
ಪರದೈವವಿದ್ದ ಮೇಲೆ ಗುರುದೈವ ಸಲ್ಲದು.
ಪರದೈವವಿದ್ದು ಗುರುದೈವವೆಂದು ನುಡಿದುಕೊಂಡು ನಡೆದರೆ
ನೆರ ನರಕದಲಿಕ್ಕುವ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೪ ॥

## ೧೧೯೬

ರಾಗ : ಮಲಹರಿ

ಪಲ್ಲ : ಗುರು ಕರುಣಾಕರ ಪರಶಿವ ಪರಮ
ಗುರು ಭವಹರ ಚಿನ್ಮಯ ಚಿದ್ರೂಪ
ಗುರುವೆ ನಿರಂಜನ ನಿರ್ಮಳ ನಿಃಖಿಳಗುರುವೆ ಸುರತುರವೆ.

ಪದ : ವಹ್ನಿ ವಿಪಿನ ತರು ಕಾಷ್ಠವ ಸುಡುವಂ
ತೆನ್ನ ಭವದ ಗೊಂಡಾರಣ್ಯವ
ನೆನ್ನಯ ಗುರುಕರುಣಗ್ನಿಯಲ್ಲಿ ಉರುಹಿ
ಮುನ್ನಿನ ಸುಕೃತದ ದೆಸೆಯಲಿ ಗುರುಕೃಪೆ
ಅನ್ಯಥಾ ಭಾಗ್ಯವ ಪಡೆದೆನು ಪರುಷದ
ಸನ್ನಿಧಿಯಲಿಹ ಲೋಹ ಪರಿಗು ಸಯುಕ್ತ. ॥ ೧ ॥

ಅಂಗಾತ್ಮನ ಪ್ರಾಣನ ಭವಿತನಗಳ
ಹಿಂಗಿಸಿ ಅವಿರಳ ಪರಬ್ರಹ್ಮದ ಮಹಾ
ಲಿಂಗವ ಕರ ಉರ ಶಿರ ಮನ ಭಾವದಲ್ಲಿ
ಸಂಗವ ಮಾಡಿಯ ಪ್ರಕೃತಿ ವಿಕೃತಿ ವಿಷ
ಯಂಗಳನೆಲ್ಲವ ತೊರಸಿ ಗಣಂಗಳ
ಡಿಂಗರಿಗನ ಮಾಡಿದೆನ್ನಯ ಗುರುಮಹಿಮೆ. ॥ ೨ ॥

ದುರ್ಲಿಖಿತಂಗಳ ತೊಡೆದು ವಿಭೂತಿ
ಧರಿಸ ಕಲಿಸಿ ಫಣೆಯೊಳು ರುದ್ರಾಕ್ಷಿಯ
ಸರಮಾಲೆಯ ತೊಡಕಲಿಸಿ ಷಡ
ಕ್ಷರಿಯ ಸ್ಮರಿಸ ಕಲಿಸಿ 'ಶಿವಧ್ಯಾನವ ಹಿಂಗದ
ಲಿರು ನೀ ಕಂದಾ' ಯೆಂದು ಅಭಯಕರ
ಶಿರದೊಳು ಮುಡುಗಿಯ ಸಲುಹಿದ ಗುರು ನಿತ್ಯ. ॥ ೩ ॥

ರಂಜಿಸಿ ನಿಲ್ಲದಳುವಿಂಗೆ ಕಂದೆಗೆ ಮೇಣ್
ರಂಭೆ ಸ್ತನವನೂಡಿಯ ಸಲಹುವ ತೆರ
ಹಂಬಲಿಸಿ ಭಯಪಡುತಿಹಗೆ ಸೂರ್ಯ ನೀನೆ
ಶಂಭು ಚರಣತೀರ್ಥಪ್ರಸಾದವ
ನುಂಬಕಲಿಸಿಯ ಅನ್ಯಹಾರದ
ಬಂಬಳಿಗಳ ಕಡಿಸಿದೆನ್ನಯ ಗುರು ಮಹಿಮೆ. ॥ ೪ ॥

ಮಾಡಕಲಿಸಿದ ಲಿಂಗದ ಸೇವೆಯ ಸದಾ
ನೀಡಕಲಿಸಿದ ಜಂಗಮಕಮೃತಾನ್ನವ
ಬೇಡಕಲಿಸಿ ಮುಕ್ತಿಯ ಫಲಪದವ

ಗೂಡಕಲಿಸಿ ಶಿವಾನಂದದಾ ಲೀಲೆಯೊ
ಛಾಡಕಲಿಸಿ ನಿಜ ನಿತ್ಯ ನಿರ್ಮಳನ
ಮಾಡಿದ ಗುರುವರ ಸಿದ್ಧಮಲ್ಲೇಶಾ । ೫ ।

॥ ೨೨೫ ॥

## ಲಿಂಗಧಾರಣಸ್ಥಲ

ಸೂತ್ರ : ಇಂತು ಗುರುಕರುಣಕಟಾಕ್ಷವೆಂಬ ಅಗ್ನಿಯಲ್ಲಿ ನೆರೆ ಭವರಾಣ್ಯದ ತರುಕಾಷ್ಠವನೆಲ್ಲ ಸುಟ್ಟುರುಹಿದ ಮಹಾಶರಣಂಗೆ ಲಿಂಗಸಂಗ ಬೇಕಾದ ಕಾರಣ ಸಪ್ತದಶದಲ್ಲಿ ಲಿಂಗಧಾರಣಸ್ಥಲವಾದುದು.

೧೧೯೭

ಶರಧಿಯನಾರಾಧಿಸಿದರೆ ಹವಳ ಮೌಕ್ತಿಕಗಳನೀವುದು ನೋಡಾ !
ಗಿರಿಯನಾರಾಧಿಸಿದರೆ ಬಯಸಿದ ಮೂಲಿಕೆಗಳನೀವುದು ನೋಡಾ !
ಗುರುವನಾರಾಧಿಸಿದರೆ ಗುರುಕರುಣ ಜಲಸಮುದ್ರದ ತೆರೆಯೊಳು
ಲಿಂಗವೆಂಬ ಸುವಸ್ತುವನೊಗೆಯಿತ್ತು ನೋಡಾ !
ಆ ಲಿಂಗ ಎನ್ನ ಸೋಂಕಿ, ಅಂಗ ಚಿನ್ನವಾಗಿ,
ಲಿಂಗವ ಪೂಜಿಸಿ ಭವಂಗಳ ದಾಂಟಿ ನಿರ್ಭವನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೬ ॥

೧೧೯೮

ತ್ರಿವಿಧ ತನುವಿಗೆ ತ್ರಿವಿಧ ದೀಕ್ಷೆ.
ತ್ರಿವಿಧ ದೀಕ್ಷೆಗೆ ತ್ರಿವಿಧ ಲಿಂಗ.
ತ್ರಿವಿಧ ಲಿಂಗಕ್ಕೆ ತ್ರಿವಿಧ ಕರವ ತೋರಿದ ಗುರುವೆ ಶರಣು.
ಅದು ಎಂತೆಂದರೆ :
ಕಾಯದ ಕರದಲ್ಲಿ ಇಷ್ಟಲಿಂಗವ ಕೊಟ್ಟು
ಸ್ಥೂಲತನುವಿನ ಪೂರ್ವಾಶ್ರಯವ ಕಳೆದು
ಕ್ರಿಯಾದೀಕ್ಷೆಯ ಮಾಡಿದ ಗುರುವೆ ಶರಣು.
ಮನದ ಕರದಲ್ಲಿ ಪ್ರಾಣಲಿಂಗವ ಕೊಟ್ಟು
ಸೂಕ್ಷ್ಮತನುವಿನ ಪೂರ್ವಾಶ್ರಯವ ಕಳೆದು
ಪ್ರಣಮಪಂಚಾಕ್ಷರಿಯ ಕರ್ಣದಲ್ಲಿ ಹೇಳಿ,
ಮಂತ್ರದೀಕ್ಷೆಯ ಮಾಡಿದ ಗುರುವೆ ಶರಣು.
ಭಾವದ ಕರದಲ್ಲಿ ಭಾವಲಿಂಗವ ಕೊಟ್ಟು
ಕಾರಣತನುವಿನ ಪೂರ್ವಾಶ್ರಯವ ಕಳೆದು
ಮಸ್ತಕದಲ್ಲಿ ಹಸ್ತವ ಮಡುಗಿ
ವೇಧಾದೀಕ್ಷೆಯನಿತ್ತ ಮದ್ಗುರುವೆ ಶರಣು.

ನಿಮ್ಮ ಪಾದದಡಿದಾವರೆಯೊಳು ಮನವ ಭೃಂಗನ ಮಾಡಿಸು
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೭ ॥

೧೧೯೯

ಬಡವನೆಡವಿ ಧನಕಂಡಂತೆ, ಭವಪಡುವನ ಕರದೊಳು
ಮೃಡಮೂರ್ತಿಲಿಂಗವ ಕಂಡೆನಲ್ಲ।
ಬಿಡದೆ ಅರಸುವ ಬಳ್ಳಿ ಕಾಲತೊಡರಿ ಬಂದಂತೆ
ಭವಭವಾಂತರದಲರಸಿದರೂ ಕಾಣದ
ಕಾಲಸಂಹರದೊಡೆಯನ ಕಂಡೆನಲ್ಲ ಎನ್ನ ಕರದೊಳು !
ವೇದಾತೀತ ನಿರಂಜನನೆಂಬ ಲಿಂಗವ ಕಂಡೆನಲ್ಲ ಎನ್ನ ಕರದೊಳು !
ಹರಿಯಜರ ಮಧ್ಯದಲ್ಲಿ ಉರಿವುತಿಹ ಪರಂಜ್ಯೋತಿಲಿಂಗನ
ಕಂಡೆನಲ್ಲ ಎನ್ನ ಕರದೊಳು !
ಕಂಡು ಕಂಡು ಬಿಡಲಾರದ ಸುವಸ್ತುವ ಕಂಡೆನಲ್ಲ ಎನ್ನ ಕರದೊಳು.
ಅಹಾ ಎನ್ನ ಪುಣ್ಯವೆ ! ಅಹಾ ಎನ್ನ ಭಾಗ್ಯವೆ !
ಆಹಾ ಎನ್ನ ಪ್ರಾಣದ ನಲ್ಲನೆಂಬ ಪರಮಾತ್ಮಲಿಂಗವನಪ್ಪಿ
ಅಗಲದಂತೆ ಮಾಡು ಕಂಡ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೨೮ ॥

೧೨೦೦

ಹೆಳವನಿದ್ದೆಸೆಗೆ ಜಲನಿಧಿ ನಡೆತಂದಂತೆ,
ಕರುಣಜಲಮೂರ್ತಿಲಿಂಗ ಎನ್ನ ಕರಸ್ಥಲಕೆ ನಡೆತಂದನಲ್ಲ!
ರೋಗಿಯಲ್ಲಿಗೆ ಅಮೃತವೆ ಮೈಯಾಗಿ ನಡೆತಂದಂತೆ,
ಭವರೋಗದ ಪಾಪಿ ಪಿಸುಣಮಾನವನಿದ್ದೆಡೆಗೆ
ಅಮೃತಕರಮೂರ್ತಿ ನಡೆತಂದನಲ್ಲ ಎನ್ನ ಕರದೊಳು !.
ಘೋರಾಂಧಕಾರದ ಕತ್ತಲೆಯೊಳು ತೊಳಲಿ ಬಳಲುಪ
ಕಮಲದೆಡೆಗೆ ಸೂರ್ಯನುದಯವಾದಂತೆ,
ಮಾಯಾತಮಂಧವೆಂಬ ಕತ್ತಲೆಯೊಳು ತೊಳಲಿಬಳಲುವ
[ವೇಳೆಯೊಳು] ದ್ಯುಮಣಿಕೋಟಿ ಪ್ರಕಾಶಲಿಂಗವ
ಕಂಡೆನಲ್ಲಾ ಎನ್ನ ಕರದೊಳು !
ಹಗಲೆ ಬಳಲುವ ಕುಸುಮದೆಡೆಗೆ, ಇರುಳುಗವಿದು,
ಶಶಿ ಉದಯವಾದಂತೆ,
ಹಗಲು ಇರುಳೆಂಬ ಬಂಧನದ ಬಯಕೆಗೆ ಸಿಕ್ಕಿದ
ಮಾನವನೆಡೆಗೆ ಶಶಿಕಾಂತಲಿಂಗ ಉದಯವಾದನಲ್ಲ ಎನ್ನ ಕರದೊಳು !
ಸುವತಿ ಬಯಸಲು ಪುರುಷಾತ್ಮ ಕೈಸಾರಿದಂತೆ
ಹಲವು ಜನನದಿ ಬಯಸಿ ಬಳಸಿದರೂ ಸಿಲ್ಕದ

ಲಿಂಗವೆನ್ನ ಕೈಸಾರಿತಲ್ಲ!
ಪರವೆ ಗೂಢವಾಗಿಪ್ಪ ಲಿಂಗವ ಕಂಡೆನಲ್ಲ ಎನ್ನ ಕರದೊಳು !
ಶರೀರದೊಳು ಪರಿಪೂರ್ಣವಾಗಿಹ ಲಿಂಗವ
ಕಂಡೆನಲ್ಲ ಎನ್ನ ಕರದೊಳು !
ಸಾಕ್ಷಿ : ''ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾಮಯಮ್ ।''
ಯಥ್ವಸ್ವರಂ ಹ್ಯಾದಿ ತೇಜಃ ತಲ್ಲಿಂಗಂ ಪಂಚಸಂಜ್ಞಕಂ ।।''
ಎಂಬ ಪಂಚಸಂಜ್ಞೆಯನೊಳಕೊಂಡ ಲಿಂಗವು
ಎನ್ನ ಕರಸ್ಥಲ ಉರಸ್ಥಲ ಶಿರಸ್ಥಲ ಮನಸ್ಥಲ ಜ್ಞಾನಸ್ಥಲ ಭಾವಸ್ಥಲ
ಪರಿಪೂರ್ಣವಾಗಿ 'ಲಿಂಗದಷ್ಟಸ್ಯ ದೇಹಿನಂ',
ಸರ್ವಾಂಗದೊಳಗೆಲ್ಲ ಲಿಂಗಮಯವಾಗಿ
ಲಿಂಗಲಿಂಗ ಸಂಗಸಂಗಯೆಂಬಾ ಪರಮಪರುಷದೊಳಗೋಲಾಡುತಿದ್ದೆನಲ್ಲಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ।। ೨೨೯ ।।

೧೨೦೧

ಕಂಡೆನೆನ್ನ ಕರದೊಳು ಕರುಣಪರಮೂರ್ತಿಲಿಂಗವ.
ಕಂಡೆನೆನ್ನ ಕರದೊಳು ಆತ್ಮಲಿಂಗವ.
ಕಂಡೆನೆನ್ನ ಕರದೊಳು ಚಿನ್ಮಯ ಚಿದ್ರೂಪ ಚಿತ್ಪ್ರಕಾಶಲಿಂಗವ.
ಕಂಡೆನೆನ್ನ ಕರದೊಳು ಮನಾತೀತಮಗೋಚರ ಲಿಂಗವ.
ಕಂಡೆನೆನ್ನ ಕರದೊಳು ನಿರ್ನಾಮ ನಿರ್ಗುಣ ನಿರಂಜನ ನಿರವಯಲಿಂಗವ.
ಕಂಡೆನೆನ್ನ ಕರದೊಳು ಮಹಾಲಿಂಗವ.
ಸಾಕ್ಷಿ : ''ಮಹಾಲಿಂಗಮಿದಂ ದೇವಿ ಮನೋತೀತಮಗೋಚರಂ ।
ನಿರ್ನಾಮ ನಿರ್ಗುಣಂ ನಿತ್ಯಂ ನಿರಂಜನ ನಿರಾಮಯಂ ।।''
ಎಂದೆನಿಸುವ ಲಿಂಗವ ಕಂಡೆನಲ್ಲ ಎನ್ನ ಕರದೊಳು !
ಆ ಲಿಂಗವೆನ್ನ ಕರಸ್ಥಲಕ್ಕೆ ಇಷ್ಟಲಿಂಗವಾಗಿ,
ಮನಸ್ಥಲಕ್ಕೆ ಪ್ರಾಣಲಿಂಗವಾಗಿ, ಭಾವಸ್ಥಲಕ್ಕೆ ಭಾವಲಿಂಗವಾಗಿ ;
ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ಮೂರುಲಿಂಗವೆ
ಆರುಲಿಂಗವಾಗಿ, ಆರುಲಿಂಗವೆ ಮೂವತ್ತಾರು ಲಿಂಗವಾಗಿ ,
ಮೂವತ್ತಾರು ಲಿಂಗವೆ ಇನ್ನೂರ ಹದಿನಾರು ಲಿಂಗವಾಗಿ,
ಸರ್ವಾಂಗವೆಲ್ಲ ಲಿಂಗಮಯವಾಗಿ, ಸರ್ವತೋಮುಖದ
ಲಿಂಗವೆ ಗೂಢವಾಗಿಪ್ಪ ಶರಣ ಬಸವಣ್ಣ
ಚೆನ್ನಬಸವಣ್ಣ ಪ್ರಭುರಾಯ ಮುಖ್ಯವಾದ
ಅಸಂಖ್ಯಾತ ಮಹಾಗಣಂಗಳ ಲೆಂಕರ ಲೆಂಕನೆಂದೆನಿಸಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ।। ೨೩೦ ।।

೧೨೨

ಗುರು ಕರುಣಿಸೆ ಇಷ್ಟಲಿಂಗವೆನ್ನ ಕರವ ಸೇರಲು
ಸರ್ವಾಂಗವೆಲ್ಲ ಲಿಂಗಮಯವಾದುದು ನೋಡಾ !
ಅದು ಎಂತೆಂದರೆ :
ಇಷ್ಟಲಿಂಗದಿಂದ ಪ್ರಾಣಲಿಂಗ, ಪ್ರಾಣಲಿಂಗದಿಂದ
ಭಾವಲಿಂಗತ್ರಯಗಳಾದವು.
ಒಂದೊಂದು ಲಿಂಗದಲ್ಲಿ ಎರಡು ಲಿಂಗ ಹುಟ್ಟಿದವು :
[ಇಷ್ಟಲಿಂಗದಿಂದ ಆಚಾರಲಿಂಗ ಗುರುಲಿಂಗ ಹುಟ್ಟಿದವು.
ಪ್ರಾಣಲಿಂಗದಿಂದ ಶಿವಲಿಂಗ ಜಂಗಮಲಿಂಗ ಹುಟ್ಟಿದವು.
ಭಾವಲಿಂಗದಿಂದ ಪ್ರಸಾದಲಿಂಗ ಮಹಾಲಿಂಗವೆಂಬೆರಡು ಲಿಂಗ ಹುಟ್ಟಿದವು.]
ಇಂತೀ ಷಡ್ವಿಧಲಿಂಗದಲ್ಲಿ ಷಡ್ವಿಧಸಂಬಂಧ :
ಘ್ರಾಣದಲ್ಲಿ ಆಚಾರಲಿಂಗ ಸಂಬಂಧ.
ಜಿಹ್ವೆಯಲ್ಲಿ ಗುರುಲಿಂಗ ಸಂಬಂಧ.
ನೇತ್ರದಲ್ಲಿ ಶಿವಲಿಂಗ ಸಂಬಂಧ.
ತ್ವಕ್ಕಿನಲ್ಲಿ ಜಂಗಮಲಿಂಗ ಸಂಬಂಧ.
ಶ್ರೋತ್ರದಲ್ಲಿ ಪ್ರಸಾದಲಿಂಗ ಸಂಬಂಧ.
ಹೃದಯದಲ್ಲಿ ಮಹಾಲಿಂಗ ಸಂಬಂಧ.
ಆಚಾರಲಿಂಗದರಿವು ಗಂಧ, ಗುರುಲಿಂಗದರಿವು ರಸ,
ಶಿವಲಿಂಗದರಿವು ರೂಪು, ಜಂಗಮಲಿಂಗದರಿವು ಸ್ಪರುಶನ,
ಪ್ರಸಾದಲಿಂಗದರಿವು ಶಬ್ದ, ಮಹಾಲಿಂಗದರಿವು ಪರಿಣಾಮ.
ಒಂದೊಂದು ಲಿಂಗದಲ್ಲಿ ಆರುಲಿಂಗವಾದವು :
ಆಚಾರಲಿಂಗದಲ್ಲಿ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗವೆಂಬೈದು ಲಿಂಗವುಂಟು.
ಗುರುಲಿಂಗದಲ್ಲಿ ಆಚಾರಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗವೆಂಬೈದು ಲಿಂಗವುಂಟು.
ಶಿವಲಿಂಗ[ದಲ್ಲಿ] ಆಚಾರಲಿಂಗ ಗುರುಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗವೆಂಬೈದು ಲಿಂಗವುಂಟು.
ಪ್ರಸಾದಲಿಂಗದಲ್ಲಿ ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಮಹಾಲಿಂಗವೆಂಬೈದು ಲಿಂಗವುಂಟು.
ಇಂತಿವೆಲ್ಲ ಕೂಡಲ್ಕೆ ಮೂವತ್ತಾರು ಲಿಂಗ.
ಆ ಮೂವತ್ತಾರು ಲಿಂಗದಲ್ಲಿ ಒಂದೊಂದು ಲಿಂಗದಲ್ಲಿ ಆರುಲಿಂಗ ಕೂಡಲ್ಕೆ
ಇನ್ನೂರ ಹದಿನಾರು ಲಿಂಗವಾದವು.
ಅಂಗಪ್ರಭೆಯಲ್ಲಿ ಲಿಂಗಪ್ರಭೆಯಾಗಿ, ಲಿಂಗಪ್ರಭೆಯಲ್ಲಿ ಅಂಗಪ್ರಭೆಯಾಗಿ,
ಅಂಗಲಿಂಗಸಂಬಂಧಿಯಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೩೧ ||

೧೨೦೩

ಅಂತರಂಗದಲ್ಲಿ ಜ್ಞಾನಪರಿಪೂರ್ಣನಾಗಿ ಸರ್ವಾಂಗವೆಲ್ಲ
ಲಿಂಗಮಯವೆಂದು ಜ್ಞಾನದ ಕಣ್ಣಲಿ ಕಂಡು,
ಅರುಹು ಪರಮಾರ್ಥನೊಳು ಬೆರದು, ಅಚಲಿತಶರಣನಾದೆನೆಂದು,
ಬಹಿರಂಗದಲ್ಲಿ ಗುರುಕರುಣದ ಇಷ್ಟಲಿಂಗಧಾರಣವಿಲ್ಲದಿರಬಹುದೇ ?
ಇರಬಾರದು ; ಇದ್ದರೆ ಮಹಾನರಕ.
ಮೂರುಕಣ್ಣುಳ್ಳ ಶಿವನಾದರೂ ಆಗಲಿ,
ಅಂಗದ ಮೇಲೆ ಇಷ್ಟಲಿಂಗವಿಲ್ಲದೆ
ಸುಜ್ಞಾನಿಶರಣನಾದನೆಂದು ನುಡಿದುಕೊಂಡು ನಡೆದರೆ
ಆದ ನಮ್ಮ ಪುರಾತರು ಮೆಚ್ಚುವರೆ ? ಮೆಚ್ಚರು.
ಮೆಚ್ಚರಾಗಿ ನಾಯಕನರಕ ತಪ್ಪದು.
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೩೨ ||

೧೨೦೪

ಅಂಗದ ಮೇಲೆ ಲಿಂಗವಿಪ್ಪ ಶಿವಭಕ್ತನ ಕಂಡರ
ಸಂಗಯ್ಯನ ಸಮವೆಂಬೆನಯ್ಯಾ.
ಲಿಂಗವಿಲ್ಲದೆ ನಾಲ್ಕು ವೇದವನೋದುವ ವಿಪ್ರನಾದರೂ ಆಗಲಿ,
ಹೊಲೆಮಾದಿಗರೇಳು ಜಾತಿಗಿಂತ ಕಡೆಯೆಂಬೆನಯ್ಯಾ.
ತಾಯಿಲ್ಲದ ಮಕ್ಕಳಂತೆ, ಗಂಡನಿಲ್ಲದ ಮುಂಡೆಗೆ
ಮುತ್ತೈದೆತನವುಂಟೇನಯ್ಯಾ ?
ಲಿಂಗವಿಲ್ಲದ ಭವಿ ಏನನೋದಿ ಏನ ಹಾಡಿದರೂ ವ್ಯರ್ಥ.
ಸಾಕ್ಷಿ : ''ಮಾತಾ ನಾಸ್ತಿ ಯಥಾ ಸುತಂ ಪತಿರ್ನಾಸ್ತಿ ಯಥಾ ನಾರೀ ।
ಲಿಂಗಂ ನಾಸ್ತಿ ಯಥಾ ಪ್ರಾಣಂ ತಸ್ಯ ಜನ್ಮ ನಿರರ್ಥಕಂ ॥''
ಇಂತೆಂಬುದನರಿಯದೆ ವಾಗದ್ವೈತದಿಂದ
ತನುಲಿಂಗ ಮನಲಿಂಗ ಪ್ರಾಣಲಿಂಗವೆಂಬ ಹೊಲೆಯರ
ಮುಖವನೆನಗೊಮ್ಮೆ ತೋರದಿರಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೩೩ ||

೧೨೦೫

ತನುಲಿಂಗವೆಂದೆಂಬ ಅದ್ವೈತಿಯ ಮಾತ ಕೇಳಲಾಗದು.
ಮನಲಿಂಗವೆಂದೆಂಬ ಮೂರ್ಖನ ಮಾತ ಕೇಳಲಾಗದು.
ಪ್ರಾಣಲಿಂಗವೆಂದೆಂಬ ಪ್ರಪಂಚಿಗಳ ಮಾತ ಕೇಳಲಾಗದು.
ತನುಲಿಂಗವಾದರ ಹೊನ್ನು ಹೆಣ್ಣು ಮಣ್ಣು ಮೂರೆಂಬ
ಅನ್ಯವಿಷಯಕ್ಕೆ ಸಿಲ್ಕಿ ಅನಂತ ಪಾಡಿಗೆ ಗುರಿಯಾಗಬಹುದೇ ?
ಮನಲಿಂಗವಾದರೆ ಮನವಿಕಾರದ ಭ್ರಮೆಯಲ್ಲಿ

ತೊಳಲಿ ಬಳಲಿ ಅಜ್ಞಾನಕ್ಕೆ ಗುರಿಯಾಗಬಹುದೇ ?
ಪ್ರಾಣಲಿಂಗವಾದರೆ ಪ್ರಳಯಕ್ಕೆ ಗುರಿಯಾಗಿ
ಸತ್ತು ಸತ್ತು ಹೂಳಿಸಿಕೊಳಬಹುದೇ ?
ತನು ಮನ ಪ್ರಾಣಲಿಂಗವಾದರೆ ಜನನ ಮರಣವೆಂಬ
ಆಣಲಿಂಗೆ ಗುರಿಯಾಗಿ ನಾನಾ ಯೋನಿಯಲ್ಲಿ ತಿರುಗಬಹುದೇನಯ್ಯಾ ?
ತನು ಮನ ಪ್ರಾಣವಾ ಘನಮಹಾಲಿಂಗಕ್ಕೆ ಸರಿಯೆಂದು
ಅಜ್ಞಾನದಿಂದ ತನುವೆ ಲಿಂಗ ಮನವೆ ಲಿಂಗ ಪ್ರಾಣವೆ ಲಿಂಗವೆಂದು
ಇಷ್ಟಲಿಂಗವ ಜರಿದು ನುಡಿವ ಭ್ರಷ್ಟ ಜಿನುಗು ದುರಾಚಾರಿ
ಹೊಲೆಯರ ನಾಯಕನರಕದಲ್ಲಿಕ್ಕುವ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೩೪ ||

೧೨೦೬

ಬರುತ ಬರುತ ಆರಣ್ಯದೊಳಗೊಂದು ಬಟ್ಟೆಯ ಕಂಡೆನು.
ಆ ಬಟ್ಟೆಯಗೊಂಡು ಬರುತಲೊಂದು ಸಾಗರವ ಕಂಡೆನು.
ಸಾಗರದ ನಡುವೊಂದೂರ ಕಂಡೆನು.
ಊರಮುಂದೊಂದು ಭವಹರವೆಂಬ ವೃಕ್ಷವ ಕಂಡೆನು.
ಆ ವೃಕ್ಷವನಾರಾಧಿಸಿದರೆ ಪರಮಾರ್ಥವೆಂಬ ಹಣ್ಣ
ಕರದೊಳಗೆ ಧರಿಸಿತ್ತು ನೋಡಾ.
ಕರದ ಹಣ್ಣು ಉರವ ತಾಗಿ, ಉರದ ಹಣ್ಣು ಶಿರವ ತಾಗಿ,
ಶಿರದ ಹಣ್ಣು ಮವನ ತಾಗಿ, ಮನದ ಹಣ್ಣು ಭಾವವ ತಾಗಿ,
ಭಾವದ ಹಣ್ಣು ಸರ್ವಕರಣಂಗಳನೆಲ್ಲವ ತಾಗಿ,
ಸರ್ವಾಂಗದೊಳು ಪರಿಪೂರ್ಣವಾದುದಿದೇನು ಚೋದ್ಯ ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ! || ೨೩೫ ||

೧೨೦೭

ಹುಟ್ಟಿದ ಮುನ್ನ ಬೆಳೆವ ಶಿಶುವ ಹೆಸರಿಟ್ಟು ಕರೆವವರಾರೂಯಿಲ್ಲ.
ಬೆಳೆಯದ ಮುನ್ನ ಹುಟ್ಟಿದ ಶಿಶುವ ಹೆಸರಿಟ್ಟು ಕರೆವವರಾ[ರೂಯಿಲ್ಲ.]
ಶಿಶುವಿನ ತಂದೆ ತಾಯಿಯ ಕುರುಹ ಬಲ್ಲವರು ಮುನ್ನವೆ ಇಲ್ಲ.
ಮುನ್ನವೆಂಬ ಶಬ್ದವ ಎನ್ನೊಳಡಗಿಸಿ ಚಿಹ್ನವಡಸಿದ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೩೬ ||

೧೨೦೮

ಹುಟ್ಟಿದ ಶಿಶುವಿಗೆ ಮೊಲೆ ಮುಟಿ ಜವ್ವನ ಬಂದು.
ಬಟ್ಟೆಯೊಳು ನಿಂದು ಆಕಾರವಿಡಿದು ಬಂದ
ನಲ್ಲನ ಕೈಯ ಒತ್ತೆಯು ಹಿಡಿವುದ ಕಂಡು ಬೆರಗಾದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೩೭ ||

೩೨೯

ಮಣಿಪಾಪದೊಳಡಗಿಪ ಮಾಣಿಕಕ್ಕೆ
ಮಣಿ ಇಡಲಳವಲ್ಲ.
ಮಾಣಿಕದ ಪ್ರಭೆಯಲ್ಲಿ ಕಾಣಬಹುದಾಕಾರಮೂರ್ತಿಯ.
ಅಂತರಂಗದ ಜ್ಞಾನ ಬಹಿರಂಗವ ಕ್ರಿಯೆಯೊಳೊಮ್ಮೆ
ಸರ್ವಾಂಗದೊಳು ಲಿಂಗವ ಸಂತೈಸಿಪ್ಪ ಸದ್ಭಕ್ತರ
ಪಾದಕ್ಕೆ ನಮೋ ನಮೋ ಎಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೩೮ ॥

೩೩೦

ನಿರಾಕಾರ ಪರಬ್ರಹ್ಮವಸ್ತು ಎನ್ನ ಕರಸ್ಥಲಕೆ ಆಕಾರವಾಗಿ ಬಂದರೆ
ಹೊಗಳಲಮ್ಮೆ, ಹೊಗಳದಿರಲಮ್ಮೆ.
ಅದೇನು ಕಾರಣವೆಂದರ :
ಬ್ರಹ್ಮ ವಿಷ್ಣು ರುದ್ರರ ಸ್ತುತಿಗ ನಿಲುಕದ ವಸ್ತುವನ್ನ
ನೆಮ್ಮಲು ನಾ ಬದುಕಿದೆನಯ್ಯಾ ನಾ ಬದುಕಿದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೩೯ ॥

೩೩೧

ಮುಂಡದ ಮೇಲಣ ತಲೆಯ ಮೂರ್ತವ ಅಂಗೈ ಮೇಲೆಗೂಡಿ,
ಅಂಗೈ ಮೇಲೆಯ ಮೂರ್ತವ ಮುಂಡದ ತಲೆಗೂಡಿ,
ಕಂಡು ಸುಖಿಯಲ್ಲದೆ ಲಿಂಗಾಂಗಸಂಬಂಧಿಯಲ್ಲಾ,
ಅಂಗಲಿಂಗಸಂಬಂಧಿಯಲ್ಲಾ.
ಬರಿಯ ಮಾತಿನ ಬಣಗರ ಮೆಚ್ಚುವನೆ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೪೦ ॥

೩೩೨

ಲಿಂಗವ ಧ್ಯಾನಿಸುವನ ಅಂಗ ಕೈಲಾಸದ ರಾಜ್ಯಾಂಗಣ ಕಾಣಿರೊ.
ಲಿಂಗವ ನೋಡುವ ಕಂಗಳು ಪರಮಾತ್ಮನಿದಿರಲಿ ಕಟ್ಟಿಹ
ನಿಲವುಗನ್ನಡಿ ಕಾಣಿರೊ.
ಲಿಂಗವ ಕೊಂಡಾಡುವನ ಜಿಹ್ವೆ ಕೈಲಾಸದಲ್ಲಿ ಸಾರುವ
ಪಾರಿಗಂಟೆ ಕಾಣಿರೊ
ಲಿಂಗದ ಶ್ರುತಿಯ ಕೇಳುವನ [ಕಿವಿ] ಮಾಣಿಕ ಮುತ್ತಂ
ಮುಚ್ಚಿಡುವ ಕರಡಿಗೆ ಕಾಣಿರೊ.
ಲಿಂಗವ ಮುಟ್ಟಿ ಪೂಜಿಸಿದವನ ಹಸ್ತ ಸುಹಸ್ತ ಕಾಣಿರೊ.
ಇಂತೀ ಲಿಂಗಾಂಗಸಂಗಮರಸದಲ್ಲಿಪ್ಪ ಶರಣಂಗೆ

ಅಂಗವಿಕಾರವುಂಟೇನಯ್ಯಾ ?
ಭೂತ ಸೋಂಕಿದ ಮೇಲೆ ಆತ್ಮನಗುಣ ಉಂಟೇನಯ್ಯಾ ?
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ
ಲಿಂಗ ಸೋಂಕಿದ ಮೇಲೆ ಅಂಗಗುಣವುಂಟೇನಯ್ಯಾ ? || ೨೪೧ ||

### ೧೨೧೩

ಕೈಲಾಸವೆಂಬುದು ಬೇರಿಲ್ಲಾ ಕಾಣಿರೋ !
ಲಿಂಗಾಂಗಸಂಗಮರಸದಲ್ಲಿಪ್ಪ ಶರಣನ
ಅಂತರಂಗದಲ್ಲಿ ಕೈಲಾಸವಿಪ್ಪುದು.
ಎಂತಿಪ್ಪುದೆಂದರೆ ಹೇಳುವೆ ಕೇಳಿರಣ್ಣಾ :
ಆಚಾರ–ಕ್ರಿಯೆಗಳೆಂಬ ಕೋಟೆ–ಕೊತ್ತಳಂಗಳು,
ಶುಚಿ–ಶೀಲಗಳೆಂಬ ಅಗಳಂಗಳು,
ಪುಣ್ಯ–ಪಾಪಗಳೆಂಬೆರಡ ಸೋಡಿ ನಡೆದುದ
ಕೈಲಾಸದ ಹೆಬ್ಬಾಗಿಲು ಕಾಣಿರೊ.
ಧರ್ಮಸಂಚೆಗಳೆಂಬ ದಾರುವಂದಲಗಳು,
ಕರ್ಮವ ಮೆಟ್ಟಿ ನಡೆದುದ ಹೊಸ್ತಿಲಸ್ತರ.
ಶಿವಭಕ್ತಿಕೀರ್ತಿವಡೆದ ವಾರ್ತೆಯೆಂಬ
ಹುಲಿಮುಖ ಡೆಂಕಣೆ ಮೇರುವ ಕಾಣಿರೊ.
ಜ್ಞಾನ ಸುಜ್ಞಾನದೊಳು ಬೆರಸುತಿಪ್ಪುದೆ
ಸೋಮಬೀದಿ ಸೂರ್ಯಬೀದಿ ಕಾಣಿರೊ.
ಅರುವೆಂಬುದನಾಚರಿಸುವುದೆ
ಶಿವ ಮೂರ್ತವಮಾಡುವ ಸಿಂಹಾಸನ ಕಾಣಿರೊ.
ಮರವೆಂಬ ಮಾಯವ ಮೆಟ್ಟಿ ನಡೆದುದೆ
ಸಿಂಹಾಸನವನೇರುವುದಕ್ಕೆ ಪಾವಟಿಗೆ ಕಾಣಿರಣ್ಣಾ.
ಇಂತಪ್ಪ ಶೃಂಗಾರವೆಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭು
ಒಲಿದ ಶಿವಶರಣನಂತರಂಗದಲ್ಲಿ ಇದ್ದಿತ್ತು. || ೨೪೨ ||

### ೧೨೧೪

ಜ್ಯೋತಿ ಇದ್ದ ಗೃಹಕ್ಕೆ ತಮವುಂಟೇನಯ್ಯಾ ?
ಪರಂಜ್ಯೋತಿಲಿಂಗದ ಸಂಗದ ಬೆಳಗಲಿಹ ಮಹಾತ್ಮನಿಗೆ
ಮಾಯಾತಮಂಧದ ಭೀತಿಯುಂಟೇನಯ್ಯಾ ?
ಕಂಠೀರ[ವ]ನಿಹ ವನದೊಳು ಕರಿವುಂಟೇನಯ್ಯಾ ?
ಲಿಂಗವೆಂಬ ಸಿಂಹದ ಮರೆಯಬಿದ್ದಾತಂಗೆ
ಅಷ್ಟಮದವೆಂಬ ಕರಿಯ ಭಯವುಂಟೇನಯ್ಯಾ ?

ಗರುಡನಿದ್ದ ಸ್ಥಾನದಲ್ಲಿಗೆ ಉರಗನ ಭಯವುಂಟೇನಯ್ಯಾ ?
ಪರಮಾತ್ಮನೊಳುಬೆರೆದ ನಿಬ್ಬೆರಗಿ ಶರಣಂಗೆ
ಕುಂಡಲಿಸರ್ಪನ ಭಯವುಂಟೇನಯ್ಯಾ ?
ಆನೆಯ ಮೇಲೆ ಹೋಗುವ ಮಾನವನಿಗೆ ಶ್ವಾನನ ಭಯವುಂಟೇನಯ್ಯಾ ?
ಲಿಂಗಾಂಗಸಮರಸವೆಂಬ ಮದ ತಲೆಗೇರಿ ಹೋಗುವ
ಶಿವಶರಣಂಗೆ ಪಂಚೇಂದ್ರಿಯವೆಂಬ ಶ್ವಾನನ ಭಯವುಂಟೇನಯ್ಯಾ ?
ಉರಿವುತಿಹ ಅಗ್ನಿಗೆ ಸೀತದ ಭಯವುಂಟೇನಯ್ಯಾ ?
ಗುರುಕರುಣಾಗ್ನಿಯಲ್ಲಿ ಭವದಗ್ಧನಾದ ಶರಣಂಗೆ
ಅನ್ಯಭಯಭೀತಿಯ ಚಳಿ ಉಂಟೇನಯ್ಯಾ ?
ಉರಗಮುಟ್ಟಲು ಸರ್ವಾಂಗವನೆಲ್ಲ ವಿಷಕೊಂಡಂತೆ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ
ಲಿಂಗಸೋಂಕಿದವರೆಲ್ಲ ಸರ್ವಾಂಗಲಿಂಗಿಗಳಾದುದ ನೋಡಾ. ॥ ೨೪೩ ॥

೧೨೧೫

ರಾಗ : ಭೈರವಿ

ಪಲ್ಲ : ಕರಸ್ಥಲದ ಲಿಂಗ ಕೈಸೇರಿ ಇರು
ತಿರಲನ್ಯ ಭಯಗಳುಂಟೆ ಗುರುವೆ ?

ಪದ : ಕಂಠೀರ[ವ]ನಿಹ ವನದೊಳು ಕರಿಯಭಯ
ವುಂಟೇ ಇನ್ನಾ ತೆರದೊಳು
ಬಂಟಾಯುಧವಿರೆ ಕರದೊಳು ಸೂಜಿಯ ಮೊನೆಯ
ತುಂಟಕದ ಭಯಗಳುಂಟೆ ಗುರವೆ ? । ೧ ।

ಕರಿಯನೇರಿ ಪೋಗುತಿರಲು ಶುನಿ ಬಗುಳುತ
ಬರುತಿರುವ ಭಯಗಳುಂಟೆ ನೋಡಾ.
ಹರನೆನ್ನ ಕರದೊಳಿರಲು ಪಂಚೇಂದ್ರಿ
ದುರಿತ ಭಯದಂಜಿಕೆಯುಂಟೆ ಗುರುವೆ ? । ೨ ।

ದ್ಯುಮಣಿಗುರಿಯ ಭಯಗಳುಂಟೆ ? ಅಷ್ಟದಳ
ಕಮಲದೊಳು ಸುಳಿವ ಹಂಸ ತಾನೆ
ಭ್ರಮರನಂತೆ ಕರಕಮಲದ ಲಿಂಗವ ತಾ
ಭ್ರಮಿಸೆರಗೆ ಭಯಗಳುಂಟೆ ಗುರುವೆ ? । ೩ ।

ಉರಿಯುತಿರೆ ಜ್ಯೋತಿ ಗೃಹದಿ ತಮ ನಡೆದು
ಬರುವ ಭೀತಿಯುಂಟೆ ನೋಡಾ.
ಪರಂಜ್ಯೋತಿರ್ಲಿಂಗಯೆನ್ನ ಅಂಗಾಕಾರದೆ
ಇರೆ ಮಾಯದ ಭೀತಿಯುಂಟೆ ಗುರುವೆ ? । ೪ ।

ಉರಗ ಮುಟ್ಟಲು ಓರ್ವನ ತನು ವಿಷದಿ
ಭರಿತವಾದಂತೆ ಶರಣ
ಶರೀರವನು ಸೊಮ್ಮು ಸೋಂಕಿ
ಸರ್ವಾಂಗ ಕಾರಣಲಿಂಗವಾಗೆ ಭಯವೆ ಗುರುವೆ ? ।೫।

ಅಗಲದೆ ಸರ್ವಾಂಗದಿ ಭರಿತವಾದಂತೆ ಶರಣ ಶಿವಲಿಂಗ
ಝುಗಝುಗಿಸುತಿದೆ ಕೋಯೆಂದು ನುಡಿದು
ಪೊಗಳ್ದ ಹೇಮಗಲ್ಲ ಹಂಪ ಪಡುವಿಡಿಯ
ಬಗೆಯ ಗುರು ರಾಚನಿರವು ತಾನೆ ।೬।
॥ ೨೪೪ ॥

## ಅನ್ಯದೈವನಿರಸನಸ್ಥಲ

ಸೂತ್ರ : ಇಂತು ಲಿಂಗನಿಷ್ಠಾಪರದಲ್ಲಿ ಆಚರಿಸುವ ಶರಣನ ಅಂಗವ ಬಿಟ್ಟು ಲಿಂಗ ನಿಮಿಷಾರ್ಧ ಹಿಂಗದೆ ಲಿಂಗ ತತ್ಸಂಗದಲ್ಲಿರುತಿರೆ, ಆ ಶರಣಂಗೆ ಅನ್ಯದೈವ ಹೇಯವಾಗಿ ತೋರುತಿರೆ ಅಷ್ಟಾದಶದಲ್ಲಿ ಅನ್ಯದೈವನಿರಸನಸ್ಥಲವಾದುದು.

೧೨೧೭

ಪರುಷ ಮನೆಯೊಳಿರುತಿರೆ ಪಾಷಾಣಕೆ ಚಾಲಿವರಿವಂತೆ,
ಸುಧೆ ಇರಲು ಅಂಬಲಿ ಬಯಸುವನಂತೆ,
ಗುರುಕರುಣದ ಇಷ್ಟಲಿಂಗ ತನ್ನ ಕರದೊಳಿರುತಿರೆ
ಅದ ಮರೆದು
ಸೂಳೆಗೆ ಹುಟ್ಟಿದ ಮಗುವು ಕಂಡ ಕಂಡವರಿಗೆ
'ಅಪ್ಪಾ' ಎಂದು ಕರೆವಂತೆ,
ಈ ಸಂತೆಸೂಳೆಮಕ್ಕಳಿಗೆ ಒಂದು ದೇವರು ನಿತ್ಯವಲ್ಲ!
ಹಲವು ಕಲ್ಲಿಗೆರಗಿ ಕುಲಕೋಟಿ ನರಕಕಿಳಿವ ಹೊಲೆಯರ
ಮುಖವನೆನಗೊಮ್ಮೆ ತೋರದಿರಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೪೫ ॥

೧೨೧೮

ಹಸಿಹಂದರದಿ ಪಡೆದ ಗಂಡನ ವಂಚಿಸಿ,
ವಿಷಯಾತುರದಿ ಪಿಸುಣಮಾನವರನಪ್ಪುವ ಹಾದರಗಿತ್ತಿಯೆಂತೆ,
ಪಂಚಕಳಸವಿಕ್ಕಿ ದೇವಭಕ್ತರ ನಡುವೆ ಹಸ್ತಮಸ್ತಕ ಸಂಯೋಗವ ಮಾಡಿ
ಗುರುಕರುಣಿಸಿ ಕೊಟ್ಟ ಪ್ರಾಣಲಿಂಗವನವಿಶ್ವಾಸವ ಮಾಡಿ,
ಕ್ಷೇತ್ರ ಜಾತ್ರಿ ಲಿಂಗವ ಕಂಡು, ವಿಶ್ವಾಸವಿಟ್ಟು ಎರಗುವ
ಪಂಚಮಹಾಪಾತಕರ ನೋಡಾ !

ಸಾಕ್ಷಿ : ''ಪ್ರಾಣಲಿಂಗಮವಿಶ್ವಸ್ಯ ತೀರ್ಥಲಿಂಗಂ ವಿಶೇಷಯೇತ್ ।
ಪ್ರಸಾದನಿಷ್ಫಲಂ ಚೈವ ರೌರವಂ ನರಕಂ ವ್ರಜೇತ್ ॥ ''
ಎಂದುದಾಗಿ,
ಮತ್ತೊಪ್ಮೆ ಗ್ರಂಥಸಾಕ್ಷಿಯ ಕೇಳು ಮುಂದರಿಯದ ಮಾನವ.
ಸಾಕ್ಷಿ : ''ಇದಂ ತೀರ್ಥಮಿದಂ ತೀರ್ಥಂ ಭ್ರಮಂತಿ ತಾಮಸಾ ನರಾಃ।
ಶಿವಜ್ಞಾನಂ ನ ಜಾನಂತಿ ಸರ್ವತೀರ್ಥಂ ನಿರರ್ಥಕಂ ॥''
ಎಂದುದಾಗಿ.
ಇಂತೆಂಬುದನರಿಯದೆ, ಅಜ್ಞಾನದ ಭ್ರಾಂತಿಯಲ್ಲಿ
ಅನ್ಯಲಿಂಗವನಾಶ್ರಯಿಸುವ
ಕುನ್ನಿಗಳಿಗೆ ಗುರುವಿಲ್ಲ ಜಂಗಮವಿಲ್ಲ
ಪಾದೋದಕವಿಲ್ಲ ಪ್ರಸಾದವಿಲ್ಲವಾಗಿ ಮುಕ್ತಿಯೆಂಬುದು
ಎಂದಿಗೂ ಇಲ್ಲವಾಗಿ ರೌರವನರಕದಲ್ಲಿಕ್ಕುವ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೪೭ ||

೧೨೧೮

ಇಷ್ಟಲಿಂಗವ ಮರೆದು ಬರಿಯ ಕಲ್ಲಿಗೆರಗುವ
ಭ್ರಷ್ಟಂಗಿನ್ನೆಲ್ಲಿಯ ಶಿವಾಚಾರವಯ್ಯಾ !
ಖಡ್ಗವ ಬಿಟ್ಟು ಕೋಲುವಿಡಿದು ಕಾಳಗವ ಮಾಡಿದರೆ
ತಲೆ ಹೋಗುವುದನರಿಯಾ ಮನುಜ.
ಲಿಂಗವ ಬಿಟ್ಟು ಅನ್ಯಲಿಂಗವ ಪೂಜೆಮಾಡಿದರೆ
ನರಕವೆಂಬುದನರಿಯಾ ಪಾಪಿ.
ಸಾಕ್ಷಿ : ''ಇಷ್ಟಲಿಂಗೇ ಪರೇತ್ ಚ ಭಾವಾದನ್ಯತ್ರ ಗಚ್ಛತಿ ।
ಸ ಕಿಲ್ಬಿಷಮವಾಪ್ನೋತಿ ಪೂಜಯನ್ ನಿಃಫಲೋ ಭವೇತ್॥''
ಎಂಬ ವಚನವನರಿಯದೆ ಮುಂದುಗಾಣದನ್ಯದೈವಕೆರಗುವ
ಅಂಧಕರಿಗೆಂದೆಂದು ಭವಹಿಂಗದೆಂದಾತ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೪೮ ||

೧೨೧೯

ಶಿವಾಚಾರಸಂಪನ್ನನಾಗಿ ಶಿವಭಕ್ತನೆನಿಸಿಕೊಂಡು
ಶಿವಲಿಂಗವು ಕರಸ್ಥಲ ಉರಸ್ಥಲ ಶಿರಸ್ಥಲದಲ್ಲಿರುತಿರ
ಅದ ಮರೆದು, ಹಲವು ದೇವರ ಪೂಜೆಮಾಡಿ.
ಹಲವು ದೇವರ ಬಳಿಯಲ್ಲಿ ನೀರ ಕುಡಿದು,
ಹಲವು ದೇವರ ನೈವೇದ್ಯವ ತಿಂಬ ಹೊಲೆಯನ
ಶಿವಭಕ್ತನೆನಬಹುದೆ ? ಎನಲಾಗದು.
ಅದೇನು ಕಾರಣವೆಂದಡೆ, ಅದಕ್ಕೆ ಸಾಕ್ಷಿ :

''ಶಿವಾಚಾರೇಣ ಸಂಪನ್ನಃ ಪ್ರಸಾದಂ ಭುಂಜತೇ ಯದಿ ।
ಅಪ್ರಸಾದೀ ಅನಾಚಾರೀ ಸರ್ವಭಕ್ತಸ್ತು ವಾಯಸಃ ॥''
ಎಂಬುದನರಿಯದೆ,
ಮತ್ತೆ ಕೇಳು ಗ್ರಂಥ ಸಾಕ್ಷಿಯ ಮನುಜ :
ಸಾಕ್ಷಿ : ''ಲಿಂಗಾರ್ಚನೈಕ ಪರಾಣಾಂ ಅನ್ಯದೈವಂತು ಪೂಜನಂ ।
ಶ್ವಾನಯೋನಿಶತಂ ಗತ್ವಾ ರೌರವಂ ನರಕಂ ವ್ರಜೇತ್ ॥''
ಎಂಬುದನರಿಯದೆ, ಮತ್ತಮೇಣ್,
ಸಾಕ್ಷಿ : ''ಶಿವಲಿಂಗಂ ಪರಿತ್ಯಜ್ಯ ಅನ್ಯದೈವಮುಪಾಸತೇ ।
ಪ್ರಸಾದಂ ನಿಷ್ಫಲಂ ಚೈವ ರೌರವಂ ನರಕಂ ವ್ರಜೇತ್ ॥''
ಹೀಗೆಂಬುದನರಿಯದೆ,
ಲಿಂಗವಿದ್ದು ಅನ್ಯದೈವಂಗಳಿಗೆರಗಿ, ಆಚಾರಭ್ರಷ್ಟನಾಗಿ
ಪಾದೋದಕ ಪ್ರಸಾದವ ಕೊಂಡರೆ ಎಂದೆಂದಿಗೂ ಭವಹಿಂಗದು.
ಅದೇನುಕಾರಣ ಹಿಂಗದೆಂದರ ಹೇಳುವೆ ಕೇಳಿರಣ್ಣಾ:
ಹಗ್ಗಣವನೊಳ ಹೋಗಿಸಿ ನೆಲಗಟ್ಟಿ ಹೊರೆದಂತೆ,
ಅನ್ಯಕೆ ಹರಿವ ದುರ್ಗುಣವ ಕೆಡೆಮೆಟ್ಟದ
ಶಿವಭಕ್ತರೆಂದೆಂದು ನುಡಿದುಕೊಂಡು ನಡೆದರೆ,
ಹಂದಿ ನಾಯಿ ನರಿ ವಾಯಸನ ಜನ್ಮ ತಪ್ಪದೆಂದಾತ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೮ ॥

### ೧೨೦

ಭವಿ ಭಕ್ತರೆಂಬೆರಡು ವಿವರವಾಯಿತು ನೋಡಾ ಅಯ್ಯಾ.
ಭವಿಗೆ ಶೈವ, ಭಕ್ತಂಗೆ ವೀರಶೈವ.
ಭವಿ ಶೈವಲಿಂಗವ ಪೂಜೆಮಾಡಿದರೆ
ಅವರ ಭಾವಕ್ಕ ಒಲಿವನಲ್ಲದೆ,
ಶಿವಭಕ್ತ ಶೈವಲಿಂಗವ ಪೂಜೆಮಾಡಿದರೆ ತಪ್ಪದು ನರಕ.
ಅದು ಕಾರಣವೆಂದರೆ :
ಶಿವಲಿಂಗ ಕರಸ್ಥಲದಲ್ಲಿರುತಿರೆ ಆ ಲಿಂಗದ ಪೂಜೆಯ ಮಾಡಿ,
ವರವ ಪಡೆಯಲರಿಯದೆ, ಅನ್ಯಲಿಂಗಕ್ಕೆ ಹರಿದು ಹೋಗಿ,
ಗಡಗಡನುರುಳಿ, ಆ ಲಿಂಗದೇವಾಲಯವ ಪ್ರದಕ್ಷಣ ಮಾಡಿದರೆ,
ಕುನ್ನಿ ಬೂದಿಯೊಳಗೆ ಹೊರಳಿ ಲಟಪಟನೆ ಝಾಡಿಸಿ ಎದ್ದು
ತುದುಗಿಗೆ ಮನೆಯೊಳು ಹೊಕ್ಕು ಸುತ್ತುತ್ತಿರ
ನಡುನೆತ್ತಿಯ ಮೇಲೆ ಬಡಿವಂತೆ,
ಏನೆಂದು ಸಟೆಮಾಡನಯ್ಯಾ ಇಂತಪ್ಪ ಅಜ್ಞಾನಿಗಳ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವ ? ॥ ೨೫೯ ॥

### ೧೨೨೧

ಲಿಂಗಕ್ಕೆರಗದೆ ಅನ್ಯದೈವಂಗಳಿಗೆರಗುವಾತನ ತಲೆ
ಸುಡುಗಾಡಿನಲ್ಲುರುಳುವ ಓಡುವಿಂಗೆ ಸರಿಯೆಂಬೆ.
ಲಿಂಗಪೂಜೆಯ ಮಾಡದೆ, ಅನ್ಯದೈವಂಗಳ ಪೂಜೆಯ ಮಾಡುವನ ಕರವ
ಹೆಂಡವ ಜಾಲಿಸುವ ಕರವೆಂಬೆ.
ಲಿಂಗದ ಪೂಜೆಗಡಿಯಿಡದೆ ಅನ್ಯಲಿಂಗಕೆ ಅಡಿಯಿಡುವನ ಕಾಲು
ಇಪ್ಪುನದ ಹುಳುವಿಂಗೆ ಸರಿಯೆಂಬೆನು.
ಇಂತಪ್ಪ ಲಿಂಗಾಂಗಸಂಗ ಸಮರಸವನರಿಯದೆ
ಭ್ರಾಂತಿಭವಿಗಳಂತೆ ಅನ್ಯಲಿಂಗಕ್ಕೆ ಹರಿವ ಜಡದೇಹಿಗಳ
ಎಂತು ಶಿವಭಕ್ತಜಂಗಮವೆಂಬೆನಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೦ ॥

### ೧೨೨೨

ಹುಟ್ಟಿದಂದು ತನುವ ಸೋಂಕಿದ ಲಿಂಗವ,
ಸಾವಾಗ ಶರೀರದೊಡನೆ ಹೂಳಿಸಿಕೊಂಬ ಲಿಂಗವ ಬಿಟ್ಟು
ಬಟ್ಟೆ, ಬಟ್ಟೆಯಲ್ಲಿ ಕಂಡ ಕಲ್ಲಿಗೆರಗುವ
ಭ್ರಷ್ಟಹೀನ ಹೊಲೆಯರ ನೋಡಾ !
ಇಂತಪ್ಪವರ ಶಿವಭಕ್ತರೆನಬಹುದೆ ? ಎನಲಾಗದು.
ಶಿವಭಕ್ತರಾರೆಂದಡೆ ಹೇಳುವ ಕೇಳಿರಣ್ಣಾ ;
ಗುರುಲಿಂಗಜಂಗಮವ ಶಿವನೆಂದು ನಂಬಿಪ್ಪಾತನೆ ಶಿವಭಕ್ತ,
ಗುರುವ ನಂಬದೆ, ಲಿಂಗವ ನಂಬದೆ, ಜಂಗಮವ ನಂಬದೆ
ಕಿರುಕುಳದೈವಕ್ಕೆ ಹರಕೆಯ ಹೊರುವವ
ಭಕ್ತನೂ ಅಲ್ಲ, ಭವಿಯೂ ಅಲ್ಲ.
ಇಂತಿವೆರಡರೊಳು ಒಂದೂ ಅಲ್ಲಾದ ಎಡ್ಡಗಳ ನಾನೇನೆಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೧ ॥

### ೧೨೨೩

ಶೈವರು ಕಟ್ಟಿದ ಗುಡಿಯ ಹೊಗದ ಭಾಷೆ,
ಶೈವರು ನಟ್ಟ ಲಿಂಗವ ಪೂಜಿಸದ ಭಾಷೆಯ
ವಿವರವನೆನಗೆ ಪಾಲಿಸಯ್ಯಾ !
ದೇಹದ ದೇವಾಲಯದ ಮಧ್ಯದಲ್ಲಿ ಭಾವಿಸುತಿಪ್ಪ
ಶಿವಲಿಂಗದ ಗೊತ್ತಿನ ಸುಖದ ಪರಿಣಾಮದ
ಭಕ್ತಿಯ ನಿರಾಲಂಬವನೆನಗೆ ಕೃಪೆಮಾಡಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೨ ॥

## ೧೨೪

ಕೊಡುವಾತ ಶಿವ, ಕೊಂಬಾತ ಶಿವ, ಹುಟ್ಟಿಸುವಾತ ಶಿವ,
ಕೊಲ್ಲುವಾತ ಶಿವನೆಂಬ ದೃಷ್ಟವನರಿಯದೆ,
ನಡುಮನೆಯಲೊಂದು ದೇವರ ಜಗುಲಿಯನಿಕ್ಕಿ
ಅದರ ಮೇಲೆ ಹಲವು ಕಲ್ಲು ಕಂಚು ಬೆಳ್ಳಿ ತಾಮ್ರದ
ಪಾತ್ರೆಯನಿಟ್ಟು, ಪೂಜೆ ಮಾಡಿ,
ತಲೆ, ಹೊಟ್ಟೆ, ಕಣ್ಣುಬೇನೆ ಹಲವು ವ್ಯಾಧಿ ದಿನ ತಮ್ಮ ಕಾಡುವಾಗ
ನಮ್ಮನೆದೇವರೊಡ್ಡಿದ ಕಂಟಕವೆಂದು ಬೇಡಿಕೊಂಡು
ಹರಕೆಯ ಮಾಡಿ,
ತನ್ನ ಸವಿಸುಖವ ಕೊಂಡು ಪರಿಣಾಮಿಸಿ,
ವಿಧಿ ವಿಘ್ನ ಹೋದ ಮೇಲೆ ಪರದೇವರು ಕಾಯಿತೆಂದು ನುಡಿವವರ
ಲೋಕದ ಗಾದೆಯ ಕಂಡು ನಾ ಬೆರಗಾದೆನೆಂದರ :
ಹುಟ್ಟಿಸಿದ ಶಿವ ಪರಮಾತ್ಮ ಭಕ್ಷಿಸಿಕೊಂಡೊಯ್ಯುವಾಗ
ಕಟ್ಟೆಯ ಮೇಲಣ ಕಲ್ಲು ಕಾಯುವುದೆ ? ಕಾಯದಯ್ಯ.
ಮತ್ತೆ ಹೇಳುವೆ ಕೇಳಿರಣ್ಣಾ :
ಸಿರಿ ತೊಲಗಿ ದರಿದ್ರ ಎಡೆಗೊಂಡು, ಮನೆಯೊಳಿಹ
ಚಿನ್ನ ಬೆಳ್ಳಿ ತಾಮ್ರ ಕಂಚಿನ ಪ್ರತಿಮೆಯನೆಲ್ಲ ಒತ್ತೆಯ ಹಾಕಿ,
ಹಣವ ತಂದು, ಉದರವ ಹೊರೆವಗೆ ಎತ್ತ ಹೋದನಯ್ಯಾ
ಅವರ ಮನೆಯೊಳಿಹ ಮಿಥ್ಯದೈವ ?
ಅಕ್ಕಸಾಲೆಯ ಮನೆಯ ಕುಪ್ಪುಟೆಯಲುರಿವುತಿಹ ಅಗ್ನಿದೇವತೆಗೆ
ಗುರಿಯಾಗಿ ಹೋದವಯ್ಯಾ.
ಸರ್ವದೇವಪಿತ ಶಂಭು[ವೆಂಬು]ದನರಿಯದೆ
ಶಿವನಿಂದ ಹುಟ್ಟಿ, ಶಿವನಿಂದ ಬೆಳೆದು, ಶಿವದೈವವ ಮರೆದು,
ಅನ್ಯದೈವವ ಹೊಗಳುವ
ಕುನ್ನಿಮಾನವರ ಕಂಡು ನಾ ಬೆರಗಾದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೫೩ ||

## ೧೨೫

ಮುಂದೆ ಮಾಡಿದ ಕರ್ಮ ಬೆನ್ನಟ್ಟಿ ಬರುವಾಗ,
ಅದಕಿನ್ನು ದೇವರ ಹರಕೆಯೆಂದು ನುಡಿಯಲೇಕೆ ?
ಭ್ರಷ್ಟರಿರಾ ಕೇಳಿರೌ.
ಮಾನವನಾಗಿ ಹುಟ್ಟಿ, ಕೊರಳಲ್ಲಿ ಕವಡಿಯ ಕಟ್ಟಿ,
ಶ್ವಾನನಾಗಿ ಬೊಗಳುವುದು ಮುನ್ನಿನ ಕರ್ಮದ ದೆಸೆಯಲ್ಲದೆ,
ವಗ್ಗನ ಕರೆತಂದು, ಮೈಲಾರನ ಹರಕೆ ಮುಟ್ಟಿತೆಂದು

ನೀಡುವವನೊಬ್ಬ ಹಳೆನಾಯಿ.
ಮೈಲಾರನ ಪೂಜಿಸುವರೆಲ್ಲ ನಾಯಾಗಿ ಹುಟ್ಟುವುದು ತಪ್ಪದು.
ಉಟ್ಟುದ ಬಿಟ್ಟು ಅರಣ್ಯವಾಸಿಯ ಕಂಡರೆ ಬತ್ತಲೆ ಐದನೆ
ಲಜ್ಜೆಭಂಡನೆಂದು ನುಡಿವರು.
ಯೋನಿಯ ತೆರೆದು, ಬತ್ತಲೆಯಾಗಿ, ಚಿಕ್ಕದು ದೊಡ್ಡದು,
ಹೆಣ್ಣು ಗಂಡು ಊರು ರಾಜ್ಯವೆಲ್ಲ ನೋಡುವಂದದಿ ನಡೆವರು.
ನಡೆದು ನಮ್ಮ ಮಲ್ಲಾರಿಯ ಹರಕೆ ಮುಟ್ಟಿತೆಂದು ನುಡಿವ
ಖೊಟ್ಟಿಗಳು ಇದು ತಮ್ಮ ಪೂರ್ವದ ಕರ್ಮವೆಂದರಿಯರು ನೋಡಾ.
ಕಬ್ಬಿಣವಂಕಿಯ ತಮ್ಮ ತನುವಿಗೆ ಸಿಕ್ಕಿಸಿಕೊಂಡು
ಪಾಶದಲ್ಲಿ ಹಳಿಗೆ ಕಟ್ಟಿ, ಅಂತರದಲ್ಲಿ ತಿರುವಿ,
ಸಿಡಿಯೆಂದಾಡಿ, ಉಡುಚು ಮಾರಿ ಮಸಣೆಯೆಂಬ
ಕೇತು ಭೂತ ದೈವವ ಪೂಜೆಮಾಡುವವರಲ್ಲ
ಪ್ರೇತ ಭೂತಗಳಾಗಿ ಹುಟ್ಟುವದು ತಪ್ಪದು ನೋಡಾ.
ಗುರುಲಿಂಗಜಂಗಮು ನಿಂದಿಸುವ ನಾಲಗ[ಗೆ] ಶಸ್ತ್ರವನೂರಿಸುವ,
ಗುರುಲಿಂಗಜಂಗಮಕೆರಗದೆ ಪರದೈವಕೆರಗುವನ
ತಲೆಯೊಳು ಬೆಂಕಿಯ ಹೊರಿಸುವ, ಶಿವನರಿಯಬಾರದೆ ?
ಗುರುಲಿಂಗಜಂಗಮಕಡಿಯಿಡದೆ,
ಪರದೈವಕಡಿಯಿಡುವನ ಕಾಲಿಂಗೆ
ಕೆಂಡವನಿಕ್ಕುವ ಶಿವನರಿಯಬಾರದೆ ?
ಇದು ನಮ್ಮ ದೇವರ ಹರಕೆ,
ಅಗ್ನಿಗೊಂಡ ಗುಗ್ಗುಳ ಶಸ್ತ್ರವೆಂದು ನುಡಿವರು.
ಚಿಮಿಕಿ ಡೆಂಕಣಿ ಕಿಚ್ಚಿನಕೊಂಡ ಇರಿವ ಶಸ್ತ್ರಕದ ಮಿಟ್ಟಿಗೆ
ಇಂತಿವು ಮುಖ್ಯವಾದ ನಾನಾ ಬಾಧನೆಗಳೆಲ್ಲ ಯಮನಲ್ಲುಂಟು.
ಯಮನಲ್ಲುಂಟಾದ ದೃಷ್ಟಾಂತವ ಮರ್ತ್ಯದಲ್ಲುಂಟು ಮಾಡಿಕೊಂಡು
ಬಾಧನೆಗೆ ಸಿಲ್ಕಿ, ದೇವರ ಹರಕೆಯು ಮುಟ್ಟಿತೆಂದು ನುಡಿವ
ಅಜ್ಞಾನಿ ಹೊಲೆಯರ ಕಂಡು ನನ್ನೊಳು ನಾ ಬೆರಗಾಗುತ್ತಿದ್ದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೫೪ ||

### ೧೨೬

ಹರಲಿಂಗಕೆ ಹರಿ ಅಜಾಸುರರು ಸರಿಯೆಂಬ
ಕುರಿಮಾನವ ನೀ ಕೇಳಾ.
ಹರ ನಿತ್ಯ, ಹರಿಯಜಾಸುರರು ಅನಿತ್ಯ.
ಅದೇನು ಕಾರಣವೆಂದರೆ :
ಹರಿಗೆ ಹತ್ತು ಪ್ರಳಯ, ಬ್ರಹ್ಮಂಗೆ ಅನಂತಪ್ರಳಯ,

ಸುರರ ಪ್ರಳಯವೆಂದರೆ ಅಳವಲ್ಲ,
ಪ್ರಳಯಕ್ಕೆ ಗುರಿಯಾಗಿ ಸತ್ತು ಸತ್ತು ಹುಟ್ಟುವ ಅನಿತ್ಯದೈವವ ತಂದು
ನಿತ್ಯವುಳ್ಳ ಶಿವಂಗೆ ಸರಿಯೆಂಬ ವಾಗದ್ವೈತಿಯ ಕಂಡರೆ
ನೆತ್ತಿಯ ಮೇಲೆ ಟೊಂಗನಿಕ್ಕೆಂದಾತ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೫ ॥

### ೧೨೨೭

ಸರ್ವದೇವಪಿತ ಶಂಭುವೆಂಬ ನಾಮ ಹರಗೆ ಸಲ್ಲುವುದಲ್ಲದೆ
ಹರಿಗೆ ಸಲ್ಲುವುದೆ ? ಸಲ್ಲದು.
ಅದೇನು ಕಾರಣವೆಂದರೆ :
ಸರ್ವದೈವ[ವ] ಹುಟ್ಟಿ[ಸ]ಬಲ್ಲ, ಕೊಲ್ಲಬಲ್ಲ
ಸರ್ವದೈವದಿಂದ ಪೂಜೆ ಪುನಸ್ಕಾರವ ಕೊಳಬಲ್ಲ ಪರಮಾತ್ಮನಿಗೆ
ಕುರಿದೈವ ಸರಿಯನಬಹುದೆ ? ಬಾರದು.
ತಾ ಸಾವದೇವರು, ನಿಮ್ಮ ವಿಷ್ಣು ಮತ್ತಾರ ಕಾಯಬಲ್ಲುದು, ಹೇಳಿರೌ ?
ಹರಿ ಹತ್ತು ಪ್ರಳಯಕ್ಕೆ ಗುರಿಯಾದಲ್ಲಿ
ಹರನೆ ಲಿಂಗವಾಗಿ ರಕ್ಷಣ್ಯವ ಮಾಡಿದುದು ಸಟೆಯೆನಿಪ್ಪ
ಹರನ ಕಿರಿ[ದು] ಮಾಡಿ ಹರಿಯ ಹಿರಿದೆಂದು ನುಡಿವ ಚಾಂಡಾಲಿಯ
ಬಾಯಲ್ಲಿ ಕಾದ ಸುಣ್ಣದ ಗಾರೆಯ ಹೊಯ್ಯದೆ ಬಿಡುವನೆ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೬ ॥

### ೧೨೨೮

ಹರಿಯ ನಯನ ಹರನ ಶ್ರೀಪಾದದೊಳು ಅಡಕವಾದುದ
ಸಟೆಯೆಂಬ ವಿಪ್ರ ನೀ ಕೇಳಾ.
ಹರಿ ಸಹಸ್ರಕಮಲದಲ್ಲಿ ಹರನ ಶ್ರೀಪಾದದ ಪೂಜೆ ಮಾಡುತಿರೆ,
ಒಂದರಳು ಕುಂದಿದರೆ ನಯನಕಮಲವನೇರಿಸಿ,
ಶಿವನ ಪಾದಕೃಪೆಯಿಂದ ಶಂಖ ಚಕ್ರವ ಪಡೆದುದು ಹುಸಿಯೆ ? ಹುಸಿಯಲ್ಲ.
ಮತ್ತೆ ಹೇಳುವೆ ಕೇಳು ದ್ವಿಜ.
ಹರಿಯಜರಿಬ್ಬರು ಹರನ ಶ್ರೀಪಾದಮಗುಟವ ಕಾಣ್ಬೆನೆಂದು
ವರಗೃಧ್ರಗಳಾದುದು ಸಟೆಯೇ ?
ಸಾಕ್ಷಿ : ''ಯುಗ್ಮಸಂಯುಕ್ತ ಉಭಯ ಚ ವೃಷ್ಟ, ಬ್ರಾಹ್ಮಣ
ರಾಜಸಬದ್ಧ ವರಗೃಧ್ರ ।'' (?)
ಎಂದುದಾಗಿ,
ಹದ್ದು ಹೆಬ್ಬಂದಿಯಾಗಿ ಶ್ರೀಪರಮಾತ್ಮನ ಮಗುಟಚರಣವ ಕಾಣದೆ
ತೊಳಲಿ ಬಳಲುತಿರಲು,
ಹರಿಯಜರ ಮಧ್ಯದಲ್ಲಿ ಉರಿಲಿಂಗವಾದ ಪರಮಾತ್ಮನ ನಿಲವನರಿಯದೆ,

ಅನ್ಯದೈವವ ತಂದು ಪನ್ನಗಧರಗೆ ಸರಿಯೆಂಬ
ಕುನ್ನಿಮಾನವರ ತಲೆಕೆಳಗಾಗಿ ನರಕಕ್ಕೆ ಕೆಡುವುದ ಮಾಣ್ಬನೆ
ನಮ್ಮ ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೭ ॥

### ೧೨೯

ರಾಗ : ದೇಶವರಾಳಿ

ಪಲ್ಲ : ಗುರುಕರುಣದ ಇಷ್ಟಲಿಂಗವ
ಜರಿದನ್ಯದೈವಕ್ಕೆರಗುವ
ಕುರಿಗಳ ಶಿವಭಕ್ತರೆನಬಹುದೆ ?

ಪದ : ಪತಿಯಿರಲು ಪರಪುರುಷಗೆ
ಗತಿಯಾಗಿ ತಿರುಗುವ ಹೊಲತಿಯ
ಮತಿಯಂತೆ ಸಜ್ಜನೆಯೆನಬಹುದೆ ?
ಸಿತಕಂಠಲಿಂಗ ಕರದೊಳಿರೆ ಪರ
ಪ್ರತುಮೆಗೆರಗುವ ಹೊಲೆಯನ
ಕ್ಷಿತಿಯೊಳು ಶಿವಭಕ್ತನೆನಬಹುದೆ ? । ೧ ।

ಮಾರಿ ಮಸಣಿ ಮೈಲಾರನ ಬಳಿ
ನೀರ ಕುಡಿದು ಅವರೆಂಜಲ
ಮಾರಾರಿಲಿಂಗಕ್ಕೆ[ರೆದುಂ]ಬ ಸಮ
ಗಾರನ ಯಮರಾಜ ಬಾಧಿಸಿ
ರೌರವ ನರಕದೊಳಿಕ್ಕುವನಿದ
ಧರಣಿಯೊಳು ತಿಳಿದು ನೋಡಿರೌ. । ೨ ।

ತಲೆಯೊಳು ಕಿಚ್ಚು ತಳಿಗೆ ಶಸ್ತ್ರ
ಸಲೆ ಬೇವಿನುಡುಗೆ ಬೆನ್ನಲಿ ಸಿಡಿ
ಹಲವು ಹರಕೆಯನು ಪರದೈವ
ಗಳಿಗೆ ಮಾಡುವ ಕ್ಷೀಣ ಅಜ್ಞಾನಿ
ಹೊಲೆಯ ತಾ ಶಿವಭಕ್ತನೆಂದೆನೆ ಮುಂದೆ
ಕುಲಕೋಟಿ ನರಕದೊಳಿಕ್ಕುವ ನೇಮು. । ೩ ।

ಗುರುಲಿಂಗಜಂಗಮವೆಂಬವು
ಪರಶಿವನ ಚಿದ್ರೂಪವೆಂಬುದ
ನರಿಯದ ಹಲವು ದೈವಗಳಿ
ಗೆರಗಿ ಸೂಳೆಯಂತೆ ತಿರುಗುವ
ನರನ ಲಿಂಗವಂತನೆಂದೆನ್ನೆ ಮುಂದೆ
ಹರ ಶಿಕ್ಷೆಯ ಮಾಡುವ ನನಗೆ. । ೪ ।

ಶಿವನೆ ದೈವ ಲಿಂಗಾಂಗಿಯೆ ಕುಲಜ
ಭವಿಗಳೆಲ್ಲರು ಅಕುಲಜರೊ
ಬವರ ಧರೆಯೊಳುಸುರಿದೆ
ಹವಿನೇತ್ರ ಪಡುವಿಡಿ ಸಿದ್ಧಮಲ್ಲನೆಂ
ಬುವನ ಸರ್ವಕನೆಂದು ನಂಬಿದ
ಅವ ನಿತ್ಯ ಸತ್ಯ ಸಜ್ಜನನೆಂಬೆ. । ೫ ।

॥ ೨೫೮ ॥

## ವಿಭೂತಿಯ ಸ್ಥಲ

ಸೂತ್ರ : ಇಂತು ಅನ್ಯದೈವವ ನಿರಸನವ ಮಾಡಿ, ಅನ್ಯದೈವಂಗಳ ಭಜನೆಯೊಳು ಹೊದ್ದಿ ಹೊದ್ದದೆ ಲಿಂಗನ ಗೂಡಾಗಿ, ಲಿಂಗತತ್ಸಂಗದಲ್ಲಿರುತಿರುವ ದಿವ್ಯಜ್ಞಾನಿ ಶರಣಂಗೆ ಶಿವಸ್ವರೂಪವಪ್ಪ ಶ್ರೀ ವಿಭೂತಿಯ ಧರಿಸಬೇಕಾದ ಕಾರಣ ನವದಶದಲ್ಲಿ ಶ್ರೀ ವಿಭೂತಿಸ್ಥಲವಾದುದು.

೧೨೬೦

ಕಾಮನ ಸುಟ್ಟು ವಿಭೂತಿಯಿಲ್ಲದಂದಿನ,
ಕಾಲನ ಸುಟ್ಟು ವಿಭೂತಿಯಿಲ್ಲದಂದಿನ,
ತ್ರಿಪುರವ ಸುಟ್ಟು ವಿಭೂತಿಯಿಲ್ಲದಂದಿನ,
ಪಂಚಮುಖದಲ್ಲಿ ಜನಿಸಿದ ಪಂಚಗವ್ಯ
ಗೋಮಯದಿಂದಾದ ಚಿದ್‌ಭಸ್ಮವಿದು ಅಪರಂಪಾರವೆಂದು
ಜಪಿಸಿದ ಎನ್ನ ಪರಿಭವವ ದಾಟಿಸಿದ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೫೯ ॥

೧೨೬೧

ಜನನಭಯದ ಮೂಲದ ಬೇರ ಕಿತ್ತು ಸುಟ್ಟುರುಹುವ ಭಸ್ಮ
ಮರಣಭಯದ ಮೂಲದ ದುರಿತ ದುಃಕೃತವನಿಟ್ಟೊರೆಸುವ
ಶ್ರೀ ಮಹಾಭಸ್ಮ
ಹಣೆಯೊಳಿಹ ದುರಿತಲಿಖಿತವ ತೊಡೆದು ದೂರಮಾಡುತ್ತಿಪ್ಪ ಭಸ್ಮ
ತ್ರಿಣಯನ ಸಾಲೋಕ್ಯಪದದ ಬಯಕೆಯ ತೋರುವ ಭಸ್ಮ
ಮರ್ತ್ಯಲೋಕದ ಯತಿ ಸಿದ್ಧ ಸಾಧ್ಯರು ಮಹಾಗಣಂಗಳ
ಮುಕ್ತರ ಮಾಡುತಿಪ್ಪ ಭಸ್ಮ
ತ್ರಿಣಯನ ಸಾಲೋಕ್ಯದ ದೇವಗಣಂಗಳ
ನಿತ್ಯರ ತೋರುವ ಚಿದ್ಭಸ್ಮ, ಚಿದಾನಂದ ಭಸ್ಮ
ಇದು ಶುದ್ಧ ಪರಶಿವನ ಚಿದ್ರೂಪವೆಂದು ಮುದದೆ ಧರಿಸಿ,
ಭವಸಾಗರವ ದಾಂಟಿ ನಿತ್ಯನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೦ ॥

### ೧೨೩೨

ಹಲವು ಜನ್ಮದಲೊದಗಿದ ಪಾಪವ ತೊಲಗಿಸುವುದಕ್ಕೆ ಶ್ರೀವಿಭೂತಿ.
ಮಲಿನದೇಹದ ಹೊಲೆಯ ಕಳೆವುದಕ್ಕೆ ಶ್ರೀವಿಭೂತಿ.
ದುರಿತವ ಕೆಡಮೆಟ್ಟುವರೆ ಶ್ರೀವಿಭೂತಿ
ದುಃಕೃತ್ಯವ ನಿಟ್ಟೊರೆಸುವರೆ ಶ್ರೀವಿಭೂತಿ.
ಮಲತ್ರಯಂಗಳನಳಿವರೆ ಶ್ರೀವಿಭೂತಿ.
ಅಷ್ಟಮದಂಗಳ ಸುಟ್ಟು, ಸೂರೆಬಡುವುದಕ್ಕೆ ಶ್ರೀವಿಭೂತಿ.
ತನುಮದ ವ್ಯಸನ ವರ್ಗ ಗುಣಕರಣ ಮಲಮಾಯಕಂಗಳ
ಸುಟ್ಟು, ಸೂರೆಮಾಡುವುದು ಶ್ರೀವಿಭೂತಿ.
ಪಣೆಯೊಳು ಧರಿಸ ಕಲಿಸಿ, ಒಳಗೆ ಹೊರಗೆ ತೊಳಗಿ ಬೆಳಗಿ
ತೋರಿದ ಚಿನ್ಮಯ ಚಿದ್ರೂಪ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೬೧ ||

### ೧೨೩೩

ಬೆಟ್ಟದಷ್ಟು ಕರ್ಮವುಳ್ಳರೆ ಬೊಟ್ಟಿನಷ್ಟು ಶ್ರೀವಿಭೂತಿಯ ಧರಿಸಲು
ಬಟ್ಟಬಯಲಾಗಿ ದುರಿತನ್ಯಾಯ ದೆಸೆಗೆಟ್ಟು ಓಡುವವು.
ನೈಷ್ಠೆಯುಳ್ಳ ಶ್ರೀವಿಭೂತಿ ಧರಿಸಿಪ್ಪ ಸದ್ಭಕ್ತಂಗೆ
ಕಾಲಮೃತ್ಯು, ಅಪಮೃತ್ಯು, ಮಾರಿಗಳೆಂಬವು ಮುಟ್ಟಲಮ್ಮವು.
ಬ್ರಹ್ಮರಾಕ್ಷಸ ಪ್ರೇತ ಪಿಶಾಚಿಗಳು ಬಿಟ್ಟೋಡುವವು
ಶ್ರೀವಿಭೂತಿಯ ಕಾಣುತ್ತಲೆ.
ಮಂತ್ರ ಸರ್ವಕೆಲ್ಲ ಶ್ರೀವಿಭೂತಿಯಧಿಕ ನೋಡಾ.
ಯಂತ್ರ ಸರ್ವಕೆಲ್ಲ ಶ್ರೀವಿಭೂತಿ ಅಧಿಕ ನೋಡಾ.
ಸರ್ವ ಜಪತಪನೇಮ ನಿತ್ಯ ಹೋಮ ಗಂಗಾಸ್ನಾನ
ಅನುಷ್ಠಾನವೆಲ್ಲಕೆಯಾ ಶ್ರೀವಿಭೂತಿ ಅಧಿಕ ನೋಡಾ.
ಸರ್ವಕ್ರಿಯೆಗೆ ಶ್ರೀ ವಿಭೂತಿಯಧಿಕ ನೋಡಾ.
ಸರ್ವವಶ್ಯಕೆ ಶ್ರೀವಿಭೂತಿಯಧಿಕ ನೋಡಾ.
ಶ್ರೀ ವಿಭೂತಿಯಿಲ್ಲದಲಾವ ಕಾರ್ಯವೂ ಸಾಧ್ಯವಾಗದು.
ಶ್ರೀವಿಭೂತಿ ವೃಷಭಾಕಾರ, ಶ್ರೀವಿಭೂತಿ ಚಿದಂಗ.
ಸಾಕ್ಷಿ : ''ಅನಾದಿ ಶಾಶ್ವತಂ ನಿತ್ಯಂ ಚೈತನ್ಯಂ ಚಿತ್ಸ್ವರೂಪಕಂ ।
ಚಿದಂಗಂ ಋಷಭಾಕಾರಂ ಚಿದ್ಭಸ್ಮ ಲಿಂಗಧಾರಣಂ ॥''
ಎಂದೆಂಬ ಶ್ರೀವಿಭೂತಿಯ ಸಂದುಸಂದು ಅವಯವಂಗಳು
ರೋಮ ರೋಮ ಅಪಾದಮಸ್ತಕ ಪರಿಯಂತರದಲ್ಲು
ಧರಿಸಿ ಶಿವದೇಹಿಯಾದೆನು ನೋಡಾ.
ಅದು ಎಂತೆಂದರೆ :

ಸಾಕ್ಷಿ : ''ಆಪಾದಮಸ್ತಕಾಂತಂ ಚ ರೋಮಾದೌ ಭವತೇ ಶಿವಃ ।
ಸ್ವಕಾಯಮುಚ್ಯತೇ ಲಿಂಗಂ ವಿಭೂತ್ಯೂದ್ಧೂಳನಾದ್ ಭವೇತ್ ॥''
ಹೀಗೆಂಬ ವಿಭೂತಿಯ ಧರಿಸಿ, ಭವಸಾಗರವ ದಾಟಿ
ನಿತ್ಯನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೨ ॥

೧೨೩೪

ವೇದಕ್ಕೆಯಾ [ಮುಖ್ಯ] ಶ್ರೀವಿಭೂತಿ,
ಶಾಸ್ತ್ರಕ್ಕೆಯಾ ಮುಖ್ಯ ಶ್ರೀವಿಭೂತಿ,
ಪೌರಾಣಕ್ಕೆ[ಯಾ] ಮುಖ್ಯ ಶ್ರೀವಿಭೂತಿ,
ಆಗಮಕ್ಕೆಯಾ ಮುಖ್ಯ ಶ್ರೀವಿಭೂತಿ.
ವೇದಾಗಮಶಾಸ್ತ್ರಪುರಾಣವನೋದುವ ವಿಪ್ರನಾದರೂ ಆಗಲಿ,
ಶ್ರೀವಿಭೂತಿ ಶ್ರೀ ಪಂಚಾ[ಕ್ಷ]ರಿಯಿಲ್ಲದೆ ಓದಿದ ಓದು ವ್ಯರ್ಥ.
ಶ್ರೀವಿಭೂತಿಯ ಧರಿಸಿ, ಶ್ರೀ ಪಂಚಾಕ್ಷರಿಯ ನೆನೆದು,
ಏಳು ಜನ್ಮದಲ್ಲಿ ಹೊರೆಯ ಕಳೆದು, ಶಿವದೇಹಿಯಾದೆನು ನೋಡಾ.
ಅದು ಎಂತೆಂದರೆ :
ಸಾಕ್ಷಿ : ''ನಮಃ ಶಿವಾಯೇತಿ ಮಂತ್ರಂ ಯಂ ಕರೋತಿ ತ್ರಿಪುಂಡ್ರಕಂ ।
ಸಪ್ತಜನ್ಮಕೃತಂ ಪಾಪಂ ತತ್‌ಕ್ಷಣೇನ ವಿನಶ್ಯತಿ ॥''
ಎಂದುದಾಗಿ,
ಪರಮಾತ್ಮನ ಸ್ವರೂಪವುಳ್ಳ ಶ್ರೀ ವಿಭೂತಿಯ ಸರ್ವಾಂಗವೆಲ್ಲಕೆಯೂ
ಉದ್ಧೂಳನವ ಮಾಡಿ ಪರಮಪದದಲ್ಲಿ ಓಲಾಡುತಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೩ ॥

೧೨೩೫

ತ್ರಿಪುಂಡ್ರ ತ್ರಿದೇವರುತ್ಪತ್ತಿಸ್ಥಿತಿಲಯವ ಕೆಡಿಸುವುದೆಂದು
ಭಾಳೊಳು ಶ್ರೀ ವಿಭೂತಿಯ ಧರಿಸಕಲಿಸಿದನಯ್ಯಾ ಶ್ರೀಗುರು.
ಅದು ಎಂತೆಂದರೆ :
ಪ್ರಥಮಪುಂಡ್ರ ಬ್ರಹ್ಮನ ಉತ್ಪತ್ಯವ ಕೆಡಿಸುವುದೆಂದು,
ದ್ವಿತೀಯಪುಂಡ್ರ ವಿಷ್ಣುವಿನ ಸ್ಥಿತಿಗತಿಯ ಕೆಡಿಸುವುದೆಂದು
ತೃತೀಯಪುಂಡ್ರ ರುದ್ರನ ಲಯದ ಹೊಡೆಗಿಚ್ಚ
ಕೆಡಿಸುವುದೆಂದು ಅರುಹಿದ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೪ ॥

೧೨೩೬

ನೆತ್ತಿಯಲ್ಲಿ ಶ್ರೀ ವಿಭೂತಿಯ ಧರಿಸಿ
ಮಿಥ್ಯದೈವಕೆರಗದ ಭಾಷೆ.

ನಯನದಲ್ಲಿ ಶ್ರೀ ವಿಭೂತಿಯ ಧರಿಸಿ
ಪರಧನ ಪರಸ್ತ್ರೀಯರ ನೋಡದ ಭಾಷೆ.
ಭಾಳೊಳು ವಿಭೂತಿಯ ಧರಿಸಿ
ಗಂಧ ಚಂದನಾದಿಗಳ ಪೂಸದ ಭಾಷೆ.
ಕರ್ಣದಲ್ಲಿ ವಿಭೂತಿಯ ಧರಿಸಿ ಶಿವನಿಂದ್ಯವ ಕೇಳದ ಭಾಷೆ.
ನಾಸಿಕದಲ್ಲಿ ವಿಭೂತಿಯ ಧರಿಸಿ
ಲಿಂಗಸಂಗವಲ್ಲದನ್ಯವ ವಾಸಿಸದ ಭಾಷೆ.
ಜಿಹ್ವೆಗೆ ಶ್ರೀ ವಿಭೂತಿಯ ಧರಿಸಿ
ಲಿಂಗ ಜಂಗಮ ಪ್ರಸಾದವಲ್ಲದನ್ಯವ ಸೇವಿಸದ ಭಾಷೆ.
ಕಂಠದಲ್ಲಿ ವಿಭೂತಿಯ ಧರಿಸಿ ಅನ್ಯಕೆ ಸೆರಗೊಡ್ಡದ ಭಾಷೆ.
ಭುಜದಲ್ಲಿ ವಿಭೂತಿಯ ಧರಿಸಿ
ಸತ್ಯ ಸದಾಚಾರವ ಭುಜಗೊಟ್ಟಾನುವ ಭಾಷೆ.
ತೋಳಿನಲ್ಲಿ ವಿಭೂತಿಯ ಧರಿಸಿ ಪರಧನವನಪ್ಪದ ಭಾಷೆ.
ಮುಂಗೈಯಲ್ಲಿ ವಿಭೂತಿಯ ಧರಿಸಿ
ಅನ್ಯರಿಗೆ ಕೈಯೊಡ್ಡಿ ಬೇಡದ ಭಾಷೆ.
ಅಂಗೈಯಲ್ಲಿ ವಿಭೂತಿಯ ಧರಿಸಿ
ಲಿಂಗವಲ್ಲದನ್ಯದೈವವ ಪೂಜಿಸದ ಭಾಷೆ.
ಇಂತಿವು ಮುಖ್ಯವಾದ ಸ್ಥಾನಂಗಳಲ್ಲಿ
ಶ್ರೀ ವಿಭೂತಿಯನೊಲಿದು ಧರಿಸಿ
ಶಿವಸತ್ಯ ಶಿವದೇಹಿಯಾದೆ ನೋಡಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೫ ॥

೧೨೩೭

ಶ್ರೀ ವಿಭೂತಿಯಿಲ್ಲದವನ ಹಣೆಯ ಸುಡುಯೆಂದಿತ್ತು ಪೌರಾಣ.
ಶಿವಾಲಯವಿಲ್ಲದ ಗ್ರಾಮವ ಸುಡುಯೆಂದಿತ್ತು ಪೌರಾಣ.
ಶಿವಾರ್ಚನೆಯಿಲ್ಲದವನ ಜನ್ಮವ ಸುಡುಯೆಂದಿತ್ತು ಪೌರಾಣ.
ಶ್ರೀ ಶಿವಸ್ತುತಿಯಿಲ್ಲದವನ ಆಗಮವ ಸುಡುಯೆಂದಿತ್ತು ಪೌರಾಣ.
ಅದು ಎಂತೆಂದರೆ :
ಸಾಕ್ಷಿ : ''ಧಿಗ್ ಭಸ್ಮರಹಿತಂ ಭಾಳಂ ಧಿಗ್ ಗ್ರಾಮಮಶಿವಾಲಯಂ ।
ಧಿಗ್ ಗನೀಶಾಶ್ರಿತಂ ಜನ್ಮ ಧಿಗ್‌ವಿದ್ಯಾಮಶಿವಾಶ್ರಯಾಂ ॥''
ಎಂದುದಾಗಿ,
ಎಲ್ಲಿ ಲಿಂಗಾರ್ಚನೆಯಿಲ್ಲ, ಎಲ್ಲಿ ತ್ರಿಪುಂಡ್ರವಿಲ್ಲ,
ಎಲ್ಲಿ ರುದ್ರಜಪವಿಲ್ಲ
ಅವನ ಮನೆ ಹೊಲೆಮಾದಿಗನ ಮನೆಯ ಸರಿಯೆಂದಿತ್ತು ಪೌರಾಣ.

ಅದು ಎಂತೆಂದರೆ :

ಸಾಕ್ಷಿ : ''ಯತ್ರ ಲಿಂಗಾರ್ಚನಂ ನಾಸ್ತಿ। ನಾಸ್ತಿ ಯತ್ರ ತ್ರಿಪುಂಡ್ರಕಂ।
ಯತ್ರ ರುದ್ರ ಜಪಂ ನಾಸ್ತಿ। ತತ್‌ಚಾಂಡಾಲ ಗುರೋರ್ಗೃಹಂ ॥''
ಹೀಗೆಂಬುದನರಿಯದೆ ವಾಗದ್ವೈತದಿಂದ
ಶ್ರೀವಿಭೂತಿಯ ಪೂಸದೆ, ಶ್ರೀರುದ್ರಾಕ್ಷಿಯ ಧರಿಸದೆ,
ಶಿವಲಿಂಗದ ಪೂಜೆಯನನುದಿನ ಮಾಡದೆ,
ಶಿವನಿರೂಪದಿಂದಲಾವರಣವನರಿಯದೆ,
ಶಿವನ ಸಾಧಿಸೇನೆಂಬ ಅಜ್ಞಾನಿಗಳ ಕಂಡು ನಾ ಬೆರಗಾದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೬ ॥

## ೧೨೩೮

ಭಸಿತದ ಮೇಲೆ ಅನ್ಯದೇವರ ಬಂಡಾರವನಿಡುವ
ಅನಾಮಿಕ ಹೊಲೆಯನ ಶಿವಭಕ್ತನೆಂದು ಕರೆಯಬಹುದೆ ? ಕರೆಯಬಾರದು.
ಕರೆದವರಿಗೆ ಮಹಾದೋಷ.
ತೊತ್ತಿನಮೇಲೆ ಗರತಿಯಲ್ಲದೆ, ಗರತಿಯ ಮೇಲೆ ತೊತ್ತೆ ?
ಮಿಥ್ಯದೈವದ ಗಂಟಲಗಾಣವೆಂಬ ಶ್ರೀ ವಿಭೂತಿಯ ಧರಿಸಿ,
ಶಿವಪದ ಸಾಧಿಸಲರಿಯದೆ ಮಣ್ಣು ಪಟ್ಟಿಯ ಧರಿಸಿ ಕೆಡುವ
ಕುನ್ನಿಗಳ ನಾನೇನೆಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೭ ॥

## ೧೨೩೯

ಭಕಾರ ಭವಬಂಧನ ಕರ್ಮವ ಕಳೆವುದೆಂದು,
ಸಿಕಾರ ಶಿವಪದದ ಬಯಕೆಯ ತೋರುವುದೆಂದು,
ತಕಾರ ತಾಮಸಗುಣ ಕಳೆವುದೆಂದು ನಿರೂಪಿಸಿ
ಶ್ರೀಭಸಿತವ ಧರಿಸಕಲಿಸಿದೆಯಲ್ಲ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೮ ॥

## ೧೨೪೦

ವಿಕಾರ ಈ ಜನ್ಮದ ಹೊರೆಯ ಕಳೆವುದೆಂದು,
ಭೂಕಾರ ಭೂತ ಪಿಶಾಚಿಗಳ ಗ್ರಹಗಳ ನಿಟ್ಟೊರಸುವ ಅರಿಯೆಂದು,
ತಿಕಾರ ಅಂತರಂಗದ ಒಳಹೊರಗೆ ಇಡಿದಿಹ ತಿಮಿರಕೆ ಜ್ಯೋತಿಸ್ವರೂಪವೆಂದು
ಶ್ರೀ ವಿಭೂತಿಯ ಧರಿಸ ಕಲಿಸಿದನಯ್ಯಾ ಶ್ರೀಗುರು.
ಪಂಚಗವ್ಯ ಗೋಮಯದಿಂದುದಯವಾದ ಶ್ರೀವಿಭೂತಿ
ಪಂಚಭೂತದ ಪೂರ್ವಗ್ರಹವ ಕಳೆವುದೆಂದು ನಿರೂಪಿಸಿ ಧರಿಸಿದನಯ್ಯಾ.
ಇಂತಪ್ಪ ಶ್ರೀ ವಿಭೂತಿಯ ಸಂತತ ಧರಿಸಿ ನಿಶ್ಚಿಂತನಾಗಿದ್ದನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೬೯ ॥

೧೪೧

ರಾಗ : ಪಹಾಡಿ

ಪಲ್ಲ : ಭಸಿತವಿದು ಶಿವರೂಪೆಂದು
ನೊಸಲೊಳು ಧರಿಸಿದಡವ ನಿತ್ಯ.

ಪದ : ಭವಬಂಧನಕೆ ಅರಿಯು ಭಕಾರವು
ಶಿವಪದದ ಬಯಕೆಯನೀವ ಸಿಕಾರವು
ಕವಿವ ತಾಮಸಗುಣಹಾರ ತಕಾರವೆಂದು
ವಿವರಿಸಿ ಶ್ರೀ ಭಸಿತವನೆನ್ನ ಭಾಳೊಳು
ತವೆ ಪೂಸಕಲಿಸಿದ ಗುರುವ ನೆನೆದು ನಾ
ಜವನ ಪಾಶವನು ಸುಟ್ಟು ನಿಟ್ಟೊರೆಸಿದೆನು. ।೧।

ಈ ಜನ್ಮದ ಹೊಲೆಗಳೆವ 'ವಿ'ಕಾರವು
ಸಾಜ ಭೂತಭಯ ಭೀತಿಗೆ 'ಭೂ'ಕಾರವು
ರಾಜಿಪ ತಿಮಿರಕೆ ಜ್ಯೋತಿ 'ತಿ'ಕಾರವೆಂದು
ಮೂಜಗಪಾಲಗೆ ಸಿತಗೊರಳನಾಮವು
ಸೂಚಿಸುತಿಹ [ವಿ]ಭೂತಿಯ ಧರಿಸಿಯೆ
ನೀ ಜೀವಿಸು ಮಗನೆಂದು ಅರುಹಿದ ಗುರುವೆ. ।೨।

ಪ್ರಥಮಪುಂಡ್ರ ಬ್ರಹ್ಮತ್ಯಕರ
ದ್ವಿತೀಯಪುಂಡ್ರ ವಿಷ್ಣುವಿನ ಸ್ಥಿತಿಗತಿಕ್ಷಯಂ
ತೃತೀಯ ಪುಂಡ್ರ ರುದ್ರನ ಲಯಗೆಡವುದೆಂದು
ಪ್ರತಿಯಿಲ್ಲ ತ್ರಿಪುಂಡ್ರವ ಭಾಳೊಳು
ಸದವಕಾಲ ಧರಿಸಿದಡವ
ನಿತ್ಯನೆಂದುನ್ನತಿ ಪೊಗಳೆ ವೇದ ಅಷ್ಟ ಪೌರಾಣದಲ್ಲಿ. ।೩।

ಪಂಚಗವ್ಯ ಗೋಮಯದಿ ಜನಿಸಿಯೆ
ಪಂಚಮುಖಗೆ ಆಭರಣವೆನಿಸಿ ತನು
ಪಂಚಭೂತಂಗಳನಳಿದು ಪಣೆಯೊಳಿರುವ
ಸಂಚಿತ ಪ್ರಾರಬ್ಧಾಗಾಮಿ ತ್ರೈಗಳ
ಹಂಚುಹರಿಯ ಮಾಡುರುಹುವ ಭಸ್ಮ ಪ್ರ
ಪಂಚಿಲ್ಲದೆ ಧರಿಸಿದಡವ ಮುಕ್ತ. ।೪।

ಚಿದಂಗ ವೃಷಭಾಕಾರ ವಿಭೂತಿಯ
ಅದ ಸರ್ವಾಂಗಕುದ್ಧೂಳನ ಮಾಡಿಪ
ಸದ್ಭಕ್ತನೆ ಶಿವ ತಾನೆಂದು
ಮುದದಿ ಪೊಗಳುತಿಹ ವೇದಾಗಮುಗಳು

ಮಿದ ನೀ ಧರಿಸೆಂದೆನಗರುಹಿದ ಗುರು
ಮದಹರ ಪಡುವಿಡಿ ಸಿದ್ಧಮಲ್ಲೇಶಾ. । ೫ ।

॥ ೨೭೦ ॥

## ರುದ್ರಾಕ್ಷಿಯಸ್ಥಲ

ಸೂತ್ರ : **ಇಂತು ಶ್ರೀ ವಿಭೂತಿಯ ಧರಿಸಿ ಶಿವದೇಹಿಯಾದ ಶಿವಜ್ಞಾನಸಂಪನ್ನ ಶರಣಂಗೆ ಶಿವನ ಆಭರಣವೆನಿಸುವ ಶ್ರೀ ರುದ್ರಾಕ್ಷಿಯ ಧರಿಸಬೇಕಾದ ಕಾರಣ ವಿಂಶತಿಯಲ್ಲಿ ರುದ್ರಾಕ್ಷಿಯಸ್ಥಲವಾದುದು.**

**೧೫೪೨**

ಧರಿಸಿರಣ್ಣ ಶ್ರೀ ವಿಭೂತಿಯ, ಧರಿಸಿರಣ್ಣ ಶ್ರೀ ರುದ್ರಾಕ್ಷಿಯ,
ಸ್ಮರಿಸಿರಣ್ಣ ಶ್ರೀ ಪಂಚಾಕ್ಷರಿಯ.
ಶ್ರೀ ವಿಭೂತಿಯ ಹೂಸದೆ, ಶ್ರೀ ರುದ್ರಾಕ್ಷಿಯ ಧರಿಸದೆ,
ಶ್ರೀ ಪಂಚಾಕ್ಷರಿಯ ನೆನೆಯದೆ
ಶಿವಪದವ ಸಾಧಿಸಿದೆನೆಂದರೆ ಸಾಧ್ಯವಾಗದು ಕಾಣಿರಣ್ಣಾ!
ಕಣ್ಣು ಕಾಲು ಕಿವಿಯಿಲ್ಲದಿರೆ ಶರೀರಕೆ ಒಪ್ಪವಹುದೆ ?
ಮುಕ್ಕಣ್ಣನ ಆಭರಣವೆನಿಸುವ ಭಸ್ಮ ರುದ್ರಾಕ್ಷಿ ಷಡಕ್ಷರಿಯಿಂದಲೆನ್ನ
ಭವದಗ್ಧವಾಗಿ ನಿತ್ಯ ಮುಕ್ತನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೭೧ ॥

**೧೫೪೩**

ಹರ ತ್ರಿಪುರದಹನದಲ್ಲಿ [ಈಕ್ಷಿಸಿ] ನೋಡಲಾಕ್ಷಣ
ನಯನಜಲದೊರೆದು ಉದಯವಾದ ಶ್ರೀರುದ್ರಾಕ್ಷಿ.
ಪರಮ ಮುನಿಗಳಿಗೆ ಮೋಕ್ಷಾರ್ಥವನೀವ ಶ್ರೀರುದ್ರಾಕ್ಷಿ.
ಧರೆಯ ಸದ್ಭಕ್ತರುಗಳ ಪಾಲನಮಾಡಿ ತೋರುವ ಶ್ರೀರುದ್ರಾಕ್ಷಿ,
ಕರ್ಮಶರಧಿಯ ನಿಟ್ಟೊರಸುವುದಕ್ಕೆ ಶ್ರೀರುದ್ರಾಕ್ಷಿ.
ದರುಶನವ ಮಾಡಿದರೆ ಲಕ್ಷಪುಣ್ಯ, ಸ್ಪರುಶನವ ಮಾಡಿದರೆ ಕೋಟಿಫಲಂ,
ಧರಿಸಿದಡಂ ದಶಶತಕೋಟಿ ಫಲಂ
ಇನಿತು ಫಲವಪ್ಪುದು ಶ್ರೀ ರುದ್ರಾಕ್ಷಿಯಿಂ.
ಸಾಕ್ಷಿ : "ಲಕ್ಷಂ ತದ್ದರ್ಶನಾತ್ಪುಣ್ಯಂ ಕೋಟಿಃ ಸಂಸ್ಪರ್ಶನಾದಪಿ ।
ದಶಕೋಟಿ ಶತಂ ಪುಣ್ಯಂ ಧಾರಣಾತ್ ಲಭತೇ ನರಃ ॥"
ಹೀಗೆನಿಸುವ ರುದ್ರಾಕ್ಷಿಯ ಧರಿಸಿ,
ರುದ್ರಪದವಿಯನೈದುವುದು ತಪ್ಪದು ನೋಡಾ !
ಅದು ಹೇಗೆಂದರೆ : ಆವನೊಬ್ಬನು ಕೊರಳಲ್ಲಿ ರುದ್ರಾಕ್ಷಿಯ ಧರಿಸೆ
ಆವನ ಕುಲಕೋಟಿ ಸಹವಾಗಿ ಶಿವಲೋಕವನೈದರೆ ?

ಅದಕೆ ಶ್ರುತಿ ದೃಷ್ಟವುಂಟೇಯೆಂದರೆ ಉಂಟು.

ಸಾಕ್ಷಿ : ''ರುದ್ರಾಕ್ಷಾಶ್ರಿತಕಂಠಶ್ಚ ಗೃಹೇ ತಿಷ್ಠತಿ ಯೋ ನರಃ ।
ಕುಲೈಕಂ ವಿಂಶಯುಕ್ತಂ ಚ ಶಿವಲೋಕೇ ಮಹೀಯತೇ ॥''
ಎಂದೆನಿಸುವ ರುದ್ರಾಕ್ಷಿಯ ಮೂಲ ಬ್ರಹ್ಮನೆಂದಿತ್ತು ಪೌರಾಣ.
ರುದ್ರಾಕ್ಷಿಯ ಗಳ ವಿಷ್ಣುವೆಂದಿತ್ತು ಪೌರಾಣ.
ರುದ್ರಾಕ್ಷಿಯ ಮುಖ ಸದಾಶಿವನೆಂದಿತ್ತು ಪೌರಾಣ.
ರುದ್ರಾಕ್ಷಿಯ ಸರ್ವಾಂಗವೆಲ್ಲ ಸರ್ವದೇವರೆಂದಿತ್ತು ಪೌರಾಣ.

ಸಾಕ್ಷಿ : ''ರುದ್ರಾಕ್ಷಿಮೂಲಂ ಬ್ರಹ್ಮಾ ಚ ತನ್ನಾಳಂ ವಿಷ್ಣುರುಚ್ಯತೇ ।
ಮುಖಂ ಸದಾಶಿವಂ ಪ್ರೋಕ್ತಂ ಬಿಂದುಃ ಸರ್ವತ್ರ ದೇವತಾ ॥''
ಎಂದೆನಿಸುವ ರುದ್ರಾಕ್ಷಿಯ ಧರಿಸಿ ರುದ್ರನಾಗಿದ್ದೆನು.
'ಅತಏವ ರುದ್ರಾಕ್ಷಿಧಾರಣಂ ರುದ್ರಾ'ಯೆಂದಿತ್ತು ವೇದ.
ರುದ್ರಾಕ್ಷಿಯ ಧರಿಸಿ ಶುದ್ಧಚಿ ದ್ರೂಪನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೭೨ ॥

೧೨೪೪

ಶಿರದೊಳು ಧರಿಸಲು ಕೋಟಿ ಫಲ
ಕರ್ಣದೊಳು ಧರಿಸಲು ದಶಕೋಟಿ ಫಲ
ಕೊರಳೊಳು ಧರಿಸಲು ಶತಕೋಟಿ ಫಲ.
ಬಾಹುವಿನೊಳು ಧರಿಸಲು ಸಾವಿರ ಫಲವೆಂದಿಹುದು ದೃಷ್ಟ.

ಸಾಕ್ಷಿ : ''ಶಿರಸಾ ಧಾರಣಾತ್ಕೋಟಿ ಕರ್ಣಯೋರ್ದಶಕೋಟಿ ಚ ।
ಶತಂ ಕೋಟಿ ಗಳೇ ಬದ್ಧಂ ಸಾಹಸ್ರಂ ಬಾಹುಧಾರಣಾತ್ ॥''
ಎಂದುದಾಗಿ,
ಹಸ್ತ ಬಾಹು ಉರ ಕಂಠ ಕರ್ಣ ಮಸ್ತಕದಲ್ಲಿ
ಶ್ರೀ ರುದ್ರಾಕ್ಷಿಯ ಧರಿಸಿ ನಿತ್ಯ ಮುಕ್ತನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೭೩ ॥

೧೨೪೫

ಶಿಲೆ ಮೌಕ್ತಿಕ ಪದ್ಮಾಕ್ಷಿ ಸುವರ್ಣ ಸಲೆ ಪುತ್ರಂಜಿ ಮೊದಲಾದ
ಇಂತಿವರಲ್ಲಿ ಜಪವ ಮಾಡಿದರೆ ಒಂದೊಂದಕೊಂದು ಫಲವಿಹುದು.
ಶ್ರೀ ರುದ್ರಾಕ್ಷಿಯ ಧರಿಸಲು ಅನಂತಫಲವೆಂದಿತ್ತು ಪೌರಾಣ.

ಸಾಕ್ಷಿ : ''ಅಂಗುಲೀ ಜಪಸಂಖ್ಯಾಭಿರೇಕೈಕಾಂತು ವರಾನನೇ ।
ರೇಖಾಯಾಷ್ಟಗುಣಂ ಪ್ರೋಕ್ತಂ ಪುತ್ರಜೀವಿಫಲೈರ್ದಶ ॥''
ಎಂದುದಾಗಿ,
''ಶಂಖಿಶ್ಶತಗುಣವಿಂದ್ಯಾತ್ಪ್ರವಾಳಸ್ತು ಸಹಸ್ರಕಂ ।
ಸ್ಫಟಿಕೈರ್ದಶಸಾಹಸ್ರಂ ಮೌಕ್ತಕಂ ಲಕ್ಷಮೇವ ಚ ॥''

ಎಂದುದಾಗಿ,
“ಪದ್ಮಾಕ್ಷಿರ್ದಶಲಕ್ಷಂತು ಸುವರ್ಣಕೋಟಿರುಚ್ಯತೇ ।
ದಶಕೋಟಿ ಕುಶದ್ರಾಂತೆ ರುದ್ರಾಕ್ಷಿಯನಂತ ಫಲ ॥” (?)
ಎಂದೆನಿಸುವ ರುದ್ರಾಕ್ಷಿಯ ಧರಿಸಿ ರುದ್ರನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೭೪ ॥

### ೧೨೪೬

ರಾಗ : ನಾದ ರಾಮಕ್ರೀ

ಪಲ್ಲ : ಧರಿಸಿರೊ ಶ್ರೀ ರುದ್ರಾಕ್ಷಿಯ ಬಾಹು
ಉರ ಕಂಠ ಕರ್ಣ ಮಸ್ತಕದಲ್ಲಿ ಒಲಿದು.

ಪದ : ಹರನಕ್ಷಿ ಜಲದಲ್ಲುದಯವಾಗಿ ಮುನಿ
ವರ ವಿಶ್ವಾಮಿತ್ರ ಗೌತಮ ವಶಿಷ್ಠರ
ನೆರ ಮುಕ್ತರ ಮಾಡಿ ಕೈಲಾಸಪದದೊಳ
ಗಿರಿಸುವ ಭಸಿತ ರುದ್ರಾಕ್ಷಿಯನೊಲಿದು. । ೧ ।

ನೆತ್ತಿಯೊಳಗೆ ತ್ರಯ ಶಿಖಿಗೇಕ ಮೇಣ್
ಚಿತ್ತಸಮಸ್ತಕೆ ಧಾರಣಗಳು ಅದ
ರೊತ್ತಿಲಿ ಕರ್ಣಕುಂಡಲಕೆ ಏಕೈ
ಕೆಂದು ವಿಸ್ತರಿಸಿ ರುದ್ರಾಕ್ಷಿಯನೊಲಿದು. । ೨ ।

ಕೊರಳೊಳು ಬತ್ತೀಸ ಉರದೊಳು ಮಹಾ
ಸರ ಅಷ್ಟಶತಮಾಲೆಯನುವೆ ನೀವು
ಕರಕಂಕಣಕೆ ದಶಬಾಹುಪೂರಕೆ
ನೆರ ಷೋಡಶ ರುದ್ರಕ್ಷಿಯನೊಲಿದು. । ೩ ।

ಕರದಂಘ್ರಿಮಾಲೆಗ ದಶವೇಕ ಮಹಾಜಪ
ಸರ [ಕೂಡಿಕೊಂಡು ಲೇಸೆಂದು] ಮೇಣ್
ವಿರಚಿಸಿ ಶಿವಪೂಜೆಯನು ಮಾಡೆ ಕರ್ಮ
ಗಿರಿಗೂಜ್ರವೆನಿಪ ರುದ್ರಾಕ್ಷಿಯನೊಲಿದು. । ೪ ।

ಇನಿತು ತೆರದ ರುದ್ರಾಕ್ಷಿಯ ಮಹಾ
ಘನವೆಂಬಲ್ಲಿ ಮುಕ್ತಿಯ ಸಾರ
ತ್ರಿಣಯ ಸದ್ಗುರು ಪಡುವಿಡಿ ಸಿದ್ಧಮಲ್ಲನಾ
ನೆನವ ತೋರುವ ತತ್ವಚಿಂತಾಮಣಿಯನೊಲಿದು. । ೫ ।
॥ ೨೭೫ ॥

## ಪಂಚಾಕ್ಷರಿಯಸ್ಥಲ

ಸೂತ್ರ : ಇಂತು ಶ್ರೀವಿಭೂತಿ ಶ್ರೀರುದ್ರಾಕ್ಷಿಯನೊಲಿದು ಧರಿಸಿ ಶಿವಲಿಂಗದ ತತ್ಸಂಗದಲ್ಲಿ ಇರುತಿಪ್ಪ ಶರಣಂಗೆ ಶಿವಮಂತ್ರವ ಸದಾ ಬಿಡದೆ ಜಪಿಸಬೇಕಾದ ಕಾರಣ ಏಕವಿಂಶತಿಯಲ್ಲಿ ಶ್ರೀಪಂಚಾಕ್ಷರಿಯಸ್ಥಲವಾದುದು.

೧೪೭

ಏನೆಂದು ಉಪಮಿಸುವೆನಯ್ಯಾ ಶ್ರೀಪಂಚಾಕ್ಷರಿಯ !
ಏನೆಂದು ಬಣ್ಣಿಸುವೆನಯ್ಯಾ ಶ್ರೀಪಂಚಾಕ್ಷರಿಯ !
ನೆನೆವಡೆನ್ನ ಮನ ಸಾಲದು, ನುಡಿವಡೆನ್ನ ಜಿಹ್ವೆ ಸಾಲದು,
ಕೇಳುವಡೆನ್ನ ಕರ್ಣ ಸಾಲದು.
ಮನಮುಟ್ಟಿ ನೆನೆದು ಶ್ರೀ ಪಂಚಾಕ್ಷರಿಯ,
ಜಿಹ್ವೆಮುಟ್ಟಿ ಸ್ತುತಿಸಿ ಶ್ರೀಪಂಚಾಕ್ಷರಿಯ,
ಕರ್ಣಮುಟ್ಟಿ ಕೇಳಿ ಶ್ರೀಪಂಚಾಕ್ಷರಿಯ
ನಾನು ಅಡಿಗಡಿಗೆ ನಿತ್ಯಮುಕ್ತನಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೭೬ ॥

೧೪೮

ಪುಣ್ಯಫಲಕೆ ಬೀಜ ಶ್ರೀಪಂಚಾಕ್ಷರಿ,
ಪಾಪಗಿರಿಗೆ ವಜ್ರ ಶ್ರೀಪಂಚಾಕ್ಷರಿ,
ಶ್ರೀಗುರುಕೃಪೆಯನೊಲಿಸುವರೆ ಶ್ರೀಪಂಚಾಕ್ಷರಿ,
ಲಿಂಗದೆಡೆಗೆ ನಡೆ ಸೋಪಾನ ಶ್ರೀಪಂಚಾಕ್ಷರಿ,
ಜಂಗಮಕೆ ತವರ್ಮನೆ ಶ್ರೀಪಂಚಾಕ್ಷರಿ.
ಶ್ರೀ ಗುರುಲಿಂಗಜಂಗಮ ನಿತ್ಯಮುಕ್ತರ ಮಾಡಿತೋರುವ
ಶ್ರೀಪಂಚಾಕ್ಷರಿಯ ಅರಿತು ನೆನೆದರೆ ಅನಂತಕೋಟಿ ಪುಣ್ಯ,
ಮರೆತು ನೆನೆದರೆ ಮಹಾಕೋಟಿ ಪುಣ್ಯ.
ಅರಿತು ಅರಿಯದೆ, ಮರೆತು ಮರೆಯದೆ ಸದಾವಕಾಲದಲ್ಲಿ
'ನಮಃಶಿವಾಯ' ಎಂದು ಜಪಿಸುತಿಪ್ಪ ಶಿವಶರಣರ
ಪಾದಧ್ಯಾನದಲ್ಲಿಪ್ಪ ಕೃಪೆಯನೆನಗೆ ಪಾಲಿಸಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೧೭೭ ॥

೧೪೯

ಶ್ರೀಪಂಚಾಕ್ಷರಿಯ ಮೂಲದ ಹೊಲಬ ತಿಳಿಯಬಲ್ಲಾತನೆ
ವೇದಾಂತವಬಲ್ಲಾತನೆಂಬೆ.
ಶ್ರೀಪಂಚಾಕ್ಷರಿಯ ಮೂಲದ ಹೊಲಬ ತಿಳಿಯಬಲ್ಲಾತನೆ
ಸಿದ್ಧಾಂತವ ಬಲ್ಲಾತನೆಂಬೆ.

ಶ್ರೀಪಂಚಾಕ್ಷರಿಯ ಮೂಲವ ಬಲ್ಲಾತನೆ
ವೇದ ಶಾಸ್ತ್ರ ಪುರಾಣ ಆಗಮವ ಬಲ್ಲಾತನೆಂಬೆ.
ಶ್ರೀಪಂಚಾಕ್ಷರಿಯ ಧ್ಯಾನವ ಧ್ಯಾನಿಸಲರಿಯದೆ
ವೇದಾಗಮವನೋದುತ್ತಿದ್ದೆವೆಂಬ ಪಿಸುಣರ ಓದೆಲ್ಲ
ಕುಂಬಿಯ ಮೇಲೆ ಕುಳಿತು ಒದರುವ ವಾಯಸನಸರಿಯೆಂಬೆನಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೭೮ ||

೧೫೫೦

ಶ್ರೀ ಪಂಚಾಕ್ಷರಿಯುಳ್ಳ ಅಗ್ರಜ ವಿಪ್ರನಿಂದಧಿಕ ನೋಡಾ !
ಶ್ರೀ ಪಂಚಾಕ್ಷರಿಯುಳ್ಳ ಅಂತ್ಯಜ ವಿಪ್ರನಿಂದಧಿಕ ನೋಡಾ !
ಶ್ರೀ ಪಂಚಾಕ್ಷರಿಯನಾವಾತನಾದರೂ ನೆನೆದರೆ
ರುದ್ರನಪ್ಪುದು ತಪ್ಪದು ನೋಡಾ ಅಯ್ಯಾ !
ಅದೆಂತೆಂದರೆ :
ಸಾಕ್ಷಿ : ''ಅಗ್ರಜೋ ಅಂತ್ಯಜೋ ವಾಪಿ ಮೂರ್ಖೋsವಾ ಪಂಡಿತೋsಪಿವಾ ।
ಜಪೇತ್ ಪಂಚಾಕ್ಷರೀಂ ನಿತ್ಯಂ ಸ ರುದ್ರೋ ನಾತ್ರ ಸಂಶಯಃ ॥''
ಎಂದಿತ್ತು ದೃಷ್ಟ.
'ಓಂ ನಮಃ ಶಿವಾಯಃ' ಯೆಂಬ ಆರಕ್ಷರವ ನೆನೆಯಲರಿಯದೆ
ಜಪ ತಪ ನೇಮ ನಿತ್ಯ ಅನುಷ್ಠಾನ ಪೂಜೆಗಳೆಲ್ಲ
ನಿಷ್ಫಲವೆಂದಿತ್ತು ರಹಸ್ಯದಲ್ಲಿ.
ಸಾಕ್ಷಿ : ''ಷಡಕ್ಷರಮಿದಂ ಖ್ಯಾತಂ ಷಡಾನನಂ ಷಡನ್ವಿತಂ ।
ಷಡ್ವಿಧಂಯೋನ ಜಾನಾತಿ ಪೂಜಾಯಾಂ ನಿಃಫಲಂ [ಭವೇತ್]''
ಎಂಬ ಷಡಕ್ಷರಿಯ ಸಂಭ್ರಮದಲ್ಲಿ ನೆನೆದು, ಭವಾಂಬೋಧಿಯ ದಾಂಟಿ,
ಸ್ವಯಂಭುವಾಗಿದ್ದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೭೯ ||

೧೫೫೧

ನಕಾರ ನರಜನ್ಮದ ಹೊಲೆಯ ಕಳೆದು,
ಮಕಾರ ಮಾಂಸಪಿಂಡದ ಹೊಲೆಯ ಕಳೆದು ಮಂತ್ರಪಿಂಡವ ಮಾಡಿತಯ್ಯಾ.
ಶಿಕಾರ ಶಿವದೇಹಿಯ ಮಾಡಿತಯ್ಯ,
ವಕಾರ ಒಳಹೊರಗೆ ತೊಳಗಿ ಬೆಳಗಿ ಶುದ್ಧನಮಾಡಿತಯ್ಯ,
ಯಕಾರ ಎನ್ನ ಭವವ ಹಿಂಗಿಸಿತಯ್ಯ.
ಓಂಕಾರ ಪ್ರಾಣ ಜೀವಾತ್ಮ ದೇಹದ ಮಧ್ಯದೊಳು
ಸರ್ವಪೂರ್ಣಮಯವಾಗಿದ್ದಿತಯ್ಯಾ.
ಇಂತೀ ಷಡಕ್ಷರಿಯ ಮಂತ್ರವ ಜಪಿಸಿ,
ಅಂತಕನ ಪಾಶವ ಸುಟ್ಟು, ನಿಟ್ಟೊರಸಿದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೮೦ ||

೧೨೫೭

ಪಂಚಾಕ್ಷರವೆ ಶಿವನ ಪಂಚಮುಖದಿಂದಲುದಯವಾಗಿ
ಪಂಚತತ್ವಸ್ವರೂಪವಾಯಿತ್ತು ನೋಡಾ.
ಆ ಪಂಚಸ್ವರೂಪಿಂದಲೆ ಬ್ರಹ್ಮಾಂಡ ನಿರ್ಮಿತವಾಯಿತ್ತು.
ಆ ಬ್ರಹ್ಮಾಂಡದಿಂದ ಪಿಂಡಾಂಡ ನಿರ್ಮಿತವಾಯಿತ್ತು.
ಅದು ಎಂತೆಂದರೆ ಹೇಳುವೆ ಕೇಳಿರಣ್ಣಾ:
ಸದ್ಯೋಜಾತಮುಖದಲ್ಲಿ ನಕಾರ ಪುಟ್ಟಿತ್ತು,
ಆ ನಕಾರದಿಂದ ಪೃಥ್ವಿ ಪುಟ್ಟಿತ್ತು,
ವಾಮದೇವಮುಖದಲ್ಲಿ ಮಕಾರ ಪುಟ್ಟಿತ್ತು.
ಆ ಮಕಾರದಿಂದ ಅಪ್ಪು ಪುಟ್ಟಿತ್ತು,
ಅಘೋರಮುಖದಲ್ಲಿ ಶಿಕಾರ ಜನನ.
ಆ ಶಿಕಾರದಿಂದ ಅಗ್ನಿ ಪುಟ್ಟಿತ್ತು,
ತತ್ಪುರುಷಮುಖದಲ್ಲಿ ವಕಾರ ಪುಟ್ಟಿತ್ತು,
ಆ ವಕಾರದಿಂದ ವಾಯು ಪುಟ್ಟಿತ್ತು,
ಈಶಾನಮುಖದಲ್ಲಿ ಯಕಾರ ಜನನ,
ಆ ಯಕಾರದಿಂದ ಆಕಾಶ ಹುಟ್ಟಿತ್ತು,
ಈ ಪಂಚತತ್ವಸ್ವರೂಪಿಂದ ಬ್ರಹ್ಮಾಂಡ ನಿರ್ಮಿತವಾಯಿತ್ತು.
ಆ ಬ್ರಹ್ಮಾಂಡದಿಂದ ಪಿಂಡಾಂಡ ನಿರ್ಮಿತವಾಯಿತ್ತು.
ಹೇಗೆ ನಿರ್ಮಿತವಾಯಿತ್ತೆಂದರೆ,
ಪೃಥ್ವಿ ಅಪ್ ತೇಜ ವಾಯು ಆಕಾಶವೆಂಬ ಪಂಚಭೂತಂಗಳಿಂದವೆ
ಪಂಚವಿಂಶತಿತತ್ವಂಗಳುತ್ಪತ್ಯವಾದವು.
ಆ ಪಂಚವಿಂಶತಿ ತತ್ವಂಗಳಿಂದವೆ ಶರೀರವಾಯಿತ್ತು.
ನಕಾರದಿಂದ ಕರ್ಮೇಂದ್ರಿಯಂಗಳ ಜನನ.
ಮಕಾರದಿಂದ ಪಂಚವಿಷಯಂಗಳುತ್ಪತ್ಯ.
ಶಿಕಾರದಿಂದ ಬುದ್ಧೀಂದ್ರಿಯಗಳು ಜನನ.
ವಕಾರದಿಂದ ಐದು ಪ್ರಾಣವಾಯುಗಳ ಜನನ.
ಯಕಾರದಿಂದ ಅಂತಃಕರಣಚತುಷ್ಟಯಂಗಳು
'ನಮಃ ಶಿವಾಯ' 'ನಮಃ ಶಿವಾಯ'ವೆಂಬ ಪಂಚಾಕ್ಷರದಿಂದವೆ
ಉತ್ಪತ್ಯವೆಂದು ಹೇಳಲ್ಪಟ್ಟಿತ್ತಯ್ಯ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೮೧ ||

೧೨೫೮

ಗುದದಲ್ಲಿ ಆಧಾರಚಕ್ರ, ಪೃಥ್ವಿಯೆಂಬ ಮಹಾಭೂತ,
ಚತುಃಷ್ಕೋಣ, ಚೌದಳಪದ್ಮ, ಅಲ್ಲಿಯ ಅಕ್ಷರ ವಶಷಸವೆಂಬ

ನಾಲ್ಕು ಅಕ್ಷರ, ಅದರ ವರ್ಣ[ಪೀತ], ಅದಕ್ಕೆ ಅಧಿದೇವತೆ[ಬ್ರಹ್ಮ],
ಭಕ್ತ ಮುಖ, ಕ್ರಿಯಾಶಕ್ತಿ, ಆಚಾರಲಿಂಗ, ನಕಾರ ಸ್ವಾಯತ.
ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ, ಅಪ್ಪುವೆಂಬ ಮಹಾಭೂತ, ಧನುರ್ಗತಿ,
ಷಡುದಳಪದ್ಮ, ಅಲ್ಲಿಯ ಅಕ್ಷರವಾರು ಬ ಭ ಮ ಯ ರ ಲ ;
ಅದರ ವರ್ಣ [ಶ್ವೇತ], ಅಧಿದೇವತೆ [ವಿಷ್ಣು], ಮಹೇಶ ಮುಖ,
ಜ್ಞಾನಶಕ್ತಿ, ಗುರುಲಿಂಗ, ಅಲ್ಲಿ ಮಕಾರ ಸ್ವಾಯತ.
ನಾಭಿಸ್ಥಾನದಲ್ಲಿ ಮಣಿಪೂರಕಚಕ್ರ, ತೇಜವೆಂಬ ಮಹಾಭೂತ,
ತ್ರಿಕೋಣ, ದಶದಳಪದ್ಮ, ಅಲ್ಲಿಯ ಅಕ್ಷರ ಹತ್ತು ;
ಡಢಣ ತಥದಧನ ಪಫ, ಅದಕ್ಕೆ [ಹರಿತ]ವರ್ಣ,
ಅಧಿದೇವತೆ [ರುದ್ರ], ಪ್ರಸಾದಿ ಮುಖ, ಇಚ್ಛಾಶಕ್ತಿ,
ಶಿವಲಿಂಗ, ಶಿಕಾರ ಸ್ವಾಯತ.
ಹೃದಯಸ್ಥಾನದಲ್ಲಿ ಅನಾಹತಚಕ್ರ, ವಾಯುವೆಂಬ ಮಹಾಭೂತ,
ಷಟ್ಕೋಣ, ದ್ವಿದಶದಳಪದ್ಮ, ಅಲ್ಲಿಯ ಅಕ್ಷರ ಹನ್ನೆರಡು :
ಕ ಖ ಗ ಘ ಙ ಚ ಛ ಜ ಝ ಞ ಟ ಠ ಅದರ ವರ್ಣ
[ಮಾಂಜಿಷ್ಟ], ಅದಕ್ಕೆ ಅಧಿದೇವತೆ [ಈಶ್ವರ],
ಪ್ರಾಣಲಿಂಗಿ ಮುಖ, [ಆದಿ]ಶಕ್ತಿ, ಜಂಗಮಲಿಂಗ,
ಅಲ್ಲಿ ವಕಾರ ಸ್ವಾಯತ.
ಕಂಠಸ್ಥಾನದಲ್ಲಿ ವಿಶುದ್ಧಿಚಕ್ರ, ಆಕಾಶವೆಂಬ ಮಹಾಭೂತ,
ವರ್ತುಳಾಕಾರ, ಷೋಡಷದಳಪದ್ಮ, ಅಲ್ಲಿಯ ಅಕ್ಷರ
ಹದಿನಾರು : ಅ ಆ ಇ ಈ ಉ ಊ ಋ ೠ ಌ ೡ ಏ ಐ
ಓ ಔ ಅಂ ಅಃ, ಅದಕ್ಕೆ ವರ್ಣ [ಕಪೋತ],
ಅಧಿದೇವತೆ ಸದಾಶಿವನು, ಶರಣ ಮುಖ, [ಪರಾ]ಶಕ್ತಿ,
[ಪ್ರಸಾದಲಿಂಗ, ಯಕಾರ ಸ್ವಾಯತ.
ಭ್ರೂಮಧ್ಯದಲ್ಲಿ ಆಜ್ಞಾಚಕ್ರ, ಮನವೆಂಬ ಮಹಾಭೂತ, ದ್ವಿದಳಪದ್ಮ ],
ಅಲ್ಲಿಯ ಅಕ್ಷರವೆರಡು : ಹ ಷ ವೆಂಬ [ಅಕ್ಷರ],
ಮಾಣಿಕ್ಯ ವರ್ಣ, [ಅದಕ್ಕೆ ಅಧಿದೇವತೆ ಮಹೇಶ್ವರ],
ಐಕ್ಯ ಮುಖ, ಕ್ರಿಯಾಶಕ್ತಿ, ಮಹಾಲಿಂಗ, ಓಂಕಾರ ಸ್ವಾಯತ.
ಇಂತೀ ಷಡುಚಕ್ರದ, ಷಡುಸ್ಥಳದ, ಷಡುಲಿಂಗದ,
ಷಡುಶಕ್ತಿಯರಿಗೆ ಷಡಕ್ಷರವೆ ಪ್ರಾಣವಾಗಿ ವಿರಾಜಿಸುತ್ತಿರ್ದುದಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩೮೨ ॥

೧೫೫

ಮಂತ್ರವ ಬಲ್ಲವೆಂದು ಪರಮನುಜರಿಗೆ ಭೂತ ಪ್ರೇತ ವಿರಾಜಿಗಳು
ಹೊಡೆದರೆ ಬಿಡಿಸುವ ಸಂತೆಸೂಳೆಯ ಮಕ್ಕಳು ನೀವು ಕೇಳಿರೋ.
ನಿಮ್ಮ ತನುವಿನೊಳಿಹ ಪಂಚಭೂತಂಗಳು ನಿಮ್ಮ ತಿಂದು ತೇಗುತಿಹವು.

ಅವನೇಕೆ ನೀವು ಜಿಪಿಸಿಕೊಳಲಾರದಾದಿರೊ ?
ಆಳುವ ಪಂಚಭೂತಶರೀರದ ಹೊಲೆಯ ಕಳೆದು
ಶಿವದೇಹಿಯಮಾಡುವುದೆ ಶಿವಪಂಚಾಕ್ಷರಿ.
ಜನನ ಮರಣಗಳ ನಿರ್ಮೂಲಿಸುವುದೆ ಶ್ರೀಪಂಚಾಕ್ಷರಿ.
ಕಾಲಮೃತ್ಯು ಅಪಮೃತ್ಯು ಮಾರಿಗಳನೋಡಿಸುವುದೆ ಶ್ರೀಪಂಚಾಕ್ಷರಿ.
ನಿತ್ಯ ಮುಕ್ತಿಯ ತೋರುವುದೆ ಶ್ರೀಪಂಚಾಕ್ಷರಿ.
ಸತ್ಯ ಜಗದೊಳಿರಿಸುವ ಶ್ರೀಪಂಚಾಕ್ಷರಿ.
ಏಳುಕೋಟಿ ಮಹಾಮಂತ್ರಕೆ ತಾಯಿ ಶ್ರೀಪಂಚಾಕ್ಷರಿ
ಎಂಬುದನರಿಯದೆ, ಕಳ್ಳಮಂತ್ರವ ಕಲಿತು, ಕಾಳುಭವಕೀಡಾಗಿ
ಕಾಳೊಡಲ ಹೊರೆವ ಮಾನವರು ನೀವು ಕೇಳಿರೊ.
ಸಾಕ್ಷಿ : ''ಸಪ್ತಕೋಟಿ ಮಹಾಮಂತ್ರಾ ಉಪಮಂತ್ರಾಸ್ತ್ವನೇಕಶಃ ।
ಪಂಚಾಕ್ಷರ್ಯಾಂ ಪ್ರಲೀಯಂತೇ ಪುನಸ್ತಸ್ಯೈವ ನಿರ್ಗತಾಃ ॥''
ಎಂದೆಂಬ ಮಂತ್ರವನರಿಯದ,
ಅಂಧಕರಂತೆ ಕಾಣದೆ ಹುಡುಕುವ ಸಂದೇಹಿಗಳಿಗಹುದೇನಯ್ಯಾ
'ನಮಃ ಶಿವಾಯ' 'ನಮಃ ಶಿವಾಯ' ಎಂಬ ಮಂತ್ರ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ? ॥ ೨೮೩ ॥

### ೧೨೫೫

ಜಪಿಸಿರೊ ಜಪಿಸಿರೊ ಶ್ರೀ ಪಂಚಾಕ್ಷರಿಯ.
ಜಪದಿಂದ ರುದ್ರನಪ್ಪುದು ತಪ್ಪದು ನೋಡಾ !
ಶ್ರೀ ಪಂಚಾಕ್ಷರಿಯನಿಂಬುಗೊಳದವನ ಅಂಗ ಹಾಳು.
ಶ್ರೀ ಪಂಚಾಕ್ಷರಿಯ ನೆನೆಯದವ ಜಿಹ್ವೆ ಹೇಳು.
ಶ್ರೀ ಪಂಚಾಕ್ಷರಿಯ ಕೇಳದವನ ಕರ್ಣ ಹಾಳು.
ನಡೆವೆಡೆಯಲ್ಲಿ ನುಡಿವೆಡೆಯಲ್ಲಿ ಕೊಡುವೆಡೆಯಲ್ಲಿ
ಕೊಂಬೆಡೆಯಲ್ಲಿ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಬಿಡದೆ
ಪಂಚಾಕ್ಷರಿಯೆಂಬ ಮಂತ್ರವನೆ
'ನಮಃ ಶಿವಾಯ' 'ನಮಃ ಶಿವಾಯ' 'ನಮಃ ಶಿವಾಯ'ಯೆಂದು
ಜಪಿಸಿ, ಒಡಲ ದುರ್ಗುಣವ ಕೆಡಿಸಿ,
ಮೃಡ ನಿಮ್ಮ ನೆನೆದು ನಾ ಬದುಕಿದೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೮೪ ॥

### ೧೨೫೬

ಕಂದ : ಬಣ್ಣಿಪರಳವೆ ಶ್ರೀ ಪಂಚಾಕ್ಷರಿ
ಉನ್ನತ ಮಹಿಮಯ ತ್ರಿಜಗದೊಳಗಂ
ಎನ್ನಯ ಬಡಮತಿಯುಳ್ಳಷ್ಟಂ

ಇನ್ನಂ ಪೊಗಳ್ವೆ ಸಿದ್ಧಮಲ್ಲನ ಕೃಪೆಯಿಂ.

ರಗಳೆ : ಗುರು ಮಹಿಮೆಯಸೋಪ ಪಂಚಾಕ್ಷರಿಯು
ನಾಗಭೂಷಣನರ್ತಿನಾಮ ಪಂಚಾಕ್ಷರಿಯು ।೧।

ನಡೆವುತಂ ನುಡಿವುತಂ ಶಿವನೆ ಪಂಚಾಕ್ಷರಿಯು
ಕುಡುತಲಿ ಕೊಂಬುತಲಿ ಹರನೆ ಪಂಚಾಕ್ಷರಿಯು
ಉಡುತಲಿ ಉಂಬುತಲಿ ಸದ್ಗುರುವೇ ಪಂಚಾಕ್ಷರಿಯು
ಬಿಡದೆ ಜಪಿಸಲು ಸದ್ಯೋನ್ಮುಕ್ತಿ ಪಂಚಾಕ್ಷರಿಯು. ।೨।

ಸಟೆ ಠಕ್ಕು ಠೌಳಿಯಲ್ಲಿ ಬಿಡದೆ ಪಂಚಾಕ್ಷರಿಯು
ದಿಟಪುಟದಲ್ಲಿ ಆವಾ ಪಂಚಾಕ್ಷರಿಯು
ಕುಟಿಲ ವಿಷಯಂಗಳೊಲಿದು ಪಂಚಾಕ್ಷರಿಯು
ನಟಿಸಿ ಜಪಿಸಲು ಮುಕ್ತಿ ಈವ ಪಂಚಾಕ್ಷರಿಯು. ।೩।

ಮಂತ್ರಯೇಳ್ಕೋಟಿಗ ತಾಯಿ ಪಂಚಾಕ್ಷರಿಯು
ಅಂತ್ಯಜಾಗ್ರಜ ವಿಪ್ರರೆಲ್ಲ ಪಂಚಾಕ್ಷರಿಯು
ಸಂತತಂ ಬಿಡದೆ ಜಪಿಸುವದು ಪಂಚಾಕ್ಷರಿಯು
ಎಂತು ಬಣ್ಣಿಪರಳವಲ್ಲ ಪಂಚಾಕ್ಷರಿಯು. ।೪।

ಆದಿ ಪಂಚಾಕ್ಷರಿಯು ಅನಾದಿ ಪಂಚಾಕ್ಷರಿಯು
ಭೇದ್ಯ ಪಂಚಾಕ್ಷರಿಯು [ಅಭೇದ್ಯ ಪಂಚಾಕ್ಷರಿಯು]
ಸಾಧಿಸುವಗೆ ಸತ್ಯ ನಿತ್ಯ ಪಂಚಾಕ್ಷರಿಯು
ಬೋಧೆ ಶೃತಿತತಿಗಳಿಗೆ ಮಿಗಿಲು ಪಂಚಾಕ್ಷರಿಯು. ।೫।

ಪಂಚಾನನದುತ್ಪತ್ತ್ಯದಭವ ಪಂಚಾಕ್ಷರಿಯು
ಪಂಚಮಯ ಬ್ರಹ್ಮಮಯಂ ಜಗತ್ ಪಂಚಾಕ್ಷರಿಯು
ಪಂಚವಿಂಶತಿತತ್ವಕಾದಿ ಪಂಚಾಕ್ಷರಿಯು
ಪಂಚಶತಕೋಟಿ ಭುವನೇಶ ಪಂಚಾಕ್ಷರಿಯು. ।೬।

ಹರಿಯಜರ ಗರ್ವವ ಮುರಿವ ಪಂಚಾಕ್ಷರಿಯು
ಉರಿಲಿಂಗವಾಗಿ ರಾಜಿಸುವ ಪಂಚಾಕ್ಷರಿಯು
ಸ್ಮರಣೆಗೆ ಸರಿಯಿಲ್ಲ ಪ್ರಣಮಪಂಚಾಕ್ಷರಿಯು
ಸ್ಮರಿಸುವಾತನೆ ನಿತ್ಯಮುಕ್ತ ಪಂಚಾಕ್ಷರಿಯು. ।೭।

ಪರಮ ಮುನಿಗಳ ಕರ್ಣಾಭರಣ ಪಂಚಾಕ್ಷರಿಯು
ಹರನ ಸಾಲೋಕ್ಯದ ಪದವನೀವ ಪಂಚಾಕ್ಷರಿಯು
ಉರಗತೊಡೆಶಿವನನೊಲಿಸುವರೆ ಪಂಚಾಕ್ಷರಿಯು
ಕರ್ಮಗಿರಿಗೊಜ್ರ ಸುಧರ್ಮ ಪಂಚಾಕ್ಷರಿಯು. ।೮।

ನಾನಾ ಜನ್ಮದಲ್ಲಿ ಹೊಲೆಯ ಕಳೆವ ಪಂಚಾಕ್ಷರಿಯು
ಮಾನಸ್ಮರಣೆಗೆ ಸರಿಯಿಲ್ಲ ಪಂಚಾಕ್ಷರಿಯು
ಜ್ಞಾನವೇದಿಕೆ ಮುಖ್ಯ ಪಂಚಾಕ್ಷರಿಯು
ಧ್ಯಾನಿಸುವ ನೆರವ ತಾನೆ ಪಂಚಾಕ್ಷರಿಯು. । ೯ ।

ಏನ ಬೇಡಿದಡೀವ ದಾನಿ ಪಂಚಾಕ್ಷರಿಯು
ಸ್ವಾನುಜ್ಞಾನದಲ್ಲು[ದಿ]ಸಿದಂಥ ಪಂಚಾಕ್ಷರಿಯು
ಭಾನು ಅಘತಿಮಿರಕ್ಕೆ ತಾನೆ ಪಂಚಾಕ್ಷರಿಯು
ಕ್ಷಿತಿಭುವನಗಳ ಬೇಡಲೀವ ಪಂಚಾಕ್ಷರಿಯು. । ೧೦ ।

ಕಾನನ ಭವತರು ವಹ್ನಿ ಪಂಚಾಕ್ಷರಿಯು
ಯತಿಗೆ ಯತಿತನವೀವ ಗತಿಯು ಪಂಚಾಕ್ಷರಿಯು
ಉನ್ನತ ಸಿದ್ಧತ್ವವನೀವ ಸಿದ್ಧಿ ಪಂಚಾಕ್ಷರಿಯು
ಭಾನು ಅಘತಿಮಿರಕ್ಕೆ ತಾನೆ ಪಂಚಾಕ್ಷರಿಯು
ಗತಿ ಮೋಕ್ಷಗಳ ಬೇಡೆ ಕುಡುವ ಪಂಚಾಕ್ಷರಿಯು. । ೧೧ ।

ಅವಲಂಬಿಗೆ ಅವಲಂಬ ಪಂಚಾಕ್ಷರಿಯು
ನಿರಾವಲಂಬಿಗೆ ನಿರಾವಲಂಬ ಪಂಚಾಕ್ಷರಿಯು
ಕಾವ ಸಂಹರ ಭಜಿಪರಿಗೆ ಪಂಚಾಕ್ಷರಿಯು
ಪಾವದ್ಯುಮಣಿಧರನನೊಲಿಪ ಪಂಚಾಕ್ಷರಿಯು. । ೧೨ ।

ಅರಿವರ್ಗಗಳ ಮುರಿವ ಶತ್ರು ಪಂಚಾಕ್ಷರಿಯು
ಕರಿಗಳೆಂಟನು ಹೊಡೆವ ಸಿಂಹ ಪಂಚಾಕ್ಷರಿಯು
ಹರಿವ ದಶವಾಯುಗಳನಳಿವ ಪಂಚಾಕ್ಷರಿಯು
ನೆರೆ ಸಪ್ತವ್ಯಸನಗಳಿಗೊಹ್ನಿ ಪಂಚಾಕ್ಷರಿಯು. । ೧೩ ।

ತ್ರಿಗುಣಗಳ ಕೆಡಿಪ ನಿರ್ಗುಣವು ಪಂಚಾಕ್ಷರಿಯು
ಅಘವ್ಯದೇಂದ್ರಿಯಕೆ ಲಿಂಗೇಂದ್ರಿಯ ಪಂಚಾಕ್ಷರಿಯು
ಮಿಗೆ ಕರ್ಮೇಂದ್ರಿಗಳ ತೆರೆತೆಗೆವ ಪಂಚಾಕ್ಷರಿಯು
ಝುಗಝುಗಿಸಿ ಸರ್ವಾಂಗಪೂರ್ಣ ಪಂಚಾಕ್ಷರಿಯು. । ೧೪ ।

ಷಡೂರ್ಮಿಗಳ ಗಡವನಳಿವ ಪಂಚಾಕ್ಷರಿಯು
ಷಡುಕರ್ಮಗಳ ಮೆಟ್ಟಿನಿಲುವ ಪಂಚಾಕ್ಷರಿಯು
ಷಡುವೇಕದಂತಿಗೆ ನಾಥ ಪಂಚಾಕ್ಷರಿಯು
ಬಿಡದೆ ಜಪಿಸಿದಡವ ಮುಕ್ತ ಪಂಚಾಕ್ಷರಿಯು. । ೧೫ ।

ಸಂಸಾರಸಾಗರಕೆ ಹಡಗ ಪಂಚಾಕ್ಷರಿಯು
ವಂಶಗಳನಳಿವ ನಿರ್ವಂಶ ಪಂಚಾಕ್ಷರಿಯು

ಸಂಶಯವಿಲ್ಲದಲಿ ನಿಸ್ಸಂಶಯ ಪಂಚಾಕ್ಷರಿಯು
ವಿಂಶಾರ್ಥ ಬಿಡದೆ ಜಪಿಸುವದು ಪಂಚಾಕ್ಷರಿಯು. । ೧೬ ।

ಗುರುಕೃಪಕಧಿಕದಿ ಭವದಗ್ಧ ಪಂಚಾಕ್ಷರಿಯು
ಕರದ ಲಿಂಗಬೆಳಗು ಪ್ರಣಮಪಂಚಾಕ್ಷರಿಯು
ನೆರೆಶ್ರೋತ್ರಬೋಧೆ ನಿರ್ಬೋಧೆ ಪಂಚಾಕ್ಷರಿಯು
ನಿರುತ ಜಪಿಸುವನೆ ನಿರಾಪೇಕ್ಷ ಪಂಚಾಕ್ಷರಿಯು. । ೧೭ ।

ದೀಕ್ಷಾ ಪಂಚಾಕ್ಷರಿಯು ದೀಕ್ಷ ಪಂಚಾಕ್ಷರಿಯು
ಮೋಕ್ಷಾ ಪಂಚಾಕ್ಷರಿಯು ಮೋಕ್ಷ ಪಂಚಾಕ್ಷರಿಯು
ಶಿಕ್ಷಾ ಪಂಚಾಕ್ಷರಿಯು ಶಿಕ್ಷ ಪಂಚಾಕ್ಷರಿಯು
ಭಿಕ್ಷಾ ಪಂಚಾಕ್ಷರಿಯು ಭಿಕ್ಷ ಪಂಚಾಕ್ಷರಿಯು । ೧೮ ।

ಚಿದ್ಭಸ್ಮದೊಳುವಾಭರಣ ಪಂಚಾಕ್ಷರಿಯು
ಚಿದ್ಮಣಿಗಳ ಸ್ಥಾನ ಸ್ಥಾನ ಪಂಚಾಕ್ಷರಿಯು
ಚಿದಂಗ ಸರ್ವದೊಳು ಪೂರ್ಣ ಪಂಚಾಕ್ಷರಿಯು
ಚಿದಂಗ ಲಿಂಗಸಂಗಸಂಯೋಗ ಪಂಚಾಕ್ಷರಿಯು. । ೧೯ ।

ಪಾದಸಲಿಲಂ ಪ್ರಸಾದಾದಿ ಪಂಚಾಕ್ಷರಿಯು
ಆದಿಕ್ಷೇತ್ರಕ್ಕೆ ವೀರಶೈವ ಪಂಚಾಕ್ಷರಿಯು
ಸಾಧಿಸುವ ಸದ್ಭಕ್ತಿಯನೀವ ಪಂಚಾಕ್ಷರಿಯು
ಓದುವಾತನ ವೇದವಿತ್ತು ಪಂಚಾಕ್ಷರಿಯು. । ೨೦ ।

ಅಷ್ಟಾವರಣಕೆ ಮಹಾಶ್ರೇಷ್ಠ ಪಂಚಾಕ್ಷರಿಯು
ದುಷ್ಟನಿಗ್ರಹ ಶಿಷ್ಟಪಾಲ ಪಂಚಾಕ್ಷರಿಯು
ಮುಟ್ಟಿ ನೆನದರೆ ಮುಕ್ತಿಸಾರ ಪಂಚಾಕ್ಷರಿಯು
ಇಷ್ಟಪ್ರಾಣಭಾವದೀಶ ಪಂಚಾಕ್ಷರಿಯು. । ೨೧ ।

ಭಕ್ತಿಯುಕ್ತಿಯು ಮಹಾಬೆಳಗು ಪಂಚಾಕ್ಷರಿಯು
ನಿತ್ಯನೆನೆವರಿಗೆ ತವರ್ಮನೆಯು ಪಂಚಾಕ್ಷರಿಯು
ಸತ್ಯಸದ್ಗುಣಮಣಿಹಾರ ಪಂಚಾಕ್ಷರಿಯು
ವಿತ್ತ ಸ್ತ್ರೀ ನಿರಾಸೆ ಮಹೇಶ ಪಂಚಾಕ್ಷರಿಯು. । ೨೨ ।

ಪರಧನ ಪರಸ್ತ್ರೀಗೆಳಸ ಪಂಚಾಕ್ಷರಿಯು
ನಿರುತ ಮಹೇಶ್ವರಾಚಾರ ಪಂಚಾಕ್ಷರಿಯು
ಪರಮ ಪ್ರಸಾದಿಸ್ಥಲ ತಾನೆ ಪಂಚಾಕ್ಷರಿಯು । ೨೩ ।

ಈ ಪರಿಯ ತೋರೆ ಮಹಾಮೂರುತಿ ಪಂಚಾಕ್ಷರಿಯು
ತಾ ಪರಬ್ರಹ್ಮ ನಿನಾದ ಪಂಚಾಕ್ಷರಿಯು । ೨೪ ।

ತಟ್ಟಿ ಮುಟ್ಟುವ ರುಚಿ ಶಿವಾರ್ಪಣ ಪಂಚಾಕ್ಷರಿಯು
ಕೊಟ್ಟುಕೊಂಬುವ ಪ್ರಸಾದಾಂಗ ಪಂಚಾಕ್ಷರಿಯು
ನಷ್ಟ ಶರೀರಕೆ ನೈಷ್ಠೆವೀವ ಪಂಚಾಕ್ಷರಿಯು
ಭ್ರಷ್ಟ ಅದ್ವೈತಿಗತೀತ ಪಂಚಾಕ್ಷರಿಯು. ।೨೫।

ಸ್ಥೂಲತನುವಿಗೆ ಇಷ್ಟಲಿಂಗ ಪಂಚಾಕ್ಷರಿಯು
ಮೇಲೆ ಸೂಕ್ಷ್ಮಕೆ ಪ್ರಾಣಲಿಂಗ ಪಂಚಾಕ್ಷರಿಯು
ಲೀಲೆ ಕಾರಣ ಭಾವಲಿಂಗ ಪಂಚಾಕ್ಷರಿಯು
ಬಾಳ್ವ ತ್ರಿತನುವಿಗೆ ತ್ರಿಲಿಂಗ ಪಂಚಾಕ್ಷರಿಯು. ।೨೬।

ಪ್ರಾಣಲಿಂಗದ ಹೊಲಬು ತಾನೆ ಪಂಚಾಕ್ಷರಿಯು
ಕಾಣಿಸುವ ಇಷ್ಟರೊಳು ಭಾವ ಪಂಚಾಕ್ಷರಿಯು
ಮಾಣದೊಳಹೊರಗೆ ಬೆಳಗು ಪಂಚಾಕ್ಷರಿಯು
ಕ್ಷೋಣಿಯೊಳು ಮಿಗಿಲೆನಿಪ ಬಿರಿದು ಪಂಚಾಕ್ಷರಿಯು. ।೨೭।

ಆರು ಚಕ್ರಕೆ ಆಧಾರ ಪಂಚಾಕ್ಷರಿಯು
ಆರು ಅಧಿದೈವಗಳ ಮೀರ್ದ ಪಂಚಾಕ್ಷರಿಯು
ಆರು ವರ್ಣಗಳ ಬಗೆದೋರ್ಪ ಪಂಚಾಕ್ಷರಿಯು
ಆರು ಬಾಳ್ವೀಸ್ಯೆದಕ್ಷರಂಗ ಪಂಚಾಕ್ಷರಿಯು. ।೨೮।

ಆರು ಶಕ್ತಿಗಳ ಆರಂಗ ಪಂಚಾಕ್ಷರಿಯು
ಆರು ಭಕ್ತಿಗಳ ಚಿದ್ರೂಪ ಪಂಚಾಕ್ಷರಿಯು
ಆರು ಲಿಂಗದ ಮೂಲ ಬೇರು ಪಂಚಾಕ್ಷರಿಯು
ಆರು ತತ್ವವಿಚಾರ ಪಂಚಾಕ್ಷರಿಯು. ।೨೯।

ಯೋಗಷ್ಟ ಶಿವಮುಖವ ಮಾಡ್ವ ಪಂಚಾಕ್ಷರಿಯು
ನಾಗಕುಂಡಲ ಊರ್ಧ್ವವಕ್ತ್ರ ಪಂಚಾಕ್ಷರಿಯು
ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಪಂಚಾಕ್ಷರಿಯು
ಸಾಗಿಸಿ ಸುಜ್ಞಾನವೀವ ಪಂಚಾಕ್ಷರಿಯು. ।೩೦।

ಇಷ್ಟ ಪ್ರಾಣಲಿಂಗ ಹೊಲಿಗೆ ಪಂಚಾಕ್ಷರಿಯು
ಅಷ್ಟದಳಕಮಲದ ಪೀಠ ಪಂಚಾಕ್ಷರಿಯು
ದೃಷ್ಟಿ ಅನುಮಿಷಭಾವ ಪಂಚಾಕ್ಷರಿಯು
ಕೊಟ್ಟು ಸಲಹುವದಷ್ಟ ಪಂಚಾಕ್ಷರಿಯು. ।೩೧।

ತನು ಸೆಜ್ಜೆ ಪ್ರಾಣವೆ ಲಿಂಗ ಪಂಚಾಕ್ಷರಿಯು
ಮನ ಪೂಜಾರಿಯು ಭಾವ ಪುಷ್ಪ ಪಂಚಾಕ್ಷರಿಯು
ಇನಿತು ಕೂಡುವುದು ಶಿವಶರಣ ಪಂಚಾಕ್ಷರಿಯು
ಜಿನುಗಿಗಳವಡದ ಈ ಸತ್ಯ ಪಂಚಾಕ್ಷರಿಯು. ।೩೨।

ಶರಣಸ್ಥಲದಂಗ ವೈರಾಗ್ಯ ಪಂಚಾಕ್ಷರಿಯು
ಶರಣಸತಿ ಲಿಂಗಪತಿ ತಾನೆ ಪಂಚಾಕ್ಷರಿಯು
ಶರಣುಪೊಕ್ಕರ ಕಾವ ಬಿರಿದು ಪಂಚಾಕ್ಷರಿಯು
ಶರಣಗಣರಿಗೆ ಮಾತೆಪಿತನು ಪಂಚಾಕ್ಷರಿಯು. ।೩೩।

ಶರಣಂಗೆ ಸುಜ್ಞಾನದಿರವು ಪಂಚಾಕ್ಷರಿಯು
ಶರಣಂಗೆ ಮುಕ್ತಿಯಾಗರವು ಪಂಚಾಕ್ಷರಿಯು
ಶರಣಂಗೆ ಭಕ್ತಿಯ ಸೋಪಾನ ಪಂಚಾಕ್ಷರಿಯು
ಶರಣಂಗೆ ಪರಮಜಲಕೂಪ ಪಂಚಾಕ್ಷರಿಯು. ।೩೪।

ಶರಣಂಗೆ ಶೈವದ ಗೃಹವು ಪಂಚಾಕ್ಷರಿಯು
ಶರಣರಿಗೆ ಸುರಧೇನು ಅಮೃತ ಪಂಚಾಕ್ಷರಿಯು
ಶರಣರಿಗೆ ಕಲ್ಪತರು ಫಲವು ಪಂಚಾಕ್ಷರಿಯು
ಶರಣರಿಗೆ ಚಿಂತಾಮಣಿ ತಾನೆ ಪಂಚಾಕ್ಷರಿಯು. ।೩೫।

ಶರಣಪದ ಬೇಡುವರಿಗೀವ ಪಂಚಾಕ್ಷರಿಯು
ಶರಣ ನಡನುಡಿ ಪೂರ್ಣಮಯವು ಪಂಚಾಕ್ಷರಿಯು
ಶರಣರಿಗೆ ಶಿವನಚ್ಚು ಮೆಚ್ಚು ಪಂಚಾಕ್ಷರಿಯು
ಶರಣದೂಷಣರೆದೆಗಿಚ್ಚು ಪಂಚಾಕ್ಷರಿಯು. ।೩೬।

ಶರಣು ಶಿವಾನಂದ ಜಲಗಡಲು ಪಂಚಾಕ್ಷರಿಯು
ಶರಣರ ಶರೀರ ಮೇಲೆ ಹೊದಿಕೆಯು ಪಂಚಾಕ್ಷರಿಯು
ಶರಣು ಕೃತ್ಯಕೆ ವೈದ್ಯ ಕಾಣಾ ಪಂಚಾಕ್ಷರಿಯು
ಶರಣು ಸುಜ್ಞಾನದರ್ಪಣವು ಪಂಚಾಕ್ಷರಿಯು. ।೩೭।

ಶರಣ ಚಿದ್ರೂಪದ ಬಯಕೆಯಳಿದ ಪಂಚಾಕ್ಷರಿಯು
ಶರಣಷ್ಟೈಶ್ವರ್ಯದೊಳಗಿಡದ ಪಂಚಾಕ್ಷರಿಯು
ಶರಣಪೂಜಿಸಿ ಫಲವ ಬೇಡು[ವ] ಪಂಚಾಕ್ಷರಿಯು
ಶರಣೊಜ್ರಪಂಜರದ ಬಿರಿದು ಪಂಚಾಕ್ಷರಿಯು. ।೩೮।

ಶರಣಾಸೆ ರೋಷವನಳಿವ ಪಂಚಾಕ್ಷರಿಯು
ಶರಣಾಸೆಯ ಮೋಹಲತೆ ಚಿವುಟುವ ಪಂಚಾಕ್ಷರಿಯು
ಶರಣಜ್ಞಾನದತರು ಕುಠಾರ ಪಂಚಾಕ್ಷರಿಯು
ಶರಣರುದಯಾಸ್ತಮಾನ ತಾನೆ ಪಂಚಾಕ್ಷರಿಯು. ।೩೯।

ಶರಣರ ನಡೆನುಡಿ ಒಂದು ಮಾಟ[ವ] ಪಂಚಾಕ್ಷರಿಯು
ಶರಣ ಸಂಸಾರಕಿಕ್ಕಿಡದ ಪಂಚಾಕ್ಷರಿಯು
ಶರಣಗುಣ ಚಿಪ್ಪಕೊರೆ ಶಿಲೆಯು ಪಂಚಾಕ್ಷರಿಯು
ಶರಣರೂಢಗೂಢಿದಾನಂದ ಪಂಚಾಕ್ಷರಿಯು. ।೪೦।

ಶರಣರ ಕರ್ಣದಾಭರಣ ಪಂಚಾಕ್ಷರಿಯು
ಶರಣ ನುಡಿವ ಮಹಾವಸ್ತು ಪಂಚಾಕ್ಷರಿಯು
ಶರಣ ಕೇಳುವ ಕೀರ್ತಿವಾರ್ತೆ ಪಂಚಾಕ್ಷರಿಯು
ಶರಣಾಸರ ಬೇಸರಗಳ ಕಳೆವ ಪಂಚಾಕ್ಷರಿಯು. । ೪೧ ।

ಶರಣರ ಚರಿತ್ರೆಯ ಬರೆವ ಲಿಖಿತ ಪಂಚಾಕ್ಷರಿಯು
ಶರಣೇಶ ಲಾಂಛನಕಿಡದ ಪಂಚಾಕ್ಷರಿಯು
ಶರಣ ತನು ಬಾಳಳಿದ ಬೋಧೆ ಪಂಚಾಕ್ಷರಿಯು
ಶರಣನ ಮನ ಬೋಳವಾಡಿರುವ ಪಂಚಾಕ್ಷರಿಯು. । ೪೨ ।

ಶರಣಂಗೆ ಪರತತ್ವಬೋಧವೆ ಪಂಚಾಕ್ಷರಿಯು
ಶರಣ ಪರವು ಶಾಂತಿ ಭ[illegible]ಘೂಳ ಪಂಚಾಕ್ಷರಿಯು
ಶರಣ ಪರಬ್ರಹ್ಮಮಣಿ ಪಂಚಾಕ್ಷರಿಯು
ಶರಣ ಪರಾತ್ಪರವು ಪಂಚಾಕ್ಷರಿಯು, । ೪೩ ।

ಶರಣಂಗೆ ದೃಢವೆಂಬ ದಂಡ ಪಂಚಾಕ್ಷರಿಯು
ಶರಣ ಕರ್ಮವ ಸುಟ್ಟಗ್ನಿ ಪಂಚಾಕ್ಷರಿಯು
ಶರಣ ತೃಪ್ತಿಗೆ ನಿತ್ಯಾಮೃತ ಪಂಚಾಕ್ಷರಿಯು
ಶರಣ ಹಿಡಿದ ವ್ರತವೈಕ್ಯ ಪಂಚಾಕ್ಷರಿಯು. । ೪೪ ।

ಶರಣ ಪೂಜಿಪ ಪೂಜೆ ಐಕ್ಯ ಪಂಚಾಕ್ಷರಿಯು
ಶರಣಂಗೆ ಐಕ್ಯಪದವೀವ ಪಂಚಾಕ್ಷರಿಯು
ಶರಣ ಮಾಡುವ ಕ್ರಿಯಾದ್ವೈತ ಪಂಚಾಕ್ಷರಿಯು
ಶರಣಂಗೆ ಇವು ನಾಸ್ತಿ ಪಂಚಾಕ್ಷರಿಯು. । ೪೫ ।

ನೇಮ ನಿತ್ಯಂಗಳು ಲಿಂಗೈಕ್ಯ ಪಂಚಾಕ್ಷರಿಯು
ಕಾಮ ಧರ್ಮ ಮೋಕ್ಷತ್ರಯಕ್ಕೆ ಪಂಚಾಕ್ಷರಿಯು
ಕಾಮಿಸುವ ಬಾಹ್ಯಕ್ಕಿಲ್ಲದೈಕ್ಯ ಪಂಚಾಕ್ಷರಿಯು
ನಾಮರೂಪಿಲ್ಲದ ನಿರ್ನಾಮ ಪಂಚಾಕ್ಷರಿಯು. । ೪೬ ।

ಮಾನಸ್ವಾಚಕ ತ್ರಿಕರಣೈಕ್ಯ ಪಂಚಾಕ್ಷರಿಯು
ಜ್ಞಾನ ಜ್ಞಾತೃಜ್ಞೇಯದೈಕ್ಯ ಪಂಚಾಕ್ಷರಿಯು
ಸ್ವಾನುಭಾವವು ಲಿಂಗದೊಳೈಕ್ಯ ಪಂಚಾಕ್ಷರಿಯು
ಮೋನಮುಗ್ಧಂ ತಾನಾದೈಕ್ಯ ಪಂಚಾಕ್ಷರಿಯು. । ೪೭ ।

ನಡೆವ ಕಾಲ್ಗೆಟ್ಟು, ಲಿಂಗೈಕ್ಯ ಪಂಚಾಕ್ಷರಿಯು
ಷಡುರೂಪುಗೆಟ್ಟು, ನೇತ್ರೈಕ್ಯ ಪಂಚಾಕ್ಷರಿಯು
ಜಡ ಘ್ರಾಣೇಂದ್ರಿಲ್ಲದ ಲಿಂಗೈಕ್ಯ ಪಂಚಾಕ್ಷರಿಯು
ಷಡುಯಿಂದ್ರಿಯಕೆ ಷಡುಲಿಂಗೈಕ್ಯ ಪಂಚಾಕ್ಷರಿಯು
ಷಡುಸ್ಥಲವ ಮೀರಿರ್ದ ಲಿಂಗೈಕ್ಯ ಪಂಚಾಕ್ಷರಿಯು. । ೪೮ ।

ಭಕ್ತಿಸ್ಥಲದಾಸೆಳಿದೈಕ್ಯ ಪಂಚಾಕ್ಷರಿಯು
ವ್ಯಕ್ತಮಹೇಶ್ವರ ಭಜನೈಕ್ಯ ಪಂಚಾಕ್ಷರಿಯು
ಮುಕ್ತಪ್ರಸಾದಿ ಸ್ಥಲದೈಕ್ಯ ಪಂಚಾಕ್ಷರಿಯು
ಸತ್ಯ ಪ್ರಾಣಲಿಂಗವೆನ್ನದೈಕ್ಯ ಪಂಚಾಕ್ಷರಿಯು. । ೪೯ ।

ಶರಣಸ್ಥಲದಾಸೆಳಿದೈಕ್ಯ ಪಂಚಾಕ್ಷರಿಯು
ನಿರವಯಲ ಬೆರದ ಮಹಾಐಕ್ಯ ಪಂಚಾಕ್ಷರಿಯು
ಉರಿವುಂಡ ಕರ್ಪುರದ ತೆರನು ಪಂಚಾಕ್ಷರಿಯು
ಸರ[ವು] ಸರವು ಬೆರದಂತೆ ಮಾಡ್ಪ ಪಂಚಾಕ್ಷರಿಯು. । ೫೦ ।

ಪರಿಮಳ ವಾಯು ಸಂಗದಂತೆ ಪಂಚಾಕ್ಷರಿಯು
ನಿರವಯಲಪ್ಪಿದಂತೆ ಪಂಚಾಕ್ಷರಿಯು
ನೆರೆ ಮಾಡಿತೋರುವ ನಿತ್ಯ ಪಂಚಾಕ್ಷರಿಯು
ಪರಮ ಬೋಧೆಯನೇನ ಹೇಳ್ವೆ ಪಂಚಾಕ್ಷರಿಯು. । ೫೧ ।

ನಕಾರ ಮಕಾರ ಭಕ್ತಮಹೇಶ ಪಂಚಾಕ್ಷರಿಯು
ಶಿಕಾರವೆ ಪ್ರಸಾದಿಸ್ಥಲದಂಗ ಪಂಚಾಕ್ಷರಿಯು
ವಕಾರವೆ ಪ್ರಾಣಲಿಂಗಿ ತಾನೆ ಪಂಚಾಕ್ಷರಿಯು
ಯಕಾರಂ ಓಂಕಾರಂ ಶರಣೈಕ್ಯ ಪಂಚಾಕ್ಷರಿಯು. । ೫೨ ।

ಷಡಕ್ಷರ ಷಡುಸ್ಥಲದ ಬೀಜ ಪಂಚಾಕ್ಷರಿಯು
ಷಡುಭಕ್ತಿಗಳ ಮುಖವು ಪಂಚಾಕ್ಷರಿಯು
ಬಿಡದೆ ಸರ್ವತೋಮುಖವಾದ ಪಂಚಾಕ್ಷರಿಯು
ಷಡುದರುಶನಕೆ ಮುಖ್ಯವಾದ ಪಂಚಾಕ್ಷರಿಯು. । ೫೩ ।

ಪರಮ ಪಂಚಾಕ್ಷರಿಯು ಪ್ರಣವು ಪಂಚಾಕ್ಷರಿಯು
ಅರಿವು ಪಂಚಾಕ್ಷರಿಯು ಚರವು ಪಂಚಾಕ್ಷರಿಯು
ಸಿರಿಯು ಪಂಚಾಕ್ಷರಿಯು ಕರುಣ ಪಂಚಾಕ್ಷರಿಯು
ಹರುಷ ಪಂಚಾಕ್ಷರಿಯು ನಿಧಿಯು ಪಂಚಾಕ್ಷರಿಯು. । ೫೪ ।

ನಿತ್ಯ ಪಂಚಾಕ್ಷರಿಯು ಮುಕ್ತಪಂಚಾಕ್ಷರಿಯು
ಸತ್ಯ ಪಂಚಾಕ್ಷರಿಯು ವ್ಯಕ್ತಪಂಚಾಕ್ಷರಿಯು
ಭಕ್ತಪಂಚಾಕ್ಷರಿಯು ಯುಕ್ತಪಂಚಾಕ್ಷರಿಯು
ಮೌಕ್ತಿಕ ಮಾಣಿಕಹಾರ ಪಂಚಾಕ್ಷರಿಯು. । ೫೫ ।

ಪರನೆ ಪಂಚಾಕ್ಷರಿಯು ಗುರುವೆ ಪಂಚಾಕ್ಷರಿಯು
ಇರವೆ ಪಂಚಾಕ್ಷರಿಯು ಪರವೆ ಪಂಚಾಕ್ಷರಿಯು
ಸರ್ವ ಪಂಚಾಕ್ಷರಿಯು ಪೊರೆವ ಪಂಚಾಕ್ಷರಿಯು
ಸ್ಥಿರವೇ ಪಂಚಾಕ್ಷರಿಯು ಅರಿವು ಪಂಚಾಕ್ಷರಿಯು. । ೫೬ ।

ಸ್ಥೂಲ ಪಂಚಾಕ್ಷರಿಯು ಸೂಕ್ಷ್ಮ ಪಂಚಾಕ್ಷರಿಯು
ಲೀಲೆ ಪಂಚಾಕ್ಷರಿಯು ಕಾರಣ ಪಂಚಾಕ್ಷರಿಯು
ಶೂಲಿ ಪಂಚಾಕ್ಷರಿಯು ಪೀಠ ಪಂಚಾಕ್ಷರಿಯು
ಲೋಲ ಪಂಚಾಕ್ಷರಿಯು ಚರ್ಯ ಪಂಚಾಕ್ಷರಿಯು. । ೫೭ ।

ಯಂತ್ರ ಪಂಚಾಕ್ಷರಿಯು ಮಂತ್ರ ಪಂಚಾಕ್ಷರಿಯು
ಸಂತು ಪಂಚಾಕ್ಷರಿಯು ನಿಸ್ಸಂತು ಪಂಚಾಕ್ಷರಿಯು
ಚಿಂತ ಪಂಚಾಕ್ಷರಿಯು ನಿಶ್ಚಿಂತ ಪಂಚಾಕ್ಷರಿಯು
ಇಂತು ಪಂಚಾಕ್ಷರಿಯು ಜಪಿಸಿ ಪಂಚಾಕ್ಷರಿಯು. । ೫೮ ।

ಕಂದ : ನಮಃ ಶಿವಾಯಯೆಂಬೀ
ಅಮಲ ತೆರದ ನಾಮವ ನೋಡಿ ಜಪಿಸಲಿರುತಂ
ಉಮೆಯರಸನನ್ನೊಲಿಸುವ
ಕ್ರಮವಿದೆಂದು ಪೊಗಳ್ವೆ ಸಿದ್ಧಮಲ್ಲನ ಕೃಪೆಯಿಂ. । ೧ ।

ಷಡುಸ್ಥಲ ಪಂಚಾಕ್ಷರಿಯನು
ಬಿಡದೆ ಜಪಿಸಲು ಮುಕ್ತಿಯೆಂದು ಪೊಗಳ್ದ
ಹೇಮಗಲ್ಲಂ ತನ್ನ ದೃಢಮೂರ್ತಿ
ಶಂಭು ಗುರುರಾಯ ಪಡುವಿಡಿ ಸಿದ್ಧಮಲ್ಲಿನಾಥ ಕೃಪೆಯಿಂ. । ೨ ।

**ಷಡುಸ್ಥಲ ಪಂಚಾಕ್ಷರಿಯ ರಗಳೆ ಸಂಪೂರ್ಣಂ** ॥ ೨೮೫ ॥

## ಅಷ್ಟಾವರಣ ಮಹಾತ್ಮೆಯಸ್ಥಲ

**ಸೂತ್ರ : ಇಂತು ಪಂಚಾಕ್ಷರಿಯ ಸ್ಥಲದಲ್ಲಿ ಆಚರಿಸಿದ ಶಿವಜ್ಞಾನಿ ಶರಣಂಗೆ ಅಷ್ಟಾ ವರಣದ ಮಹಾತ್ಮೆ ಬೇಕಾದ ಕಾರಣ ದ್ವಿವಿಂಶತಿಯಲ್ಲಿ ಅಷ್ಟಾವರಣ ಮಹಾತ್ಮೆಯಸ್ಥಲ ವಾದುದು.**

**೧೨೫೭**

ಅಷ್ಟಾವರಣದಲ್ಲಿ ನೈಷ್ಠೆವಾರಿಯಾಗದನ್ನಕ್ಕರ
ಭಕ್ತಿಸ್ಥಲವೆಂತು ಅಳವಡುವುದಯ್ಯಾ !
ಅಷ್ಟಾವರಣದಲ್ಲಿ ನೈಷ್ಠೆವಾರಿಯಾಗದನ್ನಕ್ಕರ
ಮಹೇಶ್ವರಸ್ಥಲವೆಂತು ಅಳವಡುವುದಯ್ಯಾ !
ಅಷ್ಟಾವರಣದಲ್ಲಿ ನೈಷ್ಠೆವಾರಿಯಾಗದನ್ನಕ್ಕರ
ಪ್ರಸಾದಿಸ್ಥಲವೆಂತು ಅಳವಡುವುದಯ್ಯಾ !
ಅಷ್ಟಾವರಣದಲ್ಲಿ ನೈಷ್ಠೆವಾರಿಯಾಗದನ್ನಕ್ಕರ
ಪ್ರಾಣಲಿಂಗಿಸ್ಥಲವೆಂತು ಅಳವಡುವುದಯ್ಯಾ
ಅಷ್ಟಾವರಣದಲ್ಲಿ ನೈಷ್ಠೆವಾರಿಯಾಗದನ್ನಕ್ಕರ
ಶರಣಸ್ಥಲವೆಂತು ಅಳವಡುವುದಯ್ಯಾ !

ಅಷ್ಟಾವರಣದಲ್ಲಿ ನೈಷ್ಠೆವಾರಿಯಾಗದನ್ನಕ್ಕರ
ಐಕ್ಯಸ್ಥಲವೆಂತು ಅಳವಡುವುದಯ್ಯಾ !
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯಸ್ಥಲವೆಂಬ
ಷಡುಸ್ಥಲಕ್ಕೆ ಅಷ್ಟಾವರಣವೆ ಮುಖ್ಯ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೮೬ ||

೨೫೮

ಗುರು ಲಿಂಗಜಂಗಮ ವಿಭೂತಿ ರುದ್ರಾಕ್ಷಿ ಪಂಚಾಕ್ಷರಿ
ಪಾದೋದಕ ಪ್ರಸಾದವೆಂಬವು ಅಷ್ಟಾವರಣವು
ಪರಶಿವನಿಂದುದಯವಾದವು.
ಪರಶಿವನಿಂದುತ್ಪತ್ಯವಾದ ವಸ್ತುವ ಪರಶಿವನೆಂದು ಕಾಣ್ಬುದಲ್ಲದೆ
ಅನ್ಯವೆಂದು ಕಂಡಿರಿಯಾದರೆ ಕೂಗಿಡೆ ಕೂಗಿಡೆ
ನರಕದಲ್ಲಿಕ್ಕುವ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೮೭ ||

೨೫೯

ಗುರುವಾದಾತನು ಪರಶಿವ ತಾನೆ ನೋಡಾ !
ಲಿಂಗವಾದಾತನು ಪರಶಿವ ತಾನೆ ನೋಡಾ !
ಜಂಗಮವಾದಾತನು ಪರಶಿವ ತಾನೆ ನೋಡಾ !
ವಿಭೂತಿಯಾದಾತನು ಪರಶಿವ ತಾನೆ ನೋಡಾ !
ರುದ್ರಾಕ್ಷಿಯಾದಾತನು ಪರಶಿವ ತಾನೆ ನೋಡಾ !
ಪಾದೋದಕವಾದಾತನು ಪರಶಿವ ತಾನೆ ನೋಡಾ !
ಪ್ರಸಾದವಾದಾತನು ಪರಶಿವ ತಾನೆ ನೋಡಾ !
ಪಂಚಾಕ್ಷರಿಯಾದಾತನು ಪರಶಿವ ತಾನೆ ನೋಡಾ !
ಇಂತು ಅಷ್ಟಾವರಣಮುಖದಲ್ಲಿ ನಿಂತು
ಅಂತಕನ ಪಾಶವ ಸುಟ್ಟುರುಹಿದೆಯಲ್ಲ ಉರಗಧರ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೮೮ ||

೨೬೦

ಗುರುವಾಗಿ ಎನ್ನ ಅನಂತಜನ್ಮದ ಹೊಲೆಯ ಕಳದೆಯಲ್ಲಾ ದೇವಾ !
ಲಿಂಗವಾಗಿ ಬಂದು ಎನ್ನ ಕರಸ್ಥಲ ಉರಸ್ಥಲದಲ್ಲಿ ನಿಂದು
ಎನ್ನ ಭವಿತನವ ಕಳದೆಯಲ್ಲಾ ದೇವಾ !
ಜಂಗಮವಾಗಿ ಬಂದು ಸುಳಿದು ಎನಗೆ
ಮೋಕ್ಷಾರ್ಥದ ಬಟ್ಟೆಯ ತೋರಿದೆಯಲ್ಲಾ ದೇವಾ !
ವಿಭೂತಿಯಾಗಿ ಬಂದು ಎನ್ನ ಲಲಾಟ ಮುಖ್ಯ

ನಾನಾ ಸ್ಥಾನಂಗಳಲ್ಲಿ ನಿಂದೆಯಲ್ಲಾ ದೇವಾ !
ರುದ್ರಾಕ್ಷಿಯಾಗಿ ಬಂದು ಕೊರಳು ಮುಖ್ಯ ನಾನಾ ಸ್ಥಾನಂಗಳಲ್ಲಿ
ಭೂಷಣವಾಗಿದ್ದೆಯಲ್ಲಾ ದೇವಾ !
ಷಡಕ್ಷರಿಯಾಗಿ ಬಂದು ಎನ್ನ ಜಿಹ್ವೆಯಲ್ಲಿ ನೆಲೆಗೊಂಡು
'ಓಂ ನಮಃ ಶಿವಾಯ' ಎಂಬ ಪ್ರಣವ ಪಂಚಾಕ್ಷರಿಯನೆ
ಸ್ಮರಿಸುತಿದ್ದೆಯಲ್ಲಾ ದೇವಾ !
ಪಾದೋದಕವಾಗಿ ಬಂದು ಎನ್ನ ಅಂಗವ ಚೆನ್ನವ ಮಾಡಿದೆಯಲ್ಲಾ ದೇವಾ !
ಪ್ರಸಾದವಾಗಿ ಬಂದು ಎನಗೆ ಮುಕ್ತಿಯ ತೋರಿದೆಯಲ್ಲಾ ದೇವಾ !
ಅಷ್ಟಾವರಣದಮುಖದಲ್ಲಿ ಬಂದು ನಿಂದು ಎನ್ನ ಕಷ್ಟಬಡುವ
ಭವಂಗಳ ತಪ್ಪಿಸಿ ನಿಂದ ನಿಲವ ನೀ ಬಲ್ಲೆಯಲ್ಲದೆ
ಮತ್ತಾರು ಬಲ್ಲರು ಹೇಳಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೮೯ ||

### ೧೫೬೧

ಗುರುಕೃಪೆಯಿಲ್ಲದವನ ಕರ್ಮಹರಿಯದು.
ಲಿಂಗ ಸೋಂಕದವನ ಅಂಗ ಚೆನ್ನವಡಿಯದು.
ಜಂಗಮದರುಶನವಿಲ್ಲದವಂಗೆ ಮೋಕ್ಷಾರ್ಥಬಟ್ಟೆ ದೊರೆಯದು.
ವಿಭೂತಿಯ ಧರಿಸದವ[ಂಗೆ] ದುರಿತಲಿಖಿತಂಗಳು ತೊಡೆಯವು.
ರುದ್ರಾಕ್ಷಿಯ ಧರಿಸದವಂಗೆ ರುದ್ರಪದ ಸಾಧ್ಯವಾಗದು.
ಪಂಚಾಕ್ಷರಿಯ ಜಪಿಸದವನ ಪಂಚಭೂತದ ಹೊಲೆಯಳಿಯದು.
ಪಾದೋದಕವ ಕೊಳದವನ ಪರಿಭವಂಗಳು ಅಳಿಯವು.
ಪ್ರಸಾದ ಸೋಂಕದವಂಗೆ ಮುಕ್ತಿಸಾಧ್ಯವಾಗದು.
ಇಂತೀ ಅಷ್ಟಾವರಣದಲ್ಲಿ ನೈಷ್ಠೆವಾರಿಯಾಗದನ್ನಕ್ಕರ
ದೇವನಲ್ಲ ಭಕ್ತನಲ್ಲ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೨೯೦ ||

### ೧೫೬೨

ಅಜ್ಞಾನ ಕುಕರ್ಮದಿಂದ ಮುಸುಕಿದ ಕತ್ತಲೆಗೆ
ಸುಜ್ಞಾನಜ್ಯೋತಿ ಎರೆಯಲ್ಪಟ್ಟ ಪರಮಗುರುವೆಂದಿತ್ತು ರಹಸ್ಯ.
ಸಾಕ್ಷಿ : ''ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥''
ಎಂದೆಂಬ ಗುರು.
''ಆಕಾಶೋ ಲಿಂಗಮೂಲಂ ಚ ಪೃಥ್ವೀ ತಸ್ಯಾದಿ ಪೀಠಕಂ ।
ಆಲಯಂ ಸರ್ವಭೂತಾನಾಂ ಲಯಂ ಚ ಲಿಂಗಮುಚ್ಯತೇ ॥''
ಎಂದೆಂಬ ಲಿಂಗವು.

''ಜಕಾರಂ ಹಂಸವಾಹಸ್ಯ ಗಕಾರಂ ಗರುಢಧ್ವಜಂ ।
ಮಕಾರಂ ರುದ್ರರೂಪಂ ಚ ತ್ರಿಮೂರ್ತ್ಯಾತ್ಮಕಜಂಗಮಃ ॥''
ಎಂದೆಂಬ ಜಂಗಮವು.
''ಶ್ರಾದ್ಧಂ ಯಜ್ಞಂ ಜಪಂ ಹೋಮಂ ವೈಶ್ವದೇವಸುರಾರ್ಚನಂ ।
ಧೃತತ್ರಿಪುಂಡ್ರಪೂತಾತ್ಮಾ ಮೃತ್ಯುಂ ಜಯತಿ ಮಾನವಃ ॥''
ಎಂದೆಂಬ ವಿಭೂತಿ.
''ರುದ್ರಾಕ್ಷಿಧಾರಣಂ ಸರ್ವಂ ಜಟಾಮಂಡಲಧಾರಿಣೆ ।
ಅಕ್ಷಮಾಲಾರ್ಪಿತಕರ ಕಮಂಡಲಕರಾನ್ವಿತಂ ॥
ತ್ರಿಪುಂಡ್ರಾವಲಿಯುಕ್ತಾಂ ।
ಆಷಾಡೇನ ವಿರಾಜಿತಂ
ಋಗ್ಯಜುಃಸಾಮ ರೂಪೇಣ ।
ಸೇವ ತಸ್ಮೈ ಸ್ವರಃ ಇತಿ ।
ತ್ರ್ಯವ ಗಾಯಿತ್ರೀವ ವರಾನನೇ ॥'' (?)
ಎಂದೆಂಬ ವಿಭೂತಿ ರುದ್ರಾಕ್ಷಿ.
''ಜ್ಞಾನ ಪ್ರಾಣ ಬೀಜಂ ಚ ನಕಾರಂ ಚ ಆಚಾರಕಂ ।
ಮಕಾರಂ ಚ ಗುರೋರ್ಬೀಜಂ ಶಿಕಾರಂ ಲಿಂಗಮೂರ್ತ್ಯಕಂ ॥
ವಕಾರಂ ಚ ಬೀಜಂ ಚ ಯಕಾರಂ ಪ್ರಾಸಕಂ ।
ಏವಂ ಬೀಜಾಕ್ಷರಂ ಜ್ಞಾತುಂ ದುರ್ಲಭಂ ಕಮಲಾನನೆ ॥''
ಎಂದೆಂಬ ಷಡಕ್ಷರಿಮಂತ್ರವು.
''ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಃ ।
ಗುರುಪಾದೋದಕಂ ಪೀತ್ವಾ ಸಂಸಾರದ್ರುಮನಾಶನಂ ॥''
ಎಂದೆಂಬ ಪಾದೋದಕವು.
''ಪ್ರಸಾದಂ ಗಿರಿಜಾದೇವಿ ಸಿದ್ಧಕಿನ್ನರಗುಹ್ಯಕಃ ।
ವಿಷ್ಣುಮುಖ್ಯಾದಿದೇವಾನಾಮಗ್ರಾಹ್ಯೋಽಯಮಗೋಚರಃ ॥''
ಎಂದೆಂಬ ಪ್ರಸಾದವು.
ಇನಿತು ತೆರದ ಅಷ್ಟಾವರಣದ ಶ್ರುತ ದೃಷ್ಟವ ಕಂಡು
ಘನವೆಂದು ನಂಬಿದಾತನೆ ಸತ್ಯಸದಾಚಾರಿ ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೯೦ ॥

೧೨೬೩

ಹಲವು ಹಡಗವಾದರೇನಯ್ಯಾ ? ಸಮುದ್ರ ಒಂದೇ ನೋಡಾ !
ಹಲವು ಪಕ್ಷಿ ಇದ್ದರೇನಯ್ಯಾ ? ಹಾರುವ ಪವನ ಒಂದೇ ನೋಡಾ !
ಹಲವು ಉಡುರಾಜರಿದ್ದರೇನಯ್ಯಾ ?
ಬೆಳಗಮಾಡಿ ತೋರುವ ಸೂರ್ಯ ಒಂದೇ ನೋಡಾ !

ಹಲಬರಿಗೆ ಹಲವು ಗುರುರೂಪಾದ ತಾ ಪರಮಾತ್ಮ ಒಬ್ಬನೆ ನೋಡಾ !
ಹಲಬರು ಕೈಯೊಳು ಬಿಲ್ಲ ಸೇರಿ ಹಲವಂಬಿಲೆಚ್ಚರದು
ಎಚ್ಚಾತನ ಕೈಯೋಜೆ.
ಇದಿರಿನಲ್ಲಿ ತೋರುವ ಗುರು ಒಬ್ಬನೆ ನೋಡಾ !
ಹಲವು ಲಿಂಗರೂಪಾದಾತ ಶ್ರೀಪರಮಾತ್ಮ ಒಬ್ಬನೆ ನೋಡಾ !
ಹಲಬರ ಕಣ್ಣಿಗೆ ಹಲವು ಜಂಗಮರೂಪಾಗಿ ತೋರುವಾತ
ಶ್ರೀ ಪರಮಾತ್ಮ ಒಬ್ಬನೆ ನೋಡಾ !
ಹಲಬರ ಹಣೆಯಲ್ಲಿಹ ದುರ್ಲಿಖಿತಗಳ ತೊಡೆದು
ಶ್ರೀ ವಿಭೂತಿಯಾಗಿ ನಿಂದಾತ ಶ್ರೀ ಪರಮಾತ್ಮ
ಒಬ್ಬನೆ ನೋಡಾ.
ಹಲಬರ ಕೊರಳಲ್ಲಿ ಶ್ರೀ ರುದ್ರಾಕ್ಷಿಯಾಗಿ ನಿಂದಾತ
ಶ್ರೀ ಪರಮಾತ್ಮ ಒಬ್ಬನೆ ನೋಡಾ !
ಹಲಬರ ಜಿಹ್ವೆಯ ಕೊನೆಯ ಮೊನೆಯಲ್ಲಿ
ಶ್ರೀ ಪಂಚಾಕ್ಷರಿಯಾಗಿ ನಿಂದಾತ
ಶ್ರೀ ಪರಮಾತ್ಮ ಒಬ್ಬನೆ ನೋಡಾ !
ಹಲವು ಶಿವಭಕ್ತಜನಂಗಳಿಗೆ ಪಾದೋದಕ ಪ್ರಸಾದವಾಗಿ
ಮುಕ್ತಿಯ ತೋರಿದಾತ ಶ್ರೀ ಪರಮಾತ್ಮ ಒಬ್ಬನೆ ನೋಡಾ !
ಹಲಬರಿಗೆ ಹಲವು ರೂಪಾದಾತ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆಂಬ
ಪರಶಿವನೊಬ್ಬನೆ ಕಾಣಿರೋ ! ॥ ೨೯೨ ॥

### ೧೨೬೪

ರಾಗ : ಆಹೇರಿ

ಪಲ್ಲ : ಹಿಂಗದೆನ್ನಯ ಮನಸು ಗುರುಪಾ
ದಂಗಳ ಕೃಪೆಯ ಪಡೆವೆನೆಂಬ ಸುಗ್ಗಿಯೊಳಗೆ ಸಿಲ್ಕಿ.

ಪದ : ಶ್ವೇದಜ, ಉದ್ಭಿಜ, ಜರಾಯುಜ, ಅಂಡಜವೆಂಬ
ಖ್ಯಾತಿಭವದೊಳು ಸಿಲ್ಕಿ ತೊಳಲಿ ಬಳಲಿ ಬಂದ
ಆತ್ಮಶುದ್ಧ ಮೂರೇಳುದೀಕ್ಷೆಯನಿತ್ತು ಶಿವಕುಲ
ಜತನ ಮಾಡಿದ ನಿಜಗುರುಪಾದಾಂಬುಜವ ಕಂಡು. । ೧ ।

ನೆತ್ತಿಯೊಳಿಹ ಪರಬ್ರಹ್ಮವಸ್ತುವ ತೆಗೆದು
ಬಿತ್ತನ್ನೀ ಕರಭೂಮಿಯಲ್ಲಿ ಪರತತ್ವವಂ
ವಿಸ್ತರಿಸಿ ಮೂರು ಷಡ್ವಿಧ ಮೂವತ್ತಾರು ದುರ್ಗುಣ
ಆತ್ಮ ಸರ್ವಲಿಂಗದೇಹಿಯ ಮಾಡ್ದ ಗುರುಪದವ. । ೨ ।

ಪರಶಾಂತಿಯೆಂಬ ವಿಭೂತಿಯ ಪಣೆಯೊಳ
ಗೊರದು ಭವಾಂತರಕರ್ಮವೆಂದೆಂಬ
ಗಿರಿಯನಿಡುವ ವಜ್ರಗುಂಡು ರುದ್ರಾಕ್ಷಿಯ
ಕೊರಳೊಳು ಧರಿಸ ಕಲಿಸಿದ ಗುರುಪಾದವ. । ೩ ।

ವರಪಂಚಾಕ್ಷರಿಯ ದುರಿತಹರ ದುರ್ಗುಣನಾಶಂ
ಪರತತ್ವಕಿದೇ ನಿತ್ಯಾನಂದ ನಿಜನೆಲೆಯೆಂದು
ಒರೆದು ಶ್ರೋತ್ರದಿ ಸದಾಕಾಲದಿ ಪ್ರಣಮವನು
ಚ್ಚರಿಸೆಂದು ತೋರಿದ ಗುರುಪಾದಾಂಬುಜವ ಕಂಡು. । ೪ ।

ಭವರೋಗಕಿದೆ ವೈದ್ಯ ಶಿವಪಾದಾಂಬು ಪ್ರಸಾದ
ಹವಿ ಪಾಪಗಿರಿ ತರುಮರವನು ಸುಡುವುದು
ಪವಿತ್ರವಿದ ಸವಿದು ಮೂರಡಿಕ್ರಾಂತನಾಗಿ
ಪಾಲಿಪ ನಿಜಗುರುಪಾದಾಂಬುಜವ ಕಂಡು. । ೫ ।

ಗುರುವಿಗೆ ತನುವು ಲಿಂಗಕೆ ಮನವು ಜಂಗಮಕೆ
ವರಧನವನಿತ್ತು ಕಿಂಕರ ಭೃತ್ಯ [ಭಾವದಿಂ ಭವ]
ಶರಧಿಯ ದಾಂಟುವ ಹಡಗವೆಂ
ದೊರೆದು ಭಕ್ತಿಯ ಪಾಲಿಪ ನಿಜಗುರು ಪಾದವ. । ೬ ।

ಇಂತು ಶಿವನ ಅಷ್ಟಾವರಣದೊಳಗೆ ಮನ[ವ ನಿಲಿಸಿ
ಸಂತ ನಿರ್ಮ]ಲದೇಹಿಯಾಗಿ ಕೇಳ ನಿ
ಶ್ಚಿಂತ ಹೇಮಗಲ್ಲನೆಂದೊರೆದ ಗುರು ಪಡುವಿಡಿ
ಶಾಂತ ರಾಜೇಶ್ವರನ ಪಾದಕಮಲಕೆ ಭೃಂಗನಾಗಿಹ[ನು ಸದಾ]. । ೭ ।
॥ ೨೯೩ ॥

## ಭಕ್ತಸ್ಥಲ

ಸೂತ್ರ : ಇಂತು ಅಷ್ಟಾವರಣದ ಮಹಾತ್ಮೆಯಲ್ಲಿ ನೈಷ್ಠವಾರಿಯಾದ ವಿಮಲಜ್ಞಾನಿ ಶರಣಂಗೆ ಶಿವಭಕ್ತಿ ವಿಶೇಷವಾಗಿ ತೋರುತಿರೆ ತ್ರಯೋದ್ವಾದಶದಲ್ಲಿ ಭಕ್ತಸ್ಥಲವಾದುದು.

೧೨೬೫

ಅಂದು ಆದಿಯಲ್ಲಿ ಶಿವ ಬೀಜವಾಗಿ ಬಂದ ಕಾರಣ
ಮರ್ತ್ಯಕೆ ಶಿವಭಕ್ತ[ರುದಯವಾಯಿ]ತು ನೋಡಯ್ಯ.
ಅಂದು ಆದಿಯಲ್ಲಿ ಶಿವಬೀಜವಲ್ಲದಿದ್ದರೆ ಇಂದೆಲ್ಲಿಯದಯ್ಯಾ ?
ಶಿವಭಕ್ತನೆಂಬ ಶ್ರೇಷ್ಠತ್ವನಾಮ ಧರೆಯ ಮನುಜರೆಲ್ಲರಿಗಹುದೇನಯ್ಯ ?
ಶಿವಭಕ್ತಿ ಹಿಡಿದವರೆಲ್ಲ ಬಂಟರೆ ? ಶಕ್ತಿಯ ಸಾಧಿಸಿದವರೆಲ್ಲ ಜಟ್ಟಿಗಳೇ ?
ಸ್ವರಗೈದ ಪಕ್ಷಿಗಳೆಲ್ಲ ಕೋಗಿಲೆಯಾಗಬಲ್ಲುವೆ ?

ಅಂಗಹೀನ ಮಾನವರೆಲ್ಲ ಲಿಂಗವ ಧರಿಸಿ ಲಿಂಗವಂತರೆಂದು
ಸುಡಿದುಕೊಂಡು ನಡೆದರ ಶಿವಭಕ್ತಿ ಸಾಧ್ಯವಾಗಬಲ್ಲದೆ,
ಜಗದ ಜಂಗುಳಿಯ ಮಾನವರಿಗೆ ?
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೯೪ ॥

೧೨೬೬

ಶಿವಂಗೂ ಶಿವಭಕ್ತಂಗೂ ಭಿನ್ನವುಂಟೇ ? ಇಲ್ಲ.
ಅದೇನು ಕಾರಣವೆಂದರ ಪ್ರಸಾರವ ಮಾಡಿ ಹೇಳುವೆ ಕೇಳಿರಣ್ಣಾ.
ವೃಕ್ಷಕ್ಕೂ ವೃಕ್ಷದಿಂದಾದ ಫಲಕ್ಕೂ ಭಿನ್ನವುಂಟೇ ? ಇಲ್ಲ.
ಅಗ್ನಿಗೂ ಅಗ್ನಿಯಿಂದಾದ ಕಳೆಗೂ ಭಿನ್ನವುಂಟೇ? ಇಲ್ಲ
ಚಂದ್ರ[ಂಗೂ] ಚಂದ್ರನಿಂದಾದ ಕಳೆಗೂ ಭಿನ್ನವುಂಟೇ ? ಇಲ್ಲ.
ಶಿವಂಗೂ ಶಿವನಿಂದಾದ ಭಕ್ತಂಗೂ ದೇಹ ಪ್ರಾಣದ ಹಾಗೆ.
ಆದ ಕಾರಣ ಭಕ್ತಗಣ ಶೋಡಷಗಣ ದಶಗಣಂಗಳು
ಮುಖ್ಯವಾದ ಏಳನೂರಾ ಎಪ್ಪತ್ತು ಅಮರಗಣಂಗಳೆಲ್ಲ
ಬಸವಣ್ಣನಿಂದ ಮೋಕ್ಷಪಡೆದರು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೯೫ ॥

೧೨೬೭

ಗುರುವಿನಲ್ಲಿ ಲಿಂಗವುಂಟು, ಜಂಗಮವುಂಟೆಂದು
ಗುರುಭಕ್ತಿಯ ಮಾಡೆಂದು ತೋರಿದಾತ ನಮ್ಮ ಬಸವಣ್ಣನಯ್ಯಾ.
ಲಿಂಗದಲ್ಲಿ ಜಂಗಮವುಂಟೆಂದು, ಗುರುವುಂಟೆಂದು
ಲಿಂಗಭಕ್ತಿಯ ಮಾಡೆಂದು ತೋರಿದಾತ ನಮ್ಮ ಬಸವಣ್ಣನಯ್ಯಾ.
ಜಂಗಮದಲ್ಲಿ ಗುರುವುಂಟು, ಲಿಂಗವುಂಟು
ಜಂಗಮ ಭಕ್ತಿಯ ಮಾಡೆಂದು ತೋರಿದಾತ ನಮ್ಮ ಬಸವಣ್ಣನಯ್ಯಾ.
ಒಂದೇ ಮೂರ್ತಿ ಮೂರೆಂದಾತ ನಮ್ಮ ಬಸವಣ್ಣನಯ್ಯಾ.
'ಏಕಮೂರ್ತಿ ತ್ರಯೋಭಾಗಾಃ' ಎಂದುದಾಗಿ,
ಗುರು ಲಿಂಗಜಂಗಮವಾದಾತ ಒಬ್ಬನೆ ಶಿವನೆಂದು
ಪ್ರಸಾರ ಮಾಡಿ ಭಕ್ತಿಯ ಬೆಳಸಿದಾತ ನಮ್ಮ ಬಸವಣ್ಣನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೯೬ ॥

೧೨೬೮

ಬಸವಣ್ಣ ಶ್ರುತಿಸಿದ ವಾಕ್ಯದಿಂದ
ಗುರುವೆಂಬ ಮಹಿಮೆಯ ಕಂಡೆನಯ್ಯಾ !
ಬಸವಣ್ಣ ಶ್ರುತಿಸಿದ ವಾಕ್ಯದಿಂದ ಲಿಂಗಸಾವಧಾನದ ಗೊತ್ತಿನ
ಪರಿಣಾಮದ ಸುಖದ ಸುಗ್ಗಿಯ ಕಂಡೆನಯ್ಯಾ !
ಬಸವಣ್ಣ ಶ್ರುತಿಸಿದ ವಾಕ್ಯದಿಂದ ಪಾದೋದಕ ಪ್ರಸಾದವ

ನಿತ್ಯ ನಾ ಸೇವಿಸಿ ಭವದಗ್ಧನಾದೆನಯ್ಯಾ !
ಬಸವಣ್ಣ ಶ್ರುತಿಸಿದ ವಾಕ್ಯದಿಂದ
ಭಕ್ತಿ ಉನ್ನತವೆಂದು ನಂಬಿದೆನಯ್ಯಾ !
ಅದೇನು ಕಾರಣವೆಂದರೆ :
ಸಿರಿಗಂಧದೊತ್ತಿಲಿಪ್ಪ ಜಾಲಿಗೆ ಪರಿಮಳ ಬಾರದಿಹುದೇನಯ್ಯಾ ?
ಮರುಗದಗಿಡದೊತ್ತಿಲಿಪ್ಪ ಗರಗಕ್ಕೆ ಪರಿಮಳ ಬಾರದಿಹುದೇನಯ್ಯಾ ?
ಬಸವಣ್ಣನ ಸೆರಗ ಸೋಂಕಿದ ಮನುಜರೆಲ್ಲ
ಶಿವಗಣಂಗಳಾಗದಿಹರೇನಯ್ಯಾ ?
ಇದು ಕಾರಣ,
ಬಸವಣ್ಣನ ವಚನಾಮೃತವ ದಣಿಯಲುಂಡು ತೇಗಿದರೆ
ಪಾತಕಕೋಟಿ ಪರಿಹಾರವಾಗದಿಹದೇನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ ? ॥ ೨೯೭ ॥

## ೧೨೬೯

ಶಿವ ಗುರುವೆಂದು ನಂಬಿಪ್ಪಾತನೆ ಶಿವಭಕ್ತ
ಶಿವ ಲಿಂಗವೆಂದು ನಂಬಿಪ್ಪಾತನೆ ಶಿವಭಕ್ತ
ಶಿವ ಜಂಗಮವೆಂದು ನಂಬಿಪ್ಪಾತನೆ ಶಿವಭಕ್ತ
ಶಿವ ಪಾದೋದಕ ಪ್ರಸಾದವೆಂದು ನಂಬಿಪ್ಪಾತನೆ ಶಿವಭಕ್ತ
ಗುರುಲಿಂಗಜಂಗಮದ ಪಾದೋದಕ ಪ್ರಸಾದದ
ಬಂದ ಬಟ್ಟೆಯನರಿಯದೆ ಬರಿದೆ ಭಕ್ತರೆಂದು
ಅನ್ಯವನಾಶ್ರಯಿಸಿ ಅನ್ಯದೈವಕೆರಗುವ ಕುನ್ನಿಮಾನವರನೆಂತು
ಭಕ್ತರೆಂಬೆನಯ್ಯಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೨೯೮ ॥

## ೧೨೭೦

ಗುರುಲಿಂಗಜಂಗಮವ ನೆರೆ ನಂಬಿಪ್ಪಾತನೆ ಶಿವಭಕ್ತ
ಗುರುಲಿಂಗಜಂಗಮವೆ ಶಿವನೆಂದು
ಅರ್ಥ ಪ್ರಾಣ ಅಭಿಮಾನವ ಸವಿಸುತ್ತಿಪ್ಪಾತನೆ ಶಿವಭಕ್ತ
ಸಾಕ್ಷಿ : 'ಅರ್ಥಪ್ರಾಣಭಿಮಾನಂ ಚ ಗುರೌ ಲಿಂಗೇ ತು ಜಂಗಮೇ ।'
ತಲ್ಲಿಂಗ ಜಂಗಮದಲ್ಲಿ ಧನವಂಚಕನಾಗಿ ಮಾಡುವ ಭಕ್ತಿಯ
ತೆರನೆಂತೆಂದರೆ :
ನರಿಯ ಕೂಗು ಸ್ವರ್ಗಕ್ಕೆ ಮುಟ್ಟುವುದ ?
ಹರಭಕ್ತಿಯಲ್ಲಿ ನಿಜವನರಿಯದೆ ಮಾಡಿದ ಭಕ್ತಿ
ಸಯಿಧಾನದ ಕೇಡು ಕಾಣಾ
ಪರಮ[ಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ]. ॥ ೨೯೯ ॥

೧೨೭೧

ಭಕ್ತಿಯಿಲ್ಲದೆ ಗುರುಪೂಜೆಯ ಅನಂತಕಾಲ ಮಾಡಿದರೂ
ವ್ಯರ್ಥವೆಂದಿತ್ತು ಗುರುವಚನ.
ಭಕ್ತಿಯಿಲ್ಲದೆ ಧ್ಯಾನ ಮೌನ ಗಂಗಾಸ್ನಾನ ಜಪತಪ
ನೇಮ–ನಿತ್ಯ ವ್ಯರ್ಥವೆಂದಿತ್ತು ಗುರುವಚನ.
ಜಂಗಮತೃಪ್ತಿಯಿಲ್ಲದೆ ಲಿಂಗಕೆ
ಪುಷ್ಪ ಪತ್ರಿಯನೇರಿಸಿ ಫಲವೇನು ?
ಲಿಂಗಕ್ಕೆ ಜಂಗಮವೆ ಬಾಯಿಯೆಂದಿತ್ತು ಗುರುವಚನ.
ವೃಕ್ಷಕ್ಕೆ ಭೂಮಿ ಬಾಯಿಯೆಂದು ನೀರನೆಸಿದರೆ
ಮೇಲೆ ಪಲ್ಲವಿಸಿತ್ತು ನೋಡಾ !
ಸ್ಥಾವರಕ್ಕೆ ಜಂಗಮವೆ ಬಾಯಿಯೆಂದು ಷಡಿಪದಾರ್ಥವ
ನೀಡಿದರೆ ಶಿವಂಗೆ ತೃಪ್ತಿಯೆಂದಿತ್ತು ರಹಸ್ಯ.
ಸಾಕ್ಷಿ : ''ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯತು ಜಂಗಮಃ ॥
ಮಮ ತೃಪ್ತಿರುಮಾದೇವಿ ಉಭಯೋರ್ಲಿಂಗ ಜಂಗಮತಾ ॥''
ಎಂದುದಾಗಿ,
''ಸ್ಥಾವರಾರ್ಪಿತನೈವೇದ್ಯಾತ್ ನ ತೃಪ್ತಿರ್ಮಮ ಪಾರ್ವತಿ ।
ಜಂಗಮಾರ್ಪಿತ ನೈವೇದ್ಯಾತ್ ಮಮ ತೃಪ್ತಿಶ್ಚ ಸರ್ವಥಾ ।
ಎಂದುದಾಗಿ,
ಈ ಶ್ರುತ ದೃಷ್ಟ, ಅನುಮಾನವ ಕಂಡು,
ಮಾಡುವಾತನೆ ಸದ್ಭಕ್ತನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. ॥ ೩೦೦ ॥

೧೨೭೨

ಶಿವಪೂಜೆಯ ಮಾಡುತಿದ್ದನೆಂಬ ಅಣ್ಣಗಳು ನೀವು ಕೇಳಿರೊ.
ಶಿವ ಮಹೇಶ್ವರರುಗಳು ಗೃಹದ ಮುಂದೆ ಬಂದು
ಲಿಂಗಾರ್ಪಿತವೆಂಬ ಶಬ್ದವಿಡಲು,
ಜಪವ ಮಾಡುತ ನಾನೇಳಬಾರದೆಂದು ಬೆಬ್ಬನೆ ಬೆರತು,
ಅಹಂಕಾರದಲ್ಲಿ ಸತಿ ಸುತರುಗಳ ಕೈಯಲ್ಲಿ ಬಿನ್ನಹವ ಮಾಡಿಸದೆ,
ತಾನೆ ಭಕ್ತಿಕಿಂಕುರ್ವಾಣದಿಂದೆದ್ದು
ಭಸ್ಮಾಂಗಿಗಳಿಗೆ ಆಸನವ ಕೊಟ್ಟು,
ಮಾಡುವ ನಡೆನುಡಿಯು ಒಂದೇ ಆದರೆ,
ಮೃಡಬೇರೆ ಒಂದ ಕಪ |ಇರದ ಇವರೊ|ಡಲೊಳಿಪ್ಪನು
ಕಾಣಿರೋ ನಮ್ಮ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವ. ॥ ೩೦೧ ॥

೧೨೭೩

ಇಷ್ಟಲಿಂಗದ ವೀರಶೈವ, ಪ್ರಾಣಲಿಂಗದ ವೀರಶೈವ,
ಭಾವಲಿಂಗದ ವೀರಶೈವ.
ತ್ರಿವಿಧ ಲಿಂಗದಲ್ಲಿ ನೈಷ್ಠೆವರಿಯಾದ ಶರಣನ ನೀವು ನೋಡಣ್ಣ,
ಇಷ್ಟಲಿಂಗವ ಕಾಯಕರದಲ್ಲಿ ಹಿಡಿದ ಮೇಲೆ
ಅನ್ಯದೈವಕೆ ತಲೆವಾಗದ ವೀರಶೈವಬೇಕು ಭಕ್ತಂಗೆ,
ಮನದ ಕೈಯಲ್ಲಿ ಪ್ರಾಣಲಿಂಗವ ಹಿಡಿದ ಮೇಲೆ
ಮಾಯಾ [ಮೋಹನಿರಸನೆಯಾಗಿ]ರುವ
ವೀರಶೈವಬೇಕು ಭಕ್ತಂಗೆ.
ಭಾವದ ಕೈಯಲ್ಲಿ ಭಾವಲಿಂಗವ ಹಿಡಿದ ಮೇಲೆ
ಪರಧನ ಪರವಧು ಪರಾನ್ನವ
ಬಯಸದ ವೀರಶೈವಬೇಕು ಭಕ್ತಂಗೆ.
ಇಂತೀ ತ್ರಿವಿಧಲಿಂಗದ ವೀರಶೈವದೊಳಿಂಬುಗೊಂಡ
ತ್ರಿಕರಣಶುದ್ಧವಾದ ತ್ರಿವಿಧಸಂಪನ್ನ ಶರಣಂಗೆ
ನಮೋ ನಮೋಯೆಂದು ಬದುಕಿದೆನು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ. || ೩೦೨ ||

■■

# ಅನುಬಂಧ

# ವಚನಗಳ ಅಕಾರಾದಿ

## ಮೂರುಸಾವಿರ ಮುಕ್ತಿಮುನಿ ವಿರಚಿತ ಸರ್ವಾಚಾರ ಸಾರಾಮೃತಸುಧೆ


**ಅ**

ಅಂತೊಪ್ಪವ ೩೧
ಅನಂತ ತಪಸ್ಸಿನ ೪೩
ಅನಾದಿ ಪೂರ್ವಪುರಾತನ ೭೧
ಅನಾದಿ ಪ್ರಮಥಗಣ ನಿಜೋಪದೇಶ ೭೬
ಅನಾದಿ ಪ್ರಥಮಗಣದಿರವ ೭೭
ಅನಾದಿ ಪ್ರಮಥಗಣ ಸನ್ಮಾನಿ ೭೮
ಅನಾದಿ ಪ್ರಮಥಗಣ ನಾಯಕ ೭೯
ಅನಾದಿ ಪ್ರಮಥಗಣ ನಾಯಕ ೮೦
ಅನಾದಿ ಮೂಲಚಿತ್ತುವಿನ ೯೬
ಅನಾದಿ ಶರಣಜಂಗಮ ೨೪
ಅನಾದಿ ಶರಣಲಿಂಗ ೩೦
ಅನಾದಿ ಹರಗಣಮಾರ್ಗದ ೬೯
ಅಯ್ಯಾ ತನತನಗೆ ೧೯
ಅಯ್ಯಾ ತಾನು ತಾನಾದ ೧೦೧
ಅಯ್ಯಾ ನಾನು ನೀನು ೧೦೦
ಅಯ್ಯಾ ನಿಜವೀರಶೈವೋದ್ಧಾರ ೨
ಅಲ್ಲಿಂದ ಲಿಂಗಾಂಗ ೭

**ಆ, ಇ**

ಆ ಕಲಕೇತಯ್ಯಗಳು ೬೩
ಆಚಾರದರುವಿನ ೭೩
ಆತ್ಮತ್ರಯ ಮಂಡಲಗಳಲ್ಲಿ ೯೧
ಆ ಹಿಂದೆ ಭಸಿತಕ್ಕೆಂದು ೧೬
ಇಂತೀ ಪಾತಕ ಸೂತಕ ೬೨
ಇಂತೆಂಬ ಭಕ್ತ ಜಂಗಮ ೨೭
ಇಂತೆಸೆವ ಅಂತರಂಗ ೨೦
ಇಂತೆಸೆವ ಸ್ಥೂಲಾಚಮನ ೫
ಇತ್ತಲಾಗಿ ಅದೇ ನಿರಾಕಾರ ೧೦
ಇವೈದು ಬಹಿರಂಗದ ೫೭

**ಕ**

ಕರ್ಮಕಾಂಡಿಲಿಂಗ ೫೫
ಕರ್ಮಜಡ ಜೀವ ೧೪
ಕರ್ಮ ಭೂಭಾರಿಗಳಾದಂಥ ೫೩
ಕಾಯದ ಕಳವಳದ ೫೮

**ಗ, ಘ**

ಗುರುಮಾರ್ಗಾಚಾರ ಲಿಂಗಾಂಗ ೪೧
ಗುರುಮಾರ್ಗಾಚಾರ ಸನ್ಮಾನಿತ ೪೪
ಘನಕ್ಕೆ ಮಹಾಘನ ೩೩
ಘನ ಗುರುಲಿಂಗ ೭೫

**ಚ, ಜ**

ಚರಲಿಂಗ ಪ್ರಸನ್ನ ೧೪
ಚಿದಾವರಣಮೂರ್ತಿ ೮೪
ಜನನಿ ಜಠರದಿಂದುದಯ ೬೬
ಜೀವಕ್ಕೆ ಸಂಜೀವನ ೬೧

**ತ, ದ**

ತನ್ನ ವಾಮಕರದಂಗುಲ ೨೨
ತನುತ್ರಯಮಂಡಲಂಗಳಲ್ಲಿ ೮೯
ದೀಕ್ಷಾತ್ರಯಂಗಳಿಗೆ ೭೨

**ನ**

ನಿಃಕಳಂಕ ಶ್ರೀಗುರುವಿನ ೧೮
ನಿಃಕಳಂಕ ಶ್ರೀಗುರುವಿನ ೫೦
ನಿಜಮೋಕ್ಷಮಂದಿರವ ೭೦
ನಿಜವಿರತ ಜಂಗಮ ೮೫
ನಿಜವೀರಶೈವ ಸಂಪನ್ನರ ೬೭
ನಿಜವೀರಶೈವ ಸರ್ವಾಚಾರ ೪೯
ನಿಜವೀರಶೈವಾಚಾರ ೯೩
ನಿರವಯರ್ಪಿತವಾದ ೨೮

ನಿರಾವಲಂಬ ಜಂಗಮ ೨೬
ನಿರುಪಮಿತವೆನಿಸಿ ೯೪

**ಪ, ಭ, ಮ**

ಪರತತ್ವದಿರವನರಿಯದೆ ೬೫
ಪರತತ್ವಮೂರ್ತಿ ೫೨
ಪರಮ ಕೈಲಾಸದ ೪೭
ಪರಮಗುರುಲಿಂಗ ೨೫
ಪರಮ ಪವಿತ್ರ ನಿರ್ಮಲ ೮
ಪರಮ ಪವಿತ್ರ ಪರಿಣಾಮ ೧೩
ಪರಮ ಪವಿತ್ರ ಹರಗಣ ೩೬
ಪರಮ ಪವಿತ್ರ ಭಕ್ತೋಪಹಾರ ೯೭
ಪರಮ ಬೆಳಗಿನಿಂದೆಸೆವ ೧೭
ಪರಮಾನಂದಲಿಂಗ ೧೫
ಪರಮಾನುಭಾವ ೨೯
ಪರಮಾರಾಧ್ಯ ಜಂಗಮಾರಾಧನೆ ೨೩
ಪರಮಾರಾಧ್ಯ ೫೧
ಪರಶಿವತತ್ವಶರೀರಮಂ ೪೯
ಪರಾತ್ಪರ ಚಿದ್ಬ್ರಹ್ಮ ೯
ಪರಿಪೂರ್ಣಜ್ಞಾನಾನುಭವ ೮೩
ಪರಿಪೂರ್ಣಾಂಗಲಿಂಗ ೯೯
ಪರಿಪೂರ್ಣಾನಂದಜ್ಯೋತಿ ೯೨
ಪಾವನಾರ್ಥವಾಗಿ ೩೪
ಪಿಂಡಸ್ಥಲ ಪಿಂಡಜ್ಞಾನಸ್ಥಲ ೮೬
ಪಿಂಡ ಬ್ರಹ್ಮಾಂಡಾದಿ ೯೫
ಪೂರ್ವವನಳಿದುಳಿದು ೬೪
ಪ್ರಥಮದಲ್ಲಿ ಪೀಠಿಕಾಸೂತ್ರ ೧
ಪ್ರಸಾದಿಸ್ಥಲ ಗುರುಮಹಾತ್ಮ್ಯಸ್ಥಲ ೮೭
ಪ್ರಾಣಕ್ಕೆ ತತ್ಪ್ರಾಣವಾದ ೬೦
ಭಕ್ತಿಗೆ ಲಿಂಗಾಚಾರ ೮೨
ಮತ್ತಂ ಅಲ್ಲಿಂದ ಲಿಂಗ ೬
ಮನಕ್ಕೆ ಮಂಗಳವಾಗಿ ೫೯
ಮನತ್ರಯ ಮಂಡಲಂಗಳಲ್ಲಿ ೯೦
ಮುಕ್ತಿಗೆ ನಿಜಮಂದಿರವಾಗಿ ೩

**ಲ, ವ**

ಲೋಕಾರ್ಥದ ಸತಿ ೬೮
ವೀರಶೈವ ಸನ್ಮಾರ್ಗ ೪೨
ವೀರಶೈವಾಚಾರಗುರು ೧೨

**ಶ, ಸ**

ಶರಣಸ್ಥಲ ತಾಮಸ ೮೮
ಶಿವಲಿಂಗ ಸಂಗವಾಗಿ ೫೬
ಶಿವಶರಣಗಣಾರಾಧ್ಯರು ೩೨
ಶ್ರೀಗುರುಕರಜಾತರೆನಿಸಿ ೩೮
ಶ್ರೀಗುರುಕರಜಾತರು ೪೫
ಶ್ರೀಗುರುಕರುಣಕಟಾಕ್ಷದೊಳ್ ೩೯
ಶ್ರೀಗುರುಕರುಣಕಟಾಕ್ಷೆಯಿಂದ ೪೦
ಶ್ರೀಗುರು ಪರಮಾರಾಧ್ಯ ೩೭
ಸಚ್ಚಿದಾನಂದ ಬ್ರಹ್ಮೋಪದೇಶ ೩೫
ಸತ್ಯಶುದ್ಧ ನಡೆನುಡಿ ೪
ಸತ್ತು ಚಿತ್ತಾನಂದ ನಿತ್ಯ ೯೮
ಸದಾಚಾರ ಲಿಂಗ ೪೮
ಸರ್ವಾಂಗಲಿಂಗ ೮೧
ಸಾಕಾರವಾದ ಇಷ್ಟಲಿಂಗ ೧೧

**ಹ**

ಹರಗುರುಮಾರ್ಗಾಚಾರ ೭೪
ಹರಹರ ಶಿವಶಿವ ೨೧

## ಮೆಡ್ಲೇರಿ ಶಿವಲಿಂಗನ ವಚನ

ಆದಿ ಪರಶಿವನ ೧೧೭
ಆರಾರು ಅರಿದುದಿಲ್ಲ ೧೨೨
ಆವಾವಸ್ಥಾನದಲ್ಲಿಯ ೧೧೬
ಇಂಧುಧರನಿಂದ ೧೨೦
ಎಲೆ ಅಯ್ಯಾ ೧೦೫
ಎಲೆ ಅಯ್ಯಾ ೧೦೭

ಎಲೆ ಅಯ್ಯಾ ೧೧೮
ಎಲೆ ಅಯ್ಯಾ ೧೧೯
ಕಂಡುದ ಕಡೆಗಿಡು ೧೧೪
ಕಂಡುದ ಸ್ಥಿರವೆಂಬೋರಲ್ಲದೆ ೧೧೩
ಕಾಣದುದನರಸುವರಲ್ಲದೆ ೧೧೦
ಕಾಮಕಾಲದೆ ೧೦೮
ಕಾಯಯ್ಯಕಾಯಯ್ಯ ೧೧೧
ಕೊಟ್ಟುನೋಡುವ ೧೨೪
ಚೌಡಿಗನಹುದಲ್ಲ ೧೨೩
ತಿರಿದುಂಬುವ ೧೨೧
ದೇವರೆಲ್ಲವ ೧೦೬
ದೇವಿಯರೊಳಗೆ ೧೧೨
ನೆಲದ ನಿಧಾನವು ೧೧೫
ಪ್ರತಿಯಿಲ್ಲದೆದೇವನ ೧೦೨
ನೆಲೆಯಿಲ್ಲದ ೧೦೪
ಮಾಯಘನವಾದರೆ ೧೦೯
ಮೂರ್ಖಂಗೆ ೧೦೩

## ಷಣ್ಮುಖಸ್ವಾಮಿಗಳ ಷಟ್ಸ್ಥಲ ವಚನ

### ಅ

ಅಂಗ ಆಪ್ತಸ್ಥಾನ ೪೩೫
ಅಂಗಕ್ಕೆ ಆಚಾರವೆ ೮೪೫
ಅಂಗಕ್ಕೆ ಇಷ್ಟಲಿಂಗದ ೮೯೩
ಅಂಗದ ಗುಣವಳಿಯದೆ ೯೦೫
ಅಂಗವಿಕಾರಿಗೇಕೋ ೯೦೬
ಅಂಜನ ಗಿರಿಯಲ್ಲಿ ೭೦೧
ಅಂಜನದ ಬಲದಿಂದೆ ೨೫೫
ಅಂಜನ ಸಿದ್ಧಿಯ ೩೬೯
ಅಂಜುವೆನಂಜುವೆನಯ್ಯ ೫೮೪
ಅಂಡಜ ಇಪ್ಪತ್ತೊಂದು ೨೬೨
ಅಂಡಾಭರಣರು ಘನವೆಂಬೆನೆ ೯೪೭
ಅಂತರಂಗದಲ್ಲಿ ಅಖಂಡ ೫೯೫
ಅಂತರಂಗದಲ್ಲಿ ಅರುಹಿನ ೮೬೫
ಅಂದಿನ ಶರಣರಿಗೆ ೭೯೮
ಅಂದೊಬ್ಬದೇವ ೪೭೯
ಅಂಧಕಂಗೆ ಕಣ್ಣು ೩೦೬
ಅಂಬರದೇಶದ ಕುಂಭ ೭೧೮
ಅಂಬರದೊಳಗಣ ಅಮೃತದ ೬೯೮
ಅಕುಲಜ ಅಧಮ ೩೫೨
ಅಖಂಡಜ್ಞಾನಭರಿತ ೯೪೮
ಅಗ್ನಿಯ ಸಂಗದಿಂದೆ ೮೪೯
ಅಗ್ನಿಯೆ ಅಂಗವಾದ ೬೫೧
ಅಜಹರಿಸುರರೆಲ್ಲ ೫೨೧
ಅಡವಿಯಲ್ಲಿರ್ದ ಗೋವು ೨೫೭
ಅಡಿಮುಡಿಯಿಲ್ಲದ ಪ್ರಸಾದ ೬೭೬
ಅಣುವಿಂಗೆ ಅಣು ೩೦೮
ಅಣುವಿಂಗೆ ಅಣು ೯೪೩
ಅನಂತಕಾಲ ಎನ್ನ ೨೫೩
ಅನಂತಕೋಟಿ ಬ್ರಹ್ಮಾಂಡ ೮೯೧
ಅನಂತಕೋಟಿ ಯಜ್ಞ ೩೩೧
ಅನಂತಕೋಟಿ ಹೀನ ೫೪೧
ಅನಂತಸಾಧಕಂಗಳ ೯೩೯
ಅನಾದಿ ಪರವಸ್ತುವು ೮೮೭
ಅನಾದಿ ಶಿವಾಂಶಿಕರಾದ ೮೮೮
ಅನುಪಮ ಲಿಂಗದಲ್ಲಿ ೮೬೬
ಅನುಪಮ ಶರಣನ ೯೫೦
ಅನುಭಾವ ಅನುಭಾವ ೬೮೬
ಅನುಭಾವಿಗಳ ಸಂಗ ೮೪೮
ಅನುಭಾವಿಯಾದಡೆ ೬೮೮
ಅಪ್ಪುವೆ ಅಂಗವಾದ ೬೫೦
ಅಯ್ಯಾ ಎನಗೆ ೩೩೬
ಅಯ್ಯಾ ನಿಮ್ಮನೆನ್ನ ೭೬೦
ಅರಸನ ಕಾಣದ ೮೨೭
ಅರಳಿಯ ಮರದೊಳಗಿರುವ ೮೨೧
ಅರಿದಲ್ಲಿ ಶರಣ ೮೯೦

ಅರಿದರಿದು ಗುರುಭಕ್ತಿಯು ೫೩೦
ಅರಿಯದೆ ಒಂದುವೇಳೆ ೩೪೫
ಅರ್ಥ ಗುರುವಿನಲ್ಲಿ ೪೨೮
ಅಲ್ಲಮದ ಹಿಡಿವನಲ್ಲ ೫೫೪
ಅಶ್ವವ ಕೊಂದವ ೩೦೦
ಅಷ್ಟಮೂರ್ತಿಗಳು ೫೦೯
ಅಹುದೆನಲಮ್ಮ ೯೩೩

**ಆ**

ಆಕಾಶದಲ್ಲಿ ತೋರಿದ ೯೫೧
ಆಕಾಶಮಂಡಲದೊಳಗೆ ೭೦೩
ಆಚಾರಲಿಂಗವಾಗಿ ೫೨೯
ಆಚಾರ ವಿಚಾರವೆಂದರಿಯರು ೪೯೬
ಆಣವಮಲ ಮಾಯಾಮಲ ೫೬೭
ಆತನ ಆಳಾಪದಿಂದೆ ೮೨೨
ಆತನ ದಿವ್ಯರೂಪು ೮೩೨
ಆತ್ಮವೆ ಅಂಗವಾದ ೬೫೪
ಆದಿ ಪ್ರಸಾದ ಅನಾದಿಪ್ರಸಾದಿ ೬೫೯
ಆದಿಯ ಭಕ್ತ ೪೪೪
ಆದಿಮಯ ಗುರು ೨೯೭
ಆದಿಯಲ್ಲಿಯೂ ನೀನೆ ೩೮೬
ಆದಿಯಲ್ಲಿ ಶ್ರೀವಿಭೂತಿ ೩೨೫
ಆದಿಯಾಧಾರವಿಲ್ಲದ ೫೭೫
ಆದಿಯಾಧಾರವಿಲ್ಲದಂದು ೨೪೪
ಆದಿಯಾಧಾರವಿಲ್ಲದ ಮುನ್ನ ೭೮೧
ಆದಿಯಿಲ್ಲದ ಬಯಲು ೯೬೦
ಆಧಾರದಲ್ಲಿ ಗುರುಸಂಬಂಧ ೬೧೨
ಆನೆಗಳೆಂಟನು ಒಂದು ೭೦೫
ಆರೂ ಸಾಧಿಸಬಾರದ ೩೦೫
ಆಲಸ್ಯವೇತಕೋ ೩೬೨
ಆವ ಕಾರ್ಯಕ್ಕಾದಡೂ ೩೨೪
ಆವ ಜಾತಿಯಲ್ಲಿ ೩೦೨
ಆವನೊಬ್ಬನ ಹೃದಯದಲ್ಲಿ ೩೩೮
ಆವನೊಬ್ಬನು ಉಪಪಾತಕ ೩೩೪
ಆಸೆವಿಡಿದು ಹಲವು ೪೬೫
ಆಳವಿಲ್ಲದ ನಿರಾಳ ೬೦೧

**ಇ**

ಇಂದಿನ ಇರುಳಲ್ಲಿ ೮೩೬
ಇಂದು ಎನ್ನ ಮನೆಯಲ್ಲಿ ೫೬೧
ಇಂದು ನಾಳೆಯೆಂಬ ೩೬೩
ಇಂದ್ರ ಚಂದ್ರರು ೯೪೨
ಇಂದ್ರಿಯಂಗಳಿಚ್ಛೆಯಲ್ಲಿ ೪೮೨
ಇಕ್ಕಿದೆನು ಮುಂಡಿಗೆಯ ೫೧೯
ಇಕ್ಕಿದೆನು ಮುಂಡಿಗೆಯ ೫೨೦
ಇದಿರ ಹಳಿದು ತನ್ನ ೬೮೫
ಇದಿರಿನಲ್ಲಿ ಜಂಗಮವು ೩೭೭
ಇನ್ನು ಆಸನದ ಭೇದ ೭೩೩
ಇನ್ನು ತಾರಕಯೋಗದ ೭೪೦
ಇನ್ನು ತಾರಕಯೋಗದ ೭೪೧
ಇನ್ನು ಧಾರಣಯೋಗದ ೭೩೨
ಇನ್ನು ಪ್ರತ್ಯಾಹಾರದ ೭೩೫
ಇನ್ನು ಪ್ರಾಣಾಯಾಮದ ೭೩೪
ಇನ್ನು ಯೋಗೀಶ್ವರರ ೭೩೬
ಇನ್ನು ಸಮಾಧಿಯೋಗ ೭೩೮
ಇನ್ನು ಹಠಯೋಗಕ್ಕೆ ೭೩೦
ಇಮ್ಮನ ಭಕ್ತಂಗೆ ೩೬೮
ಇಷ್ಟಲಿಂಗಕ್ಕೆ ರೂಪು ೬೨೬
ಇಷ್ಟಲಿಂಗಕ್ಕೆ ತನುವೆ ೯೦೭
ಇಷ್ಟಲಿಂಗದ ನಿಜವ ೫೦೦
ಇಷ್ಟಲಿಂಗದಲ್ಲಿ ತನುವ ೫೬೮
ಇಷ್ಟಲಿಂಗದಲ್ಲಿ ತನುವ ೮೫೫
ಇಷ್ಟಲಿಂಗದಲ್ಲಿ ನೈಷ್ಠೆ ೪೯೯
ಇಷ್ಟಲಿಂಗ ಪ್ರಾಣಲಿಂಗ ೫೦೧
ಇಷ್ಟಲಿಂಗವಾಗಿ ಎನ್ನ ೮೭೬

**ಈ**

ಈಡಾ ಪಿಂಗಳೆಯಲ್ಲಿ ೭೨೯
ಈ ಲಕ್ಷತ್ರಯಂಗಳನರಿದು ೭೪೯

ಈಶನ ಮರೆಯಲ್ಲಿ ೫೨೪
ಈ ಶಿವಷಡಕ್ಷರ ೩೪೨
ಈ ಹಠಯೋಗಕ್ಕೆ ೭೩೧

**ಉ**

ಉತ್ತರಗಿರಿಯ ೭೧೪
ಉನ್ಮನಿಯ ಮಂಟಪದಲ್ಲಿ ೭೨೫
ಉಪಾಧಿಯನಳಿದು ೪೩೯

**ಎ, ಏ**

ಎಂದು ಅಷ್ಟತನುಗಳು ೨೫೮
ಎಂಬತ್ತುನಾಲ್ಕು ಲಕ್ಷ ೮೧೨
ಎಚ್ಚರವಿರಬೇಕು ೫೬೦
ಎನಗೆ ನೀನೆ ಚಿದ್ಭಾಂಡ ೯೧೯
ಎನ್ನಂಗದ ಮಧ್ಯ ೨೫೪
ಎನ್ನಂತರಂಗದ ೭೨೩
ಎನ್ನ ಆಧಾರಚಕ್ರವೆ ೭೫೫
ಎನ್ನ ಆಧಾರದಲ್ಲಿ ೭೫೮
ಎನ್ನ ಆಧಿ ವ್ಯಾಧಿಗಳೆಲ್ಲ ೬೭೦
ಎನ್ನ ಆರು ಚಕ್ರಂಗಳಲ್ಲಿ ೭೫೬
ಎನ್ನ ಕಂಗಳ ಮುಂದಣ ೪೧೦
ಎನ್ನ ಕಂಗಳು ನಿಮ್ಮ ೪೯೦
ಎನ್ನ ಕರಕಮಲ ೪೮೫
ಎನ್ನ ಕರಕಮಲ ಮಧ್ಯದಲ್ಲಿ ೨೯೯
ಎನ್ನ ಕರಸ್ಥಲದಲ್ಲಿ ೨೯೫
ಎನ್ನ ಕಾಯದ ೨೭೮
ಎನ್ನ ಕಾಯಕಲ್ಪಿತಂಗಳು ೯೩೨
ಎನ್ನ ಗರ್ವ ಅಹಂಕಾರವ ೫೭೭
ಎನ್ನ ಘ್ರಾಣ ಗಂಧವ ೬೬೬
ಎನ್ನ ಘ್ರಾಣದ ಕೊನೆಯಲ್ಲಿ ೭೭೫
ಎನ್ನ ಘ್ರಾಣದ ಕೊನೆಯಲ್ಲಿ ೬೬೫
ಎನ್ನ ಘ್ರಾಣದ ಪರಿಣಾಮ ೭೬೪
ಎನ್ನ ಚಿತ್ತಸುಚಿತ್ತ ೬೫೭
ಎನ್ನ ಘ್ರಾಸಮರಸ ೬೬೭
ಎನ್ನ ಜನನ ಮರಣಂಗಳೆಲ್ಲ ೪೮೪
ಎನ್ನ ಜನನ ಸೂತಕ ೪೬೫
ಎನ್ನ ಜೀವಭಾವಿಯೆಂದೆನಿಸದೆ ೨೮೪
ಎನ್ನ ತನು ಅಡುಗುವುದಕ್ಕೆ ೬೭೩
ಎನ್ನ ತನು ಎನ್ನ ಧನ ೩೨೬
ಎನ್ನ ತನು ನಿಮ್ಮ ೬೬೮
ಎನ್ನ ತನುವ ತನ್ನ ೨೯೩
ಎನ್ನ ತನುವ ಶೋಧಿಸಿ ೨೯೪
ಎನ್ನ ತನುವಿನ ಮರೆಯಲ್ಲಿರ್ದ ೨೫೦
ಎನ್ನ ತನುವಿನೊಳಗೆ ೬೫೬
ಎನ್ನ ತನುವಿನೊಳಗೆ ೮೯೨
ಎನ್ನ ತನುವು ನಿಮ್ಮ ೪೬೭
ಎನ್ನ ತನುವೆ ಬಸವಣ್ಣನು ೮೭೩
ಎನ್ನ ತನುವೆ ಶ್ರೀಗುರು ೪೪೩
ಎನ್ನ ನಡೆನುಡಿ ಚೈತನ್ಯ ೫೨೪
ಎನ್ನ ನಡೆವ ನಡೆ
ಎನ್ನ ನೇತ್ರಪ್ರಸಾದ ೬೬೯
ಎನ್ನ ನೇತ್ರವು ನಿಮ್ಮ ೬೬೧
ಎನ್ನ ಪೃಥ್ವಿ ತತ್ವದಲ್ಲಿ ೭೮೪
ಎನ್ನ ಭವಪಾಶಂಗಳ ೨೮೩
ಎನ್ನ ಭವಭವದಲ್ಲಿ ೨೫೬
ಎನ್ನ ಭಾವವ ೨೮೫
ಎನ್ನ ಮಾನಾಪಮಾನವೆಲ್ಲ ೫೯೨
ಎನ್ನ ಷಡ್ಧಾತುಗಳೆಲ್ಲ ೩೪೮
ಎನ್ನ ಸ್ಥೂಲತನುವಿನ ೮೮೪
ಎನ್ನ ಸ್ಥೂಲತನುವೆಂಬ ಮನೆ ೩೪೯
ಎನ್ನ ಸ್ಥೂಲತನುವೆಂಬ ೭೬೨
ಎನ್ನೊಡಲೊಳಗೆ ತೋರಿ ೭೬೧
ಎಲೆ ಶಿವನೆ ನಿಮ್ಮಲ್ಲಿ ೮೧೪
ಎಲೆ ಶಿವನೆ ನಿಮ್ಮಲ್ಲಿ ೮೪೪
ಎಲೆ ಶಿವನೆ ನೀವು ೫೯೭
ಎಲ್ಲರಂತಲ್ಲ ನೋಟರೆ ೮೧೭
ಎಲ್ಲಿ ನೋಡಿದಡಲ್ಲಿ ೯೪೫
ಏನೆಂಬೆನೇನೆಂಬೆನಯ್ಯಾ ೯೨೬
ಏಳುಕೋಟಿ ಮಹಾಮಂತ್ರ ೩೩೯

**ಒ, ಓ**

ಒಂದು ವೇಳೆ ಲಿಂಗಕ್ಕೆ ೬೧೪
ಒಂಬತ್ತು ನಾಳದೊಳಗೆ ೭೯೦
ಒಬ್ಬರು ನಡೆದಾಚರಣೆ ೮೫೧
ಒಬ್ಬರೊಬ್ಬರ ಸಂಗವ ೫೪೫
ಒಮ್ಮೆ ಜ್ಞಾನಿಯೆನಿಸಿ ೯೨೨
ಒಮ್ಮೆ ಜ್ಞಾನಿಯೆನಿಸಿ ೫೨೫
ಒಮ್ಮೆ ನೀ ದೇವನಾದಲ್ಲಿ ೬೩೯
ಒಲ್ಲನು ಒಲ್ಲನಯ್ಯ ೫೫೯
ಒಲ್ಲೆನಯ್ಯ ಜಗದ ೫೮೧
ಒಳಗೆಂಬುದನರಿಯೆ ೭೬೬
ಒಳಗೆ ಕೂಡಿ ಹೊರಗೆ ೭೬೫
ಒಳಗೆ ಬೋಳಾಗಲರಿಯದೆ ೫೭೧
ಒಳಗೆ ತಿಳಿಯದೆ ೬೧೬
ಒಳಗೆ ನೋಡಿದಡೆ ನಿಮ್ಮನೆ ೭೬೪
ಒಳಗೆ ಲಿಂಗದಕೂಟ ೩೮೫
ಓಂಕಾರವೆಂಬ ಮರಕ್ಕೆ ೩೪೭
ಓಂ ನಮಃ ಶಿವಾಯ ೩೪೬

**ಕ, ಖ**

ಕಂಡರೆ ಸಂತೋಷ ೮೨೮
ಕಟ್ಟಿದ ಬುತ್ತಿ ೫೫೮
ಕಟ್ಟಿದೆನು ಬಿರಿದು ೫೨೨
ಕಡಲ ಮಧ್ಯದಲ್ಲಿ ೭೦೬
ಕನಕ ಕಾಮಿನಿ ೪೭೮
ಕನ್ನಡಿಯ ನೋಡುವಲ್ಲಿ ೯೩೫
ಕಪ್ಪೆಯ ಶಿರದ ಮೇಲೆ ೬೯೯
ಕಮಲದ ಸಾಲುಗಳೊಳಗೆ ೭೧೨
ಕರ್ಮಸಾದಾಖ್ಯ ೭೭೪
ಕರಸ್ಥಲದ ಲಿಂಗವನು ೬೬೨
ಕಲ್ಪತರು ಕಾಡಮರ ೨೮೭
ಕಾಮದ ಕಳವಳದಲ್ಲಿ ೭೯೩
ಕಾಮವುಳ್ಳವಂಗೆ ೩೮೮
ಕಾಯಕಲ್ಪಿತಕ್ಕೆ ದೂರನು ೯೦೨
ಕಾಯೆ ಜೀವದ ಕೀಲವ ೬೯೦
ಕಾಯದ ಕಳವಳದಲ್ಲಿ ೯೧೫
ಕಾಯದ ಕೈಮುಟ್ಟಿ ೬೧೩
ಕಾಯವ ದಂಡಿಸಿ ೪೭೭
ಕಾಯವಿಲ್ಲದ ಪುರುಷನು ೬೭೯
ಕಾಯಕವಿಲ್ಲದ ಭಕ್ತ ೪೪೯
ಕಾಯವೇ ಕೈಲಾಸವಾಗಿ ೮೫೦
ಕಾರ್ಯವಿಲ್ಲದ ಪ್ರಸಾದ ೬೨೪
ಕಾಲಕಲ್ಪಿತಂಗಳಿಲ್ಲದಂದು ೭೪೬
ಕಾಲನೆಂಬ ಜಾಲಗಾರನು ೨೭೬
ಕಾಲಿಲ್ಲದ ನಡೆ ೯೩೪
ಕಾಲಿಲ್ಲದೆ ನಡೆಯಬಲ್ಲಡೆ ೭೭೨
ಕಾಯದೊಳಗಣ ಮನಸ್ಸು ೭೫೪
ಕಾಲಲ್ಲಿ ಕಣ್ಣು ಮೂಡಿತ್ತಕಂಡೆ ೭೭೧
ಕಾಷ್ಠದಲ್ಲಿ ಅಗ್ನಿ ೫೦೨
ಕಾಷ್ಠದಲ್ಲಿ ಬೊಂಬೆಯ ೮೮೨
ಕಿಸುಕುಳದ ಕೀವು ೨೬೬
ಕುಂಡಲಿಯ ಬಾಗಿಲಲ್ಲಿ ೭೦೪
ಕುಂಭ ಸಹಸ್ರ ಉದಕದೊಳಗೆ ೬೯೪
ಕುಚಿತ್ತವಳಿದು ಸುಚಿತ್ತ ೫೬೫
ಕುರುಹುವುಂಟೆ ಮರುಳೆ ೫೦೮
ಕೆಟ್ಟೆ ಕೆಟ್ಟೆನಯ್ಯ ೨೬೫
ಕೇಳಿ ಕೇಳಿರಯ್ಯ ೭೮೦
ಕೇಳಿ ಕೇಳಿರಯ್ಯ ೯೫೪
ಕೇಳಿರೆ ಕೇಳಿರವ್ವಾ ೮೪೦
ಕೇಳಿರೆ ಕೇಳಿರವ್ವಾ ೯೧೦
ಕೇಳು ಕೇಳಯ್ಯ ೭೬೩
ಕೇಳು ಕೇಳಯ್ಯ ಕರುಣೆ ೯೨೦
ಕೇಳುವ ಸಂಗೀತ ೬೪೮
ಕೋಳಿ ಕೂಗುವುದು ೩೮೧
ಕ್ರಿಯವೆ ಅಧಿಕವೆಂಬ ೫೦೪
ಕ್ರಿಯಾದೀಕ್ಷೆಯಿಂದ ೬೪೫
ಕ್ರಿಯೆಯಲ್ಲಿ ಬಲ್ಲಿದರು ೫೫೭
ಕ್ಷೀರದ ರುಚಿಯ ೬೭೯

ಕ್ಷುತ್ ಪಿಪಾಸೆ ೮೯೭
ಖಂಡಿತ ಭಾವವಳಿದು ೯೩೮

**ಗ, ಘ**

ಗಂಡನುಳ್ಳ ಗರತಿ ೮೧೬
ಗಂಡಸತ್ತನೆಂದು ೫೮೮
ಗಗನಮಂಟಪದಲ್ಲಿ ೭೧೩
ಗಗನವೆ ಅಂಗವಾದ ೬೫೩
ಗರ್ವಾಹಂಕಾರವಳಿದು ೯೦೪
ಗಾಳಿಬೀಸುವ ೩೨೧
ಗುರುಕರಜಾತನಾದೆನಾಗಿ ೪೨೪
ಗುರು ಕರುಣಿಸಿಕೊಟ್ಟ ೮೦೩
ಗುರುಕಾರುಣ್ಯವ ೩೩೦
ಗುರುಚರಣವ ಪೂಜಿಸಿ ೨೯೬
ಗುರುದೀಕ್ಷೆಯಿಲ್ಲದೆ ೮೦೪
ಗುರುಪಾದೋದಕವ ೭೭೬
ಗುರುಪ್ರಸಾದವ ಕೊಂಬ ೬೧೧
ಗುರುಪ್ರಸಾದವನರಿಯದ ೬೧೫
ಗುರುಪ್ರಸಾದವಕೊಂಡು ೬೩೫
ಗುರುಪ್ರಸಾದಿಯಾದಡೆ ೬೦೯
ಗುರುಪ್ರಸಾದಿಯಾದಡೆ ೬೧೦
ಗುರುಪ್ರಸಾದಿಯಾದಡೆ ೬೨೯
ಗುರುಭಕ್ತನಾದಬಳಿಕ ೫೩೧
ಗುರುಭಕ್ತರಾದವರು ೫೧೭
ಗುರುಭಕ್ತಿಯಮಾಡಿದ ೪೫೭
ಗುರುಭಕ್ತಿಯಮಾಡಿದರೆ ೬೪೦
ಗುರುಲಿಂಗಜಂಗಮದಲ್ಲಿ ೪೧೩
ಗುರುವಚನದಿಂದಲ್ಲದೆ ೨೮೧
ಗುರುವ ನೋಡಿರೋ ೪೧೧
ಗುರುವಿಂಗಾದಡೂ ೫೬೬
ಗುರುವಿಂಗೆ ತನುವ ೪೦೪
ಗುರುವಿಡಿದು ಕುರುಹ ೨೯೧
ಗುರುವಿನಲ್ಲಿ ಗುಣವ ೩೯೯
ಗುರುವಿನಲ್ಲಿ ಭಕ್ತಿಯಿಲ್ಲ ೪೦೦
ಗುರುವಿನೊಡನೆ ಸಹಭೋಜನ ೯೧೪
ಗುರುವೆನಲು ಕೊರೆವುದು ೨೮೦
ಗುರುವೆ ಪರತತ್ವವು ೨೭೯
ಗುರುವೆ ಲಿಂಗವೆಂದರಿದೆ ೬೩೨
ಗುರುಶಿಷ್ಯ ಸಂಬಂಧ ೮೦೫
ಗುರುಸೇವೆಯಲ್ಲಿ ೪೩೬
ಗುರುಸ್ಥಲದ ಗಂಭೀರ ೮೬೦
ಗುರುಹರ ವಚನ ೪೮೩
ಗೋಸುಂಬೆ ಹುಳದಂತೆ ೭೯೪
ಘನತರದಿಷ್ಟಲಿಂಗದಲ್ಲಿ ೪೮೭
ಘನಲಿಂಗದೇವರು ಘನಲಿಂಗ ೮೬೧
ಘನಮಹಾಲಿಂಗಕ್ಕೆ ೮೯೪
ಘನಗಂಭೀರಮಹಾಘನ ೯೩೨
ಘನಕ್ಕೆ ಘನವಾದ ೯೪೪
ಘುಲ್ಲು ಘುಲ್ಲೆಂದಡೆ ೮೩೦
ಘ್ರಾಣೇಂದ್ರಿಯ ವಿಷಯ ೨೫೯

**ಚ, ಛ**

ಚಂದ್ರಶಿಲೆಯ ೭೧೬
ಚಂದ್ರಸಾಲೆಯಲ್ಲಿ ೮೩೬
ಚಂದ್ರಸೂರ್ಯರೆನಿಸುವ ೭೪೩
ಚತುರ್ಭೂತಂಗಳ ೭೪೮
ಚತುರ್ವೇದಿಗಳಾದ ೩೫೮
ಚರಣದೊಳಗೆ ಚರಣ ೮೭೨
ಚಿತ್ತನಿರ್ಮಲವಾದಾತ್ಮನು ೬೯೨
ಚಿತ್ತದೊಲ್ಲಭನಕಾಣದೆ ೮೧೯
ಛಲವಿರಬೇಕು ೪೫೬

**ಜ**

ಜಂಗಮಕ್ಕೆ ನೀಡಿದ ೩೬೧
ಜಂಗಮಕ್ಕೆ ಮಾತಾಪಿತ ೫೩೪
ಜಂಗಮ ಜಂಗಮವೆಂದು ೬೩೪
ಜಂಗಮದ ಘನವನು ೫೩೩
ಜಂಗಮದ ದರ್ಶನ ೬೩೩
ಜಂಗಮದ ಪಾದತೀರ್ಥ ೭೭೮

ಜಂಗಮದಲ್ಲಿ ರೂಪು ೫೩೨
ಜಂಗಮಲಿಂಗವೆ ನಮೋ ೫೨೬
ಜಂಗಮವ ಕಂಡು ೩೯೨
ಜಂಗಮವೆ ಜಗದೀಶ ೩೯೩
ಜಂಗಮವೆ ಜಗದ್ಭರಿತ ೩೫೭
ಜಗದ ಮಧ್ಯದಲ್ಲಿ ೮೨೨
ಜಗದೊಳಹೊರಗೆಲ್ಲ ೫೦೭
ಜಗವನೊಳಕೊಂಡ ೩೦೭
ಜಗವಾಗಬಲ್ಲ ನೋಡಿರೊ ೫೧೫
ಜಗವೆಲ್ಲ ಮುನಿದಡಂಜೆ ೫೮೫
ಜಡೆ ಬೋಳು ಲೋಚು ೫೬೯
ಜನನವಿಲ್ಲದ ಶರಣ ೮೭೮
ಜಾತಿಧರ್ಮ ೩೩೩
ಜಾತಿಪೂರ್ವಾಶ್ರಯವ ೪೯೩
ಜೀವದೊಡೆಯನನಗಲಿ ೮೨೫
ಜೀವಭಾವದಿಂದೆ ೬೨೪
ಜ್ಞಾನದಿಂದಾದಡಾಗಲಿ ೩೦೧

**ತ**

ತಂದೆ ಕೇಳಯ್ಯ ೯೨೧
ತಂದೆ ತಾಯಿ ಬಂಧು ೨೮೨
ತಂದೆ ನೀನೇ ಅಯ್ಯ ೫೨೭
ತನ್ನ ಎಡೆಯಲ್ಲಿ ಕತ್ತೆ ೫೪೮
ತನ್ನ ತಾನರಿಯದೆ ೫೪೭
ತನ್ನನಲ್ಲದೆ ಅನ್ಯವ ೮೨೪
ತನು ಗುರುವಾದುದೆ ಶೀಲ ೮೫೬
ತನು ನಿಮ್ಮದಾದಬಳಿಕ ೯೩೦
ತನು ಲಿಂಗವಾದ ೪೯೪
ತನುವ ಕೊಟ್ಟು ೪೬೯
ತನು ವಂಚನೆಯಿಲ್ಲದೆ ೪೩೦
ತನುವ ಗುರುವಿಂಗೆ ೩೯೮
ತನುವ ನಿಮಗೆ ೪೪೭
ತನುವ ನಿಮಗೊಪ್ಪಿಸಿ ೪೬೮
ತನುವಿನ ಕೈಯಲ್ಲಿ ೮೮೬
ತನುವಿನ ಕೈಯಲ್ಲಿ ೯೨೭
ತನುವಿನ ಕೊನೆಯಲ್ಲಿ ೭೬೮
ತನುವಿನ ಪ್ರಕೃತಿ ೪೪೦
ತನುವಿನ ಮಧ್ಯದಲ್ಲಿ ೬೮೭
ತನುವಿನವಗುಣಂಗಳ ೭೭೩
ತನುವಿನ ವಿಕಾರದ ೨೭೦
ತನುವಿನಲ್ಲಿ ಗುರುಭಕ್ತಿ ೬೪೪
ತನುವಿಲ್ಲದೆ ಮಾಡಿ ೪೪೫
ತನುವಿಹ ಪರಿಯಂತರ ೯೨೯
ತನುವೆಂಬ ಗುಡಿ ೭೨೦
ತನುವೆ ಗುರುವೆಂದರಿದ ೪೩೨
ತಮ್ಮೊಳಗೆ ತಾವು ೫೪೯
ತಾನೊಳ್ಳೆಯವನಾದಡೆ ೪೨೫
ತಾನೆ ಗುರುವಾಗಿ ೪೪೧
ತಾಮಸಗುಣಂಗಳಲ್ಲಿ ೮೫೯
ತಾರಕಾಕೃತಿ ೬೪೭
ತೆಂಗಿಗೆ ನೀರನೆರೆದಡೆ ೩೬೦
ತೆರಹಿಲ್ಲ ತೆರಹಿಲ್ಲ ೯೪೬
ತೊತ್ತಿಂಗೆ ಒಡತಿಯ ೪೭೬
ತ್ರಿಕರಣಂಗಳು ಶುದ್ಧನಾಗಿ ೬೦೮
ತ್ರಿಕೂಟ ಗಿರಿಯಲ್ಲಿ ೭೧೫
ತ್ರಿಕೂಟವೆಂಬ ಭ್ರೂಮಧ್ಯ ೭೫೨

**ದ, ಧ**

ದಕ್ಷಿಣ ಜ್ಯೋತಿಮಂಡಲ ೭೪೪
ದಯವಿರಬೇಕು ೫೫೧
ದರ್ಪಣದೊಳಗಣ ೫೨೮
ದುರ್ಗುಣಿ ದುರಾಚಾರಿ ೪೬೪
ದೇವರದೇವ ಮಹಾಪ್ರಸಾದ ೬೩೧
ದೇಹದ ವಾಸನೆ ಹರಿದು ೭೧೦
ದೇಹವೆಂಬ ದೇಗುಲದೊಳಗೆ ೭೧೯
ದ್ವೀಪ ವಿಳರೊಳಗೆ ೭೮೯
ಧರ್ಮ ಅರ್ಥ ಕಾಮ ೬೨೩
ಧರ್ಮಾರ್ಥವಾಗಿ ದೀಕ್ಷೆಯ ೩೮೩

ನ

ನಂಜು ಅಮೃತವಾದುದ ೨೦೭
ನಂದಿವಾಹನನಾಗಿ ೩೧೩
ನಂಬಿರೊ ನಂಬಿರೊ ೬೦೪
ನಡೆದು ತಪ್ಪುವರಲ್ಲ ೫೯೦
ನಡೆಯೊಳಗೆ ನುಡಿ ೫೮೯
ನಡೆವ ಕಾಲದಲ್ಲಿ ೯೧೮
ನಡೆವ ಗತಿಯಲ್ಲಿ ೫೭೩
ನದಿನದಿಯ ಕೂಡಿದಂತೆ ೯೫೩
ನಲ್ಲನಕಾಣದೆ ೮೧೮
ನಲ್ಲನ ಕೂಡಿದ ಸುಖ ೮೩೮
ನವಖಂಡ ಮಂಡಲ ೨೦೦
ನವನಾಳಂಗಳ ೨೫೯
ನಳಿನಾಸನದಲ್ಲಿ ೨೦೯
ನಾದಬಿಂದುಕಳಾತೀತ ೮೬೨
ನಾದ ನಿಜವೆಂಬೆನೆ ೯೩೬
ನಾನಾದೇಶವ ತಿರುಗಿ ೪೧೬
ನಾನಾವರ್ಣದ ಕಾಷ್ಠವ ೪೯೧
ನಾನಿಹಪರಿಯಂತರ ೯೭೮
ನಾನೇನೆಂದೆನೆ ೮೭೩
ನಾಲ್ಕು ವರ್ಣ ೩೪೩
ನಾಸಿಕಾಗ್ರದಿಂ ೨೪೬
ನಿಚ್ಚ ನಿಚ್ಚ ಶರಣಂಗೆ ೮೪೧
ನಿತ್ಯ ಗುರುಲಿಂಗ ೪೫೯
ನಿತ್ಯ ನಿರಂಜನ ೨೨೯
ನಿತ್ಯ ಲಿಂಗಾರ್ಚನೆಯ ೨೮೦
ನಿತ್ಯ ಲಿಂಗಾರ್ಚನೆಯ ೫೮೩
ನಿಮ್ಮ ನೋಡಿ ನೋಡಿ ೪೮೯
ನಿಮ್ಮ ತೊತ್ತಿನ ೩೮೨
ನಿಮ್ಮ ಪ್ರಸಾದ ೬೬೦
ನಿಮ್ಮ ಪೂಜಿಸಿಹೆ ೯೩೧
ನಿಮ್ಮ ಸ್ವಲೀಲೆಯಿಂದ ೨೮೬
ನಿರುಪಮ ನಿರಾಳ ೯೦೧
ನಿರುಪಮ ಬಸವಣ್ಣ ೨೮೭
ನೀನೊಲಿದೊಡೆ ಕಲ್ಲೆಲ್ಲ ೪೦೬
ನೀನೊಲಿದೊಡೆ ಜಗವೆಲ್ಲ ೪೦೮
ನೀರಮಂಟಪದೊಳು ೨೦೮
ನೀರಿಲ್ಲದ ಭೂಮಿಯಲ್ಲಿ ೨೯೧
ನೀರು ಗಟ್ಟಿಗೊಂಡು ೪೬೭
ನೀವು ನಿಮ್ಮ ಸ್ವಲೀಲೆ ೭೫೯
ನುಡಿದಂತೆ ನಡೆ ೫೯೧
ನುಡಿಯಬೇಕು ಸತ್ಯ ೪೬೮
ನುಡಿಯಲಾಗದು ನುಡಿಯ ೪೯೨
ನುಡಿಯಲ್ಲಿ ಎರಡು ೪೨೧
ನುಡಿಯಲ್ಲಿ ಕರ್ಕಶ ೩೭೫
ನೆನಹಿಗೆಬಾರದ ೭೫೭
ನೆರೆ ಹೊಲ್ಲ ದುರಾಚಾರಿಗಳ ೫೪೩
ನೇತ್ರದ ಸೂತ್ರದಲ್ಲಿ ೨೬೨
ನೇತ್ರವೆಂಬ ಸುವರ್ಣವ ೨೬೯
ನೇಮವಿರಬೇಕು ೬೧೭
ನೈಷ್ಠಿಕಭಾವ ೪೫೩
ನೈಷ್ಠೆ ನೆಲೆಗೊಳ್ಳಬೇಕು ೪೫೫
ನೈಷ್ಠೆಯೆಂಬುದು ೪೫೪
ನೋಟಭಂಗ ೪೮೧
ನೋಡಬಾರದು ಪರಸತಿಯರ ೪೮೦
ನೋಡಲಿಲ್ಲದ ಬಯಲು ೯೫೬
ನೋಡಿರೆ ನೋಡಿರೆ ೮೦೬
ನೋಡು ನೋಡಯ್ಯ ೮೩೩

ಪ, ಫ

ಪಂಚಪ್ರಾಣವಾಯುಗಳ ೬೨೨
ಪಂಚಮಹಾಪಾತಕ ೩೫೪
ಪಂಚಮುಖ ೩೧೪
ಪಂಚಾಕ್ಷರಿಯೆಂದಡೆ ೩೩೨
ಪರತರ ಪರಮ ೨೪೫
ಪರದೈವವ ೫೪೦
ಪರಧನ ಪರಸ್ತ್ರೀ ೪೨೩
ಪರಧನವ ಹಿಡಿಯಧೆ ೮೬೩

ಪರಮನಪ್ಪಣೆಯಿಂದ ೯೨೪
ಪರಸ್ತ್ರೀಯರ ೪೫೧
ಪರುಷ ಲೋಹದಂತೆ ೨೮೮
ಪರಾತ್ಪರವಾದ ೫೦೩
ಪರಾತ್ಪ್ರವಾದ ವಸ್ತುವನೊಡಗೂಡಿದ ೬೯೧
ಪರಿಪಾಕವಾದ ೬೨೫
ಪವನವೆ ಅಂಗವಾದ ೬೫೨
ಪಶ್ಚಿಮದ ಗಿರಿಯಲ್ಲಿ ೬೯೭
ಪಾದತೀರ್ಥವೆಂದಡೆ ೭೭೭
ಪಿಂಡದೊಳಗೆ ಪ್ರಾಣ ೬೮೦
ಪಿಂಡದೊಳಗೊಂದು ೭೮೮
ಪುರುಷನಿಲ್ಲದಬಳಿಕ ೮೦೨
ಪುರುಷನೆಂದು ಕರೆವುತಿರ್ಪುದು ೮೧೫
ಪ್ರಕೃತಿ ವಿಕೃತಿ ೨೪೭
ಪ್ರಸಾದಿ ಪ್ರಸಾದಿಗಳೆಂದು ೨೨೭
ಪ್ರಸಾದಿಯಾದಡೆ ೬೪೨
ಪ್ರಸಾದಿಯೊಳಗಣ ೬೪೧
ಪ್ರಾಣನ ಹಸಿವೆದ್ದು ೯೧೩
ಪ್ರಾಣನಾಯಕನ ೮೨೬
ಪ್ರಾಣಲಿಂಗ ಸಂಬಂಧಿ ೭೫೭
ಪ್ರಾಣಲಿಂಗ ಪ್ರಾಣಲಿಂಗ ೬೭೮
ಪ್ರಾಣವು ಲಿಂಗವ ೪೮೬
ಪೃಥ್ವಿ ಅಡಗುವುದಕ್ಕೆ ೯೪೯
ಪೃಥ್ವಿ ಆಕಾಶಂಗಳಿಲ್ಲದಂದು ೨೪೫
ಪೃಥ್ವಿ ಆಕಾಶಮಧ್ಯ ೫೧೩
ಪೃಥ್ವಿ ದೇವರೆಂಬೆನೆ ೫೧೦
ಪೃಥ್ವಿಯಾಕಾಶದೊಳಗೆಲ್ಲ ೬೭೧
ಪೃಥ್ವಿಯೆಂಬ ಭೂತಾಂಗ ೬೫೫
ಪೃಥ್ವಿಯೆ ಅಂಗವಾದ ೬೪೯
ಫಲಪದ ಮುಕ್ತಿಯ ೬೦೭
ಫಲಪದವಿಯ ಬಯಸಿ ೪೫೮


## ಬ, ಭ


ಬಂಧನಕ್ಕೊಳಗಾದ ೨೬೪
ಬಚ್ಚಬರಿಯ ಬಯಲೊಳಗೊಂದು ೭೮೭
ಬಣ್ಣದ ಚರ್ಮದ ೨೬೧
ಬಣ್ಣವಿಲ್ಲದ ಪಕ್ಷಿ ೭೦೭
ಬಯಲ ಸ್ತ್ರೀಯಳ ೯೫೫
ಬಯಲು ಬಯಲು ೯೫೨
ಬಲ್ಲರೆ ಬಲ್ಲರೆಂಬೆನು ೫೫೩
ಬಲ್ಲವರು ಬೆಸಗೊಂಡಡೆ ೫೫೨
ಬಸವನ ನಾಮವು ೮೭೫
ಬಸವಣ್ಣನೆ ಗುರು ೮೭೪
ಬಹುಕ್ರಿಯೆಯ ೮೭೧
ಬಳಿಕ ನಿಯಮದ ೭೩೨
ಬಳಿಕೀ ಪ್ರಕಾರಮಾದ ೭೩೯
ಬಾಯೊಳಗೆ ಬಾಯನಿಕ್ಕಿ ೮೩೯
ಬಾರನೇತಕವ್ವಾ ೮೨೯
ಬಾರಯ್ಯ ಬಾರಯ್ಯ ೩೨೦
ಬಾರಯ್ಯ ಬಾರಯ್ಯ ೮೩೨
ಬಾರಯ್ಯ ಬಾರಯ್ಯ ೯೦೯
ಬಾಳೆಯ ಎಲೆಯ ೪೬೩
ಬೀಜದ ಮರೆಯಲ್ಲಿ ೨೫೧
ಬೀಜದಿಂದ ಹುಟ್ಟಿದ ೨೮೯
ಬೀಜದೊಳಗೆ ಅಂಕುರ ೭೮೩
ಬುದ್ಧಿಗೂಡದು ನಿದ್ರೆಬಾರದು ೮೨೦
ಬೇಕೆಂಬವನಲ್ಲವಯ್ಯ ೪೮೮
ಬ್ರಹ್ಮದೇವನಾದಡೆ ೫೧೬
ಬ್ರಾಹ್ಮಣನ ದರ್ಶನ ೩೫೬
ಬ್ರಾಹ್ಮಣನಾಗಲಿ ೪೨೫
ಭಕ್ತನ ನಡೆಶುದ್ಧ ೪೨೬
ಭಕ್ತನಾಗಬೇಕು ೪೦೧
ಭಕ್ತನಾದಡೆ ಚಿತ್ತ ೬೨೨
ಭಕ್ತನಾದಡೆ ನಿರ್ವಂಚಕ ೪೧೭
ಭಕ್ತನಾದಡೆ ಲಿಂಗ ೪೨೭
ಭಕ್ತಿಗೆ ಮುಖವಾದಾತ ೪೧೨
ಭಕ್ತಿಯ ಮರ್ಮವ ೪೧೮
ಭಕ್ತಿಯ ಸ್ಥಳಕುಳ ೩೯೭

ಭಯವಿಲ್ಲದ ಪ್ರಸಾದ ೬೭೫
ಭವಕ್ಕೆ ಬೀಜವಾದುದು ೨೬೮
ಭಾವವಿಲ್ಲದ ಬಯಲ ೪೪೮
ಭಾವವಿಲ್ಲದ ಬಯಲು ೯೫೯
ಭಾವವೇ ಬ್ರಹ್ಮವಾದ ೭೭೦
ಭಾಷೆಗಳ್ಳಗೇಕೋ ೯೧೨

**ಮ**

ಮಡದಿ ಮಕ್ಕಳು ೩೬೫
ಮಡುವಿನಗ್ಗಣೆ ೫೨೯
ಮತ್ತಂ ಶಿರಸ್ಸಿನ ೭೪೨
ಮತಿಗೆಟ್ಟೆನಯ್ಯ ೨೭೧
ಮತ್ತೆ ಕೇಳಿರೊ ೩೫೯
ಮನಕ್ಕೆ ಮನೋಹರ ೩೦೯
ಮನದಲ್ಲಿ ಆಸೆ ೪೬೬
ಮನದಲ್ಲಿ ಒಂದು ೭೯೫
ಮನದಲ್ಲಿ ನಂಬಿಗೆ ೪೨೯
ಮನದೊಡೆಯ ೫೮೬
ಮನ ಮಹಾಘನ ೮೯೬
ಮನವ ನಿಲಿಸಿ ೭೮೫
ಮನವು ಘನವ ೫೯೯
ಮನವೆಂಬ ಒರಳಿಗೆ ೯೦೮
ಮನವೆಂಬ ಮರ್ಕಟನು ೨೬೯
ಮನೆಗೆ ಬಂದ ೩೭೯
ಮಹದೈಶ್ವರ್ಯ ೩೨೬
ಮಹಾಂತನ ಕೂಡಿದ ೮೬೪
ಮಹೇಂದ್ರಜಾಲದಂತೆ ೩೬೬
ಮಾಡಬಾರದು ೫೪೪
ಮಾಡಲಾಗದು ಭವಿಯ ೫೪೨
ಮಾಡಿದ ಮಾಟವ ೬೦೦
ಮಾಡುವ ತನುವು ೪೫೦
ಮಾಡುವ ಭಕ್ತ ೪೪೬
ಮಾದಾರ ಚನ್ನಯ್ಯನ ೬೪೩
ಮಾತಿನಲ್ಲಿ ಕರ್ಕಶ ೪೭೪
ಮಾತಿನಲ್ಲಿ ಶುದ್ಧವಿಲ್ಲ ೮೦೦
ಮುಕ್ತಿಗೆ ಸದಾ ೭೨೪
ಮುಕ್ತಿಯ ಪಡೆವೆ ೪೩೧
ಮುನ್ನ ಪಡೆಯದೆ ೩೭೨
ಮುನ್ನ ಮಹಾನಂದಿನಿ ೩೩೨
ಮುನ್ನ ವಿಟ ಶ್ವೇತನು ೩೧೧
ಮುನ್ನ ಶ್ರೀಗುರುಸ್ವಾಮಿ ೩೦೩
ಮೂರ್ತಿಯಿಲ್ಲದ ಬಯಲು ೯೫೭
ಮೇರುವಿನ ಮಂದಿರ ೭೨೧
ಮೊಟ್ಟೆ ಮೊಟ್ಟೆ ಪತ್ರಿ ೪೬೦

**ಯ, ರ, ಲ, ವ**

ಯೋಗ ಯೋಗವೆಂದು ೭೨೮
ರಾಜಯೋಗದಲ್ಲಿ ೭೫೩
ರಾಜಯೋಗಾನುಸಂಧಾನ ೭೫೦
ರುದ್ರಾಕ್ಷಿಯೆಂದೊಡೆ ೩೩೫
ಲಿಂಗಕ್ಕೆ ಅರ್ಪಿಸಿದ ೫೩೬
ಲಿಂಗಕ್ಕೆ ಸಮರ್ಪಿಸಿದ ೬೦೨
ಲಿಂಗ ಘ್ರಾಣದಲ್ಲಿ ೬೬೩
ಲಿಂಗಭಿನ್ನ ಭಿನ್ನ ೮೧೧
ಲಿಂಗ ಜಂಗಮಕ್ಕೆ ೩೮೨
ಲಿಂಗದ ನಡೆಯಂತೆ ೭೯೭
ಲಿಂಗದ ನಡೆ ೬೮೯
ಲಿಂಗದೊಡನೆ ೯೧೧
ಲಿಂಗಪೂಜಕನಾದಡೆ ೩೯೬
ಲಿಂಗಪ್ರೇಮವುಳ್ಳ ೩೮೯
ಲಿಂಗಪ್ರೇಮಿಗಳನಂತ ೩೯೦
ಲಿಂಗಭಕ್ತನಾದ ೫೩೭
ಲಿಂಗವನರಿಯದ ೬೩೨
ಲಿಂಗಾಂಗ ಸಾಮರಸ್ಯವ ೮೮೫
ಲಿಂಗಾರ್ಚನೆಯ ೩೮೪
ಲಿಂಗಾರ್ಚನೆಯಿಂದ ೩೯೧
ವಿದ್ಯೆಯ ಬಹಳ ೩೭೦
ವಿರಕ್ತಂಗೆ ಕಾಮ ೮೬೯

ವಿರಕ್ತನೆನಿಸುವ ೮೬೮
ವಿರಕ್ತವಿರಕ್ತರೆಂದು ೫೭೨
ವಿಶ್ವತೋಮುಖ ೩೧೬
ವಿಶ್ವದೊಳಗೆಲ್ಲ ೬೯೫
ವಿಶ್ವಾಸನೋಟ ಜಾರಿದಡೆ ೬೧೯
ವಿಷಯವೆಂಬ ೨೬೦
ವೀರಶೈವ ಭಕ್ತ ೫೮೭
ವೇದಂಗಳಿಗಭೇದ್ಯ ೬೮೪
ವೇದಂಗಳು ನಿಮ್ಮ ೬೮೩
ವೇದಂಗಳು ನಿಮ್ಮ ೫೨೩
ವೇದವನೋದಿದ ೬೮೨
ವೇದ ಶಾಸ್ತ್ರ ಆಗಮ ೬೮೧
ವೇದಶಾಸ್ತ್ರಾಗಮ ೮೯೮
**ಶ, ಷ**
ಶರಣ ಗಮನಿಯಾದಡೆ ೮೮೦
ಶರಣನ ಕಂಗಳೆ ೮೪೩
ಶರಣನ ಚರಣದಲ್ಲಿ ೮೪೨
ಶರಣನ ತನುವೆ ೮೭೯
ಶರಣನಾದಡೆ ಮುರಿದ ೮೫೮
ಶರಣನಿರ್ದಲ್ಲಿ ೯೪೦
ಶರಣಭರಿತ ಶಿವನು ೫೧೧
ಶರಣರ ಸಂಗದಿಂದ ೮೪೬
ಶರಣಲಿಂಗಕ್ಕೆ ೮೮೯
ಶರಣಸ್ಥಲದ ೭೯೯
ಶಿವಂಗೆ ಐದು ೬೩೮
ಶಿವನ ಕೂಡಿರ್ಪ ೮೫೭
ಶಿವನ ಪ್ರಸಾದವ ೬೩೦
ಶಿವನೇ ಗುರುವೆಂದು ೬೧೮
ಶಿವನೆ ಗುರುವೆಂದು ೮೫೩
ಶಿವ ಪಾದೋದಕವ ೬೦೬
ಶಿವಭಕ್ತನೆನಿಸುವಾತ ೪೦೩
ಶಿವಭಕ್ತಿ ಶಿವಜ್ಞಾನ ೩೫೦
ಶಿವಮಂತ್ರವೆನಗೆ ೩೪೦
ಶಿವಶಿವಾ ಎಂದು ೩೧೦
ಶಿವಶಿವಾ ಎಂದು ೩೨೧
ಶಿವಶಿವಾ ಎಂದು ೩೪೪
ಶಿವಶಿವಾ ಎನ್ನ ಮನ ೪೧೯
ಶಿವಶಿವಾ ಎನ್ನ ಮನ ೪೬೧
ಶಿವಶಿವಾ ಎನ್ನಿರೊ ೩೫೧
ಶಿವಶಿವಾ ಏನೆಂಬೆ ೮೯೫
ಶಿವಶಿವಾ ನೀ ೫೭೮
ಶಿವಶಿವಾ ನೀವೆನ್ನ ೪೦೬
ಶಿವಶಿವಾ ಪ್ರಸಾದ ೬೨೧
ಶಿವಶಿವಾ ಮಹಾಪ್ರಸಾದ ೩೧೯
ಶಿವಶಿವಾ ಮಹಾಪ್ರಸಾದ ೫೬೪
ಶಿವಶಿವಾ ಮಹಾಪ್ರಸಾದ ೫೯೩
ಶಿವಶಿವಾ ಮಹಾಪ್ರಸಾದ ೬೦೩
ಶಿವಶಿವಾ ಶಿವಭಕ್ತ ೩೫೩
ಶೀಲವಂತ ಶೀಲವಂತ ೮೫೨
ಶೀಲ ಶೀಲವೆಂದು ೮೫೪
ಶುದ್ಧ ಪದ್ಮಾಸನದಲ್ಲಿ ೭೧೧
ಶುದ್ಧ ಸುಯಿಧಾನ ೬೨೦
ಶೈವ ಸಿದ್ಧಾಂತಿಗಳೆಂಬ ೫೦೫
ಶ್ರೀಗುರು ಕರುಣಿಸಿ ೮೦೮
ಶ್ರೀಗುರುವಿನ ೮೧೩
ಶ್ರೀಗುರುವಿನಿಂದಧಿಕರು ೬೪೬
ಶ್ರೀಗುರುವೆ ತಂದೆ ೪೨೩
ಶ್ರೀಗುರುಸ್ವಾಮಿ ೨೯೨
ಶ್ರೀಗುರುಸ್ವಾಮಿ ೫೩೮
ಶ್ರೀವಿಭೂತಿಯ ೩೨೯
ಶ್ರೇಷ್ಠ ಶ್ರೀಗುರು ೮೦೭
ಷಡೇಂದ್ರಿಯ ೫೦೬
ಷಡುವರ್ಗಂಗಳ ೫೭೦
**ಸ**
ಸಂಗನಬಸವಣ್ಣನಂತೆ ೩೯೪
ಸಂಗಲೇಸು ೫೪೬
ಸಂಚಲಗುಣವಳಿದು ೩೨೭

ಸಂದೇಹಿ ಸೂತಕಿಯಲ್ಲ ೮೮೧
ಸಂಸಾರದೊಳಗಿರ್ದ ೯೧೨
ಸಕಲಗಣಂಗಳು ೮೧೦
ಸಕಲಗಣಂಗಳು ೮೪೨
ಸಕಲ ಮೂರ್ತಿಯಾಗಿ ೯೭೫
ಸಕಲ ವ್ಯಾಪಾರವ ೯೭೩
ಸಕಲ ವಿಸ್ತಾರದ ೬೯೬
ಸಕಲ ವಿಸ್ತಾರದೊಳಗೆಲ್ಲ ೭೮೬
ಸಕಲ ವೇದಶಾಸ್ತ್ರಾಗಮ ೩೪೧
ಸಕಲ ಸಾಧನಂಗಳಿಲ್ಲದೆ ೨೫೧
ಸಕಲೇಂದ್ರಿಯಂಗಳ ೩೦೪
ಸಗುಣನಲ್ಲ ನಿರ್ಗುಣನಲ್ಲ ೮೯೯
ಸಚ್ಚಿದಾನಂದ ನಿತ್ಯ ೭೯೮
ಸಚ್ಚಿದಾನಂದ ಪರಶಿವನ ೩೭೮
ಸಚ್ಚಿದಾನಂದ ಸದ್ಗುರು ೭೯೦
ಸಟೆಯನಾಡದಾತ ೪೦೭
ಸತ್ ಚಿತ್ತಾನಂದ ೩೧೮
ಸತ್ಯದ ಮನೆಯಲ್ಲಿ ೪೭೭
ಸತ್ಯನೆಂದೆನಿಸಯ್ಯ ೪೦೯
ಸತ್ಯ ವಚನವ ೪೧೫
ಸತ್ಯ ವಚನವ ೫೫೫
ಸತ್ಯವ ನುಡಿಯದು ೭೨೪
ಸತ್ಯ ಸದಾಚಾರಿಯಯ್ಯ ೨೯೬
ಸತ್ಕಾಯಕದಿಂದ ತಂದ ೪೧೪
ಸತ್ಯಾಸತ್ಯವೆಂದು ೮೬೭
ಸತ್ತು ಚಿತ್ತು ಆನಂದ ೨೯೭
ಸತ್ತು ಹುಟ್ಟುವನಲ್ಲ ೪೭೦
ಸತ್ತು ಹೋಗುವರೆಲ್ಲ ೮೦೧
ಸದ್‌ಭಕ್ತನಾದಾತನು ೩೫೫
ಸದ್‌ಭಕ್ತರೇ ಎನ್ನ ೪೭೧
ಸದ್ಭಕ್ತರಾದವರು ೫೩೯
ಸದ್ಗುರು ಕಾರುಣ್ಯವ ೮೦೯
ಸದ್ಗುರು ಪ್ರಸಾದ ೨೪೭
ಸದ್ಭಕ್ತನ ಸಹಜ ೩೮೦
ಸಪ್ತಸಾಗರದಷ್ಟು ೬೦೫
ಸಲ್ಲರು ಸಲ್ಲರಯ್ಯ ೫೫೦
ಸರ್ವಗತ ಶಿವನೆಂದು ೫೧೭
ಸರ್ವಜಗದಲ್ಲಿ ೫೧೪
ಸರ್ವಜ್ಞನು ನೀನೆ ೬೯೩
ಸರ್ವಲೋಕೋಪಕಾರ ೩೨೮
ಸರ್ವಾಚಾರ ಸಂಪತ್ತು ೯೦೩
ಸಹಸ್ರದಳ ಕಮಲಮಧ್ಯ ೨೭೨
ಸಾಕಾರವಿಲ್ಲದ ಬಯಲು ೯೫೮
ಸಾಕುಮಾಡದು ೭೨೩
ಸಾಲೋಕ್ಯವಿದೆ ೩೧೨
ಸಾವಯವ ನಿರವಯ ೯೦೦
ಸಾಸಿರಕಂಬದ ೨೧೨
ಸಿಂಹದ ಮೊಲೆವಾಲು ೬೭೮
ಸಿರಿ ಬಂದೊದಗಿತ್ತೆಂದು ೩೬೪
ಸಿರಿವಂತರೆಂದು ೭೨೨
ಸುಖ ಬಂದಲ್ಲಿ ನಿಮ್ಮ ೫೭೬
ಸುಡು ಸುಡು ಈ ದೇಹದ ೭೬೨
ಸುರಚಾಪದಂತೆ ತೋರಿ ೩೬೨
ಸೂರ್ಯಮಂಡಲದಲ್ಲಿ ೨೭೬
ಸೊಕ್ಕಿದ ಜವ್ವನದ ೮೩೪
ಸೋಹಂ ಎಂದಡೆ ೪೭೦
ಸ್ವರ್ಗಕ್ಕೆ ಏಳು ೩೯೫
ಸೃಷ್ಟಿ ಸ್ಥಿತಿ ಪ್ರಳಯ ೫೯೬
ಸ್ಥಾವರವು ಜಂಗಮವು ೫೩೫
ಸ್ನೇಹ ಸಮರಸ ೪೩೭


## ಹ


ಹಗಲಿರುಳ್ಗಳಿಲ್ಲದಂದು ೭೪೮
ಹಗಲು ಹನ್ನೆರಡುತಾಸು ೮೩೧
ಹತ್ತು ದಿಕ್ಕಿನ ಒಳಹೊರಗೆ ೫೯೮
ಹರಹರಾ ಎಂದು ೫೯೪
ಹರಹರಾ ಎನ್ನ ೪೦೫
ಹರಿಕುಲದ ವಿಪ್ರರು ೩೭೩

ಹರಿನಯನವ ಚರಣ ೩೧೫
ಹರಿಯ ಹತ್ತು ಭವದಲ್ಲಿ ೨೬೩
ಹರಿವಿರಂಚಿಗಳಿಗ ೬೩೬
ಹರಿ ಹರಗೆ ಸರಿಯೆಂಬ ೫೧೮
ಹಲವು ವೇಷವ ೮೭೦
ಹಸಿವು ತೃಷೆ ೨೭೨
ಹಾಡಿದರೆ ಹಾಡುವೆ ೬೫೮
ಹಾಡಿದರೆ ಹಾಡುವೆ ೪೪೨
ಹಾಡಿರೋ ಜಿಹ್ವೆದಣಿಯದೆ ೩೧೨
ಹಾಡುವೆನಯ್ಯ ನಿಮ್ಮ ೫೮೨
ಹಾಲ ಹರವಿಯ ಮೇಲೆ ೫೫೬
ಹಿಂದಣ ಜನ್ಮದಲ್ಲಿ ೩೭೪
ಹಿಂದಣ ಜನ್ಮದ ೪೩೮
ಹಿಂದಣ ಶಂಕೆಯ ೯೪೧
ಹಿಂದೆ ಗುರುಭಕ್ತಿ ೩೨೩
ಹಿಡಿದುದ ಬಿಡುವವನಲ್ಲ ೪೭೨
ಹೀನಜಾತಿಯಲ್ಲಿ ೩೨೨
ಹುಲಿಯ ಬಾಯಲ್ಲಿ ೨೭೫
ಹುಸಿ ಕಳವು ೪೫೨
ಹೊನ್ನಿನಾಸೆ ಉಳ್ಳನ್ನಕ್ಕರ ೫೬೨
ಹೊನ್ನಿನಾಸೆಯ ಮಾಡುವ ೪೩೪
ಹೊನ್ನು ಬ್ರಹ್ಮನ ಹಂಗು ೫೬೩
ಹೊನ್ನೆನ್ನದು ಹೆಣ್ಣೆನ್ನದು ೯೧೬
ಹೊನ್ನೆನ್ನದು ಹೆಣ್ಣೆನ್ನದು ೪೩೩
ಹೊರಗಣ ಒಂಬತ್ತು ೭೨೨
ಹೊರಗೆ ಹೊನ್ನ ಬಿಟ್ಟೆ ೪೬೨

## ಸಿದ್ಧಮಲ್ಲಪ್ಪನ ವಚನ

**ಎ, ಕ**

ಎಡೆಯ ಲಿಂಗವನು ಬಿಟ್ಟು ೯೬೭
ಕವಿ ಕವಿಗಳೆಂದು ೯೬೯
ಕವಿ ಕವಿಗಳೆಂದು ೯೭೦

**ಜ, ನ**

ಜ್ಞಾನಗುರುವಿನ ೯೬೮
ನಾನಾಜನ್ಮಂಗಳ ೯೬೫

**ಪ, ವ, ಶ**

ಪೂರ್ವವನಳಿದು ೯೬೬
ವೈರಾಗ್ಯ ವೈರಾಗ್ಯ ೯೬೨
ಶಿವಯೋಗಿ ಶಿವಯೋಗಿ ೯೬೩
ಶಿವಯೋಗಿ ಶಿವಯೋಗಿ ೯೬೪

## ಹೇಮಗಲ್ಲ ಹಂಪನ ಹೇಮಗಲ್ಲ ಷಟ್‌ಸ್ಥಲ

**ಅ**

ಅಂಗಗುಣ ಸಂಸಾರಿಗೆ ೧೧೬೩
ಅಂಗದಮೇಲೆ ಲಿಂಗ ೧೨೦೪
ಅಂಗದೊಳಗಣ ೧೦೬೨
ಅಂಗದೊಳಗಣ ೧೦೫೫
ಅಂತರಂಗದ ೧೦೫೯
ಅಂತರಂಗದಲ್ಲಿ ೧೨೦೩
ಅಂದು ಆದಿಯಲ್ಲಿ ೧೨೬೫
ಅಂದು ಸಹಸ್ರಜನ್ಮ ೧೧೭೧
ಅಂಧಕ ಅಂಧಕರು ೧೧೯೧
ಅಕಟಾ ರಾಟಾಳದ ೧೧೩೮
ಅಗಜೇಶ ಅಜಹರಿ ೯೭೫
ಅಗ್ನಿ ಆಕಾಶವ ೯೮೮
ಅಗ್ನಿಗೆ ಮೈಯೆಲ್ಲ ಮುಖ ೧೦೫೧
ಅಗ್ನಿಯೊಳಗಣ ಅಗ್ನಿ ೯೯೩
ಅಜ್ಞಾನ ಕುಕರ್ಮ ೧೨೬೨
ಅತ್ತಿಯ ಹಣ್ಣಾಗಿ ೧೧೬೨
ಅರ್ಥ ಪ್ರಾಣ ಅಭಿಮಾನ ೧೧೬೪

ಅನ್ನ ಉದಕದದೆಸೆಯಿಂದ ೧೦೪೪
ಅನ್ನದಗೊಡವಿಲ್ಲದಾತಂಗೆ ೧೦೯೨
ಅನ್ಯದೇಹಿಯೆಂದು ೧೦೪೮
ಅನ್ಯವಿಷಯ ೧೧೦೩
ಅನಾದಿ ಆದಂದು ೧೦೦೯
ಅನಾದಿ ಪರಶಿವನ ೧೦೧೩
ಅನಾದಿವಿಡಿದು ಆದಿ ೧೦೦೬
ಅಪ್ಪು ಆಕಾಶವ ೯೮೯
ಅಪ್ಪುವಿನೊಳಗಣ ೯೯೪
ಅರಣ್ಯದೊಳಗೊಂದು ೧೦೨೮
ಅರಿಗಳಾರುಮಂದಿ ೧೦೭೨
ಅರಿಷಡುವರ್ಗವೆಂದೆಂಬ ೧೦೭೧
ಅರಿಷಡುವರ್ಗವೆಂಬ (ಸ್ವ) ೧೦೮೫
ಅಲೆಯ ಮನೆ ೧೦೩೪
ಅಷ್ಟತನುಕೋಣೆಯ ೧೦೬೦
ಅಷ್ಟಾವರಣದಲ್ಲಿ ೧೨೫೭
ಅಹೋ ನಿಲ್ಲಿ ನಿಲ್ಲಿ ೧೦೮೮

**ಆ**

ಆಕಾರವಿಲ್ಲದಂದು ೧೦೦೮
ಆಕಾಶದೊಳಗಣ ೯೯೧
ಆದಿ ಇದ್ದಂದು ನೀನೆ ೧೦೦೩
ಆನೆಯ ನುಂಗಿದ ಹುಲಿ ೧೦೮೩
ಆನೆಯ ಹೆಣಕ್ಕೆ ೧೧೫೮
ಆರೆ ನೀನಾರೆ (ಸ್ವ) ೧೦೪೧
ಆಸತ್ತೆ ಸಂಸಾರ ೧೧೪೧
ಆಸೆಬದ್ಧವು ಬಿಡದು (ಸ್ವ) ೧೧೨೭
ಆಸೆಮಾಡದಿರು ೧೧೩೩
ಆಸೆಮಾಡದಿರು (ಸ್ವ) ೧೧೨೮
ಆಸೆಯಾಗಿ ನಿಂದು ೧೦೪೦
ಆಸೆಯಾಮಿಷವೆಂಬ ೧೧೧೮
ಆಸೆಯೆಂಬುದು ೧೧೨೦

**ಇ**

ಇಂದ್ರನ ಮೈಯು ೧೦೨೫
ಇನ್ನೇವೆ ಇನ್ನೇವೆನಯ್ಯ ೧೧೩೫
ಇರಿಪಾಕಳವೆರಡು ೧೧೬೦
ಇಷ್ಟಲಿಂಗದ ವೀರಶೈವ ೧೨೭೩
ಇಷ್ಟಲಿಂಗವ ಮರೆದು ೧೨೧೮

**ಉ**

ಉದಯವಾಯಿತೆಂದು ೧೧೧೨
ಉರುಬಡತನಕ್ಕೆ ವಾಳಿ ೧೦೯೪
ಉಳಿ ಬಾಚಿಂಗೆ ೧೧೧೧

**ಎ, ಏ, ಐ**

ಎಂದಾದರೂ ಸಂಸಾರ ೧೧೪೪
ಎನ್ನ ಪಿಂಡದೊಳು ೧೦೧೧
ಎರಡು ಹೆಸರಿನ ೯೯೭
ಎಲ್ಲಿ ನೋಡಿದರೆನ್ನಯ ೧೧೦೮
ಏನ ಹೇಳುವೆನಯ್ಯಾ ೧೧೩೪
ಏನು ಸುಕೃತದ ೧೧೬೯
ಏನೆಂದು ಉಪಮಿಸುವೆನಯ್ಯಾ ೧೨೪೭
ಏಳು ವ್ಯಸನಗಳೆಂಬ ೧೦೮೭
ಏಳುಸಮುದ್ರ ಉಕ್ಕಿ ೧೦೯೩
ಐದುಮುಖದಂಗನೆಗೆ ೧೦೦೦

**ಒ**

ಒಂದೆಸೆಯಲ್ಲಿ ಹುಲಿ ೧೦೨೭
ಒಡಲಾಸೆಗೆ ಅನ್ಯರ ೧೧೩೨
ಒಡವೆ ವಸ್ತು ಧನ ೧೦೭೭
ಒರಳೊನಕಿಯ ೧೦೨೬

**ಕ**

ಕಂಡೆನೆನ್ನ ಕರದೊಳು ೧೨೦೧
ಕಂಡೆನೊಂದು ಸ್ವಪನವ (ಸ್ವ) ೧೦೧೭
ಕಣ್ಗಾಣದೆ ಲೋಕ (ಸ್ವ) ೧೦೪೯
ಕಣ್ಗೆಡಿಸಿತ್ತು ಮಾಯಾ ೧೦೪೭
ಕರಸ್ಥಲದಲಿಂಗ ೧೨೧೫
ಕರಿಗಳ ಹೊಯಿದಾಟ ೧೦೬೯
ಕರಿಯ ಕಾಲೊಳಗೆ ೧೦೬೩

ಕಾಮ ಕ್ರೋಧ ಲೋಭ ೧೦೭೩
ಕಾಮಧೇನುವಲ್ಲದೆ ೧೧೩೧
ಕಾಮನ ಸುಟ್ಟು ೧೨೩೦
ಕಾಮವಿಲ್ಲದಾತ ೧೦೮೧
ಕಾಮವು ಲಿಂಗಮುಖ ೧೦೮೨
ಕಾಮವುಳ್ಳವ ಭಕ್ತನಲ್ಲ ೧೦೮೦
ಕಾಮವೆಂಬ ಆನೆಯ ೧೦೭೪
ಕಾಲಸಂಹರ ಕಾಮವಿದೂರ ೯೭೯
ಕಾಳರಕ್ಕಸಿಯ ಕೈಯೊಳಿಪ್ಪ ೧೧೨೪
ಕುಣಪ ಕೂಗಡಕಿಂದ ಮುನ್ನ ೧೧೫೪
ಕುಲಛಲರೂಪ ೧೦೬೪
ಕುಲದಲ್ಲಿ ಶಿವಕುಲ ೧೦೬೮
ಕುಲಮದಕ್ಕೆ ಹೋರಾಡಿ ೧೦೬೭
ಕೂಪದ ತಡಿಯ ಹುಲ್ಲ ೧೦೨೯
ಕೆಚ್ಚಲ ಕಚ್ಚಿದ ಉಣ್ಣೆ ೧೧೪೨
ಕೈಲಾಸವೆಂಬುದು ಬೇರಿಲ್ಲ ೧೨೧೩
ಕೊಡುವವ ಮಾನವನೆಂದು ೧೧೨೯
ಕೊಡುವಾತ ಶಿವ ೧೨೨೪
ಕೋಣನ ಕೊರಳಲ್ಲಿ ೧೦೩೧
ಕ್ಷೀರವನೊಲ್ಲದೆ ಹಂಸ ೧೧೩೬


**ಗ, ಘ**


ಗಗನದ ತಮವ ೧೧೬೬
ಗಜಾಸುರ ಸಂಹರ ೯೭೮
ಗಳಿಗೆಯ ಮೇಲೆ ಗಾಳಿ ೧೦೩೮
ಗುದದಲ್ಲಿ ಆಧಾರಚಕ್ರ ೧೨೫೩
ಗುರುಕರುಣದ (ಸ್ವ) ೧೨೨೯
ಗುರು ಕರುಣಾಕರ (ಸ್ವ) ೧೧೯೬
ಗುರು ಕರುಣಿಸೆ ೧೨೦೨
ಗುರುಕೃಪೆಯಿಲ್ಲದವ ೧೨೬೧
ಗುರುದೀಕ್ಷೆಯ ಪಡೆದು ೧೧೭೮
ಗುರುದೀಕ್ಷೆಯಿಲ್ಲದ ೧೧೮೧
ಗುರುದೈವದ ಮುಂದ ೧೧೯೫
ಗುರುನರನೆಂದು ೧೧೮೦
ಗುರುಲಿಂಗಜಂಗಮ ೧೨೫೮
ಗುರುಲಿಂಗಜಂಗಮ ೧೨೭೦
ಗುರುಲಿಂಗವಿದ್ದ ಊರು ೧೧೮೬
ಗುರುವ ನರನೆಂದು ೧೧೭೪
ಗುರುವಾರಿಯದವನೆಂದು ೧೧೮೭
ಗುರುವಾಗಿ ಎನ್ನ ೧೨೬೦
ಗುರುವಾದಾತನು ೧೨೫೯
ಗುರುವಿನಲ್ಲಿ ಗುಣ ವಿದ್ಯೆ ೧೧೮೫
ಗುರುವಿನಲ್ಲಿ ಲಿಂಗ ೧೨೬೭
ಗುರುವೆಂಬೆರಡಕ್ಷರ ೧೧೭೫
ಗುರುವೆ ಬೇರೆ ೧೧೭೧
ಗುರುವೆ ಸುರತರುವೆ ೧೧೬೮
ಗುರು ಶಿಷ್ಯ ಸಂಬಂಧಕ್ಕೆ ೧೧೯೦
ಗುರು ಸಂಸಾರಿ ೧೧೮೨
ಗುರು ಸಹಜವಾಗಿರೆ ೧೧೮೩
ಗುರುಹಸ್ತದಿಂದ ೧೧೭೯
ಗೂಡಿನೊಳಗಿಪ್ಪ ಪಕ್ಷಿಗೆ ೧೧೧೬
ಘಟ್ಟ ಬೆಟ್ಟದ ೧೦೧೫


**ಚ, ಛ, ಜ**


ಚತುರ್ವಿಂಶತಿತತ್ವ ೯೮೬
ಚಿನ್ಮಯ ಚಿದ್ರೂಪ ೯೭೪
ಛಲಮದವೆಂಬುದು ೧೦೬೬
ಜಗದೊಳಗೆ ಜಗಹುಟ್ಟಿ ೯೯೮
ಜಗವಿದ್ದಂದು ನೀನೆ ೧೦೦೪
ಜನನ ಭಯದ ೧೨೩೧
ಜಪಿಸಿರೋ ಜಪಿಸಿರೋ ೧೨೫೫
ಜಯ ಜಯ ನಿತ್ಯ ೯೭೨
ಜಯ ಜಯ ಪರಮೇಶ (ಸ್ವ) ೯೮೧
ಜಲದ ಮರೆಯಲ್ಲಿಪ್ಪ ೧೦೧೦
ಜ್ಯೋತಿ ಇದ್ದ ಗೃಹಕ್ಕೆ ೧೨೧೪
ಜ್ಯೋತಿಯಿಲ್ಲದ ೧೦೪೬
ಜ್ಞಾನಗುರುವಿಗೆ ೧೧೯೪

## ತ


| | |
|---|---|
| ತನುಲಿಂಗವೆಂದೆಂಬ | ೧೨೦೫ |
| ತನುವ್ಯಸನ | ೧೦೮೯ |
| ತನುವ್ಯಸನವೆತ್ತಿದಲ್ಲಿ | ೧೦೯೦ |
| ತನುವಿನ ಹಂಬಲ | ೧೦೯೧ |
| ತನುವೆಂಬ ಹೊಲದೊಳು | ೧೧೨೩ |
| ತೆರಣಿಯ ಹುಳು | ೧೧೫೩ |
| ತ್ರಿಪುಂಡ್ರ ತ್ರಿದೇವರು | ೧೨೩೫ |
| ತ್ರಿಪುರ ಸಂಹರ | ೯೭೬ |
| ತ್ರಿವಿಧ ತನುವಿಗೆ | ೧೧೯೮ |


## ದ, ಧ


| | |
|---|---|
| ದಶವಾಯುಗಳು | ೧೦೫೩ |
| ದೇವರದೇವ | ೯೮೦ |
| ದ್ಯುಮಣಿ ಇಲ್ಲದ | ೧೧೦೪ |
| ಧರಣಿಯನಾಳುವ | ೧೦೩೨ |
| ಧರಿಸಿರಣ್ಣ ಶ್ರೀವಿಭೂತಿ | ೧೨೪೨ |
| ಧರಿಸಿರೋ ಶ್ರೀರುದ್ರಾಕ್ಷಿ (ಸ್ವ) | ೧೨೪೬ |
| ಧರೆಯಾಗಿ ನಿಂದು | ೧೦೩೦ |
| ಧ್ಯಾನಕೆಲ್ಲ ಮೂಲ | ೧೧೮೯ |


## ನ


| | |
|---|---|
| ನಗಪೂರ ಠಾಣ್ಯದ | ೧೦೩೫ |
| ನಡೆಯಲಾರದ ಹೆಳವ | ೧೧೫೭ |
| ನಕಾರ ನರಜನ್ಮದ | ೧೨೫೧ |
| ನಿರಾಕಾರ ಪರಬ್ರಹ್ಮ | ೧೨೧೦ |
| ನಿರಾಕಾರಲಿಂಗವಿಡಿದು | ೧೦೦೭ |
| ನೀರ ನೆಳಲ ಮಧ್ಯದಲ್ಲಿ | ೧೧೧೫ |
| ನೀರ ಮಧ್ಯೆ | ೧೦೧೪ |
| ನುಡಿವೆಡೆಯಲ್ಲಿ | ೧೦೭೬ |
| ನೆತ್ತಿಯಲ್ಲಿ ಶ್ರೀವಿಭೂತಿ | ೧೨೩೬ |
| ನೆನೆವ ಜಿಹ್ವೆಗೆ | ೧೦೭೫ |
| ನೆಲೆಯನರಿಯದ | ೧೧೩೭ |
| ನೊಂದೆನೀ ಮನದಿಂದಲಿ | ೧೧೦೭ |


## ಪ


| | |
|---|---|
| ಪಂಕದಲ್ಲಿ ಬಿದ್ದ ಪಶು | ೧೦೨೨ |
| ಪಂಕದೊಳು ಬಿದ್ದ ಪಶು | ೧೧೪೦ |
| ಪಂಚಭೂತಂಗಳೆ | ೯೮೫ |
| ಪಂಚಾಕ್ಷರವೆ | ೧೨೫೨ |
| ಪಂಚೇಂದ್ರಿಯೆಂಬ | ೧೦೯೭ |
| ಪಕ್ಕವಿಲ್ಲದ ಹಕ್ಕಿ | ೧೧೧೪ |
| ಪಟ್ಟವ ಕಟ್ಟಿದ | ೧೧೯೩ |
| ಪರಬ್ರಹ್ಮ ಪರವಸ್ತು | ೯೮೪ |
| ಪರಮಾರ್ಥ ಪರಬ್ರಹ್ಮ | ೯೭೩ |
| ಪರುಷ ಮನೆಯೊಳಿರುತಿರೆ | ೧೨೧೬ |
| ಪಶುವಿನ ಮುಂದೆ | ೧೦೨೩ |
| ಪಿಂಡ ಬ್ರಹ್ಮಾಂಡವ | ೯೮೨ |
| ಪಿಂಡವಾಯಿತ್ತು (ಸ್ವ) | ೧೦೦೧ |
| ಪಿಂಡಾಂಡ ಕಿರಿದಲ್ಲ | ೯೮೩ |
| ಪಿಂಡಾಂಡವ ನಿರ್ಮಿಸಿದ | ೧೦೦೨ |
| ಪುಣ್ಯ ಫಲಕೆ ಬೀಜ | ೧೨೪೮ |
| ಪುರುಷನಿಂದ ಸತಿ | ೧೧೮೪ |
| ಪೃಥ್ವಿ ಆಕಾಶವ | ೯೯೦ |
| ಪೃಥ್ವಿಯೊಳಗಣ ಪೃಥ್ವಿ | ೯೯೫ |


## ಬ, ಭ


| | |
|---|---|
| ಬಂಧನ ಸಂಸಾರ (ಸ್ವ) | ೧೧೬೫ |
| ಬಡವನೆಡವಿ ಧನಕಂಡಂತೆ | ೧೧೯೯ |
| ಬಣ್ಣಪರಳವೆ ಶ್ರೀ ಪಂಚಾಕ್ಷರಿ | ೧೨೫೬ |
| ಬರುತ ಬರುತ ಅರಣ್ಯ | ೧೨೦೬ |
| ಬಲೆಯೊಳಗಣ ಅನುಮಿಷ | ೧೦೨೧ |
| ಬಲ್ಲೆನೆಂಬುವರ ಭ್ರಾಂತಿ | ೧೧೫೦ |
| ಬಸವಣ್ಣ ಶ್ರುತಿಸಿದ | ೧೨೬೮ |
| ಬಸುರಿಲ್ಲದ ಬಯಕೆ | ೧೦೬೧ |
| ಬೀರ ಜಟ್ಟಿ ಮೈಲಾರ | ೧೧೯೨ |
| ಬೆಟ್ಟದಷ್ಟು ಕರ್ಮ | ೧೨೩೩ |
| ಬೆಳಗಿನೊಳು ಮಹಾ | ೧೦೧೨ |
| ಬ್ರಹ್ಮ ವಿಷ್ಣು ರುದ್ರ | ೧೦೦೫ |

ಭಕಾರ ಭವಬಂಧನ ೧೨೩೯
ಭಕ್ತಿಯಿಲ್ಲದೆ ಗುರು ೧೨೭೧
ಭವಿ ಭಕ್ತರೆಂಬೆರಡು, ೧೨೨೦
ಭಸಿತದ ಮೇಲೆ ೧೨೩೮
ಭಸಿತವಿದು (ಸ್ವ) ೧೨೪೧

**ಮ**

ಮಂತ್ರವ ಬಲ್ಲೆವೆಂದು ೧೨೫೪
ಮರ್ಕಟ ಮದ್ಯಪಾನವ ೧೦೪೫
ಮಣಿಮಾಡದೊಳಡಗಿಹ ೧೨೦೯
ಮದ ಎಂಟರೊಳು (ಸ್ವ) ೧೦೭೦
ಮನವಿಕಾರ ಸುಟ್ಟವದನು (ಸ್ವ) ೧೧೧೭
ಮನವು ಮಹಾದೇವ ೧೦೫೭
ಮನೆ ಮಡದಿ ೧೧೫೧
ಮಾನಸ ವಾಚಿಕ ೧೧೧೯
ಮಾಯದ ಮರಣ ೯೯೬
ಮಾಯದ ಸಂಸಾರ ೧೧೪೩
ಮಾಯಾತಮಂಧವೆಂಬ ೧೦೪೩
ಮಾಯಾತಮಂಧವೆಂಬ ೧೦೪೨
ಮಾಯಾಪಾಶವದಾರನೂ ೧೦೨೪
ಮಾರಮಥನ ೯೭೭
ಮುಂಡದ ಮೇಲಣ ೧೨೧೧
ಮುಂಡವ ಹೊಂದವ ೧೦೧೬
ಮುಂಡೆಗೆ ಮುತ್ತೈದೆ ೧೧೫೬
ಮುಂದೆ ಮಾಡಿದ ೧೨೨೫
ಮೂರು ಮುಖದ ಪಕ್ಷಿ ೧೨೨೫
ಮೇಷನ ದನಿಗೇಳಿ ೧೦೯೯
ಮೊಲನ ಕಂಡರೆ ೧೧೦೦

**ಯ, ರ, ಲ, ವ**

ಯತಿಗಳು ಆಸೆ ೧೧೨೩
ಯೋನಿಯಲ್ಲಿ ಹುಟ್ಟಿ ೧೧೪೬
ರಕ್ಷಿಗೆ ಒತ್ತೆಯ ೧೦೩೬
ರಾಜಂಗೆ ಮಂತ್ರಿ ೧೧೦೬
ಲಿಂಗಕ್ಕೆರಗದೆ ೧೨೨೧
ಲಿಂಗವ ಧ್ಯಾನಿಸುವನ ೧೨೧೨
ಲಿಂಗಾಸಕ್ತಂಗೆ ೧೧೨೬
ವನದೊಳಿಪ್ಪ ಕಪಿ ೧೧೧೩
ವಾಯು ಆಕಾಶವ ೯೮೭
ವಾಯು ಮುಖದ (ಸ್ವ) ೧೦೫೪
ವಾಯುವಿನೊಳಗಣ ೯೯೨
ವಾರಿಯಿಲ್ಲದ ಕೆರೆಗೆ ೧೧೩೦
ವಿಕಾರ ಈ ಜನ್ಮದ ೧೨೪೦
ವಿಕಾರದೊಳು ವಿಕಾರ ೧೧೦೫
ವೇದಕ್ಕೆಯೂ ಮುಖ್ಯ ೧೨೩೪
ವೇದವನೋದಿ ೧೦೫೮
ವೇದ ಶಾಸ್ತ್ರ ಪುರಾಣಾಗಮ ೧೦೫೬
ವೃಥಾ ಸತಿಸುತಪಿತ ೧೦೭೯
ವ್ಯಸನವೇಳೆಂಬ ೧೦೮೬

**ಶ, ಸ, ಹ**

ಶಕ್ತಿಸಾಧನೆಯ ೧೦೧೯
ಶರಧಿಯನಾರಾಧಿಸಿದರೆ ೧೧೯೭
ಶಿರದೊಳು ಧರಿಸಲು ೧೨೪೪
ಶಿಲೆ ಮೌಕ್ತಿಕ ೧೨೪೫
ಶಿವಂಗೂ ಶಿವಭಕ್ತಂಗೂ ೧೨೬೬
ಶಿವಗುರುವೆಂದು ೧೨೬೯
ಶಿವ ಪೂಜೆಯ ೧೨೭೨
ಶಿವಾಚಾರ ಸಂಪನ್ನನಾಗಿ ೧೨೧೯
ಶೂಲದ ಮೇಲಣ ೧೦೯೫
ಶೈವರು ಕಟ್ಟಿದ ೧೨೨೩
ಶ್ರೀ ಪಂಚಾಕ್ಷರಿಯ ೧೨೪೯
ಶ್ರೀ ಪಂಚಾಕ್ಷರಿಯುಳ್ಳ ೧೨೫೦
ಶ್ರೀ ವಿಭೂತಿಯಿಲ್ಲದವನ ೧೨೩೭
ಶ್ರೋತ್ರ ತ್ವಕ್ಕು ನೇತ್ರ ೧೦೯೮
ಸಂಸಾರ ಸುಖಕ್ಕೆ ೧೧೫೦
ಸದ್ಯೋಜಾತ ವಾಮದೇವ ೧೧೭೬
ಸಪ್ತವ್ಯಸನವೆಂಬ (ಸ್ವ) ೧೦೯೬
ಸರ್ಪ ಕಡಿದು ಸತ್ತ ೧೧೦೨

ಸರ್ವದೇವ ಪಿತ ೧೨೨೭
ಸರ್ವರಲ್ಲಿ ಹುಸಿಯ ೧೧೮೮
ಸಹಸ್ರ ಲಕ್ಷ ದ್ರವ್ಯ ೧೧೨೨
ಸಾಗರದೊಳಿಪ್ಪ ಊರಿಂಗೆ ೧೦೩೯
ಸಾಸುವೆಯ ಮೇಲೆ ೧೧೬೧
ಸೊಂಡಿಲ್ಲದಾನೆ ೧೦೮೪
ಸ್ಥೂಲದಲ್ಲಿಪ್ಪುದೆನ್ನಯ ೧೧೦೯
ಹಂಸೆಯ ಪಂಜರವ ೯೯೯
ಹಡಗ ಹರಿಗೋಲ ೧೧೬೭
ಹತ್ತುಘಾಯಿ ಹರಿದಾಡಿ ೧೦೫೦
ಹರ ತ್ರಿಪುರದಹನದಲ್ಲಿ ೧೨೪೩
ಹರನಿಂದೆ ಗುರುನಿಂದೆ ೧೧೦೧
ಹರಲಿಂಗಕೆ ಹರಿ ಅಜಾಸುರ ೧೨೨೬
ಹರಸ್ರಾವದಲ್ಲಿ ಹುಟ್ಟಿ ೧೧೭೭
ಹರಿಣ ಪಾದ ೧೧೪೭
ಹರಿಯ ನಯನ ೧೨೨೮
ಹರಿ ಸುರ ಬ್ರಹ್ಮರ ೧೦೧೮
ಹಲವು ಜನ್ಮದ ೧೨೩೨
ಹಲವು ತರುಗಿರಿ ೧೧೭೩
ಹಲವು ಹಡಗ ೧೨೬೩
ಹಸಿಹಂದರದಿ ೧೨೧೭
ಹಳ್ಳದೊಳು ತೇಲಿ ೧೧೫೯
ಹಳ್ಳ ಮೇರೆದಪ್ಪಿದರೆ ೧೧೧೦
ಹಾಳೂರೊಳಗಣ ೧೦೩೭
ಹಿಂಗದೆನ್ನಯ ಮನಸು (ಸ್ವ) ೧೨೬೪
ಹಿಂದಣ ಜನ್ಮದಲ್ಲಿ ೧೧೩೯
ಹಿಂದೇನು ಸುಕೃತವ ೧೧೭೦
ಹುಟ್ಟಿದ ಮುನ್ನ ೧೨೦೭
ಹುಟ್ಟಿದಂದು ತನುವ ೧೨೨೨
ಹುಟ್ಟಿದ ಮಾನ್ಯರೆಲ್ಲ ೧೦೦೨
ಹುಟ್ಟಿದ ಶಿಶುವಿಗೆ ೧೨೦೮
ಹುಲಿಯ ಬಾಯೊಳು ೧೦೨೦
ಹೆಣ್ಣಿನ ಮುದ್ದುಮುಖ ೧೧೪೮
ಹೆಣ್ಣು ಗಂಡು ಕೂಡಿ ೧೦೩೩
ಹೆಳವನಿದ್ದೆಸೆಗೆ ೧೨೦೦
ಹೆಳವರ ನಡುವೆ ೧೧೪೫
ಹೊತ್ತು ಹೋಗಿ ೧೧೫೫
ಹೊನ್ನಿನಾಸೆ ೧೧೪೯
ಹೊನ್ನು ಹೆಣ್ಣು ೧೦೭೮
ಹೊಲೆಯೊಳು ಹುಟ್ಟಿ ೧೦೬೫


■■

# ಕಠಿಣ ಪದಕೋಶ

ಅ

ಅಂಗಜ– ಕಾಮ
ಅಂಗುಷ್ಠ– ಬೆರಳು
ಅಂಜನಗಿರಿ– ಪಶ್ಚಿಮಾದ್ರಿ
ಅಂಡ– ತತ್ತಿ
ಅಂಡಲೆ– ಗೋಳಾಟ, ತೊಂದರೆ
ಅಂಬರ– ಆಕಾಶ
ಅಂಬುಧಿ– ಸಮುದ್ರ
ಅಕಳಂಕ– ಕಲಂಕರಹಿತ
ಅಗ– ಪರ್ವತ
ಅಗಜೆ– ಪಾರ್ವತಿ
ಅಗಜೇಶ– ಶಿವ
ಅಗಮ್ಯ– ತಿಳುವಳಿಕೆಗೆ ನಿಲುಕದ
ಅಗ್ಘವಣಿ– ಪೂಜೆಯ ನೀರು
ಅಘ– ಪಾಪ
ಅಜ– ಬ್ರಹ್ಮ
ಅಜಶಿರಪಾತ್ರ– ಬ್ರಹ್ಮಕಪಾಲ
ಅಟ್ಟುಳಿ– ತೊಂದರೆ
ಅಡರೇರಿ– ಒತ್ತಿ ಏರಿ, ರಭಸದಿಂದ ಬಂದು
ಅಡಿಯಿಡು– ಕಾಲಿಡು
ಅಡ್ಡ– ಒಂದು ನಾಣ್ಯ ವಿಶೇಷ
ಅಣಲು– ಬಾಯಿಯ ಒಳಭಾಗ, ದವಡೆ
ಅರ್ತಿ– ಪ್ರೀತಿ
ಅರ್ತು– ಅರಿತು, ತಿಳಿದು
ಅನಲಾಕ್ಷ– ಉರಿಗಣ್ಣ, ಶಿವ
ಅನಾಹತಚಕ್ರ– ಹೃದಯದಲ್ಲಿರುವ ಚಕ್ರ
ಅನಿಮಿಷ– ಎವೆಮುಚ್ಚದೆ ನೋಡುವ
ಅನಿಲ– ಗಾಳಿ
ಅನುವು– ಆಸ್ಪದ, ಅವಕಾಶ
ಅಪಾತ್ರದಾನ– ಶಿವಭಕ್ತರಲ್ಲದವರಿಗೆ ಮಾಡಿದ ದಾನ
ಅಪ್ಪು– ನೀರು
ಅಬ್ಧಿ– ಸಮುದ್ರ
ಅಭವ– ಶಿವ
ಅಭಿಮುಖ– ಎದುರಾಗಿ
ಅಮಲ– ಮಲರಹಿತ, ಶುಭ್ರ
ಆಮಳಕ– ನೆಲ್ಲಿಕಾಯಿ
ಅಮೇಧ್ಯ– ಹೇಸಿಕೆ
ಅರತಿರು– ಆರಿರು, ಒಣಗಿರು
ಅಲಗು– ಕತ್ತಿ
ಅವಿರಳ– ದಟ್ಟ, ಬಿಟ್ಟೂಬಿಡದೆ, ಗಾಢ
ಅಷ್ಟಮೂರ್ತಿ– ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ, ಚಂದ್ರ, ಸೂರ್ಯ, ಶಿವ
ಅಷ್ಟಾಂಗುಲ– ಎಂಟು ಬೆರಳು
ಅಷ್ಟಾಷಷ್ಠಿ– ಎಂಬತ್ತಾರು
ಅಸನ– ಅಶನ, ಅನ್ನ
ಅಸಿಯ– ಸಣ್ಣ
ಅಸು– ಜೀವ, ಪ್ರಾಣ
ಅಳವಡು– ಸಿದ್ಧವಾಗು
ಅಳವು– ಸಾಮರ್ಥ್ಯ
ಅಳಿಯಾಸೆ– ಕೀಳು ಆಸೆ, ಸಣ್ಣ ಆಸೆ

ಆ

ಆಚಮನ– ಅಂಗೈಗುಳಿಯಲ್ಲಿ ಶುದ್ಧೋದಕವನ್ನು ಮಂತ್ರ ಪೂರ್ವಕವಾಗಿ ಕುಡಿಯುವುದು
ಆಜ್ಞಾಚಕ್ರ– ಹಣೆಯಲ್ಲಿರುವ ಚಕ್ರ
ಆಧಾರಚಕ್ರ– ಗುದದಲ್ಲಿರುವ ಚಕ್ರ
ಆಧಿ– ದುಃಖ, ಸಂಕಟ
ಆಮ್ಲ– ಹುಳಿ
ಆಯಗಾರ– ಪೇಚುಬಲ್ಲವ
ಆರೂಢ– ಜ್ಞಾನಿ, ಯೋಗಿ

ಆಲಯ–ಮನೆ
ಆಲವಟ್ಟ–ಬೀಸಣಿಗೆ
ಆಲಿ–ರೆಪ್ಪೆ, ದೃಷ್ಟಿ
ಆಲೆಯಮನೆ–ಕಬ್ಬಿನಗಾಣ ಆಡುವ ಸ್ಥಾನ.
ಆಸನ–ಸ್ಥಾನ
ಆಸ್ಯ–ಮುಖ

**ಇ, ಈ**

ಇಮ್ಮನ–ಎರಡುಮನಸ್ಸು, ಚಾಂಚಲ್ಯ
ಈರೇಳು–ಹದಿನಾಲ್ಕು
ಈಳಗಾರ–ಹೆಂಡ ಇಳಿಸುವವ, ಒಂದು ಜಾತಿ

**ಉ, ಊ**

ಉಚ್ಛಿಷ್ಟ–ಎಂಜಲು
ಉಡುಪತಿ–ಚಂದ್ರ
ಉದಕ–ನೀರು
ಉದಮದ–ಮದೋನ್ಮತ್ತ, ಏರುಜವ್ವನ
ಉದ್ದಂಡ–ಭೀಕರ
ಉದ್ಭಿಜ–ಭೂಮಿಯಲ್ಲಿ ಹುಟ್ಟುವ ಜೀವಿಗಳು
ಉನ್ಮನಿ–ಮಾನಸಿಕ ಸ್ತರ, ಬ್ರಹ್ಮರಂಧ್ರ ಪ್ರದೇಶದ ಮೇಲುಭಾಗ
ಉಪಾಧಿ–ಜಂಜಡ, ಸಂಸಾರ, ತೋರಿಕೆ
ಉಪಾಧಿಕೆ–ವಂಚನೆ
ಉಭಯಹಸ್ತ–ಎರಡೂ ಕೈ
ಉಮ್ಮಾಯ ಉತ್ಸಾಹ
ಉಯ್ಯಾಲೆ–ತೂಗುವ ತೊಟ್ಟಿಲು
ಉರ–ಎದೆ
ಉರಗ–ಹಾವು
ಉರಗಾಭರಣ–ಶಿವ
ಉಲಿ–ಧ್ವನಿಮಾಡು, ಸದ್ದುಮಾಡು
ಉಳ್ಳಿಟ್ಟು–ಹರಗಿ, ನೇಗಿಲಹೊಡೆದು
ಊಡು–ಉಣಿಸು
ಊರ್ಧ್ವ–ಮೇಲೆ
ಊಳಿಗ–ಸೇವೆ
ಎಕ್ಕಲ–ಹಂದಿ
ಎಚ್ಚು–ಹೊಡೆ
ಎಡ್ಡ–ಮೂಢ, ಮೂರ್ಖ
ಎರಳೆ–ಜಿಂಕೆ
ಏಣ–ಜಿಂಕೆ
ಏಣಾಂಕ–ಚಂದ್ರ (ಜಿಂಕೆಯನ್ನು ಧರಿಸಿದವನು)
ಏಣಾಂಕಧರ–ಶಿವ
ಏರಂಡ–ಔಡಲ
ಒಕ್ಕುಮಿಕ್ಕ–ಉಂಡು ಉಳಿದ
ಒಗುಮಿಗು–ಹೆಚ್ಚೆಚ್ಚಾಗು, ತುಂಬಿ ಹೊರಚೆಲ್ಲು
ಒಡ್ಡವಣೆ–ಸನ್ನಾಹ, ಸಿದ್ಧತೆ
ಒಪ್ಪವಿಡು–ಬಣ್ಣವಿಡು, ಸರಿಯಾಗಿ ಇಡು, ಮೆರಗುಗೊಳಿಸು
ಒಬ್ಬುಳಿ–ಗುಂಪು, ಒಟ್ಟಿಗೆ
ಒಮ್ಮನ–ಒಂದೇ ಮನಸ್ಸು
ಒಸಗೆ–ಸಂತೋಷ
ಒಸರು–ಸೋರು

**ಕ, ಖ,**

ಕಂದರ್ಪ–ಕಾಮ
ಕಂಬೆಚ್ಚು– ಬಂಗಾರದ ತಂತಿ ಮಾಡಲು ಉಪಯೋಗಿಸುವ ಒಂದು ಸಾಧನ
ಕಕ್ಕಸ–ಕರ್ಕಶ, ಕಠಿಣ
ಕಕ್ಕುಲಾತಿ–ಪ್ರೀತಿ
ಕಕ್ಷೆ–ಕಂಕುಳ
ಕಗ್ಗುಂಬಳಕಾಯಿ– ಉಪಯೋಗಕ್ಕೆ ಬರದ ಕುಂಬಳಕಾಯಿ
ಕಜ್ಜಾಯ–ಭಿಕ್ಷೆ, ರೊಟ್ಟಿ
ಕಟಿ–ಸೊಂಟ
ಕಟಿಸೂತ್ರ–ಉಡುದಾರ

ಕಟು–ಕಹಿ, ವಿಷ
ಕಣ್ಣುಗೆಟ್ಟಣ್ಣಗಳು–ಮಂದಮತಿಗಳು
ಕದಪು–ಕೆನ್ನೆ
ಕದಳಿ–ಬಾಳೆ
ಕಪಾಲ–ತಲೆಬುರುಡೆ
ಕಪ್ಪಡ–ಅರಿವೆ, ವಸ್ತ್ರ, ಬಟ್ಟೆ.
ಕಮಠ–ಆಮೆ
ಕಮರಿ–ತಗ್ಗು, ಗುಂಡಿ
ಕರ–ಕೈ, ಚೆನ್ನಾಗಿ
ಕರಂಡ–ಪಾತ್ರೆ, ಬುಟ್ಟಿ
ಕರಣಮಥನಕರ್ಕಶ–ಇಂದ್ರಿಯ ಕಠೋರ
ಕರತಳ–ಅಂಗೈ
ಕರಿ–ಆನೆ
ಕರುಹು–ಒಡ್ಡು, ತಂಬಾಕು ಸೇದುವ ಚಿಲುಮೆ
ಕವಳ–ತುತ್ತು
ಕವಳಿಗೆ–ಕಪಾಲ, ವೀಳೆದೆಲೆ ಕಟ್ಟು, ಸಾಲು
ಕಷಾಯ– ವಿಷ, ಮೂಲಿಕೆಗಳನ್ನು ಭಟ್ಟಿಯಿಳಿಸಿ ತೆಗೆದರಸ
ಕಷ್ಟಜನ್ಮ–ಹೀನಜನ್ಮ
ಕಹಿ–ವಿಷ,
ಕಳೆ–ಕತ್ತಲೆ, ಕಪ್ಪು
ಕಳತ್ರ–ಹೆಂಡತಿ
ಕಾಂಕ್ಷೆ–ಇಚ್ಛೆ
ಕಾಕ–ಕಾಗೆ
ಕಾಕವಿಂಡು–ಕಾಗೆಯ ಹಿಂಡು
ಕಾಕು–ಕೆಟ್ಟ
ಕಾಕುಮನುಜ–ಕೆಟ್ಟಮನುಷ್ಯ
ಕಾನನ–ಕಾಡು
ಕಾಲ–ಯಮ
ಕಾವಳ–ಕತ್ತಲೆ
ಕಾಷ್ಠ–ಕಟ್ಟಿಗೆ
ಕಾಳ–ಕತ್ತಲೆ
ಕಾಳಗಿಚ್ಚು–ಅಡವಿಯ ಬೆಂಕಿ

ಕಿಂಕುರ್ವಾಣ–ನಮ್ರಭಾವ
ಕಿಸುಕುಳ–ತುಚ್ಛ, ಹೇಸಿಕೆ
ಕೀಲು–ರಹಸ್ಯ
ಕ್ರೀ–ಕ್ರಿಯೆ, ಮಾಟ
ಕುಂಜರ–ಆನೆ
ಕುಂಭ–ಗಡಿಗೆ
ಕುಂಭೀಪಾತಕ–ನರಕದ ಒಂದು ಪ್ರಕಾರ
ಕುಕ್ಕುಟ–ಕೋಳಿ
ಕುಜನ–ದುರ್ಜನ
ಕುಠಾರ–ಕೊಡಲಿ
ಕುಣಪ–ಹೆಣ
ಕುಪ್ಪಟಿಗೆ– ಅಕ್ಕಸಾಲಿಗನ ಬೆಂಕಿಯ ಕೊಪ್ಪರಿಗೆ
ಕುರುಹು–ಗುರುತು
ಕೂಪ–ತಗ್ಗು, ಕೊಳ್ಳ, ನೀರಿನ ಮಡು
ಕೂಷ್ಮಾಂಡ–ಕುಂಬಳ
ಕೆಲಸಾರು–ಪಕ್ಕಕ್ಕೆಸರಿ, ದೂರಸರಿ
ಕೇಶಭುಂಜಕ–ಕೂದಲು ತಿನ್ನುವವ
ಕೇಶಾಂಬರ–ಉಣ್ಣೆ ಬಟ್ಟೆ
ಕೈಯಾನು–ಕೈಯೊಡ್ಡು
ಕೊಗ್ಗೆಸರು–ಕೆಟ್ಟ ಕೆಸರು
ಕೊಟ್ಟ–ಕೊಟ್ಟಿಗೆ, ಕಣಜ,
ಕೊಟಾರ–ಧಾನ್ಯ ಸಂಗ್ರಹಿಸುವ ಮನೆ
ಕೊಣ–ಕೊಳ, ಬಾವಿ
ಕೊತ್ತಳ–ಕೋಟೆಯ ಮೇಲ್ಭಾಗ, ಬುರುಜು
ಕೊನರು–ಚಿಗಿ, ಕುಡಿಯಿಡು
ಕೊಷ್ಟ–ಕುಷ್ಠರೋಗಿ
ಕೊಳಗ–ಸೇರು, ಧಾನ್ಯ ಅಳೆಯುವ ಮಾಪು
ಕೋಡಿವರಿ–ಹೊರಚೆಲ್ಲು
ಕೌಪ–ಲಂಗೋಟಿ
ಕ್ಷಣಿಕ–ವಿದ್ಯುತ್ತು, ಮಿಂಚು
ಕ್ಷೀರ–ಹಾಲು
ಕ್ಷುಧೆ–ಹಸಿವು
ಖಂಡೆಯ–ಕತ್ತಿ

ಖಗ– ಪಕ್ಷಿ
ಖೇಚರ– ಪಕ್ಷಿ, ಗಂಧರ್ವ

**ಗ, ಘ**

ಗಜ– ಆನೆ
ಗಡಣಿಸು– ಗುಂಪುಗೊಳಿಸು, ಸಜ್ಜುಗೊಳಿಸು
ಗಣಿತವಮಾಡು– ಲೆಕ್ಕಹಾಕು
ಗರಳಧರ– ವಿಷಧರ, ಶಿವ
ಗಾದಬೀಳು– ಸಿಕ್ಕಿಬೀಳು, ಮೋಸಹೋಗು
ಗಾರುಡ– ಜಾದೂಗಾರತನ
ಗಾವಿಲ– ಹಳ್ಳಿಗ (ಗ್ರಾಮೀಣ)
ಗಿಂಡಿ– ಸಣ್ಣ ತಂಬಿಗೆ
ಗಿಳಿಲು– ಸಣ್ಣ ಬಟ್ಟಲು
ಗುಂಟಿಗೆ– ಕಮಂಡಲು
ಗುಂಬ– ಕುಂಭ, ಗಡಿಗೆ
ಗುಡಿ– ಧ್ವಜ
ಗುಡಿಗಟ್ಟು– ರೋಮಾಂಚನವೇಳು
ಗುಡಿಸು– ಅಕ್ಷರದಕೊಂಬು
ಗುರ್ತ– ಗುರುತು, ಕೂನು
ಗೊಮಗುಸುಕ– ಗುಮ್ಮನಗುಸುಕ, ನಯವಂಚಕ
ಗೊತ್ತು– ಸ್ಥಾನ
ಗೋಪ್ಯ– ರಹಸ್ಯ
ಗೋಮಯ– ಆಕಳ ಸಗಣಿ
ಗೋಸುಂಬೆ– ಬಣ್ಣಬದಲಿಸುವ ಓತಿಕಾಟ
ಗೌರೀನೋಂಪಿ– ಗೌರೀವ್ರತ
ಗ್ರಾಸ– ಹುಲ್ಲು
ಘ್ರಾಣ– ಮೂಗು
ಘೃತ– ತುಪ್ಪ

**ಚ, ಛ**

ಚಂಡ– ಸೂರ್ಯ
ಚಂಪಕ– ಸಂಪಿಗೆ
ಚಕಮಕಿ– ಉಕ್ಕಿನ ತುಂಡು, ಚಕ್ಕಮುಕ್ಕಿಕಲ್ಲು
ಚಾಲಿವರಿ– ಚಾರಿವರಿ, ಸುತ್ತುವರಿ
ಚಿಲುಮೆ– ನೀರ ಒರತೆ
ಚುನ್ನವಾಡು– ಚೇಷ್ಟೆಮಾಡು
ಚುಬಕ– ಗದ್ದ, ಗಲ್ಲ
ಚುಳುಕು– ಅಂಗೈಯ ತಗ್ಗುಭಾಗ, ಸಣ್ಣದು
ಚೋದ್ಯ– ಆಶ್ಚರ್ಯ
ಚೋಹ– ವೇಷ
ಚೌರಾಸಿಲಕ್ಷ ಎಂಬತ್ನಾಲ್ಕು ಲಕ್ಷ
ಚೌಷಷ್ಟಿ– ಅರವತ್ತನಾಲ್ಕು
ಛತ್ತೀಸ– ಮೂವತ್ತಾರು

**ಜ**

ಜಂಘೆ– ಕಿರುದೊಡೆ, ಮೊಳಕಾಲ ಕೆಳಭಾಗ
ಜರಾಯುಜ– ಸೂಕ್ಷ್ಮ ಚರ್ಮದ ಹೊದಿಕೆಯನ್ನು ಹರಿದು ಹುಟ್ಟಿಬರುವ ಮನುಷ್ಯ, ಪಶು ಇತ್ಯಾದಿ.
ಜವ– ಯಮ
ಜಾನು– ಮೊಣಕಾಲು
ಜಾಳ– ನಿರುಪಯುಕ್ತ
ಜಾಳಿಸು– ಸಣ್ಣಿಸು
ಜಾಳುಬೋಳು– ಬೆಲೆಯಿಲ್ಲದ

**ಟ, ಠ, ಡ**

ಟೊಣೆ– ಹೊಡೆ, ಸೀಳು, ವಂಚಿಸು
ಠಕ್ಕು– ಮೋಸ, ಸೆವ
ಠೇವಣಿ– ಇಟ್ಟಹಣ, ಒತ್ತೆ
ಠೌಳಿಗಾರಿಕೆ– ಮೋಸಗಾರಿಕೆ
ಡಂಭ– ತೋರಿಕೆ
ಡಾಳಿಸು– ಬೀಸು

**ತ**

ತಂಟುಕ– ತೊಂದರೆ
ತಂಡುಲ– ತೌಡು
ತಡಕೆತಟ್ಟೆ– ಕೋಶ

ತಡಿ– ದಂಡೆ
ತರ್ಜನಿ– ತೋರುಬೆರಳು
ತಮಂಧ– ಕತ್ತಲೆ
ತರಣಿ– ಸೂರ್ಯ
ತರಹರವಾಗು– ಸಮಾಧಾನಹೊಂದು
ತಲ್ಲಣ– ಕಳವಳ
ತಳತಂತ್ರ– ಕಾಲ್ದಳ
ತಳ್ಳಿತಗಾದೆ– ತಂಟೆ
ತಾರ್ಕಣ್ಯವಾಗು– ಹೊಂದು
ತಿಂಥಿಣಿ– ತಿಂತಿಣಿ, ಸಮೂಹ, ಗುಂಪು
ತಿಮಿರ– ಕತ್ತಲೆ
ತಿರೋಧಾನ– ಅಡಗಿಸುವಿಕೆ, ಮುಚ್ಚುವಿಕೆ, ಅಲ್ಲಗಳೆಯುವಿಕೆ
ತಿಲ– ಎಳ್ಳು
ತೀಡು– ತಿಕ್ಕು
ತೀವಿದ– ತುಂಬಿದ
ತೀವು– ತುಂಬ
ತುರು– ದನ
ತೂವರಂಗೈ– ಉಗುಳು, ತೂಪಿರಿ
ತೇಜ– ಬೆಳಕು
ತೊಟ್ಟು– ಹಣ್ಣಿನ ತುಂಬು
ತೊಡಕು– ಆತಂಕ, ತೊಂದರೆ
ತೊಡೆ– ಲೇಪಿಸು, ಹಚ್ಚು
ತೊತ್ತು– ಆಳು, ಸೇವಕ
ತೋಹು– ತೋಪು, ಕಾಡು
ತ್ವಕ್– ಚರ್ಮ
ತೃಷೆ– ನೀರಡಿಕೆ
ತ್ರಿನಯನ– ಮುಕ್ಕಣ್ಣ, ಶಿವ
ತ್ರಿಪುಂಡ್ರ– ಮೂರು ಬೆರಳು
ತ್ರಿಪುಟಿ– ದೃಕ್, ದೃಶ್ಯ, ದರ್ಶನ

**ದ, ಧ**

ದಂತ– ಹಲ್ಲು
ದಂತಪಂಕ್ತಿ– ಹಲ್ಲಿನಸಾಲು
ದಂದುಗ– ದುಃಖ, ತೊಂದರೆ
ದಗ್ಧ– ಸುಟ್ಟ
ದಗ್ಧದ್ರವ್ಯ– ಸುಟ್ಟ ಪದಾರ್ಥ
ದಧಿ– ಮೊಸರು
ದಳ್ಳುರಿ– ದಟ್ಟವಾದ ಉರಿ
ದಾರ– ಹೆಂಡತಿ
ದಿಂಡೆ– ನಾಚಿಕೆಯಿಲ್ಲದ, ರಾಕ್ಷಸಿ
ದೀಕ್ಷೆ– ಶುದ್ಧಿ ಸಂಸ್ಕಾರ
ದೀಪ್ತಿ– ಬೆಳಕು, ಪ್ರಕಾಶ
ದುಮ್ಮಾನ– ದುಃಖ
ದುರಿತ– ಕೆಟ್ಟದಾದ, ನರಕಕಾರಣವಾದ
ದೋಹನ– ಬಯಕೆ
ದೃಕ್– ದೃಷ್ಟಿ
ದ್ವಾದಶ– ಹನ್ನೆರಡು
ದ್ಯುಮಣಿ– ಸೂರ್ಯ
ದ್ವಾರವಟ್ಟ– ಬಾಗಿಲು
ಧಾತುಗೆಡಿಸು– ಧೈರ್ಯಗುಂದಿಸು
ಧಾರುಣಿ– ಭೂಮಿ
ಧೂಳನ– ಲೇಪನ, ಹಚ್ಚುವುದು

**ನ**

ನಭ– ಆಕಾಶ
ನಳಿನ– ಕಮಲ
ನಾಭಿ– ಹೊಕ್ಕಳು
ನಾಯಿಂದ– ಹಡಪಿಗ, ಕೌರಿಗ
ನಾರಿಕೇಳ– ತೆಂಗು
ನಾರಿವಾಣ– (ತೆಂಗಿನನಾರಿನಿಂದ ಮಾಡಿದ) ಮುಗದಾಣ, ಲಗಾಮು
ನಿಕ್ಷೇಪಸ್ಥಲ– ಹುಗಿದಿಡುವ ಸ್ಥಳ
ನಿಟಿಲಾಕ್ಷ– ಶಿವ, ಹಣೆಗಣ್ಣ
ನಿರ್ಮಾಲ್ಯ– ಪೂಜೆಮಾಡಿ ತೆಗೆದ ಹೂ, ಬಾಡಿದುದು.
ನಿರಾಲಂಬ– ಆಧಾರರಹಿತ
ನಿರಾವರಣ– ಆವರಣವಿಲ್ಲದ

ನಿರಾಳ– ವಿಕಾರರಹಿತ (ನಿರಾವಿಲ)
ನಿರುಪಾಧಿಕ– ಜಂಜಾಟವಿಲ್ಲದ
ನಿಷ್ಪತ್ತಿಯಾಗು– ಪೂರ್ಣವಾಗು, ಹುಟ್ಟು
ನೂನ– ಕೊರತೆ
ನೂನಕೂನ– ಹೆಚ್ಚು ಕಡಿಮೆ, ಸಣ್ಣ ಗುರುತು
ನೆಗವು– ಎತ್ತು, ತೂರು
ನೆರವು– ಕೂಡಿಸು
ನೆರೆ– ಹೊಂದು, ಸೇರು, ಕೂಡು

**ಪ**

ಪಂಕ– ಕೆಸರ
ಪಂಚಾಂಗುಲ– ಐದುಬೆರಳು
ಪಂಚಾಳ– ಬಡಿಗ
ಪಗಲೊಡೆಯ– ಸೂರ್ಯ
ಪಡಿದೊತ್ತು– ಪ್ರತಿತೊತ್ತು, ತೊತ್ತಿನ ತೊತ್ತು
ಪಡುಗ– ಪಡಿಗ, ಉಗುಳುವ ಪಾತ್ರೆ
ಪಡೆ– ಸಮೂಹ, ಗುಂಪು
ಪರ್ಣ– ಎಲೆ
ಪತಂಗ– ದೀಪದಹುಳು
ಪನ್ನಗ– ಸರ್ಪ
ಪನ್ನಗಭೂಷಣ– ಸರ್ಪಭೂಷಣ, ಶಿವ
ಪರದಾರ– ಪರಸ್ತ್ರೀ, ಪರರ ಹೆಂಡತಿಗೆ ಎಳಸುವುದು
ಪರಿಕಾರ– ಗಸ್ತಿಯವ
ಪರಿಣಾಮಜಲ– ಆನಂದ ಭಾಷ್ಪ, ಸಂತೋಷದಿಂದ ಬರುವ ಕಣ್ಣೀರು
ಪರಿಭವ– ದುಃಖ
ಪರಿಯಾಣ– ಹರಿವಾಣ, ದೊಡ್ಡತಟ್ಟೆ
ಪವನ– ಗಾಳಿ
ಪಾಕ– ಅಡಿಗೆ, ಅನ್ನ
ಪಾಣಿತಾಣ– ಅಂಗೈ
ಪಾತಕ– ಪಾಪ
ಪಾದಾಂಗುಲಿ– ಕಾಲಬೆರಳು
ಪಾವಕ– ಬೆಂಕಿ
ಪಾವಗೊರಡು– ಅಳತೆಯ ಕಟ್ಟಿಗೆಯ ಸಾಧನ (ಪಾವು)
ಪಾವುಗೆ– ಪಾದರಕ್ಷೆ, ಹಾವುಗೆ
ಪಾವುಡ– ಅರಿವೆ
ಪಾಶ– ಸೆರೆ, ಹಗ್ಗ
ಪಾಷಂಡಿ– ನಾಸ್ತಿಕ
ಪಾಷಾಣ– ಕಲ್ಲು,
ಪಿಂಡ– ದೇಹ
ಪಿಕಳಿ– ಸಣ್ಣ
ಪಿಪೀಲಿಕ– ಇರುವೆ
ಪಿಸುಣ– ಸುಳ್ಳು, ಸುಳ್ಳುಗಾರ
ಪುತ್ಥಳಿ– ಗೊಂಬೆ
ಪೊಡಮಡು– ನಮಸ್ಕರಿಸು
ಪೊರವಾರ– ನಿತಂಬ
ಪ್ರಕ್ಷಾಲಿಸು– ತೊಳೆ
ಪ್ರಭಾತ– ಬೆಳಗಿನ ಜಾವ
ಪ್ರಸಂಗಿಸು– ಮಾತನಾಡು, ಚರ್ಚಿಸು

**ಬ, ಭ, ಮ**

ಬಂಟ– ಆಳು, ಸೇವಕ
ಬಟ್ಟೆ– ಹಾದಿ
ಬಣವೆ– ಒಟ್ಟಿಲು, ಸಮುದಾಯ
ಬತ್ತೀಸ– ಮೂವತ್ತೆರಡು
ಬದಗ– ಕುಟಿಲತನ, ಮೋಸ
ಬರುಕಾಯ– ಹುಸಿದೇಹ, ನಶ್ವರದೇಹ
ಬಲಾತ್ಕಾಗಿ– ಒತ್ತಾಯದಿಂದ
ಬಾಸಣಿಗೆ– ಮುಚ್ಚಳ
ಬಿನುಗು– ಕೀಳು, ಕ್ಷುದ್ರ
ಬೀಸರ– ಕುಂದು, ಚ್ಯುತಿ
ಬೆಕ್ಕನೆ– ಅತ್ಯಂತ
ಬೆಚ್ಚಳು– ಹೆಂಡತಿ
ಬೆನವ– ಗಣೇಶ
ಬೆಸಗೊಳ್ಳು– ಕೇಳು
ಬೆಸಸು– ಹೇಳು, ಆಜ್ಞಾಪಿಸು

ಬೇಟ– ಕಾಮದ ಬಯಕೆ, ಪ್ರೇಮ
ಬೇಹಾರ– ವ್ಯವಹಾರ, ಆಚರಣೆ
ಬೋದು– ಒಡ್ಡು
ಬೋನ– ಅನ್ನ
ಬ್ರಹ್ಮಚಕ್ರ– ನೆತ್ತಿಯಲ್ಲಿರುವ ಚಕ್ರ
ಭಲ್ಲೂಕ– ಕರಡಿ
ಭವ– ಹುಟ್ಟು
ಭವಭಾರಿ– ಹುಟ್ಟುಸಾವುಗಳುಳ್ಳವ
ಭವಿ– ಲಿಂಗವಿಲ್ಲದವ
ಭಸಿತ– ವಿಭೂತಿ
ಭಾಂಡ– ಸರಕು, ಸಾಮುಗ್ರಿ
ಭಾಜನ– ತಟ್ಟೆ, ಪಾತ್ರೆ
ಭಾನು– ಸೂರ್ಯ
ಭಾಳ– ಹಣೆ
ಭುಂಜಿಸು– ಉಣ್ಣು
ಭುಜಗ– ಸರ್ಪ
ಭೂಪ್ರತಿಷ್ಠೆ– ಸ್ಥಾವರಲಿಂಗ
ಭೈತ್ರ– ಹಡಗು, ತೆಪ್ಪ
ಭೋಜಿಯ ಕಟ್ಟೆ– ಬುತ್ತಿಕಟ್ಟೆ
ಮಂಡೆ– ತಲೆ
ಮರ್ಕಟ– ಮಂಗ
ಮಡಿ– ಶುಚಿಗೊಳಿಸಿದ ವಸ್ತ್ರ
ಮಕ್ಷಕ– ನೊಣ
ಮಡುಗು– ಇಡು, ಬಚ್ಚಿಡು
ಮಣಿಪೂರಕ ಚಕ್ರ–ನಾಭಿಸ್ಥಾನದಲ್ಲಿರುವಚಕ್ರ
ಮಣಿಹ– ಕಾರ್ಯ, ಸೇವೆ, ಉದ್ದೇಶ
ಮರ್ದಿಸು– ಹಣ್ಣುಮಾಡು, ತಿಕ್ಕು, ಶಿಕ್ಷಿಸು
ಮಧುರ– ಜೇನು, ಸಿಹಿ
ಮಥನ– ಕಡೆಯುವಿಕೆ
ಮನ್ನೆಯ– ಮಾನ್ಯ
ಮರವು– ಸೊಪ್ಪು, ಹಿಂಡಿ, ಮೇವು
ಮರುಜೇವಣಿ– ಸಂಜೀವಿನಿಕಡ್ಡಿ
ಮರುತ– ಗಾಳಿ
ಮಲಹರ– ಶಿವ, ಶುಭ್ರ
ಮಸಣ– ಸುಡುಗಾಡು
ಮಸುಳಿಸು– ಕಾಂತಿಗುಂದು, ಮಸುಕಾಗು
ಮಸ್ತಕ– ತಲೆ
ಮಸಿಮಣ್ಣುಮಾಡು– ನಾಶಮಾಡು
ಮಹ– ಮೋಕ್ಷ
ಮಾಟ– ಮಾಡುವಿಕೆ, ಕ್ರಿಯೆ
ಮಾಣಿಸು– ತಡೆ, ಬಿಡಿಸು
ಮಾರ– ಕಾಮ
ಮಾರಾರಿ– ಕಾಮವೈರಿ, ಶಿವ
ಮಾರ್ಜಾಲ– ಬೆಕ್ಕು
ಮುಂಡ– ರುಂಡರಹಿತ ದೇಹ
ಮುಂಡಿಗೆ– ಪ್ರಶ್ನೆ, ಒಗಟು
ಮುಕುರು– ಮುತ್ತು, ಆವರಿಸು
ಮುಖಮಜ್ಜನ– ಮುಖತೊಳೆಯುವುದು
ಮುರಹರ– ಶಿವ
ಮುಸುವ– ಕರಿಯಮಂಗ
ಮೂಷಕ– ಇಲಿ
ಮೆಲ್– ತಿನ್ನು
ಮೇಢ್ರ– ಪುರುಷ ಜನನೇಂದ್ರಿಯ
ಮೌಕ್ತಿಕ– ಮುತ್ತು
ಮೃತ್– ಮಣ್ಣು
ಮೃತ್ತಿಕೆ– ಮಣ್ಣು
ಮೃದ್ಭಾಂಡ– ಮಣ್ಣಿನಗಡಿಗೆ

**ರ, ಲ**

ರಂಬಿಸು– ಸಮಾಧಾನಪಡಿಸು
ರಂಭಾ– ಬಾಳೆ
ರಕ್ಷಿ– ರಾಕ್ಷಸಿ
ರಮಣ– ಗಂಡ
ರಮಣಿ– ಹೆಂಡತಿ
ರಹಸ್ಯ– ಗೌಪ್ಯ
ರಾಟಾಳ– ಚಕ್ರ
ರಾಕ್ಷಿ– ರಾಕ್ಷಸಿ
ರೊಕ್ಕ– ಹಣ, ದುಡ್ಡು

ರೋಮ–ಕೂದಲು
ಲಲ್ಲೆ–ಪ್ರೀತಿ
ಲಾಂಛನ–ಚಿಹ್ನ, ಗುರುತು
ಲೆಂಕ–ಸೇವಕ

**ವ**

ವಕ್ತ್ರ–ಮುಖ
ವಟಫಲ–ಆಲದಹಣ್ಣು
ವರ್ಮ–ಗುಟ್ಟು
ವಲ್ಲಭ–ಪತಿ
ವಶ್ಯ–ವಶೀಕರಣವಿದ್ಯೆ
ವಸನ–ಬಟ್ಟೆ
ವಾಚ–ಮಾತು,
ವಾಮಹಸ್ತ–ಎಡಗೈ
ವಾಯಸ–ಕಾಗೆ
ವಾರಿ–ನೀರು
ವಾರಿಕಲ್ಲು–ಆಣೆಕಲ್ಲು
ವಾರಿಜ–ಕಮಲ, ನೀರಲ್ಲಿ ಹುಟ್ಟಿದ್ದು
ವಾಸರದಯ್ಯ–ವಾರದ ಅಯ್ಯನವರು
ವಿಗಡ–ಕೆಟ್ಟ
ವಿಪಿನ–ಕಾಡು
ವಿರಾಜಿಸು–ಶೋಭಿಸು
ವಿಶುದ್ಧಿಚಕ್ರ–ಕಂಠದಲ್ಲಿರುವ ಚಕ್ರ
ವಿಹಂಗ–ಪಕ್ಷಿ
ವೃಶ್ಚಿಕ–ಚೇಳು
ವ್ಯಾಧ–ಬೇಡ
ವ್ಯಾಧಿ–ಬೇನೆ, ರೋಗ
ವ್ಯೋಮ–ಆಕಾಶ

**ಶ, ಷ, ಸ**

ಶರಧಿ–ಸಮುದ್ರ
ಶಾಟಿ–ಬಟ್ಟೆ, ಉಡುಗೆ
ಶಿಖಾಚಕ್ರ–ಮಸ್ತಕದಲ್ಲಿರುವಚಕ್ರ
ಶಿಖೆ–ತಲೆ
ಶಿಲೆ–ಕಲ್ಲು
ಶುನಿ–ನಾಯಿ
ಶುಷ್ಕಕಾಷ್ಠ–ಒಣಗಿದ ಕಟ್ಟಿಗೆ
ಶೂಕರ–ಸೂಕರ, ಹಂದಿ
ಶೇಷ–ಉಳಿದುದು
ಶ್ವಾನ–ನಾಯಿ
ಷಡಂಗುಲ–ಆರು ಅಂಗುಲ
ಸಂಕುಳ–ಸಮೂಹ
ಸಂಗಿಸು–ಕೂಡಿಸು
ಸಂಚಲಗುಣ–ಚಂಚಲತೆ
ಸಂಪ್ರೋಕ್ಷಿಸು–ಸಿಂಪಡಿಸು, ಚಿಮುಕಿಸು
ಸಟೆ–ಸುಳ್ಳು
ಸಣ್ಣಿಸು–ಸಣ್ಣಮಾಡು
ಸದನ–ಮನೆ
ಸದರು–ಎತ್ತರಸ್ಥಾನ
ಸಮ್ಮೇಳ–ಗುಂಪು
ಸಯವಾಗು–ಕೂಡು
ಸರಕಿನಗಂಟು–ವಸ್ತುವಿನ ಗಂಟು
ಸರಳು–ಬಾಣ
ಸರವೆ–ಹಗ್ಗ
ಸರಿಮಿಂಡಿ–ಕನ್ಯೆ, ಮದುವೆಯಾಗದವಳು
ಸಲಿಲ–ನೀರು
ಸಲಿಸು–ಸ್ವೀಕರಿಸು, ಉಣ್ಣು
ಸಾಕಲ್ಯ–ಸಂಪೂರ್ಣತೆ
ಸಾಕಾರ–ಕಣ್ಣಿಗೆ ಕಾಣಿಸುವ, ಆಕಾರಉಳ್ಳ
ಸೀತ–ತಂಪು
ಸುಯಿಧಾನ–ಸಾಮಗ್ರಿ, ಸಾಧ್ಯ, ಎಚ್ಚರಿಕೆ
ಸುರಚಾಪ–ಕಾಮನಬಿಲ್ಲು
ಸುರಧೇನು–ಕಾಮಧೇನು
ಸುರರು–ದೇವತೆಗಳು
ಸುಲಿಪಲ್ಲ– ಹೊಳೆಯುವ ಹಲ್ಲು, ಶುಭ್ರವಾದ ಹಲ್ಲು
ಸೂಡು–ಧರಿಸು
ಸೂತಕ–ಮೈಲಿಗೆ
ಸೊಮ್ಮು–ಆಸ್ತಿ, ಒಡವೆ

ಸೋಗೆ– ಕಬ್ಬಿನ ಗರಿ
ಸೋಮ– ಚಂದ್ರ
ಸ್ವಾಧಿಷ್ಠಾನಚಕ್ರ– ಗುಹ್ಯದಲ್ಲಿರುವ ಚಕ್ರ
ಸ್ಫುರಿಸು– ಹೊರಹೊಮ್ಮು

**ಹ**

ಹಗರಣ– ಸೋಗು, ವ್ಯರ್ಥಾಲಾಪ, ಇಂದ್ರಜಾಲ
ಹಡಕೆ– ಹೇಸಿಗೆ, ಹೊಲಸು
ಹದರ– ಹದಿರು, ಹುಡುಗಾಟಿಕೆ, ಸರಸಸಲ್ಲಾಪ
ಹದುಳ– ಕ್ಷೇಮ, ಸಂತೋಷ
ಹರದ– ವ್ಯಾಪಾರಿ
ಹರಿಕುಲ– ಕೀಳುಕುಲ
ಹರಿಹಂಚು– ಚೆಲ್ಲಾಪಿಲ್ಲಿಯಾಗು
ಹಲಾಯುಧ– ಒಕ್ಕಲಿಗ
ಹಸಾದ– ಅಗಲಿ
ಹಸ್ತಾಂಗುಲಿ– ಕೈಬೆರಳು
ಹಸ್ತಾಂಜುಲಿತನಾಗು– ಕೈಮುಗಿ, ಕೈಜೋಡಿಸು
ಹಸು– ಆಕಳು
ಹಳಚು– ಅಪ್ಪಳಿಸು

ಹಳಿ– ಕಂಬಿ, ಸಲಾಕೆ
ಹುದುಗು– ಲಿಂಗದಬಟ್ಟೆ, ಅಡಗಿಕೊಳ್ಳು
ಹುಮ್ಮಸ– ಉತ್ಸಾಹ
ಹುಲ್ಲೆ– ಚಿಗುರೆ
ಹುಸಿ– ಸುಳ್ಳು
ಹುಳುಗೊಂಡ– ಹುಳುವಿನ ಕೊಳ, ಕೊಳೆತ ಗುಂಡಿ, ಒಂದು ವಿಧದ ನರಕ
ಹೂಸಹುಂಡರು– ಸುಳ್ಳು ಹೇಳುವವರು, ಡಾಂಭಿಕರು
ಹೂಳಿದ– ಮುಚ್ಚಿದ, ಹುಗಿದಿಟ್ಟ
ಹೆಜ್ಜ– ತೂತು
ಹೆರೆಹಿಂಗು– ಇಲ್ಲದಂತಾಗು, ನಾಶವಾಗು
ಹೇರಂಡಲಗಿಡ– (ಏರಿಂಡಲ) ಔಡಲಗಿಡ, ಹರಳುಗಿಡ
ಹೊತ್ತುಗಲ್ಲು– ಭಾರವಾದಕಲ್ಲು
ಹೊಲಬು– ರೀತಿ, ದಾರಿ
ಹೊಲಬುದಪ್ಪು– ದಾರಿತಪ್ಪು
ಹೋರು– ಕಾದಾಡು
ಹೋರಟೆಗೊಳ್ಳು– ಕಷ್ಟಪಡು

■■

# ಆಕರ ಗ್ರಂಥಗಳು


ಅದ್ವೈತಾನಂದ ವಚನಗಳು
ಸಂ : ಡಾ. ಬಿ. ಆರ್. ಹಿರೇಮಠ
ಪ್ರ : ವೀರಶೈವ ಅಧ್ಯಯನ ಸಂಸ್ಥೆ,
ಜಗದ್ಗುರು ತೋಂಟದಾರ್ಯಮಠ, ಗದಗ
೧೯೮೩ (ಪ್ರಥಮ ಆವೃತ್ತಿ.)

ಚಿದೈಶ್ವರ್ಯ ಚಿದಾಭರಣ-ಗುರುಸಿದ್ಧದೇವ
ಸಂ : ಪಿ. ಎಂ. ಗಿರಿರಾಜು
ಪ್ರ : ಶರಣ ಸಂತಾನ ಪ್ರಕಾಶನ ಮೈಸೂರು.
೧೯೮೫ (ಪ್ರ. ಆ.)

ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ-
ಕರಸ್ಥಲದ ಮಲ್ಲಿಕಾರ್ಜುನ ಒಡೆಯ
ಸಂ : ಡಾ. ಆರ್. ಸಿ. ಹಿರೇಮಠ
ಪ್ರ : ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೩ (ಪ್ರ. ಆ.)

ಭಕ್ತ್ಯಾನಂದ ಸುಧಾರ್ಣವ
ಸಂ : ಡಾ. ವೀರಣ್ಣ ರಾಜೂರ
ಪ್ರ : ವೀರಶೈವ ಅಧ್ಯಯನಸಂಸ್ಥೆ, ಜಗದ್ಗುರು ತೋಂಟದಾರ್ಯಮಠ, ಗದಗ
೧೯೮೫ (ಪ್ರ. ಆ.)

ಮಿಶ್ರಸ್ತೋತ್ರದ ವಚನಗಳು-ಎಳಮಲೆಯ ಗುರುಶಾಂತದೇವ
(ಇದು ಎಳಮಲೆಯ ಗುರುಶಾಂತದೇವನ ವಚನ ಸಂಕಲನಗಳು ಕೃತಿಯ
ಒಂದು ಭಾಗ)
ಸಂ : ಡಾ. ವೀರಣ್ಣ ರಾಜೂರ
ಪ್ರ : ವೀರಶೈವ ಅಧ್ಯಯನ ಸಂಸ್ಥೆ,
ಜಗದ್ಗುರು ತೋಂಟದಾರ್ಯಮಠ, ಗದಗ
೧೯೮೩ (ಪ್ರ. ಆ.)

ಮುಕ್ತಿಕಂಠಾಭರಣ-ಸಿದ್ಧವೀರದೇಶಿಕೇಂದ್ರ *
ಸಂ : ಡಾ. ಆರ್. ಸಿ. ಹಿರೇಮಠ
ಪ್ರ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೧ (ಪ್ರ. ಆ.)

ಮೆಡ್ಲೇರಿ ಶಿವಲಿಂಗನ ವಚನಗಳು
'ಶಿವಾಮೃತಲೀಲೆ' ಕೆ. ಎ. ೩೨೧.
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರ ವಿ.ವಿ. ಹಸ್ತಪ್ರತಿ.

ವೀರಸಂಗಯ್ಯನ ವಚನಗಳು
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
ತಾಪ್ರ ನಂ. ೫೦೫.

ಶರಣ ಚಾರಿತ್ರದ ವಚನಗಳು-ಸಣ್ಣಬರಹದ ಗುರುಬಸವರಾಜದೇವರು
ಸಂ : ಡಾ. ಬಿ. ವಿ. ಶಿರೂರ
ಪ್ರ : ವೀರಶೈವ ಅಧ್ಯಯನಸಂಸ್ಥೆ, ಜಗದ್ಗುರು ತೋಂಟದಾರ್ಯಮಠ, ಗದಗ
೧೯೮೪ (ಪ್ರ. ಆ.)

ಶಿವಯೋಗ ಚಿಂತಾಮಣಿ-ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿ
ಸಂ : ಡಾ. ಉಮಾದೇವಿ
ಪ್ರ : ವೀರಶೈವ ಅಧ್ಯಯನಸಂಸ್ಥೆ, ಜಗದ್ಗುರು ತೋಂಟದಾರ್ಯಮಠ, ಗದಗ
೧೯೮೭ (ಪ್ರ. ಆ.)

ಷಟ್ಪ್ರಕಾರ ಸಂಗ್ರಹ-ಶಾಂತದೇವರು
ಸಂ : ಜಿ. ಎ. ಶಿವಲಿಂಗಯ್ಯ
ಪ್ರ : ವೀರಶೈವ ಅಧ್ಯಯನಸಂಸ್ಥೆ, ಜಗದ್ಗುರು ತೋಂಟದಾರ್ಯಮಠ, ಗದಗ
೧೯೮೭ (ಪ್ರ. ಆ.)

ಷಟ್ಪ್ರಕಾರ ಸಂಗ್ರಹ-ಶಾಂತದೇವರು
ಸಂ : ಪಿ. ಎಂ. ಗಿರಿರಾಜು
ಪ್ರ : ಶರಣಸಂತಾನ ಪ್ರಕಾಶನ, ಮೈಸೂರು.
೧೯೮೭ (ಪ್ರ. ಆ.)

ಷಣ್ಮುಖ ಶಿವಯೋಗಿಗಳ ಅಖಂಡೇಶ್ವರ ವಚನಗಳು
ಸಂ : ಡಾ. ವಿ. ಶಿವಾನಂದ
ಪ್ರ : ಜಗದ್ಗುರು ಮೂರು ಸಾವಿರಮಠ ಹುಬ್ಬಳ್ಳಿ
೧೯೮೬ (ಪ್ರ. ಆ.)

* ಇದನ್ನು ಸಿದ್ಧವೀರದೇಶಿಕೇಂದ್ರನ ವಚನಗಳಿಗೆ ಮಾತ್ರ ಬಳಸಿಕೊಳ್ಳಲಾಗಿದೆ.

ಷಣ್ಮುಖ ಶಿವಯೋಗಿಗಳ ಅಖಂಡೇಶ್ವರ ವಚನಮಂಜರಿ
ಸಂ : ಡಾ. ವಿ. ಶಿವಾನಂದ
ಪ್ರ : ಅಖಂಡೇಶ್ವರ ಗ್ರಂಥಮಾಲೆ ಜೇವರಗಿ
೧೯೭೫ (ಪ್ರ. ಆ.)

ಷಣ್ಮುಖಸ್ವಾಮಿ ಕೃತ ಅಖಂಡೇಶ್ವರ ವಚನಗಳು
ಸಂ : ಶ್ರೀ ಮ.ನಿ.ಪ್ರ.ಸ್ವ. ಪ್ರಭುಸ್ವಾಮಿಗಳು ಸಂಸ್ಥಾನಮಠ,
ಬೂದಿಹಾಳಸ್ವಾಮಿಮಠ, ಹೊಸಳ್ಳಿ,
ಪ್ರ : ಮುರುಘಾಮಠ, ಧಾರವಾಡ
೧೯೮೬ (ನಾಲ್ಕನೆಯ ಆವೃತ್ತಿ)

ಷಣ್ಮುಖಸ್ವಾಮಿಗಳ ವಚನಗಳು
ಸಂ : ಹ. ನಂ. ವಿಜಯಕುಮಾರ
ಪ್ರ : ಕಲ್ಯಾಣನಾಡಿನ ವೀರಶೈವ ಪರಿಷತ್ತು, ಹುಮನಾಬಾದ
೧೯೭೭ (ಪ್ರ. ಆ.)

ಸರ್ವಾಚಾರಸಾರಾಮೃತಸುಧೆ-ಮೂರುಸಾವಿರ ಮುಕ್ತಿಮುನಿ
ಸಂ : ಡಾ. ಬಿ. ವಿ. ಶಿರೂರ
ಪ್ರ : ವೀರಶೈವ ಅಧ್ಯಯನಸಂಸ್ಥೆ , ಜಗದ್ಗುರು ತೋಂಟದಾರ್ಯಮಠ, ಗದಗ
೧೯೮೯ (ಪ್ರ. ಆ.)

ಹೇಮಗಲ್ಲ ಷಟ್‌ಸ್ಥಲ-ಹೇಮಗಲ್ಲ ಹಂಪ
ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ
ಕಾ. ಪ್ರ. ೯೦ ಮತ್ತು ೩೫೨೭

ಸಿದ್ಧಮಲ್ಲಪ್ಪನ ವಚನಗಳು
ಸಂ : ಪುಟ್ಟಸ್ವಾಮಿ ಬಿಳಿದಾಳೆ,
ಬಸವಪಥ ೧-೬ (೧೯೮೦) ಬಸವ ಸಮಿತಿ ಬೆಂಗಳೂರು.

■■

# ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6